Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ) (B) 6009
ಪ್ರವೇಶ ಕ್ರಮಾಂಕ Accession No.........
ದಿನಾಂಕ Date.................................

TABLE OF CONTENTS

to the

MYSORE LEGISLATIVE ASSEMBLY DEBATES

Volume—XV (Nos. 1 to)

(From 25th April 1973 to 3rd May 1973)

Wednesday, the 25th April 1973

	Pages
1. (i) Starred Questions and Answers. ...	1
(ii) Short Notice Question and Answer ...	21
2. Calling Attention to a matter of urgent Public Importance	
(a) *Re:* Disfiguring of Dr. B. R. Ambedkar's Statue at Chatri Chouk, Bidar District. ...	24
(b) *Re:* Assault on members of H.M.T. and B.E.L. Karmik Sanghas ...	25
3. Notice of Adjournment Motion : *re* : reported fast of a Communist Party member in Chitapur taluk —Consent withheld.	32
4. (i) Discussing Demands for Grants of the Legislative Council. ...	34
(ii) Requests to withdraw suspension orders of Sri S. Bangarappa. ...	36
(iii) Threat to use time-bomb on Vidhana Soudha ...	36
5. Budget Estimates for 1972-73.	
Demands for Grants—	39
Demand No. 45—Capital Outlay on Irrigation Etc. Commercial	

Pages

Demand No. 33—Farmer Relief Department
Demand No. 15A—Civil Supplies Department ..
Demand No. 53—Capital Outlay on Schemes of Government Trading

Thursday, 26th April 1973

1. First list of unstarred Questions. 88
2. Budget Estimates for 1973-74 139

Demands for Grants—

Demand No. 45—Capital Outlay on Irrigation Etc. Commercial

Demand No. 33—Famine Relief

Demand No. 15A—Civil Supplies Department .

Demand No. 53—Capital Outlay on Schemes of Government Trading

Demand No. 2—Land Revenue

Demand No. 7—Stamps .

Demand No. 8—Registration

Demand No. 15—Miscellaneous Departments—

(excluding Civil Supplies Dept., Dept of Information and Small Savings)

Demand No. 42—Compensation to Zamindars

3. Calling attention to matters of urgent public importance ... 217

(i) *re.:* alleged injustice and loss caused to Sanitary Inspectors of Belgaum due to Non-inclusion of their posts in Mysore Municipal Administrative Service Cadre.

(ii) *re.:* Scarcity of Kerosene and Diesel Oil in the Hassan District. ... 219

Friday 27th April 1973

Pages

1. (i) Starred Questions and Answers. ... 223

(ii) Short Notice Questions ... 239

(iii) Questions for Answers on the day (but not taken up) ... 240

2. Calling Attention to matters of urgent Public Importance ... 244

(i) *re* : loss caused due to operation of Contract Carriages by Shivaji Travels and S. R. S. Travels

(ii) re : fire accident at Hudge Village in Humnabad ... 251

3. Papers laid on the table :— ... 252

(i) Annual Financial Statement—Revised Budget for 72-73 and Budget Estimates for 1973-74 of the M.S.E.B.

(ii) Notification No. SO/333 D 18-7-72 issued under the Mysore Cooperative Societies Act 1959.

4. Resignation of three Supreme Court Judges

5. Twelfth Report of the Committee on Private Members' Bills and Resolution—Adopted.

6. (i) Resignation of three judges of the Supreme Court ... 253

(ii) Business of the House. ... 264

7. Budget Estimates for 1973-74. 264

Demands for Grants :

Demand No. 2—Land Revenue

Demand No. 7—Stamps

Demand No. 8—Registration

Pages

Demand No. 15—Miscellaneous Departments—(excluding Civil Supplies and Dept. of Information and Small Savings).

Demand No. 42—Compensation to Zamindars

Demand No. 4—Taxes on Vehicles

Demand No. 4—Labour and Employment

Saturday, 28th April 1973

1. Budget Estimates for 1973-74— 315

   Demands for Grants :

   Demand No. 4—Taxes on Vehicles

   Demand No. 26—Labour and Employment

2. Calling Attention to matters of urgent Public Importance : ... 371

   (i) *re* : delay in issuing Ration Cards by the Zonal Food Offices. ... 371

   (ii) *re* : difficulties experiences by Truck Owners in securing heavy Truck Tyres in S. K. District. ... 373

   (iii) *re* : non-issuing of notification under the Mysore Agricultural Pest and Diseases Act in S.K. District ... 374

   (iv) *re* : release of Koyna Waters to Scarcity Areas of the state particularly to Bijapur District ... 375

Monday, 30th April 1973

1. (i) Starred Questions and Answers ... 378

   (ii) Questions for Answers on the day (but not taken up) ... 391

2. Calling Attention to matters of urgent Public Importance ... 393

Pages

(i) *re* : issue of license for the construction of a cinema theatre near Ramakrishna Ashram, Basavanagudi, Bangalore. ... 393

(ii) *re* : Acute scarcity of drinking water in the villages in Lingasugur Taluk ... 394

3. (i) Pitiable conditions of Weavers in Tiptur Taluk ... 396

(ii) Press Report about statement of the Chief Minister on the Cauvery water issue ... 396

(iii) Koyna water issue ... 397

4. Statement of the Minister for Public Works and Electricity *re* : Release of Koyna Waters ... 397

5. Budget Estimates for 1973-74. Demands for Grants : 399

Demand No. 1—Taxes on Income other than Corporation Tax

Demand No. 5—Sales Tax (Administration)

Demand No. 10A—Treasuries and Local Fund Audit

Demand No. 15C—Small Savings

Demand No. 34—Pensions and other retirement benefits

Demand No. 39—Miscellaneous

Demand No. 39B—State Lotteries

Demand No. 40—Commutation of Pensions

Demand No. 41—Miscellaneous compensations and assignments

Demand No. 52—Commuted Value of Pensions

Demand No. 54—Advances and Loans

Demand No. 9—State Legislature and Elections

Demand No. 11—Administration of Justice

6. Business of the House Announcement

Pages

Tuesday the 1st May 1973

1. (i) Starred Questions and Answers ... 463

(ii) Questions for Answers on the day (but not taken up). ... 482

(iii) Short Notice Questions and Answers. ... 486

2. Calling Attention to matters of urgent Public Importance— 487

(i) *re* : failure of T.A.P.H.C. Societies to render services to the ryots ... 487

(ii) *re* : termination of services of teachers of Taluk Board High Schools ... 488

(iii) *re* : Lapse of grant sanctioned for acquisition of land for building a hostel at Mangalore Government College. ... 490

3. Leave of Absence to Sri H. Linga Reddy—Granted ... 492

4. Inadequate relief measures taken in drought wet Areas ... 493

5. Budget Estimates for 1973-74— 494

Demands for Grants :

Demand No. 3—State Excise

Demand No. 10—General Administration (Excluding Treasuries and L.F. Audit)

Demand No. 12—Jails

Demand No. 13—Police

Demand No. 15B—Department of Information

Demand No. 35—Territorial and Political Pensions

Demand No. 36—Privy Purses and Allowances

Wednesday 2nd May 1973

1. (i) Starred Questions and Answers ... 551

(ii) Short Notice Question and Answer. ... 566

Pages

2. Calling Attention to a matters of urgent Public Importance 568

(i) re : Pollution of T. B. River Water ... 568

(ii) *re* : Boat Tragedy in Angur Village Hadgalli Taluk ... 572

(iii) *re* : outbreak of small pox in Rajgiri and other villages in Bidar District. ... 574

(iv) re : acute scarcity of food grains in Bidar District ... 574

3. Statement by Minister for Public Works & Electricity : *re* : relaxations in restriction an consumption of power for domestic purposes ... 579

4. (i) Mysore Police (Amendment) Bill 1973 ... 581

(ii) Mysore P.S.C. (conduct of Business and Additional functions) (Amendment) Bill 1973.

(iii) Mysore State Servants (Determination of Age) Bill, 1973

(iv) Mysore Agricultural Lands (Prohibition of Alienation) Bill, 1973

(v) Mysore Agricultural Debtor's (Temporary Protection) Bill, 1973

(vi) Mysore Village Panchayaths and Local Boards (Amendment) Bill, 1973

(vii) Criminal Law and Identification of Prisoners (Mysore Extension and Amendment) Bill, 1973

5. Relief Measures taken by Government in Drought Areas ... 581

6. Budget Estimates for 1973-74— 582

Demand for Grants :

Demand No. 3—State Excise

Demand No. 10—General Administration (Excluding Treasuries and Local Fund-Audit)

Pages

Demand No. 12—Jails

Demand No. 13—Police

Demand No. 15B—Department of Information

Demand No. 35—Territorial and Political Pensions

Demand No. 36—Prices Purses and Allowances

7. Appendices :—

(1) Mysore Police (Amendment) Bill 1973 ... 634

(2) Mysore P.S.C. (conduct of Business and Additional Functions) (Amendment) Bill 1973 ... 638

(3) Mysore State Servants (Determination of Age) Bill 1973 ... 640

(4) Mysore Agricultural Lands (Prohibility of Alienation) Bill, 1973 ... 644

(5) Mysore Agriculture Debtors' (Temporary Protection) Bill 1973 ... 647

(6) Mysore Village Panchayats and Local Board (Amendment) Bill 1973 ... 649

(7) Criminal Law and Identification of Prisoners (Mysore Extension and Amendment) Bill 1973 ... 651

Thursday the 3rd May 1973

1. Budget Estimates for 1973-74— 655

Demands for Grants :

Demand No. 3—State Excise

Demand No. 10—General Administration (Excluding Treasuries and Local Fund Audit)

Demand No. 12—Jails

Demand No. 13—Police

Demand No. 15B—Department of Information

Demand No. 35—Territorial and Political Pensions

Demand No. 36—Privy Purses and Allowances

Pages

2. Calling Attention to Matters of urgent Public Importance : 704

(i) *re* : Explosion of hand-granade at Khaddarawadi near Belgaum

(ii) *re* : Harassment caused to the orange growers of Sakaleshpura Taluk

(iii) *re* : Irregular supply of foodgrains, etc., to Haliyal Taluk

(iv) *re* : Corruption in the Sub-Registrar's Offices, Bangalore

(v) re. : Shortage of Marathi Question Papers in the S.S.L.C. Examination at Belgaum

3. Matter raised under Rule 312 : 712

re. : Need to postpone collection of land revenue in Hassan District in view of scarcity conditions prevailing in the District

4. Reasons for adjourning the House for Short Recess 714

5. (i) Mysore High Court (Amendment) Bill 1973 ... 715

(ii) Mysore Co-operative Societies (Second Amendment) Bill 1973

(iii) Mysore Appropriation (No. 2) Bill 1973

6. Mysore Appropriation (No. 2) Bill 1973 ... 716

7. Report of the J.S.C. on the Mysore Land Reforms (Amendment) Bill 1972 ... 717

8. Leave of Absence to Sri H. Puttaranganath ... 717

9. Annexures : 718

(1) Mysore High Court (Amendment) Bill 1973

(2) Mysore Co-operative Societies (Seceond Amendment) Bill 1973

(3) Mysore Appropriation (No. 2) Bill 1973

(4) Report of the J.S.C. on the Mysore Land Reforms (Amendment) Bill 1972

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Wednesday the 25th April 1973/Vaishaka 5, 1895 S.E.

The House met in the Assembly Chamber, Vidhana Soudha, at One of the Clock.

Madam Speaker : (Smt. K. S. Nagarathnamma) in the Chair.

STARRED QUESTIONS

(to which oral answers were given)

SUPERSESSION OF MUNICIPALITIES

1. Sri ABDUL KHUDDUS ANWAR (Bhadravathi).—

Will the Minister for Municipal Administration be pleased to state :—

(*a*) the number of Municipalities that were superseded in the State due to maladministration from 1972 upto the latest convenient date ;

(*b*) the number of Chief Officers that were transferred on receipt of complaints ;

(*c*) whether Government have received any complaints against the Chief Officer, Town Municipal Council, Bhadravati ; if so, the action the Government has taken against the Officers ?

Sri B. BASAVALINGAPPA (Minister for Municipal Administration).—

(*a*) (1) City Municipal Council, Gulbarga.

(2) Town Municipal Council, Srirangapatna.

(3) City Municipal Council, Bagalkot.

(*b*) Transfer of Chief Officers are being effected in the exigency of service and not merely because complaints are made.

(*c*) Yes. No action was taken against the Chief Officer as he was not found responsible for the alleged misdeeds.

Sri ABDUL KHUDDUS ANWAR : You were pleased to say that some of the Municipalities are superseded on some charges. When there are specific charges on Bhadravati Municipality, why a similar action has not been taken against that Municipality ?

* Sri B. BASAVALINGAPPA : We have given them notice for supersession and we have received the reply. We have not yet taken any decision in the matter.

Sri ABDUL KHUDDUS ANWAR : The replies were received long back. I wrote to the Government that this Municipality has in many cases misappropriated the municipal funds and the Chief Officer has also misused his power. In answer to 'B' you have stated that the transfer of Chief Officers are being effected in the exigency of service and not merely because complaints are made. But on the floor of the House you were pleased to say that any officer who is involved in corrupt practices and misappropriation will be dealt with severely. Now there are cases of misappropriation with regard to this officer. I have given the details in about 20 cases. Why this officer is not transfered ?

Sri B. BASAVALINGAPPA : Sri Anwar Khuddus, M.L.A. has made some charges that Sri Basavannappa is involved in corrupt activities in day-to-day administration, and he should be transferred elsewhere. The report was called from the Divisional Commissioner and the Deputy Commission and they have reported that the Chief Officer is not responsible for charges mentioned by Sri Anwar Khuddus.

Sri ABDUL KHUDDUS ANWAR : Taking Rs. 100, 200 and 300 he has given permission for unauthorised construction of houses

---

* Indicate that remarks or speeches have not been revised by the member cancelled.

and those cases have been investigated by the Deputy Commissioner and the Deputy Commissioner has reported to the Government that he is involved. Inspite of that you are saying that this Chief Officer is not involved. I am very sorry to know that inspite of the Report of the Deputy Commissioner, no action is taken. Will you kindly consider this matter atleast now and see that the corrupt officer is transfered elsewhere as per your promise made on the floor of the House ?

Sri B. BASAVALINGAPPA : No action has been taken as per the report received. I have no objection to give a second look to this and if the officer is really so as alleged by the Hon. Member, I will take serious action.

ಶ್ರೀ ಕೆ. ಎಂ. ನಾಗಣ್ಣ: ನೀವು ಪ್ರಶ್ನೆಗೆ ಉತ್ತರ ಕೊಟ್ಟಿರುವುದಕ್ಕೂ ಈಗ ನೀವು ಉತ್ತರ ಕೊಟ್ಟಿರುವುದಕ್ಕೂ ಹೋಲಿಸಿ ನೋಡಿದರೆ, ತಮ್ಮ ಉತ್ತರ ನೇರವಾಗಿಲ್ಲವೆಂಬುದು ವ್ಯಕ್ತವಾಗುತ್ತದೆ. ಆದ್ದರಿಂದ ದಯಮಾಡಿ ಕಂಪ್ಲೇಂಟ್ ಬಂದಮೇಲೆ ಎಷ್ಟು ಜನ ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ: ಹೇಗೆ ಹೇಗೆ ಕಂಪ್ಲೇಂಟ್ಸ್ ಬರುತ್ತದೋ ಹಾಗೆ ಹಾಗೆ ತೀರ್ಮಾನ ತೆಗೆದುಕೊಂಡು ವರ್ಗಾವಣೆ ಮಾಡಲಾಗುತ್ತದೆ. ಆದರೆ ಎಷ್ಟು ಜನರನ್ನು ಇದುವರೆಗೆ ವರ್ಗ ಮಾಡಿದೆ ಎಂಬ ಅಂಶವನ್ನು ನಿಖರವಾಗಿ ಈಗ ಹೇಳುವುದಕ್ಕೆ ಆಗುವುದಿಲ್ಲ.

Sri ABDUL KHUDDUS ANWAR : In the light of the complaints which are presented to you, will you kindly take immediate action and see that the corrupt officer is transferred and the Municipality is superseded early ?

Sri B. BASAVALINGAPPA: As I submitted earlier to the House, the reply is received by the Government in response to the notice for supersession. I will take action immediately. Then about this Chief Officer, if he is really corrupt as alleged by the Hon. Member, I do not think he deserves to continue in service. If he is not so, in the usual course, I will transfer him.

LINKING OF BULL TEMPLE AND T.C.M. ROYAN ROAD

280. Sri T. R. SHAMANNA (Fort).—

Will the Minister for Municipal Administration be pleased to state :—

(*a*) whether there is a proposal before Government to link Bull Temple Road and T.C.M. Royan Road leading to Railway Station ;

(*b*) if so, the stage at which the matter stands ;

(*c*) whether Government would take steps to expedite the linking of these roads by acquiring the properties existing in between ?

Sri B. BASAVALINGAPPA (Minister for Municipal Administration).—

(*a*) Yes.

(*b*) Notices under Section 9 and 10 of the Land Acquisition Act were issued to the notified persons to file claim Statements and other documents.

(*c*) Will be considered on its merits if and when proposals are received.

ಶ್ರೀ ಟಿ. ಆರ್. ಶಾಮಣ್ಣ.—ಬುಲ್ ಟೆಂಪಲ್ ರಸ್ತೆಯನ್ನು ಮತ್ತು ರೈಲ್ವೆಸ್ಟೇಷನ್ನಿಗೆ ಹೋಗತಕ್ಕ ಟಿ. ಸಿ. ಎಂ. ರಾಯನ್ ರಸ್ತೆಯನ್ನು ಸೇರಿಸಬೇಕೆಂಬ ಪ್ರೊಪೋಜಲ್ ಕಳೆದ 20 ವರ್ಷಗಳಿಂದಲೂ ಹಾಗೆಯೇ ಇದೆಯೆಂಬ ಅಂಶ ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೇ ? ಅದು ಬಹಳ ಮುಖ್ಯವಾಗಿರುವುದರಿಂದ ಅದರ ಬಗ್ಗೆ ಬೇಗ ಸೂಕ್ತ ಕ್ರಮವನ್ನು ತೆಗೆದು ಕೊಳ್ಳುವುದಂ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹೇಳಿರತಕ್ಕದ್ದು ವಾಸ್ತವವಾಗಿದೆ. ಇದರ ಬಗ್ಗೆ ನೋಟಿಫಿಕೇಷನ್ 26-11-1959ರಂದು ಹೊರಪಡಿಸಿದ್ದರೂ ಅಲ್ಲಿಂದ ಇಲ್ಲಿಯ ವರೆಗೆ ಹಾಗೆಯೇ ಇದು ತಳ್ಳುತ್ತಾ ಬಂದಿದೆ. ಮಾನ್ಯ ಸದಸ್ಯರು ಈ ವಿಚಾರವನ್ನು ಇವತ್ತು ಗಮನಕ್ಕೆ ತಂದಿದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಈ ರಸ್ತೆಯನ್ನು ಮಾಡುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ :—ಈ ವಿಷಯಕ್ಕೆ ಸಂಬಂಧಪಟ್ಟ ಫೈಲು ಮಿಸ್ ಆಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ :—ಅದು ನನ್ನ ಗಮನಕ್ಕೆ ಬಂದಿಲ್ಲ. ಹಳೆಯ ಫೈಲು ಹೋದರೆ ಹೊಸ ಫೈಲನ್ನು ಪ್ರಾರಂಭ ಮಾಡೋಣ.

ಶ್ರೀ ಟಿ. ಆರ್. ಶಾಮಣ್ಣ :—ಈಗಲಾದರೂ ಮಾನ್ಯ ಮಂತ್ರಿಗಳು ಅಲ್ಲಿ ಹೋಗಿ ಇನ್‌ಸ್ಪೆಕ್ಷನ್ ಮಾಡಿ ಆದಷ್ಟು ಜಾಗ್ರತೆಯಾಗಿ ಅದರ ಬಗ್ಗೆ ಕ್ರಮತೆಗೆದುಕೊಳ್ಳಲು ಸರ್ಕಾರ ದವರು ತೀವ್ರ ಪ್ರಯತ್ನಮಾಡುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ : ಅದರ ಬಗ್ಗೆ ಹುಕುಂನ್ನು ಇವತ್ತೇ ಮಾಡುತ್ತೇನೆ.

CONTRACT CARRIAGES PLYING ON NATIONALISED ROUTES

552. Sri M. S. KRISHNAN (Malleswaram).—

Will the Minister for Labour be pleased to state :—

(*a*) the number of contract carriages permitted to ply on Nationalised monopoly routes from Bangalore to other important centres upto 1st January 1972 (Split up figures in each monopoly/ nationalised routes may be given) ;

(*b*) of them, the number of such contract carriages licensed aditionally to run on the said monopoly routes from 1st January 1972 to-day (monthwise figures of the permits issued be given) ;

(*c*) whether the Government is aware that these contract carriages were running as night luxury buses earlier and now are running as day luxury buses ;

(*d*) whether the issue of permits to contract carriages on the above routes has had any effect on the working of the M.S.R.T.C. and whether any estimate has been made on the earnings or working of the M.S.R.T.C. on these routes ?

Sri AZEEZ SAIT (Minister for Labour).—

(*a*) No contract carriages permits were issued upto 1st January 1972 to ply specifically on Nationalised monopoly routes either from Bangalore or from any other place. But some of the contract carriages, which are having Statewide permit are plying on nationalised routes.

(*b*) As has been replied to clause (*a*) above, no contract carriage permits were issued to ply specifically on Nationalised monopoly routes even after 1st January 1972.

(*c*) No particular instance of this nature has come to the notice of Government. So long as these contract carriages ply according to the conditions of the permit, there can be no objection to their plying as night or day luxury buses.

(*d*) Since no permits have been issued to ply specifically on nationalised monopoly routes, the question of adverse effect on the income of M.S.R.T.C. due to issue of these permits does not arise. However, due to clandestine operation of some of the

contract carriages as regular stage carriages, the income of M.S.R.T.C. has been affected.

ಶ್ರೀ ಎಂ. ಎಸ್. ಕೃಷ್ಣನ್.—(ಅ) ಪ್ರಶ್ನೆಗೆ ಉತ್ತರವಾಗಿ ರಾಜ್ಯದಾದ್ಯಂತ ಕಂಟ್ರಾಕ್ಟ್ ಬಸ್ಸುಗಳನ್ನೋಡಿಸಲು ಪರವಾನೆ ಹೊಂದಿರುವ ಬಸ್ಸುಗಳು ಈ ರಾಷ್ಟ್ರೀಕೃತ ರಸ್ತೆಗಳಲ್ಲಿ ಓಡಾಡುತ್ತವೆಂದು ಹೇಳಿದೆ. 1-1-1972ಕ್ಕೆ ಮುಂಚೆ ಎಷ್ಟು ಪರವಾನೆಗಳನ್ನು ಕೊಟ್ಟಿದ್ದೀರಿ, 1-1-1972ರ ನಂತರ ಎಷ್ಟು ಪರವಾನೆಗಳನ್ನು ಕೊಟ್ಟಿದ್ದೀರಿ ಎಂಬುದನ್ನು ಹೇಳುವುದಕ್ಕೆ ಆಗುತ್ತದೆಯೇ ?

Sri AZEEZ SAIT : There were 398 contract carriages as on 1-1-1972 and after that about 25 permits have been given and the Hon. Member should know that these contract permits are being given by the respective R.T.A's in consultation with the Deputy Commissioner and one non-official member. These contract carriages have no particular routes and timings. We have absolutely no control over these carriages. For that reason I have got two amendments to take away the powers of the R.T.A's.

ಶ್ರೀ ಎಂ. ಎಸ್. ಕೃಷ್ಣನ್:—ಕೆಲವು ಕಂಟ್ರಾಕ್ಟ್ ಬಸ್ಸುಗಳನ್ನು ನಿಯಮಿತವಾಗಿ ಪ್ರಯಾಣಿಕರ ಬಸ್ಸುಗಳಾಗಿ ಕಳ್ಳರೀತಿಯಲ್ಲಿ ಓಡಿಸುತ್ತಿರುವುದರಿಂದ ಎಂ. ಎಸ್. ಆರ್.ಟಿ. ಸಿ.ಗೆ ಬರತಕ್ಕ ಆಧಾಯಕ್ಕೆ ಧಕ್ಕೆ ಬಂದಿದೆಯೆಂದು (ಈ)ಗೆ ಉತ್ತರವಾಗಿ ಹೇಳಿದ್ದೀರಿ. ಆ ರೀತಿಯಾಗಿ ಧಕ್ಕೆ ಬಾರದೇ ಇರಬೇಕಾದರೆ ರಹಸ್ಯವಾಗಿ, ಯಾರಿಗೂ ಗೊತ್ತಿಲ್ಲದೆ ಇರುವ ಹಾಗೆ ಕಾನೂನಿಗೆ ವಿರೋಧವಾಗಿ ನಡೆಸುವುದನ್ನು ತಡೆಹಿಡಿಯುವುದಕ್ಕೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ?

Sri AZEEZ SAIT.—We have booked a number of cases. Recently, from 15-6-1972 to 19-3-1973, we have booked 2,400 cases and we have collected Rs. 56,378/- by way of fines. The R.T.A. has collected Rs. 5,688, 697 vehicles out of 2,400 cases booked were handed over to the local Police for further action. action.

ಶ್ರೀ ವಿ. ಎನ್. ಪಾಟೀಲ್ :—ಎಂ. ಎಸ್. ಆರ್. ಟಿ. ಸಿ. ಬಸ್ಸುಗಳು ಹೊರಡುವುದಕ್ಕೆ 10-15 ನಿಮಿಷಗಳಿಗೆ ಮೊದಲೇ ಈ ಕಾಂಟ್ರಾಕ್ಟ್ ಕ್ಯಾರೇಜು ಬಸ್ಸುಗಳು ಹೊರಡುವುದರಿಂದ ನಮ್ಮ ಸರ್ಕಾರಿ ಬಸ್ಸುಗಳಲ್ಲಿ ಪ್ರಯಾಣೀಕರಿಲ್ಲದೆ, ಲುಕ್ಸಾನಾಗುತ್ತಿದೆ. ಈ ಲುಕ್ಸಾನನ್ನು ತಡೆಗಟ್ಟುವುದಕ್ಕೆ ಏನು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ?

Sri AZEEZ SAIT.—ಕಾಂಟ್ರಾಕ್ಟ್ ಕ್ಯಾರೇಜುಗಳಿಗೆ ರೂಟ್ ಮತ್ತು ಕಾಲನಿಗದಿ ಇಲ್ಲ. As I told you, the Contract carriage has no route and no timings. I completely endorse the view of the Hon. Member that we have been affected by way of loss of revenues. For that very

reason, we even thought of increasing the taxes but the increase of tax to 100 rupees has been struck down by the High Court on grounds of discrimination, very recently. We have been thinking in what way we can control these things. We have brought two Amendement Bills already. They have been introduced already.

ಶ್ರೀ ಕೋಣಂದೂರು ಲಿಂಗಪ್ಪ :—ಮಾನ್ಯ ಸಚಿವರು (ಈ) ಉತ್ತರದಲ್ಲಿ ಕೆಲವು ಕಾಂಟ್ರಾಕ್ಟ್ ಬಸ್ಸುಗಳು ನಿಯಮಿತವಾಗಿ ಪ್ರಯಾಣೀಕರ ಬಸ್ಸಾಗಿ ಕಳ್ಳರೀತಿಯಿಂದ ಓಡುತ್ತಿರುವುದರಿಂದ ಸದರಿ ಸಂಸ್ಥೆಯ ಆದಾಯಕ್ಕೆ ಧಕ್ಕೆಯಾಗಿದೆ—ಎಂದು ಉತ್ತರ ಕೊಟ್ಟಿರುವುದರಿಂದ ಸರ್ಕಾರದವರು ಇದನ್ನು ತಡೆಗಟ್ಟಲು ಸಾಧ್ಯವಿಲ್ಲ ಎಂಬುದನ್ನು ಒಪ್ಪಿದ ಹಾಗೆ ಆಯಿತು. ಆದ್ದರಿಂದ ಮಾನ್ಯ ಮಂತ್ರಿಗಳು ರಾಜೀನಾಮೆ ಏಕೆ ಕೊಡಬಾರದು ?

ಶ್ರೀ ಅಜೀಜ್ ಸೇಟ್ :—ಇಲ್ಲಿ ರಾಜೀನಾಮೆ ಕೊಡತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ. ಇಲ್ಲಿ ಬಂದಿರುವುದು ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕು ಎಂಬುದು. ಇದೇ ರೀತಿ ಸಮಸ್ಯೆಗಳು ಪಕ್ಕದ ರಾಜ್ಯದಲ್ಲೂ ಇವೆ.

There was the move to take away the bus permits and workshops. Even this has been struck down in the High Court of Madras. Therefore, it is a problem for not only Mysore but for almost all the States. We, the Regional Ministers of the South Zone held a Conference and have requested the Government of India to amend certain Acts under the Central Act, because, the Motor Vehicles Act is a Central Act and we are also thinking of bringing some amendments. We will see in what best manner we can do away with these Contract Carriages.

ಶ್ರೀ ಎಂ. ಎಸ್. ಕೃಷ್ಣನ್ :—ಈ ನ್ಯೂನತೆಯನ್ನು ತಡೆಗಟ್ಟುವುದಕ್ಕೆ ತಿದ್ದುಪಡಿಗಳನ್ನು ತರಲಾಗುತ್ತಿದೆ ಎಂದು ಮಾನ್ಯ ಸಚಿವರು ಅಪ್ಪಣೆ ಕೊಡಿಸಿದರು. ಅದರ ಜೊತೆಗೆ ಸರ್ಕಾರಕ್ಕೆ ಬರುವ ವರಮಾನ ಕಡಮೆಯಾಗಿರುವುದರಿಂದಲೂ ಮತ್ತು ಈ ದಿವಸ ಸುಪ್ರೀಂ ಕೋರ್ಟು ಕೊಟ್ಟಿರತಕ್ಕ ತೀರ್ಮಾನವನ್ನು ಕೂಡ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಈ ಕ್ಯಾರೇಜುಗಳನ್ನು ನ್ಯಾಷನಲೈಜ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

Sri AZEEZ SAIT :—The Chief Minister is the authority to hear the objections. We have to take a decision after getting a clearance. I will just examine whether by a separate Law we can take away these routes and crew and workshops. I can assure the Hon. Member that the whole matter will be examined in the quickest possible manner.

ಶ್ರೀ ಟಿ. ಎಂ. ಮಂಜುನಾಥ್ :—ಈ ಓಡುತ್ತಿರುವ ಸರ್ಕಾರಿ ಬಸ್ಸುಗಳೇನಿವೆ—ಅವುಗಳಿಂದ ದೂರಪ್ರಯಾಣೀಕರಿಗೆ ಮಾತ್ರ ಅನುಕೂಲವಿದೆಯೋ ವಿನಾ ಮಧ್ಯೆ ಓಡಾಡತಕ್ಕ ಕಟ್

ಪ್ಯಾಸೆಂಜರುಗಳಿಗೆ ಬಹಳ ತೊಂದರೆ ಇದೆ. ಅದನ್ನು ನಿವಾರಣೆ ಮಾಡುವುದಕ್ಕೆ ಏನು ಕಾರ್ಯಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಅಜೀಜ್ ಸೇಟ್ :—ಮಾನ್ಯ ಸದಸ್ಯರು ಹೇಳುವುದರಲ್ಲಿ ಸತ್ಯಾಂಶವಿದೆ. ಈ ರೂಟ್ ಅರೇಂಜ್‌ಮೆಂಟನ್ನು ಯಾವುದೋ ಕಾಲದಲ್ಲಿ ಮಾಡಿದ್ದು. ಈಗ ಇವುಗಳನ್ನೆಲ್ಲಾ ರೀ ರೂಟ್ ಮಾಡಬೇಕಾಗಿದೆ. The extent of mileage has been increased. Therefore entire re-routing is necessary. The Board is taking prompt action to re-route the entire routes in the Eastern Division.

MADAM SPEAKER : Q. No. 672 is held over as the Hon. Minister is not in the station.

SCARCITY OF KEROSENE AND CEMENTS

679. Sri N. S. GURUSIDDAPPA (Biligere).—

Will the Minister of State for Food and Civil Supplies be pleased to state :—

(*a*) whether it has come to the notice of the Government that there is acute scarcity of kerosene, cement and that the same are sold at high prices in the State ;

(*b*) if so, the action taken by the Government to curb the black marketing in these essential commodities ?

Smt. E. E. VAZ (Minister of State for Food and Civil Supplies).—

(*a*) Yes. Sale price of Kerosene has been fixed. Instances of sale of kerosene at higher price have not come to the notice of Government.

(*b*) Government propose to issue orders under the Essential Commodities Act under which sale of cement to the general public will be regulated through permits. In respect of kerosene, the enforcement auhorities have been instructed to book the offenders and ensure equitable distribution of Kerosene among *bona fied* consumers.

ಶ್ರೀ ಎನ್. ಎಸ್. ಗುರುಸಿದ್ದಪ್ಪ :—ಸೀಮೆ ಎಣ್ಣೆಯ ಸರಬರಾಯಿ ವಿಚಾರದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ಬಹಳ ತೊಂದರೆ ಇದೆ. ಇದು ಸಪ್ಲೈ ಸರಿಯಾಗಿಲ್ಲದೆ ತೊಂದರೆ ಉಂಟಾಗಿದೆಯೋ ಅಥವಾ ಪ್ರಾಪರ್ ಡಿಸ್ಟ್ರಿಬ್ಯೂಷನ್ ಇಲ್ಲದೆ ಉಂಟಾಗಿದೆಯೋ

ಗೊತ್ತಿಲ್ಲ. ಇದನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ?

ಶ್ರೀಮತಿ ಇ. ಇ. ವಾಜ್ :—ಮಾನ್ಯ ಅಧ್ಯಕ್ಷಿಣಿಯವರೇ, ನಮ್ಮ ಮೈಸೂರಿಗೆ ಬರುತ್ತಿರುವ ಸೀಮೆಎಣ್ಣೆ 24,485 ಮೆಟ್ರಿಕ್ ಟನ್ನುಗಳು. ನಮಗೆ ಕಳೆದ ಮೂರು ತಿಂಗಳಿಂದ ಬಂದಿರತಕ್ಕ ಸರಬರಾಯಿ 19,615 ಲಕ್ಷ ಲೀಟರ್. ಅಂದರೆ 4,642 ಲಕ್ಷ ಟನ್ ಲೀಟರ್ ಎಣ್ಣೆ ಕಡಿಮೆ ಬಂದಿದೆ. ಆದಾಗ್ಯೂ ಇದನ್ನು ಕ್ರಮವಾಗಿ ಡಿಸ್ಟ್ರಿಬ್ಯೂಟ್ ಮಾಡಬೇಕೆಂದು ಎಲ್ಲ ಅಧಿಕಾರಿಗಳಿಗೂ ತಿಳಿಸಲಾಗಿದೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ :—ವ್ಯವಸಾಯದ ಉದ್ದೇಶಕ್ಕೆ ರೈತರು ಕೇಳಿದರೆ ಇದನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀಮತಿ ಇ. ಇ. ವಾಜ್ :—ನಾವು ನಮ್ಮ ರಾಜ್ಯಕ್ಕೆ ಜಾಸ್ತಿ ಕೋಟ ಕೊಡಬೇಕೆಂದು ಕೇಳಿದ್ದೇವೆ. ಅವರೂ ಕೂಡ ಕೊಡುವುದಕ್ಕೆ ಒಪ್ಪಿದ್ದಾರೆ. ಇದೇ ಸಂದರ್ಭದಲ್ಲಿ ಮೈಸೂರು ರಾಜ್ಯದಲ್ಲಿರತಕ್ಕ ಎಲ್ಲಾ ಡೀಲರ್ಸ್‌ನ್ನೂ ಕರೆದು ಒಂದು ಕಾನ್‌ಫರೆನ್ಸ್ ಮಾಡಿ ಜಿಲ್ಲಾಧಿಕಾರಿಗಳಿಗೂ ಇತರೇ ಎಲ್ಲಾ ಅಧಿಕಾರಿಗಳಿಗೂ ಯಾವ ರೀತಿ ಇದನ್ನು ವಿತರಣೆಮಾಡಬೇಕೆಂಬುದನ್ನು ತಿಳಿಸಿದ್ದೇವೆ. We have instructed the district authorities that no body should be given more than 10 to 25 litres and in districts, where the short-fall is too much, not more than 10 litres should be given per head.

ಶ್ರೀ ಟಿ. ಎಂ. ಮಂಜುನಾಥ್ :—ನಾನು ಕಣ್ಣಲ್ಲಿ ನೋಡಿದ್ದೇನೆ. ಬ್ಲಾಕ್‌ಮಾರ್ಕೆಟ್ಟಿನಲ್ಲಿ ಒಂದು ಟಿನ್ ಸೀಮೆ ಎಣ್ಣೆ 30–40 ರೂಪಾಯಿಗಳವರೆಗೆ ಮಾರಾಟವಾಗುತ್ತಿದೆ. ಇದನ್ನು ತಡೆಗಟ್ಟುವುದಕ್ಕೇನು ಕ್ರಮಗಳನ್ನು ಕೈಗೊಳ್ಳಲಾಗಿದೆ ?

ಶ್ರೀಮತಿ ಇ. ಇ. ವಾಜ್ :—ಇದನ್ನು ತಡೆಗಟ್ಟಲು ನಮ್ಮ ಸಿವಿಲ್ ಸಪ್ಲೈ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ತಿಳಿಸಿದ್ದೇವೆ. ಅವರು ಈಗಾಗಲೇ ಅನೇಕರ ಬಗ್ಗೆ ಕೇಸುಗಳನ್ನು ಹಾಕಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ್ :—ಮಾನ್ಯ ಸಚಿವೆಯವರು ತಲಾ ಹತ್ತು ಲೀಟರನ್ನು ಕೊಡುವುದಕ್ಕೆ ತಿಳಿಸಿದೆ ಎಂದು ಹೇಳಿದರು. ಹತ್ತು ಲೀಟರು ಬೇಡ. 2 ಲೀಟರುಗಳನ್ನಾದರೂ ತಪ್ಪದೆ ಎಲ್ಲರಿಗೂ ಕೊಡುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿವಳಿಕೆಯನ್ನು ಕೊಡುತ್ತಾರೆಯೇ ?

ಶ್ರೀಮತಿ ಇ. ಇ. ವಾಜ್ :—ಒಬ್ಬರಿಗೆ 10 ಲೀಟರನ್ನು ಕೊಡುವುದಕ್ಕಾಗುವುದಿಲ್ಲ. ಎಲ್ಲರಿಗೂ ಸರಿಯಾಗಿ ಸಿಕ್ಕುವ ಹಾಗೆ ಇದನ್ನು ಹಂಚುವಂತೆ ಹಾಸನದ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ್ :—ಹಳ್ಳಿಗಳಲ್ಲಿ 3 ದಿನಗಳಿಂದ ಅಲೆದರೂ ಸೀಮೆಎಣ್ಣೆ ದೊರೆಯದೆ ಅರ್ಧ ಲೀಟರ್ ಕೂಡ ಸಿಕ್ಕದೆ ಹೆಣ್ಣುಮಕ್ಕಳು ಅಂಗಡಿಗಳಿಗೆ ಅಲೆಯುತ್ತಿದ್ದಾರೆ. ಇದನ್ನು ತಪ್ಪಿಸಲು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

Smt. E. E. VAZ : We have instructed dealers to distribute oil during sandy days to all the people depending upon the stock available not more than 5 litres if the stock is less and if the

stock is more, not more than 10 litres and reserve some to meet any emergency.

ಒಬ್ಬ ಮಾನ್ಯ ಸದಸ್ಯರು :—ನಮ್ಮ ಜಿಲ್ಲೆಯಲ್ಲಿ ಸೀಮೆಎಣ್ಣೆ ಕೊರತೆ ಜಾಸ್ತಿಯಾಗಿರುವುದರಿಂದ ಅಲ್ಲಿಗೆ ಜಾಸ್ತಿ ಸರಬರಾಯಿ ಮಾಡುವಿರಾ ?

ಶ್ರೀಮತಿ ಇ. ಇ. ವಾಜ್ :—ಪ್ರತಿಯೊಂದು ಕಡೆಯಲ್ಲೂ ವಾರದಲ್ಲಿ ಇಷ್ಟು ದಿವಸ ಬೀದಿಗಳಲ್ಲಿ ಮಾರಬೇಕೆಂದು ತಿಳಿಸಿದ್ದೇವೆ. ಆದಷ್ಟು ಇರುವುದರಲ್ಲಿ ಸ್ವಲ್ಪವಾದರೂ ಎಲ್ಲರಿಗೂ ದೊರೆಯುವಂತೆ ವ್ಯವಸ್ಥೆ ಮಾಡಿದ್ದೇವೆ, ಅದರಂತೆ ಪ್ರತಿಯೊಂದು ಜಿಲ್ಲೆಯಲ್ಲೂ ದೊರೆಯುವುದು.

ಶ್ರೀಮತಿ ದಮಯಂತಿ ಬೋರೇಗೌಡ :—ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರುತ್ತಿರುವುದರಿಂದ ಅನೇಕ ಸಂದರ್ಭಗಳಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಎಣ್ಣೆ ಸರಿಯಾಗಿ ದೊರೆಯದಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಇ. ಇ. ವಾಜ್ :—ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರುವುದು ಗಮನಕ್ಕೆ ಬಂದಿಲ್ಲ. ಹಾಗೆ ಮಾರುವುದನ್ನು ತಡೆಯಲು ಪ್ರಯತ್ನ ಮಾಡಿದ್ದೇವೆ, ಪೊಲೀಸ್ ಆಫೀಸರುಗಳು ಮುಂತಾದವರಿಗೆ ತಿಳಿಸಿ ದುರ್ವಿನಿಯೋಗವಾಗದಂತೆ ಕ್ರಮ ತೆಗೆದುಕೊಳ್ಳಲು ಒತ್ತಾಯ ಮಾಡಿದ್ದೇವೆ. We have assured them to keep a vigilant eye on the blackmarketeers who try to exploit the situation.

ಶ್ರೀ ಎಚ್. ಎಸ್. ಸಿದ್ದಪ್ಪ :—ಅರಸೀಕೆರೆ ತಾಲ್ಲೂಕಿಗೆ ಬರುವುದನ್ನು ಪ್ರಭಾವವಿರುವ ಜಾಗಗಳಿಗೆ ಕಳಿಸಿ ಅಲ್ಲಿ ಹೆಚ್ಚಾಗಿ ಮಾರುವುದರಿಂದ ಇತರ ಕಡೆ ಅಭಾವವಾಗಿದೆ. ಇದರಿಂದ ಗ್ರಾಮಗಳಲ್ಲಿ ಸೀಮೆಎಣ್ಣೆ ಸಿಕ್ಕುತ್ತಿಲ್ಲ. ಬಡವರಿಗೆ ದೊರೆಯುವಂತೆ ತಕ್ಕ ವ್ಯವಸ್ಥೆ ಮಾಡುವಿರಾ ?

ಶ್ರೀಮತಿ ಇ. ಇ. ವಾಜ್ :—ಒಂದು ಕಡೆಗೆ ಜಾಸ್ತಿ ಇನ್ನೊಂದು ಕಡೆಗೆ ಕಡಿಮೆ ಸರಬರಾಯಿ ಮಾಡಿ ತೊಂದರೆಮಾಡುವುದು ತಪ್ಪಾಗುವುದು. ಕಡಿಮೆ ಸರಬರಾಜು ಇರುವಾಗ. ಇರುವುದು ಎಲ್ಲರಿಗೂ ದೊರೆಯುವಂತೆ ಹಂಚಲು ಅಧಿಕಾರಿಗಳಿಗೆ ತಿಳಿಸಿದ್ದೇವೆ.

ಶ್ರೀ ಪಿ. ಎಂ. ಭಂಗಿ :—ಬಿಜಾಪುರ ಜಿಲ್ಲೆಯ ಜಂಖಂಡಿಯಲ್ಲಿ ಎಂ. ಎಸ್. ಇ. ಬಿ.ನವರು ಸಿಮೆಂಟನ್ನು ಸ್ಟಾಕ್‌ಮಾಡಿ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರಿಕೊಂಡಿದ್ದಾರೆಂದು ಕಾಗದ ಬಂದಿದೆ. ಇದು ಗಮನಕ್ಕೆ ಬಂದಿದೆಯೇ ? ಇದರ ಬಗ್ಗೆ ಉಗ್ರ ಕ್ರಮ ತೆಗೆದುಕೊಳ್ಳುವಿರಾ ?

ಶ್ರೀಮತಿ ಇ. ಇ. ವಾಜ್ :—ಇದನ್ನು ಈಗ ಗಮನಕ್ಕೆ ತಂದಿದ್ದಾರೆ. ಏಪ್ರಿಲ್ ಎರಡರಿಂದ ಸಿಮೆಂಟ್ ಕಂಟ್ರೋಲ್ ಆಗಿ ಪರ್ಮಿಟ್ ಮೂಲಕ ಹಂಚಲು ಕಾರ್ಯಕ್ರಮ ತೆಗೆದುಕೊಂಡಿದೆ. ಇದನ್ನು ಇಂಡಸ್ಟ್ರೀಸ್ ಇಲಾಖೆಯವರು ಹ್ಯಾಂಡ್ಲ್ ಮಾಡುತ್ತಿದ್ದಾರೆ. ಪರ್ಮಿಟ್ ಮೇಲೆ ಮಾರಬೇಕೆಂದು ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಕೆ. ಎಚ್. ಹನುಮೇಗೌಡ :—ಸಂತೆಗೆ 500 ಲೀಟರ್ ಎಣ್ಣೆ ತೆಗೆದುಕೊಂಡು ಹೋಗಿ ಹಂಚುವುದಾಗಿ ಹೇಳಿ ಅದರಲ್ಲಿ ಸುಮಾರು 200 ಲೀಟರನ್ನು ಬೇರೆ ಕಡೆ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರಿ ಉಳಿದುದನ್ನು ಸಂತೆಗೆ ತೆಗೆದುಕೊಂಡು ಹೋಗಿ ಹಂಚುವುದರಿಂದ ಅಲ್ಲಿ ಜನರ ಗುಂಪು ಹೆಚ್ಚಿ ಅವರಿಗೆ ಸಿಗದೆ ಹೊಡೆದಾಟ ಗಲಾಟೆಯಾಗುತ್ತಿದೆ. ಇದನ್ನು ವ್ಯವಸ್ಥಿತ ರೀತಿಯಲ್ಲಿ

ಹಂಚಲು ಏರ್ಪಾಡು ಮಾಡುವಿರಾ ? ವರ್ತಕರು ಹೀಗೆ ಮಾಡುವುದನ್ನು ತಪ್ಪಿಸಲು ಏನು ಮಾಡುತ್ತೀರಿ ?

ಶ್ರೀಮತಿ ಇ. ಇ. ವಾಜ್ :—ಪ್ರತಿಯೊಂದು ಸಂತೆಗೂ 5 ಸಾವಿರ ಲೀಟರ್ ಕೊಟ್ಟು, ಜಾಸ್ತಿ ಯಾರಿಗೂ ಕೊಡದಂತೆಯೂ, ಎಲ್ಲರಿಗೂ ಹಂಚುವಂತೆಯೂ ತಿಳಿಸಿದೆ. ಹಾಗೆ ಮಾಡದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಬೇಕು. ಸಿವಿಲ್ ಸಪ್ಲೈಸ್ ಇನ್‌ಸ್ಪೆಕ್ಟರು ಇದನ್ನು ನೋಡಿಕೊಳ್ಳುವರು.

ಶ್ರೀ ಹಂಜಿ ಶಿವಣ್ಣ :—ಐದಾರು ತಾಲ್ಲೂಕುಗಳಿಗೆ ಒಬ್ಬರು ಏಜೆಂಟರು ಇರುವುದರಿಂದ ಅವರು ಎಲ್ಲಾ ಕಡೆಯೂ ಸರಿಯಾದ ವ್ಯವಸ್ಥೆ ಮಾಡುವುದಿಲ್ಲ. ಅವರು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರಾಟ ಮಾಡುವುದುಂಟು. ಆದುದರಿಂದ ಒಂದೊಂದು ತಾಲ್ಲೂಕಿಗೆ ಒಬ್ಬೊಬ್ಬ ಹೋಲ್ ಸೇಲ್ ಡೀಲರನ್ನು ಮಾಡಿ ಎಲ್ಲಾ ಕಡೆ ಸರಿಯಾಗಿ ಹಂಚಲು ವ್ಯವಸ್ಥೆ ಮಾಡುವಿರಾ ? ಹಾಗೆ ಮಾಡದಿದ್ದರೆ ಹೆಚ್ಚು ಗೊಂದಲವಾಗಿ ಕ್ರಾಂತಿಯಾಗುವುದು. ಸಿಮೆಂಟ್ ವಿಷಯದಲ್ಲಿ ಕೂಡ ಇದೇ ರೀತಿಯಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಆರು ತಾಲ್ಲೂಕುಗಳಿಗೆ ಒಬ್ಬರೇ ಏಜೆಂಟರಿದ್ದಾರೆ.

ಶ್ರೀಮತಿ ಇ. ಇ. ವಾಜ್ :—ಅದಕ್ಕಾಗಿಯೇ ಡೀಸೆಂಟ್ರಲೈಜ್ ಮಾಡಬೇಕು ಎಂದು ಯೋಚಿಸಿ ಬೇರೆ ಬೇರೆ ಜಿಲ್ಲೆಗಳಿಗೆ ಬೇರೆ ಬೇರೆ ಡೀಲರನ್ನು ನೇಮಿಸಲು ಏರ್ಪಾಡು ಮಾಡುತ್ತಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ :—ಪೇಟೆಯಲ್ಲಿ ಕೊರತೆಯಾದರೆ ಜನರು ಮಂತ್ರಿಗಳ ಮನೆಯ ಬಳಿಗೆ ಬರುವರು. ಹಳ್ಳಿಗಳಲ್ಲಿ ತೊಂದರೆಯಾಗುತ್ತಿರುವುದು ಸೀಮೆಎಣ್ಣೆ ದೊರೆಯ ದಿರುವುದು ಗಮನಕ್ಕೆ ಎಷ್ಟು ದಿವಸದಿಂದ ಬಂದಿದೆ ? ಹಳ್ಳಿಯವರ ಕಷ್ಟ ನಿವಾರಿಸಲು ತಯಾರಿದ್ದೀರಾ ? ಹಳ್ಳಿಯವರು ಒಂದೆರಡು ತಿಂಗಳಿಂದ ಕಾಳಸಂತೆಯಲ್ಲಿ ಕೊಳ್ಳಬೇಕಾಗಿರುವುದು ಗಮನಕ್ಕೆ ಬಂದಿದೆಯೇ ? ಇಂಥ ಅಂಗಡಿಯಲ್ಲಿ ಇಷ್ಟು ಇಂಥ ಸಮಯದಲ್ಲಿ ದೊರೆಯುವುದು ಎಂದು ಮುಂಚೆಯೇ ಪ್ರಕಟಿಸುವಿರಾ ?

ಶ್ರೀಮತಿ ಇ. ಇ. ವಾಜ್ :—ಜನವರಿಯಿಂದ ತೊಂದರೆಯಾಗಿದೆ. ಹಳ್ಳಿಗಳಲ್ಲಿ ತೊಂದರೆ ಯಾಗಿರುವ ಕಡೆ ಸೂಕ್ತ ಕ್ರಮ ತೆಗೆದುಕೊಂಡಿದೆ. ಕೋಆಪರೇಟಿವ್ ಸೊಸೈಟಿ ಇರುವ ಕಡೆ ಅದರ ಮೂಲಕ ಹಂಚಬೇಕು, ಅದಿಲ್ಲದಿರುವ ಕಡೆ ಅಂಗಡಿ ಮೂಲಕ ಹಂಚಬೇಕು ಎಂದು ತಿಳಿಸಿದ್ದೇವೆ.

ಶ್ರೀ ಬಾಪುಗೌಡ ರಾಯಪ್ಪ :—5 ಸಾವಿರ ಲೀಟರುಗಳ ಸೀಮೆಎಣ್ಣೆ ಈ ರಾಜ್ಯದಲ್ಲಿ ಕೊರತೆಯಿದೆಯೆಂದು ಹೇಳಿರುವುದು ಯಾವ ತಿಂಗಳಲ್ಲಿ, ಮೇ ಅಥವಾ ಜೂನ್‌ನಲ್ಲಿ ಈ ಕೊರತೆ ನೀಗುವುದು ಎಂಬುದನ್ನು ನಿರ್ದಿಷ್ಟವಾಗಿ ಹೇಳುವಿರಾ ?

ಶ್ರೀಮತಿ ಇ. ಇ. ವಾಜ್ :—ಆದಷ್ಟು ಬೇಗ ಕೊರತೆಯನ್ನು ನೀಗುತ್ತೇವೆ ಎಂದು ಭರವಸೆ ಕೊಡುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ :—ಸಿಮೆಂಟು ಜಾಸ್ತಿ ಬೆಲೆಗೆ, ಚೀಲಕ್ಕೆ 26 ರೂಪಾಯಿಗಳಂತೆ ಮಾರಾಟವಾಗುತ್ತಿದೆ ಎಂಬುದನ್ನು ಈ ಅಧಿವೇಶನ ಪ್ರಾರಂಭವಾದಾಗಿನಿಂದ ಹೇಳುತ್ತಿದ್ದೇವೆ. ಈಗ ರೈಲ್ವೆ ಸ್ಟೇಷನ್ನಿನಲ್ಲೇ 24 ರಿಂದ 26 ರೂಪಾಯಿವರೆಗಿನ ದರದಲ್ಲಿ ಮಾರಾಟವಾಗು ತ್ತಿರುವುದು ಗೊತ್ತಿದೆಯೇ ? ಇದರ ಮೇಲೆ ಕ್ರಮ ಏನು ತೆಗೆದುಕೊಳ್ಳಲಾಗಿದೆ ?

ಶ್ರೀಮತಿ ಇ. ಇ. ವಾಜ್ :—ಇಷ್ಟು ದಿವಸ ಕಂಟ್ರೋಲ್ ಇಲ್ಲದೆ ಇದ್ದುದರಿಂದ ಸಿಮೆಂಟನ್ನು ಹೆಚ್ಚಿನ ಬೆಲೆಗೆ ಮಾರುತ್ತಿದ್ದರು. ಇದು ಗೊತ್ತಾದ ಮೇಲೆ ಪರ್ಮಿಟ್ ಸಿಸ್ಟಂ ಇಂಟ್ರೊಡ್ಯೂಸ್ ಮಾಡಲು ಸೂಕ್ತ ಕ್ರಮ ತೆಗೆದುಕೊಂಡಿದೆ.

ಶ್ರೀ ಎಂ. ಎಸ್. ಕೃಷ್ಣನ್:—ನಮ್ಮ ರಾಜ್ಯದಲ್ಲಿ ಉತ್ಪತ್ತಿಯಾದ ಸಿಮೆಂಟ್ ಬೇರೆ ರಾಜ್ಯಕ್ಕೂ ಹೋಗುತ್ತಿದೆ. ನಮ್ಮ ರಾಜ್ಯಕ್ಕೆ ಬೇಕಾಗಿರುವಷ್ಟು ಸಪ್ಲೈ ಆಗದೆ, ಬೇರೆ ರಾಜ್ಯಕ್ಕೆ ಹೋದರೆ ಹೇಗೆ? ನಮಗೆ ಸಾಲದು, ಈ ರೀತಿ ಬೇರೆ ರಾಜ್ಯಕ್ಕೆ ಹೋಗುವ ವ್ಯವಸ್ಥೆ ನಡೆಯದ ಹಾಗೆ ಇಲ್ಲಿಯೇ ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀಮತಿ ಇ. ಇ. ವಾಜ್:—ನಮ್ಮ ರಾಜ್ಯದಿಂದ ಬೇರೆ ರಾಜ್ಯಕ್ಕೆ ಹೋಗುತ್ತದೆ ಎನ್ನುವ ಅಭಿಪ್ರಾಯ ತಪ್ಪು. ಆಂಧ್ರದಿಂದ ಬರತಕ್ಕ ಸಿಮೆಂಟ್ ಅಲ್ಲಿ ಸ್ವಲ್ಪ ಗಲಾಟೆಯಾದ್ದರಿಂದ ಕಡಿಮೆಯಾಯಿತು. ಇದು ಕೊರತೆಗೆ ಕಾರಣವಾಗಿದೆ.

ಶ್ರೀ ಕೆ. ಎಂ. ದೊರೆಸ್ವಾಮಿ ನಾಯಿಡು :—ಡೀಸಲ್‌ನಲ್ಲಿ ಸೀಮೆಎಣ್ಣೆಯನ್ನು ಸೇರಿಸಿ ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀಮತಿ ಇ. ಇ. ವಾಜ್: – ಮಾನ್ಯ ಸದಸ್ಯರ ಪ್ರಶ್ನೆ ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ.

ಶ್ರೀ ಕೆ. ಶ್ರೀರಾಮುಲು:—ಈ ಸೀಮೆಎಣ್ಣೆಯ ಅಭಾವಕ್ಕೆ ಕಾರಣ, ಪೆಟ್ರೋಲ್‌ನಲ್ಲಿ ಸೀಮೆಎಣ್ಣೆಯನ್ನು ಮಿಲಿತ ಮಾಡುತ್ತಾರೆ. ಇದು ಅಭಾವಕ್ಕೆ ಕಾರಣ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಇದನ್ನು ಪರೀಕ್ಷೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಪಟ್ಟಿದೆಯೇ?

ಶ್ರೀಮತಿ ಇ. ಇ. ವಾಜ್:—ಇದು ಸರ್ಕಾರದ ಗಮನಕ್ಕೆ ಬಂದಿಲ್ಲ. ಎಲ್ಲಿಯಾದರೂ ಇಂಥಾದ್ದು ಇದ್ದರೆ, ಮಾನ್ಯ ಸದಸ್ಯರು ಅದನ್ನು ಸರ್ಕಾರದ ಗಮನಕ್ಕೆ ತಂದರೆ ಖಂಡಿತ ವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ:—ಸಿಮೆಂಟ್ ಕಂಟ್ರೋಲ್ ಮಾಡಬೇಕು ಎನ್ನತಕ್ಕ ತೀರ್ಮಾನ ವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಈಗಾಗಲೇ, ಪರ್ಮಿಟ್‌ಗಳನ್ನು ಇಷ್ಯೂ ಮಾಡುವುದಕ್ಕೆ ಸಾಧಾರಣವಾಗಿರತಕ್ಕ ಇನ್ಸ್‌ಪೆಕ್ಟರ್‌ಗಳು ಒಂದೊಂದು ಮೂಟೆಗೆ ಒಂದೊಂದು ರೂಪಾಯಿ ಕೊಟ್ಟರೆ ರೆಕಮಂಡ್ ಮಾಡುತ್ತಾರೆ. ಇನ್ಸ್‌ಪೆಕ್ಟರ್ ಅವರ ಮನೆ ಮುಂದೆ ಹೋಗಿ ಒಂದೊಂದು ಮೂಟೆಗೆ ಒಂದೊಂದು ರೂಪಾಯಿ ಕೊಡುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇಂಥಾದ್ದು ಇದ್ದರೆ ಇದರ ಬಗ್ಗೆ ತೀವ್ರ ಕ್ರಮ ತೆಗೆದು ಕೊಳ್ಳುತ್ತೀರಾ? ಮತ್ತು ಜನರಿಗೆ ತೊಂದರೆ ಆಗದ ಹಾಗೆ ನೋಡುತ್ತೀರಾ?

ಶ್ರೀಮತಿ ಇ. ಇ. ವಾಜ್:—ಪ್ರತಿಯೊಂದಕ್ಕೂ ನಾವು ಕಂಟ್ರೋಲ್ ಮಾಡಿದರೆ ಬ್ಲಾಕ್ ಮಾರ್ಕೆಟ್ ಆಗುತ್ತದೆ. ಕಂಟ್ರೋಲ್ ಮಾಡಿದರೆ ಆಫೀಸರ್ಸ್ ಲಂಚ ತೆಗೆದುಕೊಳ್ಳುತ್ತಾರೆ ಎಂದು ಹೇಳುವುದು ಸರಿಯಲ್ಲ. ಅಂಥಾದ್ದು ಇದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಖಂಡಿತವಾಗಿಯೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

Sri ABDUL KHUDDUS ANWAR :—There is a specific complaint that kerosene is not properly supplied in Bhadravathi. In spite of that the Minister is saying that no complaint has

been received. There is also a complaint that kerosene is mixed with petrol and sold by merchants and such a man is appointed as a member of the Food Advisory Committee.

PROBATIONERS OF EDUCATION AND OTHER DEPARTMENTS

Sriyuths :

762. DODDATHIMMAIAH (Gulur)
K. PRABHAKAR (Varthur)
M. H. JAYAPRAKASH NARAYAN (Sirsi)
S. H. PUTTARANGANATH (Belur)
M. B. RAMASWAMY (Anekal)
M. SIDDAMADAIAH (Kollegal)
P. MUNIYAPPA (Mulbagal)
KANTHA RAO B. DESAI (Kushtagi)

Will the Minister for Education be pleased to state :—

(*a*) the number of probationers appointed in the Education Department in the year 1962 ;

(*b*) the purpose for which they were recruited ;

(*c*) whether that purpose has been served ;

(*d*) whether their places have been fixed in the seniority list and are they all confirmed ;

(*e*) if not confirmed, when will the Government propose to confirm them ;

(*f*) the number of times the 1962 batch probationers represented about their grievances to Government ;

(*g*) whether the Government at any time given replies to their representation ;

(*h*) whether there is any judgment of the High Court of Mysore with regard to the promotion of Probationary Assistant Commissioners of 1962 in Writ Petition No. 192 of 1972 ;

(*i*) if so, the action taken by Government to implement the above judgment ;

(*j*) whether the Government would implement the above judgment in respect of all the probationers of 1962 of all the departments ?

Sri A. R. BADARINARAYANA (Minister for Education) :—

(*a*) Seventeen Class II Probationers.

(*b*) To fill up the direct recruitment vacancies in Class II.

(*c*) Yes.

(*d*) No.

(*e*) After the decision of the Supreme Court on the Writ Petition relating to the final Inter-State Seniority list of teachers in the Graduate Tutorial Cadre, publication of Final Gradation list of Class-II Officers of Department of Public Instruction and confirmation of their seniors the question of confirmation of the probationers will be considered.

(*f*) Represented many times.

(*g*) Yes.

(*h*) Yes.

(*i*) The implications of Judgment of the High Court are under examination.

(*j*) Does not arise in view of reply to clause (*i*).

Sri DODDATHIMMAIAH : When did the Government receive the judgments of the High Court and the Supreme Court and how much more time is required for the Government to understand the implications of these judgments and implement them ?

Sri A. R. BADARINARAYAN : The latest Supreme Court judgment was in April 1972.

Sri M. H. JAYAPRAKASH NARAYAN : Even after the lapse of 11 years no confirmation is made. What is the reason ?

Sri A. R. BADARINARAYAN : The responsibility is not that of the Government. Individual persons who were affected approached the High Court and the Supreme Court and they issued the stay orders.

Sri DODDATHIMMAIAH : When did the High Court deliver the judgment ?

Sri A. R. BADARINARAYAN : It was on 24-1-1967.

ಶ್ರೀ ಎಂ. ಸಿದ್ದಮಾದಯ್ಯ:—17 ಜನ ಪ್ರೊಬೇಷನರ್ಸ್ ಪೈಕಿ ಹರಿಜನಗಿರಿಜನರಿಗೆ ಎಷ್ಟು ಸೀಟು ಕೊಟ್ಟಿದ್ದೀರಿ?

ಶ್ರೀ ಎ. ಆರ್. ಬದರೀನಾರಾಯಣ್ :—17 ಜನದ ಲಿಸ್ಟ್ ಇದೆ, ನನಗೆ ಜಾತೀವಾರು ಲಿಸ್ಟ್ ಗೊತ್ತಿಲ್ಲ. 1962ರಲ್ಲಿ ಆಗಿರತಕ್ಕ ಲಿಸ್ಟ್ ಇದು. ಬಹುಶಃ ನನಗೆ ತಿಳಿದಿರುವ ಪೈಕಿ ಹನುಮಂತಯ್ಯನವರು ಇದ್ದಾರೆ, ಮತ್ತೆ ಬೇರೆ ಯಾರಿದ್ದಾರೋ ಗೊತ್ತಿಲ್ಲ.

Sri M. H. JAYAPRAKASH NARAYAN : In the case of the 1969 batch of probationers independent charge is given whereas in the case of the 1962 batch of probationers independent charge is not given. Why is there such discrimination ?

Sri A. R. BADARINARAYAN : If the Hon. Member lets me know where there is discrimination, I can look into it. Anyway let me assure him that the final gradation list has been sanctioned and it is about to be issued and everything will be regularised.

Sri DODDATHIMMAIAH : Will the Government give an assurance by what time this question will be settled and confirmation and promotion will be made ?

Sri A. R., BADARINARAYAN : Orders have been passed and they are about to issue.

Sri M. H. JAYAPRAKASH NARAYAN : When will the 1962 batch get the probationers' posts, why they have not been shown against clear substantive vacancies and what is the difficulty in doing this ? There is definite discrimination between the 1962 batch and the 1969 batch. Will the Hon. Minister kindly see that it is set right immediately ?

Sri A. R. BADARINARAYAN : Whatever injustice is there it will certainly be looked into and set right.

RELEASE OF FOREST LAND FOR CULTIVATION IN NORTH KANARA DISTRICT

789. Sri M. H. JAYAPRAKASH NARAYAN (Sirsi).—

Will the Minister for Agriculture and Forests be pleased to state :—

(*a*) the extent of different kinds of forest land released for cultivation during the last ten years in North Kanara District ;

(*b*) for what purpose, and the Government orders under which the forest land has been released ; out of the land so released the extent of land granted by Revenue Department for multipurpose development and cultivation ;

(*c*) the extent of land resumed by the Forest Department in view of the decision taken by Government to resume of forest land so leased ;

(*d*) in view of the policy of the Government to provide lands to the landless, whether the Government would provide lands to the poor and agricultural labourers for cultivation by reviewing the Government decision to resume the lands ?

Sri K. H. PATIL (Minister for Agriculture and Forests).—

		A. G. A.
(*a*) (i) On the recommendation of the 3 men committee.	...	14981-00-00
(ii) Out of the areas ordered for release in Government Order No. AFD 24 FGL 69 dated 16th April 69.	...	28596-00-00
(iii) For individual cases	...	2499-19-14
Total	...	46076-19-14

(*b*) Please see the list placed on the Table of the House.*

(i) Area released for cultivation	...	46076-19-14
(ii) Area released for construction of school buildings.	...	381-38-04
(iii) Extension of Goathana	...	2332-27-00
(iv) Industrial and other Non-Aricultural purpose	...	277-03-05
(v) Miscellaneous	...	4766-09-04
Total	...	53834-17-11

* Copy placed in the Mysore Legislature Library *vide* No. 32 25-4-1973.

The final distribution of lands vests with Revenue Department. This information is not readily available.

(*c*) So far no forest areas released to Revenue Department have been resumed to forest Department.

(*d*) No.

ಶ್ರೀ ಎಂ.ಎಚ್. ಜಯಪ್ರಕಾಶ್‌ನಾರಾಯಣ್:—ವಿವಿಧ ರೀತಿಯಲ್ಲಿ ಸುಮಾರು 46ಸಾವಿರ ಎಕರೆ ಅರಣ್ಯ ಭೂಮಿಯನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧ ರೀತಿಯ ಉಪಯೋಗಕ್ಕಾಗಿ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಆದರಲ್ಲಿ ಲ್ಯಾಂಡ್‌ಲೆಸ್ ಅಗ್ರಿಕಲ್ಚರಲ್ ಲೇಬರರ್ಸ್ ಎಷ್ಟು ಭೂಮಿ ಕೊಟ್ಟಿದ್ದೀರಿ ? ಆ ಬಗ್ಗೆ ಸುಮಾರು ಒಂದು ಲಕ್ಷ ಎಕರೆಯನ್ನು ಬಿಡುಗಡೆ ಮಾಡಿದನ್ನು ಈಚೆಗೆ ಮಂತ್ರಿ ಮಂಡಲದವರು ಯಾವ ವಿಧವಾದಂಥ ಅರಣ್ಯ ಭೂಮಿಯನ್ನು ಬಿಡುಗಡೆ ಮಾಡುವುದಿಲ್ಲ ಎಂದು ತೀರ್ಮಾನಕ್ಕೆ ಬಂದಾಗ ಅದನ್ನು ವಾಪಸ್ ತೆಗೆದುಕೊಳ್ಳಲು ಪ್ರಯತ್ನ ಮಾಡಿದ್ದು ನಿಜವೇ ? ತಾವು ಅಲ್ಲಿರತಕ್ಕ ಬಡವರ ಪರಿಸ್ಥಿತಿಯನ್ನು ಕಣ್ಣಾರೆ ನೋಡಿ, ಆ ಭೂಮಿಯನ್ನು ಕೊಡುತ್ತೇವೆ ಎನ್ನುವ ಅಭಯಂ ನೀಡಿದ್ದೀರಿ. ಆದ್ದರಿಂದ ಆ ಒಂದು ಲಕ್ಷ ಎಕರೆ ಭೂಮಿಯನ್ನು ಸಾಗುವಳಿ ಮಾಡುವುದಕ್ಕೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ :—ಯಾವಾಗ ಅರಣ್ಯ ಸಂಪತ್ತು 18 ಪರ್ಸೆಂಟ್‌ಗಿಂತ ಹೆಚ್ಚಾಗುತ್ತದೆಯೋ ಆಗ ಒಂದು ಲಕ್ಷ ಎಕರೆ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಕೊಡುವುದಕ್ಕೆ ಪ್ರಯತ್ನ ಮಾಡೋಣ. ಈಗ ಹಿಡಿದಂಥ ಕೆಲವು ಜಮೀನುಗಳನ್ನು ವಿತರಣೆ ಮಾಡುವುದಕ್ಕೆ ರೆವಿನ್ಯೂ ಖಾತೆಗೆ ಒಪ್ಪಿಸಬೇಕು. ಇಂಥ ನೋಟಿಫಿಕೇಷನ್ ಅನ್ನು ನಾವು ಹೊರಡಿಸಿದ್ದೇವೆ. ಇಲ್ಲಿಯವರೆಗೆ ಕೊಟ್ಟಂಥ ಭೂಮಿ ಲ್ಯಾಂಡ್‌ಲೆಸ್‌ಗೆ ಹೋಗುವುದಕ್ಕೆ ಬದಲಾಗಿ ದೊಡ್ಡ ದೊಡ್ಡ ಜನರಿಗೆ ಹೋಗುವುದಕ್ಕೆ ಆಗಿದೆ ಎನ್ನುವುದು ಕಂಡಿದ್ದು, ಮತ್ತು ಅಲ್ಲೊಬ್ಬರು, ಇಲ್ಲೊಬ್ಬರು ದುರುಪಯೋಗ ಮಾಡಿದ್ದನ್ನು ಸರ್ಕಾರ ನಿರೀಕ್ಷಣೆ ಮಾಡಿ ಅರಣ್ಯ ಸಂಪತ್ತು ಮತ್ತೆ ಮತ್ತೆ ಹಾಳಾಗಬಾರದು ಎಂದು ನೋಟಿಫಿಕೇಷನ್ ಹೊರಡಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಕಾರವಾರ ಜಿಲ್ಲೆಗೆ ಮುಖ್ಯಮಂತ್ರಿಗಳು ಹೋದಾಗ ಒಂದು ಹೇಳಿಕೆಯನ್ನು ಅವರು ಇತ್ತಿದ್ದರ ಬಗ್ಗೆ ಮಾನ್ಯ ಸದಸ್ಯರು ತಮ್ಮ ಗಮನವನ್ನು ಹರಿಸಬೇಕು. ಯಾವ ಹೊಲ ಇಲ್ಲದಂಥ ಮನುಷ್ಯ, ಸರ್ಕಾರದ ಅರಣ್ಯದ ಜಮೀನಿನಲ್ಲಿ ಗಿಡಗಳನ್ನು ಬೆಳಸಿ, ಗಿಡಗಳನ್ನು ಸಂಪಾದಿಸಿ ಅದರ ಜೊತೆಗೆ ವ್ಯವಸಾಯವನ್ನು ಮಾಡುವುದಕ್ಕೆ ಇಚ್ಛೆಪಡುತ್ತಾನೆ, ಅಂಥವರ ಅರ್ಜಿ ಬಂದಾಗ, ಅದನ್ನು ವಿಚಾರ ಮಾಡಿ ಕೊಡಬೇಕು ಎಂದು ಸರ್ಕಾರ ತನ್ನ ಧೋರಣೆಯನ್ನು ಬದಲಾವಣೆ ಮಾಡಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾರವಾರದಲ್ಲಿ ಭೂಮಿ ಸಿಕ್ಕುತ್ತಾಇಲ್ಲ ಎಂದು ಅವರು ಹೇಳಿರುವುದು, ಅವರ ಹತ್ತಿರ ಕೆಲವು ಅಗ್ರಿಕಲ್ಚರಲ್ ಗ್ರ್ಯಾಜುಯೇಟ್ಸ್ ಬಂದು ನಮಗೆ ಭೂಮಿ ಕೊಡಿ ಎಂದು ಕೇಳಿದರು. ಅಂಥವರಿಗೆ ಭೂಮಿಯನ್ನು ವಿತರಣೆ ಮಾಡಿ, ಅರಣ್ಯಸಂಪತ್ತು ಹಾಳಾಗದ ಹಾಗೆ ಅವರ ಕಡೆಯಿಂದ ಗಿಡಗಳನ್ನು ಬೆಳೆಸಿ, ಗಿಡಗಳ ಮಾಲೀಕರು ಅವರು ಆಗಬೇಕು ಎನ್ನುವುದು ಮುಖ್ಯಮಂತ್ರಿಗಳ ಯೋಜನೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್:—ತಾವು ಯಾವ ಘನ ಉದ್ದೇಶದಿಂದ ಭೂಮಿಯನ್ನು ರಿಲೀಸ್ ಮಾಡಿದ್ದಿರೋ ಅದರ ತತ್ವಕ್ಕನುಗುಣವಾಗಿ ಭೂಮಿಯನ್ನು

ವಿಲೇವಾರಿ ಮಾಡುವುದಕ್ಕೆ ವಿಶೇಷ ಸಮಿತಿಯನ್ನು ಮಾಡಿದ್ದೀರಿ, ಅದರಲ್ಲಿ ಎಂ.ಎಲ್.ಎ. ಎಂ ಪಿ, ಮತ್ತು ತಾಲ್ಲೂಕು ಬೋರ್ಡು ಪ್ರೆಸಿಡೆಂಟ್ ಇಲ್ಲದೆ ಇರತಕ್ಕಂಥಾದ್ದು ಎಲ್ಲಾ ತಾಲ್ಲೂಕಿನಲ್ಲಿ ಒಂದು ತರಹ ಸಮಿತಿ, ಆದರೆ ಅಲ್ಲಿ ಮಾತ್ರ ಅಸಿಸ್ಟೆಂಟ್ ಕಮಿಷನರ್ ಅಧ್ಯಕ್ಷತೆ ಮಾಡಿ, ಕಾಫಿ ಪ್ಲಾಂಟರ್ಸ್‌ಗಳಿಗೆ ಮಾತ್ರ, ಗ್ರಾಂಟ್ ಕಮಿಟಿಗೆ ವಿರೋಧವಾಗಿರತಕ್ಕ ರೀತಿಯಲ್ಲಿ ರಾಮಕೃಷ್ಣ ಹೆಗ್ಗಡೆಯವರ ನೇತೃತ್ವದಲ್ಲಿ ವೀರೇಂದ್ರಪಾಟೀಲರ ಕಾಲದಲ್ಲಿ ಸುಮಾರು 10 ಸಾವಿರ ಎಕರೆ ಭೂಮಿಯನ್ನು ಬಂಡವಾಳಶಾಹಿಗಳಿಗೆ ಕೊಟ್ಟಿರತಕ್ಕದ್ದು ಕಾನೂನಿಗೆ ವಿರೋಧವಾಗಿದೆ. ಅದನ್ನು ವಾಪಸ್ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್:—ಇದಕ್ಕೆ ಉತ್ತರವನ್ನು ನನ್ನಿಂದ ಅಪೇಕ್ಷಿಸುವುದಕ್ಕಿಂತ ಮಾನ್ಯ ಸದಸ್ಯರೇ ಉತ್ತರ ಕೊಟ್ಟಿದ್ದಾರೆ. ಅವರು ಕೊಟ್ಟಂತೆ ಮಾಹಿತಿಯನ್ನು ಪರಿಶೀಲನೆಮಾಡಿ. ಲಾ ಡಿಪಾರ್ಟ್‌ಮೆಂಟಿಗೆ ಕಳುಹಿಸಿ ಯಾವ ಯಾವ ಕೇಸುಗಳನ್ನು ಹಾಕಿ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಪರಿಶೀಲನೆ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ:—ಈ 46 ಸಾವಿರ ಎಕರೆ ಅರಣ್ಯ ಪ್ರದೇಶದಲ್ಲಿ ಎಷ್ಟು ಎಕರೆ ಪ್ರದೇಶವನ್ನು ಅನಾನಸ್ ಮತ್ತು ಹಣ್ಣಿನ ತೋಟಗಳನ್ನು ಬೆಳೆಯುವುದಕ್ಕೆ ಕೊಟ್ಟಿದ್ದೀರಿ? ಇದರಲ್ಲಿ ಜಮೀನು ಇದ್ದವರಿಗೆ ಭೂಮಿಯನ್ನು ಕೊಟ್ಟಿದ್ದಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಎಚ್. ಪಾಟೀಲ್:—46 ಸಾವಿರ ಎಕರೆಯಲ್ಲಿ ಅನಾನಸ್ ಬೆಳೆಯುವುದರ ಸಲುವಾಗಿ ಒಬ್ಬ ದೊಡ್ಡ ಜಮೀನ್ದಾರ ಶ್ರೀಮಂತರಿಗೆ ಭೂಮಿಯನ್ನು ಕೊಟ್ಟಿತ್ತು. ಅದನ್ನು ಮಾನ್ಯ ಧರ್ಮವೀರ ಅವರು ಕಾಲದಲ್ಲಿ ಕೊಟ್ಟಿದ್ದರು. ಅದನ್ನು ನಾನು ರದ್ದು ಮಾಡುವ ಅಧಿಕಾರ ಇರಲಿಲ್ಲ. ಆದ್ದರಿಂದ ಅದನ್ನು ಕ್ಯಾಬಿನೆಟ್‌ಗೆ ಕಳುಹಿಸಿ ಅದನ್ನು ರದ್ದು ಮಾಡಿಸಿದ್ದೇನೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:—ಎಷ್ಟು ಎಕರೆ ಕೊಟ್ಟಿದ್ದೀರಿ?

ಶ್ರೀ ಕೆ. ಎಚ್. ಪಾಟೀಲ್:—ಅದರೊಳಗೆ ಕೊಟ್ಟಿದ್ದು, ಅನಾನಸ್‌ಗೆ ಎಂದು ಕೊಟ್ಟಿದ್ದಲ್ಲ.

ಶ್ರೀ ಎಂ. ಎಸ್. ಕೃಷ್ಣನ್:—ತಾವು ಜಮೀನು ಇಲ್ಲದವರಿಗೆ ಜಮೀನು ಕೊಡಬೇಕು ಎನ್ನುವ ಸರ್ಕಾರದ ಧೋರಣೆಯ ಬಗ್ಗೆ ತಾವು ಇಲ್ಲ ಎಂದು ಹೇಳಿದ್ದೀರಿ, ಭೂಮಿ ಇಲ್ಲದವರಿಗೆ ಭೂಮಿ ಕೊಡವುದಿಲ್ಲ ಎನ್ನುವ ಪ್ರಶ್ನೆ ಬರುತ್ತದೆ. ಫಾರೆಸ್ಟ್ ಲಿಸ್ಟಿನಲ್ಲಿ ಭೂಮಿ ಇಲ್ಲದೆ ಇರುವವರಿಗೆ ಭೂಮಿ ಕೊಡಬೇಕು ಎನ್ನುವುದಕ್ಕೆ ಏನು ತೊಂದರೆ ಇದೆ? ಕಮಿಟಿಯವರಿಗೆ ರೆಸ್ಯೂಮ್ ಮಾಡಿಕೊಳ್ಳುವುದಕ್ಕೆ ಏನು ತೊಂದರೆ ಇದೆ ತಿಳಿಸುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್:—ಇಲ್ಲ ಎನ್ನುವುದರ ಅರ್ಥ ಸ್ಪಷ್ಟವಾಗುತ್ತದೆ. ಫಾರೆಸ್ಟ್ ಡಿಪಾರ್ಟಮೆಂಟಿನವರು ಜಮೀನು ಇಲ್ಲದವರಿಗೆ ಕೊಡಬೇಕಾಗಿತ್ತು. ಆದರೆ ಅರಣ್ಯ ಸಂಪತ್ತು ಬೇಕಾದಷ್ಟು ಇಲ್ಲದೆ ಇರುವುದರಿಂದ ಎಲ್ಲವನ್ನೂ ಕೊಡುವುದಕ್ಕೆ ಸಮಗೆ ಆಗುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ:—ಗುಡ್ಡಗಾಡುಗಳಲ್ಲಿ ವಾಸಮಾಡತಕ್ಕಂಥ ಜನಕ್ಕೆ ಎಲ್ಲಿ ಕುಡಿಯುವುದಕ್ಕೆ ನೀರು ಸಿಗುತ್ತದೆಯೋ, ಎಲ್ಲಿ ನೀರಾವರಿ ಸೌಲಭ್ಯ ಇದೆಯೋ ಅಂಥ ಕಡೆ ಅವರಿಗೆ ಜಮೀನನ್ನು ಅದಲು ಬದಲು ಮಾಡತಕ್ಕ ಕಾರ್ಯ ಮಾಡಿಕೊಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್ :—ಆಯಾ ಪ್ರಸಂಗದಲ್ಲಿ ಸೂಕ್ತವಾದಂಥ ಕೆಲಸಗಳನ್ನು ಸಮಯ ಸಂದರ್ಭಗಳಿಗನುಸಾರವಾಗಿ ಮತ್ತು ಜನತೆಯ ಹಿತವನ್ನು ನಾವು ಗಮನದಲ್ಲಿಟ್ಟು ಕೊಂಡು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಸದಸ್ಯರು ಅಂಥ ಪ್ರಕರಣಗಳು ಇದ್ದರೆ, ಅವುಗಳನ್ನು ಬದಲಾವಣೆ ಮಾಡದೆ ಇದ್ದರೆ ಜೀವನಕ್ಕೆ ಅತಿ ಕಷ್ಟ ವಾಗುತ್ತದೆ ಎಂದು ನಮ್ಮ ಗಮನಕ್ಕೆ ತಂದರೆ ಸರ್ಕಾರ ಅವನ್ನು ಮಾನವೀಯತೆಯ ದೃಷ್ಟಿಯಿಂದ ಪರ್ಯಾಲೋಚನೆ ಮಾಡುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್ :—ತಾವು ಕಾರವಾರದಲ್ಲಿ ಮುಖ್ಯ ಮಂತ್ರಿಗಳ ಹತ್ತಿರ ಅಗ್ರಿಕಲ್ಚರ್ ಗ್ರಾಜುಯೇಟ್ಸ್ ಬಂದಿದ್ದರು ಎಂದು ಹೇಳಿದಿರಿ, ಎಜುಕೇಟೆಡ್ ಅನ್ ಎಂಪ್ಲಾಯ್‌ಮೆಂಟ್ ಸ್ಕೀಂನಲ್ಲಿ ಹೆಚ್ಚು ಹೆಚ್ಚು ಅರಣ್ಯ ಪ್ರದೇಶವನ್ನು ಬಿಡುಗಡೆ ಮಾಡಿ ಅಲ್ಲಿ ಕಾಲೋನಿಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ರಿಹ್ಯಾಬಿಲಿಟೇಷನ್ ಆಫ್ ಅಗ್ರಿಕಲ್ಚರ್ ಲೇಬರ್ರ್ಸ್ ಸ್ಕೀಂ ಅನ್ನು ಜಾರಿಗೆ ತಂದು ಎಲ್ಲಿ ನಿರ್ಗತಿಕರು, ಭೂಹೀನರು, ಮತ್ತು ಕೂಲಿಗಾರರು ಇದ್ದಾರೆ ಅಂಥಕಡೆ ಕಾಲೋನಿಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ :—ಎಲ್ಲಿ ಭೂಮಿ ಸಿಕ್ಕುತ್ತದೆ ಅಲ್ಲಿ ಕಾಲೋನಿ ಮಾಡಬೇಕು. ಸೌತ್ ಕೆನರಾದಲ್ಲಿ ಇಂಥ ಬಡಜನರು ಬಹಳ ಇದ್ದಾರೆ. ಅದನ್ನು ಗಮನಿಸಿ ಅಲ್ಲಿ ಒಂದು ಡೆವಲಪ್‌ಮೆಂಟ್ ಸ್ಕೀಂ ಮಾಡಬೇಕು ಎಂದು ಸರ್ಕಾರದ ಗಮನದಲ್ಲಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ : 20—25 ವರ್ಷಗಳಿಂದ ಕಾಡು ಪ್ರದೇಶವನ್ನು ಭೂಮಿ ಇಲ್ಲದವರು ಮಾಡಿಕೊಂಡು ಬಂದಿದ್ದಾರೆ, ಈಗ ಅವರಿಗೆ ಫಾರೆಸ್ಟ್ ಲ್ಯಾಂಡ್ ಸಿಕ್ಕಲಿಲ್ಲ ಎಂದರೆ ಹೇಗೆ ? ಈಗ ಅದನ್ನು ನೋಟಿಫೈ ಮಾಡಿ ಫಾರೆಸ್ಟಗೆ ಸೇರಿಸಿಕೊಂಡರೆ ಹೇಗೆ ? ಫಾರೆಸ್ಟ್ ಡಿಪಾರ್ಟಮೆಂಟಿನವರು ಅವರನ್ನು ಹೆದರಿಸಿ. ತೊಂದರೆ ಕೊಡುವ ಸಂದರ್ಭದಲ್ಲಿ ತಾವು ನೀತಿಯುತವಾಗಿ, ನ್ಯಾಯಬದ್ಧವಾಗಿ ಅವರಿಗೆ ಏನೇನು ಬೇರೆ ಮಾರ್ಗವಿಲ್ಲ ಎನ್ನುವಾಗ ಆ ಜಮೀನನ್ನು ಅವರಿಗೆ ಕೊಡುವಂತೆ ಆದೇಶ ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ :—ನೀತಿಯುತವಾಗಿ, ನ್ಯಾಯಬದ್ಧವಾಗಿ ಅವರು ಜಮೀನನ್ನು ಪಡೆದಿದ್ದರೆ, ಅಧಿಕಾರಿಗಳು ತೊಂದರೆ ಕೊಟ್ಟರೆ ಅವರು ಮನೆಗೆ ಹೋಗಬೇಕಾಗುತ್ತದೆ. ಉದ್ಧಟ ವರ್ತನೆಗೆ ರೈತರು ಹೋದರೆ, ಅಕ್ರಮವಾಗಿ ಜಮೀನನ್ನು ಮಾಡಿಕೊಂಡಿದ್ದರೆ. ಅವರನ್ನು ಹೊರಗೆ ಹಾಕುವ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್ :—ಎ. ಎಫ್. ಡಿ. 24, 16-4-1969 ರಲ್ಲಿ ಕಾಫಿ ಕಲ್ಟಿವೇಷನ್‌ಗೆ ಒಂದು ಸಾವಿರ ಎಕರೆ ಭೂಮಿಯನ್ನು ಕೊಟ್ಟಿರುತ್ತದೆ. ಇದನ್ನು ಯಾರು ಯಾರಿಗೆ ಕೊಟ್ಟಿದ್ದಾರೆ ? ಇವರಿಗೂ ಮತ್ತು ರಾಮಕೃಷ್ಣ ಹೆಗ್ಗಡೆ ಯವರಿಗೂ ಇರತಕ್ಕ ಸಂಬಂಧ ಏನಾದರೂ ಗೊತ್ತಿದೆಯೆ ?

ಶ್ರೀ ಕೆ. ಎಚ್. ಪಾಟೀಲ್ :—ನನ್ನ ಹತ್ತಿರ ಆ ಮಾಹಿತಿ ಇಲ್ಲ. ಮಾನ್ಯಸದಸ್ಯರು ಮತ್ತೊಂದು ಪ್ರಶ್ನೆಯನ್ನು ಹಾಕಿದರೆ ಅದರಲ್ಲಿ ಯಾರು ಯಾರು ಸಂಬಂಧೀಕರು ಇದ್ದಾರೆ ಎನ್ನುವುದನ್ನು ಹೇಳುತ್ತೇನೆ.

ಅಧ್ಯಕ್ಷರು:—ಶ್ರೀಮತಿ ರಾಧಾಭಟ್ ಅವರ ಪರವಾಗಿ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ ಅವರು ಪ್ರಶ್ನೆ ನಂ. 931 ಕೇಳಬಹುದು.

N. R. W. S. SCHEME IN GOKARNA

Smt. NAGAMMA C. KESHAVA MURTHY (Davangere).—

On behalf of

931. Srimathi Radha Bhatt (Ankola).

Will the Minister for Community Development and Social Welfare be pleased to state :—

(*a*) whether it is not a fact that the National Rural Water Supply Scheme was sanctioned to Gokarna, Kumta Taluk, North Kanara District ;

(*b*) if so, whether the work of supplying water has been started ;

(*c*) if not, when this work will be started ?

Sri M. MALLIKARJUNASWAMY (Minister for Community Development and Social Welfare).—

(a) Yes.

(*b*) Yes

(*c*) Does not arise in view of reply given above.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ :—ಗೋಕರ್ಣದಲ್ಲಿ ಎನ್. ಆರ್. ಡಬ್ಲ್ಯು ಎಸ್. ಸ್ಕೀಂ ಯಾವಾಗ ಮಂಜೂರು ಆಯಿತು, ಕೆಲಸ ಯಾವ ಹಂತಹದಲ್ಲಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಅದು 27-8-1969ರಲ್ಲಿ ಮಂಜೂರು ಆಯಿತು. ಮೂರು ಲಕ್ಷ 87 ಸಾವಿರ ರೂಪಾಯಿ ಅದರ ಟೋಟಲ್ ಎಸ್ಟಿಮೇಟ್. ಈಗಾಗಲೇ ಅದಕ್ಕೆ 2,94 ಸಾವಿರ ರೂಪಾಯಿಗಳು ಖರ್ಚಾಗಿವೆ. ಈ ವರ್ಷದಲ್ಲಿ ಸುಮಾರು ಬಹುಭಾಗ ಕೆಲಸವನ್ನು ಕಂಪ್ಲೀಟ್ ಮಾಡುತ್ತೇವೆ. Lining and jointing work is in progress ; materials are collected for service reservoir construction and that work is also under progress.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ :—ಅಲ್ಲಿ ನೀರಿನ ತೊಂದರೆ ಬಹಳ ಇರುವುದರಿಂದ ಕೆಲಸವನ್ನು ಆದಷ್ಟು ಬೇಗ ಇನ್ನೊಂದು ತಿಂಗಳಲ್ಲಿ ಪೂರೈಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಸಾಧ್ಯವಾದಷ್ಟು ಬೇಗ ಕೆಲಸಗಳನ್ನು ಪೂರೈಸುತ್ತೇವೆ ಎಂದು ಇಷ್ಟು ಮಾತ್ರ ಹೇಳುತ್ತೇನೆ.

SHORT NOTICE QUESTION AND ANSWER

REPORT ON UTILISATION OF WATERS OF CAUVERY RIVER

31. Sri M. S. KRISHNAN (Malleswaram) and

Sri B. V. KAKKILAYA (Buntwal).—

Will the Chief Minister be pleased to state :—

(*a*) whether the Government has received the report of the Fact Finding Commission on the utilisation of water of the Cauvery River ;

(*b*) what are the findings of the Commission ;

(*c*) whether the findings are acceptable to the Government *in toto* or in part ;

(*d*) whether the Government has received any communication in this respect from Kerala and Tamil Nadu Governments and from the Government of India ; if so, what are the contents of the communication ;

(*e*) the action, if any, the Government has taken in this regard ?

Sri D. DEVARAJ URS (Chief Minister).—

(*a*) Yes.

(*b*) It is under examination.

(*c*) Does not arise in view of reply to clause (*b*).

(*d*) No.

(*e*) Does not arise.

ಶ್ರೀ ಎಂ. ಎಸ್. ಕೃಷ್ಣನ್:—ತಾವು (ಸಿ)ಗೆ ಉತ್ತರ ಕೊಡುತ್ತಾ, ಸರ್ಕಾರದ ಗಮನದಲ್ಲಿದೆ ಎಂದು ಹೇಳಿದ್ದೀರಿ. ನಾನು ಕೇಳಿರುವುದು ಫ್ಯಾಕ್ಟ್ ಫೈಂಡಿಂಗ್ ಕಮಿಟಿ ರಿಪೋರ್ಟ್ ಅಥವಾ ವರದಿಯ ರೂಪರೇಖೆಗಳು ಏನು, ಅವರು ಏನು ಹೇಳಿದ್ದಾರೆ ಎನ್ನುವುದನ್ನು ತಿಳಿಸಿ, ಎಂದರೆ, ಸರ್ಕಾರದ ಗಮನದಲ್ಲಿದೆ ಎಂದರೆ ತಿಳಿಸಿದ ಹಾಗೆ ಆಗಲಿಲ್ಲ. ಆದ್ದರಿಂದ ಅದರ ಮುಖ್ಯ ಅಂಶಗಳನ್ನು ತಿಳಿಸುವುದಕ್ಕಾಗುತ್ತದೆಯೋ ?

ಶ್ರೀ ಎಚ್. ಎನ್. ನಂಜೇಗೌಡ :—ಈಗ ಅದನ್ನು ಬಹಿರಂಗ ಪಡಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ :—(ಸಿ)ಗೆ ಉತ್ತರ ಕೊಡುತ್ತಾ ಕೇರಳ ಮತ್ತು ತಮಿಳುನಾಡಿನಿಂದ ಕಮ್ಯುನಿಕೇಷನ್ ಬಂದಿಲ್ಲ ಎಂದು ಹೇಳಿದ್ದೀರಿ, ತಮಿಳುನಾಡು ಸರ್ಕಾರದವರು ಕಾವೇರಿ ನೀರಿನ ಒಪ್ಪಂದದ ಬಗ್ಗೆ ಇನ್ನೂ 50 ವರ್ಷಗಳ ಕಾಲ ಇದನ್ನು ಮುಂದುವರಿಸಬೇಕು ಎಂದು ಹೇಳಿದ್ದಾರೆ. ಅದೇ ರೀತಿ ಕೇಂದ್ರ ಸರ್ಕಾರದ ಆದೇಶ ಬಂದಿದೆ ಎಂದು ಕೇಳಿದ್ದೇನೆ, ಇದರ ಬಗ್ಗೆ ಮೈಸೂರು ಸರ್ಕಾರದ ಅಭಿಪ್ರಾಯವೇನು ?

ಶ್ರೀ ಎಚ್. ಎನ್. ನಂಜೇಗೌಡ :—ಫ್ಯಾಕ್ಟ್ ಫೈಂಡಿಂಗ್ ಕಮಿಟಿಯನ್ನು ನೇಮಿಸತಕ್ಕ ಕಾಲದಲ್ಲಿ ಆ ಬಗ್ಗೆ ಎಲ್ಲ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಪರ್ಯಾಲೋಚನೆ ಮಾಡತಕ್ಕ ಕ್ರಮ ಕೈಗೊಂಡಿದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಬಹುಶಃ ಪತ್ರಿಕೆಯಲ್ಲಿ ವರದಿ ಬಂದಿದ್ದನ್ನು ನೋಡಿಕೊಂಡು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ಗೆಸ್ ವರ್ಕ್, ಕೇಂದ್ರದವರು ಇದರ ಬಗ್ಗೆ ಏನೂ ತಿಳಿಸಿಲ್ಲ, ತಿಳಿಸುವುದಕ್ಕೆ ಸಾಧ್ಯವಿಲ್ಲ ಎನ್ನುವುದು ನಮ್ಮ ಅಭಿಪ್ರಾಯ.

ಶ್ರೀ ಎಂ. ಎಸ್. ಕೃಷ್ಣನ್ :—ಪತ್ರಿಕೆಯಲ್ಲಿ ಬಂದಿರುವುದು ನಿಜ, ಇದನ್ನು ಇನ್ನೂ 50 ವರ್ಷಗಳ ಕಾಲ ಮುಂದುವರಿಸಬೇಕು ಎಂದು ಕೇಂದ್ರದವರು ಹೇಳುತ್ತಾರೆ. ಒಂದು ಪಕ್ಷ ಹೇಳಿದರೂ, ಹೇಳಲಿಲ್ಲವಾದರೂ, ಇದರ ಬಗ್ಗೆ ಮೈಸೂರು ಸರ್ಕಾರದ ಸ್ಪಷ್ಟವಾದ ನಿಲುವು ಏನು ಇದೆಯೆಂದು ಸ್ಪಷ್ಟವಾಗಿ ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಎನ್. ನಂಜೇಗೌಡ :—ಪದೇ ಪದೇ ನಮ್ಮ ಸರ್ಕಾರದ ನಿಲುವನ್ನು ಈ ದಿಶೆಯಲ್ಲಿ ವ್ಯಕ್ತಪಡಿಸಿದ್ದೇವೆ. ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿಯವರೂ ಸಹ ವರದಿಯನ್ನು ಸಲ್ಲಿಸಿದ್ದಾರೆ. ಈ ಸಮಸ್ಯೆಗೆ ರಾಜೀ ಸೂತ್ರದ ಬಗ್ಗೆ ಏನಾದರೂ ಸಾಧ್ಯ ಇದೆಯೇ ಎನ್ನುವ ಈ ದಿಶೆಯಲ್ಲಿ ಈ ಸಭೆ ಈ ತಿಂಗಳು ಸೇರಲಿದೆ. ಆದುದರಿಂದ ಪದೇ ಪದೇ ಇದನ್ನು ತಿಳಿಸಲು ಅವಶ್ಯಕ ಎನ್ನತಕ್ಕಂಥಾದ್ದು ನನಗೆ ಅನಿಸುವುದಿಲ್ಲ.

ಶ್ರೀ ಎಂ. ಎಂ. ಕೃಷ್ಣನ್ :—ತಾವು ಪದೇ ಪದೇ ತಿಳಿಸಬೇಕಾಗಿಲ್ಲ. ಆದರೆ ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿಯವರ ವರದಿಯನ್ನು ತಿಳಿಸುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ, ರಾಜ್ಯಕ್ಕೆ ಧಕ್ಕೆ ಬರುವಂಥ ಪರಿಸ್ಥಿತಿಯನ್ನು ತಿಳಿಸಬೇಕು ಎಂದು ನಾನು ಹೇಳುವುದಿಲ್ಲ. ಯಾವುದಕ್ಕೆ ಧಕ್ಕೆ ಬರುವುದಿಲ್ಲ ಅದನ್ನು ತಿಳಿಸಬೇಕು ಎಂದು ಹೇಳುವುದಕ್ಕಾಗುವುದಿಲ್ಲವೇ ? ನಮ್ಮನ್ನೂ ಸಹ ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಏತಕ್ಕೆ ತಿಳಿಸಬಾರದು?

Sri D. DEVARAJ URS (Chief Minister) :—Though the Committee is called Fact Finding Committee they have merely collected the data supplied by all the concerned States. They have compiled it. They have not come to any conclusion and they have also not made any recommendations. The data collected by them, I don't say, that we should not reveal it. But I have already spoken to the Leader of Opposition that I might call the Leaders of opposition parties and then just talk to them before I go. Here also there is not much to say on this point. Anyway we are meeting again on 29th, according to previous understanding arrived between the Chief Ministers of the concerned States. After looking to the facts and figures available on this issue we have to find out whether it is possible or

not to settle the matter through negotiations or through the good offices of the Government of India. Now it looks from the figures given by all the States our demands are more and water in the basin is less than the demand. This is another factor. Under these circumstances, there is not much to say, at this stage. But if you desire I will meet you before I go and also tell you what it is. Our stand has been clear that we cannot agree to 1924 agreement. We have made this clear from time to time. In the press something appeared that we are going to agree for the extension and all that. But that is not true. This is all I can say at this stage.

MADAM SPEAKER : Question hour is over.

WATER SUPPLY TO SOME VILLAGES OF LINGSUGUR TALUK

43. Sri A. SHARANAPPA (Deodurg).—

Will the Minister for Community Development and Social Welfare be pleased to state :—

(*a*) whether the Government is aware of the acuteness of drinking water problem of the inhabitants of the following villages of Lingsugur Taluk, Raichur District since 2 years ; namely : (1) Hanchinal, (2) Kadadargoddi, (3) Yalgundi, (4) Yargodi, (5) Gonwatta and (6) Guntagola ;

(*b*) whether it is a fact that there are no wells in these villages ;

(*c*) whether it is a fact that these villagers are using Krishna River Water for drinking and other purposes ?

Sri M. MALLIKARJUNA SWAMY (Minister for Community Development and Social Welfare).—

(*a*) Yes, since one year.

(*b*) There are no wells in four villages referred to against Sl. No. 1 to 4. The other two villages noted against Sl. No. 5 and 6 are having one well each.

(*c*) Yes.

FOREST BUFFER AREA

821. Sri K. SUBRAMANYA GOWDA (Belthangady).—

Will the Minister for Agriculture and Forests be pleased to state :—

(a) the number of cases of old encroachment which have been rejected in Sullia, Puttur and Belthangady taluks on account of the objection by the Forest Department under new rules of the Forest which require 400 metres of land to be left as forest buffer area ;

(b) the action taken by the Government in respect of the several representations of individuals and M.L.As. in the matter of reducing the same to 100 metres.

Sri K. H. PATIL (Minister for Agriculture and Forests).—

(a) 804.

(b) Decision has already been taken to reduce the buffer area from 400 metres to 100 metres. Amendment to the relevant rules under scrutiny.

Calling Attention to Matters of Urgent Public Importance

(i) re.: disfiguring of Dr. B. R. Ambedkar's Statue at Chatri Chowk, Bidar District.

Sri M. MALLIKARJUN KHARGE (Gurmitkal) :—I call the attention of the Hon. Chief Minister to the situation that has arisen due to disfiguring of Dr. B. R. Ambedkar's statue at Chatri Chowk, Bidar District.

Sri D. DEVARAJ URS (Chief Minister) : I wish to make the following statement in reply to the Calling Attention.

It is reported that the statue of Dr. Ambedkar at Chatri Cross in Bidar town has been slightly damaged and its spectacles are missing. On 21st March 1973, at 21-10 hours. the Sub-Inspector of Police, Gandhiganj, recorded the statement of one Sri Ramachandra Chidri regarding this incident. A case u/s. 295 and 427 IPC. was registered in Cr. No. 34 of 73 of Gandhiganj Police Station and investigation was taken up.

It would appear that on 19th March, 1973, being a "Dhulandi Holi Day" some 40 to 50 Harijans took out a procession to Chatri and assembled before the statue of Dr. Ambedkar. One of the precessionists climbed over the Chatri to perform the Pooja. While the old garland was being removed, the spectacles of the Statue which were loosely fitted fell down. It is also reported that while breaking cocoanut and performing "Arati", the cocoanut brushed against the nose of the statue and a small piece of the upper layer of the plaster on the nose also fell down. Thus the damage to the statue appears to have been caused unintentionally by one of the processionists while performing Pooja.

However, a section of the people appears to think that the damage is not accidental, but due to mischief. The Police have assured them that suitable action will be taken if any evidence is forthcoming to show that it is a case of mischief.

On 12th April 1973, a procession was taken out to the Dy. Commissioner's Office shouting slogans. A memorandum was presented to the Dy. Commissioner demanding action against the mischief mongers and also requesting to instal a new statue of Dr. Ambedkar. The processionists are said to have collected Rs. 92 as contribution towards the fund of Dr. Ambedkars statue. Government have decided to sanction funds for putting up a new statue of Dr. Ambedkar.

The situation remains peaceful.

(ii) Re : Assault on members of H.M.T. and B.E.L. Karmik Sanghas :—

ಶ್ರೀ ಕೆ. ಶ್ರೀರಾಮುಲು :—(ಗಾಂಧಿನಗರ) ಸೇರಿದ ತಾರೀಖು 12-3-1973 ರಂದು ಎ. ಐ. ಟಿ.ಯು. ಸಿ. ಗೆ ಸೇರಿದ ಸಂಘಗಳ ಸದಸ್ಯರು ಎಚ್. ಎಂ. ಟಿ. ಹಾಗೂ ಬಿ.ಇ.ಎಲ್. ಕಾರ್ಮಿಕ ಸಂಘಗಳ ಸದಸ್ಯರ ಮೇಲೆ ಕೈ ಮಾಡಿದರೆಂದು ಆಪಾದಿಸಲಾದ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

2-00 P.M.

Sri D. DEVARAJ URS (Chief Minister) :—I wish to make the following statement.

On 12-3-1973, the members of the Bharath Electronics Employees Union, Bangalore (AITUC controlled) took out a procession inside the factory, shouting anti-management slogans and condemning the alleged high-handedness of members of the B.E.L. Karmika Sangha against their Union Workers. When the procession was moving, some of the members of Karmika Sangha confronted them and both parties indulged in pelting stones and brick-bats against each other, causing injuries to some of the members. The processionists also attacked the Office of Karmika Sangha situated in the factory premises. On the complaint from the Management, the police intervened and bought the situation under control.

The following persons who were members of B.E.L. Karmik Sangha were injured :—

Sriyuths :—

1. V. K. Rajosekharan, General Secretary (simple injury on his head).

2. Venkatapathy, active member of the Sangh (simple injuries on his legs and arms).

3. N. Ramaiah, active worker of the Sangh (simple injury on his thigh).

4. Ramachandra, active worker in the Sangh (simple injury on his thigh).

5. Kempanna, active worker of the Sangh (injury on his person).

6. Lingappa, active worker of the Sangha (pain in the body).

7. Hubbanna, active worker of the Sangha (pain in the body).

8. Thimme Gowda, active worker of the Sangha (simple injury on his nose).

9. Ankegowda, active worker of the Sangh (simple injury on his leg).

10. Hanumantharayappa, member of Karmika Sangha (simple injury).

11. Annayyappa, Member of the Sangha (simple injury on his person).

12. Ugraiah Kempaiah, member of the Sangha (simple injury on his person).

13. Ganganarasa, Member of the Sangh (simple injury on his person).

As regards details of properties looted and those burnt, it is reported that according to complaint lodged on 12-3-1973 by the Secretary, H.M.T. Karmika Sangh, 3 workers were assaulted at Bus Stop, cash of Rs. 203, a wrist watch and gold rings were removed by miscreants. Subsequently on 13-3-1973, Sri S. G. Venkataiah gave a report that cash of Rs. 2,700 kept inside the cabinet, cash in saving hundi Rs. 800 and imprest amount of Rs. 62 were removed and photos of national leaders were smashed, records and files were burnt, and furniture, carpets, chairs and racks were partly burnt. The damaged records were taken away after mahazar by H.M.T. authorities and the premises have been locked and sealed by them.

No complaint was lodged on 13-3-1973 by the members of the Karmika Sangh.

Immediately on receiving the message, the police proceeded to the spot and brought the situation under control.

Police patrol was intensified in the H.M.T. and B.E.L. area and armed police were also stationed to prevent further breach of peace.

The following persons were arrested :—

Sriyuths :

1. M. S. C. Rao, B.E.E.U.
2. Arengal, B.E.E.U.
3. Lokaiah, B.E.E.U.
4. Shashikumar, B.E.E.U.
5. Rangaswamy, B.E.E.U.
6. Subramaiah, B.E.E.U.
7. Velayudhan, B.E.E.U.

8. Nataraj, B.E.E.U.
9. Ramakrishanappa, ,B.E.E.U.
10. Srinivasa, B.E.E.U.
11. P. H. Ramanna, HMTEA (AITUC controlled)
12. Desh Muthu ,,
13. Neelappa ,,
14. Vergies ,,
15. Doddamuniyappa ,,
16. Syed Ghouse ,,
17. K. T. Raju ,,
18. Victor ,,
19. Shivakumar ,,

No action appears to have been taken by the management against any person.

The police and the Security Staff took prompt and timely action to prevent further incidents of violence.

The following persons are reported to be incharge of the Union Office :—

1. Sri Thimmaiah, incharge of the HMT Karmik Sangh ;

2. Sri M. S. Krishnan, M.L.A. incharge of the H.M.T. Employees Association and President of the B.E.E.U.

3. Sri D. Rajagopal, MLC is the President of B.E.L. Karmik Sangha.

No complaint of burning of the photos of National leaders including the Prime Minister has been received.

Subsequently there was an election and somebody else is there in place of Sri D. Rajagopal.

ಶ್ರೀ ಕೆ. ಶ್ರೀರಾಮುಲು :—ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಮ್ಯಾನೇಜ್‌ಮೆಂಟಿನವರು ಇದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿಲ್ಲವೆಂದು ತಿಳಿಸಿದ್ದಾರೆ. ತಮಗೆ ಗೊತ್ತಿದೆ, ಸ್ಟ್ಯಾಂಡಿಂಗ್ ಆರ್ಡರ್ ಪ್ರಕಾರ ಫ್ಯಾಕ್ಟರಿಯಲ್ಲಿ ಪ್ರಿಮಿಸಸ್ ಒಳಗೆ ಏನಾದರೂ ಗಲಭೆ ನಡೆದರೆ ಯಾರು ತಪ್ಪು ಮಾಡುತ್ತಾರೋ ಅಂಥವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಕಷ್ಟು ಅವಕಾಶ ಇರುವಾಗ ತೆಗೆದುಕೊಳ್ಳದೇ ಇರುವುದರಿಂದ ಇನ್ನೂ ಹೆಚ್ಚಿನ ಗಲಭೆ ಆಗುವುದಕ್ಕೆ ಕಾರಣವಾಗುವುದಿಲ್ಲವೇ ?

Sri D. DEVARAJ URS : That is a matter over which I cannot directly say that they should have done or what they should not have done. I have given the facts as they are. According to my report, they have not taken any action. If they have not taken any action, how it should be dealt with is a matter which should be dealt with separately.

ಶ್ರೀ ಕೆ. ಶ್ರೀರಾಮುಲು :—ಒಟ್ಟು 9 ಪ್ರಶ್ನೆ ಕೇಳಿದ್ದೇನೆ. 9 ಪ್ರಶ್ನೆಗೆ 3ಕ್ಕೆ ಉತ್ತರ ಬಂದಿಲ್ಲ. ಇನ್ನೂ ಎರಡು ಪ್ರಶ್ನೆ ಕೇಳಬೇಕಾಗಿದೆ.

ಅಧ್ಯಕ್ಷರು :—ಒಂದೆರಡು ಕ್ಲಾರಿಫಿಕೇಷನ್ ಕೇಳಬೇಕೇ ಹೊರತು ಹೆಚ್ಚಾಗಿ ಪ್ರಶ್ನೆ ಕೇಳುವುದಕ್ಕೆ ಅವಕಾಶವಿಲ್ಲ.

ಶ್ರೀ ಕೆ. ಶ್ರೀರಾಮುಲು :—ಇವತ್ತಿನ ದಿವಸ ಇಷ್ಟೇ, ಈಗಲೂ ಕೂಡ ಫ್ಯಾಕ್ಟರಿಯೊಳಗೆ ಐ.ಎನ್.ಟಿ.ಯು.ಸಿ.ಗೆ ಸೇರಿದ ಕಾರ್ಮಿಕರು ಕೆಲಸಕ್ಕೆ ಹೋಗದೆ ಗೈರು ಹಾಜರಿಯಾಗಿದ್ದಾರೆ. ಈ ದಿವಸ ಮ್ಯಾನೇಜ್‌ಮೆಂಟಿನವರು ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದುದರಿಂದ ಅಶಾಂತಿ ಆಗಿದೆ. ಈ ಕಾರಣಕ್ಕೋಸ್ಕರ ಇದುವರೆಗೂ ಸುಮಾರು 5 ಕೋಟಿ ರೂಪಾಯಿ ಹೆಚ್.ಎಂ.ಟಿ. ಯಲ್ಲಿ ಲುಕ್ಸಾನು ಆಗಿದೆ. ಆದುದರಿಂದ ಶಿಸ್ತಿನ ಕ್ರಮ ತೆಗೆದುಕೊಳ್ಳದಿದ್ದರೆ ಕಾರ್ಖಾನೆಯ ಕೆಲಸ ಸುಗಮವಾಗಿ ನಡೆಯುವುದಿಲ್ಲ. ಆದುದರಿಂದ ಕೆಲಸಕ್ಕೆ ಹೋಗದೆ ಇರತಕ್ಕಂಥವರಿಗೆ ಭದ್ರತೆ ಏನಾದರೂ ಒದಗಿಸಿ ಕೊಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್ :—ಈಗ ಕಾರ್ಖಾನೆ ಒಳಗೆ ಕೆಲಸಗಾರರು ಯಾವುದೇ ಸಂಘಕ್ಕೆ ಸೇರಿದವರು ಇರಲಿ, ಅವರು ಕೆಲಸ ಮಾಡುವುದಕ್ಕೆ ಹೋದರೆ ಕಾರ್ಖಾನೆಯ ಒಳಗಡೆ ಶಿಸ್ತು ಶಾಂತಿ ಕಾಪಾಡತಕ್ಕಂಥ ಜವಾಬ್ದಾರಿ ಆ ಕಾರ್ಖಾನೆಯ ಮಾಲೀಕರಿಗೆ ಸೇರಿದ್ದು. ಒಂದು ವೇಳೆ ಕೆಲಸಗಾರರು ಅಲ್ಲಿಗೆ ಹೋದಾಗ ಒಳಗಡೆ ಕೆಲಸ ಮಾಡುವುದಕ್ಕೆ ಅಡ್ಡಿ ತರುವಂಥ ಸನ್ನಿವೇಶ ಇದ್ದರೆ, ಅದನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲ ಎನ್ನುವುದಾದರೆ ಅವರು ಕುಳಿತ ಕಡೆಯೇ ಸಂಬಳವನ್ನ ಕೊಡಬೇಕಾಗಿ ಬರಬಹುದು. ಕೆಲಸ ಮಾಡದಿದ್ದರೂ ಸಂಬಳ ಕೊಡಬೇಕಾದೀತು ಎಂದು ಕಾಣುತ್ತದೆ. ಇದನ್ನು ಪರಿಶೀಲನೆ ಮಾಡಬೇಕು. ಇಲ್ಲದೇ ಹೋದರೆ ಕೆಲಸ ಮಾಡುವುದಕ್ಕೆ ಒಂದು ಸನ್ನಿವೇಶವನ್ನು, ವಾತಾವರಣವನ್ನು ಒದಗಿಸಿಕೊಡಬೇಕು. ಒದಗಿಸಿಕೊಡದೇ ಹೋದರೆ ಕಾರ್ಮಿಕರ ಮೇಲೆ ತಪ್ಪು ಬರುವುದಿಲ್ಲ, ಮಾಲೀಕರ ಮೇಲೆ ತಪ್ಪು ಬರುತ್ತದೆ. ಮಾಲೀಕರು ಕಾರ್ಖಾನೆಯಲ್ಲಿ ಕೆಲಸ ಮಾಡದೇ ಕೂತಾಗ್ಯೂ ಸಂಬಳ ಕೊಡಬೇಕಾಗಿ ಬರುತ್ತದೆ. ಆದುದರಿಂದ ಅಲಾಯಿದ ಬೇರೆ ವಿಚಾರ ಮಾಡುತ್ತೇವೆಂದು ಹೇಳಿದ್ದು.

ಶ್ರೀ ಕೆ. ಶ್ರೀರಾಮುಲು :—ಶ್ರೀಮತಿ ಇಂದಿರಾಗಾಂಧಿಯವರ ಫೋಟೋ ಯಾವುದೂ ಸುಟ್ಟು ಹಾಕಿಲ್ಲವೆಂದು ಹೇಳಿದಿರಿ. ನನ್ನ ಹತ್ತಿರ ಇರುವ ಫೋಟೊಗಳನ್ನು ತಮ್ಮ ಮುಖೇನ ಮುಖ್ಯ ಮಂತ್ರಿಗಳಿಗೆ ಕಳುಹಿಕೊಡುತ್ತೇನೆ. ಅದರಲ್ಲಿ ಏನೇನು ಫೋಟೋಗಳನ್ನು ಸುಟ್ಟು ಹಾಕಿದ್ದಾರೆ ಎಂದು ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ :—ಫೋಟೋ ಸುಟ್ಟು ಹಾಕಿದರೋ ಅಥವಾ ಬಿಟ್ಟರೋ ಅಂತ ರಿಪೋರ್ಟ್‌ನಲ್ಲಿ ಕೊಟ್ಟಿಲ್ಲ. ಅವರು ಕಂಪ್ಲೇಂಟ್ ಕೊಟ್ಟಿಲ್ಲ ಎಂದು ಹೇಳಿದೆ. ಸುಟ್ಟು ಹಾಕಿರಬಹುದು. ಪೋಲೀಸ್ ಅಧಿಕಾರಿಗಳಿಗೆ ಅವರಿಂದ ಕಂಪ್ಲೇಂಟ್ ಬಂದಿಲ್ಲವೆಂದು ಹೇಳಿದೆ.

ಶ್ರೀ ಕೆ. ಶ್ರೀರಾಮುಲು :—ವೆಂಕಟರಾಮುರವರು ಕೊಟ್ಟಿರುವ ರಿಪೋರ್ಟ್‌ನಲ್ಲಿದೆ. ನನ್ನ ಹತ್ತಿರ ಸಹಾ ಅದರ ಕಾಪಿ ಇದೆ. ಕಾಂಟ್ರವರ್ಷಲ್ ವಿಚಾರ ಇಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಪೋಲೀಸರು ಏನು ವರದಿ ಒದಗಿಸಿದ್ದಾರೆ, ಅದು ಸ್ವಲ್ಪ ಸತ್ಯಕ್ಕೆ ದೂರವಾದ ಅಂಶ.

Sri D. Devaraj Urs : Then I will get it examined.

ಶ್ರೀ ಎಂ.ಎಸ್. ಕೃಷ್ಣನ್ :—ನನ್ನ ಹೆಸರನ್ನು ಅದರೊಳಗೆ ಸೇರಿಸಲಾಗಿದೆ, ಮಾನ್ಯ ಅಧ್ಯಕ್ಷರು ಸ್ಟೇಟ್‌ಮೆಂಟ್ ನೋಡಿರಬಹುದು. You were pleased to give a ruling that the person who gives notice of a calling attention should be given a chance to put a question. Unless you are pleased to say that ruling is relaxed, or the ruling is suspended on account of certain circumstances, I cannot put the question. If it had not pertained to me, I would not have put the question now. Under the circumstances, I request you to permit me to put the question.

ತಮ್ಮ ಸ್ಟೇಟ್‌ಮೆಂಟಿನಲ್ಲಿ ಎರಡು ಘಟನೆಗಳ ಬಗ್ಗೆ ಮಾತು ಹೇಳಿದ್ದೀರಿ. ಈ ಘಟನೆ ನಡೆಯುವುದಕ್ಕೆ ಮುಂಚೆ ನನ್ನನ್ನು ಮತ್ತು ನಮ್ಮ ಎಚ್.ಎಂ.ಟಿ. ಅಸೋಸಿಯೇಷನ್ ಆಫೀಸ್ ಬೇರರ್ಸ್‌ನು ಕೊಲೆ ಮಾಡಬೇಕೆಂದು, ಎಚ್.ಎಂ.ಟಿ. ಕಾರ್ಮಿಕರ ಸಂಘದವರು ಐ.ಎನ್.ಟಿ. ಯು.ಸಿ.ಗೆ ಸೇರಿದವರು ಪ್ರಯತ್ನಪಟ್ಟಿದ್ದು ಗೊತ್ತಿದೆಯೇ ? ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಅದೇ ರೀತಿಯಲ್ಲಿ ಅದೇ ಎಚ್. ಎಂ. ಟಿ. ಕಾರ್ಮಿಕ ಸಂಘದವರು ಇದೆಲ್ಲ ನಡೆಯುವುದಕ್ಕೆ ಮುಂಚೆ ಪೀಣ್ಯಕ್ಕೆ ಹೋಗುತ್ತಿದ್ದ ಬಸ್ಸಿನ ಮೇಲೆ ಧಾಳಿ ಮಾಡಿ ವಿನಾಕಾರಣ 20–30 ಜನ ಕಾರ್ಮಿಕರನ್ನು ಸಿಕ್ಕಾಪಟ್ಟೆ ಹೊಡೆದಿರುವುದು ಗೊತ್ತಿದೆ. ಅದರ ಬಗ್ಗೆ ಏನಾದರೂ ಕಾರ್ಯಕ್ರಮ ಸರ್ಕಾರದವರು ತೆಗೆದುಕೊಂಡಿದ್ದಾರೆಯೇ ?

ಭಾರತ್ ಎಲೆಕ್ಟ್ರಾನಿಕ್ಸ್ ಬಗ್ಗೆ ಸಹ ಏನು ಹೇಳಿಕೆ ಕೊಟ್ಟಿದ್ದಾರೆ ಅದರ ಪ್ರಕಾರವೇ, ಯೂನಿಯನ್ ಮೆರೆವಣಿಗೆ ತೆಗೆದುಕೊಂಡು ಹೋಗತಕ್ಕ ಕಾಲದಲ್ಲಿ ಬಿ. ಇ. ಎಲ್. ಕಾರ್ಮಿಕ ಸಂಘ ಕನ್‌ಫ್ರಾಂಟೇಷನ್ ಮಾಡಿದೆ ಎಂದು ಹೇಳಿದ್ದಾರೆ. ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆಂದು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಡಿ. ದೇವರಾಜ ಅರಸ್ :—ಮೆರವಣಿಗೆ ಹೋಗುವುದಕ್ಕೆ ಮುಂಚೆ ಪ್ರಚೋದನೆ ಏನೇನಿತ್ತು ಎನ್ನುವುದು ನಮಗೆ ಗೊತ್ತಿಲ್ಲ. ಏನೇ ಇರಬಹುದು, ಕಾರ್ಖಾನೆಯೊಳಕ್ಕೆ ಹೋಗುವಾಗ ನಮ್ಮ ಮೇಲೆ ಕೈ ಮಾಡಿದ್ದಾರೆ. ಹೀಗಾಯಿತು, ಹಾಗಾಯಿತು ಎಂದು ಮಾನ್ಯ ಕೃಷ್ಣನ್ ಅವರು ಬಂದು ನನಗೆ ಹೇಳಿದರು. ಮತ್ತೆ ಮೆರವಣಿಗೆ ತೆಗೆಯುವುದಕ್ಕೆ ಮುಂಚೆ ಅವರ ಸಂಘಕ್ಕೆ ಸೇರಿದವರನ್ನು ಯಾರೋ ಬೇರೆ ಸಂಘದವರು ಹೊಡೆಯುವುದಕ್ಕೆ ಹೋಗಿದ್ದರು, ಕೊಲೆ ಮಾಡುವುದಕ್ಕೆ ಹೋಗಿದ್ದರು ಎಂದು ಹೇಳುತ್ತಿದ್ದರು. ಅದೆಲ್ಲ ಈ ಘಟನೆ ನಡೆಯುವುದಕ್ಕೆ ನೇರವಾಗಿ ಸಂಬಂಧ ಪಟ್ಟಿಲ್ಲದೆ ಹೋದರೂ ಅವರು ಹೇಳುವ ಹಿನ್ನೆಲೆಯಲ್ಲಿ ಹೀಗಾಯಿತು, ಆದಕ್ಕೆ ನಾವು ಪ್ರೊಸೆಷನ್ ತೆಗೆದುಕೊಂಡು ಹೋದೆವು. ಅವರು ಸ್ಲೋಗನ್ಸ್ ಕೂಗಿದ್ದಾರೆ ಮತ್ತು ಅಡ್ಡಿ ಪಡಿಸಿ ಗಲಭೆ ಮಾಡಿದ್ದಾರೆ ಎಂದು ಹೇಳಿದರು.

Sometimes they have taken law into their own hands. Even now I get a report saying that they have taken law into their own hands. That should not happen. I request the workers belonging to Karmik Sangha and the INTUC Sangha not to take law into their own hands because by doing so, they cannot settle matters. If they can settle matters once and for all peacefully, I have no objection. I take this opportunity to appeal to both the Sangha, whenever there are illegal and criminal acts resorted to by any person, they may kindly bring to the notice of the Department which is meant for preserving law and order.

Re. : Terminating the services of Local Candidates.

ಶ್ರೀ ಕೋಣಂದೂರು ಲಿಂಗಪ್ಪ: ನಾನು ಒಂದು ನೋಟೀಸ್ ಕಳುಹಿಸಿದ್ದೇನೆ. ಇದೇ ತಿಂಗಳು 30ನೇ ತಾರೀಖು ಸಾವಿರಾರು ಜನ ಸ್ಥಳೀಯ ಅಭ್ಯರ್ಥಿಗಳು ಮನೆಗೆ ಹೋಗಬೇಕಾದ ಪರಿಸ್ಥಿತಿ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಆ ಅಭ್ಯರ್ಥಿಗಳ ಭವಿಷ್ಯದ ಬಗ್ಗೆ ಏನು ಹೇಳುತ್ತಾರೆ ? ಸ್ಥಳೀಯ ಅಭ್ಯರ್ಥಿಗಳನ್ನು ಹಾಗೆಯೇ ಮುಂದುವರಿಸುತ್ತಾರೆಯೋ ಅಥವಾ ಏನು ಮಾಡುತ್ತಾರೆ ? ಇದರ ಬಗ್ಗೆ ಸರ್ಕಾರ ಯಾವ ನೀತಿಯನ್ನು, ನಿಲುವನ್ನು ತಾಳಿದೆ ಎನ್ನುವುದನ್ನು ನಾನು ತಿಳಿಯಬಯಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ:—ಸ್ಥಳೀಯ ಅಭ್ಯರ್ಥಿಗಳ ವಿಚಾರವನ್ನು ಮಾನ್ಯ ಕೋಣಂದೂರು ಲಿಂಗಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಅವರಲ್ಲಿ ಕೆಲವರನ್ನು ಆಗಲೇ ರಿಟ್ರೆಂಚ್ ಮಾಡಿಬಿಟ್ಟಿದ್ದಾರೆ. ಇನ್ನು ಕೆಲವು ಇಲಾಖೆಗಳಲ್ಲಿ 30ನೇ ತಾರೀಖು ನಿರ್ಧಾರ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಈ ಮಧ್ಯೆ ಸರ್ಕಾರ ಒಂದು ನಿಲುವು ತೆಗೆದುಕೊಳ್ಳುವುದಾಗಿ ಹೇಳಿತ್ತು. ಸರ್ಕಾರ ಸ್ಥಳೀಯ ಅಭ್ಯರ್ಥಿಗಳ ಬಗ್ಗೆ ಏನು ಅಂತಿಮವಾದ ತೀರ್ಮಾನ ತೆಗೆದುಕೊಂಡಿದೆ ? ಇದರ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಸರ್ಕಾರದ ಅಭಿಪ್ರಾಯವೇನು ಎನ್ನುವುದನ್ನು ತಿಳಿಸಬೇಕೆಂದು ಕೇಳುತ್ತೇನೆ.

Sri D. DEVARAJ URS : Madam Speaker, as I have already stated, we had fixed the date as the end of this month ; but I remember, we have postponed this decision of terminating the services of local candidates by another two months within which we are going to take a final decision. This is a matter which is a bit complicated—legally and otherwise. So, it has taken more time than we expected. I hope to give a finality to the whole question within that time. That is the reason why we have extended the time by another two months.

ಶ್ರೀ ಕಾಗೋಡು ತಿಮ್ಮಪ್ಪ:—ಈ ಒಂದು ಪ್ರಿಟಿಕ್ಸ್‌ನಲ್ಲಿ ಅವರನ್ನು ಮುಂದುವರಿಸತಕ್ಕ ಕಾಲದಲ್ಲಿ ಬಹಳ ದಿವಸಗಳಿಂದ ರಿಸರ್ವೇಷನ್ ಯಾರಿಗೆ ಮೀಸಲಿರುತ್ತದೆ ಅಂಥವರಿಗೆ ತೊಂದರೆ ಯಾಗದ ರೀತಿ ಮಾಡಬೇಕು.

ಶ್ರೀ ಡಿ. ದೇವರಾಜ ಅರಸ್ :—ಇದು ಪ್ರಿಟೆಕ್ಸ್ಟ್ ಎಂದು ಆಗುವುದಕ್ಕೆ ಕಾರಣವೇ ಇಲ್ಲ.

Legally they have no right at all. Some people think they can pressurise Government and get the things done.

ಶ್ರೀ ಕಾಗೋಡು ತಿಮ್ಮಪ್ಪ :—ನನ್ನ ಪ್ರಾರ್ಥನೆ ಏನೆಂದರೆ ಮೀಸಲು ಸ್ಥಾನಗಳು ಹಿಂದೆ ಸ್ಥಳೀಯ ಅಭ್ಯರ್ಥಿಗಳನ್ನು ರೆಗ್ಯುಲರೈಸ್ ಮಾಡಿದಾಗ ಯಾರಿಗೆ ರಿಸರ್ವೇಷನ್ ಇರಬೇಕಾಗಿತ್ತೋ ಅವರಿಗೆ ಸಿಕ್ಕಲಿಲ್ಲ. ಅಂಥವರ ಹಕ್ಕುಬಾಧ್ಯತೆಗಳನ್ನು ರಕ್ಷಣೆ ಮಾಡುವುದಕ್ಕೆ ವ್ಯವಸ್ಥಿತವಾದ ತೀರ್ಮಾನ ಸರ್ಕಾರ ತೆಗೆದುಕೊಳ್ಳಬೇಕು.

Sri D. DEVARAJ URS : I merely said that this problem is beset with certain complications. That is why there is some delay.

Notice of adjournment motion re. : reported fast of a Communist Party Member in Chitapur Taluk

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) : ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ನನ್ನ ಮಿತ್ರರೊಬ್ಬರು ಚಿತಾಪುರದಲ್ಲಿ ಉಪವಾಸ ಮಾಡುತ್ತಿದ್ದಾರೆ. ಅಲ್ಲಿ ಆಹಾರ ಧಾನ್ಯಗಳನ್ನು ಕಳುಹಿಸಿಲ್ಲ, ಕೆಲಸಮಾಡಿದವರಿಗೆ ಕೂಲಿ ಕೊಡುತ್ತಿಲ್ಲ, ಮತ್ತು ಕೆಲಸ ಕೊಡುತ್ತಿಲ್ಲ. ಬಹಳ ದಿವಸಗಳಿಂದ ಹೇಳಿದರೂ ಏನೂ ಆಗಿಲ್ಲ. ಇದು ಜೀವದಿಂದ ಜನರನ್ನು ಉಳಿಸುವ ಪ್ರಶ್ನೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಗೊತ್ತಾಗಬೇಕು.

ಅಧ್ಯಕ್ಷರು :—ನಾನು ಮಾನ್ಯ ಸದಸ್ಯರಿಗೆ ಜವಾಬು ಕಳುಹಿಸಿದ್ದೇನೆ. ಆದರೂ ಸಹ ಹೇಳುವುದನ್ನೆಲ್ಲ ಹೇಳಿದರೆ ನಾನು ಜವಾಬು ಬರೆಯುವುದರಲ್ಲಿ ಅರ್ಥವಿಲ್ಲವೆಂದಾಗುತ್ತದೆ. ಈ ದಿನ ಡಿಮ್ಯಾಂಡಿನ ಮೇಲೆ ಚರ್ಚೆ ಇದೆ. ಅದರ ಮೇಲೆ ಮಾತನಾಡುವಾಗ ಈ ಎಲ್ಲ ವಿಚಾರಗಳನ್ನೂ ಹೇಳಬಹುದು.

ಶ್ರೀ ಎಂ. ಎಸ್. ಕೃಷ್ಣನ್ :—ತಮ್ಮ ಉತ್ತರಕ್ಕೆ ಬದಲು ಹೇಳುತ್ತಿಲ್ಲ. ತಾವು ಆ ರೀತಿ ತಿಳಿಯಬಾರದು. ಡಿಮ್ಯಾಂಡ್ ಬಗ್ಗೆ ಮಾತನಾಡುವಾಗ ಎಲ್ಲರೂ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ಎಲ್ಲ ವಿಷಯಗಳನ್ನೂ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು : ಇದೇ ವಿಚಾರದಲ್ಲಿ ಎಲ್ಲರೂ ಹೋಗಿ ನೋಡಿಕೊಂಡು ಬಂದು ಸಭೆಯಲ್ಲಿ ಒಂದು ಹೇಳಿಕೆಯನ್ನೂ ಕೊಟ್ಟಿದ್ದಾರೆ. ಹೆಚ್ಚು ವಿಷಯಗಳಿದ್ದರೆ ಡಿಮಾಂಡ್ ಮೇಲೆ ಮಾತನಾಡುವಾಗ ಹೇಳಬಹುದು.

ಶ್ರೀ ಎಂ. ಎಸ್. ಕೃಷ್ಣನ್ : ಅಭಾವ ಪರಿಸ್ಥಿತಿ, ನೀರಾವರಿ ಮತ್ತು ಆಹಾರದ ನೀತಿ ಎಲ್ಲ ವಿಚಾರಗಳೂ ಇವೆ. ಎಲ್ಲ ವಿಚಾರಗಳನ್ನೂ ಡಿಮಾಂಡ್ ಮೇಲೆ ಮಾತನಾಡುವಾಗ ಹೇಳುವುದಕ್ಕಾಗುವುದಿಲ್ಲ. ಇದು ಬಹಳ ಮುಖ್ಯವಾದ ವಿಚಾರ. ಜನರು ಸತ್ತ ಮೇಲೆ ಆಹಾರ ಧಾನ್ಯಗಳನ್ನು ಕಳಹಿಸುತ್ತಾರೆಂದು ನಾನು ತಿಳಿದುಕೊಳ್ಳಬಹುದೇ ?

ಶ್ರೀ ವಿ. ಎನ್. ಪಾಟೀಲ್ : ಇಲ್ಲಿಗೆ ಫುಡ್ ಗ್ರೇನ್ಸ್ ಕಳುಹಿಸುತ್ತೇವೆ ಎಂದು ಹೇಳಿದರೆ ಸಾಕಾಗಿತ್ತು. ಇಲ್ಲಿ ಏಳು ದಿವಸಗಳಿಂದ ಮುಷ್ಕರ ಹೂಡುತ್ತಿರುವುದರ ಬಗ್ಗೆ ನಮಗೆ ಟೆಲಿಗ್ರಾಂಗಳನ್ನು ಕಳುಹಿಸಿದ್ದಾರೆ. ಇಲ್ಲಿ ಕೆಲಸಗಳನ್ನು ಜನಕ್ಕೆ ಒದಗಿಸಿಲ್ಲ ಮತ್ತು ಕೂಲಿ ಮಾಡಿದವರಿಗೆ ಆಹಾರ ಕೊಡುತ್ತಿಲ್ಲ ಮತ್ತು ಇಲ್ಲಿಗೆ ಇನ್ನೂ ಸ್ಟಾಕನ್ನು ಕೂಡ ಕಳುಹಿಸಿಲ್ಲ.

ಶ್ರೀ ಡಿ. ದೇವರಾಜ ಅರಸ್ :—ಅದನ್ನು ನೋಡಿ ಕಳುಹಿಸಿ ಕೊಡಲಾಗುತ್ತೆ. ಇದನ್ನು ಮಾನ್ಯ ಮಂತ್ರಿಗಳು ಕೂಡ ನೋಟು ಮಾಡಿದ್ದಾರೆ.

Sri V. N. PATIL.—I thank the Chief Minister very much for having reminded us that the foodgrains are being rushed. Kindly wring up to some officer to find out whether the foodgrains have arrived there.

Sri D. DEVARAJ URS.—It is being continuously attended to not because you have brought it to the notice of the Government now, but it is being done and is already done as there is scarcity there.

Sri M. S. KRISHNA.—We do not want unnecessary remarks by the Chief Minister. The facts are that there is scarcity of foodgrains, payments are not made regularly and the people are not getting employment. Several representations were made to the Deputy Commissioner and the Assistant Commissioner in this regard. No action has been taken. That is why hunger strike is taking place. It is really a genuine case.

Sri D. DEVARAJ URS.—There is no point in saying this when the Hon. Chair has assured him that the reply will be given by the Food Minister at the end of the debate. The place that has been mentioned by Hon. Member will be taken note of and action is being taken.

ಶ್ರೀಮತಿ ವಿಜಯ ದೇಸಾಯಿ :—ಚಿತಾಪುರ ಶ್ರೀ ಶರಣಪ್ಪ ಎನ್ನುವವರು ಈಗ್ಗೆ 8–10 ದಿನಗಳ ಕೆಳಗೆ ಬೆಂಗಳೂರಿಗೆ ಬಂದಿದ್ದರು. ನಾನು ಕೂಡ ಆ ಭಾಗದಿಂದ ಬಂದಿರುವ ಶಾಸಕಿ ಆಗಿರುವುದರಿಂದ ಅಲ್ಲಿನ ಬರಗಾಲದ ಸ್ಥಿತಿ ಬಗ್ಗೆ ಕೇಳಿದೆ. ಅವರು ಹೇಳಿದರು ಇಲ್ಲಿ ಸುಮಾರು ಇಪ್ಪತ್ತು ಸಾವಿರ ಜನಕ್ಕೆ ಕೆಲಸ ಒದಗಿಸಿದ್ದಾರೆ ಮತ್ತು ಅವರು ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಇಲ್ಲಿ ಕೆಲಸಗಳನ್ನೆ ಕೊಡುತ್ತಿಲ್ಲ ಎಂದು ಹೇಳುವುದು ನನಗೆ ಅರ್ಥವಾಗುತ್ತಿಲ್ಲ. ಚಿತಾಪುರಕ್ಕೆ ಫುಡ್‌ಗ್ರೇನ್ಸ್ ಕಳುಹಿಸುವುದರ ಬಗ್ಗೆ ಏರ್ಪಾಡು ಮಾಡುತ್ತಿದ್ದಾರೆ ಇನ್ನು ಎರಡು ಮೂರು ದಿವಸಗಳಲ್ಲಿ ಬರಬಹುದು ಇದರ ಬಗ್ಗೆ ತಕ್ಕ ವ್ಯವಸ್ಥೆ ಮಾಡುತ್ತೇವೆ ಎಂದು ಇಲ್ಲಿನ ತಹಶೀಲುದಾರರಿಂದ ನನಗೆ ಟೆಲಿಫೋನು ಕೂಡ ಇಂದು ಬಂದಿದೆ.

ಶ್ರೀ ಡಿ ದೇವರಾಜ ಅರಸ್ :—ಆ ಭಾಗದಿಂದ ಬಂದಿರುವ ಸದಸ್ಯರು ಹೇಳಿದ್ದಾರೆ. ಹಾಗೆ ಅವರಿಗೆ ಹೇಳಲು ಅಧಿಕಾರವಿಲ್ಲ ಎಂದರೆ ಹೇಗೆ ? ಅಲ್ಲಿನ ಸ್ಥಿತಿ ಬಗ್ಗೆ ಅವರೂ ಹೇಳಬಹುದು.

ಅಧ್ಯಕ್ಷರು :—ಮಾನ್ಯ ಕೃಷ್ಣನ್‌ರವರು ಇಲ್ಲಿ ಹೇಳುವುದನ್ನೆಲ್ಲಾ ಈಗ ಹೇಳಿದರೆ ಹೇಗೆ ? ತಾವು ಕಳುಹಿಸಿದ ಸೂಚನೆಗೆ ನಾನು ಉತ್ತರ ಕಳುಹಿಸಿದ್ದೇನೆ. ಇಂದು ಅದೇ ಡಿಮಾಂಡು ಬಗ್ಗೆ ಚರ್ಚೆಯಾಗುತ್ತಿದೆ. ಆಗ ಇದರ ಬಗ್ಗೆ ಪ್ರಸ್ತಾಪಮಾಡಬಹುದು ಎಂದು ಹೇಳಿರುವುದರಿಂದ ಇದರ ಬಗ್ಗೆ ನಾವೇನೂ ಮಾಡಲಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ :—ತಾವು ತಮ್ಮ ಉತ್ತರದಲ್ಲಿ ಹೇಳಿರುವುದು ನನಗೆ ಗೊತ್ತಾಗಿದೆ.

ಶ್ರೀಮಂತಿ ವಿಜಯಂ ದೇಸಾಯಿ :—ನಿಮ್ಮ ಪಕ್ಷದವರೇ ಆಗಿರುವವರು ನನ್ನ ಕಡಗೆ ಸ್ವತಃ ಬಂದು ಹೇಳಿದ್ದಾರೆ. ತಾವು ಬೇಕಾದರೆ ಅವರಲ್ಲಿ ವಿಚಾರ ಮಾಡಿ ಆಗ ನಿಮಗೇ ಗೊತ್ತಾಗುತ್ತದೆ. ಅವರೇ ಹೇಳಿರುವಂತೆ ಅಲ್ಲಿ ಈಗ ಸುಮಾರು ಇಪ್ಪತ್ತು ಸಾವಿರ ಜನರು ಕೆಲಸಗಳನ್ನು ಮಾಡುತ್ತಿದ್ದಾರೆ ಮತ್ತು ಅಲ್ಲಿಗೆ ಈಗ ಫುಡ್‌ಗ್ರೆನ್ಸ್‌ಗಳೂ ಹೋಗುವುದರಲ್ಲಿದೆ.

Sri M. S. KRISHNAN.—I want a categorical reply from the Minister. The Hon. Member may not be knowing the full facts.

Smt. E. E. VAZ.—If any Hon. Member brings to the Notice of the Food Department, that there is shortage of foodgrains and there is no stock, the Department will take immediate action.

Sri D. DEVARAJ URS.—She has every right to say what she has come to know of things. She is coming from that particular area. She has got better right to say than Sri Krishnan.

Sri M. S. KRISHNAN.—I accept that. I am not questioning that. I except you to clarify the position better than that lady Member. The Government should come out with better answer for that. She said it is only yesterday the foodgrains have been sent. We are also M.L.As. We have also some responsibilities both for our Constituencies and also for the entire State in general. Please do not caste aspersions against me.

Sri D. DEVARAJ URS.—You are insinuating an Hon. Member by saying that she may be not knowing and all that. There is a method to approach. Every time cannot get up and say whatever you want.

ಶ್ರೀ ಕೆ. ಎಂ. ನಾಗಣ್ಣ :—ನಾನು ರೂಲ್ 146 ರ ಪ್ರಕಾರ ಒಂದು ಸೂಚನೆಯನ್ನು ತಮ್ಮ ಕಡೆಗೆ ಕಳುಹಿಸಿದ್ದೆ. ಇದನ್ನು ಜಾಗ್ರತೆ ಎಂದರೆ ನಾಳೆಯೇ ಬರಲು ಏರ್ಪಾಡು ಮಾಡಬೇಕೆಂದು ವಿನಂತಿ.

ಅಧ್ಯಕ್ಷರು :—ಅದು ನನ್ನ ಕಡೆಗೆ ಬಂದಿದೆ. ಅದನ್ನು ನೋಡುತ್ತೇನೆ. ತಾವು ಹೆಚ್ಚು ವೇಳೆ ಕಳೆಯಬೇಡಿ, ಇಂದು ಇರುವ ಡಿಮ್ಯಾಂಡುಗಳ ಚರ್ಚೆ ಸಾಯಂಕಾಲ ಆರು ಗಂಟೆಗೇ ಮುಗಿಯಬೇಕು, ಹಾಗೆ ಆಗದೆ ಇದ್ದರೆ ಡಿಮಾಂಡುಗಳನ್ನು ನಾನು ವೋಟಿಗೆ ಹಾಕಬೇಕಾಗುತ್ತದೆ. ಇದು ಬಹಳ ಮುಖ್ಯವಾದ ಡಿಮಾಂಡು ಎಲ್ಲರೂ ಮಾತಾಡಬೇಕೆಂದಿದ್ದಾರೆ.

Discussing Demands for grants in the L. C.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :—ಮಾನ್ಯ ಅಧ್ಯಕ್ಷರೇ ಇಂದು ಇಲ್ಲಿ ಬಂದಿರುವ ಆಹಾರದ ಇಲಾಖೆ ಬಗ್ಗೆ ಎಲ್ಲ ವಿಷಯಗಳನ್ನೂ ನಿನ್ನೆ ವಿಧಾನಪರಿಷತ್ತಿನಲ್ಲಿ ಮುಖ್ಯ ಮಂತ್ರಿಗಳು

ವಿವರವಾಗಿ ಹೇಳಿದ್ದಾರೆ, ಹಾಗೆ ಹೇಳಿರುವಾಗ ಇಲ್ಲಿ ಮತ್ತೆ ನಾವು ಕೇಳುವುದೇನಿದೆ. ಯಾವ ಡಿಮಾಂಡುಗಳು ಇಲ್ಲಿಗೆ ಬರುತ್ತವೋ ಇದು ಇಲ್ಲಿ ಚರ್ಚೆಯಾಗುವುದಕ್ಕೆ ಮುಂಚೆ ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗುವುದಾದರೆ ಅದರಿಂದೇನೂ ಹೆಚ್ಚು ಪ್ರಯೋಜನವಾಗುವುದಿಲ್ಲ. ಇದರಲ್ಲಿ ಪೂರ್ತಿಯಾಗಿ ಪಾಲಿಸಿ ಸ್ಟೇಟುಮೆಂಟು ಎಂದು ಅಲ್ಲಿ ಹೇಳಿ ಎಲ್ಲಾ ವಿಚಾರಗಳಿಗೂ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಮುಗಿದ ಡಿಮಾಂಡುಗಳನ್ನು ಮತ್ತೆ ಇಲ್ಲಿ ತೆಗೆದುಕೊಂಡು ಚರ್ಚೆ ಮಾಡುವುದು ಎಂದರೆ ಅದು ಸರಿಯಲ್ಲ. ಈಗಾಗಲೇ ಅಲ್ಲಿ ಕೋಆಪರೇಷನ್ ಡಿಮಾಂಡು ಬಂದು ಮುಗಿದಿದೆ. ಇಂಡಸ್ಟ್ರಿ ಡಿಮಾಂಡು ಕೂಡ ಇಟ್ಟು ಇದರ ಚರ್ಚೆ ಹಾಗೂ ಉತ್ತರ ಮುಗಿದಿದೆ. ಇಲ್ಲಿ ಮತ್ತೆ ಇದರ ಬಗ್ಗೆ ಚರ್ಚೆ ಮಾಡುವುದು ಎಂದರೆ ನಮ್ಮ ಸಭೆಯ ಸದಸ್ಯರ ರೈಟನ್ನು ಎನ್‌ಕ್ರೋಚ್ ಮಾಡಿದಂತಾಗುವುದಿಲ್ಲವೇ ?

ಅಧ್ಯಕ್ಷರು :—ಇದೇನಾಗಿದೆ ಎಂದರೆ ನಾನು ಕೂಡ ಹಾಡಿದ್ದೇ ಹಾಡು ಕಿಸಬಾಯಿ ದಾಸ ಎನ್ನುವಂತಾಗಿದೆ. ನಾನು ಹೇಳುತ್ತಲೇ ಇದ್ದೇನೆ. ಅದನ್ನೇ ಮತ್ತೆ ಮತ್ತೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೀರಿ. ಪರಡ್ ಪಾಲಿಸಿ ಬಗ್ಗೆ ಸರಕಾರ ಅಲ್ಲಿ ಜವಾಬು ಕೊಟ್ಟಿದೆ ಎಂದರೆ ಈ ಮನೆಯಲ್ಲಿ ಅದು ಚರ್ಚೆಯಾಗಬಾರದು ಎಂತಲೇ ತಾವು ಹೇಳುವುದು. ಇದರಲ್ಲಿ ಆ ಮನೆ ಇಲ್ಲವೇ ಈ ಮನೆ ಎನ್ನುವುದೇನೂ ಕಾಣುತ್ತಿಲ್ಲ. ಇದರಲ್ಲಿ ಯಾವುದೇ ಒಂದು ಹಕ್ಕು ಇದೆ ಎಂದು ಹೇಳಲು ಸಾಧ್ಯವಾಗುವುದಿಲ್ಲ. ಬೇಡಿಕೆಗಳನ್ನು ಅಲ್ಲಿ ಇಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :—ಇಲ್ಲಿ ಚರ್ಚೆಯಾಗಿರುವ ಬೇಡಿಕೆಗಳನ್ನು ಅಲ್ಲಿ ಇಟ್ಟು ಚರ್ಚೆ ಮಾಡುವುದರ ಬಗ್ಗೆ ನಾವು ಹೇಳುತ್ತಿಲ್ಲ. ಇಲ್ಲಿ ಇಂದು ಇರುವ ಆಹಾರ ಪದಾರ್ಥಗಳ ಬಗ್ಗೆ ಇದರ ಹಂಚಿಕೆ ಹಾಗೂ ವಿತರಣೆ ಬಗ್ಗೆ ಮತ್ತು ಆ ಇಲಾಖೆಗೆ ಸಂಬಧಪಟ್ಟ ಎಲ್ಲ ವಿವರಗಳನ್ನೂ ಅಲ್ಲಿ ರಿಪ್ಲೈ ಮೂಲಕ ಸರಕಾರ ಕೊಟ್ಟಿರುವುದರಿಂದ ಇಲ್ಲಿ ಚರ್ಚೆಗೆ ಏನು ಮಹತ್ವ ಬರುತ್ತದೆ ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಈಗ ಇದರಲ್ಲಿ ಉಳಿದಿರುವುದೇನಿದೆ? ಸರಕಾರ ನಮ್ಮ ಸದಸ್ಯರಿಗೆ ಇರುವ ಹಕ್ಕುಬಾಧ್ಯತೆಗಳನ್ನು ಕಸಿದುಕೊಂಡಂತೆ ಆಗುವುದಿಲ್ಲವೇ? ತಾವು ನಮಗೆ ರಕ್ಷಣೆ ಕೊಡಬೇಡವೆ? ಇದೇಕೆ ಹೀಗೆ ಮಾಡುತ್ತಾರೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :—ರಾಜ್ಯಾಂಗದ 196 ಮತ್ತು 197 ನೇ ಕಾಲಂನಲ್ಲಿ ಯಾವ ರೀತಿ ಆದ್ಯತೆ ಕೊಡಬೇಕೆನ್ನುವುದೂ ಇದೆ. ಇದರ ಪ್ರಕಾರ ಆದಷ್ಟೂ ಸರಕಾರ ನಮ್ಮ ಮನೆಗೆ ಆದ್ಯತೆ ಕೊಡಬೇಕು ಎಂದು ನಾವು ಹೇಳುವುದು.

2-30 P.M.

ಅಧ್ಯಕ್ಷರು :—ಯಾವ ತರಹದ ಅವಮರ್ಯಾದೆಯಾಗಿದೆ ಎಂದು ನಾನು ಭಾವಿಸುವುದಿಲ್ಲ.

ಶ್ರೀ ಎಂ. ಎನ್. ಕೃಷ್ಣನ್ .—ಹಿಂದೆ ಇದರ ಬಗ್ಗೆ ನಾವು ಪ್ರಸ್ತಾಪ ಮಾಡಿದಾಗ ತಾವು ಯೋಚನೆ ಮಾಡುವುದಾಗಿ ಹೇಳಿದ್ದಿರಿ. ಆದರೂ ಕೂಡ ಅಲ್ಲಿಯೇ ಮೊದಲು ಚರ್ಚೆಯಾಗುತ್ತಿದೆ. ಅದು ಸರಿಯಲ್ಲ. ಇಲ್ಲಿಯೇ ಮೊದಲು ಚರ್ಚೆಗೆ ಬರಬೇಕೆಂಬುದು ನಮ್ಮ ಆಸೆಯಾಗಿದೆ. ಈ ಸಭೆಗೆ ಎಷ್ಟು ಆದ್ಯತೆ ಸಿಗಬೇಕೋ ಅಷ್ಟು ಸಿಗಲೇಬೇಕು. ಆದಕಾರಣ ಬಿಸನೆಸ ಅಡ್ವೈಸರಿ ಕಮಿಟಿಯಲ್ಲಿ ತಾವು ಮೇಲ್ಮನೆಯ ಸಭಾಪತಿಯವರ ಸಂಪರ್ಕ ಇಟ್ಟುಕೊಂಡು ಇಲ್ಲಿಯೇ ಮೊದಲು ಚರ್ಚೆಗೆ ಬರುವಂತೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

Requests to withdraw the Suspension orders of Sri S. Bangarappa

ಶ್ರೀ ವಾಟಾಳ್ ನಾಗರಾಜ್ :—ಚಾಮರಾಜಪೇಟೆ ಮಾನ್ಯ ಬಂಗಾರಪ್ಪನವರನ್ನು 3 ದಿವಸಗಳ ಕಾಲ ಸಸ್ಪೆಂಡ್ ಮಾಡಿರುವುದನ್ನು ರೀ-ಕನ್ಸಿಡರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :—ಅದಕ್ಕೆ ವಿಧಿನಿಯಮಗಳಿವೆ.

ಶ್ರೀ ವಾಟಾಳ್ ನಾಗರಾಜ್ :—ಅದರ ಪ್ರಕಾರವೇ ತಾವು ರೀಕನ್ಸಿಡರ್ ಮಾಡುವುದು ಒಳ್ಳೆಯದು. ಅವರೂ ಸಹ ಒಂದು ಗುಂಪಿನಿಂದ ಆರಿಸಿ ಬಂದಿರುವವರು. ಆದಕಾರಣ ಡಿಮ್ಯಾಂಡ್‌ಗಳ ಮೇಲೆ ಅವರೂ ಸಹ ಅವರ ಅಭಿಪ್ರಾಯ ತಿಳಿಸಬೇಕಾಗಿದೆ. ಆದ್ದರಿಂದ ಇದನ್ನು ತಾವು ರೀಕನ್ಸಿಡರ್ ಮಾಡಬೇಕು.

ಅಧ್ಯಕ್ಷರು :—ಅದಕ್ಕೆ ವಿಧಿನಿಯಮ ಇದೆ ಎಂದು ಹೇಳಿದ್ದೇನೆ.

ಶ್ರೀ ವಿ. ಎಸ್. ಪಾಟೀಲ್ :—ಕೆಲವು ಸಲ ಸಭೆಯಲ್ಲಿ ಬಿಸಿ ಆಗುತ್ತದೆ. ಆಗ ತಾವು ತಣ್ಣಗೆ ಮಾಡಬೇಕು. ಇಂತಹ ಪರಿಸ್ಥಿತಿ ಹೊಸದಾಗಿ ಏನೂ ಬಂದಿಲ್ಲ. ಸಭೆಯಲ್ಲಿ ಬಿಸಿ ಆದಾಗ ತಾವು ನಮಗೆ ಬುದ್ಧಿವಾದ ಹೇಳಬೇಕು. ನಾವು ಅದನ್ನು ಕೇಳುತ್ತೇವೆ. ಈಗ ತಾವೇ ವಿಧಿನಿಯಮ ಇದೆ ಎಂದು ಹೇಳಿದರೆ ಹೇಗೆ ? ನೀವೇ ಇದನ್ನು ರೀ-ಕನ್ಸಿಡರ್ ಮಾಡಬೇಕು.

ಅಧ್ಯಕ್ಷರು :—ತಾವು ಕುಳಿತುಕೊಳ್ಳಿ. ತಮ್ಮ ಹತ್ತಿರ ವಿಧಿನಿಯಮದ ಪುಸ್ತಕ ಇದೆ, ಅದನ್ನು ನೋಡಿ.

Threat to use time bombs on Vidhana Soudha

ಶ್ರೀ ವಾಟಾಳ್ ನಾಗರಾಜ್ :—ತಮಗೆ ನೆನ್ನೆ ದಿವಸ ಒಂದು ಪತ್ರ ಕೊಟ್ಟೆ. ಅದು ಪೋಸ್ಟ್ ಅಂಡ್ ಟೆಲಿಗ್ರಾಫಿಕ್ ಆಫೀಸಿನಿಂದ ನಮಗೆ ಬಂದಿದೆ. ಅದರಲ್ಲಿ ವಿಧಾನಸೌಧದ ಮೇಲೆ ಟೈಂ ಬಾಂಬ್ ಹಾಕುತ್ತೇವೆ. ಮಂತ್ರಿಗಳನ್ನು ಮತ್ತು ರಾಜಕೀಯ ನಾಯಕರುಗಳನ್ನು ಹತ್ಯೆ ಮಾಡುತ್ತೇವೆಂದು ಹೇಳಿದ್ದಾರೆ. ಈ ಸುಂದರವಾದ ವಿಧಾನಸೌಧದ ಮೇಲೆ ಬಾಂಬ್ ಹಾಕಿದರೆ . . . .

ಅಧ್ಯಕ್ಷರು :—ತಾವು ಬಹಳ ಸುಂದರವಾಗಿ ಮಾತನಾಡುತ್ತೀರಿ. ಅದನ್ನು ಸರ್ಕಾರಕ್ಕೆ ಕಳಿಸಿಕೊಟ್ಟಿದ್ದೇನೆ. ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :—ಅದನ್ನು ವಿಜಿಲೆನ್ಸ್‌ನವರಿಂದ ತನಿಖೆ ಮಾಡಿಸಬೇಕು.

ಅಧ್ಯಕ್ಷರು :—ಪೋಸ್ಟ್ ಅಂಡ್ ಟೆಲಿಗ್ರಾಫ್ ಡಿಪಾರ್ಟ್‌ಮೆಂಟ್ ಸೆಂಟ್ರಲ್ ಗೌರ್ನಮೆಂಟಿಗೆ ಸೇರಿದೆ. ಅದರ ಬಗ್ಗೆ ನಾವು ಮತ್ತು ನೀವು ಏನೂ ಮಾಡುವುದಕ್ಕಾಗುವುದಿಲ್ಲ. ಅದನ್ನು ಸರ್ಕಾರಕ್ಕೆ ಕಳಿಸಿಕೊಟ್ಟಿದ್ದೇನೆ. ಅವರು ಅದನ್ನು ನೋಡುತ್ತಿದ್ದಾರೆ.

O

Sri C. M. ARUMUGHAM (Stood up to speak).

MADAM SPEAKER.—There is heardly four hour's time. Please resume your seat. Give Mr. Deve Gowda a chance to conclude his speech. You are going to speak. I am sure about it

Sri C. M. ARUMUGHAM.—Pardon me for raising this issue A Member of the House has been suspended.

MADAM SPEAKER.—You see there are Rules and Procedures regarding that. I do not think this should be enlightened to you at all. If he wants to come back, you know what he should do.

Sri C. M. ARUMUGHAM.—That he is prepared to do.

MADAM SPEAKER.—We will consider then.

Sri C. M. ARUMUGHAM.—If the Hon. Leader of the House is in a mood, he should consider this.

MADAM SPEAKER.—If this is going to continue, I will just sit down.

Sri C. M. ARUMUGHAM.—My submission would be that if for everything there is ultimatum, it will be very difficult for us to represent anything. We are asking our Hon. Chief Minister—the Leader of the House—whether he can consider.

ಶ್ರೀ ಡಿ. ದೇವರಾಜ ಅರಸ್ :—ಸೂಚನೆ ಬರಲಿ, ನೋಡೋಣ.

Sri H. D. DEVE GOWDA.—If Mr. Bangarappa gives an unconditional apology, we will have to reconsider.

Sri C. M. ARUMUGHAM.—He is prepared to give an unconditional apology. I only request the Leader of the House that this may kindly be considered.

Sri D. DEVARAJ URS.—How can I say anything ? ಇವತ್ತು ಕಳೆಯಲಿ, ನೋಡೋಣ.

ಶ್ರೀ ವಾಟಾಳ್ ನಾಗರಾಜ್ :—ಲೆಟರ್‌ಗಿಂತ ಹೆಚ್ಚಾಗಿ ಅಧ್ಯಕ್ಷರೇ ರೀಕನ್ಸಿಡರ್ ಮಾಡಲಿ ಎಂದು ನಾನು ಹೇಳುತ್ತಿರುವುದು.

ಶ್ರೀ ಡಿ. ದೇವರಾಜ ಅರಸ್ :—ನೆನ್ನೆ ದಿವಸ ನಿಮ್ಮ ನಾಯಕರು . . . . . .

Sri C. M. ARUMUGHAM.—You could have suspended Mr. Nanjegowda.

Sri D. DEVARAJ URS.—He will say : You should have been suspended.

Sri C. M. ARUMUGHAM.—That is the type of Ministers you are having. That is the type of persons who have been picked up* and included in the Cabinet.

Sri D. DEVARAJ URS.—That is not fair to say the least. I would either ask the Hon. Minister to withdraw the comments or I would request the Hon. Speaker to expunge the remark.

MADAM SPEAKER.—That has been expunged. That is not the way to talk. That is not your monopoly also, Mr. Arumugham !

Sri C. M. ARUMUGHAM.—There is no question of monopoly. The question of monopoly is not mine. I can tell you it is not my monopoly.

MADAM SPEAKER.—It is nobody's monopoly.

Sri C. M. ARUMUGHAM.—That must be insisted on one and all. It is nobody's monopoly.

ಶ್ರೀ ವಾಟಾಳ್ ನಾಗರಾಜ್ :—ಇದು ಮಾನಾಪಲಿ ಪ್ರಶ್ನೆಯಲ್ಲ. ಅವರು ಸರಿಯಾಗಿ ಮಾತನಾಡಿದರೆ ನಾವೂ ಸಹ ಸರಿಯಾಗಿ ಮಾತನಾಡುತ್ತೇವೆ.

ಅಧ್ಯಕ್ಷರು :—ನಾನು ನೆನ್ನೆ ದಿವಸ ನಡೆದ ಘಟನೆಗಳನ್ನೆಲ್ಲಾ ಕೇಳಿದ್ದೇನೆ. ಯಾರು ಯಾರು ಯಾವ ರೀತಿ ಬೈದರು ಎಂಬುದನ್ನು ಸಹ ಒಂದು ವಾಕ್ಯ ಬಿಡದೆ ಎಲ್ಲವನ್ನೂ ಕೇಳಿದ್ದೇನೆ. ನೆನ್ನೆ ಏನೇನು ನಡೆಯಿತು ಎಂಬುದು ನನಗೆ ಗೊತ್ತು. ಯಾರು ಯಾರು ಏನೇನು ಹೇಳಿದರು ಎಂಬುದೆಲ್ಲಾ ನನಗೆ ಗೊತ್ತು. ಎಕ್ಸ್‌ಪಂಜ್ ಆಗಿರುವುದೂ ಸಹ ನನಗೆ ಗೊತ್ತು. ನನಗೆ ಗೊತ್ತಿದ್ದ ವಿಚಾರವನ್ನೇ ಮತ್ತೆ ಮಾತನಾಡುವುದರಲ್ಲಿ ಅರ್ಥವಿಲ್ಲ.

Sri C. M. ARUMUGHAM.—A Member of the House has been suspended for no cause or reason.

MADAM SPEAKER.—It was quite alright.

ಶ್ರೀ ವಾಟಾಳ್ ನಾಗರಾಜ್ :—ಮಾನ್ಯ ಸದಸ್ಯರಾದ ಶ್ರೀಮಾನ್ ಬಂಗಾರಪ್ಪನವರನ್ನು ಏತಕ್ಕೆ ಸಸ್ಪೆಂಡ್ ಮಾಡಿದಿರಿ ಎನ್ನುವುದನ್ನು ನಾನು ಪ್ರಶ್ನೆ ಮಾಡಬೇಕಾಗಿದೆ.

ಅಧ್ಯಕ್ಷರು :—ಅವರು ಅಧ್ಯಕ್ಷರಿಗೆ ವಿರುದ್ಧವಾಗಿ ನಡೆದುಕೊಂಡರು, ಅದಕ್ಕಾಗಿ ಅವರನ್ನು ಸಸ್ಪೆಂಡ್ ಮಾಡಲಾಯಿತು.

ಶ್ರೀ ವಾಟಾಳ್ ನಾಗರಾಜ್ :—ಇಂಥಾ ಶಿಕ್ಷೆಯನ್ನು ಅವರಿಗೆ ಕೊಡುವುದು ಏತಕ್ಕೆ ?

ಅಧ್ಯಕ್ಷರು :—ಅಂಥಾ ಶಿಕ್ಷೆಯನ್ನು ಕೊಡಬೇಕಾಗಿತ್ತು, ಕೊಟ್ಟರು.

---

* Word/words expunged as ordered by the chair.

ಶ್ರೀ ವಾಟಾಳ್ ನಾಗರಾಜ್:—ಮೆಜಾರಿಟಿ ಇದೆಯೆಂದು ಏನು ಬೇಕಾದರೂ ಮಾಡುತ್ತೀರಾ?

ಅಧ್ಯಕ್ಷರು:—ವಿರೋಧಪಕ್ಷದವರೂ ಸೇರಿಕೊಂಡು ಈ ಸಭೆಯ ಸದಸ್ಯರೆಲ್ಲರೂ ಸೇರಿ ಅದನ್ನು ಮಾಡಿದ್ದಾರೆ.

Budget Estimates for 1972-73—Demands for grants.

Demand Nos. 45, 33, 15A and 53 (Debate contd.)

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ):—

ಮಾನ್ಯ ಸಭಾಧ್ಯಕ್ಷಿಣಿಯವರೇ, ನಾನು ನನ್ನ ಭಾಷಣವನ್ನು ಪ್ರಸ್ತಾಪ ಮಾಡುವುದಕ್ಕೆ ಮುಂಚೆ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಅದು ಏನೆಂದರೆ ಇವೊತ್ತಿನ ಪತ್ರಿಕೆಯಲ್ಲಿ ಮೈಸೂರಿನಲ್ಲಿ ಒಬ್ಬರು ಪತ್ರಿಕಾ ಕಾರ್ಯಕರ್ತರನ್ನು ಪ್ರೀಮಿಯರ್ ಸ್ಟುಡಿಯೋ ಮಾಲೀಕರು ತಮ್ಮ ಸ್ಟುಡಿಯೋದಲ್ಲಿ ಸುಮಾರು ಮೂರು ಗಂಟೆಗಳಿಗೂ ಹೆಚ್ಚು ಕಾಲ ಅಕ್ರಮವಾಗಿ ಬಂಧನದಲ್ಲಿರಿಸಿ ಹೀನಾಮಾನವಾಗಿ ಬೈದು ಹೊಡೆದಿದ್ದಾರೆ, ಮತ್ತು ಅವರ ಪ್ರಾಣಕ್ಕೆ ಅಪಾಯವನ್ನು ತರುತ್ತಾರೆ ಎನ್ನುವ ರೀತಿಯಲ್ಲಿ ವರ್ತಿಸಿದ್ದಾರೆ ಎನ್ನುವುದು ಇವೊತ್ತಿನ ಪತ್ರಿಕೆಯಲ್ಲಿ ಬಂದಿದೆ. ಅದನ್ನು ನಾನು ಓದಿದ್ದೇನೆ. ಅವರು ಯಾವುದೋ ಒಂದು ಚಲನ ಚಿತ್ರದ ಬಗ್ಗೆ ಅವರ ಅಭಿಪ್ರಾಯವನ್ನು ಬರೆದಿದ್ದಾರೆ ಎಂದು ಈ ರೀತಿ ಅವರು ಮಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಪತ್ರಿಕಾಕರ್ತರು ತಮ್ಮ ಕರ್ತವ್ಯವನ್ನು ನಿಷ್ಪಕ್ಷಪಾತವಾಗಿ ನಿರ್ವಹಣೆ ಮಾಡಿದ್ದಕ್ಕಾಗಿ ಅವರಿಗೆ ಪ್ರಾಣಭಯವನ್ನುಂಟುಮಾಡತಕ್ಕ ರೀತಿಯಲ್ಲಿ ಬಹಳ ಉದ್ಧಟತನ ದಿಂದ ವರ್ತಿಸಿದ್ದಾರೆ. ಅದಕ್ಕೆ ಸರ್ಕಾರದವರು ಅವಕಾಶವನ್ನು ಕೊಡಬಾರದು. ಮತ್ತು ಆ ಬಗ್ಗೆ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಅವರು ಯಾವ ಒಂದು ದೊಡ್ಡ ಅಂತಸ್ತಿನಲ್ಲೇ ಇರಲಿ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಮತ್ತು ಆ ಪತ್ರಿಕಾಕರ್ತರಿಗೆ ಪೊಲೀಸಿನವರ ರಕ್ಷಣೆ ಕೊಡಬೇಕು ಎಂದು ತಿಳಿಸಿ ಇವೊತ್ತು ಈ ಸಭೆಯ ಮುಂದೆ ಇರತಕ್ಕ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಮಲಪ್ರಭಾ ಯೋಜನೆಯಲ್ಲಿ ಏನು ದೋಷ ಇದೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಈ ಸಭೆಯಲ್ಲಿ ಪ್ರಸ್ತಾಪ ಮಾಡಿದರು. ಇದರ ಬಗ್ಗೆ ನಾನು ಈಗಾಗಲೇ ವಿವರಣೆಯನ್ನು ಕೊಟ್ಟಿದ್ದೇನೆ. ಈ ಡ್ಯಾಮಿಗೆ ಖರ್ಚಾಗಿರತಕ್ಕದ್ದು ಎರಡೂವರೆ ಕೋಟಿ ರೂಪಾಯಿಗಳು ಮಾತ್ರ. ನಾಲೆಗಳ ಕೆಲಸ ಆಗಿಲ್ಲ ಎನ್ನುವ ಅಭಿಪ್ರಾಯ ಬರತಕ್ಕ ಒಂದು ವಾದವನ್ನು ಕಳೆದ ಸಾರಿ ಈ ಸಭೆಯಲ್ಲಿ ಹೇಳಿದ್ದಾರೆ. 16 ಮೈಲಿಯ ಒಂದು ಚಾನಲ್ ಪೂರ್ತಿಯಾಗಿದೆ. 50 ಮೈಲಿಯ ಒಂದು ಬ್ರಾಂಚ್ ಚಾನಲ್ ಮಾಡಿದರೆ 10 ಸಾವಿರ ಎಕರೆಗೆ ನೀರು ಕೊಡುವುದಕ್ಕೆ ಸಾಧ್ಯವಿದೆ ಎಂದು ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದವರು ಒಂದು ವಿವರಣೆಯನ್ನು ಕೊಟ್ಟಿದ್ದಾರೆ. ಇವೊತ್ತು ಮಲಪ್ರಭಾ ಪ್ರಾಜೆಕ್ಟಿನಲ್ಲಿ ಅಣೆಕಟ್ಟಿಗೆ ಕ್ರೆಸ್ಟ್ ಗೇಟ್ ಹಾಕದಿದ್ದರೆ ನೀರನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಈ ಯೋಜನೆಗೆ ಡ್ಯಾಮಿಗೆ $2\frac{1}{2}$ ಕೋಟಿ ರೂಪಾಯಿ ಖರ್ಚಾಗಿದೆ. ಆದರೆ ಇದಕ್ಕೆ ಚಾನಲ್ ಮಾಡಲು 30-40 ಕೋಟಿ ರೂಪಾಯಿ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಇದಕ್ಕೆ ಲೆಫ್ಟ್ ಬ್ಯಾಂಕ್ ಚಾನಲ್ ಮಾಡುವುದಕ್ಕೆ ತಾಂತ್ರಿಕವಾಗಿ ಸಾಧ್ಯವಿಲ್ಲ ಎಂದು ಹಿಂದೆ ಇದ್ದಂತಹ ಇಂಜಿನಿಯರ್ ಒಂದು ವರದಿಯನ್ನು ಕೊಟ್ಟಿದ್ದಾರೆ ಎಂದು ನಾನು ಕೇಳಿದ್ದೇನೆ. ನಾವು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಕೆಲವು ವಿವರವನ್ನು ನಾವು ಪಡೆದಿದ್ದೇವೆ. ಆ ಬಗ್ಗೆ ಅವರು ಏನು ಒಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ, ಒಂದು ಕಡೆ ಡ್ಯಾಮ್

ಕಟ್ಟಿದ್ದಾರೆ ನೀರು ಉಪಯೋಗಿಸುವುದಕ್ಕೆ ಸಾಧ್ಯವಿಲ್ಲ, ಒಂದು ಕಡೆ ಚಾನಲ್ ಮಾಡುವುದಕ್ಕೆ ಸಾಧ್ಯವಿಲ್ಲ ಡ್ಯಾಮಿನ ಮೇಲೆ ಖರ್ಚುಮಾಡಿರತಕ್ಕ ಹಣ ಸರಿಯಾದ ರೀತಿಯಲ್ಲಿ ಖರ್ಚು ಮಾಡಿಲ್ಲ ಎನ್ನುವ ವಾದ ಏನಿದೆ ಅದರಲ್ಲಿ ಹುರುಳಿಲ್ಲ ಎನ್ನುವ ಮಾತನ್ನು ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮಲಪ್ರಭಾದಲ್ಲಿ ಡ್ಯಾಮ್ ಮಟ್ಟಕ್ಕೆ ಗಾರ್ಜ್ ಫಿಲಪ್ ಮಾಡಿ ಕ್ರೆಸ್ಟ್‌ಗೇಟ್ ಹಾಕತಕ್ಕಂಥಾ ಪರಿಸ್ಥಿತಿಗೆ ತಂದಿದ್ದಾರೆ. ಅಲ್ಲಿ ನೀರು ಹೋಗುವುದಕ್ಕೆ ಸಾಧ್ಯವಿಲ್ಲದಿದ್ದರೆ ಅನಾವಶ್ಯಕವಾಗಿ ಈ ಒಂದು ಖರ್ಚು ಮಾಡುವುದನ್ನು ತಡೆ ಹಿಡಿಯಬಹುದಾಗಿತ್ತು. ಈ ಬಗ್ಗೆ ಅವರು ಹೇಳಿರತಕ್ಕ ಮಾತು ಸರಿಯಾದ್ದಲ್ಲ. ನಾನು ಅಲ್ಲಿ ನಡೆದಿರತಕ್ಕ ಕೆಲಸವನ್ನು ಕಣ್ಣಾರೆ ಕಂಡು ಬಂದು ಕೆಲವು ಅಂಕಿ ಅಂಶಗಳ ಆಧಾರದ ಮೇಲೆ ಇದನ್ನು ತಿಳಿಸುತ್ತಿದ್ದೇನೆ. ಎಡಗಡೆ ಚಾನಲ್ ಮಾಡುವ ಬಗ್ಗೆ ಹಿಂದೆ ಇದ್ದಂತಹ ಮುಖ್ಯ ಇಂಜಿನಿಯರು ಈಗ ಇರುವ ಇಂಜಿನಿಯರ್ ಇನ್ ಚೀಫ್ ಅವರು ಇದು ಟೆಕ್ನಿಕಲಿ ಇಟ್ ಈಸ್ ನಾಟ್ ಫೀಜಬಲ್, ಎಂದು ಹೇಳಿದ್ದಾರೆ. ಆ ಮೇಲೆ 1967ನೇ ಇಸವಿಯಲ್ಲಿ ಪುನಃ ಅದನ್ನು ಇನ್‌ವೆಸ್ಟಿಗೇಟ್ ಮಾಡಿ ಅದಕ್ಕೆ 35–40 ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ಹೇಳಿ ಎಡದಂಡೆ ನಾಲೆಯನ್ನು ಕಟ್ಟುವುದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಘಟಪ್ರಭಾ ಯೋಜನೆಯ ಬಗ್ಗೆ ಕೆಲವು ವಿಷಯಗಳನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಈ ಯೋಜನೆಗೆ ಅರ್ಥನ್ ಬಂಡ್ ಹಾಕತಕ್ಕದ್ದು ಗಾರ್ಜ್ portion ಭರ್ತಿ ಮಾಡತಕ್ಕದ್ದು ಮತ್ತು ಸ್ಟಿಲ್‌ವೇ ಮಾಡತಕ್ಕದ್ದು ಈ ಬಗ್ಗೆ ನಾನು ವಿವರಣೆಯನ್ನು ಪಡೆದಿದ್ದೇನೆ. 1966ರಲ್ಲಿ ಫಸ್ಟ್ ಟೆಂಡರ್ ಹಾಕಿದಾಗ ಎರಡು ಫ್ಲಾಂಕ್ಸ್, ಸ್ಟಿಲ್‌ವೇ ವರ್ಕ್, ಗಾರ್ಜ್ ಪೋರ್ಷನ್ ಎಲ್ಲಾ ಒಟ್ಟಿಗೆ ಸೇರಿಸಿ ಟೆಂಡರ್ ಕರೆದಿದ್ದರು. ಆಗ ತಾಂತ್ರಿಕ ಸಲಹೆಯನ್ನು ಕೊಟ್ಟವರು ಈಗ ಇಂಜಿನಿಯರ್ ಇನ್ ಚೀಫ್ ಆಗಿರತಕ್ಕವರು. ಆಗ ಟೆಂಡರ್ ಕರೆಯತಕ್ಕ ಕಾಲದಲ್ಲಿ ಸ್ಪಿಲ್‌ವೇ ಡಿಜೈನ್ ಫೈನಲ್ ಆಗಿರಲಿಲ್ಲ. ಮತ್ತು ಸರ್ಕಾರದವರು ಅಂತಿಮವಾಗಿ ಡಿಜೈನ್ ಅನ್ನು ತೀರ್ಮಾನ ಮಾಡಿರಲಿಲ್ಲ. ಆಗ ಈ ಎಲ್ಲಾ ಐಟಂಗಳನ್ನೂ ಸೇರಿಸಿ 5 ಕೋಟಿ ರೂಪಾಯಿಗಳ ಕೆಲಸಕ್ಕೆ ಟೆಂಡರ್ ಕರೆದಿದ್ದರು. ಆದರೆ ಆ ಟೆಂಡರ್ ಅಕ್ಸೆಪ್ಟ್ ಆಗಲಿಲ್ಲ. ಆ ಮೇಲೆ ಕೆಲಸಗಳನ್ನು ಸ್ಪ್ಲಿಟ್‌ಮಾಡಿ ರೀ ಟೆಂಡರ್ ಕರೆದರು. ಯಾವ ಯಾವ ಕನ್‌ಸ್ಟ್ರಕ್ಷನ್ ಯಾರು ಯಾರಿಗೆ ಕೊಟ್ಟಿದ್ದಾರೆ ಎನ್ನುವ ವಿವರವನ್ನು ಬೇಕಾದರೆ ನಾನು ಕೊಡಬಲ್ಲೆ. ಆದರೆ ಈಗ ಅದನು ಹೇಳುವುದು ಅನಾವಶ್ಯಕ. ಇಲ್ಲಿ ಮುಖ್ಯವಾಗಿ ಏನಾಗಿದೆ ಎಂದರೆ ಗಾರ್ಜ್ ಪೋರ್ಷನ್ನಿಗೆ ಸಂಬಂಧಪಟ್ಟ ಫೌಂಡೇಷನ್ ಟ್ರಬಲ್ ಬಂದ್ದದ್ದರಿಂದ ಗಾರ್ಜ್ ಪೋರ್ಷನ್ ಫಿಲಪ್ ಮಾಡಲಿಲ್ಲ ಎಂಬುದಾಗಿ ಹೇಳಿದ್ದಾರೆ. ಇದಕ್ಕೆ ಕಾರಣ ಏನೆಂದರೆ ಗಾರ್ಜ್ ಪೋರ್ಷನ್ ಫಿಲಪ್ ಮಾಡುವುದಕ್ಕೆ ಬೇಕಾದಂತಹ ಎಲ್ಲಾ ಮೆಟೀರಿಯಲ್ಸ್ ಅನ್ನೂ ಸಬ್‌ಮರ್ಜ್ ಏರಿಯಾದಲ್ಲಿ ತೆಗೆದುಕೊಳ್ಳಬೇಕೆಂದು ನಿರ್ಧಾರ ಆಗಿದ್ದರೂ ಮುಳುಗಡೆ ಪ್ರದೇಶದಲ್ಲಿ ಯಾವುದೇ ಮೆಟೀರಿಯಲ್ಸ್ ತೆಗೆದುಕೊಳ್ಳದೆ ಬೇರೆ ಕಡೆಯಿಂದ ಮೆಟೀರಿಯಲ್ಸ್ ತಂದು ಉಪಯೋಗ ಮಾಡಿದ್ದಾರೆ. ಕನ್‌ಸ್ಟ್ರಕ್ಷನ್ ಕಾಸ್ಟ್ ಮಿನಿಮೈಜ್ ಮಾಡಬೇಕು ಎಂದು ತಾಂತ್ರಿಕ ಅಭಿಪ್ರಾಯ ಬಂದ ಮೇಲೂ ಕೂಡ ಅದನ್ನು ಕೆಲವು ಕಾಲ ಮುಂದುವರಿಸಿದ್ದಾರೆ. ಗಾರ್ಜ್ ಪೋರ್ಷನ್‌ನಲ್ಲಿ ಫೌಂಡೇಷನ್ ಟ್ರಬಲ್ ಬಂತು ಎಂದು ಡಿಜೈನ್ ಬದಲಾವಣೆ ಮಾಡಿ ಕೆಲಸ ಮಾಡುವುದರಲ್ಲಿ ಏನೇನು ವ್ಯವಹಾರಗಳು ನಡೆದಿವೆ ಎಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಅದರಲ್ಲಿ ಕೆಲವು ಅನಾವಶ್ಯಕವಾದ ವೆಚ್ಚಗಳನ್ನು ಮಾಡಿದ್ದಾರೆ. ಏಕೆಂದರೆ ಅವತ್ತು ಮುಖ್ಯ ಮಂತ್ರಿಯವರು ಕೆಲವು ವಿಷಯಗಳನ್ನು ನನಗೆ ಹೇಳಿದ್ದರು. ಅವರು ದೇವೇಗೌಡರ ಮನಸ್ಸಿಗೆ ಚುಚ್ಚಿದ ಹಾಗೆ ಆಗಿದೆ ಎಂದು ಹೇಳಿದ್ದಾರೆ. ನಾನು ಹೇಳುವುದಾದರೂ ಇಷ್ಟೆ. ತಾಂತ್ರಿಕವಾಗಿ ಯಾವುದೇ ಅಭಿಪ್ರಾಯವನ್ನು ಹಿಂದಿನ ಸರ್ಕಾರ ನಿರ್ಲಕ್ಷ ಮಾಡಿ ಒಂದು ರಾಜಕೀಯ ನಿರ್ಣಯವನ್ನು ತೆಗೆದುಕೊಂಡಿದ್ದರೆ ಬಹುಶಃ ಆ ಸರ್ಕಾರವನ್ನು ನಾನು ಅಪಾದನೆಗೆ ಗುರಿ

ಮಾಡುವುದಕ್ಕೆ ನಾನು ಹಿಂದೆ ಮುಂದೆ ನೋಡುವುದಿಲ್ಲ. ಒಂದು ರಾಜ್ಯದ ಜನತೆಗೆ ಹಾನಿಯುಂಟಾಗುವ ರೀತಿಯಲ್ಲಿ ಏನಾದರೂ ಕೆಲಸ ಮಾಡಿದ್ದಾರೆಂದು ಹೇಳಿದರೆ, ಅದನ್ನು ಖಂಡನೆ ಮಾಡುವುದಕ್ಕೆ ನಾನು ಸಹ ಸರ್ಕಾರದ ಜೊತೆ ಸೇರುತ್ತೇನೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಹಿಂದೆ 7-8 ವರ್ಷಗಳ ಕಾಲ ರಾಜ್ಯದ ಬೃಹತ್ ನೀರಾವರಿ ಯೋಜನೆಗಳಿಗೆ ಒಬ್ಬರೇ ಮುಖ್ಯ ಇಂಜಿನಿಯರ್ ಇದ್ದರು. ಕೆಲವರು 15-16 ವರ್ಷಗಳ ಕಾಲ ಸಹ ಇದ್ದರು. ಹಿಂದೆ ಸ್ಟೇಟ್ ರೀಆರ್ಗನೈಸೇಷನ್ ಆಗುವಾಗ ಆಗಿರತಕ್ಕಂತಹ ಲೋಪದೋಷಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಒಬ್ಬ ಜೂನಿಯರ್ ಇಂಜಿನಿಯರ್ ಆಗಿ ಸೇರಿದರೆ, ಆತ ಚೀಫ್ ಇಂಜಿನಿಯರಾಗಿ ಇರುವುದು ಕೇವಲ ಒಂದೆರಡು ವರ್ಷ ಮಾತ್ರ. ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅಧಿಕಾರವನ್ನು ಹೊತ್ತ ಅಧಿಕಾರಿಗಳು ಅಧಿಕಾರ ನಿರ್ವಹಣೆಯನ್ನು ಸರಿಯಾಗಿ ಮಾಡದೆ ತಪ್ಪುದಾರಿಗೆ ಎಳೆಯುತ್ತಾ ಹೋದರೆ ಅಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅಧಿಕಾರಿಗಳು ಸರಿಯಾದ ರೀತಿಯಲ್ಲಿ ತಮ್ಮ ಕರ್ತವ್ಯವನ್ನು ಮಾಡದಿದ್ದರೆ ಅದು ತಪ್ಪಾಗುತ್ತದೆ. ಅಂಥವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಕೊನೆಯದಾಗಿ ಕೃಷ್ಣ ಬೇಸಿನ್‌ನಲ್ಲಿರತಕ್ಕಂತಹ ಪ್ರಾಜೆಕ್ಟುಗಳು ಏನಿವೆ, ಅವುಗಳನ್ನು ಮುಗಿಸುವುದಕ್ಕೆ ನಮ್ಮ ರಾಜ್ಯದಲ್ಲಿರತಕ್ಕಂತಹ ರಿಸೋರ್ಸಸ್ ಸಾಲುವುದಿಲ್ಲ. ಇವತ್ತು ಬರೀ 200 ಕೋಟಿ ಅದಕ್ಕೆ ಪ್ರೊವೈಡ್ ಮಾಡಿದರೆ, ಅದನ್ನು ಮುಗಿಸುವ ಕಾಲದಲ್ಲಿ ಅದು 250-300 ಕೋಟಿ ರೂಪಾಯಿಯಾದರೂ ಆಗಬಹುದು. ಕೇಂದ್ರ ಸರ್ಕಾರದವರು ಇದಕ್ಕೆ ಕೊಡತಕ್ಕ ಸ್ಪೆಶಲ್ ಅಸಿಸ್ಟೆನ್ಸ್ ಬಗ್ಗೆ ತಾವು ಹೆಚ್ಚಿನ ರೀತಿಯಲ್ಲಿ ಪ್ರಯತ್ನ ಮಾಡಬೇಕು. ನಮ್ಮ ಪ್ರಧಾನ ಮಂತ್ರಿಯವರು ಅಸಿಸ್ಟೆನ್ಸ್ ಕೊಡದಿದ್ದರೂ ಕೆಲಸ ನಡೆದುಕೊಂಡು ಹೋಗುತ್ತಿದೆ ಎಂದು ಹೇಳಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿರತಕ್ಕಂತಹ ನೀರಾವರಿ ಯೋಜನೆಗಳನ್ನು ಬೇರೆ ರಾಜ್ಯಗಳ ನೀರಾವರಿ ಯೋಜನೆಗಳಿಗೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದ್ದು ಬಹಳ ಕಡಿಮೆ. ಅದರಲ್ಲೂ ಡ್ರಾಟ್ ಏರಿಯಾದಲ್ಲಿರತಕ್ಕಂತಹ ಪ್ರಾಜೆಕ್ಟುಗಳನ್ನು ಕಾರ್ಯಗತ ಮಾಡುವುದಕ್ಕೆ ಕೇಂದ್ರಸರ್ಕಾರದಿಂದ ವಿಶೇಷವಾದ ಸೌಲಭ್ಯವನ್ನು ದೊರಕಿಸಿಕೊಳ್ಳುವುದಕ್ಕೆ ಹೆಚ್ಚಿನ ಒತ್ತಡ ತರಬೇಕೆಂದು ಹೇಳುತ್ತೇನೆ. ಇನ್ನೂ ಮುಂದೆ ಹೆಜ್ಜೆ ಇಟ್ಟು ಹೇಳುವುದಾದರೆ, ಅವರೇ ಬೇಕಾದರೆ ಇದನ್ನು ವಹಿಸಿಕೊಂಡು ಮಾಡಲಿ. ಇಲ್ಲದಿದ್ದರೆ ಪ್ರಾಜೆಕ್ಟಿಗೆ ಬೇಕಾಗತಕ್ಕಂತಹ ಎಲ್ಲಾ ಹಣವನ್ನು ಅವರೇ ಕೊಡುವುದಕ್ಕೆ ಹೆಚ್ಚಿನ ಒತ್ತಡವನ್ನು ತರಬೇಕೆಂದು ಹೇಳುತ್ತೇನೆ. ವರ್ಷಕ್ಕೆ 30-40 ಕೋಟಿ ರೂಪಾಯಿಯಷ್ಟು ವಿಶೇಷ ಸಹಾಯ ಕೊಟ್ಟು ಒಂದು 5-6 ವರ್ಷಗಳಲ್ಲಿ ಇದನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನು ಕಾವೇರಿ ಬೇಸಿನ್ ವಿಚಾರ ಚರ್ಚೆ ಮಾಡುವುದಕ್ಕೆ ಮುಂಚೆ ಈ ಫ್ಯಾಕ್ಟ್ ಫೈಂಡಿಂಗ್‌ಕಮಿಟಿ ಬಗ್ಗೆ ಕೆಲವು ವಿವರಗಳನ್ನು ಇವರು ಹೇಳಬೇಕಾಗಿದೆ. ಜೊತೆಗೆ ಇವತ್ತು ಮಾನ್ಯ ನಂಜೇಗೌಡರು ಮಂತ್ರಿಯಾಗಿರುವುದರಿಂದ ಅವರಿಗೆ ಹೆಚ್ಚು ಮಾತನಾಡುವುದಕ್ಕಾಗುವುದಿಲ್ಲ. ಅವರು 67-71ರ ವರೆಗೆ ಮಾಡಿದಂತಹ ಭಾಷಣವನ್ನು ನಾನು ನೋಡಿದ್ದೇನೆ. ಆದರೆ ಇವತ್ತು ಕ್ಲಿಯರೆನ್ಸ್ ಬಗ್ಗೆ ಏನಾಗಿದೆ ? ಮೊದಲನೆಯದಾಗಿ ಕಾವೇರಿ ಬೇಸಿನ್‌ನಲ್ಲಿರತಕ್ಕಂತಹ ನಾಯಕರಾದ ಶ್ರೀಮಾನ್ ಡಿ. ದೇವರಾಜ ಅರಸರು, ಎಚ್. ಎಂ. ಚನ್ನಬಸಪ್ಪನವರು ಮತ್ತು ನಂಜೇಗೌಡರು ಇದರ ಹೊಣೆಗಾರಿಕೆಯನ್ನು ಹೊತ್ತಿದ್ದಾರೆ. ಇವತ್ತು ಕಾವೇರಿ ಬೇಸಿನ್‌ನಲ್ಲಿರತಕ್ಕಂತಹ ಜನರ ಹಣೆಬರಹ ಬರೆಯುವ ಜವಾಬ್ದಾರಿ ನಿಮ್ಮ ಮೇಲೆ ಇದೆ. ಇದರಲ್ಲಿ ನೀವು ಏನಾದರೂ ವಿಫಲರಾದರೆ ಮೈಸೂರು ದೇಶದ ಜನತೆ ನಿಮ್ಮನ್ನು ಕ್ಷಮಿಸುವುದಿಲ್ಲ. ಆಗಲೇ ಅಲ್ಲಿ 7 ಲಕ್ಷ 8 ಲಕ್ಷ ಎಕರೆಗೆ ನೀರು ಬಿಡುತ್ತೇವೆಂದು ಮಾತನಾಡುವುದಕ್ಕೆ ಇವರು ಶುರು ಮಾಡಿದ್ದಾರೆ. ಆದ್ದರಿಂದ ಇದರ ಬಗೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಂಬುದನ್ನು ತಿಳಿಸಬೇಕು. ನಾನು ಬಹಳ ಕಠಿಣವಾದ

ಮಾತುಗಳನ್ನು ಇಲ್ಲಿ ಉಪಯೋಗಿಸಬೇಕಾಗುತ್ತದೆ. ನೀವು ಇವತ್ತು ನಿಮ್ಮ ಸ್ಥಾನ ಅಥವಾ ಪದವಿಯನ್ನು ಮುಖ್ಯವಾಗಿ ದೃಷ್ಟಿಯಲ್ಲಿಟ್ಟುಕೊಳ್ಳಬೇಡಿ. 7–8 ಜಿಲ್ಲೆಯ ಹಿತದೃಷ್ಟಿಯಿಂದ, ನಮ್ಮ ನಾಡಿನ ಜನತೆಯ ಹಿತದೃಷ್ಟಿಯಿಂದ ಇಂದಿರಾಗಾಂಧಿಯವರಿಗೆ ಶರಣು ಹೋಗಬೇಡಿ. ಈ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಕೊಟ್ಟಿರತಕ್ಕಂತಹ ಅಂಕಿ ಅಂಶಗಳ ಆಧಾರದ ಮೇಲೆ ಏನಾದರೂ ತಮ್ಮ ಮೇಲೆ ಒತ್ತಡ ತಂದರೆ ತಾವು ಅದನ್ನು ಧಿಕ್ಕರಿಸಿ ಬರಬೇಕಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ. ನಿಮ್ಮ ಮುಖ್ಯಮಂತ್ರಿ ಪದವಿ ಹೋದರೂ ಸರಿಯೇ, ಇದ್ದರೂ ಸರಿಯೆ ಆದರೆ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್ :—ಈ ರೀತಿ ಊಹೆ ಮಾಡುವುದಕ್ಕೆ ಏನಾದರೂ ಆಧಾರ ಇದೆಯೇ ? I agree with the line of argument. Why should we yield when the interest of the State is at stake. I would only say that no such apprehension need be entertained because why does the Hon. Member presuppose that they are going to compel us to do it. I think Sri Deve Gowda knows me fully well and I won't yield when it is a question of guarding the interest of the State. I may tell him that I do not think that such a situation will arise.

ಶ್ರೀ ಎಚ್. ಡಿ. ದೇವೇಗೌಡ :—ಆ ಸನ್ನಿವೇಶ ಬರಲಾರದೆಂದು ಹೇಳಿದರು. ನಾನು ಇವತ್ತು ಮುಖ್ಯಮಂತ್ರಿಯವರಿಗೆ ಈ ಸ್ಥಾನದಿಂದ ಮುನ್ನೆಚ್ಚರಿಕೆಯನ್ನು ಕೊಡುತ್ತಿದ್ದೇನೆ. ಈಗ ಫ್ಯಾಕ್ಟ್‌ಫೈಂಡಿಂಗ್ ರಿಪೋರ್ಟು ಕೇಂದ್ರದ ಪರಿಷರ. ಕೈಯಲ್ಲಿ ಇದೆ. ಆ ರಿಪೋರ್ಟು ಪ್ರಕಾರ ಮೈಸೂರು ರಾಜ್ಯಕ್ಕೆ ಎಷ್ಟು ನೀರು ಸಿಗುತ್ತದೆ ಎಂಬುದರ ಬಗ್ಗೆ ಶಂಕೆ ಇದೆ. ಆಗಲೇ ಮದ್ರಾಸಿನವರು 570 ಎಂ. ಸಿ. ಎಫ್. ಟಿ. ಉಪಯೋಗ ಮಾಡುತ್ತಿದ್ದಾರೆ. ಕಾವೇರಿ ಬೇಸಿನ್‌ನಲ್ಲಿ ಒಟ್ಟು 750–800 ಟಿ. ಎಂ. ಸಿ. ಎಫ್. ಟಿ. ನೀರು ಇರಬಹುದು. ಅದರ ಬಗ್ಗೆ ಸಹ ಒಂದೊಂದು ರೀತಿಯ ಲೆಕ್ಕ ಹಾಕುತ್ತಿದ್ದಾರೆ. ನಮ್ಮ ಅಧಿಕಾರಿಗಳು ಲೆಕ್ಕ ಹಾಕಿದ್ದನ್ನು ಅವರು ಒಪ್ಪುತ್ತಾ ಇಲ್ಲ. ಅವರು ಇವತ್ತು 21 ಲಕ್ಷ ಎಕರೆ ಪ್ರದೇಶಗಳಲ್ಲಿ ನೀರಾವರಿ ಯೋಜನೆಗಳ ಮುಖಾಂತರ ಪ್ರಿಸ್ಕ್ರಿಪ್ಟಿವ್ ರೈಟ್ಸ್ ಮತ್ತು ರೈಪೇರಿಯನ್ ರೈಟ್ಸ್ ಎಂದು ಹೇಳಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಇವರು ಕಳೆದ 40 ವರ್ಷಗಳಿಂದಲೂ ನಮ್ಮ ರೈಟಿನ ಉಪಯೋಗ ಪಡೆದು ಅದರ ಊಟವನ್ನು ಮಾಡಿಕೊಂಡು ಬಂದಿದ್ದಾರೆ.

ನಾವು ಅವನ್ನು ಉಪಯೋಗ ಮಾಡಲಿಲ್ಲ. ಅದಕ್ಕೆ ಕೇವಲ ಸರ್ಕಾರ ಹೊಣೆ ಇದೆ. ಸ್ವಾತಂತ್ರ್ಯ ಬಂದಮೇಲೆ 25 ವರ್ಷಗಳಲ್ಲಿ ಕಾವೇರಿ ಬೇಸಿನ್ನಿನಲ್ಲಿರತಕ್ಕ ನೀರನ್ನು ಉಪಯೋಗ ಮಾಡುವುದಕ್ಕೆ ಸಾಕಷ್ಟು ಕ್ರಮ ತೆಗೆದುಕೊಳ್ಳಲಿಲ್ಲ. 1965 ರಿಂದೀಚೆಗೆ ಈ ಸಭೆಯಲ್ಲಿ ಒಂದು ತೀರ್ಮಾನಕ್ಕೆ ಬಂದಮೇಲೆ ಕೆಲವು ಬೃಹತ್ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನಮಾಡಿತು. ಮಾನ್ಯ ಶ್ರೀ ಚನ್ನಬಸಪ್ಪನವರು ಹೇಳಿರತಕ್ಕ ಮಾತಿನ ಪ್ರಕಾರ ಕೇವಲ 10 ಟಿ. ಎಂ. ಸಿ. ಫೀಟ್ ನೀರು ಸಿಗಬಹುದು. ಜಲ್ಲಾ ಪ್ರದೇಶಗಳಿಗೂ ನೀರನ್ನು ಬಿಡುವುದಾದರೆ ಉಳಿಕೆ ಬಹಳ ಕಡಿಮೆ ಸಿಗುತ್ತದೆ. ಇಂತಹ ವಿಷಯಗಳು ಪತ್ರಿಕೆಯಲ್ಲಿ ಪ್ರಕಟವಾಗಬೇಕಾಗಿಲ್ಲ. ಪತ್ರಿಕಾಕರ್ತರಲ್ಲಿ ಮಾನ್ಯ ಶ್ರೀ ಕರುಣಾನಿಧಿಯವರು ಇದರ ಬಗ್ಗೆ ಹೆಚ್ಚಿಗೆ ಆರ್ಗ್ಯುಮೆಂಟನ್ನು ಅಡ್ವಾನ್ಸ್ ಮಾಡಿದ್ದರು ಎಂಬುದಾಗಿ ನಾನು ಕೇಳಿದ್ದೇನೆ. ಆದ್ದರಿಂದ ನಾವು ಪಕ್ಷಾತೀತ ದೃಷ್ಟಿಯಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕು. ಎಲ್ಲಾ ರಾಜಕೀಯ ಪಕ್ಷಗಳು ಒಗ್ಗಟ್ಟಿನಿಂದ ಈ ಕೆಲಸವನ್ನು ಮಾಡಬೇಕಾಗುತ್ತದೆ. ಕೇವಲ ಆಡಳಿತ ನಿರ್ವಹಣೆ ಮಾಡುವವರು

ಮಾತ್ರ ಈ ಒಂದು ಯೋಜನೆಗೆ ಅನ್ವಯವಾಗುತ್ತಾರೆಂದು ಹೇಳಿದರೆ ಅದು ತಪ್ಪಾಗುತ್ತದೆ. ಹಿಂದೊಮ್ಮೆ ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿಯವರು ಇದರ ಬಗ್ಗೆ ಏನೊಂದು ವರದಿಯನ್ನು ಕೊಟ್ಟಿದ್ದಾರೋ ಅದರ ಒಂದು ಆಧಾರದ ಮೇಲೆ ನಾವು ಮಾತನಾಡಿ ನೋಡುವುದಾದರೆ ಇವತ್ತು ಅಲ್ಲಿ ನೀರು ಎಷ್ಟು ಉಳಿಯುತ್ತದೆಂಬುದೇ ಗೊತ್ತಾಗುವುದಿಲ್ಲ. ಅದರಲ್ಲಿ ನೀರು ಅವರು ಹೇಳಿರುವ ವರದಿ ಪ್ರಕಾರ ಅಷ್ಟು ನಿಲ್ಲುವುದಿಲ್ಲವೆಂಬ ಹೇಳಿಕೆಯನ್ನು ಕೊಡುವ ಪರಿಸ್ಥಿತಿಗೆ ಬಂದಿದ್ದೇವೆ. ಹಾಗಾದರೆ ಇವತ್ತು ಮೈಸೂರಿನಲ್ಲಿ ನಾವು ಮಾಡುತ್ತಾ ಇರತಕ್ಕ ಹೇಮಾವತಿ ಪ್ರಾಜೆಕ್ಟ್ ಆಗಲೀ, ಹಾರಂಗಿ ಪ್ರಾಜೆಕ್ಟ್ ಆಗಲೀ ಅಥವಾ ಕಬಿನಿ ಪ್ರಾಜೆಕ್ಟ್ ಆಗಲೀ ನೋಡಿದರೆ ಅಲ್ಲಿ 45 ಟಿ. ಎಂ. ಸಿ. ಫೀಟಿನಷ್ಟು ನೀರು ಬರುತ್ತದೆಂದು ಅಗ್ರಿಮೆಂಟ್ ಇದೆ. ಕಪಿನಿಯಲ್ಲಿ 68 ಟಿ. ಎಂ. ಸಿ. ಫೀಟಿನಷ್ಟು ನೀರು ಬರುತ್ತದೆಂದು ಅಗ್ರಿಮೆಂಟ್ ಇದೆ. ಆ ಅಗ್ರಿಮೆಂಟ್ ಪ್ರಕಾರ ಅಫ್‌ಸೆಟ್ ರಿಜರ್‌ವಾಯರ್ ಆಗಿರುತ್ತದೆ. 1964 ರಲ್ಲಿಯೇ ಖಾಸಗಿ ನಿರ್ಣಯದ ಮೇಲೆ ಮಾತನಾಡುವಾಗ ಹೇಳಿದ್ದೇವೆ. ಇವತ್ತು ಅದು ಒಂದು ಪೀಸ್ ಆಫ್ ಪೇಪರ್. ಅದು ಕೋರ್ಟಿಗೇ ಹೋಗಲಿ ಅಥವಾ ಯಾವ ಮೊಕದ್ದಮೆಯನ್ನೇ ಹೂಡಲಿ, ನಮ್ಮ ರಾಜ್ಯದ ಜನತೆಯು ಗಮನದಲ್ಲಿ ಅದರ ಬಗ್ಗೆ ಒಂದು ಅಗ್ರಿಮೆಂಟ್ ಆಗಿದೆಯೆಂಬ ಬವಣೆ ಬೇಡ. ಅದು ಅಗ್ರಿಮೆಂಟ್ ಅಲ್ಲ. ಇವತ್ತು ನಮ್ಮ ಆ ಬೇಸಿಗೆನ್‌ಳಲ್ಲಿ ಎಷ್ಟು ನೀರು ಇದೆ, ಎಷ್ಟು ನೀರು ಈಲ್ಡ್ ಇದೆ, ಒಟ್ಟು ನಮ್ಮ ಮೈಸೂರು ರಾಜ್ಯದಲ್ಲಿರತಕ್ಕ ಕಾವೇರಿ ಬೇಸಿನ್‌ನಲ್ಲಿ ಎಷ್ಟು ನೀರು ಸಿಗುತ್ತದೆಂಬುದನ್ನು ನೋಡಬೇಕು.

ಶ್ರೀ ಡಿ. ದೇವರಾಜ ಅರಸ್ :—ನೀವು ಆ ಅಗ್ರಿಮೆಂಟನ್ನು ಒಪ್ಪಬೇಕಾದುದು ಇಲ್ಲವೆಂದು ಹೇಳಿದರೆ ಇನ್ನೊಬ್ಬರು ನಾವು ಅಗ್ರಿಮೆಂಟ್ ಪ್ರಕಾರವೇ ಹೋಗಬೇಕೆಂದು ಹೇಳಿದರೆ ಇದನ್ನು ತೀರ್ಮಾನಮಾಡುವುದು ಹೇಗೆ ?

ಶ್ರೀ ಎಚ್. ಡಿ. ದೇವೆಗೌಡ :—ಮಾನ್ಯ ಮುಖ್ಯಮಂತ್ರಿಗಳು ಈ ರೀತಿಯಾಗಿ ಹೇಳು ತ್ತಿದ್ದಾರೆ. ಇದನ್ನು ತೀರ್ಮಾನ ಮಾಡಬೇಕಾದರೆ ಟ್ರಿಬ್ಯೂನಲಿಗೆ ಬಿಡಬೇಕಾಗಿದೆ. ಇವತ್ತು ಅವರು ಟ್ರಿಬ್ಯೂನಲ್ ಮಾಡಲಿ, ನಾವು ಹೋಗಬೇಕಾಗಿಲ್ಲ. ನಮ್ಮ ಪ್ರಾಜೆಕ್ಟ್‌ಗಳನ್ನು ನಾವು ಕಟ್ಟೋಣ. ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಈಗ ಎಷ್ಟು ನೀರು ನಮ್ಮ ಮುಂದೆ ಇದೆ, ಎಷ್ಟನ್ನು ನಾವು ಬಳಸುತ್ತಿದ್ದೇವೆ ಎಂಬುದನ್ನು ನೋಡಬೇಕು. ಅಂದಮೇಲೆ ಈಗ ಕೇವಲ 300 ಟಿ. ಎಂ. ಸಿ. ಫೀಟ್ ನೀರನ್ನು ಮಾತ್ರ ಉಪಯೋಗಿಸುವುದಕ್ಕೆ ಸಾಧ್ಯವಿದೆ. ಇವತ್ತು ನಾನ್‌ಷೆಡ್ಯೂಲ್ ರಿವರ್ ಮತ್ತು ಷೆಡ್ಯೂಲ್ ರಿವರ್‌ಗಳಿಂದ ಹಾಗೂ ಕಪಿನಿ ರಿಜರ್ ವಾಯರ್‌ಗಳಿಂದ ಎಷ್ಟು ನೀರನ್ನು ಉಪಯೋಗ ಮಾಡಬಹುದೆಂಬುದನ್ನು ನೋಡಬೇಕು. ಆದರೆ ಯಾವುದೇ ಧಕ್ಕೆ ಬಂದರೂ ಬೇರೊಂದು ಯಾವುದೇ ಷರತ್ತಿಗೆ ನಾವು ಮಣಿಯಬಾರದು. ಇವತ್ತು 21 ಲಕ್ಷ ಎಕರೆಗಳಷ್ಟು ಜಮೀನಿಗೆ ನೀರನ್ನು ಉಪಯೋಗಿಸುವ ಬಗ್ಗೆ ರೈಪೇರಿಯನ್ ರೈಟ್ಸ್ ಇದೆ ಎನ್ನುವ ವಾದದ ಪ್ರಕಾರ ನಾವೇನಾದರೂ ನೀರನ್ನು ಉಪಯೋಗ ಮಾಡಿಕೊಳ್ಳು ತ್ತೇವೆಂದು ಅವರು ಹೇಳಿದರೆ, ಅದಕ್ಕೆ ನಾವು ಎಳ್ಳಷ್ಟೂ ಇವತ್ತು ಪುರಸ್ಕಾರ ಕೊಡುವ ಅವಶ್ಯಕತೆ ಇಲ್ಲವೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇವತ್ತು ಬತ್ತದ ಬೆಳೆ ಯಲ್ಲಾಗಲೀ, ಗೋಧಿ ಬೆಳೆಯಲ್ಲಾಗಲೀ ನೀರನ್ನು ಉಪಯೋಗಮಾಡುವುದರಲ್ಲಿ ಏನಾದರೂ ಬದಲಾವಣೆ ಮಾಡಬೇಕೆಂದೂ, ಮತ್ತು ನೀರನ್ನು ಉಪಯೋಗ ಮಾಡುವಾಗ ಮಿನಿಮೈಜ್ ಮಾಡಬೇಕೆಂದು ಕೇಂದ್ರ ಸರ್ಕಾರದ ಯಾವುದೇ ಒಂದು ಒತ್ತಡಕ್ಕೆ ಯಾರೂ ಮಣಿಯಬಾರದು. ಹಳೆಯ ಮೈಸೂರಿನ 7—8 ಜಿಲ್ಲೆಗಳಲ್ಲಿರುವ ಜನತೆ ಮುಂದಿನ ಭವಿಷ್ಯದಲ್ಲಿ ಉಂಟಾಗುವ ತೀರ್ಮಾನ ಮಾಡಲಿಕ್ಕೆ ಹೋಗಬಾರದೆಂದು ನಾನು ಮುನ್ನೆಚ್ಚರಿಕೆಯನ್ನು ಕೊಡುತ್ತೇನೆ. ನಾವು ಯಾವುದೇ ಪ್ರಾಜೆಕ್ಟ್ ಮಾಡಬೇಕಾದರೂ ಅವರ ಪರವಾನೆ ಬೇಕು. ಹೊಸ ಪ್ರಾಜೆಕ್ಟನ್ನು ಕಟ್ಟಬೇಕಾದರೆ ಮೈಸೂರು ಸರ್ಕಾರದ ಪರವಾನೆ ಬೇಡ. ಆದರೆ 36 ಲಕ್ಷ ಎಕರೆಗೆ ನೀರಾವರಿ

ಆಗುವಂತೆ ಪ್ರಾಜೆಕ್ಟ್ ಮಾಡಬೇಕಾದರೆ ಅವರ ಪರವಾನೆ ಬೇಕೆಂದು ಹೇಳಿದ್ದಾರೆ. ಎಲ್ಲ ವಿವರಗಳನ್ನೂ ಈ ಒಂದು ವರದಿಯಲ್ಲಿ ವಾಲ್ಯೂಂ 3 ಪಾರ್ಟ್ (2)ನಲ್ಲಿ ಕೊಟ್ಟಿದ್ದಾರೆ. ನಾವು ಯಾವ್ಯಾವ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ವಿವರಣೆ ಇದೆ. ಅವರು ಯಾವ ಪ್ರಾಜೆಕ್ಟ್‌ನನ್ನಾದರೂ ಕಟ್ಟಿಕೊಳ್ಳಲಿ, ಎಷ್ಟು ಎಕರೆ ಜಮೀನನ್ನಾದರೂ ಡೆವಲಪ್ ಮಾಡಿ ಕೊಳ್ಳಲಿ, ನಮಗೆ ನ್ಯಾಯವಾಗಿ ಬರಬೇಕಾದ ನೀರು ಬರಲೇಬೇಕು. ಅದಕ್ಕಾಗಿ ನಾವು ಕೋರ್ಟಿಗೆ ಹೋಗುವ ಅವಶ್ಯಕತೆ ಇಲ್ಲ. ಬೇಕಾದರೆ ಟೈಂ ಕೊಡಿ. ನೀರು ತಡೆಯಿರಿ. ಅವರ ಬಗ್ಗೆ ನಾವು ಹೆದರ ಬೇಕಾಗಿಲ್ಲ. ನಿಮ್ಮ ಹಿಂದೆ ಇರುವುದಕ್ಕೆ ನಾವು ಸಿದ್ಧರಿದ್ದೇವೆ. ನೀವು ಇದರ ಬಗ್ಗೆ ಏನೊಂದು ಮುಂಜಾಗ್ರತೆ ವಹಿಸಬೇಕೋ ಅದನ್ನು ಕಾತುರತೆಯಿಂದ ಹಾಗೂ ಆಸಕ್ತಿಯಿಂದ ವಹಿಸಬೇಕು. ನೀರನ್ನು ಎತ್ತಿ ಬೇಸಿನ್‌ಗೆ ತರುತ್ತೇವೆ ಎಂಬುದಾಗಿ ಹೇಳುವುದು ಒಂದು ಕಾರ್ಯಕ್ರಮ ವಾಗುತ್ತದೆ. ಇದು ಪತ್ರಿಕೆಗಳಿಗೆ ಹೋಗುವುದು ಬೇಡವೆಂದು ಹೇಳುತ್ತೇನೆ. ಎಷ್ಟೇ ನೀರು ಬರಲಿ, ನದಿಗಳಿಂದ ಹೋಗುವ ನೀರನ್ನು ಬೇಸಿನ್ನಿಗೆ ಉಪಯೋಗ ಮಾಡುವ ಬಗ್ಗೆ ನಾವು ಈಗಲೇ ಪ್ರಚಾರ ಮಾಡಿಕೊಂಡು ಹೋಗುವುದು ಬೇಡ. ಎಲ್ಲಾ ಸಿದ್ಧತೆಗಳನ್ನು ಮಾಡಿ ಕೊಳ್ಳೋಣ. ಡಿಸ್‌ಪ್ಯೂಟ್ ಮುಗಿದಮೇಲೆ ಆ ಕಾರ್ಯಕ್ರಮವನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅಲ್ಲಿಯವರೆಗೂ ಬಹಳವಾಗಿ ಪ್ರಚಾರಕ್ಕೆ ಅವಕಾಶ ಕೊಡುವುದು ಸೂಕ್ತವಲ್ಲವೆಂದು ನಾನು ಹೇಳುತ್ತೇನೆ. ನಾನು ಈವತ್ತು ಯಾವುದೇ ಒಂದು ಸಂಕುಚಿತ ಮನೋಭಾವನೆಯಿಂದ ಮಾತನಾಡುತ್ತಾ ಇಲ್ಲ. ನೀವು ಅಧಿಕಾರಕ್ಕೆ ಬಂದಮೇಲೆ ಕಾವೇರಿ ನದಿ ಪ್ರಾಜೆಕ್ಟ್‌ಗಳಿಗೆ ಎಷ್ಟು ಹಣವನ್ನು ಒದಗಿಸಿ ಈ ಪ್ರಾಜೆಕ್ಟ್‌ಗಳನ್ನು ಪೂರ್ಣವಾಗಿ ಮಾಡಿದ್ದೀರಿ. ತಾವು ಈ ಆಡಳಿತದಲ್ಲಿ ಅದಕ್ಕೆ ಅವಕಾಶವನ್ನು ಮಾಡಿಕೊಂಡಿದ್ದೀರಿ ಎಂಬುದನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯಪಾಲರ ವಂದನಾನಿರ್ಣಯದ ಮೇಲೆ ಮಾತನಾಡುವಾಗ ಬಹಳ ಉದ್ವೇಗದ ಮೇಲೆ ಮಾತನಾಡಿದೆನೆಂಬುದಾಗಿ ಹೇಳಿದಿರಿ. ಈಗ 1974ರ ಅಗ್ರಿಮೆಂಟ್ ಮುಗಿದುಹೋಗುತ್ತದೆ. ಅಷ್ಟರೊಳಗೆ ಹೇಮಾವತಿ ಅಣೆಕಟ್ಟಿನ ಕೆಲಸ ಪೂರೈಸುವುದು ಸರ್ಕಾರದ ಉದ್ದೇಶವಾಗಿದೆ. ನಿಮ್ಮ ಉದ್ದೇಶವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಏನು ವ್ಯವಹಾರ ಮಾಡಿದ್ದೀರಿ ? ಈ ಬಾಬಿಗೆ ತಾವು ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣ ಸಾಲದು. ನೀವು ಬಂದಮೇಲೆ 10 ವರ್ಷಗಳ ವರೆಗೆ ಈ ರಾಜ್ಯದಲ್ಲಿ ಇರಬೇಕೆಂದು ಟೈಂ ಹಾಕಿದ್ದೀರಿ. ಅದಕ್ಕೋಸ್ಕರವೇ ಈ ಕೆಲಸ ಇನ್ನೂ ನಿಧಾನವಾಗಿ ಹೋಗಲಿ, 10 ವರ್ಷಗಳವರೆಗೆ ಈ ಪಟ್ಟ ಭದ್ರಮಾಡಿಕೊಳ್ಳಬೇಕೆಂದು ಉದ್ದೇಶವೋ ಏನೋ ಗೊತ್ತಿಲ್ಲ. ಏಕೆಂದರೆ ಕಳೆದ ವರ್ಷ ಖರ್ಚುಮಾಡಿರುವ ಹಣ 4 ಕೋಟಿ 33 ಲಕ್ಷ 70 ಸಾವಿರ ರೂಪಾಯಿಗಳು. 1971–72ರಲ್ಲಿ ಖರ್ಚಾಗಿರುವುದು 5 ಕೋಟಿ 23 ಲಕ್ಷ 24 ಸಾವಿರದ 473 ರೂಪಾಯಿಗಳು.

ತಾವು ಅಧಿಕಾರಕ್ಕೆ ಬಂದಮೇಲೆ ಈ ಕಾರ್ಯಗಳೆಲ್ಲಾ ಬಹಳ ವೇಗದಲ್ಲಿ ಮುಂದುವರಿಯುತ್ತಿವೆ ಯೆಂದು ತಾವುಗಳೆಲ್ಲರೂ ಹೇಳಿಕೊಳ್ಳುತ್ತಿರುವುದರಿಂದ ತಾವು ಇವುಗಳಿಗೆ ಎಷ್ಟರಮಟ್ಟಿಗೆ ಹಣವನ್ನು ಒದಗಿಸಿದ್ದಾರೆಂಬುದನ್ನು ನೋಡಿದರೆ ಅದೇ ಗೊತ್ತಾಗುತ್ತದೆ. ಹೋದ ವರ್ಷ ಈ ಬಾಬುಗಳಿಗಾಗಿ 4 ಕೋಟಿ, 21 ಲಕ್ಷ 70 ಸಾವಿರ ಇಟ್ಟಿದ್ದರು. ಈ ವರ್ಷ ಅದಕ್ಕಿಂತ ಕಡಿಮೆ ಹಣವನ್ನು ತೆಗೆದಿಡಲಾಗಿದೆ. ಹೀಗೆ ಇದು ವರ್ಷ ವರ್ಷ ಇಳಿಮುಖನಾಗಿ ಹೋಗುತ್ತಿದೆ. ಮಾನ್ಯ ನಂಜೇಗೌಡರು ಇದೇ ವಿಚಾರದಲ್ಲಿ ಅನೇಕ ಪತ್ರಿಕಾ ಹೇಳಿಕೆಗಳನ್ನು ಬೇರೆ ಹೊರಡಿಸಿದ್ದಾರೆ ಒಂದು ಹೇಳಿಕೆಯಲ್ಲಿ ಛಾನಲ್ಲುಗಳನ್ನು ತೆಗೆಯುವುದಕ್ಕೆ ಮತ್ತು ಫೀಡರ್‌ನಾಲೆಗಳನ್ನು ತೆಗೆಯುವುದಕ್ಕೆ ಅವಕಾಶ ಮಾಡಿದ್ದೇವೆಂದು ಹೇಳಿಕೊಂಡಿದ್ದಾರೆ. ಐ ಹ್ಯಾವ್ ಆರ್ಡರ್ಡ್ ಆಲ್ ದೀಸ್... ಎಂದರೇನು ಅರ್ಥ ? ಆದುದರಿಂದ ಅವರು ಈ ದಿವಸ ಯಾವ ಯಾವ ನಾಲೆಗಳ ಕೆಲಸ ಮುಗಿದಿದೆ, ಯಾವ ಫೀಡರ್ ಛಾನಲ್ ಕೆಲಸ ಮುಗಿದಿದೆ ಎಂಬುದನ್ನು ತಿಳಿಸುತ್ತಾರೆಂದು ನಂಬಿದ್ದೇನೆ.

ಶ್ರೀ ಎಚ್. ಎನ್. ನಂಜೇಗೌಡ :– ಎಲ್ಲೆಲ್ಲಿ ಮೇನ್ ನಾಲೆಗಳ ಕೆಲಸ ನಡೆಯುತ್ತಿದೆಯೋ ಅಲ್ಲಿ ಈ ಡಿಸ್ಟ್ರಿಬ್ಯೂಟರಿನ ಕೆಲಸವನ್ನೂ ಕೊಳ್ಳಬಹುದೆಂದು ನಾನು ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ :—ನಾವು 'ಆರ್ಡರ್' ಕೊಟ್ಟಿದ್ದೇವೆಂದರೆ ಏನು ಅರ್ಥ ? ಆದರೆ ನಾವು ಈ ಹೇಮಾವತಿ ಕೆಲಸದ ಬಗ್ಗೆ ನಿರೀಕ್ಷಿಸಿದ್ದ ಮಟ್ಟದಲ್ಲಿ ಕೆಲಸಕಾರ್ಯಗಳು ನಡೆದಿಲ್ಲ. ಅದಕ್ಕೆ ಸಾಕ್ಷಿ ನೀವು ಒದಗಿಸಿರತಕ್ಕ ಹಣವೇ ಸಾಕು. ಆದರೆ ಈ ಕೆಲಸಗಳೆಲ್ಲಾ ಮುಗಿಯುವ ವೇಳೆಗೆ ಇದರ ವೆಚ್ಚ ಅಂದಾಜು 100 ಕೋಟಿಗೆ ಮುಟ್ಟಿದರೂ ಮುಟ್ಟಬಹುದು. ಆದರೆ ಇದೆ ವಿಚಾರದಲ್ಲಿ ಮಾನ್ಯ ನಂಜೇಗೌಡರೂ ಮತ್ತು ಮುಖ್ಯ ಮಂತ್ರಿಗಳು ಇನ್ನೇನು ವರ್ಷ ಎರಡು ವರ್ಷಗಳಲ್ಲಿ ಈ ಪ್ರಾಜೆಕ್ಟ್ ಪೂರ್ಣವಾಗುತ್ತದೆನೋ ಎನ್ನುವಂತೆ ಈ ಸಭೆಯಲ್ಲಿ ಇವರು ಹಿಂದೆ ಭಾಷಣಗಳನ್ನು ಬಿಗಿದಿದ್ದೇ ಬಿಗಿದಿದ್ದು. ಹಾಗೆ ಕೊಚ್ಚಿಕೊಂಡಿದ್ದಕ್ಕೆ ಸಾಕ್ಷಿಯಾಗಿ ಏನು ಕೆಲಸ ಮಾಡಿದ್ದಾರೆಂಬುದನ್ನು ಅಂಕಿಅಂಶಗಳ ಸಹಿತ ಇವರು ಹೇಳಬೇಕು. ಸಾಲದ್ದಕ್ಕೆ ಶ್ರೀ ಹುಚ್ಚಮಾಸ್ತಿಗೌಡರು ಅವರು ಬೇರೆ ಗುಬ್ಬಿಯಲ್ಲಿ ಹೇಮಾವತಿ ನೀರನ್ನು ಅಲ್ಲಿಗೆ ತಂದು ಬಿಡುವುದಾಗಿ ಅವರು ಅಲ್ಲಿ ಭಾಷಣ ಬಿಗಿಯುವುದು. ಇಷ್ಟೆಲ್ಲಾ ಹೇಳುತ್ತಾರೆ—ಭಾಷಣಗಳನ್ನು ಮಾಡುತ್ತಿದ್ದಾರೆ. ಆದರೆ ಆ ಕಬಿನೀ ಪ್ರಾಜೆಕ್ಟಿನ ವಿಚಾರ ಏನಾಗಿದೆ ? ಯಾಕೆ ಯಾರೂ ಏನೂ ಹೇಳುತ್ತಿಲ್ಲ ? ಇವರೆಲ್ಲಾ ಇಷ್ಟು ಭಾಷಣಗಳನ್ನು ಬಿಗಿದರೂ 1971—72ಕ್ಕೆ ಇವುಗಳಿಗೆ ಒದಗಿಸಿದ್ದ ಹಣ 4 ಕೋಟಿ 4 ಲಕ್ಷ 57 ಸಾವಿರ ರೂಪಾಯಿ ಮಾತ್ರ. ಈ ಸಾಲಿಗೆ 3 ಕೋಟಿ 99 ಲಕ್ಷ ರೂಪಾಯಿ ಮಾತ್ರ. ಆದರೆ ಹಾಸನ ಜಿಲ್ಲೆಯಲ್ಲಿ ಜನರು ಮಾನ್ಯ ನಂಜೇಗೌಡರ ಕಡೆಯಿಂದ ಬಹಳ ಅಪೇಕ್ಷೆ ಮಾಡುತ್ತಿದ್ದರು ಆದರೆ ಮಾನ್ಯ ಸಿದ್ಧವೀರಪ್ಪನವರು ಮಾನ್ಯ ಬದ್ರಿನಾರಾಯಣರವರು ಮತ್ತು ಮಾನ್ಯ ಕೆ. ಹೆಚ್. ಪಾಟೀಲ್‌ರವರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಒಂದೊಂದು ಯೂನಿವರ್ಸಿಟಿಯನ್ನು ಮಾಡಿಕೊಳ್ಳುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಹಾಸನದ ಜನರು ತಮ್ಮ ವತಿಯಿಂದ ನೀರಾವರಿ ಯೋಜನೆಗಳ ಬಗ್ಗೆ ಅಂದರೆ ಆ ಕೋಟೆ (ಓಟೆ) ಹೊಳೆ ಮತ್ತು ಯಗಚೀ ಹೊಳೆ ಪ್ರಾಜೆಕ್ಟ್‌ಗಳ ಬಗ್ಗೆ ಬಹಳಮಟ್ಟಿಗೆ ಅಪೇಕ್ಷೆ ಮಾಡಿಕೊಂಡಿದ್ದರು. ಆದರೆ ಇವುಗಳಲ್ಲದೆ ಇನ್ನೂ ಅನೇಕ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಅಲ್ಲಿ ಕೈಗೊಳ್ಳುವುದಾಗಿ ಮಾನ್ಯ ನಂಜೇಗೌಡರೂ ಕೂಡ ಅನೇಕ ಸಣ್ಣ ಸಣ್ಣ ಪತ್ರಿಕೆಗಳನ್ನೇ ಅದರ ಬಗ್ಗೆ ಹೊರಡಿಸಿದರು. ಚುನಾವಣೆಗಳು ಬಂದಾಗ ಇವರು ಜನರ ಮುಂದೆ ಮನಸ್ಸಿಗೆಲ್ಲಾ ಬಂದಹಾಗೆ ಹೇಳುತ್ತಿದ್ದಾರೆ. ಮೊನ್ನೆತಾನೆ ಇದೇ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರವನ್ನು ಕೊಡುತ್ತ ಈ ಪ್ರಾಜೆಕ್ಟ್‌ಗಳ ಕೆಲಸಕ್ಕೆ ಎಷ್ಟು ಹಣ ಬೇಕಾದರೂ ಒದಗಿಸುತ್ತೇವೆಂದು ಇದೇ ಸಭೆಯಲ್ಲಿ ಉತ್ತರ ಕೊಟ್ಟಿದ್ದಾರೆ. ಆದಾಗ್ಗೂ ಈ ದಿವಸ ಈ ಕೆಲಸ ಕಾರ್ಯಗಳು ನಿರೀಕ್ಷಿಸಿದ್ದ ಮಟ್ಟದಲ್ಲಿ ನಡೆಯದೆ ಇರುವಾಗ ಇದರಲ್ಲಿ ರಾಜಕೀಯವನ್ನು ನಡೆಸತಕ್ಕವರು ಯಾರು ? ನೀವೇ ಹೇಳಿ ? ಇನ್ನು ಆ ಕನಕಪುರ ತಾಲ್ಲೂಕಿನಲ್ಲಿಯೂ ಆರೋಬೆಲೆ ಪ್ರಾಜೆಕ್ಟ್ ಇದ್ದು. ಕಾವೇರಿ ಬೆಸಿನ್ನಿಗೇ ಸೇರುತ್ತದೆ. ಅದನ್ನು ಮಂಜೂರು ಮಾಡುವುದಾಗಿ ಹೇಳಿದ್ದವರು ಏತಕ್ಕೆ ಇನ್ನೂ ಮಾಡಲಿಲ್ಲ ? ಈಗಲಾದರೂ ಇದನ್ನು ಬೇಗ ಮಾಡಬೇಕೆಂದು ಹೇಳುತ್ತೇನೆ. ನೀವು ಬಾಯಲ್ಲಿ ಹೇಳಿದರೆ ಸಾಲದು; ಕಾರ್ಯದಲ್ಲಿ ಮಾಡಿ ತೋರಿಸಬೇಕೆಂದು ಕೇಳುತ್ತಿದ್ದೇವೆ ಆ ಓಟೆ ಹೊಳೆ ಮತ್ತು ಯಗಚೀ ಹೊಳೆ ಪ್ರಾಜೆಕ್ಟ್‌ಗಳನ್ನು ಬೇಗ ಕಾರ್ಯರೂಪಕ್ಕೆ ಬರುವಂತೆ ಮಾಡಬೇಕೆಂದು ಹೇಳುತ್ತೇನೆ.

ನಾನು ಇನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಈ ರಾಜ್ಯದ ನಾಯಕತ್ವ ಯಾರೊಬ್ಬರಿಗೂ ಕಟ್ಟಿಟ್ಟಿದ್ದಲ್ಲ. ಆದರೆ ತಾವು ಒಳ್ಳೆಯ ಕೆಲಸ ಮಾಡಿ. ನಾನು ವಾಸ್ತವಾಂಶಗಳನ್ನು ಹೇಳುತ್ತಿದ್ದೇನೆ. ಇನ್ನು ಹಿಂದಿನ ಸರ್ಕಾರಗಳು ಮಾಡಿರತಕ್ಕ ಕೆಲಸಗಳನ್ನು ಅದರಲ್ಲೂ ಅವರು ಮಾಡಿರತಕ್ಕ ಒಳ್ಳೇ ಕೆಲಸಗಳನ್ನು ಇನ್ನಾದರೂ ಆಡಳಿತ

ಪಕ್ಷದವರು ಹಳಿಯುವುದು ಬೇಡ. ನೀವು ಈ ದಿವಸ-ಆ ಹಿಪ್ಪರಗಿಯ ಕೆಲಸ ತೆಗೆದುಕೊಂಡು ಒಂದು ಒಳ್ಳೇ ಕಾರ್ಯವನ್ನು ಮಾಡಿದ್ದೀರಿ. ನಾವು ಇನ್ನು ಮುಂದಕ್ಕೆ ಇಂಥ ಒಂದು ಒಳ್ಳೆಯ ಸತ್ಸಂಪ್ರದಾಯವನ್ನು ಬೆಳೆಸಿಕೊಂಡು ಹೋಗೋಣ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಯಾರೇ ಆಗಲಿ ಒಬ್ಬರನ್ನೊಬ್ಬರು ಹಳಿಯುವುದು ಬೇಡ. ಇದು ಯಾರಿಗೂ ತರವಾದ್ದಲ್ಲ ಆದರೆ ಈ ಅಧಿಕಾರಿಗಳಲ್ಲಿ ಬಹಳ ದಿನಗಳಿಂದಲೂ ಒಂದು ಜಾಡ್ಯ ಬೆಳೆದು ಬಂದಿದೆ. ......

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು) :—ಮಾನ್ಯ ವಿರೋಧಪಕ್ಷದ ನಾಯಕರು ಹೇಳುವುದನ್ನು ನಾನೂ ಒಪ್ಪುತ್ತೇನೆ : ಆದರೆ ನನ್ನಲ್ಲಿ ಒಂದು ವರ್ಷದ ಹಿಂದಿನ ಪೇಪರ್ ಕಟ್ಟಿಂಗುಗಳೆಲ್ಲಾ ಇವೆ. ಅವುಗಳನ್ನು ಇಲ್ಲಿ ಓದಿಕೊಂಡು ಈ ಸಭೆಯ ಕಾಲವನ್ನು ಹರಣಮಾಡುವುದು ಬೇಡ. ಅವರ ಪಕ್ಷದವರು 'ನಾವು ಇದ್ದಾಗ ಎಲ್ಲಾ ಬಹಳ ಚೆನ್ನಾಗಿತ್ತು, ಈ ಪಕ್ಷದವರು ಬಂದಮೇಲೆ ಎಲ್ಲಾ ಹಾಳಾಯಿತು' ಎಂದು ಅವರು ಭಾಷಣ ಮಾಡುತ್ತಿದ್ದಾಗ ನಮ್ಮ ಪಕ್ಷದವರು ನಾವು ಹೇಗೆ ಸುಮ್ಮನೆ ಅದನ್ನು ಕೇಳಿಕೊಂಡು ಇರುವುದು. ಅವರು ಕೆಣಕಿದರೆ ನಾವು ಕೆಣಕುತ್ತೇವೆ. ಇದು ಸ್ವಾಭಾವಿಕವಾದದ್ದು. ಅವರ ಪಕ್ಷದ ನಾಯಕರು ಎಷ್ಟು ದಿನಗಳ ವರೆಗೆ ಈ ನೆಲ ಜಲಗಳ ಬಗ್ಗೆ ಭಾಷಣಗಳನ್ನು ಮಾಡಿದ್ದಾರೆ ಅವರೇ ನೋಡಲಿ.

ಶ್ರೀ ಹೆಚ್.ಡಿ. ದೇವೇಗೌಡ :—ತಪ್ಪನ್ನು ಯಾರೇ ಮಾಡಲಿ ಅದು ತಪ್ಪೇ. ಈಗ ಆಡಳಿತ ಪಕ್ಷದವರೇನು ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿದ್ದಾರೆ ಅವುಗಳ ವಿಚಾರದಲ್ಲಿ ಇಲ್ಲಿಯವರೆಗೂ ಯಾರೂ ಶಾಸನ ಸಭೆಗಳಲ್ಲೇ ಆಗಲೀ ಅಥವಾ ಹೊರಗಡೆಯಲ್ಲೇ ಆಗಲಿ ಯಾವ ಟೀಕೆಗಳನ್ನು ಮಾಡಿಲ್ಲ. ಆದರೆ ಆ ಕ್ಷಾಮದ ವಿಚಾರದಲ್ಲಿ ಟೀಕೆಗಳಿವೆ. ಆದರೆ ಪಾರ್ಲ್ಯಮೆಂಟಿನ ಸದಸ್ಯರಾದ ಶ್ರೀ ಕೊಲ್ಲೂರು ಮಲ್ಲಪ್ಪನವರು ಆ ಅಪ್ಪರ್ ಕೃಷ್ಣ ಬಗ್ಗೆ ಏನು ಹೇಳಿದ್ದಾರೆಂಬ ಬಗ್ಗೆ ನನ್ನಲ್ಲಿ ಅವರು ಪ್ರಿಂಟ್ ಮಾಡಿಸಿದ ಒಂದು ಪುಸ್ತಕವೇ ಇದೆ. ಆ ಅಪ್ಪರ್ ಕೃಷ್ಣ, ಮಲಪ್ರಭಾ, ಘಟಪ್ರಭಾ ಮತ್ತು ಹಾರಂಗಿ, ಹೇಮಾವತಿ ಮತ್ತು ಕಪಿನಿ ಈ ಪ್ರಾಜೆಕ್ಟ್‌ಗಳ ಬಗ್ಗೆ ......ನಿನ್ನೆಯ ದಿವಸ ಒಂದು ಗಂಟೆ 40 ನಿಮಿಷಗಳಕಾಲ ಮಾತನಾಡಿ ಎಲ್ಲಾ ವಿವರಗಳನ್ನೂ ಕೊಟ್ಟಿದ್ದೇನೆ. ಒಂದುವೇಳೆ ರಾಜಕಾರಣದಿಂದ ತಾಂತ್ರಿಕವಾದ ವಿಚಾರದಲ್ಲಾಗಲೀ ಬೇರೆ ಟೆಕ್ನಿಕಲ್ ವಿಚಾರದಲ್ಲಾಗಲಿ ತಮ್ಮ ಸ್ವಾರ್ಥಕ್ಕಾಗಿ ಸಂಪೂರ್ಣವಾಗಿ ಬದಲಾಯಿಸಿದ್ದರೆ ಆ ದಿವಸ ಇಂಥಾದ್ದು ಮಾಡಿದ್ದಾರೆ ಇದಕ್ಕೆ ಅವರು ಜವಾಬ್ದಾರರು ಎಂದು ಹೇಳಬಹುದು. ಅದನ್ನು ಒಪ್ಪುತ್ತೇನೆ. ಜನರಿಗೆ ದ್ರೋಹಮಾಡುವ ಕೆಲಸ ಯಾರು ಮಾಡಿದ್ದರೂ ಸ್ಪೇರ್ ಮಾಡಬೇಕಾಗಿಲ್ಲ ಎಂದು ಹೇಳಿದೆ. ಆದರೆ ಮಾಡಿದಂಥ ಕೆಲಸಗಳ ಬಗ್ಗೆ ರಾಜಕಾರಣಗಳು ಹೊರಗೆ ಮಾತನಾಡುವುದು ಬೇರೆ. ಇಂಥ ಕೆಲಸವಾಗಿದೆ ಎಂದು ಹೇಳೋಣ. ಹಿಪ್ಪರಗಿ ಬ್ಯಾರೇಜ್ ಮಾಡಿರುವುದು ಒಳ್ಳೆಯದು, ಅದನ್ನು ಒಪ್ಪುತ್ತೇನೆ. ಹಿಂದೆ ಮಾಡಿರುವುದನ್ನು ಟೀಕೆ ಮಾಡುವುದು ಸತ್ಸಂಪ್ರದಾಯವಲ್ಲ, ಸತ್ಸಂಪ್ರದಾಯ ಬೆಳೆಸಬೇಕು.

ಕೊನೆಯದಾಗಿ ಕಾವೇರಿ ಬೇಸಿನ್ ಬಗ್ಗೆ ಎಚ್ಚರಿಕೆ ಕೊಡುತ್ತಿದ್ದೇನೆ. ಇದು ಕಾಷನ್ ಎಂದು ಇಟ್ಟುಕೊಳ್ಳಿ. ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಕೊಟ್ಟಿರುವ ಅಂಕಿಅಂಶಗಳ ಆಧಾರದ ಮೇಲೆ ಇಂದಿರಾಗಾಂಧಿಯವರು ಹೇಳುವುದಕ್ಕೆ ಬದ್ಧರಾಗುವುದಾದರೆ ನೀವು ಎಕ್ಸಪ್ಲನೇಷನ್ ಕೊಡಬೇಕಾಗುತ್ತದೆ. ರಾಜ್ಯದ ಹಿತವನ್ನು ಕಡೆಗಣಿಸಿ ಅವರ ಕೃಪೆಗೆ ಪಾತ್ರರಾಗಬೇಕಾಗಿಲ್ಲ. ರಾಜ್ಯದ ಹಿತರಕ್ಷಣೆಯಾಗಬೇಕು. ಕಾವೇರಿ ಬೇಸಿನನ ಎಲ್ಲಾ ಪ್ರಾಜೆಕ್ಟುಗಳನ್ನೂ ಮುಗಿಸಲು ಕೇಂದ್ರ ಸರಕಾರದಿಂದ ಸಾಕಾದಷ್ಟು ಹಣ ಪಡೆಯಲು ಒತ್ತಾಯಮಾಡಬೇಕು. ಖಾಯಂ ಆಗಿ ಕೇಂದ್ರ ಹಣ ಕೊಡುವಂತೆ ಕೇಂದ್ರದ ಮೇಲೆ ಒತ್ತಾಯಮಾಡಬೇಕು. ಕಳೆದ 25 ವರ್ಷಗಳಿಂದ ನಾಲ್ಕು ಪಂಚವಾರ್ಷಿಕ ಯೋಜನೆಗಳಾದವು, ಇಲ್ಲಿಯವರೆಗೆ ಅವುಗಳಲ್ಲಿ ನಮ್ಮ ರಾಜ್ಯಕ್ಕೆಷ್ಟು

ಹಣ ಕೊಟ್ಟಿದ್ದಾರೆ ಎಂದು ನಿನ್ನೆ ನಾನು ಹೇಳಿದ್ದೇನೆ. ಈ ದಿವಸ ನಮಗೆ ಬರಬೇಕಾಗಿರುವ ವಿಶೇಷ ಸೌಲತ್ತನ್ನು ಕೇಂದ್ರ ಸರಕಾರ ಕೊಡಬೇಕು. ಬೇರೆ ರಾಜ್ಯಗಳ ಜೊತೆಗೆ ಸರಿಸಮಾನವಾಗಿ ನಾವು ಬಾಳಬೇಡವೇ ? ಈ ದಿವಸ ಉತ್ತರದಲ್ಲಿರುವ ರಾಜ್ಯಗಳು ಕೇಂದ್ರದವರ ಕೃಪಾಕಟಾಕ್ಷದಲ್ಲಿವೆ, ಅವಕ್ಕೆ ಹೆಚ್ಚು ಸಹಾಯ ನೀಡಿದ್ದಾರೆ ಮೈಸೂರಿಗೂ ಕೇಂದ್ರ ಸರಕಾರ ಅದೇ ಮಟ್ಟದಲ್ಲಿ ಸಹಾಯ ಮಾಡಲೇಬೇಕು. ಇದರ ಬಗ್ಗೆ ಒತ್ತಾಯಮಾಡುವಂತೆ ಪಾರ್ಲಿಮೆಂಟ್ ಸದಸ್ಯರಿಗೂ ಹೇಳಬೇಕು ? ಇಂಥ ಮುಖ್ಯವಾದ ಪ್ರಶ್ನೆ ಬಂದಾಗ ಹಿಂದುಮುಂದೆ ನೋಡಬಾರದು. ಇಂದು 27 ಜನ ಲೋಕಸಭಾ ಸದಸ್ಯರಿರುವಾಗ ಅವರು ರಾಜ್ಯದ ಹಿತದೃಷ್ಟಿಯಿಂದ ಕೆಲಸಮಾಡಬೇಕು. ಎಲ್ಲರೂ ಒಂದೇ ಧ್ವನಿಯಿಂದ ಡಿಮ್ಯಾಂಡ್ ಮಾಡಬೇಕು. ಕಳೆದ 25 ವರ್ಷದಿಂದ ನೋಡಿದಂತೆ ಕೇಂದ್ರ ಸರಕಾರ ನಮಗೆ ವಿಶೇಷವಾಗಿ ಸಹಾಯವನ್ನೇನೂ ಮಾಡಿಲ್ಲ. ಈ ವಿಚಾರದಲ್ಲಿ ನಾವು ಸಂಪೂರ್ಣ ಬೆಂಬಲ ಕೊಡುತ್ತೇವೆ. ರಾಜ್ಯದ ಹಿತರಕ್ಷಣೆಗಾಗಿ ಶಕ್ತಿಯುತವಾದ ಹೋರಾಟಮಾಡಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಸತ್ಯನಾರಾಯಣಸಿಂಗ್ (ಹೊಸಪೇಟೆ) :—ಮಾನ್ಯ ಅಧ್ಯಕ್ಷಣಿಯವರೇ ಇಂದು ಸಭೆಯ ಮುಂದಿರುವ ಬೇಡಿಕೆಗಳಿಗೆ ಸಂಪೂರ್ಣ ಬೆಂಬಲ ಕೊಡುತ್ತಾ ಬೃಹತ್ ನೀರಾವರಿ. ತುಂಗಭದ್ರ ಮಂಡಲಿ ಮತ್ತು ತುಂಗಭದ್ರ ಅಯಕಟ್ಟು ಇವುಗಳಿಗೆ ಸಂಬಂಧಪಟ್ಟ ಹಾಗೆ ಕೆಲವು ವಿಷಯಗಳನ್ನು ಗಮನಕ್ಕೆ ತರುತ್ತೇನೆ. ಕನ್ನಡಿಗರಿಗೆ ದಿನೇ ದಿನೇ ಹೆಚ್ಚು ಅನ್ಯಾಯವಾಗುತ್ತಿರುವ ಕಾರಣ ತುಂಗಭದ್ರ ಮಂಡಲಿಯನ್ನು ಮೊದಲು ರದ್ದುಮಾಡಲು ಯೋಗ್ಯ ಕ್ರಮ ತೆಗೆದು ಕೊಳ್ಳುವುದು ಅವಶ್ಯಕವಾಗಿದೆ. ಈ ಮಂಡಲಿಯನ್ನು ರದ್ದು ಮಾಡಲು ಕೃಷ್ಣ ನೀರಿನ ವಿವಾದವಿದೆ ಎಂದು ಕೇಂದ್ರ ಸರಕಾರದ ನೀರಾವರಿ ಮಂತ್ರಿಗಳು ಹೇಳುತ್ತಿದ್ದಾರೆ.

ಇದನ್ನು ಕೇವಲ ಆಂಧ್ರದ ದೃಷ್ಟಿಯಿಂದ ಹೇಳುತ್ತಿದ್ದಾರೆ. ಈ ಮಂಡಲಿಯು ವಿಶಿಷ್ಟ ಕಾರಣಗಳಿಗಾಗಿ 1953 ರಲ್ಲಿ ನೇಮಕವಾಗಿದೆ, ಇದರ ಉದ್ದೇಶ ಈಡೇರಿ ಕೇವಲ ಮೈಂಟನೆನ್ಸ್ ಕೆಲಸ ಮಾತ್ರವಿರುವುದರಿಂದ, ಮೇಲ್ವಿಚಾರಣೆಯ ಕೆಲಸ ಮಾತ್ರ ಈಗಿರುದರಿಂದ ಇದನ್ನು ಮುಂದುವರಿಸುವುದು ಸಮಂಜಸವಲ್ಲ. ಕೂಡಲೆ ಇದನ್ನು ರದ್ದುಮಾಡಲು ಸರಕಾರ ಹೆಚ್ಚು ಪ್ರಯತ್ನಮಾಡಬೇಕು. ಈ ಮಂಡಲಿ ರದ್ದಾದಮೇಲೆ ಈ ಆಯಕಟ್ಟಿನ ಮೇಲೆ ತುಂಗಭದ್ರ ಅಣೆಕಟ್ಟಿನ ಆಡಳಿತ ನಡಿಸಲು ಸಂಪೂರ್ಣ ಹೊಣೆ ರಾಜ್ಯಸರಕಾರಕ್ಕೆ ವಹಿಸಬೇಕಾದ್ದು ಅತ್ಯಾವಶ್ಯಕ. ಇದಕ್ಕೆ ಕಾರಣ ಇಷ್ಟೆ. ಮೊದಲನೆಯದಾಗಿ ನೀರಿನ ಹಂಚಿಕೆಯ ಬಗ್ಗೆ ವರ್ಕಿಂಗ್ ಟೇಬಲ್ಸ್ ಮಾಡಬೇಕಾಗಿದೆ. ತುಂಗಭದ್ರ ಜಲಾಶಯಕ್ಕೆ ಇನ್‌ಫ್ಲೋ, ನೀರಿನ ಮಟ್ಟ ಮುಂತಾದವುಗಳ ಬಗ್ಗೆ ಅಂಕಿ ಅಂಶ ಶೇಖರಿಸಲು ರಾಜ್ಯ ಸರಕಾರದ ಮತ್ತು ಆಂಧ್ರದ ಪ್ರತಿನಿಧಿಗಳು ಇದ್ದು ಅದನ್ನು ಗಮನಿಸಬಹುದು ಅನಂತರ ಎರಡೂ ಸರಕಾರದ ಪ್ರತಿನಿಧಿಗಳು ಕೊಡುವ ಅಂಕಿ ಅಂಶಗಳ ಮೇಲೆ ವರ್ಕಿಂಗ್ ಟೇಬಲ್ಸ್ ರಾಜ್ಯ ಸರಕಾರದ ಚೀಫ್ ಇಂಜನಿಯರು ಆಂಧ್ರದ ಚೀಫ್ ಇಂಜನಿಯರು ಮತ್ತು ಕೇಂದ್ರದ ಪ್ರತಿನಿಧಿಗಳು ಮಾಡಿ ಅದನ್ನು ಕಾರ್ಯಗತ ಮಾಡುವುದನ್ನು ರಾಜ್ಯ ಸರಕಾರಕ್ಕೆ ಪೂರ್ಣವಾಗಿ ವಹಿಸಬೇಕು. ಈ ವ್ಯವಹಾರ ಸರಿಯಾಗಿ ಕಾರ್ಯಗತವಾಗುತ್ತಾ ಇದೆಯೋ ಎಂದು ನೋಡಲು ನೀರಿನ ಗೇಜ್ ಮಾಡಿ ಪರಿಶೀಲಿಸಲು ಸಾಧ್ಯವಿದೆ. ರಾಜ್ಯಸರಕಾರಕ್ಕೆ ಹೀಗೆ ಮಾಡಿದರೆ ಅನುಕೂಲವೆಂಬುದು ಗೊತ್ತಿದೆ.

ಎರಡನೆಯದಾಗಿ 1948ರಲ್ಲಿ ತಯಾರಾದ ತುಂಗಭದ್ರ ಯೋಜನೆಯಲ್ಲಿ ನೀರು ಮತ್ತು ವಿದ್ಯುಚ್ಛಕ್ತಿ ಅನುಕೂಲ ಪಡೆಯಬೇಕು ಎಂದು ಗೊತ್ತುಮಾಡಿದರು. ಕನ್ನಡಿಗರಿಗೆ ಇದರಲ್ಲಿ ಅನ್ಯಾಯವಾಗಿದೆ. ಕಾರಣ 48ರಲ್ಲಿ ಬಳ್ಳಾರಿಯು ಮದ್ರಾಸಿನ ಭಾಗವಾಗಿತ್ತು. ಅಲ್ಲಿ ರಾಜ್ಯದ ಪ್ರತಿನಿಧಿಯಿಲ್ಲದೆ ನಮಗೆ ಹಂಚಿಕೆಯಲ್ಲಿ ಅನ್ಯಾಯವಾಗಿದ್ದೆ. ಈಗ ನಾವು ವಿಮರ್ಶೆ

ಮಾಡಿ ನೋಡಬೇಕಾಗಿದೆ. ಆದುದರಿಂದ ರಾಜ್ಯ ಸರಕಾರ ಕೇಂದ್ರ ಸರಕಾರದೊಡನೆ ಸಂಪರ್ಕ ಬೆಳಸಿ ಈ ಬಗ್ಗೆ ಪುನರ್ವಿಮರ್ಶೆ ಮಾಡಬೇಕೆಂದು ಒತ್ತಾಯಮಾಡಬೇಕು. ಉದಾಹರಣೆಗೆ ಈ ದಿವಸ ಮುನ್ನೂರು ಮೈಲಿ ಆಚೆಗೆ ಇರುವ ಪ್ರದೇಶಕ್ಕೆ ಆಂಧ್ರದವರು ನೀರನ್ನು ತೆಗೆದುಕೊಳ್ಳುತ್ತಿದ್ದಾರೆ. ಇಲ್ಲಿನ ಬೇಕಾದಷ್ಟು ಭೂಮಿಗೆ ನೀರೇ ಇಲ್ಲದಿರುವಾಗ 300 ಮೈಲಿ ದೂರಕ್ಕೆ ನೀರನ್ನೊದಗಿಸುವುದು ಅನ್ಯಾಯ. ಅಲ್ಲದೆ ಈ ಯೋಜನೆಯಲ್ಲಿ ಮೂಲಭೂತವಾಗಿ ಮದ್ರಾಸಿನ ಇಂಜಿನಿಯರುಗಳು ಗೊತ್ತುಮಾಡಿದ ಮೂರು ಅಂಶಗಳ ಬಗ್ಗೆ ಉಲ್ಲಂಘನೆಯಾಗಿದೆ. ಮೊದಲನೆಯದು ತುಂಗಭದ್ರ ಆಯಕಟ್ಟಿನಿಂದ ಚಿಕ್ಕಹಗರಿ ದಾಟಿ ನೀರು ಹೋಗಬಾರದು ಎಂದಿತ್ತು. ಎರಡನೆಯದು ಹೈಲೆವಲ್‌ಕೆನಾಲ್ ಯಾವ ದೃಷ್ಟಿಯಿಂದಲೂ ಆಗಬಾರದು ಎಂದು ಚೀಫ್ ಎಂಜಿನಿಯರಾದ ತಿರುಮಲಯಂಗಾರರವರು ಹೇಳಿದ್ದರು ; ಮೂರನೆಯದು ವಿದ್ಯುಚ್ಛಕ್ತಿ ಉತ್ಪತ್ತಿಮಾಡಲು ಹೆಚ್ಚು ಪ್ರಾಶಸ್ತ್ಯ ಕೊಡಬಾರದು. ನೀರಾವರಿಗೆ ಪ್ರಾಶಸ್ತ್ಯ ಕೊಡಬೇಕು ಎಂದು ತಿಳಿಸಿದ್ದರು. ಇವುಗಳ ಉಲ್ಲಂಘನೆಯಾಗಿದೆ. ಆದುದರಿಂದ ನೀರಾವರಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂಬುದು ಯೋಜನೆಯ ಮುಖ್ಯ ಉದ್ದೇಶವಾಗಿತ್ತು. ಆದರೆ ಅನಂತರ ಭಾಷಾವಾರು ಪ್ರಾಂತ ಆಗಿ ಆಂಧ್ರ ಸರಕಾರವಾದ ಮೇಲೆ ಅಲ್ಲಿನ ಪ್ರತಿನಿಧಿಗಳು ಗೊತ್ತುಮಾಡಿದ ಅಂಶಗಳ ಉಲ್ಲಂಘನೆ ಮಾಡಿದ್ದಾರೆ. ಈ ಒಂದು ದಿಶೆಯಿಂದ ನೀರು ಮತ್ತು ವಿದ್ಯುಚ್ಛಕ್ತಿ ಹಂಚಿಕೆ ವಿಷಯವನ್ನು ಪುನವಿಮರ್ಶೆಮಾಡಬೇಕು, ಇದು ಅವಶ್ಯಕವಾಗಿದೆ. ತುಂಗಭದ್ರ ಬೋರ್ಡಿನಲ್ಲಿ ನಮ್ಮ ರಾಜ್ಯದಿಂದ ಪೂರ್ಣ ಅವಧಿಗೆ ಒಬ್ಬ ಚೀಫ್ ಇಂಜನಿಯರನು ನೇಮಕ ಮಾಡಬೇಕಾದ್ದು ಬಹಳ ಆವಶ್ಯಕ. ಇದನ್ನು ಅನೇಕ ಸಲ ಈ ಸಭೆಯಲ್ಲಿ ಪ್ರಸ್ತಾಪಮಾಡಿದ್ದೇನೆ. ಆದರೂ ರಾಜ್ಯಸರಕಾರ ಕ್ರಮ ತೆಗೆದುಕೊಂಡಿಲ್ಲ.

ಉದಾಹರಣೆಗೆ ಹೇಳುವುದಾದರೆ, ಒಂದು ಸಂದರ್ಭದಲ್ಲಿ ನೀರು ಕೊಡುವಾಗ ಆಂಧ್ರದ ಚೀಫ್ ಇಂಜಿನಿಯರ್ ಅವರು ಮೈಸೂರಿನ ಚೀಫ್ ಇಂಜನಿಯರ್ ಅವರ ಆಜ್ಞೆಯನ್ನು ಉಲ್ಲಂಘಿಸಿದರು. ಕಾನಪೂರ ಉಪಕಾಲುವೆಯ ನೀರನ್ನು ನಿಲ್ಲಿಸಿ 5 ಸಾವಿರ ಎಕರೆ ಭೂಮಿಗೆ ಹಾನಿ ಮಾಡಿದ್ದಾರೆ. ಈ ದೃಷ್ಟಿಯಿಂದ ನಮ್ಮ ರಾಜ್ಯದ ಚೀಫ್ ಇಂಜಿನಿಯರ್ ತುಂಗಭದ್ರ ಬೋರ್ಡಿನಲ್ಲಿ ಎಲ್ಲಿಯವರೆಗೆ ಇರುವುದಿಲ್ಲ ಅಲ್ಲಿಯವರೆಗೆ ನಮ್ಮ ರಾಜ್ಯಕ್ಕೆ ಅದರ ಹಿಡಿತ ಸಿಕ್ಕುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಷ್ಟೇ ಅಲ್ಲ ; ಡಿವಿಷನ್ ನಂಬರ್ 1 ರಲ್ಲಿ ನೀರಿನ ಪ್ರಮಾಣವನ್ನು ಅಳತೆ ಮಾಡುವ ವ್ಯವಸ್ಥೆಯಿದೆ. ಅಲ್ಲಿ ಕೇವಲ ಒಬ್ಬ ಅಸಿಸ್ಟೆಂಟ್ ಇಂಜನಿಯರ್ ಇದ್ದಾರೆ. ಮೈಸೂರಿನ ಪರವಾಗಿ ಯಾರೂ ಇಲ್ಲ ಎಂದು ಖಚಿತವಾಗಿ ತಿಳಿದು ಬಂದಿದೆ. ಈ ದೃಷ್ಟಿಯಿಂದ ಅಸಿಸ್ಟೆಂಟ್ ಇಂಜನಿಯರ್ ಮತ್ತು ಎಷ್ಟು ಅಧಿಕಾರಿಗಳನ್ನು ಮೈಸೂರಿನವರು ನೇಮಿಸುವುದಕ್ಕೆ ಸಾಧ್ಯವಿದೆಯೋ ಅವರನ್ನು ಪೂರ್ಣವಾಗಿ ನೇಮಿಸುವಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ರಾಜ್ಯಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಕಳೆದ 20 ವರ್ಷಗಳಿಂದ ನಮ್ಮ ಕರ್ನಾಟಕಕ್ಕೆ ನೀರಿನ ವಿಷಯದಲ್ಲಿ ಅನ್ಯಾಯವಾಗುತ್ತಿದೆ. ನಾವು ಏನು ಒಂದು ನೀರಿನ ಹಕ್ಕು ನಮಗೆ ಇದೆ ಅದನ್ನು ಕಳೆದುಕೊಳ್ಳುತ್ತಾ ಇದ್ದೇವೆ. ಇವತ್ತಿನ ದಿವಸ ರಾಯಚೂರಿನ ಎಡದಂಡೆಯ ಕಾಲುವೆಯಿಂದ 4200 ಕ್ಯುಸೆಕ್ಸ್ ನೀರನ್ನು ಪಡೆಯುವ ಹಕ್ಕು ನಮಗೆ ಇದೆ. ನಮ್ಮ ದುರ್ದೈವ, ಆ ಕಾಲುವೆ ಒಡೆದ ಮೇಲೆ ನಮಗೆ 2500 ಕ್ಯುಸೆಕ್ಸ ನೀರು ಮಾತ್ರ ಸಿಕ್ಕುತ್ತಿದೆ, ಅದರಿಂದ ನಾವು ಹೆಚ್ಚು ನೀರನ್ನು ಉಪಯೋಗ ಮಾಡುವ ಸ್ಥಿತಿಯಲ್ಲಿ ಇಲ್ಲ. 1600 ಕ್ಯುಸೆಕ್ಸ ನೀರನ್ನು ಬಳಸುವ ಅಧಿಕಾರವನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಇದು 20 ವರ್ಷಗಳಿಂದ ನಡೆದುಕೊಂಡು ಬಂದಿದೆ. ಈಗಲಾದರೂ ರಾಜ್ಯ ಸರ್ಕಾರದವರು ಎಚ್ಚೆತ್ತು ಆ ಕಾಲುವೆಯನ್ನು ಬಲಪಡಿಸುವ ಕಾರ್ಯವನ್ನು ಕೈಗೊಂಡು ನಮ್ಮ ಹಕ್ಕು ಏನು ಇದೆ ಆರೀತಿ 4200 ಕ್ಯುಸೆಕ್ಸ ನೀರನ್ನು ಉಪಯೋಗ ಮಾಡುವುದಕ್ಕೆ ಸಮರ್ಥ

ರಾಗಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಆ ಕಾಲುವೆಯಲ್ಲಿ ಸದಾಕಾಲ ನೀರು ಹರಿಯುವುದರಿಂದ ಅದನ್ನು ಬಲಪಡಿಸುವುದು ಬಹಳ ಕಷ್ಟದ ಕೆಲಸ. ಅದಕ್ಕೆ ಬದಲು 18ನೇ ಮೈಲಿ ಹೊಸ ಕಾಲುವೆ ತೆಗೆದು ಸಿಂಧನೂರ್, ಗಂಗಾವತಿ ನೀರನ್ನು ಕೊಡಬಹುದು, ಇದನ್ನು ಪರಿಶೀಲನೆ ಮಾಡಿ ಆದಷ್ಟು ಬೇಗ ಕಾರ್ಯ ಕೈಗೊಂಡು ಈ ಬಗ್ಗೆ ಸರ್ಕಾರದವರು 25,000 ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ ಎಂದು ತಿಳಿದಿದೆ. ಇದನ್ನು ಮಾಡಬೇಕು. ಈ ಯೋಜನೆ ಪೂರ್ಣವಾಗುವುದಕ್ಕೆ ಸುಮಾರು ಎರಡು ಕೋಟಿ ರೂಪಾಯಿಗಳು ಬೇಕಾಗಬಹುದು. ಈಗ ನಾವು ಏನು ಈ ನೀರಿನ ಹಕ್ಕನ್ನು ಕಳೆದುಕೊಳ್ಳುತ್ತಿದ್ದೇವೆ ಅದನ್ನು ಕಳೆದುಕೊಳ್ಳದೆ ನೀರನ್ನು ಪೂರ್ಣವಾಗಿ ಉಪಯೋಗ ಮಾಡಲು ಸಮರ್ಥರಾಗಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಅಷ್ಟೇ ಅಲ್ಲ ಈ ಒಂದು ಅಣೆಕಟ್ಟನ್ನು ನೀರಾವರಿ ದೃಷ್ಟಿಯಿಂದ ನೋಡಬೇಕು. ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡದಿದ್ದರೆ ತಪ್ಪಾಗುತ್ತದೆ. ಇದನ್ನು ಮೂಲಭೂತವಾಗಿ ನೀರಾವರಿ ದೃಷ್ಟಿಯಿಂದ ನಿರ್ಮಾಣ ಮಾಡಿರುವುದರಿಂದ ಅದಕ್ಕೆ ಹೆಚ್ಚಿನ ಉಪಯೋಗವಾಗ ತಕ್ಕಂಥ ಕಾರ್ಯವನ್ನು ಮಾಡಬೇಕು; ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಳ್ಳಾರಿಜಿಲ್ಲೆ ಮತ್ತು ರಾಯಚೂರು ಜಿಲ್ಲೆಗೆ ಸಂಬಂಧಪಟ್ಟಂತೆ ವಿಜಯನಗರದ ಹಳೆಯಕಾಲುವೆ ಇದೆ. ಅದರಿಂದ 375 ಕ್ಯೂಸೆಕ್ಸ್ ಮಾತ್ರ ನೀರನ್ನು ಉಪಯೋಗ ಮಾಡುತ್ತಿದ್ದಾರೆ. ಆದರೆ ತುಂಗಭದ್ರ ಬೋರ್ಡು ಮಂಡಲಿಯವರು ಇದಕ್ಕೆ 450 ಕ್ಯೂಸೆಕ್ಸ್ ನೀರು ಎಂದು ಲೆಕ್ಕ ಹಾಕಿಕೊಂಡು ವರ್ಕಿಂಗ್ ಟೇಬಲ್ ಅನ್ನು ತಯಾರುಮಾಡುತ್ತಿದ್ದಾರೆ. ಇದು ತಪ್ಪು. ಇದರಿಂದ ಎಷ್ಟು ನೀರು ಅನ್ಯಾಯವಾಗುತ್ತದೆ, ಈ ಒಂದು ಅನ್ಯಾಯವನ್ನು ತಡೆಗಟ್ಟಲು ನೀರಿನ ಪ್ರಮಾಣವನ್ನು ಗೇಜ್ ಮಾಡಿ ನಾವು ಎಷ್ಟು ನೀರನ್ನು ಉಪಯೋಗ ಮಾಡುತ್ತಿದ್ದೆವೊ ಅಷ್ಟು ನೀರಿನ ಲೆಕ್ಕ ಬರುವಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇವುಗಳು ಹಳೆಯ ಕಾಲದ ಕಾಲುವೆಗಳಾಗಿರುವುದರಿಂದ, ಇವುಗಳ ಆಡಳಿತವನ್ನೂ ಕೂಡ ರಾಜ್ಯ ಸರ್ಕಾರದವರು ತಮ್ಮ ಕೈಯಲ್ಲಿ ತೆಗೆದುಕೊಳ್ಳುವುದು ಅವಶ್ಯ ಎಂದು ಹೇಳಲು ಇಚ್ಛೆಪಡುತ್ತೇನೆ. ಬಲದಂಡೆ ಲೋ ಲೆವೆಲ್ ಕಾಲುವೆಯಲ್ಲಿ 18,000 ಕ್ಯೂಸೆಕ್ಸ್ ನೀರು ಹೋಗುತ್ತಿದೆ. ಅದರಲ್ಲಿ 730 ಕ್ಯೂಸೆಕ್ಸ್ ನೀರು ಆಂಧ್ರದ ಪಾಲಾಗಿರುತ್ತದೆ. 530 ಕ್ಯೂಸೆಕ್ಸ್ ನೀರು ಮೈಸೂರು ರಾಜ್ಯದ ಪಾಲಾಗಿದೆ. 400 ಕ್ಯೂಸೆಕ್ಸ್ ನೀರು ಗೇಟ್ ಲೈನಿಂಗ್ ಮೂಲಕ ಹಾಳಾಗಿ ಹೋಗುತ್ತಿದೆ. ಇಂಥ ಅಮೂಲ್ಯವಾದ ನೀರನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಇಂಥ ಪ್ರಾಜೆಕ್ಟನ್ನು ನಿರ್ಮಾಣ ಮಾಡಿ ಇಷ್ಟು ದೊಡ್ಡ ಪ್ರಮಾಣದಲ್ಲಿ ನೀರನ್ನು ಕಳೆದುಕೊಳ್ಳುತ್ತಾ ಇರುವುದನ್ನು ನೋಡಿದರೆ, ಬಹಳ ದುಃಖವಾಗುತ್ತದೆ. ಇದರ ಬಗ್ಗೆ ಕೇಂದ್ರ, ಸರ್ಕಾರದಿಂದ ಹೆಚ್ಚಿನ ಹಣಸಹಾಯವನ್ನು ಪಡೆದು ಕಾಲುವೆಯನ್ನು ಪೂರ್ಣವಾಗಿ ಲೈನಿಂಗ್ ಮಾಡಿ ಹಾಳಾಗುತ್ತಿರುವ 400 ಕ್ಯೂಸೆಕ್ಸ್ ತಡೆಗಟ್ಟಿದರೆ ಇದರಿಂದ ನೀರಾವರಿಗೆ ಹೆಚ್ಚಿನ ಸೌಲಭ್ಯವಾಗುತ್ತದೆ, ಇದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಹೋದ ವರ್ಷ 3 ಟಿ. ಎಂ. ಸಿ. ಆಂಧ್ರದವರಿಗೆ ಕೊಟ್ಟಿದೆ. ನನಗೆ ತಿಳಿದ ಮಟ್ಟಿಗೆ ಆ ನೀರಿನ ಹಕ್ಕನ್ನು ಇವತ್ತಿನವರೆಗೂ ಪಡೆಯಲು ತುಂಗಭದ್ರಮಂಡಲಿಯವರಿಗೆ ಸಾಧ್ಯವಾಗಿಲ್ಲ. ನಮಗೆ ಏನು ನೀರು ಸಿಕ್ಕಬೇಕಾಗಿತ್ತೋ ಆ ನೀರನ್ನು ನಮ್ಮ ರಾಜ್ಯ ಸರ್ಕಾರದವರು ಪಡೆಯಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಷ್ಟೇ ಅಲ್ಲ, ಮೈಸೂರು ಇರಿಗೇಷನ್ ಆಕ್ಟಿನಲ್ಲಿ ಕೆಲವೊಂದು ಲೋಪದೋಷಗಳಿರುವುದರಿಂದ, ಕಾರ್ಯಾಚರಣೆಯಲ್ಲಿ ಬಹಳ ತೊಂದರೆಯಾಗಿರುತ್ತದೆ. ಉದಾಹರಣೆ ಹೇಳುವುದಾದರೆ ಕೆಲವು ಭಾಗಗಳನ್ನು ಡಿ ಲೋಕಲೈಸ್ ಮಾಡಿದ್ದಾರೆ. ಆದ್ದರಿಂದ ಕೆಲವು ಭಾಗಗಳಿಗೆ ನೀರು ಇರುವುದಿಲ್ಲ. ಅಂಥ ಭಾಗಗಳನ್ನು ಲೋಕಲೈಸ್ ಮಾಡಿ ಪೂರ್ಣವಾಗಿ ತೆಗೆದುಕೊಳ್ಳಬೇಕು, ಇದಕ್ಕೆ ಕಾಯಿದೆಯನ್ನು ಅಮೆಂಡ್ ಮಾಡಿ ಅವಕಾಶ ಮಾಡಿಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಅನ್‌ಅಥರೈಸ್ಡ್ ಇರಿಗೇಷನ್ ಬಹಳ

ದೊಡ್ಡ ಪ್ರಮಾಣದಲ್ಲಿ ಆ ಜಾಗದಲ್ಲಿ ನಡೆಯುತ್ತಿದೆ ; 10 ಸಾವಿರ ಎಕರೆಯಷ್ಟು ನಡೆಯುತ್ತಿದೆ, ಅಲ್ಲಿ ಅನ್‌ಆಥರೈಸ್ಡ್ ಇರಿಗೇಷನ್ ನಡೆಯುತ್ತಾ ಇರುವುದರಿಂದ ಕಾನೂನು ಬದ್ಧವಾಗಿ ಯಾರಿಗೆ ನೀರು ಹೋಗಬೇಕಾಗಿತ್ತೋ ಅವರಿಗೆ ನೀರು ಸಿಕ್ಕುತ್ತಾ ಇಲ್ಲ. ಈಗ ತಾವು ಮಾಡಿರುವ ಕಾಯಿದೆ ಪ್ರಕಾರ ಅನ್‌ಆಥರೈಸ್ಡ್ ಇರಿಗೇಷನ್ ಅನ್ನು ನಿಲ್ಲಿಸುವುದು ಸಾಧ್ಯವಿಲ್ಲ. ಅದಕ್ಕೆ ಅಮೆಂಡ್‌ಮೆಂಟ್ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತಿನ ದಿವಸ ಮಳೆಗಾಲದಲ್ಲಿ ಹೆಚ್ಚಿನ ನೀರು ನಿರುಪಯುಕ್ತವಾಗಿ ಹರಿದು ಹೋಗುತ್ತದೆ. ಆ ನೀರನ್ನು ಮಳೆಗಾಲದಲ್ಲಿ ದೊಡ್ಡ ದೊಡ್ಡ ಕೆರೆಗಳಿಗೆ ಹರಿಸಿಕೊಂಡು ಅದರ ಉಪಯೋಗ ಮಾಡಿಕೊಳ್ಳಬೇಕು. ಈ ದೃಷ್ಟಿಯಿಂದ ಹಳೆಯ ಕೆರೆಗಳ ದುರಸ್ತಿ ಕಾರ್ಯವನ್ನು ಮಾಡಬೇಕು, ಮತ್ತು ಹರೋಜಿ ಹಳ್ಳಕೆರೆ, ಮುಂತಾದ ಕೆರೆಗಳನ್ನು ಇಂಪ್ರೂವ್ ಮಾಡಿ ಹೈಲೆವೆಲ್‌ನಲ್ಲಿ ನೀರನ್ನು ತುಂಬುವುದಕ್ಕೆ ವ್ಯವಸ್ಥೆ ಮಾಡಬೇಕು. ಅಷ್ಟೇ ಅಲ್ಲ ಹೊಸ ಕೆರೆಗಳನ್ನು ನಿರ್ಮಾಣ ಮಾಡಿ ಮಳೆಗಾಲದಲ್ಲಿ ಎಷ್ಟು ನೀರು ಸಿಕ್ಕುತ್ತದೆಯೋ ಅದನ್ನು ಉಪಯೋಗ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ತುಂಗಭದ್ರ ಆಯಕಟ್ಟಿನಲ್ಲಿ ಇವತ್ತಿನದಿವಸ ವಾಟರ್ ಡ್ಯೂಟಿಯನ್ನು ಒಂದು ಕ್ಯೂಸೆಕ್ಸ್‌ಗೆ 160 ಎಕರೆಯಂತೆ ಇಟ್ಟು ಕೊಂಡು ಕೆಲಸ ಮಾಡುತ್ತಿದ್ದಾರೆ. ಅದನ್ನು ನಿಜವಾಗಿಯೂ ನೋಡಿದರೆ. 160 ಎಕರೆಗೆ ಇದು ಆಗಲು ಸಾಧ್ಯವಾಗುತ್ತಾ ಇಲ್ಲ. 100 ಎಕರೆಗೆ ಅಂದರೆ ಹೆಚ್ಚಾಗುತ್ತದೆ. ಈ ದೃಷ್ಟಿಯಿಂದ ಅಂಕಿಅಂಶಗಳನ್ನು ತೆಗೆದುಕೊಂಡು ಪುನರ್‌ವಿಮರ್ಶೆ ಮಾಡತಕ್ಕ ಕಾಲ ಬಂದಿದೆ. ತಮ್ಮ ಲೆಕ್ಕದಂತೆ 5,80,000 ಎಕರೆ ಎಡದಂಡೆಯ ಕಾಲುವೆಯಲ್ಲಿ ನೀರಾವರಿಯಾಗಬಹುದು ಎಂದು ಹೇಳುತ್ತೀರಿ. ಆದರೆ ಈ ಲೆಕ್ಕದಂತೆ ನೀರಾವರಿ ಸೌಲಭ್ಯ ಸಿಕ್ಕುವುದು ಸಾಧ್ಯವಿಲ್ಲ. ವಾಟರ್ ಡ್ಯೂಟಿ ಕಾರ್ಯಗತ ಮಾಡುವುದರಲ್ಲಿ ನಿಜವಾದ ಅನುಭವ ಏನೆಂದರೆ, 100 ಎಕರೆಗೆ ಒಂದು ಕ್ಯೂಸೆಕ್ಸ್ ನೀರು ಆಗಬಹುದು ಎಂದು. ಇದರಂತೆ ತಾವು ಇದನ್ನು ಪುನರ್‌ಪರಿಶೀಲನೆ ಮಾಡಿ ಅದಕ್ಕೆ ಅನುಕೂಲತೆಗಳನ್ನು ಒದಗಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಈ ಒಂದು ಆಯಕಟ್ಟಿನಲ್ಲಿ ರೋಡುಗಳ ಬಗ್ಗೆ. ಸಿರಗುಪ್ಪದ ಪಕ್ಕದಲ್ಲಿ 70 ಲಕ್ಷ ಎಕರೆಗಳ ಆಯಕಟ್ಟು ಆಗಬಹುದು ಎಂದು 1960 ರಲ್ಲಿ ಇದಕ್ಕೆ ಮಂಜೂರಾತಿಯಾಗಿದ್ದು ಇವತ್ತಿನವರೆಗೂ ರೋಡ್ ಕೆಲಸ ಅಲ್ಲಿ ಮುಗಿಯದೆ ಇರುವುದರಿಂದ ರೈತರಿಗೆ ತೊಂದರೆಯಾಗಿದೆ. ಇವತ್ತಿನ ದಿವಸ ಆ ಕೆಲಸ ತೀವ್ರವಾಗಿ ಆಗಬೇಕಾಗಿದೆ, ಅದಕ್ಕೆ ಜಾಗ್ರತೆ ಕ್ರಮ ತೆಗೆದುಕೊಳ್ಳಬೇಕು ಎಂದು ತಮ್ಮಲ್ಲಿ ಕೇಳಿಕೊಂಡು ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್) :— ಮಾನ್ಯ ಉಪಾಧ್ಯಕ್ಷರೇ ಇವತ್ತು ಆಹಾರ ಮತ್ತು ಕ್ಷಾಮ ಈ ಎರಡರ ಬೇಡಿಕೆಗಳ ಬಗ್ಗೆ ಚರ್ಚೆಯು ಈ ಸಭೆಯ ಮುಂದೆ ಇಟ್ಟಿದ್ದಾರೆ. ಕ್ಷಾಮ ಪರಿಹಾರದ ಬಗ್ಗೆ ಬೇಡಿಕೆ ಬಂದಿರುವುದರಿಂದ, ಬಹಳ ವಿವರಗಳು ಕೊಡಬೇಕು ಅಂತ ಮನಸ್ಸಿನಲ್ಲಿ ಇದೆ. ಆದರೂ ಕೂಡ ಹೋಲ್‌ಸೇಲ್ಸ್ ಟ್ರೇಡ್ ಇನ್ ಫುಡ್ ಗ್ರೇನ್ಸ್ ಬಗ್ಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಒಂದು ಪಾಲಿಸಿ ಏನು ಇದೆ. ಅದರ ಬಗ್ಗೆ ಮಾತನಾಡುವುದಕ್ಕೆ ಮೊದಲು ಕ್ಷಾಮದ ಬಗ್ಗೆ ಮಾತನಾಡುತ್ತೇನೆ. ಆಹಾರ ಸಮಸ್ಯೆಯ ಬಗ್ಗೆ ಮಾತನಾಡಬೇಕಾದರೆ, ಹೋಲ್ ಸೇಲ್ಸ್ ಟ್ರೇಡ್ ಇನ್ ಫುಡ್‌ಗ್ರೇನ್ಸ್ ಸರ್ಕಾರ ತೆಗೆದುಕೊಳ್ಳಬೇಕು ಎನ್ನುವುದು ನಮ್ಮ ಪಾರ್ಟಿಯ ಪಾಲಿಸಿ ಆಗಿರುವುದರಿಂದ ನಾನು ಮೊದಲು ಸರ್ಕಾರಕ್ಕೆ ಅಭಿನಂದನೆಯನ್ನು ಸೂಚಿಸಬಯಸುತ್ತೇನೆ. ಸಮಾಜ ಘಾತಕರು ನಿಮ್ಮನ್ನು ತಿಗಣೆಯಂತೆ ಅಂಟಿಕೊಂಡಿದ್ದಾರೆ. ಅವರನ್ನು ಮೊದಲು ಕಿತ್ತುಹಾಕಬೇಕು. ವ್ಯಾಪಾರ ವರ್ಗ ಮತ್ತು ವಾಣಿಜ್ಯ ವರ್ಗದವರು ಒಂದು ಕಡೆ ದೇವರಿಗೆ ತೆಂಗಿನಕಾಯಿ ಒಡೆದು ತಮ್ಮಲ್ಲಿರತಕ್ಕ ಒಂದು ಲಕ್ಷ ರೂಪಾಯಿ 5 ಲಕ್ಷ ರೂಪಾಯಿಗಳಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ.

(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No....6009

ದಿನಾಂಕ Date..........

ಈವೊತ್ತು ಒಂದು ಕಿಲೋ ಜೋಳ ಎರಡು ರೂಪಾಯಿ ಮಾರುತ್ತಿರಬೇಕಾದರೆ ಇವತ್ತು ನಮ್ಮ ಸರ್ಕಾರ ಯಾವ ಕ್ರಮ ಕೈಕೊಂಡಿದೆ ? ಈವೊತ್ತು ನಾಲ್ಕಾರು ಜಿಲ್ಲೆಗಳಲ್ಲಿ ಕ್ಷಾಮ ಬಂದಿದೆ, ಆ ನಾಲ್ಕು ಡಿಸ್ಟ್ರಿಕ್ಟ್‌ಗಳಿಗೆ ಸಾಕಷ್ಟು ಆಹಾರ ಒದಗಿಸದೇ ಇದ್ದ ಸರ್ಕಾರ, ಹೋಲ್‌ಸೇಲ್ ಟ್ರೇಡ್ ತನ್ನ ಕೈಯಲ್ಲಿ ತೆಗೆದುಕೊಳ್ಳುತ್ತದೆಂದು ಹೇಳುವುದು ಹಿಪಾಕ್ರಿಸಿಯಾಗುತ್ತದೆಂದು ಹೇಳ ಬಹುದು. ಹೋಲ್ ಸೇಲ್ ಟ್ರೇಡ್ ತೆಗೆದುಕೊಳ್ಳಬೇಕಾದರೆ ನಿಮ್ಮ ಕೈಯಲ್ಲಿ ಸರಿಯಾದ ಟೂಲ್ಸ್ ಇದೆಯೇ ? ಯಾವುದರಿಂದ ವರ್ಕ್‌ಶಾಪ್ ನಡೆಸುತ್ತೀರಾ ? ಬೆಳೆದವನು ತನ್ನ ಬೆಳೆಯನ್ನು ಮಾರಿ ಎಂದು ಹೇಳುತ್ತೀರಿ. ಇದು ಸ್ವಾಗತಾರ್ಹ. ಆದರೆ ರೈತರಿಂದ ತೆಗೆದು ಕೊಂಡು ಬಂದಂಥ ಫುಡ್‌ಗ್ರೇನ್ಸ್ ಇಡುವುದಕ್ಕೆ ಗೋಡೌನ್ಸ್ ಫೆಸಿಲಿಟಿ, ವೇರ್‌ಹೌಸ್ ಫೆಸಿಲಿಟಿ ಇದೆಯೇ? ಅದು ಇಲ್ಲವೆಂದು ಹೇಳಬೇಕಾಗಿದೆ. ದೊಡ್ಡ ದೊಡ್ಡ ವರ್ತಕರ ಹತ್ತಿರ ತೆಗೆದು ಕೊಂಡು ಬಂದು ಫುಡ್‌ಗ್ರೇನ್ಸ್ ಇಡುವುದಕ್ಕೆ ಸ್ಥಳ ಕೊಡಿ ಎಂದು ಕೇಳಬೇಕಾಗಿದೆ. ಬೇರೆ ಸೋಷಿಯಲಿಸ್ಟ್ ದೇಶಗಳಿಂದ ಕ್ರೂಡ್ ಆಯಿಲ್ ತಂದು ರಿಫೈನ್ ಮಾಡಿ ಎಂದರೆ ಸ್ಟಾನ್‌ವಾಕ್ ಕಂಪನಿಯವರು ಮಾಡುವುದಿಲ್ಲವೆಂದು ಹೇಳುತ್ತಿದ್ದಾರೆ. ಆಹಾರ ಸಗಟು ವ್ಯಾಪಾರ ನಿಮ್ಮ ಕೈಯಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದಾಗ ನಮ್ಮ ದೇಶದಲ್ಲಿರುವ ದೇಶದ್ರೋಹಿಗಳು ಮತ್ತು ಘಾತುಕ ಶಕ್ತಿಗಳು 'Let us see who will rule' ಎಂದು ಹೇಳುತ್ತಾರೆ. ಅವರು ಚಾಲೆಂಜ್ ಮಾಡುತ್ತಿದ್ದಾರೆ. ಅವರು ಪಿತೂರಿಯನ್ನು ಮಾಡುತ್ತಿದ್ದಾರೆ. ಸರ್ಕಾರ ಆಹಾರದ ಸಗಟು ವ್ಯಾಪಾರವನ್ನು ತೆಗೆದುಕೊಂಡರು. ರೈತನಿಗೆ ಯೋಗ್ಯ ಬೆಲೆಗೆ ಕೊಟ್ಟು ಊಟ ಮಾಡುವ ಕನ್‌ಸ್ಯೂಮರ್ಸ್ ಯೋಗ್ಯ ಬೆಲೆಯಲ್ಲಿ ಮಾರುವ ವ್ಯವಸ್ಥೆಮಾಡಿ ದೇಶ ದ್ರೋಹಿಗಳು ಇದ್ದರೆ ಅವರ ಫೋಟೋ ಹೆಚ್ಚಿ 5 ವರ್ಷಗಳ ಕಾಲ ಅವರನ್ನು ಜೈಲ್ ಒಳಗೆ ಇಡುವ ಶಕ್ತಿ ನಮ್ಮ ಸರ್ಕಾರಕ್ಕೆ ಇದೆಯೇ ? ಅವರ ಮೇಲೆ ಲೀಗಲ್ ಆಕ್ಷನ್ ತೆಗೆದುಕೊಡುವುದಕ್ಕೆ ಯಾವುದಾದರೂ ಕಾಯಿದೆ ಕಾನೂನು ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ತಂದಿದೆಯೇ ? ನಮ್ಮಲ್ಲಿ ಫುಡ್ ಕಂಟ್ರೋಲ್ ಆರ್ಡರ್ ಮಾತ್ರ ಇದೆ. ನಿಮ್ಮಲ್ಲಿ ಬೇಕಾದಷ್ಟು ಫುಡ್‌ಗ್ರೇನ್ಸ್ ಇದೆ ಎಂದು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ಗುಲ್ಬರ್ಗಾದಲ್ಲಿ 1500 ಕ್ವಿಂಟಾಲ್ಸ್ ಆಹಾರಧಾನ್ಯವಿದೆ ಎಂದು ಹೇಳುತ್ತೀರಿ, ಆದರೆ ಚಿತಾಪುರ ದಲ್ಲಿ ಜನ ಸಾಯುತ್ತಿದ್ದಾರೆ. ಅಲ್ಲಿ ಯಾಕೆ ಆಹಾರಧಾನ್ಯಗಳನ್ನು ಕಳುಹಿಸಿಲ್ಲ. ನನಗೆ ಇಲ್ಲಿ ಮಾತನಾಡುವುದಕ್ಕೆ ಟೈಮ್ ಕಡಿಮೆ ಇದೆ. ಪಿ.ಡಬ್ಲ್ಯು.ಡಿ. ಮಿನಿಸ್ಟರ್‌ರವರು ಒಂದು ವಾರದ ಹಿಂದೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ದಾತೂರು ಸೀಡ್ಸ್ ಮಿಕ್ಸ್ ಮಾಡಿದ್ದನ್ನು ಕ್ಲೀನ್ ಮಾಡಿಸುತ್ತಿದ್ದೇವೆ, ಕ್ಲೀನ್ ಮಾಡಿಸಿ ಕಳುಹಿಸುತ್ತೇವೆಂದು. ಆದರೆ ಅಲ್ಲಿ ಒಂದು ವಾರದಿಂದ ಅನ್ನ ಸಿಕ್ಕದೇ ಸಾಯುವ ಪರಿಸ್ಥಿತಿ ಬಂದಿದೆ. They are facing hunger, they are facing starvation. ನಮ್ಮ ಪಿ.ಡಬ್ಲ್ಯು.ಡಿ. ಮಂತ್ರಿಗಳು ಬೋಲ್ಡ್ ಆಗಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ನಾನು ಅವರನ್ನು ಕಂಗ್ರಾಚ್ಯುಲೇಟ್ ಮಾಡಿದರೆ, ಆದರೆ ಜನರಿಗೆ ಅನ್ನ ಮಾತ್ರ ಕೊಟ್ಟಿಲ್ಲ. ಬಾಬುರಾವ್ ಎಂ.ಎಲ್.ಎ. ಬೀದರ್ ಭಾಗದಿಂದ ಬಂದಿದ್ದಾರೆ. ಅಲ್ಲಿ ಜನರಿಗೆ ತಿನ್ನುವುದಕ್ಕೆ ಅನ್ನವಿಲ್ಲ. ಕುಡಿಯುವುದಕ್ಕೆ ನೀರಿಲ್ಲ, ಎರಡು ರೂಪಾಯಿಗೆ ಒಂದು ಕೇ. ಜಿ. ಜೋಳ ಸಿಕ್ಕುತ್ತಿದೆ. ರಾಜ್ಯದ ಇತಿಹಾಸದಲ್ಲಿಯೇ ಎರಡು ರೂಪಾಯಿಗೆ ಒಂದು ಕೇ. ಜಿ. ಜೋಳ ಹಿಂದೆ ಎಂದೂ ಆಗಿರಲಿಲ್ಲ, ಮುಂದೆ ಆಗುವ ಚಾನ್ಸ್ ಇಲ್ಲ. ಆಹಾರ ಧಾನ್ಯ ನಿಮ್ಮ ಕೈಯಲ್ಲಿ ತೆಗೆದುಕೊಳ್ಳಬೇಕಾದರೆ, ಪ್ರಿವೆಂಟಿವ್ ಮೆಜರ್ಸ್ ಏನು ತೆಗೆದುಕೊಳ್ಳು ತ್ತೀರಿ ಅದು ಹೇಳಿ. ಆಹಾರಧಾನ್ಯಗಳನ್ನು ತೆಗೆದುಕೊಂಡ ಮೇಲೆ ಆಹಾರಧಾನ್ಯಗಳನ್ನು ಹೋಲ್ಡ್ ಮಾಡುವಂಥ ದೇಶದ್ರೋಹಿಗಳಿಗೆ ಕಟುವಾದ ಶಿಕ್ಷೆ ಕೊಡುತ್ತೀರಾ ಹೇಳಿ. ಇಲ್ಲೀಗಲ್ ಸ್ಟಾಕ್ ಏನು ಇಡುತ್ತಾರೆ ಅದನ್ನು ಕಾನ್‌ಫಿಸ್ಕೇಟ್ ಮಾಡುತ್ತೀರಾ ? ಕಾನ್‌ಫಿಸ್ಕೇಟ್ ಮಾಡಿದಾಗ fundamental right at the cost of human lives ಆಗುವುದು ಬೇಡ. ಕಾಂಪನ್‌ಸೇಷನ್ ಶಬ್ದ ಉಪಯೋಗಿಸಿ ಫ್ರೀ ಮಾರ್ಕೆಟಿಂಗ್, ಫ್ರೀ

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ

ಟ್ರೇಡ್ ಎಂದು ಹೇಳಿ, ಕ್ಷಾಮ ಪ್ರದೇಶದಲ್ಲಿ 2 ರೂಪಾಯಿಗೆ ಒಂದು ಕೇ. ಜಿ. ಜೋಳ ಬೇಕಾದರೆ ತೆಗೆದುಕೊಳ್ಳಿ ಇಲ್ಲದಿದ್ದರೆ ಬಿಡಿ ಎನ್ನುವ ಸ್ಥಿತಿ ಬರಬೇಕಾದರೆ, ಅದನ್ನು ಸರಿಪಡಿಸಲು ಲೆಜಿಸ್‌ಲೇಷನ್ ತನ್ನಿ. ಆಗ ನಾವು ಸ್ವಾಗತ ಮಾಡುತ್ತೇವೆ. ಒಂದೇ ಧ್ವನಿಯಲ್ಲಿ ಓಗೊಟ್ಟು ಅಂಥ ಲೆಜಿಸ್ಲೇಷನ್ ಮಾಡುವುದಕ್ಕೆ ನಾವೂ ಸಹಕಾರ ಕೊಡುತ್ತೇವೆ. ಫುಡ್ ಡಿಸ್ಟ್ರಿಬ್ಯೂಷನ್ ಬಗ್ಗೆ ಒಂದು ಸ್ಟೇಟ್‌ಮೆಂಟ್ ಬಂದಿದೆ. ನೀವು ಸ್ಟೇಟ್‌ಮೆಂಟ್ ಕೊಟ್ಟಿಲ್ಲವೆಂದು ಹೇಳಿದರೆ, ಆದರೆ ಉರಿ ಇಲ್ಲದೆ ಹೊಗೆ ಬರುವುದಿಲ್ಲ. ನಿಮ್ಮನ್ನು ಪಾರ್ಟಿ ಜನರು ಸುತ್ತ ಹಾಕಿ ಕೊಂಡಿರಬಹುದು, ರೀಟೆಲ್ ಡಿಸ್ಟ್ರಿಬ್ಯೂಷನ್ ಬೇಕಾದರೆ ನಿಮ್ಮ ಕಾಂಗ್ರೆಸಿನವರಿಗೆ ಕೊಡಿ ನಮಗೆ ಅದು ಅಭ್ಯಂತರವಿಲ್ಲ. ಆದರೆ ಪಾರ್ಟಿ ಪಾಲಿಟಿಕ್ಸ್ ಈ ಫುಡ್‌ಗ್ರೇನ್ಸ್ ಡಿಸ್ಟ್ರಿಬ್ಯೂಷನಿನಲ್ಲಿ ತಂದರೆ ಮುಂದೆ ಕಾಂಗ್ರೆಸ್ ಆಗಲೀ ಜನಸಂಘದವರಿಗೆ ಆಗಲಿ ಮೆಂಬರ್ಸ್ ಸಿಕ್ಕುವುದಿಲ್ಲ. ಎಲ್ಲರೂ ಕಾಂಗ್ರೆಸ್ (ಆರ್) ಗೇ ಸೇರುವುದಕ್ಕೆ ಓಡಿ ಬರುತ್ತಾರೆ. ಇದಕ್ಕೆ ಒಂದು ಸಣ್ಣ ಉದಾಹರಣೆ ಕೊಡಬೇಕೆಂದರೆ, ಎಲ್ಲಾ ಪಕ್ಷದವರನ್ನೂ ನಿಮ್ಮ ಕಡೆಗೆ ಅಟ್ರಾಕ್ಟ್ ಮಾಡುವುದಕ್ಕೆ ಏನಾದರೂ ಮ್ಯಾಗ್ನಟಿಕ್ ಪವರ್ ಎಂದರೆ ಫುಡ್‌ಗ್ರೇನ್ ಲೈಸನ್ಸ್ ಇಟ್ಟುಕೊಂಡಿದ್ದೀರಿ ಎಂದು ಕಾಣುತ್ತದೆ. The congress which is proclaiming socialism will have to dig its own grave.

ಆಫೀಸರ್ಸ್ ಸ್ಯಾಬೊಟೇಜ್ ಬಗ್ಗೆ ಹೇಳುತ್ತೇನೆ. ನಮ್ಮದು ಮಾರ್ಜಿನಲ್ ಡಿಫಿಸಿಟ್ ಡಿಸ್ಟ್ರಿಕ್ಟ್ ಎಂದು ಹೇಳುವುದನ್ನು ನಾನು ಒಪ್ಪುತ್ತೇನೆ. ನಮ್ಮ ಸಹಕಾರ ಮಂತ್ರಿಗಳು ನಿಸ್ಸಹಾಯಕರಾಗಿ ಬಿಟ್ಟಿದ್ದಾರೆ. ಅವರನ್ನು ನೋಡಿದರೆ ಕನಿಕರ ಬರುತ್ತದೆ. ಸರಕಾರವನ್ನು ಛಾಲೆಂಜ್ ಮಾಡುವಂಥ ಸೋರ್ಸ್‌ಗಳು ಹುಟ್ಟಿವೆ. ಅಫಿಷಿಯಲ್ಸ್ ಸ್ಯಾಬೊಟೇಜ್ ಮಾಡುತ್ತಿದ್ದಾರೆ. ವೆಸ್ಟೆಡ್ ಇಂಟರೆಸ್ಟ್‌ನಿಂದ ವಾಣಿಜ್ಯ ಸಂಘದವರು ಕೋ-ಆಪರೇಟಿವ್ ಮೂವ್‌ಮೆಂಟ್‌ನಲ್ಲಿ ಸೇರಿಕೊಂಡಿದ್ದಾರೆ. ನಿಮ್ಮ ಕುತ್ತಿಗೆಯನ್ನು ನೇಣು ಹಾಕಿದ್ದಾರೆ. ಸಫ್ರೋಕೇಷ ಆಗುತ್ತಾ ಇದೆ. ಇಂತಹ ನಿಸ್ಸಹಾಯಕ ಪರಿಸ್ಥಿತಿ ಬಂದಿರುವಾಗ ಫುಡ್ ಗ್ರೈನ್ಸ್ ಹೋಲ್‌ಸೇಲ್ ಟ್ರೇಡ್ ಹೇಗೆ ಮಾಡುತ್ತೀರಿ ಎಂದು ತಿಳಿಸಬೇಕು. ಈ ಬಗ್ಗೆ ಖಂಡಿತವಾಗಿ ತಮ್ಮ ಸ್ಟೇಟ್‌ಮೆಂಟ್ ಕೊಡಬೇಕು. ಇದಕ್ಕೆ ಯೋಗ್ಯ ಆನ್ಸರ್ ಕೊಡಬೇಕು ಎಂದು ಕೇಳುತ್ತೇನೆ. ಸರ್ಕಾರಕ್ಕೆ ನಾವು ಪ್ರಾಣ ಬಿಡಬೇಕಾದರೆ ಪ್ರಾಣ ಬಿಡುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಕೆ. ಪ್ರಭಾಕರ :—ಅಫಿಷಿಯಲ್ಸ್ ಸ್ಯಾಬೊಟೇಜ್ ಮಾಡುತ್ತಾರೆ ಎಂದು ಹೇಗೆ ಹೇಳುತ್ತೀರಾ ?

ಶ್ರೀ ವಿ. ಎನ್. ಪಾಟೀಲ್ :—ರೂರಲ್ ಏರಿಯಾಸ್‌ನಲ್ಲಿ ಫ್ಯಾಮಿನ್ ಕಂಡೀಷನ್ ಇದ್ದಾಗ ಫುಡ್ ಡಿಸ್ಟ್ರಿಬ್ಯೂಷನ್ ಸಲುವಾಗಿ ಪರ್ಮಿಟ್ ಕೊಡುತ್ತಾ ಇದ್ದರು ಇಷ್ಟು ಗೋಧಿ ಸಪ್ಲೈ ಮಾಡಿರಿ ಎಂದು. ಇದನ್ನು ತಾಸೀಲ್ದಾರರು ಮತ್ತು ರೆವಿನ್ಯೂ ಇನ್‌ಸ್ಪೆಕ್ಟರು ಕೂಡಿಕೊಂಡು ಕೆಲಸ ಮಾಡುತ್ತಾರೆ. ಅಲ್ಲಿ ಪರಿಸ್ಥಿತಿ ಬಹಳ ಕೆಟ್ಟಿದೆ. ಫ್ರೀ ಆಗಿ ರೀಟೇಲ್ ಷಾಪಿಗೆ ಎಷ್ಟೋ ಲೈಸನ್ಸ್ ಕೊಟ್ಟಿದ್ದಾರೆ. ಕಂಟ್ರೋಲ್ ರೇಟನ್ನು 200 ರೂಪಾಯಿ ಇಟ್ಟಿದ್ದೀರಿ. 5 ಮೂಟೆ ಗೋಧಿ ಕೊಡಬೇಕಾದರೆ 100 ರೂಪಾಯಿ ಗುರಿ ನೋಟ್ ಬಂದರೆ ಕೊಡುತ್ತಾರೆ. ಕೋ-ಆಪ ರೇಟಿವ್ ಸೊಸೈಟೀಸ್‌ಗೆ ಗೋಧಿ ಸಪ್ಲೈ ಆಗುವುದಿಲ್ಲ. ಗ್ರಾಮ ಪಂಚಾಯಿತಿ ಏಜೆನ್ಸಿಯಿಂದ ರೀಟೇಲರ್ಸ್‌ಗೆ ಗೋಧಿ ಸಪ್ಲೈ ಆಗುವುದಿಲ್ಲ, ತಾಸೀಲ್ದಾರರು ಮತ್ತು ರೆವಿನ್ಯೂ ಇನ್‌ಸ್ಪೆಕ್ಟರ್ ಗುಲ್ಬರ್ಗಾದಿಂದ ಫಾರಿನ್ ವಿಸ್ಕಿ ತರಿಸಿಕೊಂಡು ರಾತ್ರಿಯಿಂದ ಬೆಳಗಿನವರೆಗೆ ಪಾರ್ಟಿ ಮಾಡುತ್ತಾ ಇರುತ್ತಾರೆ. We have to hang our heads in shame. ಇಂಥಾ ಸಿಚುಯೇಷನ್ ನಡೆಯುತ್ತಾ ಇದೆ. ಈ ರೀತಿ ಅನ್ಯಾಯ ನಡೆಯುತ್ತಾ ಇದೆ. ಗೋಧಿ ಸಿಕ್ಕುತ್ತಾ ಇಲ್ಲ. ಇಂಥಾ ಆಫೀಸರ್ಸ್ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳುವುದಿಲ್ಲ ? ಡೆಪ್ಯೂಟೀ ಕಮೀಷನರ್ಸ್ ಹತ್ತಿರ ಹೋಗಿ ಹೇಳಿದರೆ ಇದ್ದ ಆಫೀಸರ್ಸ್‌ನ್ನು ಸಸ್ಪೆಂಡ್

ಮಾಡಿದರೆ ನಾನು ಯಾವ ಆಫೀಸರಿಂದ ಕೆಲಸ ತೆಗೆದುಕೊಳ್ಳಬೇಕು ಎಂದು ಕೇಳುತ್ತಾರೆ. ನಾವು ರೆಡ್ ಹ್ಯಾಂಡೆಡ್ ಆಗಿ ಇಂಥಾ ಆಫೀಸರ್ ಅನ್ಯಾಯ ಮಾಡುತ್ತಿದ್ದಾರೆ ಎಂದು ಹೇಳಿದರೂ I don't care for these M.L.A's. They are here only for five years, I am here to protect you ಎನ್ನುತ್ತಾರೆ. ಇಂಥಾದ್ದೇನಾದರೂ ಅದೇ ಮುಖ್ಯಮಂತ್ರಿಗಳಿಂದ ಹೋಗಿದೆಯೋ ಏನೋ ಗೊತ್ತಿಲ್ಲ. ಕ್ಷಾಮ ಪೀಡಿತ ಪ್ರದೇಶಗಳಿಗೆ ಕ್ರೇಂದ್ರ ಸರ್ಕಾರದ ಸಹಾಯ ಪಡೆದುಕೊಂಡು ರೈತರಿಗೆ ಸಾಲ ಹಂಚಲು 5—6 ಲಕ್ಷ ರೂಪಾಯಿಗಳನ್ನು ಮೈಸೂರು ಸರ್ಕಾರ ಕಳಿಸುತ್ತಾರೆ. ಅದೇ ಆಫೀಸರ್ ಒಬ್ಬ ರೈತನಿಗೆ 5 ಸಾವಿರ ರೂಪಾಯಿ ಸಾಲ ಕೊಡಬೇಕಾದರೆ 500 ರೂಪಾಯಿ ಕೊಡಬೇಕೆಂದು ಫಿಕ್ಸ್ ಮಾಡಿಕೊಂಡಿರುತ್ತಾರೆ. ಫ್ಯಾಮಿನ್ ರಿಲೀಫ್ ಬಗ್ಗೆ ಈ ರೀತಿ ಸಾಬೊಟೇಜ್ ಮಾಡುವಂಥ ಆಫೀಸರನ್ನು ನೀವು ಏತಕ್ಕೆ ಟಾಲರೇಟ್ ಮಾಡುತ್ತೀರಿ? Government is making a half hearted approach ಎಂದು ಹೇಳಿದರೆ ಮುಖ್ಯಮಂತ್ರಿಗಳು ಎಮೋಷನಲ್ ಆಗುತ್ತಾರೆ. This is the first time in the history of Mysore State that long term steps had been to eradicate famine. I congratulate the Govt. for that. ಇರಿಗೇಷನ್ ಟ್ಯಾಂಕ್ಸ್ ಫ್ಯಾಮಿನ್ ಏರಿಯಾದಲ್ಲಿ ಬರುತ್ತಾ ಇವೆ. ಅಂಥಾವು 26 ವರ್ಷಗಳ ವರೆಗೆ ಬಂದಿಲ್ಲ. ಪರ್ಕೋಲೇಷನ್ ಟ್ಯಾಂಕ್ಸ್ ಬರುತ್ತಾ ಇವೆ. We will thank him for that. ನೀವು ರೈತರಿಗೆ ಸಾಲ ಕೊಡುವ ಬಗ್ಗೆ ಸರಿಯಾದ ಕಂಟ್ರೋಲ್ ಇಟ್ಟುಕೊಂಡಿಲ್ಲ, 5 ಸಾವಿರ ರೂಪಾಯಿ ಸಾಲ ಕೊಡಬೇಕಾದರೆ 500 ರೂಪಾಯಿ ಕೊಡಬೇಕೆಂದು ಓಪನ್ ಆಗಿ ಕೇಳುತ್ತಾರೆ. ಈ ರೀತಿ ಹುಮ್ನಾಬಾದ ತಾಸೀಲ್ದಾರರಿಗೆ 500 ರೂಪಾಯಿ ಕೊಟ್ಟರೆ ಅಪ್ಲಿಕೇಷನ್ಸ್ ಸ್ಯಾಂಕ್ಷನ್ ಮಾಡುತ್ತಾರೆ ಎಂದು ಹೇಳುತ್ತಾರೆ. ಈ ರೀತಿ 5 ಲಕ್ಷ ಹಂಚಿದ್ದು ಆಗಿದೆ. ಇದರಲ್ಲಿ ಕನಿಷ್ಟಪಕ್ಷ 50 ಸಾವಿರ ರೂಪಾಯಿಯನ್ನಾದರೂ ಅವರು ಹೊಡೆದಿದ್ದಾರೆ ಅಂಥಾ ದರೋಡೆಕಾರರ ಮೇಲೆ ಯಾವ ಸ್ಟೆಪ್ಸನ್ನೂ ತೆಗೆದುಕೊಂಡಿಲ್ಲ. ಬಸವಕಲ್ಯಾಣದಲ್ಲಿ 26 ವೆಲ್ಸ್ ಸಕ್ಸಸ್‌ಫುಲ್ ಆಗಿ ಬೋರ್‌ಮಾಡಿದ್ದಾರೆ. ಹುಮ್ನಾಬಾದ್ ತಾಲ್ಲೂಕಿನಲ್ಲೂ ಅದೇ ರೀತಿ ಕೊಡಬೇಕೆಂದು ಹೇಳಿದ್ದಾರೆ. ಹುಮ್ನಾಬಾದ್ ತಾಲ್ಲೂಕಿನಲ್ಲೂ ವೆಲ್ಸ್‌ಗೆ ಬೋರ್ ಮಾಡಲು ರಿಗ್ಸ್ ಷಿಫ್ಟ್ ಮಾಡಿಕೊಡುತ್ತೇವೆ ಎಂದು ಹೇಳುತ್ತಾರೆ ಡೆಪ್ಯೂಟಿ ಕಮೀಷನರ್ ಹೇಳುತ್ತಾರೆ ಬಸವಕಲ್ಯಾಣದ ಎಂ. ಎಲ್. ಎ. ಕೇಳಿ ಅವರು ಒಪ್ಪಿದರೆ ತಂದು ಕೊಡುತ್ತೇವೆ ಇಲ್ಲದಿದ್ದರೆ ಇಲ್ಲ ಎಂದು. ಈ ರೀತಿ ಡೆಪ್ಯೂಟಿ ಕಮೀಷನರ್ ಹೇಳಿದರೆ ಅವರಿಗೆ ಯಾವರೀತಿ ಹ್ಯೂಮೇನಿಟಿ ಕನ್ಸಿಡರೇಷನ್ ಇದೆ ಎಂದು ಗೊತ್ತಾಗುತ್ತದೆ. We have a Deputy Commissioner who refuse to listen to reason. He insists that I should take a recommendation letter from the M.L.A. of Basavakalyan. Is he a monarch ? Who is he to put such a question to an elected representative of the people ? ನನ್ನನ್ನು ಪಬ್ಲಿಕ್ ಆಗಿ ಇನ್‌ಸಲ್ಟ್ ಮಾಡುವ ಇವನಿಗೆ I am going to teach a lesson. ನಾನು ಈ ಹೌಸ್ ಮುಖಾಂತರ ಹೇಳುತ್ತೇನೆ. ಬೀದರ್ ಡಿಸ್ಟ್ರಿಕ್ಟ್ ಜನತೆ ಅವರಿಗೆ ಒಂದು ಲೆಸನ್ ಟೀಚ್ ಮಾಡಿ ಕಳಿಸಿಕೊಡುತ್ತದೆ. ಇದು ಸರ್ಕಾರದ ನಿಸ್ಸಹಾಯಕತೆ ತೋರಿಸುತ್ತದೆ. ಇದುವರೆಗೂ ಡಿವಿಷನಲ್ ಕಮೀಷನರ್ ಹುಮ್ನಾಬಾದಿಗೆ ಮಿಷಿನ್ ಷಿಫ್ಟ್ ಮಾಡಿಲ್ಲ. He wants V. N. Patil to bring a letter from the M.L.A. of Basavakalyan? Can he demand such a letter from the elected Representative ? ಇಂಥಾ ಆಫೀಸರ್ಸ್ ಮೇಲೆ ಕ್ರಮ ತೆಗೆದುಕೊಳ್ಳದೇ ಇದ್ದರೆ ಹೇಗೆ ?

ಇನ್ನು ಸಾಯಿಲ್-ಕನ್‌ಸರ್ವೇಷನ್‌ನಿಂದ ಬಹಳಷ್ಟು ಅನಾಹುತವಾಗುತ್ತದೆ. ಒಂದೊಂದು ಪಿಟ್ಸ್‌ನಿಂದ 3 ರೂಪಾಯಿ ಹೊಡೆಯುತ್ತಾ ಇದ್ದಾರೆ. 10 ಪಿಟ್ಸ್ ಹಾಕಿದರೆ 9 ಪಿಟ್ಸ್ ಬಿಲಿ ಕೊಡುತ್ತಾರೆ. ಒಂದು ಪಿಟ್ಸ್ ಬಿಲಿ ಕೊಡುವುದಿಲ್ಲ. ನಾವು ಕಂಪ್ಲೇನ್ ಮಾಡಿದರೆ We will see that you starve 3 months ಎಂದು ಹೇಳಿದರು. ತಾಳಮರಗಿ ಗ್ರಾಮದಲ್ಲಿ ಇಂತಹ ಅನ್ಯಾಯ ನಡೆಯುತ್ತಾ ಇದೆ. Place the officers under suspension ಎಂದು ಹೇಳಿದಾಗ the Deputy Commissioner did not move his little finger. Ministers may come and Ministers may go. How can I suspend everybody. He did not want the work to be suspended because they were against a characterless and corrupt person.

ಇಂಥಾದ್ದನ್ನೆಲ್ಲಾ ಟಾಲರೇಟ್ ಮಾಡಿ ಈ ಫ್ಯಾಮಿನ್ ರಿಲೀಫ್ ವರ್ಕ್ಸ್‌ಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡುವುದಾದರೆ ಈ ಟ್ರೇಡೆ ಇರುವಂಥಾ ಸಿಬ್ಬಂದಿಗಳಿಂದ ಜನಗಳಿಗೆ ಏನೂ ಅನುಕೂಲವಾಗುವುದಿಲ್ಲ. ಈ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಹೀಗಿರುವಾಗ ಈವೊತ್ತು ಯಾವ ಮುಖ ಇಟ್ಟುಕೊಂಡು ಅವರು ಕೆಲಸ ಮಾಡತಕ್ಕಂಥ ಈ ಕೆಲಸಕ್ಕೆ ಅವರನ್ನು ಸ್ತೋತ್ರ ಮಾಡೋಣ ಇಲ್ಲವೇ ಹೊಗಳೋಣ ಹೇಳಿ ?

ಮುಖ್ಯಮಂತ್ರಿಗಳು ಸಭೆಯಲ್ಲಿ ಇದ್ದಿದ್ದರೆ ಇದನ್ನೆಲ್ಲ ಕೇಳಿ ಉದ್ರಿಕ್ತರಾಗುತ್ತಿದ್ದರು. ಸರ್ಕಾರದ ಬಗ್ಗೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಆದರೆ ಸರ್ಕಾರದಿಂದ ಬರತಕ್ಕ ಹಣವನ್ನು ಹಂಚುವುದರಲ್ಲಿ ಕರಪ್ಟ ಪ್ರಾಕ್ಟಿಸಸ್ ನಡೆಯುತ್ತಿದೆ. The more concerned person is the Finance Minister. I know that because money is flowing out of his treasury. He had to struggle with the authorities at Delhi to get huge amounts of money. That money is going to waste. Are you going to tolerate this? As a challenge, I have thrown this, because he is my friend and more than that, like me, he also has sense of values.

ನಮ್ಮ ಭಾಗದಲ್ಲಿ ನಡೆಯುತ್ತಿರುವ ವಿಚಾರಗಳ ಬಗ್ಗೆ ನಾನು ಕೆಲವು ಉದಾಹರಣೆಗಳನ್ನು ಕೊಡಲಿಕ್ಕೆ ಬಯಸುತ್ತೇನೆ. ತಹಸೀಲ್ದಾರರ ಹತ್ತಿರ ಹೋದರೆ, 23 ಎಕರೆ ಜಮೀನಿರುವುದರಿಂದ ನೀನು ಸ್ಮಾಲ್ ಹೋಲ್ಡರ್ ಎಂದು ಆಗುವುದಿಲ್ಲ, ಹಣ ಕೊಡುವುದಕ್ಕೆ ಆಗುವುದಿಲ್ಲ, ಆದ್ದರಿಂದ ಇರುವ ಜಮೀನನ್ನು ನಿನ್ನ ಹೆಂಡಿತಿ ಹೆಸರಿಗೆ, ಮಗನ ಹೆಸರಿಗೆ, ತಮ್ಮನ ಹೆಸರಿಗೆ ಹಂಚಿಕಿ ಮಾಡಿ ಎಂಟೆಂಟು ಎಕರೆ ಮಾಡಿಕೊಂಡರೆ ಸ್ಮಾಲ್ ಫಾರ್ಮರ್ ಎಂದು ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತಾರೆ.

Such officers deserve to be flogged openly by the public if the Government believes in peoples public court, for the laches and failures.

ಹುಮ್ನಾಬಾದ್‌ನಲ್ಲಿರುವ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಒಂದು ಅಪ್ಲಿಕೇಷನ್ ಸಣ್ಣ ರೈತ ಕೊಟ್ಟರೆ ಬಾವಿ ತೆಗೆಸಲು ಐದು ಸಾವಿರ ರೂಪಾಯಿ ಸಾಲ ಕೊಡುತ್ತಾರೆ. ನಾನು ವಿ. ಎನ್. ಪಾಟೀಲ್ ಎಂಬುವವನು ಅರ್ಜಿ ಹಾಕಿದರೆ ನನಗೆ ಸಾಲ ಸಿಕ್ಕುತ್ತದೆ. ಆದಾದ ನಂತರ ಮತ್ತೊಬ್ಬ ಪಾಟೀಲರನ್ನು ಹಿಡಿದು ಅಥವಾ ನನ್ನ ಅಣ್ಣ ತಮ್ಮನನ್ನು ಹಿಡಿದು ನೀನೂ

ಒಂದು ಅರ್ಜಿ ಹಾಕು ನಿನಗೂ ಐದು ಸಾವಿರ ರೂಪಾಯಿ ಬರುತ್ತದೆ, ವಿ. ಎನ್. ಪಾಟೀಲರು ತೆಗೆಸಿರುವ ಬಾವಿಯನ್ನೇ ನಿಮ್ಮದು ಎಂದು ಹೇಳಿದರೂ ಆಯಿತು ಎಂದು ಅವನಿಂದ 500 ರೂಪಾಯಿ ತೆಗೆದುಕೊಂಡು ಸಾಲ ಮಂಜೂರು ಮಾಡಿಸುತ್ತಾರೆ. ನನ್ನ ಹತ್ತಿರ 500 ರೂಪಾಯಿ ಮೊದಲೇ ತೆಗೆದುಕೊಂಡಿರುತ್ತಾರೆ. ಒಟ್ಟಿನಲ್ಲಿ 1000 ರೂಪಾಯಿ ತೆಗೆದು ಕೊಳ್ಳುತ್ತಾರೆ. ನಮ್ಮಂಥವರು ನ್ಯಾಯರಾಗಿ ಲೀಗಲ್ ಫೀ ತೆಗೆದುಕೊಳ್ಳುವಾಗ ಇಂಥ ಉತ್ತಮವಾದ ಸಲಹೆಯನ್ನು ಕೊಟ್ಟದ್ದಕ್ಕೆ ಅವರೂ ಏಕೆ ಹಣ ತೆಗೆದುಕೊಳ್ಳಬಾರದು ? ಒಂದು ಎನ್‌ಕ್ವೈರಿ ನಡೆಸಿದರೆ ಇದನ್ನೆಲ್ಲ ನಾನು ಪ್ರೂಫ್ ಮಾಡಬಲ್ಲೆ. ಬಾವಿ ತೋಡುವುದಕ್ಕೆ ತಹಸೀಲ್ದಾರರ ಆಫೀಸಿನಲ್ಲಿ ಒಂದು ಅಪ್ಲಿಕೇಷನ್, ಪಿ. ಎಲ್. ಡಿ. ಬ್ಯಾಂಕಿನಲ್ಲಿ ಮತ್ತೊಂದು ಅಪ್ಲಿಕೇಷನ್ ಹಾಕಿ ಅಲ್ಲಿಂದ ಐದು ಸಾವಿರ, ಇಲ್ಲಿಂದ ಐದು ಸಾವಿರ ಮತ್ತು ಇರುವ ಬಾವಿಯನ್ನು ಆಳ ಮಾಡುವುದಕ್ಕಾಗಿ ಎಂದು 1500 ರೂಪಾಯಿ, ಹೀಗೆ ಒಟ್ಟಿನಲ್ಲಿ 11500 ರೂಪಾಯಿಗಳನ್ನು ಒಂದೇ ಬಾವಿಗೆ ತೆಗೆದುಕೊಂಡಿದ್ದಾರೆ. ನಾನು ಇಂಥ ಕಾನ್‌ಕ್ರೀಟ್ ಇನ್‌ಸ್ಟೆನ್ಸಸ್ ಕೊಡಬಹುದು. ನಮ್ಮ ತಾಲ್ಲೂಕಿನ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನ ಚೇರ್‌ಮನ್ ಅವರು ನನಗೆ ಪತ್ರ ಬರೆದಿದ್ದಾರೆ. ಕಾಂಗ್ರೆಸ್ (ಆರ್) ನಲ್ಲಿ ಎಂಥೆಂಥ ಜನ ಸೇರಿಕೊಂಡು ಅದಕ್ಕೆ ಕೆಟ್ಟ ಹೆಸರು ಬರುತ್ತಿದೆ ಎಂದು ನಮಗೆ ಬರೆಯುತ್ತಾರೆ.

I demand an enquiry against such corrupt officials and as a detterent, if the slightest *prima-facie* case is made out, they must be punished.

ಬಾವಿ ತೆಗೆಸಲು ಸಾಲಕ್ಕಾಗಿ ಅರ್ಜಿ ಹಾಕಿದರೆ 600 ಅಡಿಗಳ ಒಳಗೆ ಬಾವಿ ತೆಗೆಯಲು ಸಾಲ ಕೊಡುವುದಿಲ್ಲವೆಂದು ಹೇಳುತ್ತಾರೆ. ಆದರೆ ಎಷ್ಟೋ ಸಂದರ್ಭಗಳಲ್ಲಿ 200 ಅಡಿಗಳಿಗಿಂತ ಕಡಮೆ ದೂರದಲ್ಲಿ ಬಾವಿ ತೆಗೆಯಲು ಸಾಲ ಕೊಟ್ಟಿದ್ದಾರೆ. ಇದಕ್ಕೆ 300 ರೂಪಾಯಿ ಲಂಚ ಕೊಟ್ಟರೆ ಸಾಕು. ಇಂಥ ವ್ಯವಹಾರಗಳು ನಡೆಯುತ್ತವೆ.

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಒಳ್ಳೆಯ ಯೋಜನೆ ಮಾಡಿ ಧೈರ್ಯವಾಗಿ ಬಾವಿಗಳನ್ನು ಆಳ ಮಾಡುವ ಧೋರಣೆಯನ್ನು ಸರ್ಕಾರ ಕೈಕೊಂಡಿತು. ಒಂದೊಂದು ತಾಲ್ಲೂಕಿಗೆ ಐದು ಲಕ್ಷ ರೂಪಾಯಿಗಳ ಪ್ರಕಾರ ಎರಡು ಕೋಟಿ ರೂಪಾಯಿ ಕೊಟ್ಟಿದ್ದೇವೆ. ಹಾಗೆ ಕೊಡುವ ಕಾಲಕ್ಕೆ ಏನು ಚರ್ಚೆ ಆಯಿತು ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತು. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿದೆ, ಅವರೂ ಸಾಲ ಕೊಡುತ್ತಾರೆ, ಪುನಃ ಬಾವಿಗಳ ಆಳವನ್ನು ಹೆಚ್ಚು ಮಾಡುವುದಕ್ಕೆ ಸಾಲ ಕೊಡಬೇಕಾದ ಆವಶ್ಯಕತೆ ಇಲ್ಲ ಎಂದು ಹೇಳಿದಾಗ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿ ಅದರಿಂದ ತಡವಾಯಿತು. ಆ ಚರ್ಚೆಯನ್ನು ನಾವು ಬಿಟ್ಟು, ಕ್ಷಾಮ ಪರಿಸ್ಥಿತಿಯಲ್ಲಿ, ವಾರ್ ಬೇಸಿಕ್ ಮೇಲೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಮಾಡಿದ್ದೇವೆ. ನಾವು ಹಾಕಿರುವ ಕಾರ್ಯಕ್ರಮವನ್ನು ಕಾರ್ಯಗತ ಮಾಡುವುದರಲ್ಲಿ ಏನಾದರೂ ತೊಂದರೆ ಇದ್ದರೆ, ಲ್ಯಾಪ್ಸಸ್ ಇದ್ದರೆ ಅದರ ಬಗ್ಗೆ ಸ್ಪೆಸಿಫಿಕ್ ಇನ್‌ಸ್ಟೆನ್ಸನ್ ಕೊಟ್ಟರೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರು ಹೇಳಿರುವು ದನ್ನು ಗುರುತು ಹಾಕಿಕೊಂಡಿದ್ದೇನೆ. ಮಾನ್ಯ ಸದಸ್ಯರ ಭಾಷಣದ ನಂತರ ಇನ್ನು ಏನಾದರೂ ವಿವರಗಳಿದ್ದರೆ, ಕೊಟ್ಟರೆ ತಕ್ಷಣ ನೋಡಿಸುತ್ತೇನೆ. ಇಂಪ್ಲಿಮೆಂಟೇಷನ್‌ನಲ್ಲಿ ದೋಷ ಕಂಡು ಬಂದರೆ ಅದನ್ನು ತಕ್ಷಣ ನೋಡಬೇಕೆಂದು ನಮ್ಮ ಉದ್ದೇಶ. ಆದುದರಿಂದ ಸರ್ಕಾರದ ಧೋರಣೆಗೆ ಧಕ್ಕೆ ತರತಕ್ಕ ಸಂದರ್ಭಗಳನ್ನು ನಮ್ಮ ಗಮನಕ್ಕೆ ತರಬೇಕು. ಬಾವಿಗಳನ್ನು ಆಳಪಡಿಸುವುದಕ್ಕೆ ಸಾಲ ಕೊಡುವುದರ ಆವಶ್ಯಕತೆ ಇದೆಯೋ ಎಂದು ಕೇಂದ್ರ ಸರ್ಕಾರದವರು ಕೇಳಿದರು. ಈ ಬಗ್ಗೆ ವಿಪರೀತ ಚರ್ಚೆ ಮಾಡುವುದರಿಂದ ನಮ್ಮ ಧೋರಣೆಗೆ ಧಕ್ಕೆ

ಬರಬಹುದು. ಬಾವಿಗಳನ್ನು ಆಳಪಡಿಸುವುದಕ್ಕೆ ಹಣ ಕೊಟ್ಟರೆ ಅದರಿಂದ ನೀರಾವರಿ ಯಾಗುವುದಲ್ಲದೆ, ಕುಡಿಯುವ ನೀರಿಗೂ ಅನುಕೂಲವಾಗುತ್ತದೆ ಎಂದು ಹೇಳಿದೆವು. ಆದುದ ರಿಂದ ಈ ಬಗ್ಗೆ ಟೀಕೆ ಮಾಡುವಾಗ ಸ್ವಲ್ಪ ಯೋಚನೆ ಮಾಡಿ ಮಾಡಬೇಕಾದ್ದು ಮುಖ್ಯ. ಇಲ್ಲದೆ ಹೋದರೆ ಏನು ಧೋರಣೆಯನ್ನು ಹಾಕಿಕೊಂಡಿದ್ದೇವೆ ಅದಕ್ಕೆ ಧಕ್ಕೆ ಬರಬಹುದು.

ಶ್ರೀ ವಿ. ಎನ್. ಪಾಟೀಲ್ : ಪಾಲಿಸಿ ಮ್ಯಾಟರ್ಸ್‌ನಲ್ಲಿ ಸಾಕಷ್ಟು ಸಹಕಾರವಿದೆ. ನಾವು ಮೊದಲು ಕೇಳಿದಾಗ ತಾವು ಒಪ್ಪಲಿಲ್ಲ. ಕೆಲವು ಜನರ ಕೈಯಲ್ಲಿ ಹಣ ಸಿಕ್ಕಿ ಅನ್ಯಾಯವಾಗು ತ್ತಿದೆ. ಆಮೇಲೆ ಫಾಡರ್ ಲೋನ್ಸ್ ವಿಚಾರ.

ಶ್ರೀ ಎಂ. ವೈ. ಘೋರ್ಪಡೆ: ಫಾಡರ್ ಲೋನ್ಸ್ ಬಗ್ಗೆ ಚರ್ಚೆಯಾಯಿತು. ಫಾಡರ್ ರೂಪದಲ್ಲಿ ಸಾಲ ಕೊಡುವುದಕ್ಕೆ ಅವಕಾಶ ಮಾಡಿದ್ದೇವೆ. ತಕಾವಿ ಯಾವುದನ್ನೂ ಕೊಡಬಾ ರದು. ಆದರೂ ಕೂಡ ಫಾಡರ್‌ಗೋಸ್ಕರ ಫಾಡರ್ ರೂಪದಲ್ಲಿ ಸಾಲ ಕೊಡುವುದಕ್ಕೆ ಅವಕಾಶ ಮಾಡಿದ್ದೇವೆ. We have to react to public opinion. This is a responsive Government and Government is interested in solving the problem.

Sri V. N. PATIL.—I thank the Hon'ble Finance Minister. Sometimes the criticims might be embarrassing to the Centre. May be, the Hon. Minister may mistake me but I may tell the Hon. Minister that when the Central Study Team visited and when Sri Dhar and other Planning Commission Members visited our area, our party stood in the forefront to demand additional amount and we never questioned that demand that was made by our Government. When the situation deteriorated, it was time our Government rose to the occasion and demanded additional amount. In fact, myself and the Secretary of my party have presented a memorandum to Sri Dhar when he visited Gulbarga. The trend that is developing since the last two months among the officials is that they do not care what the legislators or M.Ps want to be done, and they will do what they feel. They will not call for any meeting nor will they take any guidelines. They do not bother about the sufferings of the people. Corruption is gaining the upper hand. I am not talking only of my taluk ; this may be the position in other taluks also. During the last one month our officials have played havoc. Let the Government say how many applications are pending, how many have been sanctioned and what are the guidelines ? If there is co-operation from the Minister we do not bother about co-operation from the officers and we will boycott them.

Coming to the wholesale trade, I may tell the House that 25 per cent of the cattle are surviving and 75 per cent of them have

perished. People have lost their purchasing capacity. There is the possibility of corruption and other things. We should give deterrent punishment to the corrupt officers and take a charitable approach to the common people. I suggest that a person who is having two bullocks should be given fodder sufficient to keep them alive because they have lost the purchasing capacity. Fodder should be given free of cost to a person who has no purchasing capacity. This is most essential.

Sri M. Y. GHORPADE.—Sir, so far as animals are concerned, no doubt some animals might have perished but in our view good quality bullocks have not died. Some of the animals which are relatively not so useful might have died. Some of them might have been sold also. That 75 per cent of the animals have died or disappeared is a sheer exaggeration. It is very difficult to estimate but the figure of the Hon. Member is exaggerated. We have accepted the idea to help the small cultivator who may have a pair of bullocks. We have made provision to supply him fodder on loan and this will be the policy. Whatever fodder we have we will try to supply to the farmer. I hope the Hon. Member will appreciate that we cannot do anything more under the circumstances.

ಶ್ರೀ ವಿ. ಎನ್. ಪಾಟೀಲ್ :—ಅಳಿಯ ಎಂದರೂ ಒಂದೇ ಮಗಳ ಗಂಡ ಎಂದರೂ ಒಂದೇ. ನಾನು ಹೇಳುತ್ತಿರುವುದು ಈಗ ಇರುವ ಕ್ಯಾಟಲ್ ವೆಲ್ತ್ ಶೇಕಡ 75 ರಷ್ಟು ಕಡಿಮೆ ಯಾಗಿದೆ. ಇದರಲ್ಲಿ ಕೆಲವು ಸತ್ತು ಹೋಗಿರಬಹುದು, ಕೆಲವರು ಮಾರಿಕೊಂಡಿರಬಹುದು. ಆದರೆ ನಾನು ಹೇಳುವುದು ಕೆಲವು ರೈತರಲ್ಲಿ ಕೊಂಡುಕೊಳ್ಳಲು ಚೈತನ್ಯವೇ ಇಲ್ಲ. ಇಂತಹ ಬಡ ರೈತರು ಯಾರಲ್ಲಿ ಒಂದು ಜೊತೆ ದನ ಇಲ್ಲವೇ ಎತ್ತು ಇರುತ್ತೋ ಅಂತಹವರಿಗೆ ಪುಕ್ಕಟೆ ಯಾಗಿ ಫಾಡರನ್ನು ಕೊಟ್ಟು ಸಹಾಯ ಮಾಡಬೇಕು ಎಂದು ನಾನು ಹೇಳುತ್ತಿರುವುದು. ಇದರಿಂದ ಸ್ವಲ್ಪ ಮಟ್ಟಿಗಾದರೂ ದನಕರುಗಳನ್ನು ಉಳಿಸಲು ಸಹಾಯವಾಗುತ್ತದೆ. ಮಾನ್ಯ ಮಂತ್ರಿಗಳು ನಾನು ಇಲ್ಲಿ ಹೇಳುವುದು ಎಕ್ಸಾಜರೇಟ್ ಆಗಿದೆ ಎಂದು ಹೇಳಿದರೆ ನನಗೇನೂ ಅದರಿಂದ ಅಫೆಂಡ್ ಆಗುವುದಿಲ್ಲ. ಒಟ್ಟಿನಲ್ಲಿ ನನಗೆ ಬೇಕಾಗಿರುವುದು ಸಾಯುತ್ತಿರುವ ರೈತರಿಗೆ ಬೇಕಾಗಿರುವ ಹುಲ್ಲನ್ನು ಕೊಡಬೇಕು ಎಂದು ಇನ್ನು ಮುಂಗಾರು ಮಳೆ ಬರುತ್ತದೆ ಎಂದು ಇವರನ್ನು ಕೈಬಿಡುವ ಹಾಗಿಲ್ಲ. ಇವರಿಗೆ ಸಾಕಾಗುವಷ್ಟು ಬೀಜ, ಗೊಬ್ಬರ ಒದಗಿಸಿ ಕೊಡಬೇಕು ಮತ್ತು ವ್ಯವಸಾಯ ಮಾಡಲು ಬೇಕಾಗುವ ಇತರ ಸೌಕರ್ಯಗಳನ್ನೂ ಅವರಿಗೆ ಮೊದಲು ಒದಗಿಸಿಕೊಟ್ಟು ಅನಂತರ ಇದಕ್ಕಾಗಿ ಕೊಡುವ ಸಾಲವನ್ನು ಮುಂದೆ ಬೇಕಾದರೆ ಸರಕಾರ ಲ್ಯಾಂಡು ರೆವಿನ್ಯೂ ಅರಿಯರ್ಸ್‌ನಂತೆ ವಸೂಲು ಮಾಡಿಕೊಳ್ಳಬಹುದು. ಇದರ ಬಗ್ಗೆ ಒಂದು ರೀತಿಯಾದ ಪ್ಲಾನ್ ಅಪ್ರೋಚ್ ಇರಬೇಕು. ಇದಕ್ಕಾಗಿ ಹೇಳುತ್ತಿದ್ದೇನೆ. ಮತ್ತು ಯಾವ ರೈತರಿಗೆ ಬೇಕಾದರೂ ಟ್ರಾಕ್ಟರುಗಳನ್ನು ಫ್ರೀ ಆಫ್ ಕಾಸ್ಟ್‌ನಲ್ಲಿ ಒದಗಿಸಿಕೊಡ ಬೇಕು.

ಇನ್ನು ಫುಡ್ ಗ್ರೇನ್ಸ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಸರಕಾರವೇನೋ ಸಾಕಷ್ಟು ಕಳುಹಿಸುತ್ತಿದ್ದಾರೆ. ಇದು ಸಂತೋಷದ ವಿಚಾರ. ಸರಕಾರದ ಧೋರಣೆಯನ್ನೂ ಒಪ್ಪುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ :—ಒಂದು ಸಂತೋಷದ ವಿಚಾರವನ್ನು ಇಲ್ಲಿ ತಿಳಿಸಬೇಕಾಗಿದೆ. ಕೇಂದ್ರ ಸರಕಾರ ನಮ್ಮ ಧೋರಣೆಯನ್ನು ಪೂರ್ತಿಯಾಗಿ ಒಪ್ಪಿಕೊಂಡಿದೆ. ಮೈಸೂರು ರಾಜ್ಯದಲ್ಲಿ 15 ಕೋಟಿ ರೂಪಾಯಿಗಳವರೆಗೆ ಖರೀಫ಼ ಪ್ರೋಗ್ರಾಂ ಹಾಕಿರುವುದು ತುಂಬಾ ಸಂತೋಷದ ವಿಷಯ ಎಂದು ಅವರು ಹೇಳಿದ್ದಾರೆ. ಕೇಂದ್ರ ಸರಕಾರ ಇದರಿಂದ ಹೆಚ್ಚು ಉತ್ಪಾದನೆ ಮಾಡಲು ಸಾಧ್ಯವಿದ್ದರೆ ಆದಷ್ಟು ಹೆಚ್ಚು ಖರೀಫ಼ ಉತ್ಪಾದನೆ ಮಾಡಲು ಒಂದು ಸ್ಪೆಷಲ್ ಪ್ರೋಗ್ರಾಂ ಹಾಕಿಕೊಂಡು ಅದರಂತೆ ಕೆಲಸ ಮಾಡಿದರೆ ಇದರ ಪೂರ್ತಿ ವೆಚ್ಚದ ಬಗ್ಗೆ ಸಹಾಯ ಮಾಡುತ್ತೇವೆಂದೂ ಹೇಳಿದ್ದಾರೆ. ಇಂತಹ ಒಂದು ಧೋರಣೆ ಬಗ್ಗೆ ಕೇಂದ್ರ ಸರಕಾರದವರೂ ಹೇಳಿರುವುದರಿಂದ ನಮ್ಮ ಸರಕಾರ ಯಾವ ರೀತಿ ಇದಕ್ಕೆ ಪ್ರೋಗ್ರಾಂ ಹಾಕಿ ಕೊಂಡು ರೈತರಿಗೆ ಸಹಾಯ ಮಾಡಬಹುದು ಎನ್ನುವ ವಿಚಾರವೂ ಸರಕಾರದ ಮುಂದೆ ಇದೆ

ಶ್ರೀ ವಿ. ಎನ್. ಪಾಟೀಲ್ :—ರೈತರಿಂದ ಎಷ್ಟು ಬೆಳೆ ಮಾಡಲು ಸಾಧ್ಯ ಇವರಿಗೆ ಆಗುವ ರೀಸನಬಲ್ ಕಾಸ್ಟ್ ಆಫ್ ಪ್ರೊಡಕ್ಷನ್ ಯಾವ ರೀತಿ ಆಗಬೇಕು ಎನ್ನುವುದನ್ನು ವಿಚಾರ ಮಾಡಿ ಇದರಲ್ಲಿ ಲಾಸಾಗದಂತೆ ಆದಷ್ಟು ರೆಮ್ಯೂನರೇಟೀವ್ ಆಗಿ ಮಾಡಬೇಕೆಂದು ನನ್ನ ಸಲಹೆ, ನಮ್ಮ ರೈತರಿಗೆ ಬೆಳೆ ಮಾಡಲು ಅನುಕೂಲವಾಗುವಂತೆ ಅವನಿಗೆ ಬೇಕಾಗಿರುವ ಸೀಮೆಎಣ್ಣೆ ಹಾಗೂ ಬಟ್ಟೆ ಇವನ್ನೂ ಒದಗಿಸಿಕೊಡಬೇಕು. ಪಂಪುಸೆಟ್ಟುಗಳನ್ನು ಒದಗಿಸಿಕೊಡಬೇಕು ಮತ್ತು ಕಂಟ್ರೋಲ್ ಮಾಡಿರುವ ಎಲ್ಲ ಪದಾರ್ಥಗಳನ್ನೂ ಒದಗಿಸಿಕೊಡಬೇಕು ಇಲ್ಲದಿದ್ದರೆ ರೈತರಿಗೆ ಬಹಳ ಕಷ್ಟವಾಗುತ್ತದೆ.

ಇನ್ನೊಂದು ವಿಶೇಷವಾದ ವಿಚಾರವನ್ನು ಇಲ್ಲಿ ಹೇಳಬೇಕಾಗಿದೆ. ನಿಮ್ಮ ಅಫಿಷಿಯಲ್ ಸೆಕ್ಷನ್‌ನಲ್ಲಿ ಇರುವ ಅಧಿಕಾರಿಗಳು ಸರಿಯಾಗಿ ಸಹಾಯ ಮಾಡುತ್ತಿಲ್ಲ. ಇವರು ಹಾಗೂ ಇವರ ಜೊತೆ ಕೆಲವರು ವೆಸ್ಟೆಡ್ ಇಂಟರೆಸ್ಟ್‌ನವರು ನಿಮ್ಮ ಇಂದಿರಾ ಗಾಂಧಿಯವರು ಹಾಕಿರುವ ಪ್ರೋಗ್ರಾಂನ್ನು ಫೇಲ್ಯೂರ್ ಆಗುವಂತೆ ಮಾಡಲು ಹಾಗೂ ನಿಮ್ಮ ಸ್ಕೀಂಗಳನ್ನು ಸ್ಯಾಬೋಟೇಜು ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕಾಗಿ ನಿಮ್ಮಲ್ಲಿರುವ ಅಧಿಕಾರಿ ಗಳನ್ನು ಸರಿಯಾಗಿ ಸ್ಕ್ರೀನ್‌ಮಾಡಿ ನಿಮ್ಮ ಯೋಜನೆಯಲ್ಲಿ ನಂಬಿಕೆ ಉಳ್ಳಂತಹ ಅಧಿಕಾರಿ ಗಳನ್ನು ಇಲ್ಲಿ ನೇಮಕ ಮಾಡಬೇಕು. ಇದನ್ನು ಬಿಟ್ಟು ಬರೀ ಐ.ಎ.ಎಸ್. ಅಧಿಕಾರಿಗಳನ್ನು ಇಲ್ಲಿ ನೇಮಕ ಮಾಡಬೇಕೆಂದು ಮಾಡಿದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ.

ಮೂರನೇ ವಿಷಯವೆಂದರೆ, ಪ್ರತಿಯೊಂದು ಗ್ರಾಮದಲ್ಲಿಯೂ, ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಡೀ ಹೋರ್ಡಿಂಗ್ ಕಮಿಟಿ ಎಂದು ಮಾಡಿ, ಆ ಕಮಿಟಿಗಳಲ್ಲಿ ಹೋಲ್‌ಸೇಲ್ ಟ್ರೇಡ್ ಬಗ್ಗೆ ಯಾರಿಗೆ ನಂಬಿಕೆ ಇದೆಯೋ ಅಂತಹವರನ್ನು, ಅವರು ಯಾವ ಪಾರ್ಟಿಗಳಿಗೇ ಸೇರಿರಲಿ, ನೇಮಕ ಮಾಡಬೇಕು. ಆರೀತಿ ಮಾಡಿದರೆ ಬ್ಲಾಕ್ ಮಾರ್ಕೆಟ್ ಮಾಡುವವರನ್ನು ಮತ್ತು ಹೋರ್ಡ್ ಮಾಡುವವರನ್ನು ಹಿಡಿಯುವುದಕ್ಕೆ ಅವಕಾಶವಾಗುತ್ತದೆ. ಮತ್ತು ಇಂದು ಪೋಲೀಸಿನವರು ಇಂತಹ ಕಳ್ಳನನ್ನು ಹಿಡಿದುಕೊಟ್ಟರೆ ಇಷ್ಟು ಇನಾಂ ಕೊಡುತ್ತೇವೆಂದು ಯಾವ ರೀತಿ ಪ್ರಚಾರ ಮಾಡುತ್ತಾರೋ ಅದೇ ರೀತಿ ಹೋರ್ಡ್ ಮಾಡಿರುವವನ್ನು ಹಿಡಿದುಕೊಟ್ಟರೆ ಇನಾಂ ಕೊಡುವುದಾಗಿ ಸಾರ್ವಜನಿಕರಿಗೆ ತಿಳಿಸಬೇಕು. ಇಂದು ಯಾರು ಯಾರು ಸ್ವಂತಕ್ಕಾಗಿ ಲಾಭ ಮಾಡಿಕೊಳ್ಳಲು ಮನೆಗಳಲ್ಲಿ ಆಹಾರಧಾನ್ಯಗಳನ್ನು ಮುಚ್ಚಿಟ್ಟಿದ್ದಾರೋ ಅದನ್ನೆಲ್ಲಾ ಕಂಡುಹಿಡಿದು ಸರ್ಕಾರದವರು ಸ್ವಾಧೀನಪಡಿಸಿಕೊಳ್ಳಬೇಕು. 'ಏಕೆಂದರೆ ಅದು ದೇಶದ ಸ್ವತ್ತು' ಇಂತಹವರ ಬಗ್ಗೆ ಲೀಗಲ್‌ಆಕ್ಷನ್ ತೆಗೆದುಕೊಳ್ಳುವ

ಬಗ್ಗೆ ಸೂಕ್ತ ಅಮೆಂಡ್‌ಮೆಂಟ್‌ನ್ನು ಈ ಸದನದ ಮುಂದೆ ತರುವ ಬಗ್ಗೆ ಲಾ-ಡಿಪಾರ್ಟ್‌ಮೆಂಟ್‌ನ ಒಪ್ಪಿಗೆಯನ್ನು ಪಡೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬೈರಪ್ಪಾಜಿ : (ತುರುವೇಕೆರೆ) :—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಮಂಡಿಸಿರತಕ್ಕಂಥ 45, 33, 15 (ಎ) ಮತ್ತು 53ನೇ ಡಿಮ್ಯಾಂಡ್‌ಗಳನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮೊದಲನೆಯದಾಗಿ ಮೇಜರ್ ಇರಿಗೇಷನ್ ಬಗ್ಗೆ, ನಮ್ಮ ಜಿಲ್ಲೆ ಹಾಗೂ ಪಕ್ಕದ ಜಿಲ್ಲೆಗೆ ಸಂಬಂಧಪಟ್ಟಂತೆ ನಾನು ನಮ್ಮ ಒಂದು ತೊಂದರೆಯನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗ ಹೇಮಾವತಿ ಜಲಾಶಯದ ಕೆಲಸದ ಬಹುಭಾಗ ಮುಗಿದು ಇನ್ನು ಎರಡು ವರ್ಷಗಳಲ್ಲಿ ಪೂರ್ಣಮಾಡುತ್ತೇವೆಂಬ ಆಶ್ವಾಸನೆಯನ್ನು ಸರ್ಕಾರದವರು ಕೊಟ್ಟಿದ್ದಾರೆ. ನಮ್ಮ ತುಮಕೂರು ಜಿಲ್ಲೆ ಹಾಗೂ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕ್ ಬಹಳ ಕಷ್ಟದಲ್ಲಿರತಕ್ಕಂಥ ಭಾಗಗಳು. ವರ್ಷೇ ವರ್ಷೇ ಒಂದಲ್ಲ ಒಂದು ಸ್ಥಳದಲ್ಲಿ ಮಳೆ ಇಲ್ಲದೆ ಕ್ಷಾಮ ಬರುತ್ತಿರುತ್ತದೆ. ಇದು ಸರ್ಕಾರಕ್ಕೆ ಹಾಗೂ ಎಲ್ಲರಿಗೂ ಗೊತ್ತಿರುವ ವಿಚಾರ. ನಮ್ಮ ಜಿಲ್ಲೆಯ ಸುಮಾರು 5 ತಾಲ್ಲೂಕ್‌ಗಳಿಗೆ ಅಂದರೆ ತಿಪಟೂರು, ತುರುವೇಕೆರೆ, ಕುಣಿಗಲ್ ಗುಬ್ಬಿ ಮತ್ತು ತುಮಕೂರು, ಈ ಭಾಗಗಳಿಗೆ ಹೇಮಾವತಿ ನೀರನ್ನು ಕೊಡಬೇಕೆಂದು ನಾವು ಪದೇಪದೇ ಸರ್ಕಾರಕ್ಕೆ ಒತ್ತಾಯ ಹಾಗೂ ಮನವಿಗಳನ್ನು ಸಲ್ಲಿಸಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಒಂದು ವಿನಂತಿಗೆ ಮನ್ನಣೆ ಕೊಟ್ಟು, ಹಾಗೂ ನೀರಾವರಿ ಮಂತ್ರಿಗಳಾದ ಶ್ರೀ ಮಾನ್ ನಂಜೇಗೌಡರು ಕೂಡ ಈ ಬಗ್ಗೆ ವಿಶ್ವಾಸವಿಟ್ಟು ನಮ್ಮ ಜಿಲ್ಲೆಗೂ ನೀರನ್ನು ಒದಗಿಸುತ್ತೇವೆಂಬ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿಗೂ ನೀರನ್ನು ಒದಗಿಸುತ್ತೇವೆಂದು ಈಗಾಗಲೇ ಹೇಳಿದ್ದಾರೆ. ಈ ಒಂದು ಕೆಲಸ ಹಣದ ಮುಗ್ಗಟ್ಟಿನಿಂದ ನಿಲ್ಲಬಾರದೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. ಈ ವರ್ಷ ನಮ್ಮ ಭಾಗದಲ್ಲಿ ಅನೇಕ ಕಡೆಗಳಲ್ಲಿ ಕ್ಷಾಮ ತಲೆದೋರಿದೆ. ಜನರಿಗೆ ಕೂಲಿ ಇಲ್ಲ, ಕುಡಿಯುವುದಕ್ಕೆ ನೀರಿಲ್ಲ ; ಬಿದರ್, ಗುಲ್ಬರ್ಗ ಜಿಲ್ಲೆಗಳಷ್ಟೆ ನಮ್ಮ ಜಿಲ್ಲೆಯೂ ಕೂಡ ಕ್ಷಾಮಕ್ಕೆ ತುತ್ತಾಗಿರತಕ್ಕಂಥ ಜಿಲ್ಲೆ ಎಂದು ಸರ್ಕಾರಕ್ಕೆ ವಿನಂತಿ ಮಾಡಿ ಕೊಳ್ಳುತ್ತೇನೆ. ಈ ದೃಷ್ಟಿಯಿಂದ ಜಾಗ್ರತೆ ನಮಗೆ ಈ ನೀರು ಸಿಗುವಂತಾಗಲು ಚಾನಲ್ ಕೆಲಸವನ್ನು ಈ ವರ್ಷವೇ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. 64ನೇ ಫ್ಯಾಮಿನ್ ರಿಲೀಫ್‌ನಿಂದ ಖರ್ಚು ಮಾಡುವ ಹಣವನ್ನೇ ಈ ಚಾನಲ್ ಕೆಲಸಕ್ಕೆ ಉಪಯೋಗ ಮಾಡಿದರೆ ಪರ್ಮನೆಂಟ್ ಕೆಲಸವೂ ಆಗುತ್ತದೆ ಮತ್ತು ಜನರಿಗೆ ಕೆಲಸವೂ ಸಿಗುತ್ತದೆ. ಮತ್ತು ಹಣವೂ ಉಪಯುಕ್ತವಾದ ಕೆಲಸಕ್ಕೆ ಖರ್ಚಾದಂತೆ ಆಗುತ್ತದೆ. ಈ ಕೆಲಸ ಮಾಡಿಸಲು ಹಣದ ಕೊರತೆ ಇದ್ದರೆ, ಸರ್ಕಾರ ಯಾವುದಾದರು ಷೆಡ್ಯೂಲ್ ಬ್ಯಾಂಕ್‌ಗೆ ಗ್ಯಾರಂಟಿಯಾಗಿ ನಿಂತರೆ ನಾವು ಅಡ್ವಾನ್ಸ್ ಕಾನ್‌ಟ್ರಿಬ್ಯೂಷನ್ ಕೊಡುವುದಕ್ಕೆ ತಯಾರಿದ್ದೇವೆ. ಹೇಮಾವತಿ ಜಲಾಶಯದಿಂದ ಅನುಕೂಲ ಪಡೆಯುವ ಮಂಡ್ಯ ಮತ್ತು ತುಮಕೂರು ಜಿಲ್ಲೆಯ ರೈತರೆಲ್ಲರೂ ಸಹ ಅಡ್ವಾನ್ಸ್ ಕಾನ್‌ಟ್ರಿಬ್ಯೂಷನ್ ಕೊಡುವುದಕ್ಕೆ ಸಿದ್ಧರಾಗಿದ್ದೇವೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ದೃಷ್ಟಿಯಿಂದಲಾದರೂ ಈ ಕೆಲಸವನ್ನು ತ್ವರಿತವಾಗಿ ಮುಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಈ ಒಂದು ಯೋಜನೆಯ ಅಂದಾಜನ್ನು ಈಗಾಗಲೇ ತಯಾರು ಮಾಡುತ್ತಿದ್ದಾರೆಂದು ಕೇಳಿದ್ದೇನೆ. ಮತ್ತು ಒಂದು ಎಕರೆಗೆ 600 ರೂಪಾಯಿಗಳವರೆಗೆ ಮಾತ್ರ ಖರ್ಚು ಬರುತ್ತದೆಂದು ಇಂಜಿನಿಯರ್‌ಗಳು ಹೇಳುತ್ತಿದ್ದಾರೆ. ಇಷ್ಟು ಕಡಿಮೆ ಖರ್ಚಿನಲ್ಲಿ ಆಗುವ ಕೆಲಸವನ್ನು ಜಾಗ್ರತೆ ಮಾಡಿಸಬೇಕು. ಅಣೆಕಟ್ಟಿನ ಕೆಲಸದ ಜೊತೆಯಲ್ಲಿಯೇ ಚಾನಲ್ ಕೆಲಸವನ್ನು ಸಹ ಪ್ರಾರಂಭ ಮಾಡಬೇಕೆಂದು ಮುಖ್ಯ ಮಂತ್ರಿಗಳಲ್ಲಿ ಮತ್ತೊಮ್ಮೆ

ವಿನಂತಿ ಮಾಡಿಕೊಳ್ಳುತ್ತೇನೆ. ಸಿರಾ, ಮಧುಗಿರಿ, ಪಾವಗಡ ತಾಲ್ಲೂಕ್‌ಗಳಿಗೆ ಅಪ್ಪರ್‌ಭದ್ರಾ ಜಲಾಶಯದಿಂದ ನೀರನ್ನು ಒದಗಿಸಬೇಕೆಂದು ಪದೇಪದೇ ಕೇಳುತ್ತಿದ್ದೇವೆ. ಆದರೆ ಸರ್ಕಾರದವರು ಗಮನ ಕೊಟ್ಟಿಲ್ಲ. ಈಗಲಾದರೂ ಈ ದಿಶೆಯಲ್ಲಿ ಸರ್ಕಾರದವರು ತ್ವರಿತವಾದಂಥ ಕ್ರಮವನ್ನು ತೆಗೆದುಕೊಂಡು ಪದೇಪದೇ ಕ್ಷಾಮಕ್ಕೆ ತುತ್ತಾಗತಕ್ಕಂಥ ಈ ಪ್ರಾಂತ್ಯಗಳಿಗೆ ನೀರನ್ನು ಒದಗಿಸಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿ ಕೊಳ್ಳುತ್ತೇನೆ. ತುಮಕೂರು ಜಿಲ್ಲೆಯ ತಿರುಕನಪಾಳ್ಯ ಮೀಡಿಯಂ ಪ್ರಾಜೆಕ್ಟನ್ನು ಜಾಗ್ರತೆ ಕೈಕೊಳ್ಳಬೇಕೆಂದು ನಾವು 7–8 ವರ್ಷಗಳಿಂದಲೂ ಕೇಳುತ್ತಿದ್ದೇವೆ. ಇದು ಫೀಸಿಬಿಲಿಟಿ ಪ್ರಾಜೆಕ್ಟ್ ಆಗಿದೆ. ಇದನ್ನು ಮಾಡಿಸಿದರೆ ಕ್ಷಾಮಕ್ಕೆ ತುತ್ತಾಗುತ್ತಿರುವ ಕೊರಟಗೆರೆಗೆ ಮತ್ತು ಪಾವಗಡ ತಾಲ್ಲೂಕ್‌ಗಳಿಗೆ ಅನುಕೂಲವಾಗುತ್ತದೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ಪ್ರಾಜೆಕ್ಟ್ ಕೆಲಸವನ್ನು ಈ ವರ್ಷವೇ ಕೈಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಎಲ್ಲೋ ಕೆಲವು ಭಾಗಗಳು ಉತ್ತಮ ವಾಗಿದ್ದರೂ ಸಹ ಬಹುಭಾಗದಲ್ಲಿ ಜನರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ನನ್ನ ಕ್ಷೇತ್ರದ ಅನೇಕ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಜನರಿಗೆ ಕೂಲಿ ಒದಗಿಸುವ ಸ್ಥಿತಿಯಲ್ಲಿಲ್ಲ. ಜನರು ಊರನ್ನು ಬಿಟ್ಟು ಕೆಲಸಕ್ಕಾಗಿ ಭದ್ರಾವತಿ ಕಡೆಗೆ ಮತ್ತು ಬೆಂಗಳೂರು ಕಡೆಗೆ ಹೋಗಿರುವುದುಂಟು.

ಇಂಥಾ ಸಂದರ್ಭದಲ್ಲಿ ತಾಲ್ಲೂಕುಗಳನ್ನೂ ಮತ್ತು ಜಿಲ್ಲೆಗಳನ್ನೂ ನಿರ್ಲಕ್ಷ್ಯ ಮಾಡಬಾರದು ಎಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಬಿಜಾಪುರದಲ್ಲಿ ತೊಂದರೆಯಾಗಿದೆ. ಗುಲ್ಬರ್ಗದಲ್ಲಿ ತೊಂದರೆಯಾಗಿದೆ. ಅಲ್ಲಿ ಮಾಡಬಾರದು ಎಂದು ನಾನು ಹೇಳುತ್ತಿಲ್ಲ. ಇಲ್ಲಿಯೂ ಕೂಡ ತೊಂದರೆಯಾಗಿರತಕ್ಕ ಪ್ರದೇಶಗಳನ್ನು ಗಣನೆಗೆ ತೆಗೆದುಕೊಂಡು ಇಲ್ಲಿಯೂ ಕೂಡ ಅಲ್ಲಿ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಇಲ್ಲಿ 50 ಲಕ್ಷ ರೂಪಾಯಿ ಗಳನ್ನು ಖರ್ಚು ಮಾಡಬೇಕು. ಇಲ್ಲದಿದ್ದರೆ ಸ್ವಲ್ಪಮಟ್ಟಿಗೆ ಪಕ್ಷಪಾತ ಮಾಡಿದಂತಾಗುತ್ತದೆ ಎಂದು ನಾನಾದರೂ ಭಾವಿಸುತ್ತೇನೆ. ಕೋಲಾರ ಜಿಲ್ಲೆಯಲ್ಲಿ, ಹಾಸನಾ ಜಿಲ್ಲೆಯಲ್ಲಿ ಹಾಗೂ ಮಂಡ್ಯ ಜಿಲ್ಲೆಯಲ್ಲಿ, ಕೆಲವು ಭಾಗ ತುಮಕೂರು ಜಿಲ್ಲೆಯಲ್ಲಿ ಬಹುಭಾಗ ಕ್ಷಾಮಕ್ಕೆ ತುತ್ತಾಗಿದೆ. ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳೂ ಕ್ಷಾಮಕ್ಕೆ ತುತ್ತಾಗಿವೆ. ಆದ್ದರಿಂದ ಆ ತಾಲ್ಲೂಕು ಗಳ ಬಗ್ಗೆ ಕೊಂಚಮಟ್ಟಿಗಾದರೂ ಕೂಡ ಸಹಾನುಭೂತಿಯನ್ನು ತೋರಿಸಲೇ ಬೇಕಾಗುತ್ತದೆ. ಹೆಚ್ಚು ಹಣವನ್ನು ಆ ಪ್ರದೇಶಕ್ಕೆ ಖರ್ಚು ಮಾಡಿದರೂ ಕೂಡ ಅತ್ಯಾವಶ್ಯಕವಾಗಿ ಈ ಪ್ರಾಂತದಲ್ಲಿ ಕೂಡ ಖರ್ಚು ಮಾಡಬೇಕಾದ್ದನ್ನು ಖರ್ಚು ಮಾಡಬೇಕು ಎಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಫ್ಯಾಮಿನ್ ರಿಲೀಫ್ ಕಾಮಗಾರಿಯ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಬದಲಾಗಿ ಸಣ್ಣ ನೀರಾವರಿ ಕಾಮಗಾರಿಕೆಗಳನ್ನು ತೆಗೆದುಕೊಳ್ಳಬೇಕು. ಜನಗಳಿಗೆ ಒಂದು ಖಾಯಂ ಪರಿಹಾರವನ್ನು ಒದಗಿಸಬೇಕು. 10 ಎಕರೆಗಳಿಗೆ ಮೇಲ್ಪಟ್ಟು, 5 ಎಕರೆಗಳಿಗೆ ಮೇಲ್ಪಟ್ಟು ಸಣ್ಣ ನೀರಾವರಿ ಕಾಮಗಾರಿಗಳ ಕೆಲಸ ಒಂದು ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಸಿಕ್ಕುತ್ತವೆ ಅಂಥಾ ಕಡೆಗಳಲ್ಲೆಲ್ಲಾ ಈ ಸಣ್ಣ ನೀರಾವರಿ ಕಾಮಗಾರಿಗಳನ್ನು 64 ನೇ ಫ್ಯಾಮಿನ್ ಹೆಡ್‌ನಲ್ಲಿ ಮಾಡಿಸಬೇಕು. ಆ ರೀತಿ ಮಾಡುವುದಾದರೆ ಅಲ್ಲಿಯ ಜನಗಳಿಗೆ ಒಂದು ಪರ್ಮನೆಂಟ್ ರಿಲೀಫ್ ಕೊಟ್ಟಂತಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ರಿಲೀಫ್ ಕಾಮಗಾರಿಕೆಗಳನ್ನು ಏನು ಕೂಲಿಗಾರರಿಂದ ಮಾಡಿಸುತ್ತಾರೆ ಅವರಿಗೆ ನಿಧಾನವಾಗಿ ಕೂಲಿಯನ್ನು ಕೊಡುತ್ತಿದ್ದಾರೆ. ಇದು ಸರಿಯಲ್ಲ. ಅವರಿಗೆ ಕೂಲಿಯ ಹಣವನ್ನು ಬೇಗ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಸಿವಿಲ್ ಸಪ್ಲೈಸ್ ಮತ್ತು ಫುಡ್ ಇಲಾಖೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ ನಮ್ಮ ಹಳ್ಳಿಗಾಡುಗಳಲ್ಲಿ ಆಹಾರದ ತೊಂದರೆ ಬಹಳವಾಗಿದೆ. ಒಂದು ತಾಲ್ಲೂಕಿಗೆ 100 ಮೂಟೆ ಗೋಧಿ, 25 ಮೂಟೆ ಅಕ್ಕಿ ಕೊಟ್ಟರೆ ತಹಶೀಲ್ದಾರರು ಎಷ್ಟು ಜನಗಳಿಗೆ ಹಂಚ ಬಹುದು ಎಂದು ಮಾನ್ಯ ಆಹಾರ ಸಚಿವರನ್ನು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಒಂದು ಸಾವಿರ ಕ್ವಿಂಟಾಲನ್ನು ಒಂದು ತಾಲ್ಲೂಕಿನಲ್ಲಿ ಹಂಚಿದರೂ ಕೂಡ ಅದು ಎಷ್ಟು ಜನಗಳಿಗೆ ಯಾವ ಪ್ರಮಾಣದಲ್ಲಿ ದೊರೆಯುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಆದ್ದರಿಂದ ಸ್ಟ್ಯಾಟ್ಯುಟರಿ ರೇಷನಿಂಗ್ ಪದ್ಧತಿಯಲ್ಲಿ ಬೆಳೆ ಆಗದೇ ಇರುವ ಕಡೆಗಳಲ್ಲಿ ಆಹಾರ ಧಾನ್ಯವನ್ನು ಹಂಚದೇ ಹೋದರೆ ಅಲ್ಲಿನ ಜನಗಳಿಗೆ ಕಷ್ಟವಾಗುತ್ತದೆ. ಈಗ ನನ್ನ ತಾಲ್ಲೂಕಿನ ವಿಚಾರವನ್ನೇ ಹೇಳುವುದಾದರೆ ನನ್ನ ತಾಲ್ಲೂಕಿಗೆ ಅಕ್ಕಿಯೂ ಸೇರಿ 125 ಕ್ವಿಂಟಾಲ್ ಆಹಾರ ಧಾನ್ಯವನ್ನು ಒಂದು ತಿಂಗಳಿಗೆ ಕೊಡುತ್ತಿದ್ದಾರೆ. ಈ ಪ್ರಮಾಣದಲ್ಲಿ ಆಹಾರ ಧಾನ್ಯವನ್ನು ಒದಗಿಸಿದರೆ ಅದನ್ನು ಹಂಚುವುದಕ್ಕೆ ಸಾಧ್ಯವಾಗುವುದಿಲ್ಲ. ಜನಗಳಲ್ಲಿ ಹಾಹಾಕಾರ ಶುರುವಾಗುತ್ತದೆ. ಬ್ಲಾಕ್‌ಮಾರ್ಕೆಟ್ ಜಾಸ್ತಿಯಾಗುತ್ತದೆ. ಈವೊತ್ತು ಆಹಾರ ಧಾನ್ಯಗಳ ಬೆಲೆ ಗಂಟೆಗಂಟೆಗೂ ಏರುತ್ತಾ ಇರುವಾಗ ಇದನ್ನು ಇನ್ನೂ ಹೆಚ್ಚು ಮಾಡಿಕೊಂಡು ಹೋಗುವುದಕ್ಕೆ ಅವಕಾಶ ಕೊಡತಕ್ಕದ್ದು ಯೋಗ್ಯವಲ್ಲ. ಈಗ ತುಮಕೂರು ಜಿಲ್ಲೆಗೆ ಸರ್ಕಾರದವರು ಒದಗಿಸತಕ್ಕ ಆಹಾರಧಾನ್ಯ ಬಹಳ ಕಡಿಮೆ ಇದೆ ಎಂದು ನಾನು ಮಾನ್ಯ ಆಹಾರ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಈ ಬಗ್ಗೆ ವಿಚಾರ ವಿನಿಮಯ ಮಾಡಿ ತುಮಕೂರು ಜಿಲ್ಲೆಗೆ ಹೆಚ್ಚು ಆಹಾರಧಾನ್ಯವನ್ನು ಒದಗಿಸಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸೀಮೆಎಣ್ಣೆಯ ಬಗ್ಗೆ ಕೃತಕ ಅಭಾವ ಇದೆಯೋ ಏನೋ ಗೊತ್ತಿಲ್ಲ. ಬರತಕ್ಕಂಥಾ ಸೀಮೆ ಎಣ್ಣೆಯನ್ನು ಸರಿಯಾಗಿ ಹಂಚತಕ್ಕ ವ್ಯವಸ್ಥೆಯನ್ನು ಮಾಡಿಲ್ಲ. ಬರ್ಮಾಷೆಲ್‌ನವರು ಮತ್ತು ಇಂಡಿಯನ್ ಆಯಿಲ್ ಕಂಪೆನಿಯವರು ಅಂಗಡಿಗಳಿಗೆ ಒಂದು ಅಂಗಡಿಗೆ 500 ಲೀಟರ್ ಸೀಮೆಎಣ್ಣೆಯನ್ನು ಕೊಟ್ಟರೆ ಆ ಅಂಗಡಿಯವರು 100 ಲೀಟರ್ ಸೀಮೆಎಣ್ಣೆಯನ್ನು ಸರಿಯಾದ ರೇಟಿಗೆ ಮಾರತಕ್ಕದ್ದು, ಉಳಿದದ್ದನ್ನು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರತಕ್ಕದ್ದು ನಮ್ಮ ತಾಲ್ಲೂಕಿನಲ್ಲಿ ನಡೆಯುತ್ತಿದೆ ಎಂದು ನಾನು ಕೇಳಿದ್ದೇನೆ. ಆದ್ದರಿಂದ ಈ ಸೀಮೆಎಣ್ಣೆಯನ್ನು ಹಂಚತಕ್ಕ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಮಾಡದೇ ಹೋದರೆ ಅದು ಜನಗಳಲ್ಲಿ ಒಂದು ರೀತಿಯ ಕೆಟ್ಟ ಪರಿಣಾಮ ಉಂಟಾಗುತ್ತದೆ. ಅದಕ್ಕೆ ಅವಕಾಶ ಕೊಡಬಾರದು ಎಂದು ನಾನು ಹೇಳುತ್ತೇನೆ. ಬರತಕ್ಕಂಥಾ ಸೀಮೆಎಣ್ಣೆಯನ್ನು ಎಲ್ಲಾ ಹಳ್ಳಿಗಳಿಗೂ ಕೂಡ ಹಂಚತಕ್ಕಂಥಾ ಒಂದು ವ್ಯವಸ್ಥೆಯನ್ನು ಮಾಡಬೇಕು. ಪ್ರತಿ ಪಂಚಾಯಿತಿಯ ಹತ್ತೋಟಿಯಲ್ಲಿ ಒಂದು ಕಡೆ ಸೀಮೆಎಣ್ಣೆಯನ್ನು ಮಾರತಕ್ಕಂಥಾ ವ್ಯವಸ್ಥೆ ಮಾಡಬೇಕು. 4-5 ಹಳ್ಳಿಗಳಿಗೆ ಸೇರಿದಂತೆ ಒಂದು ಕಡೆ ಮಾರುವಂತೆ ವ್ಯವಸ್ಥೆ ಆದರೆ ಸಿಕ್ಕತಕ್ಕಂಥಾದ್ದು ಕಡಿಮೆ ಪ್ರಮಾಣದ್ದಾದರೂ ಪ್ರತಿಯೊಬ್ಬರಿಗೂ ದೊರೆಯುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಸೀಮೆಎಣ್ಣೆಯನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾರುವಂತೆ ಕೂಡಲೇ ಏರ್ಪಾಡು ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಸಿಮೆಂಟ್ ಕಂಟ್ರೋಲ್ ಮಾಡುವುದಕ್ಕೆ ವ್ಯವಸ್ಥೆಯಾಗಿದೆ. ಆದನ್ನೂ ಕೂಡ ಒಂದು ಮೂಟೆಗೆ 24-25 ರೂಪಾಯಿಗಳಂತೆ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರಾಟವಾಗುತ್ತಿದೆ. ಆ ರೀತಿ ಆಗಬಾರದು. ಅದನ್ನು ಕೂಡಲೇ ವ್ಯವಸ್ಥಿತ ರೀತಿಯಲ್ಲಿ ಸುಲಭವಾಗಿ ಕಂಟ್ರೋಲ್ ರೇಟಿಗೆ ದೊರೆಯತಕ್ಕಂಥಾ ಏರ್ಪಾಡನ್ನು ಪ್ರತಿ ತಾಲ್ಲೂಕು ಮಟ್ಟದಲ್ಲಿಯೂ ಮಾಡಬೇಕು ಎಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಆಹಾರದ ಬಗ್ಗೆ ಎಚ್ಚರಿಕೆಯನ್ನು ವಹಿಸಿ ಪರಿಣಾಮಕಾರಿಯಾದ ವ್ಯವಸ್ಥೆಯನ್ನು ಮಾಡಬೇಕು, ಸೀಮೆಎಣ್ಣೆ, ಸಿಮೆಂಟ್ ಇವುಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಹಂಚುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಬಹುಮುಖ್ಯವಾಗಿ ನಮ್ಮ ತಾಲ್ಲೂಕು, ನಮ ಜಿಲ್ಲೆಗೆ ಸಂಬಂಧಪಟ್ಟ ಹೇಮಾವತಿ ಯೋಜನೆಯ ಬಗ್ಗೆ ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡಿ ಕೊಳ್ಳುತ್ತೇನೆ. ಹೇಮಾವತಿ ಯೋಜನೆಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಅದನ್ನು ಬೇಗ ಪೂರೈಸಬೇಕು. ಕ್ಷಾಮ ಪರಿಹಾರ ನಿಧಿಯಿಂದ ಈ ವರ್ಷವೇ ಚಾನಲನ್ನು ತೋಡತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ರಿಲೀಫ್ ಕಾಮಗಾರಿಗಳ ಕೆಲಸವನ್ನು ತೆಗೆದುಕೊಂಡು ಮಾಡಲು ಅದಕ್ಕೆ ಹಣವನ್ನು ಕೊಡಬೇಕು. ತಾಲ್ಲೂಕಿಗೆ ಇರತಕ್ಕ ವರಮಾನವನ್ನು ಕೂಡ ಲೆಕ್ಕಕ್ಕೆ ತೆಗೆದುಕೊಂಡು ಹಣವನ್ನು ಕೊಡಬೇಕು. ರಿಲೀಫ್ ಕಾಮಗಾರಿಗಳನ್ನು ಕೂಡಲೇ ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಜನಗಳಿಗೆ ಕೂಲಿಯನ್ನು ಒದಗಿಸುವುದು ಅವಶ್ಯಕ ಇದೆ. ಹಾಗೆಯೇ ದನಗಳಿಗೆ ಕುಡಿಯುವ ನೀರನ್ನು ಒದಗಿಸತಕ್ಕದ್ದೂ ಅವಶ್ಯಕ ಇದೆ. ಆದ್ದರಿಂದ ಈ ಬಗ್ಗೆ ಕೂಡಲೇ ಸರ್ಕಾರದವರು ಅಧಿಕಾರಿಗಳಿಗೆ ಆದೇಶವನ್ನು ಕೊಟ್ಟು ಕೆಲಸವನ್ನು ಪ್ರಾರಂಭಮಾಡುವ ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ಈ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಕೊಡುತ್ತಾ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri B. B. SAYANAK (Belgaum) : Mr. Deputy Speaker, Sir, I oppose Demands Nos. 35, 33, 15A and 53, and while doing so, I would first like to speak about food and civil supplies. When the Hon. Finance Minister visited Belgaum last January, he instructed the Divisional Commissioner to start 100 fair-price shops and likewise 100 fair-price shops were started. But all these shops have been given to the merchants, and some of them who sold the wheat in the open market were caught red-handed by our wokers and handed them over to the Police. Even then, Supply Officer has not taken any action against those merchants. I approached the Divisional Commissioner and then the concerned Minister, I think the Minister has suspended the licence of that person. This person is running one more shop. This month, in all these fair-price shops, only one kilo of wheat per card per month has been supplied, but no rice. I have brought this to the notice of the Divisional Commissioner on Monday. People are insisting upon me to arrange a big morcha to the Divisional Commissioner. The dealers say that Government is not supplying wheat and rice to Belgaum. Last month in Belgaum public got only 2 grams of rice per day. This is the fate of the people of Belgaum. The

main crop of Belgaum is paddy. The Tahasildars, Assistant Commissioners and the Deputy Commissioner collect levy. When the Government is collecting levy, I want to know why they are not supplying rice to Belgaum, and where that levy paddy has gone? The levy price given is Rs. 59 per quintal for fine paddy, for mid-fine Rs. 56, medium Rs. 53 and course Rs. 52, whereas the market price is Rs. 120 for fine paddy.

Agriculturists are not being supplied manure through societies, they have to purchase manure from black market. These agriculturists have to work very hard to increase production of food grains. I do not know why the Government is not insisting upon the Central Government to raise the price of levy paddy. I request the Government to consider this aspect.

About 8 or 10 people approached me and stated that they have got more than 5000 cart-loads of fodder with them. They were selling this fodder to Goa Government, and now they are willing to sell this fodder to Mysore Government. When I requested the Revenue Minister for the purchase of this fodder, he asked me to approach the P.W.D. Minister, who in turn asked me to approach the Divisional Commissioner. When fodder is available, why should not the Government purchase this and send it to the drought affected areas of Gulbarga and Bijapur ?

The Central Government have decided to take over the wholesale trade in rice and wheat. When our fair-price shops are not being run properly, I am afraid the wholesale trade in wheat and rice will not be a successful one.

Coming to irrigation, though our border area is underdeveloped, there is no minor, medium or major irrigation scheme in our area. May be, the Government is under the impression that if the Mahajan Commission report is implemented the money spent on development of these areas might go a waste. Though we are giving levy to the Government, the Government is not taking up any scheme in Khanapur, Belgaum or Nippani taluks.

About famine relief works, during last session, I had stated that half Belgaum taluk is affected by drought.

Sri M. Y. GHORPADE : We have taken up minor irrigation works.

Sri B. B. SAYANAK : When I stated that half of Belgaum taluk is affected by drought, the Revenue Minister flatly refused and said that there is no drought condition in Belgaum taluk.

Sri M. Y. GHORPADE : If the Hon. Member desire, I will read out the list of tanks taken up in Belgaum and Khanapur taluks.

Sri B. B. SAYANAK : Only this year the Government might have taken up some works, for which I thank the Government. If these tank works are taken up during this year, then I must thank the Hon. Finance Minister.

Sri M. Y. GHORPADE.—We have taken up tank works at Basorthi, Kambargi, Kudchi, Uthnal in Belgaum Taluk.

Sri B. B. SAYANAK.—All these tank works are taken up in the eastern side which is in Kannada area but not in Marathi area.

Sri M. Y. GHORPADE.—When I had been to Belgaum I had made it clear to the people that this Government is not moved by the narrow consideration so far as development works are concerned. We have taken up the works in Khanapur Taluk though it is not affected by scarcity condition. The Hon. Member knows that we have sanctioned as many minor irrigation works for which estimates were ready.

Sri B. B. SAYANAK.—What about works in Khanapur Taluk ?

Sri M. Y. GHORPADE.—Some of the works have been sanctioned for Khanapur Taluk also. I have informed the House the names of works which have been sanctioned from the list made available to me. Even one or two tank works suggested by the Marathi M.L.A. of that area have been included in our programme.

Sri B. B. SAYANAK.—At a meeting of the Assistant Commissioner, Sriyuths Pawashe and Sirdesai and myself had suggested some tank works in Marathi area, but those works have not been taken up.

Sri M. Y. GHORPADE.—So far as we are concerned, we do not make any distinction between a Marathi area or a non-Marathi area.

Sri B. B. SAYANAK.—Regarding Cauvery and Krishna Water dispute, the people are complaining for not resolving this dispute. These issues are national issues. The Tamilnadu, Kerala and Mysore Governments which are the parties involved, they should take a reasonable view and settle this national issue. We are the Indians first and foremost and hence solve this problem amicably. With this I conclude my speech.

Sri BAPURAO ANAND RAO (Basavakalyan).—Mr. Deputy Speaker, Sir, while supporting the demand, I would like to offer some suggestions pertaining to famine relief works. At the outset, I congratulate the Hon. Chief Minister for sanctioning the Baramalai Project and the Chulki Nalla at a cost of about Rs. 4 crores and the preliminary works have already been started. Besides, some more tank works have also been sanctioned. At the request made by us, a Special Scarcity Division for Minor irrigation works, has been sanctioned. In this connection I may bring to the notice of the Government that the concerned officers are not executing the works expeditiously. I request that the Government may kindly order to complete the survey work and the preparation of the estimate early so that the works could be started.

No doubt all the road works have been completed but in order to make these roads purposeful, all the C. D. works and culverts should be improved so that they would serve as an asset to the Taluka.

We are now employing more number of labourers on metal breaking and this work will continue for few months more. There would be heavy collection of metal. We have to think of undertaking permanent relief works. In this connection I suggest that for a group of villages, a percolation tank should be sanctioned as is found in Maharashtra State. Community Irrigation Wells should also be taken up. Since we have to continue the scarcity works up to end of September or October, the above works have to be taken up. In addition to Rs. 5 lakhs provided in the budget for giving loans for deepening of irrigation wells, we must take up all the private irrigation wells and give them subsidy. This would definitely increase the irrigation

potential of that area besides providing employment to the unemployed people.

As regards the Karanjiah Project, I appeal to the Hon. Minister that the work should be completed as per the schedule and necessary finance required for this purpose must be made available so that the economic condition of Bidar District would be improved. This is the only major project taken up for the first time in Bidar District.

I want to speak one or two words about the food position. I must congratulate the Government for their assurance that more foodgrains are being rushed to the hard hit areas of Bidar and also Gulbarga. The position of foodgrains was not so good up-till now and it may improve now. The price of Jowar has increased considerably, and whatever we pay in the form of wages has been deducted for these foodgrains supplied to the villages. The villagers are in a pitiable condition. They cannot save anything for other expenses. Further I appeal to the Government that action should be taken at border places to check the smuggling of foodgrains. A proper check should also be made so far as the prices of the foodgrains and the blackmarketeers should be punished. The blackmarketeers are taking advantage of these conditions. Poor and innocent people are suffering at the hands of these people. Therefore I appeal that whatever possible steps that at our command should be taken and see that these mischief-mongers are punished so that the poor people should feel a sigh of relief.

5-00 p.m.

I propose one thing in this connection. We have already submitted a list of important tanks to be taken up for execution. I appeal that at least Albur Tank in Bidar District should be taken up. I have already requested the Government several times about this tank, and now I am repeating it. Even the people of neighbouring areas have also requested the Hon. Ministers when they had visited that area that this project should be taken up. During this famine season only because we will be getting huge amount of grants for famine reliefs. If you carry out this project, it will be a permanent work.

One more appeal I want to make to Government and that is the Officers are over-burdened with these works and their normal day-to-day activities may be suspended for the present. The State Government of Maharashtra have issued an order that normal work of these officers connected with the famine reliefs may be suspended so that more attention could be paid by them to these famine reliefs and problems arising out of it. Food scarcity will be there, water scarcity will be there and so many difficulties will be there. These officers are left entirely for these works, they could attend to them. I even appeal that additional staff also may be posted to attend to these works. Of-course the Government have sanctioned some additional staff. But still some more additional staff is required. The Police Inspectors are there in the border areas and these officers are finding it difficult to check the smuggling of foodgrains more effectively thereby giving room for smuggling and blackmarketing. These anti-social elements are having their way.

The Agriculturists are having no stores of seeds and they are not having even agricultural implements and all that. They have no fodder. We have to consider that subsidy will have to be paid to them. We have not faced such drought situation for the last several centuries. Therefore 50 per cent of expenditure may have to be paid to them as subsidy so that they should feel happy that the Government have come to their rescue when they are in trouble. You must provide tractors, you must give them fertilizers and whatever that is possible we must give them. If you do so, the agriculturists feel happy that the Government is at their side and it is helping them. But some of the Officers are taking advantage of the situation. They are misusing their powers and expect something even from the poor labourers. For example, on National Highway No. 9, the officers like Junior Engineers and Assistant Engineers are expecting something from the relief works. When we presented petition to the Executive Engineer and the Deputy Commissioner, we never received reply at all. These officers have swallowed thousands of rupees. Therefore, I appeal to the Government that such officers should be punished. About Rs. 17 lakhs have been given at the disposal of the National Highway Sub-Division, Bijapur. They misclaimed large amounts and swallowed. Therefore, investigation will

have to be conducted and deterrent punishment should be given. Whenever representations are received from the M.L.As., they should at least be enquired into. Some fear will be there among the Government servants if enquiry is made on the representation by the M.L.As. They have no fear and they do whatever they want at present. There must be some checking over their attitude and all that at random at least by higher officers so that we can expect good behaviour and good work from them.

Water Supply in Bidar District is not satisfactory. The Government has failed in supplying water to the villages. They supply water with the help of lorries, tankers and carts. Water Supply in Humnabad is not good. In Basavakalyanam some steps have been taken to supply water. Though it is satisfactory to some extent, still it requires some additional bore-wells. Whatever wells are there we have to dig up and deepen them. Some representations have been made for deepening the wells. This water supply problem will have to be solved quickly.

ಶ್ರೀ ಕಾಗೋಡು ತಿಮ್ಮಪ್ಪ :—ಮಾನ್ಯ ಅಧ್ಯಕ್ಷರೇ, ಆಹಾರ ಇಲಾಖೆಗೆ ಸಂಬಂಧಪಟ್ಟ
ಬೇಡಿಕೆಯನ್ನು ವಿರೋಧಿಸುತ್ತಾ ನಮ್ಮ ಸರಕಾರದ ಲೆವಿ ನೀತಿಯನ್ನು ಸ್ವಲ್ಪ ವಿವರವಾಗಿ ಹೇಳ
ಬೇಕಾಗಿದೆ. ಏಕೆಂದರೆ ಖಾಸಗಿಯವರು ಮಾಡತಕ್ಕ ವ್ಯವಹಾರದಲ್ಲಿ ಎಷ್ಟೋ ಲಾಭವನ್ನು
ಸಂಪಾದಿಸುತ್ತಾರೆ. ಈಗ ಸರಕಾರ ಲೆವಿ ಮೂಲಕ ಕೊಳ್ಳುವ ಬತ್ತ, ಜೋಳ ಮುಂತಾದ್ದನ್ನು
ತಿನ್ನುವ ಜನರಿಗೆ ಕೊಡುವಾಗ ಹೆಚ್ಚಿನ ದರಕ್ಕೆ ಕೊಟ್ಟು ಜನರ ಶೋಷಣೆ ಮಾಡುತ್ತಿದೆ, ಲಾಭ
ಕೂಡ ಸಂಪಾದಿಸುವ ಪ್ರಯತ್ನ ಮಾಡಿದೆ. ವಾಸ್ತವಿಕವಾಗಿ ಸರಕಾರ ಲಾಭ ಸಂಪಾದನೆ ಮಾಡ
ದಿದ್ದರೂ ಕೂಡ ಅದು ಕೊಳ್ಳುವ ಮತ್ತು ಮಾರಾಟ ಮಾಡುವ ದರಗಳಿಗೆ ಬಹಳ ವ್ಯತ್ಯಾಸವಿದೆ.
ಆ ವ್ಯತ್ಯಾಸ ಬೆಳೆಯುವವರಿಗೆ ಮತ್ತು ಕೊಂಡು ತಿನ್ನುವವರಿಗೆ ಸಿಕ್ಕುವುದಿಲ್ಲ. ಅವರ ಆಡಳಿತ
ಖರ್ಚು ಮತ್ತು ಮೇಲ್ವಿಚಾರಣೆಯ ಖರ್ಚು ಹೆಚ್ಚಿ ಜನರ ಶೋಷಣೆಯಾಗುತ್ತಿದೆ. ನಾಳೆ
ಸರಕಾರ ಸಗಟು ವ್ಯಾಪಾರ ವಹಿಸಿಕೊಂಡಾಗ ಜನರ ಶೋಷಣೆಯಾಗುವುದು ಎಂಬುದನ್ನು
ಅಂಕಿಅಂಶಗಳಿಂದ ತಿಳಿಸಲು ಪ್ರಯತ್ನ ಮಾಡುತ್ತೇನೆ. ಮುಖ್ಯಮಂತ್ರಿಗಳು ಈ ವಿಷಯವನ್ನು
ಹಿಂದೆ ಒಪ್ಪಿಕೊಂಡಿದ್ದಾರೆ. ಇಂದು ಬತ್ತವನ್ನು ಕೊಳ್ಳುವಾಗ ಮೊದಲನೆಯ ವರ್ಗದ ಬತ್ತವನ್ನು
ಕ್ವಿಂಟಾಲಿಗೆ 59 ರೂಪಾಯಿನಂತೆ ಕೊಳ್ಳುವರು, ಎರಡನೆ ದರ್ಜೆ ಬತ್ತವನ್ನು 56 ರೂಪಾಯಿಗೆ,
ಮೀಡಿಯಂ ವರ್ಗದ ಬತ್ತವನ್ನು 53 ರೂಪಾಯಿಗೆ, ದಪ್ಪ ಬತ್ತವನ್ನು 52 ರೂಪಾಯಿಗೆ
ರೈತರಿಂದ ಕೊಳ್ಳುವರು. ಹೀಗೆ ಪಡೆದು ಕ್ವಿಂಟಾಲಿಗೆ ಬೇಕಾದರೆ 8 ರೂಪಾಯಿ ಖರ್ಚು
ವಗೈರೆಗೆ ಸೇರಿಸಿ ಮಾರಬಹುದು. ಒಂದೂವರೆ ರೂಪಾಯಿ ಟ್ರಾನ್ಸ್‌ಪೋರ್ಟಿಂಗ್ ಛಾರ್ಜಸ್
ಬೆಳೆದ ಪ್ರದೇಶದಿಂದ ಮಾರುಕಟ್ಟೆಗೆ ತರಲು ಖರ್ಚಿಗೆ ಇಷ್ಟು ಬೇಕಾಗುವುದು. 2 ರೂಪಾಯಿ
ಹ್ಯಾಂಡ್ಲಿಂಗ್ ಛಾರ್ಜು, ಗೋಡೌನ್ ಛಾರ್ಜು 2 ರೂಪಾಯಿ ಎಲ್ಲಾ ಸೇರಿ ಐದೂವರೆ
ರೂಪಾಯಿಯಾಗುವುದು. ಇನ್ನೂ ಎರಡೂವರೆ ರೂಪಾಯಿ ಇದಕ್ಕೆ ಸೇರಿಸಿದರೂ ಒಟ್ಟು 8
ರೂಪಾಯಿ ಒಂದು ಕ್ವಿಂಟಾಲಿಗೆ ಜಾಸ್ತಿ ತೆಗೆದುಕೊಳ್ಳಬಹುದು. ಇಷ್ಟೆಲ್ಲಾ ಸೇರಿಸಿದರೂ ದಪ್ಪ
ಬತ್ತವನ್ನು ಕ್ವಿಂಟಾಲಿಗೆ 60 ರೂಪಾಯಿನಂತೆ, ಮೀಡಿಯಂ ಬತ್ತವನ್ನು 61 ರೂಪಾಯಿನಂತೆ,

ಎರಡನೆ ದರ್ಜೆ ಬತ್ತವನ್ನು 64 ರೂಪಾಯಿನಂತೆ, ಮೊದಲನೆ ದರ್ಜೆಯನ್ನು 67 ರೂಪಾಯಿನಂತೆ ಮಾರಬಹುದು. ಹಲ್ಲಿಂಗ್ ಮಾಡಿಸಿದರೆ ಕನಿಷ್ಠ ಶೇಕಡ 70 ರಷ್ಟು ಬರುವುದು. ಈಗ ಮೊದಲನೆ ದರ್ಜೆಯ ಅಕ್ಕಿಯನ್ನು ಕೆ.ಜಿ.ಗೆ 95 ಪೈಸೆಯಂತೆ ಮಾರುತ್ತಿದ್ದಾರೆ. ಮೀಡಿಯಂ ಫೈನ್ ಅಕ್ಕಿಯನ್ನು 90 ಪೈಸೆಯಂತೆ, ಮೀಡಿಯಂ ಅಕ್ಕಿಯನ್ನು 85 ಪೈಸೆಯ ಪ್ರಕಾರ ಮಾರಬಹುದು, ಅದರಲ್ಲಿ ಖರ್ಚು ಸೇರಿರುವುದು. ಆದರೆ ಹಾಗೆ ಮಾಡದೆ ಅಕ್ಕಿಯನ್ನು 110 ಪೈಸೆಯಿಂದ 140 ಪೈಸೆಯವರೆಗೆ ಕೆ.ಜಿ. ಒಂದಕ್ಕೆ ಮಾರುತ್ತಿದ್ದಾರೆ. 85 ಪೈಸೆಗೆ ಕೆ.ಜಿ.ಯಂತೆ ಮಾರಬೇಕಾದ ಅಕ್ಕಿಯನ್ನು ಕೆ.ಜಿ.ಗೆ 110 ರೂಪಾಯಿನಂತೆ ಮಾರುತ್ತಿದ್ದಾರೆ. ಇದರಿಂದ 25 ರೂಪಾಯಿ ವ್ಯತ್ಯಾಸವಾಗುವುದು. ಈ 25 ರೂಪಾಯಿ ಎಲ್ಲಿಗೆ ಹೋಗುವುದು ? ಯಾವ ಉದ್ದೇಶದಿಂದ ರೈತ ಕೊಡುವನೋ ಆ ಉದ್ದೇಶ ಸಾರ್ಥಕವಾಗುತ್ತಿಲ್ಲ, ಕಡಮೆ ವೆಚ್ಚ ಮಾಡಿ ಸುಲಭ ಬೆಲೆಗೆ ತಿನ್ನುವವರಿಗೆ ಕೊಡುತ್ತಿಲ್ಲ, ಬೆಳೆಯುವವರಿಗೆ ಹೆಚ್ಚು ಬೆಲೆ ಕೊಡುತ್ತಿಲ್ಲ, ಕೊಳ್ಳುವವರಿಗೆ ಸುಲಭ ದರದಲ್ಲಿ ಒದಗಿಸುತ್ತಿಲ್ಲ. ಹಾಗೆ ಮಾಡಲು ಸಾಧ್ಯವಿದ್ದರೂ ಅವ್ಯವಹಾರ ನಡೆಯುತ್ತಿದೆ. ಇಂದು ಖಾಸಗಿಯವರಿಗೆ ಸರಕಾರಕ್ಕೆ ಕೊಡುವ ದರದಲ್ಲಿ ಬತ್ತ ಕೊಟ್ಟರೆ ಅವರು ಇಲ್ಲಿಂದ ಬಿಜಾಪುರದವರೆಗೆ ಎಲ್ಲಿಗೆ ಬೇಕಾದರೂ 85 ರೂಪಾಯಿನಂತೆ ಸರಬರಾಯಿ ಮಾಡುವರು. ಅವರು ಬರುವ 8 ರೂಪಾಯಿ ಲಾಭದಲ್ಲಿ ಎಲ್ಲ ಖರ್ಚುಗಳನ್ನೂ ಕಳೆದುಕೊಳ್ಳುವರು. ಬೆಂಗಳೂರಿನಿಂದ ಹಿಡಿದು ಬಿಜಾಪುರದವರೆಗೆ ಒಂದೇ ದರದಲ್ಲಿ ಅವರು ಒದಗಿಸುವರು. ಆದೇ ಸರಕಾರ ಹೀಗೆ ಮಾಡುತ್ತಿಲ್ಲ. ಸರಕಾರದ ನೀತಿ ಮೂಗಿಗಿಂತ ಮೂಗುತಿಯ ಭಾರ ಜಾಸ್ತಿ ಎಂಬ ರೀತಿಯಲ್ಲಿದೆ. ಖರ್ಚು ಲೆಕ್ಕ ಹಾಕಿದರೆ ಬೆಲೆ ಹೆಚ್ಚಿರುವುದಕ್ಕೆ ಸರಕಾರದ ಅವ್ಯವಹಾರದ ನೀತಿಯೇ ಕಾರಣವಾಗಿದೆ. ಸರಕಾರ ಆಹಾರ ಪದಾರ್ಥಗಳನ್ನೊದಗಿಸುವಾಗ ಅವುಗಳಿಗೆ ಹೆಚ್ಚು ಖರ್ಚು ಬೀಳದಂತೆ ಶ್ರದ್ಧೆಯಿಂದ ನೋಡಿಕೊಳ್ಳಬೇಕು. ಇದನ್ನು ನೋಡಿದರೆ ಸರಕಾರದ ಕೈಗೆ ಸಗಟು ವ್ಯಾಪಾರ ಬಿಟ್ಟರೆ ಇನ್ನೂ ಅವ್ಯವಸ್ಥೆಯಾಗುವುದು ಎಂಬುದಕ್ಕೆ ಇದು ಉದಾಹರಣೆಯಾಗಿದೆ.

ಶ್ರೀಮತಿ ಇ.ಇ. ವಾಜ್ :—ಶಿವಮೊಗ್ಗದಿಂದ ಎಷ್ಟು ಲೆವಿ ಕೊಟ್ಟಿದ್ದೀರಿ ?

ಶ್ರೀ ಕಾಗೋಡು ತಿಮ್ಮಪ್ಪ :—13,896 ಟನ್ ಬತ್ತ ಕೊಡಲಾಗಿದೆ, ಯಾವ ಜಿಲ್ಲೆಯಿಂದಲೂ ಇಷ್ಟು ವಸೂಲಾಗಿಲ್ಲ.

Sri C. M. ARUMUGHAM : Are we discussing this demand tomorrow also ?

Mr. DEPUTY SPEAKER : As it is 2 days were allotted for this. I think we have to finish the entire discussion today keeping the reply for tomorrow.

Sri C. M. ARUMUGHAM : First one hour may be given for discussion tomorrow Sir. It is a big demand and combines food and civil supplies. I think the Chief Minister will agree that the first one hour may be given for discussion tomorrow. We will take part tomorrow.

Sri D. DEVARAJ URS : We are prepared to sit for another half-an-hour now.

Sri C. M. ARMUGHAM : After Six, let us not sit even for a split of a second.

Mr. DEPUTY SPEAKER : I would like to sit for half-an-hour or one hour more today.

Sri C. M. ARMUGHAM : After Six, let us not sit even for a minute. Tomorrow, you can give the first one hour for discussion.

ಶ್ರೀ ಕಾಗೋಡು ತಿಮ್ಮಪ್ಪ :—ಇವತ್ತು ಮೂರು ನಾಲ್ಕು ವರ್ಷದಿಂದ ಅಂಕಿಅಂಶಗಳನ್ನು ತೆಗೆಸಿ ನೋಡಿದರೆ ಶಿವಮೊಗ್ಗದಲ್ಲಿ ಹಿಂದೊಂದು ವಸೂಲು ಆಗದೇ ಇರುವ ಭತ್ತವನ್ನು ವಸೂಲು ಮಾಡಿದ್ದೀರಿ ಎಂಬುದು ಗೊತ್ತಾಗುತ್ತದೆ. ಯಾವ ಒತ್ತಾಯವಿಲ್ಲದೆ, ಒಂದು ಎಕರೆ, ಎರಡು ಎಕರೆ, ಮೂರು ಎಕರೆ ಇರತಕ್ಕ ಪ್ರತಿಯೊಬ್ಬ ಬಡ ರೈತರ ಮನೆಮನೆಗೂ ಹೋಗಿ ಅವರಿಂದ ಯಾವ ಬಲಾತ್ಕಾರವಿಲ್ಲದೆ, 2, 3 ಪಲ್ಲ ಬತ್ತ ವಸೂಲು ಮಾಡಿದ್ದೇವೆ. ಹೊರಗೆ ಹೋಗುವ ಭತ್ತದಿಂದ ಲೆವಿ ತೆಗೆದುಕೊಂಡಿದ್ದೀರಿ. ಏನೇ ಮಾಡಿದರೂ ಆಹಾರ ಧಾನ್ಯ ಹೊರಗೆ ಹೋಗುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಎಷ್ಟೇ ಬಂದೋಬಸ್ತು ಮಾಡಿದರೂ ತೆಗೆದುಕೊಂಡು ಹೋಗುವವರು ತೆಗೆದುಕೊಂಡು ಹೋಗುತ್ತಾರೆ. ತೀರ್ಥಹಳ್ಳಿಯಲ್ಲಿ 25 ಸಾವಿರ ಕ್ವಿಂಟಾಲ್ ಭತ್ತ ಇದೆ. ಅಲ್ಲಿ 6 ಸಾವಿರ ಕ್ವಿಂಟಾಲ್ ಭತ್ತ ವಸೂಲು ಆಗಿದೆ. ನೀವು ಹಂಚುವಾಗ ಕ್ರಮ ನೋಡಿದರೆ ಯಾವ ಸಾರ್ಥಕತೆಗಾಗಿ, ಆಹಾರ ಪದಾರ್ಥ ಕೊಡಬೇಕೆಂದು ಕೇಳುತ್ತೀರಿ. ಇಡೀ ಆಹಾರ ಪದಾರ್ಥದ ವ್ಯವಸ್ಥೆಯನ್ನು ಸರ್ಕಾರ ವಹಿಸತಕ್ಕ ಸಂದರ್ಭದಲ್ಲಿ ಇದನ್ನು ಆಲೋಚನೆ ಮಾಡಬೇಕಾಗಿತ್ತು. ಶ್ರೀ ಮಾನ್ ಟಿ ಎ. ಪೈ ಅವರು ಫುಡ್ ಕಾರ್ಪೊರೇಷನ್ ಚೇರ್ಮನ್ ಆಗಿದ್ದಾಗ ಅವರ ಜೊತೆಗೆ ಸೇಲ್ಸ್ ಟ್ಯಾಕ್ಸ್ ಆಹಾರ ಪದಾರ್ಥಗಳ ಮೇಲೆ ಹಾಕುವಾಗ ಚರ್ಚೆ ಮಾಡಿದ್ದೆನೆ. ಮಲ್ಟಿಪಾಯಿಂಟ್ ಸೇಲ್ಸ್ ಟ್ಯಾಕ್ಸ್ ಇಟ್ಟಿರುವುದರಿಂದ ಬೆಲೆ ಇನ್ನೂ ಜಾಸ್ತಿಯಾಗುತ್ತದೆ. ಆದುದರಿಂದ ಮಲ್ಟಿ ಪಾಯಿಂಟ್ ಸೇಲ್ಸ್ ಟ್ಯಾಕ್ಸ್ ತೆಗೆದುಹಾಕಬೇಕೆಂದು ಹೇಳುತ್ತೇನೆ. ಆಹಾರ ಪದಾರ್ಥಗಳನ್ನು ಸಾಗಾಣಿಕೆ ಮಾಡತಕ್ಕಂಥ ಸಂದರ್ಭದಲ್ಲಿ ಅವನ್ನು ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ತೆಗೆದುಕೊಂಡು ಹೋದಾಗ ಸಾಗಾಣಿಕೆಯ ಖರ್ಚನ್ನು ಆಹಾರದ ಬೆಳೆಗೆ ಸೇರಿಸ ಬಾರದು ಅದು ಜಾಸ್ತಿ ಆದ ಪಕ್ಷದಲ್ಲಿ ಸರ್ಕಾರ ಸಬ್‌ಸಿಡಿ ಕೊಟ್ಟು ಅದನ್ನು ವಹಿಸಿಕೊಳ್ಳಬೇಕು. ಇಲ್ಲದಿದ್ದರೆ ಆಹಾರ ಪದಾರ್ಥಗಳ ಬೆಲೆ ಏರುವುದಕ್ಕೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ಆದುದರಿಂದ ಈ ಮಲ್ಟಿ ಪಾಯಿಂಟ್ ಸೇಲ್ಸ್ ಟ್ಯಾಕ್ಸನ್ನು ತೆಗೆಯಬೇಕು. ಇದನ್ನು ತೆಗೆಯುವುದರಿಂದ ಕೊಂಡು ತಿನ್ನುವವರಿಗೆ ಲಾಭವಾಗುತ್ತದೆ. ನೀವು ಈಗ 66 ಸಾವಿರ ಚಿಲ್ಲರೇ ಟನ್ ಬತ್ತವನ್ನು ಏನು ಸಂಗ್ರಹಣೆ ಮಾಡಿದ್ದೀರಿ, ಅದನ್ನು ನಗರ ಪ್ರದೇಶದಲ್ಲಿರತಕ್ಕ ಕೊಂಡು ತಿನ್ನತಕ್ಕಂಥ ಜನರಿಗೆ ವಿತರಣೆ ಮಾಡುತ್ತೀರಿ. ಹಳ್ಳಿಯ ಜನರಿಗೆ ಕೊಡುವುದಿಲ್ಲ. ಒಂದು ಕೇ. ಜಿ. ಗೆ ಮಲ್ಟಿಪಾಯಿಂಟ್ ಟ್ಯಾಕ್ಸ್ ತೆಗೆದರೆ 6 ಪೈಸೆ ಕಡಿಮೆಯಾಗುತ್ತದೆ. ಈ ಆಹಾರ ಪದಾರ್ಥದ ಮೇಲೆ ಮಲ್ಟಿ ಪಾಯಿಂಟ್ ಟ್ಯಾಕ್ಸ್ ತೆಗೆಯುವದರಿಂದ ಕೊಂಡು ತಿನ ತಕ್ಕವರಿಗೆ ಲಾಭವಾಗುತ್ತದೆ. ಆದುದರಿಂದ ಮಲ್ಟಿಪಾಯಿಂಟ್ ಬತ್ತದ ಮೇಲೆ ಹಾಕಿರುವುದನ್ನು ತೆಗೆಸುವುದಕ್ಕೆ ಪ್ರಯತ್ನ ಮಾಡಬೇಕು.

ಮಾನ್ಯ ಅಧ್ಯಕ್ಷರೇ, ಇನ್ನು ರೈತರಿಗೆ ಒಂದು ಕ್ವಿಂಟಾಲ್ ಬತ್ತಕ್ಕೆ ಕನಿಷ್ಠಪಕ್ಷ 70 ರೂಪಾಯಿ ಕೂಡಿ ಮಲ್ಟಿಪಾಯಿಂಟ್ ಟ್ಯಾಕ್ಸ್ ತೆಗೆಯುವುದರಿಂದ ಒಂದು ಕ್ವಿಂಟಾಲ್ ಅಕ್ಕಿಗೆ 6,7

ರೂಪಾಯಿ ಆದರೂ ಕಡಿಮೆಯಾಗುತ್ತದೆ. ಇದರಿಂದ ಕೊಂಡುಂ ತಿನ್ನತಕ್ಕವರಿಗೆ 6.7 ರೂಪಾಯಿ ಕಡಿಮೆ ಬೆಲೆಗೆ ಮಾರಾಟ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ತತ್ವವನ್ನು ಅನುಸರಿಸಿದರೆ ಬೆಳೆಗಾರನಿಗೂ ಲಾಭದಾಯಕವಾದ ಬೆಲೆಯನ್ನು ಕೊಟ್ಟಂತಾಗುತ್ತದೆ, ಕೊಂಡು ತಿನ್ನತಕ್ಕವನಿಗೂ ಸ್ವಲ್ಪ ಕಡಿಮೆ ದರದಲ್ಲಿ ಮಾರಾಟ ಮಾಡಿದಂತಾಗುತ್ತದೆ. ಒಂದು ಕಡೆ ಏರಿಸಿ, ಇನ್ನೊಂದು ಕಡೆ ತಗ್ಗಿಸಿ, ಈ ರೀತಿ ಸಮಾಜವಾದ ನೀತಿಯನ್ನು ಅನುಸರಿಸಬೇಕೆಂದು ಒತ್ತಾಯ ಪಡಿಸುತ್ತೇನೆ. ಇಲ್ಲದಿದ್ದರೆ ರೈತರ ಶಾಪಕ್ಕೆ ಗುರಿಯಾಗಬೇಕಾಗುತ್ತದೆ, ಬೆಳೆಗಾರನಿಗೆ ಸಿಗಬೇಕಾದ ಲಾಭದಾಯಕ ಬೆಲೆ ಕೊಡಿಸಿಕೊಡುವುದನ್ನು ಸರ್ಕಾರ ಮನಗಾಣಬೇಕಾಗುತ್ತದೆ. ಇಲ್ಲದಿದ್ದರೆ ವ್ಯವಸಾಯಗಾರರ ಹೆಸರಿನಲ್ಲಿ ರಾಜ್ಯ ಆಳುವುದಕ್ಕೆ ನಿಮಗೆ ನೈತಿಕ ಹಕ್ಕು ಇರುವುದಿಲ್ಲ. ಇದನ್ನು ಗಮನಿಸಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಸ್ವಾಮಿ, ಸಕ್ಕರೆ ಹಂಚತಕ್ಕಂಥ ವಿಷಯದಲ್ಲಿ ಒಂದು ವಿಷಯ ಹೇಳಬೇಕಾಗಿದೆ. ಸಕ್ಕರೆ ಏನು ಆಗುತ್ತಿದೆ ಎಲ್ಲಿಗೆ ಹೋಗುತ್ತಿದೆ ಗೊತ್ತಿಲ್ಲ. ಸಕ್ಕರೆಯ ಉತ್ಪಾದನೆಯಲ್ಲಿ ಕಡಿಮೆಯಾಗಿದೆ ಯೆಂದು ಹೇಳುತ್ತೀರಿ, ಇರಬಹುದು. ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಇವತ್ತು ಸಕ್ಕರೆ ಉತ್ಪಾದನೆಯಲ್ಲಿ 70 ಭಾಗ ಸಕ್ಕರೆಯನ್ನು ನಿಮಗೆ ಕೊಡುತ್ತಾರೆ ಇನ್ನುಳಿದ 30 ಭಾಗ ಉತ್ಪಾದನೆಯನ್ನು ಖಾಸಗಿಯವರು ವಿತರಣೆಮಾಡಿಕೊಳ್ಳುತ್ತಾರೆ. ಕೇಳಿದ ಬೆಲೆ ಕೊಟ್ಟರೆ ಕೇಳಿದಷ್ಟು ಸಕ್ಕರೆ ಜನರಿಗೆ ಸಿಗುತ್ತದೆ. ನಿಮಗೆ ಕೊಟ್ಟ ಶೇಕಡ 70 ಭಾಗ ಉತ್ಪಾದನೆ ಎಲ್ಲಿಗೆ ಹೋಗುತ್ತದೆ, ಎಲ್ಲಿಗೆ ಬರುತ್ತದೆ ಎಂಬುದು ಗೊತ್ತಾಗುವುದಿಲ್ಲ. ಪೇಟೆಗೆ ಹೋಗಿ ಒಂದು ಕೆ. ಜಿ. ಸಕ್ಕರೆ ಕೇಳಿದರೆ ಸಿಕ್ಕುವುದಿಲ್ಲ. ನಮ್ಮ ಮನೆಗೆ ಒಂದು ಕೆ. ಜಿ. ಸಕ್ಕರೆ ತರುವುದಕ್ಕೆ ಆಗಲಿಲ್ಲ. ಹಳ್ಳಿಯಲ್ಲಿ ಕಾರ್ಡ್ ಹಂಚತಕ್ಕ ಕೆಲಸ ಮಾಡಿಲ್ಲ. ಬೆಂಗಳೂರು ಪ್ರೆಸ್ಸಿನಲ್ಲಿ ಇಂಗ್ಲೀಷ್‌ನಲ್ಲಿ ಪ್ರಿಂಟ್ ಮಾಡಿ ಕಾರ್ಡ್‌ಗಳನ್ನು ಹಳ್ಳಿಗಳಿಗೆ ಕಳುಹಿಸಿದ್ದಾರೆ. ಇವತ್ತಿನವರೆಗೂ ನಮ್ಮ ಕನ್ನಡ ಭಾಷೆಯಲ್ಲಿ ಕಾರ್ಡ್‌ಗಳನ್ನು ಅಚ್ಚು ಹಾಕಿಸಿ ಹಳ್ಳಿಗಳಲ್ಲಿ ಹಂಚಿಲ್ಲ. ನಗರ ಪ್ರದೇಶ ದಲ್ಲಿ ಹೋಗಿ ನೋಡಿದರೆ ನಗರ ಪ್ರದೇಶಗಳಲ್ಲಿ 5 ಸಾವಿರ ಕುಟುಂಬಗಳಿದ್ದರೆ 10 ಸಾವಿರ ಕಾರ್ಡ್‌ಗಳನ್ನು ಹಂಚಿದ್ದಾರೆ. ಇದನ್ನು ರಿಪ್ಲೇಸ್ ಮಾಡಿ ಹೊಸ ಕಾರ್ಡ್‌ಗಳನ್ನು ಹಂಚಿ ಎಂದು ಹೇಳಿದರೆ ಇವತ್ತಿನವರೆಗೂ ಆಗಿಲ್ಲ. ಇದೇ ರೀತಿ 1000 ಕುಟುಂಬಗಳಿರತಕ್ಕ ನಗರದಲ್ಲಿ 2–3 ಸಾವಿರ ಕಾರ್ಡ್‌ಗಳನ್ನು ಹಂಚತಕ್ಕ ಸಂಬಂಧವಿದೆ. ಆದ್ದರಿಂದ ಸಕ್ಕರೆ ಸರಿಯಾಗಿ ವಿತರಣೆ ಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳುವುದಕ್ಕೆ ದುಃಖವಾಗುತ್ತದೆ. ಸಕ್ಕರೆಯನ್ನು ಸೊಸೈಟಿಯ ಮುಖಾಂತರ ಹಂಚಿ ಎಂದು ಹೇಳಿದರೆ ಅಲ್ಲಿರುವ ಅಧ್ಯಕ್ಷರು, ಪ್ರೆಸಿಡೆಂಟ್‌ಗಳು ಅವ್ಯವಹಾರ ಮಾಡುತ್ತಾರೆ. ಇನ್ನು ಪಂಚಾಯ್ತಿಗೆ ಒಪ್ಪಿಸಿದರೆ ಪಂಚಾಯ್ತಿಯ ಅಧ್ಯಕ್ಷರು ಮತ್ತು ಸದಸ್ಯರು ಅವ್ಯವಹಾರ ಮಾಡುತ್ತಾರೆ. ಈ ರೀತಿ ನಡೆಯುತ್ತಿದೆ. ಆಹಾರ ಪದಾರ್ಥ ಗಳನ್ನು ಮತ್ತು ಸಕ್ಕರೆಯನ್ನು ಹಂಚತಕ್ಕ ಕೆಲಸದಲ್ಲಿ ಅನೇಕ ಲೋಪ ದೋಷಗಳು ಇವೆ. ಇದನ್ನು ಸರಿಪಡಿಸುವುದಕ್ಕೆ ತಾಲ್ಲೂಕ್ ಮಟ್ಟದಲ್ಲಿ ಅಧಿಕಾರಿಗಳು ಏನೇನೂ ಮಾಡುತ್ತಿಲ್ಲ. ತಹಶೀಲ್ದಾರರು ಮತ್ತು ಫುಡ್ ಇನ್ಸ್‌ಪೆಕ್ಟರು ಕೊಟ್ಟಿರತಕ್ಕ ಆಹಾರ ಪದಾರ್ಥಗಳನ್ನು ಕ್ರಮವಾಗಿ ಹಂಚಿಕೆಯಾಗುತ್ತಿದೆಯೋ ಇಲ್ಲವೇ ವ್ಯವಸ್ಥಿತವಾಗಿ ವಿತರಣೆಯಾಗುತ್ತಿದೆಯೋ ಎಂದು ನೋಡುವುದಿಲ್ಲ. ಒಂದು ಚೀಲ ಸಕ್ಕರೆಯನ್ನು ಹೋಟೆಲ್‌ಗೆ ಮಾರಿಕೊಡರೆ 200 ರೂಪಾಯಿ ಸಿಗುತ್ತದೆ. 200 ರೂಪಾಯಿ ದುಡಿಯಬೇಕಾದರೆ ಏನು ತೊಂದರೆಯಿದೆ ? ಆಚೆ ಈಚೆ ಮಾರಿದರೆ ಕೂತಲ್ಲಿಯೇ 200 ರೂಪಾಯಿಗಳನ್ನು ಜೇಬಿಗೆ ಹಾಕಿಕೊಂಡು ಹೋಗಬಹುದು. ಸಕ್ಕರೆಯ ವಿತರಣೆಯಲ್ಲಿ ತಹಶೀಲ್ದಾರರು ಫುಡ್ ಇನ್ಸ್‌ಪೆಕ್ಟರ್‌ರವರು ಸೇರಿ ಹಣವನ್ನು ಮಾಡಿದರು ಎಂದು ಹೇಳುವುದಕ್ಕೆ ಆಗುವುದಿಲ್ಲ.

ಈಗ ಸಕ್ಕರೆ ಉತ್ಪಾದನೆಯಲ್ಲಿ ಶೇಕಡ 70 ರಷ್ಟು ಸಕ್ಕರೆ ತೆಗೆದುಕೊಂಡರೂ ಕೂಡ ಅದನ್ನು ಸರಿಯಾಗಿ ವಿತರಣೆ ಮಾಡಿಲ್ಲ. ಕಾರಣ ಸ್ಥಳೀಯ ಅಧಿಕಾರಿಗಳು ಸರಿಯಾಗಿ

ಮೇಲ್ವಿಚಾರಣೆ ಮಾಡದೇ ಇರುವುದರಿಂದ ಹಂಚಿಕೆ ವ್ಯವಸ್ಥೆ ಸರಿಯಾಗಿ ಆಗಿಲ್ಲ. ಈವೊತ್ತಿನ ದಿವಸ ಸಕ್ಕರೆಯನ್ನು ಮಾರಾಟ ಮಾಡುವುದಕ್ಕೆ ಕೆಲವೇ ಜನರಿಗೆ ಲೈಸೆನ್ಸ್ ಕೊಟ್ಟಿದ್ದೀರಿ. ಹೆಚ್ಚು ದುಡ್ಡು ಕೊಟ್ಟರೆ ಪ್ರತಿಯೊಂದು ಅಂಗಡಿಗಳಲ್ಲೂ ಸಕ್ಕರೆ ಸಿಕ್ಕುತ್ತದೆ. ನೀವು ಲೈಸೆನ್ಸ್ ಕೊಟ್ಟಿರುವ ರೀಟೇಲ್ಸ್ ಅಂಗಡಿಗಳಿಗೆ ಹೋಗಿ ಹಿಡಿದಿದ್ದೀರಾ ? ಎಷ್ಟು ಅಂಗಡಿಗಳಿಗೆ ಹೋಗಿ ಹಿಡಿದಿದ್ದೀರಾ ? ತಾಲ್ಲೂಕಾ ಮಟ್ಟದಲ್ಲಿರುವ ಅಂಗಡಿಗಳನ್ನು ಎಷ್ಟು ಹಿಡಿದಿದ್ದೀರಾ ? ನಗರ ದಲ್ಲಿರುವ ವ್ಯಾಪಾರಸ್ತರನ್ನು ಬಂದೋಬಸ್ತು ಮಾಡುವುದಕ್ಕೆ ಏನು ಶಸ್ತ್ರವನ್ನು ಇಟ್ಟುಕೊಂಡಿದ್ದೀರಿ ? ಏತಕ್ಕೆಂದರೆ ಈವೊತ್ತಿನ ದಿವಸ ಶೇಕಡ 30ರಷ್ಟು ಸಕ್ಕರೆಯನ್ನು ವ್ಯಾಪಾರಸ್ಥರು ಏನು ಇಟ್ಟುಕೊಂಡಿದ್ದಾರೋ ಅವರಿಗೆ ದುಡ್ಡು ಕೊಟ್ಟರೆ 100 ಕ್ವಿಂಟಾಲ್ ಬೇಕಾದರೂ ಸಿಕ್ಕುತ್ತದೆ. ಆದರೆ ಶೇಕಡ 70ರಷ್ಟು ಸಕ್ಕರೆಯನ್ನು ತೆಗೆದುಕೊಂಡು ಏನು ವಿತರಣೆ ಮಾಡುತ್ತಿದ್ದೀರಿ. ಅವರಿಗೆ ಹಬ್ಬಕ್ಕೆ ಒಂದು ಕೆ.ಜಿ. ಸಕ್ಕರೆ ಬೇಕು ಎಂದರೂ ಕೂಡ ಸಿಕ್ಕುವುದಿಲ್ಲ. ಇದಕ್ಕೆ ಯಾರು ಹೊಣೆಗಾರರು ನೋಡಿ. ಶಿವಮೊಗ್ಗಾ ಜಿಲ್ಲೆಯಲ್ಲಿ ಒಂದು ಕೆಲಸ ಮಾಡಿದ್ದಾರೆ. ಅಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಇದ್ದರೂ ಕೂಡ ಸಕ್ಕರೆ ಸಿಕ್ಕಲಿಲ್ಲ. ಈ ಬಗ್ಗೆ ಒಂದು ಮಾತು ಹೇಳಬೇಕಾದರೆ ಫುಡ್ ಡೈರೆಕ್ಟರ್ ಯಾರು ಇದ್ದಾರೆ ಅವರಿಗೆ ತಲೆ ಸರಿ ಇದೆಯೋ ಇಲ್ಲವೋ ಅಥವಾ ಅವರನ್ನು ಮೆಂಟಲ್ ಹಾಸ್ಪಿಟಲ್‌ಗೆ ಕಳುಹಿಸಬೇಕೋ, ನಾನು ಹೇಳುವುದನ್ನು ಯೋಚನೆ ಮಾಡಿ. ಶಿವಮೊಗ್ಗದಲ್ಲಿ ಸಕ್ಕರೆ ಕಾರ್ಖಾನೆ ಏನು ಇದೆ ಅಲ್ಲಿ ಉತ್ಪಾದನೆಯಾಗತಕ್ಕಂಥ ಸಕ್ಕರೆಯನ್ನು ಆ ಜಿಲ್ಲೆಯವರಿಗೆ ಅಲಾಟ್ ಮಾಡದೆ ಗುಲ್ಬರ್ಗಾಕ್ಕೋ, ತುಮಕೂರು ಜಿಲ್ಲೆಗೋ ಬೇರೆಯವರಿಗೆ ಅಲಾಟ್ ಮಾಡುತ್ತಾರೆ. ಶಿವಮೊಗ್ಗಾಕ್ಕೆ ಸಕ್ಕರೆ ಬೇಕಾದರೆ ಇವರು ಹೋಗಿ ಗುಲ್ಬರ್ಗಾ ಜಿಲ್ಲೆಯಿಂದ ತರಬೇಕು ಎಂದು ಮಾಡಿದ್ದಾರೆ. ಅದು ರೈಲಿನಲ್ಲಿ ಬರಬೇಕು. ಅನಂತರ ಅದನ್ನು ಲಾರಿಯಲ್ಲಿ ತೆಗೆದುಕೊಂಡು ತೀರ್ಥಹಳ್ಳಿಗೆ ತೆಗೆದುಕೊಂಡು ಹೋಗಬೇಕಾಗಿದೆ. ಆದುದರಿಂದ ದಯವಿಟ್ಟು ಇದನ್ನು ಯೋಚನೆ ಮಾಡಿ. ವ್ಯವಹಾರಸ್ಥರಾಗಿ ಈ ರೀತಿ ಮಾಡಿದರೆ ಏನು ಹೇಳುವುದಕ್ಕಾಗುತ್ತದೆ. ಇದು ಸಾಮಾನ್ಯ ಜನರಿಗೂ ಕೂಡ ಅರ್ಥವಾಗುತ್ತದೆ. ಇದಕ್ಕೆ ಐ. ಎ. ಎಸ್. ಪಾಸು ಮಾಡಿಕೊಂಡು ವಿದ್ಯಾವಂತರು ಆಗಬೇಕಾದದು ಏನೂ ಇಲ್ಲ. ನಮ್ಮೂರಿನಲ್ಲಿ ಹೆಬ್ಬೆಟ್ಟು ಒತ್ತತಕ್ಕಂಥ ರಾಮಣ್ಣನನ್ನು ಕೇಳಿದರೂ ಸರಿಯಾಗಿ ಹೇಳುತ್ತಾನೆ. ನಮ್ಮಲ್ಲಿ ಸಿಕ್ಕುವ ಪದಾರ್ಥವನ್ನು ಹೈದ್ರಾಬಾದ್ ಕರ್ನಾಟಕದಿಂದ ತರಬೇಕು ಎಂದರೆ ಇದು ಅವರ ತಲೆಗೆ ಹೊಳೆಯಲಿಲ್ಲವೇ ? ಇದಕ್ಕೆ ನಾವು ಅಳಬೇಕೋ, ನಗಬೇಕೋ ಗೊತ್ತಾಗುವುದಿಲ್ಲ. ಅಥವಾ ಇದಕ್ಕೆ ಯಾರು ಯಾರು ಶರೀಕು ಆಗಿದ್ದಾರೋ ಗೊತ್ತಿಲ್ಲ. ಇವರು ಏನು ಮಾಡುತ್ತಿದ್ದಾರೆ ಎಂದರೆ ಅಲ್ಲಲ್ಲಿ ತುಮಕೂರು, ಹಾಸನ ಮತ್ತು ಪಕ್ಕದ ಜಿಲ್ಲೆಗಳಿಗೆ ಕೊಡುವುದು, ಅಲ್ಲಿರತಕ್ಕಂಥಾದ್ದನ್ನು ಇಲ್ಲಿ ಹಂಚುವುದು ಈ ಒಂದು ಒಳವ್ಯವಹಾರವನ್ನು ಮಾಡಿಸುತ್ತಿದ್ದಾರೆ. ಇದರಲ್ಲಿ ಒಂದು ಜಾಲ ಇದೆ. ಇವರು ನಮ್ಮ ದೇಶದಲ್ಲಿರುವ ಆಹಾರದ ಕೊರತೆಯನ್ನು ಪೂರೈಸುವುದಕ್ಕೆ ಇರುವ ಆಹಾರ ಪದಾರ್ಥಗಳನ್ನು ಸರಿಯಾಗಿ ಹಂಚದೇ ಹೋದರೆ ಬೇರೆ ಯಾವುದಾದರೂ ವ್ಯವಹಾರ ವನ್ನು ಸರಿಯಾಗಿ ಮಾಡುತ್ತಾರೆಯೋ ಎನ್ನುವುದನ್ನು ಪರೀಕ್ಷೆ ಮಾಡಿ ನೋಡಬೇಕು. ಈ ವ್ಯವಹಾರದಲ್ಲಿ ಸರ್ಕಾರದ್ದೂ ಕೂಡ ಅಕ್ರಮ ವ್ಯವಹಾರ ಇದೆ. ಹೇಗೆಂದರೆ ಈವೊತ್ತಿನ ದಿವಸ ಅವಿದ್ಯಾವಂತರು ಸೇರಿರತಕ್ಕಂಥ ಒಂದು ಸೊಸೈಟಿಯಲ್ಲಿ ಅವ್ಯವಹಾರ ನಡೆಯುತ್ತಿದ್ದರೆ ಒಪ್ಪಬಹುದು ಏತಕ್ಕೆಂದರೆ ಅವರಿಗೆ ಲೆಕ್ಕ ಬರೆಯುವುದಕ್ಕೆ ಬರುವುದಿಲ್ಲ, ಓದುವುದಕ್ಕೆ ಬರುವುದಿಲ್ಲ ಆದರೆ ವಿದ್ಯಾವಂತರು ಇರತಕ್ಕಂಥ ಕಡೆಗಳಲ್ಲಿ, ಸರ್ಕಾರದ ಸಂಬಳವನ್ನು ತೆಗೆದುಕೊಳ್ಳತಕ್ಕಂಥ ಅಧಿಕಾರಿಗಳೇ ಆಗಲಿ, ಮಂತ್ರಿಗಳೇ ಆಗಲಿ ಅಂಥಾ ಕಡೆ ಲಕ್ಷಾಂತರ ರೂಪಾಯಿ ಅವ್ಯವಹಾರ ನಡೆಯುತ್ತದೆ ಎಂದರೆ ದೇಶದಲ್ಲಿ ಯಾರನ್ನು ನಿಂದಿಸಬೇಕು ಎನ್ನುವುದನ್ನು ಅಧ್ಯಕ್ಷರೇ ಹೇಳಬೇಕು. ವಿದ್ಯಾವಂತರು, ಬುದ್ಧಿವಂತರು ಈ ಕ್ಷೇತ್ರದಲ್ಲಿ ಅವ್ಯವಹಾರದ ವಿಶಾಲತೆ ಬೆಳೆದು ಬಂದಾಗ ಯಾರ ಮೇಲೆ ನಿಂದಿಸಬೇಕು ಎನ್ನುವುದು ನನಗೆ ಅರ್ಥವಾಗುವುದಿಲ್ಲ. ನಮ್ಮ

ಆಹಾರದ ಇಲಾಖೆಯಲ್ಲಿ ಭ್ರಷ್ಟಾಚಾರ ಮತ್ತು ಅವ್ಯವಹಾರ ಏನು ಇದೆ ಅದನ್ನು ಸರಿಪಡಿಸದೇ ಹೋದರೆ ನಾಳೆ ದಿವಸ ಒಂದು ದೊಡ್ಡ ವ್ಯವಹಾರವನ್ನು ವಹಿಸಿಕೊಂಡಂಥ ಸಂದರ್ಭದಲ್ಲಿ ಎಷ್ಟೋ ಅವ್ಯವಹಾರಗಳು ನಡೆಯುತ್ತವೆ. ಆದರಲ್ಲೂ ಈಗ ಇರತಕ್ಕಂಥ ಆಡಳಿತದಲ್ಲಿ ಭ್ರಷ್ಟಾಚಾರದ ನೀತಿ ನೋಡಿದರೆ ನಮ್ಮ ಕೈಯ್ಯಲ್ಲಿರತಕ್ಕಂಥದನ್ನು ಕಳೆದುಕೊಂಡು ಉಪವಾಸ ಬೀಳುವ ಕಾಲ ಬರಬಹುದು. ಏತಕ್ಕೆಂದರೆ ಮುಂದೆ ಆಹಾರ ಸಾಮಗ್ರಿಗಳನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಎನ್ನುವ ತತ್ತ್ವ ನಾವೂ ಕೂಡ ಒಪ್ಪಿರುವಾಗ ಅದನ್ನು ವಿರೋಧ ಮಾಡುವುದಕ್ಕಾಗುವುದಿಲ್ಲ. ವಿರೋಧ ಮಾಡಿದರೆ ಎಂತಹ ಅನ್ಯಾಯವಾಗುತ್ತದೆ ಎಂದರೆ ಅದನ್ನು ನೋಡಿದರೆ ವ್ಯಸನವಾಗುತ್ತದೆ. ಹೇಳುವುದಕ್ಕೆ ಬರುವುದಿಲ್ಲ. ಈಗ ಇರುವುದನ್ನೇ ಸರಿಯಾದ ರೀತಿಯಲ್ಲಿ ನಡೆಸುವುದಕ್ಕಾಗುವುದಿಲ್ಲ, ಅದನ್ನು ಸರಿಪಡಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಆದುದರಿಂದ ತಾವು ಆಹಾರ ಪದಾರ್ಥಗಳನ್ನು ವ್ಯವಸ್ಥಿತವಾಗಿ ಹಂಚತಕ್ಕ ಕ್ರಮ ಎಲ್ಲಿ ಇಟ್ಟುಕೊಂಡಿದ್ದೀರಿ ಎಂದರೆ ನಗರ ಪ್ರದೇಶಗಳಲ್ಲಿ ಇಟ್ಟುಕೊಂಡಿದ್ದೀರಿ. ಅಲ್ಲಿ ಇನ್‌ಫಾರ್ಮಲ್ ರೇಷನ್ ಇಟ್ಟುಕೊಂಡಿದ್ದೀರಿ. ನಗರ ಪ್ರದೇಶಗಳ ಜನಸಂಖ್ಯೆ 71 ಲಕ್ಷ ಜನಸಂಖ್ಯೆ ಇದ್ದಾರೆ. ಆದರಲ್ಲಿ ರೇಷನ್‌ನಿಂದಲೇ ಜೀವನ ಮಾಡುತ್ತಾ ಇರುವವರು 50–60 ಲಕ್ಷ ಜನ ಇರಬಹುದು. ಇವರಿಗೆ ಕ್ರಮಬದ್ಧವಾಗಿ ಆಹಾರ ವಿತರಣೆಯಾಗುತ್ತಿದೆಯೇ ? ಬರಗಾಲ ಪ್ರಶ್ನೆ ಒಂದುಬಿಟ್ಟರೆ ನಗರ ಪ್ರದೇಶದಲ್ಲಿ 50–60 ಲಕ್ಷ ಜನರಿಗೆ ಹಂಚುವ ವ್ಯವಸ್ಥೆ ಮಾತ್ರ ಇದೆ. ನಿಮ್ಮ ಪ್ರಕಾರ ಒಬ್ಬ ಮನುಷ್ಯನಿಗೆ 8 ಕೆ.ಜಿ.ಯಂತೆ ಎಷ್ಟು ಜನಕ್ಕೆ ಹಂಚಿದ್ದೀರಿ. ಅವರಿಗೆ ನ್ಯಾಯವಾಗಿ 2 ಕೆ.ಜಿ. ಅಕ್ಕಿ ಉಳಿದ ಪದಾರ್ಥಗಳು 6 ಕೆ.ಜಿ. ಹಂಚಬೇಕು. ಈಗ ಅವರಿಗೆ 2 ಕೆ.ಜಿ. ಅಕ್ಕಿ ಒಂದು ಬಿಟ್ಟರೆ ಬೇರೆ ಇನ್ನು ಏನೂ ಸಿಕ್ಕುವುದಿಲ್ಲ. ಇದನ್ನೆಲ್ಲಾ ಲೆಕ್ಕಹಾಕಿಕೊಂಡು ಒಂದು ತಿಂಗಳಿಗೆ ಎಲ್ಲಾ ಆಹಾರ ಪದಾರ್ಥಗಳೂ ಸೇರಿ ಒಬ್ಬ ಮನುಷ್ಯನಿಗೆ ಸರಾಸರಿ 8 ಕೆ.ಜಿ. ಯಂತೆ ಹಂಚತಕ್ಕಂಥ ವ್ಯವಸ್ಥೆಯನ್ನು ಕ್ರಮಬದ್ಧವಾಗಿ ಮಾಡಿ. ಏತಕ್ಕೆಂದರೆ ನೀವು 50 ಲಕ್ಷ ಜನಕ್ಕೆ ಆಹಾರ ಹಂಚಬೇಕಾದರೆ ನಿಮಗೆ 40 ಲಕ್ಷ ಟನ್ ಆಹಾರ ಬೇಕಾಗುತ್ತದೆ. 50 ಲಕ್ಷ ಜನರಿಗೆ ಹಂಚತಕ್ಕ ಕಾರ್ಯಕ್ರಮದಲ್ಲಿ ಸರಿಯಾದ ವ್ಯವಸ್ಥಿತವಾದ ರೀತಿಯಲ್ಲಿ ಆಹಾರ ಪದಾರ್ಥಗಳನ್ನು ಹಂಚಿದರೆ 40 ಲಕ್ಷ ಟನ್ ಬೇಕಾಗುತ್ತದೆ. ಅದರಲ್ಲಿ ಎಷ್ಟು ನಿಲ್ಲುತ್ತದೆ ಎನ್ನುವುದನ್ನು ನೋಡಬೇಕು. ಮತ್ತು ಈ ಆಹಾರ ಹಂಚಿಕೆ ವ್ಯವಸ್ಥೆ ಬರೇ ನಗರದ ಪ್ರದೇಶಗಳಲ್ಲಿ ಮಾತ್ರ ಇದೆ. ಏತಕ್ಕೆಂದರೆ ಅಲ್ಲಿರತಕ್ಕಂಥ ಜನರು ಕೂಗಿ ಕೇಳುತ್ತಾರೆ, ಗಲಾಟೆ ಮಾಡುತ್ತಾರೆ ಎಂದು ಮಾಡಿತ್ತೀರಿ. ನಮ್ಮ ರಾಜ್ಯದಲ್ಲಿ ಇನ್ನು ಉಳಿದ 2 ಕೋಟಿ 30 ಲಕ್ಷ ಜನಕ್ಕೆ ಆಹಾರ ಸಿಕ್ಕಿಲ್ಲ. ಏತಕ್ಕೆಂದರೆ ಅವರು ಕೇಳುವುದಕ್ಕೂ ಬರುವುದಿಲ್ಲ, ಹೇಳುವುದಕ್ಕೂ ಹೋಗುವುದಿಲ್ಲ. ಮಂತ್ರಿಗಳು ಏನಾದರೂ ಆ ಪ್ರದೇಶದಲ್ಲಿ ಪ್ರವಾಸ ಮಾಡಿದರೆ ಆವಾಗ ಒಂದು ಅರ್ಜಿ ಹಿಡಿದುಕೊಂಡು ಕೊಟ್ಟುಬಿಡುತ್ತಾರೆ, ಅವರಿಗೇನೂ ಸಿಕ್ಕುವುದಿಲ್ಲ. ಈಗ ಹಳ್ಳಿಗಳಲ್ಲಿ ಸೀಮೆಯೆಣ್ಣೆ ಅಭಾವ ಇದೆ. ಈ ರೀತಿ ಅಭಾವ ಇದ್ದರೂ ಕೂಡ ನಿಮ್ಮನ್ನು ಕೇಳುವುದಿಲ್ಲ, ಸೀಮೆಯೆಣ್ಣೆ ಇಲ್ಲದಿದ್ದರೆ ಬೆಂಕಿ ಹಚ್ಚಿಕೊಂಡಾದರೂ ಅಡಿಗೆ ಮಾಡಿಕೊಳ್ಳುತ್ತಾರೆ. ತಾಲ್ಲೂಕು ತಾಸೀಲ್ದಾರರ ಹತ್ತಿರ, ಪಂಚಾಯಿತಿಯವರ ಹತ್ತಿರ ಹೇಳುವುದಕ್ಕೆ ಹೋಗುವುದಿಲ್ಲ. ಇದು ಅಧ್ಯಕ್ಷರಿಗೂ ಗೊತ್ತಿದೆ. ಈವೊತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಜನರಿಗೆ ವ್ಯವಸ್ಥಿತವಾಗಿ ಆಹಾರ ಪದಾರ್ಥಗಳನ್ನು ಹಂಚದೇ ಹೋದರೆ ಅದು ಸರಿಯಲ್ಲ. ಅವರು ಏತಕ್ಕೆ ಅಧಿಕಾರದಲ್ಲಿ ಮುಂದುವರೆಯಬೇಕು ? ಎಂದು ಅವರನ್ನು ಕೇಳಬೇಕು. ಆದುದರಿಂದ ಈವೊತ್ತು ಅವರನ್ನು ಕ್ಷಮಿಸತಕ್ಕಂಥ ಕಾಲ ಮೀರಿಹೋಗಿದೆ. ಅವರನ್ನು ಛಾಟಿ ತೆಗೆದುಕೊಂಡು ಹೊಡೆಯುತಕ್ಕಂಥಾ ಕಾಲ ಬಂದಿದೆ. ಇದೇ ರೀತಿ ಮುಂದುವರೆದರೆ ಚರ್ಮವನ್ನೂ ಕೂಡ ಹಿಡಿದುಕೊಂಡು ಸುಲಿಯುತ್ತಾರೆ, ಅದಕ್ಕೆ ಅವಕಾಶ ಮಾಡಿಕೊಡಬೇಡಿ.

ಉಪಾಧ್ಯಕ್ಷರು :—ಮನುಷ್ಯನ ಚರ್ಮ ಸುಲಿದರೆ ಅದರ ಉಪಯೋಗ ಇದೆಯೋ ?

ಶ್ರೀ ಕಾಗೋಡು ತಿಮ್ಮಪ್ಪ :—ಜನರ ಚರ್ಮ ಸುಲಿಯುವಂಥ ಕಾಲ ಸನ್ನಿಹಿತವಾಗದೆ ಇರಲಿ ಎಂದು ಎಚ್ಚರಿಸುತ್ತಿದ್ದೇನೆ. ಎಷ್ಟೇ ಕಡು ವೈರಿಯಾದರೂ ಕೂಡ ಕೊಲ್ಲುವುದನ್ನು ನೋಡುವುದಕ್ಕಾಗುತ್ತದೆಯೋ ? ಆದುದರಿಂದ ಅನಾವಶ್ಯಕವಾಗಿ ಪ್ರಾಣ ಕಳೆದುಕೊಳ್ಳತಕ್ಕ ಕಾಲ ಬಂದರೆ ಅದನ್ನು ನೋಡಿ ಸಂಕಟಪಡತಕ್ಕ ಪರಿಸ್ಥಿತಿ ಬೇಡ ನಿಮ್ಮ ಇಲಾಖೆಯನ್ನು ಬಹು ಬೇಗ ದುರಸ್ತಿ ಪಡಿಸಿ, ಕೆಲವು ಜನರನ್ನು ಮನೆಗೆ ಕಳುಹಿಸಿದರೂ ಚಿಂತೆ ಇಲ್ಲ. ಒಂದೇ ಕಾಳು ಲುಕ್ಸಾನಾದರೂ ಹಾಗೆ ಮಾಡಿದವರು ದೇಶದ್ರೋಹಿಗಳು ಎನ್ನುವ ರೀತಿಯಲ್ಲಿ ಕಾನೂನು ಬದಲಾವಣೆ ಮಾಡಿ ತಕ್ಕ ಕ್ರಮ ತೆಗೆದುಕೊಳ್ಳಿ ನ್ಯಾಯ ಮತ್ತು ಸತ್ಯದಿಂದ ನಡೆಯತಕ್ಕ ಅಧಿಕಾರಿಗಳನ್ನು ಹೆಚ್ಚಾಗಿ ಮೇಲಿನಿಂದ ಕೆಳಗಿನವರೆಗೆ ಇಟ್ಟು ನಡೆಸಬೇಕು. ಡೈರೆಕ್ಟರ ಬಗ್ಗೆ ಶ್ರೀ ಅರ್ಮುಗಂ ಬರೆದಿದ್ದಾರೆ. ಅಂಥ ಅಧಿಕಾರಿಗಳು ಉನ್ನತ ಸ್ಥಾನದಲ್ಲಿದ್ದರೆ ಏನಾಗಬಹುದು ಎಂದು ಯೋಚಿಸಿ ಇಲಾಖೆಯನ್ನು ಶುದ್ಧೀಕರಣ ಮಾಡತಕ್ಕ ಕೆಲಸ ಬಹಳ ಜಾಗ್ರತೆಯಾಗಿ ಮಾಡಬೇಕು. ಮೊದಲು ನಿಮ್ಮ ಇಲಾಖೆಯನ್ನು ಶುದ್ಧೀಕರಣ ಮಾಡಿ ವ್ಯವಹಾರಕ್ಕೆ ಕೈ ಹಾಕಬೇಕು, ಚೊಕ್ಕಟವಾದ ಕೈ ಹಾಕಬೇಕು, ಇಲ್ಲದೆ ಹೋದರೆ ಒಳ್ಳೆಯದಾಗುವುದಿಲ್ಲವೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ) :—ಸನ್ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳಿಗೆ ನಾನು ಬೆಂಬಲವನ್ನು ಸೂಚಿಸುತ್ತ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಈಗ ಅನೇಕ ಮಾನ್ಯ ಸ್ನೇಹಿತರು, ವಿರೋಧ ಪಕ್ಷದ ನಾಯಕರೂ ಕೂಡ ದೊಡ್ಡ ನೀರಾವರಿ ಬಗ್ಗೆ ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇಡೀ ರಾಜ್ಯದಲ್ಲಿ ಕಳೆದ ಹತ್ತಾರು ವರ್ಷದಿಂದ ದೊಡ್ಡ ನೀರಾವರಿ ಬಗ್ಗೆ ಏನು ನಿಲುವನ್ನು ಕಳೆದ ಸರ್ಕಾರವಾಗಲಿ ಅಥವಾ ಈಗಿನ ನಮ್ಮ ಸರ್ಕಾರವಾಗಲೀ ತಳೆದಿದೆ ಎನ್ನುವುದರ ಬಗ್ಗೆ, ಇಡೀ ರಾಜ್ಯದ ಎಲ್ಲ ಪ್ರಾಜೆಕ್ಟಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮೈಸೂರು ಭಾಗದಲ್ಲಿ ಕಾವೇರಿ ಜಲಾನಯನ ಭಾಗದಲ್ಲಿ ನಮ್ಮ ಸರ್ಕಾರದವರು ಕೈಕೊಂಡಿರತಕ್ಕ ಹೇಮಾವತಿ, ಕಬಿನಿ, ಹಾರಂಗಿ ಪ್ರಾಜೆಕ್ಟ್‌ಗಳು ಮತ್ತು ಇನ್ನು ಕೆಲವು ಮಧ್ಯಮ ಪ್ರಮಾಣದ ಪ್ರಾಜೆಕ್ಟಗಳು, ಮತ್ತು ಅವುಗಳ ಕೆಲಸದ ಬಗ್ಗೆ ಒಂದೆರಡು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಹಾರಂಗಿ. ಹೇಮಾವತಿ ಮತ್ತು ಕಬಿನಿ ಪ್ರಾಜೆಕ್ಟನ್ನು ನಾವು 1924 ರ ಒಪ್ಪಂದ ಮುಗಿಯುವುದರೊಳಗೆ ಪೂರೈಸಬೇಕು ಎಂದು ಸರ್ಕಾರ ಕಾತುರದಿಂದ ಇರುವುದನ್ನು ನಾವು ಕಾಣುತ್ತೇವೆ. ಆದರೆ ನಡೆದಿರತಕ್ಕ ಕೆಲಸವನ್ನು ಲೆಕ್ಕಕ್ಕೆ ಹಾಕಿಕೊಂಡು, ಇನ್ನೂ ಮಾಡಿ ಮುಗಿಸ ಬೇಕಾದ ಕೆಲಸ, ಅದಕ್ಕೆ ಬೇಕಾದ ಹಣ ಇದನ್ನೂ ಲೆಕ್ಕ ಹಾಕಿ ನೋಡಿದರೆ ಬಹುಶಃ 1974 ರೊಳಗೆ ಆ ಕೆಲಸವನ್ನು ಮುಗಿಸಬೇಕೆಂಬ ಏನು ಗುರಿಯನ್ನು ಸರ್ಕಾರ ಇಟ್ಟುಕೊಂಡಿದೆ ಅದನ್ನು ಮುಟ್ಟುವುದಕ್ಕಾಗುವುದಿಲ್ಲವೇನೋ ಎಂದನ್ನಿಸುತ್ತದೆ. 1973-74ರಲ್ಲಿ ಈ ಮೂರು ಪ್ರಾಜೆಕ್ಟ ಗಳಿಗೆ ಇಟ್ಟಿರತಕ್ಕ ಹಣವನ್ನು ನೋಡಿದರೆ ಬಹುಶಃ 1974 ರ ವೇಳೆಗೆ 25 ಪರ್ಸೆಂಟ್ ಕೆಲಸವನ್ನು ಮುಗಿಸಬಹುದು ಎಂದು ಅನ್ನಿಸುತ್ತದೆ. ಕಬಿನಿ ಪ್ರಾಜೆಕ್ಟ್ ಅಣೆಕಟ್ಟು ಕೆಲಸ ಮುಗಿದಿದೆ. ಕ್ರೆಸ್ಟ್ ಗೇಟುಗಳನ್ನು ಹಾಕಿದರೆ ನೀರು ತಡೆ ಹಿಡಿಯಬಹುದು. ಈ ಜಲಾಶಯದ ನೀರನ್ನು ಉಪಯೋಗಿಸುವುದಕ್ಕೆ ಎರಡು ಹಂತದಲ್ಲಿ ಕಾಲುವೆ ತೆಗೆಯಬೇಕೆಂದು ಸರ್ಕಾರ ಯೋಜನೆ ಮಾಡಿದೆ. ಒಂದು ಹಂತದ ಕೆಲಸವನ್ನು ಈಗಾಗಲೇ ಮಂಜೂರು ಮಾಡಿದ್ದು 90 ಮೈಲಿ ನಾಲೆ ತೆಗೆಯುವುದಕ್ಕೆ ಕೆಲಸ ಪ್ರಾರಂಭವಾಗಿದೆ. ಆದರೆ ಇದರಲ್ಲಿಯೂ 60 ಮೈಲಿ ತನಕ ಮಂಜೂರಾತಿ ಸಿಕ್ಕಿ 60 ಮೈಲಿ ಕೆಲಸ ಮಾತ್ರ ಪ್ರಾರಂಭ ಮಾಡಿ ಕೆಲಸ ಅನೇಕ

ಹಂತಗಳಲ್ಲಿ ನಡೆಯುತ್ತಿದೆ. ಮೊದಲನೇ ಹಂತದ ಕೆಲಸಕ್ಕೆ ಇನ್ನೂ 30 ಮೈಲಿ ನಾಲೆ ಕೆಲಸ ಸರ್ಕಾರ ಮಂಜೂರು ಮಾಡಿ ಅದಕ್ಕೆ ಸಹ ಹಣವನ್ನು ಒದಗಿಸಿಕೊಟ್ಟು ಕೆಲಸವನ್ನು ಪೂರೈಸ ಬೇಕು. ಸರ್ಕಾರ ಕಬಿನಿ ಪ್ರಾಜೆಕ್ಟ್‌ಗೆ ಇಟ್ಟಿರತಕ್ಕ ಮೂರು ಕೋಟಿ ರೂಪಾಯಿ ಏನೇನೂ ಸಾಲದು. ಇನ್ನೂ ಹೆಚ್ಚಿನ ಹಣವನ್ನು ಒದಗಿಸಬೇಕು ಎಂದು ಹೇಳುತ್ತೇನೆ.

ಕಬಿನಿ ಜಲಾಶಯದ ನೀರನ್ನು ಉಪಯೋಗ ಮಾಡತಕ್ಕ ಮೊದಲನೆ ಹಂತದ ನಾಲಾ ಕೆಲಸ ಏನಿದೆ ಅದರಲ್ಲಿ ಹೆಚ್ಚಿನ ಅಚ್ಚುಕಟ್ಟು ಬರುವುದಿಲ್ಲ ಎನ್ನುವುದನ್ನು ಸರ್ಕಾರ ಮನಗಂಡಿದೆ. ಎರಡನೆ ಹಂತದ ನಾಲಾ ಕೆಲಸ ಮಾಡಿ ಮುಗಿಸಿದರೆ ಮಾತ್ರ ಹೆಚ್ಚು ಅಚ್ಚುಕಟ್ಟು ಜಲಾಶಯ ದಿಂದ ಪಡೆಯುವುದಕ್ಕೆ ಸಾಧ್ಯ. ಆದ್ದರಿಂದ ಎರಡನೇ ಹಂತದ ನಾಲಾ ಕೆಲಸವನ್ನು ಕೂಡ ಮಂಜೂರು ಮಾಡಿ, ಅದಕ್ಕೆ ಹಣವನ್ನು ಒದಗಿಸಿ, 1974 ರೊಳಗೆ ಮುಗಿಸತಕ್ಕ ಮನಸ್ಸು ಮಾಡಬೇಕು ಎಂದು ವಿನಂತಿಸಿಕೊಳ್ಳುತ್ತೇನೆ.

ಈಗಾಗಲೇ ನಮ್ಮಲ್ಲಿ ಕೆಲವು ಮೀಡಿಯಂ ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡಿದ್ದಾರೆ. ಸುವರ್ಣಾವತಿ ಪ್ರಾಜೆಕ್ಟ್ ಕೆಲಸ ಪ್ರಾರಂಭವಾಗಿ 60—70 ಪರ್ಸೆಂಟ್ ಕೆಲಸ ಮುಗಿದಿದೆ. ಇದರಿಂದ ಜೂನ್ 1973 ರಲ್ಲಿ ನೀರನ್ನು ಕೊಡಬೇಕೆಂದು ಸರ್ಕಾರದವರು ನಿರ್ಧಾರ ಮಾಡಿದ್ದರೂ ಸಹ ಕ್ರೆಸ್ಟ್ ಗೇಟ್ಸ್ ಹಾಕುವ ಕೆಲಸ ತಡವಾಗಿದೆ. ಆರು ತಿಂಗಳು ಅಥವಾ ಒಂದು ವರ್ಷ ಮುಂದೆ ಹೋಗುವ ಸೂಚನೆಗಳು ಕಾಣುತ್ತಿವೆ. ಆದುದರಿಂದ ಜೂನ್ ತಿಂಗಳಿನಲ್ಲಿ ಕ್ರೆಸ್ಟ್ ಗೇಟುಗಳನ್ನು ಹಾಕಿ, ನೀರನ್ನು ಒದಗಿಸತಕ್ಕ ಕೆಲಸವನ್ನು ಮಾಡಿಕೊಡಬೇಕು. ಸುವರ್ಣಾವತಿಯ ಆಶ್ರಯದಲ್ಲಿರುವ ಅನೇಕ ನಾಲೆಗಳು ಮತ್ತು ಅಣೆಕಟ್ಟೆಗಳನ್ನು ದುರಸ್ತಿ ಮಾಡತಕ್ಕ ಕೆಲಸವನ್ನೂ ಪ್ರಾಜೆಕ್ಟ್‌ನಲ್ಲಿಯೇ ಸೇರಿಸಿಕೊಂಡಿದ್ದಾರೆ. ಆದರೆ ಅದಕ್ಕೆ ತಾತ್ವಿಕವಾಗಿ 10 ಲಕ್ಷ ರೂಪಾಯಿ ಮಾತ್ರ ಇಟ್ಟಿರುವುದು ಕಂಡು ಬಂದಿದೆ. ಎಲ್ಲವನ್ನೂ ಮಾಡಿ ಮುಗಿಸಬೇಕಾದರೆ 80 ಲಕ್ಷ ಅಥವಾ ಒಂದುಕೋಟಿ ರೂಪಾಯಿವರೆಗೂ ಬೇಕು. ಈ ಹಣವನ್ನೂ ಒದಗಿಸಿ ನಾಲಾ ಕೆಲಸ ಕೂಡ ಮಾಡಿ ಮುಗಿಸಿಕೊಡಬೇಕೆಂದು ಸೂಚನೆ ಮಾಡುತ್ತಿದ್ದೇನೆ.

ಕಬಿನಿ ಜಲಾಶಯದಲ್ಲಿ ಈಗ ಎಷ್ಟು ಅಚ್ಚುಕಟ್ಟಿಗೆ ನೀರು ಕೊಡಲು ಯೋಚನೆ ಮಾಡಿ ದ್ದಾರೆಯೋ ಅದಕ್ಕಿಂತ ಹೆಚ್ಚು ನೀರು ದೊರೆಯುತ್ತದೆ. ಆ ನೀರನ್ನು ನಾವು ಉಪಯೋಗ ಮಾಡಬಹುದು. ಲಿಫ್ಟ್ ಇರಿಗೇಷನ್ ಯೋಜನೆಯನ್ನು ತಯಾರುಮಾಡಿ, ಅದರಿಂದ ಹೈ ಲೆವೆಲ್ ಕೆನಾಲ್ ತೆಗೆದರೆ, ಚಾಮರಾಜನಗರ ತಾಲ್ಲೂಕಿನ ಅನೇಕ ಭಾಗದ ಜನರಿಗೆ ನೀರನ್ನು ಒದಗಿಸಿಕೊಡಬಹುದು. ಆ ರೀತಿಯಾಗಿ ಮಾಡಿ, ಆ ಭಾಗಕ್ಕೆ ನೀರಿನ ಸೌಕರ್ಯಮಾಡಿಸಿಕೊಡ ಬೇಕೆಂದು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

64 ಫ್ಯಾಮಿನ್ ಬಗ್ಗೆ ಒಂದೆರಡು ಮಾತು ಹೇಳಬೇಕು. ನಮ್ಮ ದುರ್ದೈವವೆಂದು ಕಾಣಿಸುತ್ತದೆ. ಹಿಂದೆಂದೂ ನಮ್ಮ ರಾಜ್ಯ ಕಾಣದೆ ಇದ್ದಂಥ ಕ್ಷಾಮವನ್ನು ಈ ವರ್ಷ ಕಂಡು ಜನರೆಲ್ಲಾ ಕಂಗಾಲಾಗಿದ್ದಾರೆ. ಸರ್ಕಾರದವರೂ ಕೂಡ ಯಾವ ಕಾಲದಲ್ಲಿಯೂ, ಯಾವ ಇತಿಹಾಸದಲ್ಲಿಯೂ ಖರ್ಚು ಮಾಡದೆ ಇದ್ದಷ್ಟು ಹಣವನ್ನು ಕ್ಷಾಮಪರಿಹಾರ ಕೆಲಸಗಳಿಗೆ ಖರ್ಚುಮಾಡುವುದಕ್ಕೆ ಬೇಡಿಕೆಯನ್ನು ಸದನದ ಮುಂದೆ ಇಟ್ಟಿದ್ದಾರೆ.

ಮೈಸೂರು ಜಿಲ್ಲೆಗೆ ಸೇರಿದ ಕೆಲವು ತಾಲ್ಲೂಕುಗಳಲ್ಲಿ ಕ್ಷಾಮದಿಂದಾಗಿ ಇಲ್ಲೂ ಅಭಾವದ ಪರಿ ಹಾರ ಕಾರ್ಯಕ್ರಮಗಳನ್ನು ಮಾಡಬೇಕೆಂದು ಇತ್ತು. ಆದರೆ ಇದರ ಕೆಲಸಗಳನ್ನು ಪ್ರಾರಂಭ ಮಾಡಿ ಅದನ್ನು ಅರ್ಧದಲ್ಲಿಯೇ ಬಿಟ್ಟಿದ್ದಾರೆ. ಇತರ ಕಡೆ ಹೆಚ್ಚು ಬರಗಾಲ ಬಂದಿದೆ ಎಂದು ಆ ನಾಲ್ಕು ತಾಲ್ಲೂಕುಗಳಲ್ಲಿ ಹೆಚ್ಚು ಬರಗಾಲದ ಕಾರ್ಯಗಳನ್ನು ಮಾಡಿದ್ದಾರೆ. ಇದನ್ನು

ನಾವು ಬೇಡ ಎಂದು ಹೇಳುತ್ತಿಲ್ಲ. ಇದಕ್ಕೆ ಇನ್ನೂ ಹೆಚ್ಚು ಸಹಾಯವನ್ನು ಸರಕಾರ ಮಾಡಬೇಕು. ಹೀಗೆ ಮಾಡಿರುವ ಕೆಲಸಕ್ಕಾಗಿ ಸರಕಾರವನ್ನು ನಾವು ಶ್ಲಾಘನೆ ಮಾಡುತ್ತೇವೆ. ನಾನು ಇಲ್ಲಿ ಹೇಳುವುದು ನಮ್ಮ ಮೈಸೂರು ಜಿಲ್ಲೆಯಲ್ಲಿ ಕೂಡ ಮಳೆ ಬರದೆ ಏಳೆಂಟು ತಾಲ್ಲೂಕುಗಳಲ್ಲಿ ಬೆಳೆಯಾಗದೆ ಜನ ಕಂಗಾಲಾಗಿದ್ದಾರೆ. ಇಂತಹ ಜನಕ್ಕೆ ತಕ್ಕ ಪರಿಹಾರ ಕಾರ್ಯಕ್ರಮಗಳನ್ನು ಮಾಡಿಸಿ ಕೊಡಬೇಕು. ಇದುವರೆಗೆ ಮಾಡದೇ ಇರುವ ಇಲ್ಲಿನ ಕೆಲಸಗಳನ್ನು ಬೇಗನೆ ಮಾಡಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮುಂಗಾರು ಮಳೆ ಬರುವ ಸಮಯ ಇದು. ಇಲ್ಲಿನ ರೈತರಿಗೆ ಒಳ್ಳೆಯ ಉತ್ತಮ ಜಾತಿ ಬೀಜಗಳನ್ನು ಒದಗಿಸಿಕೊಟ್ಟು ಸಹಾಯ ಮಾಡಬೇಕು ಎಂದು ಮನವಿ ಮಾಡುತ್ತೇನೆ.

ನಮ್ಮ ಚಾಮರಾಜನಗರದ ತಾಲ್ಲೂಕಿನಲ್ಲಿ ಈಚೆಗೆ ಚಿಕ್ಕಹೊಳೆ ಅಣೆಕಟ್ಟು ಒಡೆದು ಹೋದುದರಿಂದ ಕಳೆದ ನಾಲ್ಕೈದು ತಿಂಗಳಿಂದ ಇಲ್ಲಿನ ಜನಕ್ಕೆ ಇನ್ನೂ ಹೆಚ್ಚು ಸಹಾಯ ಮಾಡಲಿಲ್ಲ. ಇದರ ಬಗ್ಗೆ ಕಳೆದ ನಾಲ್ಕು ತಿಂಗಳ ಕೆಳಗೆ ತಾತ್ಕಾಲಿಕವಾದ ಕೆಲವು ಪರಿಹಾರ ಕ್ರಮಗಳನ್ನು ಮಾಡಿದರೇ ವಿನಾ ಜರೂರಾಗಿ ಕಷ್ಟಕ್ಕೆ ಸಿಕ್ಕಿದ ಜನಕ್ಕೆ ಇನ್ನೂ ಸಹಾಯಗಳನ್ನು ಮಾಡಲಿಲ್ಲ. ಇದರಲ್ಲಿ ಜಮೀನನ್ನು ಕಳೆದುಕೊಂಡವರಿಗೆ ಬೇರೆ ಕಡೆ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಇವರಿಗೆ ಕೊಡಿಸಿಕೊಡಬೇಕು. ಮೊದಲು ಸಾಲವಾಗಿ ಹಣ ಮಂಜೂರು ಮಾಡಿಸಿ ಕೊಡುವುದಾಗಿ ಹೇಳಿದರು. ಆದರೆ ಇದುವರೆಗೆ ಅದನ್ನು ಮಂಜೂರು ಮಾಡಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಇಲ್ಲಿ ನಡೆದಿರುವ ಅನಾಹುತಗಳ ಬಗ್ಗೆ ಪ್ರತ್ಯಕ್ಷವಾಗಿ ನೋಡಲು ನಮ್ಮ ಮಾನ್ಯ ಮುಖ್ಯ ಮಂತ್ರಿಗಳೂ ಬಂದಿದ್ದರು ಮತ್ತು ಕೆಲವು ಶಾಸಕರು ಕೂಡ ಅವರಲ್ಲಿಗೆ ಡೆಲಿಗೇಷನ್ ಮೂಲಕ ಹೋಗಿ ಅಲ್ಲಿ ನೊಂದ ಜನರ ಬಗ್ಗೆ ಸಹಾಯ ಮಾಡಬೇಕೆಂದು ಕೂಡ ಕೋರಲಾಗಿತ್ತು. ಸಂಬಂಧಪಟ್ಟ ಮಂತ್ರಿಗಳು ಹಾಗೂ ಮುಖ್ಯ ಮಂತ್ರಿಗಳು ಸಹಾಯ ಮಾಡುತ್ತೇನೆಂದು ಹೇಳಿದರೂ ಇನ್ನೂ ಇಲ್ಲಿನ ಜನಕ್ಕೆ ಸಾಲ ಮಂಜೂರಾಗಲಿಲ್ಲ. ಮತ್ತು ಭೂಮಿ ಕಳೆದುಕೊಂಡಿರುವವರಿಗೆ ಬೇರೆ ಕಡೆ ಭೂಮಿ ಕೊಟ್ಟು ವ್ಯವಸಾಯ ಮಾಡಲು ಪ ಯತ್ನ ಮಾಡಲಿಲ್ಲ. ಇನ್ನು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಸೀಮೆಎಣ್ಣೆ ಸಿಗದೆ ತುಂಬಾ ಅಭಾವವಾಗಿದೆ. ಇದರ ಬಗ್ಗೆ ನಾನು ಸರಕಾರಕ್ಕೆ ಸಲಹೆ ಮಾಡುವುದು ಪ್ರತಿಯೊಂದು ಹಳ್ಳಿಯಲ್ಲೂ ಈಗ ಪಂಚಾಯತಿಗಳಿವೆ ಮತ್ತು ಒಂದು ಸಹಕಾರ ಸಂಘ ಇರುತ್ತದೆ. ಆಯಾ ತಾಲ್ಲೂಕಿನ ತಹಶೀಲುದಾರರನ್ನು ಅಲ್ಲಿರುವ ಪಂಚಾಯತಿಗಳ ಮೂಲಕ ಇಲ್ಲವೇ ಸಹಕಾರ ಸಂಘಗಳ ಮೂಲಕ ಸೀಮೆ ಎಣ್ಣೆ ತರಿಸಿ ಎಲ್ಲ ಜನರಿಗೂ ಸುಲಭ ಬೆಲೆಯಲ್ಲಿ ದೊರಕುವಂತೆ ವ್ಯವಸ್ಥೆ ಮಾಡಬೇಕು. ಜನತೆಗೆ ಈಗ ಹಳ್ಳಿಗಾಡಿನಲ್ಲಿ ಸೀಮೆ ಎಣ್ಣೆ ಸಿಗದೆ ಕತ್ತಲಲ್ಲಿ ಇರಬೇಕಾಗಿ ಬಂದಿದೆ ಮತ್ತು ಬೆಂಕಿ ಹಚ್ಚಿಕೊಂಡು ಆ ಬೆಳಕಿನಲ್ಲಿ ಊಟ ಇತ್ಯಾದಿಗಳನ್ನು ಮಾಡಬೇಕಾಗಿದೆ. ಎಷ್ಟು ದುಡ್ಡು ಹೆಚ್ಚು ಕೊಟ್ಟರೂ ಸೀಮೆ ಎಣ್ಣೆ ಸಿಗುವುದು ಕಷ್ಟವಾಗಿದೆ. ಇನ್ನು ನಮ್ಮ ತಾಲ್ಲೂಕಿಗೆ ರೇಷನ್ ಡಿಪೋವಿಗೆ ಒಂದು ತಿಂಗಳಿಗೆ 50 ಮೂಟೆ ಅಕ್ಕಿ ಹಾಗೂ 80 ಮೂಟೆ ಗೋಧಿ ಎಂದು ಕೊಟ್ಟರೆ ಇದು ಇಲ್ಲಿನ ಜನಕ್ಕೆ ಸಾಲುವುದಿಲ್ಲ. ಇದನ್ನು ಇನ್ನೂ ಸ್ವಲ್ಪ ಹೆಚ್ಚು ಮಾಡಿ ಎಲ್ಲ ಜನರಿಗೂ ಸುಲಭವಾಗಿ ಸಿಗುವಂತೆ ವ್ಯವಸ್ಥೆ ಮಾಡಬೇಕು. ಎರಡು ಲಕ್ಷಕ್ಕಿಂತ ಹೆಚ್ಚು ಪ್ರಜಾ ಸಂಖ್ಯೆ ಇರುವ ನಮ್ಮ ತಾಲ್ಲೂಕಿಗೆ ಆಹಾರ ಇಲಾಖೆಯವರು ಈಗ ಕಳುಹಿಸುತ್ತಿರುವ ಕೋಟಾ ಸಾಲದು, ಇದನ್ನು ಇನ್ನೂ ಹೆಚ್ಚು ಮಾಡಿ ಹಂಚುವ ವ್ಯವಸ್ಥೆ ಮಾಡಬೇಕು. ಎಂದು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ) : ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇಟ್ಟಿರ ತಕ್ಕ ಬೇಡಿಕೆಯನ್ನು ಅನಿವಾರ್ಯವಾಗಿ ವಿರೋಧಿಸಬೇಕಾಗಿ ಬಂದಿದೆ. ಕಾರಣ ಇಷ್ಟೇ.

ನಾನು ಬೆಂಗಳೂರು ನಗರದಲ್ಲಿ ಸಂಸಾರ ಶುರು ಮಾಡಿದಾಗ ನನಗೆ ಸಂಪಾದನೆ ಬರುತ್ತಿದ್ದುದು ತಿಂಗಳಿಗೆ 50 ರೂಪಾಯಿಗಳು. ನಾವು ಆರು ಜನರಿದ್ದೆವು ಮತ್ತು ನಮಗೆ ಅಕ್ಕಿ ಹಾಗೂ ಇತರ ಸಾಮಾನುಗಳಿಗಾಗಿ 18 ರೂಪಾಯಿಗಳು ಆಗುತ್ತಿತ್ತು. ಸೌದೆಗಾಗಿ ಎರಡು ರೂಪಾಯಿ ಮನೆ ಬಾಡಿಗೆಗಾಗಿ ಏಳು ರೂಪಾಯಿಗಳು ಮತ್ತು ತರಕಾರಿ ಇತರ ಖರ್ಚುಗಳೂ ಸೇರಿ ಒಂದು ತಿಂಗಳಿಗೆ 45ರೂ. ಆಗುತ್ತಿತ್ತು. ಮತ್ತು ತಿಂಗಳಿಗೆ ಮೂರು ರೂಪಾಯಿ ಉಳಿಯುತ್ತಿತ್ತು. ಈಗ ನನಗೆ ಬರತಕ್ಕ ವರಮಾನವಾದರೂ ಎರಡುಸಾವಿರ ರೂಪಾಯಿಗಳು ಮತ್ತು ಮೂವತ್ತು ಸಾವಿರ ರೂಪಾಯಿಗಳ ಓವರು ಡ್ರಾಫ್ಟ್ ಇದೆ. ಇಂತಹ ಒಂದು ಪ್ರಶ್ನೆಯನ್ನು ಬಗೆಹರಿಸಬೇಕಾದರೆ ಮೊದಲಾಗಿ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದ ಹಾಗೆ ಪಾಪ್ಯುಲೇಷನ್ ಚೆಕ್ ಮಾಡಿ ಬಗೆಹರಿಸಬೇಕಾಗಿದೆ. ಎರಡನೇದು ಪ್ರೊಡಕ್ಷನ್ ಜಾಸ್ತಿ ಮಾಡಬೇಕು. ಅಗ್ರಿಕಲ್‌ಚರು ಪ್ರೊಡಕ್ಷನ್ ಜಾಸ್ತಿ ಮಾಡದೆ ಇದ್ದರೆ ಆಹಾರ ಸಮಸ್ಯೆ ಬಗೆಹರಿಸಲಾಗುವುದಿಲ್ಲ. ಕಳ್ಳವ್ಯಾಪಾರ ಮಾಡತಕ್ಕ ವರ್ತಕರನ್ನು ಹಿಡಿದು ಶಿಕ್ಷೆಗೆ ಗುರಿಪಡಿಸಬೇಕು ಮತ್ತು ಸಗಟು ವ್ಯಾಪಾರವನ್ನು ಸರಕಾರ ತೆಗೆದು ಕೊಳ್ಳುವಾಗ ಇದಕ್ಕೆ ಬೇಕಾದ ಎಲ್ಲ ಪ್ರಿಪರೇಷನ್‌ಗಳನ್ನೂ ಪೂರ್ತಿಮಾಡಿಕೊಂಡು ಅನಂತರ ಜಾರಿಗೆ ತರಬೇಕು ಮತ್ತು ಅಧಿಕಾರಿಗಳಲ್ಲಿರುವ ಕರಪ್‌ಷನ್‌ನ್ನು ತಪ್ಪಿಸಬೇಕು, ಇವಲ್ಲದರ ಬಗ್ಗೆ ಸಾಕಾದಷ್ಟು ಎಚ್ಚರಿಕೆ ಸರಕಾರ ವಹಿಸದೇ ಹೋದರೆ ಈ ಆಹಾರ ಸಮಸ್ಯೆ ಬಗೆಹರಿಯುವುದಿಲ್ಲ. ಪ್ರೊಡಕ್ಷನ್ ಆಗಬೇಕಾದರೆ ಬರಿ ಸ್ಲೋಗನ್‌ಗಳಿಂದ ಇದನ್ನು ಮಾಡಲು ಸಾಧ್ಯವಾಗುವುದಿಲ್ಲ. ನಮ್ಮ ದೇಶದ ಜನರು ಕಷ್ಟಪಟ್ಟು ದುಡಿಯುವುದನ್ನು ಕಲಿಯಬೇಕು, ನ್ಯಾಯವಾಗಿ ಹಾಗೂ ಧರ್ಮವಾಗಿ ಜೀವನ ಮಾಡುವ ಪರಿಸ್ಥಿತಿ ಉಂಟುಮಾಡಬೇಕಾಗುತ್ತದೆ. ಹಿಂದೆ ಭತ್ತ 50 ರಿಂದ 59 ರೂಪಾಯಿಗೆ ಒಂದು ಮೂಟೆ ಸಿಗುತ್ತಿತ್ತು. ಆದರೆ ಈಗ ಒಳ್ಳೆಯ ಅಕ್ಕಿ ಒಂದು ಕ್ವಿಂಟಾಲ್ ಮೂಟೆಗೆ 225 ರೂಪಾಯಿಗಳವರೆಗೆ ಆಗಿದೆ ಮತ್ತು ಒಳ್ಳೆ ಅಕ್ಕಿ ಸಿಗುವುದೇ ಕಷ್ಟವಾಗಿದೆ, ಹಾಗೆ ಹಸುವಿಗೆ ಬೇಕಾದ ಬ್ರಾನ್ 35 ರೂಪಾಯಿ ಎಂದು ರೇಟಿದ್ದರೂ ಇದು 85 ರೂಪಾಯಿಗೆ ಕಡಿಮೆ ಪೇಟೆಯಲ್ಲಿ ಸಿಗುತ್ತಿಲ್ಲ. ಇನ್ನು ರೇಷನ್ ಡಿಪ್ರೋಗಳಲ್ಲಿ 8 ಕೆ. ಜಿ. ಅಕ್ಕಿ 8 ಕೆ.ಜಿ. ಗೋಧಿ ಮೈದಾ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಯಾವ ಡಿಪ್ರೋವಿಗೆ ಹೋಗಿ ನೋಡಿದರೂ ಅಲ್ಲೆ ಸ್ಟಾಕೇ ಬಂದಿರುವುದಿಲ್ಲ. ಮೈದಾ 105 ರೂಪಾಯಿ ಎನ್ನುತ್ತಾರೆ. ಅದು ಎಲ್ಲೂ ಸಿಗುತ್ತಿಲ್ಲ. ಇನ್ನು ಸಕ್ಕರೆ ನೋಡಿದರೆ 2-50 ಕ್ಕೆ ಕಡಿಮೆ ಸಿಗುವುದಿಲ್ಲ, ಆಟಾ 80 ರಿಂದ 150ರ ವರೆಗೆ ಏರಿ ಹೋಗಿದೆ ಇಂತಹ ಪರಿಸ್ಥಿತಿಗೆಲ್ಲಾ ಏನು ಕಾರಣ ಎನ್ನುವುದನ್ನು ನಾವು ನೋಡಬೇಕಾಗಿದೆ. ಇನ್ನು ಮುಂದೆ ಸರಕಾರ ಆದಷ್ಟು ಹೇಳಿಕೆ ಕೊಡುವುದನ್ನು ಕಡಿಮೆ ಮಾಡಬೇಕು. ಇದರಿಂದ ಕೊಡುವುದೇ ಕಡಿಮೆ. ಇಂತಹ ಹೇಳಿಕೆಗಳು ಬಂದರೆ ಜನರಿಗೆ ಮತ್ತಷ್ಟು ತೊಂದರೆಯಾಗಿ ಕಷ್ಟವಾಗುತ್ತದೆ. ಪ್ರತಿಯೊಬ್ಬರಿಗೂ ತಿಂಗಳಿಗೆ 8 ಕೆ.ಜಿ. ಯಂತೆ ಅಂದರೆ 2 ಕೆ. ಜಿ. ಅಕ್ಕಿ, 4 ಕೆ.ಜಿ. ಗೋಧಿ ಮತ್ತು 2 ಕೆ.ಜಿ. ಇತರೇ ಧಾನ್ಯಗಳನ್ನು ಕೊಡುತ್ತಿರುವುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ರೀತಿ ನಿಜವಾಗಿಯೂ ಒಬ್ಬರಿಗೆ 8 ಕೆ.ಜಿ.ಯನ್ನು ಮಾನ್ಯ ಮಂತ್ರಿಗಳು ಕೊಡಿಸಿದ್ದೇ ಆದರೆ ಅವರಿಗೆ ಸಲಾಂ ಹಾಕುತ್ತೇನೆ. ನಮ್ಮ ಭಾಗದ ಅಂಗಡಿಗಳಲ್ಲಿ ಗೋಧಿ ಸಿಗುತ್ತಲೇ ಇಲ್ಲ. ಇಂದು ಬೆಲೆಗಳು ಯದ್ವಾತದ್ವಾ ಏರುತ್ತಿರುವುದರಿಂದ ಜನರು ಯಾವ ರೀತಿ ಜೀವನ ಮಾಡಬೇಕೆಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಮೊದಲು ಕನ್ಸಲ್‌ಟೇಟಿವ್ ಕಮಿಟಿ ಫಾರ್ ಫುಡ್ ಎಂದು ಇತ್ತು. ಅದೇ ರೀತಿ ಈಗಲೂ ಸಹ ಶಾಸಕರು ಮತ್ತು ಆದರ ಬಗ್ಗೆ ತಿಳಿವಳಿಕೆ ಇರುವವರನ್ನು ಸೇರಿಸಿ ಒಂದು ಕಮಿಟಿಯನ್ನು ಮಾಡಿದರೆ ಇದರ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡುವುದಕ್ಕೆ ಮತ್ತು ನಿಜ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇಂದು ಸಕ್ಕರೆಯನ್ನು ಬಜಾರಿನಲ್ಲಿ ಕೊಳ್ಳುವಾಗ ರಶೀತಿ ಕೇಳಿದರೆ ಕೆ.ಜಿ.ಗೆ 3-50 ಹೇಳುತ್ತಾರೆ, ರಶೀತಿ ಬೇಡ ಎಂದರೆ 3-45ಕ್ಕೆ ಕೊಡುತ್ತಾರೆ. ಅಂದರೆ

ಬರತಕ್ಕಂಥ ಶೇಕಡಾ 70 ಪರ್ಸೆಂಟ್ ಕೋಟಾದಲ್ಲಿ ಅರ್ಧದಷ್ಟು ಬ್ಲಾಕ್‌ಮಾರ್ಕೆಟ್‌ಗೆ ಹೋಗುತ್ತಿದೆ ಎಂದು ಅರ್ಥವಾಗುತ್ತದೆ. ಇಂದು ಬೆಂಗಳೂರಿನಲ್ಲಿ ಕೊಟ್ಟಿರತಕ್ಕಂಥ ಕಾರ್ಡುಗಳ ಪೈಕಿ ಅರ್ಧದಷ್ಟು ಬೋಗಸ್ ಕಾರ್ಡುಗಳಿವೆ. ಮತ್ತು ಇವು ಪ್ಲೆಡ್ಜ್‌ಬಲ್ ಆರ್ಟಿಕಲ್ ಆಗಿವೆ. ಕುಡಿಯುವವರು ಮತ್ತು ಗುಡಿಸಲುವಾಸಿಗಳು ಈ ಕಾರ್ಡ್‌ಗಳನ್ನು ಮಾರ್ವಾಡಿ ಅಂಗಡಿಗಳಲ್ಲಿ ಪ್ಲೆಡ್ಜ್ ಮಾಡಿ ಸಾಲ ಪಡೆಯುತ್ತಿದ್ದಾರೆ. ಇಂಥಾದ್ದನ್ನು ತನಿಖೆ ಮಾಡಿ ಸರ್ಕಾರದವರು ವಶಪಡಿಸಿಕೊಳ್ಳಬೇಕು. ಇಂದು ಸೀಮೆಣ್ಣೆ ಸಿಗುವುದೇ ಕಷ್ಟವಾಗಿದೆ. ಸೀಮೆಣ್ಣೆ ಜಾಸ್ತಿ ಬಂದಾಗ ಅದನ್ನು ಸ್ಟಾಕ್ ಮಾಡಿ ಇಟ್ಟುಕೊಂಡರೆ, ಅಭಾವ ಬಂದ ಕಾಲದಲ್ಲಿ ವಿತರಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ಕಾರಣದಿಂದ ಬಫರ್ ಸ್ಟಾಕ್ ಇಟ್ಟುಕೊಳ್ಳುವುದಕ್ಕೆ ಏರ್ಪಾಡು ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಗೋಧಿ, ರವೆ, ಮೈದಾ ಮೊದಲು ಬಜಾರಿನಲ್ಲಿ ಯಥೇಚ್ಛವಾಗಿ ಸಿಗುತ್ತಿತ್ತು. ಆದರೆ ಇಂದು ಇವುಗಳು ಬಜಾರಿನಲ್ಲಿ ಮಾಯವಾಗಿವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ಕೈಕೊಳ್ಳಬೇಕು.

ಇನ್ನು ಲೆವಿ ಪದ್ಧತಿಯನ್ನು ಕಿತ್ತುಹಾಕಿ ಸರ್ಕಾರಕ್ಕೆ ಬೇಕಾಗಿರುವಷ್ಟನ್ನು ಓಪನ್ ಮಾರ್ಕೆಟ್‌ನಲ್ಲಿ ಕೊಂಡುಕೊಂಡರೆ ಮಾನ್ಯ ತಿಮ್ಮಪ್ಪನವರು ಹೇಳಿದಂತೆ ರೈತರಿಗೆ ಅನುಕೂಲವಾಗುತ್ತದೆ. ಈಗಿನ ಲೆವಿ ಪದ್ಧತಿಯಿಂದ ರೈತರಿಗೂ ಅನುಕೂಲ ಇಲ್ಲ, ಬಳಕೆದಾರರಿಗೂ ಅನುಕೂಲವಿಲ್ಲ. ಮಧ್ಯದಲ್ಲಿರುವವರಿಗೆ ಲೂಟಿ ಮಾಡುವುದಕ್ಕೆ ಒಳ್ಳೆಯ ಅವಕಾಶವಾಗಿದೆ. ಈಗ ನೀವು ಲೆವಿಯಿಂದ ಪಡೆದ ಭತ್ತದ ಪೈಕಿ ಒಬ್ಬರಿಗೆ ತಿಂಗಳಿಗೆ ಒಂದು ಕೆ.ಜಿ. ಯಂತೆ ಅಕ್ಕಿಯನ್ನು 1–40ರ ರೇಟಿನಲ್ಲಿ ಕೊಡುತ್ತಿದ್ದೀರಿ. ಉಳಿದ 5 ಕೆ.ಜಿ. ಅಕ್ಕಿಯನ್ನು ಹೊರಗಡೆ ಕೆ.ಜಿ.ಗೆ 2ರೂಪಾಯಿಗಳ ಪ್ರಕಾರ ಕೊಳ್ಳಬೇಕಾಗಿದೆ. ಈ ಲೆಕ್ಕದ ಪ್ರಕಾರ ಬಳಕೆದಾರರಿಗೂ ಸಹ ಅನುಕೂಲವಾಗುತ್ತಿಲ್ಲ. ಇಂದು ತಾವು ಸ್ಟಾಕ್ ಮಾಡಿರುವ ಎಷ್ಟೋ ಗೋಡೌನ್‌ಗಳಲ್ಲಿ ಭತ್ತ ಹುಳಿತು ಹೋಗಿದೆ ಎಂದು ಕೇಳಿದ್ದೇನೆ. ಸ್ಟಾಕ್ ಮಾಡುವುದಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕಲ್ಲದೆ, ಭತ್ತವನ್ನು ಓಪನ್ ಮಾರ್ಕೆಟ್‌ನಲ್ಲಿಯೇ ಕೊಂಡರೆ ರೈತರಿಗೆ ಅನುಕೂಲವಾಗುತ್ತದೆ. ಭತ್ತ ಸಿಕ್ಕುವ ಕಾಲದಲ್ಲಿ ಕೊಂಡು ಸಾಕಷ್ಟು ಸ್ಟಾಕ್ ಇಟ್ಟುಕೊಂಡು ಕೊರತೆ ಬಂದ ಕಾಲದಲ್ಲಿ ಹಂಚುವ ಏರ್ಪಾಡನ್ನು ಮಾಡಬೇಕು.

ಇನ್ನು ಹೋಲ್‌ಸೇಲ್ ವ್ಯಾಪಾರವನ್ನು ಸರ್ಕಾರದವರು ಈಗಿರತಕ್ಕಂಥ ಆಫೀಸರನ್ನು ನಂಬಿಕೊಂಡು, ಸಡಿಲವಾದ ಆಡಳಿತವನ್ನು ಇಟ್ಟುಕೊಂಡು ವಹಿಸಿಕೊಂಡರೆ ಖಂಡಿತವಾಗಿಯೂ ಜನರಿಗೆ ತೊಂದರೆಯಾಗುತ್ತದೆಂದು ಹೇಳುತ್ತೇನೆ. ಮತ್ತು ಇದರಿಂದ ಜನರಿಗೆ ತೊಂದರೆಯಾಗಿ ಜನರು ಹಾಹಾಕಾರಪಟ್ಟು ನಿಮ್ಮನ್ನು ಶಪಿಸಿ ದಂಗೆ ಏಳುತ್ತಾರೆ. ಆದ್ದರಿಂದ ಇದರ ಬಗ್ಗೆ ಸರಿಯಾದ ಏರ್ಪಾಡು ಮಾಡಿಕೊಳ್ಳದೆ ಕೈಹಾಕಬೇಡಿ. ಆ ರೀತಿ ಏನಾದರು ಕೈ ಹಾಕಿದರೆ ಜನರನ್ನು ನರಕಕ್ಕೆ ತೆಗೆದುಕೊಂಡು ಹೋಗಿ ಹಾಕುತ್ತೀರಿ ಎಂದು ಹೇಳುತ್ತೇನೆ. ನಿಮಗೆ ಮಾಡುವುದಕ್ಕೆ ಯೋಗ್ಯತೆ ಇಲ್ಲದ ಮೇಲೆ ಅದಕ್ಕೆ ಕೈ ಹಾಕುವುದು ಸರಿಯಲ್ಲ. ನೀವು ಯಾವುದರಲ್ಲಿ ಜಯಶೀಲರಾಗಿದ್ದೀರಿ ಎಂದು ಕೇಳುತ್ತೇನೆ. ನಾನು ಹೋಲ್‌ಸೇಲ್ ಟ್ರೇಡ್‌ಗೆ ವಿರೋಧಿಯಲ್ಲ. ಆದರೆ ನಿಮಗೆ ಮಾಡತಕ್ಕಂಥ ಅರ್ಹತೆ ಇಲ್ಲ. ಏಕೆಂದರೆ ನಿಮ್ಮ ಸಿಬ್ಬಂದಿ ಮೊದಲಿನಿಂದಲೂ ಕರಪ್ಟ್ ಆಗಿದ್ದಾರೆ. ಇಂತಹವರನ್ನು ನಂಬಿಕೊಂಡು ಮಾಡುವುದಕ್ಕೆ ಹೋದರೆ ಅದು ಯಶಸ್ವಿಯಾಗುವುದಿಲ್ಲ. ಇದಕ್ಕೆ ಉದಾಹರಣೆ ಎಂದರೆ, ಇಂದು ಸಿಮೆಂಟನ್ನು ಕಂಟ್ರೋಲ್ ಮಾಡಿದ್ದೀರಿ. ಪರ್ಮಿಟ್ ಬೇಕಾದವರು ಇಷ್ಟಿಷ್ಟು ದುಡ್ಡು ಕೊಡಬೇಕೆಂದು ಈಗಾಗಲೇ ನಿಗದಿಯಾಗಿಬಿಟ್ಟಿದೆ. ಇಂದು ಪರ್ಮಿಟ್ ಕೊಡುವ ಇನ್ಸ್‌ಪೆಕ್ಟರ್ ಮನೆ ಮುಂದೆ ಜನರು ಕ್ಯೂ ನಿಂತಿರುತ್ತಾರೆ. ಪರ್ಮಿಟ್ ಬೇಕಾದವರು ಒಂದು ಮೂಟೆಗೆ ಒಂದು ರೂಪಾಯಿನಂತೆ ಕೊಡಬೇಕಾಗಿದೆ. ಈ ರೀತಿ ಲಂಚದ ಅಧಿಕಾರಿಗಳು ಇರುವುದರಿಂದ ಹೋಲ್‌ಸೇಲ್ ಟ್ರೇಡ್ ಯಶಸ್ವಿಯಾಗುವುದಿಲ್ಲ ಎಂದು ಹೇಳುತ್ತೇನೆ.

ಮೊದಲು ಸಮರ್ಪಕವಾದಂಥ ಶೇಖರಣೆ ಮಾಡಿಕೊಂಡು, ಸರಿಯಾದಂಥ ಸಿಬ್ಬಂದಿ ಇಟ್ಟು ಕೊಂಡು ಇದನ್ನು ವಹಿಸಿಕೊಳ್ಳಬೇಕೇ ಹೊರತು ಏಕಾಏಕಿ ವಹಿಸಿಕೊಂಡರೆ ಅದರಿಂದ ಪೆಟ್ಟು ತಿನ್ನಬೇಕಾಗುತ್ತದೆ ಮತ್ತು ಕಷ್ಟ ಬರುತ್ತದೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಿದ್ದೇನೆ. ನಾನು ಹೋಲ್‌ಸೇಲ್ ಟ್ರೇಡ್‌ಗೆ ವಿರೋಧಿಯಲ್ಲ, ಆದರೆ ಸರಿಯಾದಂಥ ಸಿದ್ಧತೆ ಮಾಡಿಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ನಾಗಾರ್ಜುನಸಾಗರ ಡ್ಯಾಮನ್ನು ಕಟ್ಟುವಾಗ ನಾನು ಸಹ ಹೋಗಿದ್ದೆ. ಅಲ್ಲಿ 2-3 ಸರದಿ ಮಾಡಿಕೊಂಡು 24 ಗಂಟೆಗಳ ಕಾಲವೂ ಕೆಲಸ ಮಾಡಿದ್ದರಿಂದ ಕೆಲಸ ಬೇಗ ಮುಗಿಸಿದರು. ಆದರೆ ನಮ್ಮಲ್ಲಿ ತಡವಾಗುತ್ತಿರುವುದರಿಂದ ಕಾಸ್ಟ್ ಆಫ್ ಕನ್‌ಸ್ಟ್ರಕ್ಷನ್ ಜಾಸ್ತಿಯಾಗುತ್ತಿರುವುದೇ ಅಲ್ಲದೆ, ಅದರ ಅನುಕೂಲ ಸಿಗುವುದು ಸಹ ನಿಧಾನವಾಗುತ್ತಿದೆ. ಈ ಕಾರಣದಿಂದ ಸಾಲ ಎತ್ತಿಯಾದರೂ ಸಹ ಎಲ್ಲ ಪ್ರಾಜೆಕ್ಟ್‌ಗಳ ಕೆಲಸವನ್ನು ಬೇಗ ಮುಗಿಸುವುದಕ್ಕೆ ಏರ್ಪಾಡು ಮಾಡಿದರೆ ಖರ್ಚುಕಡಿಮೆಯಾಗುತ್ತದೆ ಮತ್ತು ಅನುಕೂಲವೂ ಸಹ ಜಾಗ್ರತೆ ಸಿಗುತ್ತದೆ. ಮುಖ್ಯವಾಗಿ ಹೋಲ್‌ಸೇಲ್ ಟ್ರೇಡ್ ಬಗ್ಗೆ ಪರಿಣತರುಗಳು ಕುಳಿತು ಯೋಚನೆ ಮಾಡಿ ಅದು ಯಶಸ್ವಿಯಾಗುವ ರೀತಿಯಲ್ಲಿ ಮಾಡಬೇಕು. ಅವಸರದಲ್ಲಿ ಮಾಡುವುದಕ್ಕೆ ಹೋಗಬೇಡಿ. ತೆಲುಗಿನಲ್ಲಿ ಐವಾರ್ ಚೇಸ್ತಿ ಕೋತಿ ಪಿಲ್ಲಾಯ ಎಂಬ ಗಾದೆ ಇದೆ; ಆ ರೀತಿ ಆಗುವುದಕ್ಕೆ ಅವಕಾಶ ಕೊಡಬೇಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಇ. ರಾಮಯ್ಯ (ಶಿರಗುಪ್ಪ) :—ಮಾನ್ಯ ಅಧ್ಯಕ್ಷಿಣಿಯರೇ, ಈ ದಿನ ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಇವೊತ್ತು ಮೂರು ಡಿಮ್ಯಾಂಡ್‌ಗಳು ಏನಿವೆ ಅವು ಮೂರು ಸಹ ಬಹಳ ಮುಖ್ಯವಾದ ಡಿಮ್ಯಾಂಡ್‌ಗಳಾಗಿವೆ. ಅದರಲ್ಲಿಯೂ ಭಾರಿ ನೀರಾವರಿ ಯೋಜನೆ ಅತ್ಯಂತ ಮಹತ್ವದ್ದಾಗಿದೆ. ತುಂಗಭದ್ರಾ ಪ್ರಾಜೆಕ್ಟ್ ಬಗ್ಗೆ ಹೇಳಬೇಕೆಂದರೆ ಇದು 1947 ರಲ್ಲಿ ಮುಗಿದರೂ ಸಹ ಇವೊತ್ತಿಗೂ ಅಲ್ಲಿಯ ಎಲ್ಲ ಭೂಮಿಗಳು ಡೆವಲಪ್ ಆಗಿಲ್ಲ ಎನ್ನುವ ಮಾತನ್ನು ವಿಷಾದದಿಂದ ಹೇಳಬೇಕಾಗಿದೆ. ರೈಟ್‌ಬ್ಯಾಂಕ್ ಚಾನಲ್‌ನಿಂದ 92 ಸಾವಿರ ಎಕರೆಗೆ ಆಯಕಟ್ಟು ಬರುತ್ತದೆ. ಈ ಜಮೀನುಗಳನ್ನು ಮೂರು ಭಾಗಗಳಾಗಿ ವಿಂಗಡಿಸಿ ಕೆಲವು ಭಾಗಗಳಿಗೆ ವರ್ಷದಲ್ಲಿ 11 ತಿಂಗಳು ನೀರು ಕೊಟ್ಟರೆ, ಮತ್ತೆ ಕೆಲವು ಭಾಗಗಳಿಗೆ 6 ತಿಂಗಳು ನೀರು ಕೊಡುತ್ತಾರೆ, ಮತ್ತೆ ಕೆಲವು ಭಾಗಗಳಿಗೆ ನಾಲ್ಕೂವರೆ ತಿಂಗಳು ನೀರು ಕೊಡುತ್ತಾರೆ. 11 ತಿಂಗಳು ಮತ್ತು 6 ತಿಂಗಳು ನೀರು ಬಿಡುವ ಪ್ರದೇಶಗಳು ಅಭಿವೃದ್ಧಿಯಾಗಿವೆ. ಆದರೆ ನಾಲ್ಕೂವರೆ ತಿಂಗಳು ನೀರನ್ನು ಬಿಡುವ ಜಾಗಗಳು ಕಳೆದ 20 ವರ್ಷಗಳಿಂದ ಇನ್ನೂ ಅಭಿವೃದ್ಧಿಯಾಗಿಲ್ಲ. ಇದು ನಿಜಕ್ಕೂ ವಿಷಾದನೀಯ ಸಂಗತಿ. ಇದರ ಕಡೆಗೆ ಸರ್ಕಾರದವರು ಗಮನ ಕೊಟ್ಟಿಲ್ಲ. ಕೋಟಿಗಟ್ಟಲೆ ಹಣವನ್ನು ಪ್ರಾಜೆಕ್ಟ್ ಕಟ್ಟಲು ಖರ್ಚು ಮಾಡಿ ಈ ಭಾಗಗಳು ಏತಕ್ಕಾಗಿ ಅಭಿವೃದ್ಧಿಯಾಗಿಲ್ಲ ಮತ್ತು ಇದಕ್ಕೆ ನ್ಯೂನತೆ ಏನಿದೆ ಎಂಬುದನ್ನು ಸರ್ಕಾರದವರು ಇದುವರೆಗೆ ಕಂಡುಹಿಡಿದಿಲ್ಲ. ಮೂರು ನಾಲ್ಕು ವರ್ಷಗಳ ಕೆಳಗೆ ಸರ್ಕಾರದವರು ಇದರ ಬಗ್ಗೆ ಸ್ವಲ್ಪ ಬದಲಾವಣೆ ಮಾಡಿ ಜೂನ್ ತಿಂಗಳಿಂದ ಡಿಸೆಂಬರ್ ತಿಂಗಳವರೆಗೆ ಒಂದು ಭಾಗ ವೆಟ್ ಎಂದು, ಜನವರಿಯಿಂದ ಮೇ ತಿಂಗಳವರೆಗೆ ಇನ್ನೊಂದು ಭಾಗ ಡ್ರೈ ಕಂ ವೆಟ್ ಎಂದು ವಿಂಗಡಣೆ ಮಾಡಿದರು ಮತ್ತು 160 ಎಕರೆಗಳಿಗೆ ಒಂದು ಕ್ಯೂಸೆಕ್ಸ್ ವಾಟರನ್ನು ಬಿಡಬೇಕೆಂದು ನಿಗದಿ ಮಾಡಿದರು. ಈ ನೀರು 160 ಎಕರೆಗೆ ಸಾಕಾಗುತ್ತದೋ ಇಲ್ಲವೋ ಎಂಬುದನ್ನು ಯೋಚನೆ ಸಹ ಮಾಡದೆ ಫಿಕ್ಸ್ ಮಾಡಿಬಿಟ್ಟರು. ನಂತರ ಅಗ್ರಿಕಲ್ಚರಲ್ ರೀಸರ್ಚ್ ಸ್ಟೇಷನ್‌ನವರು ಈ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ಒಂದು ಕ್ಯೂಸೆಕ್ಸ್‌ನಷ್ಟು ವಾಟರ್ 90 ರಿಂದ 100 ಎಕರೆಗೆ ಮಾತ್ರ ಹರಿಯಬಹುದು ಎಂಬ ತೀರ್ಮಾನಕ್ಕೆ ಬಂದರು. ಆದರೆ ಸರ್ಕಾರದ

ಅಧಿಕಾರಿಗಳು ಇದಕ್ಕೆ ಪುರಸ್ಕಾರ ಕೊಟ್ಟಿಲ್ಲ. ಈ ತೀರ್ಮಾನವನ್ನು ಅಧಿಕಾರಿಗಳು ಅರಿತುಕೊಂಡರೆ ಜಮೀನುಗಳ ಅಭಿವೃದ್ಧಿಯಾಗುತ್ತದೆ. ಆದರೆ ಅವರು ಗಮನ ಕೊಡದಿರುವುದರಿಂದ 20 ಸಾವಿರ ಎಕರೆಗಳಷ್ಟು ಭೂಮಿ ಇನ್ನೂ ಅಭಿವೃದ್ಧಿಯಾಗಿಲ್ಲ. ಮತ್ತು ಈ ಜಮೀನುಗಳಿಂದ ವಾಟರ್ ರೇಟ್ ಸಹ ಬಂದಿಲ್ಲ. ಇದನ್ನು ಯಾವ ರೀತಿ ಸರಿಪಡಿಸಬೇಕೆಂಬ ಬಗ್ಗೆ ಸರ್ಕಾರದವರು ಇನ್ನೂ ಗಮನ ಕೊಡದಿರುವುದಕ್ಕಾಗಿ ನಿಜವಾಗಿಯೂ ವಿಷಾದನೀಯವಾಗುತ್ತದೆ.

ಕೋಟಿಗಟ್ಟಲೇ ಹಣವನ್ನು ಖರ್ಚು ಮಾಡಿ ಡ್ಯಾಮ್ ಕಟ್ಟಿದ್ದಾರೆ. ಆ ಹಣ ಸರಿಯಾಗಿ ಸದುಪಯೋಗವಾಗುತ್ತಿದೆಯೆ ಹೇಗೆ ಎಂಬುದನ್ನು ಸಕಾರದವರು ಯೋಚನೆ ಮಾಡಿಲ್ಲ. ಈ ಕಡೆ ಸರ್ಕಾರದವರು ಗಮನ ಕೊಡಬೇಕು. ಅಲ್ಲಿ 20 ಸಾವಿರ ಎಕರೆ ನೀರಾವರಿ ಜಮೀನು ಏತಕ್ಕೆ ಡೆವಲಪ್ ಆಗಿಲ್ಲ ಎಂಬುದನ್ನು ಮನಗಂಡು ರೈತರ ಕಷ್ಟ ಏನೆಂಬುದನ್ನು ತಿಳಿದು ಅವರಿಗೆ ಅನುಕೂಲಮಾಡಿಕೊಟ್ಟು ಆ ಭೂಮಿ ಡೆವಲಪ್ ಆಗುವ ರೀತಿಯಲ್ಲಿ ಯೋಚನೆ ಮಾಡಬೇಕು. ತುಂಗಭದ್ರಾ ಯೋಜನೆಯ ಲೆಫ್ಟ್‌ಬ್ಯಾಂಕ್ ಕೆನಾಲ್‌ನಲ್ಲಿ ರಾಯಚೂರು ಡಿಸ್ಟ್ರಿಕ್ಟಿನಲ್ಲಿ 5 ಲಕ್ಷ ಎಕರೆ ನೀರಾವರಿ ಜಮೀನು ಡೆವಲಪ್ ಆಗಿಲ್ಲ. ಆದ್ದರಿಂದ ಅದಕ್ಕೆ ಒಂದು ಕಮಿಟಿಯನ್ನು ಮಾಡಿ ಅದರಲ್ಲಿ ಏನು ನ್ಯೂನತೆಗಳಿವೆ, ಅಲ್ಲಿ ರೈತರಿಗೆ ಇರತಕ್ಕ ಕಷ್ಟ ಏನು ಎಂಬುದನ್ನು ಅರಿತು ಆ ಜಮೀನನ್ನು ಡೆವಲಪ್ ಮಾಡುವ ರೀತಿಯಲ್ಲಿ ಏರ್ಪಾಡು ಮಾಡಬೇಕು. ಹಣ ಸುಮ್ಮನೆ ಪೋಲಾಗದಂತೆ ಮಾಡಬೇಕು. ಲೆಫ್ಟ್ ಬ್ಯಾಂಕ್ ಕೆನಾಲ್ 17 ಸಲ ಒಡೆದು ಅಲ್ಲಿಯ ರೈತರ ಕಷ್ಟ ಎಷ್ಟೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಅಲ್ಲಿ ಕೋಟಿಗಟ್ಟಲೆ ಹಣ ಲಾಸಾಗಿದೆ. ಪರಿಸ್ಥಿತಿ ಬಹಳ ಗಂಭೀರವಾಗಿದೆ. ಅಲ್ಲಿ ವಾಟರ್ ರೇಟನ್ನು ಹಾಕಬಾರದು ಎಂದು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಆ ಕೆನಾಲ್ ಪ್ರತಿವರ್ಷ ಒಡೆದುಹೋಗುತ್ತಿದೆ ಅದು ಆ ರೀತಿ ಏತಕ್ಕೆ ಒಡೆದು ಹೋಗುತ್ತಿದೆ ತಿಳಿದು ಅದನ್ನು ಸರಿಪಡಿಸಿ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ವಿಜಯನಗರದ ಅಣೆಕಟ್ಟು ಶಿರಗುಪ್ಪದ ಹತ್ತಿರ ಇದೆ. ಈ ಅಣೆಕಟ್ಟನ್ನು 400 ವರ್ಷಗಳ ಕೆಳಗೆ ಅಳರಸರ ಕಾಲದಲ್ಲಿ ಕಟ್ಟಿದೆ. ಈ ಅಣೆಕಟ್ಟಿನ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ನಾನು ತಂದಿದ್ದೇನೆ. ಬಹಳ ಹಿಂದೆ ಕಟ್ಟಿದಂತಹ ಈ ಅಣೆಕಟ್ಟಿನ ರಿಪೇರಿ ಆಗಿಲ್ಲ. ಅದರಲ್ಲಿ ನೀರು ಲೀಕ್‌ಔಟ್ ಆಗುತ್ತಿದೆ. ಇದರಿಂದ ಅಲ್ಲಿಯ ರೈತರಿಗೆ ಬಹಳ ಕಷ್ಟವಾಗಿದೆ. ಅವರಿಗೆ ನೀರು ಸಿಕ್ಕುವುದಿಲ್ಲ. ಇದನ್ನು ನಾವು ಪದೇ ಪದೇ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಮಾನ್ಯ ಭಾರಿ ನೀರಾವರಿ ರಾಜ್ಯ ಸಚಿವರಾದ ಶ್ರೀ ಮಾನ್ ನಂಜೇಗೌಡರು ಪರ್ಸನಲ್ ಆಗಿ ಅಲ್ಲಿಗೆ ಬಂದು ನೋಡಿ ಅದನ್ನು ರೀಕನ್‌ಸ್ಟ್ರಕ್ಷನ್ ಮಾಡುವ ಪರಿಸ್ಥಿತಿ ಬಂದರೆ ಅದನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಇವೊತ್ತಿನವರೆಗೂ ಆ ಕೆಲಸ ಮಾಡಿಸಿಲ್ಲ. ಸರ್ಕಾರದವರು ನೇಮಕ ಮಾಡಿರುವ ಟೆಕ್ನಿಕಲ್ ಕಮಿಟಿಯವರು ಅಲ್ಲಿಗೆ ಬಂದು ಅದನ್ನು ನೋಡಿ ಆ ಅಣೆಕಟ್ಟಿನಲ್ಲಿ ನೀರು ಲೀಕ್‌ಔಟ್ ಆಗುವುದನ್ನು ರಿಪೇರಿ ಮಾಡುವುದಕ್ಕಾಗುವುದಿಲ್ಲ. ಅದನ್ನು ರೀಕನ್‌ಸ್ಟ್ರಕ್ಷನ್ ಮಾಡಬೇಕು ಎಂದು ಟೆಕ್ನಿಕಲ್ ಒಪೀನಿಯನ್ ಕೊಟ್ಟಿದ್ದಾರೆ. ಅದಕ್ಕೆ 80 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಕೂಡ ಆಗಿತ್ತು. ಅದು ಸರ್ಕಾರದ ಮುಂದೆ ಇದೆ. ಅದನ್ನು ಅದಷ್ಟು ಜಾಗ್ರತೆ ರೀಕನ್‌ಸ್ಟ್ರಕ್ಷನ್ ಮಾಡಿ ರೂಡಿ. ಇಲ್ಲದಿದ್ದರೆ ರಿಪೇರಿ ಮಾಡಿಕೊಡಿ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯ. 1960 ನೇ ಇಸವಿಯಲ್ಲಿ ತುಂಗಭದ್ರಾ ಆಯಕಟ್ಟಿನ ರೋಡಿಗೆ 58 ಲಕ್ಷ 11 ಸಾವಿರ ರೂಪಾಯಿಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಎಂದರೆ ಸುಮಾರು 15 ವರ್ಷಗಳಾಯಿತು. ಆ ಕೆಲಸ ಆಗಿಲ್ಲ. ಆ ಆಯಕಟ್ಟು

ರೋಡು ಯಾವ ಮಟ್ಟದಲ್ಲಿದೆಯೋ ಅದೇ ಮಟ್ಟದಲ್ಲಿದೆ. ಇದನ್ನು ನೋಡಿದರೆ ತುಂಬಾ ವ್ಯಸನವಾಗುತ್ತದೆ. ಈ ಕಡೆ ಸರ್ಕಾರದವರು ಗಮನ ಕೊಟ್ಟು ಆ ಆಯುಕಟ್ಟು ರಸ್ತೆಯನ್ನು ಜಾಗ್ರತೆ ಮಾಡಿಕೊಟ್ಟು ರೈತರಿಗೆ ಉಪಯೋಗವಾಗುವಂತೆ ಮಾಡಿಕೊಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಈಗಾಗಲೇ 75 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಆಯುಕಟ್ಟು ರಸ್ತೆಯನ್ನು ನಿರ್ಮಾಣ ಮಾಡಿದ್ದಾರೆ. ಅದನ್ನು ಪೂರ್ತಿ ಮಾಡದಿದ್ದರೆ ಮತ್ತೆ ಅದಕ್ಕೆ ಸುಮಾರು ಒಂದು ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾದ ಪ್ರಸಂಗ ಬರುತ್ತದೆ. ಆದ್ದರಿಂದ ಹಣಕಾಸಿನ ದೃಷ್ಟಿಯಿಂದ ಹೇಳುವುದಾದರೂ ಕೂಡ ಆಯುಕಟ್ಟು ರೋಡಿನ ಮೇಲೆ 75 ಲಕ್ಷ ರೂಪಾಯಿಗಳನ್ನು ಏನು ಸರ್ಕಾರದವರು ಖರ್ಚು ಮಾಡಿದ್ದಾರೆ ಅದು ರೈತರಿಗೆ ಉಪಯೋಗವಾಬೇಕು. ಆದ್ದರಿಂದ ಅದನ್ನು ಆದಷ್ಟು ಜಾಗ್ರತೆ ಕಂಪ್ಲೀಟ್ ಮಾಡಿಕೊಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮುಖ್ಯವಾಗಿ ತುಂಗಭದ್ರಾ ಪ್ರಾಜೆಕ್ಟ್ ಕೆಳಗಡೆ ಡ್ರೈ ಕಂ ವೆಟ್ ಏನಿದೆ ಅದು ಡೆವಲಪ್ ಆಗಿಲ್ಲ. ಆದರೆ ಅದಕ್ಕೆ ಸರ್ಕಾರದವರು ವಾಟರ್ ರೇಟ್ ಚಾರ್ಜ್ ಮಾಡಿದ್ದಾರೆ. ಅದಕ್ಕೋಸ್ಕರ ವಾಟರ್ ರೇಟ್ ಲೆವಿ ಮಾಡುವಾಗ ನೀರು ಹರಿಯದಿದ್ದರೆ ಅಂಥಾದ್ದಕ್ಕೆ ವಾಟರ್ ರೇಟನ್ನು ದಯಮಾಡಿ ಮನ್ನ ಮಾಡಬೇಕು. ಅದಕ್ಕೆ ಒಂದು ಕಮಿಟಿಯನ್ನು ಮಾಡಿ ಅವರು ಅದನ್ನು ಸರಿಯಾಗಿ ನೋಡಿಕೊಳ್ಳುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri BAPU RAO (Aurad).—

(Spoke in Hindi)

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :—

ಸನ್ಮಾನ್ಯ ಅಧ್ಯಕ್ಷರೇ, ನಮ್ಮ ನೀರಾವರಿ ಮಂತ್ರಿಯವರು ಮಂಡಿಸಿರತಕ್ಕಂತಹ ಬೇಡಿಕೆಯನ್ನು ಸಂಪೂರ್ಣವಾಗಿ ವಿರೋಧಿಸುತ್ತಾ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗ ನಾನು ನೇರವಾಗಿ ಕ್ಷಾಮಕ್ಕೆ ಸಂಬಂಧಪಟ್ಟ ವಿಷಯದ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಅದು ಅಪ್ಪರ್ ತುಂಗಾ ಪ್ರೊಜೆಕ್ಟಿಗೆ ಸಂಬಂಧಪಟ್ಟ ವಿಷಯ. ಹಿಂದಿನ ಸರ್ಕಾರದವರು ಸಹ ಅಲ್ಲಿ ಅಪ್ಪರ್ ತುಂಗಾ ಪ್ರೊಜೆಕ್ಟನ್ನು ಮಾಡುತ್ತೇವೆಂದು ಭಯವನ್ನು ಉತ್ಪಾದನೆ ಮಾಡಿದರು. ಶರಾವತಿ ಯೋಜನೆ ಮಾಡಿ, ಮತ್ತು ಭದ್ರಾ ಪ್ರೊಜೆಕ್ಟ್ ಮಾಡಿ ನಮ್ಮ ಮಲೆನಾಡನ್ನು ಮುಳುಗಿಸಿ ಬಿಟ್ಟಿದ್ದಾರೆ. ಈಗ ಅಪ್ಪರ್ ತುಂಗಾ ಪ್ರೊಜೆಕ್ಟನ್ನು ತೀರ್ಥಹಳ್ಳಿಯಲ್ಲಿ ಮಾಡಿದರೆ ಅಲ್ಲಿಯ ಮೂರನೆಯ ಒಂದು ಭಾಗ ಮುಳುಗಿಹೋಗುತ್ತದೆ; ಜೊತೆಗೆ ಶೃಂಗೇರಿಯು ಸಹ ಮುಳುಗಿ ಹೋಗುತ್ತದೆ. ಆದ್ದರಿಂದ ಅಲ್ಲಿ ಮಾಡತಕ್ಕ ಅಪ್ಪರ್ ತುಂಗಾ ಪ್ರೊಜೆಕ್ಟನ್ನು ಕೈಬಿಡಬೇಕೆಂದು ಹೇಳುತ್ತೇನೆ ಮತ್ತು ಅದರ ಬದಲು ತುಂಗಾ ನದಿಗೆ ಸಣ್ಣ ಸಣ್ಣ ಪಿಕಪ್ಪುಗಳನ್ನುಮಾಡಿ ಅಲ್ಲಿರತಕ್ಕ ಜನರಿಗೆ ನೀರಾವರಿ ಅನುಕೂಲಗಳನ್ನು ಮಾಡಬೇಕೆಂದು ಹೇಳುತ್ತೇನೆ. ಹಾಗೆಯೇ ವರಾಹಿ ಪ್ರೊಜೆಕ್ಟನ್ನು ನಮ್ಮ ಕ್ಷೇತ್ರದಲ್ಲಿ ಕೈಗೊಳ್ಳುವುದಕ್ಕೆ ನಿರ್ಧಾರ ಮಾಡಿದ್ದಾರೆ. ಆದರೆ ಅಲ್ಲಿ ಏನು ನೀರು ಸಂಗ್ರಹ ಮಾಡುತ್ತಿದ್ದಾರೆ, ಅದನ್ನು ನೀರಾವರಿಗೆ, ಬೇಸಾಯಕ್ಕೆ ತಿರುಗಿಸುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ವಿಚಾರ ಮಾಡಬೇಕು. ಇನ್ನು ತುಂಗಾ ನಾಲೆಯಲ್ಲಿ ಏನು ನೀರು ಬರುತ್ತಿದೆ ಪ್ರಾರಂಭದಲ್ಲಿರುವ ರೈತರಿಗೆ ಕೊಟ್ಟುಬಿಡುವುದರಿಂದ ಕೊನೆಯಲ್ಲಿರುವ ರೈತರಿಗೆ ನೀರು ಸಿಗದೆ ತೊಂದರೆಯಾಗುತ್ತಿದೆ. ಈ ರೀತಿ ಪಕ್ಷಪಾತ ಮಾಡಿ ಒಂದು ಭಾಗದ ರೈತರಿಗೆ ನೀರು ಕೊಟ್ಟು ಇನ್ನೊಂದು ಭಾಗದ ರೈತರಿಗೆ ಸಿಗದ ಹಾಗೆ ಮಾಡುವುದು ಸರಿಯಾದ ನೀತಿಯಲ್ಲ.

ಆದ್ದರಿಂದ ಆ ಭಾಗದ ರೈತರಿಗೂ ನೀರು ದೊರೆಯುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದನ್ನು ಈಗಾಗಲೇ ಲೋಕೋಪಯೋಗಿ ಸಚಿವರು ತಡೆಹಿಡಿದಿದ್ದಾರೆಂದು ಕಾಣುತ್ತದೆ. ಹಾಗೆ ಮಾಡಿದ್ದರೆ ಬಹಳ ಒಳ್ಳೆಯದು ಮತ್ತು ಅದಕ್ಕೆ ಅವರಿಗೆ ನನ್ನ ವಂದನೆಯನ್ನು ಸಲ್ಲಿಸಿ, ಒಟ್ಟಿನಲ್ಲಿ ನಿಜವಾದ ಮಣ್ಣಿನ ಮಕ್ಕಳು ಯಾರಿದ್ದಾರೆ ಅವರಿಗೆ ನೀರು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಅಲ್ಲದೆ ಬೆಂಗಳೂರು ಪೇಟೆ ಮತ್ತು ಶಿವಮೊಗ್ಗ ಪೇಟೆಯಲ್ಲಿ ಇದ್ದುಕೊಂಡು ಯಾರಿಂದಲೋ ಕೆಲಸ ಮಾಡಿಸಿ ಬೊಜ್ಜು ಬೆಳೆಸುವವರಿಗೆ ಕೊಡದೆ ಅಲ್ಲೇ ಇದ್ದುಕೊಂಡು ಕೆಲಸಮಾಡುವಂತಹ ಅಲ್ಲಿನ ಮಣ್ಣಿನ ಮಕ್ಕಳು ಯಾರಿದ್ದಾರೆ ಅವರಿಗೆ ಉತ್ತೇಜನವನ್ನು ಕೊಡಬೇಕು.

ಇನ್ನು ಅಂಜನಾಪುರದ ಡ್ಯಾಮನ್ನು ಏರಿಸಬೇಕೆಂದು ಹೇಳುತ್ತಿದ್ದಾರೆ. ಅದರಿಂದ ಸುಮಾರು 12 ಸಾವಿರ ಎಕರೆ ನೀರಾವರಿಯಾಗುತ್ತದೆಂದು ಅಭಿಪ್ರಾಯ ಇದೆ. ಇನ್ನು ಬೆಂಗಳೂರಿನ ಬಗ್ಗೆ ಹೇಳುವುದಾದರೆ, ಅಲ್ಲಿ ಕುಡಿಯುವುದಕ್ಕೆ ನೀರೆ ಇಲ್ಲ. ಆದರೆ ಕೆಲವು ಕಡೆ ನೀರು ಹಾಳಾಗಿ ಹೋಗುತ್ತಿದೆ. ತಾವು ಯಾರನ್ನು ಇಂಜನಿಯರು ಇನ್ ಚೀಫ್ ಎಂದು ಇಟ್ಟಿದ್ದೀರಿ ಅವರ ಆಫೀಸು ಹೈಕೋರ್ಟಿನ ಹತ್ತಿರ ಇದೆ. ಅಲ್ಲಿ ಹಲವು ವರ್ಷಗಳಿಂದ ಹಗಲು ರಾತ್ರಿ ನೀರು ಕೊಳಾಯಿಯಿಂದ ಸೋರಿ ಹೋಗಿ ವೇಸ್ಟ್ ಆಗುತ್ತಾ ಇದೆ. ಆದರೂ ಅದನ್ನು ಸರಿಪಡಿಸಲಿಲ್ಲ. ಅದನ್ನು ತಾವು ಈಗ ನೋಡಿ ಬನ್ನಿ. ತಮ್ಮ ಅಧಿಕಾರಿಗಳ ದಕ್ಷತೆ ಎಲ್ಲಿಯವರೆಗೆ ಇದೆ. ಆದರೆ ಜನರಿಗೆ ಮಾತ್ರ ನೀರು ಇಲ್ಲ. ನೀರು ಅಪವ್ಯಯವಾಗುವುದನ್ನು ನಿಲ್ಲಿಸಬೇಕು.

ಕಡೆಯದಾಗಿ ಫುಡ್ ಪ್ರಾಬ್ಲಂ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಆಗುಂಬೆಯಲ್ಲಿ ಮೊನ್ನೆ ಒಬ್ಬ ಸ್ನೇಹಿತರು ಲಾರಿಯಲ್ಲಿ ಬತ್ತ ಸಾಗಿಸುತ್ತಿದ್ದರು. ಪೋಲೀಸಿನವರು ಅವರನ್ನು ಹಿಡಿದು, ಹೊಡೆದು ತಮ್ಮ ಕಸ್ಟಡಿಗೆ ಲಾರಿಯನ್ನು ತೆಗೆದುಕೊಂಡರು. ಯಾರು ಕಳ್ಳಸಾಗಾಣಿಕೆಯನ್ನು ಮಾಡುತ್ತಾರೋ ಅವರನ್ನು ಹಿಡಿಯುತ್ತಾ ಇಲ್ಲ. ಬಹುಶಃ ಇದರ ಬಗ್ಗೆ ಮಾನ್ಯ ಸಚಿವರು ಸರಿಯಾದ ಆದೇಶವನ್ನು ಪೋಲೀಸಿನವರಿಗೆ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ಪೋಲೀಸರ ಕಸ್ಟಡಿಯೊಳಗೆ ಇರತಕ್ಕಂಥ ಲಾರಿಯನ್ನು ವಾಪಸು ತೆಗೆದುಕೊಂಡು ಬಂದಿದ್ದಾರೆ. ಇಡೀ ತಾಲ್ಲೂಕಿನಲ್ಲಿ ನಿಜವಾಗಿ ಸ್ಮಗಲರ್ಸ್ ಯಾರು ಇದ್ದಾರೋ ಅವರನ್ನು ರಕ್ಷಣೆ ಮಾಡುವುದನ್ನು ಕೈಬಿಡಬೇಕು.

ಇನ್ನು ಸೀಮೆಯೆಣ್ಣೆ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇವತ್ತು ಹಳ್ಳಿಗಳಲ್ಲಿ ಇರತಕ್ಕವರಿಗೆ ಸೀಮೆಯೆಣ್ಣೆ ಬೇಡಿಕೆ ಬಹಳವಾಗಿದೆ. ಅದು ಬಡವರಿಗೆ ಬಹಳ ಅವಶ್ಯಕ. ಅವರ ಬೇಡಿಕೆಯನ್ನು ಮೊದಲು ಈಡೇರಿಸಬೇಕು. ಇಲ್ಲದೇ ಹೋದರೆ ನಾಳೆ ಎಲ್ಲೆಲ್ಲಿ ಸೀಮೆಯೆಣ್ಣೆ ಇದೆ, ಇವತ್ತು ಪಟ್ಟಣಗಳಲ್ಲಿ ಯಾರ್ಯಾರಿಗೆ ಕೊಟ್ಟಿದ್ದಾರೋ ಅವರ ಹೆಸರನ್ನು ಹಳ್ಳಿಗಳಲ್ಲೆಲ್ಲಾ ಪ್ರಕಟಮಾಡುತ್ತಾರೆ. ಅದಕ್ಕೋಸ್ಕರ ಸೀಮೆಯೆಣ್ಣೆಯ ಲೈಸೆನ್ಸನ್ನು ಯಾರಿಗೆ ಕೊಟ್ಟಿದ್ದಾರೆಂಬುದನ್ನು ಹೇಳಬೇಕು. ಇಲ್ಲದಿದ್ದರೆ ಹಳ್ಳಿಯ ಜನರಿಗೆ ಯಾರಿಂದ ಸೀಮೆಯೆಣ್ಣೆಯನ್ನು ತೆಗೆದುಕೊಳ್ಳಬೇಕೆಂಬುದು ಗೊತ್ತಾಗುವುದಿಲ್ಲ. ಹಳ್ಳಿಯ ಜನರಿಗೆ ಅದರ ಬಗ್ಗೆ ಮಾತನಾಡುವುದಕ್ಕೆ ಸಂಕಟವಾಗಿ ಅವರು ಹೇಳುವುದಿಲ್ಲ. ಆದರೆ ಪ್ರತಿಭಟನೆ ಮಾಡುವುದಕ್ಕೆ ಅವರು ಮೂಕರು. ಅವರ ಮೇಲೆ ದಬ್ಬಾಳಿಕೆ ನಡೆಸಬೇಕೆಂದು ಯಾರೂ ತಿಳಿದುಕೊಳ್ಳಬಾರದು. ಮೊದಲು ಸೀಮೆಯೆಣ್ಣೆ ಮತ್ತು ಅಕ್ಕಿಯನ್ನು ನಮ್ಮ ಭಾಗದಲ್ಲಿ ಎಲ್ಲರಿಗೂ ಹಂಚಿ. ಅನಂತರ ಇದೇ ಪದ್ಧತಿಯನ್ನು ಅನುಸರಿಸಿ ಸಿಮೆಂಟ್ ಸಹ ಹಂಚಬೇಕೆಂದು ನಾನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಕೃಷ್ಣರಾವ್ (ಗೌರಿಬಿದನೂರು) :—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ನೀರಾವರಿ ಮಂತ್ರಿಗಳು ಮತ್ತು ಆಹಾರ ಮಂತ್ರಿಗಳು ಇಟ್ಟಿರತಕ್ಕ ಬೇಡಿಕೆಯನ್ನು ನಾನು

ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವಾರು ಸಲಹೆಗಳನ್ನು ಮಾಡಲು ಇಚ್ಛಿಸುತ್ತೇನೆ. ಇವತ್ತಿನ ದಿವಸ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನೇನೋ ಈ ದೇಶದಲ್ಲಿ ತೆಗೆದು ಕೊಂಡಿರತಕ್ಕದ್ದು ಬಹಳ ಮಟ್ಟಿಗೆ ಸಂತೋಷದಾಯಕವಾದಂಥ ವಿಚಾರ. ಕೋಟ್ಯಾಂತರ ರೂಪಾಯಿಗಳನ್ನು ನೀರಾವರಿ ಯೋಜನೆಗಳ ಮೇಲೆ ಖರ್ಚುಮಾಡಿ ಅದು ಸರಿಯಾಗಿ ವಿನಿಯೋಗವಾಗತಕ್ಕ ಸ್ಥಿತಿಯಲ್ಲಿ ಅತಿ ಜಾಗ್ರತೆಯಾಗಿ ತಾವು ತರಬೇಕಾದುದು ಬಹುಮಟ್ಟಿಗೆ ಆದ್ಯಕರ್ತವ್ಯವೆಂದು ನಾನು ಭಾವಿಸುತ್ತೇನೆ. ಇನ್ನು ನಮ್ಮ ಕೋಲಾರ ಜಿಲ್ಲೆಯ ವಿಚಾರ ವಾಗಿ ಹೇಳಬೇಕಾದರೆ, ಅಲ್ಲಿ ಬೇರೆ ನೀರಾವರಿ ಯೋಜನೆಗಳು ಯಾವುವೂ ಇಲ್ಲ. ಅಲ್ಲಿ ಇರತಕ್ಕ ಉತ್ತರ ಪಿನಾಕಿನಿ ಮತ್ತು ದೊಡ್ಡದೊಡ್ಡ ನದಿಗಳಿಂದ ಸಹಸ್ರಾರು ಎಕರೆಗಳಷ್ಟು ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಅವಕಾಶವಿದೆಯೆಂಬ ವಿಚಾರವನ್ನು ತಜ್ಞರು ತಿಳಿಸಿರುತ್ತಾರೆ. ಆದ್ದರಿಂದ ಈ ದಿವಸ ದಯಮಾಡಿ ಈ ಒಂದು ನದಿಯ ಮೂಲಕ ಅನೇಕ ನೀರಾವರಿ ಯೋಜನೆಗಳನ್ನು ಮಾಡಿ ವ್ಯವಸಾಯಕ್ಕೆ ಹೆಚ್ಚಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ. ಕೋಲಾರ ಜಿಲ್ಲೆಯಲ್ಲಿ ನನಗೆ ತಿಳಿದಿರುವ ಹಾಗೆ ಬಹುಮಟ್ಟಿಗೆ ನೀರಾವರಿ ಯೋಜನೆಗಳು ಬಹಳ ಕಡಿಮೆ ಇವೆ. ಮಳೆಯೂ ಕೂಡ ಸುಮಾರು 16 ಇಂಚುಗಳಿಂದ 25 ಇಂಚುಗಳವರೆಗೆ ಬಿದ್ದು ಅನೇಕ ಪ್ರದೇಶಗಳಲ್ಲಿ ಕ್ರಾನಿಕ್ ಡ್ರಾಪ್ಟ್ ಅಫೆಕ್ಟೆಡ್ ಏರಿಯಾ ಎಂಬುದಾಗಿ ಹೇಳಿದರೆ ತಪ್ಪಾಗಲಾರದು. ಪ್ರತಿವರ್ಷವೂ ನಮ್ಮ ಪರಿಸ್ಥಿತಿ ಏನಾಗಿದೆಯೆಂದರೆ ಒಂದು ವರ್ಷ ಮಳೆಬಂದರೆ 2 ನೇ ವರ್ಷ ಕ್ಷಾಮ ಸಾಧಾರಣವಾಗಿ ಕಾದುಕೊಂಡು ಇರುತ್ತದೆ. ಈ ಒಂದು ಕ್ಷಾಮಕ್ಕೆ ರೈತರು ಸಿಕ್ಕಿ ಬಹಳ ಮಟ್ಟಿಗೆ ನರಳುತ್ತಾರೆ. ಆದ್ದರಿಂದ ಕ್ರಾನಿಕ್ ಡ್ರಾಟ್ ಅಫೆಕ್ಟೆಡ್ ಏರಿಯಾದಲ್ಲಿ ಶಾಶ್ವತವಾದ ಪರಿಹಾರವನ್ನು ಹುಡುಕಬೇಕಾದುದು ನಮ್ಮ ಆದ್ಯಕರ್ತವ್ಯವೆಂದು ನಾನು ಭಾವಿಸುತ್ತೇನೆ. ಆದ್ದರಿಂದ ಇದಕ್ಕೆ ನನ್ನ ಸಲಹೆ ಏನೆಂದರೆ ಅಪ್ಪರ್ ಭದ್ರಾ ನೀರನ್ನು ಕೊರಟಗೆರೆ ಮೂಲಕ ಗೌರಿಬಿದನೂರು ಗುಡಿಬಂಡೆ ಮತ್ತು ಬಾಗೆಪಲ್ಲಿ ಪ್ರದೇಶಗಳಿಗೆ ತೆಗೆದುಕೊಂಡು ಬರಲು ಅವಕಾಶವಿದೆ. ಅದರ ಬಗ್ಗೆ ಸರ್ವೆ ಮಾಡುವುದಕ್ಕೂ ಅವಕಾಶವಿದೆ. ಆದ್ದರಿಂದ ಅಪ್ಪರ್ ಭದ್ರಾ ನೀರು ಬಹಳ ಮಟ್ಟಿಗೆ ಕಷ್ಟದಲ್ಲಿರುವವರಿಗೆ ಹಾಗೂ ಕ್ಷಾಮ ಪ್ರದೇಶವಾಗಿರತಕ್ಕ ಗೌರಿಬಿದನೂರು, ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಿಗೆ ದೊರೆಯಬೇಕು. ಹಾಗೂ ಕಾವೇರಿ ನದಿಗಳ ನೀರನ್ನು ಕೋಲಾರ ಜಿಲ್ಲೆ ಹಾಗೂ ಚಿಕ್ಕಬಳ್ಳಾಪುರದ ಇತರ ತಾಲ್ಲೂಕು ಗಳಿಗೂ ದೊರಕಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಮತ್ತೆ ಅತಿ ವಿನಯದಿಂದ ಬೇಡಿಕೊಳ್ಳುತ್ತೇನೆ. ಕೋಲಾರ ಜಿಲ್ಲೆಯಲ್ಲಿ ಬೇರೆ ನೀರಾವರಿ ಯೋಜನೆಗಳು ಬೀಳದೇ ಇರುವ ಜಾಗದಲ್ಲಿ ಪ್ರತಿಯೊಬ್ಬ ರೈತರಿಗೂ ಸುಮಾರು ಒಂದರಿಂದ ಎರಡು ಎಕರೆ ಇರತಕ್ಕ ರೈತರಿಗೆ ಅವರ ಜಮೀನಿನಲ್ಲಿ ಒಂದು ಬೋರವೆಲ್ ಹಾಕಿಸಿ ಆ ಮೂಲಕ ವ್ಯವಸಾಯ ಮಾಡುವುದಕ್ಕೆ ಶಾಶ್ವತವಾದ ಪರಿಹಾರವನ್ನು ಇವತ್ತಿನದಿವಸ ಸರ್ಕಾರದವರು ಮನಸ್ಸುಮಾಡಿ ಕಂಡುಹಿಡಿಯದೇ ಹೋದರೆ ಕೋಲಾರ ಜನತೆಗೆ ಒಂದು ಅಪರಾಧವಾದಂತಾಗುತ್ತದೆಂದು ನಾನು ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇವತ್ತಿನದಿವಸ ಬಹುಮುಖ್ಯವಾದಂಥ ಕಾರ್ಯಕ್ರಮವನ್ನು ಸಣ್ಣ ರೈತರಿಂದ ಹಿಡಿದು ದೊಡ್ಡ ರೈತರವರೆಗೆ ಕೇವಲ ಬೋರವೆಲ್ ಹಾಕಿಸುವುದರ ಮೂಲಕ ಸರ್ಕಾರದವರು ಸಹಾಯ ಮಾಡುತ್ತಿದ್ದಾರೆ. ಇದರಿಂದ ನಮಗೆ ಏನೂ ಮಾಡಿದಂತಾಗುವುದಿಲ್ಲ. ಇವತ್ತಿನದಿವಸ ಇದೇ ರೀತಿಯಲ್ಲಿ ಗುಲ್ಬರ್ಗಾ ಮತ್ತು ಇತರೇ ಜಿಲ್ಲೆಗಳಲ್ಲಿಯೂ ರೈತರ ಜಮೀನಿನಲ್ಲಿ ರಿಗ್ಸ್‌ಗಳನ್ನು ಹಾಕಿ ನೀರನ್ನು ಒದಗಿಸಿಕೊಡಬೇಕು. ಆ ಮೂಲಕ ಅವರಿಗೆ ಇರುವ ಕಷ್ಟಗಳು ಪರಿಹಾರವಾಗುತ್ತವೆ.

ಮಾನ್ಯ ಅಧ್ಯಕ್ಷರೇ, ಇವತ್ತಿನದಿವಸ ಆಹಾರಧಾನ್ಯಗಳ ಪಾಲಿಸಿ ಏನಾಗಿದೆ ಎಂದರೆ, ಕೇವಲ ಆಹಾರ ಪದಾರ್ಥಗಳು ಪಟ್ಟಣಗಳಿಗೆ ಮಾತ್ರ ಸೀಮಿತವಾಗಿವೆ. ಆದರೆ ಹಳ್ಳಿಗಳಲ್ಲಿರತಕ್ಕ

ರೈತರಿಗೆ ಆಹಾರದ ಅಭಾವವು ಖಂಡಿತವಾಗಿ ತಪ್ಪಿಲ್ಲ. ಈ ವರ್ಷದಲ್ಲಿ ನಾನು ತಮ್ಮ ಮುಂದೆ ಒಂದು ಮಾತನ್ನು ಹೇಳಬೇಕಾದರೆ ಬರೀ ಸಕ್ಕರೆ ಮಾತ್ರ ಸಹಕಾರ ಸಂಘಗಳಿಗೆ ಕೊಡುತ್ತಿದ್ದಾರೆ.ಅದರಲ್ಲಿ ಬಹು ಭಾಗ ಸೊಸೈಟಿ ಸೆಕ್ರೆಟರಿಗಳೇ ಕಳ್ಳಸಾಗಾಣಿಕೆ ಮಾಡುತ್ತಾರೆಂದು ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಉಳಿದಿರುವ ಸಕ್ಕರೆಯನ್ನು ರೈತರಿಗೆ ಹಂಚಿದರೆ ಏನೇನೂ ಸಾಲದು. ಆದ್ದರಿಂದ ಗೋಧಿ ಮತ್ತು ಅಕ್ಕಿ ಕೂಡ ರೂರಲ್ ಪಾರ್ಟ್ಸ್‌ಗೆ ಸ್ವಲ್ಪ ಸ್ವಲ್ಪ ಕೊಡಿಸಿಕೊಡಬೇಕು. ರೇಷನಿಂಗ್ ಇಲ್ಲದೇ ಇರುವ ಪ್ರದೇಶಗಳಲ್ಲಿ ಗೋಧಿ ಮತ್ತು ಅಕ್ಕಿಯನ್ನು 10—10 ಕ್ವಿಂಟಾಲ್ ಕೊಟ್ಟರೆ ಬಹಳ ಒಳ್ಳೆಯದು. ಬಡವರು ಬೆಳಿಗ್ಗೆಯಿಂದ ಸಂಜೆಯವರೆಗೆ ಕೆಲಸಮಾಡಿ ಬಂದಂಥ ಕೂಲಿಯಾಳುಗಳಿಗೆ ಸಹಾಯಮಾಡಬೇಕು. ಏಕೆಂದರೆ, ಅಲ್ಲಿ ಒಂದು ಕೆ. ಜಿ ಅಕ್ಕಿಗೆ 2 ರೂಪಾಯಿಗಳೆಂದು ವಿಧಿಸುವ ಕಾಲವೂ ಬರುತ್ತಿದೆ. ಅದನ್ನು ತಡೆಹಿಡಿಯಬೇಕು. ಒಟ್ಟಿನಲ್ಲಿ ನಮ್ಮ ಕ್ಷೇತ್ರಕ್ಕೆ ಅದರಲ್ಲಿಯೂ ಕ್ಷಾಮವಿರುವ ಪ್ರದೇಶಗಳಲ್ಲಿ ಸ್ವಲ್ಪ ಸ್ವಲ್ಪವಾಗಿಯಾದರೂ ಆಹಾರಧಾನ್ಯಗಳನ್ನು ಸರಬರಾಜು ಮಾಡಬೇಕು.

ಕೊನೆಯದಾಗಿ, ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಈ ಸಂದರ್ಭದಲ್ಲಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :—ಈಗ ಶ್ರೀ ಎಸ್. ವೈ. ಪಾಟೀಲರವರಿಗೆ, ಐದು ನಿಮಿಷ ಕಾಲಾವಕಾಶವನ್ನು ಕೊಟ್ಟಿದೆ. ದಯವಿಟ್ಟು ತಾವು ಅಷ್ಟರೊಳಗೆ ಭಾಷಣವನ್ನು ಮುಗಿಸಬೇಕು.

ಶ್ರೀ ಎಸ್. ವೈ. ಪಾಟೀಲ್ :—ಆಯಿತು ಮುಗಿಸಿಬಿಟ್ಟೆ ನಾನು....

ಅಧ್ಯಕ್ಷರು :—ಹಾಗಾದರೆ ದಯಮಾಡಿ ಕುಳಿತುಕೊಳ್ಳಿ,...

ಶ್ರೀ ಎಸ್. ವೈ. ಪಾಟೀಲ್ :—ಐದು ಮಿನಿಟ್ಟುಗಳಲ್ಲಿ ಭಾಷಣವನ್ನು ಮುಗಿಸಬೇಕೆಂದು ಹೇಳಿದರೆ ಅದು ಹೇಗೆ ಸಾಧ್ಯ ? ಎಲ್ಲರಿಗೂ ಪರವಾನಿಗಿ ಕೊಟ್ಟಹಾಗೆ ನಮಗೂ ಏಕೆ ತಾವು ಕೊಡುವುದಿಲ್ಲ ?

ಅಧ್ಯಕ್ಷರು :—ತಾವು ಭಾಷಣ ಮಾಡುವುದಕ್ಕೆ ಮನಸ್ಸಿದ್ದರೆ ಪ್ರಾರಂಭ ಮಾಡಿ, ಇಲ್ಲವಾದರೆ ನಾನು ಬೇರೆ ಸದಸ್ಯರನ್ನು ಭಾಷಣ ಮಾಡಲು ಕರೆಯಬೇಕಾಗುವುದು....

ಶ್ರೀ ಎಸ್. ವೈ. ಪಾಟೀಲ್ :—ನಮಗೇಕೆ ತಾವು ವ್ಯಾಳೆಯನ್ನು ಕಡಮೆ ಮಾಡಬೇಕು ?

ಅಧ್ಯಕ್ಷರು:—ತಾವು ದಯಮಾಡಿ ಕುಳಿತುಕೊಳ್ಳಬೇಕು, ಇಲ್ಲವೇ ಭಾಷಣವನ್ನು ಪ್ರಾರಂಭಿಸಬೇಕು, ಇಲ್ಲವೇ ನಾನು ಮುಂದಿನ ಭಾಷಣಕಾರರನ್ನು ಕರೆಯುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ :—ಈ ದಿವಸ ಭಾರೀ ನೀರಾವರಿ ಯೋಜನೆಗಳ ಬಗ್ಗೆ ಪ್ರಸ್ತಾಪ....

ಅಧ್ಯಕ್ಷರು :—ತಾವು ದಯಮಾಡಿ ಕುಳಿತುಕೊಳ್ಳಿ. ಶ್ರೀಮಾನ್ ಬೈರೇಗೌಡರು ತಾವು ಭಾಷಣವನ್ನು ಪ್ರಾರಂಭಮಾಡಬಹುದು.

ಶ್ರೀ ಬೈರೇಗೌಡ (ವೇಮಗಲ್ಲು) :—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಭಾರೀ ನೀರಾವರಿ...

ಶ್ರೀ ಎಸ್. ವೈ. ಪಾಟೀಲ್ :—ಅಧ್ಯಕ್ಷರು ನನಗೇಕೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ? ನಾನು ಬಹಳ ನಮ್ರತೆಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ನನಗೇಕೆ ಪರವಾನಿಗಿ ಇಲ್ಲ ?...

ಅಧ್ಯಕ್ಷರು :—ತಾವು ಈಗ ದಯಮಾಡಿ ಕುಳಿತುಕೊಳ್ಳಬೇಕು. ಶ್ರೀ. ಬೈರೇಗೌಡರ ಭಾಷಣವಾಗಲಿ.

ಶ್ರೀ ಎಸ್. ವೈ. ಪಾಟೀಲ್ :— ನಾನು ತಾವು ಏನು ಮಾಡಿದರೂ ಸುಮ್ಮನಿರುವುದಿಲ್ಲ. ತಾವು ನನ್ನ ಅರೆಸ್ಟ್ ಮಾಡಿಸುತ್ತೀರಾ ? ಮಾಡಿಸಿದರೂ ಮಾಡಿಸಿ, ಚಿಂತೆಯಿಲ್ಲ.

ಅಧ್ಯಕ್ಷರು :—ತಾವುಗಳೆಲ್ಲಾ ಹೀಗೆ ಮಾಡುವುದಾದರೆ ನಾನು ಸಭೆಯನ್ನು ಅಡ್‌ಜರ್ನ್ ಮಾಡಬೇಕಾಗುವುದು.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಸದಸ್ಯರು ಹಿರಿಯರು.

ಶ್ರೀ ಎಸ್. ವೈ. ಪಾಟೀಲ್ :—ನಾನು ಎಂ. ಎಲ್. ಎ. ಅಲ್ಲವೇ ?

ಅಧ್ಯಕ್ಷರು :—ಯಾರು ತಮಗೆ ಎಂ. ಎಲ್. ಎ.ತನ ಇಲ್ಲ ಎಂದವರು ? ನಾನು ಹೇಳಿದ್ದು ಗಡಿಯಾರ ಮುಂದೆ ಮುಂದೆ ಹೋಗುತ್ತಿದೆ, ಹೀಗೆ ಕಾಲವನ್ನು ಕಳೆಯುವುದು ಬೇಡ ಎಂದು ಹೇಳುತ್ತಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ :—ಈ ದಿವಸ ಸಾಯಂಕಾಲ 7 ಗಂಟೆಯವರೆಗೂ ಸಭೆ ಇರಬೇಕೆಂದು ನಾವು ತೀರ್ಮಾನ ಮಾಡಿದ್ದೆವು...

ಅಧ್ಯಕ್ಷರು :—ಇದನ್ನು ಆರೂವರೆ ಗಂಟೆಗೆ ಅಡ್‌ಜರ್ನ್ ಮಾಡಬೇಕೆಂದಿದ್ದುದನ್ನು ಆದಷ್ಟು ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಮಾಡೋಣವೆಂದು 7 ಗಂಟೆಯುವರೆಗೂ ಕುಳಿತು ಕೊಳ್ಳಬೇಕೆಂದು ತೀರ್ಮಾನವಾಯಿತು.

ಶ್ರೀ ಎಸ್. ವೈ. ಪಾಟೀಲ್ :—(ಮಾನ್ಯ ಸದಸ್ಯರು ಎದ್ದು ಧರಣಿಮಾಡಲು ಅಧ್ಯಕ್ಷರ ಮುಂದೆ ಆಫೀಸಿನ ಸ್ಟ್ಯಾಫ್ ಕುಳಿತುಕೊಳ್ಳುವ ಸ್ಥಳಕ್ಕೆ ಬರಲು ಪ್ರಯತ್ನ ಮಾಡಿದರು. ಆದರೆ ಅಷ್ಟಕ್ಕೆ ಮತ್ತೆ ವಾಪಸ್ ತಮ್ಮ ಸ್ಥಾನಕ್ಕೆ ಹೊರಟು ಹೋದರು.)

ಶ್ರೀ ಎಚ್. ಡಿ. ದೇವೇಗೌಡ :—ಏನು ಆಗಿಹೋದದ್ದು ? ಇನ್ನೂ ಒಂದು ಗಂಟೆ ಜಾಸ್ತಿಯಾಗಿ ಕುಳಿತು ಮಾತನಾಡೋಣ.

ಅಧ್ಯಕ್ಷರು :—ನನಗೆ ಇಲ್ಲಿ ಅನೇಕ ಸದಸ್ಯರು ಸಭೆಯನ್ನು ಅಡ್‌ಜರ್ನ್ ಮಾಡಿ ಎಂದು ಚೀಟಿಯನ್ನು ಕಳುಹಿಸುತ್ತಿದ್ದಾರೆ. ಅವರಿಗೆ ಏನು ತೊಂದರೆ ಇದೆಯೋ ?

Sri H. D. DEVE GOWDA : If the Govt. Treasury Bank does not want to sit, I cannot understand. We have sometimes sat twice and disposed of the demands. ನಾನು ಒಬ್ಬ ಮಾತನಾಡಿದರೆ ಸಾಕೇ ? ಬಾಕಿ ಸದಸ್ಯರು ಮಾತನಾಡುವುದು ಬೇಡವೇ ? ನಾನು ನಾಳೆ ಬೆಳಗ್ಗೆ ಕುಳಿತುಕೊಳ್ಳೋಣ ಎಂದು ಹೇಳಿದೆ. ಅದಕ್ಕೆ ಒಪ್ಪಲಿಲ್ಲ. ಮಾನ್ಯ ಪಾಟೀಲರು ಕೃಷ್ಣಾನದಿ ನೀರಿನ ಬಗ್ಗೆ ಪ್ರಾಮುಖ್ಯವಾಗಿ ಮಾತನಾಡಬೇಕೆಂದಿದ್ದಾರೆ.

Sri H. SIDDAVEERAPPA : Can you justify when you say that he had no time to express his views ? At any time, did the Leader of the Opposition take as much time as you took ? Is there no time limit ? There are 165 Members on this side, should you not give them some time to speak ?

ಶ್ರೀ ವಾಟಾಳ್ ನಾಗರಾಜ್ :—ಆಡಳಿತ ಪಕ್ಷದವರು ಅವರ ಪಾರ್ಟಿ ಮೀಟಿಂಗಿನಲ್ಲೇ ಎಲ್ಲವನ್ನೂ ಚರ್ಚೆಮಾಡಿ ಮುಗಿಸಿರುತ್ತಾರೆ. ಅವರೇಕೆ ಇಲ್ಲಿ ಹೆಚ್ಚು ಮಾತನಾಡಬೇಕು ?

ಅಧ್ಯಕ್ಷರು :—ಮಾನ್ಯ ಪಾಟೀಲರು ಐದು ಹತ್ತು ನಿಮಿಷ ಆದರೆ ಸಾಲದು ಎಂದು ಹೇಳುತ್ತಿದ್ದಾರಲ್ಲಾ ಆದಕ್ಕೇನು ಮಾಡುವುದು ?

ಶ್ರೀ ಸಿ. ಬೈರೇಗೌಡ :—ಅಧ್ಯಕ್ಷರೇ, ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸುತ್ತ ಒಂದೆರಡು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ.

ನಾನು ಈ ಮನವಿಗಳನ್ನು ವಿರೋಧಿಸುವುದಕ್ಕೆ ಕಾರಣ ರಾಜ್ಯದ ಮೂರನೇ ಒಂದು ಪಾಲು ಜನರನ್ನು ಬಿಟ್ಟರೆ ಇನ್ನುಳಿದ ಮೂರನೇ ಎರಡು ಪಾಲು ಜನರು ಆಹಾರದ ಕೊರತೆ, ನೀರಿನ ಕೊರತೆ ಮತ್ತು ಉದ್ಯೋಗದ ಕೊರತೆಯಿಂದ ನರಳುತ್ತಿದ್ದಾರೆ. ಈ ಸಮಸ್ಯೆಗಳಾದರೋ ದಿನ ದಿನಕ್ಕೆ ಬೃಹದಾಕಾರವಾಗಿ ಬೆಳೆಯುತ್ತಿವೆ. ದೇಶದಲ್ಲಿ ಗೋಸಂಪತ್ತು ನಶಿಸಿಹೋಗುತ್ತಿದೆ. ಜನರು ಸಾಯುತ್ತಿದ್ದಾರೆ. ಕಳೆದ 25 ವರ್ಷಗಳಿಂದ ಭೂಗರ್ಭದಲ್ಲಿರತಕ್ಕ ಜಲವನ್ನು ಸರ್ವೆ ಮಾಡಿ ಅದನ್ನು ಜನರ ಉಪಯೋಗಕ್ಕೆ ಒದಗಿಸದೇ ಇರುವುದೇ ಇದಕ್ಕೆಲ್ಲಾ ಮೂಲ ಕಾರಣ. ಆಹಾರ ಮತ್ತು ನೀರಿನ ಸಮಸ್ಯೆಗಳಲ್ಲಿ ಕೋಲಾರ ಮತ್ತು ಗುಲ್ಬರ್ಗಗಳೆರಡೂ ಒಂದು ಎಂದು ಹೇಳಬಹುದು.

ಇದನ್ನು ನೀಗುವುದಕ್ಕೆ ಸರಕಾರ ವರ್ಲ್ಡ್ ಫುಡ್ ಪ್ರೋಗ್ರಾಂ ಕೋಲಾರದಲ್ಲಿ ಅಳವಡಿಸಿದ್ದರು. ಸರಕಾರ ಎಚ್ಚೆತ್ತುಕೊಳ್ಳಬೇಕಾಗಿತ್ತು. ವರ್ಲ್ಡ್ ಫುಡ್ ಪ್ರೋಗ್ರಾಂ ಇಡೀ ಜಿಲ್ಲೆಗೆ ಅನ್ವಯಿಸಬೇಕೆಂದಿದ್ದರೂ ಕೇವಲ ಮೂರು ತಾಲ್ಲೂಕುಗಳಿಗೆ ಅಳವಡಿಸಿದ್ದಾರೆ. ಸುಮಾರು ಮುನ್ನೂರು ಕ್ವಿಂಟಾಲ್ ಯಾರೂ ನೋಡದೆ ಹುಳ ಬಿದ್ದಿರುವುದು ಒಂದು ಕಡೆ ಇದ್ದರೆ ಇನ್ನೊಂದು ಕಡೆ ಬೇಕಾದ ಪದಾರ್ಥವಿಲ್ಲ. ಇದನ್ನು ತೀವ್ರವಾಗಿ ಹೇಳಿದರೂ, ಅಭಿವೃದ್ಧಿ ಮಂಡಲಿಯಲ್ಲಿ ಹೇಳಿದರೂ ಕ್ರಮ ಕೈಕೊಂಡಿಲ್ಲ. ಮುನ್ನೂರು ಕ್ವಿಂಟಾಲ್ ಹುಳ ಬೀಳುವುದಕ್ಕೆ ಯಾರು ಕಾರಣರೋ ಅವರನ್ನು ಹಿಡಿದು ಚಡಿ ಏಟು ಹೊಡಿಸಬೇಕು.

ಕುಡಿಯುವ ನೀರಿನ ಪ್ರಶ್ನೆ ಇದೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 80 ಗ್ರಾಮಗಳಲ್ಲಿ ಇದಕ್ಕೆ ತೊಂದರೆಯಿದೆ. ಇದನ್ನು ಮುಖ್ಯ ಮಂತ್ರಿಗಳಿಗೆ ಹೇಳಿದೆ, ಕಾಗದ ಇದರ ಬಗ್ಗೆ ಬರೆದೆ. ಆದರೂ ಕೂಡ ಇಲ್ಲಿಯವರೆಗೆ ಆ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಮಾಡಿಲ್ಲ.

ಭಾರಿ ನೀರಾವರಿ ವಿಚಾರ ತೆಗೆದುಕೊಂಡರೆ 1924ರ ಅಗ್ರಿಮೆಂಟ್ ಪ್ರಕಾರ ಅವಕಾಶ ವಿರುವುದಕ್ಕಿಂತ ಹೆಚ್ಚು ಜಲಾಶಯ ನಿರ್ಮಾಣಮಾಡಿ ಮದ್ರಾಸಿನವರು ಸಹಾಯ ಪಡೆಯುತ್ತಿದ್ದಾರೆ. ಅದೇ ಮೈಸೂರಿನವರು 1924ರಿಂದ ಇಲ್ಲಿಯವರೆಗೆ ತಮಗೆ ಅವಕಾಶವಿರುವಷ್ಟನ್ನು ಕೂಡ ಉಪಯೋಗ ಮಾಡಿಕೊಂಡಿಲ್ಲ. ಇದಕ್ಕೆ ಯಾರು ಜವಾಬ್ದಾರರು ಎಂದು ಯೋಚನೆ ಮಾಡಬೇಕಾಗಿದೆ.

ಸಗಟು ವ್ಯಾಪಾರ ಸರಕಾರ ವಹಿಸಿಕೊಳ್ಳಬೇಕೆಂದಿದೆ. ಆದರೆ ಮಾರುಕಟ್ಟೆಯಲ್ಲಿ ದಿನೇ ದಿನೇ ಆಹಾರ ಪದಾರ್ಥಗಳ ಕೊರತೆ ಕಂಡುಬರುತ್ತಿದೆ. ಸರಕಾರ ಧಾನ್ಯವನ್ನು ಕೊಳ್ಳಲಿದೆ. ಕೆಲವರು ರೈತರು, ವರ್ತಕರು ಮುಂತಾದವರ ಹತ್ತಿರ ಹೆಚ್ಚು ಧಾನ್ಯವಿದೆ. ಸರಕಾರ ಮಾರುಕಟ್ಟೆಯಲ್ಲಿ ಕೊಂಡರೆ ಪ್ರಯೋಜನವಾಗುವುದಿಲ್ಲ. ಯಾರ ಹತ್ತಿರ ಹೆಚ್ಚು ಧಾನ್ಯವಿದೆ ಅದನ್ನು ಪಡೆಯಬೇಕು.

ಮೋಟಾರು ಕಾರುಗಳ ವಿಚಾರದಲ್ಲಿ ಕಂಟ್ರೋಲ್ ಮಾಡಿ ನಂತರ 50 ಪರ್ಸೆಂಟ್ ಫ್ರೀಸೇಲಿಗೆ ಬಿಟ್ಟರು. ಆದಾದಮೇಲೆ ಸೇಕಡ ನೂರರಷ್ಟು ಕಂಟ್ರೋಲ್ ಮಾಡಿರುವುದು ಸಂತೋಷ. ಡೀಕಂಟ್ರೋಲ್ ಮಾಡುವುದಕ್ಕೆ ಕಾರಣ ಗೊತ್ತಾಗಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ) :—ಸ್ವಾಮಿ............

ಶ್ರೀ ಎಸ್. ವೈ. ಪಾಟೀಲ್ :—ನಾವು ಮಾಡಿದ ಅನ್ಯಾಯವೇನು ? ಪಕ್ಷಪಾತವೇಕೆ ? ನನಗೇಕೆ ಛಾನ್ಸ್ ಕೊಡುವುದಿಲ್ಲ ? ಅವರಿಗೇಕೆ ಕೊಡುವುದು ? ಈಗ ನನ್ನ ಸರದಿ ಇದೆ. ನನಗೆ ಕೊಡಬಾರದೆಂಬ ಉದ್ದೇಶವಿದೆಯೇ ? ಪಟ್ಟಿಯಲ್ಲಿ ನನ್ನ ಹೆಸರು ಮೊದಲಿದೆ, ನನಗೆ ಮೊದಲು ಅವಕಾಶ ಕೊಡಬೇಕು. ನಾನು ಮಾತನಾಡಬೇಕಾಗಿದೆ. ಅಧ್ಯಕ್ಷರ ಪಕ್ಷಪಾತ ನೀತಿಯನ್ನು ವಿರೋಧಿಸಬೇಕಾಗಿದೆ.

ಅಧ್ಯಕ್ಷರು :— ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ. ಈಗ ಕೊಡುವುದಿಲ್ಲ. ಅವರು ಮಾಡಿರುವ ಪಾಪವೇನು ? ಅವರಿಗೇಕೆ ಕೊಡಬಾರದು ಅವಕಾಶ ?

ಶ್ರೀ ಎಸ್. ವೈ. ಪಾಟೀಲ್ :—ಇದು ಪಾಪ ಪುಣ್ಯದ ಪ್ರಶ್ನೆಯಲ್ಲ. ನನಗೆ ಅನ್ಯಾಯ ವಾಗುತ್ತಿದೆ. ಮೊದಲೇ ನನಗೇಕೆ ಅವಕಾಶ ಕೊಡಬಾರದು ?

ಅಧ್ಯಕ್ಷರು :— ಹೀಗೆ ಹಟ ಮಾಡುವುದಕ್ಕೆ ಬರುವುದಿಲ್ಲ, ಅವರು ಮಾತನಾಡಿದಮೇಲೆ ನೀವು ಮಾತನಾಡಿ, ಒಬ್ಬರಾದಮೇಲೆ ಒಬ್ಬರು ಮಾತನಾಡಬೇಕು. ಹೀಗೆಲ್ಲಾ ಗಲಾಟೆ ಮಾಡಿದರೆ ಸಭೆ ಅಡ್ಜರ್ನ್ ಮಾಡಬೇಕಾಗುತ್ತದೆ. ಹಾಗೆ ಮಾಡುವುದರಲ್ಲಿ ದೋಷವಿಲ್ಲ.

ಶ್ರೀ ವಾಟಾಳ್ ನಾಗರಾಜ್ :—ಸ್ವಲ್ಪ ಪುನರಾಲೋಚನೆ ಮಾಡಿ.

ಶ್ರೀ ಎಸ್. ವೈ. ಪಾಟೀಲ್ :—ಏಕೆ ಪರವಾನಗಿ ಕೊಡುವುದಿಲ್ಲ ? ಮೊದಲೇ ನನಗೇಕೆ ಅವಕಾಶ ಕೊಡಬಾರದು ? ಒಬ್ಬಬ್ಬರು 15 ನಿಮಿಷ ಮಾತನಾಡುವರು, ನಮಗೆ 5 ನಿಮಿಷ ಕೊಟ್ಟರೆ ಹೇಗೆ ? ಅಧ್ಯಕ್ಷರು ಹೇಳಿದ ಹಾಗೆ ನಾನು ಕೇಳುತ್ತಿದ್ದೇನೆ, ನಮ್ಮ ಡಿಗ್‌ನಿಟಿ ಸಂರಕ್ಷಣೆಮಾಡುವ ಜವಾಬ್ದಾರಿ ನಿಮ್ಮ ಮೇಲಿದೆ.

ಅಧ್ಯಕ್ಷರು :— ಸಭೆ ಈಗ ಮುಂದುವರೆದು ಮತ್ತೆ ನಾಳೆ 12 ಗಂಟೆಗೆ ಸೇರುವುದು.

The House adjourned at Seven of the clock to meet again at Twelve of the clock on Thursday the 26th April 1973.

MYSORE LEGISLATIVE ASSEMBLY

Thursday, 26th April 1973 Vaishaka 6, 1895 S.E.

The House met in the Assembly Chamber, Vidhana Soudha, at Twelve of the Clock.

MADAM SPEAKER (Smt. K. S. Nagarathnamma) in the Chair.

Papers Laid on the Table

Mr. SECRETARY : I lay on the Table of the House :

" First List of Unstarred Questions and Answers of Second Session 1972.

MADAM SPEAKER : The list is laid.

UNSTARRED QUESTIONS AND ANSWERS

Second Session, 1972

First List

ಮದ್ಯದ ಅಂಗಡಿಗಳ ಸ್ಥಳಾಂತರ

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಶಿರ್ಶಿ) :—

೧. (೧) :—ಮುಖ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ರಾಜ್ಯದಲ್ಲಿರುವ ಹರಿಜನರ ಕೇರಿ, ಕಾರ್ಮಿಕರ ಕೇರಿ ಮತ್ತು ಇತರ ಬಡವರ ಕೇರಿಗಳಿಂದ ಸೇಂದಿ ಮತ್ತು ಸಾರಾಯಿ ಅಂಗಡಿಗಳನ್ನು ದೂರ ಸಾಗಿಸಿ ಅವರ ಕುಡಿತ ಕಡಿಮೆ ಮಾಡಿಸುವ ಬಗ್ಗೆ ಹೊಸ ಯೋಜನೆಯೇನಾದರೂ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ ;

(ಆ) ಹಾಗಿದ್ದಲ್ಲಿ ಈ ಪರಿಶೀಲನೆಯ ಪರಿಣಾಮವಾಗಿ ಇದುವರೆವಿಗೆ ಎಷ್ಟು ಸೇಂದಿ ಸಾರಾಯಿ ಅಂಗಡಿಗಳನ್ನು ಸ್ಥಳಾಂತರ ಮಾಡಿಸಲಾಗಿದೆ ;

(ಇ) ಹಾಗೆ ಮಾಡಿಸಿದ್ದರೆ ಜಿಲ್ಲಾವಾರು ತಾಲ್ಲೂಕುವಾರು ಯಾವ ಯಾವ ಅಂಗಡಿಗಳನ್ನು ಸ್ಥಳಾಂತರ ಮಾಡಿಸಲಾಗಿದೆ? (ಪೂರ್ಣ ವಿವರವನ್ನು ಒದಗಿಸಬೇಕಾಗಿ ಪ್ರಾರ್ಥನೆ) ?

ಮುಖ್ಯಮಂತ್ರಿಗಳು (ಶ್ರೀ ಡಿ. ದೇವರಾಜ ಅರಸ್) :—

ಉತ್ತರ :—(ಅ) ಆಕ್ಷೇಪಣೆಕರವಾದಂತ ಸ್ಥಳಗಳಿಂದ ಸೇಂದಿ ಮತ್ತು ಸಾರಾಯಿ ಅಂಗಡಿಗಳನ್ನು ದೂರ ಸಾಗಿಸಿ ಉಪವೇಶನ ವಸತಿಯನ್ನೂ, ನೈರ್ಮಲ್ಯ ಸ್ಥಿತಿಯನ್ನೂ ಕಲ್ಪಿಸುವ ಯೋಜನೆಯೊಂದು ಇದೆ. ಇದಕ್ಕಾಗಿ 10 ಲಕ್ಷ ರೂಪಾಯಿಗಳನ್ನು 1972-73ರ ಬಡ್ಜೆಟ್‌ನಲ್ಲಿ ಒದಗಿಸಲಾಗಿದೆ.

(ಆ) ಮೂರು ಸಾರಾಯಿ ಮತ್ತು ಮೂರು ಸೇಂದಿ ಅಂಗಡಿಗಳನ್ನು ಸ್ಥಳಾಂತರ ಮಾಡಲಾಗಿದೆ.

(ಇ) ಸ್ಥಳಾಂತರ ಮಾಡಲಾಗಿರುವ ಸಾರಾಯಿ ಮತ್ತು ಸೇಂದಿ ಅಂಗಡಿಗಳು :—

ಜಿಲ್ಲೆ	ತಾಲ್ಲೂಕು	ಸ್ಥಳ
(1) ಚಿತ್ರದುರ್ಗ	(1) ಚಿತ್ರದುರ್ಗ	(1) ಟೌನ್ ಸಾರಾಯಿ ಅಂಗಡಿ
	(2) ಹರಿಹರ	(2) ಟೌನ್ ಸಾರಾಯಿ ಅಂಗಡಿ
(2) ಬೆಳಗಾವ್	(1) ಅಥಣಿ	(1) ಅಥಣಿ ಸಾರಾಯಿ ಅಂಗಡಿ
(3) ಗುಲ್ಬರ್ಗ	(1) ಚಿತ್ತಾಪುರ	(1) ಕೊಡೂರು ಹಳ್ಳಿಯ ಸೇಂದಿ ಅಂಗಡಿ
		(2) ಅಲ್ಲೋಡ ಹಳ್ಳಿಯ ಸೇಂದಿ ಅಂಗಡಿ
(4) ದಕ್ಷಿಣ ಕನ್ನಡ ಜಿಲ್ಲೆ	(1) ಮಂಗಳೂರು	(1) ಚೋಳೂರು (ಉರ್ವ) ಸೇಂದಿ ಅಂಗಡಿ

ಬಡವರಿಗೆ ನಿವೇಶನ ಹಂಚುವದು.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್ (ಶಿರ್ಶಿ).—

೨. (ಇ).—ನಗರಾಡಳಿತ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :

(ಅ) 1972ನೆಯ ಇಸವಿ ಆಗಸ್ಟ್ 15ರ ಒಳಗಾಗಿ ರಾಜ್ಯದ ವಿವಿಧ ಜಿಲ್ಲೆಯಲ್ಲಿ ಸರ್ಕಾರ ನಿವೇಶನಗಳನ್ನು ಬಡವರಿಗೆ ಹಂಚಲು ನಿಗದಿ ಮಾಡಿಕೊಂಡಿದ್ದ ಸಂಖ್ಯೆ ಎಷ್ಟು ;

APPENDICES

[*Vide* REPLY TO CLAUSE (ಇ) OF UNSTARRED QUESTION NO. 2. (3)]

Sl. No.	Name of the District	Name of the Taluk	No. of house sites distributed to Sch. Castes/Sch. Tribes	Total
1	2	3	4	5
1	BANGALORE	1 Bangalore North	77	
		2 Bangalore South	235	
		3 Nelamangala	352	
		4 Doddaballapur	184	
		5 Devanahally	440	
		6 Hoskote	349	

1	2		3	4	5
		7	Anekal	280	
		8	Kanakapura	551	
		9	Ramanagaram	56	
		10	Channapatna	126	
		11	Magadi	348	2,998
2	BELGAUM	1	Khanapur	109	
		2	Gokak	107	
		3	Bailhongal	50	
		4	Athani	282	
		5	Ramdurg	79	
		6	Saundatti	38	
		7	Belgaum	47	
		8	Raibag	188	900
3	BELLARY	1	Bellary	363	
		2	Hospet	941	
		3	Mallapur	107	
		4	Hadagalli	486	
		5	Kudligi	598	
		6	Siruguppa	496	
		7	Sandur	89	
		8	Harapanahalli	1,068	4,148
4	BIDAR	1	Aurad	437	
		2	Bhalki	325	
		3	Humnabad	1,004	
		4	Basavakalyan	518	
		5	Bidar	310	2,594
5	BIJAPUR	1	Bijapur	432	
		2	Basavan-Bagewadi	151	
		3	Muddebihal	54	
		4	Indi	185	
		5	Sindgi	282	
		6	Bagalkot	32	
		7	Badami	38	
		8	Hungund	77	
		9	Jamkhandi	253	
		10	Mudhol	233	
		11	Bilgi	125	1,862
6	CHICKMAGALUR	1	Chickmagalur	1,326	
		2	Kadur	427	
		3	Tarikere	486	
		4	Koppa	326	
		5	Narasimharajpur	316	
		6	Sringeri	340	
		7	Mudigere	336	3,557

1	2	3		4	5
(*a*) Out of the four loanees indicated in Statement I appended to clause (a) of the reply, Sri G. Channabasappa, at Sl. No. 2, and Sri S. Channe Gowda at Sl. No. 3, are making payment of the instalments due. In regard to Sri Dandur Math Basavaiah at Sl. No. 4 orders of Government have been obtained terminating the Aid under Section 19 of the Mysore State Aid to Industries Act, 1959, and the Deputy Commissioner, Hassan District has also been addressed to recover the amount as arrears of land revenue as per Section 18. In regard to Sri S. Nanjappa at Sl. No, 1, since the party has failed to respond to the notices issued, necessary action is being taken to issue orders for termination of the Aid and, after obtaining orders of Government, the Deputy Commissioner will be requested to institute coercive proceedings for recovery of the entire amount, including interest, As regards Statement II appended to clause (a) of the reply, a statement showing the details is appended.

(b) Only one report has been received that the loan amount has been misutilised by Sri Dandur Math Basavaiah and necessary action is being taken to institute coercive proceedings against him.

(c) In respect of Statement I, necessary action has been taken in all the cases by issuing notices and obtaining reports from the Inspecting Officers and as soon as it came to the notice of Government that there was risk involved in regard to Government money, Aid has been terminated and coercive proceedings instituted.

In respect of Statement II, in almost all the loan cases, recovery steps have been taken except loans issued to Goldsmiths individuals and Societies since the District Industrial Co-operative Bank acted only as Channelising agents to those loan cases.

(*d*) In respect of Statement I, since the amount is to be recovered as a arrears of land revenue, necessary action is being taken by Government for recovering the amounts at an early date

In respect of Statement II, by the end of the year, most of the loans issued are expected to be recovered completely, except Goldsmiths Loans to individuals and societies.

[*Vide* Reply to Clause (*a*) of

STATE

HASSAN DISTRICT INDUSTRIAL

Disbursement and Recovery of various kinds of

Sl. No.	Name	Amount disbursed	Date of I instalment
1	2	3	4
I.	S. S. I. Loan:		
1.	Arsikere Taluk Coir Industrial Co-operative Society Ltd. ...	10,000-00	12-5-66
2.	Gejje and Basket Makers Craft C. S. Malladevihally. ...	4,000-00	23-5-69
II.	Goldsmiths Loans Societies:		
1.	Arsikere Taluk Vishwakarma Kushala Kaigarika Sahakara Sangha Ltd., Arsikere ...	40,000-00	20-10-64
1I.	Working Capital Loan:		
1.	K. Murigappa, Arsikere ...	10,000-00	28-9-65
2.	Arsikere Taluk Coir Industrial C. S., Arsikere ...	10,000-00	5-4-68
3.	S. Channegowda, Arsikere ...	10,000-00	3-1-70
4.	G. Channabasappa, Arsikere ...	10,000-00	15-2-70
5.	Vishwakarma Kaigarika Sahakara Sangha Ltd., Arsikere ...	5,000-00	23-9-70
6.	B. T. Maralusiddappa, Arsikere ...	5,000-00	7-5-71
V.	Working Capital Loan above 2,000-00 Cases issued through Taluk Industrial Co-operative Society Ltd., Arsikere Directly:		
1.	Thimmaiah, Arsikere ...	10,000-00	10-2-70
2.	Harnabally Pappanna Arsikere ...	5,000-00	16-9-70
3.	N. Govindaiah, Arsikere ...	5,000-00	3-12-70
4.	S. N. Appaiah, Arsikere ...	5,000-00	26-12-70
5.	Smt. Janaki Bai, Arsikere ...	2,000-00	21-4-71
6.	Thangaraju, A., Arsikere ...	2,000-00	21-4-71

UNSTARRED QUESTION NO. 38. (69)]

MENT

CO-OPERATIVE BANK LTD., HASSAN

loans issued to Arsikere Taluk (Hassan District)

Disbursement — II instalment	Loan recovered	Loan outstanding as on 30-11-72	Over due	Remarks
5	6	7	8	9
24-6-66	5,365-00	4,635-00	4,635-00	Dispute filed
29-6-71	1,324-35	2,675-65	425-00	Notice issued
...	5,715-00	34,285-00	28,572-15	Registered Notice issued.
...	10,000-00	...	...	Loan account closed.
...	...	10,000-00	10,000-00	Dispute filed
...	4,752-50	5,247-50	5,247-50	do
...	10,000-00	...	...	Account closed
...	...	5,000-00	5,000-00	Dispute filed
...	...	5,000-00	5,000-00	do
...	7,846-00	2,154-00	2,154-00	Dispute filed
19-9-70	1,834-82	3,165-18	3,165-18	do
...	3,049-65	1,950-35	1,950-35	do
..	160-00	4,840-00	4,840-00	do
...	2,000-00	...	...	Account closed on 27-7-72.
...	351-00	1,649-00	1,049-00	Dispute filed

MISAPPROPRIATION IN MULGI MULTIPURPOSE CO-OPERATIVE SOCIETY, MUNIRABAD

Sri C. N. PATIL (Lingasugur).—

39. (71) Will the Minister for Co-operation be pleased to state :—

(a) the total share amount received from the members in the Mulgi Multipurpose Co-operative Society, Munirabad up to 1961 ;

(b) the total amount misappropriated and the names of the persons involved in it ;

(c) whether the Administrator was able to recover the mis-appropriated amount after 1961 ;

(d) whether the Administrator has submitted any report ;

(e) the expenditure incurred by the Administrator towards his salary and establishment charges during his stay at the Society ?

Sri A. SHANKARA ALVA (Minister for Co-operation).—

	Rs. Ps.
(a) Share Capital	8,298-90
Share suspense	2,801-75

(b) Total amount of alleged misappropriation is Rs. 2,48,671-37.

The names of persons involved :

1. Sri Kashappa, Administrator (Cash and Stock) 22,383-64

2. The Board of Management (Cash) 6,819-50

3. The Board of Management and the Administrator (Un-accounted stock) 2,19,468-23

(c) No amount is recovered after 1961.

(d) No.

(e) During the period of the Administrator, expenditure incurred by him is as follows :—

1.	Salary	Rs.	10,162-00
2.	Establishment charges	Rs.	11,891-00
		Total	22,053-00

EXTENSION OF BENEFITS TO WORK-CHARGED STAFF OF T. B. BOARD

Sri B. SATYANARAYANA SINGH (Hospet).—

40. (73) Will the Minister of State for Major Irrigation be pleased to state :—

(a) whether the Government is aware of the decision taken at the third meeting of Tungabhadra Board held in January 1971 that the pay and other rules of Mysore Government would be made applicable in toto to the work-charged establishment and N.M.R. workers recruited by the Board ;

(b) whether it is a fact that the Government in G.O. No. PWD 150 SPN 68 dated 19-10-1968 have sanctioned weekly and general holidays to PWD work-charged establishment and in G.O. No. PWD 214 SPN 70 dated 8-7-1970 have recategorised the posts of work-charged employees and have fixed revised pay scales with effect from 1-9-1971 ;

(c) whether it has come to the notice of Government that the benefits referred to in clause (a) and (b) have not been extended to the employees of work-charged staff of the T.B. Board ;

(d) if so, the steps taken by the Government to impress upon the T.B. Board to extend these benefits to work-charged staff ?

Sri H. N. NANJE GOWDA (Minister of State for Major Irrigation).—

(a) The Third Meeting of the Board was not held in January, 1971.

(*b*) Yes.

(*c*) The benefit of the revised pay scales of Mysore Government has been made applicable to the work-charged staff of the Board. The N.M.R. staff have been brought into monthly scales of pay. The Board has also decided that rules and procedures followed by the Mysore Government may be made applicable to the work-charged staff of the T.B. Board, but the benefits will be on the basis of options exercised by them. Regarding grant of holidays the Board has its own rules. Regarding categorisation of the work-charged staff, it is under consideration of the Board.

(*d*) The question does not arise.

GRADATION LIST OF ASSISTANTS IN M. G. S.

Sri M. H. JAYAPRAKASH NARAYAN (Sirsi).—

41. (78) Will the Chief Minister be pleased to state :—

(*a*) whether the Government has finalised the Gradation List of Assistants of Mysore Government Secretariat ;

(*b*) if so, when it was prepared and sent to the Mysore Public Service Commission for filling up the posts of Section Officers ;

(*c*) the reasons for the inordinate delay in finalising the seniority list of Assistants ?

Sri D. DEVARAJ URS (Chief Minister).—

(*a*) No.

(*b*) Gradation list of Assistants is not required to be sent to the Public Service Commission.

(*c*) The final I.S.S. List of Assistants was prepared in 1965 which reflected the position as on 1-11-1956. Regarding Assistants appointed after 1-11-1956, due to fixation of seniority etc., of Local Candidates regularised in 1960, 1961 and 1966, the matter was taken up in 1971 and a Provisional List has been circulated for inviting objections.

ANECUT TO KABBINA SETHUVE HALLA NEAR NAGANNANAGUDDE

Sri G. PUTTASWAMY (Mudigere).—

42. (79) Will the Minister for Public Works and Electricity be pleased to state :—

(*a*) whether it has come to the notice of the Government that an anecut to the 'Kabbina Sethuve halla' near Nagannanagudde of Manimakki and Kodalu villages Chickmagalur taluk is necessary.

(*b*) whether it has come to their notice that in the absence of Anecut the ryots of the area are put into great difficulties ?

Sri H. M. CHANNABASAPPA (Minister for Public Works and Electricity).—

(*a*) Yes. Representations have been received the people of the nearby villages.

(*b*) No. At present the water from the halla is being utilised for irrigation by the ryots.

TE. HANUMANTHAPPA,
Secretary.

BUDGET ESTIMATES FOR 1973-74
DEMANDS FOR GRANTS
Demands Nos. 40, 33, 15A and 53

(DEBATE Contd.)

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ):—ಮಾನ್ಯ ಅಧ್ಯಕ್ಷರೇ, ಮಾನ್ಯ ಬೃಹತ್ ನೀರಾವರಿ ಸಚಿವರು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ವಿರೋಧಿಸುತ್ತ ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಇಲ್ಲಿಯವರೆಗಾದರೂ 'ಕಾವೇರಿ ಬೇಸಿನ್‌ನಲ್ಲಿರತಕ್ಕ ನಾಲ್ಕೈದು ಪ್ರಾಜೆಕ್ಟ್‌ಗಳಿಗೆ ಇನ್ನೂ ಕೇಂದ್ರದಿಂದ ಟೆಕ್ನಿಕಲ್ ಕ್ಲಿಯರೆನ್ಸ್ ಬಂದಿಲ್ಲ. ರಾಜ್ಯ ಸರ್ಕಾರದವರು ಕಳೆದ ಮೂರು ನಾಲ್ಕು

ವರ್ಷಗಳಲ್ಲಿ ಈ ಯೋಜನೆಗಳ ಬಗ್ಗೆ ವೆಚ್ಚಮಾಡಿರತಕ್ಕ ಹಣವಾದರೂ ಅಷ್ಟು ಆಶಾದಾಯಕ ವಾಗಿಲ್ಲ. 1969-70ರಲ್ಲಿ ಎಂಟೂವರೆ ಕೋಟಿ, 1970-71 ರಲ್ಲಿ ಹನ್ನೊಂದೂವರೆ ಕೋಟಿ ಮತ್ತು 1971-72 ಕ್ಕೆ 14 ಕೋಟಿ ಮತ್ತು 1973-74 ಕ್ಕೆ ಹನ್ನೆರಡುವರೆ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಕಾವೇರಿ ಬೇಸಿನಲ್ಲಿರತಕ್ಕ ಯೋಜನೆಗಳ ಬಗ್ಗೆ ಕೆಲವು ವರ್ಷಗಳಿಂದ ಟೆಕ್ನಿಕಲ್ ಕ್ಲಿಯರೆನ್ಸ್ ಬಗ್ಗೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಒತ್ತಾಯ ಮಾಡಿದ್ದರೂ ಅದು ಸಾಧ್ಯವಾಗಿರಲಿಲ್ಲ. ಈಗ ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಎರಡೂ ಕಡೆಗಳಲ್ಲಿ ಒಂದೇ ಪಕ್ಷದ ಸರ್ಕಾರ ಇರುವುದರಿಂದ ಈ ಟೆಕ್ನಿಕಲ್ ಕ್ಲಿಯರೆನ್ಸನ್ನು ಬೇಗ ಪಡೆಯುವುದಕ್ಕೆ ನಮ್ಮ ಎಂ. ಪಿ. ಗಳು ಮತ್ತು ರಾಜ್ಯ ಸರ್ಕಾರದವರೂ ಒತ್ತಾಯಮಾಡಿ ಅದನ್ನು ಬೇಗ ಪಡೆಯ ಬೇಕೆಂದು ಹೇಳುತ್ತೇನೆ. ಆದರೆ ರಾಜ್ಯ ಸರ್ಕಾರ ಈ ವಿಚಾರದಲ್ಲಿ ಇಲ್ಲಿಯವರೆಗೂ ಇದನ್ನು ಪಡೆಯದೆ ಇರುವುದರಿಂದ ಇದು ತನ್ನ ಕರ್ತವ್ಯದಲ್ಲಿ ವಿಫಲವಾಗಿದೆ ಎಂದು ಹೇಳದೆ ವಿಧಿಯಿಲ್ಲ. ನಮ್ಮ ರಾಜ್ಯ ಸರ್ಕಾರದವರು ಇದೇ ರೀತಿಯಾಗಿ ಹಣವನ್ನು ಖರ್ಚುಮಾಡುತ್ತಾ ಹೋದರೆ ನಮ್ಮ ಈ ಯೋಜನೆಗಳು ಇನ್ನು 10-15 ವರ್ಷಗಳಾದರೂ ಅವು ಮುಗಿಯುವುದಿಲ್ಲ. ಜನರು ಇಲ್ಲಿ ಪದೇ ಪದೇ ಬರಗಾಲಕ್ಕೆ ತುತ್ತಾಗುವುದೂ ತಪ್ಪುವುದಿಲ್ಲ. ಇಲ್ಲಿ ವಿನಾ ಕಾರಣ ಎಸ್ಟಾಬ್ಲಿಷ ಮೆಂಟಿಗೆ ಹಣ ವೆಚ್ಚವಾಗುತ್ತಿರುತ್ತದೆ. ಆಗ ಮತ್ತೆ ಪ್ರತಿಯೊಂದು ಪ್ರಾಜೆಕ್ಟಿನ ಕೆಲಸಗಳನ್ನೂ ರೀಎಸ್ಟಿಮೇಟ್ ಮಾಡಬೇಕಾಗುತ್ತದೆ — ಬೆಲೆ ಒಂದಕ್ಕೆ ಎರಡರಷ್ಟು ಆಗುತ್ತದೆ. ಆದಕ್ಕಾಗಿ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ ಸರ್ಕಾರದವರು ತಮ್ಮ ಶಕ್ತಿಮೀರಿ ಕೆಲಸ ಮಾಡಿ ಕೇಂದ್ರದಿಂದ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆದು ಅವರಿಂದ ಹೆಚ್ಚಿನ ಹಣದ ಸಹಾಯವನ್ನು ಪಡೆದು ಈ ಯೋಜನೆಗಳನ್ನು ಬೇಗ ಮುಗಿಸಬೇಕೆಂದು ಹೇಳುತ್ತೇನೆ. ಇವು ಇಲ್ಲಿಯವರೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆದಿದ್ದರೆ ನಾವು ಇಲ್ಲಿಯವರಗೆ ಖರ್ಚುಮಾಡಿರುವ ಹಣವನ್ನು ಬೇರೆ ಇನ್ನು ಯಾವುದಾದರೂ ಬಾಬುಗಳಿಗೆ ವಿನಿಯೋಗ ಮಾಡಬಹುದಿತ್ತು. ಅದಕ್ಕೆ ಅವಕಾಶವಿಲ್ಲದಂತಾಗಿದೆ. ಇನ್ನು ಮಾನ್ಯ ನಂಜೇಗೌಡರು 1973—74 ರಲ್ಲಿ ಈ ಯೋಜನೆಯಿಂದ 10 ಸಾವಿರ ಎಕರೆಗಳಿಗೆ ನೀರನ್ನು ಒದಗಿಸಲಾಗುತ್ತದೆಂದು ಹೇಳಿದ್ದರು. ಆದರೆ ಅಲ್ಲಿ ಮೇನ್ ಛಾನಲ್ ಮತ್ತು ಸಬ್ ಛಾನಲ್‌ಗಳ ಕೆಲಸ ಒಂದೂ ಆಗಿಲ್ಲ. ಭೂಮಿಯನ್ನೂ ಕೂಡ ಇನ್ನೂ ಸಮ ಮಟ್ಟಕ್ಕೆ ತಂದಿಲ್ಲ. ಆ ತುಂಗಭದ್ರಾ ಆಯಕಟ್ಟು ಯೋಜನೆಯಲ್ಲಿ ಯಾವರೀತಿ ಕೆಲಸಕಾರ್ಯಗಳಾದವೋ ಅದೇರೀತಿ ಇಲ್ಲಿಯೂ ಕೆಲಸಕಾರ್ಯಗಳಾಗಬೇಕು. ಇನ್ನು ಯಗಚಿ ಹೊಳೆ ಪ್ರಾಜೆಕ್ಟಿನ ಬಗ್ಗೆ ಹಾಸನ ಜಿಲ್ಲೆಯವರು ಪದೇ ಪದೇ ಒತ್ತಾಯ ಮಾಡುತ್ತಲೇ ಇದ್ದಾರೆ. ಇದರ ಎಸ್ಟಿಮೇಟೆಲ್ಲಾ ಮಂಜೂರಾಗಿದೆ. ಇನ್ನೇನು ಇಷ್ಟರಲ್ಲೇ ಇದರ ಟೆಕ್ನಿಕಲ್ ಕ್ಲಿಯರೆನ್ಸ್ ಕೂಡ ಬಂದಿರಬಹುದು ಅನ್ನುವುದರಲ್ಲಿದ್ದಾಗ ಮಧ್ಯೆ ನಾನು ಒಂದು ಒಡಕು ಸಮಾಚಾರವನ್ನು ಕೇಳುತ್ತಿದ್ದೇನೆ. ಕಾವೇರಿ ಬೇಸಿನಲ್ಲಿರತಕ್ಕ ಯೋಜನೆಗಳಿಗೆ ನೀರು ಸಾಲದೆ ಬರುತ್ತದೆಂಬ ಕಾರಣದಿಂದಲೋ ಏನೋ ಇದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಸಿಕ್ಕುವುದು ಕಷ್ಟವಾಗಿದೆ ಎಂದು ಕೇಳುತ್ತಿದ್ದೇನೆ.

ಈ ಕೆಲಸವನ್ನು ಆದಷ್ಟು ತ್ವರಿತವಾಗಿ ಮಾಡಬೇಕು. ಸುಮಾರು 10 ಕೋಟಿ ರೂಪಾಯಿಗಳ ಯೋಜನೆಯಿದು. ಇದರಿಂದ ಸುಮಾರು 50 ಸಾವಿರ ಎಕರೆ ನೀರಾವರಿಯಾಗುವುದು. ಕಳೆದ ಆರೇಳು ವರ್ಷಗಳಿಂದ ಹಾಸನ ಜಿಲ್ಲೆಯ ಅರ್ಧ ಭಾಗದಲ್ಲಿ ಕ್ಷಾಮ ಬಂದು ಕಷ್ಟವಾಗುತ್ತಿದೆ. ಆದುದರಿಂದ ಈ ಕೆಲಸವನ್ನು ಬೇಗ ತೆಗೆದುಕೊಳ್ಳಬೇಕು. 1924 ರಲ್ಲಿ ಮದ್ರಾಸು ಮತ್ತು ಮೈಸೂರು ಸರಕಾರಗಳೊಂದಿಗೆ ಕರಾರಾಗಿತ್ತು. ಅದರಿಂದ ನಮ್ಮ ಭಾಗದಲ್ಲಿ ಯಾವ ದೊಡ್ಡ ಯೋಜನೆಯನ್ನು ಸಹ ಮಾಡಬಾರದು. ನೀರು ಸಾಕಾಗುವುದಿಲ್ಲ ಎಂದು ತಿಳಿಸಿದ್ದರು ಎಂಬ ವರ್ತಮಾನವಿದೆ. ಇದರಿಂದ ಜನರಿಗೆ ನಿರಾಸೆಯಾಗಿದೆ. ಮದ್ರಾಸು ಪ್ರಾಂತದಲ್ಲಿ ಸುಮಾರು

15 ಲಕ್ಷ ಎಕರೆ ನೀರಾವರಿಯಿದೆ, ಅಲ್ಲಿ ಎರಡುಮೂರು ಬೆಳೆ ಬತ್ತ ಇಡುವರು ; ಅದೇ ಮೈಸೂರಿನಲ್ಲಿ ಕೇವಲ ನಾಲ್ಕೈದು ಲಕ್ಷ ಎಕರೆ ಮಾತ್ರ ನೀರಾವರಿಯಿದೆ. ನಮಗೆ ಅನ್ಯಾಯ ವಾಗಿರುವುದರಿಂದ ರಾಜ್ಯದ ಹಿತದೃಷ್ಟಿಯಿಂದ ಇದರ ಬಗ್ಗೆ ಶಕ್ತಿಮೀರಿ ಪ್ರಯತ್ನಮಾಡಿ ನಮಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಕೇಂದ್ರ ಸರಕಾರದ ಅನುಮತಿಗೆ ಕಾಯದೆ ಕಾವೇರಿ ಬೇಸಿನ್ನಿನಲ್ಲಿ ಎಲ್ಲಾ ಯೋಜನೆಗಳನ್ನು ತ್ವರಿತವಾಗಿ ಕೈಕೊಳ್ಳಬೇಕು. ಇದೇ ರೀತಿಯಲ್ಲಿ ಯಗಚಿ ಯೋಜನೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಬಾರದಿದ್ದರೂ ಆ ಭಾಗದ ಜನರ ಹಿತದೃಷ್ಟಿಯಿಂದ ಅದನ್ನು ತೆಗೆದುಕೊಳ್ಳಬೇಕು.

ಇನ್ನೊಂದು ವಿಷಯ. ಆಹಾರದ ಸಗಟು ವ್ಯಾಪಾರವನ್ನು ಸರಕಾರ ವಹಿಸಿಕೊಳ್ಳುವುದಾಗಿ ತಿಳಿಸಿದ್ದಾರೆ. ಇದರ ಬಗ್ಗೆ ಒಂದು ಸಂಶಯವಿದೆ. ಈ ದೇಶದ ದೌರ್ಭಾಗ್ಯವೋ ಏನೋ ಸರಕಾರ ಯಾವುದಕ್ಕೆ ಕೈಹಾಕಿದರೂ ಸರಿಯಾಗಿ ಕೆಲಸಮಾಡುವುದಿಲ್ಲ. ಸೀಮೆಎಣ್ಣೆ ಉದಾಹರಣೆ ಇದಕ್ಕೆ ಸಾಕ್ಷಿಯಾಗಿದೆ. ಇಂದು ಸೀಮೆಎಣ್ಣೆ, ಪೆಟ್ರೋಲು ಸಿಕ್ಕುತ್ತಿಲ್ಲ. ಯಾವುದೇ ಕೆಲಸಕ್ಕೆ ಸರಕಾರ ಕೈಹಾಕಿದರೂ ಜನರಿಗೆ ಒಳ್ಳೆಯದಾಗುವುದಿಲ್ಲ. ಈ ದೇಶದ ಜನರು ತಿಳಿವಳಿಕೆ ಯಿಲ್ಲದ ಜನರು, ಏನು ಮಾಡಿದರೂ ಸುಮ್ಮನಿರುವರು, ಅನ್ಯಾಯಮಾಡಿದರೂ ಸುಮ್ಮ ನಿರುವರು ಎಂಬ ಭಾವನೆ ಇರಬಾರದು, ಇಂಥ ಭಾವನೆ ಸರಕಾರ ತಳೆದಿರುವುದು ಸೂಕ್ತವಲ್ಲ. ಹೋಲ್‌ಸೇಲ್ ಟ್ರೇಡ್ ಸರಕಾರ ವಹಿಸಿಕೊಳ್ಳಬಹುದು. ಆದರೆ ಅದನ್ನು ವಹಿಸಿಕೊಳ್ಳುವುದಕ್ಕೆ ಮೊದಲು ಪ್ರಾಮಾಣಿಕರಾದ ಅಧಿಕಾರಿಗಳೆಷ್ಟಿದ್ದಾರೆ, ಅವರಿಗೆ ಎಷ್ಟು ಮಟ್ಟಿಗೆ ದಕ್ಷತೆಯಿಂದ ನಿಸ್ಪೃಹತೆಯಿಂದ ಕೆಲಸಮಾಡಲು ಯೋಗ್ಯತೆ ಇದೆ, ಜನರ ಆಶೋತ್ತರಗಳನ್ನು ನೆರವೇರಿಸಲು ಅವರಿಗೆ ಶಕ್ತಿಯಿದೆಯೋ ಎಂದು ವಿಚಾರಮಾಡಿ ಇದಕ್ಕೆ ಕೈಹಾಕಬೇಕು. ಅದನ್ನು ಬಿಟ್ಟು ಮನಸ್ಸಿಗೆ ಬಂದಹಾಗೆ ಮಾಡುವುದಾದರೆ ತಮಗೆ ಮೆಜಾರಿಟಿಯ ಬೆಂಬಲವಿದೆ ಎಂದು ತಿಳಿದು ಏನು ಬೇಕಾದರೂ ಮಾಡಬಹುದು ಎಂಬ ಭಾವನೆಯಿಂದ ಮುಂದುವರೆಯುವುದಾದರೆ ಅದಕ್ಕಿಂತ ತಪ್ಪು ಭಾವನೆ ಬೇರೆ ಇಲ್ಲ. ಜನರು ಸರಕಾರ ಮಾಡುವ ಅವಿವೇಕ ಭ್ರಷ್ಟಾಚಾರ ಖಂಡಿಸಲು ಸಮಯ ಕಾಯುತ್ತಿದ್ದಾರೆ, ಇದಕ್ಕೆ ಹೆಚ್ಚು ಅವಕಾಶವಿರಬಾರದು. ಈಗಿನಂತೆ ಮುಂದೆ ಸಹ ಮಾಡುವುದಾದರೆ ಸರಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ರೋಡ್ ಟ್ರಾನ್ಸ್‌ಪೋರ್ಟ್ ಮುಂತಾದ ಯಾವುದೇ ಇಲಾಖೆ ನೋಡಿದರೂ ವ್ಯವಸ್ಥಿತ ರೀತಿಯಲ್ಲಿ ಕೆಲಸ ನಡೆಯುತ್ತಿಲ್ಲ. ಇದನ್ನು ಗಮನಿಸಿ ಸರಿಯಾದ ವ್ಯವಸ್ಥೆಮಾಡಬೇಕು. ರಾಜ್ಯದ ಲಕ್ಷಾಂತರ ಜನರು ಕಣ್ಣೀರಿಡುತ್ತಿದ್ದಾರೆ, ವ್ಯಥೆ ಪಡುತ್ತಿದ್ದಾರೆ. ಜನರ ಕಣ್ಣಿಗೆ ಮಣ್ಣೆರಚಲು ಸಾಧ್ಯವಿಲ್ಲ. ನೊಂದ ಮನಸ್ಸಿನಿಂದ ಇದನ್ನು ಹೇಳುತ್ತಿದ್ದೇನೆ. ಇದನ್ನು ಗಮನಿಸಿ ಜನರ ಹಿತದೃಷ್ಟಿಯಿಂದ ಒಳ್ಳೆಯ ಕೆಲಸಮಾಡಿ ಒಳ್ಳೆಯ ಹೆಸರನ್ನು ಸರಕಾರ ತೆಗೆದುಕೊಳ್ಳಬೇಕು ಎಂದು ತಿಳಿಸಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ವೈ. ಪಾಟೀಲ (ಸಿಂದಗಿ) :—ಮಾನ್ಯ ಸಭಾಧ್ಯಕ್ಷಣಿಯರೇ, ಮೇಜರ್ ಇರಿಗೇಷನ್ ಆಹಾರ ಮತ್ತು ದುಷ್ಕಾಲ ಇವು ನಮ್ಮ ವಿಜಾಪುರ ಜಿಲ್ಲೆಗೆ ಒಂದೇ ಹೆಡ್ ಇದ್ದ ಹಾಗೆ. ಏಕೆಂದರೆ ಎರಡು ದಿವಸಗಳಿಂದ ದುಷ್ಕಾಲದ ಬಗ್ಗೆ ಮಾತನಾಡುವುದು ನೋಡಿದರೆ ಅನುಮಾನವಾಗುವುದು. ಸಿಂದಗಿ ತಾಲ್ಲೂಕಿನಲ್ಲಿ ಚಿಕ್ಕ ಸಿಂದಗಿ ಎಂಬ ಒಂದು ಊರಿದೆ, ಅಲ್ಲಿ ಒಬ್ಬ ತಾಯಿ ಕೂಸಿಗಾಗಿ ಸ್ವಲ್ಪ ಹಾಲನ್ನು ತೆಗೆದಿಟ್ಟಿದ್ದಳು. ಒಬ್ಬ ಸನ್ಯಾಸಿ ಹೋಗಿ ತನಗೆ ಆಕಳಹಾಲು ಬೇಕೆಂದು ಕೇಳಿ ಮಗುವಿಗಾಗಿ ಇಟ್ಟಿದ್ದನ್ನು ಪಡೆದುಕೊಂಡು ಇದರಿಂದ ಮಗುವಿಗೆ ಹಾಲಿಲ್ಲದಂತಾಯಿತು. ಇಲ್ಲಿ ದುಷ್ಕಾಲದಮೇಲೆ ಮಾತನಾಡುವುದನ್ನು ನೋಡಿದರೆ ಅನೇಕರು ತಮ್ಮಲ್ಲಿ ದುಷ್ಕಾಲವಿದೆ ಎಂದು ಹೇಳುತ್ತಿದ್ದಾರೆ. ಇದರಲ್ಲೇನೊ ಕೃತ್ರಿಮವಿರುವಂತೆ ಕಾಣುವುದು. ಬರಗಾಲ ಕೇವಲ

ಕೆಲವು ಜಿಲ್ಲೆಗಳಲ್ಲಿದ್ದು ಅವುಗಳಿಗೆ ಹೆಚ್ಚು ಗಮನ ಕೊಡುತ್ತಿರುವಾಗ ಇತರರು ಹೇಳುವುದನ್ನು ನೋಡಿದರೆ ದುಷ್ಕಾಲ ಕಠಿಣವಾಗಿರುವ ಜಿಲ್ಲೆಗಳ ಬಗ್ಗೆ ನಿರೀಕ್ಷೆ ಮಾಡಿದ್ದ ಸಹಾಯ ದೊರೆಯು ಲಾರದೆಂಬ ಶಂಕೆ ಬರುತ್ತಿದೆ.

ಮೇಜರ್ ಇರಿಗೇಷನ್ ಬಗ್ಗೆ ಹೇಳುವುದಾದರೆ ನಾವು ಮುಂಬಯಿ ರಾಜ್ಯದಲ್ಲಿದ್ದಾಗ ವಿಜಾಪುರ ಜಿಲ್ಲೆಗೆ ಅನುಕೂಲವಾಗುವಂತೆ ಕೊಯ್ನ ಯೋಜನೆ ಮಾಡಿದರು. ಇಂಡೀ, ಸಿಂದಗಿ ತಾಲ್ಲೂಕುಗಳಿಗೆ ಅದರಿಂದ ಅನುಕೂಲವಾಗುತ್ತಿತ್ತು. ಕುರಂದವಾಡದಲ್ಲಿ ಪ್ರಾಜೆಕ್ಟ್ ಮಾಡಿದ್ದರೆ ವಿಜಾಪುರಕ್ಕೆ ಉಪಯೋಗವಾಗುತ್ತಿತ್ತು. ಆದರೆ ಸರಕಾರ ದುರುದ್ದೇಶದಿಂದ ಹಾಗೆ ಮಾಡಲಿಲ್ಲ, ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿಲ್ಲ. 1956 ನೆಯ ನವೆಂಬರಿನಲ್ಲಿ ನಾವು ಮೈಸೂರಿಗೆ ಬಂದೆವು. ಅಲ್ಲಿಂದ ಇಲ್ಲಿಯವರೆಗೆ ಮುಂಬಯಿ ಪ್ರದೇಶದಲ್ಲಿ ಕೆಲವು ಹೈದರಾಬಾದು ಪ್ರದೇಶ ದಲ್ಲಿ ಕೆಲವು ಇದ್ದುದರಿಂದ ಎರಡು ಸರಕಾರಗಳಿಗೆ ಸೇರಿದ್ದರಿಂದ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ತೆಗೆದುಕೊಂಡಿಲ್ಲ. ಹಿಂದಿನ ಸರಕಾರ ಅಪ್ಪರ್ ಕೃಷ್ಣಾಕ್ಕೆ 3 ಕೋಟಿ 25 ಲಕ್ಷ ರೂಪಾಯಿ ಖರ್ಚುಮಾಡಿತ್ತು, ನಂತರ 2 ಕೋಟಿ 59 ಲಕ್ಷ ರೂಪಾಯಿ ಖರ್ಚಾಯಿತು, ಈ ವರ್ಷ 2 ಕೋಟಿ 59 ಲಕ್ಷ ರೂಪಾಯಿ ಒದಗಿಸಿದೆ. ಈಗ ಕೇಂದ್ರದಲ್ಲೂ ರಾಜ್ಯದಲ್ಲೂ ಒಂದೇ ಪಕ್ಷದ ಸರಕಾರವಿದೆ, ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಕೆಲಸ ಪೂರ್ಣ ಮಾಡಲು ಅವಕಾಶವಿದೆ. ಡಿ.ಪಿ. ಧರ್‌ರವರು ವಿಜಾಪುರಕ್ಕೆ ಬಂದಿದ್ದಾಗ ಅಪ್ಪರ್ ಕೃಷ್ಣ ಪ್ರಾಜೆಕ್ಟನ್ನು ನ್ಯಾಷನಲ್ ಪ್ರಾಜೆಕ್ಟ್ ಎಂದು ಪರಿಗಣಿಸಬೇಕೆಂದು ಹೇಳಿದೆ. ಈ ಬಗ್ಗೆ ಇಂದಿರಾಗಾಂಧಿಯವರ ಭರವಸೆ ಏಕಿಲ್ಲ ಎಂದು ಮುಖ್ಯಮಂತ್ರಿಗಳನ್ನು ಕೇಳಿದೆ. ರಾಜ್ಯಕ್ಕೆ ಅನುಕೂಲ ಮಾಡುತ್ತಿರುವಾಗ ವಿಜಾಪುರಕ್ಕೇಕೆ ಮಾಡುತ್ತಿಲ್ಲ ? ನ್ಯಾಷನಲ್ ಪ್ರಾಜೆಕ್ಟ್ ಮಾಡುವ ಅವಶ್ಯಕತೆಯಿಲ್ಲವೆಂದು ಮೊನ್ನೆ ಧರ್‌ರವರು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಈ ಪ್ರಾಜೆಕ್ಟಿನ ಕೆಲಸ ತೆಗೆದುಕೊಂಡು ಪೂರ್ಣ ಮಾಡುವ ಬಗ್ಗೆ ಮನಸ್ಸುಮಾಡಬೇಕೆಂದು ಪ್ರಾರ್ಥನೆಮಾಡುತ್ತೇನೆ. ಇರಿಗೇಷನ್ ಕಮಿಷನ್ ಈ ಬಗ್ಗೆ ಏನು ರೊಕ್ಕ ಕೊಡುವುದಾಗಿ ವರದಿಯಾಗಿದೆ ಅದರ ಆಧಾರದ ಮೇಲೆ ಭಾರತ ಸರಕಾರದಲ್ಲಿ ಒತ್ತಾಯಮಾಡಬೇಕು. ಹಾಗೆ ಮಾಡಿ ಈ ಯೋಜನೆ ಪೂರ್ಣ ಮಾಡಬೇಕು. ಹಾಗೆ ಮಾಡಲು ಸಾಧ್ಯವಾಗದಿದ್ದರೆ ವಿಜಾಪುರ ಜಿಲ್ಲೆಯಲ್ಲಿ ವಿದ್ಯಾಭ್ಯಾಸ, ಪಬ್ಲಿಕ್ ವರ್ಕ್ಸ್, ಪೋಲೀಸು ಮುಂತಾದ ಇಲಾಖೆಗಳಿಗೆ ಮಾಡುವ ಖರ್ಚನ್ನು ನಿಲ್ಲಿಸಿ ಅದನ್ನೆಲ್ಲಾ ಬಂದುಮಾಡಿ ಬೇಕಾದರೆ ತೆರಿಗೆಯನ್ನೂ ಹೆಚ್ಚಾಗಿ ಹಾಕಿ 30 ಕೋಟಿ ರೂಪಾಯಿಗೆ ಬೇಕಾದರೂ ಯೋಜನೆಮಾಡಿ ಯೋಜನೆ ಕೆಲಸ ಮುಗಿಸಿ. ನಮ್ಮ ಜಿಲ್ಲೆಯವರು ದಡ್ಡರಾದರೂ ಪರವಾಗಿಲ್ಲ, ಅಲ್ಲಿಗೆ ರಸ್ತೆ ಇಲ್ಲದಿದ್ದರೂ ಸರಿ, ಈ ಯೋಜನೆ ಸಲುವಾಗಿ ಏನಾದರೂ ಯೋಚನೆಮಾಡಿ ಹೇಗಾದರೂ ಮಾಡಿ ಪೂರ್ಣಮಾಡಬೇಕು. ಇದರ ಬಗ್ಗೆ ಹೇಗೆ ಮಾಡುವಿರಿ ತಮ್ಮ ಧೋರಣೆಯೇನು ಎಂಬುದನ್ನು ಸ್ಪಷ್ಟವಾಗಿ ಹೇಳಿ. 1896 ರಿಂದ ಮುಂಬಯಿ ಗೆಜೆಟ್ ನೋಡಿ, ವಿಜಾಪುರ ಜಿಲ್ಲೆಯಲ್ಲಿ ದುಷ್ಕಾಲ ಕಳೆದ 400–500 ವರ್ಷಗಳಿಂದ ಆಗಾಗ್ಯೆ ಬರುತ್ತಲೇ ಇದೆ. ನಾವು ಬ್ರಿಟಿಷರ ಕಾಲದಲ್ಲಿ ಗುಲಾಮಗಿರಿಯಲ್ಲಿದ್ದಾಗ ಆ ಕೆಲಸವನ್ನು ಮಾಡಿದ್ದೇವೆ. ಇಂದು ಪ್ರಜಾಪ್ರಭುತ್ವದಲ್ಲಿ 200 ಕೋಟಿ ರೂಪಾಯಿಯ ಪ್ರಾಜೆಕ್ಟ್ ಆಗಬೇಕಾದ ಕಡೆ 2 ಕೋಟಿ $2\frac{1}{2}$ ಕೋಟಿ ರೂಪಾಯಿ ಕೊಟ್ಟು ಚಿಕ್ಕ ಮಕ್ಕಳಿಗೆ ಪೆಪ್ಪರ್‌ಮೆಂಟ್ ಕೊಟ್ಟು ರಮಿಸುವ ರೀತಿಯಲ್ಲಿ ಮಾಡಿದರೆ ಬಿಜಾಪುರ ಜಿಲ್ಲೆಯ ಜನತೆ ಸುಮ್ಮನೆ ಇರಲಿಕ್ಕಿಲ್ಲ. ಶ್ರೀಮತಿ ಇಂದಿರಾಗಾಂಧಿಯ ವರು ಬಿಜಾಪುರ ಜಿಲ್ಲೆಗೆ ಬಂದಾಗ, ಅವರನ್ನು ಬಂಗಾರದಲ್ಲಿ ತೂಗುವ ಕಾಲಕ್ಕೆ ಬಡವರು ಅವರ ಕೈಯ್ಯಲ್ಲಿದ್ದ ಬಳೆಗಳನ್ನು, ಮಂಗಳ ಸೂತ್ರಗಳನ್ನು ಮಾರಿದ್ದಾರೆ. ಅತೀ ಕಷ್ಟದಲ್ಲಿ ಬಂಗಾರದಿಂದ ತೂಗಿದ್ದಾರೆ. ಆದ್ದರಿಂದ ಸರ್ಕಾರಕ್ಕೆ ನಾನು ಪ್ರಾರ್ಥನೆ ಮಾಡುತ್ತಾ ಇದ್ದೇನೆ,

ಅನ್ನದ ಸಲುವಾಗಿ, ತೊಂದರೆ ಇದೆ, ಅಲ್ಲಿ ಪ್ರಾಣ ಉಳಿಸುವ ಕೆಲಸಮಾಡಿ. ಆ ಭಾಗಕ್ಕೆ ಮಲತಾಯಿ ಧೋರಣೆಯನ್ನು ತಾಳಬೇಡಿ. ಸರ್ಕಾರದ ಧೋರಣೆ ಏನು ಇದೆ ಅದನ್ನು ಸ್ಪಷ್ಟವಾಗಿ ಇಲ್ಲಿ ಹೇಳಬೇಕು. ಅಲ್ಲಿ ಮಾಡಬೇಕಾದಂಥ ಕೃಷ್ಣ ಯೋಜನೆಯನ್ನು ಎಂದು ಮುಗಿಸುತ್ತೀರಿ ಎನ್ನುವುದನ್ನು ಸ್ಪಷ್ಟವಾದ ಮಾತಿನಲ್ಲಿ ಹೇಳಬೇಕು. ಶ್ರೀಮತಿ ಇಂದಿರಾ ಗಾಂಧಿಯವರು ನಮ್ಮ ಜಿಲ್ಲೆಗೆ ಬಂದಾಗ ಮುಖ್ಯ ಮಂತ್ರಿಗಳು ಇದ್ದರು, ಮಧ್ಯಾಹ್ನ ಎರಡು ಗಂಟೆ. ಅಲ್ಲಿ ಮೀಟಿಂಗ್ ಮಾಡಿದರು, ಅದಕ್ಕೆ ಸುಮಾರು ನಾಲ್ಕು ಸಾವಿರ ಜನ ಬಂದಿದ್ದರು. ಆ ಜನ ಚಾಮುಂಡೇಶ್ವರಿ ಅಥವಾ ಯಲ್ಲಮ್ಮನನ್ನು ನೋಡಲಿಕ್ಕೆ ಬಂದಿರಲಿಲ್ಲ. ಬಿಸಿಲಿನಲ್ಲಿ, ಅಪ್ಪರ್ ಕೃಷ್ಣ ಪ್ರಾಜೆಕ್ಟನ್ನು ನ್ಯಾಷನಲ್ ಪ್ರಾಜೆಕ್ಟ್ ಎಂದು ಡಿಕ್ಲೇರ್ ಮಾಡುತ್ತೀರಾ ಎಂದು ಕೇಳಲಿಕ್ಕೆ ಬಂದಿದ್ದರು. ಇದರ ಬಗ್ಗೆ ಬಿ. ಸಿ. ಅಂಗಡಿಯವರಿಗೆ ಸಾಕಷ್ಟು ಮಾಹಿತಿ ಇದೆ, ಬಾಳೆಕುಂದ್ರಿ ಸಾಹೇಬರಿಗೂ ಗೊತ್ತಿದೆ. ಆದ್ದರಿಂದ ಅಲ್ಲಿ ಅಪ್ಪರ್ ಕೃಷ್ಣ ಪ್ರಾಜೆಕ್ಟನ್ನು ತೀವ್ರ ವಾಗಿ ಮಾಡ್ರಿ. ಎಲ್ಲಿ ನೀರು ಇದೆ ಅದನ್ನು ಉಪಯೋಗಮಾಡುವುದಕ್ಕೆ ಸಹಾಯ ಮಾಡಿ. ಭಾರತ ಸರ್ಕಾರ ಆರ್ ಕಾಂಗ್ರೆಸ್ ಸರ್ಕಾರ ಇದೆ. ಮಹಾರಾಷ್ಟ್ರದಲ್ಲಿಯೂ ಆರ್ ಕಾಂಗ್ರೆಸ್ ಸರ್ಕಾರ ಇದೆ. ಇವತ್ತು ಶ್ರೀಮತಿ ಇಂದಿರಾಗಾಂಧಿಯವರ ಮಾತು ಅವರು ಕೇಳುತ್ತಿದ್ದಾರೆ. ಕೊಯಿನಾದಲ್ಲಿ ಮಹಾರಾಷ್ಟ್ರದವರು ವಿದ್ಯುಚ್ಛಕ್ತಿ ಉತ್ಪಾದನೆ ಮಾಡುತ್ತಿದ್ದಾರೆ. ಅಲ್ಲಿಂದ ಇಂಡೀ, ಸಿಂದ್ಗಿ ಭಾಗಕ್ಕೆ ನೀರು ಸೌಲಭ್ಯ ಮಾಡಿಕೊಡಿ. ದೊಂಡ್‌ರಿವರ್ ಸ್ಕೀಮ್ ತೀವ್ರ ಮಾಡಿ ಈ ಪ್ರದೇಶಕ್ಕೆ ನೀರು ಒದಗಿಸಿ. ಅಪ್ಪರ್ ಕೃಷ್ಣ ಎಂದು ಮುಗಿಸುತ್ತೀರಿ ಹೇಳಿ. ಆಹಾರದ ಸಲುವಾಗಿ ಒಂದು ಮಾತು ಹೇಳಿದರೆ ಸಾಕು ಎಂದು ಅನ್ನಿಸುತ್ತದೆ. ಇನ್ನು ಮೂರು ದಿವಸದಲ್ಲಿ ಸೆಷನ್ ಮುಗಿಯುತ್ತದೆ. ಅಲ್ಲಿ ಸೀಮೆಎಣ್ಣೆ ಇಲ್ಲ, ಸಕ್ಕರೆ ಇಲ್ಲ, ಸಕ್ಕರೆ ಇಲ್ಲದಿದ್ದರೆ ಸಾಯುವುದಿಲ್ಲ. ಉಳಿದವರಿಗೆ ಅನ್ನ ಕೊಡದಿದ್ದರೂ ಕೂಲಿಗಾರರಿಗೆ, ಹೆಣ್ಣು ಮಕ್ಕಳಿಗೆ ಆಹಾರ ಒದಗಿಸಿ. ಕೂಲಿಗಾರರು ಆಹಾರ ಇಲ್ಲದೆ ಹೇಗೆ ದುಡಿಯಬೇಕು ? ಕೂಲಿಯನ್ನು ಹಣದ ರೂಪದಲ್ಲಿ ಕೊಟ್ಟರೆ ಅವರಿಗೆ ಧಾನ್ಯ ಎಲ್ಲಿ ಸಿಗಬೇಕು. ಲೈಸನ್ಸು ಕೊಟ್ಟು ಅಂಗಡಿಗಳನ್ನು ತೆಗೆದಿರುವುದು ಸರಿ. ಅವರಿಂದ ಧಾನ್ಯ ವಿತರಣೆ ಆಗುವುದಿಲ್ಲ. ಅದಕ್ಕಾಗಿ ಸರ್ಕಾರಿ ಶಾಪುಗಳನ್ನು ತೆಗೆಯಬೇಕು ಎಂದು ಹೇಳುತ್ತಿದ್ದೇನೆ. ಕೊಯಿನ ಯೋಜನೆ ಕಕ್ಷೆಯಲ್ಲಿ ಬರುವ ಒಂದು ಲಕ್ಷ ಎಕರೆ ಭೂಮಿ ಯನ್ನು ಇಂಡಿಯಲ್ಲಿ ಕಿರ್ದಿ ಮಾಡಿ, ಬುಲ್‌ಡೋಜರ್ ಹಚ್ಚಿ ನೀರಾವರಿಯಾಗಿ ಯೋಗ್ಯ ಮಾಡಿರಿ, ಭಾವಿ ತೆಗೆಯುವ ಬಗ್ಗೆ ವ್ಯವಸ್ಥೆ ಮಾಡಿರಿ; ಅಪ್ಪರ್ ಕೃಷ್ಣ ಕೆನಾಲ್ ಕಾರ್ಯಕ್ಷೇತ್ರ ದಲ್ಲಿ ಬರಲಾರದಂಥ ಭೂಮಿ ಇದೆ. ಅಲ್ಲಿ ಸಾಯಿಲ್ ಕನ್‌ಸರ್ವೇಷನ್ ವರ್ಕ್ ಮಾಡಿ. ಆಜೂಬಾಜೂ ಗ್ರಾಮಗಳಿಗೆ ನೀರಾವರಿ ಆಗುತ್ತದೆ.

ಸರ್ಕಾರಿ ಅಧಿಕಾರಿಗಳು ಬಹಳ ಯೋಗ್ಯರು ಇದ್ದಾರೆ ಎನ್ನುವುದನ್ನು ಎಷ್ಟು ವರ್ಣಿಸಿದರೂ ಕಡಿಮೆ. ಶಕ್ತಿಮೀರಿ ಕೆಲಸ ಮಾಡಿದ್ದಾರೆ. ಸಾಯಿಲ್ ಕನ್‌ಸರ್ವೇಷನ್ ಕೆಲಸ ಪ್ರತಿಯೊಂದು ಕಡೆ ಮಾಡಿ. ಹಿಪ್ಪರಗಿ ಬೇರೇಜ್ ಏನು ಇದೆ ಅದನ್ನು ಮಂಜೂರು ಮಾಡಿದ್ದಾರೆ, ಅದಕ್ಕೆ ನಮ್ಮ ಮಂತ್ರಿಗಳು ಅಭಿನಂದನಾರ್ಹರು. ಕರ್ನಾಟಕ ಎಂದು ಹೆಸರು ಬರುವಂಥ ಕೆಲಸ ಮಾಡಿದರು. ಅದಕ್ಕೆ ಆನಂದಪಡುತ್ತೇವೆ. ಡೀಸಿಲ್ಟಿಂಗ್ ಆಫ್ ಓಲ್ಡ್ ವೆಲ್ಸ್ ಸಲುವಾಗಿ ರೊಕ್ಕ ಮಂಜೂರು ಮಾಡಿದ್ದಾರೆ. ಅದಕ್ಕೆ ಮಂತ್ರಿಗಳನ್ನು ಎಷ್ಟು ಅಭಿನಂದಿಸಿದರೂ ಕಡಿಮೆ. ತಮ್ಮ ಪ್ರಶ್ನೆ ತಿಳಿದುಕೊಂಡರೆ ....

ಎರಡನೇಯದು ಜೋಳದ ಧಾರಣೆ ಏರಿಸಿದರೆ ಎಲ್ಲರೂ ಜೋಳ ಬೆಳೆಯುತ್ತಾರೆ. ಆಗ ಆಹಾರದ ಕೊರತೆ ತಪ್ಪುತ್ತದೆ.

ಕೊನೆಯದಾಗಿ, ಕೊಯಿನಾ ಯೋಜನೆ ಬಗ್ಗೆ ದೇವರಾಜ ಅರಸರಲ್ಲಿ ನಂಬಿಕೆ ಇದೆ. ನೀವು ಶ್ರೀಮತಿ ಇಂದಿರಾಗಾಂಧಿಯವರಿಗೆ ಹೇಳಿ ಅಪ್ಪರ್ ಕೃಷ್ಣ ಮತ್ತು ಕೊಯಿನಾ ಪ್ರಾಜೆಕ್ಟ್‌ಗಳನ್ನು ಮಾಡಿಸಿ. ಅಪ್ಪರ್ ಕೃಷ್ಣ ನ್ಯಾಷನಲ್ ಪ್ರಾಜೆಕ್ಟ್ ಎಂದು ಡಿಕ್ಲೇರ್ ಆಗಬೇಕು.

ಕೊನೆಯದಾಗಿ, ಅಧ್ಯಕ್ಷಿಣಿಯರ ಮುಖಾಂತರ ಪ್ರಾರ್ಥನೆ ಮಾಡುವುದು ಏನೆಂದರೆ, ತಾವು ಮಿನಿಸ್ಟರು ಎಲ್ಲರೂ ಹೆಣ್ಣುಮಕ್ಕಳು ಹೋಗಿ ಫುಡ್ ಪ್ರಾಬ್ಲಂ ಬಿಡಿಸಿ ಬನ್ನಿ. ಕೂಲಿಗಾರರಿಗೆ ಅನ್ನ ಸಿಗಬೇಕು. ಈ ಅಪ್ಪರ್ ಕೃಷ್ಣ ನ್ಯಾಷನಲ್ ಪ್ರಾಜೆಕ್ಟ್ ಆಗಬೇಕು. ಭೂಮಿ ಲೆವಲಿಂಗ್ ಮತ್ತು ಕಿರ್ದಿ ಆಗಬೇಕು. ಸಾಯಿಲ್ ಕನ್‌ಸರ್ವೇಷನ್ ಆಗಬೇಕು. ಜೋಳ ಬೆಳೆಯುವುದಕ್ಕೆ ಒಂದು ಧಾರಣೆ ಗ್ಯಾರಂಟಿ ಆಗಬೇಕು. ಡೀಸಿಲ್ಟಿಂಗ್ ಆಫ್ ಓಲ್ಡ್ ವೆಲ್ಸ್ ಆಗಬೇಕು. ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷಿಣಿಯರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ) :—ಅಧ್ಯಕ್ಷರು ನನ್ನನ್ನು ಜಿರೋ ಅವರ್ ಮೆಂಬರ್ ಆಗಿ ಮಾಡಿದ್ದಾರೆ. ಬೇರೆ ಕಾಲದಲ್ಲಿ ಮಾತನಾಡಲು ನನಗೆ ಸಮಯ ಕೊಡುತ್ತಿಲ್ಲ.

ಅಧ್ಯಕ್ಷರು :—ತಾವು ಈ ರೀತಿ ಹೇಳುವುದು ನ್ಯಾಯವೇ ? ಧರ್ಮವೇ ? ಜಿರೋ ಅವರ್ ನಾನು ಕ್ರಿಯೇಟ್ ಮಾಡಿದನೇ ? ನೀವು ಕ್ರಿಯೇಟ್ ಮಾಡಿಕೊಂಡಿದ್ದೀರಿ ಅದಕ್ಕೆ ನಾನು ಏನು ಮಾಡುವುದಕ್ಕೆ ಆಗುತ್ತದೆ ?

Sri D. DEVARAJ URS (Chief Minister).—We have also got to take sufficient time, as we want to give replies to the points. In the event of other items not coming up nobody can be held responsible. Everything else will have to be deleted. You may take another day. You want everything and you also want your own time. It becomes very difficult for everybody to function. I hope the Hon. the Leader of the Opposition will appreciate that. You cannot have such time that you want on every demand.

MADAM SPEAKER.—For every point all the Members expect replies. How is it possible ?

Sri D. DEVARAJ URS.—Let us take another day for our reply. The other demands will have to be guillotined and passed, that is all. They must be prepared for it. You cannot have both ways. It is no argument to say that, so many people have not spoken. Let the Leader of the Opposition choose the demands, let them take as much time as they want. Then the rest of the demands will go.

ಶ್ರೀ ವಾಟಾಳ್ ನಾಗರಾಜ್ :—ನನಗೆ ಮಾತನಾಡಲು 15 ನಿಮಿಷಗಳು ಕೊಟ್ಟರೆ ಸಾಕು.

Sri D. DEVARAJ URS : Let Mr. Nagaraj also speak. Let not the Hon. Members blame us tomorrow. Why should he feel offended ? Let him also speak.

MADAM SPEAKER : I am not here to offend anybody.

ಶ್ರೀ ವಾಟಾಳ್ ನಾಗರಾಜ್ :—4-5 ಬೇಡಿಕೆಗಳನ್ನು ಒಟ್ಟಿಗೆ ಸೇರಿಸಿದ್ದೀರಿ. ಆಹಾರ ಧಾನ್ಯಗಳ ಬಗ್ಗೆ ಒಂದು ದಿವಸ ಇಟ್ಟಿದ್ದರೆ ಅದರ ಬಗ್ಗೆ ಬೇಕಾದಷ್ಟು ಮಾತನಾಡುವುದಕ್ಕೆ ಅವಕಾಶ ಸಿಗುತ್ತಿತ್ತು. ಇವತ್ತು ದೇಶದಲ್ಲಿ ಯಾವತ್ತು ಬಾರದೇ ಇದ್ದಂಥ ಪರಿಸ್ಥಿತಿ ಒದಗಿದೆ. ದೇಶದಲ್ಲಿ ಅದರಲ್ಲೂ ನಮ್ಮ ರಾಜ್ಯದಲ್ಲಿ ಹಿಂದೆಂದೂ ಕಾಣದಂಥ ಪರಿಸ್ಥಿತಿ ಒದಗಿದೆ. ನನಗನ್ನಿಸುತ್ತದೆ ಹೆಂಗಸರು ಅಧಿಕಾರ ವಹಿಸಿಕೊಂಡ ಮೇಲೆ ಈ ತರಹ ಆಯಿತೇ ಎಂದು ನನಗೆ ಭಯ. ಆದರೂ ಅವರ ಬಗ್ಗೆ ಅನುಕಂಪ ಇದೆ. ಅವರು ಸರಿಪಡಿಸುತ್ತಾರೆಂಬ ಧೈರ್ಯ ಇತ್ತು. ಹಿಂದಿನ ಕಾಲದಲ್ಲಿ ಹೇಳುತ್ತಿದ್ದರು ಕೊನೆಗೆ ಏನೂ ಸಿಗದಿದ್ದರೂ ಉಪ್ಪಾದರೂ ಸಿಗುತ್ತದೆಂದು ಹೇಳುತ್ತಿದ್ದರು, ಅದೂ ಸಿಗದೇ ಇರುವ ಕಾಲ ಬರುತ್ತಿದೆ. ಅನ್ನಕ್ಕೆ ಅಭಾವ, ಆಹಾರಕ್ಕೆ ಅಭಾವ, ಸೌದೆಗೆ ಅಭಾವ ಎಲ್ಲದಕ್ಕೂ ಅಭಾವ ಇರುವಾಗ ಇವತ್ತು ಸುಲಭವಾಗಿ ಸಿಕ್ಕತಕ್ಕದ್ದು ಯಾವುದು ? ದೇಶದಲ್ಲಿ ನಿಮ್ಮ ಘೋಷಣೆ ಮಂತ್ರಿಗಳ ಘೋಷಣೆ, ಸಮಾಜವಾದ ಘೋಷಣೆ, ಬಹಳ ಸುಲಭವಾಗಿ ದೊರೆಯುತ್ತದೆ. ಪತ್ರಿಕೆಗಳಲ್ಲಿ ಓದಿದ್ದೇನೆ ಶಾಸನಸಭೆಗಳಲ್ಲಿ ಮಂತ್ರಿಗಳು ಮಾಡುವುದು, ಹೊರಗಡೆ ಅವರು ಮಾಡುವುದು ಬಹಳ ಸುಲಭವಾಗಿ ದೊರೆಯುತ್ತದೆ. ಶ್ರೀಮತಿ ಇಂದಿರಾ ಗಾಂಧಿಯವರ ಆಡಳಿತದಲ್ಲಿ ಜನರೆಲ್ಲರೂ ದೇಶದಲ್ಲಿ ಸಮೃದ್ಧಿಯಿಂದ ಇರಬೇಕು ಎಂದು ಉದ್ದೇಶ ಇಟ್ಟುಕೊಂಡಿದ್ದರು. ಅದು ಏನು ಆಗಿದೆ ಎಂದರೆ ಗಾಳಿಯ ಸೇವನೆಯನ್ನು ಮಾಡಿಕೊಂಡು ಇರಬೇಕೇ ಹೊರತು ಅನ್ನ ಉಂಡುಕೊಂಡು ಇರಬೇಕಾಗಿಲ್ಲ. ದೀಪ ಹಚ್ಚಿಕೊಂಡು ಇರಬೇಕಾಗಿಲ್ಲ. ಇವತ್ತು ಇರತಕ್ಕ ಪರಿಸ್ಥಿತಿಯಲ್ಲಿ ಗಾಳಿ ಸೇವನೆಯನ್ನು ಮಾಡಿ ಬದುಕಬೇಕಾಗಿದೆ. ಮಾನ್ಯ ಸದಸ್ಯರೊಬ್ಬರು ಹೇಳಿದರು ಬರಗಾಲ ಪರಿಸ್ಥಿತಿಯಿಂದ ಆಹಾರವಿಲ್ಲ ಅನ್ನವಿಲ್ಲ, ಗೋಧಿಯಿಲ್ಲ, ಅಕ್ಕಿಯಿಲ್ಲ, ಇದೆ ಪರಿಸ್ಥಿತೀ ಬೇರೆ ಯಾವುದಾದರೂ ರಾಜ್ಯದಲ್ಲಿ ನಡೆದಿದ್ದರೆ ಎಷ್ಟೋ ಅನೇಕ ದುರಂತಗಳು ಆಗುತ್ತಿತ್ತು. ಕರ್ನಾಟಕ ಜನ ಬಹುಶಃ ನನಗನ್ನಿಸುತ್ತದೆ ಸೌಮ್ಯಜನ.

ಶ್ರೀ ಎ. ಎ. ದೇಸಾಯಿ (ಅಥಣಿ) :—ಮಹಾರಾಷ್ಟ್ರ ಪೇಪರ್ ಓದಿರಬಹುದು. ಮಹಾರಾಷ್ಟ್ರದಲ್ಲಿ ಗೋಲಿಬಾರು ಆಗಿದೆ.

ಶ್ರೀ ವಾಟಾಳ್ ನಾಗರಾಜ್ :—ಮಹಾರಾಷ್ಟ್ರದಲ್ಲಿ ಲೂಟಿ ಮಾಡುವುದಕ್ಕೆ ಹೋಗಿದ್ದಾರೆ. ಆ ಪ್ರವೃತ್ತಿ ನಮ್ಮ ಜನಕ್ಕೆ ಬಂದಿಲ್ಲ ನೀವು ಅದು ಬರಬೇಕು ಎಂದು ಹೇಳುತ್ತೀರಿ. ಅದು ಇನ್ನು ಬಂದಿಲ್ಲ ನನಗನ್ನಿಸುತ್ತದೆ ನಿಮ್ಮ ಆಹಾರ ಧಾನ್ಯಗಳನ್ನು ಸಗಟು ವ್ಯಾಪಾರವನ್ನು ಸಂಪೂರ್ಣವಾಗಿ ಸರ್ಕಾರ ವಹಿಸಿಕೊಂಡು ಹಂಚತಕ್ಕ ವ್ಯವಸ್ಥೆ ಮಾಡುವುದಕ್ಕೆ ಹೊರಟಿದ್ದಾರೆ ಇದನ್ನು ಮನಸಾರ ಸ್ವಾಗತಿಸುತ್ತೇನೆ. ಅವರು ತತ್ವದ ತಳಹದಿಯ ಮೇಲೆ ಹೊರಟಿದ್ದಾರೆ.

ಆದರೆ ಇದನ್ನು ಹಂಚಿಕೆ ಮಾಡತಕ್ಕಂಥ ಕಾರ್ಯ ವಿಧಾನದಲ್ಲಿ ಅನೇಕ ಎಡುರು ತೊಡರುಗಳು ಇವೆ. ಆ ಬಗ್ಗೆ ನೀವು ಸಂಪೂರ್ಣವಾಗಿ ವಿವೇಚನೆ ಮಾಡದೇ ಇದ್ದರೆ ಬಹುಶಃ ತಮ್ಮ ಅಧಿಕಾರಕ್ಕೂ ಸಂಚಕಾರ ಬರುತ್ತದೆ ಎಂದು ಹೇಳುತ್ತೇನೆ. ತಮ್ಮ ಪಕ್ಷದ ಹಿತದೃಷ್ಟಿಯನ್ನು ಇಟ್ಟುಕೊಂಡು ತಮ್ಮ ಪಕ್ಷದ ಜನರಿಗೆ ಆದ್ಯತೆ ನೀಡಿದರೆ ಅದರಿಂದ ಗುರುತರವಾದ ಪರಿಣಾಮ ವಾಗುತ್ತದೆ. ಆದುದರಿಂದ ಇದರ ಬಗ್ಗೆ ಹಂಚಿಕೆ ವ್ಯವಸ್ಥೆ ಸರಿಯಾಗಿ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ತಾವು ಗೋಧಿ ವ್ಯಾಗನ್‌ನಲ್ಲಿ ಬರುತ್ತದೆ, ಬರುತ್ತದೆ ಎಂದು ಹೇಳಿದಿರಿ. ಸುಮಾರು ಒಂದು ವಾರ ಆಯಿತು. ಇನ್ನೂ ಬಂದಿಲ್ಲ. ಜನಗಳಿಗೆ ಇನ್ನೂ ಗೋಧಿ ಸಿಕ್ಕಿಲ್ಲ. ಈವೊತ್ತಿನ ದಿವಸ ನಾನು ಹೇಳುತ್ತೇನೆ ಹೊಟ್ಟೆ ಹಸುವನ್ನು ತಾಳಲಾರದೆ ಇದ್ದಂಥ ಜನ ಈವೊತ್ತು ಯಾವ ಲೀಡರ್ ಮಾತನ್ನೂ ಕೇಳುವುದಿಲ್ಲ. ಪಾರ್ಟಿ ಮಾತನ್ನು ಕೇಳುವುದಿಲ್ಲ, ಅಲ್ಲದೆ ಅವರು ರಸ್ತೆಗಳಲ್ಲಿ ಬಂದು ತಲೆ ತೆಗೆಯುವ ಮಟ್ಟಕ್ಕೆ ಬಂದಿದ್ದಾರೆ. ಅಲ್ಲಿಯವರೆಗೆ ಹೋಗಬೇಡಿ. ಕೊನೆಗೆ ತಲೆ ತೆಗೆದ ಮೇಲೆ ದಹನ ಕಾರ್ಯಕ್ಕಾದರೂ ಒಂದಿಷ್ಟು ಸೀಮೆಯೆಣ್ಣೆ ಇಡಿ. ನಂತರ ನಮ್ಮ ಹಿಂದೂಶಾಸ್ತ್ರದ ಪ್ರಕಾರ ಧಾರ್ಮಿಕ ಕಾರ್ಯಕ್ಕಾದರೂ ಒಂದಿಷ್ಟು ಅಕ್ಕಿಕಾಳು ಇಡಿ. ಈ ದೇಶದಲ್ಲಿ ಇಂತಹ ಭಯಂಕರ ವಾದ ಜ್ವಾಲೆ ಇದೆ. ಮಾತೆತ್ತಿದರೆ ಜನ ನಿಮ್ಮ ಘೋಷಣೆ ಕೇಳಿಕೊಂಡು ಕೂತುಕೊಳ್ಳುವುದ ಕ್ಕಾಗುವುದಿಲ್ಲ; ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಪ್ರತಿನಿತ್ಯವೂ ಈ ಬಗ್ಗೆ ಪೇಪರ್‌ನಲ್ಲಿ ಬರುತ್ತಿದೆ. ಈವೊತ್ತಿನ ಪೇಪರ್‌ನಲ್ಲಿ ಬೆಟ್ಟದಪುರದಲ್ಲಿ ಸೀಮೆಯೆಣ್ಣೆ ಲೀಟರಿಗೆ 3 ರೂಪಾಯಿ, ಕೋಡಂಬಳ್ಳಿಯಲ್ಲಿ ಲೀಟರಿಗೆ 3 ರೂಪಾಯಿ, ಇನ್ನೊಂದು ಕಡೆ $2\frac{1}{2}$ ರೂಪಾಯಿ ಮತ್ತು ಮೈಸೂರಿನಲ್ಲಿ ಸೀಮೆಯೆಣ್ಣೆಗೆ ಅಭಾವ ಈ ರೀತಿ ಬಂದಿದೆ. ಆದರೆ ಒಂದು ಮಾತ್ರ ಅಭಾವ ಇಲ್ಲ. ಅದು ಯಾವುದೆಂದರೆ ನಿಮ್ಮ ಭಾಷಣಗಳ ಘೋಷಣೆಗಳು. ಈ ಬಗ್ಗೆ ಯಾವರೀತಿಯ ಒಂದು ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ ಎಂದು ನನ್ನ ಸ್ಪಷ್ಟ ಅಭಿಪ್ರಾಯ. ಇನ್ನು ಮುಂದಾದರೂ ಕೂಡ ನೀವು ಹೇಳಿದ ರೀತಿಯಲ್ಲಾದರೂ ಕಾರ್ಯಕ್ರಮ ತೆಗೆದುಕೊಂಡು ಕಾರ್ಯರೂಪಕ್ಕೆ ತನ್ನಿ. ಅದಿಲ್ಲದೇ ಇದೇ ರೀತಿ ಪರಿಸ್ಥಿತಿ ಮುಂದುವರೆಯುತ್ತಾ ಹೋದರೆ ರಾಷ್ಟ್ರದ ಇತರ ಕಡೆಗಳಲ್ಲಿ ಆಗುತ್ತಾ ಇರುವಂತೆ ಇಲ್ಲಿಯೂ ಜನರು ದಂಗೆ ಏಳುತ್ತಾರೆ. ಆ ಜನಗಳನ್ನು ದಮನ ಮಾಡುವುದಕ್ಕೆ ನಿಮ್ಮ ಅಧಿಕಾರಿಗಳು ಸಾಲು ವುದಿಲ್ಲ.

ಶ್ರೀಮತಿ ಇ. ಇ. ವಾಜ್ :— ತಾವು ಪದೇ ಪದೇ ಈ ರೀತಿ ಹೇಳಿದರೆ ಜನಗಳಿಗೆ ನೀವೇ ಕಲಿಸಿ ಕೊಟ್ಟಂತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :—ಈಗ ನಿಮ್ಮ ನೀತಿ ಏನಾಗಿದೆ ಎಂದರೆ ಮಹಾರಾಷ್ಟ್ರ ತೆಗೆದು ಕೊಳ್ಳಿ, ನಾಸಿಕ್ ತೆಗೆದುಕೊಳ್ಳಿ ಅಲ್ಲಿ ಏನಾಗಿದೆ ನೋಡಿ.

ಶ್ರೀ ಹೆಚ್. ಡಿ. ದೇವೇಗೌಡ :—ವಾಟಾಳ್ ನಾಗರಾಜ್ ನಾಗಪುರಕ್ಕೆ ಹೋಗಿ ಅಲ್ಲಿನ ಜನರಿಗೆ ಕಲಿಸಿದ್ದಾರೇನು ?

ಶ್ರೀ ವಾಟಾಳ್ ನಾಗರಾಜ್ :—ನಿಮ್ಮ ವೇದಾಂತವನ್ನು ಈವೊತ್ತು ಯಾರೂ ಕೇಳುವುದಿಲ್ಲ. ಮತ್ತು ಅವರು ಯಾರ ಉಪದೇಶವನ್ನೂ ಕೇಳುವುದಿಲ್ಲ. ಕೊನೆಗೆ ಅವರಿಗೆ ಸಮಾಜವೂ ಬೇಕಾಗಿಲ್ಲ. ರಾಜ್ಯವೂ ಬೇಕಾಗಿಲ್ಲ ಎನ್ನುವ ಮಟ್ಟಕ್ಕೆ ಬರುತ್ತಾರೆ. ಆದುದರಿಂದ ನಿಮ್ಮ ವೈಫಲ್ಯತೆಯನ್ನು ಸಂಪೂರ್ಣವಾಗಿ ಕಾರ್ಯರೂಪದಲ್ಲಿ ತರಬೇಕು. ಇದನ್ನು ನಿರ್ವಹಿಸದೆ,

ಹೋದರೆ ಕಷ್ಟವಾಗುತ್ತದೆ. ಎಷ್ಟು ಜನ ಮಂತ್ರಿಗಳ ಮನೆಯವರು ಸೀಮೆಯೆಣ್ಣೆ ಸೀಶೆ 'ಹಿಡಿದುಕೊಂಡು ಅಂಗಡಿಗೆ ಹೋಗಿದ್ದಾರೆ, ಎಷ್ಟು ಜನ ರೇಷನ್ ಕಾರ್ಡ್ ತೆಗೆದುಕೊಂಡು ಬ್ಯಾಗ್ ಹಿಡಿದುಕೊಂಡು ಅಂಗಡಿಗೆ ಹೋಗಿದ್ದಾರೆ. ಈವೊತ್ತಿನ ದಿವಸ ರೇಷನ್ ಕಾರ್ಡ್ ಪಡೆಯಬೇಕಾದರೆ ಲಂಚ ಕೊಡಬೇಕು. ಪಡಿತರ ಪದ್ಧತಿ ಇರತಕ್ಕಂಥ ಅನೇಕ ಕಡೆಗಳಲ್ಲಿ ರೇಷನ್ ಕಾರ್ಡ್ ಪಡೆಯುವುದಕ್ಕೆ ಅಲ್ಲಿರತಕ್ಕಂಥ ಜನಜಂಗುಳಿಯನ್ನು ನೋಡಿದರೆ, ಅಲ್ಲಿ ಕ್ಯೂ ನಿಂತಿರುವುದನ್ನು ನೋಡಿದರೆ ಇನ್ನು ಸರ್ಕಾರದವರು ಸಗಟು ವ್ಯಾಪಾರವನ್ನು ಜಾರಿಗೆ ತಂದಾಗ ಇನ್ನೆಷ್ಟರಮಟ್ಟಿಗೆ ಅವ್ಯವಸ್ಥೆ ಆದೀತು ಎನ್ನುವ ಸಂಶಯ ಇದೆ.

ಇನ್ನು ಸಗಟು ವ್ಯಾಪಾರವನ್ನು ವಹಿಸಿಕೊಳ್ಳುವುದು ಸರಿ. ಆದರೆ ನಿಮ್ಮ ಮೆಷಿನರಿ ಇದರಲ್ಲಿ ಕೆಲಸ ಮಾಡಲು ಸಂಪೂರ್ಣವಾಗಿ ವಿಫಲವಾಗಿದೆ. ಅದನ್ನು ಮೊದಲು ಸರಿಪಡಿಸಬೇಕು. ನಿಮ್ಮ ಮನೆಯವರು ರೇಷನ್ ಕಾರ್ಡು ತೆಗೆದುಕೊಂಡು ಅಕ್ಕಿ ತರುವುದಕ್ಕೆ ಯಾರೂ ಹೋಗಿಲ್ಲ. ನಿಮಗೆ ಅದು ಯಾವುದಾದರೂ ರೂಪದಲ್ಲಿ ಬರುತ್ತದೆ. ಆ ಬಗ್ಗೆ ನಿಮಗೆ ತೊಂದರೆ ಇಲ್ಲ. ಅದೇ ರೀತಿ ನೀವು ಯಾರೂ ಕೂಡ ಸೀಮೆಯೆಣ್ಣೆ ತರುವುದಕ್ಕೆ ಹೋಗಿಲ್ಲ. ನಿಮಗೆ ಅಂಥಾ ತೊಂದರೆ ಇಲ್ಲ. ಈವೊತ್ತಿನ ದಿವಸ ಜನಗಳ ಪರಿಸ್ಥಿತಿ ನೋಡಿದರೆ ನಿಮಗೆ ಅರ್ಥವಾಗುತ್ತದೆ. ನೀವು ಹೊರಗೆ ಹೋದರೆ ನಿಮ್ಮ ತಲೆಯನ್ನೂ ಕೂಡ ತೆಗೆದಾರು ಎನ್ನುವ ಎಚ್ಚರಿಕೆಯನ್ನು ಕೊಡುತ್ತೇನೆ. ಆದುದರಿಂದ ಆ ಜನರು ಎಚ್ಚರಿಕೆಯಿಂದ ಕೆಲಸಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಕ್ಷಾಮ ಪರಿಸ್ಥಿತಿ ಬಗ್ಗೆ ಹೇಳುವುದಾದರೆ ಇದೇ ಸಭೆಯಲ್ಲಿ ಅನೇಕ ಚರ್ಚೆಗಳನ್ನು ಮಾಡಿದ್ದೇವೆ. ಅನೇಕ ಬೇಡಿಕೆಗಳನ್ನು ತಮ್ಮ ಮುಂದೆ ಇಟ್ಟಿದ್ದೇವೆ ಮತ್ತು ಈ ಮನೆಯಿಂದ ಬಂದು ನಿಂತಾಗ ಕೂಡ ಹೋಗಿ ಬಂದಿದ್ದೇವೆ. ಅದಕ್ಕಾಗಿ ನಾವು ಬಾಯಿ ಮುಚ್ಚಿಕೊಂಡು ಕೂತಿದ್ದೇವೆ. ಏತಕ್ಕೆಂದರೆ ನಾವು ನಿಮ್ಮ ಕೈಯಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ನೀವು ಹೇಳಿದಿರಿ ನಾವು ಎಲ್ಲವನ್ನೂ ಮಾಡಿದ್ದೇವೆ, ಕೂಲಿ ಜಾಸ್ತಿ ಮಾಡಿದ್ದೇವೆ, ಇದಕ್ಕಾಗಿ ವಿಶೇಷ ಅಧಿಕಾರಿಯನ್ನು ಇಟ್ಟಿದ್ದೇವೆ ಎಂದು, ನಮಗೆ ಅಲ್ಲಿಂದ ಕಾಗದಗಳು ಬರುತ್ತಿದೆ. ಪತ್ರಿಕಾ ಕರ್ತರು ಬರೆಯುತ್ತಿದ್ದಾರೆ. ಏನೆಂದರೆ ನೀವು ಹೋದ ಮೇಲೆ ಇಲ್ಲಿ ಯಾವ ಕಾರ್ಯವೂ ಸರಿಯಾಗಿ ನಡೆದಿಲ್ಲ ಎಂದು ಹೇಳುತ್ತಿದ್ದಾರೆ. ಇದರಿಂದ ನನಗೆ ಏನು ಅನಿಸುತ್ತದೆ ಎಂದರೆ ಇದರಲ್ಲಿ ಏನಾದರೂ ವಾಸ್ತವಾಂಶ ಇದೆಯೋ ಅಥವಾ ಏನಾದರೂ ರಾಜಕೀಯ ಇದೆಯೋ, ಏನಾದರೂ ಇದ್ದರೆ ಅದನ್ನು ಸರಿಪಡಿಸಬೇಕು ಎಂದು ಹೇಳುತ್ತೇನೆ. ನಾವೆಲ್ಲರೂ ಅಲ್ಲಿಗೆ ಹೋದಾಗ, ಈ ಮನೆಯ ಒಂದು ನಿಯೋಗ ಹೋದಾಗ ವಿರೋಧ ಪಕ್ಷದವರು ಆಡಳಿತ ಪಕ್ಷದವರು ಮತ್ತು ಒಬ್ಬರು ಮಂತ್ರಿಗಳು ಇವರೆಲ್ಲರೂ ಹೋದಾಗ, ಇದಕ್ಕೆ ಸಂಬಂಧಪಟ್ಟ ಒಬ್ಬರು ಆಫೀಸರು ಮುಖ್ಯಾಧಿಕಾರಿಗಳು ಯಾರು ಇದ್ದಾರೆ ಆ ಪ್ರಧಾನ ಇಂಜಿನೀಯರು ಬಂದು ಭೇಟಿ ಮಾಡಲಿಲ್ಲಾ. ಅವರು ಈ ನಿಯೋಗವನ್ನು ಭೇಟಿಮಾಡಿ ಪರಿಸ್ಥಿತಿ ಏನು ಇದೆ ಎಂದು ಹೇಳತಕ್ಕಂಥ ಒಂದು ಸೌಜನ್ಯತೆ ಅವರಲ್ಲಿ ಇರಲಿಲ್ಲ. ಈ ನಿಯೋಗ ಬೀದರ್, ಬಿಜಾಪುರ, ಬೆಳಗಾಂ ಜಿಲ್ಲೆಗಳಲ್ಲಿ 5 ದಿನ ಪ್ರವಾಸ ಮಾಡಿದಾಗ ಅಲ್ಲಿರತಕ್ಕಂಥ ಡಿವಿಷನಲ್ಲಿ ಅಧಿಕಾರಿಗಳು, ಅಸಿಸ್ಟೆಂಟ್ ಇಂಜಿನೀಯರ್ಸ್ ಮತ್ತು ಕಾರಕೂನರು ಇವರು ಬಂದು ಮಾತ ನಾಡಿದ್ದಾರೆಯೇ ಹೊರತು ಇದಕ್ಕೆ ಸಂಬಂಧಪಟ್ಟ ಮುಖ್ಯಾಧಿಕಾರಿಯು ಮುಖವನ್ನೇ ನೋಡಲಿಲ್ಲಾ. ಈ ಬಗ್ಗೆ ನಾನು ಏನಾದರೂ ಮಾತನಾಡಿದರೆ ವೈಯಕ್ತಿಕವಾಗಿ ದೋಷಾ ರೋಪಣೆ ಮಾಡುತ್ತಾರೆಂದು ತಿಳಿದುಕೊಳ್ಳಬಾರದು. ಇದರ ವ್ಯವಸ್ಥೆಯನ್ನು ನೋಡಿಕೊಳ್ಳಲು ಚೀಫ್ ಇಂಜಿನೀಯರ್ ಆಗಿರತಕ್ಕಂಥ ಶ್ರೀಮಾನ್ ಮುಗ್ದ ಅವರನ್ನು ಏಕೆ ನೇಮಕ ಮಾಡಿದ್ದಾರೆ. ಅವರು ಬಂದು ಈ ನಿಯೋಗವನ್ನು ಭೇಟಿ ಮಾಡಲೇ ಇಲ್ಲ. ಇದನ್ನು

ನೋಡಿದರೆ ಈ ಸಭೆಗೆ ಅವರು ಎಷ್ಟು ಅವಮಾನ ಮಾಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಅವರು ಎಷ್ಟು ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಈ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಏತಕ್ಕೆಂದರೆ ಇದಕ್ಕೆ ಸಂಬಂಧಪಟ್ಟವರ ಮೇಲೆ ಹಕ್ಕು ಬಾಧ್ಯತಾ ನಿರ್ಣಯವನ್ನು ತರುತ್ತಾ ಇದ್ದೇನೆ, ಆದ್ದರಿಂದ ಹೆಚ್ಚು ಹೇಳುವುದಿಲ್ಲ.

ಇನ್ನು ಕೊನೆಯಾದಾಗಿ ಹೇಳುವುದಾದರೆ ಇದು ಕಂಟ್ರಾಕ್ಟರ್ ರಾಜ್ಯ ಎಂದು ಕೆಲವರು ಹೇಳುತ್ತಾ ಇದ್ದರು. ಅವರು ಮೊದಲು ಶ್ರೀಮಾನ್ ನಿಜಲಿಂಗಪ್ಪನವರ ಮತ್ತು ಶ್ರೀಮಾನ್ ವೀರೇಂದ್ರ ಪಾಟೀಲ್ ರವರ ಕಾಂಪೌಂಡ್‌ನಲ್ಲಿ ಇದ್ದರು. ಈಗ ಅರಸುರವರ ಕಾಂಪೌಂಡ್‌ಗೆ ಬಂದಿದ್ದಾರೆ. ಅವರು ಹೇಳುತ್ತಾರೆ ಮಂತ್ರಿಗಳು ಏನು ಮಾಡುತ್ತಾರೆ, ಮಂತ್ರಿಗಳು ನಮ್ಮ ಜೇಬಿನಲ್ಲೇ ಇದ್ದಾರೆ, ಬೇಕಾದರೆ ಈ ಸರ್ಕಾರವನ್ನು ಉರುಳಿಸುತ್ತೇವೆ ಎಂದು ಹೇಳುತ್ತಾರೆ, ಅಂಥಾವರು ಹಿಂದೆ ಅಲ್ಲಿ ಇದ್ದರು, ಈಗ ಇಲ್ಲಿಗೆ ಬಂದಿದ್ದಾರೆ.

ಇನ್ನೊಂದು ವಿಷಯ ಏನೆಂದರೆ ಶರಾವತಿ ಕರ್ಮಕಾಂಡ ಆದ ಹಾಗೆ ಹೇಮಾವತಿ ಕರ್ಮಕಾಂಡವಾಗುತ್ತದೆ. ಒಬ್ಬ ಕಂಟ್ರಾಕ್ಟರ್ ಒಂದು ಕೆಲಸವನ್ನು ತೆಗೊಂಡು ಮುಗಿದ ಮೇಲೆ ಮತ್ತೊಂದು ಕೆಲಸಕ್ಕೆ ಟೆಂಡರ್ ಕರೆಯದೇ ಅವರಿಗೆ ಆ ಕೆಲಸವನ್ನು ಕೊಟ್ಟಿದ್ದಾರೆ ಎನ್ನುವುದು ಗೊತ್ತಾಗಿದೆ. ಯಾರಿಗೆ ಎಂದರೆ ಶ್ರೀಮಾನ್ ಚಾಮರಾಜ್ ಅನ್ನುವವರಿಗೆ ಕೊಟ್ಟಿದ್ದಾರೆ. ಇಂಥ ಬೇರೆ ಬೇರೆ ದೊಡ್ಡ ಕಂಟ್ರಾಕ್ಟರುಗಳ ಪಟ್ಟಿ ಇದೆ. ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಅದನ್ನು ಓದುತ್ತೇನೆ. ಇವರುಗಳೆಲ್ಲ ಹಿಂದೆ ಏನಾಗಿದ್ದರು, ನಿಮ್ಮ ಕೃಪಾಕಟಾಕ್ಷದಿಂದ ಯಾವ ರೀತಿ ಬೆಳೆಯುತ್ತಿದ್ದಾರೆ, ಎಷ್ಟೆಷ್ಟು ಬೆಳೆದಿದ್ದಾರೆ. ಅವರ ಬಗ್ಗೆ ನಿಮ್ಮ ಕೃಪೆ ಏನು, ನಿಮ್ಮ ಕಟಾಕ್ಷವೇನು ? ಬೆಂಗಳೂರಿಗೆ ಅನೇಕ ಜನ ಕಂಟ್ರಾಕ್ಟರುಗಳು ಬಂದಾಗ ನಮಗೆ ತಿಳಿದ ಹಾಗೆ, ನಾವು ಕೇಳಿದ ಹಾಗೆ, ಏನೇನೂ ಇಲ್ಲದೆ ಇದ್ದ ಕಂಟ್ರಾಕ್ಟರುಗಳು ಹತ್ತಾರು ಲಕ್ಷ ರೂಪಾಯಿ ಭವ್ಯ ಬಂಗಲೆಗಳನ್ನು ಕಟ್ಟಿಸಿಕೊಂಡು ಸರ್ಕಾರ ನಮ್ಮ ಹಿಡಿತದಲ್ಲಿದೆ ಎನ್ನುವ ಮಟ್ಟಕ್ಕೆ ಹೋಗಿದ್ದಾರೆ. ಇಡೀ ಸರ್ಕಾರವನ್ನು ಹಿಡಿದಿರತಕ್ಕ ಗ್ರಹಗಳಾಗಿದ್ದಾರೆ. ಶರಾವತಿ ಕರ್ಮಕಾಂಡ ಏನು, ಮಾನ್ಯ ಚನ್ನಬಸಪ್ಪನವರು ಹೇಳುತ್ತಿದ್ದರು ಅದನ್ನು ಮೀರಿಸುವಂಥ ಕರ್ಮಕಾಂಡ ಹೇಮಾವತಿಯಲ್ಲಿ ಆಗುತ್ತಿದೆ. ಅಲ್ಲಿ ಅನೇಕ ಭಾರಿ ತಿಮಿಂಗಿಲಗಳಿವೆ. ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡುವುದಾದರೆ ಅನೇಕ ವಿಷಯಗಳು ಹೊರಬರಲು ಸಹಾಯವಾಗುತ್ತದೆ. ಆದುದರಿಂದ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಸೀಮೆಎಣ್ಣೆ ಹಂಚಿಕೆಗೆ ಬೆಂಗಳೂರಿನಲ್ಲಿ ಯಾರು ಡೀಲರ್ ಇದ್ದಾರೆ ಅವರ ಮೇಲೆ ಬಹಳ ದೊಡ್ಡ ದಾಳಿ ಈ ಸಭೆಯಲ್ಲಿ ನಡೆಯಿತು. ಸೀಮೆಎಣ್ಣೆ ಹಂಚಿಕೆಯಲ್ಲಿನ ಲೋಪದೋಷಗಳ ಬಗ್ಗೆ ಮಾನ್ಯ ಆಹಾರ ಮಂತ್ರಿಗಳಿಗೆ ಅನೇಕ ಸಲ ಹೇಳಿದೆವು. ಈ ಸದನದಲ್ಲಿ ಇಡೀ ವಿರೋಧ ಪಕ್ಷ ದೊಡ್ಡ ಆರೋಪವನ್ನು ಮಾಡಿತು. ಈಗ ಅದೇ ಕೆ. ಕೆ. ಮೂರ್ತಿ ಅವರ ಸಹೋದರ ಶ್ರೀಕಂಠಯ್ಯ ಎನ್ನುವವರು ಮೈಸೂರಿನಲ್ಲಿ ಸೀಮೆಎಣ್ಣೆ ಏಜೆಂಟರಾಗಿದ್ದಾರೆ. ನಾವು ಏನೇ ಹೇಳಿದರೂ ಕೂಡ ಅವರು ತಪ್ಪಿತಸ್ಥರಲ್ಲ. ಎನ್ನುವ ರೀತಿಯಲ್ಲಿ ವಾದ ಮಾಡುವುದಾದರೆ ಜನಸಾಮಾನ್ಯರಿಗೆ ಇದರಿಂದ ರಕ್ಷಣೆ ಎಲ್ಲಿಂದ ಬರಬೇಕು ? ಅವರು ಏನು ಬೇಕಾದರೂ ಮಾಡಬಹುದು. ಬ್ಲಾಕ್ ಮಾರ್ಕೆಟ್ ಮಾಡಬಹುದು. ಆದುದರಿಂದ ನಾನು ತಮಗೆ ಹೇಳುತ್ತಿದ್ದೇನೆ. ಇವರು ಸರ್ಕಾರದ ರಕ್ಷಣೆಯಲ್ಲಿದ್ದಾರೆ. ಸರ್ಕಾರದ ಕೃಪಾಕಟಾಕ್ಷದಲ್ಲಿದ್ದಾರೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಆಹಾರ ಸಚಿವರಿಗೆ ಹೇಳುತ್ತೇನೆ. ಈ ಬಗ್ಗೆ

ಸಮರ್ಪಕವಾದ ಉತ್ತರವನ್ನು ಕೊಡಬೇಕು ಮತ್ತು ಕೆ. ಕೆ. ಮೂರ್ತಿ ಅವರ ಸಹೋದರನಿಗೇ ಮೈಸೂರಿನಲ್ಲಿ ಸೀಮೆಎಣ್ಣೆ ಏಜೆನ್ಸಿಯನ್ನು ಕೊಟ್ಟಿರುವುದರ ಔಚಿತ್ಯವಾದರೂ ಏನು ಎಂಬುದನ್ನು ತಿಳಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ (ದೊಡ್ಡ ನೀರಾವರಿ ಶಾಖೆಯ ರಾಜ್ಯ ಸಚಿವರು) :— ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ಮತ್ತು ಮೊನ್ನೆ ನಮ್ಮ ಇಲಾಖೆಯ ಬೇಡಿಕೆಗಳ ಬಗ್ಗೆ ನಡೆದಂಥ ಚರ್ಚೆಯನ್ನು ಹಿಂದಿನ ವರ್ಷಗಳ ಚರ್ಚೆಗೆ ಹೋಲಿಸಿ ನೋಡಿದರೆ ಯಾವ ಸದಸ್ಯರೇ ಆಗಲೀ ಅಷ್ಟೊಂದು ಅಸಂತೋಷವನ್ನು ವ್ಯಕ್ತಪಡಿಸಿಲ್ಲವೆನ್ನುವುದು ನನಗೆ ತುಂಬ ಸಂತೋಷದ ವಿಷಯ. ಸನ್ಮಾನ್ಯ ಸದಸ್ಯರು ಕೆಲವಾರು ವಿಷಯಗಳನ್ನು ತಿಳಿಸಿದ್ದಾರೆ. ಅದರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಎರಡು ಮೂರು ಗಂಟೆ ಕಾಲ ಮಾತನಾಡಿ ಕೆಲವು ಉಪಯುಕ್ತ ಅಂಕಿ ಅಂಶಗಳನ್ನು, ರಾಷ್ಟ್ರದ ಮಟ್ಟದಲ್ಲಿ ಇರಿಗೇಷನ್ ಕಮಿಷನ್ ಮುಂತಾದ ವರದಿಗಳನ್ನು ಉದಹರಿಸಿ ಕೆಲವು ವಿಚಾರಗಳನ್ನು ಹೇಳಿದರು. ಕೆಲವಾರು ಸಂಶಯಗಳನ್ನೂ ವ್ಯಕ್ತಪಡಿಸಿದ್ದಾರೆ.

ಮೊದಲು ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡಿ ಕೊನೆಯಲ್ಲಿ ಅವರ ಸಂಶಯಗಳ ನಿವಾರಣೆಗೆ ಪ್ರಯತ್ನಪಡುತ್ತೇನೆ. ಈ ಹೊತ್ತು ನಮ್ಮ ರಾಜ್ಯದ ನೀರಾವರಿ ಬಗ್ಗೆ ಹೇಳು ವುದಾದರೆ ಈಗ ಹಾಲಿ ಇರತಕ್ಕ ನೀರಾವರಿ ಸುಮಾರು 28 ಲಕ್ಷ 60 ಸಾವಿರ ಎಕರೆ; ಎಂದರೆ 11.2 ಪರ್ಸೆಂಟ್ ನೀರಾವರಿ ಪ್ರದೇಶವಾಗಿದೆ. ನಾವು ಏನು ನೀರಾವರಿ ಯೋಜನೆಗಳನ್ನು ಕೈಕೊಂಡಿದ್ದೇವೆ, ಇವುಗಳನ್ನು ಮುಗಿಸಿದ ಮೇಲೆ 24 ಲಕ್ಷ ಎಕರೆ ಹೊಸದಾಗಿ ನೀರಾವರಿ ಯಾಗುತ್ತದೆ. ಇದೂ ಸೇರಿದರೆ ಸುಮಾರು 20 ಪರ್ಸೆಂಟ್ ನೀರಾವರಿ ಪ್ರದೇಶವಾಗುವುದಕ್ಕೆ ಅವಕಾಶವಿದೆ. ಹಾಗೂ ಈಗ ಏನು 45 ಪ್ರಾಜೆಕ್ಟ್‌ಗಳ ಇನ್‌ವೆಸ್ಟಿಗೇಷನ್ ನಡೆದಿದೆ ಮತ್ತು ಅದರ ಜೊತೆಗೆ ಇನ್ನೂ ಕೆಲವಾರು ಯೋಜನೆಗಳೇನಿವೆ ಅವುಗಳನ್ನು ಮಾಡಿ, ರಾಜ್ಯದಲ್ಲಿರುವ ಎಲ್ಲ ನೀರನ್ನೂ 100 ಪರ್ಸೆಂಟ್ ಬಳಸುವುದಾದರೆ 45 ಪರ್ಸೆಂಟ್ ನೀರಾವರಿಯಾಗುವುದಕ್ಕೆ ಅವಕಾಶವಿದೆ ಎನ್ನುವುದು ಗೊತ್ತಾಗತಕ್ಕ ವಿಚಾರ. ಎಲ್ಲ ಯೋಜನೆಗಳನ್ನೂ ಪೂರೈಸಿದರೆ 45 ಪರ್ಸೆಂಟ್ ಆಗುತ್ತದೆ.

1951 ರಿಂದೀಚೆಗೆ 43 ಪ್ರಾಜೆಕ್ಟ್‌ಗಳನ್ನು ಕೈಕೋಡದ್ದಾಗಿದೆ. ರಿವೈಸ್ಡ್ ಎಸ್ಟಿಮೇಟ್ಸ್ ಎಲ್ಲ ಸೇರಿದರೆ ಅಂದಾಜು ಒಟ್ಟು 618 ಕೋಟಿ ರೂಪಾಯಿ ಆಗುತ್ತದೆ. 1951ರಿಂದ ತಹಲ್‌ವರೆಗೆ ನಾವು 238 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಎಂದರೆ ತೆಗೆದುಕೊಂಡಿರುವ ಯೋಜನೆಗಳನ್ನು ಮುಗಿಸಬೇಕಾದರೆ ಇನ್ನೂ 380 ಕೋಟಿ ರೂಪಾಯಿ ಬೇಕಾಗುತ್ತದೆ. ಅದರ ಜೊತೆಗೆ ರಾಜ್ಯದ ಉತ್ತರ ಭಾಗದಲ್ಲಿ ಕೆಲವು ಯೋಜನೆಗಳಿಗೆ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಅವುಗಳ ಅಂದಾಜು ಸುಮಾರು 40 ಕೋಟಿ ರೂಪಾಯಿಗಳಾಗಬಹುದು. ಅದನ್ನೂ ಸೇರಿಸಿದರೆ ಸುಮಾರು 420 ಕೋಟಿ ರೂಪಾಯಿ ಬೇಕಾಗುತ್ತದೆ. ಅದರ ಜೊತೆಗೆ ಈ ಹೊತ್ತು 45 ಯೋಜನೆಗಳ ಅಧ್ಯಯನ ನಡೆಸುತ್ತಿದ್ದೇವೆ. ಈ ಹೊತ್ತಿನ ಅಂದಾಜು ಪ್ರಕಾರ ಅವುಗಳನ್ನು ಕೊಳ್ಳುವುದಾದರೆ 350 ಕೋಟಿ ರೂಪಾಯಿ ಬೇಕಾಗುತ್ತದೆ. ಎಂದರೆ ಒಟ್ಟು 770 ಕೋಟಿ ರೂಪಾಯಿ ಬೇಕು.

ಈಗ ಕೈಯಲ್ಲಿರುವ ಯೋಜನೆಗಳು ಮತ್ತು ಈ ಸಲ ಹೊಸದಾಗಿ ಮಂಜೂರು ಮಾಡಿದ ಯೋಜನೆಗಳಿಗೆ 420 ಕೋಟಿ ರೂಪಾಯಿ ಇನ್ನೂ ಬೇಕು. ಇವುಗಳಿಗೆ ನಾವು ಮೊದಲನೇ ಯೋಜನೆಯಲ್ಲಿ 37 ಚಿಲ್ಲರೆ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ, ಎರಡನೇ ಯೋಜನೆ ಯಲ್ಲಿ 26 ಚಿಲ್ಲರೆ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ, ಮೂರನೇ ಯೋಜನೆ ಯಲ್ಲಿ 31 ಚಿಲ್ಲರೆ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ, ಆನ್ಯುಯಲ್ ಪ್ಲಾನ್

1966–69 ರಲ್ಲಿ 32 ಚಿಲ್ಲರೆ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ನಾಲ್ಕನೆ ಯೋಜನೆಯಲ್ಲಿ 109 ಚಿಲ್ಲರೆ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಐದನೆಯ ಯೋಜನೆಯಲ್ಲಿ ಸುಮಾರು ಕನಿಷ್ಠಪಕ್ಷ 250 ಕೋಟಿ ರೂಪಾಯಿಗಳನ್ನಾದರೂ ನೀರಾವರಿಗೆ ಉಪಯೋಗ ಮಾಡಬೇಕು ಎನ್ನುವುದು ಸರ್ಕಾರದ ಆಶಯವಾಗಿದೆ ಎಂದು ಹೇಳುತ್ತೇನೆ. ಪ್ರಾಸಂಗಿಕವಾಗಿ ಶ್ರೀ ದೇವೇಗೌಡರು ಮತ್ತು ಇತರರು ಕೇಂದ್ರದ ಸಹಾಯದ ಬಗ್ಗೆ ಕೂಡ ಪ್ರಸ್ತಾಪ ಮಾಡಿದರು. ಬಹುಶಃ ಹೋದ ಸಾರಿ ಶ್ರೀನಗರದಲ್ಲಿ ನಡೆದ ಇರಿಗೇಷನ್ ಮಿನಿಸ್ಟರ್ಸ್ ಕಾನಫರೆನ್ಸ್‌ನಲ್ಲಿ ರಾಷ್ಟ್ರೀಯ ಜಲನಿಧಿಯನ್ನು ಕೇಂದ್ರ ಸರ್ಕಾರ ಮಾಡಿಕೊಂಡು ಯಾವ ಯಾವ ರಾಜ್ಯದಲ್ಲಿ ನೀರಾವರಿ ಕಡಿಮೆ ಇದೆ ಎನ್ನುವುದನ್ನು ಅರ್ಥಮಾಡಿಕೊಂಡು, ಅವರ ಅಗತ್ಯತೆಯನ್ನು ಆಧಾರವಾಗಿಟ್ಟುಕೊಂಡು ಡಿಫಿಸಿಟ್ ಸ್ಟೇಟ್ಸ್ ಎಂದು ಏನಿರುತ್ತವೆ ಅವುಗಳಿಗೆ ಸಾಕಷ್ಟು ಸಹಾಯವನ್ನು ಮಾಡತಕ್ಕದ್ದು ಎನ್ನುವ ನಮ್ಮ ವಾದವನ್ನು ಮುಂದೆ ಇಟ್ಟೆವು. ಬಹುಶಃ ಇದೆಲ್ಲವನ್ನೂ ಗಣನೆಯಲ್ಲಿಟ್ಟುಕೊಂಡು ಕೇಂದ್ರದಿಂದ ಸಾಕಷ್ಟು ಸಹಾಯ ದೊರೆಯುತ್ತದೆ ಎಂದು ನಾವಾದರೂ ನಿರೀಕ್ಷೆ ಮಾಡಿದ್ದೇವೆ. ಇನ್ನೂ ಕೆಲವಾರು ವಿಚಾರಗಳನ್ನು ಶ್ರೀ ದೇವೇಗೌಡರು ಪ್ರಸ್ತಾಪ ಮಾಡಿದ್ದಾರೆ. ಅದರ ಜೊತೆಯಲ್ಲಿ ಈ ಸರ್ಕಾರ ಬಂದ ಮೇಲೆ ಎಷ್ಟು ಪ್ರಾಜೆಕ್ಟ್‌ಗಳನ್ನು ಮಾಡಿದೆ ಎಂದು ಕೇಳತಕ್ಕ ಆತುರವನ್ನು ಕೂಡ ವ್ಯಕ್ತಪಡಿಸಿದರು. ಅವರ ಮತ್ತು ಸಭೆಯ ತಿಳುವಳಿಕೆಗಾಗಿ ಹೇಳುವುದಾದರೆ, ಹಿಪ್ಪರಗಿ ಬಾರೇಜ್, ಬೆಣ್ಣೆತೊರ ಪ್ರಾಜೆಕ್ಟ್, ಅಪ್ಪರ್ ಮುಲ್ಲಮಾರಿ, ಲೋಯರ್ ಮುಲ್ಲಮಾರಿ, ಚುಲ್ಕಿನಾಲ, ಅಮರ್ಜಾ, ಸೌದಾಗರ್. ನಾರಿಹಳ್ಳ ಇಷ್ಟೊಂದು ಪ್ರಾಜೆಕ್ಟ್‌ಗಳಿಗೆ ನಾವು ಅನುಮತಿಯನ್ನು ಕೊಟ್ಟಿದ್ದೇವೆ. ಇದೇ ರೀತಿಯಲ್ಲಿ ಮುಂದೆ ನಾವು ತೆಗೆದುಕೊಳ್ಳತಕ್ಕ ಯೋಜನೆಗಳು ಎಂದರೆ ವಾಟೇಹೊಳೆ ಪ್ರಾಜೆಕ್ಟ್ ಸಾಗರ, ದೊಡ್ಡಕೆರೆ ಹೀಗೆ ಇನ್ನೂ ಕೆಲವು ಯೋಜನೆಗಳು ಕೇಂದ್ರ ಮಂಜೂರಾತಿಗಾಗಿ ಕಾದಿವೆ. ಇವುಗಳ ವಿವರವನ್ನು ಸಭೆಗೆ ತಿಳಿಸಲು ಇಷ್ಟಪಡುತ್ತೇನೆ.

Yagachi, Cauvery Reservoir, Iggalur Project, Changawadi, Uduthorehalla, Chiklihole, Laxmanathirtha, Hemavathy, Harangi, Kabini, Suvarnavathy, Bhadra Anicut L.B. Canal extension, Development of V. V. Sagar, Narihalla Project, Gandorinala Project, Chandrampalli Project, Chitwadgi Project, Lower Mullamari Project, Bhima Irrigation Project, Upper Tungabhadra Project, Ghataprabha Right Bank Canal Project, Sattinala Project, Madag Mosur Tank, Amarja Project, Maskinala Project, Upper Mullamari Project, Dandavathy Project, Construction of Feeder Channel to Ranikere Tank, Construction of feeder Channel to Dharmapur Tank, Karanja Reservoir Project.

ಹೀಗೆ ಸುಮಾರು ನಲವತ್ತು ಯೋಜನೆಗಳು ಕೇಂದ್ರದವರಿಂದ ಕ್ಲಿಯರೆನ್ಸ್‌ಗಾಗಿ ಕಾಯುತ್ತಿವೆ ಮತ್ತು ಇವು ಬೇಗನೆ ಬರಬಹುದೆಂದು ನಿರೀಕ್ಷೆ ಮಾಡುತ್ತಿದ್ದೇವೆ. ಇದರಲ್ಲಿ ಸಾಧ್ಯವಾದಷ್ಟು ಬೇಗ ಇದರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಇದ್ದೇವೆ ಎಂದು ಈ ಸಂದರ್ಭದಲ್ಲಿ ತಿಳಿಸಲು ಇಷ್ಟಪಡುತ್ತೇನೆ. ಶ್ರೀ ದೇವೇಗೌಡರು ಹೇಳತಕ್ಕ ಕಾಲದಲ್ಲಿ ಈ ಸರ್ಕಾರ ಬಂದಮೇಲೆ ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡು ಸಾಕಷ್ಟು ಖರ್ಚು ಮಾಡಲಿಲ್ಲ ಅದರಲ್ಲೂ ಶ್ರೀ ನಂಜೇಗೌಡರು ಬಂದ ಮೇಲೆ ಇದರಲ್ಲಿ ಆಸಕ್ತಿ ಕಡಿಮೆಯಾಗಿ ಕೆಲಸಗಳ ಬಗ್ಗೆ ಖರ್ಚು ಮಾಡಲಿಲ್ಲ ಎಂದು ಹಾಗೆ ಇನ್ನೂ ಅನೇಕ ವಿಷಯಗಳನ್ನೂ ಇಲ್ಲಿ ಹೇಳಿದ್ದಾರೆ.

ಶ್ರೀ ದೇವೇಗೌಡರವರು ಹೇಳಿರುವ ವಿಚಾರಗಳಿಗಾಗಿ 1961-62 ರಿಂದೀಚೆಗೆ ಎಷ್ಟು ಒಟ್ಟು ಹಣ ಖರ್ಚಾಗಿದೆ ಎನ್ನುವುದರ ಅಂಕೆ ಸಂಖ್ಯೆಗಳನ್ನು ಇಲ್ಲಿ ತಿಳಿಸಲು ಇಷ್ಟಪಡುತ್ತೇನೆ.

1961—62ರಲ್ಲಿ 7.34 ಕೋಟಿ ರೂಪಾಯಿ
1962—63ರಲ್ಲಿ 5.99 ,,
1963—64ರಲ್ಲಿ 6.23 ,,
1964—65ರಲ್ಲಿ 5.92 ,,
1965—66ರಲ್ಲಿ 5.10 ,,
1966—67ರಲ್ಲಿ 6.73 ,,
1967—68ರಲ್ಲಿ 16.59 ,,
1969—70ರಲ್ಲಿ 20.68 ,,
1970—71ರಲ್ಲಿ 26.84 ,,
1971—72 ರಲ್ಲಿ 30 ,,
1972—73 ರಲ್ಲಿ 32 ಕೋಟಿಯವರೆಗೆ ಆಗಿದೆ.

ಇಷ್ಟು ಅಂಕಿಅಂಶಗಳನ್ನು ಏತಕ್ಕೆ ಹೇಳಿದೆ ಎಂದರೆ ಅವರು ಶ್ರೀ ವೀರೇಂದ್ರ ಪಾಟೀಲರವರು ಇದ್ದಾಗ ಲಕ್ಷಗಟ್ಟಲೆ ಖರ್ಚು ಮಾಡುವಂತಹ ಸರಕಾರ ಇತ್ತು ಎಂದು ಹೇಳಿದರು. ಆದರೆ ಇಲ್ಲಿ 1969-70 ರಲ್ಲಿ ಎಷ್ಟು ಹಣ ಖರ್ಚಾಗಿದೆ ಎಂದು ನೋಡಿದರೆ ಇದು ಕಡಿಮೆ. ಇದರ ಬಗ್ಗೆ ಇನ್ನೂ ಹೆಚ್ಚು ಆಸಕ್ತಿವಹಿಸಿ ಕೆಲಸ ಮಾಡಬಹುದಾಗಿತ್ತು ; ಎಂದರು. ನಾನು ಇದರ ಬಗ್ಗೆ ಹೇಳಲು ಇಷ್ಟವಿಲ್ಲದಿದ್ದರೂ ಹೇಳಬೇಕಾಗಿ ಬಂತು. ಬಹುಶಃ 68 ನೇ ಸೆಪ್ಟಂಬರ್ ತಿಂಗಳಲ್ಲಿ ಎಂದು ಕಾಣುತ್ತದೆ. ಸೆಪ್ಟಂಬರು 19ನೇ ತಾರೀಖು ಅಂದಿನ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳೊಡನೆ 1924ರ ಅಗ್ರಿಮೆಂಟು ಏನಾಗಿತ್ತು. ಇದರ ಬಗ್ಗೆ ಚರ್ಚೆ ಮಾಡುವಾಗ ಹೇಮಾವತಿ ಯೋಜನೆಗೆ ಕ್ಲಿಯರೆನ್ಸ್ ತರುತ್ತೇವೆ ಎಂದರು. ಇದರ ಬಗ್ಗೆ ಸೆಪ್ಟಂಬರು 17 ರಿಂದ ಸೆಪ್ಟಂಬರು 19ರ ವರೆಗೆ ಚರ್ಚೆಯಾಗಿತ್ತು ಮತ್ತು ಇದರ ಬಗ್ಗೆ ಗುಟ್ಟು ವಿಚಾರಗಳು ಇದನ್ನು ಪ್ರಸ್ತಾಪಮಾಡಲು ಸಾಧ್ಯವಿಲ್ಲ ಎಂದರು. ಅದರ ಮೇಲೆ ಸಭೆಯಲ್ಲಿ ಗಲಾಟೆಯಾಯಿತು. ತಾವೂ ಆಗ ಸಭೆಯಲ್ಲಿದ್ದಿರಿ. ಆ ನಂತರ ಸಭೆಯ ಹೊರಗಡೆ ಇದರ ಬಗ್ಗೆ ಚರ್ಚೆಯಾಗಿ ಆಗ ಇದ್ದ ಶ್ರೀಮಾನ್ ಜತ್ತಿಯವರು ಇನ್ ಕ್ಯಾಮಾರಾ ಡಿಸ್‌ಕಷನ್ ಮಾಡಿದರು. ಇದರ ಬಗ್ಗೆ ನಾನು ಇಲ್ಲಿ ಯಾರನ್ನೂ ದೂರಬೇಕೆಂದು ನಮ್ಮ ಉದ್ದೇಶವಲ್ಲ.

ಶ್ರೀ ಹೆಚ್. ಡಿ. ದೇವೇಗೌಡ :—ಆಗ ಯಾವ ರೀತಿ ಫೈಲಿನಲ್ಲಿ ರುಜು ಹಾಕಿದ್ದಾರೆ, ಅದನ್ನು ತಿಳಿಸಿ.

ಶ್ರೀ ಹೆಚ್. ಎನ್. ನಂಜೇಗೌಡ :—ಇದೆಲ್ಲಾ ಸಭೆಯಲ್ಲೇ ಆಗ ಆಗಿರುವುದು. ರುಜು ಹಾಕಿರುವುದು ತಪ್ಪಾಗಿದ್ದರೆ ಅದನ್ನು ನಾವು ತಪ್ಪು ಎಂದು ತಿಳಿದುಕೊಳ್ಳೋಣ. ಇದರಲ್ಲಿ ನಾವು ಹಾಗೂ ನೀವು ಎಲ್ಲರೂ ಸೇರಿದ್ದೇವೆ. ಇದರ ಬಗ್ಗೆ ಏನು ಆಯಿತು ಎನ್ನುವುದು ತಮಗೂ ಗೊತ್ತಿದೆ. ಇದರ ಪರಿಣಾಮವಾಗಿ ಅಂದು ಒಂದು ಕಮಿಟಿ ಮಾಡಿ ಇದರ ಮೂಲಕ "ಟು ಮೊಬಿಲೈಸ್ ರಿಸೋರ್ಸಸ್" ಎಂದು ಮಾಡಿದಮೇಲೆ ಇದಕ್ಕಾಗಿ ಸ್ವಲ್ಪ ಹೆಚ್ಚು ಹಣ ಒದಗಿಸಬೇಕಾದದ್ದು ಇಡೀ ಸಭೆಗೆ ಸೇರಿದ್ದು. ಇದರ ಬಗ್ಗೆ ಒಟ್ಟಿನಲ್ಲಿ ಸಾಕಷ್ಟು ಸಲಹೆಗಳೂ ಬರಲಿಲ್ಲ, ಇದಕ್ಕಾಗಿ ಒಟ್ಟಾಗಿ ಹೇಳುವ ಸ್ಥಿತಿ ಬಂತು.

ಶ್ರೀ ಹೆಚ್. ಡಿ. ದೇವೇಗೌಡ :—ವಿರೋಧಪಕ್ಷದವರ ಸಲಹೆಗಳನ್ನು ಬೇಕು ಎಂದರೆ ಅದನ್ನು ತಿಳಿಸಿ. ಆಗ ನಾನು ತಮಗೆ ನಮ್ಮ ಸಲಹೆಗಳನ್ನು ಕೊಡುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ :—ಇದು ಒಂದು ಜೆಶ್ಚರ್‌ಗಾಗಿ ಹೇಳುತ್ತಿಲ್ಲ. ಯೋಜನೆಗಳಿಗಾಗಿ ಯಾವ ರೀತಿಯಾಗಿ ಹಣಗಳನ್ನು ಅಳವಡಿಸಿಕೊಳ್ಳಬೇಕು ಎಂದು ಆ ಸಮಿತಿಯವರು ಸಲಹೆಗಳನ್ನು ಕೊಡಬಹುದಾಗಿತ್ತು.

ಶ್ರೀ ಹೆಚ್. ಡಿ. ದೇವೇಗೌಡ :—ಇದರಲ್ಲಿ ಬಳಸಿ ಮಾತಾಡುವುದು ಬೇಡ. ಸಲಹೆಗಳು ನಿರ್ದಿಷ್ಟವಾಗಿ ಬೇಕೆಂದರೆ ಆಗ ನಮ್ಮ ಸಲಹೆಗಳನ್ನು ಕೊಡುತ್ತೇವೆ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು) :—ಸಲಹೆಗಳನ್ನು ಕೊಡಿ, ಬೇಡ ಎಂದವರಾರು ? ನಿರ್ದಿಷ್ಟವಾಗಿ ನಿಮ್ಮ ಸಲಹೆಗಳನ್ನು ಕೊಡಿ.

ಶ್ರೀ ಹೆಚ್. ಡಿ. ದೇವೇಗೌಡ :—ಯಾವ ಯೋಜನೆಗಳನ್ನು ಎಕ್ಸ್‌ಪ್ಯಾಂಡ್ ಮಾಡಬಾರದು, ಕಟ್ ಮಾಡಬೇಕೆಂದು ಹೇಳಲಿಲ್ಲ.

ಶ್ರೀ ಡಿ. ದೇವರಾಜ ಅರಸ್ :—ಹೊಸದಾಗಿ ತಾವು ಸಲಹೆಗಳನ್ನು ಕೊಡಬೇಕೆಂದು ನಾವು ಏನು ಹೇಳತಕ್ಕದ್ದೂ ಇಲ್ಲ. ಎರಡು ತಿಂಗಳಿಂದ ಬಡ್ಜೆಟ್ಟು ಚರ್ಚೆಯಾಗುತ್ತಿರುವುದರಿಂದ ತಾವು ಸಲಹೆಗಳನ್ನು ಕೊಡಬಹುದು. ಇದರ ಬಗ್ಗೆ ಸಲಹೆಗಳನ್ನು ಕೊಡಿ. ಸಭೆ ಇನ್ನೂ 15 ದಿನಗಳ ಮೇಲೆ ನಡೆಯುತ್ತದೆ. He is begging the question. He has enough opportunity to plead. The situation then was such that the Budget was over and there was no opportunity for us and because they said that they had no money, we had to give suggestions. Please don't forget it. ಟೆಕ್ನಿಕಲ್ ಕ್ಲಿಯರೆನ್ಸ್ ಅವರಿಗೆ ಕೊಡುವುದಿಲ್ಲ. ನಮ್ಮಲ್ಲಿ ಇದಕ್ಕೆ ಖರ್ಚು ಮಾಡಲು ದುಡ್ಡಿಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ಸಾವಿರಾರು ಸರಿ ಹೇಳಿಕೆಗಳನ್ನು ಇದೇ ಸಭೆಯಲ್ಲಿ ಹೇಳಿದ್ದಾರೆ. ಬೇಕಾದರೆ ಅದರಲ್ಲಿರುವ ವರದಿ ಪುಸ್ತಕಗಳಲ್ಲಿದೆ. ಅದನ್ನೂ ನಮ್ಮ ಮಂತ್ರಿಗಳು ಇಲ್ಲಿ ಓದಿ ಹೇಳುತ್ತಾರೆ.

Sri H. D. DEVE GOWDA.—The Government appointed the Resources Committee. If you also appoint such a Committee I am prepared to give suggestions.

ಶ್ರೀ ಡಿ. ದೇವರಾಜ ಅರಸ್ :—ಸುಮ್ಮನೆ ಇಲ್ಲಿ ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯಲಿಲ್ಲ ಎಂದು ಹೇಳುವುದು ಸರಿಯಲ್ಲ. ಇದೆಲ್ಲಾ ತಮಗೂ ಗೊತ್ತಿದೆ.

ಶ್ರೀ ಹೆಚ್. ಎನ್. ನಂಜೇಗೌಡ :—1972-73 ರಲ್ಲಿ 32 ಕೋಟಿ ರೂಪಾಯಿಯವರೆಗೆ ಖರ್ಚು ಮಾಡಲಾಗಿದೆ ಮತ್ತು ಈ ಸಾಲಿಗೆ ಎಂದರೆ 1973-74 ನೇ ಸಾಲಿಗೆ 29.85 ಕೋಟಿ ರೂಪಾಯಿಯನ್ನು ನಾವು ಇಟ್ಟುಕೊಂಡಿದ್ದೇವೆ. ಇದರ ಬಗ್ಗೆ ಐದನೇ ಫೈನಾನ್ಸ್ ಕಮಿಷನ್ ಅವಾರ್ಡು ಬಂದಮೇಲೆ ನಮಗೆ ಇದರಲ್ಲಿ ಸ್ವಲ್ಪ ಹೆಚ್ಚು ಹಣ ಬರತಕ್ಕ ಸಾಧ್ಯತೆ ಇದೆ. ಇದಕ್ಕಾಗಿ 1974-75 ರಲ್ಲಿ 40 ಕೋಟಿ ರೂಪಾಯಿಯ ಮೇಲೆ 50 ಕೋಟಿ ರೂಪಾಯಿಯೊಳಗೆ ಖರ್ಚು ಮಾಡಬೇಕೆಂದು ಯೋಜನೆಗಳನ್ನು ಮಾಡಿ ಇದಕ್ಕಾಗಿ ಖರ್ಚು ಮಾಡಬೇಕೆಂದು ಪ್ರಯತ್ನ ಮಾಡಬೇಕು ಎನ್ನುವುದು ಸರಕಾರದ ಆಸೆಯಾಗಿದೆ. ಇನ್ನು ಕೆಲವು ಯೋಜನೆಗಳ ಬಗ್ಗೆ ಯಾವ ರೀತಿ ಹಿಂದೆ ಮಾಡಿದ್ದರು ಎನ್ನುವುದರ ಬಗ್ಗೆ ಸಭೆಯ ಗಮನವನ್ನು ಸೆಳೆಯಲು ಇಷ್ಟಪಡುತ್ತೇನೆ.

ಇನ್ನು ಮುಖ್ಯವಾಗಿ ಘಟಪ್ರಭಾದಿಂದ ಈಗ ಒಂದು ಲಕ್ಷ 48 ಸಾವಿರ ಎಕರೆಗೆ ನೀರಾವರಿಯಾಗುತ್ತಿದೆ. ಜೂನ್ 1974ರ ವೇಳೆಗೆ 2 ಲಕ್ಷದ 98 ಸಾವಿರ ಎಕರೆಗೆ ನೀರನ್ನು ಕೊಡುವ

ಗುರಿಯನ್ನು ಇಟ್ಟುಕೊಂಡಿದ್ದೇವೆ. ಗಾರ್ಜ್ ಪೋರ್‌ಷನ್ ಕೆಲಸವನ್ನು ಮುಗಿಸುವುದಕ್ಕೆ ಏರ್ಪಾಡು ಮಾಡಿದ್ದೇವೆ ಮತ್ತು ಬಂದಂಥ ಪ್ರವಾಹವನ್ನು ಬೇರೆ ಕಡೆಗೆ ತಿರುಗಿಸುವುದಕ್ಕೆ ಪ್ರಯತ್ನ ಮಾಡಿದಾಲಾಗಿದೆ. ಈ ಬಗ್ಗೆ ಮಾನ್ಯ ದೇವೇಗೌಡರು ಕೆಲವು ತಾಂತ್ರಿಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲು ಇದನ್ನು ರಾಕ್ ಫಿಲ್‌ನಲ್ಲಿ ಕಟ್ಟಬೇಕೆಂದು ತೀರ್ಮಾನವಾಗಿತ್ತು ಸೆಂಟ್ರಲ್ ವಾಟರ್. ಬೋರ್ಡಿನ ಟೀಮಿನವರು ಮತ್ತು ಅಂದಿನ ಕೇಂದ್ರದ ನೀರಾವರಿ ಮಂತ್ರಿಗಳಾದ ಶ್ರೀ ಕೆ. ಎಲ್. ರಾವ್ ಅವರು ಬಂದು ನೋಡಿದ ಮೇಲೆ, ಇದನ್ನು 1965ರಲ್ಲಿ ಅಪ್ರೂವ್ ಮಾಡಿದರೆಂದು ಕಾಣುತ್ತದೆ. ಅದು ಆದಮೇಲೆ ರಾಕ್ ಫಿಲ್ ಬದಲಾವಣೆ ಮಾಡಿ ಅರ್ತ್ ಫಿಲ್‌ನಲ್ಲಿ ಕಟ್ಟಬೇಕೆಂದು ತೀರ್ಮಾನ ತೆಗೆದುಕೊಂಡರು. ಈ ಬಗ್ಗೆ ಸರ್ಕಾರದ ಒಬ್ಬರು ಇಂಜಿನಿಯರ್ ಬಗ್ಗೆ ಪದೇ ಪದೇ ಪ್ರಸ್ತಾಪವಾಗುತ್ತಿರುತ್ತದೆ. ಅದನ್ನು ನಾನು ಗಮನಿಸು ತ್ತಿರುತ್ತೇನೆ. ಆದರೆ ಆ ರೀತಿ ಪ್ರಸ್ತಾಪ ಮಾಡುವುದು ಸೂಕ್ತವಲ್ಲ. ಇದಕ್ಕೆ ಒಂದು ಸ್ವಲ್ಪ ಕೊನೆ ಮುಟ್ಟಿಸಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ಏಕೆಂದರೆ ಯಾರೇ ಇಂಜಿನಿಯರುಗಳು ಕೆಲಸ ಮಾಡಿಸಿರಲಿ, ಅಂತಿಮವಾಗಿ ಅದಕ್ಕೆ ಸರ್ಕಾರವೇ ಬಾಧ್ಯತೆ ಹೊಂದಬೇಕಾಗುತ್ತದೆ. ಇಂಜಿನಿಯರ್‌ಗಳು ಏನಾದರು ತಪ್ಪು ಮಾಡಿದ್ದರೆ ಅವರಿಗೆ ಶಿಕ್ಷೆ ಕೊಡಬೇಕಾಗಿದ್ದು ಅಂದಿನ ಸರ್ಕಾರದ ಕರ್ತವ್ಯವಾಗಿತ್ತು. ಶಿಕ್ಷೆ ಮಾಡಲಿಲ್ಲ ಎಂದರೆ ಅದರ ಅರ್ಥವಾದರೂ ಏನು ? ಮಾನ್ಯ ದೇವೇಗೌಡರು ಪಿ. ಎ. ಸಿ. ಛೇರ್‌ಮನ್ ಆಗಿ ಇದ್ದುಕೊಂಡು ಸಹ ಅನೇಕ ವಿಷಯ ಗಳನ್ನು ಕೇಳಿದರು. ರಾಕ್ ಫಿಲ್ ಕೆಲಸವನ್ನು ಒಬ್ಬ ಕಂಟ್ರಾಕ್ಟರ್‌ಗೆ ವಹಿಸಲಾಗಿತ್ತು. ಆದರೆ ಕೆಲಸ ಬಹಳ ಮಂದಗತಿಯಲ್ಲಿ ನಡೆಯುತ್ತಿತ್ತು. ಆಗ ಆಗಿನ ಸರ್ಕಾರದವರು ಆ ಕಂಟ್ರಾಕ್ಟ್ ದಾರನಿಗೆ ಶಿಕ್ಷೆ ವಿಧಿಸಬಹುದಾಗಿತ್ತು. ಅದಕ್ಕೆ ಅವಕಾಶ ಸಹ ಇತ್ತು. ಆದರೆ ಅಂದಿನ ಸರ್ಕಾರ ಏನೂ ಮಾಡಲಿಲ್ಲ? ಆ ಕಂಟ್ರಾಕ್ಟ್‌ದಾರ ಡಿಫಾಲ್ಟರ್ ಆಗಿದ್ದ, ಕರಪ್ಟ್ ಆಗಿದ್ದ ಎಂದು ಗೊತ್ತಿದ್ದರೂ ಸಹ ಯಾವ ಕ್ರಮವನ್ನೂ ಸಹ ತೆಗೆದುಕೊಳ್ಳಲಿಲ್ಲ. ಆದರೆ ಸೆಂಟ್ರಲ್ ವಾಟರ್ ಬೋರ್ಡ್‌ನ ಟೀಮ್‌ನವರು ಮತ್ತು ಕೆ. ಎಲ್. ರಾವ್ ಅವರು ಬಂದು ನೋಡಿ ಅಪ್ರೂವ್ ಮಾಡಿದಂಥ ಡಿಸೈನನ್ನು ಬದಲಾವಣೆ ಮಾಡಿದರು. ಇದು ಹೊರಗಡೆಗೆ ಏನು ತೋರಿಸುತ್ತ ದೆಂದರೆ, ಕಂಟ್ರಾಕ್ಟ್‌ದಾರನಿಗೆ ಸೌಲಭ್ಯ ಮಾಡಿಕೊಡಲು ಡಿಸೈನ್ ಬದಲಾವಣೆ ಮಾಡಿದರು ಎಂದು ಅರ್ಥ ಬರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ :—ಡಿಸೈನ್ ಬದಲಾವಣೆ ಮಾಡಿದ ಕಥೆಯನ್ನು ಹೇಳುವುದಕ್ಕೆ ಬದಲು ಕೆ. ಎಲ್. ರಾವ್ ಅವರು ಅಪ್ರೂವ್ ಮಾಡಿದಂಥ ಟೆಕ್ನಿಕಲ್ ಡಿಸೈನನ್ನು ಯಾರು ಬದಲಾವಣೆ ಮಾಡಿದರು ? ಈ ಬಗೆ ಸರ್ಕಾರದ ಮಿನಿಟ್ಸ್ ಏನಾದರೂ ಹೋಯಿತೇ ? ಫೋನ್‌ನಲ್ಲಿ ಏನಾದರೂ ಹೇಳಲಾಯಿತೇ ? ಓರಲ್ ಇನ್‌ಸ್ಟ್ರಕ್ಷನ್ ಏನಾದರೂ ಕೊಡಲಾಯಿತೇ ? ಎಂಬುದನ್ನು ತಿಳಿಸಬೇಕು. ಈ ರೀತಿ ಮಾಡಬೇಕೆಂದು ಸಜೆಷನ್ ಕೊಟ್ಟ ಆ ದಕ್ಷ ಇಂಜಿನಿಯರ್ ಯಾರು ಎಂಬುದನ್ನು ಹೇಳಿ ?

ಶ್ರೀ ಎಚ್. ಎನ್. ನಂಜೇಗೌಡ :—ಅದನ್ನು ಪರಿಶೀಲನೆ ಮಾಡಿ ನೋಡಿದ್ದೇನೆ. ಇದ್ದ ಟೆಕ್ನಿಕಲ್ ಸಬ್–ಕಮಿಟಿ ಮುಂದೆ ಹೋಗಿತ್ತು ; ಕಂಟ್ರೋಲ್ ಬೋರ್ಡ್ ಮುಂದೆ ಸಹ ಹೋಗಿತ್ತು. ಆಗಿನ ಸರ್ಕಾರ ಕೂಡ ಒಪ್ಪಿದೆ. ಇಂತಹ ಸಂದರ್ಭಗಳಲ್ಲಿ ಸರ್ಕಾರಕ್ಕೆ ಏನು ಬೇಕಾದರೂ ಮಾಡುವುದಕ್ಕೆ ಅಧಿಕಾರವಿದೆ. ಕಾನೂನು ಬದ್ಧವಾಗಿ ತಪ್ಪು ಮಾಡುವುದಕ್ಕೆ ಸಾಧ್ಯವಿದೆ. ಕಾನೂನು ಮೀರದೆ ಕಂಟ್ರಾಕ್ಟರ್‌ಗೆ ಸೌಲಭ್ಯ ಒದಗಿಸುವುದಕ್ಕೂ ಸಾಧ್ಯವಿದೆ. ಆಡಳಿತ ನಡೆಸಿರುವ ಯಾರಿಗೇ ಆಗಲಿ, ಇದು ಗೊತ್ತಿರುವ ವಿಷಯ.

ಶ್ರೀ ಎಚ್. ಡಿ. ದೇವೇಗೌಡ :—ನೀವು ಆಡಳಿತ ಇದುವರೆಗೆ ನಡೆಸಿರಲಿಲ್ಲ ; ಆದ್ದರಿಂದ ನಿಮಗೆ ಅಷ್ಟೊಂದು ಗೊತ್ತಿಲ್ಲವೆಂದು ಕಾಣುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ :—ವಿರೋಧಪಕ್ಷದ ನಾಯಕರ ಬಗ್ಗೆ ನಾನು ಅಷ್ಟೊಂದು ಲಘುವಾಗಿ ಯೋಚನೆ ಮಾಡುವುದಕ್ಕೆ ತಯಾರಿಲ್ಲ. ನಿಮಗೆ ಇದರ ವಿವರವೆಲ್ಲಾ ಗೊತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ :—ಇದರಲ್ಲಿ ನಾನಂತೂ ಭಾಗಿಯಾಗಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ :—ಮುಖ್ಯಮಂತ್ರಿಗಳು ಮಲಪ್ರಭಾ ಯೋಜನೆಯ ಬಗ್ಗೆ ಆಗಾಗ್ಗೆ ಹೇಳುತ್ತಿರುತ್ತಾರೆಂದು ಮಾನ್ಯ ದೇವೇಗೌಡರು ಹೇಳಿದರು. ಗಾರ್ಜ್ ಪೋರ್‌ಷನ್ ಕೆಲಸವಾಗಿದ್ದರೂ ಸಹ ನಾಲೆ ಕೆಲಸವಾಗಿಲ್ಲ ಎಂದು ಮಾನ್ಯ ಎದುರು ಪಕ್ಷದ ನಾಯಕರು ಹೇಳಿದರು. ಸಾಮಾನ್ಯವಾಗಿ ಯಾವುದೇ ಪ್ರಾಜೆಕ್ಟ್ ತೆಗೆದುಕೊಂಡರೂ ಸಹ ಶೇಕಡ 60ರಷ್ಟು ನಾಲೆ ಕೆಲಸಕ್ಕೆ ಮತ್ತು ಶೇಕಡ 40ರಷ್ಟು ಅಣೆಕಟ್ಟು ಕಟ್ಟಲು ಖರ್ಚು ಮಾಡಬೇಕೆಂದು ನಿಯಮವಿರುತ್ತದೆ. ಆದರೆ ಇಲ್ಲಿ ಅಣೆಕಟ್ಟಿನ ಕೆಲಸಕ್ಕೆ ಶೇಕಡ 20 ಭಾಗ ಮಾತ್ರ ಖರ್ಚಾಗಬಹುದು. ಗಾರ್ಜ್ ಪೋರ್‌ಷನ್ ಕೆಲಸ ಕಡಿಮೆ. ಆದ್ದರಿಂದ ಡ್ಯಾಮ್ ವರ್ಕನ್ನು ಮತ್ತು ಚಾನಲ್ ವರ್ಕನ್ನು ಯೋಚಿತ ರೀತಿಯಲ್ಲಿಯೇ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಹಿಂದೆ ಇದರ ಬಗ್ಗೆ ತಾಂತ್ರಿಕ ವರದಿ ಸರ್ಕಾರಕ್ಕೆ ಬಂದಿತ್ತು. ಈ ಮೊದಲೇ ನಾಲೆ ಕೆಲಸವನ್ನೂ ಸಹ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದರೆ ಜಾಸ್ತಿ ಪ್ರಯೋಜನವಾಗುತ್ತಿತ್ತು ಎಂದು ನನ್ನ ಅಭಿಪ್ರಾಯ. ಈಗ ಕ್ರೆಸ್ಟ್‌ಗೇಟ್‌ನ್ನು ಒಂದು ಕಡೆ ಹಾಕುತ್ತಿದ್ದೇವೆ. ಒಟ್ಟು ನಾಲ್ಕು ಕ್ರೆಸ್ಟ್ ಗೇಟ್‌ಗಳನ್ನು ಹಾಕಬೇಕಾಗಿದೆ. ಜೂನ್ ಕೊನೆಯೊಳಗೆ ನಾಲ್ಕು ಗೇಟ್‌ಗಳನ್ನು ಹಾಕುವ ಕೆಲಸ ಮುಗಿಯಬಹುದೆಂದು ನಾನಾದರೂ ಅಂದುಕೊಂಡಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ :—ಗೇಟ್ಸ್ ಹಾಕದೆ ನೀರು ಹೋಗುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಎಚ್. ಎನ್. ನಂಜೇಗೌಡ :—ಪ್ರೆಜರ್ ಇರದಿದ್ದರೂ ಸಹ ಸ್ವಲ್ಪ ಹೋಗುವುದಕ್ಕೆ ಅವಕಾಶವಿತ್ತು. ಏಕೆಂದರೆ ಕಾಂಟೂರ್ ಲೆವೆಲ್ ಇದೆ. ಆದ ಕಾರಣ ನೀರು ಫ್ಲೋ ಆಗುವುದಕ್ಕೆ ಅವಕಾಶವಿತ್ತು. ಈ ಯೋಜನೆಯು ಅಂದಾಜು 66 ಕೋಟಿ. ಇದರ ಪೈಕಿ 34 ಕೋಟಿ ರೂಪಾಯಿ ಖರ್ಚಾಗಿದೆ.

ಮಲಪ್ರಭಾ ಬಗ್ಗೆ 99 ಕೋಟಿ ರೂಪಾಯಿಗಳಿಗೆ ಪುನರ್ವಿಮರ್ಶಿತ ಅಂದಾಜಾಗಿದೆ. ಈಗ 27 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಇನ್ನು ಅಪ್ಪರ್ ಕೃಷ್ಣಾದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಇದರ ಬಗ್ಗೆ ಮಾನ್ಯ ಪಾಟೀಲರು ಬಹಳ ಕಳಕಳಿಯಿಂದ ಹೇಳಿದ್ದಾರೆ. ಈ ಯೋಜನೆಗೆ 1972–73 ರಲ್ಲಿ 504 ಲಕ್ಷ ರೂಪಾಯಿಗಳು ಖರ್ಚಾಗಿದೆ. ಅದೇ ಅತಿ ಹೆಚ್ಚಿನ ಮೊತ್ತ. ರಾಜ್ಯಪಾಲರ ಆಡಳಿತ ಇದ್ದಾಗ 397 ಲಕ್ಷ ರೂಪಾಯಿಗಳು ಖರ್ಚಾಗಿತ್ತು, ಅದರ ಹಿಂದಿನ ವರ್ಷ 310 ಲಕ್ಷ ರೂಪಾಯಿಗಳು ಖರ್ಚಾಗಿತ್ತು, ಅದರ ಹಿಂದಿನ ವರ್ಷ 210 ಲಕ್ಷ ರೂಪಾಯಿಗಳು ಖರ್ಚಾಗಿತ್ತು. ಆದರೆ ಕಳೆದ ವರ್ಷವೇ ಹೆಚ್ಚು ಖರ್ಚಾಗಿರುವುದು. ಆಲಮಟ್ಟಿಗೆ ಮಂಜೂರಾತಿ ಪಡೆದಿದ್ದರಲ್ಲಿ 30 ಲಕ್ಷ ರೂಪಾಯಿಗಳು ಫೌಂಡೇಷನ್ ಎಕ್ಸ್‌ಕವೇಷನ್‌ಗೆ ಖರ್ಚಾಗಿದೆ. ನಾರಾಯಣಪುರದಲ್ಲಿ ಡ್ಯಾಂ ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದು ಅಲ್ಲಿ ಹತ್ತು ಅಡಿ ನೀರು ಹೆಚ್ಚು ಬರಬಹುದೆಂದು ಉದ್ದೇಶ ಇಟ್ಟುಕೊಂಡಂತೆ ನನಗೆ ಕಾಣುತ್ತದೆ. ಈಗ ಆಲಮಟ್ಟಿಗೆ ಕಮಿಟಿ ಆಗಿದೆ. ಅದರ ಕೆಲಸವನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಅದನ್ನು ಮುಂದುವರೆಸಬೇಕಾಗುತ್ತದೆ. ಇಷ್ಟನ್ನು ಮಾತ್ರ ಹೇಳಬಲ್ಲೆ.

ನಾರಾಯಣಪುರ ಅಣೆಕಟ್ಟಿಗೆ ಜಾಸ್ತಿ ಹಣವನ್ನು ಖರ್ಚು ಮಾಡುವುದಕ್ಕೆ ಅವಕಾಶವಿದ್ದರೂ ಕೂಡ ಲ್ಯಾಂಡ್ ಅಕ್ವಿಜಿಷನ್‌ಗಾಗಿ ಮತ್ತು ಕಾಲೋನಿ ಮಾಡುವುದಕ್ಕಾಗಿ ಸ್ವಲ್ಪ ಹಣ ಖರ್ಚಾಗಿದೆ. ಅದು ಅಂಥಾ ಗಮನಾರ್ಹವಾದ ಹಣವೇನೂ ಅಲ್ಲ ಎಂದು ಕಂಡುಬರುತ್ತದೆ.

ಇನ್ನೊಂದು ವಿಷಯವೇನೆಂದರೆ ಕೃಷ್ಣಾ ಮೇಲ್ದಂಡೆಯ ಯೋಜನೆ ಕೆಲಸವನ್ನು ಕಂಟ್ರಾಕ್ಟರಿಗೆ ಕೊಡುವಾಗ ಕಂಟ್ರಾಕ್ಟರಿಂದ ಅರ್ನೆಸ್ಟ್ ಡಿಪಾಜಿಟ್ ಪಡೆಯದೆ ಕಂಟ್ರಾಕ್ಟ್ ಕೊಟ್ಟ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಸ್ವಲ್ಪ ಕಟುವಾಗಿ ಟೀಕೆ ಮಾಡಿದ್ದಾರೆ. ಇದರಲ್ಲಿ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಇದರಲ್ಲಿ ಯಾರ ಮೇಲೂ ಆಪಾದನೆ ಮಾಡು ವುದಕ್ಕಾಗಲೀ ಹಿಂದಿನ ಸರ್ಕಾರಕ್ಕೆ ಮಸಿಬಳಿಯುವ ಉದ್ದೇಶದಿಂದಲಾಗಲೀ ನಾನು ಇದನ್ನು ಹೇಳುತ್ತಿಲ್ಲ. ನಿಮ್ಮ ಸಮಾಧಾನಕ್ಕೆ ನಿಮ್ಮ ಮುಖಾಂತರ ದೇಶದ ಜನತೆಗೆ ಗೊತ್ತಾಗಲಿ ಎನ್ನುವ ದೃಷ್ಟಿಯಿಂದ ಈ ಒಂದು ಉದಾಹರಣೆಯನ್ನು ನಾನು ಹೇಳಬೇಕಾಗುತ್ತದೆ. 1970 ನೇ ಇಸವಿ ಮೇ ತಿಂಗಳಿನಲ್ಲಿ ಆಲಮಟ್ಟಿ ಅಣೆಕಟ್ಟಿಗೆ ಸಂಬಂಧಿಸಿದ 6 ಕೋಟಿ 30 ಲಕ್ಷ ರೂಪಾಯಿಗಳ ಒಂದು ಕೆಲಸವನ್ನು ಒಬ್ಬ ಕಂಟ್ರಾಕ್ಟರಿಗೆ ಕೊಡಲಾಯಿತು. ಆದರೆ ಆ ಕಂಟ್ರಾಕ್ಟರಿಂದ ಅರ್ನೆಸ್ಟ್ Money ಡಿಪಾಜಿಟ್ ಪಡೆಯದೆ, ಒಪ್ಪಂದವಿಲ್ಲದೆ ಆ ಕೆಲಸವನ್ನು ಅವರಿಗೆ ಕೊಟ್ಟಿದ್ದಾರೆ. ಅಗ್ರಿಮೆಂಟ್ ಆಗಿಲ್ಲ, ಟೆಂಡರ್ ಫೈನಲ್ ಆಗಿಲ್ಲ, ಅರ್ನೆಸ್ಟ್ ಡಿಪಾಜಿಟ್ ಆಗಿಲ್ಲ. ಅಂಥವರಿಗೆ 40 ಲಕ್ಷ ರೂಪಾಯಿಗಳನ್ನು ಮೆಷಿನರಿಗಾಗಿ ಅಡ್ವಾನ್ಸ್ ಕೊಟ್ಟಿದ್ದಾರೆ.

Sri H. D. DEVE GOWDA.—Who is that officer who allowed the work to go on without taking the earnest money deposit and Agreement ? I am not prepared to allow that officer to go by default.

ಶ್ರೀ ಎಚ್. ಎನ್. ನಂಜೇಗೌಡ :—ಅದು ಅಧಿಕಾರಿಗಳ ಮಟ್ಟದಲ್ಲಾಗಿರಬಹುದು, ಬೇರೆ ಮಟ್ಟದಲ್ಲಾಗಿರಬಹುದು. ಅದು ಬೇಡ.

ಶ್ರೀ ವಾಟಾಳ್ ನಾಗರಾಜ್ :—ಅದು ಶ್ರೀಮಾನ್ ದೇವೇಗೌಡರು ಮತ್ತು ಶ್ರೀಮಾನ್ ನಂಜೇಗೌಡರ ಪರ್ಸನಲ್ ವ್ಯವಹಾರವಲ್ಲ. ಆದ್ದರಿಂದ ಆ ಅಧಿಕಾರಿಯ ಹೆಸರನ್ನು ಹೇಳಿ.

ಶ್ರೀ ಎಚ್. ಎನ್. ನಂಜೇಗೌಡ :—ಹೇಳುತ್ತೇನೆ, ಸ್ವಲ್ಪ ಸಮಾಧಾನ ಮಾಡಿ.

ಶ್ರೀ ಕೋಣಂದೂರು ಲಿಂಗಪ್ಪ :—ನೀವು ಆ ಅಧಿಕಾರಿಯ ಹೆಸರನ್ನು ಹೇಳದೇ ಹೋದರೆ ನೀವೂ ಅದರಲ್ಲಿ ಶಾಮೀಲಾಗಿದ್ದೀರಿ ಎಂದಾಗುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ :—ಮೊದಲು ಸಮಾಧಾನ ಮಾಡೋಣ. ಒಂದೊಂದಾಗಿ ಹೇಳಿದರೆ ಎಲ್ಲವೂ ಅರ್ಥವಾಗುತ್ತದೆ. ಇದರಲ್ಲಿ ತಪ್ಪು ಮಾಡಿರುವ ಆಫೀಸರು ಯಾರೇ ಆಗಿರಲಿ, ಅದು ಅಧಿಕಾರಿಗಳ ಮಟ್ಟದಲ್ಲಿ ಆಗಿರಬಹುದು. ತಪು ಮಾಡಿರತಕ್ಕವರು ಯಾರೇ ಆಗಿರಲಿ, ಅವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಇವರು ಹೇಳುತ್ತಿದ್ದಾರೆ. ಆದರೆ ಯಾವ ಮಟ್ಟದಲ್ಲಿ, ತಪ್ಪಾಗಿದೆ ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕು.

Sri H. D. DEVE GOWDA.—I am not attributing any motive for the ratification of the previous commitment. I have not

made any allegation against the present Ministry so far as major projects are concerned. I feel it is a grave mistake on the part of the Chief Engineer who has allowed the contractor to execute the work without taking the earnest money deposit and also Agreement. I want details.

ಶ್ರೀ ಎಚ್. ಎನ್. ನಂಜೇಗೌಡ :—1970ನೇ ಇಸವಿಯಲ್ಲಿ ಯಾರು ಇದ್ದರು, ಅವು ಅಧಿಕಾರಿ ಮಟ್ಟದಲ್ಲಿ ಆಗಿದೆಯೇ ಅಥವಾ ಯಾವ ಮಟ್ಟದಲ್ಲಿ ಆಗಿದೆ ಎಂಬುದನ್ನು ಕಾಲ ಬಂದಾಗ ಹೇಳುತ್ತೇನೆ. ಅದನ್ನು ಹೇಳಿದರೆ ಶ್ರೀಮಾನ್ ದೇವೇಗೌಡರು ಒಪ್ಪಿಕೊಳ್ಳುತ್ತಾರೆ ಎಂದು ಕಾಣುತ್ತದೆ. ಅದಕ್ಕೆ ಯಾರು ಜವಾಬ್ದಾರರು ಎನ್ನುವ ಅಂಕಿಅಂಶಗಳನ್ನು ಹೇಳುತ್ತೇನೆ.

Sri H. D. DEVE GOWDA.—The Government have taken steps to suspend one Executive Engineer and one Assistant Engineer for having given excess measurement in Hemavathi. I want to know why such a grave mistake has been allowed in Almatti.

ಶ್ರೀ ಎಚ್. ಎನ್. ನಂಜೇಗೌಡ :—ವೈಯಕ್ತಿಕವಾಗಿ ಆಫೀಸರ ಹೆಸರನ್ನು ಹೇಳುವಂತಹ ಅವಶ್ಯಕತೆ ಇಲ್ಲ. ಒಂದು ವೇಳೆ ಇಂಜಿನಿಯರೇ ತಪ್ಪು ಮಾಡಿದ್ದರೂ ಸಹ ಆಗಿದ್ದ ಸರ್ಕಾರವೇ ಅದಕ್ಕೆ ಹೊಣೆಯಾಗಬೇಕಾಗುತ್ತದೆ.

ಶ್ರೀ ಕೆ. ಎಂ. ನಾಗಣ್ಣ :—ಇದು ಸಭೆಯ ಪ್ರಶ್ನೆ. ಆ ಅಧಿಕಾರಿಯ ಹೆಸರನ್ನು ಹೇಳುವುದಕ್ಕೆ ಏತಕ್ಕೆ ಹೆದರುತ್ತೀರಾ ? ಆ ಅಧಿಕಾರಿ ಯಾರು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನಾವು ಇಚ್ಛೆಪಡುತ್ತೇವೆ. ಅದನ್ನು ತಿಳಿಸಬೇಕಾದ್ದು ಮಾನ್ಯ ಮಂತ್ರಿಗಳ ಕರ್ತವ್ಯ. ಆ ಕರ್ತವ್ಯವನ್ನು ಅವರು ಮಾಡದಿದ್ದರೆ ಅವರು ತಮ್ಮ ಕರ್ತವ್ಯವನ್ನು ಲೋಪ ಮಾಡಿದಂತಾಗುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ :—ಇಡೀ ಸಮಸ್ಯೆಯ ಬಗ್ಗೆ ಯಾರು ಅಪರಾಧಿ ಎಂದು ಅವರ ಹೆಸರನ್ನು ಹೇಳುವುದಕ್ಕೆ ಅವರು ಅಪರಾಧಿ ಹೌದೋ ಅಲ್ಲವೋ ಎಂಬುದನ್ನು ಸಾಬೀತು ಮಾಡುವುದಕ್ಕೆ ಯಾವ ಮಟ್ಟದಲ್ಲಿ ಇರ್ರೆಗ್ಯುಲಾರಿಟೀಸ್ ಆಗಿದೆ ಎಂಬುದನ್ನು ಪರಿಶೀಲಿಸಬೇಕು.

ಅದನ್ನು ಹೇಳುವುದರಲ್ಲಿ ಏನೂ ತೊಂದರೆ ಇಲ್ಲ. ಈಗಿರತಕ್ಕ ಪಿ.ಡಬ್ಲ್ಯು.ಡಿ. ರೂಲ್ಸ್ ಮೀರಿ ಕೆಲವು ವ್ಯವಹಾರಗಳು ನಡೆದಿವೆಯೆಂದು ಹೇಳುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ :—ಇಂದು ಇದರಲ್ಲಿ ಯಾರ್ಯಾರು ತಪ್ಪು ಮಾಡಿದ್ದಾರೆ ಎನ್ನುವುದರ ಬಗ್ಗೆ ಪೂರ್ಣ ವಿವರಗಳನ್ನು ತಾವು ಸಂಗ್ರಹಮಾಡಿ, ಯಾವ್ಯಾವ ಅಧಿಕಾರಿಯ ತಪ್ಪು ಎಷ್ಟೆಷ್ಟು, ಚೀಫ್ ಇಂಜಿನಿಯರದು ಎಷ್ಟು, ಪಿ. ಡಬ್ಲ್ಯು. ಡಿ. ಸೆಕ್ರೆಟರಿಯವರದು ಎಷ್ಟು, ಸಂಬಂಧಪಟ್ಟ ಮಂತ್ರಿಗಳ ತಪ್ಪು ಎಷ್ಟು ಇವೆಲ್ಲವನ್ನೂ ಸಂಗ್ರಹಮಾಡಿ ಈ ಸಭೆಗೆ ಒಂದು ವರದಿ ಕೊಡುತ್ತೇನೆಂದು ಹಿಂದೆ ಹೇಳಿದಿರಿ. ಒಂದು ವೇಳೆ ಮಂತ್ರಿಗಳೇ ಹೇಳಿ ಮಾಡಿಸಿದ್ದಾರೆಂಬ ಸಂದೇಹವೂ ಇದೆ. ಆದ್ದರಿಂದ ಇದರ ಬಗ್ಗೆ ಪೂರ್ಣ ವಿವರಗಳು ಬೇಕು. ನನಗೆ ಈ ವಿಚಾರದಲ್ಲಿ ಯಾರ ಮೇಲೂ ದ್ವೇಷವಿಲ್ಲ. ವೈಯಕ್ತಿಕವಾಗಿ ಯಾರನ್ನೂ ಇದರಲ್ಲಿ ಡಿಫೆಂಡ್ ಮಾಡುವುದಕ್ಕೆ ನಾನು ಇಲ್ಲಿ ಕುಳಿತಿಲ್ಲ. ನೀವು ಡಿಫೆಂಡ್ ಮಾಡುತ್ತೇವೆಂದು ಹೇಳಿದರೆ ಹೇಳಿಕೊಳ್ಳಿ.

ಶ್ರೀ ಎಚ್. ಎನ್. ನಂಜೇಗೌಡ :—ಈ ಸರ್ಕಾರ ಆ ವಿಷಯಗಳನ್ನು ಈ ಸಭೆಯಲ್ಲಿ ಎತ್ತುವುದಕ್ಕೆ ಮುಚ್ಚುಮರೆಯೇನೂ ಇಲ್ಲ. Government is privileged to do so many things.

ಶ್ರೀ ಎಚ್. ಡಿ. ದೇವೇಗೌಡ :— ಒಬ್ಬ ಎಗ್ಸಿಕ್ಯುಟಿವ್ ಇಂಜಿನಿಯರ್ 50 ಸಾವಿರ ರೂಪಾಯಿಗಳಿಗೆ ಹೇಮಾವತಿ ಪ್ರಾಜೆಕ್ಟ್ ಕೆಲಸದ ಬಗ್ಗೆ ಒಂದು ಬಿಲ್ ಡ್ರಾ ಮಾಡಿ ಪಾಸ್ ಮಾಡಿಸಿ ಕೊಡುತ್ತೇನೆಂದು ಹೇಳಿ ಮಾನ್ಯ ಶ್ರೀ ನಂಜೇಗೌಡರು ಮಾಡಿಸಿಕೊಟ್ಟರು. ಇದರಿಂದ ರೆಸ್‌ಪಾನ್ಸಿಬಿಲಿಟಿ ಮಂತ್ರಿಗಳ ಮೇಲೆ ಆಯಿತೇ ಹೊರತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಆಗಿಲ್ಲವೆಂಬುದು ವ್ಯಕ್ತವಾಗುತ್ತದೆ. ನಾನು ಹೇಳುವುದೇನೆಂದರೆ. The responsibltiy lies on the officer. Please do not try to give an evasive answer. I want a categorical reply as to who is the officer concerned and what action Government proposes to take against such an officer who has gone to the extent of allowing the contractor .... ನೀವು ಬಹಳ ಮುಂದೆ ಹೋಗಬೇಡಿ. ಇದು ಹಳೆಯ ರೋಗ ಇದ್ದ ಹಾಗೆ. ಎಗ್ಸಿಕ್ಯುಟಿವ್ ಇಂಜಿನಿಯರ್ ಹೇಮಾವತಿ ಪ್ರಾಜೆಕ್ಟಿನಲ್ಲಿ ಒಬ್ಬರನ್ನು ಸಸ್‌ಪೆಂಡ್ ಮಾಡಿದಾಗ, ಜೂನಿಯರ್ ಇಂಜಿನಿಯರ್ ಒಬ್ಬರನ್ನು ಸಸ್‌ಪೆಂಡ್ ಮಾಡಲಿಲ್ಲವೆಂದು ಸರ್ಕಾರ ಹೇಳುವುದಕ್ಕೆ ಶುರು ಮಾಡಿದರೆ ಅದಕ್ಕೆ ಬೇಕಾದಷ್ಟು ಕಾರಣಗಳು ಇವೆ. ಆದ್ದರಿಂದ ಸರ್ಕಾರದವರು ಈ ಒಂದು ವಿಷಯದಲ್ಲಿ ಎಲ್ಲಾ ವಿವರಣೆಗಳನ್ನು ಕೊಡಬೇಕು.

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ) :—ಮಾನ್ಯ ಮಂತ್ರಿಗಳು ಅವರ ಹೆಸರನ್ನು ಹೇಳಲೇ ಬೇಕು. ಇದು ನಿಮ್ಮ, ನಮ್ಮ ಹಾಗೂ ಮಾನ್ಯ ಶ್ರೀ ದೇವೇಗೌಡರ ಪ್ರಶ್ನೆಯಲ್ಲ. ನಮಗೆ ವಿವರಗಳು ಚೆನ್ನಾಗಿ ಗೊತ್ತಾಗಬೇಕು. ಆ ರೀತಿ ಅವರಿಗೆ ಅಧಿಕಾರ ಕೊಟ್ಟವರು ಯಾರು? ತಾವು ದಯಮಾಡಿ ಅವರ ಹೆಸರನ್ನು ತಿಳಿಸಬೇಕು. ಯಾರು ಆ ಅಧಿಕಾರಿ ಎಂಬುದನ್ನು ಹೇಳಲೇ ಬೇಕು. ಮಾನ್ಯ ಶ್ರೀ ದೇವೇಗೌಡರು ಬೇಕಾದರೆ ಅವರ ಹೆಸರನ್ನು ನಿಧಾನವಾಗಿ ಹೇಳುತ್ತೇವೆಂದರೆ ಒಪ್ಪಿಕೊಳ್ಳಬಹುದು. ನನಗೆ ಮಾತ್ರ ಅವರ ಹೆಸರನ್ನು ಈಗಲೇ ಹೇಳಬೇಕು.

ಶ್ರೀ ಎಚ್. ಎನ್. ನಂಜೇಗೌಡ :—ಇದರ ಮೆರಿಟ್, ಡಿಮೆರಿಟ್ ವಿಷಯವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಈಗಾಗಲೇ ಸೂಚನೆ ಕೊಟ್ಟಿದ್ದೇನೆ. ಅದನ್ನು ಪರಿಶೀಲಿಸಿ ಈ ಸಭೆಗೆ ವರದಿ ಮಾಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ:—ವರದಿ ನೀವು ಹೋದಮೇಲೆ ಬರಬಹುದು. ಎಲ್ಲರಿಗೂ ಗೊತ್ತಿದ್ದ ಹಾಗೆ ಸುಮಾರು 25 ವರ್ಷಗಳಿಂದಲೂ ವರದಿಗಳನ್ನು ಕೊಟ್ಟಿದ್ದಾರೆ. ಈಗ ಯಾರೇ ತಪ್ಪು ಮಾಡಿರುವುದು ಗೊತ್ತಾಗಬೇಕಾದರೆ, ಅದರ ಬಗ್ಗೆ ವರದಿ ಕೊಡುವುದರ ಮೇಲೆ ಅವಲಂಬಿಸುತ್ತದೆ. ಹೆಸರು ಹೇಳುವಾಗ ಅವರೇ ಕಾರಣರು ಎಂದು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ :—1970ನೇ ಇಸವಿಯಲ್ಲಿ ಶ್ರೀ ಬಾಳೆಕುಂದ್ರಿಯವರು ಚೀಫ್ ಇಂಜಿನಿಯರ್ ಆಗಿದ್ದರು. ಆದರೆ ಅವರೇ ಇದಕ್ಕೆ ಕಾರಣವೆಂದು ನಾನು ಇವತ್ತು ಹೇಳುತ್ತಾ ಇಲ್ಲ. ಇಡೀ ಪ್ರಶ್ನೆಯನ್ನು ವಿಮರ್ಶೆಮಾಡಿ ನೋಡಬೇಕು.

ಶ್ರೀ ಎಚ್. ಡಿ. ದೇವೇಗೌಡ :—ನೀವು ಈ ಸಭೆಗೆ ವರದಿ ಕೊಡುತ್ತೇನೆಂದು ಹೇಳಿದಿರಿ. ಈ ಪ್ರಸಂಗ ಒಂದರ ಬಗ್ಗೆ ಪೂರ್ಣ ವಿವರ ಕೊಡಿ.

ಶ್ರೀ ಎಚ್. ಎನ್. ನಂಜೇಗೌಡ :—ಮುಂದೆ ಈ ಸಭೆಯೊಳಗೆ ಅದರ ಬಗ್ಗೆ ವಿವರಣೆ ಕೊಡುತ್ತೇನೆಂದು ಈಗಲೇ ತಮಗೆ ಭರವಸೆ ಕೊಡುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ :—ಆ ವರದಿಯನ್ನು ಯಾವತ್ತು ಕೊಡುತ್ತೀರಿ ಎಂಬುದನ್ನು ಈಗಲೇ ಹೇಳಬೇಕು.

ಶ್ರೀ ಎಚ್. ಎನ್. ನಂಜೇಗೌಡ :—ಅದನ್ನು ಪರಿಶೀಲಿಸಿ ಸರ್ಕಾರಕ್ಕೆ ನಷ್ಟವಾಗದೇ ಇರುವ ರೀತಿಯಲ್ಲಿ ವ್ಯವಸ್ಥೆಮಾಡಿ ಇದನ್ನು ಮುಗಿಸಬೇಕು.

ಶ್ರೀ ಕೆ. ಎಂ. ನಾಗಣ್ಣ :—ನಿಮ್ಮ ವ್ಯವಸ್ಥೆಯ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ ಇದನ್ನು ಯಾವ ಕಂಟ್ರಾಕ್ಟರಿಗೆ ಕೊಟ್ಟರು ? ಇಂಜನಿಯರ್ ಯಾರು ?

ಶ್ರೀ ಎಚ್. ಎನ್. ನಂಜೇಗೌಡ:—ಕಂಟ್ರಾಕ್ಟರ್ ಷಾ ಕನ್‌ಸ್ಟ್ರಕ್ಷನ್ ಕಂಪೆನಿ, ಇಂಜಿನಿಯರ್ ಶ್ರೀ ಬಾಳೆಕುಂದ್ರಿ ಅವರು. ಇವರೇ ಚೀಫ್ ಇಂಜನಿಯರ್. ಅವರು ಇದ್ದಂಥ ಕಾಲದಲ್ಲಿ ಇದರ ಬಗ್ಗೆ ಸರ್ಕಾರ ಹೊಣೆಯೇ, ಚೀಫ್ ಇಂಜಿನಿಯರ್ ಹೊಣೆಯೇ, ಅಥವಾ ಯಾರು ಹೊಣೆ ಎಂಬುದನ್ನು ಇನ್ನೂ ಪರಿಶೀಲನೆಮಾಡುತ್ತಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ :—ಮಾನ್ಯ ಶ್ರೀ ಬಾಳಕುಂದ್ರಿಯವರಿರಲಿ ಅಥವಾ ಯಾರೇ ಇರಲಿ. i am not bothered who that particular officer is Anybody who has done a mistake must be punished.

ಇದು 7–8 ತಿಂಗಳ ಮೊದಲೇ ಈ ಘಟನೆ ನಡೆದಿದೆ. ಈಗ ಆ ಕಂಟ್ರಾಕ್ಟರಿಗೆ ಎಷ್ಟು ಪೇಮೆಂಟ್ ಆಗಿದೆಯೆಂಬುದನ್ನು ಈ ಸಭೆಗೆ ತಿಳಿಸಬೇಕು. 1970 ನೇ ಮೇಯಿಂದ 1971ನೇ ಫೆಬ್ರವರಿವರೆಗೆ ಅಂದರೆ ಈ 9 ತಿಂಗಳು ಸರ್ಕಾರದ ಡೈರೆಕ್ಷನ್ ಮೇಲೆ ನೀವು ಅಗ್ರಿಮೆಂಟ್ ತೆಗೆದುಕೊಳ್ಳದೆ ಹಾಗೂ ಡಿಪಾಜಿಟ್ ತೆಗೆದುಕೊಳ್ಳದೆ ಮಾಡಿ ಎಂದು ಹೇಳಿದ್ದಾರೆ. ಆ ರೀತಿಯಾಗಿ ಹೇಳಿದರೆ ? ಹೇಗೆ ?

ಶ್ರೀ ಹೆಚ್. ಎನ್. ನಂಜೇಗೌಡ :—1970 ನೇ ಮೇ ಅಂದರೆ ರಾಜ್ಯಪಾಲರ ಆಡಳಿತದ ಅವಧಿ.

ಶ್ರೀ ಹೆಚ್. ಡಿ. ದೇವೇಗೌಡ :—ಈ 9 ತಿಂಗಳವರೆಗೆ ಈ ಅಧಿಕಾರಿ ಯಾರ್ಯಾರಿಗೆ ಎಷ್ಟೆಷ್ಟು ಪೇಮೆಂಟ್‌ಗಳನ್ನು ಕೊಡಿಸಿದ್ದಾರೋ ಆ ವಿವರಗಳು ನನಗೆ ಈಗ ಬೇಕು.

ಶ್ರೀ ಹೆಚ್. ಎನ್. ನಂಜೇಗೌಡ :—ನಾನೀಗ ಯಾರನ್ನೂ ಅಪದಾನೆ ಮಾಡುವುದಕ್ಕೆ ಹೋಗುತ್ತಾ ಇಲ್ಲ. ಇಂತಹ ವ್ಯವಹಾರಗಳು ನಡೆಯುವಾಗ ಪಿ. ಡಬ್ಲ್ಯು. ಡಿ. ರೂಲ್ಸ್ ಮೀರಿ ಕೆಲವು ವ್ಯವಹಾರಗಳು ಆಗಿರುತ್ತವೆ. ಒಂದುವೇಳೆ ಇದಕ್ಕೆ ನಾನೇ ಕಾರಣವೆಂದು ಹೇಳಿದರೆ Government is at privilege to commit irregularities and later on ratify them also.

ಶ್ರೀ ಹೆಚ್. ಡಿ. ದೇವೇಗೌಡ :—ಹೇಮಾವತಿ ಪ್ರಾಜೆಕ್ಟ್ ಬಗ್ಗೆ ನಿಮ್ಮ ಹೆಸರು ಹೇಳಿಬಿಟ್ಟು ಅವರು ಕೊಡಿಸಿದರೆಂದು ಹೇಳಿದರೆ, ಅದು ಆ ರೀತಿ ಆಗುವುದಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ :—ನಾನು ಅದನ್ನು ರ್ಯಾಟಿಫೈ ಮಾಡಿದರೆ...

SRI H. D. DEVE GOWDA.—Even if it is ratified, it is not correct. ಅದು ಆಗುವುದಿಲ್ಲ. ಯಾರು ರ್ಯಾಟಿಫೈ ಮಾಡುತ್ತಾರೋ ಅವರೇ ಜವಾಬ್ದಾರರಾಗಬೇಕು. ಚೀಫ್ ಇಂಜಿನಿಯರ್ 50 ಸಾವಿರ, ಒಂದು ಲಕ್ಷ ರೂಪಾಯಿನ ಬಿಲ್ ಕೊಡಿ ಎಂದು ಹೇಳಿದ್ದರೆ, ಅಂತಹ ಚೀಫ್ ಇಂಜಿನಿಯರನ್ನು ಮನೆಗೆ ಕಳುಹಿಸುತ್ತೇನೆ. The Chief Engineer will be sent home. But there are certain formalities to be observed.

ಶ್ರೀ ಹೆಚ್. ಎನ್. ನಂಜೇಗೌಡ :—ಇಷ್ಟನ್ನು ಹೇಳಿ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಹೆಚ್ಚಿಗೆ ಆಸ್ಥೆವಹಿಸಿ ಅದನ್ನು ಸ್ವಲ್ಪ ಜಾಸ್ತಿ ಮಟ್ಟದಲ್ಲಿ ಮಾಡಬೇಕೆಂದು ಸರ್ಕಾರದ ಉದ್ದೇಶ ಇದೆ ಎಂದು ಹೇಳುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ :—ಬಹಳ ವರ್ಷಗಳಿಂದ ನಾವು ಈ ವಿಚಾರವನ್ನು ಸರ್ಕಾರದಲ್ಲಿ ಕೇಳುತ್ತಲೇ ಇದ್ದೇವೆ. ಖಚಿತವಾಗಿ ನಾವು ಏನು ಮಾಡಬೇಕೆಂಬುದನ್ನು ಹೇಳಬೇಕು. ಸಾವಿರಾರು ವರ್ಷಗಳಿಂದ ನಾವು ಕಷ್ಟದಲ್ಲಿಯೇ ಇದ್ದೇವೆ. ತಮಗೆ ಏನು ಶಕ್ಯವಿದೆ, ಭಾರತ ಸರ್ಕಾರದ ಧೋರಣೆ ಅಪ್ಪರ್ ಕೃಷ್ಣಾ ಬಗ್ಗೆ ಏನು ಎಂಬುದನ್ನು ಹೇಳಬೇಕು. ತಾವು ಇದನ್ನು ಎಷ್ಟು ದಿವಸಗಳಲ್ಲಿ ಮುಗಿಸುತ್ತೀರಿ ? ನೀವು 2 ಕೋಟಿ 55 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಮಾನ್ಯ ಶ್ರೀ ವೀರೇಂದ್ರಪಾಟೀಲ್ ಅವರು 3 ಕೋಟಿ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಿದ್ದರು. ಹೋದ ವರ್ಷದಿಂದಲೂ ನಮ್ಮ ಕಡೆ ಸ್ಪಷ್ಟವಾಗಿ ಹಳ್ಳಿಯ ಜನರು ನಮ್ಮನ್ನು ಈ ವಿಚಾರದಲ್ಲಿ ಕೇಳುತ್ತಿದ್ದಾರೆ. ನಮ್ಮನ್ನು ಅವರು ಇಲ್ಲಿಗೆ ಆರಿಸಿ ಕಳುಹಿಸಿದ್ದಾರೆ. ನಮ್ಮ ಕಡೆ ಈ ಯೋಜನೆ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಅದು ಆಗದಿದ್ದರೆ ನಾವು ಅಲ್ಲಿ ಇರಬೇಕೋ ಇಲ್ಲವೋ ಗೊತ್ತಿಲ್ಲ. ಅಲ್ಲಿನ ಜನರು ಉಪವಾಸ ಸಾಯುತ್ತಿದ್ದಾರೆ. ನಿಮ್ಮಿಂದ ಉತ್ತರವನ್ನು ಅವರು ನಿರೀಕ್ಷಿಸುತ್ತಿದ್ದಾರೆ. ತಮ್ಮ ಭೂದಾನ ಯೋಜನೆಯ ಬಗ್ಗೆ ನನಗೆ ಸಂಶಯವಿದೆ. ಮಾನ್ಯ ಶ್ರೀ ಡಿ. ಪಿ. ಧರ್ ಅವರ ಹಾಗೂ ಶ್ರೀಮತಿ ಇಂದಿರಾ ಗಾಂಧಿಯವರು ಈ ಯೋಜನೆಗೆ ಹೆಚ್ಚಿಗೆ ಸಹಾಯ ಮಾಡುತ್ತೇವೆಂದು ಹೇಳಿದ್ದರೂ ಹಿಂದೆ ಇದ್ದಂಥ ಸರ್ಕಾರದವರು ಈ ಒಂದು ಬಾಬಿಗೆ 3 ಕೋಟಿ ರೂಪಾಯಿಗಳನ್ನು ಹಾಕಿದ್ದರೆ, ಇವರು ಈಗ ಅದಕ್ಕಿಂತ ಕಡಿಮೆ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದಾರೆ. ಭಾರತ ಸರ್ಕಾರದಿಂದ ಇದು ಆಗಬಹುದೆಂದು ತೀರ್ಮಾನವಾಗಿದ್ದರೂ ನನಗೇನೂ ನೆಮ್ಮದಿ ಆಗುವುದಿಲ್ಲ. ಇದರಲ್ಲಿ ನನಗೆ ಬಹಳವಾಗಿ ಸಂಶಯವಿದೆ.

ಶ್ರೀ ಹೆಚ್. ಎನ್. ನಂಜೇಗೌಡ :—ನಿಮ್ಮಲ್ಲಿ ಅಂತಹ ಸಂಶಯ ಇದ್ದರೆ, ಅದು ಸರಿಯಲ್ಲ ಎಂದು ನಾನು ಹೇಳುತ್ತೇನೆ.

ಈ ಸ್ಪಿಲ್ವೋವರ್ ವರ್ಕ್ 380 ಕೋಟಿ ರೂಪಾಯಿ ಆಗುತ್ತೆ. ಐದನೆ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ 250 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆ. ಇನ್ನು ಆ ಸ್ಪಿಲ್ವೋವರ್ 380 ಕೋಟಿ ರೂಪಾಯಿಯ ಕೆಲಸದಲ್ಲಿ 280 ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡಿದರೆ ಅದರ ಬಗ್ಗೆ ಇನ್ನು ಒಂದು ನೂರು ಕೋಟಿ ರೂಪಾಯಿಗಳ ಸ್ಪಿಲ್ವೋವರ್ ಕೆಲಸ ಉಳಿಯುತ್ತದೆ. ಈ ಸ್ಪಿಲ್ವೋವರ್ ವರ್ಕಿನಲ್ಲಿ ಸುಮಾರು 42 ಪ್ರಾಜೆಕ್ಟುಗಳ ಕೆಲಸ ಐದನೆ ಪಂಚವಾರ್ಷಿಕ ಯೋಜನೆಯ ಕೊನೆಗೆ ನಿಂತಿರುತ್ತೆಂದು ನಾವು ಯೋಚನೆ ಮಾಡಿದ್ದೇವೆ. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಅಪ್ಪರ್ ಕೃಷ್ಣಾ ಯೋಜನೆ ಬಹಳ ಮಟ್ಟಿಗೂ ಮುಂದುವರಿಯಬಹುದೆಂದು, ಹಾಗೇ ಕಾಳೀ ನದಿ ಪ್ರಾಜೆಕ್ಟ್ ಸಹಾ ಬೇಗ ಕಾರ್ಯಗತವಾಗುತ್ತವೆಂದು ತಿಳಿಸುವುದಕೆ ಇಷ್ಟಪಡುತ್ತೇನೆ.

ಆದರೆ ಮಾನ್ಯ ಎಸ್. ವೈ. ಪಾಟೀಲರಿಗೆ ಈ ಕೃಷ್ಣಾನದಿ ಬಗ್ಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಸರ್ಕಾರಕ್ಕೂ ಇದೆ ಎಂಬುದನ್ನು ಅವರು ಮರೆಯಬಾರದು. ಇನ್ನು ಕಾಳೀ ನದಿ ಪ್ರಾಜೆಕ್ಟ್ ಒಂದು ದೊಡ್ಡ ಪ್ರಾಜೆಕ್ಟ್. ಇದಕ್ಕೆ ಸಾಕಾಗುವಷ್ಟು ಹಣವನ್ನು ಕೇಂದ್ರ ಸರ್ಕಾರದವರು ಕೊಡುವುದಕ್ಕೆ ಒಪ್ಪಿದ್ದಾರೆ. ಅದೊಂದು ಸಂತೋಷದ ಸುದ್ದಿ.

ಶ್ರೀ ಎಚ್. ಡಿ. ದೇವೇಗೌಡ :—ನೀವು ಏನು ಮಾಡುತ್ತೀರಿ ? ನಿಮ್ಮಲ್ಲಿ ಹಣವೆಲ್ಲಿದೆ ?

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿ):— ನಾವು ಏನು ಮಾಡುತ್ತೇವೆಂದರೆ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಪ್ರಾಜೆಕ್ಟ್‌ಗಳಿಗೆ 250 ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇವೆ. ಆದರೆ ಪವರ್ ಪ್ರಾಜೆಕ್ಟ್‌ಗಳನ್ನು ಬಿಟ್ಟರೆ ಈ ನೀರಾವರಿ ಯೋಜನೆಗಳನ್ನು ನ್ಯಾಷನಲ್ ಪ್ರಾಜೆಕ್ಟ್‌ಗಳೆಂದು ಕೆಲಸ ಕೈಗೊಳ್ಳಲು ಕೇಂದ್ರದವರು ಒಪ್ಪಬಹುದು. ಆದರೆ ಅವರು ಸಾಕಷ್ಟು ಹಣವನ್ನು ಕೊಡುವುದಿಲ್ಲ. ಬ್ಯಾಂಕಿನವರೂ ಅಷ್ಟೇ. ಇದಕ್ಕೆ ಹಣವನ್ನು ಕೊಡುವುದಿಲ್ಲ. ಕಾರಣ ಇದರಿಂದ ಹೆಚ್ಚಿನ ರಿಟರ್ನ್ ಬರುವುದಿಲ್ಲ ಆದರೆ ಜನರಲ್ಲಿ ಸುಮ್ಮನೆ ಒಂದು ತಲೆಯಲ್ಲಿ ತಪ್ಪು ಕಲ್ಪನೆ ತುಂಬಿಕೊಂಡಿದೆ. ನ್ಯಾಷನಲ್ ಪ್ರಾಜೆಕ್ಟ್ ಎಂದ ಕೂಡಲೆ ಅದಕ್ಕೆ ಬ್ಯಾಂಕಿನವರು ಹಣ ಕೊಡುತ್ತಾರೆ ಎಂದು. ಆದರೆ ಅದು ಸರಿಯಾದುದಲ್ಲ. ಇರಿಗೇಷನ್ ಪ್ರಾಜೆಕ್ಟ್‌ಗಳಿಂದ ಪವರ್ ಪ್ರಾಜೆಕ್ಟ್‌ಗಳಂತೆ ಹೆಚ್ಚಿನ ಉತ್ಪತ್ತಿ ಬರುವುದಿಲ್ಲ. ಆದುದರಿಂದ ಇವುಗಳಿಗೆ ಬ್ಯಾಂಕಿನವರು ಹಣವನ್ನು ಸಾಲವಾಗಿ ಕೊಡುವುದಿಲ್ಲ. ಆದಾಗ್ಯೂ ಕ್ಷಾಮಪೀಡಿತ ಪ್ರದೇಶಗಳಿಗೆ ಬೇರೆ ಮಾರ್ಗದಿಂದಲಾದರೂ ಹಣವನ್ನು ಪಡೆದು ಆ ಪ್ರಾಜೆಕ್ಟ್‌ಗಳನ್ನು ಕಾರ್ಯಗತ ಮಾಡುವುದಕ್ಕೆ ನಾವು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಇದಕ್ಕೆ ಕೇಂದ್ರದವರೂ ಕೂಡ ಹಣವನ್ನು ಕೊಡುತ್ತಾರೆ. ಅಲ್ಲಿ ಕಾಲುವೆಗಳನ್ನು ತೆಗೆಯುವುದಕ್ಕೆ ಲೇಬರ್ ಓರಿಯೆಂಟೆಡ್ ಸಿಸ್ಟಂ ಪ್ರಕಾರ ಕೆಲಸ ಮಾಡಿ ಹಣವನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಅಲ್ಲಿ ಯಾರೇ ಹಣವನ್ನು ಎಷ್ಟೇ ಖರ್ಚು ಮಾಡಲಿ ಆ ಕೆಲಸಗಳೆಲ್ಲಾ ಪೂರ್ಣವಾಗಬೇಕಾಗಿದ್ದರೆ ಇನ್ನೂ 10 ವರ್ಷಗಳ ಕಾಲ ಬೇಕೇ ಬೇಕೆಂದು ಹೇಳುತ್ತೇನೆ. ಆದರೆ ಆ ಕೆಲಸಗಳು 100 ಕೋಟಿ 50 ಕೋಟಿ ರೂಪಾಯಿಗಳಲ್ಲಿ ಆಗತಕ್ಕ ಕೆಲಸಗಳಲ್ಲ. ಅಲ್ಲಿ ಇರತಕ್ಕ ಒಂದೊಂದು ಪ್ರಾಜೆಕ್ಟಿಗೂ 200 ರಿಂದ 400 ಕೋಟಿ ರೂಪಾಯಿಗಳವರೆಗೂ ಬೇಕಾಗುತ್ತದೆ. ಒಟ್ಟಿನಲ್ಲಿ ಅಲ್ಲಿನ ಎಲ್ಲ ಪ್ರಾಜೆಕ್ಟ್‌ಗಳೂ ಮುಗಿಯಬೇಕಾದರೆ ನಾನಾಗಲೇ ಹೇಳಿದಷ್ಟು ಹಣ ಖರ್ಚುಮಾಡಿದರೂ ಅದು ಒಂದೆರಡು ವರ್ಷಗಳಲ್ಲಿ ಆಗತಕ್ಕ ಕೆಲಸವಲ್ಲ. ಅದಕ್ಕೆ ಕನಿಷ್ಠ 10 ವರ್ಷಗಳ ಕಾಲಾವಧಿ ಬೇಕೆಂದು ಹೇಳುತ್ತೇನೆ. I may add we have got 5th plan. I can assure the House that during this 5th plan the projects will get a boost and we can be hopeful that some of these projects will get completed.

ಶ್ರೀ ಕೋಣಂದೂರು ಲಿಂಗಪ್ಪ :—ಅಂದರೆ. ನೀವು ಅಲ್ಲಿಯವರೆಗೂ ಅಧಿಕಾರದಲ್ಲಿರಬೇಕು ಎಂದು ಹೇಳಿದ ಹಾಗಾಯಿತು. ಹತ್ತು ವರ್ಷ ಟೈಂ ಕೊಡಿ, ಈ ಕೆಲಸಗಳನ್ನು ಮುಗಿಸುತ್ತೇವೆ ಎಂದು ಹೇಳಿದಂತಾಯಿತು.

ಶ್ರೀ ಎಚ್. ಎಸ್. ನಂಜೇಗೌಡ :—ಆ ಪ್ರಾಜೆಕ್ಟ್‌ಗಳ ಕೆಲಸವನ್ನು ತ್ವರಿತಗೊಳಿಸುವುದಕ್ಕಾಗಿ ನಾರ್ತ್‌ನಲ್ಲಿ 4 ಸರ್ಕಲ್ಲುಗಳನ್ನು ಮಾಡಿ ಅದಕ್ಕೆ ಬೇಕಾದ ಸಿಬ್ಬಂದಿ ವರ್ಗವನ್ನೆಲ್ಲಾ ಪೋಸ್ಟ್ ಮಾಡುವುದರಲ್ಲಿದ್ದೇವೆ. ಅದಕ್ಕೆ ಬೇಕಾದ ಪೋಸ್ಟುಗಳನ್ನು ಕ್ರಿಯೇಟ್ ಮಾಡುತ್ತಿದ್ದೇವೆ. ಈ ಕಾರ್ಯವಿನ್ನೂ ಪೂರ್ಣವಾಗಿಲ್ಲ. ಇನ್ನು ಕೃಷ್ಣಾವಾಟರ್ಸ್ ಡಿಸ್‌ಪ್ಯೂಟ್ ಈ ವರ್ಷಾಖೈರಿನಲ್ಲಿ

ಹೊರಬೀಳಬಹುದು ಎನ್ನತಕ್ಕ ನಿರೀಕ್ಷಣೆ ಇದೆ. ಆ ಗೋದಾವರಿ ಡಿಸ್ಪ್ಯೂಟನ್ನೂ ಕೂಡ ಅದೇ ಟ್ರೈಬ್ಯುನಲ್ಲಿಗೆ ಸೇರಿಸಿರುವುದರಿಂದ ಅದರ ತೀರ್ಪೂ ಕೂಡ ಬರುವ ಫೆಬ್ರವರಿಯಲ್ಲಿ ಹೊರ ಬೀಳಬಹುದು ಆದರೆ ಶ್ರೀಮಾನ್ ನಿಜಲಿಂಗಪ್ಪನವರು ಕಾವೇರಿ ನೀರಿನಲ್ಲಿ ನಮಗೆ 830 ಟಿ. ಎಂ. ಸಿ. ಎಫ್‌ಟಿ. ಹಕ್ಕಿದೆ ಎಂದು ಹೇಳಿದಂತೆ ನಾನು ಹೇಳತಕ್ಕವನಲ್ಲ.

Sri H. D. DEVE GOWDA : I am not going to be a follower of anybody.

Sri D. DEVARAJ URS : He is making a statement which is not proved to the fact. How can he say that he is not in a party ?

Sri H. D. DEVE GOWDA.—I myself is a leader. I am not a follower of anybody.

Sri D. DEVARAJ URS.—You may be leader here. How can it be that you are not in a party ?

ಶ್ರೀ ಎಚ್. ಎನ್. ನಂಜೇಗೌಡ :—ಮಾನ್ಯ ವಿರೋಧ ಪಕ್ಷದ ನಾಯಕರು ವೀರೇಂದ್ರ ಪಾಟೀಲರ ಪಾರ್ಟಿಯನ್ನು ಬಿಟ್ಟುಕೊಟ್ಟರೆ ನಿಜವಾಗಿಯೂ ಅವರು ಒಳ್ಳೆ ಕೆಲಸಮಾಡಿದರೆಂದು ನಾನು ಭಾವಿಸಿ ಅದರ ಬಗ್ಗೆ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ : ಮಾನ್ಯ ನಂಜೇಗೌಡರಿಗಾದರೂ ಅವರ ಪಾರ್ಟಿಯನ್ನು ಬಿಟ್ಟರೆ ಅವರಿಗೆ ದೊಡ್ಡ ನಷ್ಟವಾಗುತ್ತದೆ. ಆದರೆ ನಾನು ಪಾರ್ಟಿಯನ್ನು ಬಿಟ್ಟರೆ ನನಗೇನೂ ಅಂಥ ನಷ್ಟವಾಗುವುದಿಲ್ಲವೆಂಬುದನ್ನೂ ಕೂಡ ತಾವು ಗಮನದಲ್ಲಿಟ್ಟುಕೊಳ್ಳಬೇಕು. ನಾನು ಇಲ್ಲಿ ಒಂದು ಪ್ರಿನ್ಸಿಪಲ್ ಮೇಲೆ ಕೆಲಸ ಮಾಡಬೇಕಾಗಿದೆ. ಅದರ ಪ್ರಕಾರ ಕೆಲಸ ಮಾಡುತ್ತಿದ್ದೇನೆ.

ಶ್ರೀ ಎಚ್. ಎನ್. ನಂಜೇಗೌಡ : ಇನ್ನು ಅಪ್ಪರ್ ಭದ್ರಾ ವಿಚಾರದಲ್ಲಿ ಅಲ್ಲಲ್ಲೇ ಇರತಕ್ಕ ಬಾವಿಗಳ ಮುಳುಗಡೆ ಆಗದಂತೆ ಕೆಲಸ ಮುಂದುವರಿಸಬೇಕೆಂದು ಹೇಳಿದ್ದಾರೆ. ನಾವು ಈ ಅಪ್ಪರ್ ತುಂಗಾದಲ್ಲಿ ಎರಡು ರೀತಿಯ ಯೋಜನೆಗಳನ್ನು ತಯಾರಿಸಿದ್ದೇವೆ. ಒಂದು ಡ್ಯಾಂ ಕಟ್ಟಿ ಹೈಲೆವೆಲ್ ಕೆನಾಲ್ ಮೂಲಕ ನೀರನ್ನು ಕೊಡುವುದು, ಇನ್ನೊಂದು ನೀರನ್ನು ಲಿಫ್ಟ್ ಮಾಡಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಡುವುದು, ಕೃಷ್ಣಾ ನೀರಿನ ವಿಚಾರದಲ್ಲಿ ಅದರ ತೀರ್ಮಾನ ಬಂದ ತಕ್ಷಣವೇ ಅದಕ್ಕೆ ಹೆಚ್ಚಿನ ಗಮನ ಕೊಟ್ಟು ತೀವ್ರ ವೇಗದಲ್ಲಿ ಕೆಲಸಗಳನ್ನು ಮುಂದುವರಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಕಾವೇರಿ ಜಲಾಶಯದ ವಿಚಾರದಲ್ಲಿ ಫ್ಯಾಕ್ಟ್ಸ್ ಫೈಂಡಿಗ್ ಸಮಿತಿ ರಿಪೋರ್ಟನ್ನು ಕೊಟ್ಟಿದೆ. ಇದರ ವಿಚಾರದಲ್ಲಿ ನಮ್ಮ ರಾಜ್ಯಕ್ಕೆ ಯಾವುದೇ ರೀತಿಯಲ್ಲಿ ಧಕ್ಕೆ ಬರುವುದಕ್ಕೆ ನಾವು ಬಿಟ್ಟು ಕೊಡುವುದಿಲ್ಲ. ಇದರ ಬಗ್ಗೆ ಯಾರಿಗೂ ಸಂಶಯಬೇಡ.

ಕಾವೇರಿ ಪ್ರಾಜೆಕ್ಟ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಕಬಿನಿ ಪ್ರಾಜೆಕ್ಟಿನ ಬಗ್ಗೆ ಎರಡನೆ ಹಂತದ ಕೆಲಸ ತೆಗೆದುಕೊಳ್ಳಬೇಕೆಂದು ಹೇಳಿದರು. ಅಲ್ಲಿನ ನೀರಾವರಿ ವಿಚಾರ ಬಹುಶಃ 70 ನೆಯ ಮೈಲಿಯಲ್ಲಿ ಬರುತ್ತದೆ. ಎರಡನೆಯ ಹಂತದಲ್ಲಿ ನಾಲೆ ಎಕ್ಸ್‌ಟೆಂಡ್ ಮಾಡುವುದರ ಮೇಲೆ ಯಾವ ಪ್ರದೇಶ ಬರುತ್ತದೆ ಎಂಬುದು ಡಿಪೆಂಡಾಗುತ್ತದೆ.

ಪುನರ್ವಿಮರ್ಶೆ ಮಾಡಿ 40 ಕೋಟಿ ರೂಪಾಯಿಗೆ ಅಂದಾಜು ಮಾಡಿದೆ, ಸರ್ವೆಯಾಗುತ್ತಿದೆ. ಹೇಮಾವತಿ ಯೋಜನೆಯು ಪುನರ್ವಿಮರ್ಶೆಯಾಗಿ 91 ಕೋಟಿ ರೂಪಾಯಿಗೆ ಅಂದಾಜಾಗಿದೆ.

ಶ್ರೀ ಎಚ್. ಡಿ. ದೇವೇಗೌಡ :—ಇಂಪೌಂಡಿಂಗ್ ವಿಚಾರ ಹೇಳಿ.

ಶ್ರೀ ಎಚ್. ಎನ್. ನಂಜೇಗೌಡ :—ಮಾಹಿತಿಯಿರುವ ಪ್ರಕಾರ 34 ಟಿ. ಎಂ. ಸಿ. ಎಫ್‌ಟಿ ಕೆಪಾಸಿಟಿ ಇದೆ. ಸೆಮಿ ಡ್ರೈ ಗೆ ಅವಕಾಶಮಾಡಿದರೆ ಸುಮಾರು 65 ಟಿ. ಎಂ. ಸಿ ಎಫ್‌ಟಿ. ಗೆ ಅವಕಾಶ ಸಿಕ್ಕುವುದು ಎಂಬ ಆಶಯವಿದೆ.

ಶ್ರೀ ಎಚ್. ಡಿ. ದೇವೇಗೌಡ :—7 ಲಕ್ಷ ಎಕರೆಗೆ ಅನುಕೂಲವಾಗುವುದೇ ?

ಶ್ರೀ ಡಿ. ದೇವರಾಜ ಅರಸ್ :—ಮೊದಲಲ್ಲಿ ಇರುವವರು ಹೆಚ್ಚು ನೀರು ಉಪಯೋಗ ಮಾಡಿ ನೀರನ್ನು ವೇಸ್ಟ್ ಮಾಡಿದರೆ ಕಷ್ಟವಾಗುವುದು. ಕೊಟ್ಟವರಿಗೇ ನೀರು ಕೊಡಬೇಕು, ಕಬ್ಬು ಬೆಳೆಯಬೇಕು, ಬತ್ತವನ್ನೂ ಬೆಳೆಯಬೇಕು ಎಂದು ಹೇಳಿದರೆ ಸಾಧ್ಯವಾಗುವುದಿಲ್ಲ. ಕೆಲವು ಸುಧಾರಣೆ ಮಾಡಿಕೊಂಡರೆ ಸಾಧ್ಯವಿದೆ. ಬರೀ ಬತ್ತವನ್ನೇ ಬೆಳೆಯಬೇಕೆಂದರೆ ಹೆಚ್ಚು ಪ್ರದೇಶಕ್ಕೆ ಅನುಕೂಲವಾಗುವುದಿಲ್ಲ. ರಾಗಿ, ಜೋಳ, ಮೈಜ ಮುಂತಾದ್ದು ಬೆಳೆಯಬಹುದು. ಹಾಗೆ ಮಾಡಿದರೆ ಹೆಚ್ಚು ಭೂಮಿಗೆ ಅವಕಾಶ ಸಿಕ್ಕುವುದು. ಕ್ಯಾಲಿಫೋರ್ನಿಯಾದಲ್ಲಿ ಅಂಡರ್‌ಗ್ರೌಂಡ್ ರಿವರ್ ಇರುವುದನ್ನು ಪತ್ತೆಮಾಡಿ ಆದರಿಂದ ಒಳ್ಳೆಯ ಉಪಯೋಗ ಪಡೆದಿದ್ದಾರೆ. ಕೊಲೊರೆಡೋ ನೀರನ್ನು ಇದಕ್ಕೆ ಸೇರಿಸಬೇಕೆಂದಿದ್ದಾರೆ. ಹಿಂದೆ ಭೂಮಿಯಲ್ಲಿದ್ದ ನೀರನ್ನೆತ್ತಿ ಉಪಯೋಗಿಸಲು ಅಷ್ಟು ಸೌಲಭ್ಯವಿರಲಿಲ್ಲ. ಈಗ ಒಂದು ಸಾವಿರ ಅಡಿ ಕೆಳಗಿನಿಂದ ನೀರನ್ನೆತ್ತಿ ಉಪಯೋಗಮಾಡುತ್ತಿದ್ದಾರೆ. ಮೆಷೀನುಗಳ ಸಹಾಯ ಇದಕ್ಕೆ ದೊರೆಯುತ್ತಿದೆ. ಇಸ್ರೇಲಿನಲ್ಲಿ 8 ಸಾವಿರ ಅಡಿಯಿಂದ ನೀರನ್ನು ತೆಗೆದುಕೊಂಡು ಉಪಯೋಗಿಸುತ್ತಿದ್ದಾರೆ. ಒಂದು ಬಾವಿಯಿಂದ 2 ಎಕರೆ ನೀರಾವರಿ ಮಾಡುತ್ತಿದ್ದರು, ಈಗ ಸ್ಪ್ರಿಂಕಲ್ ಇರಿಗೇಷನ್ನಿನಿಂದ 6 ಎಕರೆಯವರೆಗೆ ಇದರಿಂದ ನೀರು ಒದಗುತ್ತಿದೆ. ಮಹಾರಾಷ್ಟ್ರದಲ್ಲಿ ಎಲ್ಲಾ ಕಡೆ ನೀರಿಗೆ ಮೀಟರ್ ಜೋಡಿಸಿದ್ದಾರೆ, ಇಲ್ಲಿ ಆ ರೀತಿ ಮಾಡಿಲ್ಲ. ಮೇಲಿರುವವರು ನೀರನ್ನು ಹೆಚ್ಚು ಉಪಯೋಗಿಸುವುದೂ ಅಲ್ಲದೆ ವೇಸ್ಟ್ ಮಾಡುತ್ತಿದ್ದಾರೆ. ಅವರಿಗೆ ಎಷ್ಟು ಬೇಕಾದರು ಸಿಕ್ಕುವುದು. ಈ ರೀತಿ ಉಪಯೋಗಮಾಡಿದರೆ ಹೆಚ್ಚು ಭೂಮಿಗೆ ನೀರು ದೊರೆಯುವುದು.

ಶ್ರೀ ಎಚ್. ಡಿ. ದೇವೇಗೌಡ :—ನೀವೇನು ಬೇಕಾದರೂ ಮಾಡಿ. ಬೇಕಾದರೆ ಬೀಗ ಹಾಕಿ. ಜೋಳ ಬೆಳೆಸಿ, ಬೇಡವೆಂದು ಹೇಳುವುದಿಲ್ಲ. 65 ಟಿ.ಎಂ.ಸಿ.ಎಫ್.ಟಿ. ನೀರು ಒದಗಿಸಿದರೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ.

Sri D. Devaraja Urs :—We did not say 65 TMCFT. So much of water is required. Can we get so much or not, is on the anvil. This Project is capable of commanding this much area unlike so many other Projects in the Cauvery Basin. It is constructed in such a position. It has a better commanding area. ಮಲಪ್ರಭ ಮುಂತಾದ ಕಡೆ ಫ್ಲಾಟ್‌ನೆಸ್ ಇರುವುದರಿಂದ ಕಮ್ಯಾಂಡಿಂಗ್ ಏರಿಯ ಹೆಚ್ಚು ಸಿಕ್ಕುವುದು. ನಮ್ಮಲ್ಲಿ ಅಂಥಾದ್ದು ಸಿಕ್ಕುವುದು ಕಷ್ಟ.

ಶ್ರೀ ಎಚ್. ಎನ್. ನಂಜೇಗೌಡ :—ಮೊದಲನೆಯ ಹಂತದಲ್ಲಿ ಎಡ ದಂಡೆನಾಲೆಯನ್ನು ತುಮಕೂರು ಕಡೆ ತರಬೇಕೆಂದು ಅಂದಾಜಾಗಿದೆ. ಸಿ. ಡಿ. ವರ್ಕ್ಸ್ ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದಾರೆ, ಇದನ್ನು ಕೂಡ ಅಂದಾಜಿನಲ್ಲಿ ಸೇರಿಸಬೇಕೆಂದಿದ್ದೇವೆ.

ಶ್ರೀ ಕೆ. ಎಸ್. ಹನುಮೇಗೌಡ : ಎಡದಂಡೆ ನಾಲೆಗೆ ಹೈಲೆವಲ್ ಛಾನಲ್ ಮಾಡಬೇಕು.

ಶ್ರೀ ಎಚ್. ಎನ್. ನಂಜೇಗೌಡ : ಅವರು ಹೇಳುವುದು ಯಗಚಿ ನಾಲೆ ಬರುತ್ತದೆಂದು ಕಾಣಿಸಿದರೆ ಒಳ್ಳೆಯದು ಎಂದು. ಟೊಪೋಗ್ರಫಿ ನೋಡಿದ್ದೇವೆ. ಯಗಚಿ ನಾಲೆ ತೆಗೆದು ಕೊಳ್ಳಬೇಕೆಂಬ ಉದ್ದೇಶವಿದೆ, ಯೋಚನೆಮಾಡೋಣ.

ಶ್ರೀ ಡಿ. ಹಲಗೇಗೌಡ (ಪಾಂಡವಪುರ) :—ಹೇಮಾವತಿಯ ನೀರು ಮಲೆನಾಡು ಪ್ರದೇಶಕ್ಕೆ ಬರುವಂತೆ ವಿಸ್ತರಿಸಿದರೆ ಮೂರನೆಯ ಒಂದು ಭಾಗ ನೀರಾವರಿಮಾಡಬಹುದು ಎಂಬ ಅಭಿಪ್ರಾಯವಿದೆ.

ಶ್ರೀ ಎಚ್. ಎನ್. ನಂಜೇಗೌಡ :—ಅಂತಿಮವಾಗಿ ತೀರ್ಮಾನವಾಬೇಕಾಗಿದೆ. ತುಮಕೂರು ಮತ್ತು ನಾಗಮಂಗಲಕ್ಕೆ ನೀರನ್ನೊದಗಿಸಬೇಕಾದರೆ ಎರಡನೆಯ ಹಂತದಲ್ಲಿ ತೆಗೆದುಕೊಳ್ಳಬೇಕು.

ಶ್ರೀ ಡಿ. ಹಲಗೇಗೌಡ :—ತುಮಕೂರಿಗೆ ನೀರು ಕೊಡುವುದು ಒಳ್ಳೆಯದು. ಆದರೆ ಮೊದಲನೆ ಹಂತದಲ್ಲಿ ಸೇರಿರುವ ಸುಮಾರು ಒಂದು ಲಕ್ಷ ಚಿಲ್ಲರೆ ಎಕರೆ ನೀರಾವರಿ ಮಾಡುವುದನ್ನು ಬಿಟ್ಟು ಎರಡನೆ ಹಂತದ ವಿಚಾರ ಯೋಚನೆಮಾಡುತ್ತಿದ್ದೀರಿ. ತುಮಕೂರು ಯೋಜನೆ ಯಾವಾಗ ಬಂತು ? ಮೊದಲನೆ ಯೋಜನೆ ಕೈಬಿಡುವಿರಾ ?

ಶ್ರೀ ಎಚ್. ಎನ್. ನಂಜೇಗೌಡ :— ಮೊದಲನೆಯ ಹಂತ ಈಗ ಇರುವುದರ ಜೊತೆಗೆ ಅದರಲ್ಲಿ ಬರುತ್ತದೆ. ಅದನ್ನು ಕೈಬಿಟ್ಟು ನಾವು ಮಾಡುವುದಕ್ಕಾಗುವುದಿಲ್ಲ. ಕ್ರಾಪಿಂಗ್ ...

ಶ್ರೀ ಡಿ. ಹಲಗೇಗೌಡ :— ಕ್ರಾಪಿಂಗ್ ಚೇಂಜ್ ಮಾಡಬೇಡಿ ಎಂದು ಹೇಳುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ :—ತುಮಕೂರು ಭಾಗಕ್ಕೆ ಎಷ್ಟು ನೀರನ್ನು ಒದಗಿಸುತ್ತೀರಿ ? ನಾಗಮಂಗಲ ಭಾಗಕ್ಕೆ ಎಷ್ಟು ನೀರನ್ನು ಒದಗಿಸುತ್ತೀರಿ ?

ಶ್ರೀ ಡಿ. ದೇವರಾಜ ಅರಸ್ :— ಮಾನ್ಯ ದೇವೇಗೌಡರು ಇವರೂ ಬಲದಂಡೆ ಕಡೆ ಇದ್ದಾರೆ. ಹನುಮೇಗೌಡರು ಎಡಗಡೆ ಇದ್ದಾರೆ. ಬಲಗಡೆ ವಿಚಾರವನ್ನು ಹೇಳಿದರೆ ಅವರಿಬ್ಬರೂ ಒಂದಾಗುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ :— ಮುಖ್ಯ ಮಂತ್ರಿಗಳೂ ಬಲಗಡೆ ಇದ್ದಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ :— ನಾಗಮಂಗಲ ತಾಲ್ಲೂಕನ್ನು ಕ್ಷಾಮ ಪೀಡಿತ ಪ್ರದೇಶವೆಂದು ಪರಿಗಣಿಸಿ ಅದರ ಬಗ್ಗೆ ಅನುಕಂಪ ತೋರಿಸಿ.

ಶ್ರೀ ಕೋಣಂದೂರು ಲಿಂಗಪ್ಪ :— ಗುಂಡ್ಲುಪೇಟೆ ತಾಲ್ಲೂಕಿಗೆ ನೀರು ಕೊಡುವ ಯೋಜನೆ ಇದೆಯೋ ?

ಶ್ರೀ ವಾಟಾಳ್ ನಾಗರಾಜ್ :— ಅವರಿಗೆ ಬರಗಾಲ ಇಲ್ಲ.

ಅಧ್ಯಕ್ಷರು :— ನನ್ನನ್ನು ನೋಡಿದರೆ ಹಾಗೆ ಕಾಣುತ್ತದೆ ;

ಶ್ರೀ ಎಚ್. ಎನ್. ನಂಜೇಗೌಡ :— ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಬರಗಾಲ ಪ್ರದೇಶಗಳಿಗೇ ನೀರನ್ನು ಒದಗಿಸಬೇಕು ಎನ್ನುವ ಯೋಚನೆ ಮಾಡಿ 7 ಜಿಲ್ಲೆಯ ಬಗ್ಗೆ ಅಂದಾಜು ತಯಾರು ಮಾಡಿ ಸರ್ಕಾರ ಪ್ರಯತ್ನ ಮಾಡುತ್ತಿದೆ. ಮಾನ್ಯ ಪುಟ್ಟಸ್ವಾಮಯ್ಯನವರು. ಸುವರ್ಣಾವತಿ ಯೋಜನೆಯ ರಿವೈಸ್ಡ್ ಎಸ್ಟಿಮೇಟ್ ಮತ್ತೊಂದು ಅದರ ಕೆಳಗೆ

ಬರತಕ್ಕಂಥಾದ್ದನ್ನು ಸೇರಿಸಿಕೊಳ್ಳಬೇಕು ಎನ್ನುವುದನ್ನು ಹೇಳಿದರು. ಇದಕ್ಕೆ ಮೂರು ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ಖರ್ಚು ಮಾಡಬೇಕು. ಇದರ ಬಗ್ಗೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಇನ್ನು ಮಾನ್ಯ ಸತ್ಯನಾರಾಯಣ ಸಿಂಗ್ ಅವರು ತುಂಗಭದ್ರ ಬೋರ್ಡು ಬಗ್ಗೆ ಮಾತನಾಡಿದ್ದಾರೆ. ಅದನ್ನು ವಿಸರ್ಜನೆ ಮಾಡುವುದಕ್ಕೆ ಕೇಂದ್ರ ಸರ್ಕಾರದವರಿಗೆ ತಿಳಿಸಿದೆ. ಇದನ್ನು ಕಾರ್ಯಗತ ಮಾಡುವುದಕ್ಕೆ ಟ್ರಿಬ್ಯೂನಲ್ ತೀರ್ಮಾನ ಬಂದನಂತರ ಇದನ್ನು ಪರಿಶೀಲಿಸಿ ಮುಗಿಸೋಣ ಎಂದು ಅವರು ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ :– ಹಾರೋ ಬೆಲೆ ಪ್ರಾಜೆಕ್ಟ್ ಬಗ್ಗೆ ಏನು ?

ಶ್ರೀ ಎಚ್. ಎನ್. ನಂಜೇಗೌಡ : — ಅದೂ ಸಹ ಲಿಸ್ಟಿನಲ್ಲಿದೆ, ತೆಗೆದುಕೊಳ್ಳುತ್ತೇವೆ. ಸತ್ಯನಾರಾಯಣ ಸಿಂಗ್ ಅವರು ಮತ್ತೊಂದು ನಾಲೆ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಲೈನ್ ಅಪ್ ಮಾಡಬೇಕೆಂದು ಅಧಿಕಾರಗಳಿಗೆ ಸೂಚನೆ ಕೊಟ್ಟಿದೆ. ಅದನ್ನು ಬೋರ್ಡು ಜೊತೆಯಲ್ಲಿ ವ್ಯವಹರಿಸಿ ಆದಷ್ಟು ಬೇಗ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ಅಧಿಕಾರಗಳನ್ನು ಹಾಕತಕ್ಕಂಥ ವಿಷಯದಲ್ಲಿ, ಹೋದ ವಾರ ಅಸಿಸ್ಟೆಂಟ್ ಇಂಜನಿಯರ್ ಪೋಸ್ಟ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಿ ಎಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ :—ಅದನ್ನೇ ರದ್ದುಮಾಡುತ್ತೇವೆಂದು ಹೇಳಿದ್ದೀರಿ.

ಶ್ರೀ ಎಚ್. ಎನ್. ನಂಜೇಗೌಡ :—ರದ್ದುಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದೇವೆ. ಕೇಂದ್ರದವರು ಕಾಗದ ಬರೆದಿದ್ದಾರೆ, ಟ್ರಿಬ್ಯೂನಲ್ ತೀರ್ಮಾನ ಮುಗಿಯಲಿ ಆಮೇಲೆ ಮಾತನಾಡೋಣ ಎಂದು. ಕೇಂದ್ರ ಸರ್ಕಾರದ ಜೊತೆಯಲ್ಲಿ ಇದನ್ನು ವ್ಯವಹರಿಸಿ ಮಾಡಬೇಕಾಗುತ್ತದೆ. ಮಂಚನಬಲೆ ಪ್ರಾಜೆಕ್ಟಿಗೆ 237 ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿದ್ದು, ಅದು ಮತ್ತೆ 565 ಲಕ್ಷ ರೂಪಾಯಿಗೆ ಪುನರ್ ವಿಮರ್ಶೆಯಲ್ಲಿದೆ. ಅದನ್ನು ಟೆಕ್ನಿಕಲ್ ಸಬ್ ಕಮಿಟಿ ಪರಿಶೀಲಿಸುತ್ತಿದೆ. ಆದನಂತರ ಇದಕ್ಕೆ ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡಬೇಕು ಎನ್ನುವುದು ಸರ್ಕಾರದ ಆಶೆಯಾಗಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಮಂಚನಬಲೆ ಪ್ರಾಜೆಕ್ಟಿನ ಕಾರ್ಯ ಸ್ಥಗಿತವಾಗಿದೆ, 50 ಲಕ್ಷ ಮತ್ತು 300 ಲಕ್ಷದ್ದು ಎಸ್ಟಿಮೇಟುಗಳು ಟೆಂಡರ್ ಕರೆಯುವುದಕ್ಕೆ ರೆಡಿಯಾಗಿವೆ. ಯಾವುದನ್ನು ಕೂಡಲೇ ಟೆಂಡರ್ ಕರೆಯಿಸುತ್ತೀರಿ ?

ಶ್ರೀ ಹೆಚ್. ಎನ್. ನಂಜೇಗೌಡ :—ಇದು ಟೆಕ್ನಿಕಲ್ ಸಬ್ ಕಮಿಟಿಯ ಮುಂದೆ ಇವೆ ಸರ್ಕಾರದ ಪರಿಯಲ್ಲಿ ಅವರು ಇದನ್ನು ಪರಿಶೀಲಿಸುತ್ತಾರೆ. ಆದನಂತರ ತಕ್ಷಣ ಟೆಂಡರ್ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—50 ಲಕ್ಷ ರೂಪಾಯಿದ್ದೋ, ಅಥವಾ 300 ಲಕ್ಷ ರೂಪಾಯಿದ್ದೋ ?

ಶ್ರೀ ಎಚ್. ಎನ್. ನಂಜೇಗೌಡ :—ಸರ್ಕಾರ ತೀರ್ಮಾನ ಮಾಡಿದೆ, ಕೆಲಸಗಳು ಮಂದಗತಿಯಲ್ಲಿ ಸಾಗುತ್ತಿವೆ ಎನ್ನುವುದು ಅರ್ಥವಾಗಿದೆ. ಟೆಕ್ನಿಕಲ್ ಸಬ್‌ಕಮಿಟಿಗೆ ಸೂಚನೆ ಕೊಟ್ಟು ಅದನ್ನು ಬೇಗ ಪರಿಷ್ಕರಣ ಮಾಡಿ ಕೊಡಿ ಎಂದು ಹೇಳುತ್ತೇವೆ. ಅದಾದ ತಕ್ಷಣ ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆ. ಮಾನ್ಯ ದೇವೇಗೌಡರು ಬೆರೇಜಸ್ ಬಗ್ಗೆ ಹೇಳಿದರು. ಹಿಂದೆ ಎಷ್ಟು ಆಗಿದ್ದುವು, ತಾವು 12 ಎಂದು ಹೇಳಿದಹಾಗೆ ಕಾಣುತ್ತದೆ, 7ರಿಂದ 27 ಲಕ್ಷ ರೂಪಾಯಿ ಆಗಿದೆ. ನಾವು ಬಂದಮೇಲೆ ಎರಡು ಬೆರೇಜಸ್ ಅನ್ನು

ಮಾಡಿದ್ದೇವೆ. ಎರಡರಿಂದ 29 ಲಕ್ಷ ರೂಪಾಯಿ ಆಗಿದೆ. ಹಿಪ್ಪರಗಿ ಬೆರೇಜ್‌ಗೆ 200 ಲಕ್ಷ ರೂಪಾಯಿ ಅಂದಾಜು ಮಾಡಿದ್ದಾರೆ, ಇನ್ನೂ ಜಾಸ್ತಿಯಾಗುತ್ತದೆ. ಇನ್ನೊಂದು ಮಾತು ಇಲ್ಲಿ ಪ್ರಸ್ತಾಪ ಮಾಡಬೇಕೋ ಬೇಡವೋ ಗೊತ್ತಿಲ್ಲ. ಮಾನ್ಯ ದೇವೇಗೌಡರು ಇದನ್ನು ಪ್ರಸ್ತಾಪ ಮಾಡಿರುವುದರಿಂದ ಹೇಳಬೇಕಾಗುತ್ತದೆ. ಕಂಟ್ರೋಲ್ ಬೋರ್ಡು ಏನು ಇದೆ, ಆ ಕಂಟ್ರೋಲ್ ಬೋರ್ಡ್ ಸದಸ್ಯರ ಬಗ್ಗೆ ಒಂದು ಟೀಕೆಯನ್ನು ಅವರು ಮಾಡಿದರು. ಅವರ ಹೆಸರು ರಾಮರಾವ್ ಅವರ ಮೇಲೆ ಆಪಾದನೆ ಮಾಡುವ ರೀತಿಯಲ್ಲಿ ವಿಷಯಗಳನ್ನು ಹೇಳಿದರು. ಯಾವುದೋ ಒಂದು ಪತ್ರವನ್ನೂ ಕೋಟ್ ಮಾಡಿದರು. ಎ. ನಾಗಭೂಷಣರಾವ್ ಅವರು ಡೆಪ್ಯೂಟಿ ಜನರಲ್ ಮ್ಯಾನೇಜರ್ ಎಂದು ಬರೆದಿರತಕ್ಕ ಫೋಟೋಸ್ಟೇಟ್ ಕಾಪಿ ಕೊಟ್ಟಿದ್ದಾರೆ. ಸಭೆಯಲ್ಲಿ ಇಲ್ಲದೆ ಇರತಕ್ಕ ಮನುಷ್ಯನ ಬಗ್ಗೆ ಟೀಕೆ ಮಾಡುವ ಕಾಲದಲ್ಲಿ ಆತನಿಗೆ ಸಂಬಂಧಪಟ್ಟ ವಿಷಯಗಳನ್ನು ಸಭೆಯ ಗಮನಕ್ಕೆ ತರತಕ್ಕಂಥಾದ್ದು ನನ್ನ ಕರ್ತವ್ಯ ಎಂದು ತಿಳಿದು ಹೇಳುತ್ತಾ ಇದ್ದೇನೆ. ಆತನು ಆ ಕಂಪನಿಯಲ್ಲಿ 22 ವರ್ಷ ಸರ್ವಿಸ್ ಮಾಡಿದ್ದಾನೆ. 18-6-1968ರಲ್ಲಿ ಆ ಕಂಪನಿಯ ಜನರಲ್ ಮ್ಯಾನೇಜರ್ ಅವರು ಇವರಿಗೆ ಒಂದು ಕಾಗದ ಬರೆದರು. ಇವರು ಡೆಪ್ಯೂಟಿ ಜನರಲ್ ಮ್ಯಾನೇಜರ್ ಆಗಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಮೇಲೆ ಡೆಪ್ಯೂಟಿ ಜನರಲ್ ಮ್ಯಾನೇಜರ್ ಮಾಡದೆ ಇದ್ದರೂ ಕೂಡ ನೇರವಾಗಿ ಜನರಲ್ ಮ್ಯಾನೇಜರ್ ಕೈಕೆಳಗೆ ಕೆಲಸ ಮಾಡುವ ವ್ಯವಸ್ಥೆ ಇಡುತ್ತೇವೆ ಎಂದು ಅವರು ಇವರಿಗೆ ಕಾಗದವನ್ನು ಬರೆದರು. ಅದಕ್ಕೆ ಇವರು ನಾನು ಸೀನಿಯರ್, ಡೆಪ್ಯೂಟಿ ಜನರಲ್ ಮ್ಯಾನೇಜರ್ ಆಗಬೇಕು ಎಂದು ಉತ್ತರ ಕೊಟ್ಟರು. ಇದರ ಒರಿಜಿನಲ್ ಕಾಪಿ ಇದೆ. ಪುನಃ ಜನರಲ್ ಮ್ಯಾನೇಜರ್ ಅವರು 25-12-1968ರಲ್ಲಿ ಇನ್ನೊಂದು ಕಾಗದ ಬರೆದು, ನಾವು ಬೇರೆ ಯಾರನ್ನೂ ಪೋಸ್ಟ್ ಮಾಡುವುದಿಲ್ಲ, ನೇರವಾಗಿ ಜನರಲ್ ಮ್ಯಾನೇಜರ್ ಕೈಕೆಳಗೆ ವರ್ಕ್ ಮಾಡುವಂತೆ ಮಾಡುತ್ತೇವೆ, ಇದರಿಂದ ಹೂಮಿಲಿಯೇಷನ್ ಆಗುವುದಿಲ್ಲ ಎಂದು ಬರೆದರು. ಇದಾದಮೇಲೆ 9-9-1969 ರಲ್ಲಿ ಇನ್ನೊಂದು ಕಾಗದ ಬರೆದರು, ಏನೆಂದರೆ ನಾವು ಅನಿವಾರ್ಯವಾಗಿ ಡೆಪ್ಯೂಟಿ ಜನರಲ್ ಮ್ಯಾನೇಜರ್‌ಅನ್ನು ಹಾಕಬೇಕಾಗುತ್ತದೆ; ನೀವು ಅವರ ಜೊತೆಯಲ್ಲಿ ಕೆಲಸಮಾಡಬೇಕಾಗುತ್ತದೆ ಎಂದು. ಇವರು ಅದಕ್ಕೆ ಆಗುವುದಿಲ್ಲ ಎಂದು ಹೇಳಿದರು. 7-11-1969ರಲ್ಲಿ ಡೆಪ್ಯೂಟಿ ಜನರಲ್ ಮ್ಯಾನೇಜರ್ ಆಗಿ ಯಾರನ್ನೋ ಪೋಸ್ಟ್ ಮಾಡುತ್ತಾರೆ ಎಂದು ತಿಳಿದು ಅವರು ಆ ಸ್ಥಳಕ್ಕೆ ಬರುವುದಕ್ಕೆ ಮುಂಚೆ ಹೊರಟು ಹೋಗಬೇಕು ಎಂದು ಇವರು ಚಾರ್ಜನ್ನು ಬೇರೆಯವರಿಗೆ ವಹಿಸಿ ನನಗೆ ಡೆಪ್ಯೂಟಿ ಜನರಲ್ ಮ್ಯಾನೇಜರ್ ಮಾಡಬೇಕಾಗಿತ್ತು, ಮಾಡಲಿಲ್ಲ, ಎಂದು 13-11-1969ರಲ್ಲಿ ಜನರಲ್ ಮ್ಯಾನೇಜರ್‌ಗೆ ಬರೆದು ತಿಳಿಸಿದ್ದಾರೆ. ನಿಮ್ಮನ್ನು ಡೆಪ್ಯೂಟಿ ಜನರಲ್ ಮ್ಯಾನೇಜರ್ ಮಾಡದೆ ಇದ್ದರೂ ಕೂಡ ನಿಮಗೆ ಎರಡು ಲಕ್ಷ ರೂಪಾಯಿ ಬೋನಸ್ ಕೊಡುತ್ತೇವೆ, ಪ್ರಾಜೆಕ್ಟ್ ಮುಗಿದ ಮೇಲೆ ಹೋಗಬಹುದು, ನಿಮ್ಮ ಕೆಲಸ ಶ್ಲಾಘನೀಯವಾಗಿದೆ ಎಂದು ಕಂಪೆನಿಯವರು 13-11-1969ರಲ್ಲಿ ಇವರಿಗೆ ಸಲಹೆ ಕೊಟ್ಟರು. ಈತನ ಕೈಕೆಳಗೆ ನಾನು ಕೆಲಸಮಾಡುವುದಿಲ್ಲ ಎಂದು ಬಿಟ್ಟು ಬಂದದ್ದು ಕಾರಣ ಎಂದು ಒಬ್ಬರು ಬರೆದಿದ್ದಾರೆ. ಈ ರೀತಿ ತಪ್ಪಾಗಿ ಅರ್ಥವಾಗತಕ್ಕಂಥಾದ್ದಕ್ಕೆ ಎಡೆಕೊಡತಕ್ಕದ್ದು ಸೂಕ್ತವಲ್ಲ. ಅವರು ಬರೆದಿರತಕ್ಕಂಥಾ ಕಾಗದದಲ್ಲಿ ಆ ಅರ್ಥವಿಲ್ಲ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಒರಿಜಿನಲ್ ರಿಕಾರ್ಡ್ ನೋಡಿ ನಿಮಗೆ ಕಳುಹಿಸಿಕೊಡುತ್ತೇನೆ.

Sri H. D. DEVEGOUDA.—'Management not satisfied' ಎಂದರೆ ಏನು ?

Sri H. N. NANJEGOWDA.—He is not satisfied about the Management.

ಶ್ರೀ ಹೆಚ್. ಡಿ. ದೇವೇಗೌಡ :– ಅದರ ಕಾಪಿ ಕಳುಹಿಸಿ ಕೊಡಿ.

ಶ್ರೀ ಹೆಚ್. ಎನ್. ನಂಜೇಗೌಡ :– ಇಷ್ಟು ಹೇಳಿದಾಗ ದೇವೇಗೌಡರವರಿಗೆ ಅರ್ಥವಾಗುತ್ತದೆಂದು ಕಾಣುತ್ತದೆ. ಯಾರು ಡೆಪ್ಯುಟಿ ಜನರಲ್ ಮ್ಯಾನೇಜರ್ ಆಗಿದ್ದಾರೋ ಅವರು ಬಂದರೆ ಅವರ ಕೈಕೆಳಗೆ ಕೆಲಸ ಮಾಡುವುದು ಅವಮಾನ, ಆ ಸ್ಥಳಕ್ಕೆ ಅವರು ಬರುವುದಕ್ಕೆ ಮುಂಚೆ ರಿಜೈನ್ ಮಾಡಿಬಿಡಬೇಕು ಎಂದು ಮಾಡಿದ್ದು, ಮ್ಯಾನೇಜ್‌ಮೆಂಟಿನವರು ಇವರ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆ ಪತ್ರದ ಬಗ್ಗೆ ದೇವೇಗೌಡರವರು ಆ ರೀತಿಯಾದಂಥ ಕಲ್ಪನೆಯನ್ನು ಮಾಡುವುದು ಸರಿಯಲ್ಲ ಆದು ಸತ್ಯಕ್ಕೆ ದೂರವಾದದ್ದು ಎಂದು ಹೇಳುತ್ತೇನೆ. ಯಾರೋ ಕಾಗದ ಬರೆದರು ಎಂದು ಅದನ್ನು ಉದಹರಿಸುವುದು ಸರಿಯಲ್ಲ, ಸೂಕ್ತವಲ್ಲ. ಆ ಮಾತು ಬೇಡವೆಂದು ನಾನು ದೇವೇಗೌಡರವರಿಗೆ ಕಿವಿ ಮಾತು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ :– ಈಗ ಅವರು ಕಂಟ್ರಾಕ್ಟರ್ ಅಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್ :– ಅವರು ಕನ್‌ಸ್ಟ್ರಕ್ಷನ್ ಕಂಪನಿ ಬಿಟ್ಟ ಮೇಲೆ ಇಲ್ಲಿ ಬಂದದ್ದು.

He has resigned from that post and that is why he is here. He could not have been in this Committee otherwise.

Sri VATAL NAGARAJ.—Has he got the requisite qualification?

Sri D. DEVARAJ URS.—He is taken because he has got the qualification. He is one of the best qualified engineers who is capable of functioning as a member of the Committee to give technical advice.

Sri C. M. ARUMUGHAM.—Is he a Government servant ?

Sri D. DEVARAJ URS.—He is not a Government servant ; he is only a member of the Committee.

ಶ್ರೀ ವಾಟಾಳ್ ನಾಗರಾಜ್ :– ಅವರಿಗಿಂತ ದಕ್ಷರಾದವರು ಇಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್:—ಇದ್ದರೆ ತಿಳಿಸಿ, ಅವರನ್ನು ಸೇರಿಸಿಕೊಳ್ಳುತ್ತೇವೆ.

Sri C. M. ARUMUGHAM.—Sri Vatal Nagaraj will be more efficient.

ಶ್ರೀ ಡಿ. ದೇವರಾಜ್ ಅರಸ್ :– ಚಿತ್ರದ ವಿಚಾರದಲ್ಲಿ ಬೇಕಾದರೆ ಹೇಳಬಹುದು. ಪ್ರಾಜೆಕ್ಟ್ ವಿಚಾರದಲ್ಲಿ ಹೇಗೆ ಆಗುತ್ತದೆ? ಪ್ರಾಜೆಕ್ಟ್ ವಿಚಾರಗಳಲ್ಲಿ ಅವರಿಗೆ ಗೊತ್ತಿದೆ ಎಂದು ಸಾಬೀತು ಆದರೆ ಅವರನ್ನು ಹಾಕುತ್ತೇವೆ.

ಶ್ರೀ ಹೆಚ್. ಎನ್. ನಂಜೇಗೌಡ :– ಯಾತಕ್ಕೆ ಇದನ್ನು ಹೇಳತ್ತೇನೆಂದರೆ ಸರ್ಕಾರದಲ್ಲಿ ಕೆಲಸ ಮಾಡತಕ್ಕ ಇಂಜಿನಿಯರ್‌ಗಳು ಏನು ಇದ್ದಾರೆ ಅವರು ಕೊಡತಕ್ಕ ಅಭಿಪ್ರಾಯಗಳಿಗೆ ಅಂತಿಮ ಹೊಣೆಗಾರಿಕೆ ಸರ್ಕಾರದಲ್ಲಿ ಈಗ ನಮಗೆ ಒಳ್ಳೆಯ ಟೆಕ್ನಿಕಲ್ ಅಡ್ವೈಜರ್ ಸಿಕ್ಕಿದ್ದಾರೆ,

ಅದರಲ್ಲಿ ಅನುಮಾನವಿಲ್ಲ. ತಾವು ಪದೇ ಪದೇ ಹೇಳತಕ್ಕ ಮುಗ್ದುಂ ಸುಪ್ರಭಾತ ಕೈ ಬಿಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ :—ಅವರ ಹೆಸರನ್ನು ಹಾಡಿ ಹಾಡಿ ಹೊಗಳಿದ ನಂಜೇಗೌಡರು ಮರೆತು ಬಿಟ್ಟರೆಂದು ಕಾಣುತ್ತದೆ. ಬೆಂಗಳೂರು ವಾಟರ್ ಸಪ್ಲೈಬೋರ್ಡ್ ಬಗ್ಗೆ ಅವರ ಹೆಸರಿನಲ್ಲಿ ಸುಪ್ರಭಾತ ಎಷ್ಟು ಚೆನ್ನಾಗಿ ಹಾಡಿದ್ದರು ! ಈಗ ಅರಸುರವರ ಕೃಪಾಕಟಾಕ್ಷದಿಂದ ಮಂತ್ರಿಗಳಾಗಿದ್ದಾರೆ.

ಶ್ರೀ ಹೆಚ್. ಎನ್. ನಂಜೇಗೌಡ :—ಇವತ್ತು ಕೂಡ ಮಂತ್ರಿಯಾಗಿ ಹೇಳುತ್ತೇನೆ,

What can an officer do ? It is the Government which is ultimately responsible.

Sri H. D. DEVE GOWDA.—The Hon. Minister when he was a member of the Opposition had charged the Chairman like anything.

ಶ್ರೀ ಡಿ. ದೇವರಾಜ ಅರಸ್ :—ಒಂದೊಂದು ಸಂದರ್ಭದಲ್ಲಿ ಮರೆತು ಬಿಟ್ಟು ಮಾತನಾಡುತ್ತೇನೆ. ಎಷ್ಟೋ ಸಾರಿ ನಿಜಲಿಂಗಪ್ಪನವರ ಸರ್ಕಾರವನ್ನು ಟೀಕೆ ಮಾಡಿರಲಿಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ :—ಪ್ರೊಸೀಡಿಂಗ್ ತೆಗೆಸಿ, ನಾನು ಯಾವ ಅಧಿಕಾರಿಯ ಹೆಸರನ್ನು ಹೇಳಲಿಲ್ಲ.

ಶ್ರೀ ಡಿ. ದೇವರಾಜ ಅರಸ್ :—ನೀವೂ ನಿಜಲಿಂಗಪ್ಪನವರೂ ಒಂದೇ ಕಡೆ ಇದ್ದಿರಿ. ಏನು ಮಾಡುವುದಕ್ಕೆ ಆಗುತ್ತದೆ ? ವೀರೇಂದ್ರಪಾಟೀಲರು ಹೇಳಿದರು, ಚೇರ್ಮನ್‌ಗೂ ನನಗೂ ಸಂಬಂಧವಿಲ್ಲ, ಅವರು ಅಡ್ವೈಸ್ ಕೊಟ್ಟಂತೆ ಮಾಡಿದೆವು ಎಂದು.

The then Government did not like to take the responsibility about the action taken by the Water Board, because under the Act they said they are independent. Therefore, I have not made any comment and left it at that. I would have argued and said the responsibility was on them but I did not do so. Sri Deve Gowda knows how the Government and Ministers function. They tell the officers to do this and that. Still they will not take the responsibility. There are instances where officers have stated that unless such and such instruction comes in writing, they will not act. Previously during the regime of Dewans there are instances where when an officer was asked to do a thing which was not according to law or rule, he had definitely stated that unless written instructions were given he was not going to act upon oral instructions. Sri Veerendra Patil, the then Chief Minister, said that it was no more possible for the Government to interfere. According to him, it is mostly their responsibility.

Then we had to keep quite. Government then said that what they had done was completely correct. You might have criticised the then Government. They specifically stated on the floor of the House which is in cold print that what the Chairman did or the Board did was correct.

ಶ್ರೀಮತಿ ಇ. ಇ. ವಾಜ್. (ಆಹಾರ ನಿತ್ಯೋಪಯೋಗಿ ಶಾಖೆಗಳ ರಾಜ್ಯ ಮಂತ್ರಿಗಳು)

ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಆಹಾರ ಸಂಬಂಧ ಬೇಡಿಕೆಯ ಮೇಲೆ ಅನೇಕ ಮಾನ್ಯ ಸದಸ್ಯರು ಬಹಳವಾಗಿ ಪ್ರಸ್ತಾಪ ಮಾಡಿದ್ದಾರೆ. ಮತ್ತು ಅನೇಕರು ಒಳ್ಳೆಯ ಸೂಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ ಅನೇಕರು ಟೀಕೆಗಳನ್ನು ಮಾಡಿದ್ದಾರೆ, ಅನೇಕರು ಲೋಪದೋಷ, ಗಳನ್ನು ಎತ್ತಿ ತೋರಿಸಿದ್ದಾರೆ. ಅವರಿಗೆ ನಿಜವಾಗಿಯೂ ನಾನು ಅಭಿನಂದಿಸುತ್ತೇನೆ. ಆಹಾರ ಇಲಾಖೆಯವರು ಸರಿಯಾಗಿ ಏನೂ ಕೆಲಸಮಾಡುತ್ತಾ ಇಲ್ಲ, ಅಧಿಕಾರಿಗಳಲ್ಲಿ ಲೋಪದೋಷ ಇದೆ ಮತ್ತು ಆಹಾರಪದಾರ್ಥಗಳನ್ನು ಪೂರ್ತಿಯಾಗಿ ಸರಬರಾಜು ಮಾಡುತ್ತಾ ಇಲ್ಲ ಎಂಬುದು ಮೊದಲನೆಯ ಟೀಕೆಯಾಗಿದೆ. ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ಹಾಗೆ ಈ ಲೆವಿ ಭತ್ತವನ್ನು ಕೊಂಡುಕೊಂಡು ಇದರ ಪೂರೈಕೆಯನ್ನು ಮಾಡುವ ಉದ್ದೇಶ.

1ನೆಯದು ರೈತರಿಗೆ ಒಂದು ನ್ಯಾಯ ಬೆಲೆ ಸಿಕ್ಕುವಂತೆ ಏರ್ಪಾಡು ಮಾಡುವುದು.

2ನೆಯದು ಬಡಜನರು, ಕಾರ್ಮಿಕರು ಯಾರು ಇದ್ದಾರೆ ಅವರಿಗೆ ನ್ಯಾಯಬೆಲೆಯಲ್ಲಿ ಸ್ವಲ್ಪವಟ್ಟಿಗಾದರೂ ಆಹಾರವನ್ನು ಪೂರೈಕೆ ಮಾಡುವುದು ಅದರಂತೆ ಈಗ ಮೊದಲನೇ ವರ್ಷದಲ್ಲಿ ಮೈಸೂರ್ ಸ್ಟೇಟ್ ಲೆವಿ ಪ್ರೊಕ್ಯೂರ್‌ಮೆಂಟ್ ಆರ್ಡರ್ ಪ್ರಕಾರ ಲೆವಿ ಭತ್ತವನ್ನು ಹಾಗೂ ಜೋಳವನ್ನು ಸಂಗ್ರಹಣೆ ಮಾಡುವ ಒಂದು ಕಾರ್ಯಕ್ರಮವನ್ನು ಸರ್ಕಾರ ತೆಗೆದು ಕೊಂಡಿದೆ.

ಶ್ರೀ ಹೆಚ್. ಡಿ. ದೇವೇಗೌಡ :—ನಾನು ಹೇಳಿದ್ದು ಏನೆಂದರೆ ನಾನು ಇಂಡಿಪೆಂಡೆಂಟ್ ಮೆಂಬರ್ ಆಗಿದ್ದಾಗಲೂ ಕೂಡ ಯಾವ ಆಫೀಸರ ಮೇಲೂ ಅಪಾದನೆ ಮಾಡಿಲ್ಲಾ ಆದರೆ ಸರ್ಕಾರದ ಬಗ್ಗೆ ಟೀಕೆ ಮಾಡಿದ್ದೇನೆ. ಬೇಕಾದರೆ 10 ವರ್ಷದ ಪ್ರೊಸೀಡಿಂಗ್ಸ್ ತೆಗೆಸಿ ನೋಡಿ, ಆದರೆ ನಾನು ಅಪಾದನೆ ಮಾಡುವಾಗ ಆಧಾರ ಇಲ್ಲದೆ ಅಪಾದನೆ ಮಾಡಲಿಕ್ಕೆ ಹೋಗುವುದಿಲ್ಲ, ನನ್ನ ಹತ್ತಿರ ಬೇಸಿಸ್ ಇಲ್ಲದೆ ಅಪಾದನೆ ಮಾಡುವುದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ :—ಕೆ. ಕೆ. ಮೂರ್ತಿ ಅವರು ನಿಮ್ಮ ಫ್ಯಾಮಿಲಿ ಫ್ರೆಂಡ್ ಅಂತ ಊರೆಲ್ಲಾ ಹೇಳ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್ :—ಫ್ಯಾಮಿಲಿ ಫ್ರೆಂಡ್ ಎಂದು ನೀವು ಹೇಳಿಕೊಳ್ಳಿ. ನಾವು ಯಾವಾಗಲೂ ಬೆಂಗಳೂರಿನಲ್ಲಿ ಇದ್ದವರಲ್ಲ. ಹಿಂದಿನಿಂದಲೂ ಅವರು ಮನೆ ಸ್ನೇಹಿತರು.

ಶ್ರೀ ಟಿ. ಆರ್. ಶಾಮಣ್ಣ :—ನೀವು ಅವರಿಗೆ ಫೇವರ್ ಮಾಡ್ತೀರಿ ಎಂದು ಹೇಳುತ್ತಾರೆ ಅದನ್ನು ತಾವು ಒಪ್ಪುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್ :—ಫೇವರ್ ಅಂದರೆ ಏನು ಅರ್ಥ ? ಯಾರಲ್ಲಿ ಯೋಗ್ಯತೆ ಇದೆ, ಆ ಯೋಗ್ಯತೆಯನ್ನು ಉಪಯೋಗಿಸಿಕೊಳ್ಳುವಂಥಾ ವಿದ್ಯೆ ನಾನು ಕಲಿತಿದ್ದೇನೆ. ಆ ಬಗ್ಗೆ ಇನ್ನು ಹೆಚ್ಚಿಗೆ ಹೇಳುವುದು ಬೇಡ. ಸೀಮೆಎಣ್ಣೆ ಲೈಸನ್ಸ್ ನಾನು ಕೊಡಲಿಲ್ಲಾ. ಅದನ್ನು ದುರುಪಯೋಗಪಡಿಸಿಕೊಂಡಿದ್ದರೆ ಶಿಕ್ಷೆಗೆ ಒಳಗಾಗುತ್ತಾರೆ. ಅವರು ಶೇಕಡ 20 ರಷ್ಟು .

ಸೀಮೆಯೆಣ್ಣೆ ವ್ಯವಹಾರ ಮಾಡುತ್ತಾರೆ. ಉಳಿದ ಶೇಕಡ 80 ರಷ್ಟು ಈ ವ್ಯವಹಾರ ಮಾಡುವವರ ಬಗ್ಗೆ ಒಂದು ದಿವಸವು ತಾವೂ ಮಾತನಾಡಿಲ್ಲಾ. ನೀವು 6 ತಿಂಗಳಿನಿಂದಲೂ ಒಂದೇ ಹೆಸರನ್ನು ಹೇಳುತ್ತಾ ಇದ್ದೀರಿ. ನನಗೆ ಗೊತ್ತಿರುವ ಹಾಗೆ ಕೆರೋಸಿನ್ ಆಯಿಲ್ ಬೆಂಗಳೂರು ಪಟ್ಟಣದವರಿಗೆ ಕೊಡಲು ಇವರಿಗೆ ಇರತಕ್ಕಂಥಾದ್ದು 20 ಪರ್ಸೆಂಟ್, ಇನ್ನು 80 ಪರ್ಸೆಂಟ್ 2-3 ಜನರ ಹೆಸರಿನಲ್ಲಿದೆ. ಆ ಬಗ್ಗೆ ಮಾತನಾಡಿಲ್ಲಾ. ಈ 80 ಪರ್ಸೆಂಟ್ ಮಾರುವವರ ವ್ಯವಹಾರ ಸರಿಯಾಗಿದೆಯೋ ? ಅವರ ಬಗ್ಗೆ ಏಕೆ ಮಾತನಾಡುತ್ತಾ ಇಲ್ಲ ? ಇವರೊಬ್ಬರ ಬಗ್ಗೆಯೇ ಮಾತನಾಡಲು ಕಾರಣ ಏನು ? ಇದರ ಉದ್ದೇಶ ಏನು ?

ಶ್ರೀ ಹೆಚ್. ಡಿ. ದೇವೇಗೌಡ :—ಸರಕಾರ ಲೈಸನ್ಸ್ ಇರಲಿಲ್ಲ ಅಂತ ಹೇಳಿದ್ದರಿಂದ ಅವರ ಹೆಸರು ಬಂತು.

ಶ್ರೀ ವಾಟಾಳ್ ನಾಗರಾಜ್ :—ನಾವು ಅವರ ಬಗ್ಗೆ ಉದ್ದೇಶಪೂರ್ವಕವಾಗಿ ಮಾತನಾಡಿದ್ದೇವೆಂದು ತಪ್ಪು ತಿಳಿದುಕೊಳ್ಳಬಾರದು. ಸರ್ಕಾರದಿಂದ ಇವರ ಪ್ರಸ್ತಾಪ ಬಂದಿರುವ ಹೊತ್ತಿಗೆ ಅವರ ಬಗ್ಗೆ ಮಾತನಾಡಬೇಕಾಗಿ ಬಂತು.

ಶ್ರೀ ಹೆಚ್. ಎನ್. ನಂಜೇಗೌಡ :—ಇಷ್ಟು ಹೇಳಿ ಈ ಇಲಾಖೆಗೆ ಸಂಬಂಧಪಟ್ಟ ಬೇಡಿಕೆ ಏನು ಇದೆ. ಆ ಬಗ್ಗೆ ಸರ್ವಾನುಮತದ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :—ತಾವು ಉತ್ತರ ಕೊಡುವಾಗ ಕಂಟ್ರಾಕ್ಟರ್ ಬಗ್ಗೆ ಒಂದು ಚಕಾರ ಶಬ್ದವನ್ನೂ ಕೂಡ ಎತ್ತಲಿಲ್ಲ. ತಾವು ಒಬ್ಬ ದೊಡ್ಡ ಕಂಟ್ರಾಕ್ಟರಿಗೆ ಟೆಂಡರ್ ಏನು ಕೊಟ್ಟಿದ್ದೀರಿ, ಆ ಬಗ್ಗೆ ಹೇಳಿದ್ದೆ. ಆ ವಿಚಾರ ಏನೂ ಪ್ರಸ್ತಾಪ ಮಾಡಲಿಲ್ಲಾ.

ಶ್ರೀ ಹೆಚ್. ಎನ್. ನಂಜೇಗೌಡ : ಏನು ಕೆಲಸ ಮಾಡಿದರೂ ಕೂಡ ಸರ್ಕಾರದ ಕಾನೂನಿಗೆ ಒಳಪಟ್ಟು ಮಾಡುತ್ತೇವೆಯೋ ಹೊರತು ಕಾನೂನು ಮೀರಿ ಮಾಡುವುದಿಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀಮತಿ ಇ. ಇ. ವಾಜ್ :—ನಮ್ಮ ಆರ್ಡರ್ ಪ್ರಕಾರ ಈ ವರ್ಷಕ್ಕೆ 1,50,000 ಟನ್ ಬತ್ತ, 75,000 ಟನ್ ಜೋಳ ಸಂಗ್ರಹ ಮಾಡಬೇಕೆಂಬ ಉದ್ದೇಶವಿತ್ತು. ಆದರೆ ದುರ್ದೈವದಿಂದ ಈ ವರ್ಷ ಮುಂಗಾರು ಮಳೆ ಸರಿಯಾಗಿ ಬಾರದೆ, ಅಭಾವ ಪರಿಸ್ಥಿತಿ ಅನೇಕ ಜಿಲ್ಲೆಗಳಲ್ಲಿ ತಲೆದೋರಿ ನಾವು ಎಷ್ಟನ್ನು ಸಂಗ್ರಹ ಮಾಡಬೇಕೆಂದು ಉದ್ದೇಶ ಮಾಡಿದ್ದೆವೋ ಅಷ್ಟು ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಬತ್ತ ಈ ಹೊತ್ತಿನವರೆಗೆ 69,829 ಟನ್ ಮತ್ತು ಜೋಳ 617 ಟನ್ ಮಾತ್ರ ಸಂಗ್ರಹ ಮಾಡಲಿಕ್ಕೆ ಸಾಧ್ಯವಾಯಿತು. ಆದರೆ ಹೋದ ವರ್ಷದ್ದೂ, ಈ ವರ್ಷದ್ದೂ ಕಂಪೇರ್ ಮಾಡಿ ನೋಡಿದರೆ ಈ ವರ್ಷ ಒಂದು ಲಕ್ಷ ಕ್ವಿಂಟಾಲ್ ಹೆಚ್ಚು ಸಂಗ್ರಹ ಮಾಡಿದ್ದೇವೆ.

ಮುಂದಿನ ಬೆಳೆಯಿಂದ ಸಗಟು ವ್ಯಾಪಾರವನ್ನು ಸರ್ಕಾರ ತೆಗೆದುಕೊಳ್ಳುವ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿ, ಇದು ಖಂಡಿತವಾಗಿ ಯಶಸ್ವಿಯಾಗುವುದಿಲ್ಲ, ಇದನ್ನು ಕೈ ಬಿಡಬೇಕೆಂದು ಸಲಹೆ ಮಾಡಿದರು. ಶ್ರೀ ವಾಟಾಳ್ ನಾಗರಾಜ್ ಮತ್ತು ಕೆಲವು ಸ್ನೇಹಿತರು ಇದನ್ನು ಬಹಳವಾಗಿ ಸ್ವಾಗತಿಸಿ ಇದಕ್ಕೆ ಪ್ರೋತ್ಸಾಹವನ್ನು ಕೂಡ ಕೊಡುವಂಥ ಭರವಸೆಯನ್ನು ಕೊಟ್ಟಿದ್ದಾರೆ.

ಈ ಸಲ ನಮ್ಮ ಪೂರೈಕೆಗೆ ಕೊರತೆ ಬರಲಿಕ್ಕೆ ಕಾರಣವೇನೆಂದರೆ ನಮ್ಮ ರಾಜ್ಯದಲ್ಲಿ ಆರು ಜಿಲ್ಲೆಗಳಲ್ಲಿ ಸ್ವಲ್ಪಮಟ್ಟಿಗೆ ಗೋಧಿ ಬೆಳೆಯುತ್ತಿದ್ದು ಸರಾಸರಿ ನಮಗೆ 1,87,000 ಟನ್ ಗೋಧಿ ಉತ್ಪತ್ತಿಯಾಗುತ್ತಿತ್ತು ಮತ್ತು ನಮ್ಮ ವಾರ್ಷಿಕ ಖರ್ಚು ಸುಮಾರು 2,24,000 ಟನ್

ಎಂದರೆ ಸಾಧಾರಣವಾಗಿ 37,000 ಟನ್ ಕಡಮೆ ಬೀಳುತ್ತಿತ್ತು. ಈ ವರ್ಷ ಗೋಧಿ ಬೆಳೆ ಬಹಳ ಕಡಮೆಯಾದುದರಿಂದ ಪೂರ್ತಿ ನಮ್ಮ ಬೇಡಿಕೆಗಾಗಿ ಕೇಂದ್ರ ಸರ್ಕಾರವನ್ನು ಅವಲಂಬಿಸ ಬೇಕಾಗಿ ಬಂತು. ನಮ್ಮ ರಾಜ್ಯದಲ್ಲಿಯೇ ಅಲ್ಲ ಅನೇಕ ರಾಜ್ಯಗಳಲ್ಲಿ ಇದೇ ರೀತಿಯ ಅಭಾವ ಪರಿಸ್ಥಿತಿ ಬಂದಿರುವುದರಿಂದ ಕೇಂದ್ರದವರು ಎಷ್ಟೊಂದು ದಾಸ್ತಾನು ಮಾಡಿದ್ದರೂ ಕೂಡ ನಮಗೆಷ್ಟು ಬೇಕೋ ಅಷ್ಟನ್ನು ಕೊಡಲು ಸಾಧ್ಯವಾಗಲಿಲ್ಲ. ಒಂದೂವರೆ ವರ್ಷದಿಂದ ಸರಿಸುಮಾರಾಗಿ 25 ಸಾವಿರ ಟನ್ ಗೋಧಿ ಕೇಂದ್ರ ಸರ್ಕಾರದವರು ಕೊಡುತ್ತಿದ್ದರು. ಆವಾಗ ನಮಗೆ ಸಾರ್ವಜನಿಕರಿಗೆ ಹಂಚಲು ಐದು ಸಾವಿರ ಟನ್ ಮಾತ್ರ ಬೇಕಾಗುತ್ತಿತ್ತು. ಉಳಿದ 20 ಸಾವಿರ ಟನ್ ರೋಲರ್ ಫ್ಲೋರ್ ಮಿಲ್ಸ್‌ಗೆ ಕೊಡುತ್ತಿದ್ದೆವು. ಅಲ್ಲಿಂದ ಗೋಧಿಯ ಬೈ ಪ್ರಾಡಕ್ಟ್ಸ್ ಮೈದ, ಆಟ, ಸೋಜಿ ನಮಗೆ ದೊರೆತು ಅದನ್ನು ಮಾರುಕಟ್ಟೆಯಲ್ಲಿ ವಿತರಣೆ ಮಾಡಬಹುದಾಗಿತ್ತು. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ತೀವ್ರ ಅಭಾವ ಬಂದಿದೆ. 20 ಸಾವಿರ ಟನ್ ರೋಲರ್ ಫ್ಲೋರ್ ಮಿಲ್ಸ್‌ಗೆ ಕೊಡುತ್ತಿದ್ದುದನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಅಲ್ಲದೆ ಕೇಂದ್ರ ಸರ್ಕಾರದವರು ನಮಗೆ ಒದಗಿಸುವಂಥ ಪ್ರಮಾಣವನ್ನು 25 ಸಾವಿರ ಟನ್‌ನಿಂದ 15 ಸಾವಿರ ಟನ್ನಿಗೆ ಇಳಿಸಿದ್ದರಿಂದ ಪಬ್ಲಿಕ್ ಇಳಿಸಿದ್ದರಿಂದ ಡಿಸ್ಟ್ರಿಬ್ಯೂಷನ್ನಿಗೆ 10 ಸಾವಿರ ಟನ್ ಕೊಟ್ಟು ಕೇವಲ ಐದು ಸಾವಿರ ಟನ್ ಮಾತ್ರ ರೋಲರ್ ಫ್ಲೋರ್ ಮಿಲ್ಸ್‌ಗೆ ಕೊಡಲು ಸಾಧ್ಯವಾಯಿತು. ಅದರಲ್ಲಿ ಸರಿಸಮಾನವಾಗಿ ಒಂದೂವರೆ ಸಾವಿರ ಟನ್ ಆಟ ಒಂದೂವರೆ ಸಾವಿರ ಟನ್ ಮೈದಾ ಮತ್ತು ಒಂದೂವರೆ ಸಾವಿರ ಟನ್ ಸೋಜಿ, ಒಂದು ಸಾವಿರ ಟನ್ ಬೂಸ ಸಿಕ್ಕುತ್ತದೆ. ಅನೇಕ ಮಾನ್ಯ ಸದಸ್ಯರು ಹೇಳಿದಹಾಗೆ ಆಹಾರ ಮತ್ತು ಬೂಸ ಸರಿಯಾದ ಪ್ರಮಾಣದಲ್ಲಿ ಒದಗಿಸಲಿಕ್ಕೆ ಸಾಧ್ಯವಾಗಲಿಲ್ಲ. ಈಗ ನಮ್ಮ ರಾಜ್ಯದಲ್ಲಿ ಅನೌಪಚಾರಿಕ ಪಡಿತರ ಪದ್ಧತಿ ಬೆಂಗಳೂರು ಮತ್ತು ಕೆ.ಜಿ.ಎಫ್. ಬಿಟ್ಟರೆ ಇತರ ಕಡೆ ಜಾರಿಯಲ್ಲಿಲ್ಲ. ಆದರೆ ಎಲ್ಲಿ ಕಾರ್ಮಿಕರು, ಕೂಲಿಕಾರರು ಜಾಸ್ತಿ ಇದ್ದಾರೆ ಅಲ್ಲಿಯ ಜಿಲ್ಲಾಧಿಕಾರಿಗಳು ತಿಳಿದುಕೊಂಡು ಅಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಿಕ್ಕೆ ಸರ್ಕಾರದವರು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದಾರೆ. ಸೆಪ್ಟೆಂಬರ್ ತಿಂಗಳಿನಿಂದೀಚೆಗೆ ಬಿದರೆ, ಬಿಜಾಪುರ, ಗುಲ್ಬರ್ಗ ಜಿಲ್ಲೆಗಳಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ ಎಲ್ಲಿ ಅಗತ್ಯ ಕಾಣುತ್ತದೆ ಅಲ್ಲಿ 100 ನ್ಯಾಯ ಬೆಲೆ ಅಂಗಡಿಗಳನ್ನು ಸ್ಥಾಪಿಸಬೇಕು. ಕನಿಷ್ಟಪಕ್ಷ, 50 ಅಂಗಡಿಗಳನ್ನಾದರೂ ತೆರೆದು ಸಾಕಷ್ಟು ಆಹಾರ ಧಾನ್ಯವನ್ನು ಒದಗಿಸಬೇಕು ಎನ್ನುವ ಆದೇಶವನ್ನು ಕೂಡ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಅನೇಕರು ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದರಿಂದ ಒಂದೊಂದಾಗಿ ನಾನು ಅವರಿಗೆ ಉತ್ತರ ಕೊಡಲು ಇಚ್ಛಿಸುತ್ತೇನೆ.

ವಿರೋಧ ಪಕ್ಷದ ನಾಯಕರು ಕಳ್ಳಸಾಗಾಣಿಕೆಯಾಗುತ್ತಿದೆ. ಅದರಲ್ಲಿಯೂ ಹತ್ತು ಕೆ. ಜಿ. ಅಕ್ಕಿ 5 ಕೆ. ಜಿ. ಅಕ್ಕಿ ತರುವಂಥ ಅಧಿಕಾರಿಗಳನ್ನು ಹಿಡಿಯುತ್ತಾರೆ, ಜಾಸ್ತಿ ಇರುವ ಕಡೆ ಏನೂ ಮಾಡುವುದಿಲ್ಲವೆಂದು ಹೇಳಿದ್ದಾರೆ. ನಾವು ಸಾಧಾರಣವಾಗಿ ಒಂದು ವರ್ಷದಿಂದೀಚೆಗೆ ಎಷ್ಟು ಕೇಸುಗಳನ್ನು ಹಿಡಿದಿದ್ದೇವೆ, ಎಷ್ಟು ಆಹಾರ ಪದಾರ್ಥ ಹಿಡಿದಿದ್ದೇವೆ, ಎನ್ನುವುದನ್ನು ಹೇಳುತ್ತೇನೆ. 1972 ರಲ್ಲಿ 3499 ಕೇಸುಗಳನ್ನು ಹಿಡಿದು 50.08,062 ರೂಪಾಯಿ ಬೆಲೆ ಬಾಳುವ 91.240 ಕ್ವಿಂಟಾಲ್ ಧಾನ್ಯವನ್ನು ಹಿಡಿಯಲಾಯಿತು. 1-1-1973 ರಿಂದ 28-2-1973ರ ವರೆಗೆ 15,63,540 ರೂಪಾಯಿ ಬೆಲೆ ಬಾಳುವ 12,790 ಕ್ವಿಂಟಾಲ್ ಧಾನ್ಯವನ್ನು ಹಿಡಿದಿದ್ದೇವೆ. ಇದನ್ನು ನೋಡಿದರೆ ಮಾನ್ಯ ಸದಸ್ಯರು ಯಾವ ಟೀಕೆಯನ್ನು ಮಾಡಿದ್ದಾರೋ ಅದು ಸೂಕ್ತವಾದ ಟೀಕೆಯಲ್ಲ ಎಂದು ಹೇಳಬಹುದು.

ಮಾನ್ಯ ಸದಸ್ಯರು ಇನ್ನೊಂದು ಟೀಕೆಯನ್ನು ಮಾಡಿದರು. ನಮ್ಮ ಮುಖ್ಯ ಮಂತ್ರಿಗಳು ಮತ್ತು ಮೂರು ಜನ ಮಂತ್ರಿಗಳು ಯಾವುದೋ ಒಂದು ಸಮಾರಂಭಕ್ಕೆ ಹೋಗಿ 23 ನಮೂನೆ

ಆಹಾರದ ತಿಂಡಿ ತಿಂದರು ಎಂದು ಹೇಳಿದರು. ಆದರೆ ಇದು ಸತ್ಯಕ್ಕೆ ದೂರವಾದ ಮಾತು ಎಂದು ನನಗನ್ನಿಸುತ್ತದೆ. ಯಾರಾದರೂ ಒಂದು ಸಮಾರಂಭದಲ್ಲಿ 23 ತರಹ ಅಡಿಗೆ ಮಾಡಿ ಬಡಿಸುವುದಕ್ಕೆ ಸಾಧ್ಯವೇ ? ಸಾಧ್ಯವಿಲ್ಲ ಎನ್ನುವುದು ನನ್ನ ಭಾವನೆ.

ಶ್ರೀ ವಿ.ಎನ್ ಪಾಟೀಲರು ಸಗಟುವ್ಯಾಪಾರ ತೆಗೆದುಕೊಳ್ಳುವುದಕ್ಕೆ ಏರ್ಪಾಟು ಮಾಡಿದ್ದಾರೆ, ಅದು ಕಾರ್ಯಗತವಾಗುವುದಿಲ್ಲ ಎನ್ನುವ ಭೀತಿಯನ್ನು ತೋರಿಸಿದರು. ನಾವೆಲ್ಲರೂ ಸಹಕರಿಸಿ ಕೊಂಡು ಹೋದರೆ ಖಂಡಿತವಾಗಿಯೂ ಅಂಥ ಭೀತಿಗೆ ಆಧಾರವಿರುವುದಿಲ್ಲ. ಸಗಟು ವ್ಯಾಪಾರ ತೆಗೆದುಕೊಳ್ಳುವ ಉದ್ದೇಶವಾದರೂ, "to avoid speculation and to give remunerative price to the farmers, to give incentive to further production and to make available food articles to as many consumers as possible",

ನಮ್ಮ ಹತ್ತಿರ ಸರಿಯಾದ ಅನುಕೂಲತೆಗಳಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಎಷ್ಟು ಸ್ಟೋರೇಜ್ ಕೆಪಾಸಿಟಿ ಇದೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಸರ್ಕಾರದಲ್ಲಿ 73,000 ಟನ್, ಆಹಾರ ಕಾರ್ಪೊರೇಷನ್‌ನಲ್ಲಿ 40,000 ಟನ್, ಸ್ಟೇಟ್ ವೇರ್‌ಹೌಸಿಂಗ್ ಕಾರ್ಪೊರೇಷನ್‌ನಲ್ಲಿ 1,16,400 ಟನ್, ಸೆಂಟ್ರಲ್ ವೇರ್‌ಹೌಸ್‌ನಲ್ಲಿ 31,300 ಟನ್, ಕೋ-ಆಪರೇಟಿವ್ ಸೊಸೈಟಿಗಳು ಮತ್ತು ಇತರ ಇಂಡಿವಿಜುಯಲ್ಸ್ ಹತ್ತಿರ ಬೇರೆ ಬೇರೆ ಪ್ರಮಾಣದಲ್ಲಿ ಆಹಾರ ಧಾನ್ಯ ಹಿಡಿಸುವ ಗೋಡೌನ್ ಗಳಿವೆ. ಹೀಗೆ ಒಟ್ಟು ಮೂರು ಲಕ್ಷ ಟನ್ ಆಹಾರ ದಾಸ್ತಾನು ಮಾಡುವುದಕ್ಕೆ ಅವಕಾಶವಿದೆ ಎನ್ನುವುದನ್ನು ತಿಳಿಸುತ್ತೇನೆ.

ಸಗಟು ವ್ಯಾಪಾರ ತೆಗೆದುಕೊಳ್ಳುವಾಗ ಸರಕಾರದ ಹತ್ತಿರ ಸುಮಾರು ನಾಲ್ಕು ಲಕ್ಷ ಟನ್ ಗಳಷ್ಟು ದವಸ ಮಾರ್ಕೆಟಬಲ್ ಸರ್‌ಪ್ಲಸ್ ಇದೆ. ಆದರೆ ರಾಗಿ ಬೆಳೆಯುವವರಲ್ಲಿ ಒಂದು ಪದ್ಧತಿ ಇದೆ. ನಾಲ್ಕು ಲಕ್ಷ ಮಾರ್ಕೆಟಬಲ್ ಸರ್‌ಪ್ಲಸ್ ಇರಬೇಕಾದರೆ ಕನಿಷ್ಟ ನಮ್ಮಲ್ಲಿ ಮೂರೂವರೆ ಲಕ್ಷ ಟನ್ ದಾಸ್ತಾನು ಮಾಡಬೇಕಾಗುತ್ತದೆ. ಇದಕ್ಕಿಂತ ಹೆಚ್ಚು ಮಾಡ ಬೇಕೆಂದೂ ಪ್ರಯತ್ನ ಮಾಡುತ್ತಿದ್ದೇವೆ. ಹೀಗೆ ಆಹಾರದ ಕೊರತೆ ಬರಲು ಕಾರಣವೇನೆಂದರೆ ನಮ್ಮಲ್ಲಿ ಜನಸಂಖ್ಯೆಯ ಪ್ರಮಾಣ ಬರಬರುತ್ತಾ ಹೆಚ್ಚಾಗುತ್ತಿದೆ. 1960 ರಲ್ಲಿ ನಮ್ಮಲ್ಲಿದ್ದ ಜನಸಂಖ್ಯೆ 2.35 ಲಕ್ಷ ಇದ್ದದ್ದು ಈಗ ಅದು 2.95 ಲಕ್ಷಕ್ಕೆ ಮೈಸೂರು ರಾಜ್ಯದಲ್ಲಿ ಏರಿ ಹೋಗಿದೆ. ಇದರಿಂದ ಒಂದಕ್ಕೆ ಒಂದೂವರೆಯಷ್ಟು ಹೆಚ್ಚು ಜನರಿಗೆ ಆಹಾರ ದವಸಗಳನ್ನು ಒದಗಿಸಬೇಕಾಗಿದೆ.

ಇನ್ನು ಮಾನ್ಯ ಸದಸ್ಯರು ಕೆಲವು ಕಡೆ ಕೊಡುತ್ತಿರುವ ದವಸಗಳು ಕಡ್ಡಿ ಕಸಗಳಿಂದ ಹಾಗೂ ದತ್ತೂರು ಬೀಜಗಳಿಂದ ಕೂಡಿದೆ ಎಂದು ಹೇಳಿದರು. ಗೋಧಿಯ ಬಗ್ಗೆ ದತ್ತೂರು ಸೀಡ್ ಇದೆಯೋ ಎಂದು ಪರೀಕ್ಷೆ ಮಾಡಿದಾಗ ಅದರಲ್ಲಿರಲಿಲ್ಲ ಎಂದು ತಿಳಿದು ಬಂದಿದೆ. ಆದರೆ ಮಿಲೋದಲ್ಲಿ ಕೂಡ ನಾನು ತನಿಖೆ ಮಾಡಿ ನೋಡಿದ್ದೇನೆ. ಇದರಲ್ಲಿ ಅಷ್ಟು ಹೆಚ್ಚಾಗಿಲ್ಲ ಒಂದು ಕೆ.ಜಿ.ಗೆ ನಾಲ್ಕೈದು ದತ್ತೂರ ಬೀಜಗಳು ಇರುವುದು ಕಂಡು ಬಂತು. ಇದೇನೂ ಅಷ್ಟು ಹಾನಿಕರವಲ್ಲವೆಂದೂ ಗೊತ್ತಾಗಿದೆ. ಇದಕ್ಕಾಗಿ ಯಾರೂ ಅಷ್ಟು ಗಾಬರಿಪಡ ಬೇಕಾಗಿಲ್ಲ. ಜನತೆಗೆ ಆದಷ್ಟು ಒಳ್ಳೆಯ ಧಾನ್ಯಗಳನ್ನು ಒದಗಿಸುವ ಏರ್ಪಾಡು ಮಾಡ ಬೇಕೆಂದು ಮಾಡುತ್ತಿದ್ದೇವೆ. ಇನ್ನು ಹುಮ್ನಾಬಾದ್ ತಹಶೀಲುದಾರರು ನೂರು ರೂಪಾಯಿಗಳನ್ನು ಕೊಟ್ಟರೆ ಮಾತ್ರ ಲೈಸೆನ್ಸ್ ಕೊಡುತ್ತಾರೆ, ಇಲ್ಲದಿದ್ದರೆ ಇಲ್ಲ ಎಂದು ಇಲ್ಲಿರುವ ಅಧಿಕಾರಿಗಳ ಮೇಲೆ ಹಾಗೂ ಜಿಲ್ಲಾಧಿಕಾರಿಗಳ ಮೇಲೆ ಟೀಕೆ ಮಾಡಿದರು.

ನಾನು ಕೂಡ ಯಾರನ್ನೂ ಹರಿಶ್ಚಂದ್ರ ಎಂದು ಹೇಳಲು ಹೋಗುವುದಿಲ್ಲ. ಹಾಗೇ ಇಲಾಖೆಯಲ್ಲಿರುವ ಎಲ್ಲಿ ಅಧಿಕಾರಿಗಳೂ ಕೆಟ್ಟವರು ಎಂದು ಹೇಳಲು ಹೋಗುವುದಿಲ್ಲ ಹಾಗೆ ಮಾಡಲು ಸಾಧ್ಯವಿಲ್ಲ. ಅಲ್ಲಿ ಇಲ್ಲ ಕೆಲವು ಕಡೆ ಲೋಪದೋಷಗಳು ಇರಬಹುದು. ಕೆಲವರು ಬಹಳ ನಿಷ್ಠೆಯಿಂದ ಕೆಲಸ ಮಾಡುವವರೂ ಇದ್ದಾರೆ. ಆದರೆ ಇದರ ಬಗ್ಗೆ ವೇಗ್ ಅಲಿಗೇಷನ್‌ಗಳನ್ನು ಮಾಡುವುದು ಸರಿಯಲ್ಲ. ನಿರ್ದಿಷ್ಟವಾದ ದೂರುಗಳನ್ನು ನನ್ನ ಗಮನಕ್ಕೆ ತಂದರೆ ಅಂತಹವರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ಪ್ರಯತ್ನಪಡುತ್ತೇನೆ.

ಇನ್ನೊಂದು ವಿಚಾರ ಇಲ್ಲಿ ಮಾನ್ಯ ಸದಸ್ಯರು ಹೇಳಿರುವುದು ರೈತರಿಗೆ ನ್ಯಾಯ ಬೆಲೆ ಸಿಗುತ್ತಿಲ್ಲ. ನಾವು ಲೆವಿ ಬತ್ತವನ್ನು ಕೇಳುವುದು ಇರಿಗೇಷನ್ ಲ್ಯಾಂಡ್ಸ್‌ನಲ್ಲಿ ರೇನ್‌ಫೆಡ್ ಏರಿಯಾದಲ್ಲಿ ಕನಿಷ್ಟಪಕ್ಷ ಒಂದು ಕ್ವಿಂಟಾಲಿಗೆ ಎರಡು ಕೆ.ಜಿ. ಮಾತ್ರ ಕೇಳುತ್ತಿದ್ದೇವೆ. ಎಂದರೆ ಹತ್ತನೆ ಒಂದು ಭಾಗದಷ್ಟು ಮಾತ್ರ. ಇದರ ಮೇಲೆ ಅಭಾವವಿರುವ ಪ್ರದೇಶಗಳಲ್ಲಿ ರಿಯಾಯಿತಿಗಳನ್ನೂ ತೋರಿಸಲಾಗಿದೆ. ಇದಕ್ಕೆಲ್ಲಾ ನಿಗದಿಯಾದ ಬೆಲೆ ಕೂಡ ಇದ್ದೆ ಸರಕಾರ ಒತ್ತಾಯದಿಂದ ಲೆವಿ ವಸೂಲು ಮಾಡಬೇಕೆಂದು ಆದೇಶ ಕೊಟ್ಟಿಲ್ಲ. ಐದು ಎಕರೆಯಲ್ಲಿ ಬೆಳೆದವರಿಂದ ಕೇವಲ 25 ಕೆ. ಜಿ. ಧಾನ್ಯಗಳನ್ನು ಕೇಳುತ್ತೇವೆ. ಇದಕ್ಕೆ ತಕ್ಕ ದರವನ್ನೂ ನಿಗದಿ ಮಾಡಲಾಗಿದೆ.

Purchase rate of coarse riec is Rs. 54-80. This includes Rs. 2-50 transport charges and 20 paise commission to the village accountants who take the trouble of collecting the foodgrains.

Sri V. N. PATIL.—Why are you paying 20 paise to the Village Accountants who are the Government servants ? Public money is not meant for charitable purposes.

Smt. E. E. VAZ.—Administrative charges Rs. 2. The ex-godown cost of rice is Rs. 65-35. Milling charges 75 paise. Ex-mill value of 69 kgs. of raw rice is Rs. 66-10. The ex-mill value of one quintal of fine rice cost Rs. 95-90 and we are selling it at Rs. 100 per quintal.

The cost of coarse rice is Rs. 54-80

Fine rice	Rs. 130	00
Medium rice	Rs. 110	00
Coarse rice	Rs. 100	00
Mid-fine rice	Rs. 120	00

95–80ರಂತೆ ಅಕ್ಕಿ ತೆಗೆದುಕೊಂಡು 100ರಿಂದ 130ರ ವರೆಗೆ ಮಾರುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :—ಕಳೆದ ಎರಡು ಮೂರು ತಿಂಗಳಿಂದ ಸರಕಾರ ಆಹಾರ ದವಸಗಳನ್ನು ಯಾವ ರೇಟಿನಲ್ಲಿ ಮಾರಾಟ ಮಾಡುತ್ತಿದೆ ? ಅದನ್ನು ಸರಿಯಾಗಿ ತಿಳಿಸುತ್ತಾರೆಯೇ ?

ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ್) :—ಮಾನ್ಯ ಮಂತ್ರಿಗಳು ಸರಿಯಾಗಿ ಹೇಳುತ್ತಿಲ್ಲ. ಮತ್ತು ಅವರು ಹೇಳುವ ಬೆಲೆಗೆ ದವಸ ಸಿಗುತ್ತಿಲ್ಲ. ಯಾವ ಫೇರ್ ಪ್ರೈಸು ಡಿಪೋವಿನಲ್ಲೂ ಈ ರೀತಿ ಮಾರುತ್ತಿಲ್ಲ.

ಶ್ರೀ ಟಿ. ಆರ್. ಶಾಮಣ್ಣ :—ಮಾನ್ಯ ಮಂತ್ರಿಗಳು ನನ್ನ ಜೊತೆಯಲ್ಲಿ ನ್ಯಾಯ ಬೆಲೆ ಅಂಗಡಿಗಳ ಹತ್ತಿರ ಬಂದು ನೋಡಲಿ. ಅವರು ಹೇಳುತ್ತಿರುವುದರಲ್ಲಿ ನಿಜಾಂಶವಿದ್ದರೆ ನಾನು ಏನು ಬೇಕಾದರೂ ಚಾಲೆಂಜ್ ತೆಗೆದುಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಇಂದು ನ್ಯಾಯ ಬೆಲೆ ಅಂಗಡಿಗಳಲ್ಲಿ ಯಾವ ಸಾಮಾನುಗಳು ಸಹ ಸಿಗುತ್ತಿಲ್ಲ. ಅಷ್ಟೊಂದು ಅವ್ಯವಸ್ಥೆಯಾಗಿದೆ.

ಶ್ರೀಮತಿ ಇ. ಇ. ವಾಜ್ :—ನಾಳೆ ಬೇಕಾದರೆ ಬರೋಣ. ಸದಸ್ಯರು ನ್ಯಾಯ ಬೆಲೆ ಅಂಗಡಿಗಳಲ್ಲಿ ಅಕ್ಕಿಯನ್ನು 1–30ರಿಂದ 1–50ರವರೆಗೆ ಮಾರಾಟ ಮಾಡಲಾಗುತ್ತಿದೆ ಎಂದು ಹೇಳಿದರು. ಈಗ ಬೆಂಗಳೂರಿಗೆ ವರ್ತಕರು ರೈತರಿಂದ ಕೊಂಡು ಬತ್ತವನ್ನು ತರುವಾಗ ಸರ್ಕಾರಕ್ಕೆ 50 ಪರ್ಸೆಂಟ್ ಕೊಟ್ಟು ಉಳಿದಿದ್ದನ್ನು ಅವರು ಮಾರಾಟ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದೇವೆ.

ಶ್ರೀ ಬಿ. ವಿ. ಕಕ್ಕಿಲಾಯ :—ಈಗ ಬಂಟವಾಳದ ನ್ಯಾಯಬೆಲೆ ಅಂಗಡಿಗಳಲ್ಲಿ ಕೆ.ಜಿ.ಗೆ 1–50 ರಂತೆ ಮಾರಾಟ ಮಾಡುತ್ತಿದ್ದಾರೆ. ಪುತ್ತೂರಿನಲ್ಲಿ ಕೆ. ಜಿ ಗೆ 1–38ರಂತೆ ಮಾರಾಟ ಮಾಡುತ್ತಿದ್ದಾರೆ. ಈ ರೇಟನ್ನು ಅಲ್ಲಿಯ ಡಿ. ಸಿ. ಅವರೇ ಫಿಕ್ಸ್ ಮಾಡಿದ್ದಾರೆ.

ಶ್ರೀಮತಿ ಇ. ಇ. ವಾಜ್ :—ಮಾನ್ಯ ಸದಸ್ಯರಿಗೆ ಗೊತ್ತಿರಬಹುದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿಯ ಅಭಾವವಿದೆಯೆಂದು ಅಲ್ಲಿಯ ಸಹಕಾರಿ ಸಂಘಗಳವರು ಬಂದು ಸರ್ಕಾರಕ್ಕೆ ತಿಳಿಸಿದ ಮೇಲೆ, ನಾವು ಅವರಿಗೆ ಶಿವಮೊಗ್ಗದಿಂದ ತೆಗೆದುಕೊಂಡು ಹೋಗಿ ಮಾರಾಟ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ಅವರು ಮಾರುಕಟ್ಟೆಯಲ್ಲಿ ಕೊಂಡುಕೊಂಡು ಹೋಗಿ ಮಾರಾಟ ಮಾಡುತ್ತಿದ್ದಾರೆಯೇ ಹೊರತು ನಾವು ಲೆವಿ ಭತ್ತವನ್ನು ಅವರಿಗೆ ಕೊಡುತ್ತಿಲ್ಲ. ಇದರ ಜೊತೆಗೆ ಆ ಜಿಲ್ಲೆಗೆ ನಾವು ಪ್ರತಿ ತಿಂಗಳು 2 ಸಾವಿರ ಕ್ವಿಂಟಾಲಿನಷ್ಟು ಲೆವಿ ಅಕ್ಕಿಯನ್ನು ಒದಗಿಸುತ್ತಿದ್ದೇವೆ. ಮಾನ್ಯ ಸದಸ್ಯರು ಅಲ್ಲಿಯ ಜಿಲ್ಲಾಧಿಕಾರಿಯವರಿಂದ ಈ ವಿಷಯ ತಿಳಿಯಬಹುದು.

ಈಗ ಮಾನ್ಯ ಸದಸ್ಯರ ವಾದ ವಿವಾದ ಏನಿದೆ ಎಂದರೆ, ರೈತರಿಗೆ ಜಾಸ್ತಿ ಬೆಲೆ ಕೊಡಬೇಕು, ಮಾರಾಟ ಮಾಡುವಾಗ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಬೇಕೆಂದು ಇದು ನನಗೆ ಅರ್ಥವಾಗುವುದಿಲ್ಲ. ಜಾಸ್ತಿ ಹಣ ರೈತರಿಗೆ ಕೊಟ್ಟು ಕೊಂಡುಕೊಂಡರೆ ಜಾಸ್ತಿ ರೇಟಿಗೆ ಮಾರಾಟ ಮಾಡಬೇಕಾಗುತ್ತದೆ ?

ಶ್ರೀ ಕೋಣಂದೂರು ಲಿಂಗಪ್ಪ :—ಮಾರ್ಕೆಟ್ ರೇಟಿನಲ್ಲಿ ಕೊಂಡು ಮಾರ್ಕೆಟ್ ರೇಟಿನಲ್ಲಿಯೇ ಮಾರಾಟ ಮಾಡಿ ಎಂದು ನಾವು ಹೇಳುತ್ತಿರುವುದು. ಇದರಲ್ಲಿ ಮಾರ್ವಾಡಿ ಸಮಾಜವಾದವನ್ನು ಏತಕ್ಕೆ ತರುತ್ತೀರಾ ?

ಶ್ರೀಮತಿ ಇ. ಇ. ವಾಜ್ :—ಯಾವ ವರ್ತಕರೇ ಆಗಲೀ ಕಡಿಮೆ ಬೆಲೆಗೆ ಮಾರಿದ್ದು ನಮಗೆ ಕಂಡುಬಂದಿಲ್ಲ. ಸಾಧಾರಣವಾಗಿ ರೈತರಿಗೆ ಒಂದು ಕ್ವಿಂಟಾಲ್ ಅಕ್ಕಿ ಬೆಳೆಯಲು ಎಷ್ಟು ಖರ್ಚು ಬೀಳಬಹುದು ಎಂಬುದನ್ನು ಪರಿಶೀಲನೆ ಮಾಡಿದ್ದೇವೆ. ದಪ್ಪಕ್ಕಿಯಾದರೆ ಒಂದು ಕ್ವಿಂಟಾಲಿಗೆ 55 ರೂಪಾಯಿ, ಫೈನ್ ಅಕ್ಕಿಯಾದರೆ ಒಂದು ಕ್ವಿಂಟಾಲಿಗೆ 68 ರೂಪಾಯಿ ಬೀಳಬಹುದೆಂದು ಅಂದಾಜು ಮಾಡಲಾಗಿದೆ. ಅದಕ್ಕೆ ಹತ್ತು ಪರ್ಸೆಂಟ್ ರಿಸ್ಕ್ ಇಟ್ಟುಕೊಂಡು ಸಗಟು ವ್ಯಾಪಾರವನ್ನು ತೆಗೆದುಕೊಳ್ಳುವಾಗ ದಪ್ಪಕ್ಕಿಗೆ 60 ರೂಪಾಯಿ ಪ್ರಕಾರ ಉತ್ತಮವಾದ ಅಕ್ಕಿಗೆ

75 ರೂಪಾಯಿ ಪ್ರಕಾರ ರೈತರಿಗೆ ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಈ ರೇಟ್‌ಗಳು ಮುಂದಿನ ಬೆಳೆಯಿಂದ ಜಾರಿಗೆ ಬರುತ್ತವೆ.

I would like to reply to the point raised by Sri Sayanak. He complained that merchants are responsible for black marketing in Belgaum District and they are selling the foodgrains at exorbitent rates and no action has been taken when it was brought to the notice of the Government. I want to tell him that if there are any instances where action has not been taken, he may bring them to the notice of the Government, and the Government do not hesitate to take action.

He further said that no arrangement has been made for the supply of foodgrains to Belgaum. I want to inform him that 2,000 tonnes have been allotted to Belgaum and on 24th April 1973, 1356 tonnes have been sent and the rest will be released as early as possible. If there is necessity for further supply over and above the target fixed, action will be taken to supply subject to availability of stock.

Sri B. B. SAYANAK (Belgaum).—I want to know whether the Government is aware that in the rationing shops only one-Kilogram is being supplied per head per month.

Smt. E. E. VAZ.—There is no informal rationing in Belgaum. Whatever the Government is having in stock, that will be distributed to all the Districts including Belgaum.

There is another allegation made against the Government and that is about the shortages of Kerosene Oil. As I have already stated earlier, as against 24,000 Metric Tonnes of K. Oil required by the State for three months, only 13,000 tonnes have been given. Efforts are being made to get more oil from ESSO, Burmah Shell, IOC Companies, and the quota will be increased after the supply position is improved.

ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ನಾನಾ ಕಾರಣಗಳಿಂದ ಕೊರತೆಯುಂಟಾಗಿದೆ. ಮೊದಲನೆಯದಾಗಿ ವಿದ್ಯುಚ್ಛಕ್ತಿ ಖೋತಾ ಆದ್ದರಿಂದ ವಿದ್ಯುಚ್ಛಕ್ತಿ ಉಪಯೋಗ ಮಾಡುತ್ತಿದ್ದವರು ಸೀಮೆಣ್ಣೆ ಉಪಯೋಗ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಎರಡನೆಯದಾಗಿ ಸೀಮೆಣ್ಣೆ ಅಭಾವ ಬಂದಿದೆ ಎಂಬ ಕಾರಣದಿಂದಾಗಿ ಜನರಲ್ಲಿ ಅನ್ನೆಸಸರಿಯಾಗಿ ದಾಸ್ತಾನು ಮಾಡುವ ಪದ್ಧತಿ ಬಂದಿದೆ. ಮೂರನೆಯದಾಗಿ ಕೊಚ್ಚಿನ್ ಮತ್ತು ಮದ್ರಾಸ್ ರಿಫೈನರೀಸನ್ನು ವರ್ಷದ ಕೊನೆಯಲ್ಲಿ ಕ್ಲೀನ್ ಮಾಡಲು ಒಂದು ತಿಂಗಳು ಮುಚ್ಚಿದ್ದರಿಂದ ನಮಗೆ ಸಪ್ಲೈ ಆಗುವುದು

ಕಡಿಮೆಯಾಯಿತು. ಇದರ ಜೊತೆಗೆ ಮದ್ರಾಸ್ ರಾಜ್ಯದಲ್ಲಿ 75 ಪರ್ಸೆಂಟ್‌ವರೆಗೆ ವಿದ್ಯುಚ್ಛಕ್ತಿ ಖೋತಾ ಆಗಿದ್ದರಿಂದ ಕ್ರೂಡ್ ಆಯಿಲ್ ರಿಫೈನರೀಸ್ ಅವರು ನಮಗೆ ಕಳಿಸುತ್ತಿದ್ದ ಖೋಟಾ ವನ್ನು ಕಡಿಮೆ ಮಾಡಿದರು. ಈ ಬಗ್ಗೆ ನಾವು ಮಾದ್ರಾಸ್ ಸರ್ಕಾರದೊಡನೆ ಮಾತನಾಡಿದ ಮೇಲೆ ಅವರು ಜಾಸ್ತಿ ಕಳಿಸುವುದಕ್ಕೆ ಒಪ್ಪಿದ್ದಾರೆ. ಈ ಮೊದಲು ಬೆಳಗಾಂಗೆ ಗೋವಾದಿಂದ ಸಪ್ಲೈ ಆಗುತ್ತಿತ್ತು. ಆದರೆ ಅಲ್ಲಿಗೂ ಸಹ ಟ್ಯಾಂಕ್‌ಗಳು ಬರುವುದಕ್ಕೆ ತಡವಾಯಿತು. ಸಾಧಾರಣವಾಗಿ ಎರಡು ಲಕ್ಷ ಲೀಟರ್‌ಗಳಷ್ಟು ಸರಬರಾಜಾಗುತ್ತಿತ್ತು. ಈಗ ಒಂದು ಲಕ್ಷ ಲೀಟರ್ ಕೂಡ ಸರಬರಾಜಾಗುತ್ತಿಲ್ಲ. ಇದು ಸಹ ನಮ್ಮ ಕೊರತೆಗೆ ಕಾರಣವಾಗಿದೆಯೆಂದು ತಿಳಿಸುತ್ತಿದ್ದೇನೆ. ಈ ವಿಚಾರದಲ್ಲಿ ನಾನು ಈ ತಿಂಗಳ 19 ನೇ ತಾರೀಖು ಕೇಂದ್ರ ಸರ್ಕಾರದವರ ಹತ್ತಿರ ಖುದ್ದು ಭೇಟಿ ಮಾಡಿ ಕೇಳಿಕೊಂಡಿದ್ದೇನೆ. ಮತ್ತು ನೆನ್ನೆ ಕೂಡ ಒಂದು ಕಾಗದವನ್ನು ಬರೆದಿದ್ದೇನೆ. ಆದಷ್ಟು ಜಾಗ್ರತೆ ನಮಗೆ ಸಪ್ಲೈ ಮಾಡುತ್ತಿರುವುದನ್ನು ಹೆಚ್ಚಿಸಬೇಕೆಂದು ಬೇಡಿಕೊಂಡಿದ್ದೇನೆ. ಇದೇ ತಿಂಗಳ 26 ನೇ ತಾರೀಖು ದೆಹಲಿಯಲ್ಲಿ ಸಪ್ಲೈಸ್ ಅಂಡ್ ಡಿಮ್ಯಾಂಡ್ಸ್ ಕಮಿಟಿಯ ಮೀಟಿಂಗ್ ನಡೆಯುತ್ತದೆ. ಯಾವ ಯಾವ ರಾಜ್ಯಗಳಿಗೆ ಎಷ್ಟೆಷ್ಟು ಕಡಿಮೆ ಬೀಳುತ್ತಿದೆ. ಅದನ್ನು ಯಾವ ರೀತಿ ಸರಿಪಡಿಸಬಹುದೆಂಬ ಬಗ್ಗೆ ಆ ಮೀಟಿಂಗ್ ನಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ಅಲ್ಲಿಗೆ ನಮ್ಮ ಇಲಾಖೆಯ ಅಧಿಕಾರಿಗಳು ಹೋಗುತ್ತಾರೆ

ಶ್ರೀ ಕೆ. ಎಚ್. ಹನುಮೇಗೌಡ:—ಈಗ ಗೊಬ್ಬರ. ವಿದ್ಯುಚ್ಛಕ್ತಿ, ಪಂಪ್‌ಸೆಟ್ಟುಗಳು ಮತ್ತಿತರ ಎಲ್ಲ ವಸ್ತುಗಳ ಬೆಲೆಯೂ ಜಾಸ್ತಿಯಾಗಿದೆ. ಈ ಬಗ್ಗೆ ರೈತರಿಗೆ ಸಬ್ಸಿಡಿಯಾಗಲೀ ರಿಯಾಯಿತಿಯಾಗಲಿ ಕೊಡದೆ, ಕಡಿಮೆ ದರದಲ್ಲಿ ಲೆವಿಯನ್ನು ವಸೂಲಿ ಮಾಡುತ್ತಿರುವು ದ ಯಾವ ನ್ಯಾಯ ?

ಅವರಿಗೆ ಕೊನೆಯ ಪಕ್ಷ ಸಬ್ಸಿಡಿಯನ್ನು ಏತಕ್ಕೆ ಕೊಡಬಾರದು ? ರೈತರು ಕೊಂಡು ಕೊಳ್ಳತಕ್ಕ ಪದಾರ್ಥಗಳ ಬೆಲೆ ವಿಪರೀತ ರೇಟಾಗಿದೆ. ಹೀಗಿರುವಾಗ ನೀವು ಯಾವ ಧರ್ಮದ ಮೇಲೆ ರೈತರಿಂದ ಕಡಿಮೆ ಬೆಲೆಯಲ್ಲಿ ಲೆವಿಯನ್ನು ವಸೂಲು ಮಾಡುತ್ತೀರಾ ?

ಶ್ರೀಮತಿ ಇ. ಇ. ವಾಜ್ :—ಮುಂದಕ್ಕೆ ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಕೆ. ಎಚ್. ಹನುಮೇಗೌಡ :—ಈಗ ರೈತ ಕೊಂಡುಕೊಳ್ಳತಕ್ಕ ಪ್ರತಿಯೊಂದು ವಸ್ತುವಿನ ಬೆಲೆಯೂ ಜಾಸ್ತಿಯಾಗಿದೆ. ಆದರೆ ಅವನು ಬೆಳೆದದ್ದನ್ನು ಕಡಿಮೆ ಬೆಲೆಯಲ್ಲಿ ದರೋಡೆ ಮಾಡಿಕೊಂಡು ತರುತ್ತಿದ್ದೀರಿ. ಆ ರೀತಿ ತರುವುದಕ್ಕೆ ನಿಮಗೆ ಏನು ಹಕ್ಕು ಇದೆ ? ಅವನಿಗೆ ನೀವು ಸಬ್ಸಿಡಿ ಕೊಡುವುದಕ್ಕೆ ಧೈರ್ಯ ಇಲ್ಲ.

ಶ್ರೀಮತಿ ಇ. ಇ. ವಾಜ್ :—ಮಾನ್ಯ ಸದಸ್ಯರು ಸ್ವಲ್ಪ ಉದ್ರಿಕ್ತರಾಗಿ ಮಾತನಾಡುವ ಹಾಗೆ ಕಾಣುತ್ತದೆ. ಸರ್ಕಾರದವರು ಅಕ್ಕಿಯ ಸಗಟು ವ್ಯಾಪಾರವನ್ನು ತೆಗೆದು ಕೊಳ್ಳುವಾಗ ರೈತರ ವಿಷಯದಲ್ಲಿ ಮಾನ್ಯಸದಸ್ಯರಿಗೆ ಎಷ್ಟು ಕನಿಕರ ಇದೆಯೋ ಅದಕ್ಕಿಂತ ಜಾಸ್ತಿ ಕನಿಕರ ಸರ್ಕಾರಕ್ಕೆ ಇದೆ. ಸರ್ಕಾರದವರು ಆಹಾರಧಾನ್ಯಗಳ ಸಗಟು ವ್ಯಾಪಾರವನ್ನು ತೆಗೆದು ಕೊಂಡಾಗ ಖಂಡಿತ ವಾಗಿಯೂ ಲೆವಿಧಾನ್ಯದ ಬೆಲೆಯನ್ನು ಹೆಚ್ಚು ಮಾಡುತ್ತೇವೆನ್ನುವ ಭರವಸೆಯನ್ನು ಕೊಡುತ್ತೇವೆ. ಸೀಮೆ ಎಣ್ಣೆಯನ್ನು ವಿತರಣೆ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳು ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಒಂದು ವಾರದಲ್ಲಿ ಒಂದು ಹಳ್ಳಿಗೆ ಹೋಗಿ ಸೀಮೆ ಎಣ್ಣೆಯನ್ನು ವಿತರಣೆ ಮಾಡುತ್ತಾರೆ.

ಶ್ರೀ ಕೆ. ಎಚ್. ಹನುಮ್ಮೇಗೌಡ :—ಡೆಪ್ಯುಟಿ ಕಮೀಷನರಿಗೆ ಒಟ್ಟು ಕೋಟಾ 5,000 ಲೀಟರ್ ಸೀಮೆ ಎಣ್ಣೆ ಬರುತ್ತದೆ. ಅವರು ಅದನ್ನು ಇಂತಿಂಥವರು ಮಾರಿಬಿಡಿ ಎಂದು ಹೇಳುತ್ತಾರೆ. ಅವರು 300–400 ಲೀಟರನ್ನು ಸರಿಯಾದ ಬೆಲೆಗೆ ಮಾರಿ ಉಳಿದದ್ದನ್ನು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರುತ್ತಾರೆ. ಈ ರೀತಿ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಸೀಮೆ ಎಣ್ಣೆಯನ್ನು ಮಾರಾಟ ಮಾಡುವುದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದು ಕೊಂಡಿದ್ದೀರಿ ?

ಶ್ರೀಮತಿ ಇ. ಇ. ವಾಜ್ :—ಸರ್ವೇ ಸಾಮಾನ್ಯವಾಗಿ ತಾಲ್ಲೂಕು ಮಟ್ಟದಲ್ಲಿ ಮೇಲ್ಪಟ್ಟ ಸಂಬಂಧಪಟ್ಟ ಅಧಿಕಾರಿಗಳು ಯಾರು ಇದ್ದಾರೆಯೋ ಅವರು ಕ್ರಮ ತೆಗೆದು ಕೊಂಡಿದ್ದಾರೆ. ಸೀಮೆ ಎಣ್ಣೆ ಡಿಸ್ಟ್ರಿಬ್ಯೂಷನ್ ಅನ್ನು ಡೀಸೆಂಟ್ರಲೈಜ್ ಮಾಡಬೇಕೆಂದಿದ್ದೇವೆ. ಪ್ರತಿಯೊಂದು ತಾಲ್ಲೂಕಿಗೂ ಒಬ್ಬೊಬ್ಬ ಡೀಲರ್ಸ್ ಮಾಡಬೇಕೆಂದಿದ್ದೇವೆ. ಆಗ ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರಾಟವಾಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ಸೀಮೆಎಣ್ಣೆ ಏಜೆಂಟ್‌ಗಳನ್ನೂ, ಡೀಲರ್ಸ್‌ಗಳನ್ನು ಕರೆದು ಅವರ ಹತ್ತಿರ ಈ ಬಗ್ಗೆ ಮಾತನಾಡಿ ಯಾವ ಕ್ರಮ ತೆಗೆದು ಕೊಳ್ಳಬೇಕು, ಮತ್ತು ಸರ್ಕಾರದ ಜೊತೆಯಲ್ಲಿ ಅವರು ಯಾವರೀತಿಯಲ್ಲಿ ಸಹಕರಿಬೇಕು ಎನ್ನುವ ಬಗ್ಗೆ ಮಾತನಾಡಿದ್ದಾರೆ. ಅದರಂತೆ ಅವರು ನಡೆದು ಕೊಳ್ಳಲು ಭರವಸೆ ಕೊಟ್ಟಿದ್ದಾರೆ ಎನ್ನುವುದನ್ನು ನಾನು ಮಾನ್ಯ ಸದಸ್ಯರಿಗೆ ತಿಳಿಸಲು ಇಷ್ಟ ಪಡುತ್ತೇನೆ.

ಶ್ರೀ ಡಿ. ಹಲಗೇಗೌಡ :—ಎಲ್ಲಾ ಟೌನ್. ತಾಲ್ಲೂಕುಗಳು ಮತ್ತು ಗ್ರಾಮಾಂತರ ಪ್ರದೇಶ ಗಳಲ್ಲಿಯೂ ಈ ಸೀಮೆ ಎಣ್ಣೆಯ ಹಂಚಿಕೆ ವ್ಯವಸ್ಥೆಯನ್ನು ಸರಿಪಡಿಸುತ್ತೀರಾ ?

ಶ್ರೀಮತಿ ಇ. ಇ. ವಾಜ್ :—ಹಳ್ಳಿಗಳಲ್ಲಿ ಸರಿಯಾಗಿ ವಿತರಣೆಯಾಗದಿದ್ದರೆ ಎಷ್ಟು ಸ್ಟಾಕ್ ಇದೆಯೋ ಅದನ್ನು ಸ್ವಲ್ಪಮಟ್ಟಿಗೆ ಪ್ರತಿಯೊಂದು ಹಳ್ಳಿಗೂ ಹೋಗುವಂತೆ ನಾವು ಏರ್ಪಾಟು ಮಾಡುತ್ತೇವೆ. ದಕ್ಷಿಣ ಕನ್ನಡಜಿಲ್ಲೆಯಲ್ಲಿಯೂ ಕೂಡ ಈ ಸೀಮೆ ಎಣ್ಣೆಯ ಅಭಾವ ಉಂಟಾಗಿತ್ತು. ಈಗ ಅಲ್ಲಿ ಯಾವರೀತಿ ಅದನ್ನು ವಿತರಣೆ ಮಾಡಬೇಕು ಎನ್ನುವ ಬಗ್ಗೆ ಈಗ ಒಂದು ಏರ್ಪಾಡನ್ನು ಮಾಡಿದ್ದೇವೆ. ಆದ್ದರಿಂದ ಈಗ ದಕ್ಷಿಣ ಕನ್ನಡಜಿಲ್ಲೆಯಲ್ಲಿ ಸೀಮೆಎಣ್ಣೆಯ ಕೊರತೆ ಕಡಿಮೆಯಾಗಿದೆ ಎಂಬುದನ್ನು ಶ್ರೀಮಾನ್ ಕಕ್ಕಿಲಾಯ ಅವರು ತಿಳಿಯಬೇಕಾಗಿದೆ.

ಶ್ರೀ ವಿ. ಎನ್. ಪಾಟೀಲ್ :—ಅಭಾವ ಪೀಡಿತ ಪ್ರದೇಶಗಳಲ್ಲಿ ವರ್ಕಿಂಗ್ ಸೆಂಟರುಗಳು ಎಲ್ಲೆಲ್ಲಿ ಇವೆಯೋ ಅಲ್ಲೆಲ್ಲಾ ಗೌರ್ನಮೆಂಟ್ ಫೇರ್‌ಪ್ರೈಜ್ ಡಿಪೋಗಳನ್ನು ತೆರೆಯುತ್ತೀರಾ ?

ಶ್ರೀಮತಿ ಇ. ಇ. ವಾಜ್ :—ಎಲ್ಲೆಲ್ಲಿ ಕೆಲಸ ನಡೆಯುತ್ತಿದೆ ಅಲ್ಲೆಲ್ಲಾ ಫೇರ್‌ಪ್ರೈಜ್ ಡಿಪೋಗಳು ಇವೆ. ಎಲ್ಲಿ ಫೇರ್‌ಪ್ರೈಜ್ ಡಿಪೋಗಳು ಇಲ್ಲ ಅಂಥಾದ್ದನ್ನು ಸರ್ಕಾರದ ಗಮನಕ್ಕೆ ತಂದರೆ ಅಲ್ಲಿ ಫೇರ್ ಪ್ರೈಜ್ ಡಿಪೋವನ್ನು ತೆರೆಯುತ್ತೇವೆ.

ಸಕ್ಕರೆ ಸರಿಯಾಗಿ ಎಲ್ಲೆಲ್ಲಿಯೂ ಸಿಗುತ್ತಾ ಇಲ್ಲ. ತಮಗೇ ಗೊತ್ತಿರುವ ಹಾಗೆ ಶೇಕಡ 70 ರಷ್ಟು ಸಕ್ಕರೆಯನ್ನು ಸರ್ಕಾರದವರು ತೆಗೆದುಕೊಂಡು ಶೇಕಡ 30 ರಷ್ಟು ಸಕ್ಕರೆಯನ್ನು ಓಪನ್ ಮಾರ್ಕೆಟ್ಟಿಗೆ, ಷುಗರ್ ಮಿಲ್ಸ್‌ಗೆ ಬಿಡುತ್ತಿದ್ದಾರೆ. ಓಪನ್ ಮಾರ್ಕೆಟ್ಟಿನಲ್ಲಿ ಪ್ರತಿಯೊಬ್ಬರಿಗೂ ನ್ಯಾಯವಾದ ಅಂಗಡಿಗಳಲ್ಲಿ 2–15 ಪೈಸೆಯ ಪ್ರಕಾರ ಕೊಡುತ್ತಾ ಇಲ್ಲ. ಓಪನ್ ಮಾರ್ಕೆಟ್ಟಿನಲ್ಲಿ ಯಾರಿಗೂ ಸಿಗುವುದಿಲ್ಲ. ಯಾರು ಹೆಚ್ಚು ಹಣ ಖರ್ಚು ಮಾಡುವುದಕ್ಕೆ ತಯಾರಿದ್ದಾರೋ ಅವರು ಹೆಚ್ಚಿಗೆ ತೆಗೆದುಕೊಳ್ಳುತ್ತಾರೆ. ಒಂದು ಫ್ಯಾಮಿಲಿಗೆ ಇನ್‌ಫಾರ್ಮಲ್ ರೇಷನಿಂಗ್ ಪ್ರಕಾರ ರೂರಲ್ ಪಾರ್ಟ್ಸ್‌ನಲ್ಲಿ 350 ಗ್ರಾಂ ನಿಂದ 750 ಗ್ರಾಂ ವರೆಗೆ ಕೊಡಬೇಕಾಗಿದೆ. ಎಲ್ಲಿ ಬೆಲ್ಲವನ್ನು ಜಾಸ್ತಿಯಾಗಿ ಉಪಯೋಗಿಸುತ್ತಾರೋ ಅಲ್ಲಿ

ಸಕ್ಕರೆ ಅಷ್ಟೊಂದು ಅಗತ್ಯವಿಲ್ಲ. ಅಂತಹ ಕಡೆಗಳಲ್ಲಿ ಕಡಿಮೆಯಾಗಿ ಕೊಡಬೇಕು. ಮ್ಯಾಗ್ಜಿಮಂ 10 ಕೆ.ಜಿ. ಇರಬೇಕು. ಇನ್‌ಫಾರ್ಮಲ್ ರೇಷನಿಂಗ್‌ನಲ್ಲಿ 8 ಕೆ.ಜಿ. ಸಕ್ಕರೆಗಿಂತ ಹೆಚ್ಚಿಗೆ ಕೊಡುತ್ತಿದ್ದಾರೆ. ನಮಗೆ 10 ಸಾವಿರ ಟನ್‌ಗಳಷ್ಟು ಸಕ್ಕರೆಯನ್ನು ಈ ತಿಂಗಳಿನಲ್ಲಿ ಕೊಟ್ಟಿದ್ದಾರೆ. ಸರಾಸರಿ 9 ಸಾವಿರಗಳಿಂದ 10 ಸಾವಿರ ಟನ್ನುಗಳಷ್ಟು ಸಕ್ಕರೆಯನ್ನು ಮೂರು ಕೋಟಿ ಜನಗಳಿಗೆ ಹಂಚಬೇಕಾಗುತ್ತದೆ. ಈಗ ಪ್ರತಿಯೊಬ್ಬರಿಗೂ ನ್ಯಾಯಬೆಲೆಗೆ ಸಕ್ಕರೆ ಸಿಗುವ ಹಾಗೆ ಏರ್ಪಾಡು ಮಾಡಿದ್ದೇವೆ. ಅದರಲ್ಲಿಯೂ ಕೂಡ ಮಾನ್ಯ ಶ್ರೀ ಶಾಮಣ್ಣನವರು ಮತ್ತು ಅನೇಕ ಸದಸ್ಯರು ಬೋಗಸ್ ಕಾರ್ಡ್ಸ್ ಇವೆಯೆಂದು ಹೇಳಿದರು. 10 ಸಾವಿರ ಜನಸಂಖ್ಯೆ ಇದ್ದರೆ 50 ಸಾವಿರ ಬೋಗಸ್ ಕಾರ್ಡುಗಳಿವೆಯೆಂದು ಹೇಳಿದರು. ತಮಗೆ ಗೊತ್ತಿರುವ ಹಾಗೆ ಇದನ್ನು ಕೂಡಲೇ ತಪ್ಪಿಸಬೇಕು. ಜನವರಿ 73ರ ಮೇಲ್ಪಟ್ಟು ಆದಷ್ಟು ಜಾಗ್ರತೆಯಾಗಿ ಹೊಸ ಕಾರ್ಡುಗಳನ್ನು ಕೊಡುವ ಹಾಗೆ ಏರ್ಪಾಡುಮಾಡಿದ್ದೇವೆ. ಅವರು ಇಲ್ಲಿನ ಸ್ಥಳೀಯ ಜನರೆಂಬುದು ಗೊತ್ತಾಗುವುದಿಲ್ಲ. ಎಲ್ಲಿ ಕೆಲಸದಲ್ಲಿದ್ದರೆ, ಅಲ್ಲಿಂದ ಒಂದು ಲೆಟರನ್ನು ತರಬೇಕು. ಇಲ್ಲದೇ ಹೋದರೆ ರೆಂಟ್ ರಸೀಟ್ ತರಬೇಕೆಂದು ಹೇಳಿದ್ದೇವೆ. ಅದಿಲ್ಲದೆ ಹಾಗೆಯೇ ಕೇಳಬಾರದೆಂದು ಹೇಳುತ್ತಿದ್ದೇವೆ. ಆದ್ದರಿಂದ ನಾನು ಮಾನ್ಯ ಸದಸ್ಯರಿಗೆ ಕಳಕಳಿಯಿಂದ ಕೇಳುವುದೇನೆಂದರೆ ಈ ಬೋಗಸ್ ಕಾರ್ಡುಗಳನ್ನು ತಪ್ಪಿಸಬೇಕಾದರೆ ಎಲ್ಲಾ ನಿರ್ಬಂಧಗಳನ್ನು ಖಂಡಿತವಾಗಿ ಬಿಡಬೇಕಾಗುತ್ತದೆ. ಎಲ್ಲರೂ ಸಹಕರಿಸಬೇಕಾಗುತ್ತದೆ. ಇತ್ತ ಜನರಿಗೆ ನ್ಯಾಯರೀತಿಯಲ್ಲಿ ಸ್ವಲ್ಪಮಟ್ಟಿಗೆ ನ್ಯಾಯ ಸಿಗುವ ಹಾಗೆ ಬೆಂಬಲ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಶಿವಮೊಗ್ಗಾಕ್ಕೆ ರಾಯಚೂರಿನಿಂದ ಸಕ್ಕರೆ ಕೊಟ್ಟಿದ್ದಾರೆಂದು ಪ್ರಸ್ತಾಪಿಸಿದ್ದಾರೆ. ನಮಗೆ ಸಕ್ಕರೆ ಇಂತಿಂಥ ಮಿಲ್‌ಗಳಿಂದ ಸಾವಿರಾರು ಟನ್‌ಗಳಷ್ಟು ಸಕ್ಕರೆಯನ್ನು ಉತ್ಪಾದನೆ ಮಾಡಬೇಕೆಂದು ಕೇಂದ್ರ ಸರ್ಕಾರದವರು ಅಲಾಟ್ ಮಾಡುತ್ತಾರೆ. ಯಾರಿಗೆ ಎಷ್ಟು ಸಹಾಯವಾಗುತ್ತದೆಯೋ ಅದನ್ನು ಅವರಿಗೆ ಕೊಡುತ್ತಾರೆ. ಅಂದರೆ ಈಗ ತಕ್ಷಣಕ್ಕೆ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ಅವರು ಇದಕ್ಕೆ ಏಜೆಂಟರಾಗಿ ಸಕ್ಕರೆಯನ್ನು ಒದಗಿಸುತ್ತಾರೆ. ಅವರ ಮೂಲಕ ಸಕ್ಕರೆ ದೊರೆಯುತ್ತಾ ಹೋದರೆ, ಅದರಿಂದ ಜನರಿಗೆ ಯಾರಿಗೂ ತೊಂದರೆಯಾಗುವುದಿಲ್ಲವೆಂದು ನಾನು ತಿಳಿಯ ಬಯಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ :—ಗುಲ್ಬರ್ಗಾದವರಿಗೆ ಶಿವಮೊಗ್ಗಾದವರಿಗೆ ಗುಲ್ಬರ್ಗಾದಿಂದ ಸಕ್ಕರೆ ಕೊಡಬೇಕೆಂದು ಹೇಳಿದ್ದು ನಿಜವೇ ?

ಶ್ರೀಮತಿ ಇ. ಇ. ವಾಜ್ :—ಶಿವಮೊಗ್ಗಾದವರಿಗೆ ಎಲ್ಲಾ ಕಡೆಯಿಂದಲೂ ಏರ್ಪಾಡು ಮಾಡಿದ್ದೇವೆ. ಚಿಕ್ಕಮಗಳೂರಿನವರು ರಾಯಚೂರಿಗೆ, ದಕ್ಷಿಣ ಕನ್ನಡದವರು ಬಿಜಾಪುರಕ್ಕೆ ಸಕ್ಕರೆ ಪಡೆಯಲು ಹೋಗಬೇಕಾಗುತ್ತದೆ. ಶಿವಮೊಗ್ಗಾದಲ್ಲಿ ಎಷ್ಟು ಅಲಾಟ್‌ಮೆಂಟ್ ಆಗಿದೆಯೋ ಅದನ್ನು ಅವರಿಗೆ ಕೊಟ್ಟು ದೂರವಿರುವ ದಕ್ಷಿಣ ಕನ್ನಡ ಜಿಲ್ಲೆಯವರಿಗೆ, ಚಿಕ್ಕಮಗಳೂರು ಜನರಿಗೆ ಇನ್ನೂ ಹೆಚ್ಚಿಗೆ ಕೊಡುವುದರಿಂದ ಅವರು ತೀರಾ ಸರಾಸರಿ ಒಂದು ಬೆಳೆ ಬೆಳೆಯಲಿ ಎಂದು ಹೇಳುತ್ತೇನೆ. ಮಾನ್ಯ ಶ್ರೀ ಬೈರೇಗೌಡರು 300 ಕ್ವಿಂಟಾಲ್ ಗೋಧಿ ಹಾಸನ ಜಿಲ್ಲೆಯಲ್ಲಿ ಕೊಳೆಯುತ್ತಾ ಇದೆಯೆಂದು ಹೇಳಿದರು. ನನಗೆ ತಿಳಿದುಬಂದ ಪ್ರಕಾರ ಅದು ಫುಡ್ ಕಾರ್ಪೊರೇಷನ್ನಿಂದ ಅಲ್ಲ, ಅದು ಸರ್ಕಾರದ್ದು, ಎಲ್ಲಾ ಕೊಳೆತುಹೋಗಿದೆ.

ಶ್ರೀ ಸಿ. ಬೈರೇಗೌಡ :—ಈಗ ವರ್ಲ್ಡ್ ಫುಡ್ ಪ್ರೋಗ್ರಾಂ ಇದೆ. ಅದರ ಪ್ರಕಾರ 3 ತಾಲ್ಲೂಕುಗಳಲ್ಲಿ ಕೆಲಸ ಇನ್ನೂ ಆಗಬೇಕಾಗಿದೆ. ಗೌರಿಬಿದನೂರಿನಲ್ಲಿ 112 ಕ್ವಿಂಟಾಲ್

ಗೋಧಿ ಕೆಟ್ಟಿದೆ. ಚಿಕ್ಕಬಳ್ಳಾಪುರದಲ್ಲಿಯೂ ಅದೇ ರೀತಿಯಾಗಿ 106 ಕ್ವಿಂಟಾಲ್ ಕೆಟ್ಟಿದೆ. ಆದ್ದರಿಂದ ಈ ವಿಚಾರವನ್ನು ಸರ್ಕಾರದ ಒಂದು ಅಂಗವಾಗಿರುವ ಸಿವಿಲ್ ಸಪ್ಲೈಸ್ ಡಿಪಾರ್ಟ್‌ಮೆಂಟಿನವರು ಮತ್ತು ಇತರ ಎಲ್ಲಾ ಇಲಾಖೆಯವರೂ ಸಹ ಇದನ್ನು ಗಮನಿಸಬೇಕು.

ಶ್ರೀಮತಿ ಇ. ಇ. ವಾಜ್ :—ಮಾನ್ಯ ಸದಸ್ಯರು ಈಗ ಈ ರೀತಿಯಾಗಿ ತಿಳಿಸುತ್ತಾ ಇರುವುದರಿಂದ ಅದರ ಬಗ್ಗೆ ಪೂರ್ಣ ವಿವರಗಳನ್ನು ತರಿಸಿಕೊಂಡು ಯಾವ್ಯಾವ ರೀತಿಯಲ್ಲಿ ಗೋಧಿ ಎಲ್ಲೆಲ್ಲಿ ಕೊಳೆಯುತ್ತಿದೆಯೆಂಬುದನ್ನು ತಿಳಿದು ಉಪಯೋಗ ಮಾಡುತ್ತೇವೆ.

ಇನ್ನೊಂದು ವಿಚಾರವನ್ನು ಮಾನ್ಯ ಶ್ರೀ ಕೋಣನೂರು ಲಿಂಗಪ್ಪನವರು ಹೇಳಿದರು. ಹಾಸನ ಗಡಿಯ ಹತ್ತಿರ ಒಂದು ಕೇಸನ್ನು ಹಿಡಿದರು, ಆದರೂ ಅದರ ಬಗ್ಗೆ ಯಾವ ಒಂದು ಕ್ರಮವನ್ನೂ ತೆಗೆದುಕೊಳ್ಳಲಿಲ್ಲವೆಂದು ಹೇಳಿದರು. ಅವರಿಗೆ ತಿಳಿಸುವುದೇನೆಂದರೆ, ಈ ಕೇಸಿನಲ್ಲಿ ಪೂರ್ತ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. The report is like this: "The local police have arrested the real culprits. The important accused persons have been arrested and they have been enlarged on bail by the Court. The van has been seized and so also the bags of rice. The Superintendent of Police, Shimoga, has kept some persons under suspension and the enquiry is being conducted."

Sri H. D. DEVE GOWDA: Please have a photo of Indira Gandhi, Prime Minister in every fair-price depot.

Smt. E. E. VAZ.—Lastly, I would like to inform the Hon. Members that the Government have decided to take over the whole-sale trade and I hope that with the co-operation of you all, it is going to be a success and will help in brining the prices to a reasonable level.

I would also appeal to you that we must start the movement of MISS A MEAL a day. If at all, we have the interest of the people of the scarcity in mind who are missing both the meals a day, it will be a nice thing to take to this programme of MISS A MEAL a day, and try out best to produce more so that we can help our brethren who are suffering in the draught areas.

I request that all the Hon. Members of the House should extend their fullest co-operation. Many of the Hon. Members have expressed the view that the whole-sale trade will be a failure. I express the hope that with the co-operation of you all the Government will succeed. I request the ful co-operation of you all and I will at the same assure that I will take stern action against persons who misbehave in this matter.

ಶ್ರೀ ವಾಟಾಳ್ ನಾಗರಾಜ್ :—ಅಕ್ಕಿ, ಗೋಧಿ ಬರುತ್ತದೆ, ಬರುತ್ತದೆಂದು ಹೇಳುತ್ತಿದ್ದೀರಿ ಜೋಳವೂ ಬರುತ್ತದೆಂದು ಹೇಳಿದ್ದೀರಿ. ಅದು ಯಾವಾಗ ಬರುತ್ತದೆ ?

ಶ್ರೀಮತಿ ಇ. ಇ. ವಾಜ್ :—ಅದು ನಿಜವಾಗಿ ಮೇ ತಿಂಗಳಲ್ಲಿ ಬಂದೇ ಬರುತ್ತದೆ. 15 ಸಾವಿರ ಟನ್ನುಗಳಷ್ಟು ಗೋಧಿ, 8 ಸಾವಿರ ಟನ್ನುಗಳಷ್ಟು ಮೈದಾ ಬರುತ್ತಾ ಇದೆ. ಇದಲ್ಲದೆ ಮಧ್ಯಪ್ರದೇಶ, ಹಾಗೂ ಉತ್ತರ ಪ್ರದೇಶಗಳಿಂದ 62 ಸಾವಿರ ಕ್ವಿಂಟಾಲ್ ಜೋವರ್ ಮತ್ತು 20 ಸಾವಿರ ಕ್ವಿಂಟಾಲ್ ಬತ್ತವನ್ನು ನಾವು ಕೊಂಡುಕೊಂಡಿದ್ದೇವೆ. ನಮ್ಮ ಅಧಿಕಾರಿಗಳು ಅಲ್ಲಿ ಹೋಗಿದ್ದಾರೆ. ಇನ್ನು ಒಂದೆರಡು ದಿವಸಗಳೊಳಗೆ ಅದು ಬರುತ್ತದೆ. ನಾನು ಅಲ್ಲಿಗೆ ಹೋಗಿ ಬುಕ್ ಮಾಡಿ ಬಂದಿದ್ದೇನೆ. ಮಾನ್ಯ ಸದಸ್ಯರು ಇದನ್ನು ನಂಬಬೇಕಾಗುತ್ತದೆ. ಇದರಲ್ಲಿ 60 ಸಾವಿರ ಟನ್‌ಗಳಷ್ಟು ಜೋಳ ಮತ್ತು ರವೆಯನ್ನು ಬಿದರೆ ಮತ್ತು ಗುಲ್ಬರ್ಗಾ ರೈತರಿಗೆ ಕೊಡುವ ಏರ್ಪಾಡನ್ನು ಮಾಡಿದ್ದೇವೆ. 20 ಸಾವಿರ ಟನ್ನುಗಳಷ್ಟು ಆಹಾರವನ್ನು ಮಂಗಳೂರಿಗೆ ಕೊಟ್ಟಿದ್ದೇವೆ. ಅಭಾವ ಇರತಕ್ಕ ಕೋಲಾರ ಮತ್ತು ತುಮಕೂರು ಪ್ರದೇಶಗಳಿಗೆ ಹೆಚ್ಚಿಗೆ ಆಹಾರಪದಾರ್ಥಗಳನ್ನು ಕಳುಹಿಸುವುದಕ್ಕೆ ಏರ್ಪಾಡುಮಾಡಿದ್ದೇವೆ. ಸೌತ್ ಕೆನರಾಕ್ಕೂ ಕೂಡ ಹೆಚ್ಚಿಗೆ ಆಹಾರಪದಾರ್ಥಗಳನ್ನು ಕಳುಹಿಸುವ ಏರ್ಪಾಡು ಮಾಡಿದೆ.

ಶ್ರೀ ಬಿ. ವಿ. ಕಕ್ಕಿಲಾಯ :—ಇಂಟರ್ ಡಿಸ್ಟ್ರಿಕ್ಟ್ ಮೂವ್‌ಮೆಂಟ್ ಹಾಗೂ ಜಿಲ್ಲೆಯಿಂದ ಜಿಲ್ಲೆಗೆ ಹೋಗುವ ಆಹಾರವನ್ನು ಪ್ರತಿಬಂಧಕ ಮಾಡಿದ್ದಾರೆ. ಇದರಿಂದ ಅನೇಕ ಜಿಲ್ಲೆಗಳಿಗೆ ಅಕ್ಕಿ ಬರುವುದು ನಿಂತುಹೋಗಿದೆ. ಇದೇ ಸಮಯದಲ್ಲಿ ಕೋ-ಆಪರೇಟಿವ್ ಸೊಸೈಟಿಯ ಮುಖಾಂತರ ಆಹಾರಪದಾರ್ಥಗಳನ್ನು ತರುವುದಕ್ಕೆ ತಾಲ್ಲೂಕು ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗಳಿಂದ ಏನೂ ಪ್ರಯೋಜನವಾಗುತ್ತಾ ಇಲ್ಲವೆಂದು ಹೇಳಿದ್ದಾರೆ. ಆ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಈಗ ರೀಫ್ಲೋ ನಿಂತುಹೋಗಿದೆ. ಅಲ್ಲೆಲ್ಲಾ ಅಕ್ಕಿ ಇಲ್ಲ. ಮಂಗಳೂರಿನಲ್ಲಿ ಒಂದು ಕೆ.ಜಿ.ಗೆ 2–25 ಅಥವಾ 2–30 ರೂಪಾಯಿ ಇದೆ. ಉಡುಪಿ ಟೌನಿನಲ್ಲಿಯೂ ಆ ರೀತಿ ದರ ಇದೆ. ಬಹಳ ಸ್ಪೋಟಿಕ್ ಪರಿಸ್ಥಿತಿ. ಆದ್ದರಿಂದ ದಕ್ಷಿಣ ಕನ್ನಡದಲ್ಲಿ ರಿಸ್ಟ್ರಿಕ್ಷನ್ ತೆಗೆಯಿರಿ. ನೀವು ಜಾಗ್ರತೆಯಾಗಿ ಕೈ ತೊಳೆದುಕೊಳ್ಳಿ. ನಿಮ್ಮಿಂದ ಆಗುವುದಿಲ್ಲವೆಂದು ಹೇಳಿದರೆ ಹೇಳಿ. ಒಂದು ರೇಷನಿಂಗ್ ಪದ್ಧತಿಯನ್ನು ಇಂಟ್ರಡ್ಯೂಸ್ ಮಾಡಿ ಬೆಲ್ಟ್ ಏರಿಯಾ ಪ್ರದೇಶಗಳಲ್ಲಿ ಕನಿಷ್ಠ ಅವರಿಗೆ ಒಂದು ತಿಂಗಳಿಗೆ 5–6 ಕಿಲೋ ಕೊಡುವ ಹಾಗೆ ಏರ್ಪಾಡು ಮಾಡಿ. ಇದರ ಬಗ್ಗೆ ಡೆಪ್ಯುಟಿ ಕಮಿಷನರಿಗೆ ನೇರವಾಗಿ ಅಧಿಕಾರ ಕೊಟ್ಟು ಅವರು ಅಕ್ಕಿಯನ್ನು ಬೇರೆ ಕಡೆಗಳಿಂದ ತೆಗೆದುಕೊಂಡು ಬಂದು ಸರ್ಪ್ಲಸ್ ಡಿಸ್ಟ್ರಿಕ್ಟ್‌ನಿಂದ ಕಡಿಮೆ ಇರತಕ್ಕ ಪ್ರದೇಶಕ್ಕೆ ಬಂದು ನೇರವಾಗಿ ಡಿಪಾರ್ಟ್‌ಮೆಂಟಿನವರೇ ಅದನ್ನು ಕೊಡುವ ಹಾಗೆ ಏರ್ಪಾಡು ಮಾಡಿ. ಆ ರೀತಿ ಮಾಡದೆ ಅಲ್ಲಿನ ಜನರನ್ನು ಉಪವಾಸದಿಂದ ಸಾಯಿಸಬೇಡಿ.

ಶ್ರೀಮತಿ ಇ. ಇ. ವಾಜ್ :—ಶಿವಮೊಗ್ಗಾದಿಂದ 35 ಸಾವಿರ ಕ್ವಿಂಟಾಲ್ ಬತ್ತ, 50 ಸಾವಿರ ಕ್ವಿಂಟಾಲ್ ಅಕ್ಕಿಯನ್ನು ಮರ್ಕರಾದಿಂದ, 18 ಸಾವಿರ ಕ್ವಿಂಟಾಲ್ ಅಕ್ಕಿಯನ್ನು ದಕ್ಷಿಣ ಕನ್ನಡದಿಂದ ತೆಗೆದುಕೊಂಡು ಬಂದು ಅಭಾವ ಇರತಕ್ಕ ಪ್ರದೇಶಗಳಿಗೆ ಕಳುಹಿಸುವ ಏರ್ಪಾಡು ಮಾಡಿದೆ. ಕೋ-ಆಪರೇಟಿವ್ ಸೊಸೈಟಿಯವರಿಗೆ ಅದನ್ನು ಲೆವಿಯಾಗಿ ಕೊಟ್ಟಿದೆ. ಅದನ್ನು ಸೌತ್ ಕೆನರಾಕ್ಕೆ ವಿತರಣೆ ಮಾಡುವ ಒಂದು ಆದೇಶವನ್ನು ಕೊಡುತ್ತೇವೆ. ತಾಲ್ಲೂಕು ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಯವರು ಸರಿಯಾಗಿ ಸರಬರಾಜು ಮಾಡದೇ ಇರುವುದರಿಂದ ಜನರಿಗೆ ಸ್ವಲ್ಪ ತೊಂದರೆಯಾಗುತ್ತದೆ. ಇಂಥಾದ್ದರಲ್ಲಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದಿದ್ದೇವೆ. ಎಲ್ಲಿ ಬೇರೆ ಸೊಸೈಟಿಯವರು ಮುಂದೆ ಬರುತ್ತಾರೋ ಅವರಿಗೆ ಹಂಚಲು ಏರ್ಪಾಡುಮಾಡುತ್ತೇವೆ. ಇಲ್ಲದಿದ್ದರೆ ಜಿಲ್ಲಾಧಿಕಾರಿಗಳ ಮುಖಾಂತರ ಅವನ್ನು ಕಳುಹಿಸುವ ಏರ್ಪಾಡು ಮಾಡುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ :—ಬೆಂಗಳೂರು ನಗರದಲ್ಲಿ ನಾಗರೀಕರಿಗೆ ಅಕ್ಕಿ, ರವ್ವೆ, ಮೈದ ಸಿಕ್ಕುತ್ತಿಲ್ಲ. ಅವುಗಳನ್ನು ಸರಬರಾಯಿ ಮಾಡಲು ಏನು ವ್ಯವಸ್ಥೆ ಮಾಡಿದ್ದೀರಾ ?

ಶ್ರೀಮತಿ ಇ. ಇ. ವಾಜ್ ;—ಬರುವ ತಿಂಗಳಿಂದ ಎಲ್ಲರಿಗೂ ಕೊಡುವುದಕ್ಕೆ ಏರ್ಪಾಡನ್ನು ಮಾಡಿದ್ದೇವೆ.

ಶ್ರೀ ಕೆ. ಎಂ. ನಾಗಣ್ಣ :—ನಾವು ಇಲ್ಲಿಯುವರೆಗೂ ನಮ್ಮ ಪೇಷನ್ಸ್ ಎಷ್ಟಿತ್ತೊ ಅಷ್ಟನ್ನೂ ಬಳಸಿ ಈಗ ನಮಗೆ ಶಾಂತಿ ಸಮಾಧಾನಗಳು ಇಲ್ಲದಂತಾಗಿದೆ. ಈ ಆಹಾರಬಾಬನ್ನು ಮಾನ್ಯ ಶ್ರೀ ಸಿದ್ದವೀರಪ್ಪನವರೋ ಅಥವಾ ಶ್ರೀಮಾನ್ ಚನ್ನಬಸಪ್ಪನವರೋ ಇಂಥವರಾರ ಕೈಲಿದ್ದರೂ ನಾವು ಇಷ್ಟರೊಳಗಾಗಿ ಅವರನ್ನು ಘೇರಾವೋ ಮಾಡಿಬಿಡುತ್ತಿದ್ದೆವು. ತಾವು ಹೆಣ್ಣುಮಗಳು ಅಂತ ಇನ್ನೂ ಸುಮ್ಮನಿದ್ದೇವೆ. ತಾವು ಉಗಾದಿ ಹಬ್ಬಕ್ಕೆ ನಗರದಲಿರತಕ್ಕ ಪ್ರತಿಯೊಬ್ಬರಿಗೂ ಉಗಾದಿ ಹಬ್ಬದ ಹಿಂದಿನ ದಿನವೇ ತಲಾ ಎರಡೂವರೆ ಕೆ.ಜಿ. ಅಕ್ಕಿ, ಒಂದು ಕೆ.ಜಿ. ಸಕ್ಕರೆ ; ಮತ್ತು ಮೈದಾ ಇವುಗಳನ್ನು ಕೊಡುವುದಾಗಿ ಆರ್ಡರ್ ಮಾಡಿದ್ದರೂ ಎರಡೂವರೆ ಕೆ.ಜಿ. ಅಕ್ಕಿ ವಿನಾ ಬೇರೇನೂ ಸಾಮಾನನ್ನು ಕೊಡಲಿಲ್ಲ. ಇದು ಸಹಿಸಲಾರದಂಥ ವಿಷಯ. ತಾವು ಆಡಿದಂತೆ ನಡೆಸುವುದಕ್ಕೆ ಸಾಧ್ಯವಾಗದಿದ್ದರೆ. ತಮಗೆ ಇದನ್ನು ದಕ್ಷತೆ ಇಂದ ನಡೆಸುವುದಕ್ಕೆ ಸಾಧ್ಯವಾಗ ದಿದ್ದರೆ ತಾವು ರಾಜೀನಾಮೆ ಕೊಟ್ಟು ಹೊರಟು ಹೋಗುವುದು ಲೇಸು ಇದರಲ್ಲಿ ಕಳ್ಳರು ಜಾಸ್ತಿ ಇದ್ದಾರೆ. ಅವರ ಜೊತೆಯಲ್ಲಿ ವ್ಯವಹಾರ ಮಾಡಲು ತಮ್ಮ ಕೈಲಿ ಸಾಧ್ಯ ಇಲ್ಲ. ಅದಕ್ಕೇನಿದ್ದರೂ ಶ್ರೀ ಸಿದ್ದವೀರಪ್ಪನವರು ಇಲ್ಲವೇ ಶ್ರೀ ಚನ್ನಬಸಪ್ಪನವರಂಥ ವ್ಯಕ್ತಿಗಳಾಗ ಬೇಕು, ಇಲ್ಲದಿದ್ದರೆ ಬೆಂಗಳೂರು ನಾಗರೀಕರು ಸತ್ತುಹೋಗುತ್ತಾರೆ. ಅದಕ್ಕೆ ತಾವು ದಯಮಾಡಿ ಅವಕಾಶ ಮಾಡಿಕೊಡಬಾರದೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀಮತಿ ಇ. ಇ. ವಾಜ್ :—ಬರುವ ತಿಂಗಳು ಕೇಂದ್ರದಿಂದ ನಮಗೆ ಹೆಚ್ಚು ಗೋಧಿ ಯನ್ನು ಕೊಡುವುದಾಗಿ ತಿಳಿಸಿದ್ದಾರೆ. ಅದು ಬಂದ ಕೂಡಲೆ ಎಲ್ಲರಿಗೂ ದೊರೆಯುವ ಹಾಗೆ ಅದನ್ನು ಹಂಚಲಾಗುವುದು. ಆದುದರಿಂದ ಸರ್ವರೂ ಈಗ ಸಭೆಯ ಮುಂದಿರತಕ್ಕ ಆಹಾರ ಡಿಮ್ಯಾಂಡಿಗೆ ತಮ್ಮ ಸರ್ವಾನುಮತದ ಒಪ್ಪಿಗೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

MADAM SPEAKER : The question is—"That the respective sums not exceeding the amounts in respect of Demand Nos. 45, 33, 15A and 53 inclusive of the sums granted 'on account' be granted to the Government to defray the charges which will come in course of payment during the financial year ending 31st day of March 1974".

The motion was adopted and Demands were voted.

DEMAND No. 45—CAPITAL OUTLAY ON IRRIGATION, Etc. (COMMERCIAL)

99. Capital Outlay on Irrigation, Navigation, Embankment and Drainage Works (Commerical)

"That a sum not exceeding Rs. 42,08,06,000 inclusive of the sum granted 'on account' be granted to the Government to

defray the charges which will come in course of payment during the financial year ending 31st day of March 1974, in respect of 'Capital Outlay on Irrigation, etc. (Gommercial)'."

DEMAND No. 33—FAMINE RELIEF

64. Famine Relief

"That a sum not exceeding Rs. 57,87,60,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974 in respect of 'Famine Relief'."

DEMAND No. 15—A. CIVIL SUPPLIES DEPARTMENT

26. Miscellaneous Departments

"That a sum not exceeding Rs. 87,91,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of 'Civil Supplies Department'."

DEMAND No. 53—CAPITAL OUTLAY ON SCHEMES OF GOVERNMENT TRADING

124. Capital Outlay on Schemes of Government Trading

"That a sum not exceeding Rs. 53,35,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of 'Capital Outlay on Schemes of Government Trading'."

DEMAND Nos. 2, 7, 8, 15 AND 42

MADAM SPEAKER : We shall now go to the next Demands, *viz.*, 2, 7, 8, 15 and 42. The Hon. Minister for Revenue may move them.

Sri N. HUTCHMASTY GOWDA (Minister for Revenue) : Madam, on the recommendation of the Governor, I beg to move the following Demands :

DEMAND No. 2—LAND REVENUE

"That a sum not exceeding Rs. 5,48,10,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 2 'Land Revenue'."

DEMAND No. 7—STAMPS

"That a sum not exceeding Rs. 32,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 7 'Stamps'."

DEMAND No. 8—REGISTRATION

"That a sum not exceeding Rs. 46,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day. of March 1974, in respect of 'Registration'."

DEMAND No. 15—MISCELLANEOUS DEPARTMENTS EXCLUDING CIVIL SUPPLIES DEPARTMENT DEPARTMENT OF INFORMATION AND SMALL SAVINGS

"That a sum not exceeding Rs. 1,20,50,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 15 'Miscellaneous Department excluding Civil Supplies Department, Department of Information and Small Savings'."

DEMAND No. 42—COMPENSATION TO ZAMINDARS

"That a sum not exceeding Rs. 96,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 42 'Payment of Compensation to Zamindars'."

MADAM SPEAKER : Motions moved—

"That a sum not exceeding Rs. 5,48,10,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 2 'Land Revenue'."

Along with this Demand, the other Demands are deemed to have been moved and are before the House for discussion.

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ) :—ಮಾನ್ಯ ಅಧ್ಯಕ್ಷಿಣಿಯವರೇ : ಮಾನ್ಯ ಕಂದಾಯ ಸಚಿವರು ತಂದಿರತಕ್ಕ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತ ಕೆಲವು ವಿಚಾರಗಳನ್ನು ಪ್ರಸ್ತಾಪಮಾಡಲು ಇಚ್ಛೆಯುಳ್ಳವನಾಗಿದ್ದೇನೆ. ಮಾನ್ಯ ಕಂದಾಯ ಮಂತ್ರಿಗಳು ರೈತ ಕುಟುಂಬದವರು ; ರೈತನ ಕಷ್ಟಸುಖಗಳನ್ನು ಅದರಲ್ಲೂ ಸಣ್ಣ ಪುಟ್ಟ ರೈತರ ಕಷ್ಟಕಾರ್ಪಣ್ಯಗಳನ್ನು ಚೆನ್ನಾಗಿ ಅರಿತು ಅವರ ಬಗ್ಗೆ ಪೂರ್ಣ ಅನುಕಂಪವುಳ್ಳವರೆಂದು ನಾವು ಭಾವಿಸಿದ್ದೆವು. ಆದರೆ ಅವರು ಮಂತ್ರಿಪದವಿಯನ್ನು ವಹಿಸಿಕೊಂಡ ಮೇಲೆ ಇವರು ಈ ಸಣ್ಣ ಪುಟ್ಟ ರೈತರ ಬಗ್ಗೆ ಮಾಡಿರತಕ್ಕ ಕೆಲಸಕಾರ್ಯಗಳಾದರೂ ಏನೆಂಬುದನ್ನು ಪರಿಶೀಲನೆ ಮಾಡಿ ನೋಡಿದರೆ ಅದು ಶೂನ್ಯ ಸಂಪೂರ್ಣವಾಗಿ ಎಂದು ಹೇಳಬೇಕಾಗಿದೆ. ಈ ಸಣ್ಣ ರೈತರಿಗೆ ಭೂಕಂದಾಯವನ್ನು ರದ್ದು ಮಾಡುತ್ತಾರೆಂಬ ಕೂಗು ಬಹಳ ದಿನಗಳಿಂದಲೂ ಇತ್ತು. ಅನೇಕ ಬಾರಿ ಮಾನ್ಯ ಮಂತ್ರಿಗಳೇ ಅನೇಕ ಸಾರ್ವಜನಿಕ ವೇದಿಕೆಗಳಿಂದ ಇದನ್ನು ವ್ಯಕ್ತಪಡಿಸಿದ್ದರು ಎಂಬುದು ನನ್ನ ಜ್ಞಾಪಕಶಕ್ತಿಯಲ್ಲಿ ಇನ್ನೂ ಉಳಿದಿದೆ. ಸಣ್ಣ ರೈತರ ಬಗ್ಗೆ ಇವರಿಗಿದ್ದ ಅನುಕಂಪ ಮಾಯವಾಗಿರುವುದನ್ನು ನೋಡಿದರೆ ಇವರು ಬರೀ ಮಾತುಗಾರರೇ ವಿನಾ ಕೆಲಸಗಾರರಲ್ಲ ಎಂಬುದು ಈಗ ಸಿದ್ಧಾಂತವಾಯಿತು. ಹಿಂದೆ ಇದ್ದ ಸರ್ಕಾರದಲ್ಲಿ 10 ಎಕರೆಗಳೊಳಗಿರತಕ್ಕ ರೈತರಿಗೆ ಕಂದಾಯವನ್ನು ಸಂಪೂರ್ಣವಾಗಿ ಮಾಫೀ ಮಾಡುವುದಾಗಿ ಒಂದು ನಿರ್ಣಯವನ್ನೇ ಮಾಡಿದ್ದರು. ಆದರೆ ಅದನ್ನು ಜಾರಿಗೆ ಕೊಡುವುದರೊಳಗಾಗಿ ಈ ಪಕ್ಷಾಂತರದ ಪಿಡುಗು ಬಂದು, ಅದು ನಿಂತುಹೋಗಿ, ಈಗ ಆ ಪಕ್ಷಾಂತರಗೊಂಡ ಜನರನ್ನು ಒಳಗೊಂಡ ಒಂದು ಸರ್ಕಾರ ಜಾರಿಗೆ ಬಂದಿದೆ. ಈ ಸರ್ಕಾರವಾದರೂ ಅದನ್ನು ಜಾರಿಗೆ ಕೊಡಬಹುದೆಂದು ಬಹಳ ಆಸೆಯನ್ನು ಇಟ್ಟುಕೊಂಡಿದ್ದರು. ಆದರೆ ಅವರ ಆಸೆಯೆಲ್ಲ ಈಗ ನಿರಾಸೆಯಾಗಿದೆ. ಆದರೆ ಇವರು ಇಂಥ ಒಂದು ದೊಡ್ಡ ದ್ರೋಹವನ್ನು ರೈತಾಪಿಜನಕ್ಕೆ ಬಗೆದಿದ್ದಾರೆಂದರೆ ಅತಿಶಯೋಕ್ತಿ ಆಗಲಾರದು. ಇನ್ನು ರೈತರಿಗೆ ಕಂದಾಯವನ್ನು ರದ್ದು ಮಾಡದಿದ್ದರೆ ಹೋಗಲಿ ಅವರಿಗೇನಾದರೂ ಹೆಚ್ಚಿನ ಅನುಕೂಲ ಮಾಡಿಕೊಟ್ಟಿದ್ದಾರೆಯೇ ಎಂದರೆ ಅವರಿಗೆ ಇತ್ತೀಚೆಗೆ ಕಂದಾಯ ರದ್ದು ಮಾಡುವ ಕಡೆ ಕಂದಾಯವನ್ನು ಒಂದಕ್ಕೆ ಎರಡರಷ್ಟು ಹೆಚ್ಚು ಮಾಡಿದ್ದಾರೆ. ಆದರೆ ರೈತನು ಕೊಳ್ಳತಕ್ಕ ಪದಾರ್ಥಗಳ ಬೆಲೆಯಾದರೋ ಒಂದಕ್ಕೆ ನಾಲ್ಕರಷ್ಟು ಏರಿದೆ. ಅಂದಾಗ ಇನ್ನು ರೈತನ ಶೋಷಣೆ ಎಲ್ಲಿ ಕಡಿಮೆ ಆಯಿತು ?

ಸ್ಟ್ಯಾಂಪ್ ಡ್ಯೂಟಿ ಹೆಚ್ಚಿಸಿರುವುದರಿಂದ ಬಡವರಿಗೆ ತೊಂದರೆಯಾಗಿದೆ, ಬಲ್ಲಿದವರಿಗೆ ತೊಂದರೆಯಾಗಿಲ್ಲ. ಜಮೀನು ಮಾರಾಟ ಮಾಡುವವರು, ಆಧಾರ, ಭೋಗ್ಯ ಮಾಡುವವರು ಸ್ಟ್ಯಾಂಪ್ ಡ್ಯೂಟಿ ಹೊರಬೇಕು. ಇದರಿಂದ ರೈತರನ್ನು ಶೋಷಣೆ ಮಾಡುತ್ತಿದ್ದೀರಿ.

ತಕಾವಿ ಮತ್ತು ಜಮೀನು ಅಭಿವೃದ್ಧಿ ಸಾಲ. ಈ ವರ್ಷ ಈ ಬಾಬಿನಲ್ಲಿ ಹೆಚ್ಚು ಮೊಬಲಗನ್ನು ಹಳೆಯ ಮೈಸೂರಿಗೆ ಕೊಡುವ ಪ್ರಯತ್ನ ಮಾಡಿಲ್ಲ. ಜೊತೆಗೆ ಹಿಂದೆ

ಕೊಟ್ಟಿರುವ ತಕಾವಿ, ಭೂ ಅಭಿವೃದ್ಧಿ ಸಾಲ ವಸೂಲಾತಿ ವಿಚಾರದಲ್ಲಿ ಬಹಳ ಕಾರ್ಯವನ್ನು ಪ್ರದರ್ಶಿಸುತ್ತಿದ್ದಾರೆ, ಅವರು ಮನೆಗಳಿಗೆ ನುಗ್ಗಿ ಇರುವ ಸಣ್ಣಪುಟ್ಟ ಪದಾರ್ಥಗಳನ್ನು ಹೊರಗೆ ಹಾಕುತ್ತಿದ್ದಾರೆ, ಜನರಿಗೆ ಹಿಂಸೆ ಮಾಡುತ್ತಿದ್ದಾರೆ. ಹತ್ತಾರು ವರ್ಷದಿಂದ ಜನ ಕ್ಷಾಮಕ್ಕೆ ತುತ್ತಾಗಿ ತೊಂದರೆ ಪಡುತ್ತಿರುವಾಗ ಮುಂದಿನ ವರ್ಷ ಕೊಡುತ್ತೇವೆಂದು ಮನವಿ ಮಾಡಿರುವಾಗ ವಸೂಲಾತಿಯನ್ನು ಮುಂದಕ್ಕೆ ಹಾಕಬೇಕಾಗಿತ್ತು. ಈಗ ಒಟ್ಟಿಗೆ ಎಲ್ಲಾ ಕೊಡಬೇಕೆಂದು ಬಲವಂತ ಮಾಡುತ್ತಿರುವುದರಿಂದ ರೈತರಿಗೆ ತೊಂದರೆಯಾಗಿದೆ. ಈ ವಿಚಾರ ದಲ್ಲಿ ಮಂತ್ರಿಗಳು ದಯೆ ತೋರಿ ಕರುಣಾಳುವಾಗಿ ಇನ್ನೂ ನಾಲ್ಕೈದು ವರ್ಷ ರೈತರಿಗೆ ಬಾಕಿ ಪಾವತಿ ಮಾಡಲು ಅವಕಾಶ ಕೊಟ್ಟು ಕಂತಿನ ರೂಪದಲ್ಲಿ ಅದನ್ನು ವಸೂಲು ಮಾಡ ಬೇಕು. 5 ಸಾವಿರ ರೂಪಾಯಿ ಒಬ್ಬರಿಂದ ಬರಬೇಕಾದರೆ ವರ್ಷಕ್ಕೆ ಒಂದು ಸಾವಿರ ರೂಪಾಯಿಗಳ ಪ್ರಕಾರ 5 ವರ್ಷಗಳಲ್ಲಿ ಕೊಡಲು ಅವಕಾಶ ಮಾಡಬೇಕು. ಹೀಗೆ ಮಾಡಿದರೆ ಕಷ್ಟ ನಿವಾರಣೆಯಾಗುವುದು. ಇತ್ತೀಚೆಗೆ ನಮ್ಮ ತಾಲ್ಲೂಕಿನಲ್ಲಿ ಜಮೀನನ್ನು ಹರಾಜು ಮಾಡುತ್ತಿದ್ದಾರೆ. ಮೊದಲು 1972 ರಲ್ಲಿ ಕೊಡಬೇಕಾಗಿಲ್ಲ. 1973 ರಲ್ಲಿ ಕೊಡಿ ಎಂದು ಹೇಳಿದರು. 1973 ರಲ್ಲಿ ಬರಗಾಲ ಬಂದಿದೆ. ಪರಿಸ್ಥಿತಿ ಉಗ್ರವಾಗಿದೆ. ಇಂಥ ಪರಿಸ್ಥಿತಿ ಯಲ್ಲಿ ಜನರಲ್ಲೇನೂ ಇಲ್ಲ. ಅವರು ಪ್ರಾಣ ಬಿಡುವ ಸ್ಥಿತಿಯಲ್ಲಿದ್ದಾರೆ. ಅವರಿಗೇ ನೀವು ಕೊಡಬೇಕು. ಬಡ ರೈತರಿಗೆ ಸಹಾಯ ಮಾಡದಿದ್ದರೆ ಮಂತ್ರಿಗಳು ಪರೋಕ್ಷವಾಗಿ ರೈತರ ಕಷ್ಟಕ್ಕೆ ಹೊಣೆಯಾಗುವರು.

ಮಂತ್ರಿಗಳು ರೆವೆನ್ಯೂ ಇಲಾಖೆಯಲ್ಲಿರುವ ಲಂಚ ಕಡಿಮೆ ಮಾಡುತ್ತಾರೆಂಬ ಆಶೆಯನ್ನಿಟ್ಟು ಕೊಂಡಿದ್ದೆವು. ಅಲ್ಲಲ್ಲಿ ಹೋಗಿ ಕೆಲವು ತಾಲ್ಲೂಕ್ ಆಫೀಸುಗಳಿಗೆ ಅವರು ಸರ್‌ಪ್ರೈಜ್ ವಿಸಿಟ್ ಕೊಟ್ಟಿದ್ದಾರೆ. ಕೆಲವು ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ. ಅಧಿಕಾರಿ ಗಳ ಸಂಪಾದನೆ ಬೃಹತ್ ಪ್ರಮಾಣದಲ್ಲಿ ಬೆಳೆದಿದೆ. ಲಂಚದ ಪ್ರಮಾಣ ನೋಡಿದರೆ ಸಮುದ್ರದ ನೀರನ್ನು ಖಾಲಿ ಮಾಡಲು ಒಂದು ಚೊಂಬು ತೆಗೆದುಕೊಂಡ ಹಾಗೆ ಮಂತ್ರಿಗಳು ಮಾಡಿದ್ದಾರೆ. ಹೀಗಾದರೆ ಅವರ ಕೈಲಿ ಲಂಚ ತಡೆಗಟ್ಟಲು ಸಾಧ್ಯವಿಲ್ಲ. ಆಡಳಿತ ನೀತಿ ಯನ್ನು ಪೂರ್ಣವಾಗಿ ಬದಲಾಯಿಸದಿದ್ದರೆ ಈಗಿರುವ ಲಂಚಗುಳಿತನವನ್ನು ತಪ್ಪಿಸುವುದ ಕ್ಕಾಗುವುದಿಲ್ಲ. ಎಂದು ಘಂಟಾಘೋಷವಾಗಿ ಹೇಳುತ್ತೇನೆ. ಕೇವಲ ಒಬ್ಬ ಸಬ್‌ರಿಜಿಸ್ಟ್ರಾರನ್ನು ಹಿಡಿದರೆ ಅಥವ ಒಬ್ಬ ತಾಸಿಲ್ದಾರರನ್ನು ಸ್ಯಾಕ್ ಮಾಡಿದರೆ ಲಂಚ ಹೋಗುವುದಿಲ್ಲ. ಬೇರು ಕಿತ್ತುಹಾಕುವುದಕ್ಕೆ ಪ್ರಯತ್ನ ಮಾಡದಿದ್ದರೆ ಸಮುದ್ರದ ನೀರಿಗೆ ಚೊಂಬು ತೆಗೆದು ಕೊಂಡಂತಾಗುವುದು. ಮತ್ತು ಮಾಡುವ ಪ್ರಯತ್ನ ವ್ಯರ್ಥವಾಗುವುದು. ತಾಲ್ಲೂಕು ಆಫೀಸಿಗೆ ಈ ದಿನ ಹೋದರೆ ಒಂದು ಕಾಪಿ ಬೇಕೆಂದು ರೈತರು ಅರ್ಜಿ ಕೊಟ್ಟರೆ ಅದಕ್ಕೆ ಜವಾಬು ಪಡೆಯಬೇಕಾದರೆ ಅವರಿಗೆ ಸರಿಯಾದ ಮಾರ್ಗದರ್ಶನವಿಲ್ಲ, ಪ್ರತಿಯೊಂದು ಹಂತ ದಲ್ಲೂ ಬಹಳ ಮಟ್ಟಿಗೆ ಶೋಷಣೆ ನಡೆಯುತ್ತಿದೆ. ಇದನ್ನು ತಪ್ಪಿಸಬೇಕು ಎಂಬ ಕಳಕಳಿಯಿದೆ, ಇದರಲ್ಲಿ ಸಂಶಯವಿಲ್ಲ. ಆದರೆ ಪ್ರಯತ್ನ ಸಾಲದು. ಇದರಿಂದ ಯಾವ ವಿಧವಾದ ಫಲವೂ ದೊರೆತಿಲ್ಲ.

ಆರ್. ಆರ್. 5 ಮತ್ತು 6ರ ಬಗ್ಗೆ ಹೇಳಬೇಕಾಗಿದೆ. ತಮ್ಮ ಜಮೀನು ಯಾವುದು ಎಂಬುದೇ ಅನೇಕರಿಗೆ ಗೊತ್ತಿಲ್ಲ. ಇದನ್ನು ಸರಿಪಡಿಸುತ್ತೇವೆಂದು ಹೇಳಿದ್ದಾರೆ. ಈ ದಿನ ಸಾಲ ಪಡೆಯಬೇಕಾದರೆ ರೈತ ತನ್ನ ಜಮೀನು ಯಾವುದು ಎಂದು ರುಜುವಾತುಮಾಡಲು ಅವನಲ್ಲಿ ದಾಖಲೆಗಳಿಲ್ಲ. ಹದುಬಸ್ತು ಗೊತ್ತುಮಾಡುವ ಸಾವಿರಾರು ಕೇಸುಗಳು ಹತ್ತಾರು ವರ್ಷಗಳಿಂದ ಒಂದೊಂದು ತಾಲ್ಲೂಕು ಆಫೀಸಿನಲ್ಲೂ ಪೆಂಡಿಂಗ್ ಇವೆ. ದರಖಾಸ್ತು ಜಮೀನು, ಕ್ರಯಕ್ಕೆ ಪಡೆದ ಜಮೀನು ಮತ್ತು ಅಣ್ಣತಮ್ಮಂದಿರಲ್ಲಿ ವಿಭಾಗವಾದ ಜಮೀನು ಇವುಗಳ ಅಳತೆಯಾಗಿ ದುರಸ್ತಾಗದೆ ಒಂದು ವಿಧದ ಗೊಂದಲದಲ್ಲಿ ತಾಲ್ಲೂಕು ಆಫೀಸಿನಲ್ಲಿ ವ್ಯವಹಾರ

ನಡೆಯುತ್ತಿದೆ. ಇದನ್ನು ಆದಷ್ಟು ಜಾಗ್ರತೆ ಮಾನ್ಯ ಕಂದಾಯ ಮಂತ್ರಿಗಳು ಹೆಚ್ಚು ಮುತುವರ್ಜಿ ವಹಿಸಿ ರೈತರ ಕಷ್ಟ ತಿಳಿದು ತಾಲ್ಲೂಕು ಆಫೀಸಿನಲ್ಲಿ ರೈತರಿಗಾಗುವ ಕಷ್ಟ ತಪ್ಪಿಸಬೇಕು.

ದರಖಾಸ್ತು ಮೂಲಕ ಜಮೀನು ವಿಲೇವಾರಿ ಮಾಡಲು ತಾಲ್ಲೂಕು ಮಟ್ಟದಲ್ಲಿ ಸಮಿತಿಗಳು ರಚಿತವಾಗಿವೆ. ಮೊನ್ನೆ ಈ ಬಗ್ಗೆ ವಿರೋಧ ಪಕ್ಷದವರು ಮಂತ್ರಿಗಳನ್ನು ಪ್ರಶ್ನಿಸಿದರು. ಬರೀ ಆಡಳಿತ ಕಾಂಗ್ರೆಸ್ಸಿನವರನ್ನೇ ಇಡೀ ದೇಶದಲ್ಲಿ ಇದಕ್ಕೆ ಸಂಬಂಧಪಟ್ಟ ಸಲಹಾ ಮಂಡಲಿಗಳಲ್ಲಿ ನೇಮಕ ಮಾಡಿದ್ದಾರೆ. ಆಡಳಿತ ಕಾಂಗ್ರೆಸ್ಸಿನವರಲ್ಲದೆ ಬೇರೆ ಒಳ್ಳೆಯವರ್‍ಯಾರೂ ಈ ದೇಶದಲ್ಲಿ ಇಲ್ಲವೇ ? ಕೆಲವು ಸಲಹಾ ಸಮಿತಿಗಳನ್ನು ನೋಡಿದರೆ ವ್ಯವಸಾಯವೆಂಬುದೇ ಗೊತ್ತಿಲ್ಲ, ಜಮೀನಿನ ವಿಚಾರ ಗೊತ್ತಿಲ್ಲ, ವ್ಯವಸಾಯಗಾರರ ಕಷ್ಟಸುಖ ಗೊತ್ತಿಲ್ಲ, ಇಂಥವರನ್ನು ಭೂಮಿ ವಿಲೇವಾರಿಯ ಸಲಹಾ ಮಂಡಲಿ ಸದಸ್ಯರನ್ನಾಗಿ ಮಾಡಿದ್ದಾರೆ. ಇದು ಪಕ್ಷದ ರಾಜಕೀಯದ ಪರಾಕಾಷ್ಠೆ ಎಂದು ಹೇಳಬೇಕಾಗಿದೆ. ಹುಚ್ಚಮಾಸ್ತಿಗೌಡರಿಗೆ ನಮ್ಮ ಪಕ್ಷ ಕಂಡರೆ ಬಹಳ ಆಕ್ರೋಶವಿದೆ, ದ್ವೇಷವಿದೆ. ಕಾರಣವೇನೆಂದರೆ ನಮ್ಮ ಪಕ್ಷ ಆಳ್ವಿಕೆ ಮಾಡುವಾಗ ಅವರಿಗೆ ಕಿರುಕುಳವಾಗಿದೆ ಎಂಬುದು. ಅನೇಕ ಸೊಸೈಟಿಗಳಲ್ಲಿ ಅವ್ಯವಹಾರ ನಡೆದಿದೆ. ಇದರಲ್ಲಿ ಭಾಗಿಯಾಗಿದ್ದವರು ಈಗ ಮಂತ್ರಿಗಳ ಪಕ್ಷದಲ್ಲಿರುವುದರಿಂದ ನಮ್ಮ ಪಕ್ಷ ನಿರಪರಾಧಿ ಎಂದು ಹೇಳಬಹುದು. ಅಲ್ಲದೆ 30 ವರ್ಷದ ರಾಜಕೀಯ ಅನುಭವವಿರುವವರು ಸರಿಯಾದ ಕ್ರಮ ಇವುಗಳ ಬಗ್ಗೆ ತೆಗೆದುಕೊಳ್ಳದಿರುವುದು ಅವರಿಗೆ ಗೌರವ ತರುವುದಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ

Mr. Chairman (Sri K. M. NAGANNA) in the Chair.—

ಅಧಿಕಾರಿಗಳ ವರ್ಗಾವಣೆಯಲ್ಲಿ ಸರಕಾರದ ನೀತಿ ಅರ್ಥವಾಗುವುದಿಲ್ಲ. ಒಂದು ಸಾರಿ ವರ್ಗ ಮಾಡುವುದು. ಯಾವುದೋ ಕಾರಣಕ್ಕಾಗಿ ಮಾಡುವರು, ಆಡಳಿತ ಕಾಂಗ್ರೆಸ್ಸಿನವರು ಹೇಳಿರಬಹುದು. ಅದಕ್ಕೆ ಆಧಾರವಿದೆ. ವರ್ಗ ಮಾಡಿದಾಗ ಖಾಲಿಯಾದ ಜಾಗಕ್ಕೆ ಬೇರೆ ಅಧಿಕಾರಿಯನ್ನು ನೇಮಕ ಮಾಡಬೇಕು. ಪಾಂಡವಪುರ ತಾಲ್ಲೂಕು ಅಸಿಸ್ಟೆಂಟ್ ಕಮೀಷನರನ್ನು ವರ್ಗಮಾಡಿ 3 ತಿಂಗಳಾದ ಮೇಲೆ ಒಬ್ಬರನ್ನು ಹಾಕಿದ್ದಾರೆ.

ಇದಕ್ಕೆ ಇಡೀ ಪಾಂಡವಪುರ ಸಬ್ ಡಿವಿಷನ್ ಎಲ್ಲಾ ಸದಸ್ಯರು ಸರ್ಕಾರಕ್ಕೆ ಹತ್ತಾರು ಬಾರಿ ಪ್ರಾರ್ಥನೆ ಮಾಡಿಕೊಂಡು ಹೇಳಿದ್ದಾರೆ. ಏತಕ್ಕೆ ಈ ನಿಧಾನ ದೃಷ್ಟಿ. ಯಾರನ್ನಾದರೂ ಅಧಿಕಾರಿಗಳನ್ನು ಹಾಕಿ. ನಾನು ದೂರದೃಷ್ಟಿಯಿಂದ ಅರಿಕೆ ಮಾಡಿಕೊಳ್ಳುವುದಾದರೆ ಬೇರೆ ಯಾರನ್ನಾದರೂ ಹಾಕಿ. ಇದು ಬಹಳ ಮುಖ್ಯವಾದಂಥ ಸ್ಥಾನ, ಮೂರು ತಿಂಗಳಿಂದ ಖಾಲಿಯಾಗಿರತಕ್ಕದ್ದು. ಇದರಿಂದ ಎಷ್ಟರಮಟ್ಟಿಗೆ ಜನತೆಗೆ ತೊಂದರೆಯಾಗುತ್ತದೆ, ಎನ್ನುವುದನ್ನು ತಾವೇ ದಯವಿಟ್ಟು ಊಹೆ ಮಾಡಿ. ಅದೇ ರೀತಿ ತಹಶೀಲ್ದಾರರನ್ನು ಪೋಸ್ಟ್ ಮಾಡುವಾಗ ಇದೇ ತರಹ ಆಗಿದೆ. ಈ ತರಹ ಅಧಿಕಾರಿಗಳನ್ನು ಪೋಸ್ಟ್ ಮಾಡುವಾಗ ನಿಧಾನ ಮಾಡಬಾರದು ಎನ್ನತಕ್ಕದ್ದನ್ನು ತಮ್ಮಲ್ಲಿ ತಿಳಿಸಬಯಸುತ್ತೇನೆ.

ಆಮೇಲೆ ದೇವಸ್ಥಾನಗಳ ವಿಚಾರ. ದೇವಸ್ಥಾನಗಳ ವಿಚಾರವನ್ನು ಮಾತನಾಡುವಾಗ ಒಂದು ವಿಚಾರವನ್ನು ಮಾತ್ರ ಅನಿವಾರ್ಯವಾಗಿ ಈ ಸದನದ ಮುಂದೆ ತಿಳಿಸಬೇಕಾಗುತ್ತದೆ. ಮುಜರಾಯಿ ಒಂದೊಂದು ಡಿಸ್ಟ್ರಿಕ್ಟಿಗೆ ಒಂದೊಂದು ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಇಡಬೇಕು ಎಂದು ಇಡೀ ಡಿಸ್ಟ್ರಿಕ್ಟಿನ ಕೋ-ಆಪರೇಟಿವ್ ಅಧ್ಯಕ್ಷರು ಸೇರಿ ನಿರ್ಣಯ ಮಾಡಿ ಸರ್ಕಾರಕ್ಕೆ ತಮ್ಮ ಮನವಿಯನ್ನು ಸಲ್ಲಿಸಿದರು. ಸಂಬಂಧಪಟ್ಟ ಅಧಿಕಾರಿಗಳು, ಆಗಿನ ರಿಜಿಸ್ಟ್ರಾರ್ ಅವರು ಸಹ ಇದರ ಬಗ್ಗೆ ಆರ್ಡರ್ ಮಾಡಿದ್ದಾರೆ ಎಂದು ಕೇಳಿದ್ದೇನೆ. ಆದರೆ ಈಗ ಏನಾಗಿದೆ ಎಂದರೆ,

ಮುಜರಾಯಿ ಹಣವನ್ನು ಒಂದು ಖಾಸಗಿ ಕರ್ನಾಟಕ ಬ್ಯಾಂಕ್‌ನಲ್ಲಿ ಇಟ್ಟಿದ್ದಾರೆ. ಕೋ-ಆಪರೇಟಿವ್ ಅಧ್ಯಕ್ಷರುಗಳು ಬಂದು ಮಂತ್ರಿಗಳನ್ನು ಕಂಡಿದ್ದಾರೆ, ಮುಖ್ಯ ಮಂತ್ರಿಗಳನ್ನು ಕಂಡಿದ್ದಾರೆ, ಖಾಸಗಿ ಬ್ಯಾಂಕಿನವರು ಎಷ್ಟು ಬಡ್ಡಿ ಕೊಡುತ್ತಾರೋ ಅದಕ್ಕಿಂತ ಅರ್ಧ ಪರ್ಸೆಂಟ್ ಜಾಸ್ತಿ ಬಡ್ಡಿ ಕೊಡುತ್ತೇವೆ ಎಂದು ರೈಟಿಂಗ್‌ನಲ್ಲಿ ಕೊಟ್ಟಿದ್ದಾರೆ. ಆದರೆ ಖಾಸಗಿ ಬ್ಯಾಂಕಿನಲ್ಲಿ ಕಡಿಮೆ ಬಡ್ಡಿಗೆ ಹಣವನ್ನು ಇಟ್ಟಿದ್ದಾರೆ. ಈ ಸಂಬಂಧವಾಗಿ ಒಂದು ಗುಲ್ಲು ಎದ್ದಿತ್ತು. ಪಾರ್ಟಿ ಹೆಸರಿನಲ್ಲಿ ಬ್ಯಾಂಕ್‌ನವರಿಂದ ಹೆಚ್ಚು ಹಣವನ್ನು ತೆಗೆದುಕೊಂಡಿದ್ದಾರೆ, ಏತಕ್ಕೆ ತೆಗೆದುಕೊಂಡರೋ, ದುಡ್ಡಿನ ವಿನಿಮಯ ನಡೆದಿದೆ. ಸಹಕಾರ ಚಳುವಳಿಯನ್ನು ತೀವ್ರಗೊಳಿಸಬೇಕು ಎನ್ನುವ ಜನ ಸಹಕಾರ ಸಂಘಗಳ ಕಾರ್ಯ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡದೆ, ಅದನ್ನು ಖಾಸಗಿ ಬ್ಯಾಂಕಿನವರಿಗೆ ವಿಸ್ತರಣೆ ಮಾಡಿದ್ದು ಅಪರಾಧವಲ್ಲವೇ ಎಂದು ನಾನು ಕೇಳುತ್ತೇನೆ. ಏತಕ್ಕೆ ಮಾಡಬೇಕು, ಕಡಿಮೆ ಬಡ್ಡಿಗೆ ಖಾಸಗಿ ಬ್ಯಾಂಕಿಗೆ ಹಣ ಕೊಡುವುದು, ಮತ್ತು ಪಕ್ಷಗಳಿಗೆ ಹಣ ಪಡೆಯುವುದು ಮಹಾ ದ್ರೋಹ. ಇದನ್ನು ಮುಖ್ಯ ಮಂತ್ರಿಗಳೇ ಮಾಡಿರಲಿ, ಯಾರೇ ಮಾಡಿರಲಿ, ಮುಂದೆಯಾದರೂ ಇಂಥ ಕೆಲಸ ಮಾಡಬೇಡಿ ಎಂದು ನಾನು ತಿಳಿಸಬಯಸುತ್ತೇನೆ. ಪ್ರತಿಯೊಂದು ಹಳ್ಳಿಯಲ್ಲಿಯೂ 5–6 ದೇವಸ್ಥಾನಗಳು ಇವೆ, ಅಲ್ಲಿ ಸಾಯಂಕಾಲದ ಹೊತ್ತು ಕತ್ತೆಗಳು ಮಲಗಿಕೊಂಡಿರುತ್ತವೆ. ಕೆಲವು ಕಡೆ ಸ್ಕೂಲು ಬಿಲ್ಡಿಂಗ್ ಇಲ್ಲದೆ ಅಲ್ಲಿ ಪಾಠ ಹೇಳುತ್ತಾರೆ. ಪೂಜಾರಿಗಳು ಪೂಜೆ ಮಾಡುವ ಕಾಲದಲ್ಲಿ ಗಂಜಲ ಪ್ರೋಕ್ಷಣೆ ಮಾಡಿ, ಪೂಜೆ ಮಾಡಿ ಹೋಗುತ್ತಾರೆ. ಇಂಥ ದೇವಸ್ಥಾನಗಳಿಗೆ ಹೋದರೆ, ಒಂದು ಅತ್ಯುತ್ತಮವಾದ ವಾತಾವರಣ ಏರ್ಪಡುತ್ತದೆ ಎಂದು ಯಾರೂ ಹೇಳುವುದಿಲ್ಲ. ಅದರ ಬದಲು, ಊರಿನ ಪಕ್ಕದಲ್ಲಿ ಮುಖಂಡರ ಮಹಡಿ ಮನೆ ಇರುತ್ತದೆ, ಈ ಮನೆಯ ಪಕ್ಕದಲ್ಲಿ ಹಳೆಯ ದೇವಸ್ಥಾನ ಇರುತ್ತದೆ. ದೇವಸ್ಥಾನದಲ್ಲಿ ದೇವರು ಇಲ್ಲ, ಗಂಟೆ ಇಲ್ಲ, ಇಂಥ ದೇವಸ್ಥಾನಗಳನ್ನೆಲ್ಲಾ ಒಟ್ಟು ಹಾಕಿ, ಸಾಧ್ಯವಾದರೆ, ಒಂದು ಊರಿಗೆ ಒಂದೇ ದೇವಸ್ಥಾನವಾದರೂ ಚಿಂತೆಯಿಲ್ಲ, ಚೊಕ್ಕಟ ವಾಗಿ, ಲಕ್ಷಣವಾಗಿ ಇದ್ದರೆ ಸಾಕು. ಕ್ರಿಶ್ಚಿಯನ್ ಬಾಂಧವರು, ಮುಸ್ಲಿಂ ಬಾಂಧವರು ಅವರು ತಮ್ಮ ದೇವಸ್ಥಾನಗಳನ್ನು ಚೊಕ್ಕಟವಾಗಿಟ್ಟುಕೊಂಡಿರುತ್ತಾರೆ ; ಆದರೆ ಅವರು ಪೂಜೆ ಮಾಡುವುದಿಲ್ಲ. ಅವರಿಗೆ ದೇವರು ಶಾಪ ಕೊಡುವುದಿಲ್ಲ. ಆದ್ದರಿಂದ ಪೂಜೆ ಮಾಡುವುದಕ್ಕೆ ಒಂದೇ ದೇವರು ಸಾಕು. ಒಂದು ಊರಿನಲ್ಲಿ ಒಂದು ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದರೆ ಸಾಕು ಎಂದು ನನ್ನ ಅಭಿಪ್ರಾಯ. ಈ ಪುಣ್ಯ ಕೆಲಸವನ್ನು ಮಾಡಿ, ದೀನದಲಿತರಲ್ಲಿ ದೇವರು ಇದ್ದಾನೆ, ದೊಡ್ಡ ದೊಡ್ಡ ದೇವಸ್ಥಾನಗಳಿಗೆ ಹಣ ಸಹಾಯ ಮಾಡಬೇಡಿ, ಹಣ ಕೊಡದಿದ್ದರೆ ದೇವರು ಶಾಪ ಹಾಕುವುದಿಲ್ಲ, ಬಡ ಜನರ ಮೇಲೆ ದಯೆ ಇಡಿ, ಪ್ರತಿಯೊಂದು ಗ್ರಾಮಕ್ಕೂ ಎರಡು ಮೂರು ಸಾವಿರ ರೂಪಾಯಿಗಳನ್ನು ಕೊಡಿ, ಒಂದೊಂದು ಗುಡಿಯನ್ನಾದರೂ ಸರಿಯಾಗಿ ಏರ್ಪಾಡು ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ಇನ್ನೊಂದು ವಿಚಾರವನ್ನು ನಾನು ತಿಳಿಸಬಯಸುತ್ತೇನೆ. ತಮ್ಮ ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ, ಈ ಅಪೀಲುಗಳ ಮೇಲೆ ತೀರ್ಮಾನ ಕೊಡತಕ್ಕ ಪರಮಾಧಿಕಾರವನ್ನು ತಾವು ಹೊಂದಿದ್ದೀರಿ. ಆದರೆ ಯಾವ ಕಾರಣವೋ ನನಗೆ ತಿಳಿಯದು. ಈ ಅಧಿಕಾರವನ್ನು ತಮ್ಮ ಕಾರ್ಯದರ್ಶಿಯವರಿಗೆ ವಹಿಸಿಕೊಟ್ಟಿದ್ದೀರಿ. ತಮ್ಮ ಕಾರ್ಯದರ್ಶಿಯವರು ದಕ್ಷರು, ಅದರ ಬಗ್ಗೆ ಎರಡು ಭಾವನೆಗೆ ಅವಕಾಶವಿಲ್ಲ. ಆದರೆ ಕಾನೂನು ರೀತ್ಯ ಲಭ್ಯವಾಗಿರತಕ್ಕ ಅಧಿಕಾರವನ್ನು ಅಕ್ಷರಶಃ ಅಪರಾಧ ಮಾಡಿದ್ದಾರೆ ಎಂದು ಹೇಳುವುದಿಲ್ಲ, ತಾತ್ವಿಕವಾಗಿ ತಪ್ಪು ಮಾಡಿದ್ದೀರಿ. ತಮಗೆ ಕೊಟ್ಟಂಥ ಅಧಿಕಾರವನ್ನು ತಾವೇ ಚಲಾಯಿಸಿ, ಎಷ್ಟೇ ವೈವಿಧ್ಯಪೂರ್ಣ ವಾದ ಕಾರ್ಯಕ್ರಮಗಳು ಇದ್ದರೂ ಸಹ ಇದಕ್ಕಿಂತ ಉತ್ತಮ ಕಾರ್ಯ ಬೇರೆ ಇದೆ ಎನ್ನುವ ಮಾತನ್ನು ನಾನು ಒಪ್ಪುವುದಿಲ್ಲ. ಎಲ್ಲಕ್ಕಿಂತಲೂ ಉತ್ತಮ ಕಾರ್ಯ ಇದು, ಈ ಕಾರ್ಯವನ್ನು ಅಧಿಕಾರಿಗಳಿಗೆ ವಹಿಸತಕ್ಕದ್ದು ಸರಿಯಾದಂಥ ನಡೆವಳಿಕೆಯಲ್ಲ ಎನ್ನತಕ್ಕದ್ದನ್ನು ತಮಗೆ ತಿಳಿಸಬಯಸುತ್ತೇನೆ. ಇನ್ನು ಕೆಲವು ಕ್ಷೇತ್ರಗಳಲ್ಲಿ ರೈತನ ಸ್ಥಿತಿ ಉತ್ತಮಗೊಳ್ಳಬೇಕಾದರೆ

ಸಾಮೂಹಿಕ ನೀರಾವರಿ ಬಾವಿಗಳನ್ನು ತೋಡುವುದರಿಂದ ಸಾಧ್ಯ ಎನ್ನತಕ್ಕದ್ದು ರುಜುವಾತಾಗಿದೆ. ಇದರ ಬಗ್ಗೆ ಕಾರ್ಯದರ್ಶಿಗಳನ್ನು ಕೇಳಿ, ಅವರು ಮೈಸೂರಿನಲ್ಲಿ ಡಿವಿಷನಲ್ ಕಮಿಷನರ್ ಆಗಿದ್ದಾಗ, ನಾಗಮಂಗಲ ತಾಲ್ಲೂಕಿನಲ್ಲಿ ಅಡೇನಹಳ್ಳಿ ಗ್ರಾಮದಲ್ಲಿ 20 ಸಾವಿರ ರೂಪಾಯಿ ಖರ್ಚು ಮಾಡಿ ಒಂದು ಬಾವಿ ತೋಡಿ, ಅದರಲ್ಲಿ 26 ಎಕರೆ ಸಾಗುವಳಿ ಮಾಡುತ್ತಿದ್ದಾರೆ. ವರ್ಷಕ್ಕೆ ಎರಡು ಬೆಳೆ ತೆಗೆಯುತ್ತಿದ್ದರು. ಅವರು ಇದು ನಿಜವಾದ ಗ್ರೀನ್ ರೆವಲ್ಯೂಷನ್ ಎಂದು ಹೇಳಿದರು. ಕೇಂದ್ರ ಸರ್ಕಾರದವರು ಒದಗಿಸಿದ ಹಣದಲ್ಲಿ 7-8 ಬಾವಿಗಳನ್ನು ತೆಗೆಯಬಹುದು. ಎಲ್ಲೆಲ್ಲಿ ಭೂಗರ್ಭದಲ್ಲಿ ಹೆಚ್ಚು ಜಲ ಇದೆ, ಎನ್ನುವುದನ್ನು ತಜ್ಞರಿಂದ ತಿಳಿದುಕೊಂಡು ಸಣ್ಣ ಹಿಡುವಳಿದಾರರಿಗೆ ಅನುಕೂಲವಾಗುವ ರೀತಿಯಲ್ಲಿ ಆರ್. ಆರ್. ಡಿ. ಇಲಾಖೆಯಿಂದ ತಿಳಿದು ಮಾತನಾಡುತ್ತಿದ್ದೇನೆ. ಅದನ್ನು ಹೆಚ್ಚಿನ ಪ್ರಮಾಣ ದಲ್ಲಿ ಒದಗಿಸಬೇಕು. ಕನಿಷ್ಠ ಪಕ್ಷ ಒಂದು ಪಂಚಾಯಿತಿಗೆ ಒಂದೆರಡು ಸಾಮೂಹಿಕ ನೀರಾವರಿ ಬಾವಿಗಳನ್ನು ಒದಗಿಸಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ, ನಾಗಮಂಗಲ ತಾಲ್ಲೂಕಿನ ಜನ ತಮಗೆ ಕೃತಜ್ಞತೆಯಿಂದ ಇರಬೇಕು, ತಾವು ಮಂತ್ರಿಗಳಾದ ಮೇಲೆ, ನಾಗಮಂಗಲ ತಾಲ್ಲೂಕಿಗೆ ಹೇಮಾವತಿ ಯೋಜನೆಯಿಂದ ನೀರನ್ನು ಕೊಡುತ್ತೇವೆ ಎಂದು ಘಂಟಾಘೋಷವಾಗಿ ಹೇಳಿದ್ದೀರಿ. ತಮಗೆ ಎಚ್ಚರಿಕೆಯನ್ನು ಹೇಳಿದ್ದೇನೆ, ನಿಮ್ಮ ಮಾತನ್ನು ನಡೆಸಿಕೊಂಡರೆ ನಿಮ್ಮನ್ನು ಜನತೆ ಪೂಜಿಸುತ್ತಾರೆ. ಹಾಗೆ ಏನಾದರೂ ಮಾಡದೆ ತುಮಕೂರು, ಹಳೆಯ ಮೈಸೂರು, ಅರಕಲಗೂಡು ಕಡೆಗೆ ತಿರುಗಿಸಿದರೆ ಅದಕ್ಕೆ ವ್ಯತಿರಿಕ್ತವಾದ ಪ್ರತಿಕ್ರಿಯೆ ವ್ಯಕ್ತಪಡಿಸುತ್ತೇವೆ. ನೀವು ನಿಮ್ಮ ಗೌರವವನ್ನು ಹೆಚ್ಚಿಸಿ ಕೊಳ್ಳುವುದರ ಜೊತೆಗೆ ನಮ್ಮ ಜನಕ್ಕೆ ಶಾಶ್ವತವಾದ ಒಳ್ಳೆಯ ಕೆಲಸ ಮಾಡಿ, ಪುಣ್ಯ ಕಟ್ಟಿಕೊಳ್ಳತಕ್ಕ ಕೆಲಸ ಮಾಡಿ.

ಒಂದು ಶಂಕೆ ಬಂದಿದೆ. ಅದಕ್ಕೋಸ್ಕರ ವ್ಯಕ್ತಪಡಿಸುತ್ತೇನೆ. ಹೇಮಾವತಿ ಯೋಜನೆ ಪ್ರಾರಂಭದಲ್ಲಿ ನಾಗಮಂಗಲ ಇತ್ತು, ತುಮಕೂರು ಜಿಲ್ಲೆಯ ಪ್ರಸ್ತಾಪ ಇರಲಿಲ್ಲ. ತಿಪಟೂರು ಸ್ನೇಹಿತರು ಕೆಲವರು ಅಲ್ಲಿ ನೀರು ಹರಿಯುವುದರಿಂದ ಅವರ ತೋಟ ಹಾಳಾಗಿ ಹೋಯಿತು, ನೀರು ಯಾತಕ್ಕೆ ಎಂದು ಹೇಳುತ್ತಾರೆ. ಮಾರ್ಕೋನಹಳ್ಳಿ ರಿಸರ್ವಾಯರ್‌ನಿಂದ ಕುಣಿಗಲ್ ತಾಲ್ಲೂಕಿನಲ್ಲಿ 40 ಸಾವಿರ ಎಕರೆಗೆ ನೀರು ದೊರೆತರೂ ಇನ್ನೂ ನೀರಿನ ದಾಹ ಇರುವುದು ನಮಗೆ ಅರ್ಥವಾಗುವುದಿಲ್ಲ. ನಮಗೆ ನೀರು ಕೊಟ್ಟು ಉಳಿದಿದ್ದನ್ನು ತೆಗೆದುಕೊಂಡು ಹೋಗಿ. ತುಮಕೂರು ಜಿಲ್ಲೆಯಲ್ಲಿ ಯೋಜನೆಯಲ್ಲಿ ಇಲ್ಲದೇ ಇರುವ ಕೆಲಸ ತೀವ್ರಗತಿಯಲ್ಲಿ ನಡೆಯುತ್ತಿದೆ. ಮೊದಲನೆಯದರ ಯೋಜನೆಯಲ್ಲಿ ಸೇರಿದ ಕೆಲಸ ನಿಧಾನವಾಗಿ ನಡೆಯುತ್ತಿದೆ. ತುಮಕೂರಿಗೆ ಕೊಡಿ, ಸಾಧ್ಯವಾದರೆ ಕೋಲಾರಕ್ಕೂ ಕೊಡಿ, ಆದರೆ ನಾಗಮಂಗಲ ತಾಲ್ಲೂಕಿಗೆ ನೀರನ್ನು ಒದಗಿಸಿ ಎನ್ನತಕ್ಕ ಮಾತನ್ನು ಇಲ್ಲಿ ಕೇಳಿಕೊಳ್ಳುತ್ತೇನೆ. ತಮ್ಮ ಪೂರ್ಣ ಪ್ರಭಾವವನ್ನು ಈ ವಿಚಾರದಲ್ಲಿ ಬೀರಬೇಕು ಮತ್ತು ಈ ವಿಚಾರದಲ್ಲಿ ಪೂರ್ಣ ಆಸಕ್ತಿ ವಹಿಸಬೇಕು. ತಾವು ನಾನು ಮೊದಲೇ ಹೇಳಿದ ಹಾಗೆ ರೈತ ಕುಟುಂಬಕ್ಕೆ ಸೇರಿದವರು, ರೈತರ ಕಷ್ಟಕಾರ್ಪಣ್ಯಗಳನ್ನು ಅರ್ಥಮಾಡಿಕೊಂಡಿರುವವರು ಆಗಿರುವುದರಿಂದ ತಮ್ಮ ಅವಧಿಯಲ್ಲಿ ಕೆಲಸಗಳನ್ನು ಮಾಡಬೇಕು. ನೀವು ಯಾವ ವಿಧವಾದ ದಾಕ್ಷಿಣ್ಯಕ್ಕೂ, ಅಂಜಿಕೆಗೂ ಗುರಿಯಾಗಬಾರದು. ಇತ್ತೀಚೆಗೆ ಅಂಜು ಬುರುಕರ ತರಹ ನಡೆದುಕೊಳ್ಳುತ್ತಿದ್ದೀರಿ ಎಂದು ಕೇಳಿದ್ದೇನೆ. ಮಣ್ಣಿನ ಮಗನಂತೆ ನಡೆದು ಕೊಳ್ಳಬೇಕು ಮತ್ತು ರೈತರ ಕಷ್ಟವನ್ನು ಪರಿಹರಿಸಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪ ಗೌಡ (ಶೃಂಗೇರಿ) :—ಮಾನ್ಯ ಅಧ್ಯಕ್ಷರೇ, ಈ ದಿವಸ ದೇಶದಲ್ಲಿ ಬಹಳ ಪ್ರಾಮುಖ್ಯವಾಗಿರತಕ್ಕಂಥ ಇಲಾಖೆ, ರೆವಿನ್ಯೂ ಇಲಾಖೆ. ಈ ಇಲಾಖೆಗೆ ಸಂಬಂಧಪಟ್ಟ

ಬೇಡಿಕೆ ನಮ್ಮ ಮುಂದೆ ಬಂದಿದೆ. ಇದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ನಮ್ಮ ರೆವಿನ್ಯೂ ಮಂತ್ರಿಗಳು ಸ್ವತಂತ್ರ ಬಂದಲಾಗಾಯಿತು ಈ ಸದನದ ಸದಸ್ಯರೂ ಆಗಿ, ಒಳ್ಳೆಯ ಅನುಭವಿಗಳೂ ಕೂಡ ಆಗಿದ್ದಾರೆ. ಶ್ರೀಮಾನ್ ಕೃಷ್ಣಪ್ಪನವರು ಹೇಳಿದ ಹಾಗೆ ರೈತ ಕುಟುಂಬದಲ್ಲಿ ಜನಿಸಿ ರೈತರ ಮಧ್ಯದಲ್ಲಿ ಬೆಳೆದಿರತಕ್ಕ ವ್ಯಕ್ತಿ ಅವರು. ಅವರಿಗೆ ಅನುಭವ ಬಹಳ ಚೆನ್ನಾಗಿ ಇದೆ. ಆದರೆ ಬಹಳ ಮೃದು ಸ್ವಭಾವ ಇರುವುದರಿಂದ ಆಡಳಿತದಲ್ಲಿ ಬಿಗಿ ತರುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಸ್ವಲ್ಪ ಮಟ್ಟಿಗೆ ಅವರು ಆಡಳಿತವನ್ನು ಉತ್ತಮಪಡಿಸತಕ್ಕ ಕಾರ್ಯದಲ್ಲಿ ತೊಡಗಿದ್ದಾರೆ. ಇತ್ತೀಚೆಗೆ ಅನೇಕ ತಾಲ್ಲೂಕು ಆಫೀಸ್‌ಗಳನ್ನು ಭೇಟಿಮಾಡಿ ಅಲ್ಲಿರುವ ರಿಕಾರ್ಡ್‌ಗಳನ್ನು ಈಚೆಗೆ ತೆಗೆಸಿದ್ದಾರೆ. ಒಮ್ಮೊಮ್ಮೆ ನಮ್ಮನ್ನೂ ಕೂಡ ಕರೆದುಕೊಂಡು ಹೋಗಿ ಬೀರುಗಳ ಬಾಗಿಲನ್ನು ತೆಗೆಸಿ ಕೆಲವು ರಿಕಾರ್ಡ್‌ಗಳನ್ನು ತೆಗೆಸಿದ್ದನ್ನು ನೋಡಿದ್ದೇನೆ. ಆದುದರಿಂದ ಅನುಭವ ಸಾಕಷ್ಟು ಚೆನ್ನಾಗಿ ಇದೆ ಎನ್ನುವುದರಲ್ಲಿ ಅನುಮಾನವಿಲ್ಲ. ಎಚ್.ಟಿ. ಕೃಷ್ಣಪ್ಪನವರು ಅವರಿಗೆ ನೆಂಟರು ಆಗಬೇಕೆಂದು ಕಾಣುತ್ತದೆ, ಸೇಡಿನ ಮನೋಭಾವ ಇದೆ ಎಂದು ಹೇಳಿದರು. ಏನು ಸೇಡೋ ಗೊತ್ತಿಲ್ಲ. ಅವರದು ಮೃದು ಸ್ವಭಾವ, ಯಾರ ಮನಸ್ಸನ್ನೂ ನೋಯಿಸಬಾರದೆಂದು ಕೆಲಸ ಮಾಡುತ್ತಾರೆ. ಅವರಿಂದ ಸ್ವಲ್ಪ ಕಷ್ಟವಾಗುತ್ತಿದೆ. ಅನೇಕ ವಿಷಯಗಳನ್ನು ಹೊಸದಾಗಿ ಜಾರಿಗೆ ತರಬೇಕಾಗುತ್ತದೆ. ಅದರ ಬಗ್ಗೆ ಸಲಹೆಗಳನ್ನು ನೀಡಬೇಕಾಗುತ್ತದೆಂದು ಆಶಿಸುತ್ತೇನೆ. ಮೊದಲನೆಯದಾಗಿ ಆಡಳಿತ ಬಹಳ ಬಿಗಿಯಾಗಿರಬೇಕು, ಬಿಗಿಯಾಗಿ ಇರಬೇಕಾದರೆ ಅಧಿಕಾರಿಗಳ ಬದಲಾವಣೆಯಲ್ಲಿ ರಾಜಕೀಯ ಬರಬಾರದು. ಒಬ್ಬ ಅಧಿಕಾರಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹಾಕಿದಲೆ ಕನಿಷ್ಠ 2 ವರ್ಷಗಳ ಕಾಲ ಒಂದೇ ಕಡೆಯಲ್ಲಿ ಇರುವುದಕ್ಕೆ ಅವಕಾಶ ಇರಬೇಕು. ಯಾರಾದರೂ ಸರಿಯಾಗಿ ಕೆಲಸ ಮಾಡದೇ ಇದ್ದರೆ ಅವರಿಗೆ ಸೂಕ್ತ ಬುದ್ಧಿ ಹೇಳಬೇಕು. ಮಿತಿ ಮೀರಿದರೆ ಕ್ರಮ ತೆಗೆದುಕೊಳ್ಳಬಹುದು. ಕೆಲವು ಸಂದರ್ಭದಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದರೂ ಕೂಡ, ನಾವು ಹೇಳಿದ ಹಾಗೆ ಕೇಳುವುದಿಲ್ಲ, ಕೆಲಸ ಮಾಡುವುದಿಲ್ಲ ಎಂದು ಹೇಳಿದಾಗ ಬದಲಾವಣೆ ಆಗಿರತಕ್ಕ ಸನ್ನಿವೇಶಗಳೂ ಇವೆ. ನಮ್ಮಲ್ಲಿ ಒಬ್ಬರು ಡೆಪ್ಯುಟಿ ಕಮಿಷನರ್ ತಾವು ಹಾಕಿದ್ದೀರಿ, ಅವರ ಬಗ್ಗೆ ಇಪತ್ತು ಹಳ್ಳಿಗಳಲ್ಲಿ ಹೋದರೂ ಕೂಡ ಅಂಥ ಅಧಿಕಾರಿಗಳು ಇನ್ನೂ ಒಂದೆರಡು ವರ್ಷಗಳ ಕಾಲ ಇರಬೇಕಾಗಿತ್ತು ಎಂದು ಸಾಮಾನ್ಯ ಜನ ಹೇಳುತ್ತಾರೆ. ಆದರೆ ಕಾರಣಾಂತರದಿಂದ ತಾವು ಬದಲಾವಣೆ ಮಾಡಿದಿರಿ. ನನಗೆ ವ್ಯಥೆಯಿಲ್ಲ, ಈಗ ಬಂದಿರತಕ್ಕವರ ಮೇಲೆ ನನ್ನ ದೂರು ಇಲ್ಲ. ನೀತಿಯೊಳಗೆ ನೀವು ಸ್ವಲ್ಪ ನಿರ್ದಿಷ್ಟವಾಗಿ ಇದ್ದರೆ, ಅಧಿಕಾರಿಗಳು ಕೆಲಸ ಮಾಡುವುದಕ್ಕೆ ಧೈರ್ಯ ಬರುತ್ತದೆ. ಇಲ್ಲದೇ ಹೋದರೆ ದಿನವಹಿ ನಾವು ಹೋಗಿ ಹೇಳಿದ್ದನ್ನು ಮಾಡಬೇಕು, ಇಲ್ಲದೇ ಹೋದರೆ ಬದಲಾವಣೆ ಮಾಡುತ್ತೇವೆ ಎಂದರೆ ಸಾಮಾನು ಸರಂಜಾಮು ಹೊತ್ತುಕೊಂಡು ಹೋಗಬೇಕು. ಅವರು ಹೇಳಿದ್ದನ್ನು ಮಾಡೋಣ ಎನ್ನುವ ಮನೋಭಾವನೆ ಬೆಳೆದ ಅಧಿಕಾರಿಗಳ ಬಿಗಿ ಹೋಗಿ ಅವರು ಆಡಳಿತ ದಕ್ಷತೆಯನ್ನು ತೋರಿಸುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಇದರಲ್ಲಿ ಮಾನ್ಯ ಸಚಿವರು ಬಹಳ ಬಿಗಿ ಮುಷ್ಟಿಯಿಂದ ಇರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಈ ದರಖಾಸ್ತು ಕಮಿಟಿ ವಿಷಯ. ದರಖಾಸ್ತು ಕಮಿಟಿ ಮಾಡುವಾಗ ನಾನು ತಮಗೆ ಸಲಹೆಗಳನ್ನು ನೀಡಿದೆ. ಅದಕ್ಕೆ ಸ್ವಲ್ಪ ಹೆಚ್ಚಿನ ಅಧಿಕಾರ ಕೊಡಬೇಕು. ಸರ್ಕಾರದವರು ಸಂಸಾರಗಳಿಗೆ ಎಷ್ಟೋ ಜಮೀನು ಕೊಡಬೇಕೆಂದು ಇದ್ದಾರೋ ಅದನ್ನು ನಾವು ಅಪ್ರೂವ್ ಮಾಡಿದ್ದರೂ ತಹಶೀಲ್ದಾರರು ತಕ್ಷಣ ಸಾಗುವಳಿ ಚೀಟಿ ಇಶ್ಯು ಮಾಡುವುದು ಈ ರೀತಿ ಮಾಡಿದರೆ ಮಾತ್ರ ಕಾರ್ಯ ಬಹಳ ಸುಲಭವಾಗುತ್ತದೆ. ಕಾರಣಾಂತರದಿಂದ ಸೆಕ್ರೆಟರಿಯೇಟ್‌ನಲ್ಲಿ ಮೊದಲೇ ಬೆಳೆದುಕೊಂಡು ಬಂದ ವಾತಾವರಣ ಇರುತ್ತದೆ. ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಇರಲಿ ಎನ್ನುವ ಮನೋಭಾವನೆ ಇರುತ್ತದೆಂದು ಕಾಣುತ್ತದೆ. ಆದುದರಿಂದ ಸ್ವಾಭಾವಿಕವಾಗಿ ಕಮಿಟಿ ಮಾಡಿದಾಗ ಅಂಥ ಅಧಿಕಾರ ಕೊಡಲಿಲ್ಲ.

(Mr. Deputy Speaker in the Chair)

ಆಕಾರ ಕಂಡು ಬಂಜರು ಜಮೀನು ಇದ್ದರೆ ತಹಶೀಲ್ದಾರರು 4,5 ಎಕರೆವರೆಗೆ ಕೊಡುವ ಅವಕಾಶ ಇದೆ. ಆಕಾರ ಕಂಡ ಜಮೀನನ್ನು ಅಲ್ಲದೆ ಬೇರೆ ಜಮೀನು ಇದ್ದರೆ, ಗೋಮಾಳ ಇದ್ದರೆ ಕನ್‌ವರ್‌ಷನ್‌ಗೆ ಒಂದು ಎಕರೆ ಆದರೂ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್ ಅಥವಾ ಡೆಪ್ಯುಟಿ ಕಮಿಷನರ್‌ರವರಿಗೆ. ಸ್ಪೆಷಲ್ ಅ ಸಿ ಸ್ಟೆಂ ಟ್ ಕಮಿಷನರ್‌ರವರನ್ನು ಕೇಳುವುದಕ್ಕೆ ಹೋದರೆ ಅವರು ಅದನ್ನು ಪೂರ್ತಿ ತಳ್ಳಿ ಹಾಕುತ್ತಾರೆ. ಕೆಲವು ಅಧಿಕಾರಿಗಳು ಮೊದಲು ಸರಿಯಾಗಿ ಕೆಲಸ ಮಾಡಿ ರಿಟೈರ್ ಆಗುವ ಕಾಲದಲ್ಲಿ ಅವರ ಮನಸ್ಸು ಬದಲಾವಣೆಯಾಗುತ್ತದೆ. ಅವರ ಹತ್ತಿರ ಹೋಗಿ ದರಖಾಸ್ತು ರಿಕಾರ್ಡು ಹೋದರೆ ಅವರು ಅನಾವಶ್ಯಕವಾಗಿ ಅದನ್ನು ವಾಪಸು ಹಾಕುವುದು ಈ ರೀತಿ ನಡೆಯುತ್ತಿದೆ. ಹೀಗಾದರೆ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕೆಂದು ಹೊರಟರೂ ಕೂಡ ಯಾವುದೋ ಒಂದು ರೂಪದಲ್ಲಿ ಕೇಂದ್ರೀಕರಣ ಆಗುವುದು ಪರಿಶೀಲನೆ ಮಾಡಿದಾಗ ಅರ್ಥವಾಗುತ್ತದೆ. ಇದನ್ನು ಆದಷ್ಟು ಬೇಗ ಸರಿಪಡಿಸಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಸರ್ಕಾರಿ ಜಮೀನು ಅಕ್ರಮ ಪ್ರವೇಶದ ಸಾಕಷ್ಟು ಹೇಳಿದ್ದೇನೆ. ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ನಲ್ಲಿ ಪ್ಲಾಂಟೇಷನ್ ಏನು ಇವೆ, ಅಲ್ಲಿ ಸಾವಿರಾರು ಎಕರೆ ಆಕ್ರಮಣವಾಗಿದೆ, ಯಾರು ಕೂಡ ಕರೆಕ್ಟ್ ಆಗಿ ಅದನ್ನು ಸರ್ವೆ ಮಾಡಿದ್ದಾರೆ ಎಂಬ ನಂಬಿಕೆ ನನಗೆ ಬ ೦ ದಿ ಲ್ಲ. ಕೆಲವು ಕಡೆ ಬೇಲಿ ಹಾಕಿರುವುದನ್ನು ನೋಡಿದಾಗ 200 ಎಕರೆ ಇದ್ದರೆ 500 ಎಕರೆಗೆ ಬೇಲಿ ಹಾಕಿರುತ್ತಾರೆ. 130 ಎಕರೆ ಇರುವ ಕಡೆ 240 ಎಕರೆ, 90 ಎಕರೆ ಇರುವ ಕಡೆ 130 ಎಕರೆ, 400 ಎಕರೆ ಇರುವ ಕಡೆ ಸಾವಿರ ಎಕರೆ ಸರ್ವೇ ಆದಾಗ ಸಿಕ್ಕಿದೆ. ಹೀಗೆ ಕೆಲವು ಕಡೆ ಆಗಿದೆ. ಹಿಂದೆ ಒಬ್ಬ ಡೆಪ್ಯುಟಿ ಕಮಿಷನರ್ 30 ಜನರು ಸರ್ವೆಯರನ್ನು ಕೊಡಿ, 10 ಸೂಪರಿಂಟೆಂಡೆಂಟ್ಸ್ ಕೊಡಿ, 10 ಜೀಪ್‌ಗಳನ್ನು ಕೊಡಿ, ಕೋಟಿ, ಕೋಟಿಗಟ್ಟಲೆ ಉತ್ಪತ್ತಿ ಸರಕಾರಕ್ಕೆ ತೋರಿಸಿಕೊಡುತ್ತೇನೆ ಎಂದು ಒಂದು ರಿಪೋರ್ಟ್ ಮಾಡಿದ್ದರು. ನಾನು ಕೂಡ ಚೀಫ್ ಮಿನಿಸ್ಟರ್‌ರವರಿಗೆ ಹೇಳಿ ಅವರು ಒಂದು ಮಿನಿಟ್ ಕೂಡ ಕಳುಹಿಸಿ ಕೊಟ್ಟರು.

ನಾವು ಒಂದೊಂದು ಸಣ್ಣ ವಿಷಯದಲ್ಲಿ ರೈತರಿಗೆ ತೊಂದರೆ ಕೊಡುತ್ತಿದ್ದೇವೆಯೋ ಹೊರತು ಲಕ್ಷಗಟ್ಟಲೆ, ಕೋಟಿಗಟ್ಟಲೆ ರೆವಿನ್ಯೂ ಇನ್‌ಕಂ ಕಡೆ ನಿಗಾ ಕೊಟ್ಟಿಲ್ಲ. ಒಂದು ಕಡೆ ಅಕ್ರಮ ಸಾಗುವಳಿ ಅವರಿಗೆ ಎಕ್ಸೈಜ್ ಟ್ಯಾಕ್ಸ್ ಇಲ್ಲ, ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಇಲ್ಲ. ಅದನ್ನು ಲೆಕ್ಕ ಹಾಕುವುದಕ್ಕೆ ಅವಕಾಶ ಇಲ್ಲದೇ ಹೊರಟು ಹೋಗುತ್ತಿದೆ. ಇದಕ್ಕೆ ಎಷ್ಟೇ ಖರ್ಚಾದರೂ ಪರವಾಯಿಲ್ಲಾ, ಇದಕ್ಕೆ ಒಂದು ಸ್ಪೆಷಲ್ ಸ್ಕ್ವಾಡ್ ಹಾಕಿ ಸರ್ಕಾರಿ ಜಮೀನನ್ನು ಎಲ್ಲೆಲ್ಲಿ ಅಕ್ರಮ ಸಾಗುವಳಿ ಮಾಡುತ್ತಿದ್ದಾರೋ ಅದನ್ನು ಕಂಡುಹಿಡಿಯಬೇಕು ಎಂದು ಹೇಳುತ್ತೇನೆ.

ಇನ್ನು ಅನೇಕ ಹೌಸ್ ಸೈಟ್‌ಗಳನ್ನು ಮಾಡುತ್ತಿದ್ದಾರೆ. ಅಕ್ರಮ ಸಾಗುವಳಿ ಜಮೀನು ಮಾಡುತ್ತಾ ಇರುವಂಥ ಕಡೆಯಲ್ಲಿ ಮತ್ತು ರಸ್ತೆ ಪಕ್ಕದಲ್ಲಿರುವ ಸರ್ಕಾರದ ಜಾಗದಲ್ಲಿ ಹೌಸ್ ಸೈಟ್‌ಗಳನ್ನು ಮಾಡುತ್ತಿದ್ದಾರೆ. ತಾಲ್ಲೂಕು ಅಧಿಕಾರಿಗಳು ಹೋಗಿ ನೋಡಿದರೂ ಕೂಡ ಎಷ್ಟೋ ಸೈಟ್‌ಗಳಲ್ಲಿ ರಾತ್ರೋ ರಾತ್ರಿ ಬೆಳಗಾಗುವುದರೊಳಗೆ ಮನೆ ಕಟ್ಟಿಕೊಂಡಿರುತ್ತಾರೆ. ತಾಲ್ಲೂಕು ಅಧಿಕಾರಿಗಳು ಅವರ ಹತ್ತಿರ ಹೋಗಿ ನಿಮ್ಮ ಸಾಗುವಳಿ ಚೀಟಿ ತೆಗೆಯಿರಿ ಎಂದು ಅವರನ್ನು ಮಾತನಾಡಿಸುವುದೇ ಇಲ್ಲ. ಇದನ್ನು ಕಟ್ಟುವುದಕ್ಕೆ ತಹಸೀಲ್ದಾರರು ಕೊಟ್ಟಿದ್ದಾರೋ ಅಥವಾ ಡೆಪ್ಯುಟಿ ಕಮಿಷನರೇ ಕೊಟ್ಟಿದ್ದಾರೋ ಗೊತ್ತಿಲ್ಲ. ರಸ್ತೆ ಪಕ್ಕದಲ್ಲಿರುವ ಸರ್ಕಾರಿ ಜಾಗದಲ್ಲಿ ಸಾವಿರಾರು ಸೈಟುಗಳು ಮಾಡಿ ಅಕ್ರಮವಾಗಿ ಮನೆ ಕಟ್ಟಿಕೊಂಡಿರುತ್ತಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳು ತೀವ್ರವಾಗಿ ಆಕ್ಷನ್ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಒಂದು ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಈ ರೀತಿ ಅಕ್ರಮವಾಗಿ ಕಟ್ಟಿದಂಥ ಒಂದು ಮನೆಯನ್ನು ಒಡೆಸಿಬಿಟ್ಟರು. ಆದರೆ ಈ ಮನೆ ಕಟ್ಟಿಕೊಳ್ಳುವುದಕ್ಕೆ ಕಾರಣರು ಯಾರು ಎಂದು ತಿಳಿದು ಆಯಾಯ ಪ್ರಾಂತದ ಅಧಿಕಾರಿಗಳ ಮೇಲೆ ಆಕ್ಷನ್ ತೆಗೆದುಕೊಂಡರೆ ? ಸರ್ಕಾರದ ಜಮೀನುಗಳನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಾ ಇದ್ದರೂ ಕೂಡ ತಾಲ್ಲೂಕು ಅಧಿಕಾರಿಗಳಾಗಲಿ, ಹೋಬಳಿ ಅಧಿಕಾರಿಗಳಾಗಲಿ ಆ ಜಮೀನಿಗೆ ಬಂದು ನೋಡುವ ಮನೋಭಾವ ಇಲ್ಲದೇ ಇರುವುದರಿಂದ ಎಷ್ಟೋ ಮನೆಗಳನ್ನು ಅನ್ಆಥರೈಸ್ಡ್ ಆಗಿ ಕಟ್ಟಿಕೊಳ್ಳಲು ಸಾಧ್ಯವಾಗಿದೆ.

ಇನ್ನು ಸರ್ವೇಯರ್ ಬಗ್ಗೆ ಹೇಳುವುದಾದರೆ ಅದರಲ್ಲೂ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಮೂಡಿಗೆರೆ ಮತ್ತು ಮಲಂದೂರು ಪ್ರದೇಶದ ಸರ್ವೇಯರುಗಳು ಒಂದೇ ಕಡೆ 8–10 ವರ್ಷದಿಂದ ಇದ್ದಾರೆ. ಸಾಮಾನ್ಯವಾಗಿ ಅಧಿಕಾರಿಗಳು ಒಂದೇ ಸ್ಥಳದಲ್ಲಿ 3 ವರ್ಷದ ಮೇಲೆ ಇರುವ ಹಾಗೆ ಇಲ್ಲ. ಈ ಬಗ್ಗೆ ನಾನೇ ಶೃಂಗೇರಿಯಲ್ಲಿದ್ದ ಒಬ್ಬ ಸರ್ವೇಯರನ್ನು ವರ್ಗಾಯಿಸಲು ಹೇಳಿ ವರ್ಗ ಮಾಡಿದಾಗ ಆತನು ಮೇಲಾಧಿಕಾರಿಗಳ ಹತ್ತಿರ ಹೋಗಿ ಟ್ರಾನ್ಸ್‌ಫರ್ ಆರ್ಡರನ್ನು ಕ್ಯಾನ್ಸಲ್ ಮಾಡಿಸಿಕೊಂಡು ಬಂದನು. ಅನಂತರ ಅವನು ಹೇಳಿದ್ದನ್ನು ವೀರಪ್ಪ ಗೌಡರು ಟ್ರಾನ್ಸ್‌ಫರ್ ಮಾಡಿಸಿದ್ದು ಏನೂ ಪ್ರಯೋಜನವಾಗಲಿಲ್ಲ, ನನಗೆ 500 ರೂಪಾಯಿಗಳು ಖರ್ಚಾಯಿತು ಅಷ್ಟೆ ಎಂದು ಬಹಿರಂಗವಾಗಿ ಹೇಳಿಕೊಂಡು ತಿರುಗುತ್ತಾನೆ. ಈ ಬಗ್ಗೆ ನಾನು ವಿಜಿಲೆನ್ಸ್ ಕಮಿಷನರಿಗೆ ಕಾಗದ ಬರೆದೆ. ಈ ಅಧಿಕಾರಿಗಳ ಮೇಲೆ ಅವರಿಗೆ ಕಂಟ್ರೋಲ್ ಇದೆಯೋ ಇಲ್ಲವೋ ಗೊತ್ತಿಲ್ಲ. ಆದುದರಿಂದ ಇದನ್ನು ಸರಿಪಡಿಸುವುದು ಅಗತ್ಯ ಎಂದು ಹೇಳುತ್ತೇನೆ.

ಇನ್ನು ಕನ್‌ಸಾಲಿಡೇಟ್ ಫಂಡ್ ಎಂದು ಮುಜರಾಯಿ ಇಲಾಖೆಯಲ್ಲಿ ಮಾಡಿಕೊಂಡಿದ್ದಾರೆ. ರಾಜ್ಯದಲ್ಲಿ 10-15 ಲಕ್ಷ ರೂಪಾಯಿ ಮುಜರಾಯಿ ನಿಧಿ ಇದ್ದು ಅದರಲ್ಲಿ ಶ್ರೀಶೈಲದಲ್ಲಿ ಕಟ್ಟಡ ಕಟ್ಟಿಸಬೇಕೆಂದು ಮಾಡಿದ್ದಾರೆ. ಹಿಂದಿನ ಸರ್ಕಾರ ಇದೇ ರೀತಿ ಆ ಹಣದಲ್ಲಿ ಬಾಕಿ ನಮ್ಮ ರಾಜ್ಯದ ಕ್ಷೇತ್ರಗಳಲ್ಲಿ ಕಟ್ಟಡವನ್ನು ಕಟ್ಟುವುದಕ್ಕೆ ಕೈ ಹಾಕಿಲ್ಲ. ಇದರಲ್ಲಿ ಯಾರು ಅಧಿಕಾರದಲ್ಲಿ ಇರುತ್ತಾರೋ ಅವರವರ ಇಷ್ಟದಂತೆ ಉಪಯೋಗಿಸುತ್ತಾರೆ. ನಾನು ಶ್ರೀಶೈಲದಲ್ಲಿ ಕಟ್ಟಡವನ್ನು ಕಟ್ಟುವುದು ತಪ್ಪು ಎಂದು ಹೇಳುವುದಿಲ್ಲ. ಅದೇ ರೀತಿ ಬೇರೆ ಕಡೆಗೂ ಗಮನ ಕೊಡಬೇಕು. ದೊಡ್ಡ ದೇವಸ್ಥಾನವಾದ ಶೃಂಗೇರಿ, ಕಿಗ್ಗದ ಋಷ್ಯಶೃಂಗ ದೇವಾಲಯವನ್ನು ದುರಸ್ತಿ ಮಾಡಿಸಬೇಕು ಎಂದು ಹೇಳುತ್ತೇನೆ.

ಇನ್ನು ವಿಲೇಜ್ ಅಕೌಂಟೆಂಟ್ಸ್ ಬಗ್ಗೆ ಹೇಳುವುದಾದರೆ ಹಳೇ ಶ್ಯಾನುಭೋಗರುಗಳನ್ನು ತೆಗೆದು ಅವರ ಜಾಗಕ್ಕೆ ಇವರನ್ನು ತೆಗೆದುಕೊಂಡಿದ್ದೀರಿ. ಹಳೇ ಶ್ಯಾನುಭೋಗರಲ್ಲಿ ಭಯ, ಭಕ್ತಿ ಇತ್ತು. ಇವರಲ್ಲಿ ಅದು ಇಲ್ಲವೇ ಇಲ್ಲ. ಇವರು ಈಗ ಹಳೇ ಶ್ಯಾನುಭೋಗರಿಗಿಂತಲೂ ಬಹಳ ಚತುರರಾಗಿದ್ದಾರೆ. ಹಳೇ ಶ್ಯಾನುಭೋಗರನ್ನು ತೆಗೆದು ಇವರನ್ನು ಹಾಕಿದರೆ ಕೆಲಸ ಚೆನ್ನಾಗಿ ನಡೆಯಬಹುದು ಎಂದು ಏನು ಯೋಚನೆ ಮಾಡಿದ್ದೀರಿ,ಅದು ಈಗ ಮೊದಲು ಇದ್ದುದಕ್ಕಿಂತಲೂ ವರ್ಸ್ಟ್ ಆಗಿದೆ ಎಂದು ಹೇಳಬಹುದು. ಅವರು ಒಂದು ಕಡೆ ಪಂಚಾಯಿತಿ ಸೆಕ್ರೆಟರಿ ಆಗಿದ್ದಾರೆ. ಇನ್ನೊಂದು ಕಡೆ ರೆವಿನ್ಯೂ ಅಕೌಂಟೆಂಟ್ ಆಗಿದ್ದಾರೆ. ಯಾವುದಾದರೂ ಕೆಲಸ ಇವರ ಹತ್ತಿರ ಹೋಗಬೇಕಾದರೆ ಇವರು ಕೈಗೇ ಸಿಕ್ಕುವುದಿಲ್ಲ. ಪಂಚಾಯಿತಿ ಚೇರ್ಮನ್ ಹೋಗಿ ಕೇಳಿದರೆ ಬಿ.ಡಿ.ಓ. ಹತ್ತಿರ ಹೋಗಿದ್ದಾರೆ, ಎಂದು ಹೇಳುತ್ತಾರೆ. ಆಮೇಲೆ ಬಿ.ಡಿ.ಓ. ಹೋಗಿ ಕೇಳಿದರೆ ಪಂಚಾಯಿತಿ ಚೇರ್ಮನ್ ಯಾವುದೋ ಕೆಲಸ ಹೇಳಿದ್ದರು, ಅಲ್ಲಿಗೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಹೀಗೆ ಅವರು ಇವರ ಮೇಲೆ, ಇವರು ಅವರ ಮೇಲೆ ಹೇಳುತ್ತಾರೆ. ಹೀಗಾಗಿ ಅವರು ಕೈಗೇ ಸಿಕ್ಕುವುದಿಲ್ಲ. ಒಂದು ಸಾರಿ ಡಿಸ್ಟ್ರಿಕ್ಟ್ ಡೆವೆಲಪ್‌ಮೆಂಟ್

ಕೌನ್ಸಿಲ್‌ನಲ್ಲಿ ಬಿ.ಡಿ.ಓ. ಸರ್ಟಿಫಿಕೇಟ್ ಬಂದಮೇಲೆ ಸಂಬಳ ಕೊಟ್ಟರೆ ಒಳ್ಳೆಯದು ಎಂದು ಮಾಡಿದರು. ಇತ್ತೀಚೆಗೆ ತಹಸೀಲ್ದಾರರು ಅವರು ಸರ್ಟಿಫಿಕೇಟ್ ಕೊಟ್ಟರೆ ನಾವು ಸಂಬಳ ಕೊಡಬೇಕಾಗಿದೆ, ನನ್ನ ಅಧಿಕಾರ ಮೊಟಕಾಗುತ್ತದೆ ಎಂದು ತಿಳಿದುಕೊಂಡು ಈ ಪದ್ಧತಿಯನ್ನು ಬದಲಾಯಿಸಬೇಕು ಎಂದು ಕೇಳುತ್ತಿದ್ದಾರೆ. ಇದನ್ನು ಆದಷ್ಟು ಬೇಗ ಬಿ.ಡಿ.ಓ. ಸರ್ಟಿಫಿಕೇಟ್ ಮಾಡಿ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ನಮ್ಮ ಮಲೆನಾಡಿನಲ್ಲಿ ಸೊಪ್ಪಿನ ಬೆಟ್ಟ ಅಂತ ಇದೆ. ಸೊಪ್ಪಿನ ಬೆಟ್ಟ ಎಂದರೆ ರೈತರಿಗೆ ಸಾಗುವಳಿಗೆ ಬೇಕಾದಂಥ ಸೊಪ್ಪನ್ನು ಉಪಯೋಗಿಸಿಕೊಳ್ಳಬಹುದು, ಅಲ್ಲದೆ ಮಳೆಗಾಲದಲ್ಲಿ ವಿಪರೀತ ಮಳೆ ಬಂದು ಮಣ್ಣು ಕೊಚ್ಚಿಕೊಂಡು ಹೋದರೆ ಅಂಥಾ ಸಂದರ್ಭದಲ್ಲಿ ಅದನ್ನು ತಡೆಹಿಡಿಯಲು ಈ ಸೊಪ್ಪಿನ ಬೆಟ್ಟ ತಡೆಯಾಗಿ ಇರುತ್ತದೆ. ಇನ್ನು ಕಣಮನೆ ಅಂತ ಇದೆ. ಕಣಮನೆ ಎಂದರೆ ವ್ಯವಸಾಯದ ಮನೆ. ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಅದರ ವಿವರ ಹೇಳುತ್ತೇನೆ. ಒಂದು ಸಂಸಾರ ಇರುತ್ತದೆ. ಆ ಸಂಸಾರದಲ್ಲಿ ಇಬ್ಬರು ಅಣ್ಣ ತಮ್ಮಂದಿರು ಇರುತ್ತಾರೆ. ಒಂದು ಸಂಸಾರಕ್ಕೆ ಅವರ ಜಮೀನಿನ ಪಕ್ಕದಲ್ಲೇ ಸೊಪ್ಪಿನ ಬೆಟ್ಟ ಇರುತ್ತದೆ. ಸೊಪ್ಪಿನ ಬೆಟ್ಟ ಎಂದರೆ ಒಂದು ಗುಡ್ಡ. ಆ ಗುಡ್ಡದಲ್ಲಿ ವ್ಯವಸಾಯಕ್ಕೆ ಬೇಕಾದ ಸೊಪ್ಪನ್ನು ಕಡಿದು ತಮ್ಮ ಜಮೀನಿಗೆ ಬಳಸಿಕೊಳ್ಳುತ್ತಾರೆ ಮತ್ತು ಅದೇ ಬೆಟ್ಟ ರೈತನ ಜಮೀನಿಗೆ ನೀರು ನುಗ್ಗದಂತೆ ತಡೆಯಾಗಿರುತ್ತದೆ. ಆಗ ಅಣ್ಣ ತಮ್ಮಂದಿರು ಹಿಸ್ಸೆ ಮಾಡಿಕೊಳ್ಳುತ್ತಾರೆ ಎಂದು ಇಟ್ಟುಕೊಳ್ಳೋಣ. ಹಿಸ್ಸೆ ಮಾಡಿಕೊಂಡಾಗ ಇರುವ ಒಂದು ಮನೆ ಒಬ್ಬನಿಗೆ ಬರುತ್ತದೆ. ಮತ್ತೊಬ್ಬನು ಎಲ್ಲಿಗೆ ಹೋಗಬೇಕಾಗುತ್ತದೆ ? ಆ ಸಂಸಾರದಲ್ಲಿ ಇರತಕ್ಕಂಥಾದ್ದು ಒಂದೇ ಮನೆ. ಆದುದರಿಂದ ಅವನು ಇನ್ನೊಬ್ಬನಿಗೆ ಮನೆ ಬೇರೆ ಮಾಡಿಕೊಳ್ಳಲು ನಿರ್ಧಾರವಾಗುತ್ತೆ. ಅವನು ಹೋಗಿ ಸೊಪ್ಪಿನ ಬೆಟ್ಟದಲ್ಲಿ ಅಲ್ಲಿ ಮನೆ ಕಟ್ಟಿಕೊಳ್ಳಬೇಕು. ಅದು ಸರ್ಕಾರಿ ಜಮೀನು. ಆ ಸರ್ಕಾರಿ ಸೊಪ್ಪಿನ ಬೆಟ್ಟದಲ್ಲಿ ಮನೆ ಕಟ್ಟಿಕೊಳ್ಳಕೂಡದು ಎಂದು ರಿಸ್ಟ್ರಿಕ್ಷನ್ ಹಾಕಿರುತ್ತೀರಿ. ಹೀಗಿರುವುದರಿಂದ ಆ ಬಡಪಾಯಿ ಎಲ್ಲಿಗೆ ಹೋಗಬೇಕು, ಅವನು ನಿರ್ಗತಿಕನಾಗುತ್ತಾನೆ. ಇದನ್ನು ಯೋಚನೆ ಮಾಡಿ. ಆದುದರಿಂದ ಈ ಸೊಪ್ಪಿನ ಬೆಟ್ಟದ ಬಗ್ಗೆ ಇರುವ ರಿಸ್ಟ್ರಿಕ್ಷನ್ ಏನು ಇದೆಯೋ ಅದನ್ನು ಪಕ್ಕದ ರೈತ ಮನೆ ಕಟ್ಟಿಕೊಳ್ಳಲು ಬಗೆಹರಿಸಬೇಕು ಎಂದು ಹೇಳುತ್ತೇನೆ.

ಇನ್ನೊಂದು ಕಡೆ ನೋಡಿದರೆ ಸರ್ಕಾರದ ರೆವಿನ್ಯೂ ಲ್ಯಾಂಡ್ಸ್ ಏನು ಇದೆ ಅದು ಪ್ರಯೋಜನಕ್ಕೆ ಬಾರದೆ ಹಾಗೆಯೇ ಇದೆ. ಮತ್ತೊಂದು ಕಡೆ ಫಾರೆಸ್ಟ್ ಲ್ಯಾಂಡ್ ಇದೆ. ಈವೊತ್ತು ದೇಶದಲ್ಲಿ ಆಹಾರ ಪರಿಸ್ಥಿತಿ ದುಃಸ್ಥಿತಿ ಇಲ್ಲದಿರುವ ಕಾರಣ ಜಮೀನಿನ ಲ್ಯಾಂಡ್ ಲಾರ್ಡ್ಸ್ ಹತ್ತಿರ ಜಮೀನು ತೆಗೆದುಕೊಂಡು ಜಮೀನು ಹಂಚತಕ್ಕ ಕಾಲದಲ್ಲಿ ಫಾರೆಸ್ಟ್‌ನಲ್ಲಿರತಕ್ಕಂಥಾ ಸರ್ಕಾರದ ಜಮೀನುಗಳನ್ನು ಬಿಟ್ಟುಕೊಡುವುದಿಲ್ಲ ಎನ್ನುವ ಅಭಿಪ್ರಾಯ ಸರಿಯೇ ? ಫಾರೆಸ್ಟ್ ಎಂದರೆ ಏನು, ಅವರು ಕೇಳಿರತಕ್ಕಂಥ ಜಮೀನು ಯಾವುದು ? ಆ ಜಮೀನುಗಳಲ್ಲಿ ಮರಗಳು ಇವೆಯೇ ? ಅಥವಾ ಅದು ಜೋಗು ಪ್ರದೇಶವಾಗಿದೆಯೇ ? ಈ ತರಹ ಜಮೀನನ್ನು ಸಾಗುವಳಿಗೆ ಕೊಡದೇ ಹೋದರೆ ನಮ್ಮ ದೇಶಕ್ಕೆ ಸಾಕಾದಷ್ಟು ಆಹಾರವನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಇನ್ನು ರೆವಿನ್ಯೂ ಅಧಿಕಾರದಲ್ಲಿರತಕ್ಕಂಥ ಗುಡ್ಡಗಾಡಿನ ಜಮೀನುಗಳನ್ನು ಏನು ಮಾಡಿದ್ದೀರೋ ಗೊತ್ತಿಲ್ಲ. ಅದನ್ನು ಇನ್ನೂ ಅವರು ಸ್ವಾಧೀನಕ್ಕೆ ಕೊಟ್ಟಿಲ್ಲ, ಕೊಟ್ಟು ಬದಲಾವಣೆ ಯಾಗಬೇಕು. ಆ ಪ್ರದೇಶಗಳನ್ನು ಸರಿಪಡಿಸದೇ ಹೋದರೆ ಈವೊತ್ತು ಶ್ರೀಮಂತಜನಕ್ಕೆ ಅನುಕೂಲ ಮಾಡಿಕೊಡುತ್ತಾರೆ ಎಂದು ಹೇಳುತ್ತಾರೆ. ಆದುದರಿಂದ ಈ ಬಗ್ಗೆ ಏನು ಎಡರುತೊಡರುಗಳು ಇವೆ ಅವನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕು ಎಂದು ಹೇಳುತ್ತೇನೆ.

ಅಧಿಕಾರಿಗಳ ಮಟ್ಟದಲ್ಲಿ ಹೇಳಬೇಕಾದ ಒಂದು ವಿಷಯವಿದೆ. ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಕಳುಹಿಸುವ ಪದ್ಧತಿ ಇದೆ. ಅದನ್ನು ಯಾರು ಕಳುಹಿಸುತ್ತಾರೆ ಅವರ ಆಸಕ್ತಿ ಮೇಲೆ ಅವಲಂಬಿಸುತ್ತದೆ. ರಿಪೋರ್ಟುಗಳು ಕಳುಹಿಸತಕ್ಕ ಅಧಿಕಾರಿ ಪ್ರಾಮಾಣಿಕನಾಗಿಲ್ಲದೆ ಇದ್ದರೆ, ತಹಶೀಲ್ದಾರನಾದವನು ಒಂದು ತಾಲ್ಲೂಕಿನಲ್ಲಿ ತಿಂಗಳಿಗೆ ಇಷ್ಟು ಕಲೆಕ್ಷನ್ ಮಾಡಿಕೊಡಬೇಕಾಗಿತ್ತು, ಅಷ್ಟು ಕಲೆಕ್ಷನ್ ಬಾದಿಲ್ಲ ಎನ್ನುವ ಅಭಿಪ್ರಾಯವನ್ನು ಹೊಂದುವುದಾದರೆ ಅಂಥ ಸಂದರ್ಭಗಳಲ್ಲಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಬಹುಶಃ ದೇಶದಲ್ಲಿ ಅಂಥವರು ಯಾರೂ ಇಲ್ಲವೇ ಇಲ್ಲ ಎಂದು ಹೇಳುವ ಮಟ್ಟದಲ್ಲಿ ನಾವಿಲ್ಲ. ಕಾನ್‌ಫಿಡೆನ್‌ಷಿಯಲ್ ರಿಪೋರ್ಟು ಬರೆದು ಸರ್ಕಾರಕ್ಕೆ ಕಳುಹಿಸುತ್ತಾರೆ. ಜಾತಿಯ ಪ್ರಶ್ನೆ ಬಂದಾಗ ಕೂಡ ಸ್ವಲ್ಪಮಟ್ಟಿಗೆ ಮನಸ್ಸಿನಲ್ಲಿಟ್ಟುಕೊಂಡು ತಮ್ಮ ಬಂಧುಮಿತ್ರರು, ಜಾತಿಯವರು ಇದ್ದರೆ ಅವರನ್ನು ಮೇಲಕ್ಕೆ ಎತ್ತಿ ಇನ್ನೊಬ್ಬರನ್ನು ಕೆಳಕ್ಕೆ ಹಾಕಬೇಕು ಎನ್ನುವ ಉದ್ದೇಶದಿಂದ ಇದ್ದರೆ ಏನಾಗುತ್ತದೆಂದು ನೋಡಬೇಕು. ಇವೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ಒಂದು ಕಮಿಟಿಮಾಡಿ ಎನ್‌ಕ್ವೈರಿ ಮಾಡಿಸುವುದಾದರೆ ನಾನು ತೋರಿಸಿಕೊಡುತ್ತೇನೆ ಎಂದು ಹೇಳಬಲ್ಲೆ. ಈ ರಾಜ್ಯದಲ್ಲಿ ಎಲ್ಲ ಕಮಿಟಿಗಳಲ್ಲಿ ಮತ್ತು ಬೋರ್ಡುಗಳಲ್ಲಿ ಕೆಲಸ ಮಾಡಿದ ಅನುಭವ ನನಗಿದೆ. ಸರ್ಕಾರ ಒಂದು ಸ್ಟೀರಿಂಗ್ ಕಮಿಟಿ ಎಂದು ಮಾಡಿದ್ದಾರೆ. ಅದನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸುತ್ತಾರೆಂದು ನಾನು ನಂಬಿದ್ದೇನೆ. ಒಂದು ಸಲ ಕಾನ್‌ಫಿಡೆನ್‌ಷಿಯಲ್ ರಿಪೋರ್ಟು ಕಳುಹಿಸಿದ ಮೇಲೆ ಅದನ್ನು ಬದಲಾವಣೆ ಮಾಡುವುದಕ್ಕೆ ಕಷ್ಟ ಎಂದು ಒಪ್ಪಿಕೊಳ್ಳುತ್ತೇನೆ. ಆದರೆ ಅಧಿಕಾರಿಗಳು ಯಾವ ರೀತಿ ವರ್ತಿಸುತ್ತಾರೆನ್ನುವ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ರೆವಿನ್ಯೂ ಮಂತ್ರಿಗಳು . ಇದಕ್ಕೆ ಮುಖ್ಯ ಜವಾಬ್ದಾರರು. ಇದೆಲ್ಲ ಅವರ ಮುಂದೆ ಬರುವ ವಿಚಾರಗಳು. ಇಂಥ ವಿಷಯಗಳಲ್ಲಿ ಸ್ವಲ್ಪ ಪರಿಶೀಲನೆ ಮಾಡಿ, ಈ ರಾಜ್ಯದಲ್ಲಿ ನ್ಯಾಯವಾಗಿರತಕ್ಕ ಅಧಿಕಾರಿಗಳು ಸತ್ಯವಂತರಾಗಿ, ಧರ್ಮಿಷ್ಠರಾಗಿ ಕೆಲಸ ಮಾಡಬೇಕು ಎನ್ನುವ ಮನೋಭಾವನೆಯುಂಟಾಗುವಂತೆ ಮಾಡಬೇಕು. ಇಲ್ಲದೆ ಇದ್ದರೆ ಈ ಕಷ್ಟಕ್ಕೋಸ್ಕರ ತಪ್ಪುದಾರಿ ಹಿಡಿದು ತಾನೂ ಏನಾದರೂ ಸಂಪಾದನೆ ಮಾಡಿ ಕೊಡಬೇಕಾದವರಿಗೆ ಕೊಡಬೇಕು ಎನ್ನುವ ವಿಚಾರ ಬರುತ್ತದೆ.

ಭೂ ಸುಧಾರಣೆ ಜಾರಿಗೆ ತರುತ್ತಿದ್ದೀರಿ. ದೇವಸ್ಥಾನಗಳ ಹೆಸರಿನಲ್ಲಿ ಯಾವುದೇ ಸಂಸ್ಥೆಗಳ ಹೆಸರಿನಲ್ಲಿ ಜಮೀನು ಇನ್ನು ಮುಂದೆ ಇರಬಾರದು 'ಎನ್ನುವ ಅಭಿಪ್ರಾಯ ಸರ್ಕಾರಕ್ಕೆ, ಈ ಸದನಕ್ಕೆ ಇದೆ ಎಂದು ನನಗೆ ಅರ್ಥವಾಗಿದೆ. ಈ ದೃಷ್ಟಿಯಿಂದ ಯೋಚಿಸುವುದಾದರೆ ಎಲ್ಲೆಲ್ಲಿ ನೋಡಿದರೂ ದೇವರು, ದೇವಸ್ಥಾನಗಳೂ ಇವೆ. ಅವಕ್ಕೆಲ್ಲ ಪೂಜಾರಿಗಳನ್ನು ನೇಮಕ ಮಾಡಿ ಸರ್ಕಾರದವರು ಸಂಬಳ ಕೊಡಬೇಕು ಎಂದರೆ ಅಸಾಧ್ಯ ಹೊರೆಯಾಗುತ್ತದೆ. ದೇವರು ಇದ್ದಾನೆ ಎನ್ನುವುದನ್ನು ನಂಬಬೇಕು, ಒಪ್ಪಬೇಕು. ಬಹುಶಃ ನಾಲ್ಕಾರು ದೇವಸ್ಥಾನಗಳು ಒಂದು ಗ್ರಾಮದಲ್ಲಿ ಅಥವಾ ಒಂದಕ್ಕೊಂದು ಸಮೀಪವಾಗಿದ್ದರೆ ಅವೆಲ್ಲವನ್ನೂ ಒಂದು ಕಡೆ ಸೇರಿಸಿ ಒಂದು ಪಂಚಾಯಿತಿಗೆ ಒಂದನ್ನು ಚೆನ್ನಾಗಿ ಇಟ್ಟುಕೊಂಡು, ಅಲ್ಲಿರುವ ದೇವರ ಮೂರ್ತಿಗಳನ್ನು ಪೂಜೆ ಮಾಡುವುದಕ್ಕೆ ಏರ್ಪಾಡು ಮಾಡತಕ್ಕದ್ದು. ಮುಖ್ಯ ಸುಧಾರಣೆಯ ದೃಷ್ಟಿಯಿಂದ ಇದನ್ನು ಶೀಘ್ರವಾಗಿ ಯೋಚನೆ ಮಾಡಬೇಕು. ಗ್ರಾಮಕ್ಕೆ ಒಂದು ಪಂಚಾಯಿತಿ ಮಾಡಿದ್ದಾರೆ. ಪಂಚಾಯಿತಿ ಏರಿಯಾದಲ್ಲಿ ಒಂದು ಒಳ್ಳೆಯ ದೇವಸ್ಥಾನವಿರತಕ್ಕದ್ದು. ಅಲ್ಲಿ ಏನಾದರೂ ಅಕ್ಕಪಕ್ಕದಲ್ಲಿ ಬೇರೆ ದೇವಸ್ಥಾನಗಳಿದ್ದರೆ ಅಲ್ಲಿರುವ ಮೂರ್ತಿಗಳನ್ನೆಲ್ಲ ತಂದು ಒಂದು ಕಡೆ ಸೇರಿಸಿ ಅದಕ್ಕೆ ಸರ್ಕಾರದವರು ನೇರವಾಗಿ ನೇಮಕ ಮಾಡುವವರ ಮೂಲಕ ಪೂಜೆ ಮಾಡುವುದಕ್ಕೆ ವ್ಯವಸ್ಥೆ ಮಾಡುವುದು ಮತ್ತು ಒಳ್ಳೆಯ ವಾತಾವರಣದಲ್ಲಿ ಆ ದೇವಸ್ಥಾನಗಳನ್ನು ಇಡತಕ್ಕ ವ್ಯವಸ್ಥೆ ಮಾಡುವುದು ಒಳ್ಳೆಯದು. ಇದನ್ನು ಕೂಡ ಮಾಡುತ್ತಾರೆಂದು ನಂಬಿದ್ದೇನೆ.

ಮಾನ್ಯ ಮಂತ್ರಿಗಳು ಈ ವಿಷಯಗಳನ್ನೆಲ್ಲ ಕೂಲಂಕಷವಾಗಿ ವಿಮರ್ಶೆ ಮಾಡಿ ಜಾರಿಗೆ ತರುವುದಾದರೆ ಒಳ್ಳೆಯದಾಗುತ್ತದೆ ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಈ ಕಂದಾಯ ಇಲಾಖೆ ಬಹುಶಃ ಬ್ರಿಟಿಷರು ನಮ್ಮ ದೇಶಕ್ಕೆ ಬರುವುದಕ್ಕೆ ಮುಂಚೆಯೂ ಕೂಡ ಇದ್ದಂಥ ಇಲಾಖೆ, ಎಂದರೆ ಒಂದು ದೃಷ್ಟಿಯಿಂದ ಆಳ್ವಿಕೆ, ಆಡಳಿತ ಎನ್ನುವ ಪದ್ಧತಿ ಯಾವೊತ್ತು ಆರಂಭವಾಯಿತೋ ಅಂದಿನಿಂದ ಬಂದಂಥ ಒಂದು ಇಲಾಖೆ. ಆಳ್ವಿಕೆ ಎನ್ನುವುದು ಆರಂಭವಾದಾಗಿನಿಂದ, ವ್ಯವಸಾಯ ಎನ್ನುವುದರ ಆರಂಭದಿಂದ ಈ ಪದ್ಧತಿ ಬಂತು. ಹಾಗಾಗಿ ಈಗಲೂ ಕೂಡ ಅದೇ ಹಳೇ ಕಾಲದ ಜರಿ ಪೇಟ, ಕರೀ ಕೋಟು, ಡೊಂಗು ಸಲಾಮು ಇದೇ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದೆ. ಈ ಇಲಾಖೆ. ಅದರಲ್ಲಿ ಏನೂ ವ್ಯತ್ಯಾಸವಿಲ್ಲ. ಆದುದರಿಂದ ಯಾವುದಾದರೂ ಬದಲಾವಣೆಯನ್ನು ನಾವು ನಿರೀಕ್ಷೆ ಮಾಡಿದರೆ ನಾವು ನಿರಾಸೆಯಲ್ಲಿ ಮುಳುಗಬೇಕಾಗಿರುವುದು ಅನಿವಾರ್ಯವಾಗುತ್ತದೆ. ಮಾನ್ಯ ಕಂದಾಯ ಮಂತ್ರಿಗಳು ಹೊಸದಾಗಿ ಅಧಿಕಾರವನ್ನು ಪಡೆದಿದ್ದಾರೆ. ಒಂದು ವರ್ಷವಾಯಿತು. ಆದರೆ ಸದನದ ಸದಸ್ಯರಾಗಿ ಕಳೆದ 22 ವರ್ಷಗಳಿಂದ ಇದ್ದಾರೆ. ಅಷ್ಟೇ ಅಲ್ಲ, ಅವರು ಸ್ವತಃ ರೈತರು, ರೈತ ಕುಟುಂಬದವರು, ರೈತರ ಬಗ್ಗೆ ಕಳಕಳಿ ಇರುವವರು. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಮಾನ್ಯ ವೀರಪ್ಪಗೌಡರು ಹೇಳಿದ ಹಾಗೆ ಮೃದು ಸ್ವಭಾವದವರು, ನಿಜ. ಆದರೆ ಅಂಥವರು ಹಿಂದೆ ಒಬ್ಬರು ಇದ್ದರು. ಅವರನ್ನು ಈ ಸಂದರ್ಭದಲ್ಲಿ ಸ್ಮರಿಸಬೇಕು, ಜ್ಞಾಪಿಸಿಕೊಳ್ಳಬೇಕು. ಅವರು ಶ್ರೀ ಕಡಿದಾಳ್ ಮಂಜಪ್ಪನವರು. ಅವರ ಕಾಲದಲ್ಲಿ ಗೇಣಿ ಶಾಸನ ಬಂತು. ಆವಾಗ ಅವರಿಗೆ ಅಡ್ಡಗಾಲು ಕೊಟ್ಟು ಅವರು ಯಾವ ಒಂದು ಮಟ್ಟದಲ್ಲಿ ಪ್ರಗತಿಪರವಾದ, ಕ್ರಾಂತಿಕಾರಕವಾದ ಭೂ ಸುಧಾರಣೆಯನ್ನು ತರಬೇಕು ಎಂದು ಇದ್ದರೋ ಅಷ್ಟು ಕ್ರಾಂತಿಕಾರಕವಾದುದನ್ನು ತರುವುದಕ್ಕೆ ಆಗದೆ ಇರುವ ಹಾಗೆ ಮಾಡಿದ್ದದನ್ನು ನಾವು ನೆನಪು ಮಾಡಿಕೊಳ್ಳಬೇಕು. ಅದೇ ರೀತಿ ಮಾನ್ಯ ಹುಚ್ಚಮಾಸ್ತಿ ಗೌಡರಿಗೆ ಕೂಡ ಏನು ಅಡ್ಡಿ ಆತಂಕಗಳಿವೆಯೋ ಎನ್ನುವುದು ಗೊತ್ತಾಗುತ್ತಿಲ್ಲ. ಅದೂ ಅಲ್ಲದೆ ಭೂ ಸುಧಾರಣೆಗೆ ಈಗ ಏನು ತಿದ್ದುಪಡಿ ತರುತ್ತೇವೆಂದು ಹೇಳಿದರೂ ಅದು ಸೆಲೆಕ್ಟ್ ಕಮಿಟಿಗೆ ಹೋಗಿ ಒಂದು ವರ್ಷ ಕಳೆಯುತ್ತ ಬಂತು. ಗಜಗಮನ, ಗಜಪ್ರಸವ ವೇದನೆ ಬಹಳವಿದೆ. ಇದನ್ನು ಬೇಗ ಮಾಡಬೇಕು ಮತ್ತು ಚುರುಕಾಗಿ ಈ ಅಧಿವೇಶನದಲ್ಲಿಯೇ ಈ ಸುಧಾರಣೆಯನ್ನು ತರಬೇಕು. ಈ ಬಗ್ಗೆ ಸ್ಪಷ್ಟ ಮತ್ತು ಖಚಿತವಾದ ಶಬ್ದಗಳಲ್ಲಿ ಉತ್ತರವನ್ನು ಕೊಡಬೇಕು ಎನ್ನುವ ಮಾತನ್ನು ನಾನು ಮೊಟ್ಟಮೊದಲನೆಯದಾಗಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಸರ್ವೆಗೆ ಸಂಬಂಧಪಟ್ಟಂತೆ ಹೇಳಿದ್ದಾರೆ. ಈ ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಿದೆ. ರಾಜ್ಯ ಮಟ್ಟದಲ್ಲಿರುವ ಅಧಿಕಾರಿಗಳು ಸಮರ್ಥರಿದ್ದಾರೆ, ದಕ್ಷರಿದ್ದಾರೆ. ಹಳ್ಳಿಗಳಲ್ಲಿ ಅರ್ಧ ರಾತ್ರಿಯಲ್ಲಿ ಹೋಗಿ ಸರ್ವೆ ಮಾಡಿ ಕೊಡುವ ಪುಣ್ಯಾತ್ಮರು ನಮ್ಮ ರಾಜ್ಯದಲ್ಲಿ ಇದ್ದಾರೆ. ಫೋಡ್ ಮಾಡುವುದಕ್ಕೆ ಸರ್ಕಾರಕ್ಕೆ ಫೀಸನ್ನು ಕೊಡುವುದು ಸಾಲದು, ಒಳ್ಳೆಯ ಶ್ರೀಮಂತರಾದರೆ 5 ರೂಪಾಯಿ ಸಾಕು, ಮಧ್ಯಮ ವರ್ಗದವರಾದರೆ 15-20 ರೂಪಾಯಿ, ಮತ್ತು ತೀರ ಬಡವರಾದರೆ 100 ರೂಪಾಯಿ ಕೊಡಬೇಕು. ಈ ತರಹ ಒಂದು ಗ್ರೆಡೇಷನ್ ಲಿಸ್ಟು ಇರುತ್ತದೆ. ಇಂತಹ ಪುಣ್ಯಾತ್ಮರು ಎಲ್ಲ ಕಡೆಯಲ್ಲೂ ಇದ್ದಾರೆ ಮತ್ತು ಸರ್ವೆ ಮಾಡಿಸುತ್ತಿದ್ದಾರೆ. ಇಂತಹ ಅಧಿಕಾರಿಗಳನ್ನು ಏನಾದರೂ ತಮ್ಮ ಗಮನಕ್ಕೆ ತಂದರೆ ಅಂತಹ ಅಧಿಕಾರಿಗಳ ಮೇಲೆ ತತ್‌ಕ್ಷಣ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ಸಲಹೆ ಮಾಡುತ್ತೇವೆ. ಇಲಾಖೆಯ ಅಧಿಕಾರಿಗಳ ಬಳಿಗೆ ಯಾವ ಶಾಸನ ಸಭಾ ಸದಸ್ಯರೇ ಆಗಲಿ, ಅವರು ಏನು ಬಂದು ಹೇಳಿದರೂ

ಅದರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಮತ್ತು ಯಾವ ಕಾಗದವೇ ಬರಲಿ, ಅದಕ್ಕೆ ಉತ್ತರ ಕೊಡುವ ಒಂದು ಪರಿಪಾಠವನ್ನು ತಾವು ನಿಮ್ಮ ಇಲಾಖೆಯಲ್ಲಿ ಆರಂಭ ಮಾಡಬೇಕು.

ಇನ್ನು ಪಟ್ಟಾ ಪುಸ್ತಕಗಳನ್ನು ನಮ್ಮಲ್ಲಿ ಹಂಚಿದ್ದೀರಿ, ಇದು ಇಂಗ್ಲಿಷಿನಲ್ಲಿದೆ. ಇದರ ಎಡಗಡೆ ಪೇಜಿನಲ್ಲಿ ಎಷ್ಟು ಬಾಕಿ ಕೊಡಬೇಕು ಎನ್ನುವುದರ ವಿವರಗಳಿರುತ್ತವೆ. ಬಲಗಡೆ ಪೇಜಿನಲ್ಲಿ ಎಷ್ಟು ಹಣ ಜಮಾ ಮಾಡಲಾಗಿದೆ ಎನ್ನುವುದನ್ನು ಅಧಿಕಾರಿಗಳು ಬರೆಯುತ್ತಾರೆ, ಅಧಿಕಾರಿಗಳು ಇಲ್ಲಿ ಏನು ಮಾಡುತ್ತಿದ್ದಾರೆ ಎಂದರೆ ರೈತರು ಎಷ್ಟು ಹಣ ಕೊಟ್ಟರೂ ಅದನ್ನು ಬಾಕಿ ಬರೆಯುವ ಎಡಗಡೆ ಪೇಜಿನಲ್ಲಿ ಬರೆದು ದುಡ್ಡು ವಸೂಲಾದುದನ್ನು ಜೋಬಿಗೆ ಬಿಡುತ್ತಾರೆ. ಹೀಗಾಗಿ ಇಲ್ಲಿದ್ದ ಅಧಿಕಾರಿಗಳು ಬೇರೆ ಊರಿಗೆ ಹೋದಾಗ ಇನ್ನೊಬ್ಬ ಅಧಿಕಾರಿ ಬಂದ ಕೂಡಲೇ ನೋಟೀಸು ಕೊಟ್ಟು ಇಂತಿಷ್ಟು ಬಾಕಿ ಎಂದರೆ 500, ಇಲ್ಲವೇ ಸಾವಿರ ಎಂದು ರೈತರಿಗೆ ಬರೆದಾಗ ಅವರು ಬಂದು ನಾನು ಇಂತಹ ತಾರೀಖಿನಲ್ಲಿ ಇಷ್ಟು ದುಡ್ಡು ಕೊಟ್ಟಿದ್ದೇನೆ. ಇದರ ಬಗ್ಗೆ ದಾಖಲೆ ಇದೆ ಎಂದು ತೋರಿಸಿದಾಗ ಅದು ಬಾಕಿ ಪಟ್ಟಿಯಲ್ಲಿ ಎಂಟ್ರಿ ಆಗಿದ್ದದ್ದು ಗೊತ್ತಾಯಿತು. ಇದನ್ನು ನಾವು ನಿಮ್ಮ ಇಲಾಖೆ ಸೆಕ್ರೆಟರಿಯವರೆಗೂ ತಂದು ದೂರುಗಳನ್ನು ಸರಿಪಡಿಸಬೇಕಾಗಿ ಬಂತು. ಇಂತಹ ಸಾವಿರಾರು ನಿದರ್ಶನಗಳನ್ನು ನಮ್ಮ ಹಳ್ಳಿಗಾಡಿನಲ್ಲಿ ತಮಗೆ ಕೊಡಬಹುದು. ಇನ್ನೊಂದು ನೀವು ಏನು ಮಾಡಿದ್ದೀರಿ ಎಂದರೆ ಈ ವಿಲೇಜು ಅಕೌಂಟೆಂಟರುಗಳು ಎಂದು ನೇಮಕ ಮಾಡಿದ್ದೀರಿ. ಇವರನ್ನೇ ನೀವು ಮುಂದೆ ಮಂತ್ರಿಗಳನ್ನಾಗಿ ಏಕೆ ಮಾಡಬಾರದು ? ಬಡವರ ರಕ್ತವನ್ನು ಹೀರುವುದರಲ್ಲಿ ಇವರು ನಿಪುಣರಾಗಿದ್ದಾರೆ. ಇವರಲ್ಲಿ ಬಡ ರೈತರು ಏನಾದರೂ ಬಂದು ಸಹಾಯ ಕೇಳಿದರೆ ಅವರಿಗೇನೂ ಸಿಗುವುದಿಲ್ಲ. ಇವರಿಗೆ ಯಾರ ಭಯವೂ ಇಲ್ಲ. ನಿರಾತಂಕವಾಗಿ ಕೆಲಸ ಮಾಡುತ್ತಾರೆ. ಯಾರಿಗೆ ಎಲ್ಲಿಗೆ ಬೇಕೋ ಅಲ್ಲಿಗೆ ವರ್ಗ ಮಾಡುವವರೆಗೂ ಇವರು ಪ್ರಭಾವವುಳ್ಳವರಾಗಿರುತ್ತಾರೆ. ಹಿಂದೆ ಇದ್ದ ಪಟೇಲರುಗಳು ಹಾಗೂ ಶ್ಯಾನುಭೋಗರುಗಳು ಎಂದು ಇರುತ್ತಿದ್ದರು. ಅವರಿಂದ ಸ್ವಲ್ಪಮಟ್ಟಿಗಾದರೂ ರೈತಾಪಿ ಜನಕ್ಕೆ ಅನುಕೂಲವಾಗುತ್ತಿತ್ತು. ಏಕೆಂದರೆ ಇವರು ಅದೇ ಊರಿನಲ್ಲಿರುತ್ತಿದ್ದರು, ಎಲ್ಲ ವ್ಯವಹಾರಗಳನ್ನು ಮೊದಲಿಂದ ಚೆನ್ನಾಗಿ ಅರಿತಿರುತ್ತಿದ್ದರು, ಏನೋ ಅಷ್ಟು ಇಷ್ಟು ಮುಸಿ ಕಾಣಿಕೆ ಎಂದು ತೆಗೆದುಕೊಳ್ಳುತ್ತಿದ್ದರು ಮತ್ತು ಜನರಿಗೆ ಸಹಾಯ ಮಾಡುತ್ತಿದ್ದರು. ಆದರೆ ಈಗ ಬರುತ್ತಿರುವ ವಿಲೇಜ್ ಅಕೌಂಟೆಂಟರುಗಳು ಯಾವ ರೀತಿ ಕಿರುಕುಳಗಳನ್ನು ಕೊಡುತ್ತಿದ್ದಾರೆ ಅದನ್ನು ಹೇಳುವುದಕ್ಕೇ ಆಗುವುದಿಲ್ಲ. ವಿಲೇಜು ಅಕೌಂಟೆಂಟರುಗಳಿಗೆ ಅದೇ ಊರಿನಲ್ಲಿ ವಾಸಮಾಡಲು ಮನೆಗಳೇ ಸಿಗುವುದಿಲ್ಲ. ಇದರಿಂದಾಗಿ ಇವರು ರೈತರಿಗೆ ಸಿಗುವುದೇ ಕಷ್ಟ. ನಮ್ಮ ತಾಲ್ಲೂಕಿನಲ್ಲಿರುವ ಪಂಚಾಯಿತಿಗಳಲ್ಲಿ ಕೆಲವು ವಿಲೇಜು ಅಕೌಂಟೆಂಟರುಗಳು ಇರುತ್ತಾರೆ. ಇವರು ಯಾವಾಗಲೂ ನಮ್ಮ ತೀರ್ಥಹಳ್ಳಿ ತಾಲ್ಲೂಕು ಹೆಡ್‌ಕ್ವಾರ್ಟರ್ಸಿನಲ್ಲೇ ಇರುತ್ತಾರೆ. ಇಲ್ಲಿರುವ ತಹಶೀಲ್ದಾರರು ಏನಾದರೂ ಸೂಚನೆಗಳನ್ನು ಕೊಟ್ಟು ಇವರಿಗೆ ಕಳುಹಿಸಿದರೆ ವಿಲೇಜು ಅಕೌಂಟೆಂಟರವರೇ ಸಿಗುವುದಿಲ್ಲ. ಹಳ್ಳಿಯಲ್ಲಿರುವ ವಿಲೇಜು ಅಕೌಂಟೆಂಟರನ್ನು ನೋಡಲು ಹೋದರೆ ಅವರು ಊರುಗಳಲ್ಲಿರುವುದಿಲ್ಲ. ಯಾವಾಗಲೂ ತಾಲ್ಲೂಕು ಹೆಡ್‌ಕ್ವಾರ್ಟರ್ಸುಗಳಲ್ಲೇ ಇರುತ್ತಾರೆ. ಇದು ಹೇಗಾಗಿದೆ ಎಂದರೆ ಕುಂಟು ಕುಣಿಯುವವರಿಗೂ ತೂತು ಮದಲೆಗೂ ಸಮ ಎನ್ನುವಂತಾಗಿದೆ, ಇಲ್ಲಿನ ಸ್ಥಿತಿ. ಯಾವ ರೈತನಿಗೆ ಏನು ಬೇಕಾದರೂ ತಹಶೀಲುದಾರರ ಬಳಿಗೆ ಬರಬೇಕು, ಅವರಿಂದ ಬಯ್ಸಿಕೊಂಡು ಬರಬೇಕಾಗಿದೆ. ಇಂದು ತಾಲ್ಲೂಕುಗಳಲ್ಲಿ ಹಾಗೂ ಹಳ್ಳಿಗಳಲ್ಲಿ ಆಗುತ್ತಿರುವ ಅರಾಜಕತೆ, ಅಶಾಂತಿ ಹಾಗೂ ಅನ್ಯಾಯದ ಪರಮಾವಧಿ ಕೈಮೊಟಕಾದಂತಾಗಿದೆ. ಇಂತಹ ಅವ್ಯವಸ್ಥೆಗಳನ್ನು ಸುವ್ಯವಸ್ಥಿತವಾಗಿ ಮಾಡಲು ತಮ್ಮ ಇಲಾಖೆಯಲ್ಲಿರುವ ಅಧಿಕಾರಿಗಳು ಸರಿಯಾಗಿ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಅಲ್ಲದೆ ವಿಲೇಜು ಅಕೌಂಟೆಂಟರುಗಳು ಸರಕಾರದಲ್ಲಿ ಸ್ವಲ್ಪಮಟ್ಟಿನ ಸಹಾಯಗಳು ಬೇಕೆಂದು ಕೇಳುತ್ತಿದ್ದಾರೆ. ಅದನ್ನು ಮಾಡಿ

ಕೊಡಬೇಕು. ಅವರೂ ಮನುಷ್ಯರು ತಾನೇ ಅವರಿಗೇನಾದರೂ ತೊಂದರೆಗಳು ಇವೆ ಎಂದು ಹೇಳಿದಾಗ ತಾವು ಅವರಿಗೆ ಸಹಾಯ ಮಾಡಿಕೊಡಬೇಕು, ಎಷ್ಟೋ ಹಳ್ಳಿಗಳಲ್ಲಿ ಮನೆಗಳೇ ವಾಸಕ್ಕೆ ಸಿಗುವುದಿಲ್ಲ. ಇದರಿಂದಾಗಿ ಬೇರೆ ಹಳ್ಳಿಗಳಲ್ಲಿ ವಾಸಮಾಡಿಕೊಂಡು ಕೆಲಸಮಾಡ ಬೇಕಾಗಿ ಬಂದಿದೆ. ಹರಿಜನರೇನಾದರೂ ಹಳ್ಳಿಗಳಿಗೆ ವಿಲೇಜು ಅಕೌಂಟೆಂಟರುಗಳಾಗಿ ನೇಮಿಸಿದರೆ ಅವರಿಗೆ ಮನೆಗಳೇ ಸಿಗುವುದಿಲ್ಲ. ಆದುದರಿಂದ ಇಂತಹ ವಿಲೇಜು ಅಕೌಂಟೆಂಟರು ಗಳಿಗೆ ಸಾಕಷ್ಟು ಮನೆಗಳನ್ನು ಮಾಡಿಕೊಡಬೇಕು ಮತ್ತು ಇದನ್ನು ತುರ್ತಾಗಿ ಮಾಡಿಕೊಡ ಬೇಕೆಂದೂ ಕೇಳಿಕೊಳ್ಳುತ್ತೇನೆ.

ಇನ್ನು ಲ್ಯಾಂಡು ಗ್ರಾಂಟು ಕಮಿಟಿಗಳ ವಿಷಯದಲ್ಲಿ ಹೇಳದೇ ಇರುವುದೇ ಒಳ್ಳೆಯದು ಎಂದು ಕಾಣುತ್ತೆ. ಕಂಡದ್ದು ಹೇಳಿದರೆ ಕೆಂಡದಂತಹ ಕೋಪ ಬರುತ್ತೆ ಎಂದ ಹಾಗೆ ನಮ್ಮ ಸರಕಾರ ಕೆಲಸಗಳನ್ನು ಮಾಡುತ್ತಿದೆ. ಈ ಸರಕಾರ ಬಡವರನ್ನು ಉದ್ಧಾರ ಮಾಡುತ್ತೇವೆ, ರೈತರನ್ನು ಉದ್ಧಾರ ಮಾಡುತ್ತೇವೆ ಎಂದು ಏನು ಹೇಳಿದರು, ಅದನ್ನು ನೋಡಿದರೆ ಇಲ್ಲಿ ಎಲ್ಲ ಮಾಯಾ ಬಜಾರು ಮಾಡುತ್ತಿದ್ದಾರೆ. ಕೆಲವು ಲ್ಯಾಂಡು ಗ್ರಾಂಟು ಕಮಿಟಿಗಳಲ್ಲಿ ನಾವೂ ಕೂಡ ಇದುವರೆಗೆ ಇದ್ದೆವು. ಇಂತಹ ಕಮಿಟಿಗಳಲ್ಲಿ ಯಾರು ಇದ್ದರು ಎಂದರೆ, ವ್ಯವಸಾಯದಲ್ಲಿ ಯಾರಿಗೆ ಅನುಭವ ಇಲ್ಲವೋ, ಯಾರು ರೈತರ ಮಕ್ಕಳಲ್ಲವೋ ಅಂತಹವರು, ಮತ್ತು ರೈತರ ರಕ್ತ ಹೀರಿದಂತಹ ವ್ಯಾಪಾರಿಗಳು ಮಿಲ್ ಮಾಲೀಕರುಗಳು ಇಂತಹವರೇ ಇದರಲ್ಲಿದ್ದದ್ದು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ನಿಮ್ಮ ಪಾರ್ಟಿಯಲ್ಲಿದ್ದರೆ ಮಾತ್ರ ಅವರು ರೈತರು, ಬೇರೆ ಪಾರ್ಟಿಯವರಲ್ಲಿರುವವರು ರೈತರಲ್ಲವೇ ?

ಶ್ರೀ ಕೋಣಂದೂರು ಲಿಂಗಪ್ಪ :—ನಿಮ್ಮಲ್ಲಿ ಅಂತಹ ರೈತರಿದ್ದಾರೆ. ನಿಮಗೆ ಅವರ ಅಭಿಮಾನ ಇದೆ. ಆದರೆ ಯಾವ ರೀತಿಯಾದ ಅಭಿಮಾನ ಎಂದರೆ ಒಂದು ತರಹದ ವ್ಯಾಘ್ರ ಪ್ರೇಮ, ಒಂದು ರೀತಿಯಾದ ಧೃತರಾಷ್ಟ್ರ ಪ್ರೇಮ ಇದೆ. ಆದರೆ ಶ್ರೀಮಾನ್ ಚಂದ್ರಶೇಖರ್ ರವರು ಅಂತಹ ಮನುಷ್ಯರಲ್ಲ. ಅವರ ಬಗ್ಗೆ ನನಗೆ ತುಂಬಾ ಅಭಿಮಾನ ಇದೆ, ಇಂತಹವರಿಂದ ನಮಗೆ ನ್ಯಾಯ ದೊರಕುವುದಿಲ್ಲ. ಕಾಂಗ್ರೆಸ್ ಪಕ್ಷದವರಲ್ಲಿ ಬಹಳ ಮಹತ್ವವಾದ ಕೆಲಸಗಳನ್ನು ಮಾಡಿದವರೂ ಇದ್ದಾರೆ. ಏನೆಂದರೆ, ಲ್ಯಾಂಡು ಗ್ರಾಂಟು ಕಮಿಟಿಯಲ್ಲಿ ಡಿಫೀಟೆಡ್ ಕಾಂಗ್ರೆಸ್ ಅಭ್ಯರ್ಥಿಗಳನ್ನು ಹಾಕಿದ್ದಾರೆ. ಇವರನ್ನು ಹಾಕುವುದು ಬೇಡ ಎನ್ನುವುದಿಲ್ಲ. ಇದೇ ತತ್ವದಂತೆ ನೀವು ಬೇರೆ ವರ್ಷಗಳಲ್ಲಿ ಸೋತಿರುವವರನ್ನೂ ಇದರಲ್ಲಿ ಏಕೆ ಹಾಕಬಾರದು ?. ಇಬ್ಬರನ್ನು ಇದರಲ್ಲಿ ಹಾಕಬಹುದು ಮತ್ತು ಇದರಲ್ಲಿ ರೈತಾಪಿ ಜನಕ್ಕೆ ಹೆಚ್ಚು ಅನ್ಯಾಯಗಳಾಗದಂತೆ ಈ ಕಮಿಟಿಗಳನ್ನು ಉಳಿಸಿಕೊಂಡು ಇನ್ನು ಮುಂದೆ ಸರಿಯಾಗಿ ಲ್ಯಾಂಡುಗಳನ್ನು ಗ್ರಾಂಟು ಮಾಡ ಬೇಕು ಎಂದು ಸಲಹೆ ಮಾಡುತ್ತೇನೆ. ಇದರಲ್ಲಿ ಸಾಗುವಳಿ ಚೀಟಿ ಆರು ತಿಂಗಳಾದರೂ ಬರುವುದಿಲ್ಲ. ಕೆಲವು ಕಡೆ ಡಿ. ಸಿ. ಕಡೆ ಹೋಗಬೇಕೆಂದು ಹೇಳಿ ಅದು ವಾಪಸು ಬಂದು ಒಂದು ಎರಡು ವರ್ಷಗಳಷ್ಟು ನಿಧಾನವಾಗುತ್ತದೆ.

ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಲ್ಯಾಂಡ್ ಗ್ರಾಂಟ್ ಕಮಿಟಿಯವರಿಗೆ ಸಾಗುವಳಿ ಚೀಟಿ ಕೊಡುವಂತಹ ಅಧಿಕಾರವನ್ನು ಕೊಡಬೇಕು. ಈಗ ನಾವು ಸಾಗರ, ತೀರ್ಥಹಳ್ಳಿ ಮುಂತಾದ ಕಡೆಗಳಲ್ಲಿ ಪ್ರತಿ ಗ್ರಾಮಪಂಚಾಯಿತಿಯ ವ್ಯಾಪ್ತಿಗೆ ಹೋಗಿ ಕುಳಿತು ಕೊಂಡು ಬಂದಿರತಕ್ಕಂಥ ದರಖಾಸ್ತು ಅರ್ಜಿಗಳನ್ನೆಲ್ಲಾ ಪರಿಶೀಲನೆ ಮಾಡಿ ಸಾಧ್ಯವಾದಷ್ಟು ಅಲ್ಲಿಯೇ ಹಂಚಿ ಬರುತ್ತಿದ್ದೇವೆ. ಇದರ ಬಗ್ಗೆ ಏನಾದರು ವ್ಯಾಜ್ಯ ಇದ್ದರೆ ಗ್ರಾಮದ ಹತ್ತು ಜನ ಮುಖ್ಯಸ್ಥರನ್ನು ಕರೆಸಿ ಅವರ ಮುಖಾಂತರ ತೀರ್ಮಾನ ತೆಗೆದುಕೊಂಡು ಸಿಫಾರಸ್ ಮಾಡುತ್ತಿದ್ದೇವೆ.

ಶ್ರೀ ಎಸ್, ಎಂ. ಶೀರನಾಳಿ ಚಂದ್ರಶೇಖರ್ :— ಪ್ರಜಾಪ್ರಭುತ್ವದಲ್ಲಿ ದರಖಾಸ್ತು, ಅರ್ಜಿಗಳನ್ನು ತೀರ್ಮಾನ ಮಾಡುವ ಅಧಿಕಾರವನ್ನು ತಹಶೀಲ್‌ದಾರರಿಗೆ ಕೊಡಬೇಕೆಂಬುದನ್ನು ತಾವು ಒಪ್ಪುತ್ತೀರೇನು ?

ಶ್ರೀ ಕೋಣಂದೂರು ಲಿಂಗಪ್ಪ :—ಮೂಲತಃ ಹೇಳುವುದಾದರೆ, ತಹಶೀಲ್‌ದಾರರಿಗೆ, ಆಗಲೀ, ಡಿ.ಸಿ. ಅವರಿಗೇ ಆಗಲೀ, ಗೌರ್‍ನರ್ ಅವರಿಗೆ ಆಗಲಿ, ರಾಷ್ಟ್ರಪತಿಯವರಿಗೇ ಆಗಲೀ ಅಧಿಕಾರ ಇರಬಾರದು. ಇವರುಗಳ ಮೇಲೆ ಪ್ರಜಾಪ್ರತಿನಿಧಿಗಳು ಇರಬೇಕೇ ಹೊರತು ಪ್ರಜಾ ಪ್ರತಿನಿಧಿಗಳ ಮೇಲೆ ಅವರು ಇರಬಾರದು. ಈಗಿನ ನಿಯಮದ ಪ್ರಕಾರ ಒಂದು ದರಖಾಸ್ತು ಅರ್ಜಿ ತೀರ್ಮಾನವಾಗಲು 2–3 ವರ್ಷ ತೆಗೆದುಕೊಳ್ಳುವುದಾದರೆ, ದರಖಾಸ್ತು ಅರ್ಜಿಹಾಕುವ ಉದ್ದೇಶವಾದರೂ ಏನು ? ಇದು ಸರಿಯಲ್ಲ. ಸಾಗುವಳಿ ಚೀಟಿ ಕೊಡುವ ಅಧಿಕಾರವನ್ನು ತಹಶೀಲ್‌ದಾರರಿಗೆ ಕೊಡಬೇಕು. ಗಾಂಧಿಶತಾಬ್ದಿ ವರ್ಷದಲ್ಲಿ ನಾಲ್ಕು ಎಕರೆಯವರೆಗೆ ಜಮೀನನ್ನು ಭೂಮಿ ಇಲ್ಲದವರಿಗೆ ಕೊಡುವುದಕ್ಕೆ ಏರ್ಪಾಡು ಮಾಡಿದಂತೆ, ಸ್ಥಳದಲ್ಲಿಯೇ ಸಾಗುವಳಿ ಚೀಟಿ ಕೊಡುವ ವ್ಯವಸ್ಥೆ ಮಾಡಬೇಕು. ಮತ್ತು ಯಾರಿಗೆ ಭೂಮಿ ಇಲ್ಲವೋ ಅಂತಹವರಿಗೆ ಮಾತ್ರ ಕೊಡಬೇಕು. ನನಗೆ ತಿಳಿದಿರುವ ಪ್ರಕಾರ ನೂರು ಇನ್ನೂರು ಎಕರೆ ಭೂಮಿ ಇರುವವರಿಗೂ ಸಹ 40–50 ಎಕರೆ ಜಮೀನನ್ನು ಮಂಜೂರು ಮಾಡಿದ್ದಾರೆ. ಆ ಸುದ್ದಿ ನನಗೆ ಬಂದಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಯಾರಿಗೆ ಕೊಡಲಾಗಿದೆ ಎಂಬುದನ್ನು ಹೇಳಿ ?

ಶ್ರೀ ಕೋಣಂದೂರು ಲಿಂಗಪ್ಪ :—ಮುಂದೆ ಹೇಳುತ್ತೇನೆ. ಈಗ ಅಡಕೆ ತೋಟಕ್ಕೆ ಎಕರೆಗೆ 70 ರಿಂದ 90 ರೂಪಾಯಿಗಳವರೆಗೆ ಅಂದರೆ ಉತ್ಪತ್ತಿಯ ಮೇಲೆ 4 ಪರ್ಸೆಂಟ್‌ನಂತೆ ಕಂದಾಯವನ್ನು ವಸೂಲಿ ಮಾಡುತ್ತಿದ್ದಾರೆ. ಅದೇ ಪ್ಲಾನ್‌ಟೇಷನ್ ಉತ್ಪತ್ತಿಯ ಮೇಲೆ ಒಂದು ಪರ್ಸೆಂಟ್‌ನಂತೆ ಹಾಕುತ್ತಿದ್ದಾರೆ. ಇದು ತೀರ ತಾರತಮ್ಯ. ನಾಳೆ ಭೂಸುಧಾರಣೆ ಜಾರಿಗೆ ಬಂದರೆ ನಿಮ್ಮ ಲೆಕ್ಕದ ಪ್ರಕಾರ 15 ರಿಂದ 30 ಸಾವಿರ ರೂಪಾಯಿಗಳವರೆಗೆ ಅಡಿಕೆ ತೋಟಕ್ಕೆ ಕಾಂಪೆನ್‌ಸೇಷನ್ ಕೊಡಬೇಕಾಗಿ ಬರಬಹುದು. ಈ ಕಾರಣದಿಂದ ಅಡಿಕೆ ತೋಟಗಳಿಗೂ ಸಹ ಒಂದು ಅಥವಾ ಒಂದೂವರೆ ಪರ್ಸೆಂಟ್‌ವರೆಗೆ ಮಾತ್ರ ಕಂದಾಯ ಹಾಕಬೇಕೆಂದು, ಅದಕ್ಕಿಂತ ಹೆಚ್ಚು ಹಾಕಬಾರದೆಂದು ಕೇಳಿಕೊಳ್ಳುತ್ತೇನೆ. ಆ ರೀತಿ ಏನಾದರು ಹಾಕಿದರೆ ಮುಂದೆ ಸರ್ಕಾರದವರು ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ. ಆ ಒಂದು ಸನ್ನಿವೇಶಕ್ಕೆ ಸರ್ಕಾರದವರು ಹೋಗುವುದು ಬೇಡ. ಈ ಬಗ್ಗೆ ಈಗಲೇ ತಿದ್ದುಪಡಿ ತರುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಪಹಣಿ ಬಗ್ಗೆ ಹೇಳಬೇಕೆಂದರೆ, ಇದನ್ನು ಬರೆಯುವವರು ವಿಲೇಜ್ ಅಕೌಂಟ್‌ಟೆಂಟರುಗಳು. ಇದರಲ್ಲಿ ಏನಾದರು ಅನ್ಯಾಯವಾಗಿದ್ದೆ, ಸರಿಪಡಿಸಿಕೊಡಬೇಕೆಂದು ಅರ್ಜಿ ಕೊಟ್ಟರೆ ಅದು ಇತ್ಯರ್ಥವಾಗಬೇಕಾದರೆ ಒಂದು ಬೆಳೆ ಆಗಿ ಹೋಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ಕೂಡಲೇ ಅದನ್ನು ಸರಿಪಡಿಸದಿದ್ದರೆ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ಆದ್ದರಿಂದ ರೈತರು ಏನಾದರೂ ಅರ್ಜಿ ಕೊಟ್ಟರೆ ಅಧಿಕಾರಿಗಳು ಸ್ಥಳಕ್ಕೆ ಕೂಡಲೆ ಹೋಗಿ ಪರಿಶೀಲನೆ ಮಾಡಿ ಒಂದು ವಾರದೊಳಗೆ ತೀರ್ಮಾನ ಮಾಡಬೇಕು.

ಇನ್ನು ಭೂಸುಧಾರಣೆ ವಿಧೇಯಕವನ್ನು ಮಂಡನೆ ಮಾಡುವ ಮೊದಲೇ ಖಾತೆ ಬದಲಾವಣೆಗಳು ಆಗಿರಬೇಕು. ಕೆಲವು ಕಡೆ ಆಗಿಹೋಗಿರಬಹುದು. ಆದರೆ ಎಲ್ಲ ಕಡೆಯೂ ಆಗಿರಬೇಕೆಂದು ನಾನು ಕೇಳಿಕೊಳ್ಳುವುದು. ಮತ್ತು ಇದರ ಜೊತೆಗೆ ಭೂಸುಧಾರಣಾ ವಿಧೇಯಕವನ್ನು ತರುವುದಕ್ಕೆ ಮೊದಲೇ ನಮಗೆ ಹಿಡುವಳಿ ಜಮೀನು ಎಷ್ಟಿದೆ, ಗೇಣಿ

ಜಮೀನು ಎಷ್ಟಿದೆ, ಪಾಳು ಭೂಮಿ ಎಷ್ಟಿದೆ ಎಂಬ ಬಗ್ಗೆ ಅಂಕಿಅಂಶಗಳನ್ನು ಒದಗಿಸಬೇಕು. ಇದನ್ನೆಲ್ಲಾ ನಮಗೆ ಒದಗಿಸದೇ ಇರುವಾಗ ತಾವು ಭೂಸುಧಾರಣೆಯನ್ನು ಯಾವ ರೀತಿ ಜಾರಿಗೆ ತರುತ್ತೀರಾ ಎನ್ನುವುದರ ಬಗ್ಗೆ ನಾನು ವಿಮಂಚನೆಗೆ ಒಳಗಾಗಿದ್ದೇನೆ.

ನಮ್ಮ ಭಾಗದಲ್ಲಿ ಟಿ. ಟಿ. ಕಂದಾಯ ಎಂದು ಹಾಕುತ್ತಿದ್ದಾರೆ. ನಾನು ಈ ಬಗ್ಗೆ ಹೇಳುವುದೇನೆಂದರೆ, ಯಾರೇ ಜಮೀನುದಾರರು ಆಗಿರಲಿ, ಒಂದು ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರೂ ಸಹ ಅದನ್ನು ಸರ್ಕಾರದವರು ವಾಪಸ್ ತೆಗೆದುಕೊಳ್ಳಬೇಕು. ಆದರೆ ತಾವು ಅವರ ಹತ್ತಿರ ಹೋಗುವುದಿಲ್ಲ ; ಅವರನ್ನು ಕಂಡರೆ ಹೆದರುತ್ತೀರಿ ? ಒತ್ತುವರಿ ಮಾಡಿಕೊಂಡ ಜಮೀನಿಗೆ ಟಿ. ಟಿ. ಕಂದಾಯ ಹಾಕದೆ ಅದನ್ನು ಸ್ವಾಧೀನ ಮಾಡಿಕೊಂಡು ಅದನ್ನು ಭೂಹೀನ ರೈತರಿಗೆ ಕೊಡಬೇಕು. ಮಾನ್ಯ ಮಂತ್ರಿಗಳು ಅಧಿಕಾರಕ್ಕೆ ಬಂದಮೇಲೆ ಒಂದು ವ್ಯವಸ್ಥೆಯಾಗಿದೆ. ಏನೆಂದರೆ, ಹಿಂದೆಲ್ಲಾ ಜಮೀನುದಾರರು, ಗೇಣಿದಾರರು ಎಂದು ಇದ್ದರು ಈಗ ಇವರು ಟಿ. ಟಿ. ದಾರರು ಎಂದು ಒಂದು ಹೊಸ ವರ್ಗವನ್ನು ನಿರ್ಮಾಣ ಮಾಡಿದ್ದಾರೆ. ಕೆಲವು ಕಡೆ ಸಾವಿರದಿಂದ ಎರಡೂವರೆ ಸಾವಿರದವರೆಗೆ ಟಿ.ಟಿ. ಹಾಕುತ್ತಿದ್ದಾರೆ. ಇದಕ್ಕೆ ಕಾರಣ ಆ ಜಮೀನುಗಳು ಫಾರೆಸ್ಟ್‌ಗೆ ಸೇರಿದ್ದು, ರೆವಿನ್ಯೂ ಇಲಾಖೆಗೆ ಸೇರಿದ್ದು ಅಲ್ಲ ಎಂದು ಹೇಳುತ್ತಾರೆ. ಭೂಸುಧಾರಣೆ ಜಾರಿಗೆ ಬರುವುದರೊಳಗೆ ರೆವಿನ್ಯೂ ಇಲಾಖೆಯವರು ಮತ್ತು ಅರಣ್ಯ ಇಲಾಖೆಯವರು ಈ ಬಗ್ಗೆ ಒಂದು ಇತ್ಯರ್ಥಕ್ಕೆ ಬರಬೇಕು. ಸಾಗುವಳಿಗೆ ಯೋಗ್ಯವಾದ ಭೂಮಿಯನ್ನು ಅರಣ್ಯ ಇಲಾಖೆಗೆ ಸೇರಿದ್ದರೆ ಅದನ್ನು ರೆವಿನ್ಯೂ ಇಲಾಖೆಗೆ ತೆಗೆದುಕೊಳ್ಳಬೇಕು. ಪ್ರಪೋಸ್ಡ್ ರೆವಿನ್ಯೂ ಲ್ಯಾಂಡ್ ಎಂದು ಇರುವ ಕಡೆಗಳಲ್ಲಿ ಅಫಾರೆಸ್ಟೇಷನ್ ಬೆಳೆಸುತ್ತಿದ್ದಾರೆ. ರೈತರ ಜಮೀನಿನ ಬೇಲಿಯವರೆಗೆ ಬೆಳೆಸಿಬಿಟ್ಟಿದ್ದಾರೆ. ಇನ್ನೂ ಮುಂದೆ ಹೋಗಿ ಹೇಳಬೇಕೆಂದರೆ, ರೈತರ ಕೊಟ್ಟಿಗೆಯವರೆಗೆ ಬಂದಿದ್ದಾರೆ. ಈ ರೀತಿ ಯಾರು ಯಾರು ಶ್ರೀಮಂತರು ಅಕ್ರಮ ಸಾಗುವಳಿ ಮಾಡುತ್ತಿದ್ದಾರೋ ಅವರಿಂದ ಆ ಜಮೀನನ್ನು ವಾಪಸ್ ಪಡೆದುಕೊಂಡು, ಅದನ್ನು ಯಾರು ಗೇಣಿದಾರರಿದ್ದಾರೆ, ಯಾರು ಬಡವರಿದ್ದಾರೆ, ಯಾರು ಭೂಹೀನರಿದ್ದಾರೆ, ಅವರ ಹೆಸರಿಗೆ ಖಾತೆ ಮಾಡಿಕೊಡಬೇಕು. ಇದರ ಜೊತೆಗೆ ಅರಣ್ಯ ಇಲಾಖೆಗೆ ಸೇರಿದಂಥ ಭೂಮಿ ಇದೆಯೋ, ಅದು ವ್ಯವಸಾಯಕ್ಕೆ ಯೋಗ್ಯವಾಗಿದ್ದರೆ ಅದನ್ನು ಸಹ ರೆವಿನ್ಯೂ ಇಲಾಖೆಯವರು ಬಿಡಿಸಿಕೊಂಡು ಭೂಹೀನ ರೈತರಿಗೆ ಕೊಡಬೇಕು.

ಇದು ವಾಟರ್ ಸೆಸ್ ಎಂದು ಹಾಕುತ್ತಿದ್ದಾರೆ. ನಮ್ಮ ತಾಲ್ಲೂಕ್‌ನೊಳಗೆ 247 ಕೆರೆಗಳಿವೆ. ಆದರೆ ನೀರು ಇರುವುದು ಮಾತ್ರ 8–10 ಕೆರೆಗಳಲ್ಲಿ ಮಾತ್ರ. ಉಳಿದ ಕೆರೆಗಳು ಕೇವಲ ಕಾಗದದ ಮೇಲೆ ಇವೆಯೇ ಹೊರತು, ಅವುಗಳಲ್ಲಿ ನೀರು ಮಾತ್ರ ಇಲ್ಲ. ಆದರೂ ಸಹ ಈ ಕೆರೆಗಳ ಪಕ್ಕದಲ್ಲಿರುವ ಜಮೀನುಗಳಿಗೆ ವಾಟರ್ ಸೆಸ್ ಹಾಕಿದ್ದಾರೆ. ಮತ್ತು 6–7 ವರ್ಷಗಳದ್ದು ಒಂದೇ ಸಲ ಕೊಡಬೇಕೆಂದು ಹೇಳುತ್ತಿದ್ದಾರೆ. ಇದು ಸರಿಯಲ್ಲ. ಇದರ ಬಗ್ಗೆ ತಕ್ಷಣ ಪರಿಶೀಲನೆ ಮಾಡಿ, ಯಾವ ಕೆರೆಗಳಲ್ಲಿ ನೀರು ಇಲ್ಲ, ಅಂತಹ ಕಡೆಗಳಲ್ಲಿರುವ ಜಮೀನುಗಳಿಗೆ ಹಾಕಿರುವ ವಾಟರ್‌ಸೆಸ್‌ನ್ನು ರದ್ದು ಮಾಡಬೇಕು.

ಕಳೆದ 25 ವರ್ಷಗಳಿಂದ ರೈತರಿಗೆ ಮತ್ತು ಬಡವರಿಗೆ ನೀವು ಏನು ಮಾಡಿದ್ದೀರಿ ? ರೈತರ ಸಲುವಾಗಿ ಏನಾದರೂ ರಿಯಾಯಿತಿ ತೋರಿಸಿದ್ದೀರಾ ? ಅವರಿಗೆ ಏನಾದರೂ ಉಪಕಾರ ಮಾಡಿದ್ದೀರಾ ಅವರಿಗಾಗಿ ಏನೇನು ಮಾಡಿದ್ದೀರಿ ಎಂಬುದನ್ನು ಬೆಟ್ಟುಮಡಿಸಿ ತೋರಿಸಿ ? ಪುರಂದರ ದಾಸರ ಭಜನೆ ಮಾಡುವುದಕ್ಕೆ ಎಷ್ಟೋ ಹಣ ಕೊಟ್ಟಿದ್ದೀರಿ. ನೀವು ರೈತರ ಏಳಿಗೆಯ ಬಗ್ಗೆ ಏನೂ ಮಾಡಿಲ್ಲ. ರೈತನಿಗೆ ವಾಟರ್‌ಸೆಸ್ ಹಾಕಿ ಅವನ ಬೆನ್ನೆಲುಬು ಮುರಿಯುವುದಕ್ಕೆ ಬಗ್ಗೆ ಏನು ಪ್ರಯತ್ನ ಮಾಡುತ್ತಿದ್ದೀರಿ ಅದನ್ನು ಕೈ ಬಿಡಬೇಕು.

ನಮ್ಮಲ್ಲಿ ಮುಂಜರಾಯಿ ಗೇಣಿದಾರರನ್ನು ಖಾಯಂ ಪಟ್ಟಾದಾರರನ್ನಾಗಿ ಮಾಡಬೇಕು. ಸೊಂಡೂರಿನ ಇನಾಮ್ತಿಯನ್ನು ಏತಕ್ಕೆ ರದ್ದು ಮಾಡಲಿಲ್ಲ ? ಆ ಜಮೀನನ್ನು ಸುಮಾರು 20 ಸಾವಿರ ಎಕರೆ ಜಮೀನನ್ನು ಸಕ್ಕರೆ ಕಾರ್ಖಾನೆಗೆ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆ ಜಮೀನನ್ನು ಸಕ್ಕರೆ ಕಾರ್ಖಾನೆಗೆ ಕೊಡಬೇಕಾದ್ದಿಲ್ಲ. ಆ ಜಮೀನನ್ನು ಅಲ್ಲಿರತಕ್ಕ ರೈತರಿಗೆ ಕೊಡಿ. ಭೂಹೀನ ರೈತರಿಗೆ ಕೊಡಿ, ನಿರ್ಗತಿಕರಿಗೆ ಕೊಡಿ, ಬಡವರಿಗೆ ಕೊಡಿ. ಅದನ್ನು ಬಿಟ್ಟು ಅರ್ಥ ಸಚಿವರ ಹಿತವನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ಆ ಜಮೀನನ್ನು ಸಕ್ಕರೆ ಕಂಪನಿಗೆ ಕೊಡುವುದಾದರೆ ಆ ಬಗ್ಗೆ ನಾವು ಉಗ್ರವಾದ ಚಳುವಳಿಯನ್ನು ಮಾಡಬೇಕಾಗುತ್ತದೆ. ಆದ್ದರಿಂದ ಸೊಂಡೂರಿನ ಇನಾಂ ಜಮೀನನ್ನು ಸಕ್ಕರೆ ಕಂಪನಿಗೆ ಕೊಡದೆ ರೈತರಿಗೇ ಕೊಡಬೇಕು. ಈ ಬಗ್ಗೆ ಸರ್ಕಾರದವರು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು.

ಮಾನ್ಯ ಕಂದಾಯ ಮಂತ್ರಿಗಳು ತಮ್ಮ ಕಾಲದಲ್ಲಿ ಉಳುವವನೇ ಭೂಮಿಯ ಒಡೆಯ ಆಗುವಂತೆ ಮಾಡಬೇಕು. ಹಳ್ಳಿಯ ಜನರು ಬದುಕಿ ಬಾಳಲು ಅವರ ಬಾಳು ಬಂಗಾರ ಆಗುವುದಕ್ಕೆ ಏನಾದರೂ ಕೆಲಸವನ್ನು ಮಾಡಬೇಕು. ಬರೀ ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕ ಜನಗಳ ಹಿತರಕ್ಷಣೆ ಮಾಡುವುದಕ್ಕೆ ಹೋಗದೆ ಹಳ್ಳಿಯಲ್ಲಿರತಕ್ಕ ಜನಗಳ ಹಿತರಕ್ಷಣೆಯನ್ನು ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ನಾನು ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವರಿಗೆ ಶಕ್ತಿ ಇದ್ದರೆ ಮೂಲಭೂತ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಂಡು ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ಕೃತಜ್ಞತೆಯನ್ನು ಅರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ದಾಮೋದರ ಮುಲ್ಕಿ (ಮೂಡಬಿದರೆ) :—ಸನ್ಮಾನ್ಯ ಉಪಾಧ್ಯಕ್ಷರೇ ಮಾನ್ಯ ಕಂದಾಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತಾ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಕಂದಾಯ ಇಲಾಖೆಯನ್ನು ಕುರಿತು ಹೇಳುವುದಾದರೆ ಬಹುಶಃ ಸರ್ಕಾರಿ ಇಲಾಖೆಯಲ್ಲಿ ಇಷ್ಟು ಮಂದಗತಿಯಿಂದ ಹೋಗತಕ್ಕ ಇಲಾಖೆ ಮತ್ತೊಂದಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ರೆವಿನ್ಯೂ ಇಲಾಖೆಯ ಆಫೀಸುಗಳಲ್ಲಿ ಸುಮಾರು 10–15 ವರ್ಷಗಳಿಂದ ಫೈಲುಗಳು ಬಾಕಿ ಇರುವುದು ಕಂಡುಬರುತ್ತದೆ. ಇತ್ತೀಚೆಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಹೋದ ಕಡೆಗಳಲೆಲ್ಲಾ ತಾಲ್ಲೂಕು ಆಫೀಸುಗಳಿಗೆ ಸರಪ್ರೈಜ್ ವಿಜಿಟ್ ಕೊಟ್ಟು ಬಾಕಿ ಇಟ್ಟಿರುವ ಫೈಲುಗಳನ್ನು ಕಂಡುಹಿಡಿದಿದ್ದಾರೆ. ಅವರು ಅದನ್ನು ಮುಂದುವರಿಸಬೇಕು. ಅದರ ಜೊತೆಗೆ ಈ ಇಲಾಖೆಯಲ್ಲಿರತಕ್ಕ ಉನ್ನತ ಅಧಿಕಾರಿಗಳೂ ಸಹ ಈ ಒಂದು ಸಂಪ್ರದಾಯವನ್ನು ಅನುಸರಿಸಿದರೆ ಆಫೀಸುಗಳಲ್ಲಿ ಬಾಕಿ ಇರತಕ್ಕ ಫೈಲುಗಳೆಲ್ಲಾ ಬೇಗ ಇತ್ಯರ್ಥವಾಗುತ್ತವೆ ಎನ್ನುವ ಆಶೆ ನನಗೆ ಇದೆ.

ಇನ್ನು ಕಳೆದ 25 ವರ್ಷಗಳಿಂದ ಸರ್ಕಾರದವರು ಭೂಸುಧಾರಣೆಯನ್ನು ತರುತ್ತೇವೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಇದನ್ನು ಕೇಳಿದ ಬಡಬೋರೇಗೌಡ ಭೂಸುಧಾರಣಾ ಕಾನೂನು ಬರುತ್ತದೆಯೋ ಇಲ್ಲವೊ ಎನ್ನುವ ಸಂಶಯ ಹೋಗಿಲ್ಲ. ಕಳೆದ ಆಗಸ್ಟ್ 15ರ ವೇಳೆಗೆ ಭೂಸುಧಾರಣೆಯನ್ನು ತರುತ್ತೇವೆ ಎಂದು ಸರ್ಕಾರದವರು ಹೇಳಿದ್ದರು. ಆದರೆ ಅದು ಇಷ್ಟರವರೆಗೆ ಬರಲಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆ ಭೂಸುಧಾರಣೆಯನ್ನು ಜಾರಿಗೆ ತರಬೇಕು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಸುಧಾರಣಾ ಕಾನೂನು ಕಾರ್ಯಗತವಾಗುವುದು ವಿಳಂಬವಾಗಿರುವುದರಿಂದ ಎಷ್ಟೋ ಜನಗಳಿಗೆ ತೊಂದರೆಯಾಗಿದೆ. ಅಲ್ಲಿ 100ಕ್ಕೆ 50–55 ಮಂದಿ ಗೇಣಿದಾರರಿಗೆ ಸ್ವಂತ ಭೂಮಿ ಇರುವುದಿಲ್ಲ. ಅಲ್ಲಿಯ ಪರಿಸ್ಥಿತಿ ಹೇಗಿದೆ ಎಂದರೆ ಅಲ್ಲಿರತಕ್ಕ ಜಮೀನ್ದಾರರಿಗೆ ಅನೇಕ ವರ್ಷಗಳಿಂದ

ಗೇಣಿದಾರರಿಂದ ರೆಂಟ್ ಬಂದಿಲ್ಲ. ಜಮೀನ್ದಾರರು ಗೇಣಿದಾರನಿಗೆ ಗೇಣಿ ಕೊಟ್ಟಿದ್ದಕ್ಕೆ ಯಾವ ರಶೀತಿಯನ್ನು ಕೊಡುತ್ತಿಲ್ಲ. ಗೇಣಿದಾರ ಜಮೀನನನ್ನು ಸಾಗು ಮಾಡುತ್ತಿದ್ದುದಕ್ಕೆ ಯಾವ ಒಂದು ರೆಕಾರ್ಡು ಇಲ್ಲ. ವಿಲೇಜ್ ಅಕೌಂಟೆಂಟರುಗಳು ತಮ್ಮ ಆಫೀಸುಗಳಲ್ಲಿ ಕುಳಿತುಕೊಂಡು ದೊಡ್ಡ ದೊಡ್ಡ ಜನರ ಹವ್ಯಾಸ ಮಾಡಿಕೊಂಡು ಗೇಣಿದಾರರನ್ನು ಬಿಟ್ಟು ಜಮೀನ್ದಾರರ ಹೆಸರಿಗೆ ಪಹಣಿಯನ್ನು ಬರೆಯುತ್ತಿದ್ದಾರೆ. ಆ ರೀತಿ ಪಹಣಿಯನ್ನು ಬರೆದರೆ ರೆವಿನ್ಯೂ ಇನ್‌ಸ್ಪೆಕ್ಟರಿಗೆ ಮತ್ತು ತಹಶೀಲ್ದಾರರಿಗೆ ಇಷ್ಟು ಪರ್ಸೆಂಟ್ ಕೊಡಬೇಕು ಎನ್ನುವ ಒಂದು ಪದ್ಧತಿ ಇದೆ. ನಾನು ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಪಹಣಿ ಪತ್ರಗಳು ಬರೆದಿರುವುದು ಸರಿಯಾಗಿಲ್ಲ. ಆದ್ದರಿಂದ ಅನೇಕ ಜನ ಗೇಣಿದಾರರ ಭೂಮಿ ಉಳಿದುಕೊಳ್ಳುವ ಸ್ಥಿತಿಯಲ್ಲಿಲ್ಲ. ಆದಕಾರಣ ಈಗ ಇರುವ ಎಲ್ಲಾ ಪಹಣಿ ಪತ್ರಗಳನ್ನೂ ಕ್ಯಾನ್ಸಲ್ ಮಾಡಿ ಪ್ರತ್ಯೇಕವಾದ ಪಹಣಿಯನ್ನು ಉತ್ತಮವಾದ ರೀತಿಯಲ್ಲಿ ಬರೆಯುವ ಹಾಗೆ ಅಧಿಕಾರಿಗಳಿಗೆ ಆದೇಶ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ವಿಲೇಜ್ ಅಕೌಂಟೆಂಟರ ಬಗ್ಗೆ ಎಷ್ಟು ಹೇಳಿದರೂ ಅದು ಮುಗಿಯುವ ಅಧ್ಯಾಯವಲ್ಲ. ಹಿಂದೆ ಇದ್ದ ಶ್ಯಾನುಭೋಗರು 5–10 ರೂಪಾಯಿಗಳಿಗೆ ಕೆಲಸವನ್ನು ಮಾಡಿಕೊಡುತ್ತಿದ್ದರು. ಆದರೆ ಇವೊತ್ತು 50–60 ರೂಪಾಯಿಗಳನ್ನು ಕೊಟ್ಟರೂ ಅವರು ಕೆಲಸ ಮಾಡುವುದಿಲ್ಲ. ಮತ್ತು ಮಾಡಿದ ಕೆಲಸವನ್ನು ಸರಿಯಾಗಿ ಮಾಡಿಕೊಡುತ್ತಿಲ್ಲ. ತಕ್ಷಣ ನಮ್ಮ ಕಡೆಯಲ್ಲಿರತಕ್ಕ ವಿಲೇಜ್ ಅಕೌಂಟೆಂಟರುಗಳನ್ನು ಮತ್ತು ಪಹಣಿ ಪತ್ರ ಬರೆಯುವವರನ್ನು ಅವರ ಊರಿನಲ್ಲಿ ಇರಿಸಬಾರದು, ಅವರನ್ನು ಟ್ರಾನ್ಸ್‌ಫರ್ ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಮ್ಮಲ್ಲಿ ಇನ್ನೊಂದು ಕೊರತೆ ಇದೆ. ಜಮೀನನ್ನು ಪಡೆಯುವಾಗ ಬೋನಾಫೈಡಿ ಕಲ್ಟಿವೇಟರ್ ಮಾತ್ರ ಜಮೀನನ್ನು ಪಡೆಯುತ್ತಿದ್ದಾನೆ. ಅದಕ್ಕೆ ಕಾನೂನು ಇದೆ. ನಮ್ಮಲ್ಲಿ ಖುಷ್ಕಿ, ತರೀ—ಹೀಗೆ ಬೇರೆಬೇರೆ ಭೂಮಿ ಇದೆ. ಗುಡ್ಡಗಾಡು ಪ್ರದೇಶಗಳಲ್ಲಿ 10–15 ಎಕರೆ ಜಮೀನನ್ನು ಒಬ್ಬ ಬಡ ರೈತ ಉಪಯೋಗ ಮಾಡಿಕೊಂಡಿರುತ್ತಾನೆ. ಅವನು ದುರ್ದೈವದಿಂದ ಆ ರೀತಿ ಪಡೆದುಕೊಂಡಂತಹ ಜಮೀನಿನಲ್ಲಿ ಮನೆ ಕಟ್ಟಿದರೆ, ಕೂಡಲೇ ಅವನಿಗೆ ನೋಟೀಸ್ ಬರುತ್ತದೆ. ನೀವು ಕಲ್ಟಿವೇಟರ್ ಅಲ್ಲ, ಅಲ್ಲಿ ಮನೆ ಕಟ್ಟಬಾರದೆಂದು ಹೇಳುತ್ತಾರೆ. ಆದ್ದರಿಂದ ಈಗ ಸಣ್ಣಸಣ್ಣ ಮಾಲೀಕರುಗಳಿಗಾಗಲೀ ಅಥವಾ ದೊಡ್ಡದೊಡ್ಡ ಮಾಲೀಕರುಗಳಿಗಾಗಲೀ ಬೋನಾಫೈಡಿ ಕಲ್ಟಿವೇಟ್ ಆಗುವುದು ಅಗತ್ಯವಿದೆ. ಮನೆ ಕಟ್ಟತಕ್ಕಂಥ ಜಮೀನ್ದಾರರಿಗೆ ಈ ರೀತಿಯಾಗಿ ಉಪದ್ರವ ಕೊಡುವುದು ಸರಿಯಲ್ಲ.

ಇನ್ನೊಂದು ವಿಷಯ ಕನ್‌ವರ್ಷನ್ ಆಫ್ ಲ್ಯಾಂಡ್‌ಗೆ ಸಂಬಂಧಪಟ್ಟದ್ದು. ಒಬ್ಬ ಅವಿದ್ಯಾವಂತ ಒಂದು ಸಣ್ಣ ಮನೆಯನ್ನು ಕಟ್ಟಬೇಕಾದರೆ ಆ ಜಾಗ ನಾನ್‌ಅಗ್ರಿಕಲ್‌ಚರಲ್ ಲ್ಯಾಂಡಾಗಿ ಕನ್‌ವರ್‌ಷನ್ ಮಾಡಬೇಕು. ರೆವಿನ್ಯೂ ಇನ್‌ಸ್ಪೆಕ್ಟರ್ ಆಫೀಸಿನಿಂದ ಅಸಿಸ್ಟೆಂಟ್ ಕಮಿಷನರ್ ಆಫೀಸಿನವರೆಗೆ ಅಲೆದು ಆ ಕೆಲಸವಾಗಬೇಕಾದರೆ ಒಂದು ವರ್ಷ ಆಗುತ್ತದೆ. 500 ರೂಪಾಯಿಗಳವರೆಗೆ ಅದಕ್ಕಾಗಿ ಖರ್ಚುಮಾಡುತ್ತಾರೆ. ಆದ್ದರಿಂದ ಈಗ ಕನ್‌ವರ್ಷನ್ ಆಫ್ ಲ್ಯಾಂಡನ್ನು ಆಯಾ ಪಂಚಾಯತಿಗಳಿಗೇ ಬಿಟ್ಟರೆ ಬಡ ಜನರಿಗೆ ಆಗುವ ಅನಾನುಕೂಲತೆ ತಪ್ಪುತ್ತದೆ. ಆ ಪಂಚಾಯತಿಗಳಲ್ಲಿ ವಿಲೇಜ್ ಅಕೌಂಟೆಂಟ್ ಇರುತ್ತಾರೆ. ಅಂತಹ ವ್ಯವಸ್ಥೆಯನ್ನು ಅಲ್ಲಿಯೇ ಮಾಡಿಕೊಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನು ಲ್ಯಾಂಡ್ ಗ್ರಾಂಟ್ ಕಮಿಟಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಅದಕ್ಕೆ ಒಂದು ಕಮಿಟಿ ಇದೆ. ಆದರೆ ಅದರ ಸಲಹೆಗೆ ಹೆಚ್ಚಿನ ಪುರಸ್ಕಾರವಿಲ್ಲ ಎನ್ನುವುದನ್ನು ಒಬ್ಬ ಸದಸ್ಯರು ಹೇಳಿದರು. ಒಬ್ಬ ಸ್ಪೆಷಲ್ ಎ. ಸಿ. ಯವರಿಂದ ಒಂದು ಪ್ರಮಾಣ

ಪತ್ರವನ್ನು ತೆಗೆದುಕೊಳ್ಳುವಾಗ ಕಾರಣಾಂತರದಿಂದ ಅಲ್ಲಿ ಹಣ ತೆಗೆದುಕೊಳ್ಳದೇ ಇರತಕ್ಕ ಸಂದರ್ಭವೂ ಬರುತ್ತದೆ. ಆದ್ದರಿಂದ ಅದನ್ನೂ ಕೂಡ ಆ ಕಮಿಟಿಯಲ್ಲಿ ಆಗಲೇ ಕೊಡಬೇಕೆಂದು ಹೇಳುವುದು ಸೂಕ್ತ..

ಇನ್ನು ಮುಜರಾಯಿ ಇಲಾಖೆಯನ್ನು ಕುರಿತು ಮಾತನಾಡುವುದಾದರೆ, ಬಹುಶಃ ಮುಜರಾಯಿ ಇಲಾಖೆಯ ಇನ್‌ಸ್ಪೆಕ್ಟರನ್ನು ಸಮಾಧಾನಪಡಿಸಿದರೆ ಈ ದೇವಸ್ಥಾನದಲ್ಲಿ ಯಾವ ಕಾರ್ಯಕ್ರಮವೇ ಆಗಲಿ ನಡೆದುಬಿಡುತ್ತದೆ. ಯಾವ ರೀತಿಯಲ್ಲಾದರೂ ಅನುಕೂಲ ಪಡಿಸಬಹುದು ಕೆಲವು ಸಂದರ್ಭಗಳಲ್ಲಿ ಎಷ್ಟೋ ಅವ್ಯವಹಾರಗಳು ನಡೆಯುತ್ತವೆ. ನಮ್ಮ ಊರಿನಲ್ಲಿ ಒಂದು ದೇವಸ್ಥಾನವಿದೆ. ಅಲ್ಲಿ ಕಳೆದ 20 ವರ್ಷಗಳಿಂದಲೂ ಟ್ರಸ್ಟ್ ಮೆಂಬರ್ಸ್ ಯಾರು ಇದ್ದಾರೋ ಅವರೇ ಮುಂದುವರಿಯುತ್ತಿದ್ದಾರೆ. ತೋರುವಿಕೆಗೆ ಮಾತ್ರ ಈ ಒಂದು ಟ್ರಸ್ಟ್ ಇದೆಯೆಂದು ಹೇಳಬೇಕಾಗಿದೆ ಆ ಇಲಾಖೆಯಿಂದ ಯಾವ ಒಂದು ನೋಟಿಫಿಕೇಷನ್ ಸಹ ಆಗುವುದಿಲ್ಲ. ಆ ಟ್ರಸ್ಟಿನಲ್ಲಿರತಕ್ಕವರಲ್ಲಿ ಒಬ್ಬರಿಗೆ ಕಣ್ಣು ಕಾಣುವುದಿಲ್ಲ. ಇನ್ನೊಬ್ಬರು ಮುದುಕರು ಕಳೆದ ನಾಲ್ಕು ವರ್ಷಗಳಿಂದ ಡಯಾಬಿಟೀಸ್ ಖಾಯಿಲೆಯಿಂದ ಅವರು ನರಳುತ್ತಿದ್ದಾರೆ. ಮತ್ತೊಬ್ಬರು ಕಾಲು ಮುರಿದು ಕೊಂಡು ಕೂತಿರುವರು. ಇಂತಹ ಒಂದು ಮ್ಯಾನೇಜ್‌ಮೆಂಟ್ ಇದೆ. ಅದು ಒಂದು ಟ್ರಸ್ಟ್ ಇಂಥಾದ್ದನ್ನು ನಾನು ಅಧಿಕಾರವರ್ಗದವರ ಗಮನಕ್ಕೆ ತಂದರೆ, ಯಾವುದೇ ಕ್ರಮವನ್ನು ಇದುವರೆಗೂ ತೆಗೆದುಕೊಂಡಿಲ್ಲ. ನಾನು ಈ ಸಂದರ್ಭದಲ್ಲಿ ಇನ್ನೊಂದು ಸಲಹೆಯನ್ನು ಕೊಡುತ್ತೇನೆ. ಪೂಜಾ ಕಾರ್ಯಮಾಡುವವರಿಗೆ ಕೇರಳದಲ್ಲಿ ಒಂದು ಶಾಲೆಯನ್ನು ನಡೆಸುತ್ತಾರೆ. ಅಲ್ಲಿ ಯಾವ ರೀತಿಯಲ್ಲಿ ಪೂಜೆ ನಡೆಸಬೇಕೆಂಬ ಬಗ್ಗೆ ಟ್ರೈನಿಂಗ್ ಕೊಡುತ್ತಾರೆ. ಆ ರೀತಿಯಲ್ಲಿ ಟ್ರೈನಿಂಗ್ ಶಾಲೆಯನ್ನು ನಮ್ಮಲ್ಲಿಯೂ ನಡೆಸಬೇಕು. ಎಲ್ಲಾ ದೇವಸ್ಥಾನಗಳಲ್ಲಿಯೂ ಇನ್ನು ಮುಂದೆ ಕೇವಲ ಬ್ರಾಹ್ಮಣರೇ ಪೂಜೆ ಮಾಡಬೇಕಾಗಿಲ್ಲ. ಹರಿಜನರಿಗೂ ಮತ್ತು ಇತರ ಜನಾಂಗದವರಿಗೂ ಅಲ್ಲಿ ಅವಕಾಶ ಇರುವಂತೆ ಸರ್ಕಾರ ವ್ಯವಸ್ಥೆ ಮಾಡಬೇಕು. ಎಲ್ಲ ಜನಾಂಗದವರನ್ನೂ ಸಹ ದೇವಸ್ಥಾಗಳಲ್ಲಿ ಪೂಜಾರಿಗಳಾಗಿ ನೇಮಿಸಬೇಕೆಂದು ನಾನು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಉತ್ತಮ ಆದಾಯವುಳ್ಳ ಕೆಲವು ದೇವಸ್ಥಾನಗಳಿವೆ. ಅವುಗಳು ಇನ್ನೂ ಮುಜರಾಯಿ ಇಲಾಖೆಗೆ ಸಂಬಂಧಪಟ್ಟಿದ್ದಾಗಿಲ್ಲ. ನಮ್ಮ ಜಿಲ್ಲೆಯ ಧರ್ಮಸ್ಥಳದಲ್ಲಿ ಅತ್ಯುತ್ತಮವಾದಂಥ ಒಂದು ದೊಡ್ಡ ದೇವಾಲಯ ಇದೆ. ಅದರ ಸಂಪತ್ತೆಲ್ಲಾ ಅದರ ಟ್ರಸ್ಟಿಯಾಗಿರುವವರ ಪರ್ಸನಲ್ ಖರ್ಚಿಗೇ ಹೋಗುತ್ತಿದೆ. ಸರ್ಕಾರ ಈ ದಿಸೆಯಲ್ಲಿ ಸ್ವಲ್ಪ ಕೆಲಸಮಾಡಿ ಇಂತಹ ದೇವಸ್ಥಾನಗಳನ್ನು ಜಾಗ್ರತೆಯಾಗಿ ಮುಜರಾಯಿ ಇಲಾಖೆಯವರು ವಶಪಡಿಸಿಕೊಂಡರೆ ಬಹಳ ಒಳ್ಳೆಯದೆಂದು ನಾನು ಸಲಹೆಮಾಡುತ್ತೇನೆ.

ಇಷ್ಟು ಹೊತ್ತು ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri C. M. ARUMUGHAM (K.G.F.)—

Mr. Deputy Speaker Sir, So many members on this side and that side who spoke before me said that they expected much from the Revenue Minister, being an agriculturist, to cater to the needs of the agriculturists of the State. I am one of those who expected that the Revenue Minister will destroy the whole structure that has been laid for thousands of years and introduce reforms to benefit one and all living in rural areas. There are

some good Ministers in our Government and some of them are bad also. My friend Sri Siddaveerappa, Hon'ble Minister for health is a good man, and Sri Hutchmasthy Gowda, Hon'ble Minister for Revenue is a good man. But, collectively it is a bad Government, it is a bad lot. It is our misfortune that this Government is there; it has no background. They talk about socialism. With all respects to Sri Siddaveerappa, I might ask him what kind of socialism is this. They should be able to say their aims and objects and the time within which they will implement them. Is it possible? I say theirs is only a platform talk. Land reforms have been diluted ,the spirit has been taken away by the protracted delay because so many vested interests are there. But many people in the country do not own even a piece of land. It may not be possible to give land to every-body. There are big landlords who dictate terms to the Government, who controls law and order and who are more powerful than the Minister himself. That is why it may not be possible to destroy the old structure. The Government cannot satisfy the people by distributing a few acres of land here and there, some forest land or land reserved for cattle. I would like to speak about this in detail when the Land Reforms Bills is taken up. The Government has miserably failed in this respect because they are not in a position to cater to the needs of the agriculturists and landless persons in the State. In olden days Revenue Department was considered to be a key department. Virtually it has lost its importance; it has become a department of collection. The Deputy Commissioner is the collector of revenue and loans granted by the Government through various departments. Even this work is not being done properly and effectively by these people.

For the last 23 years the Government have spent crores and crores of rupees on irrigation projects, as a result of which the land value has gone up considerably and production has also increased. But they have not been able to recover loans which were given. Tractor loans are being given to a few individuals; tractor loans are not given to those who own 5-10 acres of land. Persons who own more than 10 acres of land, more influential persons and persons who are nearer to the Ministers are given these loans. But even that loan which comes to about Rs. 19

lakhs has not been collected; they have collected only about Rs. 3 lakhs. This tells upon the Revenue Department. The collection system is defective. Of course, the Government might say that they are not in a position to collect these loans in Bidar, Gulbarga, Bijapur and Belgaum districts on account of draught conditions. But what about other districts of Mysore, Mandya, Bangalore, etc.? Sir, as I have already stated, though several irrigation projects have come up and land value has gone up, the Government has not been able to collect the loans. The water-rate dues stand at Rs. 6,52,56,326 up to end of 31st March 1972. This collection has been stopped for a number of years. I want to know why the Government has not been able to collect the water-rate. Is it because of the draught conditions or is it because that they are having inefficient officers in the Department? Now-a-days anybody can become an I.A.S. Officer and these I.A.S. officers are in charge of this work. But, what is their performance? Their performance shows that a sum of Rs. 6 crores is outstanding in the Revenue Department. The betterment levy outstanding is to the tune of Rs. 1,27,00,000. There are 19 Deputy Commissioners and above these people, there is a Commissioner for Revenue and Secretary to Government, Revenue Department.

The post of Divisional Commissioners is nothing but a post office. The Government cannot control the Deputy Commissioners ignoring the Divisional Commissioners. Sometimes the Government has appointed persons who will be suffering from all sorts of diseases as Divisional Commissioners. I may suggest to the Government that a person who is suffering from heart-trouble should never be appointed as Divisional Commissioner or to any other big post. The difficulty is that such ailing persons cannot face the demonstrations from the public. Sometimes they contribute to the delay in the disposal of papers. I therefore strongly feel that the post of Divisional Commissioners should be abolished.

The Revenue Department has failed to collect the land revenue arrears. The department has not faired well in the

collection of land revenue. I can therefore give only 25% of marks to the performance of the Revenue Minister.

As regards Muzrai institutions, I might say that our country is a secular country. Government cannot identify with any religion or God. Today we can see many Ministers including the Revenue Minister going to temples in the Government cars. Though this practice is against the Constitution yet they are doing.

Sri M. MALLIKARJUNASWAMY (Minister for Comunity Development and Social welfare).—Secular State does not mean irreligious State.

Sri C. M. ARUMUGHAM.—Government cannot be a religious Government. It has to maintain its secular character.

Sri H. SIDDAVEERAPPA (Minister for Health).—The Revenue Minister being in-charge of Muzrai institutions, he has to visit temple and mosques as a matter of duty.

Sri C. M. ARUMUGHAM.—Just like industries are controlled by Birlas from Bengal, the appointment of archaks to the temples are being controlled by certain communities. The posts of Archaks should be thrown open to people of other communities just like the Madras and Kerala Governments have done. Our Revenue Minister is having progressive views. I think he would bestow his thought to this matter and see that the posts of Archaks are thrown open to other communities as well. If there is a need to conduct an examination to select the Archaks, he can do so. The candidates who come out successful in the examination, may be appointed as Archaks. Democracy should not start from God. God does not make any distinction between this community and that community ; all communities are equal in the eyes of God.

Sri H. SIDDAVEERAPPA.—You yourself can worship God. There is no need for an Archak.

Sri C. M. ARUMUGHAM.—There must be a person to look after the idols. Nowadays you might have read in the papers

about the theft of idols and their despatch to USA or England. Therefore even to look after the idol, there must be a person. I therefore plead that such posts must be given to others also. You must follow the suit of Madras and Kerala. I know that some people have gone to Supreme Court in respect of appointment of Archaks. Nowadays even the Courts will follow the wind of the ruling party. But in Mysore such appointments must be given to other community people.

As my friend put it, you will have to prevent the temples being donars to any entertainment Houses. For Ledo theatre some temples are giving money. For Sangam Theatre also some temple was given money. These temples may invest their money for constructing some School buildings and for giving scholarships to poor students. They are not doing it. They have gone for constructing Theatres. I will leave this matter to the Hon. Minister to decide and do the needful in the matter. Even temples are in the bags of the Government. The Rich persons are purchasing the God himself, if it is available. Now-a-days it is possible to purchase God.

Mr. DEPUTY SPEAKER.—There are 33,000 temples in India.

Sri C. M. ARUMUGHAM.—Each individual will get 1½ God in India. We must take into account the private temples also.

Sri H. SIDDAVEERAPPA.—We must take action against the God himself.

Sri C. M. ARUMUGHAM.—The Hon. Chief Minister said about Minimum Wages Act. He said that he is not able to lay his fingers on the Act and this does not apply to the agricultural labourers. It has so happened that in Tanjore 46 agricultural labourers were given troubles by the land-lords. The Madras High Court said that the land-lords were the cause for it. All the land-lords were prosecuted in the Lower Court. They have been released on the guarantee that these land-lords will not commit these offences again. The Madras High Court too says that the land-lords will not commit any offences like setting fire and murder. This is the clearance given by the Madras High Court. But what is the position in Mysore about the agricultural

labourers ? If the law is not applicable to them, they cannot organise themselves to Unions to go against the land-lords in a big way. The Minimum Wages Act should be applicable to the agricultural labourers.

I want to speak one or two words about the land for cattle. According to our laws there must be 35 acres for 100 heads of cattle. You must give a re-thinking. You cannot reserve land for cattle. If I own cattle I must have my own land. Every agriculturist is having his own land. There is no trouble in this regard. Supposing a ryot is having 30 acres of land in America ; out of this 30 acres he should reserve 15 acres for cultivation and 15 acres for cattle grass, dairy farm and poultry. He will be having two telephones, two radios and one television. They drink milk up to their neck. But here you want to have 35 acres for 100 cattle.

ಶ್ರೀ ಕೆ. ಹೆಚ್. ಹನುಮೇಗೌಡ:— ಒಂದು ಎಕರೆ, ಅರ್ಧ ಎಕರೆ ಇರುವ ರೈತರೂ ಇದ್ದಾರೆ. ಆದರಿಂದ ಅವರು ಜೀವನ ಮಾಡುವುದು ಕಷ್ಟ. ಅವರಿಗೆ ದನಗಳಿಗೆ ಕೊಂಚ ಜಾಗ ಬಿಡಲು ಸಾಧ್ಯವೇ ? ಕ್ಯಾಟಲ್‌ವೆಲ್ತ್ ಹಾಳಾಗದಂತೆ ಲ್ಯಾಂಡ್ ರಿಸರ್ವ್ ಇಡಲೇ ಬೇಕು.

Sri G. M. ARUMUGHAM : If you think 2 acres are not sufficient you can get the land reforms Bill passed so that sufficient number of acres may be given to each ryot. Every day the meeting is going on, but no progress and the difficulty is how to draft the Bill. There is difficulty for draughtsman. Therefore there is so much of delay, and the Committee's work has not progressed. There are vested interests. They want to prevent the Bill being passed. That is the reason why the Land Reforms Bill has not been able to get through and the Government is not able to place it before the House. Then how to maintain the cattle ? Is it by leaving some land for the cattle ? If it is so you will have to leave some land. But there is no rain to grow grass. Everything depends upon the rain. I will have to leave this question, whether to reserve some land for this purpose or not, for the decision of the Revenue Minister. Certain principles will have to be followed in this regard. This is a matter I leave to the Revenue Minister.

Lastly, I will speak one or two words about the Revenue Depatment. This Department is an age-old Department. This

was a Department maintained by Ex-Maharajas and continued up till now. But the Officers of the Department have not become old:

The furniture is so rotten. There are no facilities. The Revenue Department is a department having direct connection with the agriculturists. Hundreds of people will come and if there is no proper office, if there is no proper accommodation, it would be very difficult. That shows that Government is not showing so much of interest or making any reformation or making any attempts to provide buildings. I know the Minister went to the Sub-Registrar's Office and checked whether money is collected whether there is excess money. While doing so, he must be able to provide proper buildings for the Revenue Department officials, in the State. The Assistant Engineer's Office is located in a pucca proper building. You must provide proper buildings for the Revenue Department officials.

Mr. DEPUTY SPEAKER.—The time allotted to Sri Arumugham, is over.

Sri C. M. ARUMUGHAM.—The Revenue Department does not work efficiently and the Revenue Officials are not doing their functions properly so far as the collections are concerned. Saying this, I conclude my speech.

Sri BAPU RAO ANANDA RAO (Basavakalyan).—While supporting the demands under consideration, I wish to deal with a few of the important problems that we are facing in Bidar District and make some suggestions.

At present, in Bidar District, there is only one Sub-Division of Revenue and there is a proposal to establish another Sub-Division in view of the fact that the Sub-Division at Bidar is already overburdened with files and work. I was given to understand that there are more number of cases than the Deputy Commissioner's office itself. A proposal is with the Government to establish a Sub-Division at Basavakalyan, comprising of Humnabad, Basavakalyan, and Bhalki talukas. If this is done, we can increase the efficiency and deliver the goods to the people in a better way.

As regards the works that are now entrusted to the Tahsildars, I wish to say that the activities of the Tashildar have increased multifariously. It has become another Block Development Office. Food is attached to it, collection is there and there is also other miscellaneous work. In view of this fact, I plead that a jeep should be provided to the Tashildar. There was a proposal also. But I do not know at what stage it is pending whether the Government is considering it or not. I request our Hon. Minister that during his period at least, the Tashildar should be given a jeep. It is essential because large areas have to be covered. Lack of a vehicle hampers the work of the Tahsildar because he has to rely on the mercy of the Block Development Officer, for a jeep. That is the state of affairs to-day.

Speaking about Land Grant Committees and Land Grant I think in Bidar District, though Consultative Committees have been formed, not a single Committee meeting has been called. As far as Basavakalyan and Humnabad and Bhalki are concerned, no meetings of the Committees have been called. There may not be lands, and even then, it should be brought to the notice of the Members of the Committee. This sort of affairs are going on there. Even if there are no lands, you must discuss that there are no lands by calling meetings. You cannot say : 'There are no lands and we are not meetings.' But actually, hundreds of acres of land are there. Therefore, there is force in saying that a separate Sub-Division should be formed at Basavakalyan. This is an argument that I put forth for a Sub-Division at Basavakalyan. Strict order should be issued that meetings of the Committees should be called. If the same state of affairs continues, the people will have no faith in you. What is the use of constituting Committees, which do no work at all ?.

Coming to the work of the Revenue Inspectors, generally speaking, in Bidar District, I desire to bring to the notice of the Hon. Minister, that the Revenue Inspectors are not working satisfactorily. Generally I am speaking. It is not a question of criticising. But in a way, they are not functioning properly. Disposal of papers of Mutation cases is very much delayed ; it has to go through several hands like Accountant, Sub-Registrar and

the Tashildar. This is particularly so in the case of land documents to be registered. It takes years together. Leaving aside the legality of the question, it takes years together.

Then about Taluka survey, the work has increased now. If a petition is presented for demarcation of lands, it is not done within a reasonable period. The argument put forth by the officers is : 'We are having less staff'. Therefore, I plead in the greater interest of the people that additional staff—more Surveyors—should be posted to the talukas to do this work. Basavakalyan taluka has been established long back. It is in the year 1965, but the post of Surveyor is not made permanent. It should be made permanent. Of course, this is a routine matter and there will be no difficulty in doing this work.

Bidar is hard hit by famine conditions. I request this House and the Hon. Minister that the ryot should be exempted from not only the land revenue but also the penal interest and the interest that he has to pay to the Government in view of this unprecedented famine and draught situation that has arisen in Bidar District.

I strongly request that these requests should be considered and relief should be given for the draught hit people. Already the agriculturist is put in great hardship. We can give some time limit to that. We may have to spend some more lakhs on this account. When we are spending crores of rupees, let this request also be considered sympathetically.

Another request I want to plead for is, that recently we have passed the Land Reforms. We should take all measures to see that the record of rights are not tampered. Necessary precautions should be taken about the record of rights, so that it may not be destroyed. These revenue officers and village accountants and Revenue Inspector may change the record. Therefore I am suggested that whatever possible steps that we to take to prevent it, we must do it.

Lastly, I plead along with this, the land revenue betterment levy is being demanded by the Deputy Commissioner and the

Assistant Commissioner in some taluks. I request that it should be stopped forthwith. When we are not having anything to pay, what about betterment levy ? There is no water in the tank. Therefore, I plead that this also should be exempted in that area. Orders might have been issued already. But in case orders are not already issued, I request that this matter may be considered very sympathetically.

About one instance I want to put forth. While granting loans, to the agriculturist, the Revenue Inspectors have played havoc. We have filed a petition with the Divisional Commissioner and the Deputy Commissioner. In addition to that, we have sent a copy to the Vigilance Commissioner. I think I can make a passing reference : when I was M.L.A. in 1962-67 some incident took place against B.D.O. and that enquiry is still going on with the Vigilance Commissioner and other officials. We are now in 1973 and I have been returned to this Assembly for a second term and the enquiry is still going and that case is not yet finalised. Effective steps either by Revenue Department or by any other Department to prevent such corruption should be taken immediately and deterrent punishment should be awarded to corrupt officers, so that others should feel that if we do some wrong, some one is there to look after our deeds. That fear element must be there.

With these, words, I support the Demand. I thank you for giving me a chance to speak.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ):—ಸನ್ಮಾನ್ಯ ಅಧ್ಯಕ್ಷರೇ ನಮ್ಮ ರಾಜಸ್ವ ಮಂತ್ರಿಗಳು ತಂದಿರತಕ್ಕಂಥ ಬೇಡಿಕೆಯನ್ನು ಸ್ವಲ್ಪ ಸ್ವಲ್ಪ ವಿರೋಧಿಸುತ್ತಾ ನಾನು ಕೆಲವು ಮಾತುಗಳನ್ನು ತಮಗೆ ತಿಳಿಸಬೇಕು ಅಂತ ಇಚ್ಛೆಪಡುತ್ತೇನೆ. ಬಹುಶಃ ಇದು ಸಮಾಜ ವಾದಿ ಸರ್ಕಾರ. ಸಮಾಜವಾದಿ ಕಾರ್ಯಕ್ರಮಗಳಲ್ಲಿ ಮೊದಲನೆಯ ಹಂತವಾಗಿ ಭೂಸುಧಾರಣೆಯನ್ನು ಜಾರಿಗೆ ತರತಕ್ಕಂಥ ಪ್ರಗತಿದಾಯಕ ಘೋಷಣೆಯನ್ನು ಮಾಡಿದ್ದಾರೆ.

ಘೋಷಣೆಗೆ ತಕ್ಕಂತೆ ಒಂದು ಸೆಲೆಕ್ಟ್ ಕಮಿಟಿಯನ್ನು ಮಾಡಿ ಆ ಸಮಿತಿಯ ವರದಿಗಾಗಿ ಬಹಳ ದಿನಗಳಿಂದ ಕಾಯುತ್ತಿದ್ದಾರೆ. ನನಗನ್ನಿಸುತ್ತದೆ, ಸಮಾಜವಾದದ ತತ್ವವನ್ನು ಒಪ್ಪ ತಕ್ಕಂಥ ಜನ, ಭೂ ಸುಧಾರಣೆಯನ್ನು ಕಾನೂನು ಮಾಡಿ ಆ ಕಾನೂನಿನಂತೆ ನಡೆಯಬೇಕು ಎನ್ನ ತಕ್ಕಂಥ ಜನ ನಿಮ್ಮ ಪಕ್ಷದಲ್ಲಿ ಕಡಿಮೆ ಇದ್ದಾರೆ. ಬಹುತೇಕ ಜನ ಜಮೀನ್ದಾರರು ಇದ್ದಾರೆ ಎಂದು ತೋರುತ್ತದೆ. ಮಾನ್ಯ ಸಚಿವರುಗಳು ಆಸ್ತಿಪಾಸ್ತಿಗಳನ್ನು ನೋಡಿದರೆ ನೀವು ಸಮಾಜ ವಾದ ಸರ್ಕಾರದ ಸಚಿವರು ಆಗುವುದಕ್ಕೆ ಅರ್ಹರು ಅಲ್ಲ ಎಂದು ನನ್ನ ವೈಯುಕ್ತಿಕ ಅಭಿಪ್ರಾಯ. ಹೆಚ್ಚಿನ ಜನ ಶ್ರೀಮಂತರು ಇದ್ದಾರೆ. ಶ್ರೀಮಂತ ಸಚಿವ ಶ್ರೀ ಕೆ. ಹೆಚ್. ಪಾಟೀಲರನ್ನು ನೋಡಿದ್ದೇವೆ, ಕಡಿಮೆ ಆಸ್ತಿ ಇರತಕ್ಕಂಥ ಸಚಿವರನ್ನು ನಾನು ನೋಡಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ :—ಆಶ್ಚರ್ಯವೆಂದರೆ, ಘೋರ್ಪಡೆ ಮಹಾರಾಜ ಬಡವರು.

ಶ್ರೀ ವಾಟಾಳ್ ನಾಗರಾಜ್ :—ಧೈರ್ಯವಾಗಿ ಹೇಳಬೇಕಂದರೆ ಸ್ವಲ್ಪ ಸತ್ಯಕ್ಕೆ ದೂರವಾದ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಆದರೆ ನಾನು ಒತ್ತಾಯ ಮಾಡುತ್ತಿದ್ದೇನೆ. ನಿಮ್ಮ ಬಗ್ಗೆ ಒಂದು ತನಿಖೆಯ ಆಯೋಗವನ್ನು ರಚಿಸಬೇಕು. 1947 ಕ್ಕೆ ಹಿಂದೆ ಅವರ ಆಸ್ತಿ ಏನು ಇತ್ತು ಅಲ್ಲಿಂದ ಈಚೆಗೆ 1973 ರವರೆಗೆ ಹೇಗೆ ಹೇಗೆ ಅವರು ಆಸ್ತಿಗಳನ್ನು ಮಾಡಿದರು, ಶ್ರೀಮಂತರು ಹೇಗೆ ಹೇಗೆ ಆದರು ಎಂಬುದು ಗೊತ್ತಾಗಬೇಕು. ನಾನು ಹುಚ್ಚ ಮಾಸ್ತಿಗೌಡ ರವರ ಬಗ್ಗೆ ಆರೋಪಣೆ ಮಾಡುತ್ತಾ ಇಲ್ಲ. ಎಲ್ಲರ ಮೇಲೂ ಆರೋಪಣೆ ಮಾಡುತ್ತೇನೆಂದು ಅಲ್ಲ. ನೀವು ಕೊಟ್ಟಿರತಕ್ಕ ಆಸ್ತಿಯ ಬಗ್ಗೆ ತನಿಖೆ ಮಾಡಿದಾಗ ನಿಜವಾಗಿ ಆಸ್ತಿಯ ವಿಚಾರವನ್ನು ಕೊಟ್ಟಿದ್ದಾರೆಯೋ ಅಥವಾ ಇಲ್ಲವೇ ಎಂದು ಗೊತ್ತಾಗುತ್ತದೆ. ನೀವು ಬರೆದು ಕೊಟ್ಟಿದ್ದು ನಿಜವೇ ಇಲ್ಲವೇ ಎಂದು ತೀರ್ಮಾನವಾಗಿ, ಅದಕ್ಕೆ ನ್ಯಾಯಾಂಗ ಮುದ್ರೆ ಒತ್ತಬೇಕಾ ದರೆ ಒಂದು ನ್ಯಾಯಾಂಗ ಸಮಿತಿ ರಚನೆ ಆಗಬೇಕು.

ಶ್ರೀ ಹೆಚ್. ಸಿದ್ದವೀರಪ್ಪ :—ಮಂತ್ರಿಗಳು ಕೌಪೀನ ಹಾಕಿಕೊಂಡಿರಬೇಕು ಎಂದು ತಮ್ಮ ಅರ್ಥವೇ ? By all means you constitute yourself a self-appointed Investigator and judge and what not. ಎಲ್ಲಿ ತಪ್ಪು ಆಸ್ತಿ ವಿವರ ಕೊಟ್ಟಿದ್ದಾರೆ ಎಂದು ಪರಿಷ್ಕೈ ಮಾಡಿ ಹೇಳಿ, ನ್ಯಾಯಾಂಗ ತನಿಖೆ ಏತಕ್ಕೆ ? ಇದುವರೆಗೆ ಅನೇಕ ಭೂಪರು ಆಸ್ತಿ ಪಟ್ಟಿ ಕೊಡಲೇ ಇಲ್ಲ, ಹಾಗೇ ಹೊರಟು ಹೋದರು.

Mr. DEPUTY SPEAKER.—I have told the Hon. Member that it is outside the scope of the Demand before the House. ಮಂತ್ರಿಗಳ ಅಸೆಟ್ಸ್ ಇದರಲ್ಲಿ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :—ಭೂ ಸುಧಾರಣೆ ಎಂದರೆ ಮಂತ್ರಿಗಳ ಆಸ್ತಿ ಹಾಗೇ ಇರಲಿ, ಬೇರೆಯವರ ಆಸ್ತಿಯ ಮೇಲೆ ಮಿತಿ ಹಾಕೋದು ಎಂದು ಅರ್ಥವೇ ?

Mr. DEPUTY SPEAKER.—Hon. Member may refer to it under some other item and not under this.

ಶ್ರೀ ವಾಟಾಳ್ ನಾಗರಾಜ್ :—ಅವರ ದುಡ್ಡಿನ ಬಗ್ಗೆ ಲೆಕ್ಕಾಚಾರ ಹಾಕುವುದಿಲ್ಲ. ಅವರ ಭೂಮಿಯ ಬಗ್ಗೆ ಹೇಳುತ್ತಿದ್ದೇನೆ.

Mr. DEPUTY SPEAKER.—Even then it will not come under this. But he can make a mild reference to Hon. Minister for Revenue.

ಶ್ರೀ ವಾಟಾಳ್ ನಾಗರಾಜ್ :—ತಾವು ಉದ್ದೇಶ ಪೂರ್ವಕವಾಗಿ ನನಗೆ ಮಾತನಾಡಲು ಅವಕಾಶ ಕೊಡುತ್ತಾ ಇಲ್ಲ.

Mr. DEPUTY SPEAKER.—If the Hon. Member is within the scope of debate, he will have unlimited chance to speak. If he is outside the scope it is my duty to prevent the Hon. Member from speaking.

Sri D. B. KALMANKAR (Afzalpur) : On a point of order, Sir, The Hon. Member Sri Vatal Nagaraj while speaking made a reference to the proceedings of the Joint Select Committee on Mysore Land Reforms Bill and he went to the extent of saying that efforts are being made to remove the pressures and bring about some changes in the report. It amounts to a reflection on the Hon. Members of this House including the Chairman of the Joint Select Committee. It is unwarranted and improper and I submit that portion of his speech may be expunged from the proceedings.

Mr. DEPUTY SPEAKER.—The Hon. Member cannot make an insinuation against the Members of the Joint Select Committee. If it is there, it stands expunged.

ಶ್ರೀ ವಾಟಾಳ್ ನಾಗರಾಜ್ :—ಸ್ವಾಮಿ, ತಮ್ಮನ್ನು ನೋಡಿದರೆ ನನಗೆ ಬಹಳ ಅನುಕಂಪ ವಾಗುತ್ತದೆ. ನಾನು ಸಮಿತಿ ಮೇಲಾಗಲಿ ಅಥವಾ ಯಾರ ಮೇಲಾಗಲಿ ವೈಯಕ್ತಿಕವಾಗಿ ದುರುದ್ದೇಶದಿಂದ ಮಾತನಾಡುತ್ತಾ ಇಲ್ಲ. ನಿನ್ನೆ ದಿವಸ ಆಸ್ತಿಪಾಸ್ತಿಗಳ ವಿಷಯದ ಬಗ್ಗೆ ಬಂದಿರತಕ್ಕಂಥ ಮಾತನ್ನು ಹೇಳಬೇಕಾಗಿದೆ. ಈ ಸಮಿತಿ ರಿಪೋರ್ಟ್ ಬರುವವರಿಗೆ ಸಚಿವರು ಏತಕ್ಕೆ ಕಾಯಬೇಕು ? ಮೊದಲೇ ಹಂಚಿಬಿಡಿ. ಸಮಾಜವಾದವನ್ನು ತರತಕ್ಕಂಥ ಹಾದಿಯಲ್ಲಿರುವಾಗ ಸರ್ಕಾರದ ಸಂಪುಟದ ಸಚಿವರು ಈ ಕಾನೂನು ಬರುವುದಕ್ಕೆ ಮುಂಚೆ ಮೊದಲು ನಾವು ಹಂಚುತ್ತೇವೆ ಎಂದು ಹೇಳಬೇಕಾಗಿತ್ತು. ಸಮಾಜವಾದದಲ್ಲಿ ನೀವು ಹೊರಟಿರತಕ್ಕಂಥ ಗುರಿ ಅಮೂಲ್ಯವಾದ ಗುರಿಯಾಗಿದ್ದರೆ ಈ ಭೂಸುಧಾರಣೆ ಜೊತೆಗೆ ನಗರದ ಆಸ್ತಿಮಿತಿ ಬಗ್ಗೆಯೂ ಯೋಚನೆ ಮಾಡಬೇಕು. ಆ ರೀತಿ ಮಾಡದೇ ಬರೀ ಭೂಸುಧಾರಣೆ ಜಾರಿಗೆ ತರುತ್ತೇವೆ ಎಂದರೆ ಆಗುವುದಿಲ್ಲ. ಈವೊತ್ತು ನಗರ ಪರಿಮಿತಿ ಬಗ್ಗೆ ಒಂದು ಕರಾರುವಾಕ್ಕಾಗಿ ದಯ ದಾಕ್ಷಿಣ್ಯ ಇಲ್ಲದೆ ಈ ಯೋಜನೆಯನ್ನು ಜಾರಿಗೆ ತೆಗೆದುಕೊಂಡು ಬನ್ನಿ. ಒಂದು ಕಡೆ ಭೂಸುಧಾರಣೆ ಮಾಡುತ್ತೇವೆ ಎಂದು ಹೇಳುವುದು ಇನ್ನೊಂದು ಕಡೆ ಈ ಭವ್ಯವಾದ ನಗರದಲ್ಲಿ, ಸದಾಶಿವ ನಗರದಲ್ಲಿ ದೊಡ್ಡ ದೊಡ್ಡ ಬಂಗಲೆಗಳಲ್ಲಿ, ಭಾರಿ ಭಾರಿ ಬಂಗಲೆಗಳಲ್ಲಿ ವಾಸ ಮಾಡ ತಕ್ಕಂಥ ಜನರು ಇದ್ದರೆ ನಿಮ್ಮ ಸಮಾಜವಾದದಲ್ಲಿ ಜನರಿಗೆ ನಂಬಿಕೆ ಹೇಗೆ ಬರುತ್ತದೆ ? ನಿಮಗೆ ಸಮಾನತೆ ಬರಬೇಕು ಎನ್ನುವುದಾದರೆ ಭೂಸುಧಾರಣೆ ಬಗ್ಗೆ ಏನು ಉದಾತ್ತವಾದ ಧ್ಯೇಯ ಇಟ್ಟಿದ್ದೀರೋ ಅದೇರೀತಿ ನಗರದ ಆಸ್ತಿಮಿತಿ ಬಗ್ಗೆಯೂ ಒಂದು ಕ್ರಾಂತಿಕಾರಕವಾದ ಧೋರಣೆ ಆಗಬೇಕು. ಆ ರೀತಿ ಆಗಬೇಕಾದರೆ ಸದಾಶಿವನಗರದಲ್ಲಿ ವಾಸಿಸುತ್ತಿರುವ ಮಿನಿ ಮಹಾರಾಜರನ್ನು ತೆಗೆದುಹಾಕಿ. 1947ರಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಕೆಲವರು ಸಮಾಜದಲ್ಲಿ ಒಳ್ಳೆಯ ನಿಷ್ಠೆ ಇರುವವರು ಹಿಂದಿನ ಮಂತ್ರಿಮಂಡಲದಲ್ಲಿ ಇದ್ದರು, ಅವರು ಯಾರು ಎಂದರೆ ಶ್ರೀಮಾನ್ ಹೆಚ್. ಸಿದ್ದಯ್ಯ ಮತ್ತು ಕೆ. ಟಿ. ಭಾಷ್ಯಂರವರು. ಅವರನ್ನು ನಾವು ಈವೊತ್ತಿನ ದಿವಸ ನೆನೆಸಿಕೊಳ್ಳಬೇಕಾಗಿದೆ. ನಿಜವಾಗಿಯೂ ಅಂಥಾವರನ್ನು ನಾವು ಈವೊತ್ತು ಸ್ಮರಿಸಬೇಕಾಗಿದೆ. ಈವೊತ್ತು ತಾವು ಏನು ಒಂದು ಹೊಸ ಹೆಜ್ಜೆಯನ್ನು ಇಟ್ಟಿದ್ದೀರಿ ಅದು ಯಶಸ್ವಿಯಾಗಬೇಕಾದರೆ ಈ ಮಿನಿ ಮಹಾರಾಜರು ಏನು ಇದ್ದಾರೋ ಅವರನ್ನು ತೆಗೆದುಹಾಕಿ. ಈ ಪ್ರಜಾಪ್ರಭುತ್ವದಲ್ಲಿ ಒಂದು ಕಡೆ ನೋಡಿದರೆ ಈ ರಾಜರುಗಳು ಲಕ್ಷಾಂತರ ಬೆಲೆ ಬಾಳ ತಕ್ಕಂಥ ಬಂಗಲೆಗಳನ್ನು ಕಟ್ಟುತ್ತಿದ್ದಾರೆ ಮತ್ತೊಂದು ಕಡೆ ನೋಡಿದರೆ ಸಮಾಜವಾದವನ್ನು

ಘೋಷಿಸುವ ನಮ್ಮ ಮುಖ್ಯಮಂತ್ರಿಗಳು ಕೆಂಪೇಗೌಡ ಸರ್ಕಲ್‌ನಲ್ಲಿ 30 ಲಕ್ಷ ರೂಪಾಯಿಗಳಲ್ಲಿ ಕಟ್ಟಿರತಕ್ಕಂಥ ಥಿಯೇಟರನ್ನು ಉದ್ಘಾಟನೆ ಮಾಡಲಿಕ್ಕೆ ಹೋಗುತ್ತಾರೆ. ನೀವು ಬಡವರ ಪರವಾಗಿ ಇದ್ದರೆ ಇಂಥಾ ಬಂಗಲೆಗಳನ್ನಾಗಲಿ, ಥಿಯೇಟರ್‌ಗಳನ್ನಾಗಲಿ ಉದ್ಘಾಟನೆ ಮಾಡಲಿಕ್ಕೆ ಬರುವುದಿಲ್ಲ ಎಂದು ಹೇಳಬೇಕಾಗಿತ್ತು. ನಾಳೆ ದಿವಸ ನಗರಾಸ್ತಿ ಮಿತಿ ಬಗ್ಗೆ ಬರುವ ಯೋಚನೆ ಇರುವಾಗ ಈ ರೀತಿ 30–40 ಲಕ್ಷ ರೂಪಾಯಿಗಳನ್ನು ಹಾಕಿ ಕಟ್ಟಿದಂಥ ಥಿಯೇಟರುಗಳನ್ನು ಉದ್ಘಾಟನೆ ಮಾಡಲಿಕ್ಕೆ ಹೋದರೆ ನೀವು ಮಾಡುವ ವಿಧಾನಕ್ಕೂ ಮತ್ತು ಕೃತಿಗೂ ಏನೂ ಸಂಬಂಧ ಬರುವುದಿಲ್ಲ ಎಂದು ಹೇಳುತ್ತೇನೆ. ಈ ಬಗ್ಗೆ ಒಂದು ಹೆಚ್ಚಿನ ಪರಿವರ್ತನೆ ಆಗಿ ಬಹುತೇಕ ಜನರಲ್ಲಿ ಸಮಾಜವಾದಿ ಕಾರ್ಯಕ್ರಮವನ್ನು ಜಾರಿಗೆ ತರಬೇಕು ಎಂದು ಹೇಳುತ್ತೇನೆ. ಎಲ್ಲಕ್ಕಿಂತ ಮೊದಲು ನಿಮ್ಮಲ್ಲಿ ಇದನ್ನು ಜಾರಿಗೆ ತರಬೇಕು. ಎಲ್ಲರ ಗುರಿಯನ್ನೂ ಮುಟ್ಟ ಬೇಕಾದರೆ ನಮ್ಮ ಸರ್ಕಾರ ಕ್ರಾಂತಿಕಾರಕವಾದ ಧೋರಣೆ ಮಾಡಬೇಕು. ಇಲ್ಲದೇ ಹೋದರೆ ಇದು ಪೊಳ್ಳು ಘೋಷಣೆಯಾಗುತ್ತದೆ. ಈ ಪೊಳ್ಳು ಘೋಷಣೆಯಿಂದ ಭೂಸುಧಾರಣೆ ಸರಿಯಾಗಿ ಜಾರಿಗೆ ಬರುವುದಿಲ್ಲ. ಈ ಬಗ್ಗೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಳ್ಳಿ. ನಿಮಗೆ ಧೈರ್ಯ ಇದ್ದರೆ ಕೇಂದ್ರ ಸರ್ಕಾರಕ್ಕೆ ನೂರು ರೂಪಾಯಿಯ ನೋಟನ್ನು ರದ್ದು ಮಾಡುತ್ತೇವೆ ಎಂದು ಹೇಳುತ್ತೀರಾ ? ನೀವು ಹಾಗೆ ಹೇಳುವುದಿಲ್ಲ. ಈಪೊತ್ತಿನ ದಿವಸ ನಿಮ್ಮ ಪಕ್ಷದಲ್ಲಿ ಎಷ್ಟು ಮಂದಿ ಜಮೀನ್ದಾರರು ಇದ್ದಾರೆ, ಅವರ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೀರಾ ? 50 ಎಕರೆ ಇರತಕ್ಕಂಥಾವರು ಎಷ್ಟು ಜನ ಇದ್ದಾರೆ, 100 ಎಕರೆ ಇರತಕ್ಕಂಥಾವರು ಎಷ್ಟು ಜನ ಇದ್ದಾರೆ ? ಮತ್ತು ಭೂಸುಧಾರಣೆ ಬರುತ್ತದೆ ಎಂದು 6–7 ವರ್ಷದ ಹಿಂದೆಯೇ ಭೂಮಿಯನ್ನು ಯಾವ್ಯಾವ ರೀತಿ ಹಂಚಿಬಿಟ್ಟಿದ್ದಾರೆ, ಅದರ ಒಂದು ಪಟ್ಟಿಯನ್ನೂ ಸಹ ಕೊಡಿ. ಕೆಲವು ರಾಜ್ಯ ರಾಜ್ಯಗಳಲ್ಲಿ ಜಮೀನುಗಳು ನಾಯಿಯ ಹೆಸರಿನಲ್ಲಿ ಹಂಚಿಕೆಯಾಗಿದೆ ಎಂದು ಶ್ರೀಮಾನ್ ಚಂದ್ರಶೇಖರ್‌ರವರು ಒಂದು ಕಡೆ ಹೇಳಿದರು. ಈ ರೀತಿಯಾಗಿ ನಿಮ್ಮಲ್ಲಿ ಯಾರಾದರೂ ಹಂಚಿಕೆ ಮಾಡಿಕೊಂಡಿದ್ದಾರೆಯೇ ? ಯಾರಾದರೂ ಅಣ್ಣ ತಮ್ಮಂದಿರಿಗೆ, ಹೆಂಡತಿಗೆ, ದನಗಳಿಗೆ ಹಂಚಿದ್ದರೆ ಅದು ಒಂದು ಪಟ್ಟಿಯನ್ನು ಕೊಡಿ. ಕೆಲವರು ಈ ಭೂಸುಧಾರಣೆ ಬರುತ್ತದೆ ಎಂದು ಅವರು ಕಾನೂನಿನಲ್ಲಿ ವಿವಾಹ ವಿಚ್ಛೇದನ ಮಾಡಿ ಕೊಂಡಿರುವುದು, ಮನೆ ಒಳಗೆ ಗಂಡಹೆಂಡತಿ ಒಂದಾಗಿರುವುದು ಈ ರೀತಿಯೂ ಇದೆ. ಇವೆಲ್ಲಾ ಇರುವುದರಿಂದ ಈ ಭೂಸುಧಾರಣೆ ಜಾರಿಗೆ ತರುವಾಗ 10–12 ವರ್ಷದ ಹಿಂದಿ ನಿಂದಲೂ ಜಾರಿಗೆ ತಂದರೆ ಜನ ನಿಮ್ಮನ್ನು ಹೊಗಳಿ ಮೆರೆಸುತ್ತಾರೆ. ಇಲ್ಲದೇ ಹೋದರೆ ನಿಮ್ಮನ್ನು ಬೀದಿಗೆ ಕರೆದುಕೊಂಡು ಬರುತ್ತಾರೆ. ಇದರಲ್ಲಿ ತಾವು ಅನುಮಾನ ಇಟ್ಟುಕೊಳ್ಳಲೇ ಬೇಡಿ.

ಇನ್ನು ವೃದ್ಧಾಪ್ಯ ವೇತನದ ಬಗ್ಗೆ ಹೇಳುವುದಾದರೆ ಅದನ್ನು ತಾವು 60 ವರ್ಷಕ್ಕೆ ಇಳಿಸಬೇಕು ಮತ್ತು ಈ ವೃದ್ಧಾಪ್ಯ ವೇತನವನ್ನು ತೆಗೆದುಕೊಳ್ಳಲು 60 ವರ್ಷದ ಮುದುಕರು ತಾಲ್ಲೂಕು ಆಫೀಸಿಗೆ ಬಂದರು ಅರ್ಜಿ ತೆಗೆದುಕೊಂಡು ಹೋಗುವಂಥಾ ಕಾನೂನು ಮಾಡಬೇಡಿ. ನೀವೇ ಮನೆಮನೆಗೆ ಹೋಗಿ ವಯಸ್ಸಾದವರು, 60 ವರ್ಷ ಆದವರು ಯಾರು ಯಾರು ಇದ್ದಾರೆ ನೀವೇ ಅವರ ಅರ್ಜಿಯನ್ನು ಭರ್ತಿ ಮಾಡಿ ಅವರಿಂದ ಸಹಿ ತೆಗೆದುಕೊಂಡು ಅವರ ಮನೆಗೆ ಹಣವನ್ನು ವಿಳಂಬವಿಲ್ಲದಂತೆ ಕಳುಹಿಸುವ ಏರ್ಪಾಡು ಮಾಡಿ. ಕೊನೆಗೆ ಮೂರು ವರ್ಷವಾದರೂ ಕೂಡ ಈ ಹಣವನ್ನು ತಿಂದು ಸಂತೋಷಪಟ್ಟುಕೊಳ್ಳಲಿ. ಈಗ ಮಾಡಿರುವ ಪದ್ಧತಿಯಂತೆ ಅವನು ಈ ನಿವೃತ್ತಿ ವೇತನಕ್ಕಾಗಿ ಅರ್ಜಿ ಹಾಕಿದರೆ ಆ ಹಣ ಬರುವ ಹೊತ್ತಿಗೆ ಯಾರು ಅರ್ಜಿ ಹಾಕಿದ್ದರೋ ಅವರು ಸತ್ತುಹೋಗಿರುತ್ತಾರೆ. ಆದುದರಿಂದ ತಾವು ಆ ಹಣ ಅವರ ಮನೆಗೆ ತಲುಪುವಂಥ ಒಂದು ವ್ಯವಸ್ಥೆ ಮಾಡಿ ಪುಣ್ಯ ಕಟ್ಟಿಕೊಳ್ಳಿ ಎಂದು ಹೇಳುತ್ತೇನೆ.

ಉಪಾಧ್ಯಕ್ಷರು :—ತಾವು ಹೇಳಿದ ವಿಷಯು ಫೈನಾನ್ಸ್‌ಗೆ ಸಂಬಂಧಪಟ್ಟ ವಿಷಯ. ಆದುದರಿಂದ ಅದು ಈವರೊತ್ತಿನ ವಿಷಯಕ್ಕೆ ಸೇರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :—ದೇವಸ್ಥಾನಗಳ ವಿಷಯ ಹೇಳುವುದಾದರೆ ಅವುಗಳಿಗೆ ಸೇರಿದ ಆಸ್ತಿಯನ್ನು ತೆಗೆದುಕೊಂಡಿದ್ದೀರಿ. ಆದರೂ ಅವುಗಳ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ? ಮಹದೇಶ್ವರ ಬೆಟ್ಟಕ್ಕೆ ಹೋಗಿ ನೋಡಿದರೆ ಅಲ್ಲಿ ಅನೇಕ ಯೋಜನೆಗಳನ್ನು ಮಾಡಿದ್ದೀರಿ. ದೇವಸ್ಥಾನಗಳಲ್ಲಿ ಕೆಲವಕ್ಕೆ ಉತ್ಪತ್ತಿ ಇದೆ, ಕೆಲವಕ್ಕೆ ಉತ್ಪತ್ತಿ ಇಲ್ಲ. ದೇವಸ್ಥಾನಗಳು ಬೇಡ, ಅವನ್ನೆಲ್ಲ ಗೋಡೌನ್ ಮಾಡಿ ಎಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ನಾನು ದೇವರನ್ನು ನಂಬಿರುವವನು. ದೇವರು ಬೇಡ ಎನ್ನುವ ಮಟ್ಟಕ್ಕೆ ಹೋಗುವವನಲ್ಲ. ಅನೇಕ ದೇವಸ್ಥಾನಗಳು ಶಿಥಿಲಗೊಂಡಿವೆ ಅವುಗಳನ್ನು ಸರಿಪಡಿಸಬೇಕು. ಮುಂಜರಾಯಿ ಇಲಾಖೆಯಿಂದ ಈ ಕೆಲಸವನ್ನು ಮಾಡಬೇಕು. ದೇವಸ್ಥಾನಗಳಿಗೆ ಧರ್ಮದರ್ಶಿಗಳನ್ನು ನೇಮಕ ಮಾಡತಕ್ಕ ಕಾಲದಲ್ಲಿ ಎಲ್ಲ ಕೋಮಿನವರನ್ನೂ ಹಾಕಿ, ಅದರಿಂದ ತೊಂದರೆಯಾಗುವುದಿಲ್ಲ ದೇವರು ಎಂದರೆ ಒಬ್ಬರಿಗೇ ಅಲ್ಲ, ಸಾಮಾನ್ಯವಾಗಿ ದೇವಸ್ಥಾನಗಳಲ್ಲಿನ ಹಕ್ಕು ನಮಗೆ ಒಬ್ಬರಿಗೇ ಇದೆ, ಬೇರೆಯವರಿಗೆ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲರಿಗೂ ಹಕ್ಕಿದೆ. ಎನ್ನುವುದಕ್ಕಾಗಿ, ಎಲ್ಲರನ್ನೂ ಧರ್ಮದರ್ಶಿಗಳಲ್ಲಿ ಸೇರಿಸಬೇಕು. ದೇವಸ್ಥಾನಗಳಲ್ಲಿ ಕೆಲವು ಕಡೆ ಮಂಗಳಾರತಿಗೆ ದುಡ್ಡು ವಸೂಲು ಮಾಡುತ್ತಾರೆ. ಮಂಗಳಾರತಿ ಮಾಡಿಸಬೇಕಾದರೆ ಟಿಕೆಟ್ ತೆಗೆದುಕೊಳ್ಳಬೇಕು. ನಮ್ಮ ಜೇಬಿನಿಂದ ದುಡ್ಡು ಕೊಟ್ಟು ಮಂಗಳಾರತಿ ಮಾಡಿಸಲು ಟಿಕೆಟ್ ತೆಗೆದುಕೊಳ್ಳಬೇಕಾಗಿದೆ. ಉಚಿತವಾಗಿ ಮಂಗಳಾರತಿ ನಡೆಯುವಂತೆ ಆಗಬೇಕು. ದೇವರಲ್ಲಿ ಭಕ್ತಿ ಇರುವವರು ದೇವಸ್ಥಾನಕ್ಕೆ ಹೋದಾಗ ಮಂಗಳಾರತಿ ಮಾಡಿಸಲು ಟಿಕೆಟ್ ತೆಗೆದುಕೊಳ್ಳಬೇಕೆನ್ನುವುದು ನ್ಯಾಯವಲ್ಲ. ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಸ್ವಲ್ಪ ಆಸ್ಥೆವಹಿಸಬೇಕು. ಮಾನ್ಯ ಮಂತ್ರಿಗಳು ಗಂಟೆಗಟ್ಟಲೆ ಪೂಜೆ ಮಾಡುವ ಸ್ವಭಾವವುಳ್ಳವರು. ನಾನು ಒಂದು ಸಲ ಅವರ ಮನೆ ಹತ್ತಿರ ಹೋದಾಗ ಪೂಜೆ ಮಾಡುತ್ತಿದ್ದಾರೆಂದು ಹೇಳಿದರು. ಪೂಜೆ ಮಾಡಿ, ದೇವರಿಗೆ ಈ ಅನ್ಯಾಯ ಮಾಡಬೇಕು, ಅಕ್ರಮ ಮಾಡಬೇಕು ಎಂದು ಹೇಳಬಾರದು. ದೇವರ ಹೆಸರು ಹೇಳಿಕೊಂಡು ಮೋಸ ಮಾಡುವವರಿದ್ದಾರೆ. ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಮೋಸ ಮಾಡುವವರಿದ್ದಾರೆ. ಅವರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಿ. ಅನೇಕ ಮೂಢ ನಂಬಿಕೆಗಳು ಜನರಲ್ಲಿವೆ ಅದನ್ನು ಕಿತ್ತು ಹಾಕಬೇಕು. ದೈವ ಭಕ್ತಿ ಇರುವುದಕ್ಕೆ ಸಾಕ್ಷಿಯಾಗಿ ಶಿಥಿಲವಾದ ದೇವಸ್ಥಾನಗಳ ದುರಸ್ತಿಯಾಗಬೇಕು. ಇಷ್ಟು ಮಾತ್ರ ಹೇಳಿ, ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ. ಬಂಗಿ (ಜಮಖಂಡಿ) :—ಮಾನ್ಯ ಉಪಾಧ್ಯಕ್ಷರೇ, ಕಂದಾಯ ಸಚಿವರು ಈ ಸದನದಲ್ಲಿ ಮಂಡಿಸಿದ ಯಾವತ್ತೂ ಬೇಡಿಕೆಗಳಿಗೆ ಸಂಪೂರ್ಣವಾಗಿ ಬೆಂಬಲ ಕೊಡುತ್ತ ಕೆಲವು ಸಲಹೆಗಳನ್ನು ನಾನು ಹೇಳಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ಕಂದಾಯ ವಿಷಯದಲ್ಲಿ ಹೇಳಬೇಕೆಂದರೆ, ವಿಲೀನವಾದ ದಕ್ಷಿಣ ಸಂಸ್ಥಾನಗಳಲ್ಲಿ ಅರಸರಿಗೆ ಆ ಕಾಲಕ್ಕೆ ಸೇಲ್ಸ್ ಟ್ಯಾಕ್ಸ್ ಇರಲಿಲ್ಲ, ಇನ್‌ಕಂ ಟ್ಯಾಕ್ಸ್ ಇರಲಿಲ್ಲ, ಬೇರೆ ಯಾವುದೂ ಉತ್ಪನ್ನವಿಲ್ಲದ ಮೂಲಕ ಅವರು ತಮ್ಮ ಖರ್ಚಿಗೆ ಎಷ್ಟು ಹಣ ಬೇಕೋ ಅಷ್ಟು ಹಣ ತಮ್ಮ ಬಜೆಟ್‌ನಲ್ಲಿ ಬರುವ ದೃಷ್ಟಿಯಿಂದ ಭೂಕಂದಾಯವನ್ನು ಜಮಖಂಡಿ, ಮುಧೋಳ, ಸಾಂಗ್ಲಿ, ರಾಮದುರ್ಗ, ಮೀರಜ್, ಬುಡ್ಲಗಾದ, ಕುರುಂದವಾಡ್, ಸವಣೂರು ಈ ಸಂಸ್ಥಾನಗಳಲ್ಲಿ ಭೂಕಂದಾಯವನ್ನು ಪ್ರತಿಯೊಂದು ಎಕರೆಗೆ ನಾಲ್ಕೈದು ರೂಪಾಯಿಗಳಷ್ಟು ಹಾಕಿದ್ದರು ಇಂದಿನವರೆಗೂ ಜಮಖಂಡಿ ಮತ್ತು ಇತರ ಸಂಸ್ಥಾನಗಳು ವಿಲೀನವಾದಾಗ್ಯೂ ಕೂಡ, ಈ ಹೊತ್ತು ಅವರವು ಬೇರೆ ಬೇರೆ ಜಿಲ್ಲೆಗಳಲ್ಲಿ

ಸಮ್ಮಿಳಿತವಾಗಿದ್ದರೂ ಕೂಡ ಕಂದಾಯ ಆ ಭಾಗಗಳಲ್ಲಿ ಇನ್ನೂ ಹೆಚ್ಚಾಗಿಯೇ ಇರುತ್ತದೆ. ಈ ಕಂದಾಯದ ಮೇಲೆ ಗೇಣಿ ಫಿಕ್ಸ್ ಆಗುವ ದೃಷ್ಟಿಯಿಂದ ಮತ್ತು ಕಾಂಪನ್‌ಸೇಷನ್ ಕೂಡ ಈ ಕಂದಾಯದ ಆಧಾರದ ಮೇಲೆ ಭೂ ಮಾಲೀಕರಿಗೆ ಕೊಡುವ ದೃಷ್ಟಿಯಿಂದ ಇದು ಮಹತ್ವದ ವಿಷಯವಿದೆ. ಹೀಗಿದ್ದ ಮೇಲೆ ಈ ಬಗ್ಗೆ ಕಂದಾಯ ಮಂತ್ರಿಗಳು ಸಾಕಷ್ಟು ಪರಿಶೀಲನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತಿದ್ದೇನೆ.

1938 ರಲ್ಲಿ ಯಾವತ್ತೂ ದಕ್ಷಿಣ ಸಂಸ್ಥಾನಗಳಲ್ಲಿ ಕಾಂಗ್ರೆಸ್ ಚಳುವಳಿಯಾದಾಗ ರಾಜರುಗಳು ತಮ್ಮ ಪ್ರಜೆಗಳಿಗೆ ಭೂ ಕಂದಾಯದಲ್ಲಿ 8 ರಿಂದ 25 ಪರ್ಸೆಂಟ್‌ವರೆಗೆ ಕಂದಾಯದಲ್ಲಿ ವಿನಾಯಿತಿ ಕೊಟ್ಟರು. ಹಕ್ಕು ರಿಜಿಸ್ಟರಿನಲ್ಲಿ ಮಾತ್ರ 100 ಪರ್ಸೆಂಟ್ ಲೆಕ್ಕ ಬರೆದು, ವಿನಾಯಿತಿ ಕೊಟ್ಟ ಹಣ ವಜಾ ಕಳೆಯಲಿಲ್ಲ. ಪ್ರತ್ಯಕ್ಷ ವಸೂಲು ಮಾಡಿದ ಸಮಯದಲ್ಲಿ 25 ಪರ್ಸೆಂಟ್ ಕಡಿಮೆ ವಸೂಲು ಮಾಡಿ ಹಕ್ಕು ರಿಜಿಸ್ಟರಿನಲ್ಲಿ ಮಾತ್ರ ಸಂಪೂರ್ಣವಾಗಿ ಕಂದಾಯವನ್ನು 100 ಪರ್ಸೆಂಟ್ ಇಟ್ಟ ಮೂಲಕ ಈ ಹೊತ್ತಿನ ದಿವಸ ದಕ್ಷಿಣ ಸಂಸ್ಥಾನಗಳಲ್ಲಿ ಇದ್ದಂಥ ಪ್ರದೇಶಗಳಲ್ಲಿರುವ ಹಕ್ಕಿನ ರಿಜಿಸ್ಟರುಗಳನ್ನು ಪರಿಶೀಲನೆ ಮಾಡಿ ಅವುಗಳನ್ನು ಸರಿಪಡಿಸಬೇಕು ಮತ್ತು ತದನಂತರ ಗೇಣಿ ಫಿಕ್ಸ್ ಮಾಡಬೇಕು ಮತ್ತು ಕಾಂಪನ್‌ಸೇಷನ್ ಹಣ ಗೇಣಿದಾರನಿಂದ ಮಾಲೀಕನಿಗೆ ಎಷ್ಟು ಕೊಡಬೇಕು ಎನ್ನುವ ಬಗ್ಗೆ ನಿರ್ಧಾರ ಮಾಡಬೇಕೆಂದು ನಾನು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ.

ಇನ್ನು ಮುಂದೆ ರಿಕಾರ್ಡ್ ಆಫ್ ರೈಟ್ಸ್ ವಿಷಯದಲ್ಲಿ ಮಾತನಾಡಬೇಕಾಗಿದೆ. ರಿಕಾರ್ಡ್ ಆಫ್ ರೈಟ್ಸ್ ಸರಿಯಾಗಿ ಇರುವುದಿಲ್ಲ. ಹೊಸ ವರದಿ ತೆಗೆದುಕೊಂಡು, ಸಾಕಷ್ಟು ಹಣ ಸಂಪಾದನೆ ಮಾಡಿ ಸರ್ಟಿಫೈ ಮಾಡಿರುವಂಥ ಎಷ್ಟೋ ಉದಾಹರಣೆಗಳು ನಮ್ಮ ತಾಲ್ಲೂಕಿನಲ್ಲಿ ಕಂಡು ಬರುತ್ತದೆ. ಭೂ ಮಾಲೀಕರನ್ನು ನಾನ್ ಅಗ್ರಿಕಲ್ಚರಿಸ್ಟ್ಸ್ ಎಂದು ಮಾಡಿ ಬಿಟ್ಟಿದ್ದರೂ ಕೂಡ ಎಂಟ್ರಿ ರದ್ದು ಮಾಡಲು ಹೊಸ ವರದಿ ತೆಗೆದುಕೊಂಡು ಸರ್ಟಿಫೈ ಮಾಡಿದ್ದಾರೆ. ಇಂಥ ಡೈರಿಯನ್ನು ಪರಿಶೀಲನೆ ಮಾಡಿ ಹಕ್ಕು ರಿಜಿಸ್ಟರನ್ನು ಸರಿಯಾಗಿ ಇಡಬೇಕೆಂದು ಸೂಚಿಸುತ್ತೇನೆ. ಈ ಹಕ್ಕು ರಿಜಿಸ್ಟರುಗಳನ್ನು ಡೈರಿಗಳನ್ನು ತಾಲ್ಲೂಕು ಆಫೀಸಿನಲ್ಲಿ ಇಡಬೇಕೆ ಹೊರತು ಇವುಗಳನ್ನು ತಲಾಟಿ ಅಥವಾ ವಿಲೇಜ್ ಅಕೌಂಟೆಂಟ್ಸ್ ಹತ್ತಿರ ಇಡಬಾರದು. ಇದರಿಂದ ಎಷ್ಟೋ ಸ್ಥಳಗಳಲ್ಲಿ ಹಕ್ಕಿನ ರಿಜಿಸ್ಟರ್ ಟ್ಯಾಂಪರ್ ಆಗಿರುವ ಉದಾಹರಣೆಗಳು ಕಂಡುಬರುತ್ತವೆ. ಆದುದರಿಂದ ನಾನು ಈ ಸಮಯದಲ್ಲಿ ಹೇಳಬಯಸುವುದೇನೆಂದರೆ, ಹಕ್ಕು ರಿಜಿಸ್ಟರುಗಳು, ಡೈರಿಗಳು ತಹಸೀಲ್ದಾರರ ಕಚೇರಿಯಲ್ಲಿ ಇಡತಕ್ಕದ್ದು. ಯಾವ ಸಮಯದಲ್ಲಾದರೂ ಡೈರಿಯಲ್ಲಿ ಬದಲಾವಣೆಯಾಗಬೇಕಾದರೆ, ವಿಲೇಜ್ ಅಕೌಂಟೆಂಟ್ ತಹಸೀಲ್ದಾರರ ಕಚೇರಿಗೆ ಬಂದು ಬದಲಾವಣೆ ಮಾಡುವ ಮುಂದೆ ಯೋಗ್ಯವಾದ ನೋಟೀಸ್ ಹೊರಡಿಸಿ, ಸರಿಯಾದ ಅಧಿಕಾರಿಗಳ ಕಡೆಯಿಂದ ಅವುಗಳನ್ನು ಸರ್ಟಿಫೈ ಮಾಡಿಸಿಕೊಳ್ಳಬೇಕೆಂದು ಈ ಸಮಯದಲ್ಲಿ ಸೂಚಿಸಬಯಸುತ್ತೇನೆ.

ಮೈಸೂರು ಫ್ರಾಗ್‌ಮೆಂಟೇಷನ್ ಅಂಡ್ ಕನ್‌ಸಾಲಿಡೇಷನ್ ಆಕ್ಟ್ ವಿಷಯ ಹೇಳಬೇಕಾಗಿದೆ. ಈ ಕಾಯದೆಯಲ್ಲಿ ತುಂಡು ಭೂಮಿ ಯಾವುದಿರುತ್ತದೆ ಆ ತುಂಡು ಭೂಮಿಗಳ ಬಗ್ಗೆ ತಹಸೀಲ್ದಾರರಾಗಲೀ ತಲಾಟಿಗಳಾಗಲೀ ನೋಟೀಸ್ ಕೊಟ್ಟಿಲ್ಲ. ನೋಟೀಸ್ ಕೊಡದೇ ಇದ್ದ ಮೂಲಕ ಹಂಚುವಾಗ ತುಂಡು ಭೂಮಿಗಳ ಎಂಟ್ರೀಸ್ ಸರಿಯಾಗಿ ಮಾಡಲಿಕ್ಕೆ ಬರುತ್ತದೆಯೇ ? ಅದೇ ಪ್ರಕಾರವಾಗಿ ತುಂಡು ಭೂಮಿಗೆ ವಿವರವಿದ್ದರೂ ಕೂಡ ಕಾಯಿದೆ ಶೀಲವಾಗುತ್ತದೆ. ಮೊದಲು ನೋಟೀಸ್ ಕೊಟ್ಟು ತುಂಡು ಖೈದು ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ.

ಇನ್ನು ಮುಂದೆ ಸಿಟಿ ಸರ್ವೇ ವಿಷಯದಲ್ಲಿ ಹೇಳಬೇಕಾಗಿದೆ. ಪ್ರತಿಯೊಂದು ಟೌನಿನಲ್ಲೂ ಸಿಟಿ ಸರ್ವೇ ಮಾಡಬೇಕು, ಈಗ ಇದನ್ನು ಎಲ್ಲ ಕಡೆಗಳಲ್ಲೂ ಇನ್ನೂ ಜಾರಿಗೆ ತಂದಿಲ್ಲ, ಎಲ್ಲ

ಸಿಟಿಗಳಲ್ಲೂ ಸಿಟಿ ಸರ್ವೇ ಪದ್ಧತಿ ಜಾರಿಗೆ ತಂದು ಇದರಲ್ಲಿ ಸರಿಯಾದ ಮಾಲೀಕರ ಎಲ್ಲ ದಾಖಲಾತಿ ವಿವರಗಳನ್ನು ಬರಿಸಿಡಬೇಕು. ಜಮಖಂಡಿ ಮೊದಲಾದ ತಾಲ್ಲೂಕುಗಳಲ್ಲಿ ಇದರ ಬಗ್ಗೆ ಸರಿಯಾಗಿ ದಾಖಲಾತಿ ವಿವರಗಳನ್ನು ಸರ್ವೆ ಇಲಾಖೆಯವರು ಮಾಡದೇ ಇರುವುದರಿಂದಾಗಿ ಇಲ್ಲಿ ಮಾಲೀಕರುಗಳ ಮೇಲೆ ಕಂದಾಯದ ಹೊರೆ ಜಾಸ್ತಿಯಾಗಿ ಜನಕ್ಕೆ ಬಹಳ ತ್ರಾಸಾಗುತ್ತಿದೆ. ಇದಕ್ಕಾಗಿ ಎಲ್ಲ ಕಡೆಗಳಲ್ಲೂ ಸಿಟಿ ಸರ್ವೆ ಅಧಿಕಾರಿಗಳನ್ನು ಹಾಕಿ ಸರಿಯಾದ ದಾಖಲಾತಿ ಮಾಡಲು ವ್ಯವಸ್ಥೆ ಮಾಡಬೇಕು.

ಇನ್ನು ಸ್ಕೇರ್ಸಿಟಿ ವಿಷಯವಾಗಿ ಹೇಳಬೇಕಾದರೆ ಇದರಲ್ಲಿ ಮುಖ್ಯವಾಗಿ ದನಕರುಗಳಿಗೆ ಹಾಗೂ ಜನಕ್ಕೆ ಫಾಡರನ್ನು ಒದಗಿಸುವುದು ಬಹು ಮುಖ್ಯವಾದುದು, ಇನ್ನು ಕೆಲವು ಕಡೆಗಳಲ್ಲಿ ತಗಾಯಿ ಸಾಲವನ್ನು ರೈತರಿಗೆ ಬಾವಿಗಳಿಗಾಗಿ ಕೊಡುತ್ತಾರೆ. ಕೆಲವು ಕಡೆ ಬಾವಿಗಳಲ್ಲಿ ನೀರು ಬರುತ್ತದೆ, ಕೆಲವು ಕಡೆಗಳಲ್ಲಿ ಬರುವುದಿಲ್ಲ. ಇಂತಹ ಬಾವಿಗಳನ್ನು ಇನ್ನೂ ಆಳವಾಗಿ ತೋಡಲು ಮತ್ತು ಇದರಲ್ಲಿರುವ ಹೂಳನ್ನು ತೆಗೆಸಿ ನೀರು ಬರುವಂತೆ ಮಾಡಲು ರಿಗ್ ಯಂತ್ರಗಳ ಸಹಾಯ ಕೊಟ್ಟು ಇದನ್ನೂ ತಗಾಯಿ ಸಾಲದ ರೀತಿಯಲ್ಲಿ ಕೊಡಬಹುದು ಮತ್ತು ಹೀಗೆ ಸಹಾಯ ಕೊಟ್ಟ ಹಣವನ್ನು ಕಂತುಗಳ ರೂಪದಲ್ಲಿ ವಸೂಲು ಮಾಡಿಕೊಳ್ಳಬಹುದು. ಸರಕಾರ ಡೀಪನಿಂಗ್ ಆಫ್ ವೆಲ್ಸ್‌ಗಾಗಿ 1,500 ರೂಪಾಯಿಗಳಷ್ಟು ಸಾಲವಾಗಿ ರೈತರಿಗೆ ಕೊಡುತ್ತಾರೆ. ಆದರೆ ಇದನ್ನು ರೈತರು ಪಡೆಯುವಾಗ ಮೊದಲ ಕಂತಾಗಿ 250 ರೂಪಾಯಿಗಳೆಂದು ಕೊಡುತ್ತಾರೆ. ಇದನ್ನು ರೈತರು ಪಡೆಯಲು ಹೋದಾಗ ಅವರ ಕೈಗೆ ಸಿಗುವುದು ಕೇವಲ 150 ರೂಪಾಯಿಗಳು ಮಾತ್ರ. ಉಳಿಕೆಯಾದ ಒಂದು ನೂರು ರೂಪಾಯಿಗಳು ಇದಕ್ಕಾಗಿ ಲಂಚ ಕೊಡಬೇಕಾಗಿದೆ. ಹೀಗಾಗಿ ರೈತರಿಗೆ ಕೊಡುವ ದುಡ್ಡು ಪೂರ್ತಿಯಾಗಿ ಅವರ ಕೈಗೆ ಸಿಗುವುದಿಲ್ಲ. ಇದರ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡಬೇಕು ಮತ್ತು ಲಂಚದ ಹಾವಳಿಯನ್ನೂ ತಪ್ಪಿಸಬೇಕು.

ಇನ್ನು ಸ್ಟಾಂಪ್ಸ್‌ಗಳ ಬಗ್ಗೆ ಹೇಳಬೇಕಾದರೆ ಜನತೆಗೆ ಬೇಕಾಗುವ ಎರಡು ಹಾಗೂ ನಾಲ್ಕು ರೂಪಾಯಿ ಬೆಲೆಯ ಸ್ಟಾಂಪು ಪೇಪರುಗಳು ತಾಲ್ಲೂಕು ಆಫೀಸುಗಳಲ್ಲಿ ಸಿಗುತ್ತಿಲ್ಲ. ಇದನ್ನು ಹೆಚ್ಚು ಹೆಚ್ಚಾಗಿ ಎಲ್ಲ ತಾಲ್ಲೂಕುಗಳಿಗೂ ಹಂಚುವ ವ್ಯವಸ್ಥೆ ಮಾಡಬೇಕು. ಈಗೇನಾಗಿದೆ ಎಂದರೆ ಎರಡು ರೂಪಾಯಿ ಸ್ಟಾಂಪು ಹಚ್ಚಬೇಕಾದ ಕಾಗದಕ್ಕೆ ನಾಲ್ಕು ರೂಪಾಯಿಗಳ ಸ್ಟಾಂಪನ್ನು ಹಚ್ಚಬೇಕಾಗಿದೆ. ಇದರಿಂದ ಜನಕ್ಕೆ ಕಷ್ಟವಾಗಿದೆ, ಇದರ ಕಡೆಗೆ ಸರಕಾರ ಲಕ್ಷ್ಯ ಕೊಡಬೇಕು, ಗ್ರಾಮಾಂತರ ಪ್ರದೇಶದ ಜನಗಳಿಗೆ ಸಾಕಷ್ಟು ಸ್ಟಾಂಪುಗಳು ಹಾಗೂ ಸ್ಟಾಂಪು ಪೇಪರುಗಳನ್ನು ಒದಗಿಸಿಕೊಟ್ಟು ಸಹಾಯಮಾಡಬೇಕೆಂದು ಈ ಸಮಯದಲ್ಲಿ ಹೇಳ ಬಯಸುತ್ತೇನೆ.

ಇನ್ನು ನಮ್ಮ ಭಾಗದಲ್ಲಿರುವ ವಕೀಲರುಗಳು ಕೋರ್ಟಿನಲ್ಲಿ ಅಡ್‌ಜರ್ನ್‌ಮೆಂಟ್ ಅಪ್ಲಿಕೇಷನ್ ಹಾಕುವಾಗ ಅದಕ್ಕೆ ಹನ್ನೆರಡಾಣೆಯ ಸ್ಟಾಂಪನ್ನು ಹಾಕಬೇಕೆಂದು ಹೇಳುತ್ತಾರೆ. ಆದರೆ ಈಚೆಗೆ ಹೈಕೋರ್ಟಿನಲ್ಲಿ ಇದ್ದ ಒಂದು ನಿಯಮ ಅಮೆಂಡು ಮಾಡಿರುತ್ತಾರೆ. ಅಡ್‌ಜರ್ನ್‌ಮೆಂಟನ್ನು ಹಾಕುವಾಗ ಅರ್ಜಿಗೆ ಸ್ಟಾಂಪು ಹಚ್ಚುವ ಅಗತ್ಯವಿಲ್ಲ ಎಂದು ಎಲ್ಲ ಕಡೆಗೂ ಸರಿಯಾದ ಸೂಚನೆಗಳನ್ನು ಕೊಡಬೇಕಾಗಿ ಕೇಳುತ್ತೇನೆ. ಕೋರ್ಟುಗಳಲ್ಲಿ ಬರೀ ಓರಲ್ ಅಡ್‌ಜರ್ನ್‌ಮೆಂಟು ಆದರೆ ಸಾಕು ಎಂದು ಮಾಡಬಹುದು. ಇದರ ಬಗ್ಗೆ ಎಲ್ಲ ಕೋರ್ಟುಗಳಿಗೂ ಹೈ ಕೋರ್ಟು ಮೂಲಕ ಸೂಚನೆಗಳನ್ನು ಕಳುಹಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ರಿಜಿಸ್ಟ್ರೇಷನ್ ವಿಷಯ ಹೇಳಬೇಕಾಗಿದೆ. ನಮ್ಮ ಭಾಗದಲ್ಲಿ ಎಲ್ಲ ಪತ್ರಗಳನ್ನೂ ರಿಜಿಸ್ಟರು ಮಾಡಿದ ಮೇಲೆ ಅವುಗಳನ್ನು ಫೋಟೋಸ್ಟಾಟ್ ಕಾಪಿ ಮಾಡಿ ಇಡುವ ಪದ್ಧತಿ ಇದೆ.

ಇದು ಹಳೆಯ ಮೈಸೂರಿನ ಭಾಗಗಳಲ್ಲಿ ಇಲ್ಲ. ನಮ್ಮ ರಾಜ್ಯದ ಎಲ್ಲ ರಿಜಿಸ್ಟ್ರೇಷನ್ ಆಫೀಸುಗಳಲ್ಲೂ ಪತ್ರಗಳನ್ನು ಫೋಟೋಸ್ಟೆಟ್ ಕಾಪಿ ಮಾಡಿಸಿ ಇಡುವ ಪದ್ಧತಿಯನ್ನು ಜಾರಿಗೆ ತರಬೇಕು ಎಂದು ಇಲ್ಲಿ ಸಲಹೆ ಮಾಡಬಯಸುತ್ತೇನೆ. ಅಲ್ಲದೆ ಇನ್ನು ಮರಾಠಿಯಲ್ಲಿರುವ ಪತ್ರಗಳನ್ನು ರಿಜಿಸ್ಟರು ಆಫೀಸುಗಳಲ್ಲಿ ರಿಜಿಸ್ಟರು ಮಾಡಲು ತೆಗೆದುಕೊಳ್ಳಬಾರದು ಎಂದು ನಿಯಮ ಮಾಡಬೇಕು ಮತ್ತು ಎಲ್ಲ ಪತ್ರಗಳೂ ಕನ್ನಡದಲ್ಲೇ ಇರಬೇಕೆಂದು ಈ ಸಮಯದಲ್ಲಿ ಸಲಹೆ ಮಾಡುತ್ತೇನೆ.

ನಮ್ಮ ಬಿಜಾಪುರ, ಗುಲ್ಬರ್ಗಾ ಹಾಗೂ ಬೀದರು ಜಿಲ್ಲೆಗಳಲ್ಲಿ ಕ್ಷಾಮಪ್ರದೇಶಕ್ಕೆ ಸಿಕ್ಕಿರುವ ಜನರಿದ್ದಾರೆ. ಇಂತಹ ಜನರ ಮೇಲೆ ಮನಿ ಡಿಕ್ರಿಗಳಾದರೆ ಇದನ್ನು ಎಕ್ಸಿಕ್ಯೂಟ್ ಮಾಡಬಾರದು ಇದರ ಬಗ್ಗೆ ಸರಕಾರ ಸೂಕ್ತ ಆದೇಶವನ್ನು ಕೊಡಬೇಕೆಂದು ಸಲಹೆ ಮಾಡುತ್ತೇನೆ. ಇಲ್ಲದೆ. ಇದ್ದರೆ ಭೂಮಿಯು ಹಸ್ತಾಂತರವಾಗಲು ಅವಕಾಶವಾಗುತ್ತದೆ. ಮುಂಬಯಿಯಲ್ಲಿದ್ದ ಅಗ್ರಿಕಲ್ಚರಿಸ್ಟ್ಸ ಡೆಟ್ ರಿಲೀಫ್ ಆಕ್ಟ್ ಇತ್ತು. ಇದನ್ನು ಈಗ ಇಲ್ಲಿಗೆ ಅಮಲು ಮಾಡಲು ಅವಕಾಶವಿಲ್ಲ. ಮೈಸೂರಿನಲ್ಲಿ ಮಾಡಿರುವ ಅಗ್ರಿಕಲ್ಚರಿಸ್ಟ್ ಡೆಟ್ ರಿಲೀಫ್ ಆಕ್ಟ್ ಬಂದಿದ್ದರೂ ಅದನ್ನು ಇನ್ನೂ ಅಮಲಿನಲ್ಲಿ ತರಲು ಆಗಲಿಲ್ಲ. ಇದನ್ನು ಬೇಗ ಅಮಲುಬಜವಣಿ ತರಲು ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿರುವ ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಲಂಚಗುಳಿತನ ಬಹಳ ಹೆಚ್ಚಾಗುತ್ತಿದೆ, ಇದರಿಂದ ಹಳ್ಳಿಗಾಡಿನ ಜನಕ್ಕೆ ಬಹಳ ತ್ರಾಸಾಗುತ್ತಿದೆ, ಇದನ್ನು ತಡೆಗಟ್ಟಬೇಕು.

ಇನ್ನು ನಮ್ಮ ಭಾಗದಲ್ಲಿರುವ ತಲಾಟಿಗಳಿಗೆ ಪಗಾರ ಕೊಡುತ್ತಿರುವುದು ಬಹು ಕಡಿಮೆ. ಇವರಿಗೆ ಹೆಚ್ಚು ಪಗಾರ ಕೊಡಬೇಕೆಂದು ನಿರ್ಣಯ ಮಾಡಿ ಸರಕಾರಕ್ಕೆ ಕಳುಹಿಸಲಾಗಿದೆ. ಅದರಂತೆ ತಲಾಟಿಗಳಿಗೆ ಹೆಚ್ಚು ಪಗಾರ ಕೊಡುವ ವ್ಯವಸ್ಥೆ ಮಾಡಬೇಕು. ಹಳ್ಳಿಗಾಡಿನ ಜನಕ್ಕೆ ಹೆಚ್ಚು ಸಹಾಯ ಮಾಡಿ ಎಲ್ಲ ಅನುಕೂಲಗಳನ್ನು ಕೊಡಿಸಿ ಕೊಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—Sometime back Hon. Member Sri Sheernaly S. M. Chandrasekhar stated that the word ವ್ಯಾಘ್ರ ಪ್ರೇಮ used against him by the Hon. Member Sri Konandur Lingappa should be expunged. I will read out the context in which it was used :

" ಶ್ರೀ ಶೀರನಾಳಿ ಎಸ್. ಎಂ. ಚಂದ್ರಶೇಖರ್ :—ನಿಮ್ಮ ಪಾರ್ಟಿಯಲ್ಲಿದ್ದರೆ ಮಾತ್ರ ಅವರು ರೈತರು, ಬೇರೆ ಪಾರ್ಟಿಯವರಲ್ಲಿರುವವರು ರೈತರಲ್ಲವೇ ?

ಶ್ರೀ ಕೋಣಂದೂರು ಲಿಂಗಪ್ಪ :—ನಿಮ್ಮಲ್ಲಿ ಅಂತಹ ರೈತರಿದ್ದಾರೆ. ನಿಮಗೆ ಅವರ ಮೇಲೆ ಅಭಿಮಾನವಿದೆ. ಅದು ಯಾವ ರೀತಿಯಾದ ಅಭಿಮಾನ ಎಂದರೆ ಒಂದು ತರಹದ "ವ್ಯಾಘ್ರ ಪ್ರೇಮ", ಒಂದು ರೀತಿಯಾದ "ಧೃತರಾಷ್ಟ್ರ ಪ್ರೇಮ" ವಿದೆ. ಆದರೆ ಶ್ರೀಮಾನ್ ಚಂದ್ರಶೇಖರ್‌ರವರು ಅಂತಹ ಮನುಷ್ಯರಲ್ಲ. ಅವರ ಬಗ್ಗೆ ನನಗೆ ತುಂಬಾ ಅಭಿಮಾನವಿದೆ. ಇಂತಹವರಿಂದ ನಮಗೆ ನ್ಯಾಯ ದೊರಕುವುದಿಲ್ಲ. "

In the context in which it is used it cannot be expunged.

CALLING ATTENTION TO MATTERS OF URGENT PUBLIC IMPORTANCE

(i) Re.: alleged injustice and loss caused to Sanitary Inspectors of Belgaum.

Mr. DEPUTY SPEAKER.—Hon. Member Sri Kagodu Thimmappa has requested that his call attention notice may be held over and taken up on some other day.

Sri M. M. SAJJAN.—I call the attention of the Minister for Municipal Administration to the alleged injustice and monetary loss caused to the Sanitary Inspectors of Belgaum due to non-inclusion of their posts in the Mysore Municipal Administrative Service Cadre.

Sri B. BASAVALINGAPPA (Minister for Municipal Administration).—I make the following.

The Mysore Municipal Administrative Service Cadre has been constituted by Government as per provision contained in Section 365 of the Mysore Municipalities Act, 1964 with effect from 1st September 1970. The rules constituting the Cadre—The Mysore Municipal Administrative Service Rules, 1970—provide for taking over the officers working in the several posts in the Municipalities by Government. Accordingly action has been taken to take over the officers working in the Municipalities of all the four Divisions in the State.

Prior to 1-11-1956, Officers working against the categories of posts under the Mysore Local Self-Government service and Hyderabad Local Self-Government service, were Government servants unlike those working against similar posts in the Municipalities of the Bombay Karnatak Area and the Municipalities in Madras Karnataka Area.

In Gulbarga Division (in the area comprising of erstwhile Hyderabad State) there was an independent Cadre called Local Self Government Cadre. This Cadre consisted of "I and II Grade Executive Officers, Sanitary Inspectors and Court Inspectors" and all those posts were interchangeable. Taking into consideration this fact, *i.e.*, the interchangeablity of Officers,

all those posts have been equated with that of Chief Officers. In the circumstances, the posts of Sanitary Inspectors in the Gulbarga Division, have been also included in the Mysore Municipal Administrative Service Cadre.

"Since the position and status of the Sanitary Inspectors in Belgaum Division was different from that in Gulbarga Division, in as much as the posts of Sanitary Inspectors were not interchangeable with the posts of Chief Officers, the posts of Sanitary Inspectors of Municipalities in Belgaum Division were not included in the Mysore Municipal Administrative Service Cadre.

Sri M. M. SAJJAN.—When there is no difference between the Sanitary Inspectors of Gulbarga Division and other Divisions both in their rank and status, does it not amount to discrimination if the Sanitary Inspectors of Belgaum Division are not included in the Mysore Municipal Administrative Service Cadre ?

Sri B. BASAVALINGAPPA.—In this connection, I would like to invite the attention of the Hon. Member to para three of my statement wherein I have mentioned that in Gulbarga Division (in the area comprising of erstwhile Hyderabad State) there was an independent Cadre called Local Self Government Cadre. This Cadre consisted of "I and II Grade Executive Officers, Sanitary Inspectors and Court Inspectors" and all those posts were interchangeable. In other areas these posts were not interchangeable.

Sri M. M. SAJJAN.—Since the Government has discriminated between the Sanitary Inspectors of Gulbarga Division and the Sanitary Inspectors of Belgaum Division, will they issue a notification including the Inspectors of Belgaum Division in the Mysore Municipal Administrative Service Cadre in order to meet the ends of justice ?

Sri B. BASAVALINGAPPA.—I quite sympathise with the grievances of the Sanitary Inspectors of Bombay Karnatak Area. But the position is : the Sanitary Inspectors in Hyderabad Karnatak area are directly recruited for the Municipal service ; in old Mysore area, their services are requisitioned from the Health Department. The question arises, whether such officials

and officers could be equated with the Sanitary Inspectors of Hyderabad Karnatak area where such Inspectors are not employed in some of the Municipalities.

(ii) Re.: Scarcity of Kerosene and Diesel Oil in Hassan District.

Sri K. H. HANUME GOWDA (Hassan).—I call the attention of the Minister of State for Food and Civil Supplies to the scarcity of Kerosene and Diesel Oil in Hassan District.

Smt. E. E. VAZ (Minister of State for Food and Civil Supplies).—I make the following Statement.

The supply position of Kerosene is found to be unsatisfactory in the Mysore State for the last two months, due to closure of the Madras refinery during February 1973 for maintenance and repairs. The Cochin refinery is also reported to have gone out of order for a brief period. Further due to 25% power cut in Mysore State, shortage in supplies of Cylinder gas and abnormal rise in the prices of charcoal and fire wood, the consumption of Kerosene is on the increase. In addition several industries use Kerosene as a solvent in the absence of other suitable substitute.

It is reported that there are 1,97,060 families in the Hassan District, and the requirements of Kerosene Oil at 5 litres per family per month will work out to 9,85,300 litres. As against this, the wholesale dealers in the District are reported to have received during the months of February and March a quantity of 2,72,832 and 4,42,941 litres of Kerosene respectively. During April 1973 (up to 17-4-1973) the Oil Companies have supplied a quantity of 1,12,180 litres of Kerosene Oil to this District.

In order to effect equitable distribution of Kerosene Oil in the District, the wholesale dealers were asked to declare their stocks everyday to the Deputy Commissioner at the District Headquarters and the Tahsildars at the Taluk level. The Tahsildars have taken action to arrange for distribution of Kerosene Oil in the Shandies of their Taluks through Hawkers, and in the Town area in convenient centres. In Hassan Town, Kerosene is being distributed in Shandy and in 10 Centres on every alternate days.

The requirements of Diesel Oil in Hassan District is estimated at 5,67,850 litres per month. During the months of February and March, a quantity of 5,44,450 and 4,48,370 litres of Diesel Oil respectively was received in the District.

With regard to Diesel Oil, scarcity was felt during the last week of March, 1973 and instructions have been issued to all the dealers to declare their stocks as and when received and to distribute the same to each vehicle not exceeding 35 litres per vehicle at a time after reserving 30% of their stock to Government vehicles and 10% to agriculturists who require it for irrigation pump-sets and tractors. The dealers in Diesel Oil have been instructed to issue 10% of the Diesel Oil to the agriculturists on production of a certificate from the Block Development Officers to say that the individual possesses an irrigation pump-set or tractor or requires the services of a pump-set or tractor for agricultural purposes.

No instances of overcharging have been reported in respect of these two Oils.

At Government level, all the Oil Companies and the Government of India have been addressed in the matter of adequate supplies of Kerosene and Diesel Oils to the State. The Chief Minister has also met the representatives of Oil Companies and wholesale dealers in Kerosene and High Speed Diesel Oil in the State on 22-4-1973. The latter have assured to extend their full co-operation to Government in the matter of equitable distribution of available stocks and prevention of black-marketing and boarding, pending receipt of additional supplies.

Efforts to secure adequate supplies to the State are continued. At present the supply position is found to be better than that obtained in the months of February and March, 1973.

ಶ್ರೀ ಕೆ. ಎಚ್. ಹನುಮೇಗೌಡ :—ಸೀಮೆಎಣ್ಣೆ ಹಳ್ಳಿಯ ಜನರಿಗೆ ಹಾಗೂ ಟೌನ್ ಜನರಿಗೆ ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತಿಲ್ಲ. ಈಗ ಸಪ್ಲೈಯಾಗುತ್ತಿರುವುದು ಕಡಿಮೆಯಾಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ತಾವು ಹೇಳುತ್ತಿರುವ ಪ್ರಮಾಣದಲ್ಲಿಯೂ ಕೂಡ ಸರಿಯಾಗಿ ದೊರೆಯುತ್ತಿಲ್ಲ. ಕಾರಣವೇನೆಂದರೆ ಕೆಲವು ಅಧಿಕಾರಿಗಳು ಮತ್ತು ವರ್ತಕರು ಸೇರಿಕೊಂಡು ಬರುವ ಕೋಟಾದಲ್ಲಿ ಹೆಚ್ಚು ಭಾಗವನ್ನು ಬ್ಲಾಕ್ ಮಾರ್ಕೆಟಿನಲ್ಲಿ ಮಾರಿ ಉಳಿದಿದ್ದನ್ನು ಹಳ್ಳಿಯವರಿಗೆ ಹಾಗೂ ಟೌನ್ ಜನರಿಗೆ ಕೊಡುತ್ತಿದ್ದಾರೆ.

ಶ್ರೀಮತಿ ಇ. ಇ. ವಾಜ್ :—ಈಗತಾನೆ ಹೇಳಿದ ಹಾಗೆ ಷಾರ್ಟ್ ಸಪ್ಲೈಯಾಗಿರುವುದರಿಂದ ಕೊರತೆಯುಂಟಾಗಿದೆ. ಇರುವುದನ್ನೇ ಸರಿಯಾಗಿ ಕೊಡುವ ಹಾಗೆ ಏರ್ಪಾಡು ಮಾಡಿದ್ದೇವೆ. ಮೊದಲು ಧಾರಾಳವಾಗಿ ಸೀಮೆಎಣ್ಣೆ ದೊರೆಯುತ್ತಿದ್ದ ಕಾಲದಲ್ಲಿ ಸೌತ್ ಕೆನರಾ ಜಿಲ್ಲೆಯವರು 4 ಲಕ್ಷ ಲೀಟರ್‌ಗಳಷ್ಟು ಎಣ್ಣೆಯನ್ನು ಬೇಲೂರು, ಆಲೂರು, ಅರಕಲಗೂಡು ಸಕಲೇಶಪುರ ಮತ್ತು ಹಾಸನ ತಾಲ್ಲೂಕುಗಳಿಗೆ ಕೊಡುತ್ತಿದ್ದರು. ಆದರೆ ಅವರಿಗೇ ಈಗ ಅಭಾವ ಬಂದಿರುವುದರಿಂದ ಅಲ್ಲಿಂದ ಬರುತ್ತಿಲ್ಲ. ಈಗ ಇರುವುದನ್ನೇ ಹಂಚಬೇಕಾಗಿದೆ.

ಶ್ರೀ ಕೆ. ಎಚ್. ಹನುಮೇಗೌಡ :—ಕಂಟ್ರೋಲ್ ರೇಟಿನಲ್ಲಿ ಸೀಮೆಎಣ್ಣೆ ಸಿಗುತ್ತಿಲ್ಲ. ಒಂದೂವರೆ ರೂಪಾಯಿ ಅಥವಾ ಎರಡು ರೂಪಾಯಿ ಒಂದು ಲೀಟರ್‌ಗೆ ಕೊಟ್ಟರೆ ಎಷ್ಟು ಬೇಕಾದರೂ ಸಿಗುತ್ತದೆ. ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರುವವರ ಮೇಲೆ ಮತ್ತು ಅದಕ್ಕೆ ಸಹಕಾರ ಕೊಡುತ್ತಿರುವ ಅಧಿಕಾರಿಗಳ ಮೇಲೆ ಎಷ್ಟು ಕೇಸ್ ಹಾಕಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀಮತಿ ಇ. ಇ. ವಾಜ್ :—ಈಗತಾನೆ ಹೇಳಿದ ಹಾಗೆ ಎಲ್ಲ ಅಧಿಕಾರಿಗಳಿಗೂ ಆದೇಶ ಕೊಟ್ಟಿದ್ದೇವೆ. ಅದರ ಪ್ರಕಾರ ತಾಲ್ಲೂಕು ಮಟ್ಟದಲ್ಲಿ ತಹಶೀಲ್‌ದಾರರಿಗೆ ಮತ್ತು ಜಿಲ್ಲಾ ಮಟ್ಟದಲ್ಲಿ ಡಿ. ಸಿ. ಅವರಿಗೆ ವರ್ತಕರು ತಮ್ಮಲ್ಲಿರುವ ಸ್ಟಾಕನ್ನು ತಿಳಿಸಬೇಕು ಮತ್ತು 5 ಲೀಟರ್ ಮೇಲೆ ಯಾರಿಗೂ ಸೀಮೆಎಣ್ಣೆ ಕೊಡಬಾರದೆಂದು ಹೇಳಿದ್ದೇವೆ. ಅದೇ ಪ್ರಕಾರ ಒಂದು ವಾಹನಕ್ಕೆ 35 ಲೀಟರ್‌ಗಿಂತ ಹೆಚ್ಚು ಡೀಸೆಲನ್ನು ಕೊಡಬಾರದೆಂದು ಆಜ್ಞೆ ಮಾಡಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ :—ಒಂದೊಂದು ವೆಹಿಕಲ್‌ಗೆ 35 ಲೀಟರ್ ಡೀಸೆಲ್ ಕೊಡಬೇಕು ಎಂದು ಕಾನೂನು ಮಾಡಿದ್ದೇವೆ ಎಂದು ತಾವು ಹೇಳಿದಿರಿ, ನಾನು ಕಣ್ಣಾರೆ ನೋಡಿಕೊಂಡು ಬಂದಿದ್ದೇನೆ, ಲಾರಿಗಳಿಗೆ, ಕಾರುಗಳಿಗೆ ಟ್ರಾಕ್ಟರುಗಳಿಗೆ 5 ಲೀಟರ್ ಮೇಲೆ ಕೊಡುವುದಿಲ್ಲ. ಸ್ಟಾಕ್ ಬಂದ ತಕ್ಷಣ ಅವೈಲಬಲ್ ಎಂದು ಬೋರ್ಡ್ ಹಾಕುತ್ತಾರೆ. ಆಮೇಲೆ ಅರ್ಧ ಗಂಟೆ ಆದಮೇಲೆ ಸ್ಟಾಕ್ ಮುಗಿದು ಹೋಯಿತು ಎಂದು ಬೋರ್ಡ್ ಹಾಕುತ್ತಾರೆ. ಆಮೇಲೆ ರಾತ್ರಿ ಕಾಲದಲ್ಲಿ ಡ್ರಮ್ ತುಂಬಿ ಬೇರೆ ಕಡೆ ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರುತ್ತಾರೆ. ಆದ್ದರಿಂದ 35 ಲೀಟರ್ ಡೀಸೆಲ್ ಕೊಡುತ್ತಾರೆ ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಇದನ್ನು ತಪ್ಪಿಸುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀಮತಿ ಇ. ಇ. ವಾಜ್ :—ಸಾಧ್ಯವಾದಷ್ಟು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ :—24 ನೇ ತಾರೀಖು ಮಾನ್ಯ ಮುಖ್ಯ ಮಂತ್ರಿಗಳು ಎಲ್ಲಾ ಸೀಮೆಎಣ್ಣೆ ಡೀಲರ್ಸ್ ಕರೆಸಿ ಮಾತನಾಡಿದಾಗ ಸರಿಯಾದ ಸೀಮೆಎಣ್ಣೆ ಸರಬರಾಜು ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ ಎಂದು ಹೇಳಿದರು. ಅಪ್ಪಣ್ಣ ಶೆಟ್ಟಿ ಎನ್ನುವವರು ಸುಮಾರು 10 ಸಾವಿರ 20 ಸಾವಿರ ಲೀಟರ್ ಸೀಮೆಎಣ್ಣೆಯನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಗೊತ್ತಾಗಿದೆ. ಶ್ರೀಮಾನ್ ಹನುಮೇಗೌಡರು ಹೇಳಿದ ಹಾಗೆ ಬಡವರಿಗೆ ನೇರವಾಗಿ ಸೀಮೆಎಣ್ಣೆ ಸಿಕ್ಕುತ್ತಿಲ್ಲ. ಹೋಲ್‌ಸೇಲ್ ಡೀಲರ್ಸ್ ನೋಟೀಸ್ ಬೋರ್ಡಿನಲ್ಲಿ ಎಷ್ಟು ಸ್ಟಾಕು ಬಂದಿದೆ, ಎಷ್ಟು ಖರ್ಚಾಗಿದೆ, ಯಾರು ಯಾರಿಗೆ ಕೊಟ್ಟಿದ್ದಾರೆ ಎನ್ನುವ ಬಗ್ಗೆ ಅಧಿಕಾರಿಗಳು ನಿಗಾ ವಹಿಸಬೇಕು. ಅಧಿಕಾರಿಗಳು ಅವರಿಂದ ಪೀರಿಯಾಡಿಕಲ್ ರಿಪೋರ್ಟ್ ತರಿಸಿಕೊಂಡು ಅದನ್ನು ಸರ್ಕಾರಕ್ಕೆ ಕಳುಹಿಸಬೇಕು. ಬಡವರು, ಕೂಲಿಗಾರರು ಸಂತೆಯಲ್ಲಿ ಸೀಮೆಎಣ್ಣೆ ಸಿಕ್ಕುತ್ತದೆ ಎಂದು ಬಟವಾಡೆ ತೆಗೆದುಕೊಂಡು ಸಂಜೆಗೆ ಸೀಮೆಎಣ್ಣೆ ಕೊಂಡುಕೊಳ್ಳುವುದಕ್ಕೆ ಬಂದರೆ ಅಲ್ಲಿ ಸೀಮೆಎಣ್ಣೆ ಸಿಕ್ಕುವುದಿಲ್ಲ.

ಸೀಮೆಎಣ್ಣೆ ಮಾರಾಟಗಾರರು ಒಂದು ಲೀಟರಿಗೆ ಒಂದೂವರೆ ಎರಡು ರೂಪಾಯಿಗಳಂತೆ ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರಾಟ ಮಾಡುತ್ತಾರೆ. ಒಂದು ಲೀಟರಿಗೆ 70-75 ಪೈಸೆಗಿಂತ ಹೆಚ್ಚಾಗಿ ಮಾರಿದರೆ ಅಂಥವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಈ ಸದನಕ್ಕೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ವಾಟಾಳ್ ನಾಗರಾಜ್ :—ಸೀಮೆ ಎಣ್ಣೆ ಡೀಲರ್ಸ್ ಯಾರು ಯಾರು, ಎಷ್ಟು ಜನ ಇದ್ದಾರೆ ಎಂಬುದನ್ನು ಹೇಳುತ್ತೀರಾ ?

ಶ್ರೀಮತಿ ಇ. ಇ. ವಾಜ್ :—ಶ್ರೀಮಾನ್ ರಾಮಸ್ವಾಮಿಯವರು ಸೂಕ್ತ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಖಂಡಿತವಾಗಿ ಪರಿಶೀಲಿಸಿ ಆದಷ್ಟು ಬೇಗ ಜನಗಳಿಗೆ ನ್ಯಾಯವಾಗಿ ಸೀಮೆಎಣ್ಣೆ ಸಿಕ್ಕುವ ಹಾಗೆ ವ್ಯವಸ್ಥೆ ಮಾಡುತ್ತೇವೆ.

ಆಮೇಲೆ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಕೇಳಿದ ಪ್ರಶ್ನೆಗೂ ಇದಕ್ಕೂ ಸಂಬಂಧ ಇಲ್ಲ. ಇದು ಹಾಸನ ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟದ್ದು. ಆದ್ದರಿಂದ ಅವರು ಕೇಳಿದ ಪ್ರಶ್ನೆಯ ಬಗ್ಗೆ ನೋಟೀಸ್ ಕೊಟ್ಟರೆ ಪೂರ್ತಿ ವಿವರವನ್ನು ಒದಗಿಸುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ :—ಟ್ರ್ಯಾಕ್ಟರನ್ನು ಹೊಂದಿರತಕ್ಕ ರೈತರು ಲೈಸೆನ್ಸ್ ತೋರಿಸಿದರೆ ಬಿ.ಡಿ.ಓ. ಗಳು ಡೀಸೆಲ್ ಕೊಡುವುದಕ್ಕೆ ಸರ್ಟಿಫಿಕೇಟ್ ಕೊಡುತ್ತಾರೆ ಎಂದು ತಾವು ಹೇಳಿದ್ದೀರಿ, ಈ ರೀತಿ ಟ್ರ್ಯಾಕ್ಟರುಗಳನ್ನು ಇಟ್ಟುಕೊಂಡಿರತಕ್ಕ ರೈತರು ಬಿ.ಡಿ.ಓ. ಗಳ ಹತ್ತಿರ ಹೋಗಿ ಡೀಸೆಲ್ ತೆಗೆದುಕೊಳ್ಳುವುದಕ್ಕೆ ಸರ್ಟಿಫಿಕೇಟ್ ಕೇಳಿದರೆ ಟ್ರ್ಯಾಕ್ಟರನ್ನೇ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. 4 ಮೈಲಿ, 5 ಮೈಲಿ, 10 ಮೈಲಿ ದೂರದಿಂದ ಟ್ರ್ಯಾಕ್ಟರನ್ನು ತಂದು ಆಫೀಸಿನ ಮುಂದೆ ನಿಲ್ಲಿಸಬೇಕು ಎಂದರೆ ಅಧಿಕಾರಿಗಳು ಎಷ್ಟು ಮಾನವೀಯತೆಯ ದೃಷ್ಟಿಯಿಂದ ನೋಡುತ್ತಾರೆ ಎಂಬುದನ್ನು ತಾವೇ ಯೋಚನೆ ಮಾಡಿ. ಈ ರೀತಿ ಮಾಡಿದರೆ ರೈತ ಯಾವ ರೀತಿ ಆಹಾರವನ್ನು ಉತ್ಪಾದನೆ ಮಾಡಬೇಕು ? ಆದ್ದರಿಂದ ಅಂಥಾ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ವಾಟಾಳ್ ನಾಗರಾಜ್ :—ಸೀಮೆ ಎಣ್ಣೆ ಇಲ್ಲ, ಅಕ್ಕಿ ಇಲ್ಲ, ರವೆ ಇಲ್ಲ, ಪೆಟ್ರೋಲ್ ಇಲ್ಲ, ಡೀಸೆಲ್ ಇಲ್ಲ, ಇದು ಏನು ಸ್ವಾಮಿ ?

ಶ್ರೀಮತಿ ಇ. ಇ. ವಾಜ್ :—ಆ ರೀತಿ ಟ್ರ್ಯಾಕ್ಟರನ್ನು ತರಬೇಕೆಂದು ಯಾರೂ ಹೇಳುವುದಿಲ್ಲ. ಟ್ರಾಕ್ಟರ್ ಇಟ್ಟುಕೊಂಡಿರುವವರು ಲೈಸೆನ್ಸ್ ತಂದು ತೋರಿಸಬೇಕೆಂದು ಹೇಳುತ್ತಾರೆ. ಅವರು ಆ ರೀತಿ ನಿರ್ಬಂಧ ಹಾಕದಿದ್ದರೆ ಈಗ ಡೀಸೆಲ್ ಕೊರತೆ ಇರುವಾಗ ಎಲ್ಲರೂ ಬಂದು ಸುಮ್ಮನೆ ತೆಗೆದುಕೊಂಡು ಹೋಗುತ್ತಾರೆ ಮತ್ತು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರುವುದಕ್ಕೂ ಅವಕಾಶವಾಗುತ್ತದೆ. ಅದನ್ನು ತಪ್ಪಿಸುವುದಕ್ಕಾಗಿ ಇದನ್ನು ಏರ್ಪಾಡು ಮಾಡಿದ್ದೇವೆ.

Mr. DEPUTY SPEAKER : The House will now rise and meet tomorrow at 1 p.m.

The House adjourned at Twenty-five Minutes past Six of the Clock to meet again at One of the Clock on Friday, the 27th April 19

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 27th April 1973 Vaishaka 1895 S.T.

The House met in the Assembly Chamber, Vidhana Soudha, at One of the Clock.

[*Madam Speaker (Smt. K. S. Nagarathnamma) in the Chair*]

STARRED QUESTIONS

(to which oral answers were given)

ENCROACHMENT OF PAISARY LANDS

* Sri G. K. SUBBAIAH (Virajpet).—

686. Will the Minister for Revenue be pleased to state :—

(*a*) the acres of Paisary land encroached by coffee planters after 1st July 1967 ;

(*b*) the action taken by the Government in the matter ;

(*c*) in how many cases the encroachers have been evicted ?

Sri N. HUTCHAMASTHY GOWDA (Minister for Revenue).—

(*a*) 10,516—10 acres.

(*b*) Eviction proceedings are initiated as per rules.

(*c*) 327 cases.

ಶ್ರೀ ಜಿ. ಕೆ. ಸುಬ್ಬಯ್ಯ :—327 ಸಂದರ್ಭಗಳಲ್ಲಿ ಎವಿಕ್‌ಷನ್ ಮಾಡಲಾಗಿದೆ ಎಂದು ಉತ್ತರವಿದೆ. ಇದರಲ್ಲಿ ದೊಡ್ಡ ಪ್ಲಾಂಟರುಗಳೆಷ್ಟು, ಚಿಕ್ಕ ಪ್ಲಾಂಟರುಗಳೆಷ್ಟು ?

ಶ್ರೀ ಎನ್. ಹುಂಚ್ಚಮಾಸ್ತಿ ಗೌಡ :—ಆ ವಿವರ ನನ್ನಲ್ಲಿಲ್ಲ.

Asterisks indicate that remarks or speeches have not been revised by the member concerned.

ಶ್ರೀ ಜಿ. ಕೆ. ಸುಬ್ಬಯ್ಯ :—ಈ ರೀತಿ ಪ್ರತ್ಯೇಕ ವಿವರ ಕೊಡಲು ಸಾಧ್ಯವಿಲ್ಲವೇ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ:—ಪ್ರತ್ಯೇಕವಾಗಿ ಮಾನ್ಯ ಸದಸ್ಯರು ಕೇಳಿದರೆ ಹೇಳಬಹುದು. ಅದಕ್ಕೆ ಬೇಕಾದ ಅಂಕಿಅಂಶ ಸಂಗ್ರಹಿಸಬೇಕಾಗುತ್ತದೆ.

ಶ್ರೀ ಜಿ. ಕೆ. ಸುಬ್ಬಯ್ಯ—ಸಾಮಾನ್ಯವಾಗಿ ಚಿಕ್ಕ ಹಿಡುವಳಿದಾರರನ್ನೆಲ್ಲಾ ಹೆಚ್ಚಾಗಿ ಎವಿಕ್ಟ್ ಮಾಡಲು ಕ್ರಮ ತೆಗೆದುಕೊಂಡಿದ್ದಾರೆಂಬುದು ಸರಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ವಿವರವಿಲ್ಲದಿರುವುದರಿಂದ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

OLD AGE PENSION CASES IN MUDDEBIHAL TALUK

*Sri M. M. SAJJAN (Muddebihal).—

754. Will the Minister for Finance be pleased to state :—

(*a*) the number of persons who are given old age pensions in Muddebihal Taluk as on 25th February 1973 ;

(*b*) the number of applications that are pending as on 25th February 1973 ;

(*c*) the total number of destitutes above age of sixty-five in Muddebihal Taluk as on 25th February 1973 ;

(*d*) the method adopted to collect applications from destitutes above the age of sixty-five in all villages ?

Sri M. Y. GHORPADE (Minister for Finance).—

(*a*) 61.

(*b*) 130.

(*c*) The Deputy Commissioner, Bijapur has reported that the information has not been compiled so far for the purpose of old age pension.

(*d*) *Vide* Rule 12 of OAP rules. The procedure followed is reproduced below :

Applications for old age pension or an intimation under Rule 11 (iii) shall be sent in duplicate to the Tahsildar of the Taluk in which the destitute ordinarily resides. No court fee stamp need be affixed to the application. Application forms can be obtained from the Taluk Offices, Offices of Panchayats, Village Officers,

Municipal Offices and the Office of the Corporation of Bangalore. If printed forms are not available, the application may be submitted in form OAPS-1 written on plain paper.

Sri M. M. SAJJAN : Would it not be better if the collection of applications is entrusted to either the Village Accountants or the Gramsevaks of the concerned village to enable the destitutes to get immediate relief ?

Sri M. Y. GHORPADE : The present practice is that the application has to be given in duplicate to the Tahsildar and the same is forwarded by the Tahsildar to the Deputy Commissioner. This system is working quite satisfactorily. As a matter of fact, in this Taluk, out of 136 cases pending, about 66 have already been sent up to the Assistant Commissioner out of which about 52 cases have been sent up to the Deputy Commissioner and are about to be sanctioned. While we must expedite these things, we must take due care that pensions are also sanctioned to benefit people. Therefore, I do not think any change in the present practice in necessary.

Sri M. M. SAJJAN : Many of the destitutes have no knowledge of the scheme. Added to this, the destitutes will have to go to a town or a place where application forms are available by spending some amount. Under these circumstances, would it not be better if the applications are collected either by the Gramsevaks or the Village Accountants and forwarded to the concerned officers in the interest of the destitutes ?

Sri M. Y. GHORPADE : Our experience has been that normally there are not more than one or two destitutes in a village, and in a taluk at the most there may be about 150-200. It is also our experience that the village representatives do not fail to bring such cases to the notice of the Tahsildar. That is what is happening today. The practice cannot be changed merely to save the trouble of the man going to the Tahsildar. There is no harm in using the services of the Gramsevaks and Village Accountants in this behalf so long as the procedure of submitting the application to the Tahsildar remains. Even small pensioners, most of them, wish to go to the Taluk office and draw their pensions.

ಶ್ರೀ ಆರ್. ಎಸ್. ಪಾಟೀಲ್ :—ಅರ್ಜಿಗಳು ಜಾಗ್ರತೆ ಇತ್ಯರ್ಥವಾಗದೆ ಉಳಿಯುವುದರಿಂದ ತೊಂದರೆಯಾಗುತ್ತಿದೆ. ಆದುದರಿಂದ ಅರ್ಜಿ ಕೊಟ್ಟ ಇಷ್ಟು ಅವಧಿಯಲ್ಲಿ ಇತ್ಯರ್ಥವಾಗಬೇಕು ಎಂದು ಅಧಿಕಾರಿಗಳಿಗೆ ತಿಳಿಸುವಿರಾ ?

ಶ್ರೀ ಎಂ. ವೈ. ಘೋರ್ಪಡೆ :—ಜಾಗ್ರತೆಯಾಗಿ ಇತ್ಯರ್ಥ ಮಾಡಬೇಕು, ಇದಕ್ಕೆ ಟಾಪ್ ಪ್ರಿಯಾರಿಟಿ ಕೊಡಬೇಕು ಎಂದು ಪದೇ ಪದೇ ಅಧಿಕಾರಿಗಳಿಗೆ ಹೇಳುತ್ತಿದ್ದೇವೆ. ತಿಳಿವಳಿಕೆ ಇಲ್ಲದಿರುವವರಿಗೆ ಅಧಿಕಾರಿಗಳು ಸಹಾಯ ಮಾಡುವರು. ಜನರಿಗೆ ಊರಿನಲ್ಲಿ ಇದನ್ನು ಪಡೆಯಲು ಅರ್ಹರಾದವರು ಯಾರಿದ್ದಾರೆಂಬುದು ಗೊತ್ತಿರುವುದು, ಅದನ್ನು ಮುಚ್ಚಿಡುವುದಕ್ಕಾಗುವುದಿಲ್ಲ. ಆದಕಾರಣ ಈಗಿರುವ ಹಾಗೆ ಅಂಥ ತೊಂದರೆಯೇನೂ ಆಗುತ್ತಿಲ್ಲ. ತೊಂದರೆಯಾಗಿರುವ ಸಂದರ್ಭಗಳಿದ್ದರೆ ಗಮನಕ್ಕೆ ತರಬಹುದು, ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಆರ್. ಎಸ್. ಪಾಟೀಲ್ :—ಕೆಲವು ಅರ್ಜಿಗಳು ಇತ್ಯರ್ಥವಾಗದೆ ಬಹಳ ಕಾಲದಿಂದ ಉಳಿದಿಲ್ಲವೆ ?

ಶ್ರೀ ಎಂ. ವೈ. ಘೋರ್ಪಡೆ :—ಅಂಕಿಅಂಶ ನೋಡಿದರೆ ಸಾಕಷ್ಟು ಅರ್ಜಿಗಳು ಇತ್ಯರ್ಥವಾಗಿರುವುದು ಕಂಡುಬರುತ್ತದೆ. ವಿಳಂಬವಾಗುತ್ತಿಲ್ಲ. ವಿಳಂಬವಾಗಿರುವ ಸಂದರ್ಭಗಳಿದ್ದರೆ ಗಮನಕ್ಕೆ ತಂದರೆ ಜಾಗ್ರತೆ ಇತ್ಯರ್ಥ ಮಾಡಲಾಗುವುದು. ನಿಧಾನವಾಗುತ್ತಿಲ್ಲವೆಂಬುದು ನನ್ನ ಅಭಿಪ್ರಾಯ.

ಶ್ರೀ ಕೆ. ಎಚ್. ಹನುಮೇಗೌಡ:—ವೃದ್ಧಾಪ್ಯ ವೇತನವನ್ನು ಕೊಡುವುದು ಸಾಕಷ್ಟು ಸಂಖ್ಯೆಯಲ್ಲಿ ನಿಧಾನವಾಗುತ್ತಿದೆ. ಅಮಲ್ದಾರರ ಆಫೀಸಿನಲ್ಲಿ ರಿಕಾರ್ಡ್ ಬಿಲ್ಡ್ ಅಪ್ ಮಾಡಿ, ಅಸಿಸ್ಟೆಂಟ್ ಕಮಿಷನರ್ ಅವರ ಆಫೀಸಿನಿಂದ ಡೆಪ್ಯೂಟಿ ಕಮಿಷನರ್‌ನವರ ಆಫೀಸಿಗೆ ಬಂದು ಮಂಜೂರಾತಿಯಾಗಬೇಕು. ಒಂದೊಂದು ಆಫೀಸಿನಲ್ಲಿ ಒಂದೊಂದು ಕ್ವೈಯರಿ ಹಾಕಿ ಕಳುಹಿಸುತ್ತಾರೆ. ಇದರಿಂದ ವರ್ಷಾನುಗಟ್ಟಲೆ ವೃದ್ಧಾಪ್ಯ ವೇತನ ಮಂಜೂರು ಆಗುತ್ತಿಲ್ಲ. ತಾವು ದೊಡ್ಡ ಮನಸ್ಸುಮಾಡಿ, ಈ ಮಂಜೂರು ಮಾಡುವ ಅಧಿಕಾರವನ್ನು ತಹಸೀಲ್ದಾರರಿಗೆ ಕೊಟ್ಟರೆ ಉತ್ತಮವಾಗುತ್ತದೆ. ಆ ರೀತಿ ಮಾಡುತ್ತೀರಾ ? ಹಾಗೆ ಮಾಡುವುದರಿಂದ ತೊಂದರೆ ಏನು ?

ಶ್ರೀ ಎಂ.ವೈ. ಘೋರ್ಪಡೆ:—ಡೆಪ್ಯೂಟಿ ಕಮಿಷನರ್ ಅವರ ಕಾನ್‌ಫರೆನ್ಸ್ ಕರೆದಾಗ ಇನ್ನಷ್ಟು ಡಿಸೆಂಟ್ರಲೈಸ್ ಮಾಡುವುದಕ್ಕೆ ಸಾಧ್ಯವೇ ಏನು ಎಂಬುದನ್ನು ಬೇಕಾದರೆ ನೋಡಿಸುತ್ತೇನೆ On the basis of the experiences gained so far, whether it is possible to decentralise it further with safety, will be considered by Government.

ಶ್ರೀ ಐ. ಪಿ. ಮಲ್ಲಪ್ಪ :—ವೃದ್ಧಾಪ್ಯ ವೇತನದ ಅರ್ಜಿಗಳನ್ನು ವಿಲೇ ಮಾಡುವುದರಲ್ಲಿ ಬಹಳ ಕಾಲ ವಿಳಂಬವಾಗುತ್ತದೆ ಎನ್ನುವುದು ಎಲ್ಲರ ಅನುಭವ. ಏಕೆಂದರೆ ತಹಸೀಲ್ದಾರ್ ಆಫೀಸಿನಲ್ಲಿ ಪ್ರೊಸೆಸ್ ಮಾಡುವುದಕ್ಕೆ ವರ್ಷಾನುಗಟ್ಟಲೆ ತೆಗೆದುಕೊಳ್ಳುತ್ತಾರೆ. ಈ ರೀತಿ ಪ್ರೊಸೆಸ್ ಮಾಡುವಾಗ ಆರು ತಿಂಗಳಲ್ಲಿ ಅಥವಾ ಒಂದು ವರ್ಷದಲ್ಲಿ ಪ್ರೊಸೆಸ್ ಮಾಡಬೇಕು ಎಂದು ಒಂದು ಟೈಂ ಲಿಮಿಟ್ ಹಾಕುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ :—ಅಪ್ಲಿಕೇಷನ್ ಬಂದು ಇಂಥಾ ಕಾಲಾವಧಿಯಲ್ಲಿ ಡಿಸ್ಪೋಸ್ ಮಾಡಬೇಕು ಎಂದು ಹೇಳಿ ಆ ರೀತಿ ಮಾಡುವುದಕ್ಕೆ ಸಾಧ್ಯವಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ :—ತಾಲ್ಲೂಕು ಮಟ್ಟದಲ್ಲಿ ವೃದ್ಧಾಪ್ಯ ವೇತನದ ಅರ್ಜಿಗಳನ್ನು ಬಿಲ್ಡ್ ಅಪ್ ಮಾಡುವುದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಲೇಶ ಅಂಶವೂ ಇಂಟರೆಸ್ಟ್ ತೆಗೆದುಕೊಳ್ಳುವುದಿಲ್ಲ. ಕೆಲವು ಪುಡಾರಿಗಳು ಇದರಲ್ಲಿ ಪ್ರವೇಶ ಮಾಡುವುದರಿಂದ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ವಿಲೇಜ್ ಲೆವೆಲ್ ವರ್ಕರ್ಸ್ ಕಡ್ಡಾಯವಾಗಿ ವೃದ್ಧಾಪ್ಯವೇತನದ ರಿಕಾರ್ಡುಗಳನ್ನು ಬಿಲ್ಡ್ ಅಪ್ ಮಾಡಿ ತಾಲ್ಲೂಕ ಆಫೀಸಿಗೆ ತಲಪುವಂತೆ ಮಾಡಬೇಕು ಎಂದು ಇದರ ಬಗ್ಗೆ ಆದೇಶ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ಎಂ. ವೈ. ಘೋರ್ಪಡೆ :—ಆ ರೀತಿ ಒಂದು ಗೊತ್ತಾದ ಅವಧಿಯೊಳಗೆ ಡಿಸ್ಪೋಸ್ ಮಾಡಬೇಕು ಎಂದು ಹೇಳಿದೆ.

ಶ್ರೀ ಎಂ. ಎಂ. ಸಜ್ಜನ್ :—ನಿರ್ದಿಷ್ಟ ಕಾಲಾವವಧಿಯಲ್ಲಿ ಅರ್ಜಿ ಏನು ಕೊಟ್ಟಿದ್ದಾರೆ, ಅದು ನಿರ್ಣಯವಾಗದಿದ್ದರೆ ಡೆಸ್ಟಿಟ್ಯೂಟ್ಸ್‌ಗೆ ಅದರ ಫಾಯಿದೆ ಸಿಕ್ಕದೆ ಅನೇಕರು ಸತ್ತು ಹೋಗುವ ಸಂಭವಗಳೂ ಇವೆ. ಆದ್ದರಿಂದ ಆದಷ್ಟು ಕಡಿಮೆ ಟೈಂನೊಳಗೆ ನಿರ್ಧಾರವಾಗುವಂತೆ ಮಾಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ :—ಬಹಳ ತೀವ್ರವಾಗಿ ಅವಸರ ಅವಸರವಾಗಿ ಮಾಡಿದರೆ ಒಂದು ವೇಳೆ ಅವರು ತಪ್ಪು ಏನಾದರೂ ಮಾಡಿದರೆ ಅದು ಚರ್ಚೆಗೆ ಆಸ್ಪದ ಮಾಡಿಕೊಟ್ಟಂತಾಗುತ್ತದೆ. ಆಗ ಅದು ಅಸೆಂಬ್ಲಿಯಲ್ಲಿ ಪ್ರಸ್ತಾಪವಾಗುತ್ತದೆ, ಮತ್ತು ಅಧಿಕಾರಿಗಳು ದಕ್ಷತೆಯಿಂದ, ಅನುಭವದಿಂದ ನಡೆಯುತ್ತಿಲ್ಲ ಎಂದು ಪತ್ರಿಕೆಗಳಲ್ಲಿಯೂ ಬರುತ್ತವೆ. ಆದ್ದರಿಂದ ಒಂದು ಟೈಂ ಲಿಮಿಟ್ ಹಾಕೋಣ. From the date of application, within one year it must be disposed of. Due care should be attached ; it must pass through Tahsildar and the Deputy Commissioner because it is a question of old-age pension. It is not a small thing.

FAMINE RELIEF WORKS IN MANDYA DISTRICT

Smt. DAMAYANTHI BOREGOWDA (Srirangapatna).—

758. Will the Chief Minister be pleased to state :—

(*a*) the amount sanctioned by the Government for famine relief and other development activities during the year 1972-73 in Mandya District ;

(*b*) the names of the taluks and the amount sanctioned to each of them ;

(*c*) the reason why the works were stopped when the amount spent in Mandya District is far less than any other district in the State ?

Sri N. HUTCHAMASTHY GOWDA (Minister for Revenue) [on behalf of Sri D. Devaraj Urs (Chief Minister)].—

(*a*) Rs. 40,20,535.

(*b*) *Vide* Statement appended.

(*c*) No development works have been stopped. As regards works taken up under Famine, the works were ordered to be stopped in all the districts where the conditions have improved as ceiling fixed by Government of India for expenditure on relief works was exceeded.

STATEMENT

		Rs.
Mandya	...	3,42,567
Maddur	...	3,07,170
Malavalli	...	2,35,350
Srirangapatna	...	1,62,620
Pandavapura	...	2,52,485
Krishnarajpet	...	3,06,000
Nagamangala	...	4,71,500
* Executive Engineer, Mandya	...	11,87,350
* Executive Engineer, Visweswaraiah Canal Division	...	6,25,133
* District Forest Officer, Mandya	...	1,05,000
* Regional Transport Officer	...	5,000
		40,00,535

ಶ್ರೀಮತಿ ದಮಯಂತಿ ಬೋರೇಗೌಡ :—ಮಂಡ್ಯಾ ಜಿಲ್ಲೆಯಲ್ಲಿ ಅಕ್ಟೋಬರ್ ಅಂತ್ಯದವರೆಗೆ ಕೇವಲ 5,46,000 ಸಾವಿರ ರೂಪಾಯಿ ಖರ್ಚಾಗಿದೆ, ಈಗ 40 ಲಕ್ಷ ಚಿಲ್ಲರೆ ರೂಪಾಯಿ ಖರ್ಚಾಗಿದೆ ಎಂದು ಹೇಳುತ್ತೀರಿ. ಕೇಂದ್ರದವರು ಅದಕ್ಕೆ ಗೊತ್ತುಮಾಡಿದ್ದಕ್ಕಿಂತ ಮಿತಿ ಮೀರಿದ್ದರಿಂದ ಆ ಕೆಲಸವನ್ನು ನಿಲ್ಲಿಸಿ ಎಂದು ಹೇಳುತ್ತೀರಿ, ಇದು ಇತರೆ ಜಿಲ್ಲೆಗಳಿಗೆ ಅನ್ವಯಿಸುವುದಿಲ್ಲವೇ ಬರೀ ಮಂಡ್ಯ ಜಿಲ್ಲೆಗೆ ಮಾತ್ರ ಅನ್ವಯಿಸುತ್ತದೆಯೋ ?

**Note* :—Talukwise breakup cannot be given as this represents the amount placed under '64-Famine' at the disposal of the officers indicated.

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಮಂಡ್ಯ ಜಿಲ್ಲೆಗೆ ಮಾತ್ರವಲ್ಲ, ರಾಜ್ಯದ ದಕ್ಷಿಣ ಭಾಗದಲ್ಲಿ ಸೆಪ್ಟಂಬರ್‌ನಲ್ಲಿ ಮಳೆಯಾದ್ದರಿಂದ ಎಲ್ಲಾ ಜಿಲ್ಲೆಗಳಲ್ಲೂ ಬೆಳೆ ಸ್ಥಿತಿ ಉತ್ತಮವಾಗಿರುವುದರಿಂದ ಅದನ್ನು ಎಲ್ಲಾ ಜಿಲ್ಲೆಗಳಲ್ಲಿ ನಿಲ್ಲಿಸಿದ್ದೇವೆ. ಮಂಡ್ಯ ಒಂದೇ ಅಲ್ಲ.

ಶ್ರೀಮತಿ ದಮಯಂತಿ ಬೋರೇಗೌಡ :—ಶ್ರೀರಂಗಪಟ್ಟಣದ ತಾಲ್ಲೂಕಿನಲ್ಲಿ ಕೇವಲ 1,62,670 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಸರಿಯೇ ? ಪಾಂಡವಪುರ, ಮಳವಳ್ಳಿಯಲ್ಲಿ ಕಡಿಮೆ ಖರ್ಚು ಮಾಡಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಅಲ್ಲಿನ ಪರಿಸ್ಥಿತಿಗೆ ಅನುಗುಣವಾಗಿ ಅಲಾಟ್ ಮಾಡಿದ್ದು. ಅಲಾಟ್ ಮಾಡಿದ್ದರ ಮೇಲೆ ಖರ್ಚುಮಾಡಿದೆ, ತಿಳಿದಿರತಕ್ಕಂಥ ಅಲಾಟ್ ಮಾಡಿದ ಹಣದಲ್ಲಿ ಖರ್ಚುಮಾಡಬಾರದು ಎಂದು ತಿಳುವಳಿಕೆ ಕೊಟ್ಟಿರಲಿಲ್ಲ. ಈ ಸೆಪ್ಟಂಬರ್ ವರೆಗೆ ಖರ್ಚು ಮಾಡಿರುವುದನ್ನು ಲೆಕ್ಕ ಕೊಡಬೇಕಾಗಿದೆ.

ಶ್ರೀಮತಿ ದಮಯಂತಿ ಬೋರೇಗೌಡ :—ಶ್ರೀರಂಗಪಟ್ಟಣಕ್ಕೆ ಅಲಾಟ್ ಮಾಡಿರುವ ದುಡ್ಡು ಎಷ್ಟು ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಅಲಾಟ್ ಮಾಡಿರುವುದನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ, ಮಂಡ್ಯ 3,42,567 ರೂಪಾಯಿಗಳು. ಮದ್ದೂರಿನಲ್ಲಿ 3,07,170 ರೂಪಾಯಿಗಳು. ಮಳವಳ್ಳಿ 2,35,350 ರೂಪಾಯಿಗಳು. ಶ್ರೀರಂಗಪಟ್ಟಣ 1,62,630 ರೂಪಾಯಿಗಳು, ಪಾಂಡವಪುರ 2,52,485 ರೂಪಾಯಿಗಳು, ಕೃಷ್ಣರಾಜಪೇಟೆ 3,06,000 ರೂಪಾಯಿಗಳು, ನಾಗಮಂಗಲ 4,71,500 ರೂಪಾಯಿಗಳು. ಈ ರೀತಿಯ ವಿವರಗಳನ್ನು ಹಿಂದಿನ ಪುಟದಲ್ಲಿ ಕೊಟ್ಟಿದೆ.

ಶ್ರೀ ಡಿ. ಹಲಗೇಗೌಡ :—ಕ್ಷಾಮ ಪರಿಹಾರ ನಿಧಿಯಿಂದ ಹಣವನ್ನು ಖರ್ಚು ಮಾಡಬೇಕಾದರೆ ಯಾವ ಯಾವ ಕ್ಷೇತ್ರಗಳಲ್ಲಿ ಖರ್ಚು ಮಾಡಬೇಕು ಎಂದು ನಿಗದಿ ಮಾಡಿದ್ದೀರಾ ? ನೀವು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ವಿಶ್ವೇಶ್ವರಯ್ಯ ಕೆನಾಲ್ ಡಿವಿಷನ್‌ಗೆ ಹಣ ಕೊಟ್ಟಿದ್ದೀರಿ. ಅದು ನೀರಾವರಿ ಪ್ರದೇಶಕ್ಕೆ ಸೇರಿದಂಥಾದ್ದು. ನೀರಾವರಿ ಪ್ರದೇಶ ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆಯೇ ಹೊರತು ಎಲ್ಲಿ ಬರ ಇದೆ, ಅಲ್ಲಿ ಹೆಚ್ಚಾಗಿ ಹಣ ಖರ್ಚು ಮಾಡಿಲ್ಲ. ಕಾರಣ ಏನು ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಎಕ್ಸಿಕ್ಯುಟಿವ್ ಇಂಜಿನಿಯರ್ ಮುಖಾಂತರ ಒಟ್ಟು ಖರ್ಚಾಗಿರತಕ್ಕ ಹಣ, ಅದರಲ್ಲಿ ಯಾವ ಯಾವ ಭಾಗದಲ್ಲಿ ಕೆಲಸ ನಡೆಯುತ್ತಿದೆ, ಆ ಕೆಲಸಗಳಿಗೂ ಹಣ ಖರ್ಚಾಗಿದೆ, ಹೊಸದಾಗಿ ತೆಗೆದುಕೊಂಡಂತ ಕೆಲಸಗಳಿಗೂ ಹಣವನ್ನು ಖರ್ಚು ಮಾಡಿದ್ದಾರೆ. ಒಟ್ಟು 40,00,535 ರೂಪಾಯಿ ಅಲಾಟ್‌ಮೆಂಟ್ ಆದದ್ದರಲ್ಲಿ 40,93,309–32 ಪೈಸೆ ಖರ್ಚಾಗಿದೆ ಎಂದು ಅಂಕಿ ಅಂಶಗಳಿಂದ ಗೊತ್ತಾಗಿದೆ. ಅಷ್ಟು ಹಣ ಬೇರೆ ಬೇರೆ ಇಲಾಖೆಯಲ್ಲಿ ನಡೆದಿರತಕ್ಕ ಖರ್ಚನ್ನು ತೆಗೆದುಕೊಂಡು ಇಲ್ಲಿ ಹೇಳುತ್ತಿದ್ದೇನೆ.

ಶ್ರೀ ಡಿ. ಹಲಗೇಗೌಡ :—ವಿಶ್ವೇಶ್ವರಯ್ಯ ಕೆನಾಲ್ ಪ್ರದೇಶದ ಎರಡು ವಿಭಾಗಗಳು ಒಂದು ಮಂಡ್ಯ ಡಿವಿಷನ್, ಇನ್ನೊಂದು ಕೆ. ಆರ್. ಎಸ್. ಡಿವಿಷನ್. ಮಂಡ್ಯ ಡಿವಿಷನ್‌ಗೆ 6 ಲಕ್ಷ ಚಿಲ್ಲರೆ ದುಡ್ಡು ಕೊಟ್ಟಿದ್ದಾರೆ. ಕೆ. ಆರ್. ಎಸ್. ಡಿವಿಷನ್‌ಗೆ ಒಂದು ಕಾಸೂ ಕೊಟ್ಟಿಲ್ಲ ಕಾರಣ ಏನು ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಎಕ್ಸಿಕ್ಯುಟಿವ್ ಇಂಜಿನಿಯರ್ ಮಂಡ್ಯ ಇವರಿಗೆ 11,87,350 ರೂಪಾಯಿಗಳನ್ನು, ವಿಶ್ವೇಶ್ವರಯ್ಯ ಕೆನಾಲ್ ಡಿವಿಷನ್‌ಗೆ 6,25,483 ರೂಪಾಯಿಗಳನ್ನು ಕೊಟ್ಟಿದೆ.

ಶ್ರೀಮತಿ ದಮಯಂತಿ ಬೋರೇಗೌಡ :—ಕೆ. ಆರ್. ಎಸ್. ಡಿವಿಷನ್‌ಗೆ ದುಡ್ಡು ಒದಗಿಸಿಲ್ಲ ಎನ್ನುವುದರಿಂದ ಅಲ್ಲಿಯ ಕೆಲಸಕಾರ್ಯಗಳು ಆಗಿಲ್ಲ ಎಂದು ತಮ್ಮ ಗಮನಕ್ಕೆ ಬಂದಿದೆಯೇ ? ಶ್ರೀರಂಗಪಟ್ಟಣ ತಾಲ್ಲೂಕಿಗೆ ಈ ವರ್ಷವಾದರೂ ಹೆಚ್ಚಿಗೆ ದುಡ್ಡನ್ನು ಒದಗಿಸಿಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಡಿಪಾರ್ಟ್‌ಮೆಂಟಿಗೆ ಒದಗಿಸದೆ ಇರಬಹುದು, ಬೇರೆ ಬಾಬಿನಿಂದ ಅಲ್ಲಲ್ಲಿ ಖರ್ಚಾಗಿದೆ. ತಮಗೆ ವಿವರವಾಗಿ ಹೇಳುವುದಾದರೆ 64ರ ಫ್ಯಾಮಿನ್‌ನಲ್ಲಿ 32 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಐ. ಎನ್. ಇ. ಡಿ ವರ್ಕ್ಸ್‌ಗೆ 40,389 ರೂಪಾಯಿಗಳು, ರೂರಲ್ ಡೆವೆಲಪ್‌ಮೆಂಟ್ 2,38,190 ರೂಪಾಯಿಗಳು, ಕ್ರ್ಯಾಷ್ ಪ್ರೋಗ್ರಾಂನಲ್ಲಿ 5,02,137 ರೂಪಾಯಿಗಳು ಖರ್ಚಾಗಿದೆ. ಮತ್ತೆ ಎಜುಕೇಷನ್ ಡಿಪಾರ್ಟ ಮೆಂಟಿನ ಕೆಲವು ವರ್ಕ್ಸ್, ಪಿ. ಆರ್. ವರ್ಕ್ಸ್‌ಗೆ ಖರ್ಚಾಗಿರುವುದು 39,887 ರೂಪಾಯಿ, ಇಂಟೆನ್‌ಸೀವ್ ಏರಿಯಾ ಡೆವೆಲಪ್‌ಮೆಂಟ್ ಪ್ರೋಗ್ರಾಂ 27,560 ರೂಪಾಯಿಗಳು ಖರ್ಚಾಗಿದೆ. ಆ ವಿವರಗಳು ತಾಲ್ಲೂಕು ವೈಸ್ ಬೇರೆ ಇದೆ. ಆ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ :—ತಮ್ಮ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾಗಮಂಗಲದಲ್ಲಿ ಯಾವ ಕಾರಣದಿಂದ ನಾಲ್ಕು ಲಕ್ಷ ರೂಪಾಯಿ ಕೊಟ್ಟಿದ್ದೀರಿ ಮತ್ತು ಚನ್ನರಾಯಪಟ್ಟಣಕ್ಕೆ 14-15 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ ಕಾರಣ ಏನು ಎಂದು ಹೇಳುವದಕ್ಕೆ ಆಗುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಒಟ್ಟು ರಾಜ್ಯದಲ್ಲಿಯ ಎಲ್ಲಾ ಜಿಲ್ಲೆಗಳಿಗೆ ಹಣವನ್ನು ಹಂಚಿ, ಜಿಲ್ಲಾವಾರು ಆದ ಮೇಲೆ ತಾಲ್ಲೂಕುವಾರು ಹಂಚತಕ್ಕ ಡೆಪ್ಯುಟಿ ಕಮೀಷನರವರು ಅಲ್ಲಿಯ ಪರಿಸ್ಥಿತಿಯನ್ನು ನೋಡಿ ಹಂಚಿದ್ದಾರೆ. ಹಾಸನ ಜಿಲ್ಲೆಯಲ್ಲಿ ಹೆಚ್ಚಿನ ಅಭಾವ ಇದ್ದುದ ರಿಂದ ಹೆಚ್ಚಾಗಿ ಅಲಾಟ್ ಮಾಡಿರಬಹುದು. ಚನ್ನರಾಯಪಟ್ಟಣ ಅಕ್ಕಪಕ್ಕದ ಭಾಗಗಳಲ್ಲಿ ಅಭಾವ ಪರಿಸ್ಥಿತಿ ಇರಬಹುದು, ಅಲ್ಲಿ ಪರಿಸ್ಥಿತಿಗಳು ಬಹಳ ಅವಶ್ಯಕವಾಗಿ ಕಂಡುಬಂದುದರಿಂದ ಅಲ್ಲಿ ಕೊಟ್ಟಿರಬಹುದು.

ಶ್ರೀಮತಿ ದಮಯಂತಿ ಬೋರೇಗೌಡ :—ಒಟ್ಟಿನಲ್ಲಿ ಆನೆಕಲ್, ಮಂಡ್ಯ, ಜಿಲ್ಲೆಯಲ್ಲಿ, ವಿಶೇಷವಾಗಿ ಶ್ರೀರಂಗಪಟ್ಟಣ, ಪಾಂಡವಪುರ ತಾಲ್ಲೂಕುಗಳಿಗೆ ಅನ್ಯಾಯವಾಗಿದೆಂದು ಒಪ್ಪಿ ಕೊಳ್ಳುತ್ತೀರೋ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಹಣ ಹಂಚಿರುವುದು, ಖರ್ಚಾಗಿರುವುದನ್ನು ತಿಳಿಸಿದ್ದಾರೆ. ಅನ್ಯಾಯವಾಗಿದ್ದು ಎಲ್ಲಿ ಎನ್ನುವುದನ್ನು ತೀರ್ಮಾನಕ್ಕೆ ಬರುವುದು ಮಾನ್ಯ ಸದಸ್ಯರಿಗೆ ಬಿಟ್ಟಿದ್ದು.

RELIEF PROVIDED TO THE PEOPLE AFFECTED BY THE CHICKAHOLE TRAGEDY

761. Sri M. SIDDAMADAIAH (Kollegal).—

Will the Minister for Revenue be pleased to state :—

(a) the relief provided so far to the people of Kollegal, Yelandur and Chamarajanagar Taluks who were victims of

Chickahole tragedy (The quantum of relief provided and its nature);

(*b*) whether Government have taken any action to make arrangements for providing relief to those who are put to difficulties as they have no means to construct the roofing of residential houses;

(*c*) the number of houses and the names of villages in respect of which such action has been taken (talukwise and villagewise information may be furnished)?

Sri N. HUTCHAMASTHY GOWDA (Minister for Revenue).—

(*a*) The total relief amount spent	Rs. 6,26,432-38
1. For free meals	Rs. 2,67,866-10
2. Cash relief	Rs. 2,67,620-00
3. Materials for construction of Houses (In Kollegal and Yelandur Taluks only).	Rs. 36,736-28

The details of wooden materials distributed in Chamarajanagar Taluk:

B.	22,286-00
K.	4,008-00
Ballies	1,528-00

(*b*) The Government have sanctioned cash relief of Rs. 100 for purchase of roofing materials locally and Rs. 200 for purchase of house building materials.

(c) Please see *vide* reply to clause (*b*).

ಶ್ರೀ ಎಂ. ಸಿದ್ಧಮಾದಯ್ಯ :— ಚಿಕ್ಕಹೊಳೆ ದುರಂತದಲ್ಲಿ ಕೊಳ್ಳೆಗಾಲ, ಯಳಂದೂರು, ಚಾಮರಾಜನಗರ ತಾಲ್ಲೂಕಿನಲ್ಲಿ ಬಹಳ ಮನೆಗಳು ಕಿತ್ತುಕೊಂಡು ಹೋಗಿರುವುದರಿಂದ ಟೆಂಪರರಿ ಶೆಡ್‌ಗಳನ್ನು ಹಾಕಿಕೊಳ್ಳುವುದಕ್ಕೆ ಬೊಂಬು ಮತ್ತು ಗಳ ಸಪ್ಲೈ ಮಾಡಿದ್ದಾರೆ, ಉಳಿದವರಿಗೆ ತೆಂಗಿನಗರಿ ಕೊಡುತ್ತೇವೆಂದು ಹೇಳಿದ್ದೀರಿ, ಅದನ್ನು ಇನ್ನು ಕೊಟ್ಟಿಲ್ಲ, ನಿಧಾನವಾಗಿರುವುದಕ್ಕೆ ಕಾರಣವೇನು ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ:—ತೆಂಗಿನ ಗರಿ ಸಿಕ್ಕದೇ ಇರುವುದರಿಂದ ಅದಕ್ಕೆ ಬದಲಾಗಿ 100 ರೂಪಾಯಿ ಕ್ಯಾಷ್ ಗ್ರಾಂಟ್ ಕೊಟ್ಟು ಅದನ್ನು ಕಟ್ಟಿಸಿಕೊಳ್ಳಬಹುದೆಂದು ಆ ರೀತಿ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಎಂ. ಸಿದ್ಧಮಾದಯ್ಯ :—ಇನ್ನು ಸಹ ತಲುಪಿಲ್ಲ, ಕೊಟ್ಟಿರುವ 100 ರೂಪಾಯಿ ಬೇಗನೆ ಕೊಡುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಹುಚ್ಚಮಾಸ್ತಿಗೌಡ :—ಎಷ್ಟು ತಲುಪಿದೆ ಎಂಬ ವಿವರ ತರಿಸಿಕೊಂಡು ಇನ್ನು ತಲುಪದೆ ಇರುವವರಿಗೆ ಬೇಗನೆ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ಸಿದ್ದಮಾದಯ್ಯ :—ನೀರಿನಲ್ಲಿ ಸಣ್ಣ ರೈತರ ಮನೆಗಳು ಕೊಚ್ಚಿ ಹೋಗಿರುವವರಿಗೆ 500 ರೂಪಾಯಿ ಪರಿಹಾರ ನೀಡುವುದಾಗಿ ತಾವು ಪ್ರವಾಸ ಕೈಗೊಂಡಿದ್ದಾಗ ಅಪ್ಪಣೆ ಮಾಡಿದ್ದಿರಿ. ಇದುವರೆಗೂ ಯಾವುದೂ ಕೊಟ್ಟಿಲ್ಲ ಬೇಗನೆ ತಾವು ಕೊಡಿಸಿಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈಗಾಗಲೇ ಕ್ಯಾಷ್ ರಿಲೀಫ್ 2,67,620.00 ರೂಪಾಯಿ ಕೊಟ್ಟಿದೆ. ಇನ್ನು ಹೆಚ್ಚಾಗಿ ಬೇಕು ಎಂದು ಕೇಳಿದ್ದೀರಿ. 5 ಲಕ್ಷ ರೂಪಾಯಿ ಮತ್ತೆ ಮಂಜೂರು ಆಗಿದೆ ಅದನ್ನು ಹಂಚತಕ್ಕ ವ್ಯವಸ್ಥೆ ಮಾಡಿದೆ.

ಶ್ರೀ ಎಂ. ಸಿದ್ದಮಾದಯ್ಯ :—(ಈ) ಪ್ರಶ್ನೆಗೆ (ಅ) ಉತ್ತರ ನೋಡಿ ಎಂದು ಹೇಳಿದ್ದೀರಿ. ಗೌರ್ನಮೆಂಟ್‌ನವರು ಎಷ್ಟೆಷ್ಟು ದುಡ್ಡು ಕೊಟ್ಟಿದ್ದೀರಿ ಎನ್ನುವುದನ್ನು ಮಾತ್ರ ಹೇಳಿದ್ದೀರಿ, ಆದರೆ ಯಾವ ಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ಮನೆಗಳು ಕೊಚ್ಚಿಕೊಂಡು ಹೋಗಿವೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—

ಕೊಳ್ಳೇಗಾಲ ತಾಲ್ಲೂಕ್

ಗ್ರಾಮ	ಕ್ರಮ ಕೈಗೊಂಡಿರುವ ಮನೆಗಳ ಸಂಖ್ಯೆ.
ಮಳ್ಳೂರು	37
ಎಡನೊಳೆ	12
ಕೊಳ್ಳೆಗಾಲ	12
ಹಂಪಾಪುರ	1
ಉತ್ತಂಬಳ್ಳಿ ಮೋಳ	41
ಒಟ್ಟು	103

ಯಳಂದೂರು ತಾಲ್ಲೂಕ್

	ಹಣ ಸಹಾಯ ಪಡೆದ ಮನೆಗಳು	ಮನೆ ಕಟ್ಟುವ ಸಾಮಾನುಗಳು
ಯರಿಯೂರು	153	77
ಬನ್ನಿಸಾರಿಗೆ	106	58
ಅವಳಕಂದಳ್ಳಿ	15	—
ದುಯಂ ಕಂದಳ್ಳಿ	13	2
ಮದ್ದೂರು	75	76
ಯಳಂದೂರು	255	100
ಅಗರ	174	64
ಮಾಂಬಳ್ಳಿ	220	38
ಕೃಷ್ಣಾಪುರ	32	6
ಕನಕಳ್ಳಿ	31	8

ಎಳಂದೂರು ತಾಲ್ಲೂಕ್ (ಮುಂದುವರಿದುದು)

	ಹಣ ಸಹಾಯ ಪಡೆದ ಮನೆಗಳು	ಮನೆ ಕಟ್ಟುವ ಸಾಮಾನುಗಳು
ಬೂದಿತಿಟ್ಟು	34	34
ಉಪ್ಪಿನ ಮಾಳೆ	49	6
ಗಣಿಗನೂರು	31	22
ಚಾಮಲಾಪುರ	13	20
ಅಂಬಳೆ	96	55
ವೈ. ಕೆ. ಮಾಳೆ	47	29
ಟಿ. ಹೊಸೂರು	1	—

ಚಾಮರಾಜನಗರ ತಾಲ್ಲೂಕ್

	ಕಷ್ಟಕ್ಕೆ ಈಡಾದ ಕುಟುಂಬಗಳು
ಕೂಡ್ಲೂರು	146
ಕನ್ನೇಗಾಲ	126
ಹೊಮ್ಮ	17
ಕೂಡಿಮಲೆ	34
ಅಂಕನ ಸೆಟ್ಟಿಪುರ	6
ಬೋದಿ ತಿಟ್ಟು	19
ಹೆಚ್. ಡಿ. ಫಾರೆಸ್ಟ್	10
ಹೆಬ್ಬೂರು	56
ಮಸನಪುರ	57
ಆಲೂರು	3
ಸೂತೂರು	1
ಡೋಲೀಪುರ	1
ಚಂದಕವಾಡಿ	7
ಕಾನಿಕರೆ	8
ಬ್ಯಾಡಮೂಡಲು	2
ಕಂಪನಪುರ, ಸರಗೂರು, ಗೋಲಿಪುರ.	—

ಶ್ರೀ. ಎಂ. ಸಿದ್ದಮಾದಯ್ಯ:—ಹೊಳೆಯ ದುರಂತದ ಪರಿಣಾಮವಾಗಿ ಕೊಚ್ಚಿಹೋಗಿರುವ ರೈತರಿಗೆ ಪರಿಹಾರ ಕೊಡುವುದಾಗಿ ತಿಳಿಸಿದ್ದಾರೆ. ಅವರಲ್ಲಿ ಕೆಲವರು ಇನ್ಸ್‌ಪೆಕ್ಟಿಂಗ್ ಆಫೀಸರು ಕೆಲವು ಮನೆಗಳಿಗೆ ಹೋಗದೇ ಇರಬಹುದು. ಕೆಲವು ಕಡೆ ಪ್ರವಾಹದಿಂದ ತೀವ್ರವಾಗಿ ಗೋಡೆಗಳು ಕುಸಿದುಕೊಂಡು ಹೋಗಿವೆ. ಅನಾನುಕೂಲವಾದುದರಿಂದ ಮನೆಗಳನ್ನು ಕೆಲವರು ಬಿಟ್ಟು ಹೋಗಿದ್ದಾರೆ. ಅಂಥ ಮನೆಯವರಿಗೆ ಪರಿಹಾರ ಕೊಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಜಿಲ್ಲಾಧಿಕಾರಿಗಳಿಗೆ ತಿಳಿಸಿ, ಪಟ್ಟಿಯಲ್ಲಿ ಬಿಟ್ಟು ಹೋಗಿರತಕ್ಕ ಮನೆಗಳು ಇದ್ದರೆ ಅವುಗಳನ್ನು ಕೂಡ ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದು ತಿಳಿಸುತ್ತೇನೆ.

UNAUTHORISED CULTIVATION OF GOVERNMENT LAND IN TIPTUR

858. Sri T. M. MANJUNATH (Tiptur).—

Will the Minister for Revenue be pleased to state.—

(*a*) the number of applications received by the Tahsildar, Tiptur, in connection with unauthorised cultivation of Government land ;

(*b*) the action taken by him on those applications ;

(*c*) the time within which decision on those applications would be taken ?

Sri N. HUTCHAMASTY GOWDA (Minister for Revenue).—

(*a*) 949.

(*b*) Already 300 applications have been disposed of and remaining 649 applications are under enquiry and at different stages.

(*c*) As early as possible.

ಶ್ರೀ ಟಿ. ಎಂ. ಮಂಜುನಾಥ್: – ಸ್ವಾಮಿ, ಈ ಪ್ರಶ್ನೆ ಕೇಳತಕ್ಕ ಮೂಲ ಉದ್ದೇಶ ಇಷ್ಟೇ. ಸಾಮಾನ್ಯವಾಗಿ ಈಗಾಗಲೇ ರೈತರು ನಮ್ಮ ತಾಲ್ಲೂಕಿನಲ್ಲಿ 15–20 ವರ್ಷಗಳಿಂದ ಭೂಹೀನವರು ಸರ್ಕಾರಿ ಜಮೀನಿನಲ್ಲಿ ತೆಂಗಿನ ಗಿಡಗಳನ್ನು ಹಾಕಿ ಬೆಳೆಸಿದ್ದಾರೆ. ಅವು ಈಗಾಗಲೇ ಫಸಲು ಕೊಡುತ್ತಿವೆ. 15 ವರ್ಷಗಳಾದರೂ ಸಹ ಈ ವ್ಯವಹಾರ ನಡೆಯುತ್ತಾ ಇದೆ. ಡೇಟ್ ರಿಸರ್ವ್, ಎಕ್ಸೈಜ್ ರಿಸರ್ವ್ ಎಂದು ಇಟ್ಟಿದ್ದೀರಿ. ಅದರಲ್ಲಿ ಈಚಲಮರವಿಲ್ಲ, ಅಧಿಕಾರಿಗಳು ಅನಾವಶ್ಯಕವಾಗಿ ತೊಂದರೆ ಕೊಡುತ್ತಿದ್ದಾರೆ. ಎಷ್ಟು ದಿವಸದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :— ಅದು ಆಯಾಯ ಸಂದರ್ಭಗಳಿಗನುಗುಣವಾಗಿ ಆಗಬೇಕಾಗುತ್ತದೆ. ಮಾನ್ಯ ಸದಸ್ಯರು ಈಗತಾನೆ ಅಪ್ಪಣೆ ಕೊಡಿಸಿದಂತೆ ಡೇಟ್ ರಿಸರ್ವ್ ಅಕ್ರಮ ಸ್ವಾಧೀನ ಮಾಡಿಕೊಂಡಿದ್ದಾರೆ. ಇದನ್ನು ಕೂಡಲೇ ಮಂಜೂರು ಮಾಡುವುದಕ್ಕೆ ಆಗುವುದಿಲ್ಲ, ಫಾರೆಸ್ಟ್ ಲ್ಯಾಂಡಿನಲ್ಲಿ ಮಾಡಿದ್ದರೂ ಮಂಜೂರು ಮಾಡುವುದಕ್ಕೆ ಆಗುವುದಿಲ್ಲ. ಕೆರೆಯ ಅಂಗಳದಲ್ಲಿ ಮಾಡಿದ್ದರೆ ಮಂಜೂರು ಮಾಡುವುದಕ್ಕೆ ಆಗುವುದಿಲ್ಲ. ತಾಲ್ಲೂಕಿನಿಂದ ಹೊರಗಡೆ ಇರತಕ್ಕವರು ಇದ್ದರೆ ಅದನ್ನು ಕ್ರಮಪಡಿಸುವುದಕ್ಕೆ ಆಗುವುದಿಲ್ಲ. ಇಂಥ ಕೆಲವು ನಿಯಮಗಳಿವೆ. ನಿಯಮಗಳನ್ನು ನೋಡಿ ಅದರಂತೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕಡೆಯದಾಗಿ 1972 ನೇ ಇಸ್ವಿ ಡಿಸಂಬರ್ 31ನೇ ತಾರೀಖಿನವರೆಗೂ ಅಕ್ರಮ ಸ್ವಾಧೀನ ಮಾಡಿಕೊಂಡಿರುವುದಕ್ಕೆ ಅರ್ಜಿ ಹಾಕಲು ಅವಕಾಶ ಕೊಟ್ಟಿದೆ. 949 ಅಪ್ಲಿಕೇಷನ್‌ಗಳು ಬಂದಿವೆ. ಅವುಗಳ ಪೈಕಿ ಬಹಳ ಸುಲಭದಲ್ಲಿ ತೀರ್ಮಾನ ಮಾಡತಕ್ಕಂಥವುಗಳನ್ನು ತೀರ್ಮಾನ ಮಾಡಿದೆ. ಉಳಿದವುಗಳನ್ನು ಕೆಲವಾರು ದಿವಸದಲ್ಲಿ ಮಾಡುತ್ತೇವೆ. ಇಷ್ಟೇ ದಿವಸಗಳು ಎಂದು ನಿರ್ದಿಷ್ಟವಾಗಿ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ್ :—ನಾನು ಕೇಳಿರುವುದು ತಮ್ಮ ಕಾನೂನಿನ ಮಿತಿಯಲ್ಲಿ ಇರತಕ್ಕದ್ದು. ಗೋಮಾಳದಲ್ಲಾಗಲೀ, ಕೆರೆ ಅಂಗಳದಲ್ಲಾಗಲೀ ಅಂಥ ಕಡೆಯಲ್ಲಿಲ್ಲ. ತೆಂಗಿನ ಗಿಡ ಬೆಳೆಸಿ ಫಸಲು ಬರುತ್ತಿದೆ. 15-20 ವರ್ಷಗಳು ಆಗಿದೆ. ಕಾನೂನು ಪ್ರಕಾರ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೀರಿ. ಅಲ್ಲಿರುವ ಮರಗಳನ್ನು ಕಡಿಸುತ್ತೀರೋ, ಇಲ್ಲ ಅವರಿಗೇ ಕೊಡುತ್ತೀರೋ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಜಮೀನು ಕನ್‌ಫರ್ಮ್ ಮಾಡಿ ಕೊಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡು ಜಮೀನು ಇಲ್ಲದವರಿಗೆ ಹಂಚುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್ :—ಜಮೀನುಗಳು ಇರತಕ್ಕವರಿಗೆ, ಜಮೀನು ಹೊಂದಿರ ತಕ್ಕವರಿಗೆ ಏನು ಆಶ್ವಾಸನೆ ಕೊಡುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ರೂಲ್ಸ್ ಪ್ರಕಾರ ಕೊಡುವುದಕ್ಕೆ ಸಾಧ್ಯವಿದ್ದರೆ ಕೊಡುತ್ತೇವೆ, ಇಲ್ಲದಿದ್ದರೆ ಸರ್ಕಾರ ಅವುಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

DISTRIBUTION OF CULTIVABLE LANDS IN TIPTUR TALUK

859. Sri T. M. MANJUNATH (Tiptur).—

Will the Minister for Revenue be pleased to state:—

(*a*) the number of acres of cultivable land available for distribution in Tiptur Taluk ;

(*b*) the action taken to distribute such lands to the landless people in this Taluk ;

(c) the procedure followed for distribute of such land ?

Sri N. HUTCHAMASTHY GOWDA (Minister for Revenue).—
A.—G.

(*a*) 1625-19 as on 31st March 1973.

(*b*) Necessary records have been built up for grant of land to the extent of 332 acres in consultation with the Taluk Consultative committee.

As regards the remaining extent of 1,293 acres 19 guntas the applications received are being processed by the special staff.

(*c*) The Procedure contemplated in the Mysore Land Grant Rules, 1969 is being followed.

ಶ್ರೀ ಟಿ. ಎಂ. ಮಂಜುನಾಥ್ :—ನಮ್ಮ ತಾಲ್ಲೂಕಿನಲ್ಲಿರತಕ್ಕ ಜಮೀನು 1,600 ಎಕರೆ ಎಂದು ಹೇಳಿದ್ದೀರಿ. 1,600 ಎಕರೆಗೆ ಬಂದಿರತಕ್ಕ ದರಖಾಸ್ತು ಅಪ್ಲಿಕೇಷನ್ಸ್ ನೋಡಿದಾಗ ಬಹುಶಃ 4 ಲಕ್ಷ ಅಪ್ಲಿಕೇಷನ್‌ಗಳು ಬಂದಿವೆ. ಯಾವ ಕ್ರಮಂಗಳಿಗನಂಗುಣವಾಗಿ ಇಷ್ಟು ಅರ್ಜಿಗಳಿಗೆ ಭೂಮಿಯನ್ನು ಹಂಚುತ್ತೀರಿ ? ಅದರ ಜೊತೆಗೆ ಅಲ್ಲಿ ಹೊಸದಾಗಿ ಸೃಷ್ಟಿ

ಮಾಡಿರತಕ್ಕ ಅಪ್ಲಿಕೇಷನ್‌ಗಳು ಇರುತ್ತವೆ. ಅಲ್ಲಿ ಗುಮಾಸ್ತರನ್ನು ಏನಾದರೂ ಆಫೀಸರುಗಳು ಕೇಳಿದಾಗ ಸಮಂಜಸವಾದ ಉತ್ತರ ಕೊಡುವುದಿಲ್ಲ. ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಅದಕ್ಕೆ ಸ್ಪಷ್ಟವಾಗಿ ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಇದೆ. ಆ ರೂಲ್ಸ್ ಪ್ರಕಾರ ಅಧಿಕಾರಿಗಳು ಯಾವ ಯಾವ ಜಮೀನುಗಳಿಗೆ ಅಪ್ಲಿಕೇಷನ್ಸ್ ಬಂದಿದೆಯೋ ಅದನ್ನೆಲ್ಲಾ ಪ್ರೊಸೆಸ್ ಮಾಡಿ ಕಮಿಟಿ ಮುಂದೆ ಇಡುತ್ತಾರೆ. ಅವರು ತೀರ್ಮಾನ ತೆಗೆದುಕೊಂಡ ಮೇಲೆ ಮೊದಲು ಅದನ್ನು ತಾಶೀಲ್ದಾರರು ಮಂಜೂರು ಮಾಡುತ್ತಿದ್ದರು. ಈಗ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರವರು ಸಾಗುವಳಿ ಚೀಟಿ ಕೊಡುವ ವ್ಯವಸ್ಥೆಯಾಗಿದೆ ರೂಲ್ಸ್ ಪ್ರಕಾರ ಅವರು ಅದನ್ನು ಮಾಡಬೇಕು.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ :—ಮಾನ್ಯ ಮಂತ್ರಿಗಳು ಲ್ಯಾಂಡ್ ಗ್ರಾಂಟ್ ರೂಲ್ಸ್‌ಗೆ ಅನುಸಾರವಾಗಿ ಜಮೀನುಗಳನ್ನು ವಿಲೇವಾರಿ ಮಾಡಿದ್ದಾರೆ ಎಂದು ಹೇಳಿದರು. ಈಗ 1,625 ಎಕರೆ 19 ಗುಂಟೆ ಜಮೀನುಗಳಲ್ಲಿ ಶೇಕಡ 50 ಪರ್ಸೆಂಟ್ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದವರಿಗೆ ಮೀಸಲಾಗಿರಿಸಿದ್ದಾರೆಯೋ ? ಏತಕ್ಕೆಂದರೆ ವಿಲೇವಾರಿ ಮಾಡಿರತಕ್ಕಂಥ ಜಮೀನಿನಲ್ಲಿ ಎಷ್ಟು ಎಕರೆ ಜಮೀನನ್ನು ಈ ಪರಿಶಿಷ್ಟ ಜನಾಂಗದವರಿಗೆ ಕೊಟ್ಟಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಅದು ಸ್ಪಷ್ಟವಾಗಿ ರೂಲ್ಸ್‌ನಲ್ಲಿ ಇದೆ. ಅಧಿಕಾರಿಗಳಿಗೆ ಈ ವಿಷಯದಲ್ಲಿ ವ್ಯತ್ಯಾಸ ಮಾಡಕೂಡದು ಎಂದು ನಿರ್ದಿಷ್ಟವಾಗಿ ಆದೇಶ ಕೊಟ್ಟಿದ್ದೇನೆ. ಅವರು 50 ರಷ್ಟು ಕೊಟ್ಟಿದ್ದಾರೆ ಎನ್ನುವುದು ನನ್ನ ನಿರೀಕ್ಷೆ ಇದೆ. ಎಷ್ಟು ಎಕರೆ ಕೊಟ್ಟಿದ್ದಾರೆ ಎನ್ನುವ ವಿವರ ನನ್ನಲ್ಲಿಲ್ಲ. ಒಂದು ವೇಳೆ ಆ ರೀತಿ ಇಲ್ಲದೇ ಹೋದರೆ ಮುಂದೆ ಹಂಚತಕ್ಕ ಕಾಲದಲ್ಲಿ 50 ಪರ್ಸೆಂಟ್ ಅವರಿಗೆ ಬರುವಷ್ಟು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ :—ದರಖಾಸ್ತು ಅರ್ಜಿಗಳನ್ನು ತಾಲ್ಲೂಕು ಆಫೀಸಿಗೆ ಕೊಟ್ಟ ನಂತರ ಅರ್ಜಿದಾರರಿಗೆ ಎಂಡಾರ್ಸ್‌ಮೆಂಟ್ ಬರುವುದಿಲ್ಲ. 5 ವರ್ಷದಿಂದ ಹಾಕಿರತಕ್ಕಂಥ ಅರ್ಜಿಯೇ ಇರುವುದಿಲ್ಲ. ನಿನ್ನೆ ಹಾಕಿರತಕ್ಕಂಥ ಅರ್ಜಿ ಇರುತ್ತದೆ. ಆದುದರಿಂದ ತಾಲ್ಲೂಕು ಆಫೀಸಿನಲ್ಲಿ ಕೊಡತಕ್ಕಂಥ ಅರ್ಜಿಗಳಿಗೆ ಎಂಡಾರ್ಸ್‌ಮೆಂಟ್ ಕೊಡುವುದಕ್ಕೆ ತಕ್ಕ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಇದುವರೆಗೆ ಈ ರೀತಿ ಅರ್ಜಿ ಹಾಕತಕ್ಕಂಥವರಿಗೆ ಆ ರೀತಿ ಎಂಡಾರ್ಸ್‌ಮೆಂಟ್ ಕೊಡತಕ್ಕಂಥ ಅಭ್ಯಾಸವಿಲ್ಲ. ಈ ಅರ್ಜಿಗಳು ಯಾವ ಕಾಲದಲ್ಲಿ ಬಂದಿದೆಯೋ ಗೊತ್ತಿಲ್ಲ. ಆದುದರಿಂದ ಮತ್ತೆ ಡೆಪ್ಯೂಟಿ ಕಮಿಷನರಿಗೆ ತಿಳಿಸುತ್ತೇನೆ. ಹಿಂದೆ ಇದ್ದುದನ್ನು ಕೈಬಿಟ್ಟು ಹೊಸದಾಗಿ ಬಂದಿರುವ ಅರ್ಜಿಗಳನ್ನು ತೆಗೆದುಕೊಂಡು ಅವರಿಗೆ ಎಂಡಾರ್ಸ್‌ಮೆಂಟ್ ಕೊಡುವ ಹಾಗೆ ನಿರ್ದೇಶನ ಕೊಡುತ್ತೇನೆ. ಇದು ಈ ಒಂದೇ ತಾಲ್ಲೂಕಿಗೆ ಅನ್ವಯಿಸಬೇಕು ಅಂತ ಅಲ್ಲ, ಉಳಿದ ತಾಲ್ಲೂಕಿಗೂ ಈ ಪದ್ಧತಿ ಅನ್ವಯಿಸುವಂತೆ ದೃಷ್ಟಿಯನ್ನಿಟ್ಟುಕೊಂಡು ಕೆಲಸ ಮಾಡಬೇಕು.

ಶ್ರೀ ಟಿ. ಎಂ. ಮಂಜುನಾಥ್ :—ಒಂದೇ ನಂಬರ್‌ನಲ್ಲಿರತಕ್ಕಂಥ ಜಮೀನನ್ನು, ಒಂದೇ ಪ್ಲಾಟ್‌ನಲ್ಲಿರತಕ್ಕಂಥಾದ್ದನ್ನು ಇಬ್ಬರಿಗೆ ಮಂಜೂರು ಮಾಡಿ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಹಾಗೆ ಬಂದಿದ್ದರೆ ಅಧಿಕಾರಿಗಳ ಮೇಲೆ ಏನು ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಿ? ಎರಡನೇದಾಗಿ ದರಖಾಸ್ತು ಸಂಬಂಧಪಟ್ಟಂತೆ ತಾಲ್ಲೂಕು ಆಫೀಸಿನಲ್ಲಿ ಯಾವ ನೌಕರನು ಇದ್ದಾನೋ ಅವನು ಪ್ರಾಪಗ್ಯಾಂಡ ಮಾಡಿ ಇಂತಹ ಜಮೀನನು ಕೊಡಿಸುತ್ತೇನೆ

ಎಂದು ಹೇಳಿ ಅವರಿಂದ ಅಪ್ಲಿಕೇಷನ್ ತೆಗೆದುಕೊಂಡು, 10-20 ರೂಪಾಯಿ ತೆಗೆದು ಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಒಂದೇ ಜಮೀನಿನಲ್ಲಿ ಇಬ್ಬರಿಗೆ ಕೊಟ್ಟಿರುವುದು ತಾಲ್ಲೂಕು ಸಮಾಲೋಚನಾ ಸಮಿತಿ ಮೇರೆ ಕೊಟ್ಟಿದೆ. ಆ ಕಮಿಟಿಯವರ ಸಲಹೆ ಮೀರಿ ಕೊಟ್ಟಿದ್ದರೆ ಆ ಅಧಿಕಾರಿಗಳದ್ದು ತಪ್ಪಾಗುತ್ತದೆ. ಒಂದೇ ಜಮೀನನ್ನು ಇಬ್ಬರಿಗೆ ಕೊಟ್ಟಿದ್ದರೆ ಆ ಕಮಿಟಿಯ ಶಿಫಾರಸಿಗನುಗುಣವಾಗಿ ಕೊಟ್ಟಿದ್ದಾರೆ. ಅದರ ವಿರುದ್ಧವಾಗಿ ಮಾಡಿದ್ದರೆ ಅದನ್ನು ನೋಡಬೇಕಾಗಿದೆ.

UNAUTHORISED CULTIVATION OF GOMAL LANDS IN SRINIVASAPUR TALUK

883. Sri S. BACHI REDDY (Srinivasapur).—

Will the Minister for Revenue be pleased to state :—

(*a*) the extent of Gomal lands under unauthorised cultivation in Srinivasapur Taluk ;

(*b*) the steps taken by the Government to evict persons from cultivating the above gomal lands ;

(*c*) the extent of land available in Srinivasapur Taluk for the distribution to the landless agriculturists ?

Sri N. HUTCHAMASTHY GOWDA (Minister for Revenue).—

(*a*) A.—G.
625—00.

(*b*) Action is being taken under section 94 of the Mysore Land Revenue Act to evict them from the lands and in cases where they are in unauthorised occupation prior to 1st July 1968 action is being taken to regularise lands provided they are insufficient holders, eligible for grant and the lands are available for disposal as per rules.

(*c*) A.—G.
2509—32.

ಶ್ರೀ ಎಸ್. ಬಾಚೀ ರೆಡ್ಡಿ : (ಅ) ಗೆ ಉತ್ತರವಾಗಿ 625 ಎಕರೆ ಎಂದು ಹೇಳಿದ್ದೀರಿ. ಆದುದರಿಂದ ಈ ಅನಧಿಕೃತ ಸಾಗುವಳಿಯನ್ನು ತಡೆಗಟ್ಟಲು ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಈ ಅಕ್ರಮ ಸ್ವಾಧೀನವನ್ನು ತಡೆಗಟ್ಟಲು ಮೊದಲು ನೋಟೀಸ್ ಕೊಡುತ್ತೇವೆ, ಅದು ನಿಮಗೆ ಸಲ್ಲತಕ್ಕದ್ದಲ್ಲ, ನಿಮಗೆ ಮಂಜೂರಾತಿ ಮಾಡುವುದಕ್ಕೆ ಆಗುವುದಿಲ್ಲ, ಇದು ಖುಲ್ಲಾ ಮಾಡಬೇಕು ಎಂದು ನೋಟೀಸ್ ಕೊಡುತ್ತೇವೆ. ಅವರು ಮಾಡದೇ ಹೋದರೆ ಪೊಲೀಸಿನವರ ಸಹಾಯದಿಂದ ಎವಿಕ್ಟ್ ಮಾಡಿಸುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳತಕ್ಕಂಥಾದ್ದು ಈಗ ಇರತಕ್ಕಂಥ ಪದ್ಧತಿ.

ಶ್ರೀ ಎಸ್. ಬಾಚೀ ರೆಡ್ಡಿ:—ನಮ್ಮ ತಾಲ್ಲೂಕಿನಲ್ಲಿ 2,509 ಎಕರೆ ಸಾಗುವಳಿ ಜಮೀನು ಇದೆ. ಅದು ಗೋಮಾಳವಾಗಿರುವುದರಿಂದ ಸಾಗುವಳಿಗೆ ಅವಕಾಶ ಇಲ್ಲದಂತಾಗಿದೆ. ಇನ್ನು ಕೆಲವು ಸಾಗುವಳಿಗೆ ಲಾಯಕ್ಕಾಗುವಂಥ ಜಮೀನು ಇದೆ. ಅಂಥಾದ್ದು ಯಾವುದು ಎಂದರೆ ಖರಾಬು ತೋಪು ಈಚಲುವನ ಇದೆ. ಇದು ಜಮೀನು ಲೆಕ್ಕದಲ್ಲಿ ಇರುತ್ತದೆಯೇ ವಿನಾ ಅದನ್ನು ಯಾವ ರೀತಿಯಾಗಿಯೂ ಮುಂದುವರಿಸಿಲ್ಲ. ಆದುದರಿಂದ ಸರ್ಕಾರದವರು ಇದನ್ನು ಪರಿಶೀಲಿಸಿ ಯೋಗ್ಯವಾದಂಥ ಜಮೀನುಗಳನ್ನು ಸಾಗುವಳಿ ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ನಾನಾ ಭಾಗಗಳಲ್ಲಿ ಬಂದಂಥ ವರದಿ ಪ್ರಕಾರ ಅಕ್ರಮ ಸ್ವಾಧೀನವಾಗಿರುವುದು ಒಂದು ಕಡೆ ಇದೆ. ಅದನ್ನು ಖುಲ್ಲಾ ಮಾಡಿಸುತ್ತಾರೆ. ಆದಕ್ಕಾಗಿ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರನ್ನು ಗೊತ್ತು ಮಾಡಿದ್ದೇವೆ. ಇನ್ನು ಕೆಲವು ಕಡೆ ಕೆರೆಗಳ ಅಂಗಳ, ಈಚಲುವನ, ಗುಂಡು ತೋಪು ಅಕ್ರಮ ಸ್ವಾಧೀನ ಮಾಡಿರುವುದೂ ಇದೆ. ಅದೂ ಅಲ್ಲದೆ ಅಲ್ಪ ಸ್ವಲ್ಪ ಫಾರೆಸ್ಟ್‌ನಲ್ಲೂ ಇದೆ. ಈ ತರಹ ಅಕ್ರಮ ಸ್ವಾಧೀನವನ್ನು ಮಾಡುವುದನ್ನು ತಡೆಗಟ್ಟಲು ಅದರಲ್ಲೂ ವ್ಯವಸಾಯಕ್ಕೆ ಲಾಯಕ್ಕಾಗಿ ಇರುವ ಜಮೀನುಗಳನ್ನು ಪರಿಶೀಲಿಸಿ ಅದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ. ಹಲಗೇ ಗೌಡ :—ಈ ಅಕ್ರಮವಾದ ಜಮೀನುಗಳಲ್ಲಿ ಏನು ಸಾಗುವಳಿ ಮಾಡುತ್ತಿದ್ದಾರೋ ಅವರನ್ನು ಹೊರಗಟ್ಟಬೇಕು. ಈ ಬಗ್ಗೆ ತಾಸೀಲ್ದಾರರನ್ನು ಕೇಳಿದರೆ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಡೆಪ್ಯೂಟಿ ಕಮಿಷನರನ್ನು ಕೇಳಿದರೆ ಅವರೂ ಕೂಡ ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಪಂಚಾಯ್ತಿಯವರನ್ನು ಕೇಳಿದರೆ ಅವರೂ ಕೂಡ ಅದೇ ರೀತಿ ಹೇಳುತ್ತಾರೆ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಈ ಅಕ್ರಮ ಸ್ವಾಧೀನ ಮಾಡಿದಂಥ ಜಮೀನುಗಳನ್ನು ತೀರ್ಮಾನಿಸುವ ಬಗ್ಗೆ ಸ್ಪೆಷಲ್ ಡೆಪ್ಯೂಟಿ ಕಮಿಷನರ್ ಫಾರ್ ದರಖಾಸ್ತು ಎಂದು ಒಬ್ಬರನ್ನು ನೇಮಕ ಮಾಡಿದ್ದೇವೆ. ಅವರಿಗೆ ಈ ಬಗ್ಗೆ ಅಧಿಕಾರ ಕೊಟ್ಟಿದ್ದೇವೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ :—ಮಾನ್ಯ ಮಂತ್ರಿಗಳು ಇದಕ್ಕಾಗಿ ಒಬ್ಬರು ಸ್ಪೆಷಲ್ ಆಫೀಸರನ್ನು ನೇಮಿಸಿದ್ದೇವೆ ಎಂದು ಹೇಳಿದರು. ಈಗ ಅಕ್ರಮ ಸಾಗುವಳಿಯಲ್ಲಿರ ತಕ್ಕಂಥ 625 ಎಕರೆ ಜಮೀನುಗಳು ಏನು ಇವೆ, ಅದರಲ್ಲಿ ಎಷ್ಟು ಎಕರೆ ಜಮೀನುಗಳನ್ನು ಬಿಡಿಸಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಈಗ 230 ಅರ್ಜಿಗಳು ಬಂದಿವೆ. ಅದರಲ್ಲಿ 45 ಎಕರೆ ಕನ್‌ಫರ್ಮ್ ಆಗಿದೆ. ಇನ್ನು ಉಳಿದಿದ್ದು ವಿಚಾರಣೆ ನಡೆಯುತ್ತಾ ಇದೆ.

REPAIRS TO HOSPITAL BUILDING AT LAKSHMIPURA

884. Sri S. BACHI REDDY (Srinivasapura).—

Will the Minister for Health be pleased to state :—

(*a*) whether annual repairs of the Hospital Building at Lakshmipura in Srinivasapur Taluk is being carried out ;

(*b*) if not, the reason for the same ?

Sri H. SIDDAVEERAPPA (Minister for Health).—

(*a*) No.

(*b*) After the formation of a new P.W.D. Sub-Division at Srinivasapur, the Lakshmipura L.F. Dispensary Building was left over in the list to be maintained by annual repairs under Srinivasapur Sub-Division. It has been included for annual repairs during 1973-74.

ಶ್ರೀ ಎಸ್. ಬಾಚೀ ರೆಡ್ಡಿ:—ಸ್ವಾಮಿ, ಶ್ರೀನಿವಾಸಪುರ ತಾಲ್ಲೂಕು ಲಕ್ಷ್ಮೀಪುರದ ಆಸ್ಪತ್ರೆಯನ್ನು 20 ವರ್ಷದ ಕೆಳಗೆ ಒಬ್ಬ ದಾನಿ ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಕಟ್ಟಿಸಿದನು. ಈ ಕಟ್ಟಡ 10-12 ವರ್ಷಗಳಿಂದಲೂ ಸ್ವಚ್ಛತೆ ಇಲ್ಲದೆ ದುರಸ್ತಿಯಾಗಿಲ್ಲ. ಇದನ್ನು ದುರಸ್ತಿ ಮಾಡದೇ ಇರುವುದರಿಂದ ಆ ದಾನಿಯ ಮನಸ್ಸು ಎಷ್ಟು ನೊಂದಿರಬಹುದು ಎನ್ನುವುದನ್ನು ಸರ್ಕಾರದವರು ಗಮನಿಸಬೇಕು. ಆದುದರಿಂದ ಆ ಕಟ್ಟಡದ ರಿಪೇರಿ ವಗೈರೆ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ :—ಈ ಬಗ್ಗೆ ನಾನು ಉತ್ತರದಲ್ಲೇ ಹೇಳಿದ್ದೇನೆ. 1973—74 ರಲ್ಲಿ ವಾರ್ಷಿಕವಾಗಿ ಕೈಕೊಳ್ಳಬೇಕಾಗಿರುವ ದುರಸ್ತಿ ಕಾಮಗಾರಿಗಳಲ್ಲಿ ಅದನ್ನು ಸೇರಿಸಲಾಗಿದೆ ಎಂದು ಹೇಳಿದ್ದೇನೆ. ಆ ಪ್ರಕಾರ ಅವರು ಮಾಡಿಸುತ್ತಾರೆ.

Short Notice Question and Answer

BONUS TO WORKERS OF BANDIGUDDA MINES

40. Sri S. M. SHEERANALY CHANDRASEKHAR, (Hosanagar).—

Will the Minister for Industries be pleased to state :—

(*a*) whether the Government is aware that $8\frac{1}{4}$ per cent bonus is not paid to the workers of the Bandigudda Mines even though there is provision in Central Bonus Act ;

(*b*) if so, the action Government propose to take in the matter ?

Sri S. M. KRISHNA (Minister for Industries).—

(*a*) The workers of Mysore Iron and Steel Ltd., working in Bandigudda Mines had been paid bonus at 8.33 per cent of the total salary/wages earned by them for the year 1971-72 as per the provisions of Payment of Bonus Act.

(*b*) Does not arise.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್ :—ಎಂಟೂಕಾಲು ಪರ್ಸೆಂಟ್ ಬೋನಸ್ ಕೊಟ್ಟಿರುವುದಾಗಿ ಹೇಳಿದ್ದಾರೆ. ಯಾವ ತಾರೀಖಿಗೆ ಕೊಟ್ಟಿದ್ದಾರೆಂದು ಹೇಳುವುದಕ್ಕಾಗುತ್ತದೆಯೇ?

ಶ್ರೀ ಎಸ್. ಎಂ. ಕೃಷ್ಣ :—ಅಲ್ಲಿ ಎರಡು ತರಹ ಕೆಲಸಗಾರರಿದ್ದಾರೆ. ಒಬ್ಬರು ಮೈಸೂರ್ ಐರನ್ ಅಂಡ್ ಸ್ಟೀಲ್‌ನಲ್ಲಿ ನೇರವಾಗಿ ಕೆಲಸ ಮಾಡುತ್ತಿರುವವರು. ಅವರಿಗೆ 8.33 ಪರ್ಸೆಂಟ್ ಬೋನಸ್ ಕೊಟ್ಟಿದ್ದೇವೆ. ತಾರೀಖು ಸದ್ಯದಲ್ಲಿ ಸಿಕ್ಕುವುದಿಲ್ಲ. ಇನ್ನು ಕೆಲವು ಕಂಟ್ರಾಕ್ಟರುಗಳಿದ್ದಾರೆ, ಅವರ ಕೈಕೆಳಗೆ ಕೆಲಸ ಮಾಡುತ್ತಿರುವ ಕೆಲಸಗಾರರಿಗೂ 8.33 ಪರ್ಸೆಂಟ್ ಬೋನಸ್ ಕೊಡಬೇಕೆಂದು ಸ್ಪಷ್ಟವಾಗಿ ಕಂಟ್ರಾಕ್ಟರುಗಳಿಗೆ ಸೂಚನೆ ಕೊಟ್ಟಿದೆ. ಅಲ್ಲಿ ಸ್ವಲ್ಪ ವ್ಯತ್ಯಾಸಗಳಿರಬಹುದು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ಕಂಟ್ರಾಕ್ಟರ್ ಲೇಬರರ್ಸ್‌ಗೆ ಯಾವ ತರಹ ಬೋನಸ್ಸೂ ಕೊಟ್ಟಿಲ್ಲವೆನ್ನುವುದು ಗೊತ್ತಿದೆಯೇ ? ಗೊತ್ತಿದ್ದರೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ :—ನಾವು ಅವರಿಗೆ ಈಗಾಗಲೇ ತಿಳಿಸಿದ್ದೇವೆ. 1972-73ನೇ ಇಸವಿಗೆ ಕಂಟ್ರಾಕ್ಟರುಗಳು 8.33 ಪರ್ಸೆಂಟ್ ಬೋನಸ್ ಕೊಡಬೇಕೆಂದು ಸೂಚನೆ ಕೊಟ್ಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್ :—ಕಂಟ್ರಾಕ್ಟರುಗಳು 8.33 ಪರ್ಸೆಂಟ್ ಬೋನಸ್ ಕೊಡದೆ ಇರುವುದು ಪೇಮೆಂಟ್ ಆಫ್ ಬೋನಸ್ ಆಕ್ಟ್‌ಗೆ ವಿರೋಧವಲ್ಲವೇ ? ಹಾಗೆ ಕಾನೂನಿಗೆ ವಿರೋಧವಾಗಿರುವಾಗ ಕಾನೂನು ಪ್ರಕಾರ ಶಿಕ್ಷೆ ವಿಧಿಸಬೇಕು ಎಂದು ಇದೆ. ಇದರ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದೆ ?

ಶ್ರೀ ಎಸ್. ಎಂ. ಕೃಷ್ಣ :—ಈಗ ನಾವು ನೇರವಾಗಿ 8.33 ಪರ್ಸೆಂಟ್ ಬೋನಸ್ ಕೊಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ನಮ್ಮ ಈ ಸೂಚನೆಯನ್ನು ಅವರು ಧಿಕ್ಕರಿಸಿದರೆ ನಾವೇ ನೇರವಾಗಿ ಕಂಟ್ರಾಕ್ಟರುಗಳಿಗೆ ಕೊಡತಕ್ಕ ಹಣದಲ್ಲಿ ಹಿಡಿದು ಕೆಲಸಗಾರರಿಗೆ ಕೊಡಬೇಕೆಂಬ ತೀರ್ಮಾನ ತೆಗೆದುಕೊಳ್ಳುತ್ತೇವೆ.

Sri ABDUL KHUDDUS ANWAR.—What about 1971-72 ?

ಶ್ರೀ ಎಸ್. ಎಂ. ಕೃಷ್ಣ :—1971-72 ರಲ್ಲಿ 8.33 ಪರ್ಸೆಂಟ್ ಬೋನಸ್ ಇತ್ತೋ, ಇಲ್ಲವೋ ಗೊತ್ತಿಲ್ಲ.

MADAM SPEAKER.—Now question hour is over.

Questions for Answers on the Day (but not taken up)

REMISSION OF LAND REVENUE IN CHITRADURGA DISTRICT

649. Sri V. MASIYAPPA (CHALLAKERE).—

Will the Minister for Revenue be pleased to state :—

(*a*) whether Government have sanctioned remission of land revenue in the Taluks of Chitradurga District from 1965-66 onwards on account of failure of crops due to draught ;

(*b*) if so, the years when the remission was granted and the amount of remission (Talukwise information may kindly be furnished) ;

(*c*) whether it has come to the notice of Government that the remission is not properly notified in the villages ?

Sri N. HUTCHAMASTHY GOWDA (Minister for Revenue).—

(*a*) Yes.

(*b*) Government have sanctioned the remission of Land Revenue from 1965-66 to 1969-70 as per details furnished in the Statement appended.

(*c*) No.

STATEMENT

Showing the particulars of remission of land revenue sanctioned by Government in Chitradurga District from the year 1965-66 onwards.

Sl. No.	Name of Taluk		1965-66	1966-67	1967-68	1968-69	1969-70
			Rs.	Rs.	Rs.	Rs.	Rs.
1.	Chitradurga	...	57,614-93	85,634-27	87,644-06	87,846-95	Nil
2.	Challakere	...	1,08,352-51	1,54,600-45	1,42,257-60	1,54,604-93	Nil
3.	Hiriyur	...	41,363-81	96,588-93	...	...	...
4.	Molakalmuru	...	...	45,112-28	45,354-45	45,384-84	45,431-48
5.	Jagalur	...	4,584-66	...	20,866-73	69,634-72	78,832-11
6.	Holalkere	...	35,416-37	18,816-88	18,774-96	18,841-66	Nil
7.	Hosadurga	...	Nil	Nil	49,749-73	49,841-82	38,541-92
	Total	...	2,47,332-28	4,00,752-81	3,64,647-53	4,26,154-92	1,62,805-51

INTERNAL VIGILANCE SQUADS IN COMMERCIAL TAXES DEPARTMENT

852. Smt. NAGAMMA C. KESHAVAMURTHY (Davanagere).—

Will the Minister for Finance be pleased to state :—

(*a*) the grounds and circumstances under which the Internal Vigilance Squads in Commercial Taxes Department are appointed in the State :

(*b*) the number and the names of the cities in the State wherein the Internal Vigilance Squad have inspected or assessed the accounts of the traders ;

(*c*) the names of the towns wherein both the Offices of Internal Vigilance Squad and regular Commercial Tax Offices are established by the State Government ;

(*d*) the reasons for such duplication of work and establishment of two similar offices ?

Sri M. Y. GHORPADE (Minister for Finance).—

(*a*) When large scale tax evasion resorted to by dealers came to notice of Government, it became necessary to establish Vigilance Squads.

(*b*) 5 Cities—Bangalore, Mysore, Davangere, Tumkur and Hubli-Dharwar.

(*c*) Please see answer to Clause (*b*) above.

(*d*) The duties and functions of the Vigilance Squad Officers and those of the Commercial Tax Officers are different. Hence there is no duplication of work.

Calling Attention to matters of urgent public importance

Re. : Loss caused due to operations of contract carriages

Sri B. SATHYANARAYANA SINGH (Hospet).—I call the attention of the Hon. Minister for Transport re : Contract Carriages violating the rules of permit.

Sri AZIZ SAIT (Minister for labour).—The vehicle No. APA 4358 entered in the Bangalore Region on 10-2-1972 on change of address in the name of Sri K. Vittal Rao, S/o. Kuppoji Rao, No. 16, Cart Stand Road, Jolly Mohalla, Bangalore-2 and the vehicle No. APA 4388 entered in the Bangalore Region on 21-3-1972 on transfer of ownership in the name of Sri K. Kasinath Rao, S/o. J. Kuppoji Rao, No. 16, Cart Stand Road, Jolly Mohalla, Bangalore-2. A Permit was issued by the Regional Transport Authority, Mysore in respect of vehicle No. APA 4358 *vide* Permit No. 305/72-73 dated 9-1-1973 valid up to 31-3-1973 under Section 45 of the Motor Vehicles Act, 1939 for 13 Districts in the State excluding the District of Raichur, Gulbarga, Bidar, Bijapur, Belgaum and Dharwar. The said permit granted by the Regional Transport Authority, Mysore is reported to have been stayed by the Mysore State Transport Appellate Tribunal on 1-3-1973 in case No. 4.

The vehicle No. APA 4388 has a valid temporary permit No. TP. 315/72 valid from 11-1-1973 to 31-3-1973 issued by the Regional Transport Authority, Mysore.

The details indicating the action taken by the Checking staff of Police and Motor Vehicles Department against the cladestine operation of the vehicles No. APA 4358 and APA 4388 are furnished hereunder :—

	Vehicle No.	Date and Place of checking		Nature of case booked	Present stage and nature of disposal
1	APA 4358	17-6-72 at	Nelamangala by Police.	Carrying 31 picked up passengers without permit.	The vehicle was seized. The Nelamangala Police filed charge sheet in the V Court JMFC of Bangalore. The Driver was fined Rs. 105. The matter was referred to R. T. A., B'lore to take departmental action against the owner of the vehicle.
2	do	1-7-72	do	Carrying 22 picked up passengers.	The case filed in V Court of J.M.F.C. Bangalore is pending trial.
3	do	31-7-72	do	Carrying 50 picked up passengers without permits.	The vehicle was seized. The case filed in V Court of J.M.F.C. B'lore is pending trial.
4	do	4-8-72	do	Carrying picked up 36 passengers.	do
5	do	30-11-72	at Tumkur Railway Gate	Carrying 20 picked up passengers	The vehicle was seized and the charge sheet filed in the Court of F.C. Tumkur is pending trial. The R.T.A. Bangalore was requested to take departmental action against the owner of the vehicle.
6	do	15-2-73	Bangalore-Tumkur Road	Over load of passsengers	Charge sheet was filed and the case is pending trial
2.1	APA 4388	10-7-72	Bangalore-Tumkur Road, by Police	Carrying 52 picked up passengers	The vehicle was seized. The case filed in the V Court of J.M.F.C. Bangalore is pending trial

1	2	3	4	5	6
2.	APA 4388	12-7-72	Between Hospet & Kampli by the Flying Squad Gulbarga.	Carrying individual passengers in violation of conditions of permits and failed to produce, R. C., F. C. and I. C.	Referred to Rural Police, Hospet for further action. The R. T. A., Mandya was requested to take departmental action against the owner of the vehicle.
3.	APA 4388	20-7-72	at Nelamangala.	Carrying passengers without permit.	The vehicle was seized and charge sheet filed. The case is pending trial.
4.	do	25-9-72	do	Carrying 33 picked up passengers.	The vehicle was seized. The case filed in the V Court of J. M. F. C., Bangalore is pending trial.
5	do	11-10-72	do	Carrying 31 picked up passengers.	do
6.	do	20-10-72	At Tumkur Toll Gate.	Carrying 35 passengers without permit.	The case filed in F. C. M., Tumkur is pending trial.
7.	do	27-11-72	At Nelamangala.	Documents viz., R. C. F. C. were not produced.	The case filed in V Court of J. M. F. C., Bangalore is pending trial.
8.	do	29-12-72	At Nelamangala.	Carrying 19 picked up passengers.	do
9.	do	31-1-73	Bangalore—Tumkur Road.	Documents like R. C., F. C. were not produced.	do

The vehicle MYT 3939 owned by Sri N. R. Somashankar, S. R. S. Bus Service, Tumkur was covered by a Contract Carriage permit No. 3/63 renewed and valid upto 20-10-71. The question of further renewal of this permit is pending consideration before the Regional Transport Authority, Tumkur. In the meanwhile, the R. T. A., Tumkur in its meeting held during February 1973 granted a temporary permit valid up to 22-6-73.

The particulars showing the vehicle checked by the Senior R. T. O., Chitradurga and his executive staff are furnished hereunder :—

Sl. No.	M. V. No.		Date of checking	By whom checked	Result of action taken	Remarks
1.	8/69-70	MYT 3939	20-9-69	IMV	Checking report forwarded to S. P. Chitradurga	Result awaited
2.	12/69-70	do	13-1-70	IMV	Checking report forwarded to R. T. A. Tumkur	do
3.	66/69-70	do	17-1-70	—	do Tumkur 30-4-74	do
4.	79/69-70	do	18-1-70	—	do	do
5.	88/69-70	do	19-1-70	—	do 14-7-70	do
6.	17/69-70	do	17-2-70	—	do	do
7.	29/69-70	do	18-2-70	IMV	do 14-7-70	do
8.	59/69-70	do	21-2-70	IMV	do	do
9.	60/69-70	do	21-2-70	IMV	do	do
10.	2/70-71	do	14-4-70	IMV	do 1-8-70	do
11.	70/70-71	do	28-10-70	IMV	do 2-2-71	do

On 5-8-1972, when the vehicle MYT 3939 was checked, it was found carrying 40 passengers without maintaining the name list of passengers. The case filed in this connection is pending trial in the Court of J.M.F.C., Ramanagaram. Further the vehicle MYT 3939 has been checked by the special squad on 26-8-1972 and the case has been handed over to the Bidadi Police Station. The R. T. A., Tumkur has also been requested to take departmental action against the owner of the vehicle.

Out of 25 Check reports pending against this vehicle, with the R.T.O., Tumkur, 24 check reports have been disposed of and a fine of Rs. 1,060 has been recovered.

In order to put down the menace of clandestine operation of contract carriages, three Joint Special Squads consisting of the following staff were constituted under the control of Deputy Inspector General of Police, Central Range, Bangalore.

3 Police Sub-Inspectors from the Police Department

3 Motor Vehicles Inspectors from the Motor Vehicles Department

3 Persons from the Security staff of Mysore State Road Transport Corporation (Police Sub-Inspectors)

3 Head Constables deputed to Mysore State Road Transport Corporation.

These special squads started functioning from 15-6-1972 on certain strategic routes such as Bangalore-Kolar, Bangalore-Mysore and Bangalore-Shimoga. These special squads were constituted in addition to the 4 regular flying squads functioning in the State. The total amount of fine, tax etc. recovered by

them from January 1972 to February 1973 are furnished hereunder :—

Name of Flying Squad	Total expenditure incurred from Jan. '72—Feb. '73	Total amount of fine, tax, etc., recovered by each squad
1. Flying Squad 'A' N. R. Belgaum	Rs. 34,018-14	Rs. 55,514-75 +5,000-00 worth yarn recovered
2. Flying squad 'B' N.E.R. Gulbarga	36,375-00	38,573-00
3. Flying squad 'C' C. R. Bangalore.	31,962-00	50,481-00
4. Flying squad 'D' S. R. Mysore.	39,417-00	66,324-00
Total, Rs. ...	1,41,772-14	2,15,892-75

These Joint Special squads have so far (from 15-6-72 to 31-1-1973, detected 2401 cases, out of which 572 cases are for running without permits, 88 for violation of special permit conditions, 850 cases for violation of contract carriage permit conditions and 891 for overloading.

In addition to intensifying the checking of vehicle, the following measures have been taken to check the clandestine operation of contract carriages :—

1. Rule 111 of the Mysore Motor Vehicles Rules, has been amended providing for vehicles plying as contract carriages to carry with them a list of names and addresses of passengers attested by the Regional Transport Officer before the commencement of the journey. If the journey is to commence outside the office hours, an unattested list is required to be carried in the bus and a copy of that list is required to be submitted to the R. T. O. so as to reach him on the next day of the journey. But some of the operators of contract carriages have filed Writ Petitions in the High Court of Mysore and brought stay for the operation of these rules.

The following Legislative measures are being taken to amend the Motor Vehicles Act locally :—

1. It was felt that the Regional Transport Authorities were granting contract carriage permits indiscriminately. With a view to stop this indiscriminates grant of contract carriage permits, the power of granting contract carriage permits to ply in more than one region is proposed to be vested with the Mysore State Transport Authority.

2. As the penal provisions under Motor Vehicles Act and Rules thereunder had not deterred the contract carriage operators from violating the conditions of permit, Section 60 of the Motor Vehicles Act, is being amended locally whereby the second breach of the conditions of permit will result in suspension of the permit and the third breach will result in cancellation of the permit.

A Bill to this effect has already been introduced in the Legislative Assembly.

ಶ್ರೀ ಬಿ. ಸತ್ಯನಾರಾಯಣ ಸಿಂಗ್ :—ತಮ್ಮ ವರದಿಯನ್ನು ನೋಡಿದರೆ ತಾವು ಸ್ಕ್ವಾಡ್ ಇಟ್ಟುಕೊಂಡು ಎಷ್ಟು ಕೇಸುಗಳನ್ನು ಬುಕ್ ಮಾಡಿದ್ದೀರಿ ಎಂಬುದು ಗೊತ್ತಾಗುವುದಿಲ್ಲ. ನಿರ್ದಿಷ್ಟವಾಗಿ ಎಷ್ಟು ಬಸ್ ರೂಟ್‌ಗಳನ್ನು ಕೊಟ್ಟಿದ್ದೀರಿ ಎಂಬುದೂ ಗೊತ್ತಾಗುತ್ತಿಲ್ಲ. ಈ ದಿವಸ ಅನೇಕ ಬಸ್ಸುಗಳು ಓಡಾಡುತ್ತಿರುವುದರಿಂದ, ಕಾಂಟ್ರಾಕ್ಟ್ ಬಸ್ಸುಗಳ ಹಾವಳಿಯನ್ನು ನೀವು ತಪ್ಪಿಸುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಈಗಲಾದರೂ ಬೆಂಗಳೂರು ಜಿಲ್ಲೆ ಮತ್ತು ಮೈಸೂರು ಜಿಲ್ಲೆಗಳಲ್ಲಿಯಾದರೂ ಕಾಂಟ್ರಾಕ್ಟ್ ಕ್ಯಾರೇಜ್ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡುವುದಕ್ಕೆ ಸರ್ಕಾರದವರು ಸೂಕ್ತ ಏರ್ಪಾಡನ್ನು ಮಾಡುತ್ತಾರೆಯೇ ?

Sri AZEEZ SAIT : There are about 400 and odd contract carriage in our State and they are having either pucca permits or temporary permits valid for a period ranging between 3 years to 5 years. Now, the M. S. R. T. C. is thinking of nationalising the entire contract carriages. The Board is examining this question. I may assure the House that the moment the M. S. R. T. C. comes forward with the nationalisation scheme, it will be approved.

MADAM SPEAKER : The next calling Attention by Sri T. R. Shamanna, but he is not present. I now call upon the next notice by Sri M. S. Krishnan.

(ii) re : Fire accident at Hudge village in Humnabad Taluk.

Sri M. S. KRISHNAN (Malleswaram) : Madam, I call the attention of the Minister for Revenue to the fire accident at Hudge Village in Humnabad Taluk.

Sri K. H. PATIL (Minister for Agriculture and Forest) : Sir, on behalf of the Hon. Minister for Revenue in response to the Calling Attention Motion moved by the Hon. Member Sri M. S. Krishnan, I wish to make the following Statement.

A fire accident occurred on 27-2-1973 at Hudgi Village in Humnabad Taluk and 47 huts and not 150 as stated in the Calling Attention Notice were gutted. The Tahsildar, Block Development Officer and Assistant Commissioner rushed to the village immediately and arranged to put down fire. Interim cash relief of Rs. 50 per family was sanctioned on the spot. 20 families have put up huts. 17 families reside on the back portion of original huts and 10 families have constructed mud walls for huts and yet to put up roof. The total loss sustained is estimated at Rs. 14,550. Cash relief of Rs. 9,800 is granted and paid to sufferers on 25-3-1973 including the interim relief given. Two K.Gs. of Atta per family was distributed free of cost on 27-2-1973. 237 garments were distributed among the victims on 28-2-1973. The victims are employed on relief works and thus they are earning their livelihood. Two drinking water wells with sufficient quantity of water exist in the colony. Hence, there is no problem of drinking water.

ಶ್ರೀ ಎಂ.ಎಸ್. ಕೃಷ್ಣನ್:—ಗುಡಿಸಲು ಸುಟ್ಟುಹೋದ ಮೇಲೆ ಅದರಲ್ಲಿ ನಷ್ಟ ಹೊಂದಿದವರಿಗೆ ಹಾಗೂ ಅವರ ಮನೆಯವರಿಗೆ ಬರಗಾಲ ರಿಲೀಫ್ ವರ್ಕ್ಸ್‌ನಲ್ಲಿ ಕೆಲಸಗಳು ಸಿಕ್ಕಿವೆಯೆಂದು ಹೇಳಿದ್ದೀರಿ. ನನಗೆ ಗೊತ್ತಿರುವ ಹಾಗೆ ಅವರಿಗೆ ಇದುವರೆಗೆ ಕೆಲಸಗಳು ಸಿಕ್ಕಿಲ್ಲವೆಂದು ತಿಳಿದು ಬಂದಿದೆ. ಅವರಿಗೆ ನಷ್ಟವಾಗಿರುವುದು ಸುಮಾರು 14,550 ರೂಪಾಯಿಗಳು. 9,800 ರೂಪಾಯಿಗಳಷ್ಟು ಪರಿಹಾರ ಕೊಟ್ಟಿದ್ದೀರಿ. ಇನ್ನೂ ಹೆಚ್ಚಿಗೆ ಅವರಿಗೆ ಸಹಾಯ ಮಾಡುವುದು ಉತ್ತಮವಲ್ಲವೇ ? ಕೆಲವರಿಗೆ ಕೆಲಸಗಳು ಸಿಗದೇ ಇದ್ದಿದ್ದರೆ, ಕೂಡಲೇ ಅಂತಹವರಿಗೆ ಈಗಲಾದರೂ ಹಣ ಸಹಾಯ ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್ :—ಸರ್ಕಾರದ ಮುಂದೆ ಬಂದಿರುವ ವರದಿಯ ಪ್ರಕಾರ ಕೆಲವರಿಗೆ ಈಗಾಗಲೇ ಕೆಲಸಗಳು ಸಿಕ್ಕಿವೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಇನ್ನೂ ಕೆಲವರಿಗೆ ಕೆಲಸಗಳು ಸಿಗದೇ ಇದ್ದರೆ, ಅಂತಹವರಿಗೂ ಸಹ ಕೆಲಸಗಳನ್ನು ಕೊಡುವುದಕ್ಕೆ ಸೂಕ್ತ ಪ್ರಯತ್ನ ಮಾಡುತ್ತೇವೆ. ಆದರೆ ನೊಂದವರಿಗೆ ರಿಲೀಫ್ ಎಷ್ಟು ಕೊಡಬೇಕೆಂದು ರೂಲ್ಸ್ ಇದೆಯೋ ಆ ಒಂದು ರೂಲ್ಸ್ ಪ್ರಕಾರ ಅವರಿಗೆ ರಿಲೀಫ್ ಕೊಡಲಾಗುತ್ತದೆ. ಹೆಚ್ಚು ರಿಲೀಫ್ ಕೊಡುವ ಬಗ್ಗೆ ಮುಂದೆ ನಷ್ಟವಾಗಿರುವ ಅಂದಾಜನ್ನು ಗಮನಿಸಿ ಹಣ ಸಹಾಯ ಮಾಡಲಾಗುತ್ತದೆ.

PAPERS LAID ON THE TABLE

Sri K. H. PATIL (Minister for Agriculture and Forest) : Sir, on behalf of the Hon. Minister for Public Works and Electricity, I lay on the Table—

The Annual Financial Statement—Revised Budget for 1972-73 and Budget Estimates for 1973-74 (Volume I) of the Mysore State Electricity Board under Section 61 (3) of the Electricity (Supply) Act, 1948.

Sri A. SHANKAR ALVA (Minister for Co-operation) : Madam, I lay on the table—

Notification No. S. O. 1333 dated 18th July 1972 : re : Rescission of Notification No. I.S.O. 1431 (DPC. 66 CSF. 71) dated 1st August 1967 in respect of the Gowribidanur Sahakara Sakkare Karkhane, Ltd., Gowribidanur, under Section 130 of the Mysore Co-operative Societies Act, 1959.

MADAM SPEAKER : The Budget Estimate and the Notification are laid on the table.

Resignation of Three Supreme Court Judges.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ) : ಇವತ್ತು ರಾಜ್ಯಾಂಗಕ್ಕೆ ಅಪಚಾರವಾಗಿದೆ. ಆದರಿಂದ ಪ್ರಜಾಪ್ರಭುತ್ವ ಕೊಲೆಯಾಗಿದೆ. ನ್ಯಾಯಾಲಯದಲ್ಲಿರತಕ್ಕ ಒಂದು ಸಂಪ್ರದಾಯವನ್ನು ಮುರಿದು ಹಾಕಿ ಪ್ರಜಾಪ್ರಭುತ್ವವನ್ನು ಸಂಪೂರ್ಣವಾಗಿ ಕೊಲೆಮಾಡಿದ್ದಾರೆ. ಮೂರು ಜನ ಸೀನಿಯರ್ ನ್ಯಾಯಾಧಿಪತಿಗಳ ರಾಜೀನಾಮೆಯಿಂದ ಕೇಂದ್ರಸರ್ಕಾರ ತನ್ನ ರಾಜಕೀಯವನ್ನು ಜುಡಿಷಿಯರಿಗೂ ಮತ್ತು ನ್ಯಾಯಾಲಯಕ್ಕೂ ತರತಕ್ಕ ಅಪಚಾರವನ್ನು ತಂದಿದೆಯೆಂದು ಹೇಳಿದರೆ ಅದೇನೂ ತಪ್ಪಾಗಲಾರದು.*

ಅಧ್ಯಕ್ಷರು :—ಯಾರೂ ರಿಕಾರ್ಡ್ ಮಾಡಬೇಡಿ.

Sri H. SIDDAVEERAPPA.—On a point of order.

ಅಧ್ಯಕ್ಷರು :—ತಾವು ಸ್ವಲ್ಪ ಕುಳಿತುಕೊಳ್ಳಿ ; ಇನ್ನೂ ಖಾಸಗೀ ಸದಸ್ಯರ ವಿಧೇಯಕಗಳು ಹಾಗೂ ನಿರ್ಣಯಗಳಿಗೆ ಸಂಬಂಧಿಸಿದ ಸಮಿತಿಯ ವರದಿಯನ್ನು ಸಭೆಗೆ ಒಪ್ಪಿಸಬೇಕಾಗಿದೆ. ಅದು ಮೊದಲು ಮುಗಿಯಲಿ.

Twelfth Report of the Committee on Private Members' Bills and Resolutions—Presentation

Sri B. P. KADAM (Deputy Speaker).—I present the Twelfth Report of the Committee on Private Members' Bills and Resolutions.

---

* Matter not recorded as ordered by the chair.

Sri T. TARE GOWDA.—I move that this Assembly agrees with the Twelfth Report of the Committee on Private Members' Bills and Resolutions.

Madam SPEAKER.—I think the House agrees with the report. I will put it to the vote.

"That this Assembly agrees with the Twelfth Report of the Committee on Private Members' Bills and Resolutions."

The motion was adopted.

Resignation by Three Judges of the Supreme Court

ಶ್ರೀ ಕೋಣಂದೂರು ಲಿಂಗಪ್ಪ :—ಇವೊತ್ತು ರಾಜ್ಯಾಂಗಕ್ಕೆ ಅಪಚಾರವಾಗಿದೆ. ಕೇಂದ್ರ ಸರ್ಕಾರದ ನೀತಿಯನ್ನು ಪ್ರತಿಭಟಿಸಿ 3 ಜನ ಶ್ರೇಷ್ಠ ನ್ಯಾಯಾಧೀಶರು ರಾಜೀನಾಮೆ ಕೊಟ್ಟಿದ್ದಾರೆ. ಈ ಕಾರಣದಿಂದ ಬೆಂಗಳೂರಿನ ಎಲ್ಲ ವಕೀಲರು ಕೂಡ ಕೋರ್ಟಿಗೆ 'ಏತಕ್ಕೆ ಬಹಿಷ್ಕಾರ ಹಾಕಬಾರದು ಎಂದು ಯೋಚನೆ ಮಾಡುತ್ತಿದ್ದಾರೆ*

ಅಧ್ಯಕ್ಷರು : ರೆಕಾರ್ಡ್ ಮಾಡಬೇಡಿ. ಈ ಬಗ್ಗೆ ಮಾನ್ಯ ಬಂಗಾರಪ್ಪನವರು ಮತ್ತು ವಾಟಾಳ್ ನಾಗರಾಜ್ ಅವರು ನೋಟೀಸ್ ಕಳಿಹಿಸಿದ್ದರು. ಅದಕ್ಕೆ ಜವಾಬನ್ನು ಸಹ ಕಳಿಹಿಸಲಾಗಿದೆ. ಆ ವಿಷಯಕ್ಕೂ ಈ ಸರ್ಕಾರಕ್ಕೂ ಏನೂ ಸಂಬಂಧವಿಲ್ಲ; ಆದ್ದರಿಂದ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ : ಕೇಂದ್ರಸರ್ಕಾರದ ನೀತಿಯಿಂದಾಗಿ ನಮ್ಮ ರಾಜ್ಯದವರೆ ಆದ ಶ್ರೀ ಹೆಗ್ಗಡೆಯವರಿಗೂ ಸಹ ಅನ್ಯಾಯವಾಗಿರುವುದರಿಂದ ಅದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಮಗೆ ಹಕ್ಕಿದೆ.

ಅಧ್ಯಕ್ಷರು : ಅದು ಪಾರ್ಲಿಮೆಂಟಿಗೆ ಸಂಬಂಧವೇ ಹೊರತು ನಮಗೆ ಸಂಬಂಧವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ಒಂದು ಪ್ರಾರ್ಥನೆ ಏನೆಂದರೆ ಇದರ ಬಗ್ಗೆ ನಾವು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. 'ಏಕೆಂದರೆ ಕೇಂದ್ರ ಸರ್ಕಾರದವರು ಇಲ್ಲಿಯವರೆಗೆ ಇದ್ದಂಥ ಒಂದು ಸಂಪ್ರದಾಯವನ್ನು ತುಳಿದುಹಾಕಿದ್ದಾರೆ. ರಾಜಕೀಯ ಹಸ್ತಕ್ಷೇಪ ಇಂದು ನಡೆದಿದೆ.

ಅಧ್ಯಕ್ಷರು : ಅದನ್ನು ಈ ಸರ್ಕಾರದವರು ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಆದರೂ ಸಹ ಅದರ ಬಗ್ಗೆ ಮಾತನಾಡುವುದಕ್ಕೆ ನಮಗೆ ಹಕ್ಕಿದೆ. ಮೈಸೂರಿನವರೊಬ್ಬರಿಗೆ ಅನ್ಯಾಯವಾಗಿದೆ. ಆದ್ದರಿಂದ. . . .

Sri M. MALLAPPA (Birur).—I rise on a point of order. This Assembly has no right to discuss about the appointment of the Judges of the Supreme Court. It is under the jurisdiction of the Parliament and powers of the President. How can this question be discussed at length here ?

---

* Matter not recorded as ordered by he Chair.

SOME HON. MEMBERS : There is no bar.

Sri C. M. ARUMUGHAM (K.G.F.).—We are not questioning the validity or authority of the appointment of the Chief Justice of the Supreme Court. We want to make a submission that the legal experts and Advocates and various Associations in the country are very sad.

We have to share in their grief and sorrow.

MADAM SPEAKER.—It is not here. This is not the forum.

Sri C. M. ARUMUGHAM.—It is not only the legal experts but those who believe in democracy are all sad. So far as this House is concerned we are sad in the sense that the representative of Mysore who was in the Supreme Court is not there today.

Sri B. V. KAKKILAYA.—Was he the representative of Mysore ?

SOME HON. MEMBERS :—No, no.

MADAM SPEAKER.—This is not the place for discussing all that. The Hon. Members can express their sadness or happiness elsewhere and not here.

ಶ್ರೀ ವಾಟಾಳ್ ನಾಗರಾಜ್ : ಕೋರ್ಟುಗಳು ಏನೂ ರಾಜ್ಯದ ಅಡಿಯಾಳುಗಳಲ್ಲ.

ಅಧ್ಯಕ್ಷರು : ಆ ರೀತಿಯೆಲ್ಲಾ ಗೊತ್ತಿಲ್ಲದಿರುವುದನ್ನು ಇಲ್ಲಿ ಹೇಳಬಾರದು ?

ಶ್ರೀ ವಾಟಾಳ್ ನಾಗರಾಜ್ : ನಮ್ಮ ಅಭಿಪ್ರಾಯವನ್ನು ಇಲ್ಲಿ ವ್ಯಕ್ತಪಡಿಸಬೇಕಾಗಿದೆ ;

MADAM SPEAKER.—This is not the place and anything objectionable said connected with this, will be expunged.

Sri C. M. ARUMUGHAM.—You do it. Justice Hegde who is known for his feeling towards the backward classes in the State and who is known for his judgment in opposing the tyranny to the agriculturists has resigned. Therefore, We feel sure that he has resigned.

MADAM SPEAKER.—This House is not concerned with it. You have no right to speak about it in this House.

Sri C. M. ARUMUGHAM.—I quite agree. But we have a right to know about the resignation of Justice Hegde.

MADAM SPEAKER.—How can this Government express its views on it ?

Sri D. DEVARAJ URS (Chief Minister).—There are different forums to express his ideas. But this House cannot be the forum to discuss what has taken place at the Government of India level with regard to the Supreme Court Judges and their appointments. Art. 124 of the Constitution clearly lays down the authority and the power under which the Supreme Court Judges are appointed. I submit that whatever has to be stated with regard to the appointment of Judges or the resignations, there is the bigger body namely the Parliament to take care of it. There is the Parliament to discuss all that. Certain subjects under Constitution are definitely within the jurisdiction and purview of the Parliament and certain subjects are within the purview of this House. Supposing, how would this House or the Hon. member feel if certain matter concerning this House is made the subject matter to be discussed elsewhere, either in the Upper House or some other House ? Would we like it ? Constitutionally they have no right to discuss what happens here. I want this House to be treated in the manner in which it has to be treated under the Constitution. Mr. Arumugham and other friends might have their own feelings. All our feelings—or the intensity of our feelings—about all subjects cannot be discussed here. The same treatment I would like to give to the other bodies similarly placed under the Constitution, to exercise their prerogative or rights as and when they arise. What is the point about our discussing here about the Supreme Court Judges' resignation or appointment ? So, I beg of the House to exercise restraint. If at all they have anything to say, they can say outside.

Sri C. M. ARUMUGHAM.—Will the Hon. Minister give an assurance that the Mysore Government will not follow the Centre in selecting the Chief Justice ? They have selected the Chief Justice by-passing three Judges. The Hon. Chief Minister is strong enough to defend himself and what I am saying is this. Our fear is this. The Centre has, all these years, from 1947, followed certain procedure. Now, they have violated that procedure. What happened at Delhi should not happen in Bangalore. Will the Hon. Chief Minister assure this House that

the appointment of the various Judges of High Court will be only on seniority and merit and they will not follow the Centre ? They have by-passed three Judges and appointed a fourth Judge. Are we not concerned with it ?

ಶ್ರೀ ವಾಟಾಳ್ ನಾಗರಾಜ್ :—ನಾವು ನಮ್ಮ ಅಭಿಪ್ರಾಯವನ್ನು ತಿಳಿಸಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್ :—ಅದನ್ನು ತಿಳಿಸುವುದಕ್ಕೆ ಬೇರೆ ಫಾರಂ ಇದೆ.

ಶ್ರೀ ವಾಟಾಳ್ ನಾಗರಾಜ್ :—ಅದನ್ನು ತಿಳಿಸುವುದಕ್ಕೆ ಅವಕಾಶವನ್ನು ಕೊಡದಿದ್ದರೆ ನಮಗೆ ನ್ಯಾಯಾಂಗ ರಕ್ಷಣೆ ಎಲ್ಲಿದೆ ?

ಶ್ರೀ ಡಿ. ದೇವರಾಜ ಅರಸ್ :—ನ್ಯಾಯಾಂಗ ರಕ್ಷಣೆ ಇದ್ದೇ ಇದೆ.

Sri C. M. ARUMUGHAM.—Three senior Supreme Court Judges have resigned. Where is justice ? Persons who have to uphold justice—judges of the entire country—they have resigned.

ಶ್ರೀ ಕೆ. ಎಚ್. ಹನುಮೇಗೌಡ :—ಇದು ದೇಶಕ್ಕೆ ಸಂಬಂಧಪಟ್ಟ ಪ್ರಶ್ನೆ. ಇದನ್ನು ಇಲ್ಲಿ ಮಾತನಾಡುವುದಕ್ಕೆ ಪ್ರತಿಯೊಬ್ಬರಿಗೂ ಹಕ್ಕು ಇದೆ.

ಶ್ರೀ ಡಿ. ದೇವರಾಜ ಅರಸ್ :—ಕಾನ್‌ಸ್ಟಿಟ್ಯೂಷನ್‌ನಲ್ಲಿ ನಮಗೆ ಹಕ್ಕು ಇದೆಯೆಂದು ಏನು ಬೇಕಾದರೂ ಆ ರೀತಿ ಲಘುವಾಗಿ ಮಾತನಾಡಬಾರದು. ಶ್ರೀಮಾನ್ ಹನುಮೇಗೌಡರನ್ನು ಬೇಕಾದರೆ ರಾಜ್ಯ ಸಭೆಗೆ ಆರಿಸಿ ಇಲ್ಲಿಂದ ಕಳುಹಿಸಬಹುದು. ಆದರೆ ಅವರಿಗೆ ಮುಖ್ಯಮಂತ್ರಿಯ ಸ್ಥಾನವನ್ನು ಕೊಡುವುದಕ್ಕೆ ನನ್ನ ಕೈಯ್ಯಲ್ಲಿ ಇಲ್ಲ. ಅದು ಜನತೆಯ ಕೈಯ್ಯಲ್ಲಿದೆ.

ಶ್ರೀ ಕೆ. ಎಚ್. ಹನುಮೇಗೌಡ :—ನಮಗೆ ನ್ಯಾಯ ಬೇಕು, ನಾವು ಆ ವಿಷಯವನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ನಾವು ನಮ್ಮ ಅಭಿಪ್ರಾಯವನ್ನು ತಿಳಿಸಬೇಕು.

ಶ್ರೀ ಡಿ. ದೇವರಾಜೇಅರಸ್ :—ಈಗ ಇಲ್ಲಿ ಆ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಹೇಳು ವುದಕ್ಕೆ ಅವಕಾಶ ಇಲ್ಲ. ನೀವು ಈ ವಿಷಯವನ್ನೂ ಬೇಕಾದರೆ ಬೆಂಗಳೂರು ನಗರದಲ್ಲಿ ಪಬ್ಲಿಕ್ ಮೀಟಿಂಗ್‌ನಲ್ಲಿ ಹೇಳಿ. ಇಲ್ಲಿ ಆ ಪ್ರಶ್ನೆಯನ್ನು ಎತ್ತುವುದಕ್ಕೆ ಆಗುವುದಿಲ್ಲ. ಏನಾದರೂ ಇಲ್ಲಿ ಮಾತನಾಡುವುದಕ್ಕೆ ಆಗುತ್ತದೆಯೇ ? ಅದಕ್ಕೂ ಕಾನ್‌ಸ್ಟಿಟ್ಯೂಷನ್ ಇದೆ, ಕನ್‌ವೆನ್‌ಷನ್ ಇದೆ. ಕನ್‌ವೆನ್‌ಷನ್ ಡಿಫೈ ಮಾಡಿಬಿಡುತ್ತೇನೆ ಎಂದು ಹೇಳಿದರೆ ಹೇಗೆ ? Now, this is not the occasion to discuss it ; what is done there need not necessarily be followed here. That is all I can say.

ಶ್ರೀ ಎಸ್. ಬಂಗಾರಪ್ಪ :—ಮಾನ್ಯ ಅಧ್ಯಕ್ಷರೇ ತಾವು ನನ್ನ ನೋಟೀಸಿಗೆ ಕಳುಹಿಸಿರತಕ್ಕ ಉತ್ತರ ಬಂದಿದೆ. ಅದರಲ್ಲಿ It is stated that no responsibility of the State Government is involved in the matter. ನಾನು ಕಾನ್‌ಸ್ಟಿಟ್ಯೂಷನ್ ಆರ್ಟಿಕಲ್ 124 ಅನ್ನು ಓದಿದ್ದೇನೆ. ಅದು ಎಲ್ಲರಿಗೂ ಗೊತ್ತಿದೆ.

ಅಧ್ಯಕ್ಷರು :—ಬಾಕಿ ಇನ್ನೇನು ಉಳಿದಿದೆ ?

ಶ್ರೀ ಎಸ್. ಬಂಗಾರಪ್ಪ:—ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ, ಇದು ಸುಪ್ರೀಮ್ ಕೋರ್ಟಿನ ವಿಚಾರವಾಗಿರುವುದರಿಂದ ಇದು ಪಾರ್ಲಿಮೆಂಟಿಗೂ ಸಂಬಂಧ ಇದೆ, ರಾಜ್ಯದ ಶಾಸನ ಸಭೆಗೂ ಸಂಬಂಧ ಇದೆ. ಆದ್ದರಿಂದ ಇದು ಒಂದಕ್ಕೊಂದಕ್ಕೆ ಸಂಬಂಧ ಇರುವುದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ 'No adjournment Motion can be allowed under the Rules' ಅಂತ ಕಳುಹಿಸಿದ್ದೀರಿ, ಇದನ್ನು ರಿವೈಜ್ ಮಾಡಿ ಆ ವಿಷಯುವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಏತಕ್ಕೆಂದರೆ ಸುಪ್ರೀಮ್ ಕೋರ್ಟ್ ಜಡ್ಜ್‌ಗಳ ನೇಮಕದ ಬಗ್ಗೆ ಅಡ್ವೋಕೇಟ್ ಅಸೋಸಿಯೇಷನ್‌ನವರು, ಪ್ರೊಟೆಸ್ಟ್ ಮಾಡಿದ್ದಾರೆ. ಬೊಂಬಾಯಿಯ ಹೈಕೋರ್ಟಿನವರು ಕೆಲಸ ಮಾಡಬಾರದು ಎಂದು ಮುಷ್ಕರ ಹೂಡಿದ್ದಾರೆ.

ಅಧ್ಯಕ್ಷರು :—ಅದು ಅಸೆಂಬ್ಲಿಯಲ್ಲಿ ಹೇಳುವ ವಿಷಯುವಲ್ಲವೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅಲ್ಲಿ ನಡೆದಿರತಕ್ಕ ವಿಷಯಕ್ಕೂ ಈ ಸಭೆಗೂ ಯಾವ ಸಂಬಂಧವೂ ಇಲ್ಲ. ಆ ಮುಷ್ಕರದ ವಿಷಯುವನ್ನು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ :—ನ್ಯಾಯಾಲಯಕ್ಕೆ ಸಂಬಂಧಪಟ್ಟ ಹಾಗೆ ಮೈಸೂರಿನ ಜನತೆಗೂ ಅದಕ್ಕೂ ಸಂಬಂಧ ಇದೆ ಎಂದು ನನ್ನ ಭಾವನೆ. ಆದ್ದರಿಂದ ಈ ನಿಲುವಳಿ ಸೂಚನೆಗೆ ಮಾನ್ಯತೆ ಕೊಟ್ಟು ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :—ಆ ಭಾವನೆ ತಪ್ಪು.

Sri C. M. ARUMUGHAM.—Madam Speaker, we have the apprehension that if justice is not done to Judges, how can we expect justice to others ? I am a citizen of this country. I have evey right to question. I must know what is happening in the higher level. If judges are not given justice, where is justice for you and me ?

Sri D. DEVARAJ URS.—Then, every citizen can come here along with Mr. Arumugham and question things !

ಶ್ರೀ ಎಸ್. ಬಂಗಾರಪ್ಪ :—ಮಾನ್ಯ ಮುಖ್ಯಮಂತ್ರಿಗಳು ಈ ವಿಷಯುವನ್ನು ಬೇಕಾದರೆ ಹೊರಗಡೆ ಪಬ್ಲಿಕ್ ಮೀಟಿಂಗ್‌ನಲ್ಲಿ ಭಾಷಣ ಮಾಡಿ ಎಂದು ಹೇಳಿದರು. ಹೊರಗಡೆ ಮಾತನಾಡುವುದಕ್ಕೆ ಅವಕಾಶ ಇರುವಾಗ ಈ ಸದನದಲ್ಲಿ ಕುಳಿತುಕೊಂಡಿರತಕ್ಕ ನಾವು ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೇ ?

ಶ್ರೀ ಹೆಚ್. ಡಿ. ದೇವೇಗೌಡ :—ನಾನು ಒಂದು ವಿಷಯುವನ್ನು ಹೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್ :—ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟ ಮೇಲೆ ಶ್ರೀಮಾನ್ ದೇವೇಗೌಡರು ಮಾತನಾಡುವುದಕ್ಕೆ ಹೊರಟಿದ್ದಾರೆ.

Is it not violation of the Chair's Ruling ?

Sri H. SIDDAVEERAPPA.—The difficulty is this. I know the Hon. Members are quite conscious that it does not come here. But still, they are raising it.

Sri C. M. ARUMUGHAM.—The Hon. Speaker can revise the Ruling even if she has ruled. We are not questioning the authority in the appointment of the Chief Justice of the Supreme Court—it is an appointment made under the Constitution in consultation with the Government. I presume the Government had taken a decision a few days before about this. My submission is, if the Speaker were to order for every point that it need not go into the records......

MADAM SPEAKER.—I will tell you how it is.

ಶ್ರೀ ವಾಟಾಳ್ ನಾಗರಾಜ್.—ತಾವು ಹೀಗೆ ಪ್ರತಿಸಾರಿಯೂ ಎಕ್ಸ್‌ಪಂಜ್ ಮಾಡಬೇಕೆಂದೂ ಪದೇ ಪದೇ ಹೇಳಿದರೆ ಏನನ್ನೂ ನಾವು ಈ ಸಭೆಯಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲವೇ ?

ಅಧ್ಯಕ್ಷರು ;—ಇದರ ಬಗ್ಗೆ ನಾನು ಹೇಳುತ್ತೇನೆ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :—ಸಭೆಯಲ್ಲಿ ನಾವು ಇಲ್ಲಿ ಹೇಳುವುದಕ್ಕೆ ನಮಗೆ ಅವಕಾಶ ವಿಲ್ಲದೇ ಇದ್ದರೆ ನಾವೇಕೆ ಇಲ್ಲಿಗೆ ಬರಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು :—ಏಕೆ ಬರಬೇಕೆಂದರೆ ಇದರ ಕಾರಣ ನಿಮಗೇ ಗೊತ್ತು.

ಶ್ರೀ ವಾಟಾಳ್ ನಾಗರಾಜ್ :—ಏನು ಕಾರಣ ನಮಗೆ ಅದು ಅರ್ಥವಾಗುತ್ತಿಲ್ಲ.

ಅಧ್ಯಕ್ಷರು :—ಆರ್ಡರ್ ಆರ್ಡರ್.

ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು, ಶ್ರೀ ಹನುಮೇಗೌಡರು, ಬಂಗಾರಪ್ಪನವರು ಮತ್ತು ಇತರ ಸದಸ್ಯರು ಮಾತನಾಡಿದ್ದಾರೆ. ಪಾರ್ಲಿಮೆಂಟಿನ ಮೇಲೆ ಇಲ್ಲಿ ಚರ್ಚೆಮಾಡುವುದು ರಿಕಾರ್ಡಿನಲ್ಲಿದ್ದರೆ ಸರಿಯಾಗಿರುವುದಿಲ್ಲ, ಕೆಲವರು ಕೋರ್ಟಿನ ಬಗ್ಗೆ ಇಲ್ಲಿ ಏನನ್ನೋ ಹೇಳಿದರು. ಅದರ ಬಗ್ಗೆ ಸಹ ಇಲ್ಲಿ ಪ್ರಸ್ತಾಪ ಮಾಡುವ ಹಾಗಿಲ್ಲ. ನಮಗೆ ಸಂಬಂಧಪಡದ ವಿಚಾರಗಳೆಲ್ಲಾ ನಮ್ಮ ರಿಕಾರ್ಡುಗಳಲ್ಲಿ ಬಂದರೆ ಏನು ಗತಿಯಾಗಬೇಕು ? ಇದಕ್ಕಾಗಿ ಇಲ್ಲಿಯವರೆಗೆ ಇದರ ಬಗ್ಗೆ ಏನೇನು ಕಲಾಪಗಳು ಆಗಿವೆ ಅದನ್ನು ರಿಕಾರ್ಡುಗಳನ್ನು ತರಿಸಿ ನೋಡಿ ಅದರಲ್ಲಿ ಸಂಬಂಧಪಡದ ಇಂತಹ ವಿಚಾರಗಳು ಯಾವುದಾದರೂ ಇದ್ದರೆ ಅದನ್ನು ಎಕ್ಸ್‌ಪಂಜ್ ಮಾಡಬಹುದೇ ಎನ್ನುವುದನ್ನು ನೋಡಬೇಕಾಗುತ್ತದೆ. ಇದನ್ನೆಲ್ಲಾ ನಿಧಾನವಾಗಿ ಮಾಡಬೇಕಾಗಿದೆ,

Sri C. M. ARUMUGHAM.—You will have to permit us to represent about your Ruling. This has been the past practice at any rate.

MADAM SPEAKER.—But whatever I feel that it should not go into the record, should be expunged.

Sri C. M. ARUMUGHAM.—Are we not in a democratic assembly ?

Sri H. SIDDAVEERAPPA.—Under the Constitution there are certain provisions.

Sri C. M. ARUMUGHAM.—We will have to make out a case to retain what is ordered to be expunged.

Sri H. D. DEVE GOWDA.—Unparliamentary words and indecent words only will have to be expunged.

Sri H. SIDDAVEERAPPA.—Madam Speaker, I may be permitted to say a few words about the framework of our Constitution. Under the Constitution there are certain well-defined forms of working. We have got the judiciary, the executive and the legislature, each one is sovereign in itself under the Constitution. Now what has happened ? So far as the judiciary is concerned there are two types, (1) what is called the Supreme Court, *i.e.,* under the Constitution to be constituted by the President. Each will have to receive the assent of the President. The same thing in the case of appointment of the judges of the Supreme Court. The Supreme Court has to be constituted as laid down under Article 124 of the Constitution, and likewise with regard to the judges of the High Court at the State level. With regard to the appointment of judges to the High Court, at the State level, it is the Chief Justice and the Chief Minister who should recommend and their recommendation will have to be approved by the President. In the case of the Judges of the Supreme Court, it will have to be done as defined under the Constitution. Therefore, it does not come within our purview. There are what are called three lists : Union List, State List and Concurrent List. This comes under the Union List. How can we speak or arrogate to ourselves the power of speaking on behalf of others who have got the power ? The Parliament has that power. It has been discussed already there yesterday. Therefore, whatever reflection is cast in this House during the course of these few minutes

of talk, I would respectfully submit, all that will have be expunged.

Sri H. D. DEVE GOWDA.—What is the reflection ?

Sri H. SIDDAVEERAPPA.—There is reflection. They have stated that we have cut across the old precedent and we have followed precedents as in the case of America and other places. This is a matter that will have to be decided at that level. Let us not spend more time on this and let us take up our business and work according to our programme.

ಅಧ್ಯಕ್ಷರು :—ಇವೊತ್ತು ರೆವಿನ್ಯೂ ಡಿಮ್ಯಾಂಡು ಬಗ್ಗೆ ಇಲ್ಲಿ ಸರಕಾರದವರು ರಿಪ್ಲೈ ಕೊಡಬೇಕಾಗಿದೆ ಹಾಗೆ ಇನ್ನು ಕೆಲವು ಡಿಮ್ಯಾಂಡುಗಳೂ ಎಂದರೆ ಟ್ಯಾಕ್ಸೆಷ್ ಆನ್ ಮೋಟಾರ್ ವೆಹಿಕಲ್ಸ್ ಇದರ ಬಗ್ಗೆ ಡಿಮ್ಯಾಂಡು ಚರ್ಚೆಯಾಗಬೇಕಾಗಿದೆ. ಬರುವ ತಿಂಗಳು ಮೂರನೇ ತಾರೀಖು ಈ ಸಭೆ ಮುಂದೂಡಬೇಕಾಗಿದೆ. ಎರಡನೇ ತಾರೀಖಿನೊಳಗೆ ಎಲ್ಲ ಡಿಮ್ಯಾಂಡುಗಳೂ ಪೂರ್ತಿಯಾಗದಿದ್ದರೆ ಉಳಿದಿರುವ ಡಿಮ್ಯಾಂಡುಗಳನ್ನು ಗಿಲೆಟಿನ್ ಮಾಡಬೇಕಾಗುತ್ತದೆ. ಇದನ್ನು ನಾನು ಒಂದಲ್ಲ ಐದು ಸಾರಿ ಹೇಳುತ್ತ ಬಂದಿದ್ದೇನೆ.

ಮಾನ್ಯ ಸದಸ್ಯರಲ್ಲಿ ಮೂರು ನಾಲ್ಕು ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡಿದರೆ ಒಬ್ಬರದ್ದು ಮಾತ್ರ ರಿಕಾರ್ಡಿನಲ್ಲಿ ಬರುತ್ತದೆ. ಇತರರದು ಏನೂ ರಿಕಾರ್ಡು ಆಗಲು ಸಾಧ್ಯವಿಲ್ಲ. ಎಕ್ಸ್‌ಪಂಜ್, ಮಾಡುವ ಬಗ್ಗೆ ಯಾವ ರೀತಿ ಅಥಾರಿಟಿ ಇದೆ. ಅದನ್ನು ವಿಚಾರ ಮಾಡಿ ನೋಡಿ ಮಾಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ ;—ಮಾನ್ಯ ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ತಾವು ಪಾರ್ಲಿಮೆಂಟ್ ಬಗ್ಗೆ ಪ್ರಸ್ತಾಪ ಮಾಡುವ ಹಾಗಿಲ್ಲ ಎಂದು ಹೇಳಿದಿರಿ.

Rule 315 of the Rules of Procedure is the only rule under which the matter of expunction can be dealt with. Rule 315 says :

"315. If the Speaker is of opinion that a word or words has or have been used in debate which is or are defamatory or indecent, or unparliamentary or undignified he may, in his discretion, order that such word or words be expunged from the proceedings of the Assembly."

ಇದರಲ್ಲಿ ಅಂತಹ ಯಾವ ಪದಗಳನ್ನು ನಮ್ಮ ಮಾನ್ಯ ಸದಸ್ಯರು ಯಾರೂ ಉಪಯೋಗ ಮಾಡಿಲ್ಲ. ಹೀಗಿರುವಾಗ ತಾವು ಇದರ ಬಗ್ಗೆ ಹೇಳುವುದು ಸರಿಯಲ್ಲ ಎಂದು ನನಗೆ ಕಾಣುತ್ತದೆ

MADAM SPEAKER.—I cannot understand. Why the Hon. Member is taking so much time of the House over this issue.

Sri D. DEVARAJ URS.—Hon. Member Sri Bangarappa is raising this point again and again as if it is a debate. I feel that the business of the house is being obstructed.

Sri S. BANGARAPPA.—I have got every right to speak.

Sri D. DEVARAJ URS.—The Hon. Member has no right to obstruct the proceedings of the House.

Sri C. M. ARUMUGHAM.—We shall discuss this point separately on some other day.

MADAM SPEAKER.—I am only here to follow the rules of procedure and conduct of the business strictly according to rules.

Sri C. M. ARUMUGHAM.—May I know which are the words which is required to be expunged on the ground they are defamatory or indecent ?

MADAM SPEAKER.—The words which are found to be defamatory or indecent should not be found on the records.

ಶ್ರೀ ವಾಟಾಳ್ ನಾಗರಾಜ್ :—ಅಧ್ಯಕ್ಷರೇ, ತಾವು ಯಾವ ಯಾವ ಪದಗಳನ್ನು ಎಕ್ಸ್‌ಪಂಜ್ ಮಾಡಿದ್ದೀರಿ ಎಂಬುದನ್ನಾದರೂ ಸಭೆಗೆ ತಿಳಿಸಬೇಕಲ್ಲವೇ ?

ಅಧ್ಯಕ್ಷರು :—ನಾನು ಪ್ರೊಸೀಡಿಂಗ್ಸ್‌ನ್ನು ನೋಡಿದ ನಂತರ ಅದನ್ನು ತಿಳಿಸುವುದಕ್ಕೆ ಸಾಧ್ಯ.

ಶ್ರೀ ಹೆಚ್. ಡಿ. ದೇವೇಗೌಡ, :— ಮಾನ್ಯ ಅಧ್ಯಕ್ಷರೇ ಈಗಾಗಲೇ ಮಾನ್ಯ ಹಿರಿಯ ರಾಜಕಾರಿಣಿಗಳಾದ ಮಾನ್ಯ ಸಿದ್ದವೀರಪ್ಪನವರು ಈ ದಿವಸ ಆ ಸುಪ್ರೀಂ ಕೋರ್ಟಿನಲ್ಲಿ ನೇಮಕ ಆಗಿರತಕ್ಕ ಉಚ್ಚನ್ಯಾಯಾಧೀಶರ ವಿಚಾರದಲ್ಲಿ ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಎಷ್ಟರ ಮಟ್ಟಿಗೆ ಅವಕಾಶವಿದೆ ಅಥವಾ ಅವಕಾಶವಿಲ್ಲ ಎಂಬುದರ ಬಗ್ಗೆ ರೂಲ್ 124ನ್ನು ಉದಾಹರಿಸಿ ಮಾತನಾಡಿದ್ದಾರೆ. ಇಲ್ಲಿ ಇದರ ಚರ್ಚೆಗೆ ಅವಕಾಶವಿಲ್ಲವಾದರೂ ನಾವು ಇಲ್ಲಿ ನಮ್ಮ ಮನಸ್ಸಿನಲ್ಲಿರುವುದನ್ನು ಹೇಳುವುದಕ್ಕೆ, ನಮ್ಮ ಮನಸ್ಸಿನ ತೀವ್ರತೆಯನ್ನು ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇದೇ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಈ ವಿಚಾರದಲ್ಲಿ ಹೇಗೆ ಒಂದು ಕನ್‌ವೆನ್‌ಷನ್ ನಡೆದುಕೊಂಡು ಬಂದಿದೆ ಎಂಬ ವಿಷಯವನ್ನೂ ಕೂಡ ಅವರು ತಿಳಿಸಿದ್ದಾರೆ, ಆದರೆ ಆ ಕನ್‌ವೆನ್‌ಷನ್ ಬಗ್ಗೆ ಅದು ಸರಿಯೋ ಅಥವಾ ಅದು ತಪ್ಪೋ ಅದರ ವಿಷಯಕ್ಕೆ ನಾನೀಗ ಹೋಗುವುದಿಲ್ಲ. ಈ ದಿವಸ ಉಚ್ಚನ್ಯಾಯಾಲಯದಲ್ಲಿ ಆ ಉಚ್ಚನ್ಯಾಯಾಧೀಶರನ್ನು ನೇಮಕ ಮಾಡಿರುವ ಪದ್ಧತಿಯನ್ನೇ ಈ ಎಗ್ಜಿಕ್ಯುಟೀವ್ ಮತ್ತು ಇತರೆ ಸಂದರ್ಭಗಳಲ್ಲೂ ಅನುಕರಣೆ ಮಾಡುವುದಾದರೆ ಆಗ ಇದರ ಪರಿಣಾಮ ಎಲ್ಲಿಯವರೆಗೆ ಹೋಗುತ್ತದೆ ? ರಾಜ್ಯಾಂಗದಲ್ಲಿ ಹೇಳಿರುವಂತೆ ಶಾಸಕಾಂಗ ಮತ್ತು ನ್ಯಾಯಾಂಗ ಮತ್ತು ಕಾರ್ಯಾಂಗಗಳ ವಿಚಾರವನ್ನು ಶ್ರೀಮಾನ್ ಸಿದ್ಧವೀರಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಆದರೆ ನಾನು ಹೇಳುತ್ತೇನೆ ಈ ದಿವಸ ನ್ಯಾಯಾಂಗಕ್ಕೆ ಏನು ಒಂದು ಘಟನೆ ಬಂದಿದೆಯೋ ಅದು ನಾಳೆ ಈ ಶಾಸಕಾಂಗಕ್ಕೂ ಬರಬಹುದು. ಈ ಶಾಸಕಾಂಗಕ್ಕೆ ಇರುವ ಅಧಿಕಾರವನ್ನು ಕಿತ್ತೊಗೆಯುವ ಕಾಲ ನಾಳೆ ಬರಬಹುದು. ಈ ದಿವಸ ಆ ಸುಪ್ರೀಂ ಕೋರ್ಟ್ ಪಾರ್ಲಿಯಮೆಂಟೇ ಸುಪ್ರೀಂ ಎಂದು ಹೇಳಿರುವುದರಿಂದ ಆ ಪಾರ್ಲಿಯಮೆಂಟ್ ನಾಳೆ ಈ ಲೆಜಿಸ್ಲೇಚರುಗಳ ಅಧಿಕಾರವನ್ನು ಕಿತ್ತುಹಾಕಬಹುದು. ಅದಕ್ಕೂ ಇದೇ ನಾಂದಿ. ಮುಂದೆ

ಇದೂ ಕೂಡ ಸಾಧ್ಯವಾಗಬಹುದು. ಇದರಿಂದ ಮುಂದೆ ಲೆಜಿಸ್ಲೇಚರುಗಳ ಅಧಿಕಾರ ಮೊಟಕಾದರೆ ಅದರಲ್ಲಿ ಆಶ್ಚರ್ಯವೇನಿಲ್ಲ.

Supreme Court has given a judgement that the Parliament is supreme and all powerful. The Parliament by bringing a necessary amendment to the Constitution, can take away the legislatures. This Legislature can be removed by bringing an amendment in the Parliament.

Sri H. SIDDAVEERAPPA.—Each one is supreme under the Constitution.

Sri H. D. DEVE GOWDA.—The Central Government has set up a bad example by breaking the convention. I am not going to comment upon the decision of the Central Government.

Sri D. DEVARAJ URS.—Let us refrain from expressing our opinion on this issue. Let us not express any opinion on this point. It does not lie within our jurisdiction to say that such an action is good or bad.

ಶ್ರೀ ಹೆಚ್. ಡಿ. ದೇವೇಗೌಡ : ಈ ದಿವಸ ಇಲ್ಲಿ ನಾವೂ ನೀವೂ ಕುಳಿತು ಏನು ಕೆಲಸ ಮಾಡುತ್ತಿದ್ದೇವೆ. ಇದನ್ನೂ ಕೂಡ ನಾಳೆ ಅವರು ಮೊಟಕು ಮಾಡಬಹುದು, ಅದಕ್ಕೂ ಸಾಧ್ಯವಿದೆ ಆದರೆ ಈ ಸಂದರ್ಭದಲ್ಲಿ ಈ ಘಟನೆಯು ಬಗ್ಗೆ ಇಷ್ಟನ್ನು ಮಾತ್ರ ಹೇಳುತ್ತೇನೆ. ಈ ದಿವಸ ನ್ಯಾಯಾಂಗಕ್ಕೆ ಒಂದು ದೊಡ್ಡ ಆಘಾತವಾಗಿದೆ ಎಂದು ನನ್ನ ಅಭಿಪ್ರಾಯ. ಕಳೆದ 25 ವರ್ಷಗಳಿಂದ ಬಂದಂಥ ಒಂದು ಕನ್‌ವೆನ್‌ಷನ್ನನ್ನು ಇಂದು ಮುರಿದಿದ್ದಾರೆ. ಅಂಥಾ ಒಂದು ಕಾಲ ಇಂದು ಬಂದಿತು. ಈ ದಿವಸ ನ್ಯಾಯಾಂಗಕ್ಕೆ ಮತ್ತು ಕಾರ್ಯಾಂಗಕ್ಕೆ ಇದರಿಂದ ಒಂದು ದೊಡ್ಡ ಅಪಚಾರವನ್ನು ಎಸಗಿದಂತಾಗಿದೆ. ಇದರ ಬಗ್ಗೆ ನಮ್ಮ ಅಸಂತೋಷವನ್ನು ವ್ಯಕ್ತಪಡಿಸುವುದಕ್ಕಾಗಿ ನಾನು ಸಭಾತ್ಯಾಗ ಮಾಡಬೇಕಾಗಿದೆ.

(ವಿರೋಧಪಕ್ಷದ ಸದಸ್ಯರುಗಳು ಎದ್ದು ಸಭೆಯಿಂದ ಹೊರಟು ಹೋದರು ಆದರೆ ಕಮ್ಯುನಿಷ್ಟ್ ಪಾರ್ಟಿಯವರು ಮಾತ್ರ ಸಭೆಯಲ್ಲೇ ಇದ್ದರು.)

ಶ್ರೀ ಎಂ. ಎಸ್. ಕೃಷ್ಣನ್ :—ಪ್ರಜಾಪ್ರಭುತ್ವದಲ್ಲಿ ಈ ಹಸ್ತಕ್ಷೇಪ ಮತ್ತು ಕನ್‌ವೆನ್‌ಷನ್ನುಗಳನ್ನು ಮುರಿದುದರ ಬಗ್ಗೆ ನಮ್ಮ ವಿರೋಧ ಪಕ್ಷದ ಮಾನ್ಯ ಸ್ನೇಹಿತರು ಸಭಾತ್ಯಾಗ ಮಾಡಿದ್ದಾರೆ. ಆದರೆ ಈ ಸಂದರ್ಭದಲ್ಲಿ ನಾವು ಸಭಾತ್ಯಾಗ ಮಾಡುವುದಿಲ್ಲ. ಕಾರಣ ಸಮಾಜವಾದದಲ್ಲಿ ಕಾಲಕ್ಕೆ ತಕ್ಕಂತೆ ನಾವು ನಮ್ಮ ನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಒಟ್ಟಿನಲ್ಲಿ ಜನತೆಗೆ ಒಳ್ಳೆಯದಾಗುವುದಾದರೆ ಅದರಿಂದ ಯಾವ ಕನ್‌ವೆನ್‌ಷನ್ನನ್ನೂ ಮುರಿದಂತಾಗುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್ :—ಈಗ ನಾನು ಮಾತನಾಡಬೇಕಾದ ಅವಶ್ಯಕತೆಯೇ ಇರಲಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದ್ದರಿಂದ ನಾನೂ ಕೂಡ ಎರಡು ಮಾತುಗಳನ್ನಾಡಬೇಕಾಗಿದೆ. ಆದರೆ ಮಾನ್ಯ ವಿರೋಧಪಕ್ಷದ ನಾಯಕರು ಸಭೆಯಿಂದ ಹೊರಟು

ಹೋಗುವುದಾಗಿ ತಿಳಿಸಿ ಅವರು ಮತ್ತೇಕೆ ಬಾಗಿಲಲ್ಲಿ ನಿಂತು ನಾನು ಹೇಳುವುದನ್ನು ಕೇಳಿಸಿ ಕೊಳ್ಳಬೇಕು ? ಹಾಗೆ ಅವರು ನನ್ನ ಮಾತನ್ನು ಕೇಳಬೇಕಾಗಿದ್ದರೆ ಅವರು ಕೂಡಲೆ ಒಳಕ್ಕೆ ಬರಬೇಕು. ಇಲ್ಲವಾದರೆ ನಾವು ಇದರ ಬಗ್ಗೆ ಒಂದು ರೆಸಲ್ಯೂಷನ್ನನ್ನು ಪಾಸ್ ಮಾಡಿಬಿಡಂತ್ತೇವೆ. ಅವರು ಒಳಕ್ಕೆ ಬರುವುದಾಗಿದ್ದರೆ ಬೇಗ ಬಂದುಬಿಡಲಿ. ನ್ಯಾಯಾಂಗಕ್ಕೆ ಈ ದಿವಸ ಅಪಚಾರವಾಗಿದೆ ಎಂದು ಹೇಳಿದ ವಿರೋಧಪಕ್ಷದ ನಾಯಕರು ಇದರಿಂದ ಅವರ ಮನಸ್ಸಿಗೆ ಬಹಳ ನೋವಾಗಿದೆ ಎಂದು ಅವರು ವಾಕೌಟ್ ಮಾಡಿದರು. ಆದರೆ ಈಗ ಆ ವಿರೋಧ ಪಕ್ಷದ ನಾಯಕರು ಆಗಲೇ ಒಳಕ್ಕೆ ಬರುತ್ತಿದ್ದಾರೆ--ಈಗ ಸಭೆಯೊಳಕ್ಕೆ ಬರುತ್ತಿರುವ ವಿರೋಧಪಕ್ಷದ ನಾಯಕರೇ ನ್ಯಾಯಾಂಗಕ್ಕೆ ಬಹಳ ಅಪಚಾರವಾಗಿದೆ ಎಂದು ಹೇಳಂತ್ತಿದ್ದವರು—ಈಗ ಅವರು ಮತ್ತೆ ಒಳಕ್ಕೆ ಬಂದೇ ಬಂದರು. ಆದರೆ ನಾನು ಹೇಳುತ್ತೇನೆ--ಈ ದಿವಸ ನ್ಯಾಯಾಂಗಕ್ಕೆ ಅಪಚಾರವಾಗಿಲ್ಲ. ಅವರು ಮಾಡಿರುವುದು ಇದಕ್ಕೆ ಒಂದು ದೊಡ್ಡ ಉಪಕಾರ ವಾಗಿದೆ ಎಂದು ಹೇಳುತ್ತೇನೆ.

ಅಪಚಾರವಲ್ಲ ಆಗಿರುವುದು, ಒಂದು ದೊಡ್ಡ ಉಪಕಾರ ಇದು. ಈ ರೀತಿಯಾಗಿ ಯಾವುದೇ ಒಂದು ಸುಪ್ರೀಂ ಕೋರ್ಟಿನ ಜಡ್ಜ್ ಅಪಾಯಿಂಟ್ ಮಾಡುವಾಗ ರಾಜ್ಯಾಂಗದ ಪ್ರಕಾರ ರಾಷ್ಟ್ರಪತಿಗಳಿಗೆ ಇರುವ ಅಧಿಕಾರವನ್ನು ಅವರು ಯಾವರೀತಿ ಚಲಾಯಿಸಬೇಕು ಎಂಬುದು ನಮ್ಮ ಸಂವಿಧಾನದಲ್ಲಿ ಅಡಕವಾಗಿದೆ. ಮತ್ತು ದೇಶದಲ್ಲಿ ಜನತೆಗೆ ಯಾವರೀತಿ ನ್ಯಾಯ ಒದಗಿಸಬೇಕು. ಯಾವ್ಯಾವ ವರ್ಗಕ್ಕೆ ಒದಗಿಲ್ಲ. ಅದನ್ನು ಯಾವ ರೀತಿ ಒದಗಿಸಬೇಕು ಎಂಬುದು ರಾಜ್ಯಾಂಗದಲ್ಲಿ ಇದೆ. ಇದರ ಜೊತೆಗೆ ಪ್ರಜಾಪ್ರಭುತ್ವಕ್ಕೆ ಯಾವ ರೀತಿ ಬೆಂಬಲ ಕೊಡಬೇಕು. ಯಾವರೀತಿ ಅದನ್ನು ಕಾಪಾಡಬೇಕು ಎಂಬುದು ಕೂಡ ಸಂವಿಧಾನದಲ್ಲಿದೆ. ಈಗ ಕೇಂದ್ರದಲ್ಲಿ ಯಾವುದೇ ಒಂದು ಕೆಲಸಮಾಡಿದರೂ ಕೂಡ ಅದನ್ನು ಟೀಕೆಮಾಡುವುದು ಸರಿಯಲ್ಲ ಎಂದು ಹೇಳಿದ್ದೇವೆ. ಅದು ನಮ್ಮ ವ್ಯಾಪ್ತಿಗೆ ಒಳಪಟ್ಟಿಲ್ಲ, ಇದನ್ನು ತಿಳಿದೂ ಕೂಡ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಮಾಡುವುದಾಗಿ ಹೇಳಿದರು. ನಮ್ಮ ದೇಶದಲ್ಲಿ 25 ವರ್ಷಗಳಿಂದ ಪ್ರಜಾಪ್ರಭುತ್ವವಿದೆ. ಜನರು ಅದರಂತೆ ನಡೆದುಕೊಂಡು ಬಂದಿದ್ದಾರೆ. ನಾವು ತಿಳಿದುಕೊಂಡಿರುವ ಹಾಗೆ ಪ್ರಜಾಪ್ರಭುತ್ವ ಎಂಬುದು ದೊಡ್ಡ ದೊಡ್ಡವರಿಗೆ. ಜಮೀನುದಾರರಿಗೆ, ನೌಕರರಿಗೆ, ಮೇಲ್ವರ್ಗದವರಿಗೆ ಮಾತ್ರವಲ್ಲ. ಬಡವರು ಮತ್ತಿತರರಿಗೂ ಇದೆ. ಎಲ್ಲರಿಗೂ ಅದು ಅನ್ವಯಿಸದಿದ್ದರೆ ಅದು ಪ್ರಜಾಪ್ರಭುತ್ವವೇ ಅಲ್ಲ. ಆದರೆ ಪ್ರಜಾಪ್ರಭುತ್ವ ನಾಶವಾಗುವಂತೆ ನಡವಳಿಕೆಗಳು ನಡೆಯುತ್ತಿರುವುದನ್ನು ನೋಡಿದರೆ

(ವಿಪರೀತ ಗಲಾಟೆ. ಅನೇಕರು ಒಟ್ಟಿಗೆ ಮಾತನಾಡುತ್ತಿದ್ದುದರಿಂದ ಏನೂ ಸರಿಯಾಗಿ ಕೇಳಿಸುತ್ತಿರಲಿಲ್ಲ.)

ನೀವು ಹೇಳುವುದನ್ನು ಕೇಳಿಕೊಂಡು ಹೋಗುವುದಕ್ಕೆ [ನಾವು ಇದ್ದೇವೆ ಎಂದು ತಿಳಿದಿದ್ದೀರಾ ದೇವೇಗೌಡರೇ ? ಆತ್ಮಶಾಂತಿಯಿದ್ದರೆ ಕುಳಿತುಕೊಂಡು ಕೇಳಿ. ಏಕೆ ಕೂಗಾಡುತ್ತಾ ಇದ್ದೀರಿ.

(ಮತ್ತೆ ಗಲಾಟೆ)

ಒಂದು ವರ್ಗದವರಿಗೇ ಅಲ್ಲ ಪ್ರಜಾಪ್ರಭುತ್ವವಿರುವುದು, ಕೆಳಗಿನಿಂದ ಬಂದಿರುವವರಿಗೂ ಕೂಡ ಇದೆ. ಅದನ್ನು ಎತ್ತಿ ಹಿಡಿಯುವುದು ನಮ್ಮ ಪ್ರಯತ್ನ ಆಗಿದೆ. ಈ ದಿವಸ ನಡೆದಿರುವುದು ಪ್ರಜಾಪ್ರಭುತ್ವದ ಅಪಚಾರವಲ್ಲ, ನಿಜವಾದ ಜನತಾಪಕ್ಷ ಪ್ರಜಾಪಕ್ಷ ದೇಶದಲ್ಲಿ ಸ್ಥಾಪನೆಮಾಡಲು ಒಂದು ಬುನಾದಿ ಇದು. ಅದೇ ರೀತಿ ನ್ಯಾಯಾಂಗಕ್ಕೂ ಕೂಡ ಇದು ಅಪಚಾರವಲ್ಲ. ಇದು ಒಂದು ಹೊಸ ಕನ್‌ವೆನ್‌ಷನ್.

ಅಧ್ಯಕ್ಷರು :—ಈಗ ಮುಂದಿನ ವಿಷಯ ತೆಗೆದುಕೊಳ್ಳೋಣ.

Business in the House :— ಶ್ರೀ ಹೆಚ್. ಎಸ್. ಸಿದ್ದಪ್ಪ. (ಅರಸೀಕೆರೆ)

ಸಭೆಯ ಕಾರ್ಯಕಲಾಪದ ಬಗ್ಗೆ ನಾನೊಂದು ವಿನಂತಿ ಮಾಡಿಕೊಳ್ಳಬೇಕಾಗಿದೆ, ಈಗ ರೂಲ್ 312 ರ ಪ್ರಕಾರ ಒಂದು ಹೊಸ ಸಂಪ್ರದಾಯ ಜಾರಿಗೆ ಬಂದಿದೆ. ದಿವಸದ ಕೊನೆಯಲ್ಲಿ ಕಾಲ್ ಅಟೆನ್‌ಷನ್ ತೆಗೆದುಕೊಳ್ಳುತ್ತಿದ್ದಾರೆ. ಮೇಲ್ಮನೆಯಲ್ಲಿ ಆ ರೀತಿ ಇಲ್ಲ. ಇದರಿಂದ ತೊಂದರೆಯಾಗಿದೆ. ಆದುದರಿಂದ ಹಿಂದಿದ್ದ ಹಾಗೆ ರಿವೈಸ್ ಮಾಡಬೇಕು, ಇಲ್ಲದಿದ್ದರೆ ಅನ್ಯಾಯವಾಗುತ್ತದೆ. ನಾವು ವಿಷಯ ಎತ್ತುವ ವೇಳೆಗೆ ಮೇಲ್ಮನೆಯಲ್ಲಿ ಅದನ್ನು ಮುಗಿಸಿರುವರು. ನಾನು ಯೂನಿವರ್ಸಿಟಿ ವಿಷಯ ಎತ್ತಿದೆ, ಅದಕ್ಕೆ ಮಾರನೆ ದಿವಸ ಅವಕಾಶ ದೊರೆಯಿತು.

ಶ್ರೀ ಕೋಣಂದೂರು ಲಿಂಗಪ್ಪ :—ಈ ಸಭೆಯಲ್ಲಿ ರಾಷ್ಟ್ರದ ಶ್ರೇಷ್ಠ ನ್ಯಾಯಾಲಯದ ವಿಷಯ ಪ್ರಸ್ತಾಪಿಸಲಾಯಿತು. ಮುಖ್ಯಮಂತ್ರಿಗಳು ಪ್ರಜಾಪ್ರಭುತ್ವದ ವಿಚಾರ ತಿಳಿಸಿದ್ದಾರೆ.

ಅಧ್ಯಕ್ಷರು :—ಆ ವಿಷಯ ಮುಗಿಯಿತು, ದಯಮಾಡಿ ಕುಳಿತುಕೊಳ್ಳಿ.

BUDGET ESTIMATE FOR 1973–74 DEMANDS FOR GRANTS (Demand Nos. 2, 7, 8, 15, and 42 Debate, Contd.)

ಶ್ರೀ ಗಟ್ಟಿ ಚಂದ್ರಶೇಖರ್ (ಗುಬ್ಬಿ) :—

ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಮ್ಮ ಮಾನ್ಯ ರೆವಿನ್ಯೂ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಬಹಳ ಅಭಿಮಾನದಿಂದ ಸ್ವಾಗತಿಸುತ್ತೇನೆ. ಮಾನ್ಯ ರೆವಿನ್ಯೂ ಸಚಿವರು ನಮ್ಮ ಜಿಲ್ಲೆಯವರು, ನಮ್ಮ ತಾಲ್ಲೂಕಿನ ಅಳಿಯಂದಿರು ಅದು ನಮಗೆ ಬಹಳ ಹೆಮ್ಮೆಯ ವಿಷಯ. ಅವರು ದೈವಭಕ್ತರು, ಸಂಪ್ರದಾಯಸ್ಥರು, ಮತ್ತು ನಿಷ್ಠಾವಂತರು. ಆದ್ದರಿಂದಲೇ ಅವರಿಗೆ ಬಹು ಪ್ರಾಮುಖ್ಯವಾದಂಥ ಮುಜರಾಯಿ ಮತ್ತು ದೇಶದ ಆಗುಹೋಗುಗಳನ್ನು ನಿರ್ಧರಿಸತಕ್ಕ ರೆವಿನ್ಯೂ ಇಲಾಖೆ ಅವರಿಗೆ ಬಂದಿದೆ. ಇವತ್ತು ನಾಸ್ತಿಕತೆ ಹೆಚ್ಚಾಗುತ್ತಾ ಇರುವ ಕಾಲದಲ್ಲಿ ಧರ್ಮ ಜಾಗೃತಿಗೋಸ್ಕರ, ಸತ್‌ಸಂಪ್ರದಾಯದ ಉದ್ಧಾರಕೋಸ್ಕರ ದೇವಸ್ಥಾನಗಳ ಪುನರುದ್ಧಾರವಾಗಿ ಧರ್ಮಜಾಗ್ರತೆ ಮಾಡಬೇಕಾದಂಥ ಮಹತ್ತರ ಜವಾಬ್ದಾರಿ ಇವರ ಮೇಲೆ ಬಿದ್ದಿದೆ. ಅವರು ಈಗಾಗಲೇ ಒಂದು ಯೋಜನೆಯನ್ನು ಸಿದ್ಧಪಡಿಸಿಕೊಂಡಿದ್ದಾರೆ. ಇಡೀ ರಾಜ್ಯದಾದ್ಯಂತ ಪ್ರತಿ ತಾಲ್ಲೂಕಿನಲ್ಲಿ ದೇವಸ್ಥಾನಗಳನ್ನು ಪುನರುದ್ಧಾರ ಮಾಡಬೇಕು, ಅದಕ್ಕಾಗಿ ಎರಡು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕು, ಇದಕ್ಕಾಗಿ ಸರ್ಕಾರ ಸಿದ್ಧವಾಗಿರಬೇಕು ಎನ್ನತಕ್ಕಂಥ ಒಂದು ಮಹತ್ತರವಾದ ನಿರ್ಣಯವನ್ನು ಮಾಡಿಕೊಂಡಿದ್ದಾರೆ. ಈಗಾಗಲೇ ಇಡೀ ರಾಜ್ಯದಲ್ಲಿರತಕ್ಕ 41 ಲಕ್ಷ ಚಿಲ್ಲರೆ ಖಾತೇದಾರರ ಪೈಕಿ 25 ಲಕ್ಷಕ್ಕೆ ಮೇಲ್ಪಟ್ಟು ಪಟ್ಟಗಳನ್ನು ಹಂಚತಕ್ಕ ಒಂದು ಸುವ್ಯವಸ್ಥೆ ಮಾಡಿದ್ದಾರೆ. ಅದರೆ ಪಟ್ಟ ಹಂಚಿಕೆಯಲ್ಲಿ ನಿನ್ನೆಯ ದಿವಸ ಲಿಂಗಪ್ಪನವರು ಹೇಳಿದ ಹಾಗೆ ರೈತರು ಕೊಟ್ಟ ಸಾಲದ ಹಣವನ್ನು ಬಾಕಿಯಾಗಿ ಬರೆಯುತಕ್ಕದ್ದನ್ನು ಸರಿಪಡಿಸದೆ ಹೋದರೆ ಸಾಮಾನ್ಯ ಜನಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಸೂಕ್ತವಾದಂಥ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಸೂಚನೆ ಮಾಡುತ್ತೇನೆ. ಈಗ ನಮ್ಮ ಮಾನ್ಯ ಸಚಿವರು ತಮಗೆ ಬಂದಿರತಕ್ಕ ಜವಾಬ್ದಾರಿಯುತವಾದ ಪೋರ್ಟ್‌ಫೋಲಿಯೋ ಏನು ಇದೆ ಅದರ ಬಗ್ಗೆ ಅವರು ಶಕ್ತಿಮೀರಿ ಹಗಲು ರಾತ್ರಿ ಬಹಳವಾಗಿ ಶ್ರಮಿಸುತ್ತಿದ್ದಾರೆ. ಉದಾಹರಣೆಗೆ ಹೇಳಬೇಕು ಎಂದರೆ, ಒಂದು ದಿವಸ

ಅವರನ್ನು ನಮ್ಮ ಕ್ಷೇತ್ರದಲ್ಲಿ ಒಂದು ಸಮಾರಂಭಕ್ಕೆ ಕರೆದುಕೊಂಡು ಹೋದಾಗ ಬೆಳಿಗ್ಗೆ ಹನ್ನೊಂದು ಗಂಟೆಯಿಂದ ಸಮಾರಂಭ ಪ್ರಾರಂಭವಾದದ್ದು ರಾತ್ರಿ ಎರಡುವರೆ ಗಂಟೆಯುವರೆಗೂ ನಡೆಯಿತು. ಸಮಾರಂಭ ಮುಕ್ತಾಯವಾಗುವವರೆಗೂ ಜನರಿಂದ ಬಂದಂಥ ನೂರಾರು ಅರ್ಜಿಗಳನ್ನು ತೆಗೆದುಕೊಂಡು ಸ್ವಲ್ಪವೂ ಬೇಜಾರು ಇಲ್ಲದೆ ತಮಗೆ ದೊರೆತಿರತಕ್ಕ ಸ್ಥಾನವನ್ನು ಸದುದ್ದೇಶಪಡಿಸಿಕೊಳ್ಳುವುದಕ್ಕೆ ನಿಷ್ಠೆಯಿಂದ ಶ್ರಮಿಸುತ್ತಿದ್ದಾರೆ. ಆದರೆ ಅದರ ಫಲ ಏನಾಗಿದೆ ಎಂದರೆ, ಅವರು ಏನು ಶ್ರಮ ವಹಿಸಿದರೂ ಕೂಡ ಕಾರ್ಯಗತವಾಗುವುದಕ್ಕೆ ಮುಖ್ಯವಾಗಿ ರೆವಿನ್ಯೂ ಇಲಾಖೆ ಸರಿಯಾಗಿ ಕೆಲಸಮಾಡಬೇಕು. ದುರ್ದೈವದಿಂದ ಈಗ ಸುಮಾರು 10-15 ವರ್ಷಗಳಿಂದಲೂ ರಾಜ್ಯದಲ್ಲಿ ಈ ಇಲಾಖೆಯ ಅಧಿಕಾರಿಗಳಲ್ಲಿ ಒಂದು ರೀತಿಯ ಆಲಸ್ಯ ಮನೋಭಾವ ಬೆಳೆದು ಬಂದಿದೆ. ಬಂದಂಥ ಅರ್ಜಿಗಳನ್ನು ಪ್ರತಿಯೊಂದನ್ನೂ ಓದಿ ಬಹಳ ಮುಖ್ಯವಾದ ವಿಚಾರಗಳನ್ನು ಬರೆದು ಕೊಟ್ಟರೂ ಕೂಡ ಅವರು ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಇನ್ನೂ ಒಂದು ಮನೋಭಾವ ಬೆಳೆದಿದೆ ಏನೆಂದರೆ, ಬರ್ನಾಡಾ ಷಾ ಒಂದು ಮಾತನ್ನು ಹೇಳಿದರು. People say, what do they say, let them say. ಅದರಂತೆ ಅಧಿಕಾರಿಗಳಲ್ಲಿ ಮಂತ್ರಿ ಸೇಸ್, ಏನು ಸೇಸ್, ಲೆಟ್ ಹಿಮ್ ಸೇ ಎನ್ನತಕ್ಕ ಆಲಸ್ಯ ಮನೋಭಾವ ಬೆಳೆದಿದೆ. ಯಾವ ಕಾರ್ಯವೂ ಸರಿಯಾಗಿ ನಡೆಯುತ್ತಾ ಇಲ್ಲ. ರೆವಿನ್ಯೂ ಮಂತ್ರಿಗಳನ್ನು ನಾನು ರೈಲ್ವೆ ಡೀಸಲ್ ಎಂಜಿನ್‌ಗೆ ಹೋಲಿಸಿದ್ದೇನೆ. ಡೀಸಲ್ ಎಂಜಿನ್ ಎಷ್ಟು ವ್ಯಾಗಿನ್ ಭರ್ತಿ ಹಾಕಿದರೂ ಎಳೆಯುತ್ತದೆ, ಆದರೆ ಸ್ಪೀಡ್ ಕಡಿಮೆ. ಆದ್ದರಿಂದ ಮಾನ್ಯ ಮಂತ್ರಿಗಳು ಡೀಸಲ್ ಎಂಜಿನ್ ಆಗುವ ಬದಲು ಎಲೆಕ್ಟ್ರಿಕ್ ಎಂಜಿನ್ ಆದರೆ ಒಳ್ಳೆಯದು. ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ, ಏನು ಮಾಡಬೇಕೋ ಅದು ನೆರವೇರದೆ ಹೋದರೆ, ಬಹಳ ಕಷ್ಟವಾಗುತ್ತದೆ. ಎಲ್ಲಕ್ಕಿಂತಲೂ ಮೇಲಾಗಿ 10-15 ವರ್ಷಗಳಿಂದ ರಾಜ್ಯದಲ್ಲಿ ಬೆಳೆದು ಬಂದಿರತಕ್ಕ ಭ್ರಷ್ಟಾಚಾರ ಏನು ಇದೆ ಅದನ್ನು ತಪ್ಪಿಸದೆ ಹೋದರೆ ಯಾವ ಕಾರ್ಯವೂ ಆಗುವುದಿಲ್ಲ. ರೆವಿನ್ಯೂ ಇಲಾಖೆ ಬಹಳ ಮುಖ್ಯವಾದ ಇಲಾಖೆ, ಯಾವ ಸರ್ಕಾರಕ್ಕೆ ಆಗಲೀ ಕೀರ್ತಿಯಾಗಲೀ ಅಪಕೀರ್ತಿಯಾಗಲೀ ಬರಬೇಕಾದರೆ ಮುಖ್ಯವಾಗಿ ಈ ಭ್ರಷ್ಟಾಚಾರ ಎನ್ನುವುದು ಉಂಗುಷ್ಟದಿಂದ ನೆತ್ತಿಯುವರೆಗೂ ಬೆಳೆದು ಹೋಗಿದೆ, ಅದು ಹೋಗಬೇಕು. ಹಿಂದೆ ಏನು ದೊಡ್ಡ ದೊಡ್ಡ ಅಧಿಕಾರಿಗಳಾಗಿ ಹೋದಂಥವರು, ಮಂತ್ರಿಗಳಾದಂಥವರು ಭ್ರಷ್ಟಾಚಾರದಲ್ಲಿ ಪರಿಣಿತರು ಆಗಿದ್ದರು ; ಎನ್ನುವುದಕ್ಕೆ ಅನೇಕ ನಿದರ್ಶನಗಳು ಇವೆ. ಅನೇಕ ಅಧಿಕಾರಿಗಳು ಹಿಂದೆ ಹೋದಂಥ ಮಂತ್ರಿಗಳು, ಏನು ಆಸ್ತಿ ಮಾಡಿದ್ದಾರೆ ಎನ್ನುವುದು ಎಲ್ಲರಿಗೂ ಕಣ್ಣಿಗೆ ಕಾಣುತ್ತಾ ಇದೆ. ಅವರಿಗೆ ಬರತಕ್ಕ ಲಂಚ ದೋಷಪೂರಿತವಾದಂಥಾದ್ದು ಅಲ್ಲ. ಕಾರಣ ಸಮಾಜದಲ್ಲಿ ಇರತಕ್ಕ ಅನೇಕ ಸಮಾಜಘಾತುಕರು ನೂರಾರು ಜನರ ತಲೆ ಹೊಡೆದು ಅವರ ಪಾಪವನ್ನು ವಹಿಸಿ ಕೊಂಡು ಲಂಚ ಕೊಟ್ಟು ಅವರು ತಮ್ಮ ಪ್ರಭಾವವನ್ನು ಸಮಾಜದಲ್ಲಿ ಪ್ರತಿಷ್ಠೆಯನ್ನು ಹೊಂದಿ ಯಾವ ಸರ್ಕಾರ ಬಂದರೂ ಬಳಸಿಕೊಂಡು ಹೋಗತಕ್ಕ ಅನೇಕ ಸಾಮಾನ್ಯ ಸಮಾಜಘಾತುಕರು ಈ ದೇಶದಲ್ಲಿದ್ದಾರೆ. ಆದರೆ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಅಧಿಕಾರಿಗಳಿಗೆ ನೇರವಾದ ಸಂಪರ್ಕಬರತಕ್ಕದ್ದು ಬಡ ರೈತರದ್ದು. ಇವತ್ತು ಬಡ ರೈತರಿಗೆ ತಾಲ್ಲೂಕು ಮಟ್ಟದಲ್ಲಿ ಒಂದು ನ್ಯಾಯವಾದ ಆಸೆ ಆಕಾಂಕ್ಷೆಗಳನ್ನು ಈಡೇರಿಸಿ ಅವರಿಗೆ ಒಳ್ಳೆಯ ಆಡಳಿತ ತೋರದೆ ಇದ್ದರೆ ಖಂಡಿತವಾಗಿಯೂ ರಾಜ್ಯಕ್ಕೂ ಸರ್ಕಾರಕ್ಕೂ ಒಳ್ಳೆಯ ಸ್ಥಾನ, ಶ್ರೇಯಸ್ಕರವಾದ ಸ್ಥಾನ ಸಿಕ್ಕುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಭ್ರಷ್ಟಾಚಾರದ ಬಗ್ಗೆ ತಕ್ಕ ಕ್ರಮ ತೆಗೆದು ಕೊಳ್ಳಬೇಕು ಎಂದು ಹೇಳುತ್ತೇನೆ. The definition of Bhrashtachara is the bribe taken below the table. ಈಗ ಅಧಿಕಾರಿಗಳು ಒಳ್ಳೆಯ ಶಿಷ್ಟಾಚಾರರಾಗಿದ್ದಾರೆ. ಎಂದರೆ ರಾಜಾರೋಷವಾಗಿ ಟೇಬಲ್ ಮೇಲೆ ದುಡ್ಡು ಕೊಟ್ಟರೆ ಕೆಲಸಮಾಡತಕ್ಕ ಪದ್ಧತಿಯಾಗಿದೆ. ಏನಾದರೂ ದುಡ್ಡು ಕೊಡುವುದನ್ನು ತಡಮಾಡಿದರೆ ಜೇಬಿಗೆ ಕೈಹಾಕಿ

ತೆಗೆದುಕೊಂಡು ಕೆಲಸ ಮಾಡುವ ಪದ್ಧತಿಯಾಗಿದೆ. ಆದ್ದರಿಂದ ಹಿಂದೆ ನಾನು ಒಂದು ರೆಸಲ್ಯೂಷನ್ ಕೊಟ್ಟಿದ್ದೇನೆ, ಏನೆಂದರೆ ಶಾಸಕರಿಗೆ ತಾಲ್ಲೂಕು ಕಚೇರಿಗಳಲ್ಲಿ ಸ್ಥಳಾವಕಾಶ ಕಲ್ಪಿಸಿಕೊಟ್ಟರೆ ಅವರು ಒಂದೆರಡು ಗಂಟೆ ಅಲ್ಲಿಯು ಕೆಲಸವನ್ನು ನೋಡುವುದರಿಂದ ಜನಕ್ಕೆ ಅನುಕೂಲವಾಗುತ್ತದೆ, ಅದಕ್ಕಾಗಿ ಅಲ್ಲಿ ಒಬ್ಬ ರಿಸೆಪ್‌ಷನಿಷ್ಟ್ ನೇಮಿಸಿ ಎಂದು ಹೇಳಿದೆ, ಅದಕ್ಕೆ ಮಾನ್ಯ ಸಚಿವರು ಒಪ್ಪಲಿಲ್ಲ.

ಇನ್ನು ಎರಡನೆಯದು, ಲ್ಯಾಂಡ್ ಗ್ರಾಂಟ್ ಕಮಿಟಿ ಅಂತ ಏನು ಮಾನ್ಯ ರೆವಿನ್ಯೂ ಮಂತ್ರಿಗಳು ಮಾಡಿದ್ದಾರೆ. ಆ ಕಮಿಟಿಗಳಿಗೆ ಬೇಕಾದಷ್ಟು ಅಧಿಕಾರವಿಲ್ಲ, ಏನೇ ಆದರೂ ಅವು ಕೇವಲ ಅಡ್ವೈಜರಿ ಕಮಿಟಿಗಳಾಗಿ ಕೆಲಸ ಮಾಡುತ್ತಿವೆ. ಲ್ಯಾಂಡ್ ಗ್ರಾಂಟ್ ಕಮಿಟಿಯಲ್ಲಿ ಒಂದು ಅವೇಲಬಲ್ ಲ್ಯಾಂಡ್ ಲಿಸ್ಟ್ ಮಾಡುತ್ತಿದ್ದಾರೆ. ಪ್ರತಿ ಊರಿಗೂ ಬೇರೆ ಲಿಸ್ಟ್ ಮಾಡಿದ್ದಾರೆ. ಅದರಲ್ಲಿ ಕೆಲವು ಒಮಿಷನ್ ಮಾಡಿ ಇನ್ನು ಕೆಲವನ್ನು ಸೇರಿಸುತ್ತಿದ್ದಾರೆ. ಆ ಕಮಿಟಿಯಲ್ಲಿ ತೀರ್ಮಾನ ಮಾಡಿದ್ದನ್ನು ಆ ಕಮೀಷನ್‌ರವರು ತಮಗೆ ಬೇಡವಾದದ್ದನ್ನು ವಜಾ ಮಾಡಿ, ತಮಗೆ ಯಾವುದು ಬೇಕೋ ಅದನ್ನು ಮಂಜೂರು ಮಾಡುತ್ತಾರೆ. ಹೀಗಾಗಿ ಲ್ಯಾಂಡ್ ಗ್ರಾಂಟ್ ಕಮಿಟಿಗಳಿಗೆ ಇರತಕ್ಕ ಅಧಿಕಾರ ಮೊಟಕು ಆಗುತ್ತಿದೆ. ಆದುದರಿಂದ ಕಮಿಟಿಯಲ್ಲಿ ತೀರ್ಮಾನ ಮಾಡಿದ ಮೇಲೆ ಅವರಿಗೆ ತಹಸೀಲ್ದಾರರು ಸಾಗುವಳಿ ಚೀಟಿ ಕೊಡುವಂಥ ಅಧಿಕಾರವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಸೆಕ್ರೆಟರಿ ಮತ್ತು ವಿಲೇಜ್ ಅಕೌಂಟೆಂಟ್ಸ್‌ಗಳನ್ನು ಏನು ನೇಮಿಸಿದ್ದಾರೆ, ಅವರ ಕಾರ್ಯವನ್ನು ಹಿಂದೆ ಶ್ಯಾನುಭೋಗರು ಮನೆತನದ ಗೌರವವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಅದನ್ನು ತಪ್ಪಿಸಿ ಸೆಕ್ರೆಟರಿಗಳ ಸೈನ್ಯವನ್ನು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ನೇಮಿಸಿದ್ದಾರೆ. ಅವರಿಂದ ಖಂಡಿತವಾಗಿ ಒಳ್ಳೆಯ ಕೆಲಸ ಆಗುತ್ತಿಲ್ಲ. ಅವರು ಹಳ್ಳಿಯಲ್ಲಿ ರಾಜಕೀಯ ಮಾಡುತ್ತಿದ್ದಾರೆಯೇ ಹೊರತು ಸರ್ಕಾರಿ ಕೆಲಸ ನಡೆಯುತ್ತಾ ಇಲ್ಲ. ಆದುದರಿಂದ ಮೊದಲು ಅವರನ್ನು ಆಯಾಯ ತಾಲೂಕುಗಳಿಂದ ಬೇರೆ ಜಿಲ್ಲೆಗಳಿಗೆ ವರ್ಗ ಮಾಡಿದರೆ ಕಾರ್ಯ ಸುಸೂತ್ರವಾಗಿ ನಡೆಯುತ್ತದೆ. ಯಾರು ಹಣವನ್ನು ತಂದಿದ್ದಾರೋ ಅವರನ್ನು ಕೇವಲ ಡಿಸ್‌ಮಿಸ್ ಆಗಲೀ, ಸಸ್‌ಪೆಂಡ್ ಆಗಲೀ ಮಾಡದೆ ಕಠಿಣವಾದ ಶಿಕ್ಷೆ ಕೊಡಬೇಕೆಂದು ತಮ್ಮನ್ನು ಪ್ರಾರ್ಥಿಸಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಅಂದಾನಪ್ಪ (ಹಡಗಲಿ) :—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಕಂದಾಯ ಮಂತ್ರಿಗಳು ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ಒಂದೆರಡು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ರೈತನಿಗೆ ಅತಿ ಮುಖ್ಯವಾಗಿ ಡಾಕ್ಯುಮೆಂಟ್ ಎಂದರೆ ರಶೀತಿ ಪಟ್ಟಿ, ರಶೀತಿ ಪಟ್ಟಿದಲ್ಲಿ ರೈತನಿಗೆ ಏನು ಏನು ಜಮೀನು ಇದೆ, ಅವನು ಎಷ್ಟು ಕಂದಾಯ ಕೊಡಬೇಕು, ಡಿಮ್ಯಾಂಡ್ ಎಷ್ಟು, ಕಲೆಕ್ಷನ್ ಎಷ್ಟು ಆಗಿದೆ ಮತ್ತು ಬಾಕಿ ಎಷ್ಟು ಉಳಿದಿದೆ ಇಷ್ಟೆಲ್ಲಾ ಡೀಟೇಲ್ಸ್ ರಶೀತಿ ಪಟ್ಟದಲ್ಲಿ ಬರೆದುಕೊಡತಕ್ಕಂಥ ನಿಯಮವನ್ನು ರೆವಿನ್ಯೂ ಮಂತ್ರಿಗಳು ಎಲ್ಲಾ ಅಧಿಕಾರಿಗಳಿಗೂ ತಿಳಿಸಬೇಕು. ಏತಕ್ಕೆಂದರೆ ಅದು ಕನ್ನಡಿ ಇದ್ದ ಹಾಗೆ. ಆ ರಶೀತಿ ಪಟ್ಟ ತೆಗೆದುಕೊಂಡು ನೋಡಿದರೆ ಅವನ ಆಸ್ತಿ ಎಷ್ಟು, ಅವನು ಕೊಡಬೇಕಾದ ಕಂದಾಯ ಬಾಕಿ ಎಷ್ಟು ಎಂಬುದು ಗೊತ್ತಾಗಬೇಕು. ರೈತ ಸರ್ಕಾರದ ವತಿಯಿಂದ ಎಷ್ಟು ಸಾಲ ಪಡೆದಿದ್ದಾನೆ, ಸಾಲದ ಕಂತು ಯಾವಾಗ ಕೊಡಬೇಕು, ಎಷ್ಟು ಬಾಕಿ ಇದೆ ಎಂಬುದು ಆ ರಶೀತಿ ಪಟ್ಟದಲ್ಲಿ ನಮೂದಿಸಿ ಕೊಟ್ಟರೆ ಒಳ್ಳೆಯದಾಗುತ್ತದೆ. ಸಾಲ ಎಷ್ಟು ತೆಗೆದುಕೊಂಡಿದ್ದಾನೆ ಎಷ್ಟು ವಾಪಸ್ಸು ಕೊಡಬೇಕೆಂಬ ಮಾಹಿತಿ ಅರಿವು ಆಗುತ್ತದೆ. ರೈತ ತೆಗೆದುಕೊಳ್ಳತಕ್ಕ ಸಾಲವನ್ನು ಕೂಡ ನಮೂದು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಒಟ್ಟು ದೇಶದಲ್ಲಿ 45 ಲಕ್ಷ ಪಟ್ಟಿದಾರರು ಇದ್ದು ಈಗಾಗಲೇ 3 ವರ್ಷದ ಅವಧಿಯಲ್ಲಿ 11 ಲಕ್ಷ ಪಟ್ಟಿಗಳ ವಿತರಣೆ ಆಗಿದೆಯೆಂದು ಮಾಹಿತಿ ಬಂದಿದೆ. ಈ ಸರ್ಕಾರ

ಅಸ್ತಿತ್ವಕ್ಕೆ ಬಂದ ಕೇವಲ 10 ತಿಂಗಳಲ್ಲಿ 27 ಲಕ್ಷ ಪಟ್ಟಿಗಳ ವಿತರಣೆ ಆಗಿವೆ. ರೆವಿನ್ಯೂ ಮಂತ್ರಿಗಳು ಅಧಿಕಾರ ತೆಗೆದುಕೊಂಡಮೇಲೆ ರೆವಿನ್ಯೂ ಇಲಾಖೆಯಲ್ಲಿ ಸ್ವಲ್ಪ ಚುರುಕು ಉಂಟು ಮಾಡಿದ್ದಾರೆ ಎಂದು ಭಾಸವಾಗುತ್ತದೆ. ರೆವಿನ್ಯೂ ಇಲಾಖೆಯು ಬಹಳ ಹಳೆಯ ಇಲಾಖೆ, ಅವರು ಮೊಂಡು ಬಿಂದಿದ್ದಾರೆ. ಮೊಂಡು ಎತ್ತುಗಳು ಉಳುವಾಗ ಹಾಗೆಯೇ ಮಲಗಿ ಬಿಡುತ್ತವೆ. ಅವನ್ನು ಎಬ್ಬಿಸಬೇಕಾದರೆ ಚುಚ್ಚಿ ಎಬ್ಬಿಸಬೇಕಾಗುತ್ತದೆ. ಈ ಅಧಿಕಾರಿಗಳು ಕೂಡ ಬಹಳ ವರ್ಷಗಳಿಂದ ಮೊಂಡು ಬಿದ್ದಿದ್ದಾರೆ, ಇದನ್ನು ಗಮನದಲ್ಲಿಟ್ಟುಕೊಂಡು ಇಲಾಖೆಯಲ್ಲಿ ಕೆಲಸ ಮಾಡುವಂಥ ಅಧಿಕಾರಿಗಳಿಗೆ ಸ್ವಲ್ಪ ಚುರುಕು ಉಂಟು ಆಗುವಂತೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ರೈತ ಖಾತೆಗೆ ಅರ್ಜಿ ಹಾಕಬೇಕಾದರೆ ಅವನು ಎಲ್ಲಾ ಕೆಲಸಕಾರ್ಯಗಳನ್ನು ಬಿಟ್ಟು ತಾಲ್ಲೂಕ್ ಆಫೀಸಿಗೆ ಬಂದು ದಿವಸಗಟ್ಟಲೆ ಕಾಯುವುದಕ್ಕೆ ಆಗುವುದಿಲ್ಲ. ಅರ್ಜಿ ತೆಗೆದುಕೊಳ್ಳುವಾಗ ಅದರ ಜೊತೆಯಲ್ಲಿ 25 ಪೈಸೆ ಪೋಸ್ಟಲ್ ಸ್ಟಾಂಪ್ ತೆಗೆದುಕೊಂಡು ಅಧಿಕಾರಿಗಳು ರೆಡಿ ಆದಮೇಲೆ ಪೋಸ್ಟ್ ಮುಖಾಂತರ ಕಳುಹಿಸಿಕೊಡುವ ನೀತಿಯನ್ನು ಅನುಸರಿಸಬೇಕೆಂದು ರೆವಿನ್ಯೂ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಖಾತೆ ಅರ್ಜಿಯನ್ನು ಮೂರು ತಿಂಗಳಲ್ಲಿ ವಿಲೇವಾರಿ ಮಾಡಬೇಕೆಂದು ಇದೆ. ಈಗ ತಿಂಗಳುಗಟ್ಟಲೆ ಯಾಗುತ್ತಿದೆ. ಇದನ್ನು ತಪ್ಪಿಸಬೇಕಾದರೆ 25 ಪೈಸೆ ಸ್ಟಾಂಪ್ ಕೊಟ್ಟರೆ ಅದರ ಕಾಪಿ ನೇರವಾಗಿ ಪೋಸ್ಟಲ್ ಮುಖಾಂತರ ತಲಪುವಂತೆ ಏರ್ಪಾಟು ಮಾಡಬೇಕು ಅಂತ ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ಅಕ್ವಿಜಿಷನ್ ವಿಚಾರದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದ ಹಾಗೆ 20–22 ವರ್ಷಗಳಾದರೂ ಅಕ್ವಿಜಿಷನ್ ಕ್ರಮ ಪೂರ್ತಿಯಾಗಿಲ್ಲ. ಹೀಗಿರುವಾಗ ಅದಕ್ಕೆ ಒಂದು ಮಿತಿಯನ್ನು ಹಾಕಬೇಕು. ಇಷ್ಟೇ ತಿಂಗಳಲ್ಲಿ ಅಕ್ವಿಜಿಷನ್ ಕ್ರಮವನ್ನು ಮುಗಿಸಬೇಕು. ಅದಕ್ಕಿಂತ ಹೆಚ್ಚು ಸಮಯವಾದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶಿಕ್ಷೆ ವಿಧಿಸಬೇಕು. ಅಧಿಕಾರಿಗಳನ್ನು ತೃಪ್ತಿ ಮಾಡದೇ ಹೊರತು ವರ್ಷಾನುಗಟ್ಟಲೇ ಆದರೂ ಅಕ್ವಿಜಿಷನ್ ಅಮೌಂಟ್ ಸಿಕ್ಕುವುದಿಲ್ಲ. ಬಹಳ ನಷ್ಟ ಆಗುವ ಸಂಭವ ಇದೆ. ಆದುದರಿಂದ ಅಕ್ವಿಜಿಷನ್ ಕೇಸನ್ನು ಬೇಗನೇ ಇತ್ಯರ್ಥ ಮಾಡುವ ಏರ್ಪಾಡು ಮಾಡಬೇಕು.

ಇನ್ನು ಗೋಮಾಳ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ರೈತ ತನ್ನ ಗೋ ಸಂಪತ್ತು ಹೆಚ್ಚು ಮಾಡಬೇಕಾದರೆ ಕುರಿ, ಮೇಕೆ ಜಾಸ್ತಿ ಮಾಡಿಕೊಳ್ಳಬೇಕೆಂದರೆ, ಇಂದು ಸರ್ಕಾರದ ಪಾಲಿಸಿ ಇರುವಾಗ ಗೋಮಾಳ ಅನೇಕ ಊರುಗಳಲ್ಲಿ ಅನೇಕರು ಅಕ್ರಮವಾಗಿ ಸಾಗುವಳಿ ಮಾಡಿಕೊಂಡಿದ್ದಾರೆ. ಕುರಿ, ಮೇಕೆ ಸಾಕುವುದೇ ಕಷ್ಟವಾಗಿದೆ. ಯಾರು ಅಕ್ರಮ ಜಮೀನು ಸಾಗುವಳಿ ಮಾಡುತ್ತಾರೆ. ಅವರಿಂದ ಬಿಡುಗಡೆ ಮಾಡುವುದಕ್ಕೋಸ್ಕರವಾಗಿ ಕ್ರಮ ಕೈಗೊಳ್ಳಬೇಕೆಂದು ರೆವಿನ್ಯೂ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಜಮಾಬಂದಿಗಳಿಗೆ ಹಿಂದೆ ಡೆಪ್ಯುಟಿ ಕಮೀಷನ್‌ರವರು ವರ್ಷವರ್ಷ ಹೋಬಳಿಗಳಿಗೆ ಹೋಗುತ್ತಿದ್ದರು. ಅಲ್ಲಿ ರೈತರ ಕಷ್ಟ ಸುಖಗಳನ್ನು ವಿಚಾರಣೆ ಮಾಡುತ್ತಿದ್ದರು. ಪ್ರತಿಯೊಂದು ಹೋಬಳಿಯಲ್ಲಿ ಎಲ್ಲರೂ ಸೇರಿಕೊಂಡು ಖಾತೆ ಬದಲಾವಣೆ ಮಾಡುವುದಾಗಲೀ, ದರಖಾಸ್ತು ಮಂಜೂರು ಮಾಡುವುದಾಗಲೀ ಇಂಥ ಸಣ್ಣ ಸಣ್ಣ ಕೆಲಸಗಳನ್ನು ಜಮಾಬಂದಿ ಕಾಲದಲ್ಲಿ ಮಾಡುತ್ತಿದ್ದರು. ಇದನ್ನು ಈಗ ನಿಲ್ಲಿಸಿದ್ದಾರೆ. ಇದನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಜಿಲ್ಲಾಧಿಕಾರಿಗಳ ಹುದ್ದೆಗೆ ಐ.ಎ.ಎಸ್. ಅಧಿಕಾರಿಗಳನ್ನು ಅನೇಕ ಕಡೆ ಹಾಕಿದ್ದನ್ನು ನೋಡಿದ್ದೇನೆ. ಕೆಲವರಿಗೆ ಕನ್ನಡವೇ ಬರುವುದಿಲ್ಲ. ಜಿಲ್ಲಾಧಿಕಾರಿಗಳ ಹುದ್ದೆ ಬಹಳ ಜವಾಬ್ದಾರಿಯ ಹುದ್ದೆ. ಹಳ್ಳಿಯ ರೈತರು ತಿಳುವಳಿಕೆ ಕಡಿಮೆ ಇರುವ ರೈತರು, ಅವಿದ್ಯಾವಂತರು ಹಳ್ಳಿಯಿಂದ ಬರತಕ್ಕ ಜನ, ಜಿಲ್ಲಾಧಿಕಾರಿಗಳ ಹತ್ತಿರ ಹೋಗುತ್ತಾರೆ. ಆದುದರಿಂದ ಜಿಲ್ಲಾಧಿಕಾರಿಗಳ ಹುದ್ದೆ

ಯನ್ನು ನೇಮಿಸುವಾಗ ರೂರಲ್ ಬ್ಯಾಕ್‌ಗ್ರೌಂಡ್ ಇರತಕ್ಕ ಒಬ್ಬ ಅಧಿಕಾರಿಯನ್ನು ಜನಸಾಮಾನ್ಯರ ಕಷ್ಟಸುಖಗಳನ್ನು ಅರಿತುಕೊಂಡು ಅರ್ಜಿಗಳನ್ನು ಆದಷ್ಟು ಬೇಗ ವಿಲೇವಾರಿ ಮಾಡುವ ಅಧಿಕಾರಿಗಳನ್ನು ಅಲ್ಲಿ ಹಾಕಬೇಕು. ಒಂದು ಇನ್‌ಸ್ಟೆನ್ಸ್ ಜ್ಞಾಪಕಕ್ಕೆ ಬರುತ್ತದೆ. ಜಿಲ್ಲಾಧಿಕಾರಿಗಳು ಜಮಾಬಂದಿಗೆ ಬರುವ ಮುನ್ನ ಊಟದ ವೇಳಾಪಟ್ಟಿಯನ್ನು ಕಳುಹಿಸಿಕೊಟ್ಟರು. ಅದರ ಜೊತೆಗೆ ಪಲ್ಲಂಗ ತರಕಾರಿ ಕೂಡ ಕೇಳುತ್ತಿದ್ದರು. ಪಲ್ಲಂಗ ತರಕಾರಿ ಎಂದರೆ ಮಂಚದ ತರಕಾರಿ ಎಂದು ಅರ್ಥ. ಆದುದರಿಂದ ಇಂಥ ಪಲ್ಲಂಗ ತರಕಾರಿಯನ್ನು ಕೇಳತಕ್ಕಂಥ ಜಿಲ್ಲಾಧಿಕಾರಿಗಳನ್ನು ನೇಮಿಸಿಕೊಳ್ಳಬೇಡಿ. ರೈತರ ಕಷ್ಟಸುಖಗಳನ್ನು ಅರಿತುಕೊಂಡು ಕೆಲಸಮಾಡತಕ್ಕ ರೂರಲ್ ಬ್ಯಾಕ್‌ಗ್ರೌಂಡ್ ಇರತಕ್ಕ ಜಿಲ್ಲಾಧಿಕಾರಿಗಳನ್ನು ನೇಮಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸರ್ವೆ ಇಲಾಖೆಯ ಬಗ್ಗೆ ಹೇಳುವುದಾದರೆ ಸರ್ವೆ ಇಲಾಖೆಯಲ್ಲಿ ಸಿಬ್ಬಂದಿ ವರ್ಗ ಬಹಳ ಕಡಿಮೆ ಇದೆ. ರೈತ ಜಮೀನನ್ನು ಹದ್ದುಬಸ್ತು ಮಾಡಿ ತೋರಿಸಿ ಕೊಡಿ ಎಂದರೆ ವರ್ಷಗಟ್ಟಲೆಯಾದರೂ ಆಗುವುದಿಲ್ಲ. ತಾಲ್ಲೂಕ್ ಆಫೀಸಿನಲ್ಲಿ ಒಬ್ಬ ಸೂಪರ್‌ವೈಜರ್ ಇರುತ್ತಾರೆ. ಒಬ್ಬ ಸೂಪರ್‌ವೈಜರ್ ಇಷ್ಟೂ ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಸಿಬ್ಬಂದಿ ವರ್ಗವನ್ನು ಜಾಸ್ತಿ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮುಜರಾಯಿ ಇಲಾಖೆ, ಸರ್ವೆ ಇಲಾಖೆ ಮತ್ತು ಡೆವೆಲಪ್‌ಮೆಂಟ್ ಇಲಾಖೆ ಈ ಇಲಾಖೆಗಳಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಒಂದು ಬಡ್ತಿ ಸಿಗಲಿಕ್ಕೆ ಅವಕಾಶ ಬಹಳ ಕಡಿಮೆ. ಆದುದರಿಂದ ಈ ಸಮಯದಲ್ಲಿ ಒಂದು ಸಲಹೆ ಮಾಡುತ್ತೇನೆ. ಈ ಮೂರು ಇಲಾಖೆಯನ್ನು ರೆವಿನ್ಯೂ ಜೊತೆಗೆ ಇಂಟರ್ ಡಿಪಾರ್ಟ್‌ಮೆಂಟ್ ಟ್ರಾನ್ಸ್‌ಫರ್‌ಮಾಡುವುದರಿಂದ ಇಲಾಖೆಯವರಿಗೆ ಆದಷ್ಟು ಜಾಗ್ರತೆ ಬಡ್ತಿ ಸಿಗುವಂತೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಮುಜರಾಯಿ ಇಲಾಖೆ, ರೆವಿನ್ಯೂ ಇಲಾಖೆ, ಸರ್ವೆ ಇಲಾಖೆ ಅಧಿಕಾರಿಗಳಾಗಿ ವರ್ಗಮಾಡಿ ಅವರಿಗೆ ಆದಷ್ಟು ಜಾಗ್ರತೆ ಬಡ್ತಿ ಸಿಗುವ ಅವಕಾಶ ಮಾಡಿಕೊಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಬೆಂಗಳೂರು ಸುತ್ತಮುತ್ತ ಇರತಕ್ಕಂಥ ಮುಜರಾಯಿ ದೇವಸ್ಥಾನಗಳು ಏನು ಇವೆ ಅದಕ್ಕೆ ಸೇರಿರತಕ್ಕಂಥ ಜಮೀನುಗಳನ್ನು ಅನೇಕರು ಅಕ್ರಮ ಸ್ವಾಧೀನ ಪಡೆದುಕೊಂಡು ಲಕ್ಷಾಂತರ ಬೆಲೆ ಬಾಳತಕ್ಕಂಥ ಬಿಲ್ಡಿಂಗ್‌ಗಳನ್ನು ಕಟ್ಟಿಕೊಂಡು ಅನುಭವಿಸುತ್ತಿದ್ದಾರೆ. ಆದುದರಿಂದ ಇದನ್ನು ಸರ್ಕಾರದವರು ಬಿಡಿಸಿಕೊಂಡು ಅದನ್ನು ನೀವೇ ಉಳಿಸಿಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಒಂದು ವಿಷಯ ಹೇಳುವುದಾದರೆ ನಾನು ನಂಜನಗೂಡಿಗೆ ನಂಜುಂಡೇಶ್ವರನ ದರ್ಶನ ಮಾಡುವುದಕ್ಕೆ ಹೋಗಿದ್ದೆ. ಆವಾಗ ಬಾಗಿಲಲ್ಲೆ ಕೇಳಿದರು ನಿಮ್ಮಲ್ಲಿ ಎಷ್ಟು ತೆಂಗಿನ ಕಾಯಿ ಇದೆ ಎಂದು, ನನ್ನ ಹತ್ತಿರ ಎರಡು ತೆಂಗಿನ ಕಾಯಿ ಇತ್ತು, ಹೇಳಿದೆ, ಅದಕ್ಕೆ ಟಿಕೆಟ್ ತೆಗೆದು ಕೊಂಡು ಹೋಗಬೇಕು ಎಂದು ಹೇಳಿದರು. ಅಲ್ಲಿಂದ ಮುಂದೆ ಇನ್ನೊಬ್ಬರು ಕೇಳಿದರು ಪೂಜೆಗೆ ಏನು ತಂದಿದ್ದೀರಿ ಎಂದು, ಬಾಳೆಹಣ್ಣು ತಂದಿದ್ದೇನೆ ಎಂದು ಹೇಳಿದೆ. ಅದಕ್ಕೆ ಟಿಕೆಟ್ ತೆಗೆದುಕೊಳ್ಳಬೇಕು ಎಂದು ಹೇಳಿದರು. ಅಲ್ಲಿಂದ ಮುಂದೆ ಹೋದರೆ ಪೂಜಾರಿಗಳ ಕೈವಾಡ ಅಲ್ಲಿ ಇದೆ. ದಕ್ಷಿಣೆ ಕೊಡಿ ಎಂದು ಕೇಳುತ್ತಾರೆ. ಹೀಗಾಗಿ ದೇವರ ದರ್ಶನ ಮಾಡಬೇಕಾದರೆ ಇಷ್ಟೊಂದು ತ್ರಾಸವಾಯಿತು. ಮೊದಲು ದೇವರನ್ನು ತೋರಿಸಿ ಆಮೇಲೆ ನಿಮ್ಮ ದಕ್ಷಿಣೆ ಕೊಡುತ್ತೇನೆ ಎಂದು ಹೇಳಿದೆ. ಹೀಗೆ ದೇವರನ್ನು ನೋಡಬೇಕಾದರೂ ಕೂಡ ಮುಂಚೆ ದಕ್ಷಿಣೆ ಕೊಡಬೇಕು. ಆದುದರಿಂದ ಈ ಪದ್ಧತಿಯನ್ನು ಮುಜರಾಯಿ ಮಂತ್ರಿಗಳು ತಪ್ಪಿಸಬೇಕು ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) :—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಈ ಸಭೆಯ ಮುಂದೆ ತಮ್ಮ ಬೇಡಿಕೆಯನ್ನು ಏನು ಇಟ್ಟಿದ್ದಾರೆ. ಅದನ್ನು ಸಮರ್ಥನೆ ಮಾಡಿ ಕಳೆದ ವರ್ಷ ಮಾಡಿದಂಥ ಕೆಲವು ಉತ್ತಮವಾದ ಕಾರ್ಯಗಳನ್ನು ಪ್ರಶಂಸಿಸಬೇಕಾಗಿದೆ. ಈ ಬಗ್ಗೆ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ. ರೈತರ ವಿಷಯದಲ್ಲಿ, ಒಕ್ಕಲುಗಳ ವಿಷಯದಲ್ಲಿ ಅವರಿಗೆ ಇರುವ ಸಂಪೂರ್ಣ ಅನುಕಂಪವನ್ನು ತೋರಿಸಿದ್ದಾರೆ. ಅದರಲ್ಲಿ ಮೊಟ್ಟ ಮೊದಲನೆಯದಾಗಿ ಮೈಸೂರ್ ಟೆನೆಂಟ್ಸ್ ರಿಲೀಫ್ ಇನ್ ಪೇಮೆಂಟ್ ಆಫ್ ಅರಿಯರ್ಸ್ ಆಫ್ ರೆಂಟ್ ಬಿಲ್ ಈ ತಿದ್ದುಪಡಿಯನ್ನು ಮಾಡಿದ್ದಾರೆ. ನನ್ನ ಅಂದಾಜಿಗೆ ಇದು ಬಹುಶಃ ಚಾಲುಗೇಣಿ ಒಕ್ಕಲುಗಳ ಮೇಲೆ ನೂರಕ್ಕೆ ನೂರು ಪಾಲು ಅನುಕಂಪವನ್ನು ತೋರಿಸಿ ಕೊಟ್ಟಿದ್ದಾರೆ. ಬಹುಶಃ ನಮ್ಮ ರಾಜ್ಯದ ಇತಿಹಾಸದಲ್ಲಿ ಇಂತಹ ಒಂದು ರೈತರ ಹಿತವನ್ನು ಕಾಪಾಡುವುದಕ್ಕೆ, ಅವರಿಗೆ ಅನುಕಂಪ ತೋರಿಸಿದುದನ್ನು ನಾನು ಕೇಳಿರಲಿಲ್ಲ ಎಂದು ಹೇಳಬೇಕಾಗಿದೆ.

2 ನೇದಾಗಿ ರಿಕಾರ್ಡ್ ಆಫ್ ರೈಟ್ಸ್ ವಿಷಯದಲ್ಲಿ ಕೆಲವು ಸೂಚನೆಗಳನ್ನು ಸರ್ಕಾರಕ್ಕೆ ನೀಡಲು ತಯಾರಾಗಿದ್ದೇನೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಸಾಗುವಳಿ ಮಾಡತಕ್ಕಂಥ ಭೂಮಿಯಲ್ಲಿ ಶೇಕಡ 80 ರಷ್ಟು ಭೂಮಿ ಒಕ್ಕಲಿಗರ ಸ್ವಾಧೀನದಲ್ಲಿದೆ. ಆ ಶೇಕಡ 80 ರಷ್ಟರಲ್ಲಿ 60 ರಷ್ಟು ಜನಕ್ಕೆ ಗೇಣಿ ರಶೀತಿಯಾಗಲಿ, ಗೇಣಿ ಚೀಟಿಯಾಗಲಿ ಇಲ್ಲದೇ ಇರುವುದು ಇದೆ. ಭೂಮಸೂದೆಗೆ ಈಗತಾನೇ ತಿದ್ದುಪಡಿ ಬರುತ್ತಾ ಇದೆ. 1961 ರಲ್ಲಿ ಭೂಮಸೂದೆಯನ್ನು ಮಾಡುತ್ತೇವೆ ಎಂದು ಹೇಳಿ ಮಾಡದೇ ಇದ್ದುದರಿಂದ ನಮ್ಮ ಕಡೆ 10-12 ಜನ ಭೂಮಾಲೀಕರು ಈ ಬಗ್ಗೆ ಅಕ್ರಮ ಮತ್ತು ಅಕೃತ್ಯಗಳನ್ನು ನಡೆಸಿದ್ದಾರೆ. ಈ ಒಕ್ಕಲಿಗರ ಸರ್ವನಾಶ ಎಲ್ಲಿ ಆಗುಂತ್ತದೆಯೋ ಏನೋ ಎನ್ನುವುದು ಕಂಡು ಬರುತ್ತಿತ್ತು. ಈ ಬಗ್ಗೆ ರಿಕಾರ್ಡ್ ಆಫ್ ರೈಟ್ಸನ್ನು ತಯಾರು ಮಾಡುತ್ತಿದ್ದಾರೆ. ಆದುದರಿಂದ ಈಗಲಾಗದರೂ ಒಕ್ಕಲಿಗರ ಹಿತರಕ್ಷಣೆ ಮಾಡುವುದು ಅಗತ್ಯ ಎಂದು ಹೇಳುತ್ತೇನೆ. ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಾದರೆ ಈಗಾಗಲೇ ಪ್ರಿಲಿಮಿನರಿ ರಿಕಾರ್ಡ್ ತಯಾರಾಗಿದೆ. ಆದುದರಿಂದ ಈ ಬಗ್ಗೆ ಈ ಒಕ್ಕಲುತನ ನಮ್ಮದು ಆಗುತ್ತದೋ ಇಲ್ಲವೋ ಎನ್ನುವ ಸಂಶಯ ಇದೆ. ಮಾನ್ಯ ರೆವಿನ್ಯೂ ಸಚಿವರು ನಮ್ಮ ಜಿಲ್ಲೆಯಲ್ಲಿ ಸಂಚಾರ ಮಾಡಿದಾಗ ಅವರಿಗೆ ಈ ವಿಷಯವನ್ನು ತಿಳಿದಾಗ ಅವರು ಹೇಳಿದರು ಈ ರೀತಿ ಏನಾದರೂ ಅಭದ್ರತೆ ಇರುವುದಾದರೆ, ಅವರನ್ನು ಒಕ್ಕಲು ಎಬ್ಬಿಸುವುದಾದರೆ ಡೆಪ್ಯೂಟಿ ಕಮೀಷನರ್ ಮತ್ತು ಇತರ ಅಧಿಕಾರಿಗಳಿಗೆ ಹೇಳುತ್ತೇನೆ, ಇದನ್ನು ವಿಚಾರ ಮಾಡಿ ಆ ಸ್ಥಳಕ್ಕೆ ಹೋಗಿ ಮಹಜರ್ ಮಾಡಿ ಒಕ್ಕಲು ಎಬ್ಬಿಸದೇ ಇರುವ ಹಾಗೆ ಅವರಿಗೆ ಒಂದು ಭದ್ರತೆ ರಕ್ಷಣೆ ಕೊಡುವ ಹಾಗೆ ಅಧಿಕಾರಿಗಳಿಗೆ ಹೇಳುತ್ತೇನೆ ಎನ್ನುವ ಒಂದು ಆಶ್ವಾಸನೆ ನೀಡಿದ್ದಾರೆ. ಆದರೆ ರಿಕಾರ್ಡ್ ಆಫ್ ರೈಟ್ಸ್ ಮೈಸೂರು ಆಕ್ಟ್ ಪ್ರಕಾರ ರಿಕಾರ್ಡ್ ಆಫ್ ರೈಟ್ಸ್ ಇದ್ದರೂ ಅದನ್ನು ಬದಲಾವಣೆ ಮಾಡಿಸುತ್ತಾರೆ. ಆದುದರಿಂದ ಇದು ಆಗದೇ ಇರುವ ಹಾಗೆ ಒಂದು ಭದ್ರತೆ ಮಾಡಿ ಒಕ್ಕಲಿಗರಿಗೆ ಸಂಪೂರ್ಣ ರಕ್ಷಣೆ ಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಇನ್ನು ರಿಕಾರ್ಡ್ ಆಫ್ ರೈಟ್ಸ್ ವಿಷಯದಲ್ಲಿ ಹೇಳುವುದಾದರೆ ಈ ಕೆಲಸವನ್ನು ವಿಲೇಜ್ ಅಕೌಂಟೆಂಟರು ಮತ್ತು ತಾಸೀಲ್ದಾರರು ನೋಡಿಕೊಳ್ಳುತ್ತಾರೆ ಎಂದು ಹೇಳುತ್ತಾರೆ. ಅವರು ನಮಗೆ ಹೆಚ್ಚಿನ ಕೆಲಸ ಇದೆ ನಾವು ಅದರ ಬಗ್ಗೆ ಪುನರ್ವಿಮರ್ಶೆ ಮಾಡುವುದಕ್ಕೆ ಅಸಾಧ್ಯ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ನನಗೆ ಅನಿಸುವುದು ಏನೆಂದರೆ ನಮ್ಮ ಜಿಲ್ಲೆಮಟ್ಟಿಗೆ ಹೇಳಬೇಕಾದರೆ, ನಮ್ಮ ಜಿಲ್ಲೆಯಲ್ಲಿ ಒಕ್ಕಲುಗಳ ಸಂಖ್ಯೆ ಜಾಸ್ತಿ ಇರುವುದರಿಂದ ಈ ಬಗ್ಗೆ ಒಬ್ಬರು ಸ್ಪೆಷಲ್ ಅಸಿಸ್ಟೆಂಟ್, ಕಮೀಷನರನ್ನು ನೇಮಿಸಿ ಈ ಬಗ್ಗೆ ಏನು ಅಕ್ರಮ, ಅವ್ಯವಹಾರಗಳು ಏನು ನಡೆಯುತ್ತಾ ಇದೆಯೋ ಅದನ್ನು ನಿಲ್ಲಿಸಿ. ಈ

ಭೂಮಂಸೂದೆ ತಿದ್ದುಪಡಿ ಬರುವ ಮೊದಲು ಇದನ್ನು ಮಾಡದೇ ಹೋದರೆ ಈ ಒಕ್ಕಲುಗಳು ಸರ್ವನಾಶವಾಗುತ್ತದೆ. ಆದುದರಿಂದ ನಮ್ಮ ಸೌತ್ ಕೆನರಾದಲ್ಲಿ ಒಬ್ಬ ಸ್ಪೆಷಲ್ ಅಸಿಸ್ಟೆಂಟ್ ಕಮೀಷನರನ್ನು ನೇಮಿಸಿ ಇಂತಹ ಒಕ್ಕಲು ಎಬ್ಬಿಸುವ ವಿಷಯದಲ್ಲಿ, ಅಭದ್ರತೆ ಇರುವ ವಿಷಯದಲ್ಲಿ ಹೋಗಿ ತನಿಖೆ ಮಾಡಲಿ. ನನ್ನ ಒಂದು ಅನುಭವ ಹೇಳುವುದಾದರೆ ಈ ರೀತಿ ದಿನಕ್ಕೆ 10-15 ಅಕ್ರಮ ಕೆಲಸಗಳು ಆಗುತ್ತಾ ಇವೆ ಎಂದು ಕೇಳಿದ್ದೇನೆ. ಆದುದರಿಂದ ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಈ ರೆವಿನ್ಯೂ ಇಲಾಖೆಯಲ್ಲಿ ಮತ್ತು ಒಕ್ಕಲುಗಳ ಭದ್ರತೆಯನ್ನು ಒದಗಿಸುವ ವಿಷಯದಲ್ಲಿ ರೆವಿನ್ಯೂ ಇಲಾಖೆ ಮತ್ತು ಪೋಲೀಸ್ ಇಲಾಖೆ ಇವೆರಡರಲ್ಲೂ ಒಂದು ಸಮಾಲೋಚನೆ ಇರುವುದಿಲ್ಲ. ಈ ಬಗ್ಗೆ ರೆವಿನ್ಯೂ ಇಲಾಖೆಯವರಿಗೆ ಒಂದು ಹೆಚ್ಚಿನ ಅಧಿಕಾರ ಕೊಟ್ಟು ಅವರು ಪೋಲೀಸರ ಒಂದು ಸಹಕಾರವನ್ನು ಪಡೆಯುವ ದಿಶೆಯಲ್ಲಿ ರೆವಿನ್ಯೂ ಇಲಾಖೆಯವರು ಕೆಲಸಮಾಡಬೇಕು. ಈ ಬಗ್ಗೆ ಸಾಕಷ್ಟು ಅಧಿಕಾರಿಗಳನ್ನು ನೇಮಿಸಬೇಕು ಎಂದು ತಮ್ಮಲ್ಲಿ ವಿನಂತಿಸುತ್ತೇನೆ.

ಇನ್ನು ನಮ್ಮ ಸರ್ಕಾರ ಹಿಂದಿನ ಶ್ಯಾನುಭೋಗರನ್ನು ನಿವೃತ್ತಿ ಮಾಡಿ ಆ ಸ್ಥಾನಕ್ಕೆ ಹೊಸ ಕಾರ್ಯದರ್ಶಿಗಳನ್ನು ಅಂದರೆ ವಿಲೇಜ್ ಅಕೌಂಟೆಂಟರುಗಳನ್ನು ಸರ್ಕಾರ ನೇಮಿಸಿತು. ಅವರು ಯಾವ ಉದ್ದೇಶದಿಂದ ಇವರನ್ನು ನೇಮಕ ಮಾಡಿದರೋ ಅದು ಸಫಲವಾಗಲಿಲ್ಲ ಎಂದು ಹೇಳಬಹುದು. ಏತಕ್ಕೆಂದರೆ ಅವರು ಮಾಡುವ ಭ್ರಷ್ಟಾಚಾರ ಹೆಚ್ಚಾಗಿರುವುದಲ್ಲದೆ ಈಗ ರಿಕಾರ್ಡ್ ಆಫ್ ರೈಟ್ಸ್ ಏನು ಇದೆಯೋ ಅದನ್ನು ಬದಲಾವಣೆ ಮಾಡುತ್ತಾರೆ. ಈಗ ಪ್ರಿಲಿಮಿನರಿ ರಿಕಾರ್ಡ್ ಆಫ್ ರೈಟ್ಸ್ ಅವರ ಕೈಯಲ್ಲಿ ಇದೆ. ಅವರು ಈ ಒಂದು ಅಸ್ತ್ರವನ್ನು ಇಟ್ಟುಕೊಂಡು ರಿಕಾರ್ಡ್ ಆಫ್ ರೈಟ್ಸ್‌ನ್ನು ಬದಲಾಯಿಸುತ್ತಾರೆ. ಈ ರೀತಿಯಾಗಿ ಅವ್ಯವಹಾರ ನಡೆಯುತ್ತಾ ಇದೆ. ಇನ್ನು ರೈತರಿಗೆ, ಒಕ್ಕಲಿಗರಿಗೆ ನಾನಾ ರೀತಿಯಲ್ಲಿ ಅವರು ಉಪದ್ರವಗಳನ್ನು ಕೊಟ್ಟು ರೆವಿನ್ಯೂ ಇಲಾಖೆಗೆ ಒಂದು ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ. ಆದರೆ ಅವರ ಮೇಲೆ ಸ್ಪೆಸಿಫಿಕ್ ಚಾರ್ಜಸ್ ಮಾಡಿದ್ದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳು ಕಿಂಚಿತ್ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ. ಅವರನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್ ಕೂಡ ಮಾಡುವುದಿಲ್ಲ. ಅವರ ಮೇಲೆ ಡಿಸಿಪ್ಲಿನರಿ ಆಕ್ಷನ್ ಆಗಲಿ, ಸಸ್ಪೆನ್‌ಷನ್ ಆಗಲಿ ಮಾಡುವುದಿಲ್ಲ. ಈ ರೀತಿ ನಡೆದುಕೊಂಡರೂ ಕೂಡ ಯಾರೂ ಕೂಡ ನಮ್ಮ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ ಎನ್ನುವ ಮನೋಭಾವನೆ ಅವರಲ್ಲಿ ಬಂದಿದೆ. ಇದರಿಂದ ಅವರಿಗೆ ಯಾವ ರೀತಿಯಾಗಿಯೂ ಆತಂಕ ಇದ್ದಿಲ್ಲ ಎಂದು ನನಗೆ ಕಾಣುತ್ತದೆ.

ಇನ್ನು ಮುಜರಾಯಿ ಇಲಾಖೆ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಇದರಲ್ಲಿ ಸಾರ್ವಜನಿಕರ ಮತ್ತು ಪ್ರೈವೇಟ್ ದೇವಸ್ಥಾನಗಳು ಇವೆ. ಆದರೆ ಸಾರ್ವಜನಿಕರ ಹಣ, ಸಾರ್ವಜನಿಕರ ಸಂಪತ್ತು ಅವು ಕೆಲವೇ ವ್ಯಕ್ತಿಗಳ ಕೈಯಲ್ಲಿ ಇರತಕ್ಕಂಥಾದ್ದು ನಮ್ಮ ಸಮಾಜವಾದಕ್ಕೆ ವಿರುದ್ಧವಾಗಿದೆ ಎಂದು ಹೇಳುತ್ತೇನೆ. ಆದುದರಿಂದ ಮುಖ್ಯವಾಗಿ ಈ ಮುಜರಾಯಿ ದೇವಸ್ಥಾನಗಳ ಬಗ್ಗೆ ಒಂದು ಹೆಚ್ಚಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಕಳೆದ ವರ್ಷವೆಲ್ಲ ಗುಲ್ಲು ಎದ್ದಿತ್ತು, ಕೆಲವು ಮುಖ್ಯವಾದ ಪ್ರೈವೇಟ್ ದೇವಸ್ಥಾನಗಳನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು. ಇದನ್ನು ಕೇಳಿ ಎಲ್ಲರಿಗೂ ಸಂತೋಷವಾಯಿತು. ಆದರೆ ಯಾವ ಕಾರ್ಯಕ್ರಮವನ್ನೂ ಕೂಡ ನಡೆಸಿದಹಾಗೆ ನಮಗೆ ಕಾಣುವುದಿಲ್ಲ. ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಾದರೆ ಅನೇಕ ದೇವಸ್ಥಾನಗಳನ್ನು ಕಾಣುತ್ತಿದ್ದೇವೆ. ಅನೇಕ ಕಡೆ ಕೆಲವು

ದೇವಸ್ಥಾನಗಳಲ್ಲಿ ಪಬ್ಲಿಕ್ ಟೆಂಪಲ್ಸ್ ಕೂಡ ಏನಾಗಿದೆ ಎಂದರೆ ಸಾವಿರಾರು ಎಕರೆ ಜಮೀನು ದೇವಸ್ಥಾನದ ಹೆಸರಿನಲ್ಲಿದೆ. ಆದರೆ ಕೆಲವಾರು ವರ್ಷಗಳಿಂದ ಈ ದೇವಸ್ಥಾನಗಳ ಹೆಸರಿನಲ್ಲಿರುವ ಜಮೀನನ್ನು, ಸೋಮನಾಥ ದೇವಾಲಯದ ಹೆಸರಿನಲ್ಲಿರುವ ಜಮೀನನ್ನು ಅಲ್ಲಿನ ಪೂಜಾರಿಗಳು ಸೋಮನಾಥ ಭಟ್ಟ ಎಂದು ಹೆಸರು ಬದಲಾಯಿಸಿಕೊಂಡು ಅವರ ಹೆಸರಿಗೆ ಮಾಡಿಕೊಂಡಿರುವ ಉದಾಹರಣೆಗಳಿವೆ. ಇಂಥ 10-15 ಅಕ್ರಮಗಳು ನಡೆದಿವೆ. ಸರ್ಕಾರ ಇದರ ಬಗ್ಗೆ ಸೂಕ್ತವಾಗಿ ಆಲೋಚನೆಮಾಡಿ ಕಾರ್ಯಕ್ರಮ ಜರುಗಿಸಿ ಯಾವ ವ್ಯಕ್ತಿಗಳ ಹೆಸರಿಗೆ ಜಮೀನುಗಳು ಪರಭಾರೆಯಾಗಿವೆ ಅವುಗಳನ್ನು ಸರ್ಕಾರ ವಹಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಮುಜರಾಯಿ ಇಲಾಖೆ ಸ್ವಲ್ಪ ಚುರುಕಾಗಿ ಕೆಲಸ ಮಾಡುವಂತೆ ಸರ್ಕಾರ ಪ್ರಯತ್ನಿಸಬೇಕು. ನಾವು ಸಮಾಜವಾದದ ದಾರಿಯಲ್ಲಿ ನಡೆಯುತ್ತೇವೆಂದು ಹೇಳುವ ಮಾತಿಗೆ ಬೆಲೆ ಕೊಡಬೇಕಾದರೆ ಸರ್ಕಾರ ಯಾವ ಕಾರ್ಯಕ್ರಮ ನಡೆಸಬೇಕೋ ಅದನ್ನು ನಡೆಸುವುದರಲ್ಲಿ, ಸಾರ್ವಜನಿಕ ಸಂಪತ್ತನ್ನು ಸರ್ಕಾರ ವಹಿಸಿಕೊಳ್ಳುವುದರಲ್ಲಿ, ಈ ಸಮಾಜವಾದ ತತ್ವವನ್ನು ಚಲಾಯಿಸಬೇಕು, ಯಾವ ಅನುಮಾನ, ಸಂಶಯವನ್ನೂ ಪಡಬಾರದು ಎಂದು ವಿನಂತಿಸಿಕೊಳ್ಳಬೇಕಾಗಿದೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಕೆಲವು ಮಾತುಗಳನ್ನು ಮುಗಿಸುತ್ತೇನೆ.

Mr. Deputy Speaker in the chair.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್) :—ಮಾನ್ಯ ಅಧ್ಯಕ್ಷರೇ, ಈ ಡಿಮಾಂಡ್ ಮೇಲೆ ಮಾತನಾಡುತ್ತ ಕೆಲವು ವಿಚಾರಗಳನ್ನು ಸಭೆಯ ಗಮನಕ್ಕೆ ತರುತ್ತೇನೆ. ಭೂಕಂದಾಯದ ವಿಚಾರದಲ್ಲಿ ಒಂದು ಮೂಲಭೂತವಾದ ಸಮಸ್ಯೆ ಹೈದರಾಬಾದ್ ಕರ್ನಾಟಕದಲ್ಲಿ ಮತ್ತು ಬಿದರೆ ಜಿಲ್ಲೆಯಲ್ಲಿ ಬಂದಿರುವುದೇನೆಂದರೆ, ಅಲ್ಲಿ ನಾಲ್ಕೈದು ತರಹ ಲ್ಯಾಂಡ್ ರೆವಿನ್ಯೂ ಪದ್ಧತಿ ಬಂದಿದೆ. ಅದರಲ್ಲಿ ಖಾಲಸ, ಪಾಯಗ, ಜಾಗೀರ್, ಸರ್ಫೆಖಾಸ್ ಎಂಬ ಭೇದಗಳಿವೆ. ಖಾಲಸ ಎನ್ನುವುದು ಸರ್ಕಾರಿ ಜಮೀನು. ಇದಕ್ಕೆ ಒಂದು ಎಕರೆಗೆ ಒಂದು ರೂಪಾಯಿ ಕಂದಾಯ, ಪಾಯಗ ಎನ್ನುವುದಕ್ಕೆ ಒಂದು ಎಕರೆಗೆ ಮೂರು ರೂಪಾಯಿ ಕಂದಾಯ, ಜಾಗೀರ್ ಜಮೀನಿಗೆ ಒಂದು ಎಕರೆಗೆ ಆರು ರೂಪಾಯಿ ಕಂದಾಯ ಮತ್ತು ಸರ್ಫೆಖಾಸ್ ಜಮೀನು ಎಂದರೆ ನಿಜಾಮರು ತಮ್ಮ ಸ್ವಂತ ಸುಖಕ್ಕಾಗಿ ಇಟ್ಟುಕೊಂಡಿರುವ ಜಮೀನಿಗೆ ಒಂದು ಎಕರೆಗೆ 12 ರೂಪಾಯಿ ಡ್ರೈ ಲ್ಯಾಂಡ್ ರೆವಿನ್ಯೂ ರೈತರು ಕೊಡುತ್ತಿದ್ದಾರೆ. ಇಂಥ ಸನ್ನಿವೇಶವಿದೆ. ಸ್ವಾತಂತ್ರ್ಯ ಬಂದಮೇಲೆ ಇದರಲ್ಲಿ ಪರಿವರ್ತನೆಯಾಗುತ್ತದೆ ಎಂದು ಜನರಲ್ಲಿ ನಂಬಿಕೆ ಇತ್ತು. ಸರ್ಕಾರ ಅಲ್ಲಿನ ಜನರು ನೊಂದ ಜೀವಿಗಳು ಎಂದು ಅವರ ತೊಂದರೆಗಳನ್ನು ಲಕ್ಷ್ಯದಲ್ಲಿಟ್ಟು ಕೊಂಡು 25 ಪರ್ಸೆಂಟ್ ರಿಮಿಷನ್ ಕೊಡುತ್ತೇವೆ ಎಂದು ಅದರ ವಸೂಲಿ ಪೋಸ್ಟ್‌ಪೋನ್ ಮಾಡಿತು, ಆದರೆ ಅದನ್ನು ರೈಟಾಫ್ ಮಾಡಲಿಲ್ಲ. ಈಗಲಾದರೂ ಕೂಡ ರಾಜ್ಯಗಳ ಪುನರ್ವಿಂಗಡಣೆಯಾದ ಮೇಲೆ ಕೂಡ ಹೈ ಲೆವೆಲ್ ರೇಟ್ ಆಫ್ ಅಸೆಸ್‌ಮೆಂಟ್ ಏನಿದೆ ಅದನ್ನೇ ಮೇಂಟೇನ್ ಮಾಡಿಕೊಂಡು ಬಂದರು ? ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲರ ಕಾನ್‌ಸ್ಟಿಟ್ಯೂಯೆನ್ಸಿ ಅಥವಾ ಈಗಿನ ರಾಜ್ಯಸಚಿವರಾದ ಶ್ರೀ ದೇವೇಂದ್ರಪ್ಪ ಅವರ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ, ಬಂಗಾರದಂತ ಮಣ್ಣು ಇರುವ ಕಡೆ ಡ್ರೈ ಲ್ಯಾಂಡಿಗೆ ಒಂದು ಎಕರೆಗೆ ಒಂದೂವರೆ ರೂಪಾಯಿ ಕಂದಾಯವಿದೆ. ಅದೇ ನಮ್ಮ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ರೆಡ್ ರಾಕಿ ಸಾಯಿಲ್ ಇರುವ ಕಡೆ, ಹೊಂಡ ತೆಗೆಯಬೇಕಾದರೆ ಬಹಳ ಕಷ್ಟವಿರುವಕಡೆ ಅಲ್ಲಿನ ಎರಡರಷ್ಟು ಕಂದಾಯವಿದೆ. ಇದು ದುರ್ದೈವ. ಬ್ಲಾಕ್ ಕಾಟನ್ ಸಾಯಿಲ್‌ಗಿಂತ ಎರಡರಷ್ಟು

ಕಂದಾಯ ರಾಕ್ ಟೈಪ್ ಆಫ್ ಸಾಯಿಲ್ ಇರುವ ಕಡೆ ಕೊಡಬೇಕಾಗಿದೆ. ಟೇಬಲ್ ಆಫ್ ಲ್ಯಾಂಡ್ ರೆವೆನ್ಯೂ ನೋಡಿದರೆ ಮಾನ್ಯ ಮಂತ್ರಿಗಳಿಗೆ ಗೊತ್ತಾಗುತ್ತದೆ. ಇದರಲ್ಲಿ ಮಾನವೀಯ ಸಮಸ್ಯೆ ಇದೆ. ಭೂಕಂದಾಯವನ್ನು ಬಿದರೆ ಜಿಲ್ಲೆಯಲ್ಲಿ ರಿವೈಸ್ ಮಾಡಬೇಕು. ಬಿದರೆ ಡೆಪ್ಯುಟಿ ಕಮೀಷನರ ಆಫೀಸಿನಲ್ಲಿ ಐದು ಸಾವಿರಕ್ಕಿಂತ ಹೆಚ್ಚು ಅಪೀಲ್ ಅಪ್ಲಿಕೇಷನ್‌ಗಳು ಪೆಂಡಿಂಗ್ ಇವೆ. ಅಪೀಲ್ ಮಾಡುವುದಕ್ಕೆ ಶಕ್ತಿ ಇಲ್ಲದೆ ಇರುವ ಜನರಿದ್ದಾರೆ. ಈ ಹೊತ್ತು ಫ್ಯಾಮಿನ್ ಕಂಡಿಷನ್ಸ್ ಇರುವುದರಿಂದ ಹೆಚ್ಚು ಜನ ಅಪೀಲ್ ಫೈಲ್ ಮಾಡುವುದಕ್ಕೆ ಆಗಿಲ್ಲ. ಪ್ರತಿಯೊಂದು ತಾಲ್ಲೂಕಿನಿಂದ ನಾಲ್ಕೈದು ಸಾವಿರ ಅಪೀಲುಗಳು ಡೆಪ್ಯುಟಿ ಕಮೀಷನರ ಆಫೀಸಿನಲ್ಲಿ ಪೆಂಡಿಂಗ್ ಇವೆ. ಅದು ಬಹಳ ದೊಡ್ಡ ಜಿಲ್ಲೆಯಲ್ಲ, ಕೇವಲ ನಾಲ್ಕು ತಾಲ್ಲೂಕುಗಳಿವೆ. ಸರ್ಕಾರ ಮನಸ್ಸು ಮಾಡಿದರೆ ಸುಲಭವಾಗುತ್ತದೆ.

ಹತ್ತಿಪ್ಪತ್ತು ವರ್ಷದಿಂದ, ಲ್ಯಾಂಡ್‌ಲೆಸ್ ಅಗ್ರಿಕಲ್ಚರಿಸ್ಟ್ಸ್ ಮತ್ತು ಲೇಬರರ್ಸ್ ಯಾರಿದ್ದಾರೆ ಅವರು ಸರ್ಕಾರಿ ಬಂಜರು ಜಮೀನನ್ನು ಎರಡು ಎಕರೆ, ನಾಲ್ಕು ಎಕರೆ ಬಿತ್ತುಕೊಂಡಿದ್ದಾರೆ. ಅವರ ಹೆಸರಿನಲ್ಲಿ ಇನ್ನೂ ಪಟ್ಟ ಆಗಿಲ್ಲ. ಅವರ ಹೆಸರಿನಲ್ಲಿ ಆಗಬೇಕೆಂದು ಆರ್ಡರ್ ಕೊಟ್ಟರೂ ಇನ್ನೂ ಜಾರಿಗೆ ಬಂದಿಲ್ಲ. ನಮ್ಮಲ್ಲಿ ಶಿವಾಜಮಾಬಂದಿ ಎಂದು ಹೇಳುತ್ತಾರೆ ; ಅದನ್ನು ಈ ಜಮೀನಿನ ಮೇಲೆ ಹಾಕಿ ಪೆನಾಲ್ಟಿ ಹಾಕಿದ್ದಾರೆ. ಒಬ್ಬ ಎರಡು ಎಕರೆ ತನ್ನ ವಶದಲ್ಲಿಟ್ಟು ಕೊಂಡಿದ್ದರೆ ಅವನ ಹೆಸರಿನಲ್ಲಿ ನಾಲ್ಕೈದು ಸಾವಿರ ರೂಪಾಯಿ ಬಾಕಿ ಉಳಿದಿದೆ. ತಾನಾಗಿ ತಾನು ಮಾರುತ್ತೇನೆಂದರೂ ಆ ಹಣ ಬರುವುದಿಲ್ಲ, ನಿಮ್ಮಲ್ಲಿ ಆಜನ್ಮ ದುಡಿಯುತ್ತೇನೆಂದರೂ ಜಮೀನನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಆದುದರಿಂದ ಈ ಜನರ ಬಗ್ಗೆ ಸಹಾನುಭೂತಿ ಇರಬೇಕು.

ನಮ್ಮಲ್ಲಿ ಒಂದು ವೆಂಕಟೇಶ್ವರ ಖಂಡಸಾರಿ ಫ್ಯಾಕ್ಟರಿ ಇದೆ. ಅದಕ್ಕೆ ಎಷ್ಟು ಜಮೀನು ಕೊಟ್ಟಿದ್ದಾರೆಯೋ ಅದರ ಮೂರರಷ್ಟು ಜಮೀನು ಆಕ್ರಮಣ ಮಾಡಿಕೊಂಡಿದ್ದಾರೆ. ಎರಡು ಮೂರು ಎಕರೆ ಅಕ್ರಮವಾಗಿ ವಶಪಡಿಸಿಕೊಂಡಿದ್ದಾರೆಂದು ರೈತರಿಗೆ ಶಿಕ್ಷೆ ಕೊಟ್ಟಮೇಲೆ ಇನ್ನೊಂದು ಕಡೆಯೂ ಅದೇ ಕ್ರಮ ತೆಗೆದುಕೊಳ್ಳಬೇಕು ; ಪ್ರಾಸಿಕ್ಯೂಷನ್ ಮಾಡಿ ಕೇಸು ಹಾಕಬೇಕು, ವೆಂಕಟೇಶ್ವರ ಖಂಡಸಾರಿ ಫ್ಯಾಕ್ಟರಿಯವರು ಅಕ್ರಮವಾಗಿ ವಶಪಡಿಸಿಕೊಂಡಿರುವ ಜಮೀನನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ.

ನಾನು ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಇದು ಒಂದು ದೊಡ್ಡ ಪ್ರಾಬ್ಲಂ ಆಗಿದೆ. ಯಾವ ರೈತರ ಹೆಸರಿನಲ್ಲಿ ಜಮೀನು ಇದೆಯೋ ಅಂತಹವರ ಹೆಸರಿನಲ್ಲಿ ಬೇಗನೆ ಪಟ್ಟ ಮಾಡಿಕೊಡಬೇಕು. ನಮ್ಮ ಕಡೆ ಇರುವ ತಹಶೀಲು ಆಫೀಸುಗಳಲ್ಲಿ ಕಳೆದ ಇಪ್ಪತ್ತೈದು ವರ್ಷಗಳಿಂದಲೂ ಇರುವ ರಿಕಾರ್ಡುಗಳಲ್ಲಿ ಸರಿಯಾಗಿ ಹೆಸರುಗಳನ್ನೇ ಬರೆದಿರುವುದಿಲ್ಲ. ಇದರಿಂದಾಗಿ ಏನಾಗುತ್ತದೆ ಎಂದರೆ ಹಿಂದೆ ಯಾರು ಇದ್ದರೋ ಅವರು ಈಗ ಸತ್ತು ಹೋಗಿರುತ್ತಾರೆ. ಅವರ ಮಕ್ಕಳೋ, ಇಲ್ಲವೇ ಮೊಮ್ಮಕ್ಕಳೋ ವ್ಯವಸಾಯ ಮಾಡಿ ಭೂಮಿ ಮೇಲೆ ಇರುತ್ತಾರೆ. ಇಂತಹವರ ಹೆಸರಿಗೆ ಸರಿಯಾಗಿ ಸಕಾಲದಲ್ಲಿ ಪಟ್ಟ ಮಾಡದೇ ಇರುವುದರಿಂದಾಗಿ ಈಗ ಹೊಸದಾಗಿ ಪಟ್ಟ ಕೊಡುವಾಗ ರೈತರಿಗೆ ಬಹುವಾಗಿ ಹಿಂಸೆಗಳನ್ನು ರೆವೆನ್ಯೂ ಅಧಿಕಾರಿಗಳು ಕೊಡುತ್ತಿದ್ದಾರೆ. ತಹಶೀಲು ಆಫೀಸಿನಲ್ಲಿರುವ ಅಧಿಕಾರಿಗಳಿಗೆ ಮೀನು ಇಲ್ಲವೇ ಕುರಿ ಇತ್ಯಾದಿಗಳನ್ನು ಲಂಚ ರೂಪದಲ್ಲಿ ಕೊಟ್ಟರೇ ಅವರ ಕೆಲಸ, ಇಲ್ಲದೆ ಇದ್ದರೆ ರೈತರ ಯಾವ ಕೆಲಸಗಳೂ ತಹಶೀಲುದಾರರ ಆಫೀಸಿನಲ್ಲಿ ಆಗುವುದೇ ಇಲ್ಲ. ಇದಲ್ಲದೆ ಈಚೆಗೆ ರೆವೆನ್ಯೂ ಇಲಾಖೆಯವರು ವಿಲೇಜು ಅಕೌಂಟೆಂಟರುಗಳೆಂದು ಮಾಡಿರುತ್ತಾರೆ. ಇವರಿಗೆಲ್ಲಾ ಹಳ್ಳಿ ಕಡೆ ಇರುವ ರೈತರು ನೂರೊಂದು ರೂಪಾಯಿ ಕೊಡಬೇಕು. ಹಾಗೆ ಕೊಟ್ಟರೇ ಅವರ ಕೆಲಸಗಳನ್ನು ಮಾಡುತ್ತಾರೆ, ಇಲ್ಲದೇ ಇದ್ದರೆ ಇಲ್ಲಿರುವ ಯಾವ ಅಧಿಕಾರಿ ಕೂಡ ನಾನು ಹರಿಶ್ಚಂದ್ರನ ಮೊಮ್ಮಗ ಎಂದು ಸತ್ಯದಿಂದ ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದಾರೆಂದು ತಾವು

ಭಾವಿಸಿರಬಹುದು. ಇಲ್ಲಿರುವಷ್ಟು ಲಂಚದ ಹಾವಳಿ ಬೇರೆಲ್ಲೂ ಇಲ್ಲ ಎಂದು ನಾವು ಧಾರಾಳ ವಾಗಿ ಹೇಳಬಹುದು. ತಹಶೀಲುಗಳಲ್ಲಿರುವ ರೆವೆನ್ಯೂ ಇನ್‌ಸ್ಪೆಕ್ಟರವರು ರೈತರುಗಳಿಂದ ಒಂದು ಕಾಗದದ ಬಗ್ಗೆ ತೀರ್ಮಾನ ಮಾಡಿ ವರದಿ ಬರೆಯುವಾಗ ಇಂತಿಷ್ಟು ಕೊಡಬೇಕೆಂದು ಮಾಮೂಲು ಇದೆ. ನೂರು ಇಲ್ಲವೇ, ಐವತ್ತು ಅದಕ್ಕೆ ತಕ್ಕಂತೆ ರೈತರು ಕೊಡಲೇ ಬೇಕು. ನಮ್ಮ ಹುಮನಾಬಾದ್ ತಹಶೀಲು ಆಫೀಸಿನಲ್ಲಿ ಅಧಿಕಾರಿಗಳು, ಹಾಗೂ ರೆವೆನ್ಯೂ ಇನ್‌ಸ್ಪೆಕ್ಟರ್ ಅವರು ಯಾವ ರೀತಿ ಕೆಲಸಗಳನ್ನು ಮಾಡುತ್ತಿದ್ದಾರೆ ಎನ್ನುವುದನ್ನು ನಾವು ಚೆನ್ನಾಗಿ ನೋಡ ಬಹುದು. ಡಿ.ಸಿ. ಆಫೀಸಿನಿಂದ ರೈತರಿಗೆ ಒಂದು ಸಾಲ ಮಂಜೂರಾಗಿದ್ದರೆ ಅದನ್ನು ರೈತ ತಹಶೀಲು ಆಫೀಸಿನಲ್ಲಿ ತೆಗೆದುಕೊಳ್ಳಬೇಕಾದರೆ ಒಂದು ಸಾಲಕ್ಕೆ ಇನ್ನೂರು ರೂಪಾಯಿಯಷ್ಟು ಕೊಡಲೇಬೇಕು. ನಾನು ಅಧಿಕಾರಿಗಳಿಗೆ ಸಲಹೆ ಮಾಡುವುದು, ಯಾವ ಅಧಿಕಾರಿ ಲಂಚಕ್ಕೆ ತುತ್ತಾಗಿರುತ್ತಾನೋ ಅಂತಹ ಅಧಿಕಾರಿ ಬಗ್ಗೆ ತನಿಖೆ ಮಾಡಿ ಅವರನ್ನು ಕೂಡಲೇ ಸಸ್ಪೆನ್‌ಷನ್ ನಲ್ಲಿ ಇಡಿ. ಸರಿಯಾಗಿ, ನ್ಯಾಯವಾಗಿ ಕೆಲಸ ಮಾಡುವ ಅಧಿಕಾರಿಗಳಿಗೆ ಪ್ರಮೋಷನ್ ಕೊಡಿ. ಆದರೆ ಲಂಚಕೋರ ಅಧಿಕಾರಿಗಳಿಗೆ ತನಿಖೆ ನಡೆಸಿ ತಕ್ಕ ಶಿಕ್ಷೆಯನ್ನು ಕೊಡಬೇಕು. ಹೀಗೆ ಮಾಡಿದರೆ ಆಗ ಅಧಿಕಾರಿಗಳಿಗೂ ಒಂದು ರೀತಿಯ ಭಯ ಬರಲು ಕಾರಣವಾಗುತ್ತದೆ ಮತ್ತು ಕೆಲಸಗಳೂ ಚೆನ್ನಾಗಿ ಆಗುತ್ತದೆ. ಸೋಷಿಯಲಿಸಂ ತರುತ್ತೇವೆ ಎಂದು ಹೇಳಿದರೆ ಇದು ಸೋಷಿಯಲಿಸಂ ಆಗುತ್ತೇನು ? ಹತೋಟಿ ಇಲ್ಲದ ಅಧಿಕಾರಿಗಳನ್ನು ಏಕೆ ಇಟ್ಟುಕೊಂಡಿದ್ದೀರಿ? ನಾವು ಡೆಪ್ಯುಟಿ ಕಮಿಷನರ್ ಕಡೆಗೆ ಇದರ ಬಗ್ಗೆ ದೂರು ಕೊಟ್ಟರೆ ಅವರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದು ನಿಮ್ಮ ಕಾಂಗ್ರೆಸ್ಸು ಪಕ್ಷದ ನೀತಿಯೇನು ? ತಹಶೀಲುದಾರರ ಆಫೀಸಿನಲ್ಲಿರುವಷ್ಟು ಕರಪ್ಷನ್ ಇನ್ನೆಲ್ಲೂ ಇಲ್ಲ. ಐದು ಎಕರೆ ಭೂಮಿಯನ್ನು ಒಬ್ಬ ರೈತ ಅನಾದಿ ಕಾಲದಿಂದಲೂ ಇಟ್ಟುಕೊಂಡು ಕೆಲಸ ಮಾಡುತ್ತಿದ್ದ. ಅದನ್ನು ಅವನ ಹೆಸರಿಗೆ ಪಟ್ಟಾ ಮಾಡಿಕೊಡಲು 100, 200 ಇಲ್ಲವೇ 300 ರೂಪಾಯಿಗಳಷ್ಟು ಲಂಚ ಕೊಡಬೇಕಾಗಿದೆ. ಇವೆಲ್ಲ ನಿಮ್ಮ ಪಂಚಾಯತಿಗಳಿಂದ ಷುರುವಾಗಿ ತಹಶೀಲುವರೆಗೆ ಬಂದಿದೆ. ಇಂತಹ ಒಂದು ಪೈಶಾಚಿಕ ವೃತ್ತಿ ಬಹಳ ಕಾಲದಿಂದಲೂ ನಡೆದುಕೊಂಡು ಬರುತ್ತಿದೆ. ಇದನ್ನು ಯಾರ ಕೈಯಲ್ಲೂ ಇನ್ನೂ ತಪ್ಪಿಸಲು ಸಾಧ್ಯವಾಗಲಿಲ್ಲ. ಇನ್ನು ಈಗ ಲ್ಯಾಂಡ್ ರಿಫಾರಂಸ್ ಆಕ್ಟ್ ಈಗ ಜಾರಿಗೆ ಬರುವುದರಲ್ಲಿದೆ ಎಂದು ಹುಬ್ಬಳ್ಳಿಯಲ್ಲಿ ಇರುವ ಒಬ್ಬ ಅಧಿಕಾರಿಗಳು ರಾತ್ರಿ 12 ಗಂಟೆಯವರೆಗೆ ಕೆಲಸ ಮಾಡುತ್ತಿದ್ದಾರೆ ಮತ್ತು ಎಲ್ಲ ರೈತರುಗಳಿಗೂ ಹೇಳಿ ಅವರಲ್ಲಿರುವ ಜಮೀನುಗಳು ಪೂರ್ತಿಯಾಗಿ ಹಂಚಿಕೆಯಾಗುವ ವ್ಯವಸ್ಥೆ ಮಾಡುತ್ತಿದ್ದಾರೆ. ಹುಬ್ಬಳ್ಳಿಯಲ್ಲಿರುವ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಈಗಲೂ ರಾತ್ರಿ 12 ಗಂಟೆಯವರೆಗೆ ಕೆಲಸ ತ್ತಿದ್ದಾರೆ. ಇದರಿಂದ ಪಟ್ಟಗಳು ಯಾರಿಗೆ ಬೇಕೋ ಅವರಿಗೆ ಬದಲಾವಣೆಯಾಗಿ ಅನುಕೂಲ ವಾಗುತ್ತಿದೆ. ಇನ್ನೆರಡು ತಿಂಗಳೊಳಗೆ ಎಷ್ಟೋ ಕಡೆಗಳಲ್ಲಿ ಬೋಗಸ್ ಟ್ರಾನ್ಸ್‌ಫರುಗಳು ಆಗುತ್ತವೆ, ಬೋಗಸ್ ಸೇಲ್ಸ್‌ಗಳಾಗುತ್ತವೆ. ಇದನ್ನು ಯಾರೂ ತಡೆಯುವುದಕ್ಕಾಗುವುದಿಲ್ಲ. ಇದು ಹೇಗಿದೆ ಎಂದರೆ ಕರಪ್ಷನ್ ಈಸ್ ಬೀಯಿಂಗ್ ಲೀಗಲೈಸ್ಡ್ ಎನ್ನುವಂತೆ ಆಗಿದೆ. ಇದರ ಮೇಲೆ ಸರಕಾರ ಏನೂ ಆಕ್ಷನ್ ತೆಗೆದುಕೊಳ್ಳದಿದ್ದರೆ ನಾವೇನು ಮಾಡುವುದು ? ನಾವು ಒಂದು ಸಂದರ್ಭದಲ್ಲಿ ಸರ್ಕಾರದಲ್ಲಿ ಪ್ರಶ್ನೆಮಾಡಿದಾಗ ನಿರ್ದಿಷ್ಟವಾದ ಪ್ರಸಂಗಗಳನ್ನು ಸರಕಾರದ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ನಾನು ಇಲ್ಲಿ ಸ್ಪೆಸಿಫಿಕ್ ಆಗಿ ಹುಮ್ನಾಬಾದ್ ತಹಶೀಲು ಆಫೀಸಿನಲ್ಲಿ ಹಾಗೂ ಹುಬ್ಬಳ್ಳಿಯ ಆಫೀಸಿನಲ್ಲಿ ಇಂತಹ ಅಧಿಕಾರಿ ಗಳಿದ್ದಾರೆಂದು ಹೇಳಿದರೆ ಸಾಲದೇ ? ಇನ್ನಾವ ತರಹ ವಿವರಗಳನ್ನು ಸರಕಾರಕ್ಕೆ ಕೊಡಬೇಕೋ ನಮಗೆ ತಿಳಿಯದಾಗಿದೆ. ನಾವು ಸಲಹೆ ಮಾಡುವುದು, ತಾವು ನೇಮಕಮಾಡುವಾಗ Any person of your choice who could serve the people to the best interests of Government. ಇಂತಹ ಅಧಿಕಾರಿಗಳನ್ನು ನೇಮಿಸಿ ಸರಿಯಾಗಿ ಕೆಲಸಗಳಾಗುವಂತೆ ಮಾಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ) :—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇಟ್ಟಿರುವ ರೆವೆನ್ಯೂ ಡಿಮ್ಯಾಂಡುಗಳ ಮೇಲೆ ಎರಡು ಮಾತನಾಡಲು ಇಚ್ಛೆಪಡುತ್ತೇನೆ ಮತ್ತು ಮೊದಲಾಗಿ ತಾವು ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ತಮ್ಮನ್ನು ಇಲ್ಲಿ ವಂದಿಸುತ್ತೇನೆ. ಸರಕಾರ ತನ್ನ ಕೆಲಸಗಳನ್ನು ಮಾಡುವಾಗ ಅದಕ್ಕೆ ತಕ್ಕಂತೆ ಇಲ್ಲಿ ಡಿಮ್ಯಾಂಡುಗಳನ್ನು ತರುತ್ತಾರೆ. ಇದನ್ನು ನಾವು ಮಂಜೂರು ಮಾಡಿಕೊಡಲೇ ಬೇಕಾಗುತ್ತದೆ. ಸುಮಾರು 1962 ನೇ ಇಸವಿಯಿಂದಲೂ ನಮ್ಮ ದೇಶದ ಅನೇಕ ಭಾಗಗಳಲ್ಲಿ ಕ್ಷಾಮದ ತಾಪಕ್ಕೆ ಜನ ಸಿಕ್ಕಿದೆ. ಇದರಿಂದಾಗಿ ಮೂಲಭೂತವಾಗಿ ಬೆಳೆಯಾಗುವ ಭಾಗಗಳಲ್ಲಿ ಬೆಳೆಯಾಗದೆ ಕಂದಾಯಕ್ಕೆ ವಿನಾಯತಿ ಕೊಡುತ್ತಾ ಇದನ್ನು ಮುಂದೂಡಿಕೊಂಡು ಬರುತ್ತಿದ್ದಾರೆ. ಇಲ್ಲಿಯವರೆಗೂ ಇದರ ಬಗ್ಗೆ ಸರಿಯಾಗಿ ಶಾಶ್ವತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಆದರೆ ಇದುವರೆಗೂ ಅಂತಹ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇದರಿಂದ ಜನತೆಗೆ ಕಷ್ಟಗಳಾಗುತ್ತಿವೆ. ಇದಕ್ಕಾಗಿ ನಾನು ಮಾನ್ಯ ಮಂತ್ರಿಗಳನ್ನು ಕೇಳುವುದು. ಹಿಂದಿನಿಂದಲೂ ಯಾವ ಕೆಲಸಗಳನ್ನು ಮಾಡಬೇಕೆಂದು ಕಾರ್ಯಕ್ರಮಗಳನ್ನು ಹಾಕಿದ್ದರೋ ಅದರ ಬಗ್ಗೆ ವಿಚಾರಣೆ ಮಾಡಿ ತಮ್ಮ ಕೈಲಾದಷ್ಟು ಸಹಾಯ ಮಾಡಿ ಕಷ್ಟಗಳಿಗೆ ಸಿಕ್ಕಿರುವ ಜನರನ್ನು ಉಳಿಸಿಕೊಡುವುದರ ಕಡೆಗೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅನೇಕ ಕಡೆಗಳಲ್ಲಿ ಪಂಪುಸೆಟ್ಟುಗಳಿಗೆ ಹಾಗೂ ಬಾವಿಗಳಿಗಾಗಿ ಸಾಲಗಳನ್ನು ಕೊಡುತ್ತಿದ್ದಾರೆ. ಆದರೆ ಇದನ್ನು ವಸೂಲು ಮಾಡುವಾಗ ಕಂತುಗಳ ಮೇಲೆ ಪೀನಲ್ ಇಂಟರೆಸ್ಟು ಹಾಕಿ ವಸೂಲು ಮಾಡುತ್ತಾರೆ. ಇದು ರೈತರಿಗೆ ಬಹಳ ಕಷ್ಟವಾಗುತ್ತದೆ. ಈಗ ರಾಜ್ಯದಲ್ಲಿ ಕ್ಷಾಮ ಇರುವುದರಿಂದ ರೈತರುಗಳು ಮರುಪಾವತಿ ಮಾಡುವುದು ಕಷ್ಟ. ರಾಜ್ಯದಲ್ಲಿ ಸುಭಿಕ್ಷ ಬಂದ ಮೇಲೆ ರೈತರಿಂದ ಕಂತಿನ ಸಾಲವನ್ನು ಪೀನಲ್ ಇಂಟರೆಸ್ಟು ಹಾಕದೆ ವಸೂಲು ಮಾಡಬೇಕೆಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ. ಇಲ್ಲದಿದ್ದರೆ ರೈತಾಪಿ ಜನಕ್ಕೆ ಬಹಳ ತೊಂದರೆಯಾಗುತ್ತದೆ. ಪೀನಲ್ ಇಂಟರೆಸ್ಟು ಎಂದರೆ ಶೇಕಡ ಮೂರರಷ್ಟು ಕೊಡಬೇಕೆಂದರೆ ಅದು ಶೇಕಡ ಒಂಭತ್ತರ ವರೆಗೇರುತ್ತದೆ. ಇದನ್ನು ರೈತರು ಕೊಡುವುದು ಕಷ್ಟ. ಹಿಂದೆ ಯಾವ ರೀತಿ ರಿಯಾಯಿತಿ ಕೊಟ್ಟು ವಸೂಲು ಮಾಡುತ್ತಿದ್ದರೋ ಅದೇ ರೀತಿ ಮಾಡಬೇಕೆಂದು ಹುಕುಂ ಕೊಡಬೇಕೆಂದು ಸಲಹೆ ಮಾಡುತ್ತೇನೆ. ಈ ವಿಷಯದಲ್ಲಿ ಸರಕಾರ ಸಹಾನುಭೂತಿಯಿಂದ ಇರಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ಬಾವಿಗಳಿಗಾಗಿ ಸಾಲ ಕೊಡುವಾಗ ಒಂದು ಸಾವಿರ ರೂಪಾಯಿಗಳಷ್ಟು ಸಾಲ ತೆಗೆದುಕೊಂಡರೆ ಇದರಲ್ಲಿ 250 ರೂಪಾಯಿಗಳನ್ನು ಸಬ್‌ಸಿಡಿಯಾಗಿ ಇಲ್ಲವೇ, ಗ್ರ್ಯಾಂಟಾಗಿ ಕೊಡುತ್ತೇವೆ ಎಂದು ಹೇಳಿದ್ದರು. ಆದರಂತೆ ರೈತರು ಅನೇಕ ಕಡೆಗಳಲ್ಲಿ ಬಾವಿಗಳ ಸಾಲ ಪಡೆದರು. ಆದರೆ ಇದರ ಬಗ್ಗೆ ಇನ್ನೂ ಯಾವ ವಿಧವಾದ ಕ್ರಮ ಕೈಗೊಂಡಿಲ್ಲ, ಸಬ್ಸಿಡಿ ಮನ್ನಮಾಡಲು ಅನುಕೂಲ ಮಾಡಲಿಲ್ಲ.

ಆ ಒಂದು ದೃಷ್ಟಿಯಿಂದ ಅವರು ಬಾವಿಯನ್ನು ತೆಗೆಸಿದ್ದರೂ ಸಹ ಅವರುಗಳಿಗೆ ಆ ಒಂದು ಲಾಭ ದೊರೆಯಲಿಲ್ಲ. ಇವರುಗಳಿಗೂ ಸಹ ಎಲ್ಲರಿಗೂ ಕೊಟ್ಟಂತೆ ಸಬ್ಸಿಡಿ ಹಣವನ್ನು ದೊರಕಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ದೇವಸ್ಥಾನದ ಜಮೀನುಗಳ ಬಗ್ಗೆ ಹೇಳಬೇಕೆಂದರೆ ಈ ಜಮೀನುಗಳನ್ನು ಉಳುವವನಿಗೇ ಕೊಡುವುದೆಂದು ನಿಯಮಾವಳಿ ಮಾಡಲಾಗಿದೆ. ಇದರಿಂದ ಏನಾಗಿದೆ ಎಂದರೆ, ದೇವಸ್ಥಾನದ ಪೂಜೆಗಳು ನಿಂತು ಹೋಗುವ ಸನ್ನಿವೇಶ ಬಂದಿದೆ. ದೇವಸ್ಥಾನದ ಜಮೀನುಗಳನ್ನು ಉಳುವವನಿಗೆ ಕೊಡುವುದು ಬೇಡ ಎಂದು ನಾನು ಹೇಳುವುದಿಲ್ಲ. ಆದರೆ ದೇವಸ್ಥಾನದ

ಪೂಜೆಗಳು ಸರಿಯಾಗಿ ನಡೆದುಕೊಂಡು ಹೋಗುವ ಬಗ್ಗೆ ಏನಾದರೂ ವ್ಯವಸ್ಥೆ ಮಾಡಬೇಕು. ಪೂಜಾರಿಗಳಿಗೆ ಸಂಬಳ ಕೊಡುವ ವ್ಯವಸ್ಥೆಯನ್ನಾದರೂ ಮಾಡಬೇಕು. ಇಲ್ಲದಿದ್ದರೆ ಅವರು ಪೂಜೆ ಮಾಡುವುದನ್ನು ಬಿಟ್ಟುಬಿಡಬಹುದು. ಈಗಾಗಲೇ ಪೂಜಾರಿಗಳು ದೇವಸ್ಥಾನದ ಜಮೀನುಗಳನ್ನು ಬೇರೆಯವರಿಗೆ ಭೋಗ್ಯ, ಆಧಾರ ಮಾಡಿಕೊಂಡುಬಿಟ್ಟಿದ್ದಾರೆ. ಇಂಥಹ ಸಮಯದಲ್ಲಿ ಸರ್ಕಾರದವರು ಏನಾದರೂ ಅವರಿಗೆ ಸಂಬಳ ಕೊಡದಿದ್ದರೆ ಆ ಜಾಗವನ್ನೇ ಬಿಟ್ಟು ಹೊರಟುಹೋಗೋಣ ಎಂದು ಅವರು ಯೋಚನೆ ಮಾಡುತ್ತಿದ್ದಾರೆ. ಆ ರೀತಿ ಏನಾದರೂ ಅವರು ಹೊರಟು ಹೋದರೆ ದೇವಸ್ಥಾನಗಳನ್ನು ನೋಡಿಕೊಳ್ಳುವವರು ಇಲ್ಲದೆ ಕತ್ತೆ ಮತ್ತು ನಾಯಿಗಳ ವಾಸಸ್ಥಾನವಾಗಬಹುದು. ಆದ್ದರಿಂದ ಇದರ ಕಡೆಗೆ ಸೂಕ್ತ ಗಮನವನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಪವಿತ್ರವಾದಂಥ ಯಾತ್ರಾಸ್ಥಳಗಳು ಅಂದರೆ ದೊಡ್ಡ ದೊಡ್ಡ ದೇವಸ್ಥಾನಗಳು ಇರುವ ಕಡೆ ನೀರಿನ ಸೌಲಭ್ಯ ಮತ್ತು ವಸತಿ ಸೌಲಭ್ಯಗಳನ್ನು ಮಾಡಿಕೊಡಬೇಕು. ಇಲ್ಲದಿದ್ದರೆ ಅಲ್ಲಿಗೆ ಬರುವ ಯಾತ್ರಾರ್ಥಿಗಳಿಗೆ ತೊಂದರೆಯಾಗುತ್ತದೆ. ನಾನು 4–5 ತಿಂಗಳ ಹಿಂದೆ ಬಿಳಿಗಿರಿರಂಗನ ಬೆಟ್ಟಕ್ಕೆ ಹೋಗಿದ್ದೆ. ಅಲ್ಲಿ ಕುಡಿಯುವುದಕ್ಕೆ ನೀರಿನ ಅನುಕೂಲವಾಗಲೀ, ವಾಸಕ್ಕೆ ಅನುಕೂಲವಾಗಲೀ ಇರಲಿಲ್ಲ. ಇಂತಹ ಸ್ಥಳಗಳಿಗೆ ಪ್ರೇಕ್ಷಕರು ಹೆಚ್ಚಾಗಿ ಹೋಗುವುದರಿಂದ ವಸತಿಗೃಹಗಳನ್ನು ಕಟ್ಟಿಸಿಕೊಡಬೇಕು ಮತ್ತು ನೀರಿನ ಸೌಕರ್ಯ ಮಾಡಿಕೊಡಬೇಕು, ಬಸ್ಸಿನ ಸೌಕರ್ಯ ಸಹ ಮಾಡಿಕೊಡಬೇಕು. ಈ ರೀತಿ ಅನುಕೂಲ ಮಾಡಿಕೊಟ್ಟರೆ ಸರ್ಕಾರಕ್ಕೂ ಕೂಡ ನಾನಾ ರೀತಿಯಿಂದ ಆದಾಯ ಬರುತ್ತದೆ. ಆದ್ದರಿಂದ ಇದರ ಕಡೆಗೆ ಸರ್ಕಾರದವರು ಗಮನ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗ ತಹಶೀಲದಾರರಿಗೆ ನಾಲ್ಕೈದು ಎಕರೆಯವರೆಗೆ ಜಮೀನನ್ನು ಜಮೀನು ಇಲ್ಲದವರಿಗೆ ಮಂಜೂರು ಮಾಡುವ ಅಧಿಕಾರ ಇರುವುದರಿಂದ ಅನೇಕ ಜಮೀನುದಾರರು ಫಾಲ್ಸ್ ಡಿಕ್ಲರೇಷನ್ ಕೊಟ್ಟು ತಮ್ಮ ಹೆಂಡತಿ ಮತ್ತು ಸಂಬಂಧಿಕರ ಹೆಸರಿನಲ್ಲಿ ಜಮೀನನ್ನು ಪಡೆದುಕೊಂಡು ಬಿಟ್ಟಿದ್ದಾರೆ. ಈ ರೀತಿ ಪಡೆದವರು ಕೂಡಲೆ ಸಾಗುವಳಿ ಮಾಡಿದರೆ ಜನರ ಗಮನಕ್ಕೆ ಬೀಳುತ್ತದೆಂದು ತಿಳಿದುಕೊಂಡು ಅದರಿಂದ ತಮಗೆ ತೊಂದರೆಯಾಗುತ್ತದೆಂದು ಭಾವಿಸಿ ಕೆಲವು ಕಾಲದವರೆಗೆ ಸಾಗುವಳಿ ಮಾಡದೆ ಬಿಟ್ಟು ಸ್ವಲ್ಪ ಹಳೆಯದಾದ ಮೇಲೆ ಸಾಗುವಳಿ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇಂತಹವರಿಂದ ಸರ್ಕಾರದವರು ವಾಪಸ್ ಜಮೀನನ್ನು ಪಡೆದುಕೊಂಡು, ಅವರ ಹೆಸರಿಗೆ ಖಾತೆಯಾಗಿರುವುದನ್ನು ವಜಾಮಾಡಿ ಬಡವರಿಗೆ ಹಂಚಬೇಕು, ಇಲ್ಲವೇ ಸರ್ಕಾರದವರೇ ರಿಜರ್ವ್ ಆಗಿ ಇಟ್ಟುಕೊಳ್ಳಬೇಕು.

ಇನ್ನು ವಿಲೇಜ್ ಅಕೌಂಟೆಂಟರ ಬಗ್ಗೆ ಮಾನ್ಯ ಸದಸ್ಯರು ನೆನ್ನೆಯಿಂದ ಹೇಳುತ್ತಿದ್ದಾರೆ. ಇವರನ್ನು ಸರ್ಕಾರದವರು ಯಾವ ಸ್ಥಳಕ್ಕೆ ಪೋಸ್ಟ್ ಮಾಡುತ್ತಾರೋ ಆ ಸ್ಥಳದಲ್ಲಿ ವಸತಿ ಸೌಲಭ್ಯ ಇಲ್ಲದಿರುವುದರಿಂದ ಅವರುಗಳು ತಾಲ್ಲೂಕು ಕೇಂದ್ರಗಳಲ್ಲಿ ವಾಸಮಾಡುತ್ತಿದ್ದಾರೆ. ಇದರಿಂದ ಆ ಸ್ಥಳದ ಜನರಿಗೆ ಬಹಳ ತೊಂದರೆಯಾಗುತ್ತಿದೆ, ಏನಾದರೂ ಪಹಣಿ ತೆಗೆದುಕೊಳ್ಳಬೇಕಾದರೆ ಅವರು ಸಿಗುವುದು ಕಷ್ಟ. ಕಂದಾಯ ವಸೂಲಿ ಸಮಯದಲ್ಲಿ ಮಾತ್ರ ಅವರು ಸಿಗುತ್ತಾರೆ. ಅವರು ಪಂಚಾಯತಿ ಹೆಡ್‌ಕ್ವಾರ್ಟರ್ಸ್‌ನಲ್ಲಿಯೇ ಇರುವಂತಾಗಲು ಅವರಿಗೆ ವಸತಿ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಸರ್ವೆ ಇಲಾಖೆಯಲ್ಲಿಯೂ ಸಹ ಅನೇಕ ಲೋಪದೋಷಗಳಿವೆ. ಅನೇಕ ಸರ್ವೆಯರ್‌ಗಳು ಜಮೀನು ಅಳತೆ ಮಾಡುವಾಗ ಸಂಬಂಧಪಟ್ಟವರಿಂದ ಹಣ ತೆಗೆದುಕೊಂಡು ಬೇರೆ ತಮಗೆ ಇಷ್ಟ ಬಂದ ಕಡೆಗಳಲ್ಲಿ ಕಲ್ಲುಗಳನ್ನು ಹಾಕಿಸಿ ಹೊರಟು ಹೋಗುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ತೊಂದರೆಯಾದವರು ಅರ್ಜಿ ಕೊಟ್ಟರೆ ಮೇಲಿನ ಅಧಿಕಾರಿಗಳು ಟಿಪ್ಪಣಿ

ಕಾಪಿಯನ್ನು ತೆಗೆದುಕೊಂಡು ಉಭಯ ಪಾರ್ಟಿಗಳಿಗೆ ನೋಟೀಸ್ ಕೊಟ್ಟು ನಂತರ ಆ ಸ್ಥಳಕ್ಕೇ ಹೋಗಿ ಎರಡು ಪಾರ್ಟಿಯವರಿಗೂ ನ್ಯಾಯ ದೊರಕಿಸಿ ಕೊಡಬೇಕಲ್ಲದೆ, ಸರಿಯಾಗಿ ಅಳತೆ ಮಾಡದ ಸರ್ವೆಯರುಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಭೂಮಾಲೀಕರಿಂದ ಜಮೀನು ಅಕ್ವೈರ್ ಮಾಡಿಕೊಂಡು ಹಿಂದುಳಿದ ಜನಾಂಗದವರಿಗೆ ಕೊಟ್ಟಿದ್ದಾರೆ. ಈ ರೀತಿ ಜಮೀನು ಅಕ್ವೈರ್ ಮಾಡಿಕೊಂಡು ಸಂಬಂಧಪಟ್ಟವರಿಗೆ ಪೊಜಿಷನ್ ಸರ್ಟಿಫಿಕೇಟ್ ಕೊಟ್ಟರೂ ಸಹ ಭೂಮಾಲೀಕರಿಗೆ ಪರಿಹಾರವನ್ನು ಇನ್ನೂ ಕೊಟ್ಟಿಲ್ಲ ಮತ್ತು ಆ ಬಗ್ಗೆ ಫೈನಲ್ ನೋಟಿಫಿಕೇಷನ್ ಹೊರಡಿಸಿಲ್ಲ. ಈ ಕಾರಣದಿಂದ ಜಮೀನು ಪಡೆದವರು ಸಾಗುವಳಿ ಮಾಡಲು ಹೋದಾಗ, ಭೂಮಾಲೀಕರು ತಮ್ಮ ಜಮೀನಿನ ಮೇಲೆ ಅಕ್ರಮ ಪ್ರವೇಶ ಮಾಡಿದ್ದಾರೆಂಬ ಕಾರಣ ಕೊಟ್ಟು ಅವರ ವಿರುದ್ಧ ಮುನ್ಸೀಫ್ ಕೋರ್ಟ್‌ಗಳಿಗೆ ಮತ್ತು ಸಿವಿಲ್ ಕೋರ್ಟ್‌ಗಳಿಗೆ ಹೋಗುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ಭೂ ಒಡೆಯರು ಕೋರ್ಟಿಗೆ ಹೋಗುವುದಕ್ಕೆ ಅಧಿಕಾರವಿರಬಾರದು ಮತ್ತು ಕೋರ್ಟಿನವರು ಸಹ ಯಾವ ಕ್ರಮವನ್ನೂ ಸಹ ತೆಗೆದುಕೊಳ್ಳದಿರುವಂತೆ ಮಾಡಲು ಸರ್ಕಾರದವರು ಸೂಕ್ತ ಕಾನೂನು ತರಬೇಕಲ್ಲದೆ ಇಂತಹ ಜಮೀನುಗಳ ಮೇಲೆ ಯಾರಿಂದಲೂ ಸಹ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳಬೇಕೆಂದು ಸರ್ಕಾರದವರು ನ್ಯಾಯಾಂಗ ಇಲಾಖೆಗೆ ಬರೆದು ತಿಳಿಸ ಬೇಕೆಂದು ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಐ.ಎ.ಎಸ್. ಅಧಿಕಾರಿಗಳ ಬಗ್ಗೆ ಹೇಳಬೇಕೆಂದರೆ, ಇಂದು ಕನ್ನಡ ಬರೆದ ಮಹಾರಾಷ್ಟ್ರ ಮತ್ತು ಗುಜರಾತಿನ ಐ.ಎ.ಎಸ್.ಅಧಿಕಾರಿಗಳನ್ನು ಸಬ್-ಡಿವಿಜನ್ ಆಫೀಸರುಗಳನ್ನಾಗಿ ನೇಮಕ ಮಾಡಲಾಗುತ್ತಿದೆ. ಇಂತಹವರ ಹತ್ತಿರ ರೈತರು ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳಲು ಹೋದಾಗ ಇವರ ಭಾಷೆ ಅವರಿಗೆ ಅರ್ಥವಾಗದೆ, ರೈತರ ಕಷ್ಟಗಳು ಪರಿಹಾರವಾಗುತ್ತಿಲ್ಲ. ಈ ಒಂದು ತೊಂದರೆಯನ್ನು ತಪ್ಪಿಸಲು ಇನ್ನು ಮುಂದೆ ಬೇರೆ ಭಾಷೆಯ ಐ.ಎ.ಎಸ್. ಅಧಿಕಾರಿಗಳು ಕನ್ನಡವನ್ನು ಕಲಿತುಕೊಳ್ಳುವವರೆಗೆ ಮತ್ತು ಅದನ್ನು ಅರ್ಥ ಮಾಡಿಕೊಳ್ಳುವವರೆಗೆ ಅವರನ್ನು ಎಕ್ಸಿಕ್ಯುಟಿವ್ ಲೈನ್‌ಗೆ ಹಾಕದೆ ಮಿನಿಸ್ಟೀರಿಯಲ್ ಲೈನ್‌ಗೆ ಹಾಕಬೇಕು. ನಮ್ಮ ದೇಶದ ಭಾಷೆಯನ್ನು ಅವರು ಕಲಿತುಕೊಂಡ ನಂತರ ಜವಾಬ್ದಾರಿಯುತವಾದ ಸ್ಥಾನಗಳಿಗೆ ವರ್ಗ ಮಾಡುವುದಕ್ಕೆ ಅವಕಾಶ ಇರಬೇಕು. ಇದರ ಕಡೆಗೆ ಮಾನ್ಯ ಮಂತ್ರಿಗಳು ಗಮನ ಕೊಡ ಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರೈತರು ಸಾಲ ತೆಗೆದುಕೊಳ್ಳಬೇಕಾದರೆ ಬಾಂಡ್ ರಿಜಿಸ್ಟ್ರೇಷನ್ ಮಾಡುವ ಪದ್ಧತಿ ಈಗ ಇದೆ. ಇದರಿಂದ ರೈತರಿಗೆ ವಿಪರೀತ ಹಣ ಖರ್ಚಾಗುತ್ತದೆ. ಹಣ ಇರುವವರು ಯಾರೂ ಸಾಲ ಪಡೆಯುವುದಕ್ಕೆ ಹೋಗುವುದಿಲ್ಲ. ಹಣ ಇಲ್ಲದವರು ಸಾಲ ಪಡೆಯುತ್ತಾರೆ. ಇಂತಹವರು ಹತ್ತು ಸಾವಿರ ರೂಪಾಯಿಗಳನ್ನು ಸಾಲ ಪಡೆಯಬೇಕಾದರೆ 2 ಸಾವಿರ ರೂಪಾಯಿಗಳವರೆಗೆ ರಿಜಿಸ್ಟ್ರೇಷನ್ ಫೀಯನ್ನು ಕೊಡಬೇಕಾಗಿದೆ. ಇದರಿಂದ ಮತ್ತೆ ಬೇರೆ ಕಡೆ ಸಾಲ ತೆಗೆದುಕೊಳ್ಳ ಬೇಕಾದ ಸಂದರ್ಭ ಬರುತ್ತದೆ. ಈ ತೊಂದರೆಯನ್ನು ಹೋಗಲಾಡಿಸಲು ನಾಮಿನಲ್ ರೇಟ್ ಗೊತ್ತು ಮಾಡಬೇಕು ಮತ್ತು ಸಾಲ ಪಡೆದ ಹಣ ಪೂರ್ತಿಯಾಗಿ ಅವರ ಕೈಗೆ ಸಿಗುವಂತೆ ವ್ಯವಸ್ಥೆ ಮಾಡಬೇಕು. ಸರ್ಕಾರಿ ನೌಕರರು ಮನೆಗಳನ್ನು ಕೊಂಡುಕೊಂಡಾಗಲು ಸಹ ಇದೇ ರೀತಿ ರಿಜಿಸ್ಟ್ರೇಷನ್ ಫೀ ಕೊಡಬೇಕಾಗಿದೆ. ಇದನ್ನು ಕೂಡ ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು) :—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮಾನ್ಯ ಸದಸ್ಯರು ಈ ಕಂದಾಯ ಖಾತೆಗೆ ಸಂಬಂಧಪಟ್ಟ ಹಾಗೆ ಚರ್ಚೆಯಲ್ಲಿ ಭಾಗವಹಿಸಿ ಬಹಳ ಉತ್ತಮವಾದ ಸಲಹೆಗಳನ್ನು ಮಾಡಿದ್ದಾರೆ. ಆ ಸಲಹೆಗಳಿಗಾಗಿ ನಾನು ಅವರನ್ನು ವಂದಿಸುತ್ತೇನೆ. ಅವರು ಎಷ್ಟೇ ಕಟುವಾಗಿ ಮಾತನಾಡಿದರೂ ಕೂಡ ಅನೇಕ ವಿಷಯಗಳಲ್ಲಿ ಇರತಕ್ಕಂಥಾ ವಸ್ತುಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈ ವಿಷಯದಲ್ಲಿ ನಾನು ಅವರ ವಾದದಲ್ಲಿ ಹುರುಳಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಕಂದಾಯ ಖಾತೆ ಬಹಳ ಹಳೆಯ ಕಾಲದಿಂದ, ಪುರಾತನ ಕಾಲದಿಂದ ಭೂಮಿಗೆ ಸಂಬಂಧಪಟ್ಟ ಆಡಳಿತ ಪ್ರಾರಂಭವಾದಾಗಿನಿಂದಲೂ ಈ ಕಂದಾಯ ಖಾತೆ ಬಂದಿರುವುದರಿಂದ ಇದರಲ್ಲಿ ದೋಷಗಳೂ ಇವೆ, ಗುಣಗಳೂ ಇವೆ. ನಮ್ಮ ಕಣ್ಣಿಗೆ ಯಾವಾಗಲೂ ದೋಷಗಳು ಬಹಳ ಬೇಗ ಕಾಣಿಸುತ್ತವೆ. ಶುಭ್ರ ಬಟ್ಟೆಯ ಮೇಲೆ ಮಸಿ ಸ್ವಲ್ಪ ಇದ್ದರೂ ಅದು ನೇರವಾಗಿ ಕಣ್ಣಿಗೆ ಚುಚ್ಚುವ ಹಾಗೆ ಕಾಣುತ್ತದೆ. ಆದ್ದರಿಂದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರಾಗಲೀ, ಅಥವಾ ಉಳಿದ ಸದಸ್ಯರಾಗಲೀ ಯಾವುದೇ ಕೆಲಸವನ್ನು ಮಾಡಬೇಕಾದರೂ ರೆವೆನ್ಯೂ ಇಲಾಖೆಗೆ ಹೋಗಿ ಮಾಡುವುದು ಹೆಚ್ಚಾಗಿರುವುದರಿಂದ ಅಲ್ಲಿ ಕಾಣುವ ದೋಷಗಳು ಎಲ್ಲರ ಗಮನದಲ್ಲೂ ಇರುವುದು ಸ್ವಾಭಾವಿಕ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಈ ಇಲಾಖೆ ಚೆನ್ನಾಗಿ ನಡೆಯಬೇಕು ಎನ್ನುವುದು ಅವರುಗಳಿಗೆ ಇಷ್ಟ. ಜನಗಳಿಗೆ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು,ಅಲ್ಲಿರುವ ದೋಷಗಳು ಪೂರ್ಣವಾಗಿ ನಿವಾರಣೆ ಆಗಬೇಕು ಎನ್ನುವ ಅಭಿಪ್ರಾಯವನ್ನು ಎಲ್ಲರೂ ಸ್ಪಷ್ಟವಾಗಿ ತಿಳಿಸಿದ್ದಾರೆ. ಅದರಲ್ಲಿ ಅವರು ಹೇಳಿರತಕ್ಕ ಕೆಲವು ವಿಷಯಗಳ ಮೇಲೆ ನಾನು ಸರ್ಕಾರದ ಪರವಾಗಿ ಸ್ಪಷ್ಟವಾಗಿ ಇದ್ದಂತಹ ಕೆಲವು ಅಭಿಪ್ರಾಯಗಳನ್ನು ತಿಳಿಸಬೇಕಾಗುತ್ತದೆ. ಹಿಂದೆ ಇದ್ದ ಸರ್ಕಾರದವರು 10 ಎಕರೆ ಭೂಮಿಗಿಂತ ಕಡಿಮೆ ಇರತಕ್ಕವರು ಕಂದಾಯವನ್ನು ವಜಾ ಮಾಡುತ್ತೇವೆ ಎಂದು ಹೇಳಿ ಅವರು ಒಂದು ಅಭಿಪ್ರಾಯವನ್ನು, ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದರು, ಆ ತೀರ್ಮಾನವನ್ನು ಜಾರಿಗೆ ಕೊಡುವುದಕ್ಕೆ ಏತಕ್ಕೆ ಈ ವಿಷಯದಲ್ಲಿ ಬಹಿರಂಗವಾಗಿ ಮಾತನಾಡುವುದಿಲ್ಲ, ಮರೆಯಲ್ಲಿಯೂ ಮಾತನಾಡುವುದಿಲ್ಲ, ಹಾಗಾದರೆ ಅದನ್ನು ಪೂರ್ಣವಾಗಿ ಕೈಬಿಟ್ಟಿದ್ದೀರಾ ? ಸಮಾಜವಾದದ ಸಿದ್ಧಾಂತದಲ್ಲಿ ನಂಬಿಕೆ ಇರತಕ್ಕವರು ಈ ಕಾರ್ಯಕ್ರಮವನ್ನು ಮೊದಲೇ ಮಾಡಬೇಕಾಗಿತ್ತು ಎಂದು ಮಾನ್ಯ ಸದಸ್ಯರು ಸಲಹೆ ಕೊಟ್ಟರು. ಈ ವಿಷಯದಲ್ಲಿ ನಮಗೆ ಆಸಕ್ತಿ ಇಲ್ಲದೇ ಇಲ್ಲ. ಆಗಿಂದಾಗ್ಯೆ ಒಂದೊಂದು ಹೇಳಿಕೆಯನ್ನು ಕೊಟ್ಟು ಆಮೇಲೆ ಅವುಗಳನ್ನು ಬದಲಾವಣೆ ಮಾಡಿ ಅವ್ಯವಸ್ಥೆ ಮಾಡುವುದಕ್ಕೆ ಬದಲಾಗಿ ಒಂದು ತೀರ್ಮಾನವನ್ನು ಕೈಗೊಂಡರೆ ಅದು ಕಾರ್ಯಗತವಾಗಬೇಕು ಎನ್ನುವ ದೃಷ್ಟಿಯಿಂದ ಆ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದಕ್ಕೋಸ್ಕರ ಸ್ವಲ್ಪ ತಡವಾಗಿದೆ. ಈ ವಿಷಯದಲ್ಲಿ ರಾಜ್ ಕಮಿಟಿಯವರು ಸಲ್ಲಿಸಿರುವ ಶಿಫಾರಸುಗಳನ್ನು ನಾವು ಆಲೋಚನೆ ಮಾಡುತ್ತಿದ್ದೇವೆ. ಅವರು ಅಗ್ರಿಕಲ್‌ಚರಲ್ 'ಹೋಲ್ಡಿಂಗ್ ಟ್ಯಾಕ್ಸ್' ಎಂದು ಹಾಕಬೇಕು ಎನ್ನತಕ್ಕಂಥಾ ಅಭಿಪ್ರಾಯಕ್ಕೆ ಬಂದಿದ್ದಾರೆ. ಆದ್ದರಿಂದ ಈಗ ಯಾವ ಯಾವ ಭೂಮಿಯಿಂದ ಎಷ್ಟೆಷ್ಟು ವರಮಾನ ಬರುತ್ತದೆ. ಆ ವರಮಾನವನ್ನು ದೃಷ್ಟಿಯಲ್ಲಿಟ್ಟುಕೊಂಡು ಯಾವ ಭೂಮಿಗೆ ಕಂದಾಯವನ್ನು ವಜಾ ಮಾಡಬೇಕು. ಹೇಗೆ ಎನ್ನುವುದನ್ನು ತೀರ್ಮಾನ ಮಾಡುವುದಕ್ಕೆ ಸಹಾಯಕವಾಗುತ್ತದೆ. ಆದ್ದರಿಂದ ನಾನು ಈ ಬಗ್ಗೆ ಪೂರ್ಣ ವಿವರಗಳನ್ನು ಹೇಳುತ್ತಾ ಹೋದರೆ ಬಹಳ ಹೊತ್ತಾಗುತ್ತದೆ. ಇನ್ನೊಂದು ವಿಷಯದಲ್ಲಿ ಈಗ ಚರ್ಚೆಯಾಗಬೇಕಾಗಿರುವುದರಿಂದ ನಾನು ಕೆಲವು ವಿಷಯಗಳನ್ನು ಸ್ಥೂಲವಾಗಿ ಹೇಳಿಕೊಂಡು ಹೋಗಬೇಕಾಗುತ್ತದೆ. ಈಗ ರಾಜ್ ಕಮಿಟಿಯವರ ವರದಿ ಬಂದಿದೆ. ಆ ವರದಿಯ ಮೇಲೆ ಮುಂದಿನ ಕ್ರಮ ಯಾವ ರೀತಿ ಮಾಡಬೇಕು ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡಿ ಆದಷ್ಟು ಬೇಗ ಈ ವಿಷಯದಲ್ಲಿ ಒಂದು ಅಂತ್ಯ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ

ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಇರತಕ್ಕ ಕಂದಾಯದ ವಿಷಯ ಅಷ್ಟೇ ಅಲ್ಲ. ಕಂದಾಯವನ್ನು ಕೂಡ ಪುನರ್‌ವಿಮರ್ಶೆ ಮಾಡಬೇಕಾಗಿದೆ.

ಬಹಳ ವರ್ಷಗಳಿಂದ ಇರತಕ್ಕ ವಾಟರ್ ರೇಟ್ ವಿಷಯದಲ್ಲಿ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ವಾಟರ್ ರೇಟ್ ಯಾವರೀತಿ ಪ್ರಾರಂಭವಾಯಿತು ಎಂದರೆ ಮೊಟ್ಟಮೊದಲನೆಯದಾಗಿ ಖುಷ್ಕಿ, ತರಿ, ಬಾಗಾಯಿತು ಕಂದಾಯದ ಪದ್ಧತಿ ಇತ್ತು. ಕೆಲವು ವರ್ಷಗಳ ಹಿಂದೆ ತರೀ ಭಾಗಾಯಿತು ಎಲ್ಲಾ ಜಮೀನುಗಳೂ ಖುಷ್ಕಿ ಜಮೀನು ಎಂದು ಹೇಳಿ ಬಾವಿಗಳಿಂದ ನೀರು ಒದಗಿಸುತ್ತಾ ಇರತಕ್ಕ ನೀರಿಗೆ ತೆರಿಗೆ ಹಾಕಬೇಕು ಎಂದು ಹೇಳಿ ಬದಲಾವಣೆ ಮಾಡಿದರು. ಸಣ್ಣ ಸಣ್ಣ ಕೆರೆಗಳಿಗೆ ಒಂದು ದರ ಇತ್ತು. ದೊಡ್ಡ ದೊಡ್ಡ ಕೆರೆಗಳಿಗೆ ಒಂದು ದರ ಇತ್ತು. ಸಾಲಾಬಾದು ಕಾಮಗಾರಿಗಳಿಗೋಸ್ಕರ ಒಂದು ಎಕರೆಗೆ 4 ರೂಪಾಯಿ ಕಂದಾಯವನ್ನು ವಿಧಿಸಲಾಗಿತ್ತು. ಇದು ಹೈಕೋರ್ಟಿನಲ್ಲಿ ಬೇರೆ ಬೇರೆ ಕೆರೆಗಳಿಗೆ ಬೇರೆ ಬೇರೆ ರೇಟು ವಿಧಿಸಿರುವುದು, ವ್ಯತ್ಯಾಸ ಮಾಡಿರುವುದು ಸರಿಯಲ್ಲ ಎಂದು ತೀರ್ಮಾನ ಮಾಡಿದ ಮೇಲೆ ಒಂದು ದರವನ್ನು ಗೊತ್ತು ಮಾಡಲಾಗಿದೆ. ಈ ಒಂದು ದರವನ್ನು ಗೊತ್ತು ಮಾಡುವಾಗ ಪರಿಸ್ಥಿತಿ ಹೇಗಿದೆ ಎಂದರೆ ಮಳೆ ಆಧಾರದ ಮೇಲೆ ಬತ್ತವನ್ನು ಬೆಳೆಯತಕ್ಕ ಪ್ರದೇಶದಲ್ಲಿ ಕೂಡ ಹಿಂದಿನ ದರ ಕಂದಾಯದ ಜೊತೆಗೆ ವಾಟರ್ ರೇಟ್ ಹಾಕಿರುವ ಸಂದರ್ಭ ಉಂಟು. ಮಲೆನಾಡಿನಲ್ಲಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ನಾನು ಸಂಚಾರ ಮಾಡುವಾಗ ಅಲ್ಲಿಯ ರೈತರು ಹೇಳಿದರು. ಅಲ್ಲಿ ವಾಟರ್ ರೇಟೂ ಇದೆ : ಕಂದಾಯವೂ ಇದೆಯೆಂದು ಹೇಳಿದರು. ಅದು ಇರುವುದಕ್ಕೆ ಕಾರಣವಿಲ್ಲ. ನಾವು ತೆಗೆದುಕೊಂಡಿರತಕ್ಕ ತೀರ್ಮಾನದ ಪ್ರಕಾರ ಹಿಂದೆ ಅಚ್ಚುಕಟ್ಟು ಯಾವುದು ಇದೆ ಅಂಥಾದಕ್ಕೆ ವಾಟರ್ ರೇಟ್ ಹಾಕಿದೆ. ಮಳೆಯ ಆಧಾರದ ಮೇಲೆ ಬತ್ತವನ್ನು ಬೆಳೆಯುವ ಪ್ರದೇಶದಲ್ಲಿ ಬರೀ ತರೀ ಕಂದಾಯ ಇರಬೇಕಾದ್ದೆ ಹೊರತು ಅದರ ಜೊತೆಯಲ್ಲಿ ವಾಟರ್ ರೇಟ್ ಇರುವುದಕ್ಕೆ ಸಾಧ್ಯವಿಲ್ಲ. ಆದರೆ ಅಧಿಕಾರಿಗಳು ಅದನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳದೆ ಕೆಲವು ಕಡೆ ಅದನ್ನು ವಸೂಲು ಮಾಡುವ ಕ್ರಮವನ್ನು ತೆಗೆದುಕೊಂಡಿದ್ದಾರೆ. ಅದನ್ನು ಕೂಡಲೇ ಅವರಿಗೆ ತಿಳಿಸಿ ಆ ಪ್ರದೇಶದಲ್ಲಿ ವಾಟರ್ ರೇಟನ್ನು ಪ್ರತ್ಯೇಕವಾಗಿ ಹಾಕಬೇಕು. ಕಂದಾಯವನ್ನು ಹಿಂದೆ ಇದ್ದ ರೀತಿಯಲ್ಲಿಯೇ ಹಾಕಬೇಕು ಎಂದು ತಿಳಿಸಿದ್ದೇವೆ. ವಾಟರ್ ರೇಟ್ ವಿಧಿಸಿರುವುದನ್ನು ಕೂಡ ಕೆಲವು ಬದಲಾವಣೆಗಳನ್ನು ಮಾಡಬೇಕು ಎಂದು ಹೇಳಿ ಅದು ಸರ್ಕಾರದ ಪೂರ್ಣ ಆಲೋಚನೆಯಲ್ಲಿದೆ. ಈಗ ಇರುವುದೂ ಕೂಡ ಶಾಸ್ತ್ರೀಯವಾಗಿಲ್ಲ ಎಂಬುದನ್ನು ಬಹಳ ಸ್ಪಷ್ಟವಾಗಿ ಅರಿತುಕೊಂಡಿದ್ದೇನೆ. ಉದಾಹರಣೆಗೆ ತಾಲ್ಲೂಕು ಬೋರ್ಡ್ ಅಧೀನದಲ್ಲಿ 10 ಎಕರೆಗಿಂತ ಕಡಿಮೆ ಅಚ್ಚುಕಟ್ಟು ಇರುವ ಕೆರೆಗಳು ಇವೆ. ಅಲ್ಲಿ ಸಾಕಷ್ಟು ನೀರಿನ ಅನುಕೂಲ ಇಲ್ಲ. ಅಂಥಾ ಕಡೆ ವಾಟರ್ ರೇಟು ಬಿದ್ದಿದೆ. ಅವುಗಳನ್ನು ಏನು ಮಾಡಬೇಕು ಎಂದು ನಿರ್ದಿಷ್ಟವಾಗಿ, ಪೂರ್ಣವಾಗಿ ಅರಿತು ಪುನರ್ ವ್ಯವಸ್ಥೆ ಮಾಡಬೇಕು. ಒಂದು ಕಡೆ ವಾಟರ್ ರೇಟ್ ವಸೂಲು ಮಾಡುವುದರಲ್ಲಿ ಹಾಕಿರತಕ್ಕ ಕ್ರಮಗಳಲ್ಲಿ ಸ್ವಲ್ಪ ದೋಷಗಳು ಇವೆ. ಬೆಳೆಯ ಆಧಾರದಮೇಲೆ ಅದನ್ನು ಹಾಕಬೇಕಾದರೆ ವಿಲೇಜ್ ಅಕೌಂಟೆಂಟರುಗಳು ಯಾವ ಯಾವ ಬೆಳೆಯನ್ನು ಯಾವ ಋತುವಿನಲ್ಲಿ ಇಟ್ಟಿದ್ದಾರೆ ಎಂಬುದನ್ನು ಗೊತ್ತು ಮಾಡಿ ಮಳೆಗಾಲದಲ್ಲಿ ಯಾವ ಬೆಳೆಯನ್ನು ಇಟ್ಟಿದ್ದಾರೆ, ಯಾವ ಭೂಮಿಯಲ್ಲಿ ಎಷ್ಟು ಪ್ರದೇಶದಲ್ಲಿ ಅದನ್ನು ಇಟ್ಟಿದ್ದಾರೆ, ಎರಡನೆ ಬೆಳೆ ಯಾವುದನ್ನು ಇಟ್ಟಿದ್ದಾರೆ, ಖುಷ್ಕಿ ಬೆಳೆಯನ್ನು ಇಟ್ಟಿದ್ದಾರೆಯೇ ಅಥವಾ ತರೀ ಬೆಳೆಯನ್ನು ಇಟ್ಟಿದ್ದಾರೆಯೇ, ಅದನ್ನು ಎಷ್ಟು ಪ್ರದೇಶದಲ್ಲಿಟ್ಟಿದ್ದಾರೆ, ಕಬ್ಬು ಬೆಳೆ ಎಷ್ಟು ಇದೆ, ಬತ್ತದ ಬೆಳೆ ಎಷ್ಟು ಇದೆ ಎಂಬುದನ್ನೆಲ್ಲಾ ನೋಡಿ ವಾಟರ್ ರೇಟ್ ಹಾಕಬೇಕು ಎಂದರೆ ಅದು ಕಾರ್ಯತಃ ಸಾಧ್ಯವಿಲ್ಲ, ಇದು ನನಗೆ ಅನುಭವ ಇದೆ. ಮತ್ತು ಹಳ್ಳಿಗಾಡಿನಿಂದಿರತಕ್ಕ ಎಲ್ಲಾ ಸದಸ್ಯರಿಗೂ ಗೊತ್ತಿರುವ ವಿಷಯ. ಇದು ತೊಂದರೆ ಇದೆ.

ಆದ್ದರಿಂದ ಮೊದಲು ಇದ್ದ ಹಾಗೆ ಖುಷ್ಕಿ, ತರೀ, ಭಾಗಾಯಿತು, ಎಂದು ಮಾಡಬೇಕೇ, ಅದೇ ರೀತಿ ಮಾಡಿದರೆ ಯಾವ ದರ ಇರಬೇಕು, ಇದನ್ನೆಲ್ಲಾ ದೃಷ್ಟಿಯಲ್ಲಿ ಇಟ್ಟುಕೊಂಡು ವಾಟರ್ ರೇಟನ್ನು ಪುನರಾಲೋಚನೆ ಮಾಡಿ ನಿರ್ಧಾರ ಮಾಡಬೇಕು ಎಂದು ಅದು ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆ. ಆ ಬಗ್ಗೆ ಸಂದರ್ಭ ಬಂದಾಗ ಮಾನ್ಯ ಸದಸ್ಯರ ಸಲಹೆಗಳನ್ನು ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಾಗಿದ್ದೇನೆಂದು ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮಾನ್ ಆರುಮುಗಂ ಅವರು ರೆವಿನ್ಯೂ ಇಲಾಖೆಯವರು ಕಂದಾಯವನ್ನು ವಸೂಲು ಮಾಡತಕ್ಕ ಕೆಲಸವನ್ನು ಸಮರ್ಪಕವಾಗಿ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಕಂದಾಯ ವನ್ನು ವಜಾ ಮಾಡಬೇಕು ಎಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಒಂದು ಕಡೆ ಕಂದಾಯವನ್ನು ವಸೂಲು ಮಾಡುವುದರಲ್ಲಿ ನಿಧಾನವಾಗುತ್ತಿದೆ ಎಂದು ಒಂದು ಅಭಿಪ್ರಾಯ ವನ್ನು ಕೊಟ್ಟಿದ್ದಾರೆ. ಇನ್ನೊಂದು ಕಡೆ ಕಡ್ಡಾಯವಾಗಿ ಸಕಾಲದಲ್ಲಿ ಪೂರ್ಣವಾಗಿ ಕಂದಾಯ ವನ್ನು ವಸೂಲು ಮಾಡಬೇಕು ಎಂದು ಹೇಳಿದ್ದಾರೆ.

ಕಡ್ಡಾಯವಾಗಿ ವಸೂಲು ಮಾಡುವುದಕ್ಕೆ ಬದಲಾಗಿ ಮುಂದಕ್ಕೆ ಹಾಕಿದರೆ ಅದರಲ್ಲಿ ದೋಷ ಗಳಿವೆಯೆಂದು ಮಾನ್ಯ ಶ್ರೀ ಚನ್ನಪ್ಪನವರು ಹೇಳುತ್ತಾರೆ. ಹೀಗೆ ಹಣವನ್ನು ಯಾರಿಂದಲಾಗಲೀ ವಸೂಲುಮಾಡುವ ಸಂದರ್ಭ ಇರುವಾಗ ನಾನಾಃಮುಖವಾಗಿ ಪ್ರಯತ್ನ ನಡೆಸಿ ಕಂದಾಯ ಕೊಡದೇ ಇರುವ ಹಾಗೆ ಮಾಡಬೇಕೆಂಬುದೇ ಜನಗಳ ಅಭಿಪ್ರಾಯ. ಇದನ್ನು ಕೊಡುವವರಿಗೆ ನಾನಾ ರೀತಿಯ ತೊಂದರೆಗಳಿವೆ. ವಸೂಲು ಮಾಡುವಂಥ ಹಣದ ಬಗ್ಗೆ ಸರ್ಕಾರದ ಮೂಲಕ ವ್ಯವಹಾರ ನಡೆಯಬೇಕಾಗುತ್ತದೆ. ಅಲ್ಲಿಯವರೆಗೂ ಕಂದಾಯ ವಸೂಲು ಮಾಡುವುದನ್ನು ನಿಲ್ಲಿಸಿ ಎಂದು ಹೇಳುವ ಸಲಹೆಗೆ ಮನ್ನಣೆ ಕೊಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಶ್ರೀ ಕೃಷ್ಣಪ್ಪ ನವರು ಹೇಳುತ್ತಾ ಕಂದಾಯ ವಸೂಲಿ ಕ್ರಮ ಬಹಳ ಕ್ರೂರವಾಗಿ ನಡೆಯುತ್ತಿದೆಂದು ಹೇಳಿದರು. ನಾನು ಈಗಲೇ ಕ್ರೂರವಾಗಿ ವಸೂಲುಮಾಡಬೇಕೆಂದಾಗಲೀ ಅಥವಾ ಯಾವಾಗ ಅದು ನಡೆಯ ಬೇಕಾಗುತ್ತದೆಯೆಂದಾಗಲೀ ಹೇಳಲಿಲ್ಲ. ಬೆಳೆ ಇದ್ದಾಗ್ಗೆ ಕಡ್ಡಾಯವಾಗಿ ವಸೂಲುಮಾಡ ಬೇಕೆಂದು ಹೇಳಿದ್ದೆ. ಆ ರೀತಿ ವಸೂಲು ಮಾಡದೆ ಶಾಸನ ಸಭೆಗಳಾಗಲೀ, ಕಚೇರಿಗಳಾಗಲೀ ನಡೆಸುವುದು ಬಲು ಕಷ್ಟ. ಆದ್ದರಿಂದ ಈ ಕೆಲಸ ಮಾಡಬೇಕು. ಆರ್. ಆರ್. ವಿಷಯದಲ್ಲಿ ದಾಖಲುಗಳಿಲ್ಲ. ಸಾಲ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯಾರು ವ್ಯವಸಾಯ ಮಾಡುತ್ತಾರೋ ಅವನ ಹೆಸರಿನಲ್ಲಿ ಖಾತೆ ಇಲ್ಲ. ಇಂದು ಬಹಳ ಬೇಗನೆ ಯಾರು ಜಮೀನನ್ನು ಅನುಭವಿಸುತ್ತಾರೋ ಅವರ ಹೆಸರಿನಲ್ಲಿ ಖಾತೆ ಬದಲಾವಣೆ ಆಗಬೇಕೆಂದು ಅನೇಕ ಮಾನ್ಯ ಸದಸ್ಯರು ತಿಳಿಸಿದರು. ಈಗ ಮೈಸೂರು ರಾಜ್ಯದಲ್ಲಿ ಸುಮಾರು 45 ಲಕ್ಷ ಜನ ಹಿಡುವಳಿ ದಾರರು ಇದ್ದಾರೆ. ಯಾರ್ಯಾರಿಗೆ ಎಷ್ಟೆಷ್ಟು ಖುಷ್ಕಿ, ತರೀ, ಬಾಗಾಯಿತು ಜಮೀನು ಯಾವ್ಯಾವ ಊರಿನಲ್ಲಿದೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿದುಕೊಂಡು ಅದನ್ನು ಒಂದು ಪುಸ್ತಕದಲ್ಲಿ ಬರೆದು, ಅವರು ಸರ್ಕಾರಕ್ಕೆ ಎಷ್ಟು ವರ್ಷಗಳ ಕಂದಾಯವಾಗಲೀ, ವಾಟರ್‌ರೇಟ್ ಆಗಲೀ ಅಥವಾ ಬೆಟರ್‌ಮೆಂಟ್ ಲೆವಿಯಾಗಲೀ ಕೊಡಬೇಕಾದುದು ಇದೆ, ಯಾವ್ಯಾವುದು ಬಾಕಿ ಇದೆ, ಭೂಮಿಗೆ ಸಂಬಂಧಪಟ್ಟುದು ಕೊಡಬೇಕಾದುದು ಇದೆ, ಯಾವ್ಯಾವ ವರ್ಷ ಎಷ್ಟೆಷ್ಟು ಕೊಟ್ಟಿದ್ದಾರೆ, ಬಾಕಿ ಎಷ್ಟು ಇದೆ ಎನ್ನುವುದನ್ನು ನಿರ್ಧಿಷ್ಟವಾಗಿ ಗೊತ್ತಿದ್ದರೆ ಅವನು ಸಾಲ ತೆಗೆದುಕೊಳ್ಳುವುದಕ್ಕಾಗಲೀ, ಸಾಲ ತೀರಿಸುವುದಕ್ಕಾಗಲೀ ಅನುಕೂಲವಾಗುತ್ತದೆ. ಹಣ ವಾಪಸ್ಸು ಕೊಡುವುದರಲ್ಲಿ ಕ್ರಮ ಹೇಗೆ ತೆಗೆದುಕೊಳ್ಳುತ್ತಾರೆಂಬುದನ್ನು ತಿಳಿಸಬೇಕು. ಇದನ್ನು ತಿಳಿದುಕೊಳ್ಳುವುದಕ್ಕೆ ರಶೀದಿ ಪಟ್ಟಿ ಇರಬೇಕೆಂಬುದು ಬಹಳ ಒಳ್ಳೆಯದು. ಈ ರಶೀದಿ ಪಟ್ಟಿಯನ್ನು ಕೊಡುವುದನ್ನು ನಾನು ಹೊಸದಾಗಿ ಮಾಡಿದ್ದಲ್ಲ. ಅನೇಕ ವರ್ಷಗಳಿಂದಲೂ ಇದೆ.

ಇನ್ನೊಂದು ವಿಷಯ. ಈ ಒಂದು ಪದ್ಧತಿಯನ್ನು 3-4 ವರ್ಷಗಳ ಹಿಂದೆಯೇ ಪ್ರಾರಂಭ ಮಾಡಿದರು. ಮೂರು ವರ್ಷಗಳಲ್ಲಿ 11 ಲಕ್ಷ ರಶೀದಿ ಪಟ್ಟಿಗಳನ್ನು ಕೊಟ್ಟಿದ್ದಾರೆ. ಕಳೆದ ವರ್ಷ ಮೇ ತಿಂಗಳಲ್ಲಿ ಜಿಲ್ಲಾಧಿಕಾರಿಗಳ ಒಂದು ಸಮ್ಮೇಳನವನ್ನು ಕರೆದು ಅಲ್ಲಿ ಆ ಪಟ್ಟಿಗಳನ್ನು ಎಷ್ಟು ವರ್ಷಗಳಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆಂಬುದನ್ನು ಕೇಳಿದ್ದಕ್ಕೆ 2—3 ವರ್ಷಗಳಾದರೂ ಬೇಕೆಂದು ಹೇಳಿದರು. ಕಡೆಗೆ ಲೆಕ್ಕಹಾಕಿ ಡಿಸೆಂಬರ್ ಆಖೈರಿನೊಳಗೆ ಅಥವಾ ಮಾರ್ಚಿ ಆಖೈರಿನೊಳಗೆ ಇದನ್ನು ಮಾಡುವುದಕ್ಕೆ ಸಾಧ್ಯವೆಂದು ತಿಳಿಸಿದ್ದಾರೆ. ಅದರ ಮೇಲೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಂಡು ರಶೀದಿ ಪಟ್ಟಿಗಳನ್ನು ಮುದ್ರಣಾಲಯದಲ್ಲಿ ಅಚ್ಚುಹಾಕಿಸಿ ಅವರಿಗೆ ಕೊಟ್ಟಿದ್ದೇವೆ. ಈಗ 10–11 ತಿಂಗಳುಗಳಲ್ಲಿ 25 ಲಕ್ಷ ಪಟ್ಟಾಗಳನ್ನು ಹಂಚಿಕೆಮಾಡಿ ಬರೆದು ಕೊಟ್ಟಿದ್ದಾರೆ. ಇನ್ನೂ 4 ಲಕ್ಷ ಪಟ್ಟಾಗಳನ್ನು ಬರೆಯಬೇಕು. ಅದನ್ನು ಇನ್ನು ಒಂದೆರಡು ತಿಂಗಳುಗಳ ಅವಧಿಯಲ್ಲಿ ಪೂರ್ಣವಾಗಿ ಬರೆಯುವ ಕೆಲಸ ಮಾಡುತ್ತಾರೆ. ಮೊನ್ನೆ ಇದರ ಬಗ್ಗೆ ಜಿಲ್ಲಾಧಿಕಾರಿಗಳ ಸಮ್ಮೇಳನವನ್ನು ಕರೆದು ಆದೇಶವನ್ನು ಕೊಟ್ಟಿದ್ದೇವೆ. ಇನ್ನೂ ಒಂದೆರಡು ತಿಂಗಳೊಳಗೆ ಈ ಕೆಲಸ ಪೂರ್ಣವಾಗಬೇಕೆಂದು ರಶೀದಿ ಪಟ್ಟಾಗಳನ್ನು ತೆಗೆದುಕೊಂಡು ಹೋಗಿ ಕೆಲವು ಊರುಗಳಿಗೆ ಹೋಗಿ ರೈತರಿಂದ ಪಟ್ಟಾಗಳನ್ನು ತರಿಸಿ ಅವನ್ನು ಅಲ್ಲಿ ಯಾವ ರೀತಿಯಾಗಿ ಬರೆದಿದ್ದಾರೆಂಬುದನ್ನು ಜಿಲ್ಲಾಧಿಕಾರಿಗಳಿಗೆ, ಅಸಿಸ್ಟೆಂಟ್ ಕಮಿಷನರಿಗೆ ಹಾಗೂ ತಹಸೀಲ್‌ದಾರರಿಗೆ ಸ್ಪಷ್ಟವಾಗಿ ತಿಳಿಸಿದ್ದಾರೆ. ಅದರಲ್ಲಿರುವ ಲೋಪದೋಷಗಳನ್ನು ತೋರಿಸಿಕೊಟ್ಟಿದ್ದಾರೆ. ಇಂತಿಂಥಾದ್ದನ್ನು ಈ ರೀತಿಯಾಗಿ ಪೂರ್ಣವಾಗಿ ಬರೆಯಬೇಕೆಂದು ತಿಳಿಸಿದ್ದಾರೆ. ಅದರಂತೆ ಬರೆಯುತ್ತಿದ್ದಾರೆ. ಇನ್ನು ಕೆಲವು ಕಡೆಗಳಿಂದ ವರ್ತಮಾನಗಳು ಬಂದಿವೆ. ಪಟ್ಟಿಗಳನ್ನು ಹಂಚುವುದಕ್ಕೆ ಎಂಬುದಾಗಿ ತೆಗೆದುಕೊಂಡು ಆಯಾ ವಿಲೇಜ್ ಅಕೌಂಟೆಂಟ್ಸ್ ಅವರು ಹಾಗೆಯೇ ಅವನ್ನು ಇಟ್ಟುಕೊಂಡಿದ್ದಾರೆಂದು ಕೆಲವರು ಹೇಳಿದರು. ಅವನ್ನು ಇನ್ನೂ ರೈತರಿಗೆ ಬರೆದುಕೊಟ್ಟಿಲ್ಲವೆಂದೂ ಸಹ ಹೇಳಿದರು. ನಾನು ಹೋದ ಕಡೆಗಳಲ್ಲಿ ನಮ್ಮ ಅಧಿಕಾರಿಗಳು ಯಾರಾದರೂ ಅಕಸ್ಮಾತ್ ಸಿಕ್ಕಿದರೆ, ಅಕಸ್ಮಾತ್ ರೈತರೂ ಕೂಡ ನನ್ನ ಎದುರಿಗೆ ಸಿಕ್ಕಿದರೆ ಅವರನ್ನು ಕರೆದು ಭೇಟಿ ಕೊಟ್ಟಿದ್ದೇನೆ. ಹಾಗೂ ರಿಕಾರ್ಡ್ಸನ್ನು ವೆರಿಫೈ ಮಾಡಿ ನೋಡುತ್ತಿದ್ದೇನೆ. ಹಾಗಿಲ್ಲದಿದ್ದರೆ ನಡೆದಿರತಕ್ಕ ಕಾರ್ಯ ಸ್ಪಷ್ಟ ಚಿತ್ರವಾಗಿರುವುದಿಲ್ಲವೆಂದು ನಾನು ತಿಳಿಸಿದ್ದೇನೆ. ಆದ್ದರಿಂದ ಕೂಡಲೇ ರೈತರಿಗೆ ಪಟ್ಟಾಕೊಡುವುದರಿಂದ ರೈತರ ಹಿತರಕ್ಷಣೆ ಬಹಳಮಟ್ಟಿಗೆ ಆಗುತ್ತದೆಂದು ನನಗೆ ಪೂರ್ಣ ವಿಶ್ವಾಸ ಇದೆ. ಮಾನ್ಯ ಸದಸ್ಯರು ಅನೇಕರು ಇದರಲ್ಲಿ ಸಲಹೆ ಮಾಡಿದ್ದಾರೆ. ಈ ವಿಷಯದಲ್ಲಿ ನಾವು ಎಳ್ಳಷ್ಟೂ ಹಿಂದು ಮುಂದು ನೋಡದೆ ನಮ್ಮ ಅಧಿಕಾರಿಗಳಿಂದ ಕೆಲಸವನ್ನು ಆದಷ್ಟು ಬೇಗ ಮಾಡಿಸುತ್ತೇನೆಂದು ಭರವಸೆ ಕೊಡುತ್ತೇನೆ.

ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಬಳ್ಳಾರಿಯಲ್ಲಿ, ಕೊಡಗಿನಲ್ಲಿ ಹಾಗೂ ಕೊಳ್ಳೇಗಾಲದಲ್ಲಿ ಇನ್ನೂ ರಿಕಾರ್ಡ್ ಆಫ್ ರೈಟ್ಸ್ ಆಗಿರಲಿಲ್ಲ. ಇದನ್ನು ಹೊಸದಾಗಿ ಮಾಡಿಸಲಾಗುತ್ತದೆಂದು ಹೇಳಿದೆ. ಅದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅನೇಕರು ಸೌತ್ ಕೆನರಾದಲ್ಲಿ ರಿಕಾರ್ಡ್ ಆಫ್ ರೈಟ್ಸ್ ಬಗ್ಗೆ ತಪ್ಪು ತಪ್ಪು ದಾಖಲೆಗಳನ್ನು ಕೊಟ್ಟು ಯಾರು ಭೂಮಿ ಸ್ವಾಧೀನದಲ್ಲಿದ್ದಾರೋ ಅವನ ಹೆಸರಿಗೆ ರಿಕಾರ್ಡ್ ಆಫ್ ರೈಟ್ಸ್ ದಾಖಲು ಮಾಡುವುದಕ್ಕೆ ಅವಕಾಶ ಇಲ್ಲದ ಹಾಗೆ ನಡೆಯುತ್ತಿದೆ. ಆ ವಿಷಯದಲ್ಲಿ ಎಚ್ಚರಿಕೆಯನ್ನು ತೆಗೆದು ಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳಿದರು. ನಾನು ಮೊನ್ನೆತಾನೆ ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ ಬಂದಿದ್ದೇನೆ. ನಾನು ನೋಡಿರುವ ಹಾಗೆ ನನಗೆ ಬಂದಿರತಕ್ಕ ಅಂಕಿ ಅಂಶಗಳ ಪ್ರಕಾರ ದಕ್ಷಿಣ ಕನ್ನಡದಲ್ಲಿ ಗೇಣೀದಾರರು ಸೇಕಡ 50 ಕ್ಕಿಂತ ಹೆಚ್ಚು ಜನರು ಇದ್ದಾರೆ. ಈ ವಿಚಾರವನ್ನು ನಾನು ಸ್ಪಷ್ಟವಾಗಿ ಕೇವಲ ಸೌತ್ ಕೆನರಾ ಜಿಲ್ಲೆಗೇ ಅಲ್ಲ, ಎಲ್ಲಾ ಜಿಲ್ಲೆಗಳಿಗೂ ಸ್ಪಷ್ಟವಾಗಿ ತಿಳಿಸಿದ್ದೇನೆಂದು ಹೇಳುತ್ತೇನೆ. ಪಹಣಿ ಬದಲಾವಣೆಯಾಗಿ ಗೇಣೀದಾರರ ಹೆಸರೇ ಬಂದಿಲ್ಲ. ಒಕ್ಕಲೆಬ್ಬಿಸುತ್ತಿದ್ದಾರೆಂದು ವರ್ತಮಾನ

ಗೊತ್ತಾದ ಕೂಡಲೇ ನಮ್ಮ ಅಧಿಕಾರಿಗಳು ಸ್ಥಳಕ್ಕೇ ಹೋಗಿ ಮಹಜರು ನಡೆಸಿ ಯಾರು ಗೇಣಿದಾರರಾಗಿ ಭೂಮಿಯನ್ನು ಸ್ವಾಧೀನದಲ್ಲಿಟ್ಟುಕೊಂಡಿರುತ್ತಾರೋ ಅಂತಹವರ ಹೆಸರಿಗೆ ದಾಖಲುಗಳನ್ನು ಸ್ಪಷ್ಟಪಡಿಸಬೇಕೆಂದು ನಿರ್ದಿಷ್ಟವಾದ ಒಂದು ಆದೇಶವನ್ನು ಕೊಟ್ಟಿದ್ದೇನೆ. ಎಲ್ಲಿ ಇಂತಹ ಲೋಪದೋಷಗಳು ಇದ್ದರೆ ಮಾನ್ಯ ಸದಸ್ಯರು ಆಗಿಂದಾಗ್ಗೆ ಅಲ್ಲಲ್ಲೇ ವರ್ತಮಾನ ಗೊತ್ತಾದ ಕೂಡಲೇ ತಿಳಿಸಬೇಕೆಂದು ಮಾನ್ಯ ಸದಸ್ಯರನ್ನು ಮನವಿ ಮಾಡಿಕೊಳ್ಳುತ್ತೇನೆ. ಆ ವಿಷಯದಲ್ಲಿ ಸರ್ಕಾರ ಬಹಳ ಜಾಗರೂಕತೆಯಲ್ಲಿದೆ. ಈಗ ಭೂಮಿ ಯಾರ ಸ್ವಾಧೀನ ದಲ್ಲಿದೆಯೋ, ಯಾರು ಗೇಣೀದಾರರಾಗಿದ್ದಾರೋ ಅವರ ಒಂದು ಹಕ್ಕಿಗೆ ಚ್ಯುತಿ ಬಂದಿದೆ. ಅಂತಹವರ ಹಕ್ಕನ್ನು ಕಾಪಾಡುವುದಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತೇವೆ.

ಇನ್ನು ದಾಖಲೆಗಳ ವಿಷಯದಲ್ಲಿ, ರಶೀತಿ ಪಟ್ಟಿ ವಿಷಯದಲ್ಲಿ ಒಂದು ತೊಂದರೆ ಇದೆ. ಯಾರಾದರೂ ಸತ್ತು ಹೋದರೆ, ಅವರ ದಾಖಲೆಗೆ ವಾರಸುದಾರರು ಯಾರು ಎಂಬುದನ್ನು ತಿಳಿಸಲು ವಿಲೇಜ್ ಅಕೌಂಟೆಂಟ್ ಅವರು ಕೆಲಸ ಮಾಡುತ್ತಿದ್ದರು. ವಾರಸುದಾರರು ಯಾರು ಇದ್ದಾರೋ ಅವರೇ ತಿಳಿಸಬೇಕು. ಅದರ ಬಗ್ಗೆ ಒಂದರಿಂದ 10 ರವರೆಗೆ ಫೀಸ್ ಹಾಕ ಬೇಕೆಂದು ಗೊತ್ತಾಯಿತು. ಆದರೆ ಅನೇಕ ಜನರು ಇಂತಹವರು ವಾರಸುದಾರರು ಎಂದು ತಿಳಿಸದೆಯೇ ಬಹಳವಾಗಿ ಈಗ ಬಾಕಿ ಉಳಿದಿದೆ. ಎಷ್ಟೋ ವೇಳೆ ಫೀಸ್ ತೆಗೆದುಕೊಳ್ಳದಿದ್ದರೂ ಪರವಾ ಇಲ್ಲ. ಇದನ್ನು ತಿಳಿಸಿ ಅವರ ದಾಖಲೆ ಗೊತ್ತುಮಾಡಿಕೊಳ್ಳಲಿ ಎಂದು ಹೇಳಿದ್ದೇವೆ. ಮಾನ್ಯ ಶ್ರೀ ಅಂದಾನಯ್ಯನವರು ಒಂದು ಮಾತನ್ನು ಹೇಳಿದರು. ಹಿಂದೆ ಜಮಾಬಂದಿಗಳು ಏನು ಮಾಡುತ್ತಿದ್ದರು ಎಂಬುದು ಗೊತ್ತು. ಮೈಸೂರು ಸಂಸ್ಥಾನದಲ್ಲಿ ದಕ್ಷಿಣ ಕನ್ನಡ ಭಾಗದ ಜಿಲ್ಲೆಗಳಲ್ಲಿ ಒಂದು ಅಭ್ಯಾಸವಿದೆ. ಅಲ್ಲಿ ಮತ್ತೆ ಜಮಾಬಂದಿಗಳನ್ನು ನಡೆಸಬೇಕೆಂದು ಹೇಳಿ ದ್ದಾರೆ. ಆ ರೀತಿಯಾಗಿ ಜಮಾಬಂದಿಗಳನ್ನು ಮಾಡಿ, ಜಮಾಬಂದಿ ನಡೆಯುವ ಕಾಲದಲ್ಲಿ ಜಿಲ್ಲಾಧಿಕಾರಿಗಳು, ಅಸಿಸ್ಟೆಂಟ್ ಕಮೀಷನರುಗಳು, ತಹಸೀಲ್ದಾರ್ ಕುಳಿತು ಪ್ರತಿ ತಾಲ್ಲೂಕು, ಹಂತದಲ್ಲಿಯೂ ಏನೇನು ಜನಗಳಿಂದ ದೂರು ಬರುತ್ತವೆಯೋ ಅವುಗಳನ್ನು ಕೇಳುವುದಕ್ಕೂ, ಮತ್ತು ಅವುಗಳನ್ನು ಹೇಳುವುದಕ್ಕೂ ಹಾಗೂ ಅವುಗಳನ್ನು ನಿವಾರಣೆ ಮಾಡಿಕೊಳ್ಳುವ ಕಾರ್ಯಕ್ರಮವನ್ನು ಕೈಗೊಳ್ಳುವುದಕ್ಕೂ ಜಮಾಬಂದಿ ಮಾಡುವುದರಿಂದ ಅವರಿಗೆ ಅನುಕೂಲ ವಾಗುತ್ತದೆಂಬ ವಿಶ್ವಾಸ ನನಗೆ ಇದೆ. ಆದುದರಿಂದ ಇದನ್ನು ಮತ್ತೆ ಜಾರಿಗೆ ತರಬೇಕೆಂಬುದು ನನ್ನ ಅಭಿಪ್ರಾಯ. ಇದನ್ನು ತರುವುದಕ್ಕೆ ಪ್ರಯತ್ನವನ್ನು ನಾನಾಗಲೇ ಮಾಡಿದ್ದೇನೆ.

ಇನ್ನು ಅಧಿಕಾರಿಗಳ ವರ್ಗಾವಣೆಯ ವಿಚಾರಕ್ಕೆ ಬಂದರೆ ಮೊದಲನೆಯ ಸಾಲಿನಲ್ಲಿರತಕ್ಕ ಮಂತ್ರಿಗಳ ಮೊದಲುಗೊಂಡು ಈ ಅಧಿಕಾರಿಗಳ ವರ್ಗಾವಣೆ ಕೇಳುವುದು ಒಂದು ಅಭ್ಯಾಸವಾಗಿ ಬಂದುಬಿಟ್ಟಿದೆ. ಆದರೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕೆಲಸಕಾರ್ಯಗಳನ್ನು ಚೆನ್ನಾಗಿ ನಡೆಸಿದರೆ ಜನರು ನಮ್ಮನ್ನು ಹೊಗಳುತ್ತಾರೆ, ಮತ್ತು ಅವರ ವಿಶ್ವಾಸವನ್ನು ಈ ಮೂಲಕವಾಗಿಯಾದರೂ ಗಳಿಸಿಕೊಂಡರೆ ಮತ್ತೆ ಮುಂದೆ ಬರುವ ಎಲ್ಲಾ ಚುನಾವಣೆಗಳಲ್ಲೂ ನಾನೇ ಆರಿಸಿ ಬರುವುದಕ್ಕೆ ಇದು ಒಂದು ದೊಡ್ಡ ಸಹಾಯಕವಾಗುತ್ತದೆಂಬ ಆಸೆ ಎಲ್ಲರಲ್ಲೂ ಇರುವುದು ಸ್ವಾಭಾವಿಕ. ಆದರೆ ಅದು ಹಾಗೆ ಆಗುವುದಿಲ್ಲ ಎಂಬುದು ನನ್ನ ಸ್ವಂತ ಅಭಿಪ್ರಾಯ. ಯಾವ ಒಬ್ಬ ಅಧಿಕಾರಿಯೇ ಆಗಲಿ ತಮ್ಮ ಕ್ಷೇತ್ರದಲ್ಲಿ ಸರಿಯಾಗಿ ಕೆಲಸ ಮಾಡದಿದ್ದರೆ ಅವರನ್ನು ಸರಿಯಾಗಿ ಕೆಲಸ ಮಾಡುವಂತೆ ಎಚ್ಚರಗೊಳಿಸಬೇಕು. ಅದಕ್ಕೆ ಆ ಅಧಿಕಾರಿ ಎಚ್ಚೆತ್ತು ಕೆಲಸ ಮಾಡಿದರೆ ಸರಿ; ಇಲ್ಲವಾದರೆ ಅವನು ಕೆಲಸವನ್ನು ಬಿಟ್ಟು ಮನೆಗೆ ಹೋಗಬೇಕಾಗುತ್ತದೆ. ಆರೀತಿಯಾಗಿ ಈ ಸಮಸ್ಯೆಯನ್ನು ನೋಡದೆ ನಮ್ಮ ಸದಸ್ಯರು ಒಂದೇನು ಮಾಡುತ್ತಾರೆಂದರೆ, ಇವರನ್ನು ಮೆಚ್ಚಿಸಲು ಅವರವರ ತಾಲ್ಲೂಕಿನಲ್ಲಿರುವ ತಹಸೀಲ್ದಾರ ಇಲ್ಲವೇ ಜಿಲ್ಲೆಯಲ್ಲಿರುವ ಡೆಪ್ಯುಟಿ ಕಮೀಷನರು

ಬಂದು ಇವರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಕೆಲಸ ಮಾಡಿಕೊಟ್ಟರೆ ಅವರ ಸಮಕ್ಷಮದಲ್ಲಿ 'ನಮ್ಮ ತಹಸೀಲ್ದಾರರು ಇಲ್ಲವೇ ನಮ್ಮ ಡೆಪ್ಯುಟಿ ಕಮಿಷನರು ಎಂಥ ಒಳ್ಳೆಯವರು, ಎಷ್ಟು ದಕ್ಷರು' ಎಂದು ಹೊಗಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ಇದು ಬಹಳ ಕೆಡಕನ್ನು ಮಾಡುತ್ತದೆ. ತಮಗೆ ಅವರಿಂದ ಸ್ವಲ್ಪ ಉಪಕಾರವಾದರೂ ಅವರಿಂದ ಅನ್ಯರಿಗೆ ಅನೇಕ ರೀತಿಯಲ್ಲಿ ಕಿರುಕುಳವಾಗುವುದಕ್ಕೆ ಅವಕಾಶವಾಗುತ್ತದೆ. ಆ ಅಧಿಕಾರಿಯನ್ನು ಪ್ರಶ್ನೆ ಮಾಡತಕ್ಕವರು ಯಾರು ಎಂದು ಆತನು ಮೆರೆಯುವುದಕ್ಕೆ ನಾವಾಗೇ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಆದುದರಿಂದ ಸಾಧ್ಯವಾದ ಮಟ್ಟಿಗೂ ಅವರು ಎಷ್ಟೇ ಒಳ್ಳೆಯವರಾಗಿರಲಿ, ಎಷ್ಟೇ ಒಳ್ಳೆ ಕೆಲಸಗಳನ್ನು ಮಾಡಿರಲಿ ಆ ವಿಚಾರವನ್ನು ಅವರ ಎದುರಿಗೆ ತಿಳಿಸದಿರುವುದು ಒಳ್ಳೆಯದೆಂದು ಹೇಳುತ್ತೇನೆ. ಯಾರು ಕಾನೂನು ಪ್ರಕಾರ ಸರಿಯಾಗಿ ಕೆಲಸ ಮಾಡದಿದ್ದರೆ ಅಂಥವರ ಬಗ್ಗೆ ಶಿಸ್ತಿನ ಕ್ರಮ ಕೈಗೊಂಡು ಅವನನ್ನು ದಾರಿಗೆ ತರಬೇಕಾದ್ದು ನಮ್ಮ ಕರ್ತವ್ಯ. ಇದು ನನ್ನ ಅಭಿಪ್ರಾಯ. 'ಇನ್ನು ಬೇರೆಯವರು ಯಾವ ರೀತಿ ಅಭಿಪ್ರಾಯ ಪಡುತ್ತಾರೋ ತಿಳಿಯೆನು.

ಇನ್ನು ಕೆಲವು ಮಾನ್ಯ ಸದಸ್ಯರು ಈ ಇಲಾಖೆಯಲ್ಲಿ ಬಹಳ ದೋಷವಿದೆ, ದುಡ್ಡನ್ನು ನೇರವಾಗಿ ಕೊಡದಿದ್ದರೆ ಯಾವ ಕೆಲಸಗಳೂ ಆಗುವುದಿಲ್ಲ ಎಂದು. ಅಷ್ಟೇ ಅಲ್ಲದೆ ಮಂತ್ರಿಗಳು ಹೇಳಿದ ಮೇಲಾದರೂ ಆ ಕೆಲಸ ಬೇಗ ಆಗಬಹುದು ಎಂದರೆ ಅದೂ ಕೂಡ ಆಗುತ್ತಿಲ್ಲ. ಕೆಲಸ ಬೇಗ ಆದಾಗ್ಯೂ ಅದಕ್ಕೆ ಲಂಚವನ್ನು ಕೊಡದೆ ಅದೂ ಕೂಡ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ನಾವೂ ನೀವೂ ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡಿದರೆ ಸಾಧ್ಯವಾಗಬಹುದೆಂದು ನಾನು ಅಭಿಪ್ರಾಯ ಪಡುತ್ತೇನೆ. ಇದು ನನ್ನ ನಿರ್ದಾಕ್ಷಿಣ್ಯವಾದ ಅಭಿಪ್ರಾಯ. ಆದರೆ ಅಧಿಕಾರಿಗಳಿಗೆ ನನ್ನ ಬಗ್ಗೆ ಸ್ವಲ್ಪ ಹೆದರಿಕೆ ಇದೆ. ಮಾನ್ಯ ಕೃಷ್ಣಪ್ಪನವರು ಈ ಲಂಚವನ್ನು ತಡೆಗಟ್ಟಲು ಅದರ ಮೂಲ ದೋಷವೇನೆಂಬುದನ್ನು ಕಂಡುಹಿಡಿದು ತಾವು ಇದನ್ನು ತಡೆಗಟ್ಟಬೇಕೆಂದು ಹೇಳಿದರು. ನನಗೆ ಇರತಕ್ಕ ಸ್ವಲ್ಪ ಅನುಭವದಲ್ಲಿ ತಾಲ್ಲೂಕು ಮಟ್ಟದಲ್ಲಿ ಖಾತೇದಾರರಿಗೆ ರಶೀದಿ ಪಟ್ಟಿಗಳನ್ನು ಕೊಡತಕ್ಕ ವಿಚಾರದಲ್ಲಿ ಮತ್ತು ಅಕ್ವಿಜಿಷನ್ ಸಂದರ್ಭಗಳಲ್ಲಿ, ಮತ್ತು ಕನ್‌ವರ್‌ಷನ್ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ಇದ್ದಿತು. ಆದರೆ ಇತ್ತೀಚೆಗೆ ಇದರ ವಿಚಾರದಲ್ಲಿ ಕಟ್ಟುನಿಟ್ಟಾದ ಹುಕುಂಗಳನ್ನು ಮಾಡಿದ್ದೇನೆ. ಈ ಕನ್‌ವರ್‌ಷನ್ ವಿಚಾರದಲ್ಲಿ ಅರ್ಜಿಯನ್ನು ಕೊಟ್ಟ ಒಂದು ತಿಂಗಳೊಳಗಾಗಿ ಅವರು ಕ್ರಮ ಕೈಗೊಂಡು ಪಾರ್ಟಿಗೆ ಫಲಿತಾಂಶವನ್ನು ತಿಳಿಸದಿದ್ದರೆ 'ದಿ ಲ್ಯಾಂಡ್ ಡೀಮ್ಡ್ ಟು ಹ್ಯಾವ್ ಬೀನ್ ಕನ್‌ವರ್‌ಟೆಡ್' ಎಂದು ಭಾವಿಸಬೇಕೆಂಬುದಾಗಿ ರೂಲ್ಸ್‌ನಲ್ಲೇ ಹೇಳಿದೆ. ಇದನ್ನು ಒಂದು ತಿಂಗಳೊಳಗಾಗಿ ಕೊಡದಿದ್ದರೆ ಆ ಅಧಿಕಾರಿಯ ಬಗ್ಗೆ ಕ್ರೂರ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದೇನೆ. ಅದೇ ರೀತಿ ಈ ಕಾಪಿ ಅರ್ಜಿಗಳ ವಿಷಯದಲ್ಲೂ ಕೂಡ ಅದೇ ರೀತಿ ಆಜ್ಞೆ ಮಾಡಿದ್ದೇನೆ. ಇದಕ್ಕೆ ಮೂರು ದಿನಗಳ ವಾಯಿದೆ ಗೊತ್ತುಮಾಡಿದೆ. ಇದರ ಬಗ್ಗೆ ಒಂದು ಸರ್ಕ್ಯುಲರನ್ನೇ ಹೊರಡಿಸಿದ್ದೇನೆ. ಕೆಲವು ಸಂದರ್ಭಗಳಲ್ಲಿ ಒಂದು ತಿಂಗಳಾದರೂ ಇವು ಆಗುವುದಿಲ್ಲ. ಅದಕ್ಕಾಗಿ ಇದಕ್ಕೇ ಒಂದು ಪ್ರತ್ಯೇಕ ರಿಜಿಸ್ಟರನ್ನು ಇಟ್ಟು ಅದರಲ್ಲಿ ಕಾಪಿಗಾಗಿ ಬರತಕ್ಕ ಎಲ್ಲಾ ಅರ್ಜಿಗಳನ್ನೂ ಕ್ರೋನಲಾಜಿಕಲ್ ಕ್ರಮದಲ್ಲಿ ಅದರಲ್ಲಿ ಎಂಟರ್‌ಮಾಡಿ ಅದರಂತೆ ಮೂರು ದಿನಗಳು ಮುಗಿಯುವುದರೊಳಗಾಗಿ ಆ ಕಾಪಿಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇನೆ. ಅಲ್ಲದೆ ಇದೇ ವಿಚಾರದಲ್ಲಿ ಮಾನ್ಯ ಆಂದಾನಯ್ಯ ಅವರು ಸಲಹೆ ಮಾಡಿದಂತೆ ಈ ಕಾಪೀ ಅರ್ಜಿಗಾಗಿ ರೈತನು ತಾಲ್ಲೂಕ್‌ಕಛೇರಿಗೆ ತಿರುಗಬೇಕಾಗಿಲ್ಲ. ಮತ್ತು ಅಲ್ಲಿ ಇವನು ಕಾಯಲೂ ಬೇಕಾದ್ದಿಲ್ಲ. ರೈತನು ತನ್ನ ಕಾಪೀ ಅರ್ಜಿಯ ಬಗ್ಗೆ 20 ಪೈಸೆ ಪೋಸ್ಟಲ್ ಸ್ಟ್ಯಾಂಪನ್ನು ಇಟ್ಟು ಒಂದು ಕಾಗದ ಬರೆದರೆ ಸಾಕು, ಆತನಿಗೆ ಅವನ ಅರ್ಜಿ ಕಾಪಿಯನ್ನು ಪೋಸ್ಟಿನಲ್ಲೇ ಕಳುಹಿಸುವುದಕ್ಕೂ ಕೂಡ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅಂತೂ ಇದು ಮೂರು ದಿನಗಳಲ್ಲಿ ಮುಗಿಯಲೇಬೇಕೆಂದು ತಿಳಿಸಿದ್ದೇನೆ.

ಇನ್ನು ಅಕ್ವಿಜಿಷನ್ ಕೇಸುಗಳಲ್ಲಿ ಕೆಲವು ಸಂದರ್ಭಗಳಲ್ಲಿ 10-15 ವರ್ಷಗಳಾದರೂ ಅವರಿಗೆ ಪರಿಹಾರ ದೊರೆತಿರುವುದಿಲ್ಲ. ಇನ್ನು ಮುಂದಕ್ಕೆ ಅವು ಎಷ್ಟೇ ವರ್ಷಗಳಿಂದ ಮುಲ್ಕಿ ಬಿದ್ದಿರಲಿ ಇನ್ನು ಒಂದು ವರ್ಷದೊಳಗಾಗಿ ಫೈಸಲ್ಮಾಡುವಂತೆ ಅಧಿಕಾರಿಗಳಿಗೆ ಎಚ್ಚರಿಕೆಯನ್ನು ನೀಡಲಾಗಿದೆ. ಇದಕ್ಕೂ ಕೂಡ ಒಂದು ಸರ್ಕ್ಯುಲರನ್ನು ಕಳುಹಿಸಿದೆ. ಇನ್ನು ಇದೇ ಸಂದರ್ಭದಲ್ಲಿ ಒಂದು ಏನು ತಿಳಿಸಬೇಕಾಗಿದೆ ಎಂದರೆ ಆ ಅಕ್ವಿಜಿಷನ್ ಆಕ್ಟ್‌ನ್ನೂ ಕೂಡ ಸೂಕ್ತವಾದ ರೀತಿಯಲ್ಲಿ ತಿದ್ದುಪಡಿ ಮಾಡುವುದಕ್ಕೆ ಸರ್ವ ಪ್ರಯತ್ನಗಳನ್ನೂ ಮಾಡಲಾಗಿದೆ. ಅದೂ ಕೂಡ ಬೇಗ ಸಭೆಯ ಮುಂದೆ ಬರತಕ್ಕ ನಿರೀಕ್ಷಣೆ ಇದೆ.

ಇನ್ನು ಮಾನ್ಯ ಸದಸ್ಯರಾದ ವೀರಪ್ಪಗೌಡರು ಒಂದು ಸಲಹೆ ಮಾಡಿದರು. ಮಲೆನಾಡಿನಲ್ಲಿ ದಕ್ಷಿಣ ಕನ್ನಡ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಈ ಜಿಲ್ಲೆಗಳಲ್ಲಿ ಸೊಪ್ಪಿನ ಬೆಟ್ಟ, ಕುಂಕಿ, ಪಾಣೆಬೆಟ್ಟ ಎಂದು ಮುಂತಾಗಿ ಹೇಳುವ ಕೆಲವು ಪ್ರದೇಶಗಳಿವೆ. ಅದನ್ನು ಕೆಲವರಿಗೆ ಅವರ ಅನುಕೂಲಕ್ಕಾಗಿ ಕೊಡಲಾಗಿದೆ. ಇಂಥ ಕಾಡು ಜಮೀನನ್ನು ಅವರಿಗೆ ಸೊಪ್ಪು ಸೌದೆ ಮುಂತಾದುವುಗಳ ಸೌಲಭ್ಯ ಪಡೆಯಲು ಕೊಟ್ಟಿರುತ್ತಾರೆ. ಅದು ಅವರ ಜಮೀನಿನ ಪಕ್ಕದಲ್ಲಿರು ವುದು ಆ ಬೆಟ್ಟ ಅಥವಾ ಕುಂಕಿ ಜಮೀನನ್ನು ಅವರಿಗೆ ಕೊಟ್ಟಿರುವುದು ಒಂದು ಸೌಲಭ್ಯಕ್ಕೇ ಹೊರತು ಅದರ ಮೇಲೆ ಅವರಿಗೆ ಹಕ್ಕಿಲ್ಲ, ಮಾರುವುದಕ್ಕೆ ಅಥವ ಅದರಲ್ಲಿ ವ್ಯವಸಾಯ ಮಾಡಲು ಹಕ್ಕಿಲ್ಲ. ಅದರಲ್ಲಿ ಅವರಿಗೆ ಮನೆ ಕಟ್ಟಿಕೊಳ್ಳಲು ಅವಕಾಶ ಕೊಡಬೇಕು, ಎಂದು ಹೇಳಿದ್ದಾರೆ. 10 ಗುಂಟೆಗಳವರೆಗೆ ಮನೆಕಟ್ಟಿಕೊಳ್ಳಲು ಕೊಡಬೇಕು ಮಾಲೀಕ ಅಥವಾ ಹಕ್ಕುದಾರ ಅಂಥ ಕುಂಕಿ ಅಥವ ಸೊಪ್ಪಿನ ಬೆಟ್ಟದ ಪ್ರದೇಶದಲ್ಲಿ ಮನೆಕಟ್ಟಿಕೊಳ್ಳಲು ಅವಕಾಶ ಕೊಡಬೇಕು ಎಂದು ಸ್ಪಷ್ಟವಾಗಿ ಅಧಿಕಾರಿಗಳಿಗೆ ಆದೇಶ ಕೊಡುತ್ತೇನೆ.

ಕಾನ್‌ಫಿಡೆನ್‌ಷಿಯಲ್ ರಿಪೋರ್ಟು ಕಳಿಸುವ ವಿಷಯದಲ್ಲಿ ದೋಷಗಳಿವೆ ಎಂದು ಮಾನ್ಯ ಸದಸ್ಯರು ವೀರಪ್ಪಗೌಡರು ಹೇಳಿದರು. ಅಧಿಕಾರಿಗಳು ಯಾರು ತಮ್ಮ ಕೈಕೆಳಗೆ ಕೆಲಸ ಮಾಡು ತ್ತಿದ್ದಾರೋ ಅವರ ಹುದ್ದೆಗೆ ಸಂಬಂಧಪಟ್ಟಹಾಗೆ ಅವರ ವ್ಯವಹಾರವನ್ನು ನೋಡಿ ಒಂದು ಅಭಿಪ್ರಾಯ ಸೂಚಿಸಿದರೆ ಅವರಿಗೆ ಬಡ್ತಿಯನ್ನು ಕೊಡುವಾಗ ಅದನ್ನು ಗಮನಿಸುವುದು. ಅನುಸರಿಸುತ್ತಿರುವ ಒಂದು ಕ್ರಮ, ಆದರೆ ಅದಕ್ಕಿಂತ ಉತ್ತಮವಾದ ಕ್ರಮ ಬೇರೆ ಯಾವುದು ಎಂದು ಯೋಚನೆಮಾಡಿಲ್ಲ. ಇಲ್ಲಿಯವರೆಗೆ ಕಾನ್‌ಫಿಡೆನ್‌ಷಿಯಲ್ ರಿಪೋರ್ಟು ಬರೆಯುವ ಪದ್ಧತಿ ಇದೆ. ಇದರ ಬಗ್ಗೆ ಅನೇಕ ದೃಷ್ಟಿಯಿಂದ ಟೀಕೆಮಾಡಿದರು. ಆದರೆ ನನಗಿರುವ ಸ್ವಲ್ಪ ದಿವಸದ ಅನುಭವದಲ್ಲಿ ಅಲ್ಪಸ್ವಲ್ಪ ದೋಷ ಇದರಲ್ಲಿರಬಹುದು. ಕೇವಲ ಸೇಕಡ 5ರಷ್ಟಿರ ಬಹುದು. ಆದರೆ 90, 95 ಭಾಗ ಇದರಂತೆ ನೋಡಿ ಅಧಿಕಾರಿಗಳಿಗೆ ಬಡ್ತಿ ಕೊಡುವುದು ಸರಿಯಾದ ಕ್ರಮವೆಂದು ನಾನು ಭಾವಿಸುತ್ತೇನೆ. ಇದರಲ್ಲಿರುವ ದೋಷ ಬಗೆಹರಿಸಲು ಹೇಗೆ ಸಾಧ್ಯ ಎಂದು ಯೋಚನೆ ಮಾಡಬೇಕು. ಇಲ್ಲಿಯವರೆಗೆ ಕಾನ್‌ಫಿಡೆನ್‌ಷಿಯಲ್ ರಿಪೋರ್ಟು ನನ್ನ ರುಜುವಿಗೆ ಬಂದಾಗ ಕೂಡ ನೋಡಿದೆ, ರುಜುಮಾಡುವ ಅಭ್ಯಾಸ ನನಗಿಲ್ಲ. ಬರೆದಿರುವುದು ನೋಡಿದರೆ ಅದು ಸರಿಯಾಗಿದೆಯೋ ಎಂಬುದು ಸ್ವಲ್ಪ ಹೆಚ್ಚು ಕಡಿಮೆ ಗೊತ್ತಾಗುವುದು, ಈಗ ಅಷ್ಟು ದೋಷವಿಲ್ಲ ಎಂಬುದು ನನ್ನ ಅಭಿಪ್ರಾಯ.

ಇನ್ನು ರೆವಿನ್ಯೂ ಇಲಾಖೆಯಲ್ಲಿ ಕೆಲಸ ಮಾಡುವ ಐ.ಎ.ಎಸ್. ಅಧಿಕಾರಿಗಳಲ್ಲಿ ಕನ್ನಡ ಬಾರದೆ ಇರುವವರಿದ್ದಾರೆ. ಅವರಿಂದ ಜನರಿಗೆ ಸಹಾಯವಾಗುತ್ತಿಲ್ಲ ಎಂದು ಟೀಕೆ ಮಾಡಿದ್ದಾರೆ ಐ.ಎ.ಎಸ್. ಅಧಿಕಾರಿಗಳು ಯಾವ ರಾಜ್ಯಕ್ಕೇ ಬರಲಿ ಆ ರಾಜ್ಯದ ಬಗ್ಗೆ ಅಲ್ಲಿರುವ ಭಾಷೆಯನ್ನು ಕಲಿಯ ಬೇಕು ಎಂದು ಕಡ್ಡಾಯವಿದೆ. ಈಗಾಗಲೇ ಅನೇಕ ಐ.ಎ.ಎಸ್. ಆಫೀಸರುಗಳು ಮದ್ರಾಸು, ಬಂಗಾಳ, ಉತ್ತರಪ್ರದೇಶ, ಪಂಜಾಬು ಮುಂತಾದ ಕಡೆಗಳಿಂದ ಬಂದವರಿದ್ದಾರೆ. ಅವರ ಜೊತೆ ಯಲ್ಲಿ ನಾನು ಕನ್ನಡದಲ್ಲೇ ಮಾತನಾಡಿ ಎಲ್ಲಾ ವ್ಯವಹಾರಗಳನ್ನೂ ತಿಳಿದುಕೊಂಡು ಅವರಿಗೆ

ಕನ್ನಡದಲ್ಲಿ ಮಾಹಿತಿ ಇದೆಯೋ ಎಂದು ಪರೀಕ್ಷೆಮಾಡಿದೆ. ಬಹಳ ಜನರು ಚೆನ್ನಾಗಿ ಕನ್ನಡದಲ್ಲಿ ಮಾತನಾಡುವರು, ಕೆಲವರು ಸೊಗಸಾಗಿ ಭಾಷಣಕೂಡ ಮಾಡಬಲ್ಲರು, ಎರಡು ವರ್ಷದಲ್ಲಿ ಇಷ್ಟು ಅನುಭವವಾಗಿದೆ. ಉಳಿದವರಿಗೆ ಕಡ್ಡಾಯವಾಗಿ ಕನ್ನಡ ಬರಲೇಬೇಕು. ಜನರ ಜೊತೆ ವ್ಯವಹಾರ ಮಾಡಲು ತಿಳಿವಳಿಕೆ ಸಾಲದಿರುವವರನ್ನು ಚನ್ನಪ್ಪನವರು ಹೇಳಿದಹಾಗೆ ಆಫೀಸಿಗೆ ಹಾಕಿ ಅವರು ತಯಾರಾಗುವವರೆಗೆ ಅಲ್ಲಿಟ್ಟು ನಂತರ ಸಬ್‌ಡಿವಿಜನ್ ಆಫೀಸಿಗೆ ಅಥವ ಜಿಲ್ಲೆಗೆ ಕಳಿಸುತ್ತೇವೆ. ಅವರು ಹೇಳಿರುವುದನ್ನು ಒಪ್ಪಲು ನಾನು ಸಿದ್ಧವಾಗಿದ್ದೇನೆ. ಕಡ್ಡಾಯವಾಗಿ ಸಾಮಾನ್ಯ ಜನರ ಭಾಷೆ ಕಲಿತು ಅವರ ಜೊತೆಯಲ್ಲಿ ಮಾಡುವ ವ್ಯವಹಾರದಲ್ಲಿ ಅವರಿಗೆ ಅಗತ್ಯವಾಗುವಷ್ಟು ಮಾಹಿತಿ ಇರಬೇಕು ಎಂಬುದು ನನ್ನ ಅಭಿಪ್ರಾಯ.

ಭೂ ಶಾಸನದ ತಿದ್ದುಪಡಿ ಈಗಾಗಲೇ ತಂದಿರುವ ತಿದ್ದುಪಡಿ, ಈ ಸಭೆಯಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗಿ ಜಂಟಿ ಪರಿಶೀಲನಾ ಸಮಿತಿ ಮುಂದಿದೆ. ಕೋಣಂದೂರು ಲಿಂಗಪ್ಪನವರು ಅನೇಕರು ಇದಕ್ಕೆ ಅಡ್ಡಗಾಲು ಹಾಕುತ್ತಿದ್ದಾರೆ, ಇದನ್ನು ತಪ್ಪಿಸುವುದಕ್ಕೆ ಪ್ರಯತ್ನಪಡುತ್ತಿದ್ದಾರೆ ಎಂದು ಹೇಳಿದರು. ಅದಕ್ಕೆ ಅವಕಾಶವಾಗದಂತೆ ತಿದ್ದುಪಡಿಮಾಡಿ ಎಷ್ಟುಮಟ್ಟಿಗೆ ಪ್ರಗತಿದಾಯಕ ಮಾಡಲು ಸಾಧ್ಯವೋ ಅಷ್ಟುಮಟ್ಟಿಗೆ ಮಾಡಲು ಪ್ರಯತ್ನ ಮಾಡಬೇಕು ಎಂದು ಹೇಳಿದ್ದಾರೆ. ಸಮಿತಿಯವರು ಈ ಸಭೆಯವರ ಅಭಿಪ್ರಾಯವನ್ನು ಸ್ಪಷ್ಟವಾಗಿ ಅರಿತು ಆ ದಿಶೆಯಲ್ಲಿ ಹೋಗುತ್ತಿದ್ದಾರೆ. ಅದು ಬಹುಬೇಗ ಬರುವ ಸೂಚನೆಯಿದೆ. ಕೆಲವರು ಆಮೆ ವೇಗದಲ್ಲಿ ಕೆಲಸನಡೆಯುತ್ತಿದೆ ಎಂದು ಕೂಡ ಹೇಳಿದರು. ಈ ಶಾಸನ ಬಹಳ ದಿವಸಗಳಿಂದ ನಿರೀಕ್ಷೆಯಲ್ಲಿರುವುದು. 1961 ರಲ್ಲಿ ಇದರ ಕೆಲಸ ಪ್ರಾರಂಭವಾಯಿತು. ಇಲ್ಲಿಯವರೆಗೆ ಇದು ಜನಸಾಮಾನ್ಯರ ಹಿತ ಸಾಧಿಸುವುದಕ್ಕೆ ಪ್ರಗತಿದಾಯಕವಾಗಿಲ್ಲ ಎಂದು ಜಾರಿಗೆ ಬರಲಿಲ್ಲ. ಬಹಳ ಮುಖ್ಯವಾದ ಅಂಶವಿದು. ಆದುದರಿಂದಲೇ ಇದರಕಡೆಗೆ ಹೆಚ್ಚು ಗಮನಕೊಟ್ಟು ಸ್ವಲ್ಪ ತಡವಾದರೂ ಸಮರ್ಪಕವಾದ ಮಸೂದೆ ತರಲು ಪ್ರಯತ್ನಮಾಡುತ್ತೇವೆ. ಇದರಬಗ್ಗೆ ಸ್ಪಷ್ಟವಾದ ಅಭಿಪ್ರಾಯ ತಿಳಿಸಬೇಕೆಂದು ಕೇಳಿದರು. ಎಳ್ಳಷ್ಟೂ ಅನುಮಾನ ಬೇಕಾಗಿಲ್ಲ, ಈ ಅಧಿವೇಶನದಲ್ಲಿ ಚರ್ಚೆಗೆ ಬಂದು ಈ ಸಭೆಯಲ್ಲಿ ಮತ್ತು ಪರಿಷತ್ತಿನಲ್ಲಿ ಒಪ್ಪಿಗೆ ಪಡೆಯುವುದು, ಇದಕ್ಕೆ ತಕ್ಕ ಕ್ರಮ ಕೈಗೊಳ್ಳುತ್ತೇವೆ ಎಂದು ಸ್ಪಷ್ಟವಾಗಿ ತಿಳಿಸುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ : ಪಟೇಲರ ಬಗ್ಗೆ ಹೇಳಲಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಹೇಳುತ್ತೇನೆ, ಹಿಂದೆ ಶಾನುಭೋಗರಿದ್ದರು, ಈಗ ವಿಲೇಜ್ ಅಕೌಂಟೆಂಟರಿದ್ದಾರೆ. ಶಾನುಭೋಗರಿದ್ದರೇ ಚೆನ್ನಾಗಿತ್ತು ಎಂಬ ಅಭಿಪ್ರಾಯ ಕೆಲವರಿಗೆ ಇದೆ. ಅನುವಂಶಿಕ ಹುದ್ದೆ ಇರಬಾರದು ಎಂಬ ಅಭಿಪ್ರಾಯವಿತ್ತು, ಅದರಂತೆ ಬದಲಾಯಿಸಿದೆ. ಮೊದಲು ಸುಲಭಖರ್ಚಿನಲ್ಲಿ ಕೆಲಸವಾಗುತ್ತಿತ್ತು. ಈಗ ಹೆಚ್ಚು ಖರ್ಚುಮಾಡಬೇಕಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ಸತ್ಯಾಂಶವಿದೆ, ಸುಲಭಖರ್ಚಿನಲ್ಲಾಗುತ್ತಿದ್ದಾಗ ಆಗಿದ್ದವರಿಗೆ ಸಾಕಷ್ಟು ಮಾಹಿತಿಯಿತ್ತು. ಈಗ ಬಂದಿರುವವರಿಗೆ ಸಾಕಷ್ಟು ಶಿಕ್ಷಣವಿಲ್ಲ. ಹಳ್ಳಿಗಾಡಿನಲ್ಲಿ ವಾಸಮಾಡಲು ಇಷ್ಟವಿಲ್ಲ, ಜೊತೆಗೆ ಮನೆ ಅಲ್ಲಿ ಸಿಕ್ಕುವುದಿಲ್ಲ. ಈ ಪರಿಸ್ಥಿತಿಯಿದೆ, ಈ ನೌಕರಿಗೆ ಬಂದಿರುವವರಿಗೆ ಹೆಚ್ಚು ಶಿಕ್ಷಣ ಕೊಡಬೇಕು ಎಂಬ ಯೋಚನೆ ಸರಕಾರದಲ್ಲಿದೆ. ಶಾನುಭೋಗರಿಗೆ ಮಾಹಿತಿ, ಸಾಕಷ್ಟು ತಿಳಿವಳಿಕೆ ಇರಬೇಕು.

ಖಾತೆ ಎಂದರೆ ಏನು, ಕಿರ್ದಿ ಎಂದರೆ ಏನು ಮತ್ತು ಇನ್ನೂ ಕೆಲವು ಶಬ್ದಗಳ ಮಾಹಿತಿ ಅವರಿಗಿಲ್ಲ. ಕೆಲಸಗಳ ಮಾಹಿತಿ ಹಾಗಿರಲಿ, ಇದನ್ನು ನಾನು ನೋಡಿಕೊಂಡು ಬಂದಿದ್ದೇನೆ. ಅನೇಕ ವೇಳೆ ಸರ್ಕಾರದಿಂದ ಅಲ್ಲದೆ ಸಾರ್ವಜನಿಕ ಮುಖಂಡರು ಎಷ್ಟೋ ವೇಳೆ ತಿಳುವಳಿಕೆ ಕೊಡಬೇಕಾಗುತ್ತದೆ. ತಮ್ಮ ತಿಳುವಳಿಕೆಯನ್ನು ನಾನು ಸಂದರ್ಭಾನುಸಾರವಾಗಿ ಸ್ವಾಗತಿಸುತ್ತೇನೆ. ಹಳೆಯ ಶಾನುಭೋಗರು

ಬದಲು ಇವರು ಬಂದದ್ದಾಯಿತು. ಇವರನ್ನು ವರ್ಗ ಮಾಡಬೇಕು ಎಂದು ಒಂದು ಕಡೆ, ವರ್ಗ ಮಾಡಕೂಡದು ಎಂದು ಇನ್ನೊಂದು ಕಡೆ. ತಾಲ್ಲೂಕಿನಿಂದ ಹೊರಗೆ ಇವರನ್ನು ಟ್ರಾನ್ಸ್‌ಫರ್ ಮಾಡಬೇಕು ಎಂದು ಆದೇಶ ಕೊಟ್ಟಿದೆ. ತಾಲ್ಲೂಕಿನಿಂದ ಹೊರಗೆ ಹಾಕುವುದಕ್ಕೆ ಅನೇಕ ಜನ ಸದಸ್ಯರು ವಿರೋಧ ವ್ಯಕ್ತಮಾಡಿದರು. ಈ ವಿಷಯದಲ್ಲಿ ನನ್ನದು ಸ್ಪಷ್ಟ ನಿಲುವು. ಆಯಾ ತಾಲ್ಲೂಕುವಾರು ಶಾನುಭೋಗರುಗಳು ವಿಲೇಜ್ ಅಕೌಂಟೆಂಟ್ಸ್ ಏನು ಇದ್ದಾರೆ, ಅವರು ತಾಲ್ಲೂಕು ಆಫೀಸಿನ ಕ್ಲರ್ಕ್‌ಗಳಾಗಲೀ, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಾಗಲೀ, ಯಾರೂ ಆಯಾ ತಾಲ್ಲೂಕಿನವರು ಆ ತಾಲ್ಲೂಕಿನಲ್ಲಿ ಇರಬಾರದು ಎಂದು ನನ್ನದು ಸ್ಪಷ್ಟ ನಿಲುವು. ಅವನು ಎಷ್ಟೇ ಒಳ್ಳೆಯವನೆಂದು ಕಂಡರೂ ಸ್ಥಳದಲ್ಲಿ ಇರುವವರ ದಾಕ್ಷಿಣ್ಯಕ್ಕೋಸ್ಕರ ತಾರತಮ್ಯ ಮಾಡುವುದು ಸ್ವಾಭಾವಿಕವಾಗಿ ಬರುತ್ತದೆ. ಆದ್ದರಿಂದ ಇದನ್ನು ತಪ್ಪಿಸಬೇಕಾದರೆ ಇವರನ್ನು ಸ್ಥಳದ ಹೊರಗೆ ಹಾಕಿದರೆ, ಆಯಾ ಸ್ಥಳದ ಸನ್ನಿವೇಶವನ್ನು ನೋಡಿಕೊಂಡು ಹೆದರಿಕೆಯಿಂದ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ಸ್ಥಳದಲ್ಲಿದ್ದು ಸಾಕಾದಷ್ಟು ಜನಕ್ಕೆ ಪರಿಚಯ ಇದ್ದರೆ ಕಂಡ ಜನರ ಹಿತ ಬೇಕಾಗುತ್ತದೆ. ಆದ್ದರಿಂದ ಹೊರಗಡೆ ಹಾಕುವುದು ಸರಿಯೆಂದು ನಿರ್ದಿಷ್ಟ ಅಭಿಪ್ರಾಯ. ಆದರೆ ಅನೇಕ ಜನ ಇವರನ್ನು ಹೊರಗಡೆ ಹಾಕಕೂಡದು ಎಂದು ಆಗಿಂದಾಗ್ಯೆ ನನ್ನ ಮೇಲೆ ಬೆನ್ನುಮೂಳೆ ಬಗ್ಗುವಷ್ಟು ಒತ್ತಾಯ ತರುತ್ತಿದ್ದಾರೆ. ಆದಷ್ಟು ನಾನು ನೆಟ್ಟಗೆ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ತಾವು ಇದಕ್ಕೆ ಸಹಾಯಕರಾಗುತ್ತೀರಿ ಎಂದು ತಮ್ಮಲ್ಲಿ ನನ್ನ ಅರಿಕೆ. ಪಟೇಲರು, ಶ್ಯಾನುಭೋಗರ ಜೊತೆಗೆ ಅನಾವಶ್ಯಕ ಎಂದು ಹೊರಟುಹೋಯಿತು. ಅವರಿಗೆ ಮುಂದೆ ನೌಕರಿ ಸಿಕ್ಕುತ್ತದೆಯೇ, ಸಂಬಳ ಸಿಕ್ಕುತ್ತದೆಯೇ, ಈಗ ಇರುವ ಹಾಗೆ ಪೋಟಿಗಿ ಸಿಕ್ಕುತ್ತದೆಯೇ ? ಪಟೇಲರ ಗುಂಪು ಒಂದೊಂದು ತಾಲ್ಲೂಕಿನಿಂದ, ಒಂದೊಂದು ಜಿಲ್ಲೆಯಿಂದ ಒಂದೇ ಸಮನೆ ದಾಳಿ ಮಾಡಿದ್ದಾರೆ. ಡಿಸೆಂಬರ್ ಆಖೈರೊಳಗೆ ಮಾಡಬೇಕು ಎಂದು ತೀರ್ಮಾನ ಮಾಡಬೇಕಾಗಿತ್ತು. ಜೂನ್ ಆಖೈರೊಳಗೆ ಮಾಡುತ್ತೇವೆ ಎಂದು ಹಿಂದಿನ ಸರ್ಕಾರದವರು ಹೇಳಿದ್ದಾರೆ. ಅದನ್ನು ಡಿಸೆಂಬರ್ ಆಖೈರೊಳಗೆ ಮಾಡುವುದಕ್ಕಾಗಲಿಲ್ಲ. ಜೂನ್ ಆಖೈರ್‌ವರೆಗೆ ಟೈಂ ಕೊಟ್ಟಿದ್ದಾರೆ. ಅದೂ ಆಗುತ್ತದೆಯೋ ಇಲ್ಲವೋ. ಇದರ ಬಗ್ಗೆ ಒಂದು ಮಸೂದಾ ಕಾನೂನನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಪಟೇಲರು ಅಷ್ಟೇ ಅಲ್ಲ, ತೋಟಿಗಳು ಎಂದು ಕೆಲವು ಕಡೆ ಇದ್ದಾರೆ. ತಳವಾರರು ಎಂದು ನಾನಾ ಹೆಸರಿನಲ್ಲಿ ಇವರನ್ನು ಕರೆಯುತ್ತಾರೆ. ಇವರನ್ನೆಲ್ಲಾ ಆಯಾ ಸ್ಥಳಗಳಲ್ಲಿ ಎಷ್ಟು ಜನರನ್ನು ಆರಿಸಿಕೊಳ್ಳಬೇಕು, ಯಾವ ರೀತಿ ಅವರಿಗೆ ಪ್ರತಿ ತಿಂಗಳ ಸಂಬಳ ಕೊಡಬೇಕು ಎಂಬುದನ್ನು ನಿರ್ದಿಷ್ಟಪಡಿಸಬೇಕಾಗಿದೆ. ಜಮೀನು ಹಂಚಿಕೆಯ ಬಗ್ಗೆ ಬಹು ಬೇಗ ಕ್ರಮ ತೆಗೆದುಕೊಳ್ಳಬೇಕು, ಅದು ಕ್ರಮವಾಗಿ ನಡೆಯಬೇಕು ಎಂದು ಅನೇಕ ಜನಸಾಮಾನ್ಯ ಸದಸ್ಯರು ತಿಳಿಸಿದ್ದಾರೆ. ಅದರಲ್ಲಿ ಎರಡು ತರಹ ಇದೆ, ಒಂದು ಯಾರೂ ಆಕ್ರಮಿಸಿಕೊಳ್ಳದೆ ಇರತಕ್ಕ ಭೂಮಿ, ಗೋಮಾಳ ಸಾಕಾದಷ್ಟು ಬಿಟ್ಟು ಹೆಚ್ಚುವರಿ ಭೂಮಿ, ಸರ್ಕಾರದ ಬಂಜರು ಭೂಮಿ ಇಂಥಾದ್ದನ್ನು ವಿಲೇ ಮಾಡುವುದು ಒಂದು ವಿಧಾನ. ಇನ್ನೊಂದು ಈಗಾಗಲೇ ಅಕ್ರಮ ಸ್ವಾಧೀನದಲ್ಲಿರತಕ್ಕದ್ದು, ಬಿಡುಗಡೆ ಮಾಡಿ ಕ್ರಮ ಪಡಿಸಿಕೊಳ್ಳತಕ್ಕದ್ದು. ಈ ಎರಡು ವಿಧಾನದಲ್ಲಿ ಭೂಮಿಯನ್ನು ಹಂಚಬೇಕಾಗಿದೆ. ಮೊದಲನೆಯ ವಿಧಾನದ ಹಂಚಿಕೆಗೆ ಸರ್ಕಾರದಲ್ಲಿ ಇರತಕ್ಕ ಬೀಳುಭೂಮಿಯನ್ನು ಹಂಚಿಕೆ ಮಾಡುವುದಕ್ಕೋಸ್ಕರ ಶಾಸನ ಸಭಾಸದಸ್ಯರನ್ನೊಳಗೊಂಡಂಥ ಸಮಿತಿಗಳನ್ನು ತಾಲ್ಲೂಕು ಮಟ್ಟದಲ್ಲಿ ರಚನೆ ಮಾಡಿದ್ದೇವೆ. ರಚನೆಯಲ್ಲಿ ದೋಷ ಇದೆಯೆಂದು ಕೆಲವು ಸದಸ್ಯರು ಹೇಳಿದರು. ಇದರ ಬಗ್ಗೆ ಎಲ್ಲಾ ವಿವರಗಳನ್ನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಆ ಸಮಿತಿಗಳು ತೀರ್ಮಾನ ಕೈಗೊಂಡಿದ್ದು ಜಾರಿಗೆ ಬರುವುದಿಲ್ಲ ಎಂದು ಹೇಳಿದರು. ಇವು ಸ್ಪಷ್ಟವಾಗಿ ಅಡ್ವೈಸರಿ ಬಾಡಿಗಳು ಆಗಿದ್ದರೂ ಕೂಡ, ಅವರು ಯೋಜನೆ ಮಾಡಿದ ಸ್ಥಳಗಳಲ್ಲಿ

ಯಾರ ಯಾರ ಸ್ಥಿತಿ ಏನು ಇದೆ ಎನ್ನುವುದನ್ನು ಗೊತ್ತುಮಾಡದೆ ತೀರ್ಮಾನ ಕೈಗೊಳ್ಳುವುದಿಲ್ಲ ಎನ್ನುವ ಭರವಸೆ ನನಗೆ ಇದೆ. ಅವರು ಕೈಗೊಂಡಂಥ ತೀರ್ಮಾನವೇ ಜಾರಿಗೆ ಬರಬೇಕು ಎಂದು ನಮ್ಮ ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದ್ದೇನೆ. ಅಂಥಾದ್ದು ಜಾರಿಗೆ ಬಾರದಿದ್ದರೆ ತಾವು ದಯಮಾಡಿ ತಿಳಿಸಬೇಕು ಎಂದು ನಾನು ತಮ್ಮಲ್ಲಿ ವಿನಂತಿಮಾಡಿ ಕೊಳ್ಳುತ್ತೇನೆ. ಬಹು ಬೇಗ ಭೂಮಿ ಹಂಚಿಕೆಯಾಗಬೇಕು ಎಂದು ಸಲಹೆ ಕೊಟ್ಟಿದ್ದೇನೆ. ಹಂಚಿಕೆ ಯಾಗುವುದರಲ್ಲಿ ಒಂದು ತೊಂದರೆಯಾಗಿದೆ. ಏನೆಂದರೆ, ಮೊದಲು ತಹಸೀಲ್ದಾರ್ ಅವರಿಗೆ ನಾಲ್ಕು ಎಕರೆ ಜಮೀನನ್ನು ಕೊಡುವುದಕ್ಕೆ ಅಧಿಕಾರ ಇತ್ತು. ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್ಸ್ ಇದನ್ನು ನೋಡಿ ತಾಲ್ಲೂಕಿಗೆ ಇದ್ದುದನ್ನು ಎ. ಸಿ. ಗೆಬಿಟ್ಟುಕೊಟ್ಟಿದೆ. ಆತನಿಂದ ಬಹಳ ನಿಧಾನವಾಗಿದೆ. ಸರ್ಕಾರದ ಬೀಳು ಜಮೀನನ್ನು ಹಂಚಿಕೆ ಮಾಡುವಾಗ ತಹಸೀಲ್ದಾರ್ ಅವರಿಗೆ ಏನು ಅಧಿಕಾರ ಇತ್ತೋ ಅದನ್ನು ಮತ್ತೆ ಕೊಟ್ಟು ವಿಲೇ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡಿದ್ದೇವೆ. ಇದರ ಬಗ್ಗೆ ಸರ್ಕಾರದಿಂದ ಆದೇಶ ಬಹು ಬೇಗ ಹೋಗುತ್ತದೆ. ಇಹರಿಂದ ನಿಧಾನವಾಗುವುದು ಕಡಿಮೆಯಾಗುತ್ತದೆ. ಇನ್ನೊಂದು ತಾಲ್ಲೂಕುವಾರು ಭೂಮಿ ಎಷ್ಟು ಇದೆಯೆಂದು ಗೊತ್ತುಮಾಡುವಾಗ ಕೆಲವು ವಿಷಯದಲ್ಲಿ ಅಧಿಕಾರಿಗಳು ಗೊತ್ತುಮಾಡುವಾಗ ಅಕ್ರಮ ಸ್ವಾಧೀನ ಆಗಿಬಿಟ್ಟಿವೆ. ಅಂಥವುಗಳನ್ನು ಪಟ್ಟಿಯಲ್ಲಿ ಸೇರಿಸುತ್ತಾರೆ. ಯಾವ ಭೂಮಿ ಅಕ್ರಮ ಸ್ವಾಧೀನದಲ್ಲಿದೆ, ಅದಕ್ಕೆ ಬೇರೆ ವಿಧವಾದ ಕ್ರಮ ಕೈಗೊಳ್ಳಬೇಕು. ನೇರವಾಗಿ ಸಾಗುವಳಿ ಚೀಟಿ ಕೊಡುವುದಕ್ಕೆ ಅವಕಾಶವಿಲ್ಲ. ಇದರ ಬಗ್ಗೆ ಆದೇಶ ಕೊಟ್ಟಿದೆ. ಯಾವುದು ಅಕ್ರಮ ಸ್ವಾಧೀನವಾಗಿದೆ, ಅನ್ ಆಕ್ಯುಪೈಡ್ ಲ್ಯಾಂಡ್ಸ್ ಇದೆ, ಅಂಥಾದ್ದನ್ನು ಪಟ್ಟಿಯಲ್ಲಿ ಸೇರಿಸಿ ಅದನ್ನು ಮಾನ್ಯ ಸದಸ್ಯರ ಅವಗಾಹನೆಗೆ ತರಬೇಕು ಎಂದು ಸ್ಪಷ್ಟವಾಗಿ ತಿಳಿಸಿದ್ದೇವೆ. ಅಕ್ರಮವಾಗಿ ಸ್ವಾಧೀನವಾಗಿರತಕ್ಕ ಭೂಮಿ ಹಂಚಿಕೆ ಏನಾಗಿದೆ, ಎಂಥವರಿಗೆ ಕೊಡಬೇಕು. ಎಂಥವರಿಗೆ ಕೊಡಬಾರದು, ಎಂದು ನಿರ್ದಿಷ್ಟವಾದ ಸಲಹೆ ಇದೆ. ಅದನ್ನು ತೀರ್ಮಾನ ಮಾಡುವುದಕ್ಕೋಸ್ಕರ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರ್‌ಅನ್ನು ಹಾಕಿದ್ದೇವೆ. ಈ ಕೆಲಸಗಳನ್ನು ಕಡ್ಡಾಯವಾಗಿ ಮಾಡಬೇಕು. ಇದರ ಜೊತೆಗೆ ತೋಟಗಳ ಜಮೀನು ಯಾವುದು, ಇನಾಂ ಭೂಮಿ ಯಾವುದು ಎಂದು ರೀಗ್ರ್ಯಾಂಟ್ ಮಾಡತಕ್ಕದ್ದು ಒಂದು ಕೆಲಸ. ಅಕ್ರಮ ಸ್ವಾಧೀನವಾಗಿರತಕ್ಕ ಜಮೀನನ್ನು ವಿಲೇ ಮಾಡತಕ್ಕದ್ದು ಒಂದು. ಎರಡನೆ ಯದು, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಭೂಮಿ ಇದೆಯೆಂದು ತಿಳಿದು ಎಲ್ಲೆಲ್ಲಿ ಸ್ಪೆಷಲ್ ಎ. ಸಿ. ಹಾಕಬೇಕು ಎಂದು ಗೊತ್ತುಮಾಡಿ, ಅಧಿಕಾರಿಗಳನ್ನು ನೇಮಕಮಾಡಿ, ಇದನ್ನೂ ಕೂಡ ವಿಲೇಮಾಡಬೇಕು ಎಂದು ಯೋಚನೆ ಮಾಡಿದ್ದೇವೆ. ಅಕ್ರಮವಾಗಿ ಸ್ವಾಧೀನವಾಗಿರತಕ್ಕ ಜಮೀನು ಎಷ್ಟು ಇದೆಯೆಂದರೆ, 2,74,408 ಎಕರೆ, ಇದನ್ನು ಮೈಸೂರು ರಾಜ್ಯದಲ್ಲಿ 1974 ರ ಮಾರ್ಚ್ 31 ರ ಒಳಗೆ ಕ್ರಮಪಡಿಸಿ ವಿಲೇವಾರಿ ಮಾಡಬೇಕು ಎಂದು ಅವರಿಗೆ ನಿರ್ದಿಷ್ಟವಾದ ಆದೇಶವನ್ನು ಕೊಟ್ಟಿದ್ದೇವೆ. ಇನ್ನೂ ಸರ್ಕಾರದ ಬೀಳುಭೂಮಿ ಎಷ್ಟು ಇದೆಯೆಂದರೆ, 6,27,873 ಎಕರೆ ಇದೆ. ಇದರ ಬಗ್ಗೆ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿ ದ್ದಾರೆ. ರೆವಿನ್ಯೂ ಇಲಾಖೆಯಲ್ಲಿರತಕ್ಕ ಅಧಿಕಾರಿಗಳಿಗೆ ಹೆಚ್ಚು ಹೊಣೆಗಾರಿಕೆಯನ್ನು ವಹಿಸಿ ದ್ದಾರೆ. ನಾನಾ ಇಲಾಖೆಗಳು ಮಾಡಬೇಕಾದಂಥ ಕೆಲಸಗಳನ್ನು ರೆವಿನ್ಯೂ ಇಲಾಖೆಯವರು ಮಾಡಬೇಕಾಗಿದೆ. ಉದಾಹರಣೆಗೆ ವೃದ್ಧಾಪ್ಯ ವೇತನವನ್ನು ಇವರಿಗೆ ಸೇರಿಸಿದ್ದಾರೆ. ಇದು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಸೇರಿದ್ದರೂ ಕೂಡ ರೆವಿನ್ಯೂ ಇಲಾಖೆಯವರು ಈ ಕೆಲಸವನ್ನು ಮಾಡಬೇಕಾಗಿದೆ. ಒಂದೆರಡು ಅಲ್ಲ, ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿನ ಕೆಲವು ಕೆಲಸ ಗಳನ್ನು ನಮ್ಮ ಅಧಿಕಾರಿಗಳು ಮಾಡಬೇಕು. ಹೊಸ ಹೊಸ ಯೋಜನೆಗಳಲ್ಲಿ ಸೈಟುಗಳನ್ನು ಹಂಚತಕ್ಕ ಕಾರ್ಯಕ್ರಮ ಇದೆ. ಅದನ್ನೂ ಕೂಡ ರೆವಿನ್ಯೂ ಇಲಾಖೆಯ ಅಧಿಕಾರಿಗಳು ಮಾಡ ಬೇಕು. ಹೀಗೆ ಹೊಸ ಹೊಸ ಯೋಜನೆಗಳು ಬಂದಾಗಲೆಲ್ಲಾ ರೆವಿನ್ಯೂ ಇಲಾಖೆಯ ಅಧಿಕಾರಿ ಗಳನ್ನು ಅವಲಂಬಿಸಬೇಕಾಗಿದೆ. ಇದು ಮೊದಲಿನಿಂದಲೂ ಇರತಕ್ಕ ಪದ್ಧತಿ. ಆಗಲೂ ಕೂಡ

ಅವರ ಹೊಣೆಗಾರಿಕೆ ಇದೆ. ಇದರ ಜೊತೆಗೆ ನಮ್ಮ ಸರ್ಕಾರ ಸವಿಸ್ತಾರವಾಗಿ ಡೆಪ್ಯೂಟಿ ಕಮಿಷನರ್ ಇಲಾಖೆಯ ಮಾದರಿಯಾಗಿ ಜಿಲ್ಲಾ ಮಟ್ಟದ ಇತರ ಇಲಾಖೆಗಳ ಕೆಲಸಗಳನ್ನೂ ಕೂಡ ತನಿಖೆ ಮಾಡುವುದಕ್ಕೆ ಅಧಿಕಾರ ಕೊಟ್ಟು, ಜಿಲ್ಲಾ ಮಟ್ಟದ ಇಲಾಖೆಗಳ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುವ ಹಾಗೆ ವ್ಯವಸ್ಥೆ ಮಾಡುವುದನ್ನು ಅವರಿಗೆ ವಹಿಸಿದೆ. ಜೊತೆಗೆ ಡಿಸ್ಟ್ರಿಕ್ಟ್ ಮಟ್ಟದಲ್ಲಿ ಕೋ-ಆರ್ಡಿನೇಷನ್ ಕಮಿಟಿಗಳನ್ನು ಮಾಡಿ ಇತರೆ ಎಲ್ಲಾ ಇಲಾಖೆಗಳ ಸಹಕಾರವನ್ನು ಪೂರ್ಣವಾಗಿ ತೆಗೆದುಕೊಂಡು ಕೆಲಸಗಳು ಚೆನ್ನಾಗಿ ಆಗುವುದಕ್ಕೆ ಈ ಇಲಾಖೆಯ ಅಧಿಕಾರಿಗಳನ್ನು ಮುಖ್ಯವಾಗಿ ಅದಕ್ಕೇ ನೇಮಕ ಮಾಡಿದೆ. ಹೀಗೆ ಜವಾಬ್ದಾರಿ ಜಾಸ್ತಿ ಅವರಿಗೆ ವಹಿಸಿದೆ. ಅವರಿಗೆ ಅನುಕೂಲ ಇಲ್ಲ, ಹಾಗೆ ಎಂದು ಮಾನ್ಯ ಆಮರ್ಯಗಂ ಅವರು ಮತ್ತು ಲಿಂಗಪ್ಪನವರು ಹೇಳಿ ಅನುಕೂಲಗಳನ್ನು ಹೆಚ್ಚು ಮಾಡಿಕೊಡಬೇಕು ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

ಈ ವರ್ಷದ ಬಡ್ಜೆಟ್ಟಿನಲ್ಲಿ ತಾವು ನೋಡಿರಬಹುದು. 3 ಕೋಟಿ 89 ಲಕ್ಷ ರೂಪಾಯಿಗಳನ್ನು ಈ ಇಲಾಖೆಗೆ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೋಸ್ಕರ ಒದಗಿಸಲಾಗಿದೆ. ಇದರಲ್ಲಿ ಅನೇಕ ತಾಲ್ಲೂಕು ಮಟ್ಟದಲ್ಲಿ ಸಬ್ ಡಿವಿಜನ್ ಮಟ್ಟದಲ್ಲಿ ಕಛೇರಿಗಳಿಗೆ ಆಫೀಸು ಕಟ್ಟಡಗಳು ಇಲ್ಲ, ಅಧಿಕಾರಿಗಳಿಗೆ ಮನೆಗಳು ಇಲ್ಲ. ಮನೆಗಳಿಗೆ ಟೆಲಿಫೋನ್ ವ್ಯವಸ್ಥೆ ಇಲ್ಲ. ವಾಹನ ಸೌಕರ್ಯ ಇಲ್ಲ, ಇತ್ಯಾದಿ ಅನೇಕ ಅಸೌಕರ್ಯಗಳು ಇವೆ. ತಹಶೀಲ್ದಾರರು ತಾಲ್ಲೂಕಿನಲ್ಲಿ ಮೂಲೆ ಮೂಲೆಗೆ ಹೋಗಿ ಸ್ಥಳ ಅಜಮಾಯಿಸಿ ಮಾಡಿಕೊಂಡು ಬರಬೇಕಾದರೆ ಒಂದು ದಿವಸ ಹಾಳಾಗುತ್ತದೆ. ಇದನ್ನು ತಪ್ಪಿಸಬೇಕಾದರೆ ತಾಲ್ಲೂಕು ಮಟ್ಟದಲ್ಲಿರುವ ತಹಶೀಲ್ದಾರರಿಗೆ ಪ್ರತಿಯೊಬ್ಬರಿಗೆ ಒಂದೊಂದು ಜೀಪನ್ನು ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಈ ವರ್ಷ 48 ಸಬ್ ಡಿವಿಜನ್‌ಗಳಿಗೆ ಜೀಪುಗಳನ್ನು ಕೊಡುತ್ತೇವೆ. ಮುಂದಿನ ವರ್ಷದೊಳಗೆ ತಹಶೀಲ್ದಾರರಿಗೆ ಒಂದೊಂದು ಜೀಪು ಒದಗಿಸಿ ಕೊಡಬೇಕು, ಮನೆಗಳನ್ನು ಕಟ್ಟಿಸಿ ಕೊಡಬೇಕು, ಫೋನ್‌ಗಳ ವ್ಯವಸ್ಥೆ ಮಾಡಿಕೊಡಬೇಕೆಂದು ನಿರ್ದಿಷ್ಟವಾಗಿ ತೀರ್ಮಾನ ಕೈಕೊಂಡಿದ್ದೇವೆ. ಇದು ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟದ್ದು. ಇನ್ನು ಸರ್ವೆ ಮತ್ತು ಮುಜರಾಯಿ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಸರ್ವೆ ಡಿಪಾರ್ಟ್‌ಮೆಂಟಿನಲ್ಲಿ ಅನೇಕ ಕಡೆ ಸರ್ವೆ ಕೆಲಸ ಆಗದೇ ಹೋಗಿದೆ. ಭೂಮಿ ಹಂಚಿಕೆ ಆಗತಕ್ಕ ಸಂದರ್ಭದಲ್ಲಿಯಾಗಲೀ, ಅಣ್ಣ ತಮ್ಮಂದಿರು ಭಾಗ ಮಾಡಿಕೊಂಡಂಥ ಸಂದರ್ಭದಲ್ಲಿಯಾಗಲೀ ಅಥವಾ ಪರಭಾರೆ ಮಾಡುವಂಥ ಸಂದರ್ಭದಲ್ಲಿಯಾಗಲೀ ಎಲ್ಲಾ ಸಂದರ್ಭಗಳಲ್ಲೂ ಸರ್ವೆಯರ್ ಸಹಾಯ ಬೇಕು. ಆಕಾರ ಬಂದುಗಳ ದುರಸ್ತು ಮಾಡುವ ಕೆಲಸ ಅನೇಕ ಇವೆ. ಆದರೆ ಸರ್ವೆಯರ ಸಂಖ್ಯೆ ಬಹಳ ಕಡಿಮೆ ಇದೆ. ಈಗತಾನೆ ಮುನ್ನೂರು ಸರ್ವೆಯರ್‌ಗಳನ್ನು ಆರಿಸಿಕೊಂಡಿದ್ದೇವೆ. ಅದರ ಜೊತೆಗೆ ಒಂದೆರಡು ತಿಂಗಳೊಳಗೆ ಮತ್ತೇ ಅಡ್ವೆರ್‌ಟೈಜ್ ಮಾಡಿ 700 ಸರ್ವೇಯರ್‌ಗಳನ್ನು ನೇಮಿಸಿಕೊಂಡು ಈ ಕೆಲಸಗಳನ್ನು ಸಮರ್ಪಕವಾಗಿ ಮಾಡಬೇಕಾಗಿದೆ. ಇದರಲ್ಲಿ ಮಾನ್ಯ ಸದಸ್ಯರು ಅನೇಕರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀಮಾನ್ ಭಂಗಿಯವರು ಸಿಟಿ ಸರ್ವೆ ಅಗತ್ಯವಾಗಿ ಆಗಬೇಕೆಂದು ಹೇಳಿದರು. ಈಗ ಕೆಲವು ಸಿಟಿಗಳನ್ನು ತೆಗೆದುಕೊಂಡಿದ್ದೇವೆ. ಬೆಂಗಳೂರು ಸಿಟಿಯಲ್ಲಿ ಸರ್ವೆ ಕೆಲಸ ಆಗುತ್ತದೆ. 50 ಸಾವಿರ ಜನಸಂಖ್ಯೆ ಜಾಸ್ತಿ ಇರುವ ಎಲ್ಲಾ ಸಿಟಿಗಳಿಗೂ ಸರ್ವೆ ಕೆಲಸ 2,3 ಉದ್ದೇಶಗಳಿಂದ ಅಗತ್ಯವಾಗಿ ಆಗಬೇಕಾಗಿದೆ. ಸಿಟಿಯಲ್ಲಿ ಯಾರ ಯಾರ ಆಸ್ತಿ ಎಷ್ಟು ಇದೆ. ಸರ್ಕಾರದ ಆಸ್ತಿ ಎಷ್ಟು ಇದೆ, ಇದು ಕೂಡ ನಿರ್ದಿಷ್ಟವಾಗಿ ಗೊತ್ತಿಲ್ಲ. ಭೂಮಿ ಹಿಡುವಳಿಯನ್ನು ನಿರ್ಧಾರ ಮಾಡುವ ಜೊತೆಗೆ ಪಟ್ಟಣದಲ್ಲಿರತಕ್ಕ ಆಸ್ತಿಯ ಮೇಲೆ ಪರಿಮಿತಿ ಹಾಕಬೇಕು. ಆ ಪರಿಮಿತಿಯನ್ನು ಹಾಕುವುದಕ್ಕೆ ಪೂರ್ವಭಾವಿಯಾಗಿ ಸಿದ್ಧತೆ, ಸಿಟಿ ಸರ್ವೆ ಆಗಬೇಕಾದದ್ದು ಅತ್ಯಗತ್ಯ. ಅದಕ್ಕೋಸ್ಕರ ಸಿಟಿ ಸರ್ವೆ ಕೆಲಸ ಮಾಡಬೇಕೆಂದು ನಿರ್ಧಾರ ಮಾಡಿಕೊಂಡಿದ್ದೇವೆ. ಸಿಬ್ಬಂದಿ ದೊರಕಿದ ಕೂಡಲೇ ಈ ಕೆಲಸ

ಕೈಗೊಳ್ಳುತ್ತೇವೆ. ಇನ್ನು ಕೊಡಗು ಜಿಲ್ಲೆಯಲ್ಲಿ ದಾಖಲೆಗಳು ನಡೆದಿಲ್ಲ. ಅನೇಕರಿಗೆ ಪರಿಚಯು ಇರಬಹುದು. ಯಾವುದಾದರೂ ಸರ್ವೆ ನಂಬರ್ ಯಾವ ಆಕಾರದಲ್ಲಿ ಇದೆ, ಎಷ್ಟು ವಿಸ್ತೀರ್ಣ ಇದೆ, ಯಾವ ಸ್ಕೇಲಿನಲ್ಲಿ ತಯಾರು ಮಾಡಿದೆ ಎನ್ನುವುದು ನಿರ್ದಿಷ್ಟವಾದ ಮೂಲ ದಾಖಲೆಗಳು ಈ ಮೂಲ ದಾಖಲೆಗಳು ಕೊಡಗು ಜಿಲ್ಲೆಯಲ್ಲಿ ಇಲ್ಲ. ಸರ್ವೆ ನಂಬರು ತೋರಿಸತಕ್ಕ ನಿರ್ದಿಷ್ಟ ದಾಖಲೆಗಳನ್ನು ತಯಾರು ಮಾಡುವುದಕ್ಕೆ ರೀಸರ್ವೆ ಕೊಡಗು ಜಿಲ್ಲೆಯಲ್ಲಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಕ್ಕೆ ಒಂದು ಕೋಟಿ 20 ಲಕ್ಷ ರೂಪಾಯಿ ಖರ್ಚಾಗುತ್ತದೆ. ಆದರೂ ಕೂಡ ಅತ್ಯಗತ್ಯವಾಗಿ ಆಗಬೇಕಾದ ಕೆಲಸ, ಇದನ್ನು ಒಂದೇ ವರ್ಷದಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ 6 ತಿಂಗಳು ಮಳೆಗಾಲ ಆದುದರಿಂದ ಅದು ಗುಡ್ಡಗಾಡುಗಳ ಪ್ರದೇಶ. ಆದುದರಿಂದ ಒಂದೊಂದು ವರ್ಷದಲ್ಲಿ 6 ತಿಂಗಳು ಮಾತ್ರ ಕೆಲಸ ಮಾಡಬೇಕಾಗುತ್ತದೆ. 2,3 ವರ್ಷದೊಳಗೆ ಈ ಕೆಲಸ ಪೂರೈಸಬೇಕು. ಒಂದು ಕೋಟಿ 20 ಲಕ್ಷ ರೂ. ಆದರೂ ಖರ್ಚು ಮಾಡುವುದು ಅವಶ್ಯಕ ಎಂದು ತೀರ್ಮಾನ ಕೈಕೊಂಡಿದ್ದೇವೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು :—ಸರ್ವೆಯರ್ಸ್‌ನ್ನು ಟೆಕ್ನಿಕಲ್ ಸ್ಟಾಫ್ ಎಂದು ಪರಿಗಣನೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈಗಾಗಲೇ ಕೆಲವು ಪ್ರಶ್ನೆಗಳು ಈ ಸಭೆಯಲ್ಲಿ ಬಂದಾಗ ಉತ್ತರ ಕೊಟ್ಟಿದ್ದೇನೆ. ಅವರ ಕೆಲಸ ಬಹುಭಾಗ ಆಡಳಿತಕ್ಕೆ ಸಂಬಂಧಪಟ್ಟ ಕೆಲಸ. ಅದನ್ನು ಟೆಕ್ನಿಕಲ್ ಡಿಪಾರ್ಟ್‌ಮೆಂಟ್ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ ಎಂದು ಅಭಿಪ್ರಾಯವನ್ನು ನಾನು ಕೊಟ್ಟಿದ್ದೇನೆ. ಸಿಟಿ ಸರ್ವೆ ಮಾಡುವುದಾಗಲೀ, ರೂರಲ್ ಸರ್ವೆ ಮಾಡುವುದಾಗಲೀ, ಟೋಪೋಗ್ರಫಿಕಲ್ ಸರ್ವೆ ಮಾಡುವುದಾಗಲೀ ಇಂಥ ಸಂದರ್ಭದಲ್ಲಿ ಅವರ ಕೆಲಸ ಪೂರ್ಣವಾಗಿ ಟೆಕ್ನಿಕಲ್ ಸ್ಟಾಫ್ ಎಂದು ಹೇಳುವುದಕ್ಕೆ ಎಷ್ಟು ಅವಶ್ಯಕವಾಗಿ ಬೇಕೋ ಅಷ್ಟು ಅಂಕಿಅಂಶಗಳು ಇವೆ. ಆದರೂ ಸಂದರ್ಭ ನೋಡಿ ಅದನ್ನು ಕೂಡ ಪುನರ್ ಆಲೋಚನೆ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ಸರ್ವೆ ಡಿಪಾರ್ಟ್‌ಮೆಂಟಿನಲ್ಲಿ ಪ್ರತಿ ಸಬ್ ಡಿವಿಜನ್ ಮಟ್ಟದಲ್ಲಿ ಎ. ಎಸ್. ಎಲ್. ಆರ್. ವರು ಇದ್ದಾರೆ. ಅವರಿಗೆ 48 ಆಫೀಸುಗಳಲ್ಲಿ ಒಂದು ಆಫೀಸಿಗೂ ಸ್ವಂತ ಕಟ್ಟಡ ಇಲ್ಲ. 4 ವರ್ಷದೊಳಗಾಗಿ 48 ಆಫೀಸುಗಳಿಗೂ ಸ್ವಂತ ಕಟ್ಟಡ ಒದಗಿಸಿಕೊಡಬೇಕು. ವರ್ಷಕ್ಕೆ 12,12 ಕಟ್ಟಡಗಳನ್ನು ಮಾಡಬೇಕೆಂದು ನಾವು ತೀರ್ಮಾನ ಕೈಗೊಂಡಿದ್ದೇವೆ.

ಇನ್ನು ಮಾನ್ಯ ಸದಸ್ಯರಾದ ಕೃಷ್ಣಪ್ಪನವರು ತಕಾವಿ ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನಿಗೆ ಹಳೇ ಮೈಸೂರು ಭಾಗದಲ್ಲಿ ಅಂದರೆ ಬೆಂಗಳೂರು ಮತ್ತು ಮೈಸೂರು ಡಿವಿಜನ್‌ನಲ್ಲಿ ಒದಗಿಸಿಲ್ಲವೆಂದು ಹೇಳಿದರು. ಬೆಂಗಳೂರು ಡಿವಿಜನ್‌ನಲ್ಲಿಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನಿಗೆ 20 ಲಕ್ಷ 75 ಸಾವಿರ, ತಕಾವಿ ಲೋನಿಗೆ 17 ಲಕ್ಷ 50 ಸಾವಿರ ರೂಪಾಯಿ ಮೈಸೂರು ಡಿವಿಜನ್‌ನಲ್ಲಿ 12 ಲಕ್ಷ 50 ಸಾವಿರ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನಿಗೆ. ಮತ್ತು ತಕಾವಿ ಲೋನಿಗೆ 15 ಲಕ್ಷ ಬೆಳಗಾಂ ಡಿವಿಜನ್‌ನಲ್ಲಿ 1 ಕೋಟಿ 9 ಲಕ್ಷ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನಿಗೆ, 32 ಲಕ್ಷ 50 ಸಾವಿರ ತಕಾವಿ ಲೋನಿಗೆ ಗುಲ್ಬರ್ಗ ಡಿವಿಜನ್‌ನಲ್ಲಿ 1 ಕೋಟಿ 27 ಲಕ್ಷ 50 ಸಾವಿರ ರೂಪಾಯಿ. ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ 25 ಲಕ್ಷ ರೂಪಾಯಿ ತಕಾವಿ ಲೋನ್‌ಗೆ ಒದಗಿಸಿದೆ. ಒಂದು ಮಾತು ಹೇಳಬೇಕು. ಶ್ರೀಮಾನ್ ಭಂಗಿ ಅವರು ಕೆಲವು ಭಾಗದಲ್ಲಿ ಹಳೇ ರಾಜರುಗಳ ಸಂಸ್ಥಾನದಲ್ಲಿ ಕಂದಾಯದ ಮಟ್ಟ ಬಹಳ ಜಾಸ್ತಿ ಇದೆ. ಉಳಿದ ಕಡೆ ಕಂದಾಯದ ಮಟ್ಟ ಕಡಿಮೆ ಇದೆ. ಅದರ ಪರಿಣಾಮವಾಗಿ, ಕಾಂಪೆನ್‌ಸೇಷನ್ ಕೊಡುವಾಗ ಆಗಲೀ ಭೂ ಶಾಸನ ಜಾರಿಗೆ ಬಂದಾಗ, ಆಗಲೀ ಅಥವಾ ಪ್ರೀಮಿಯಂ ಕೊಡುವ ಸಂದರ್ಭದಲ್ಲಿ ಆಗಲೀ ಬಹಳ ಹೊರೆಯಾಗುತ್ತದೆ. ಆದುದರಿಂದ ಇದನ್ನು ಕಡಿಮೆ ಮಾಡಬೇಕೆಂದು ಹೇಳಿದರೂ ಸಾಮಾನ್ಯವಾಗಿ ಭೂಮಿ ಉತ್ಪತ್ತಿಯ ಶೇಕಡ 4ರಷ್ಟು ಕಂದಾಯ ಗೊತ್ತು

ಮಾಡತಕ್ಕಂಥ ಪದ್ಧತಿ ಇದೆ. ಇತ್ತೀಚೆಗೆ ಮೊನ್ನೆ ತಾನೆ 1-4-1965 ರಿಂದ ರಿವಿಜನ್ ಆಫ್ ಸೆಟಲ್‌ಮೆಂಟ್ ಜಾರಿಯಲ್ಲಿ ಬಂದಿದೆ. ಅದಾದಮೇಲೆ ತೊಂದರೆ ನಿವಾರಣೆ ಆಗಿದೆ ಎಂದು ಭಾವಿಸುತ್ತೇನೆ. ಕೆಲವು ಕಡೆ ಕಂದಾಯ ಇಳಿಸಬೇಕಾದಂಥ ಸಂದರ್ಭಗಳು ಬರಬಹುದು. ಇದನ್ನು ಶೇಕಡ 4ರಷ್ಟು ಬದಲಾಗಿ ಶೇಕಡ 2ರಷ್ಟು, 1ರಷ್ಟು ಇಳಿಸಬೇಕಾದ ಸಂದರ್ಭ ಬರ ಬಹುದು. ಇದನ್ನೆಲ್ಲಾ ಆಲೋಚನೆ ಮಾಡುತ್ತೇವೆಂದು ನಾವು ಅವರಿಗೆ ಭರವಸೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಕೋಣಂದೂರು ಲಿಂಗಪ್ಪನವರು ಅಡಿಕೆ ತೋಟಗಳಿಗೆ 70, 80, 90 ರೂಪಾಯಿ ಕಂದಾಯ ಇದೆ. ಪರಿಹಾರ ಕೊಡುವ ಸಂದರ್ಭದಲ್ಲಿ ಪ್ರೀಮಿಯಂ ಕೊಡತಕ್ಕ ಸಂದರ್ಭದಲ್ಲಿ ಸುಮಾರು 9 ಸಾವಿರ ಎಕರೆ ಕಾಂಪನ್‌ಸೇಷನ್ ಕೊಡಬೇಕಾಗುತ್ತದೆಂದು ಹೇಳಿದರು. ಬಾಗಾಯಿತು ಮೇಲೆ ಅಡಿಕೆ ತೋಟಗಳ ಮೇಲೆ ಇರತಕ್ಕ ಕಂದಾಯವನ್ನು ಭೂ ಸುಧಾರಣೆ ಜಾರಿಗೆ ಬರುವುದರೊಳಗೆ ಕಡಿಮೆ ಮಾಡಲು ಪ್ರಯತ್ನ ಮಾಡುತ್ತೇವೆಂದು ಹೇಳು ವುದಕ್ಕೆ ಇಷ್ಟಪಡುತ್ತೇನೆ. ಮುಜರಾಯಿಗೆ ಸಂಬಂಧಪಟ್ಟಂತೆ ಮೈಸೂರು ರಾಜ್ಯದಲ್ಲಿ ಸುಮಾರು 35 ಸಾವಿರ ದೇವಸ್ಥಾನಗಳು ಇವೆ. ಈ 35 ಸಾವಿರ ದೇವಸ್ಥಾನಗಳ ಜೀರ್ಣೋದ್ಧಾರ ಮಾಡುವುದು ಅಗತ್ಯ ಎಂದು ಅನೇಕರಿಗೆ ಭಾವನೆ ಆಶೆ ಮತ್ತು ಅಭಿಮಾನ ಇದ್ದರೂ ಕೂಡ ಕೆಲವರಿಗೆ ಈ ವಿಷಯದಲ್ಲಿ ಲಘುವಾಗಿ ಮಾತನಾಡುವ ಅಭ್ಯಾಸವಿದ್ದರೂ ನಾನು ಲಘುವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಕೋಟಿ ಕೋಟಿ ಜನಗಳ ಮನೋಭಾವನೆಯನ್ನು ಅರಿತು ಅವರ ಪ್ರತಿನಿಧಿಗಳು ಆಗಿರತಕ್ಕ ನಾವು ಸಲಹೆ ಮಾಡುವುದಾಗಲೀ ಅವರ ಆಶೋತ್ತರ ಗಳನ್ನು ಈಡೇರಿಸುವುದಾಗಲೀ ನಾವು ಪ್ರಯತ್ನ ಮಾಡಬೇಕು. ಆದರೆ ಜನಸಾಮಾನ್ಯರ ಹಿತವನ್ನು ಸಾಧನೆ ಮಾಡುವುನ್ನು ಬಿಟ್ಟು ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಎಲ್ಲಾ ಖರ್ಚು ಮಾಡಬೇಕು ಎನ್ನುವ ಭಾವನೆಯಿಲ್ಲ.

ಜನಸಾಮಾನ್ಯರ ಹಿತಕ್ಕಾಗಿ ಬಹುಭಾಗದ ಆದಾಯವನ್ನೆಲ್ಲಾ ಹೇಗೆ ಖರ್ಚು ಮಾಡುತ್ತೇವೋ ಅದೇ ರೀತಿ ಸಂಸ್ಥೆಗಳ ಜೀರ್ಣೋದ್ಧಾರವು ಕೂಡ ಅಷ್ಟೇ ಅತ್ಯಾವಶ್ಯಕ ಎಂದು ನಾನು ಭಾವಿಸುತ್ತೇನೆ. ಆದರೆ ಸರ್ಕಾರಕ್ಕೆ ಒಂದು ಮಿತಿ ಇದೆ. ಕೋಟಿಗಟ್ಟಲೆ ಹಣ ಕೊಡುವ ಶಕ್ತಿ ಸರ್ಕಾರಕ್ಕೆ ಇಲ್ಲ. ಇವತ್ತಿನ ದಿವಸ ಈ ದೇವಸ್ಥಾನಗಳ ಜೀರ್ಣೋದ್ಧಾರದ ಕೆಲಸಗಳು ಆಗಬೇಕಾದರೆ ಭಕ್ತಾದಿಗಳ ಕಾಣಿಕೆಯ ಮೇಲೆ ಅವಲಂಬಿಸಿದೆ. ಮಾನ್ಯ ಸದಸ್ಯರು ಒಬ್ಬರು ಹೇಳಿದರು ಅಷ್ಟೇ ಅಲ್ಲದೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ವಿಮಾನದಿಂದ ಇಳಿದರೂ ಅಷ್ಟೆ. ದೇವರು ಪೂಜೆ ಮಾಡಿಸಬೇಕಾದರೆ ಬಾಳೆಹಣ್ಣು ಏತಕ್ಕೆ ಬೇಕು. ಅದನ್ನು ತೆಗೆದುಕೊಂಡು ಹೋಗುವುದನ್ನು ಬಿಟ್ಟು ಬಿಡಿ, ಮಂಗಳಾರತಿ ತಾನೆ ಏತಕ್ಕೆ ಬೇಕು ? ಇದಾವುದಕ್ಕೂ ಕಾಣಿಕೆ ಕೊಡುವ ಹಾಗಿಲ್ಲ. ಇದನ್ನೆಲ್ಲಾ ತೆಗೆದುಕೊಂಡು ದೇವಸ್ಥಾನಕ್ಕೆ ಪೂಜೆಗೆ ಹೋದರೆ ಕಾಣಿಕೆ ಕೊಡಬೇಕು ಎಂದರೆ ಇದರ ಉದ್ದೇಶ ಏನು ಎಂದು ಅವರು ತಿಳಿಯಲಿಲ್ಲ. ಈ ಬಗ್ಗೆ ಹೇಳುವುದಾದರೆ ಒಂದೆ ಭಕ್ತ ಕನಕದಾಸರು ಅಂತ ಇದ್ದರು. ಅವರು ಏನು ಮಾಡುತ್ತಿದ್ದರು. ನಿಮಗೆ ಭಕ್ತಿಯಿಂದ ದೇವರನ್ನು ನೋಡಬೇಕಾದರೆ ತೆಂಗಿನಕಾಯಿ ತೆಗೆದುಕೊಂಡು ಹೋಗುವ ಅವಶ್ಯಕತೆ ಇಲ್ಲ, ಬಾಳೆಹಣ್ಣು ತಗದುಕೊಂಡು ಹೋಗಬೇಕಾದ ಅವಶ್ಯಕತೆ ಇಲ್ಲ, ಮಂಗಳಾರತಿ ಮಾಡಿಸಬೇಕಾದ ಅವಶ್ಯಕತೆ ಇಲ್ಲ, ಸ್ನಾನದ ಅವಶ್ಯಕತೆಯೂ ಇಲ್ಲ, ಭಕ್ತಿಯೇ ಮುಖ್ಯವಾಗಿ ಪ್ರಾಧಾನ್ಯವಾದುದು. ಭಕ್ತಿ ಇದ್ದರೆ ಭಕ್ತಿ ಇರುವವರನ್ನು ಮೆಚ್ಚಿ ದೇವರು ಒಂದು ದಿಕ್ಕನ್ನೇ ಬಿಟ್ಟು ಮತ್ತೊಂದು ದಿಕ್ಕಿಗೆ ತಿರುಗುತ್ತಾನೆ. ನಾವು ಈ ಬಗ್ಗೆ ನೋಡಿಲ್ಲವೇ, ಕನಕನ ಕಿಂಡಿ ಅಂತ ಇದೆಯೆಲ್ಲಾ ಅಲ್ಲಿ ಕನಕನದಾಸನ ಭಕ್ತಿಗೆ ಮೆಚ್ಚಿ ಅವನಿಗೆ ದರ್ಶನ ಕೊಟ್ಟ ಆಧಾರವಿಲ್ಲವೇ ?

ಶ್ರೀ ಎಸ್. ಬಂಗಾರಪ್ಪ ;—ಬೇಡರ ಕಣ್ಣಪ್ಪನ ಉದಾಹರಣೆ ಬೇಕಾದರೂ ತೆಗೆದು ಕೊಳ್ಳಬಹುದು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ನಿಮಗೆ ಅದು ಹಿಡಿಸಲಿಲ್ಲ ಎಂದರೆ ಬಿಟ್ಟುಬಿಡಿ. ಮಾನ್ಯ ಸದಸ್ಯರು ಹೇಳಿದ ಹಾಗೆ ಉದಾಹರಣೆಗೆ ಭಕ್ತ ಕನಕದಾಸರು, ಪುರಂದರ ದಾಸರು, ಬೇಡರ ಕಣ್ಣಪ್ಪ ಇವರುಗಳನ್ನೇ ತೆಗೆದುಕೊಳ್ಳಿ. ಇದು ನಮ್ಮ ದೇಶದ ಒಂದು ಹಿರಿಮೆಯನ್ನು ಕಾಪಾಡಿಕೊಂಡು ಹೋಗತಕ್ಕಂಥಾದ್ದು ಅದಕ್ಕೋಸ್ಕರ ಮಾಡುತ್ತೇವೆ. ಇದು ಅನೇಕ ದಶಕ ಗಳಿಂದ ಬಂದಿದೆ. ಆದರೂ ಇದರ ಬಗ್ಗೆ ಮಾತನಾಡುತ್ತಿದ್ದೀರಲ್ಲಾ ? ಇವರಲ್ಲಿ ಚಾರ್ವಾಕ್ ಪಂಥಕ್ಕೆ ಸೇರಿದವರೂ ಇದ್ದಾರೆ, ಅವರೇನೂ ಹೊಸಬರಲ್ಲ. ಆದರೆ ಎಷ್ಟೋ ಜನ ಬಹಿರಂಗವಾಗಿ ಹೇಳಿದ್ದರೂ ಕೂಡ ಅವರ ಅಂತರಂಗದಲ್ಲಿ ನಮಸ್ಕಾರ ಮಾಡುವುದು, ತಿರುಪತಿಗೆ ಹೋಗಿ ಮುಡಿ ಕೊಡುವುದು ಇದೆ, ಈ ವಿಷಯವನ್ನು ಹೊರಕ್ಕೆ ಮಾತ್ರ ಹೇಳುತ್ತಾರೆ. ಆದರೆ ಒಳಗಡೆ ಮನೋಭಾವ ಏನು ಇದೆ ಎಂದು ಗೊತ್ತಾಗಿದೆ.

ಶ್ರೀ ವಾಟಾಳ್ ನಾಗರಾಜ್ :—ಅಂಥಾವರು ಯಾರಾದರೂ ನಿಮ್ಮ ಮಂತ್ರಿ ಮಂಡಲದಲ್ಲಿ ಇರುವರೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ನಾಸ್ತಿಕರು ಇದ್ದಾರೆ. ಚಾರವಾಕ್ ಪಂಥಕ್ಕೆ ಸೇರಿದವರು ಈ ಸಂದರ್ಭದಲ್ಲಿ ಪ್ರಭಾವ ಬೀರುವಂಥ ಶಕ್ತಿ ಇರುವವರು. ಇಲ್ಲಿ ಇರುವಾಗ ತಾವೇನೂ ಭಯ ಪಡಬೇಡಿ. ಆಸ್ತಿಕರಾಗಿರುವವರ ಸಂಖ್ಯೆ ಬಹುಭಾಗ ಇದೆ. ದೇವಸ್ಥಾನದ ಜೀರ್ಣೋದ್ಧಾರದ ಕೆಲಸದಲ್ಲಿ ಒಂದು ಯೋಚನೆ ಮಾಡಿದ್ದೇವೆ. ಪ್ರತಿ ತಾಲ್ಲೂಕಿಗೂ ಅಥವಾ ಮುಖ್ಯ ಮುಖ್ಯವಾದ ದೇವಸ್ಥಾನಗಳು ಏನು ಇವೆಯೋ ಅದರಲ್ಲಿ 500-600 ದೇವಸ್ಥಾನ ಗಳನ್ನು ಆರಿಸಿಕೊಂಡು ಅದರ ಅಭಿವೃದ್ಧಿ ಮಾಡಿ ಅಲ್ಲಿಗೆ ಬರತಕ್ಕಂಥ ಯಾತ್ರಾರ್ಥಿಗಳಿಗೆ ಸೌಕರ್ಯವನ್ನು ಮಾಡಿಕೊಟ್ಟರೆ ಯಾತ್ರಾರ್ಥಿಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬರುವುದಲ್ಲದೆ ಸಂಪಾದನೆಯೂ ಹೆಚ್ಚಾಗಿ ಬಂದು ಆ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಅವಕಾಶವಾಗುತ್ತದೆ. ಅದಕ್ಕೋಸ್ಕರ ವ್ಯವಸ್ಥಿತವಾದ ಯೋಜನೆ ಹಾಕಿಕೊಂಡು ಈ ಕೆಲಸವನ್ನು ಮಾಡಬೇಕು ಎಂದು ಯೋಚನೆ ಮಾಡಿದ್ದೇವೆ. ಇದಕ್ಕೆ ಎಲ್ಲರ ಸಹಕಾರ ಸಹಾಯ ಕೊಟ್ಟರೆ ಈ ದೇವಸ್ಥಾನಗಳ ಜೀರ್ಣೋದ್ಧಾರದ ಕೆಲಸ ಸುಗಮವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :—ಮಂಗಳಾರತಿಗೆ ಟ್ಯಾಕ್ಸ್ ಹಾಕಿದ್ದೀರಿ, ಅದರಂತೆ ಕೈಮುಗಿಯುವುದಕ್ಕೆ ಟ್ಯಾಕ್ಸ್ ಹಾಕಬೇಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಕೈ ಮುಗಿಯದೇ ಇದ್ದರೂ ಮಂಗಳಾರತಿ ಮಾಡಲು ಅವಕಾಶ ಇದೆ. ಮಾನ್ಯ ಸದಸ್ಯರು ಕೈಮುಗಿಯುವುದು ಬೇಡ ಎಂದರೆ ಬೇಡ. ಅದೂ ಅಲ್ಲದೆ ತಾವು ಬಾಳೆಹಣ್ಣು, ತೆಂಗಿನ ಕಾಯಿ ತೆಗೆದುಕೊಂಡು ಹೋದರೆ ಕಾಣಿಕೆ ವಸೂಲ್ಮಾಡು ತ್ತಾರೆಯೋ ಹೊರತು, ಅದನ್ನು ತೆಗೆದುಕೊಂಡು ಹೋಗದೇ ಇದ್ದರೆ ಅವರು ವಸೂಲ್ಮಾಡುವು ದಿಲ್ಲ, ಅದೇ ರೀತಿ ಮುಡಿ ಕೊಡಬೇಕಾದರೆ ಕಾಣಿಕೆಯನ್ನು ವಸೂಲ್ಮಾಡುತ್ತಾರೆ. ಅದು ಬೇಡ ಎಂದರೆ ಬೇಡ. ಹೀಗೆ ಮಾಡಬೇಕು ಅಂತ ಅದಕ್ಕೆ ಯಾವ ನಿರ್ಭಂದವು ಇಲ್ಲ. ಆದುದರಿಂದ ಮಾನ್ಯ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ ಈಗ ಇರುವ ದೇವಸ್ಥಾನಗಳ ಜೀರ್ಣೋದ್ಧಾರದ ಕೆಲಸದ ಜೊತೆಗೆ ಮುಖ್ಯ ಮುಖ್ಯವಾದದ್ದು ಯಾವ್ಯಾವುದು ಇದೆಯೋ ಅದನ್ನು ನಿಮ್ಮ ಅಧೀನಕ್ಕೆ ತೆಗೆದುಕೊಳ್ಳಿ ಎಂದು ಕೆಲವರು ಹೇಳಿದರು. ಆ ಬಗ್ಗೆ ಆಲೋಚನೆ ಮಾಡುತ್ತಾ ಇದ್ದೇವೆ. ಈಗಾಗಲೇ ತಮಗೆಲ್ಲಾ ಗೊತ್ತಿರುವ ಹಾಗೆ ಸೌಂದತ್ತಿಯಲ್ಲಿ ಎಲ್ಲಮ್ಮನ ದೇವಸ್ಥಾನವನ್ನು ತೆಗೆದುಕೊಳ್ಳಬೇಕೆಂದು ಒಂದು ಮಸೂದೆಯನ್ನು ಮಂಡಿಸುತ್ತಾ ಇದ್ದೇವೆ. ಅವರ ಆಧಾರದ ಮೇಲೆ ಬಾಕಿ ಇರುವುದನ್ನೂ ಕೂಡ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಪೂಜಾರಿಗಳನ್ನು ನೇಮಿಸಿಕೊಳ್ಳುವಂಥ ವಿಷಯದಲ್ಲಿ ಧರ್ಮದರ್ಶಿಗಳನ್ನು ನೇಮಕ ಮಾಡುವಂಥ ವಿಷಯದಲ್ಲಿ ಎಲ್ಲಾ ಜಾತಿ ಇರಬೇಕು ಎಂದು ವಾಟಾಳ್ ನಾಗರಾಜ್‌ರವರು ಹೇಳಿದರು. ಈಗ ಧರ್ಮದರ್ಶಿಗಳನ್ನು ನೇಮಿಸಿಕೊಳ್ಳುವ ವಿಷಯದಲ್ಲಿ ಹಿಂದೂ ದೇವಸ್ಥಾನ ಗಳಲ್ಲಿ ಕಡ್ಡಾಯವಾಗಿ ಹರಿಜನರು ಎಂದು ಗೊತ್ತು ಮಾಡಿದ್ದೇವೆ. ಈ ರೀತಿಯಾಗಿ ಪೂಜಾರಿ ಗಳನ್ನು ನೇಮಿಸಿಕೊಳ್ಳುವ ವಿಷಯದಲ್ಲೂ ಕೂಡ ಅವರಿಗೆ ಕೇರಳದಲ್ಲಿಯಾಗಲಿ, ಮದ್ರಾಸ್‌ನಲ್ಲಿ ಯಾಗಲಿ ಶಿಕ್ಷಣ ಕೊಟ್ಟು ಜಾತಿ ವ್ಯತ್ಯಾಸ ಇಲ್ಲದೆ ಅವರನ್ನು ನೋಡಿಕೊಳ್ಳಬೇಕು ಎಂದು ಮಾನ್ಯ ಸದಸ್ಯರೊಬ್ಬರು ಸಲಹೆ ಮಾಡಿದ್ದಾರೆ. ಇದರ ಬಗ್ಗೆ ನಾನು ಹೇಳುವುದು ಏನೆಂದರೆ ಈ ವಿಷಯ ದಲ್ಲಿ ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸಿದ್ದೇವೆ. ಇದಕ್ಕೆ ಆಗಮಶಾಸ್ತ್ರವನ್ನು ಅಭ್ಯಾಸ ಮಾಡಬೇಕು. ಅದಕ್ಕೆ ಯಾರು ಯಾರು ಮುಂದೆ ಬರುತ್ತಾರೆ ಅವರನ್ನು ಕಡ್ಡಾಯವಾಗಿ ನೇಮಿಸಿಕೊಳ್ಳಬೇಕೆಂದು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಈ ವಿಷಯದಲ್ಲೂ ಕೂಡ ನಾನು ಹಿಂದೆ ಬೀಳುವುದಿಲ್ಲ ಎನ್ನುವ ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ರೀತಿ ಅನೇಕ ರಾಜ್ಯಗಳಲ್ಲಿ ಪ್ರಗತಿ ಆಗುತ್ತಾ ಇರುವಾಗ ನಾವು ಹಿಂದೆ ಬೀಳುವುದಕ್ಕೆ ಇಷ್ಟ ಪಡುವುದಿಲ್ಲ. ಈ ವಿಷಯದಲ್ಲೂ ಕೂಡ ಈಗಾಗಲೇ ಅನೇಕ ದೇವಸ್ಥಾನಗಳಲ್ಲಿ ಕುರುಬರು ಇದ್ದಾರೆ, ಹರಿಜನರು ಇದ್ದಾರೆ, ಬೆಸ್ತರು ಇದ್ದಾರೆ, ಒಕ್ಕಲಿಗರು ಇದ್ದಾರೆ. ಒಟ್ಟು 35 ಸಾವಿರ ದೇವಸ್ಥಾನಗಳಲ್ಲಿ ಅನೇಕ ಜಾತಿಯವರು ಸೇರಿದವರು ಇದ್ದಾರೆ. ಇದನ್ನು ಹೊಸದಾಗಿ ನೀವು ಸಲಹೆ ಮಾಡುತ್ತಾ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ :—ನಮ್ಮ ಊರಿನಲ್ಲಿ ಹರಿಜನರೇ ಪೂಜೆ ಮಾಡುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಅನೇಕ ಊರುಗಳಲ್ಲಿ ಹರಿಜನರೇ ದೇವರ ಪೂಜೆ ಮಾಡುತ್ತಿದ್ದಾರೆ. ಇದು ಕೆಲವರಿಗೆ ಗೊತ್ತಿಲ್ಲದೆ ಇರಬಹುದು. ಮತ್ತು ನಮ್ಮ ಕೃಷ್ಣಪ್ಪನವರು ಹೇಳಿದರು, ದೊಡ್ಡ ದೊಡ್ಡ ದೇವಸ್ಥಾನಗಳನ್ನು ತೆಗೆದುಕೊಳ್ಳುತ್ತಿದ್ದಾರೆಯೇ ವಿನಾ ಬಡ ದೇವಸ್ಥಾನಗಳನ್ನು ಮರೆತು ಬಿಟ್ಟಿದ್ದಾರೆ ಎಂದು. ಏಕಕಾಲದಲ್ಲಿ ಎಲ್ಲವನ್ನೂ ತೆಗೆದು ಕೊಳ್ಳುವುದಕ್ಕೆ ಆಗದೇ ಇದ್ದರೂ ಆ ಬಗ್ಗೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇವೆ.

ಇನ್ನೊಂದು ವಿಷಯ ಏನೆಂದರೆ ಈ ವೃದ್ಧಾಪ್ಯ ವೇತನದ ಬಗ್ಗೆ ನನಗೆ ಸಂಬಂಧವಿಲ್ಲದಿದ್ದರೂ ನಮ್ಮ ಇಲಾಖಾ ಅಧಿಕಾರಿಗಳು ಅಲ್ಲಿ ಕೆಲಸ ಮಾಡುತ್ತಾ ಇರುವುದರಿಂದ ನಾನು ಹೋದ ಕಡೆಯಲ್ಲೆಲ್ಲಾ ಈ ವೃದ್ಧಾಪ್ಯ ವೇತನದ ಕೇಸುಗಳು ಎಷ್ಟು ಕೇಸುಗಳು ಪೆಂಡಿಂಗ್ ಇವೆ, ಅದನ್ನು ಇಷ್ಟು ದಿವಸದೊಳಗೆ ತೀರ್ಮಾನ ಮಾಡಬೇಕು ಎಂದು ಹೇಳುತ್ತಿದ್ದೇನೆ. ನಿರ್ದಿಷ್ಟ ವಾಗಿ ನಮ್ಮ ಇಲಾಖಾ ಅಧಿಕಾರಿಗಳು ಯಾವುದೇ ಖಾತೆಗೆ ಸಂಬಂಧಪಟ್ಟಂತೆ ಕೆಲಸ ಮಾಡಿದರೂ ಕೂಡ ಈ ವಿಷಯದ ಬಗ್ಗೆ ಈ ಕೆಲಸಗಳನ್ನು ಬೇಗ ಮಾಡಬೇಕು ಎಂದು ಸ್ಪಷ್ಟವಾಗಿ ತಿಳಿಸಿದ್ದೇನೆ.

ವೃದ್ಧಾಪ್ಯ ವೇತನ ಮೂರು ತಿಂಗಳ ಒಳಗಾಗಿ ಇತ್ಯರ್ಥವಾಗಬೇಕೆಂದು ಮಾನ್ಯ ಅರ್ಥ ಸಚಿವರು ಜಿಲ್ಲಾಧಿಕಾರಿಗಳಿಗೆ, ತಹಸೀಲ್ದಾರರಿಗೆ ಆದೇಶ ಕೊಟ್ಟಿದ್ದಾರೆ. ಈಗ ಡೆಪ್ಯುಟಿ ಕಮಿಷನರಿಗೆ ಹೋಗಿ ತೀರ್ಮಾನವಾಗಬೇಕು. ಇದರಲ್ಲಿ ನಿಧಾನವಾಗುವುದರಿಂದ ಡೆಪ್ಯುಟಿ ಕಮಿಷನರಿಂದ ತಪ್ಪಿಸಿ ಅಸಿಸ್ಟೆಂಟ್ ಕಮಿಷನರ್ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಾದರೆ ಬೇಗ ತೀರ್ಮಾನವಾಗುವ ಹಾಗೆ ಮಾಡಬಹುದು ಎನ್ನುವುದು ನನ್ನ ಅಭಿಪ್ರಾಯ. ಆ ಕೆಲಸ ವನ್ನು ಕೂಡ ನಾನು ಮಾಡುತ್ತೇನೆ.

ಕಡೆಯದಾಗಿ ಸಭೆಯ ಅವಗಾಹನೆಗೆ ತಮ್ಮ ಮೂಲಕ ಒಂದು ವಿಷಯವನ್ನು ತರಬೇಕಾಗಿದೆ. ಟಿ. ಟಿ. ಫೈನ್ ಬಹಳ ಜಾಸ್ತಿಯಾಗಿದೆ, ಆಫ್‌ಸೆಟ್ ಪ್ರೈಸ್‌ಗಿಂತ ಜಾಸ್ತಿಯಾಗಿದೆ ಎನ್ನುವ

ಅಭಿಪ್ರಾಯ ಹೇಳಿದರು. ಅನೇಕ ವೇಳೆ ಬಹಳ ಬಡವರಿಗೆ ಜಮೀನು ಕೊಡತಕ್ಕ ವಿಷಯದಲ್ಲಿ ಕಿಮ್ಮತ್ತೂ ಕೊಟ್ಟು ಟಿ. ಟಿ. ಫೈನ್ ಕೊಡುವುದಕ್ಕೆ ಬಹಳ ಹೊರೆಯಾಗುತ್ತದೆ. ಅದಕ್ಕೋಸ್ಕರ ಹರಿಜನ ಗಿರಿಜನರಿಗೆ ಮುಫತ್ತಾಗಿ ಕೊಡುವುದಕ್ಕೆ ಅವಕಾಶವಿದೆ. ಬೇರೆಯವರಿಗೆ ಜಮೀನು ಮಂಜೂರು ಮಾಡುವಾಗ ಸಾಧ್ಯವಾದರೆ ಟಿ.ಟಿ. ಫೈನ್ ಬಹಳ ಕಡಿಮೆ ಹಾಕಲಾಗುತ್ತಿದೆ. ಪೂರಾ ಇಲ್ಲದೆ ಇದ್ದರೂ ಸ್ವಲ್ಪಮಟ್ಟಿಗೆ ಟಿ.ಟಿ. ಫೈನ್ ಇಳಿಸಿ ಜಮೀನು ಮಂಜೂರು ಮಾಡುವ ಕಾಲದಲ್ಲಿ ಹಣ ತೆಗೆದುಕೊಳ್ಳುವಂತೆ ವ್ಯವಸ್ಥೆ ಮಾಡಲಾಗುತ್ತಿದೆ.

Sri C. M. ARUMUGHAM : Sir, this is the time when the Government has to declare its policy so far as the department is concerned. With regard to land distribution, I want to know the number of persons benefited and the acreage distributed districtwise figures may please be given. I know the Land Reforms Bill is coming up shortly. That apart, the list of the extent of land distributed and the number of persons benefited may be placed before the House.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಇಷ್ಟು ವಿವರಗಳನ್ನು ಮಾನ್ಯ ಸದಸ್ಯರು ಯಾರಾದರೂ ಕೇಳಿದ್ದರೆ ಅದನ್ನೂ ಸಂಗ್ರಹಿಸಿ ಕೊಡುತ್ತಿದ್ದೆ. 1-1-1972ರ ವರೆಗೆ 1,35,103 ಎಕರೆ ಜಮೀನು ಹಂಚಿಕೆ ಮಾಡಿದ್ದಾರೆ. ಉಳಿದ ಜಮೀನು ಮತ್ತು ದೇವಸ್ಥಾನಗಳ ಜಮೀನು ಹಂಚಿಕೆಯಾಗಬೇಕೆಂದು ಆದೇಶ ಕೊಟ್ಟಿದ್ದೇವೆ. ಅಕ್ರಮ ಸ್ವಾಧೀನ ಮಾಡಿಕೊಂಡಿರತಕ್ಕ ಜಮೀನು 2,75,000 ಎಕರೆ. ಇದರಲ್ಲಿ 14,660 ಎಕರೆ ಭೂಮಿಯನ್ನು ಒಂದು ವರ್ಷದಲ್ಲಿ ಕ್ರಮಪಡಿಸಿ ಈಗಾಗಲೇ ಕೊಟ್ಟಿದೆ. ಉಳಿದ ಜಮೀನನ್ನು ಮುಂದಿನ ವರ್ಷದ ಮಾರ್ಚಿ ಆಖೈರಿನೊಳಗಾಗಿ ಕೊಡಬೇಕೆಂದು ಆದೇಶ ಕೊಟ್ಟಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ ;—ಲ್ಯಾಂಡ್ ಗ್ರ್ಯಾಂಟ್‌ನಲ್ಲಿ 50 ಪರ್ಸೆಂಟ್ ಹರಿಜನರಿಗೆ ರಿಸರ್ವ್ ಮಾಡಬೇಕೆಂದು ತೀರ್ಮಾನ ಮಾಡಿದ್ದೀರಿ. ಒಂದು ಕಡೆ ಕೆಲವು ವಿಶಿಷ್ಟ ಇಂಟರೆಸ್ಟ್ ಇರುವವರು ಅಕ್ರಮ ಸಾಗುವಳಿ ಮಾಡಿದ್ದಾರೆ. ಅದನ್ನು ಕಾನೂನಿನ ಚೌಕಟ್ಟಿನೊಳಗೆ ಸಕ್ರಮ ಪಡಿಸುವ ಪ್ರಯತ್ನ ಮಾಡುತ್ತಿರುತ್ತಾರೆ. ಇನ್ನೊಂದು ಕಡೆ ಇರುವ ಜಮೀನಿನಲ್ಲಿ 50 ಪರ್ಸೆಂಟ್ ಹರಿಜನರಿಗೆ ಕೊಡಬೇಕೆಂದು ಮಾಡಿದ್ದೀರಿ. ಅನಧಿಕೃತವಾಗಿ ಸಾಗುವಳಿ ಮಾಡಿ ಟಿ.ಟಿ. ಫೈನ್ ಹಾಕಿಸಿಕೊಂಡು ಗವರ್ನಮೆಂಟ್ ಆರ್ಡರ್ ಪ್ರಕಾರದಿಂದ ಕ್ರಮಬದ್ಧ ಮಾಡಿಕೊಂಡು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಅನಧಿಕೃತ ಸಾಗುವಳಿ ಯಾಗಿರುವ ಜಮೀನನ್ನು ಸರ್ಕಾರ ವಹಿಸಿಕೊಳ್ಳಬೇಕು. ಡಿಸರ್ವಿಂಗ್ ಇದ್ದರೆ ಅಂಥವರಿಗೆ ರೆಗ್ಯುಲರೈಸ್ ಮಾಡತಕ್ಕದ್ದು. ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಏನಿದೆ ಆ ನಿಯಮಗಳಿಗನುಸಾರ ವಾಗಿ ಅವನೂ ಒಬ್ಬ ಅರ್ಜಿದಾರನೆಂದು ಪರಿಗಣಿಸಬೇಕು. ಯಾವುದೇ ಕಾರಣದಿಂದ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಜಮೀನನ್ನು ಕ್ರಮಬದ್ಧಪಡಿಸುವುದು ಉಚಿತವಲ್ಲ. ಸರ್ಕಾರ ಅದನ್ನು ವಾಪಸು ತೆಗೆದುಕೊಂಡು, ಹರಿಜನ ಗಿರಿಜನರಿಗೆ 50 ಪರ್ಸೆಂಟ್ ರಿಸರ್ವ್ ಮಾಡಿ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಹಂಚಬೇಕು.

ಶ್ರೀ ವಿ. ಎಸ್. ಪಾಟೀಲ್ :—ಕೆಲವು ವೆಸ್ಟೆಡ್ ಇಂಟರೆಸ್ಟ್‌ನವರು ಜಮೀನು ಸ್ವಾಧೀನಪಡಿಸಿ ಕೊಂಡು ಅವರ ಹೆಸರಿನಲ್ಲಿ ಇಟ್ಟುಕೊಂಡಮೇಲೆ ಜಮೀನು ಹಂಚುವುದಕ್ಕೆ ತೊಂದರೆ ಯಾಗುತ್ತದೆ. ಮೊದಲು ಸರ್ಕಾರ ವಶಪಡಿಸಿಕೊಳ್ಳಬೇಕು, ಅನಂತರ ಅಪ್ಲಿಕೇಶನ್ ಹಾಕಿದ್ದು

ಅವನು ಡಿಸರ್ವಿಂಗ್ ಇದ್ದರೆ ಕೊಡಿ ಎಂದು ಶ್ರೀ ದೇವೇಗೌಡರು ಹೇಳಿದರು. ಇದು ಕಂಬರ್‌ಸಂ ಆಗುತ್ತದೆ. ಯಾರ ಹತ್ತಿರ ಐದು ಅಥವಾ ಹತ್ತು ಎಕರೆಗೆ ಮೇಲ್ಪಟ್ಟು ಜಮೀನಿದ್ದು ಅವರು ಗ್ರೀಡಿನೆಸ್‌ನಿಂದ ಪುನಃ ಜಮೀನು ಅಕ್ರಮ ಸ್ವಾಧೀನ ಮಾಡಿಕೊಂಡಿದ್ದರೆ ಅಂಥವರಿಂದ ಸರ್ಕಾರ ವಶಪಡಿಸಿಕೊಂಡು ಬೇರೆಯವರಿಗೆ ಕೊಡಲಿ. ಆದರೆ ಯಾರ ಹತ್ತಿರ ಎರಡು ಎಕರೆ ಅಥವಾ ನಾಲ್ಕು ಎಕರೆ ಇರುತ್ತದೆ ಅಂಥವರಿಂದ ಕೂಡ ಸರ್ಕಾರ ವಶಪಡಿಸಿಕೊಂಡು ರೆಗ್ಯುಲರೈಸ್ ಮಾಡುವುದರಿಂದ ತೊಂದರೆಯಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿರುವುದು ಹೊಸ ಸಲಹೆ. ಈಗಿರತಕ್ಕ ರೀತಿಯಲ್ಲಿ ಎರಡಕ್ಕೂ ಪ್ರತ್ಯೇಕವಾಗಿ ರೂಲ್ಸ್ ಮಾಡಿದೆ. ಸರ್ಕಾರ ಬಂಜರು ಜಮೀನು ಹಂಚಿಕೆ ಮಾಡುವಾಗ ಪ್ರತ್ಯೇಕವಾದ ರೂಲ್ಸ್, ಅಕ್ರಮವಾಗಿ ಸ್ವಾಧೀನವಾಗಿರುವುದನ್ನು ಹಂಚಿಕೆ ಮಾಡುವುದಕ್ಕೆ ಬೇರೆ ರೂಲ್ಸ್ ಇದೆ. ಆ ರೂಲ್ಸ್ ಪ್ರಕಾರ ಮಾಡುತ್ತಿದ್ದೇವೆ. ಅಕ್ರಮ ಸ್ವಾಧೀನದಲ್ಲಿರುವುದನ್ನೆಲ್ಲ ಲಿಸ್ಟಿಗೆ ತೆಗೆದುಕೊಂಡು ಅವರನ್ನೂ ಅರ್ಜಿದಾರರೆಂದು ಪರಿಗಣಿಸಿ ಎಂದು ಹೇಳಿದರು. ಆದರಿಂದ ಮಾನ್ಯ ಸದಸ್ಯರಾದ ವಿ. ಎನ್. ಪಾಟೀಲರು ಹೇಳಿದ ಹಾಗೆ ಅನೇಕ ತೊಡಕುಗಳಿವೆ. ಕೆಲವು ಭಾಗಗಳಲ್ಲಿ ಜಮೀನು ಕೆಲವರು ಒತ್ತುವರಿ ಮಾಡಿಕೊಂಡಿರುತ್ತಾರೆ ಅಥವಾ ಒಂದು ಭೂಮಿಯಲ್ಲಿ ಉತ್ತಮವಾಗಿ ಬೆಳೆ ಬೆಳೆಯುವುದಕ್ಕೆ ಸಹಾಯಕವಾಗುವ ರೀತಿಯಲ್ಲಿ ಒತ್ತುವರಿಯಾಗಿರುತ್ತದೆ. ಅಕ್ರಮ ಸ್ವಾಧೀನ ಮಾಡುವುದನ್ನು ಕ್ರಮಬದ್ಧ ಮಾಡಿಕೊಡುವುದಕ್ಕೆ ಕೆಲವು ನಿಯಮಗಳಿವೆ. ಆ ದೃಷ್ಟಿಯಿಂದ ಕ್ರಮಬದ್ಧ ಮಾಡಿಕೊಡುತ್ತೇವೆಯೋ ಹೊರತು, ಇಲ್ಲದೆ ಇದ್ದರೆ ಮಾಡಿಕೊಡುವುದಕ್ಕಾಗುವುದಿಲ್ಲ. ಒಂದು ವೇಳೆ ಅವನಿಂದ ತೆಗೆದುಕೊಂಡು ಬೇರೆಯವರಿಗೆ ಕೊಡೋಣವೆಂದರೆ, ಅವನಿಗೆ ತೆಗೆದು ಕೊಳ್ಳುವುದಕ್ಕೆ ಅರ್ಹತೆ ಇದ್ದರೂ ಕೂಡ ಅದೇ ಭೂಮಿ ನಾಳೆ ಸಿಕ್ಕದೇ ಇರಬಹುದು. ಆ ತೊಂದರೆ ಇದೆ. ಈಗಿರುವ ರೂಲ್ಸ್ ಪ್ರಕಾರವಾಗಿ ಮಾಡಿದರೆ ಸರಿಹೋಗುತ್ತದೆ ಎಂದು ನನಗನ್ನಿಸುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು:—ಮಾನ್ಯ ಮಂತ್ರಿಗಳು ಮೈಸೂರು ಸಂಸ್ಥಾನದಲ್ಲಿ ಇರುವ ಸುಮಾರು 75 ಸಾವಿರ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡುತ್ತೇವೆಂದು ಹೇಳಿದರು, ಇದಕ್ಕಾಗಿ ರೆವಿನ್ಯೂ ಇಲಾಖೆಯವರು ಮುಜರಾಯಿ ಇಲಾಖೆಯವರಿಗೆ ಸರಿಯಾದ ಸೂಚನೆಗಳನ್ನು ಕೊಟ್ಟು ಮಾಡಿಸಬೇಕು. ಇದರ ಬಗ್ಗೆ ಶ್ರೀ ಅಣ್ಣಾರಾಯರವರು ಒಂದು ವರದಿಯನ್ನು ಸರಕಾರಕ್ಕೆ ಕೊಟ್ಟಿದ್ದರು. ಇದನ್ನು ಯಾವಾಗ ಕಾರ್ಯರೂಪಕ್ಕೆ ತರುತ್ತೀರಿ ?

ಶ್ರೀ ಎಂ. ಬಿ. ರಾಮಸ್ವಾಮಿ :—ರೆವಿನ್ಯೂ ಇಲಾಖೆಯಲ್ಲಿ ಪ್ರಮೋಷನ್‌ಗಳನ್ನು ಕೊಡುವ ವಿಷಯದಲ್ಲಿ ಕ್ಲಾಸು ಎರಡನೇ ವರ್ಗದಿಂದ ಕ್ಲಾಸು ಒಂದನೇ ವರ್ಗಕ್ಕೆ ಕೊಡುವಾಗ ಇಲ್ಲಿ ಆರು ಜನ ಅಸಿಸ್ಟೆಂಟು ಕಮಿಷನರುಗಳಿಗೆ ಕೊಡಲಿಲ್ಲ. ಇವರು ಹರಿಜನರಾಗಿದ್ದರೂ ಇವರಿಗೆ ಸಿಗಲಿಲ್ಲ. ಇದನ್ನು ಯಾವ ರಾಜಕೀಯಕ್ಕಾಗಿ ಮಾಡಿದ್ದಾರೆ ಎನ್ನುವುದೂ ಗೊತ್ತಾಗುತ್ತಿಲ್ಲ. ಸರಕಾರ ಈಗ ದೇವಸ್ಥಾನಗಳಿಗಾಗಿ ಶೇಕಡ ಐವತ್ತಕ್ಕಿಂತ ಹೆಚ್ಚಾಗಿ ಖರ್ಚು ಮಾಡಬೇಕೆಂದು ಸುಮಾರು 75 ಸಾವಿರ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಬೇಕೆಂದು ಇದೆ ಎಂದು ಹೇಳಿದರು. ಇದರ ಉದ್ದೇಶವೇನು ಮತ್ತು ಇದರಿಂದ ಯಾರಿಗೆ ಲಾಭವಾಗುತ್ತದೆ, ಇದರ ಬಗ್ಗೆ ಮೈಸೂರು ಆರ್ಡಿನೆನ್ಸ್‌ನಲ್ಲಿರುವ ಸೆಕ್ಷನ್ 122 (ಎ) ಪ್ರಕಾರ ನೋಟೀಸ್ ಆಫ್ ಅಸೆಸ್ ಮೆಂಟ್ ಟು ಆಕ್ಯುಪೆಂಟ್ಸ್ ಕೊಡಬೇಕು. ಇದು 1969 ರಲ್ಲಿದ್ದ ಎಂ. ಎಲ್. ಆರ್. ಆಕ್ಟು ಪ್ರಕಾರ ಸೆಟ್‌ಲ್‌ಮೆಂಟು ಆದಮೇಲೆ ನೋಟೀಸು ಕೊಡಬೇಕು. ಇನ್ನು ಇದರಲ್ಲಿ 1964 ರಲ್ಲಿ ರೀಸೆಟ್‌ಲ್‌ಮೆಂಟು ಆಗಿರುವ ಭೂಮಿಗಳಿಗೇ ನೋಟೀಸನ್ನು ಕೊಟ್ಟಿಲ್ಲ, ಇದನು ಇಂಪ್ಲಿಮೆಂಟು ಮಾಡುವ ಅಧಿಕಾರಿಗಳು ಬೆಂಗಳೂರು ಜಿಲ್ಲೆಯಲ್ಲಿ ಇನ್ನೂ ಮಾಡಲಿಲ್ಲ. ಇದರ

ಬಗ್ಗೆ ಕನ್‌ಫರ್‌ಮೇಷನ್ ಆರ್ಡರೂ ಕಳುಹಿಸಲಿಲ್ಲ. ಇದರಿಂದಾಗಿ ಇಲ್ಲಿನ ರೈತರುಗಳಿಗೆ ಬಹಳ ಅನಾನುಕೂಲಗಳಾಗುತ್ತಿವೆ. ಯಾರು ಯಾರು ಜಮೀನುಗಳಲ್ಲಿದ್ದರು ಮತ್ತು ಅಲ್ಲಿ ಕೆಲಸ ಮಾಡುತ್ತಿದ್ದರು ಎನ್ನುವುದು ಇದೇ ಸರಕಾರದ ಆರ್ಡರಿನಲ್ಲಿರುವ ಅನೆಕ್ಸರಿನಲ್ಲಿದೆ. ಇದರ ಪ್ರಕಾರ ಸರಿಯಾಗಿ ಕನ್‌ಫರ್‌ಮೇಷನ್ ಆರ್ಡರು ಕಳುಹಿಸುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಕೆ. ಹೆಚ್. ಹನುಮೇಗೌಡ :—ಕಳೆದ ಹತ್ತು ವರ್ಷಗಳಿಂದಲೂ ರೆವಿನ್ಯೂ ಇಲಾಖೆಯ ಮೂಲಕ ತಕಾವಿ ಸಾಲಗಳನ್ನು ಬಾವಿಗಳಿಗಾಗಿ ಹಾಗೂ ಇನ್ನಿತರ ಕೆಲಸಗಳಿಗಾಗಿ ರೈತರಿಗೆ ಕೊಡುತ್ತಿದ್ದಾರೆ, ಆದರೆ ಇದನ್ನು ವಸೂಲು ಮಾಡುವಾಗ ಪೀನಲ್ ಇಂಟರೆಸ್ಟು ಹಾಕಿ ವಸೂಲು ಮಾಡುತ್ತಿದ್ದಾರೆ. ಬಡ ರೈತರುಗಳನ್ನು ಉದ್ಧಾರ ಮಾಡುತ್ತೇವೆ ಮತ್ತು ದೇಶದಲ್ಲಿ ಸಮಾಜವಾದ ಜಾರಿಗೆ ತರುತ್ತೇವೆ ಎಂದು ಹೇಳುವ ಸರಕಾರ ಬಡ ರೈತರ ಮೇಲೆ ಶೇಕಡ 18 ರಷ್ಟು ಪೀನಲ್ ಇಂಟರೆಸ್ಟು ಹಾಕಿ ವಸೂಲು ಮಾಡುವುದು ನ್ಯಾಯವೇ ? ಹಾಗೂ ಎರಡು ಮತ್ತು ಮೂರು ವರ್ಷಗಳ ಬಾಕಿ ಇದ್ದರೆ ಅಂತಹವರಿಂದ ಕಂದಾಯ ವಸೂಲಿ ಮಾಡುವಾಗ ಅವರನ್ನು ಹಿಂಸೆ ಮಾಡಿ ಪೊಲೀಸು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹೊಡೆಸುತ್ತಾರೆ. ಇದಕ್ಕಾಗಿ ರೈತರಿಗೆ ಇನ್ನೂರು ರೂಪಾಯಿ ಖರ್ಚು ಬೇರೆ ಬರುತ್ತದೆ, ಇದನ್ನು ಸರಕಾರ ತಪ್ಪಿಸಬೇಕು.

ಇನ್ನು ವಿಲೇಜು ಅಕೌಂಟೆಂಟರುಗಳನ್ನು ನೇಮಕ ಮಾಡಿರುವ ಹಳ್ಳಿಗಳಲ್ಲಿ ನಾಲ್ಕೈದು ತಿಂಗಳಿಂದಲೂ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಸಂಬಳವನ್ನೇ ಕೊಟ್ಟಿಲ್ಲ. ಆದರೆ ಸರಕಾರದಲ್ಲಿ ಇರುವ ಎರಡು ಮೂರು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳಿಗೆ ಸಂಬಳ ಕೊಡದಿದ್ದರೆ ಸುಮ್ಮನಿರುತ್ತಾರೆಯೇ ? ರೈತಾಪಿ ಜನರು ಇಂತಹ ಕೆಲಸಗಳಿಗೆ ಬಂದು ಅವರ ಜೀವನಕ್ಕೆ ಸಂಬಳವನ್ನು ನಂಬಿಕೊಂಡಿರುವುದರಿಂದ ಇವರಿಗೆ ಬೇಗನೆ ಸಂಬಳ ಕೊಡಲು ಏರ್ಪಾಡು ಮಾಡಬೇಕು ಮತ್ತು ಈಗಿರುವ ವಿಲೇಜು ಅಕೌಂಟೆಂಟರುಗಳಿಗೆ ಸಾಕಾದಷ್ಟು ಕೆಲಸಗಳೇ ಇಲ್ಲ. ಇವರಿಗೆ ಕೆಲಸಗಳಿಲ್ಲದಿದ್ದರೆ ಇವರಿಗೇಕೆ ಸಂಬಳ ಕೊಟ್ಟು ಇಟ್ಟುಕೊಳ್ಳಬೇಕು ?

ಶ್ರೀ ಕೋಣಂದೂರು ಲಿಂಗಪ್ಪ :—ಹಳೇ ಕಂದಾಚಾರ ಪದ್ಧತಿಯಾದ ಕಂದಾಯದ ವಸೂಲಿಯನ್ನು ರದ್ದು ಮಾಡುವ ಯೋಚನೆ ಮಾಡಿದ್ದಾರೆಯೇ ? ಮತ್ತು ನಾನು ಸೊಂಡೂರು ಜಮೀನುಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ, ಇಲ್ಲಿರುವ ಜಮೀನುಗಳನ್ನು ವಶಪಡಿಸಿಕೊಂಡು ಭೂಮಿ ಇಲ್ಲದ ರೈತರಿಗೆ ಭೂಮಿ ಕೊಡುವುದರ ಬಗ್ಗೆ ಯಾವಾಗ ಕಾನೂನು ತರುತ್ತೀರಿ ?

ಶ್ರೀ ಟಿ. ಆರ್. ಶಾಮಣ್ಣ :—ಬಂಗ್ಲಾ ಸ್ಟಾಂಪು ತೆಗೆದಿದೆ ಎಂದು ಕೇಂದ್ರ ಸರಕಾರ ತೆಗೆದಿದ್ದರೂ, ನಮ್ಮ ಸರಕಾರ ತೆಗೆಯಲಿಲ್ಲ. ಇದರ ಬಗ್ಗೆ ಬೇರೆ ಯಾವ ರೀತಿ ಸ್ಟಾಂಪು ಕೂಡ ಬಂದಿಲ್ಲ. ಇದನ್ನು ಯಾವಾಗ ತರುತ್ತೀರಿ. ಎರಡನೇದು ಅನೇಕ ದೇವಸ್ಥಾನಗಳಲ್ಲಿ ಸಂಬಳದ ಸ್ಕೇಲುಗಳನ್ನೇ ನಿಗದಿ ಮಾಡಿಲ್ಲ. 'ದೇವಸ್ಥಾನಗಳು ಬೆಳೆಯಬೇಕಾದರೆ ಇಲ್ಲಿ ಕೆಲಸ ಮಾಡುವವರಿಗೆ ಸಾಕಷ್ಟು ಸಂಬಳ ಕೊಡಬೇಕು. ಇಂತಹ ಹಳೇ ಸ್ಕೇಲುಗಳನ್ನು ಯಾವಾಗ ರಿವೈಸು ಮಾಡುತ್ತೀರಿ ?

ಶ್ರೀ ವಿ. ಎನ್. ಪಾಟೀಲ್ :—ಸುಮಾರು ಹತ್ತು ಹನ್ನೆರಡು ವರ್ಷಗಳ ಹಿಂದಿನಿಂದಲೂ ಕೆಲವು ಕಡೆ ಇರುವ ಹಳ್ಳಿಗಳ ರೋಡುಗಳನ್ನು ಲ್ಯಾಂಡು ರೆವೆನ್ಯೂ ಕಲೆಕ್ಷನ್ನಿಂದ ಮಾಡುತ್ತಿದ್ದರು. ಉದಾಹರಣೆಯಾಗಿ ಹೇಳಬೇಕಾದರೆ ಬೀದರಿನಿಂದ ಚಿಂಚೋಳಿವರೆಗೆ ಹೋಗುವ ರೋಡನ್ನು ಅರ್ಧ ಮಾಡಿ ಇನ್ನೂ ಮುಗಿಸಿಲ್ಲ. ಇದನ್ನು ಬೇಗ ಮುಗಿಸುತ್ತೀರಾ ? ಎರಡನೇದು ಬಾವಿಗಳಿಗಾಗಿ ತಕಾವಿ ಸಾಲ ಕೊಡುತ್ತಾರೆ. ಕೆಲವು ಕಡೆಗಳಲ್ಲಿ 40 ಅಡಿಗಳಷ್ಟು ತೋಡಿದರೂ ನೀರು ಬರುತ್ತಿಲ್ಲ, ಇಂತಹ ನೀರಿಲ್ಲದ ಬ್ಲೈಂಡ್ ವೆಲ್ಸ್‌ಗಳನ್ನು ಪರಿಶೀಲನೆ ಮಾಡಿ ಅವುಗಳಿಗೆ ಬದಲು ಹೊಸ ಬಾವಿಗಳನು ಮಾಡಲು ತಕ್ಕ ಯೋಜನೆ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ :—ಟಿ. ಟಿ. ವಿಷಯದಲ್ಲಿ ಜಮೀನು ಕೊಡುವಾಗ ಅಪ್‌ಸೆಟ್ ಪ್ರೈಸಿಗಿಂತ ಜಾಸ್ತಿ ಕೊಡಬೇಕು ಎಂದು ಇದೆ. ಆದರೆ ತಾಲ್ಲೂಕು ಆಫೀಸುಗಳಲ್ಲಿ ಟಿ.ಟಿ. ಹಣ ವಸೂಲಾಗಬೇಕಾಗಿವೆ ಎಂದು ಒಂದು ನೋಟೀಸನ್ನು ಹಾಕಬೇಕು. ಇದರಿಂದ ಜನರಿಗೆ ಅನ್ಯಾಯವಾಗುವುದು ತಪ್ಪುತ್ತದೆ. ತಾಲ್ಲೂಕು ಆಫೀಸಿನವರು ಏಕೆ ಇಂತಹ ಪ್ರಕಟಣೆಗಳನ್ನು ಮಾಡಬಾರದು ? ಎರಡನೇದು ಲ್ಯಾಂಡು ಗ್ರ್ಯಾಂಟು ಕಮಿಟಿ ಬಗ್ಗೆ ಅನೇಕ ಸದಸ್ಯರು ಹೇಳಿದ್ದಾರೆ. ಇದರಲ್ಲಿ ತಮ್ಮ ಪಕ್ಷದವರೇ ಇರಬೇಕೆಂದು ಹಾಕುವುದು ಏತಕ್ಕಾಗಿ. ಬೇರೆಯವರು ಯಾರೂ ಈ ಕಮಿಟಿಗಳಿಗೆ ಬರಲು ಹಕ್ಕಿಲ್ಲವೇ ? ನಿಮ್ಮ ಪಕ್ಷದವರೂ ಬೇಡ ನಮ್ಮವರೂ ಬೇಡ ಇತರರನ್ನು ಇದರಲ್ಲಿ ಹಾಕುವಂತೆ ಏಕೆ ಮಾಡಬಾರದು ?

ಶ್ರೀ ಕೆ. ಎಂ. ರುದ್ರಪ್ಪ :—ಸರ್ವೆ ಸೆಟಲ್‌ಮೆಂಟು ಮಾಡಬೇಕೆಂದು ಹೇಳಿದರೂ ಇದುವರೆಗೆ ನಿರ್ದಿಷ್ಟವಾಗಿ ಇದರಲ್ಲಿ ಕೆಲಸಗಳಾಗಿಲ್ಲ. ಇದಕ್ಕಾಗಿ ಸುಮಾರು ಏಳನೂರು ಜನರನ್ನು ಹೆಚ್ಚಾಗಿ ನೇಮಕ ಮಾಡಿದ್ದೇವೆಂದು ಹೇಳುತ್ತಾರೆ. ಇದುವರೆಗೆ ನಮ್ಮ ದೇಶದಲ್ಲಿ ರೆವೆನ್ಯೂ ಗ್ರಾಮಗಳಲ್ಲಿ 150 ಇಲ್ಲವೇ 200 ಜನಸಂಖ್ಯೆ ಇರುವ ಹ್ಯಾಂಪ್ಲೆಟ್‌ಗಳೂ ಇವೆ. ಇಂತಹ ಗ್ರಾಮಗಳಲ್ಲಿ ಸರ್ವೆ ಸೆಟಲ್‌ಮೆಂಟು ಇನ್ನೂ ಆಗದೇ ಇರುವಂತಹ ಗ್ರಾಮಗಳು ಸಾವಿರಾರು ಹಾಗೇ ಉಳಿದಿವೆ. ಇನ್ನೂ ಇದರ ಫೈನ್‌ಲೈಜೇಷನ್ ಆಗಿಲ್ಲ. ಇದಾಗದೆ ಪಂಚಾಯಿತಿಗಳನ್ನು ರೆಕಗ್ನೈಸು ಮಾಡಲಾಗುವುದಿಲ್ಲ. ಸರಕಾರ ಇದನ್ನು ಆದಷ್ಟು ಬೇಗನೆ ಮಾಡಲು ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆಯೇ ? ಈಗ 10-15 ವರ್ಷಗಳಿಂದ ಹೆಚ್ಚು ಕೆಲಸ ಆಗಿಲ್ಲ. ಈಗ ಬಂದಿರತಕ್ಕ ಡೈರೆಕ್ಟರ್ ಆಫ್ ಲ್ಯಾಂಡ್ ರೆವಿನ್ಯೂ ಸರ್ವೆ ಅಂಡ್ ಸೆಟ್ಲ್‌ಮೆಂಟ್ ಅವರಾದ ಶ್ರೀ ನಾಗೇಗೌಡರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಈಗ 10-15 ವರ್ಷಗಳಿಂದ ಒಂದೇ ಕಡೆ ಇರತಕ್ಕ ಕೆಲವು ಅಧಿಕಾರಿಗಳನ್ನು ವರ್ಗ ಮಾಡಿ ಸರ್ವೆ ಸೆಟ್ಲ್‌ಮೆಂಟಿಗೆ ಸಂಬಂಧಪಟ್ಟ ರೆಕಾರ್ಡ್‌ಗಳನ್ನು ಬೇಗ ಮಾಡಿಕೊಟ್ಟು ರೈತರಿಗೆ ಅನುಕೂಲಮಾಡಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಶ್ರೀರಾಮುಲು :—ಸರ್ಕಾರದವರು ಮುಜರಾಯಿ ಇಲಾಖೆಯ ಮುಖಾಂತರ ದೇವಸ್ಥಾನಗಳ ಅಭಿವೃದ್ಧಿಗೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ನೀವು ಪ್ರಮಾಣವಚನ ಸ್ವೀಕಾರ ಮಾಡುವಾಗ ನಾನು ನನ್ನ ಕರ್ತವ್ಯಗಳನ್ನು ಶ್ರದ್ಧಾ ಭಕ್ತಿಗಳಿಂದ ನಿರ್ವಹಿಸುತ್ತೇನೆ ಎಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಬಂದು ಆ ಮೇಲೆ ಆ ನೀತಿಗೆ ವಿರೋಧವಾಗಿ ನಡೆದುಕೊಂಡು ದೇವರ ಚಿತ್ರಗಳನ್ನೆಲ್ಲಾ ಚರಂಡಿಯಲ್ಲಿ ಬಿಸಾಡಿ ಎಂದು ಹೇಳತಕ್ಕಂಥಾ ನೀತಿ ಸರಿಯೇ ?

ಶ್ರೀ ಎಚ್. ಟಿ. ಕೃಷ್ಣಪ್ಪ :—ಮುಜರಾಯಿ ಹಣವನ್ನು ಖಾಸಗಿ ಬ್ಯಾಂಕುಗಳಲ್ಲಿ ಇಡುವುದಕ್ಕೆ ಕಾರಣವೇನು ? ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ ಆಪರೇಟೀವ್ ಬ್ಯಾಂಕುಗಳಲ್ಲಿ ಹಣವನ್ನು ಇಟ್ಟರೆ ಆ ಹಣಕ್ಕೆ ಬಡ್ಡಿ ಜಾಸ್ತಿ ಬರುತ್ತದೆ. ಈಗ ಆ ಹಣವನ್ನು ಖಾಸಗೀ ಬ್ಯಾಂಕುಗಳಲ್ಲಿ ಇಟ್ಟಿರುವುದರಿಂದ ಕಡಿಮೆ ಬಡ್ಡಿ ಬರುತ್ತಿದೆ. ಇದಕ್ಕೆ ಕಾರಣವೇನು ?

ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಅಪೀಲುಗಳನ್ನು ತೀರ್ಮಾನ ಮಾಡತಕ್ಕ ಅಧಿಕಾರವನ್ನು ರೆವಿನ್ಯೂ ಮಂತ್ರಿಗಳಿಗೆ ಕೊಟ್ಟಿದ್ದರೂ ಕೂಡ ಅವರು ಆ ಅಧಿಕಾರವನ್ನು ಕಾರ್ಯದರ್ಶಿಯವರಿಗೆ ವಹಿಸಿರುವ ಔಚಿತ್ಯವೇನು ?

ಶ್ರೀ ಎನ್. ಎಸ್. ಗುರುಸಿದ್ದಪ್ಪ :—ತಾಲ್ಲೂಕು ಆಫೀಸುಗಳಲ್ಲಿ ಲಂಚದ ಹಾವಳಿ ಹೆಚ್ಚಿರುವುದರಿಂದ ರೈತರ ಶೋಷಣೆಯಾಗುತ್ತಿದೆ. ಆದ್ದರಿಂದ ಅದನ್ನು ತಡೆಗಟ್ಟುವುದಕ್ಕೆ ಏನು ಕ್ರಮವನ್ನು ಕೈಕೊಂಡಿದ್ದೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈಗ ಮಾನ್ಯ ಸದಸ್ಯರು ಕೆಲವು ಹೊಸ ಅಂಶಗಳನ್ನು ಹೇಳಿದ್ದಾರೆ. ಅವುಗಳಿಗೆ ಮಾತ್ರ ನಾನು ಉತ್ತರ ಕೊಡಬೇಕಾಗಿದೆ. ಕೆಲವು ವಿಚಾರಗಳಿಗೆ ಈಗಾಗಲೇ ನಾನು ಉತ್ತರವನ್ನು ಕೊಟ್ಟಿದ್ದೇನೆ. ಅಪೀಲನ್ನು ವಿಚಾರಣೆ ಮಾಡುವ ಅಧಿಕಾರವನ್ನು ಕಾರ್ಯದರ್ಶಿಯವರಿಗೆ ಏತಕ್ಕೆ ಕೊಟ್ಟಿದ್ದೀರಿ ಎಂದು ಹೇಳಿದ್ದಾರೆ. ಇದೇನು ಹೊಸದಲ್ಲ. ನಾನು ಈ ಸ್ಥಾನಕ್ಕೆ ಬರುವುದಕ್ಕೆ ಮುಂಚೆನಿಂದಲೂ ಕೂಡ ಹಿಂದೆ ಇದ್ದ ರೆವಿನ್ಯೂ ಮಂತ್ರಿಗಳು ಈ ಅಧಿಕಾರವನ್ನು ರೆವಿನ್ಯೂ ಸೆಕ್ರೆಟರಿಗಳಿಗೆ ವಹಿಸಿದ್ದರು. ಆದ್ದರಿಂದ ನಾನು ಕೂಡ ಅದೇ ಸೂಕ್ತ ಎಂದು ಆ ಅಧಿಕಾರವನ್ನು ರೆವಿನ್ಯೂ ಸೆಕ್ರೆಟರಿಗಳಿಗೆ ವಹಿಸಿದ್ದೇನೆ. ಶ್ರೀಮಾನ್ ಕೃಷ್ಣಪ್ಪನವರು ಮಾತನಾಡುತ್ತಾ ಈಗ ಇರತಕ್ಕ ರೆವಿನ್ಯೂ ಸೆಕ್ರೆಟರಿಗಳು ಬಹಳ ದಕ್ಷರು, ಪ್ರಾಮಾಣಿಕರಾಗಿದ್ದಾರೆ ಆ ವಿಷಯದಲ್ಲಿ ಯಾವ ಅನುಮಾನವೂ ಇಲ್ಲ ಎಂದು ಹೇಳಿದ್ದಾರೆ. ಆದರೆ ಈಗ ನೀವೇಕೆ ಆ ಅಧಿಕಾರವನ್ನು ವಹಿಸಿಕೊಳ್ಳಲಿಲ್ಲ ಎಂದು ಕೇಳಿದರು ? ಅದು ಬಹು ಮುಖ್ಯವಾದ ಕೆಲಸ ಆದರೂ ಈ ಬಗ್ಗೆ ರೆವಿನ್ಯೂ ಸೆಕ್ರೆಟರಿಯವರಲ್ಲಿ ವಿಶ್ವಾಸ ಇರುವುದರ ಜೊತೆಗೆ ಆ ಕೆಲಸದಿಂದ ದೂರ ಇದ್ದರೆ ಬೇರೆ ಕೆಲಸವನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ ಎನ್ನುವ ದೃಷ್ಟಿಯಿಂದಲೂ ಅಲ್ಲಿ ನಿರ್ದಿಷ್ಟವಾಗಿ ನ್ಯಾಯದ ಆಧಾರದ ಮೇಲೆ ಕಾನೂನಿನ ಆಧಾರದ ಮೇಲೆ ಆ ಕೇಸುಗಳನ್ನು ತೀರ್ಮಾನ ಮಾಡತಕ್ಕ ಸಂದರ್ಭ ಜಾಸ್ತಿ ಇರುವುದರಿಂದ ಅಲ್ಲಿ ಏನೂ ಲೋಪವಾಗುವುದಿಲ್ಲ ಎಂದು ತಿಳಿದು ಹಿಂದಿನಿಂದ ಇದ್ದಂತಹ ಕ್ರಮವನ್ನೇ ಮುಂದುವರಿಸಿಕೊಂಡು ಬರುತ್ತಿದ್ದೇನೆ.

ಆಮೇಲೆ ಮಾನ್ಯ ಸದಸ್ಯರು ಮುಜರಾಯಿ ಹಣವನ್ನು ಖಾಸಗಿ ಬ್ಯಾಂಕುಗಳಲ್ಲಿ ಇಟ್ಟಿದ್ದೀರಿ ಎಂದು ಹೇಳಿದರು. ಮದ್ರಾಸ್ ಭಾಗದಿಂದ ಬಂದಂತಹ ಭಾಗಗಳಲ್ಲಿ ಈ ಹಣ ಬ್ಯಾಂಕುಗಳಲ್ಲಿ ಇದೆ. ಹಳೆಯ ಮೈಸೂರು ಭಾಗದಲ್ಲಿ ಬಹುಭಾಗ ಹಣ ಟ್ರೆಜರಿಗಳಲ್ಲಿ ಇತ್ತು. ಆದ್ದರಿಂದ ಅದನ್ನು ಖಾಸಗೀ ಬ್ಯಾಂಕುಗಳಲ್ಲಿ ನ್ಯಾಷನಲೈಜ್ಡ್ ಬ್ಯಾಂಕುಗಳಲ್ಲಿ. ಷೆಡ್ಯೂಲ್ ಬ್ಯಾಂಕುಗಳಲ್ಲಿ ಇಡುವ ಹಾಗೆ ಆರ್ಡರ್ ಮಾಡಿದ್ದೇನೆ. ಕೆಲವು ಭಾಗದಲ್ಲಿ ಅದನ್ನು ಕರ್ನಾಟಕ ಬ್ಯಾಂಕುಗಳಲ್ಲಿ ಇಟ್ಟಿದ್ದೇವೆ. ಅಲ್ಲಿ ಕೊಡುವ ಬಡ್ಡಿಗಿಂತ 1 ಪರ್ಸೆಂಟ್ ಅರ್ಧ ಪರ್ಸೆಂಟ್ ಜಾಸ್ತಿ ಕೊಡುತ್ತೇವೆ. ನಮ್ಮ ಬ್ಯಾಂಕಿನಲ್ಲಿ ಇಡಿ ಎಂದು ಕೆಲವರು ಬಂದಿದ್ದರು. ಆದರೆ ಶ್ರೀಮಾನ್ ಕೃಷ್ಣಪ್ಪನವರ ಕೊರತೆ ಏನೆಂದರೆ ಆ ಹಣವನ್ನು ಡಿ. ಸಿ. ಸಿ. ಬ್ಯಾಂಕಿನಲ್ಲಿಯೇ ಆ ಹಣವನ್ನು ಇಡಬೇಕು ಎಂದು ಒತ್ತಾಯ ಬಾತು. ಆದರೆ ಬೇರೆ ಬ್ಯಾಂಕಿನಲ್ಲಿ ಆ ಹಣವನ್ನು ಹಾಕಿ ಎಂದು ನಾವು ಹೇಳಿದ್ದರಿಂದ ಅವರಿಗೆ ಕೋಪ ಬಂದಿದೆ. ಆದರೆ ಈಗ ಆ ಹಣವನ್ನು ಡಿ. ಸಿ. ಸಿ. ಬ್ಯಾಂಕಿನಲ್ಲಿ ಹಾಕುವುದಕ್ಕೆ ನಾವು ಹಿಂದೆಗೆಯುವುದಿಲ್ಲ. ಯಾವ ಯಾವ ಜಿಲ್ಲೆಗಳಲ್ಲಿ ಆ ಹಣವನ್ನು ಬೇರೆ ಬೇರೆ ಬ್ಯಾಂಕುಗಳಲ್ಲಿ ಹಾಕಿದೆ ಅದನ್ನು ಡಿ. ಸಿ. ಸಿ. ಬ್ಯಾಂಕುಗಳಲ್ಲಿ ಹಾಕುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಮೊದಲು ನ್ಯಾಷನಲೈಜ್ಡ್ ಬ್ಯಾಂಕಿನಲ್ಲಿ ಹಾಕಬೇಕು ಎಂದು ಇದ್ದುದರಿಂದ ಆ ರೀತಿ ಟ್ರೆಜರಿಯಲ್ಲಿ ಇದ್ದಂತಹ ಹಣವನ್ನು ಆ ರೀತಿ ನ್ಯಾಷನಲೈಜ್ಡ್ ಬ್ಯಾಂಕಿನಲ್ಲಿ ಹಾಕಿದ್ದೇವೆ, ಮತ್ತು ಷೆಡ್ಯೂಲ್ ಬ್ಯಾಂಕಿನಲ್ಲಿ ಹಾಕಿದ್ದೇವೆ. ಅದನ್ನು ಈಗ ಡಿ. ಸಿ. ಸಿ. ಬ್ಯಾಂಕಿನಲ್ಲಿ ಹಾಕುವುದಕ್ಕೆ ಏರ್ಪಾಟು ಮಾಡುತ್ತೇನೆ. ಅದರಲ್ಲಿ ಏನು ವ್ಯತ್ಯಾಸ ಆಗುವುದಿಲ್ಲ.

ಟಿ.ಟಿ. ವಿಷಯದಲ್ಲಿ ಎಲ್ಲೆಲ್ಲಿ ಜಾಸ್ತಿ ಹಾಕಿದ್ದಾರೆ, ನಿರ್ದಿಷ್ಟವಾಗಿ ಎಷ್ಟು ವಜಾ ಮಾಡಬೇಕಾಗುತ್ತದೆ ಎನ್ನುವ ಬಗ್ಗೆ ಈಗ ಹೇಳುವುದಕ್ಕಾಗುವುದಿಲ್ಲ. ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಈ ಟಿ. ಟಿ. ತೆರಿಗೆ ಬಿದ್ದಿದೆ ಎಂಬುದನ್ನು ಪರಿಶೀಲನೆ ಮಾಡಲು ಇನ್‌ಫರ್‌ಮೇಷನ್ ತರಿಸಿಕೊಳ್ಳಬೇಕಾಗುತ್ತದೆ. ಗ್ರಾಮಗಳ ದಾಖಲೆಗಳ ಬಗ್ಗೆ ಶ್ರೀಮಾನ್ ರುದ್ರಪ್ಪನವರು ಹೊಸ ಅಭಿಪ್ರಾಯವನ್ನು ತಿಳಿಸಿದ್ದಾರೆ. ಅನೇಕ ದೊಡ್ಡ ದೊಡ್ಡ ಗ್ರಾಮಗಳು ಗ್ರಾಮಗಳ ನಕಾಶೆಯಲ್ಲಿ ಗುರುತು ಇರುವುದಿಲ್ಲ. ಮುಖ್ಯವಾಗಿ ಗ್ರಾಮಗಳಲ್ಲಿ ಗ್ರಾಮಠಾಣವನ್ನು ಪ್ರತ್ಯೇಕವಾಗಿ

ಗೊತ್ತು ಮಾಡಬೇಕು. ಅದನ್ನು ಕೂಡ ಜನಸಂಖ್ಯೆಯನ್ನು ನಿರ್ಧಾರ ಮಾಡಿಕೊಂಡು ಪ್ರತ್ಯೇಕವಾದ ಗ್ರಾಮಗಳನ್ನು ಮಾಡುವುದಕ್ಕೆ ಆಲೋಚನೆ ಮಾಡುತ್ತೇವೆ.

ಶ್ರೀಮಾನ್ ವಿ. ಎನ್. ಪಾಟೀಲ್ ಅವರು ರಸ್ತೆಗಳನ್ನು ಮಾಡುವಾಗ ಖಾಸಗಿ ಜನಗಳ ಜಮೀನು ಸರ್ಕಾರದವರು ಆಕ್ವೈರ್ ಮಾಡಿಕೊಂಡಂಥವುಗಳಿಗೆ ಕಾಂಪನ್‌ಸೇಷನ್ ಅನ್ನು 10-12 ವರ್ಷಗಳಾದರೂ ಕೊಟ್ಟಿಲ್ಲ ಎಂದು ಹೇಳಿದರು. ಈ ಪರಿಸ್ಥಿತಿ ಹೇಗಿದೆ ಎಂದರೆ ಸರ್ಕಾರದವರು ರಸ್ತೆಗಳನ್ನು ಮಾಡುವಾಗ ಆ ಸಂಬಂಧಪಟ್ಟ ಭೂಮಾಲೀಕರ ಒಪ್ಪಿಗೆಯನ್ನು ಪಡೆದು ರಸ್ತೆಗಳನ್ನು ಪ್ರಾರಂಭ ಮಾಡುತ್ತಾರೆ. ಆ ಮೇಲೆ ಅವರಿಗೆ ಕಾಂಪನ್‌ಸೇಷನ್ ಕೊಡುವುದಕ್ಕೆ ಆಕ್ವಿಜಿಷನ್ ಕಾರ್ಯಕ್ರಮ ಮುಗಿದ ಮೇಲೆ ಕಾಂಪೆನ್‌ಸೇಷನ್ ಕೊಡಬೇಕಾಗುತ್ತದೆ. ಈಗ ಆ ಭೂಮಿಯನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡಮೇಲೆ ಅದಕ್ಕೆ 75 ಪರ್ಸೆಂಟ್ ಕಾಂಪೆನ್‌ಸೇಷನ್ ಅನ್ನು ಮುಂಗಡವಾಗಿ ಕೊಡತಕ್ಕಂಥಾ ಒಂದು ವ್ಯವಸ್ಥೆ ಮಾಡಬೇಕು ಎಂದು ಆಲೋಚನೆ ಮಾಡುತ್ತಿದ್ದೇವೆ. ಆ ಬಗ್ಗೆ ಒಂದು ಆರ್ಡರ್ ಮಾಡಿ ಅದನ್ನು ಕಳುಹಿಸಿಕೊಡುತ್ತೇವೆ.

ಆ ಮೇಲೆ ನೀರು ಬಿದ್ದಿಲ್ಲದ ಬಾವಿಗೆ ಸರ್ಕಾರದವರು ಕೊಟ್ಟಂತಹ ಸಾಲವನ್ನು ವಜಾ ಮಾಡಬೇಕೆಂದು ಹೇಳಿದರು. ಅದನ್ನು ಹಿಂದೆ ಮುಂದೆ ನೋಡದೆ ನೀರು ಬಿದ್ದಿಲ್ಲ ಎಂದ ಕೂಡಲೆ ಸಾಲವನ್ನು ವಜಾ ಮಾಡುವುದು ಕಷ್ಟವಾಗುತ್ತದೆ. ನೀರು ಬಿದ್ದಿಲ್ಲ ಎಂದರೆ ಏತಕ್ಕೆ ಬಿದ್ದಿಲ್ಲ ಎಂಬುದನ್ನು ಇನ್‌ಸ್ಪೆಕ್ಷನ್ ಮಾಡಿ ಆ ಬಗ್ಗೆ ಯಾವ ರೀತಿ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ.

Madam Speaker in the chair.

ಸ್ವಾಮೀ, ಸೊಂಡೂರು ಇನಾಂ ರದ್ದಿಯಾತಿ ಕಾನೂನಿನ ಬಗ್ಗೆ ಹೇಳಿದರು. ಈ ಕಾನೂನನ್ನು ಇನ್ನು ಎಂಟು ಹತ್ತು ದಿನದೊಳಗಾಗಿ ಈ ಸಭೆಯ ಮುಂದೆ ಮಂಡಿಸುತ್ತೇನೆ.

ವಿಲೇಜು ಆಕೌಂಟೆಂಟರುಗಳಿಗೆ ಕೆಲಸ ಜಾಸ್ತಿ ಇಲ್ಲ ಎಂದರು. ಸರಕಾರಕ್ಕೆ ಬರಬೇಕಾದ ಹಣವನ್ನು ವಸೂಲು ಮಾಡುವುದಕ್ಕಾಗಿ ಇವರನ್ನು ನೇಮಿಸಿರುವುದು. ಇವರಿಗೆ ಇನ್ನೂ ಹೆಚ್ಚು ಕೆಲಸಗಳನ್ನು ಕೊಡಬೇಕಾದರೆ ಪಂಚಾಯತಿಗೆ ಸಂಬಂಧಪಟ್ಟ ಕೆಲವು ಕೆಲಸಗಳನ್ನೂ ವಹಿಸಿ ಹಾಗೂ ಇನ್ನಿತರ ಕೆಲಸಗಳನ್ನೂ ಹೆಚ್ಚಾಗಿ ಒದಗಿಸಲು ಪ್ರಯತ್ನ ಮಾಡುತ್ತೇವೆ. ಕಂದಾಯದ ಬಾಕಿಯನ್ನು ಒಟ್ಟಿಗೆ ಒಂದೇ ಸಾರಿ ವಸೂಲು ಮಾಡುತ್ತಾರೆಂದರು. ಈಗಾಗಲೇ ನಾನು ಅಧಿಕಾರಿಗಳಿಗೆ ಸ್ಪಷ್ಟವಾದ ಆದೇಶವನ್ನು ಕಳುಹಿಸಿದ್ದೇನೆ. ಒಂದು ವರ್ಷದ ಕಂದಾಯ ಜಾಸ್ತಿ ಇದ್ದರೆ ಆ ವರ್ಷದ ಕಂದಾಯ ಮತ್ತು ಹಿಂದೆ ಬಾಕಿ ಇರುವುದರಲ್ಲಿ ಒಂದು ವರ್ಷದ ಕಂದಾಯ ಮಾತ್ರ ವಸೂಲು ಮಾಡಬೇಕು. ಎಂದರೆ ಒಟ್ಟು ಎರಡು ವರ್ಷಗಳ ಬಾಕಿಯನ್ನು ಮಾತ್ರ ವಸೂಲು ಮಾಡಬೇಕೆಂದೂ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

ಇನ್ನು ಶ್ರೀ ರಾಮಸ್ವಾಮಿಯವರು ದೇವಸ್ಥಾನಗಳ ಖರ್ಚಿಗಾಗಿ ನಿಗದಿಯಾದ ಹಣದಲ್ಲಿ ಸುಮಾರು ಎಪ್ಪತ್ತು ಸಾವಿರ ರೂಪಾಯಿಗಳಷ್ಟು ಲ್ಯಾಪ್ಸ್ ಆಗಿದೆ ಎಂದರು. ಇದು ಯಾವ ಸಂದರ್ಭದಲ್ಲಾಗಿದೆ ಎನ್ನುವುದು ನನ್ನ ಗಮನಕ್ಕೆ ಬಂದಿಲ್ಲ. ಬಂದ ಕೂಡಲೇ ಅದನ್ನು ನೋಡಿ ಇದಕ್ಕೆ ಕಾರಣರು ಯಾರು ಎನ್ನುವುದನ್ನು ನೋಡಿ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಆಶ್ವಾಸನೆಯನ್ನು ಮಾನ್ಯ ಸದಸ್ಯರಿಗೆ ಇಲ್ಲಿ ಕೊಡಲು ಇಚ್ಛಿಸುತ್ತೇನೆ. ತಪ್ಪಾಗಿದ್ದರೆ ಅಂತಹವರ ಮೇಲೆ ಕ್ರಮ ಕೈಗೊಳ್ಳುತ್ತೇನೆ. ಅಲ್ಲದೆ ಮಾನ್ಯ ಸದಸ್ಯರು ಹರಿಜನರ ಬಗ್ಗೆ ಸರಿಯಾಗಿ ಪ್ರಮೋಷನ್ ಕೊಟ್ಟಿಲ್ಲ ಎಂದರು. ಯಾವ ಅಧಿಕಾರಿಗಳು ಎನ್ನುವುದನ್ನು ನನಗೆ ತಿಳಿಸಿದರೆ ಅದರಲ್ಲಿ ಏನಾಗಿದೆ ಎನ್ನುವುದನ್ನು ತಿಳಿದು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಪ್ರಯತ್ನಮಾಡುತ್ತೇನೆ.

ಕಡೆಯದಾಗಿ ನನಗೆ ಸಂಬಂಧಪಟ್ಟ ಇಲಾಖೆಯ ಬಗ್ಗೆ ಸದಸ್ಯರುಗಳು ಒಳ್ಳೆಯ ಸಲಹೆಗಳನ್ನು ಕೊಟ್ಟಿರುವುದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಇಲಾಖೆಯಲ್ಲಿ ಬೇರೆ ಇಲಾಖೆಯಲ್ಲಿ ಹೇಳುವಂತೆ ಇಲ್ಲಿ ಆಸ್ಪತ್ರೆ ಬೇಕು, ಇಲ್ಲಿ ಕೆರೆ ಬೇಕು ಎಂದು ಕೇಳಿದರೆ ನಾವೇನೂ ಕೊಡುವ ಹಾಗಿಲ್ಲ. ನಮ್ಮ ಇಲಾಖೆಯಲ್ಲಿ ಬರೀ ಕಂದಾಯದ ಹಣವನ್ನು ವಸೂಲಿ ಮಾಡುವುದೊಂದೇ ಕೆಲಸ. ಇದರಲ್ಲಿ ಸಾಧ್ಯವಾದಷ್ಟು ಕೆಲಸಗಳನ್ನು ಮಾಡಲು ಪ್ರಯತ್ನ ಮಾಡಿದ್ದೇನೆ ಮತ್ತು ಇದರಲ್ಲಿ ಕೆಲವರ ಆಗ್ರಹಕ್ಕೆ ಕೂಡ ತುತ್ತಾಗಬೇಕಾದ ಸಂದರ್ಭಗಳೂ ಬರಬಹುದು. ಆದರೂ ಅವರ ಆಗ್ರಹವೇ ವಿಶ್ವಾಸ ಎಂದು ಸ್ವಲ್ಪಮಟ್ಟಿಗೆ ನಮ್ಮ ಇಲಾಖೆಯ ಕಾರ್ಯಗಳನ್ನು ಉತ್ತಮಪಡಿಸಲು ಪ್ರಯತ್ನ ಮಾಡಿದ್ದೇನೆಂದು ತಿಳಿಸುತ್ತೇನೆ. ಮಾನ್ಯ ಸಭೆಯು ನಾನು ಮಂಡಿಸಿರುವ ಎಲ್ಲಾ ಬೇಡಿಕೆಗಳನ್ನೂ ಒಪ್ಪಿ ಅವರ ಬೆಂಬಲ ಕೊಡಬೇಕೆಂದೂ ತಮ್ಮ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

MADAM SPEAKER : The question :

" That the respective sums not exceeding the amounts mentioned in Demand Nos. 2, 7, 8, 15 and 42 inclusive of the sums granted on account be granted to the Government to defray the charges which will come in course of payment during the financial year ending 31st day of Mach, 1974 ".

The Motion was adopted and the Demands were voted. As ordered by the Chair, the Motion for Demands for Grants adopted by the House, are reproduced below :—

DEMAND No. 2—LAND REVENUE

" That a sum not exceeding Rs. 5,43,10,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 2 'Land Revenue'."

DEMAND No. 7—STAMPS

" That a sum not exceeding Rs. 32,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March, 1974, in respect of Demand No. 7 'Stamps'."

DEMAND No. 8—REGISTRATION

" That a sum not exceeding Rs. 46,00,000 inclusive of the sum granted 'on account' be granted to the Government to

defray the charges which will come in course of payment during the financial year ending 31st day of March, 1974, in respect of Deemand No. 8, 'Registration'."

DEMAND No. 15—MISC. DEPARTMENTS EXCLUDING CIVIL SUPPLIES DEPT. AND DEPT. OF INFORMATION AND SMALL SAVINGS

"That a sum not exceeding Rs. 1,20,50,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March, 1974, in respect of Demand No. 15, 'Miscellaneous Departments excluding Civil Supplies Department, Department of Information and Small Savings'."

DEMAND No. 42—COMPENSATION TO ZAMINDARS

"That a sum not exceeding Rs. 96,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March, 1974, in respect of Demand No. 42 'Payment of Compensation to Zamindars'."

DEMAND No. 4—MOTOR VEHICLES ACTS—ADMINISTRATION

DEMAND No. 26—LABOUR AND EMPLOYMENT

Sri AZEEZ SAIT (Minister for Labour).—

Madam, on the recommendation of the Governor, I beg to move:

"That a sum not exceeding Rs. 37,49,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 4 'Motor Vehicles Acts—Administration'."

"That a sum not exceeding Rs. 1,96,10,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March, 1974, in respect of Demand No. 26 'Labour and Employment'."

MADAM SPEAKER.—Motion moved :

"That a sum not exceeding Rs. 37,49,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March, 1974, in respect of Demand No. 4 'Motor Vehicles Acts— Administration'."

Demand No. 26 is also deemed to have been moved and both the Demands are before the House for discussion.

Sri H. S. Siddappa to initiate the debate.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ) :—ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಿನ ವಿವಾದದ ಬಗ್ಗೆ ವಿರೋಧ ಪಕ್ಷದ ಸದಸ್ಯರುಗಳನ್ನೆಲ್ಲಾ ಕರೆದು ಒಂದು ಸಭೆ ಸೇರಿಸಿ ಸರಕಾರದ ನಿಲುವಿನ ಬಗ್ಗೆ ಚರ್ಚೆ ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಭರವಸೆ ಕೊಟ್ಟಿದ್ದರು. ಆದರೆ ಇದುವರೆಗೆ ನಮಗೆ ಯಾವ ಸೂಚನೆಗಳೂ ಬರಲಿಲ್ಲ, ಕಾವೇರಿ ವಿವಾದವನ್ನು ಕೇಂದ್ರದೊಡನೆ ಚರ್ಚೆಮಾಡುವ ಮುನ್ನ ವಿರೋಧಪಕ್ಷಗಳವರೊಡನೆ ಚರ್ಚೆ ಮಾಡುವುದು ಸೂಕ್ತವಾಗಿದೆ ಎಂದು ನನಗನಿಸುತ್ತದೆ.

ಶ್ರೀ ಹೆಚ್. ಎಸ್. ಸಿದ್ದಪ್ಪ (ಅರಸೀಕೆರೆ) :— ಮಾನ್ಯ ಅಧ್ಯಕ್ಷರೆ, ಲೇಬರ್, ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್ ಹಾಗೂ ಡೈರೆಕ್ಟೋರೇಟ್ ಆಫ್ ಎಂಪ್ಲಾಯ್‌ಮೆಂಟ್ ಮತ್ತು ಟ್ರೈನಿಂಗ್ ಈ ಡಿಮ್ಯಾಂಡುಗಳನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಈ ಮೂರು ಇಲಾಖೆಗಳೇನಿವೆ ಹಿಂದೆ ನಾವು ಪುರಾಣದಲ್ಲಿ ಕೇಳಿದಂತೆ ಇವು ಮೂರು ತ್ರಿಪುರಾಸುರರ ಇಲಾಖೆಗಳು. ಇವು ಎಂತಹ ತ್ರಿಪುರಾಸುರರ ಇಲಾಖೆಗಳು ಎಂದರೆ, ಮೊಟ್ಟ ಮೊದಲನೆಯ ರಾಕ್ಷಸ ಎಂದರೆ ಅಧ್ಯಕ್ಷತೆ, ಎರಡನೇ ರಾಕ್ಷಸ ಎಂದರೆ ಲಂಚಕೋರತನ, ಮೂರನೇ ರಾಕ್ಷಸ ಎಂದರೆ ಸ್ವಜನಪಕ್ಷಪಾತ, ಇಂತಹ ಮೂರು ರಾಕ್ಷಸರುಗಳಿಂದ ಈ ಮೂರು ಇಲಾಖೆಯ ಕಾರ್ಯಕ್ರಮಗಳಲ್ಲಿ ತಾಂಡವಾಡುತ್ತಿರುವ ಈ ಒಂದು ಡಿಮ್ಯಾಂಡನ್ನು ನಾವು ಉಳಿಯುವಂತೆ ಮಾಡಬೇಕಾದರೆ ನಮ್ಮ ರಾಜ್ಯದಲ್ಲಿರುವ ರಾಷ್ಟ್ರೀಯತೆಯ ಮನೋಭಾವ ಹಾಗೂ ಸಮಾಜ ಸುಧಾರಣೆಯಾಗುವಂತಹ ಯಾವ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳದೇ ಇರುವಂತಹ ನೀತಿಯನ್ನು ನೋಡಿ ನಾನು ಈ ಡಿಮ್ಯಾಂಡನ್ನು ವಿರೋಧಿಸುತ್ತೇನೆ.

ಮೊಟ್ಟಮೊದಲನೆಯದಾಗಿ ಈ ತ್ರಿಪುರಾಸುರರನ್ನು ಮರ್ದನ ಮಾಡಬೇಕಾದರೆ—ಹಿಂದೆ ಈ ಮೂರು ರಾಕ್ಷಸರು ಒಂದೇಕಡೆಯಲ್ಲಿ ಸೇರಿದಾಗ ಈ ಮೂರು ರಾಕ್ಷಸರನ್ನೂ ಮರ್ಧಿಸಿದರು—ಆದರೆ ಇಲ್ಲಿ ಈ ಮೂರು ರಾಕ್ಷಸರುಗಳು ಸೇರುವ ಸನ್ನಿವೇಶಗಳೇ ಕಾಣುತ್ತಿಲ್ಲ. ಇದರಿಂದಾಗಿ ಇಂತಹ ರಾಕ್ಷಸರನ್ನು ಹೇಗೆ ಮರ್ಧನ ಮಾಡುವುದು ಎನ್ನುವುದು ನಮಗೆ ಚಿಂತೆಯಾಗಿದೆ. ಲೇಬರು ಬಗ್ಗೆ ಪ್ರಸ್ತಾಪಮಾಡುವುದು ಕೂಲಿಗಾರರ ಬಗ್ಗೆ ಮತ್ತು ಸರಕಾರ ಈ ಕಾರ್ಮಿಕರ ಬಗ್ಗೆ ಯಾವ ರೀತಿ ರಕ್ಷಣೆ ಕೊಡುತ್ತಾರೆ ಎಂದು ನೋಡಿದರೆ ಇದರಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಇದರ ಬಗ್ಗೆ ಸರಕಾರವೇನೋ ಅವರ ವರದಿಯಲ್ಲಿ The Department of Labour has to play a predominant role... ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಪ್ರಥಮವಾಗಿ ಸರಕಾರವನ್ನು ಕೇಳುವುದು ಕಾರ್ಮಿಕರ ಮಟ್ಟವನ್ನು ಸುಧಾರಿಸಲು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಾ ಎಂದು. ಕಾರ್ಮಿಕರ ಬಗ್ಗೆ ಭದ್ರಾವತಿಯಲ್ಲಾದ ಘಟನೆ ಹೇಳಿದರೆ ಇದು ಸುಪ್ರೀಂ ಕೋರ್ಟಿನವರೆಗೆ ಹೋಗಿ ಅವರೂ ಕೂಡ ಇದರ

ಬಗ್ಗೆ ಒಂದು ತೀರ್ಮಾನ ಕೊಟ್ಟಿದ್ದಾರೆ. ಅವರಿಗೆ ಸಲ್ಲತಕ್ಕ ಸೌಲಭ್ಯಗಳನ್ನು ಮತ್ತು ಅವರಿಗೆ ಕೊಡತಕ್ಕ ಬೋನಸ್ಸನ್ನು ಕೊಡಬೇಕು, ಕಡಿಮೆ ಮಾಡಕೂಡದು ಎಂದು ಹೇಳಿದ್ದರೂ ಕೂಡ ಸರಕಾರ ಇದುವರೆಗೆ ಸುಪ್ರೀಂ ಕೋರ್ಟು ಕೊಟ್ಟ ಆದೇಶವನ್ನು ಕೊಡುವುದರಲ್ಲಿ ವಿಫಲರಾಗಿದ್ದಾರೆ ಎಂದು ನನಗನಿಸುತ್ತದೆ. ಲೇಬರು ದೃಷ್ಟಿಯಿಂದ ಹಾಗೂ ಸರಕಾರದ ದೃಷ್ಟಿಯಿಂದ ಇದನ್ನು ಯೋಚನೆ ಮಾಡಬೇಕಾಗಿತ್ತು. ನನಗನಿಸುವುದು :

What all the Supreme Court has ordered to give to the Labourers at Bhadravathi, all that has not been given. ಲೇಬರು ಯೂನಿಯನ್‌ನವರು ಅಲಿಗೇಷನ್‌ಗಳೇನು ಎನ್ನುವುದನ್ನು ಇದುವರೆಗೆ ತಿಳಿಸಿಲ್ಲ. ಏಕೆ ಮಾಡಲಿಲ್ಲ ಎಂದರೆ ಇದರಲ್ಲಿ ಹಸ್ತಕ್ಷೇಪಮಾಡಬೇಕೆಂದು ಹೀಗೆ ಮಾಡಿದ್ದಾರೆ. ಯಾರೇ ಬರಲಿ ಇದರಲ್ಲಿರುವ ನಡವಳಿಕೆಗಳನ್ನು ಸರಿಪಡಿಸಿ ಕಾರ್ಮಿಕರಿಗೆ ಇದರಲ್ಲಿ ಪಾಲುಗೊಳ್ಳಲು ಒಂದು ಅವಕಾಶವನ್ನು ಮಾಡಿಕೊಡುವ ಯೋಜನೆಯನ್ನು ಇಲ್ಲಿ ತರಲಿಲ್ಲ. ಇದರಲ್ಲಿ ರಾಜಕೀಯ ಮಾಡುವುದು ಬೇಡ ಎಂದು ಹೇಳುತ್ತಾರೆ. ಆದರೆ ಇದರಲ್ಲಿ ಮಾಡುವ ಕೆಲಸಗಳು ಅವರ ಧೋರಣೆಗೆ ತದ್ವಿರುದ್ಧವಾಗಿವೆ. ಈ ಇಲಾಖೆಯಲ್ಲಿ ದೊಡ್ಡದಾಗಿ ಏನು ಕೆಲಸಗಳನ್ನು ಮಾಡಿದ್ದಾರೆಂದರೆ ಒಂದೊಂದು ತಾಲ್ಲೂಕಿಗೂ ಒಬ್ಬೊಬ್ಬರು ಲೇಬರು ಇನ್‌ಸ್ಪೆಕ್ಟರುಗಳೆಂದು ನೇಮಕ ಮಾಡಿದ್ದಾರೆ. ಇಷ್ಟು ಜನರನ್ನು ನೇಮಿಸಿರುವುದರಲ್ಲಿ ಕಾರ್ಮಿಕವರ್ಗದವರ ಕಲ್ಯಾಣ ಮಾಡುವಂತಹ ಲೇಬರು ಇನ್‌ಸ್ಪೆಕ್ಟರುಗಳನ್ನು ನೇಮಿಸಿದ್ದೀರಾ ಎಂದು ನಾನು ಕೇಳುತ್ತೇನೆ. ಇದು ನಿಜವಾಗಿಯೂ ಕೂಡ ವಿಷಾದದ ಸಂಗತಿ. ತಾಲ್ಲೂಕು ಮಟ್ಟದಲ್ಲಿರುವ ಲೇಬರು ಇನ್‌ಸ್ಪೆಕ್ಟರು ಏನು ಕೆಲಸ ಮಾಡುತ್ತಾರೆ ಮತ್ತು ಯಾವ ರೀತಿಯಾದ ಕಾರ್ಯಕ್ರಮವನ್ನು ಕಾರ್ಮಿಕ ಕಲ್ಯಾಣ ಮಾಡಲು ಹಾಕಿಕೊಂಡು ಉತ್ತಮಪಡಿಸಿದ್ದಾರೆ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಇವರೇನು ಮಾಡಿದ್ದಾರೆಂದರೆ ದೊಡ್ಡ ದೊಡ್ಡದಾಗಿ ಅವರ ಆಫೀಸಿನ ಬೋರ್ಡುಗಳನ್ನು ಹಾಕಿಸಿಕೊಂಡಿದ್ದಾರೆ, ಇದರಲ್ಲಿ ರಾಜಕೀಯ ಮಾಡಿ ಬಡಜನರಿಂದ ಸುಲಿಗೆ ಮಾಡುತ್ತಿದ್ದಾರೆ. ನಾನಾದರೂ ಹೇಳುತ್ತೇನೆ. ಇವತ್ತು ಯಾವ ತಾಲ್ಲೂಕಿನಲ್ಲಿ ಹಾಗೂ ಯಾವ ತಾಲ್ಲೂಕು ಮಟ್ಟದಲ್ಲಿ ಕಲ್ಯಾಣಮಾಡಿದ್ದಾರೆ, ನಿಮ್ಮ ಇಲಾಖೆಯವರು ಏನು ಮಾಡಿದ್ದಾರೆಂದು ಹೇಳಬೇಕು. ಲೇಬರ್ ಇನ್‌ಸ್ಪೆಕ್ಟರ್ಸ್ ತಾಲ್ಲೂಕುಮಟ್ಟದಲ್ಲಿ ಹೋಗುವಾಗ ಸರಿಯಾಗಿ ಕೆಲಸಮಾಡುತ್ತಾ ಇಲ್ಲ. ನಿಮ್ಮ ಲೇಬರ್ ಇನ್‌ಸ್ಪೆಕ್ಟರ್ಸ್ ಅಲ್ಲಿರತಕ್ಕ ಕಾರ್ಮಿಕರ ಬಗ್ಗೆ ಏನೊಂದು ಸೌಲಭ್ಯದ ಬಗ್ಗೆ ಅವರಿಗೆ ತಿಳುವಳಿಕೆ ಕೊಡುವ ವ್ಯವಸ್ಥೆಯಲ್ಲಿ ಏನು ಶ್ರಮಿಸಿದ್ದಾರೆಂಬುದನ್ನು ತೋರಿಸಿಕೊಡಿ. ನಿಮ್ಮ ಲೇಬರ್ ಇನ್‌ಸ್ಪೆಕ್ಟರ್ಸ್ ಬೇಕಾದಷ್ಟು ಸಿಕ್ಕಾಪಟ್ಟೆ ಹಣ ಒಡೆಯುತಕ್ಕ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ನೀವು ಯಾವ ತಾಲ್ಲೂಕಿಗೆ ಬನ್ನಿ, ನಾನು ತೋರಿಸಿಕೊಡುತ್ತೇನೆ. ಅವರು ಮಾಡುತ್ತಿರುವ ಕೆಲಸಗಳು ಏನು ಎಂಬುದನ್ನು ತೋರಿಸಿಕೊಡುತ್ತೇನೆ. ಈಗಿನ ವ್ಯವಸ್ಥೆ ಏನೇನೂ ಸರಿಯಲ್ಲ. ಕಾರ್ಮಿಕರ ಬಗ್ಗೆ ನಿಮ್ಮ ನೀತಿ ಒಳ್ಳೆಯದಾದರೆ, ಲೇಬರ್ ಇನ್‌ಸ್ಪೆಕ್ಟರ್ಸನ್ನು ತರಾಟೆಗೆ ತೆಗೆದುಕೊಳ್ಳಬೇಕು. ತಾಲ್ಲೂಕುಮಟ್ಟದಲ್ಲಿ ಯಾವರೀತಿ ಕಾರ್ಮಿಕರ ಬಗ್ಗೆ ವರ್ತಿಸಬೇಕು, ಕಾರ್ಮಿಕರ ಕಲ್ಯಾಣಕ್ಕಾಗಿಯೇ ಲೇಬರ್ ಇನ್‌ಸ್ಪೆಕ್ಟರ್ಸ್ ಇದ್ದಾರೆಂದು ವರದಿಯಲ್ಲಿ ಹೇಳಿದ್ದಾರೆ. ಯಾವ್ಯಾವ ಕಡೆಗಳಲ್ಲಿ ಎಷ್ಟೆಷ್ಟು ಜನರು ಕಾರ್ಮಿಕರು ಇದ್ದಾರೆಂಬ ಬಗ್ಗೆ ಸರಿಯಾದ ಅಂಕಿಅಂಶಗಳು ಇಲ್ಲ. ಲೇಬರ್ ಇಲಾಖೆಯವರು ಇಂತಹ ಡಿಮ್ಯಾಂಡ್‌ಗಳನ್ನು ಮಾಡುತ್ತಾರೆ. ನಾವು ಇದರಲ್ಲಿರತಕ್ಕ ಲೋಪದೋಷಗಳನ್ನು ನೋಡಿ ನೋಡಿ ತಿಳಿದೂ ತಿಳಿದೂ ಹೇಗೆ ಇದಕ್ಕೆ ಒಪ್ಪಿಗೆ ಕೊಡಬೇಕೋ ಗೊತ್ತಿಲ್ಲ. ನಿಮಗೆ ಮೆಜಾರಿಟಿ ಇದೆಯೆಂದು ಏನು ಬೇಕಾದರು ಮಾಡಬಹುದೆಂದರೆ, ನೀವು ಮುಂದೆ ದೇವರ ಹತ್ತಿರ ಹೋಗಿ ಉತ್ತರ

ಹೇಳಬೇಕಾಗುತ್ತದೆಂದು ನಾನು ಮಂತ್ರಿಗಳಿಗೂ ಸರ್ಕಾರದ ಅಧಿಕಾರಿಗಳಿಗೂ ಈ ಸಂದರ್ಭದಲ್ಲಿ ತಮ್ಮ ಮೂಲಕ ಎಚ್ಚರಿಸುತ್ತಿದ್ದೇನೆ. ಈ ವರದಿಯಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್ ಎಂಬುದು ಒಂದು ಕಾರ್ಮಿಕರ ಇಲಾಖೆಯಂತಾಗಿದೆ. ಬೆಂಗಳೂರು ಯೂನಿವರ್ಸಿಟಿಗೆ ಅಲ್ಲಿಂದ ಟ್ರಾನ್ಸ್‌ಫರ್ ಮಾಡುವ ವ್ಯವಸ್ಥೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಅದು ಸರಿಯಲ್ಲ ತಕ್ಷಣವೇ ಒಂದು ತೀರ್ಮಾನವನ್ನು ತೆಗೆದುಕೊಂಡು ಆ ಇನ್‌ಸ್ಟಿಟ್ಯೂಟನ್ನು ಬೆಂಗಳೂರು ಯೂನಿವರ್ಸಿಟಿಗೆ ವರ್ಗಾಯಿಸುವ ವ್ಯವಸ್ಥೆಯನ್ನು ಮಾಡಬೇಕು.

ಇನ್ನು ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಬಗ್ಗೆ ನಿಮ್ಮ ವರದಿಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅಲ್ಲಿ ಜಿಲ್ಲಾಮಟ್ಟದಲ್ಲಿ 19 ಜನ ಅಧಿಕಾರಿಗಳನ್ನು ನೇಮಿಸಿ ಅಲ್ಲಿನ ಕಾರ್ಮಿಕರ ಡಿಸ್‌ಪ್ಯೂಟ್‌ಗಳನ್ನು ಡಿಸ್‌ಪೋಜ್ ಮಾಡುತ್ತೇವೆಂದು ಹೇಳಿದ್ದಾರೆ. ಬಹುತೇಕವಾಗಿ ನಿಮ್ಮ ಈಗಿನ ವ್ಯವಸ್ಥೆ ಅಷ್ಟು ಸಮಂಜಸವಾಗಿಲ್ಲ. ಇದರಿಂದ ಕಾರ್ಮಿಕರಿಗೆ ತೊಂದರೆಯಾಗುತ್ತದೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಏನಿದೆಯೋ ಅದರ ಹಾಗೆ ಇನ್ನು ಮುಂದೆ ತಾಲ್ಲೂಕು ಮಟ್ಟದಲ್ಲಿಯೂ ಮೊಬೈಲ್ ಕಾರ್ಮಿಕರ ವರ್ಗದವರ ಬಗ್ಗೆಯೂ ಅಲ್ಲಲ್ಲಿ ಅವರ ಡಿಸ್‌ಪ್ಯೂಟ್‌ಗಳನ್ನು ಅಲ್ಲಿನ ಅಧಿಕಾರಿಗಳೇ ಡಿಸ್‌ಪೋಜ್ ಮಾಡುವ ವ್ಯವಸ್ಥೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಸಲಹೆಮಾಡುತ್ತೇನೆ. ಇಲ್ಲದೇ ಹೋದರೆ ತಾಲ್ಲೂಕುಗಳಿಂದ ಕಾರ್ಮಿಕರು ಲಾಯರುಗಳನ್ನು ಇಟ್ಟು ಕೊಂಡು ಜಿಲ್ಲಾಮಟ್ಟಕ್ಕೆ ಬರಬೇಕಾಗುತ್ತದೆ. ನಿಮ್ಮ ಅಧಿಕಾರಿಗಳೂ ಸಹ ಆ ರೀತಿ ಬರಬೇಕಾದರೆ ಬಹಳವಾಗಿ ತೊಂದರೆಯಾಗುತ್ತದೆ. ಆದ್ದರಿಂದ ನಾನು ಹೇಳಿದ ಸಲಹೆಯನ್ನು ಸರ್ಕಾರದವರು ಅತಿ ಜಾಗ್ರತೆಯಾಗಿ ಪರಿಶೀಲಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಲೇಬರ್ ರಿಲೇಷನ್ಸ್ ಆಫೀಸರ್ಸ್ ಬಗ್ಗೆ ಹಾಗೂ ಇಂಡಸ್ಟ್ರಿಯಲ್ ರಿಲೇಷನ್ಸ್ ಬಗ್ಗೆ ತಾವು ತಮ್ಮ ವರದಿಯಲ್ಲಿ ಅನೇಕ ವಿಚಾರಗಳನ್ನು ತಿಳಿಸಿದ್ದೀರಿ. ಈ ವರ್ಷದಲ್ಲಿ ವರದಿಯಲ್ಲಿ ಹೇಳಿರುವ ಪ್ರಕಾರ 1,92,582 ಮ್ಯಾನಡೇಟ್ಸ್ ನಷ್ಟವಾಗಿದೆಯೆಂದು ಹೇಳಿದ್ದೀರಿ. ಅದಕ್ಕೆ ಕಾರಣ ಮುಷ್ಕರವೆಂದು ಹೇಳಿದೆ. ಪ್ರೊಡಕ್ಷನ್ ಲಾಸ 11 ಲಕ್ಷ 53 ಸಾವಿರಗಳಷ್ಟು ಎಂಬುದಾಗಿ ತೋರಿಸಿದ್ದೀರಿ. ಇದರಿಂದೇನು ಗೊತ್ತಾಗುತ್ತದೆಂದರೆ ಮ್ಯಾನೇಜ್‌ಮೆಂಟಿನವರಿಗೂ ಮತ್ತು ಲೇಬರರ್ಸ್‌ಗೂ ರಿಲೇಷನ್‌ಷಿಪ್ ಪ್ರೊಮೋಟ್ ಮಾಡುವುದರಲ್ಲಿ ವಿಫಲರಾಗಿದ್ದೀರಿ ಎಂಬುದು. ನೀವು ಇವತ್ತಿನದಿವಸ ಕಾರ್ಮಿಕರಿಗೆ ಹಾಗೂ ಆಡಳಿತವರ್ಗದವರಿಗೂ ಕಾರ್ಖಾನೆಗಳಲ್ಲಿ ತಕ್ಕ ಉತ್ತಮವಾದಂಥ ವಿಶ್ವಾಸ ವಾತಾವರಣ ಬರುವಂತೆ ಮಾಡಿದ್ದರೆ ಈ ರೀತಿಯಾಗಿ ಮ್ಯಾನಡೇಟ್ಸ್ ಆಗುತ್ತಿರಲಿಲ್ಲ. ಉತ್ಪಾದನೆ ಹಾಗೂ ಆದಾಯ ಇಷ್ಟು ಲುಕ್ಸಾನು ಆಗುತ್ತಿರಲಿಲ್ಲ ವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏನಾದರೂ ಆಗಲಿ, ಇನ್ನುಮುಂದೆ ತಾವು ಕಳಕಳಿಯಿಂದ ಪ್ರಯತ್ನಮಾಡಿ ಇಂತಹ ಲುಕ್ಸಾನು, ತೊಂದರೆ ಆಗದಿರುವ ಹಾಗೆ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಇಷ್ಟು ಲುಕ್ಸಾನು ಆಗಿರುವ ಬಗ್ಗೆ ನಿಮ್ಮ ವರದಿಯಲ್ಲಿ ಏನು ಹೇಳಿದೆಯೆಂದರೆ, ಕೇವಲ ಮೇಜರ್ ಡಿಸ್‌ಪ್ಯೂಟ್ಸ್ ಪಬ್ಲಿಕ್ ಸೆಕ್ಟರ್ ಇನ್‌ಸ್ಟಿಟ್ಯೂಷನ್‌ಗಳಿಂದ ಎಂಬುದಾಗಿ ಹೇಳಿದೆ. ಇದರ ಬಗ್ಗೆ ಸರ್ಕಾರದವರು ಕೂಡಲೇ ಹೆಚ್ಚು ಆಸಕ್ತಿ ವಹಿಸಬೇಕು. ನಾನು ಈಗ ಕೇಳುವುದು ಇಷ್ಟೇ, ಪ್ರೈವೇಟ್ ಸೆಕ್ಟರ್‌ನಲ್ಲಿ ಆ ರೀತಿಯಾಗಿ ಲುಕ್ಸಾನು ಏಕೆ ಆಗಲಿಲ್ಲವೆಂದು. ಪಬ್ಲಿಕ್ ಸೆಕ್ಟರ್‌ನಲ್ಲಿ ಲುಕ್ಸಾನು ಜಾಸ್ತಿಯಾಗುತ್ತಿರುವ ಬಗ್ಗೆ ಸರ್ಕಾರದವರು ಕಳಕಳಿಯಿಂದ ಅವರ ಅಭಿಮತವನ್ನು ಚೆನ್ನಾಗಿ ಯೋಚನೆ ಮಾಡಿದ್ದರೆ ಇಂತಹ ಒಂದು ಅವಿವೇಕ, ಲುಕ್ಸಾನು ಆಗುತ್ತಿರಲಿಲ್ಲ. ಇನ್ನು ಕಾರ್ಮಿಕರ ದೂರುಗಳ ಬಗ್ಗೆ ನಿಮ್ಮ ವರದಿಯಲ್ಲಿ ಹೇಳಿರುವುದನ್ನು ನೋಡಿದರೆ, ಕಾರ್ಮಿಕರ ವಿಚಾರದಲ್ಲಿ ಉಂಟಾಗಿರುವ ತೊಂದರೆಗಳನ್ನು ಆದಷ್ಟು ಜಾಗ್ರತೆಯಾಗಿ ಬಗೆಹರಿಸುವ ಬಗ್ಗೆ

ನಿಮ್ಮ ಆಸಕ್ತಿ ಏನೇನೂ ಸಾಲದು. ಆದ್ದರಿಂದ ತ್ವರಿತವಾಗಿ ಕಾರ್ಮಿಕರ ದೂರುಗಳನ್ನು ಬಗೆಹರಿಸುವ ಪ್ರಯತ್ನವನ್ನು ಬಹಳ ಜಾಗರೂಕತೆಯಿಂದ ನಡೆಸಬೇಕು.

ಇನ್ನು ಡಿಸ್‌ಪೋಜಲ್ ಆಫ್ ಕಂಪ್ಲೇಂಟ್ಸ್ ಮತ್ತು ಇಂಪ್ಲಿಮೆಂಟೇಷನ್ ಆಫ್ ಡಿಸ್‌ಪೋಜಲ್ ಆಫ್ ಅವಾರ್ಡ್ಸ್ ಬಗ್ಗೆ ನೋಡಿದರೆ ಕಳೆದ ಸಾಲಿನ ವರದಿಯಲ್ಲಿ 65 ಕೇಸುಗಳು ಈ ವರ್ಷದ್ದು, 101 ಸೇರಿದರೆ ಒಟ್ಟು 166 ಕೇಸುಗಳು ಆಗುತ್ತವೆ. ಅವುಗಳಲ್ಲಿ ಇನ್ನೂ ಈಗ 162 ಕೇಸುಗಳು ಬಾಕಿ ಇವೆಯೆಂದು ಹೇಳುತ್ತೀರಿ. ಅಂದಮೇಲೆ ಈಗ ಇದುವರೆಗೆ ಕಾರ್ಮಿಕರ ಹಿತಚಿಂತನೆಗಾಗಿ ಕೇವಲ 4 ಅವಾರ್ಡ್ ಕೇಸುಗಳನ್ನು ಇಂಪ್ಲಿಮೆಂಟ್ ಮಾಡಿದ್ದೀರಿ. ಇದು ಸರಿಯೇ ? ಅವಾರ್ಡ್ ಕೇಸುಗಳನ್ನು ಜಾಗ್ರತೆ ಇಂಪ್ಲಿಮೆಂಟ್ ಮಾಡದೇ ಹೋದರೆ, ದೂರುಗಳು ಬಹಳ ಜಾಸ್ತಿಯಾಗುತ್ತವೆ. ಆದ್ದರಿಂದ ಇನ್ನುಮುಂದೆ ಅವಾರ್ಡುಗಳನ್ನು ತ್ವರಿತವಾಗಿ ಇಂಪ್ಲಿಮೆಂಟ್ ಮಾಡುವ ವ್ಯವಸ್ಥೆಯನ್ನು ನೀವು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿಮಾಡುತ್ತೇನೆ.

ಇನ್ನು ಮೈಸೂರು ಷಾಪ್ಸ್ ಮತ್ತು ಕಮರ್ಷಿಯಲ್ ಎಸ್ಟಾಬ್ಲಿಷ್‌ಮೆಂಟ್ ಆಕ್ಟ್‌ನಲ್ಲಿರುವ ಸುಮಾರು 196 ಜಾಗಗಳಲ್ಲಿ ಅದರ ಪ್ರಕಾರ ಕಾನೂನುಗಳು ಜಾರಿಯಲ್ಲಿ ಬರುತ್ತಿದೆ. ಅದನ್ನು ನೀವು ಇನ್ನುಮುಂದೆ ಆದಷ್ಟು ಜಾಗ್ರತೆಯಾಗಿ ಎಲ್ಲಾ ಕಡೆಗಳಲ್ಲಿಯೂ ಜಾರಿಗೆ ತರುತ್ತೇವೆಂದು ವರದಿಯಲ್ಲಿ ಕೊಟ್ಟಿದ್ದೀರಿ. ಇದನ್ನು ನೋಡಿದರೆ ಆದಾಯ ಸುಮಾರು 10.021 ರೂಪಾಯಿಗಳು ದಂಡದ ರೂಪದಲ್ಲಿ ಬಂದಿದೆ ಎಂದು ಹೇಳಿದ್ದೀರಿ. ಇನ್ನು ಖರ್ಚು ಆಗಿರುವುದನ್ನು ನೋಡಿದರೆ ಬಹಳ ಜಾಸ್ತಿಯೆಂದು ನಾನು ಕಳಕಳಿಯಿಂದ ಹೇಳುತ್ತೇನೆ. ಅಲ್ಲಿ ಇರತಕ್ಕ ಇನ್‌ಸ್ಪೆಕ್ಟರ್ಸ್ ಬಹಳವಾಗಿ ಕಾರ್ಮಿಕರ ಹಿತಚಿಂತನೆ ಮಾಡಬೇಕು. ಏಕೆಂದರೆ ಅಲ್ಲಿ ಕೇಸಸ್ ಅವರ ಮೇಲೆ ಹಾಕುವುದರ ಜೊತೆಗೆ ಅವರು ತಪ್ಪು ಮಾಡಿದ್ದರೆ ಅವರನ್ನು ತರಾಟೆಗೆ ತೆಗೆದುಕೊಳ್ಳಬೇಕು. ಜೊತೆಗೆ ಕಾರ್ಮಿಕರಿಗೆ ಅವರು ನಿರೀಕ್ಷಿಸಿದಷ್ಟು ಏನು ಸೌಲಭ್ಯ ಸಿಗಬೇಕೋ ಅವನ್ನು ಕೊಡುವ ವ್ಯವಸ್ಥೆಯಲ್ಲಿ ಅಲ್ಲಿ ಏನೇನು ನಡೆಯುತ್ತಿದೆಯೆಂಬುದನ್ನು ಪರಿಶೀಲನೆಮಾಡಿದರೆ ಆಗ ನಿಮಗೆ ಅರ್ಥವಾಗುತ್ತದೆ. ಅದು ಸರಿಯಾಗಿ ನಿಮಗೆ ಗೊತ್ತಿಲ್ಲ. ಅಲ್ಲಿನ ಅಧಿಕಾರಿಗಳಿಗೆ ಹೊಟ್ಟೆತುಂಬತಕ್ಕ ಕೆಲಸಗಳು ನಡೆದಿವೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಕಾರ್ಮಿಕರಿಗೆ ಅವರ ಹಣಕಾಸಿನ ಸೌಲಭ್ಯಗಳನ್ನು ಒದಗಿಸುವುದಕ್ಕೆ ಹಾಗೂ ಅವರಿಗೆ ಸಹಾಯವನ್ನು ಮಾಡುವುದಕ್ಕೆ ಏನೇನು ಮಾಡಬೇಕೆಂಬುದನ್ನು ತಾವು ಈ ವರದಿಯಲ್ಲಿ ಹೇಳಿದ್ದೀರಿ. ಕೋಆಪರೇಟಿವ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಅವರೊಳಗೆ ಕ್ರೆಡಿಟ್ ಕೋಆಪರೇಟಿವ್ ಸೊಸೈಟಿ ಎಂದು ಮಾಡಿ ಅವರಿಗೆ ಹಣಬೇಕಾದಾಗ ಸಹಕಾರ ಸಂಘಗಳ ಮುಖಾಂತರ ಕೊಡುವ ಆಲೋಚನೆಯನ್ನು ಇಟ್ಟುಕೊಂಡಿದ್ದೇವೆಂದು ತಿಳಿಸಿದ್ದೀರಿ ಎಂಬುದಾಗಿ ನನಗನ್ನಿಸುತ್ತದೆ. ಆದರೆ ಅನೇಕ ಕೋಆಪರೇಟಿವ್ ಇನ್‌ಸ್ಟಿಟ್ಯೂಷನ್ಸ್ ಹೇಗೆ ಕೆಲಸಮಾಡುತ್ತಿವೆಯೆಂಬುದನ್ನು ನಾನು ಕೇಳಿದ್ದೇನೆ. ಬಹುತೇಕವಾಗಿ ಈ ಕಾರ್ಮಿಕರಿಗೆ ಸಹಕಾರ ಸಂಘಗಳಿಂದ ಹಣ ಸಿಗುವುದಿಲ್ಲವೆಂದು ಹೇಳಿದರೆ ಅದು ನ್ಯಾಯವಾದ ಮಾರ್ಗವಲ್ಲ. ತಂತಮ್ಮ ಒಡವೆಗಳನ್ನು ಒತ್ತಿಟ್ಟು ತಮ್ಮ ಪ್ರೋಗ್ರೆಸ್ ಮಾಡಿಕೊಳ್ಳುವುದೇ ಜಾಸ್ತಿಯಾಗಿದೆ. ಕಾರ್ಮಿಕರಿಗೆ ಅವಕಾಶ ಸಿಕ್ಕಿದಾಗ ಸಾಲ ಪಡೆಯುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಆದ್ದರಿಂದ ನನ ಸಲಹೆಯೇನೆಂದರೆ ಈಗ ನ್ಯಾಷನಲ್ ಬ್ಯಾಂಕ್ಸ್ ಏನಿವೆಯೋ ಅಲ್ಲಿ ಮಿಲಿಟರಿ ಜನರು ಹೋಗಿ ತಮ್ಮಲ್ಲಿರುವ ಒಂದು ಪಾಸ್‌ಬುಕ್, ಅಥವಾ ಪೇ ಬುಕ್ ಇವನ್ನು ತೆಗೆದುಕೊಂಡು ಇಡೀ ರಾಷ್ಟ್ರದಲ್ಲಿ ಅಥವಾ ಯಾವ ರಾಜ್ಯದಲ್ಲಿ ಎಲ್ಲಿಯೇ ಹೋಗಲಿ, ಅದನ್ನು ಪ್ರೊಡ್ಯೂಸ್ ಮಾಡಿದರೆ ಯಾವುದೇ ಮಿಲಿಟರಿ ಆಫೀಸಿನಲ್ಲಿ ಸಂಬಳದ ಕಾಲುಭಾಗವನ್ನು ಅಡ್ವಾನ್ಸಾಗಿ ಕೊಡುತ್ತಾರೆ. ಅದೇ ರೀತಿಯಾಗಿ ನಮ್ಮ ಕಾರ್ಮಿಕರಿಗೆ ಅಂತಹ ಒಂದು ಅವಕಾಶವನ್ನು ನಮ್ಮ ಸರ್ಕಾರದವರು ಕಲ್ಪಿಸಿಕೊಡಬೇಕು. ನ್ಯಾಷನಲ್

ಬ್ಯಾಂಕುಗಳಲ್ಲಿ ಎಲ್ಲಿಯೇ ಆಗಲೀ ಅವನು ಎಲ್ಲಿ ಹೋಗಿ ಕೇಳಿದರೂ, ಯಾವ ಸಂದರ್ಭದಲ್ಲಿ ಕೇಳಿದರೂ ಮಾಹೆಯಾನ ಸಂಬಳದಲ್ಲಿ ಸ್ವಲ್ಪ ಭಾಗವನ್ನು ಕೊಡಬೇಕು. ಅದನ್ನು ಮುಂದಿನ ತಿಂಗಳ ಅವನ ಸಂಬಳದಲ್ಲಿ ಅದನ್ನು ಹಿಡಿಯುವ ಹಾಗೆ ವ್ಯವಸ್ಥೆ ಮಾಡಿದರೆ ಕಾರ್ಮಿಕವರ್ಗದವರಿಗೆ ತುಂಬಾ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಸಲಹೆಮಾಡುತ್ತೇನೆ.

ಇನ್ನು ಮೋಟಾರ್ ವೆಹಿಕಲ್ಸ್ ಇಲಾಖೆ:—ಇದು ಇವರ ಬಗ್ಗೆ ಒಂದು ವಿಷಯವನ್ನು ಹೇಳಬೇಕಾಗಿದೆ. ಇನ್ನು ಈ ಇಂಡಸ್ಟ್ರಿಗಳು ಇದಕ್ಕೆ ಸಂಬಂಧಪಟ್ಟಂತೆ ಏನಿವೆ ಆ ಎಲ್ಲಾ ಕಾರ್ಖಾನೆಗಳಲ್ಲೂ ಕಾರ್ಮಿಕರ ಯೂನಿಯನ್ನುಗಳು ಇವೆ. ಆದರೆ ಒಂದೇ ಕಾರ್ಖಾನೆಯಲ್ಲಿ 2–3 ಯೂನಿಯನ್‌ಗಳು ಇರುವುದು ಕಾರ್ಮಿಕ ದೃಷ್ಟಿಯಿಂದಲಾಗಲೀ ಮತ್ತು ಆ ಕಾರ್ಖಾನೆಯ ದೃಷ್ಟಿಯಿಂದಲಾಗಲಿ ಎರಡಕ್ಕೂ ಇದು ಒಳ್ಳೆಯದಲ್ಲ. ಇದರಿಂದ ಅಲ್ಲಿ ವೃಥಾ ಘರ್ಷಣೆಗಳುಂಟಾಗುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಒಂದು ಕಾರ್ಖಾನೆಗೆ ಒಂದು ಯೂನಿಯನ್ ಇರುವುದು ಒಳ್ಳೆಯದೆಂದು ಹೇಳುತ್ತೇನೆ. ಇದನ್ನು ಅಷ್ಟಕ್ಕೆ ನಿರ್ಬಂಧ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಈ ಕಾರ್ಮಿಕರ ಹಿತದೃಷ್ಟಿಯಿಂದ ಈಗ ದೊಡ್ಡ ದೊಡ್ಡ ನಗರಗಳಲ್ಲಿ ಮಾತ್ರ ಈ ಇ. ಎಸ್. ಐ. ಆಸ್ಪತ್ರೆಗಳಿರುತ್ತವೆ. ಇನ್ನು ಉಳಿದ ಜಿಲ್ಲಾ ಮತ್ತು ತಾಲ್ಲೂಕ್ ಮಟ್ಟದಲ್ಲಿ ಇವು ಇರುವುದಿಲ್ಲ. ಈ ಕಾರ್ಮಿಕವರ್ಗ ಎಲ್ಲೆಲ್ಲಿ ಇರುತ್ತದೋ ಅಲ್ಲೆಲ್ಲಾ ಈ ಸೌಕರ್ಯ ಇರಬೇಕಾದ್ದು ಅಗತ್ಯ. ಅಷ್ಟೇ ಅಲ್ಲದೆ ಮಹಿಳೆಯರಿಗೆ ಅಗತ್ಯವಾಗಿ ಬೇಕಾದ ಮೆಟರ್‌ನಿಟಿ ಸೌಕರ್ಯಗಳನ್ನೂ ಕೂಡ ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಮಾನ್ಯ ಅಧ್ಯಕ್ಷರೇ ಈ ಟ್ರಾನ್ಸ್‌ಸ್ಪೋರ್ಟ್ ವಿಚಾರದಲ್ಲಿ ಒಂದು ದೊಡ್ಡ ದುರ್ದೈವದ ಸಂಗತಿ ಎಂದರೆ ಲಂಚದಲ್ಲಿ ಹೆಸರಾದ ಮೂರು ರಾಕ್ಷಸ ಇಲಾಖೆಗಳಲ್ಲಿ ಈ ಟ್ರಾನ್ಸ್‌ಸ್ಪೋರ್ಟ್ ಇಲಾಖೆ ಒಂದಾಗಿದೆ. ನಮ್ಮ ರಾಜ್ಯದಲ್ಲಿ ಈ ರಸ್ತೆಗಳ ರಾಷ್ಟ್ರೀಕರಣ ಆದೇ ಆಯಿತು ಅಲ್ಲಿಂದೀಚೆಗೆ ಈ ರಾಜ್ಯದಲ್ಲಿ ಕಾಂಟ್ರಾಕ್ಟ್ ಕ್ಯಾರೇಜುಗಳಿಗೆ ಲೈಸೆನ್ಸ್ ಕೊಡುವುದಕ್ಕೆ ಇತಿ ಮಿತಿ ಏನೂ ಇಲ್ಲದಂತಾಗಿದೆ. ಈ ಸರ್ಕಾರ ಬಂದ ಮೇಲಂತೂ ಈ ಕಾಂಟ್ರಾಕ್ಟ್ ಕ್ಯಾರೇಜುಗಳಿಗೆ ಸಿಕ್ಕಿದಷ್ಟು ಪರ್ಮಿಟ್ಟುಗಳು ಹಿಂದೆ ಎಂದೂ ಸಿಕ್ಕಿರುವುದಿಲ್ಲ. ಇದರಲ್ಲಿ ಪೂರಾ ಸಂಕಟಕರವಾದ ಒಂದು ವಿಚಾರ ಏನೆಂದರೆ ಇಲ್ಲಿ ಎಷ್ಟು ಲೈಸೆನ್ಸ್ ಪಡೆದು ಓಡುತ್ತಿವೆಯೋ ಈ ಕಾಂಟ್ರಾಕ್ಟ್ ಕ್ಯಾರೇಜುಗಳು ಅದರ ಎರಡರಷ್ಟು ಲೈಸೆನ್ಸ್ ಇಲ್ಲದೆಯೇ ಓಡುತ್ತಿವೆ. ಅದಕ್ಕೆ ನನ್ನ ಸಲಹೆ ಇಷ್ಟೆ ಈ ಸರ್ಕಾರಕ್ಕೆ ಜನತೆಗೆ ಪ್ರಯಾಣ ಸೌಕರ್ಯಗಳನ್ನು ಒದಗಿಸುವುದಕ್ಕೆ ಸಾಧ್ಯವಿದ್ದರೆ ಇದನ್ನು ಮುಂದುವರಿಸಿ ಇಲ್ಲವೇ ಇದನ್ನು ಈ ದಿನವೇ ಸ್ಕ್ರ್ಯಾಪ್‌ಮಾಡಿ. ಇದರಿಂದ ಉದ್ದೇಶ ಸಫಲವಾಗುತ್ತಿಲ್ಲ. ಬಡವರಿಗೆ ಉತ್ತಮ ವಾಹನ ಸೌಕರ್ಯ ಸಿಗುತ್ತಿಲ್ಲ. ಈ ಬಸ್ಸುಗಳ ರಾಷ್ಟ್ರೀಕರಣದಿಂದ ರಾಜ್ಯಕ್ಕೆ ಎಷ್ಟು ಹಣ ದಿನಂಪ್ರತಿ ನಷ್ಟವಾಗುತ್ತಿದೆ ಎಂಬುದರ ಬಗ್ಗೆ ಮೈಸೂರಲ್ಲಿ ಕೆಲವು ದಿನಗಳ ಹಿಂದೆ ಒಬ್ಬ ಮಂತ್ರಿಗಳೇ ಒಂದು ಕಡೆಯಲ್ಲಿ ಭಾಷಣ ಮಾಡುತ್ತಿದ್ದಾಗ ಇದನ್ನು ಹೇಳಿದ್ದಾರೆ. ಅವರು ಆ ದಿವಸದ ಭಾಷಣದಲ್ಲಿ ಈ. ಎಂ. ಎಸ್. ಆರ್. ಟಿ. ಸಿ. ಕಂಪೆನಿಗೆ ತರಿಸಿದ ಸ್ಪೇರ್ ಪಾರ್ಟುಗಳು 10—20 ಸಾವಿರ ಬೆಲೆಬಾಳತಕ್ಕ ಬಿಡಿ ಭಾಗಗಳು ಅಲ್ಲಲ್ಲೇ ರಸ್ತೆಯಲ್ಲಿ ಬಿದ್ದು ಕೊಳೆಯುತ್ತಿವೆ ಎಂದು ಹೇಳಿದ್ದಾರೆ. ನಾನು ಮೊನ್ನೆ ಶಿವಮೊಗ್ಗಾಕ್ಕೆ ಹೋಗಬೇಕಾಗಿತ್ತು. ಅದಕ್ಕೆ ಬೆಂಗಳೂರಿಂದ ಈ ಗೌರನಮೆಂಟ್ ಬಸ್ಸಿನಲ್ಲಿ 'ಎಕ್ಸ್‌ಪ್ರೆಸ್—ಸರ್ವೀಸಿನಲ್ಲಿ' ಹೊರಟೆ. ಅದು ಬೆಂಗಳೂರನ್ನು 10 ಗಂಟೆಗೆ ಬಿಟ್ಟಿತು. ಆದರೆ ಮಧ್ಯ ದಾರಿಯಲ್ಲಿ ಮಲ್ಲಸಂದ್ರದ ಬಳಿ ನಿಂತು ಹೋಯಿತು. ಆಗ ರಾತ್ರಿ ಸುಮಾರು 12 ಗಂಟೆ. ಅದಕ್ಕೆ ಏನು ಕಾರಣ ಎಂದರೆ ಒಂದು ಫ್ಯಾನ್ ಬೆಲ್ಟ್ ಇರಲಿಲ್ಲ. ಡ್ರೈವರ್ ಕಂಡಕ್ಟರುಗಳಿಬ್ಬರೂ ಒಳ್ಳೆಯವರು. ಅವರನ್ನು ಏಕಪ್ಪಾ ಹೀಗಾಯಿತು ಎಂದು ಕೇಳಿದರೆ—'ಫ್ಯಾನ್ ಬಿಲ್ಟೀಜ್ ನೈ. ಮೈ ಕ್ಯಾಕರೂ ಸಾಬ್ ?' ಎಂದು ಹೇಳಿಬಿಟ್ಟ. ಹೀಗೆ ಒಂದು ಬಸ್ಸಿನಲ್ಲಿ ಅಷ್ಟು ದೂರ ಪ್ರಯಾಣ ಹೊರಟಿರುವಾಗ ಅದರಲ್ಲಿ ಒಂದು ಸ್ಪೇರ್ ಫ್ಯಾನ್ ಬೆಲ್ಟ್ ಇರುವುದು ಬೇಡವೇ ? ಇದು ಎಂಥಾ ಬಸ್ಸು

ನಡೆಸಾಣಿಕೆ ?' ಆಗ ನಮ್ಮ ಪುಣ್ಯಕ್ಕೆ ಸರಿಯಾಗಿ ಅಷ್ಟುಹೊತ್ತಿಗೆ ಅಲ್ಲಿಗೆ ಒಂದು ಪ್ರೈವೇಟ್ ಬಸ್ ' ಪರಿವೀಣ್ ' ಎಂಬ ಬಸ್ ಬಂದಿತು. ಆ ಬಸ್ಸನ್ನು ನಿಲ್ಲಿಸುವುದಕ್ಕೆ ಎಷ್ಟು ಹೇಳಿದರೂ ಅವನು ಒಪ್ಪದೆ ಅದನ್ನು ಓಡಿಸುತ್ತಲೇ ಇದ್ದ. ಆದರೆ ಅದರಲ್ಲಿ ನಮ್ಮ ಊರಿನ ಗೊತ್ತಿದ್ದ ಒಬ್ಬ ಹುಡುಗ ಕಂಡಕ್ಟರಾಗಿದ್ದ ಅವನು ಬಸ್ಸನ್ನು ನಿಲ್ಲಿಸಿದ. ಆಗ ನಾವು ಅದರಲ್ಲಿ ಪ್ರಯಾಣ ಮಾಡಿ ರಾತ್ರಿ ಆ ಕಾಲದಲ್ಲಿ ಜಾಗರಣೆ ಮಾಡಿ ಊರಲ್ಲಿ ಹೆಂಗಸರು ಮಕ್ಕಳ ಮುಖ ನೋಡು ವಂತಾಯಿತು.

ಇನ್ನು ಈ ಬೆಂಗಳೂರಿಂದ ಶಿವಮೊಗ್ಗಾಕ್ಕೆ ಹೊರಟಿತ್ತಲ್ಲ ಈ ' ಎಕ್ಸ್‌ಪ್ರೆಸ್ ಬಸ್' ಇದರಲ್ಲಿ ಒಬ್ಬ ಒಂದು ಸೀಟಿನಲ್ಲಿ ಒಂದು ಮೇಕೆಯನ್ನು ಕಟ್ಟಿ ಕೂಡಿಸಿಕೊಂಡಿದ್ದ. ಅದರಲ್ಲಿ ನಮಗೆ ಕುಳಿತುಕೊಳ್ಳುವುದಕ್ಕೆ ಸೀಟ್ ಸಿಕ್ಕಲಿಲ್ಲ. ನಮಗೆ ಸಿಕ್ಕಿದ್ದ ಸೀಟು ಸ್ಟ್ಯಾಂಡಿಂಗ್ ಸೀಟ್ ಮಾತ್ರ. ಅದರಲ್ಲಿ ಆಗಾಗ್ಗೆ ಆ ಮೇಕೆ ' ಮಿಯಾಂ—ಮ್ಯಾ' ಎಂದು ಬಲವಾಗಿ ಅರುಚುತ್ತಿತ್ತು. ಆದರೆ ಅದಿನ್ನೂ ಬಲವಾಗಿ ಅರಚುವುದಕ್ಕೆ ಸಾಧ್ಯವಿತ್ತು. ಆದರೆ ಅದರ ಮಾಲೀಕ ಅದರ ಬಾಯನ್ನು ಭದ್ರವಾಗಿ ಕಟ್ಟಿದ್ದ. ಆದಾಗ್ಯೂ ಅದು ಕೂಗುವುದನ್ನು ಬಿಟ್ಟಿರಲಿಲ್ಲ. ' ಏನಯ್ಯಾ? ನೀನು ಈ ಮೇಕೆಗೂ ಛಾರ್ಜನ್ನು ಕೊಟ್ಟಿದ್ದೀಯಾ ಎಂದರೆ ಆತನು ಓಹೋ ಎಂದು ಹೇಳಿದ. ಏನಯ್ಯಾ ನಾನು ಎಂ.ಎಲ್.ಎ. ನನಗೆ ಸೀಟ್ ಇಲ್ಲವೇನಯ್ಯ ಎಂದರೆ—ಆ ಕಂಡಕ್ಟರ್ ಇಲ್ಲ ನಿಂತುಕೊಳ್ಳುವಂತಿದ್ದರೆ ಬನ್ನಿ ಇಲ್ಲದಿದ್ದರೆ ಬಿಡಿ ಎಂದು ಜಬರ್‌ದಸ್ತಾಗೇ ಹೇಳಿದ. ಆಯಿತು ಎಂದು ನಾನು ನಿಂತು ಪ್ರಯಾಣ ಮಾಡುವುದಕ್ಕೂ ಒಪ್ಪಿದೆ. ಆತ ಆಗ ಟಿಕೆಟ್ ತೆಗೆದುಕೊಳ್ಳಿ ಎಂದ. ಆಗ ನಾನು ನನ್ನಲ್ಲಿದ್ದ ಆದರೆ ಈ ಶಾಸನ ಸಭೆಯ ಕಾರ್ಯದರ್ಶಿಯವರು ಕೊಟ್ಟಿದ್ದ ಪಾಸುಗಳ ಪುಸ್ತಕವನ್ನು ಅವನ ಕೈಗೆ ಕೊಟ್ಟೆ. ಅವನು 15 ನಿಮಿಷ ಓದೇ ಓದಿದ. ಇಂಥಾ ಅಪಮಾನಕರವಾದ ಪಾಸುಗಳು ನಮಗೆ ಬೇಡ. ನಿಮ್ಮ ಪಾಸುಗಳನ್ನು ನೀವು ವಾಪಸ್ ತೆಗೆದುಕೊಳ್ಳಿ. (ಸಭೆಯಲ್ಲಿದ್ದ ಶಾಸನಸಭೆಯ ಕಾರ್ಯದರ್ಶಿಗಳನ್ನು ಉದ್ದೇಶಿಸಿ ಯೂ ಪ್ಲೀಸ್ ಟೇಕ್ ಇಟ್ ಬ್ಯಾಕ್ ಎಂದು ಹೇಳಿದರು) ಆ ಮೇಕೆಯವನು ದಾರಿಯಲ್ಲಿ ಮಧ್ಯೆ ಇಳಿದ ಆಗ ನಾನು ಆ ಸೀಟಿನಲ್ಲಿ ಕುಳಿತೆ. ಇದೇ ವಿಚಾರದಲ್ಲಿ ನಾನು ಆ ಬಸ್ ವಿತರಣೆ ಬಗ್ಗೆ ಆ ಬಸ್ ತುಮಕೂರು ಸ್ಟಾಂಡಿಗೆ ಹೋದ ಕೂಡಲೇ ಅಲ್ಲಿಟ್ಟಿದ್ದ ಕಂಪ್ಲೇಂಟ್ ಬುಕ್ಕಿನಲ್ಲಿ ಇದೆಲ್ಲಾ ಪುರಾಣಗಳನ್ನೂ ಬರೆದೆ. ನಾನು ಬರೆದಿದ್ದು ತಾ. 24-3-1973ರಲ್ಲಿ. ಆದರೆ ನನಗೆ ಇಲ್ಲಿಯವರೆಗೂ ಆ ಇಲಾಖೆಯಿಂದ ಒಂದು ಅಕ್ನಾಲೆಡ್ಜ್‌ಮೆಂಟ್ ಲೆಟರಾಗಲಿ ಅಥವಾ ನನ್ನ ದೂರಿಗೆ ಉತ್ತರವಾಗಲೀ ಯಾವುದೂ ಇಲ್ಲ. ಆದರೆ ಇದಕ್ಕೆ ಮಂತ್ರಿಗಳನ್ನು ನಾನು ಹೊಣೆ ಮಾಡುವುದಿಲ್ಲ. ಅಲ್ಲಿಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಅಲ್ಲಿ ಒಂದು ಅಧಿಕಾರಿಗಳ ಸೈನ್ಯವೇ ಇದೆಯಲ್ಲ ? ಇದಕ್ಕೆ ಸ್ಕ್ವಾಡಗಳೆಷ್ಟು? ನಾವು ಈ ಇಲಾಖೆಗೆ 37 ಕೋಟಿ ರೂಪಾಯಿಗಳನ್ನು ಸುರಿದಿದ್ದೇವೆ. ಅದು ಬೇಸಗೆಯಲ್ಲಿ ಐಸ್ ಕರಗಿದಂತೆ ಕರಗಿ ಹೋಗುತ್ತಿದೆ. ಆದುದರಿಂದ ಈ ಎಲ್ಲಾ ಅವ್ಯವಸ್ಥೆಗಳನ್ನು ಸರಿಪಡಿಸತಕ್ಕ ದೃಷ್ಟಿಯಿಂದ ಒಂದು ಸಮಗ್ರ ವಿಚಾರಣೆ ನಡೆಯಬೇಕೆಂದು ಹೇಳುತ್ತೇನೆ. ಈ ಟ್ರಾನ್ಸ್‌ಪೋರ್ಟ್ ಮಂತ್ರಿಗಳ ಕೈಲಿ ಮೂರು ದೊಡ್ಡ ರಾಕ್ಷಸ ಲಂಚದ ಇಲಾಖೆಗಳು ಸೇರಿವೆ. ಒಂದು ಕುರುಡು, ಇನ್ನೊಂದು ಕಿವುಡು ಮತ್ತೊಂದು ಮೂಕ. ಹೀಗೆ ಈ ಮೂರು ಆ ಮೂರು ಕೋತಿಗಳ ಚಿತ್ರ ಇದೆಯಲ್ಲಾ......

ಒಬ್ಬ ಮಾನ್ಯ ಸದಸ್ಯರು :—ಎಂಥ ಮೂರು ಕೋತಿಗಳು?

ಶ್ರೀ ಕೋಣಂದೂರು ಲಿಂಗಪ್ಪ :—ಗಾಂಧೀಕೋತಿಗಳು......

ಶ್ರೀ ಎಚ್. ಎಸ್. ಸಿದ್ದಪ್ಪ :—ಇರಬಹುದು ; ಆ ಗಾಂಧಿಯವರು ನೀತಿಬಗ್ಗೆ ತೋರಿಸಿದ ಮೂರು ಕೋತಿಗಳಂತೆ ಇವು ನಮ್ಮ ಲೇಬರ್ ಮಂತ್ರಿಗಳ ಕೈಸೇರಿವೆ. ಸರ್ಕಾರದವರು ಇಂಥ ಒಂದು ಕಷ್ಟದಲ್ಲಿ ಇವರನ್ನು ಸಿಕ್ಕಿಹಾಕಿದ್ದಾರೆ.

ನಾನಾದರೂ ಮನವಿಮಾಡುತ್ತೇನೆ. ಇವರು ಕೆಟ್ಟ ಹೆಸರು ತೆಗೆದುಕೊಳ್ಳಬಾರದು, ಸುಮ್ಮನೆ ಇವರು ಆಹಾರ ಇಲಾಖೆಯ ಪೋರ್ಟ್‌ಫೋಲಿಯೋ ತೆಗೆದುಕೊಳ್ಳಲಿ. ಇವಾಜರವರಿಗೆ ಇವರ ಇಲಾಖೆ ಕೊಡಲಿ. ಇಲಾಖೆಯಲ್ಲಿ ದಕ್ಷತೆ ಹೆಚ್ಚಿಸಬೇಕು, ಟೈಟನಪ್ ಮಾಡಬೇಕು, ಫುಲಪ್ ಮಾಡಬೇಕು.

ಶ್ರೀ ಎಂ. ಬಿ. ರಾಮಸ್ವಾಮಿ :—ಪಾಯಿಂಟ್ ಆಫ್ ಆರ್ಡರ್ ಮಾನ್ಯ ಸದಸ್ಯರು ಗಾಂಧಿಯವರ ವರ್ಣನೆಮಾಡಿ ಕೋತಿ ಎಂದು ಹೇಳಿದರು. ರಾಷ್ಟ್ರದ ನಾಯಕರಿಗೆ ಅವಮಾನ ಮಾಡಿದ್ದಾರೆ.

ಶ್ರೀ ಎಚ್. ಎಸ್ ಸಿದ್ದಪ್ಪ :—ಇದಕ್ಕೆ ಬಸವಲಿಗಂಪ್ಪನವರು ಉತ್ತರ ಕೊಡಬೇಕು. ನಾನು ಅಧ್ಯಕ್ಷರ ಮೂಲಕ ಸರಕಾರಕ್ಕೆ ಕಳಕಳಿಯಿಂದ ಮನವಿಮಾಡುತ್ತೇನೆ, ರಾಷ್ಟ್ರೀಕರಣವನ್ನು ಸ್ಕ್ರಾಪ್ ಮಾಡಿ, ಇಲ್ಲದಿದ್ದರೆ ಚೆನ್ನಾಗಿ ನಡೆಸಿ, ದಕ್ಷ ಅಧಿಕಾರಿಗಳನ್ನಿಟ್ಟುಕೊಂಡು ನಿಮ್ಮ ಆಡಳಿತ ಬಿಗಿಯಾಗಿ ನಡೆಸಿ, ಚೆನ್ನಾಗಿ ನಡೆಸಿ. ಇಲ್ಲದಿದ್ದರೆ ಇಲಾಖೆ ನಡೆಸುವವರು ಭೂಗತವಾಗುತ್ತಾರೆ. 37 ಕೋಟಿ ರೂಪಾಯಿ ಮಂಜು ಕರಗಿದ ಹಾಗೆ ಕರಗುತ್ತಿದೆ. ಟ್ಯಾಕ್ಸೇಷನ್ ಇಲಾಖೆಯಿಂದ, ನೂರು ರೂಪಾಯಿ ಟ್ಯಾಕ್ಸ್ ಕಾಂಟ್ರ್ಯಾಕ್ಟ್ ಕ್ಯಾರೇಜ್ ಬಸ್ಸುಗಳಿಗೆ ಹಾಕಿದೆ. ಸರಕಾರಿ ಬಸ್ಸುಗಳನ್ನು ನಂಬಿ ನಾವು ಪ್ರಯಾಣಮಾಡುವಂತಿಲ್ಲ. ಹೈಕೋರ್ಟ್ ಸ್ಟ್ರೀಕ್ಚರ್ ಪಾಸ್‌ಮಾಡಿ ಸರಕಾರ ತಲೆ ತಗ್ಗಿಸಬೇಕಾಗಿದೆ. ನಿಮಗೆ ಕಾನೂನು ಪ್ರಜ್ಞೆಯಿಂದೆಯೇ? ಸರಿಯಾಗಿ ಕಾನೂನು ಮಾಡಬೇಡವೇ ? ಹೀಗೆ ಮಾಡಬಹುದೇ ? ಯೋಚನೆಮಾಡಿ. ಮೋಟಾರು ವೆಹಿಕಲ್ಸ್, ಟ್ಯಾಕ್ಸೇಷನ್ ವರದಿಯಲ್ಲಿ 1095 ಕಾಂಟ್ರ್ಯಾಕ್ಟ್ ಕ್ಯಾರೇಜುಗಳಿಗೆ ಅವಕಾಶ ಕೊಟ್ಟಿರುವುದಾಗಿ ತಿಳಿಸಿದೆ, ಇದಕ್ಕಿಂತ ಅನ್ಯಾಯ ಬೇರೆ ಇಲ್ಲ. ನನ್ನ ಜೊತೆಗೆ ಬನ್ನಿ ಇದರ ಮೂರರಷ್ಟು ಕಾಂಟ್ರ್ಯಾಕ್ಟ್ ಕ್ಯಾರೇಜುಗಳನ್ನು ರನ್ ಆಗುವುದನ್ನು ತೋರಿಸುತ್ತೇನೆ. ಲೈಸೆನ್ಸ್ ಇರುವುದರ ಎರಡರಷ್ಟಿವೆ. ಕುರ್ಗ್ ಟ್ರಾವಲ್ಸ್ ಎಂದು ಒಂದು ಕಾಂಟ್ರ್ಯಾಕ್ಟ್ ಕ್ಯಾರೇಜ್ ರನ್ ಆಗುತ್ತಿದೆ, ಇದು ಯಾರದು ?

ಶ್ರೀ ಪಾಟೀಲ್ ನಾಗರಾಜ್ :—ಅದು ಯಾರದೆಂದು ಮಾನ್ಯ ಸದಸ್ಯರು ಹೇಳಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ :—ಅದು ಈ ಸಭೆಯ ಸದಸ್ಯರೊಬ್ಬರ ಬಸ್ಸು. ಅವರು ಇಲ್ಲಿಲ್ಲ. ಅವರಿಲ್ಲದಿರುವಾಗ ಅವರ ಹೆಸರು ಹೇಳಬಾರದು, ಅವರು ಬಂದಾಗ ಹೇಳುತ್ತೇನೆ. ಎಸ್.ಟಿ.ಎ. ಮತ್ತು ಆರ್. ಟಿ. ಎ. ಎಂಬ ಅಧಿಕಾರಿಗಳಿದ್ದಾರೆ ಮತ್ತು ಖಾಸಗಿ ಜನರು ಕೆಲವು ಅಧಿಕಾರ ಸ್ಥಾನಗಳಲ್ಲಿದ್ದಾರೆಂದು ಹೇಳಿದರು. ಆಡಳಿತ ಖಾಸಗಿ ಜನರು ಸರಕಾರಿ ಪಕ್ಷದವರು. ಅವರಲ್ಲದೆ ಬೇರೆಯವರಿದ್ದಾರೆಯೇ ? ಆಡಳಿತ ಪಕ್ಷದ ಹಿತ ಕಾಪಾಡಲು ಸರಕಾರ ತನ್ನ ಪಕ್ಷದವರನ್ನು ಹಾಕುವುದು. ಇದನ್ನು ಈ ಸಭೆಯಲ್ಲಿ ಮರೆಮಾಚಿದರೂ ದೇವರ ಮುಂದೆ ಹೇಳಬೇಕಾಗುತ್ತದೆ. ಈ ರೀತಿ ಆರ್. ಟಿ. ಎ. ಮತ್ತು ಎಸ್. ಟಿ. ಎ. ಗಳನ್ನು ನೇಮಕಮಾಡಬಾರದು. ಒಳ್ಳೆಯ ಮಾಹಿತಿ ಇರುವವರನ್ನು ಹಾಕಿ ಉತ್ತಮ ಕೆಲಸಮಾಡಲು ವ್ಯವಸ್ಥೆ ಮಾಡಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತೇನೆ.

ಕಂಟ್ರಾಕ್ಟರು ಮತ್ತು ಡ್ರೈವರುಗಳಿಗೆ ಲೈಸೆನ್ಸ್ ಕೊಡುವ ವಿಚಾರ ನೋಡಬೇಕು. ಅವರಿಗೆ ಸ್ಟೆಪ್ನಿ ಎಂದರೇನು, ಅದೆಲ್ಲಿರುತ್ತದೆ ಎಂಬುದೇ ಗೊತ್ತಿಲ್ಲ. ನಾನು ಮೈಸೂರಿಗೆ ಹೋಗುವಾಗ ಕೆ. ಆರ್. ನಗರದ ಹತ್ತಿರ ನಮ್ಮ ಗಾಡಿ ಪಂಚೇರ್ ಆಯ್ತು ಆಗ ರಾತ್ರಿ 8 ಗಂಟೆ, ನನ್ನ ಜೊತೆಯಲ್ಲಿ ಬರೀ ಹೆಣ್ಣುಮಕ್ಕಳಿದ್ದರು. ಅಲ್ಲಿ ಸಿಕ್ಕಿದ ಸರಕಾರಿ ಸಾರಿಗೆ ಇಲಾಖೆಯ ನೌಕರನನ್ನು ಸ್ಟೆಪ್ನಿ ಹಾಕಿಕೊಡುವಂತೆ ಕೇಳಿದರೆ ಆತ ನಾನು ಅದನ್ನು ತಂದಿಲ್ಲ, ಅದು ಡಿಪೋದಲ್ಲಿ ಮಾಡುವ ಕೆಲಸ, ನನಗೆ ಗೊತ್ತಿಲ್ಲ ಎಂದು ಹೇಳಿದ. ಇಂಥವರಿಗೆ ಡ್ರೈವರ ಕೆಲಸಕ್ಕೆ ಲೈಸೆನ್ಸ್ ಕೊಡುವರು. ಪ್ರಯಾಣಿಕರು ಇಳಿಯುವಾಗ ಅವರಿಂದ ಟಿಕೆಟ್ ಪಡೆದು ಅದನ್ನು ಇನ್ನೊಬ್ಬರಿಗೆ ಕೊಡುವರು.

ಮೋಟಾರ್ ವೆಹಿಕಲ್ಸ್ ಟ್ಯಾಕ್ಸೇಷನ್ನಿನಿಂದ ಸುಮಾರು 11 ಕೋಟಿ 8 ಲಕ್ಷ ರೂಪಾಯಿ ಚಿಲ್ಲರೆ ಆದಾಯ ಬಂದಿದೆಯೆಂದು ಹೇಳಿದರು. ಇಷ್ಟು ಲಂಚದ ರೂಪಾಯಿ ಅಧಿಕಾರಿಗಳಿಗೆ ಹೋಗಿದೆ. ಇನ್ನೂ ಹೆಚ್ಚಾಗಿ ಹೋಗಿರಬಹದು, ಇದಕ್ಕಿಂತ ಕಡಮೆಯಿಲ್ಲ. ಈ ತೆರಿಗೆಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಕೊಡುವ ಹಣ ಸರಿಯಾಗಿ ಸಲ್ಲುತ್ತಿಲ್ಲ. ಈ ಸಂಸ್ಥೆಗಳು ಅನೇಕ ಕಡೆಗಳಲ್ಲಿ ಬಸ್ಸು ಸ್ಟ್ಯಾಂಡು ಮತ್ತು ರಸ್ತೆಗಳನ್ನು ಮಾಡಿದೆ. ಕಾನೂನು ಪ್ರಕಾರ ಈ ಸಂಸ್ಥೆಗಳಿಗೆ ಕೊಡಬೇಕಾದ ಹಣವನ್ನು ಒದಗಿಸಬೇಕು.

ಕಟ್ಟಕಡೆಯದಾಗಿ ಒಂದು ಮನವಿಮಾಡುತ್ತೇನೆ. ಮೇಕೆ ನಾಯಿ ಮುಂತಾದುವುಗಳನ್ನು ಸರಕಾರಿ ಬಸ್ಸಿನಲ್ಲಿ ಸಾಗಿಸಲು ಅವಕಾಶ ಕೊಡಬಾರದು, ಸಾರ್ವಜನಿಕರಿಗೆ ಬೇಕಾದ ಅನುಕೂಲ ಕಲ್ಪಿಸಬೇಕು, ರಾಷ್ಟ್ರೀಕರಣವನ್ನು ಯಾವ ಆಧಾರದಮೇಲೆ ಮಾಡಿದರೂ ಅದು ಕನಿಷ್ಠ ಸೇಕಡ 50 ರಷ್ಟಾದರೂ ಜಾರಿಗೆ ಬರುವಂತೆ ವ್ಯವಸ್ಥೆಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ):—ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿರುವುದಕ್ಕಾಗಿ ವಂದಿಸಿ ಕೆಲವು ವಿವರಣೆಗಳನ್ನು ಕೇಳಬೇಕೆಂದಿದ್ದೇನೆ, ಅದರ ಪ್ರತಿಯನ್ನು ಕಳಿಸಿಕೊಡುತ್ತೇನೆ. ಒಂದು ಕೋಟಿ 96 ಲಕ್ಷ ರೂಪಾಯಿಗಳನ್ನು ಕಾರ್ಮಿಕರಿಗಾಗಿ ಕೇಳಿದ್ದಾರೆ. ಈ ಇಲಾಖೆಯಲ್ಲೇನು ಕಾರ್ಯವಾಗುತ್ತಿದೆ ಎಂಬುದರ ಬಗ್ಗೆ ವಿವರವಾಗಿ ಬಡ್ಜೆಟ್ ಎಸ್ಟಿಮೇಟಿನಲ್ಲಿ ತಿಳಿಸಿದ್ದಾರೆ. ನಮಗೆ ಒದಗಿಸಿರುವ ವರದಿಯಲ್ಲಿರುವುದು ಸತ್ಯಕ್ಕೆ ದೂರವಾದುದು ಎಂದು ಹೇಳಿದರೆ ತಪ್ಪಾಗಲಾರದು.

ನನಗೆ ಬಹುಶಃ 30–35 ವರ್ಷಗಳ ಮೇಲ್ಪಟ್ಟು ಕಾರ್ಮಿಕರ ಇಲಾಖೆಯ ಬಗ್ಗೆ ಅನುಭವ ಇದೆ. ಈ ಬಗ್ಗೆ ನಾನು ಹೇಳತಕ್ಕ ಮಾತನ್ನು ಯಾರೂ ವೈಯಕ್ತಿಕವಾಗಿ ತೆಗೆದುಕೊಳ್ಳಬಾರದು. ಈ ಇಲಾಖೆ ನಡೆದುಕೊಂಡು ಬಂದ ರೀತಿ ನೀತಿ ಏನು ಇದೆ ಅದನ್ನು ಅವಲಂಬಿಸಿ ಹೇಳುತ್ತಾ ಇದ್ದೇನೆ. ನಿಮ್ಮನ್ನು ಯಾವ ರೀತಿ ಮಧ್ಯ ಸಿಗಿಸಿ ಬಿಡತಕ್ಕ ವ್ಯವಸ್ಥೆ ಮಾಡುತ್ತಾರೆ ಎನ್ನುವ ವಿಷಯವನ್ನು ತಮ್ಮ ಮುಂದಿಡುತ್ತಿದ್ದೇನೆ. ನನ್ನ ಒಂದು ಪ್ರಶ್ನೆಗೆ ಮಾರ್ಚ್ ಆರನೇ ತಾರೀಖಿನಲ್ಲಿ ಉತ್ತರ ಕೊಟ್ಟಿದ್ದೀರಿ. ಆ ಉತ್ತರದಲ್ಲಿ ಕಾರ್ಮಿಕರಿಗೆ ಮತ್ತು ಕಾರ್ಖಾನೆಗಳಿಗೆ ಲುಕ್ಸಾನು ಆಗಿರತಕ್ಕದ್ದು 11,32,000 ರೂಪಾಯಿಗಳು ಎಂದು. ನಿಮ್ಮ ವರದಿಯಲ್ಲಿ 11,53,000 ಎಂದು ಅಚ್ಚು ಹಾಕಿಸಿ ನಮ್ಮ ಕೈಯಲ್ಲಿ ಕೊಟ್ಟಿದ್ದೀರಿ. ಇದರಿಂದ ನಿಮ್ಮ ಇಲಾಖೆಯವರು ಎಷ್ಟರಮಟ್ಟಿಗೆ ಸತ್ಯವಾಗಿ, ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತಿದ್ದಾರೆ ಎನ್ನುವುದು ಅರ್ಥವಾಗುತ್ತದೆ. ಅಧಿಕಾರಿಗಳಿಗೆ ನೀವು ಎರಡು ಕೋಟಿ ರೂಪಾಯಿಗಳನ್ನು ಒದಗಿಸುತ್ತಾ ಇದ್ದೀರಿ. ಒಂದು ವಿಷಯದ ಬಗ್ಗೆ ನಾನು ಬಹಳ ಪಶ್ಚಾತ್ತಾಪ ಪಡುತ್ತೇನೆ. ಏನೆಂದರೆ, ಈ ಅಧಿಕಾರಿಗಳು ಮೊದಲಿನಿಂದಲೂ ಒಂದು ನೀತಿ, ಧ್ಯೇಯ ಇಟ್ಟು ಲೇಬರ್ ಎಲೆಕ್ಷನ್ ನಡೆಸಿಕೊಂಡು ಬಂದರು. ಅದರ ಪ್ರಕಾರ ಯಾರು ಬೇಕಾದರೂ ಲೇಬರ್ ಲೀಡರ್ ಆಗಬಹುದು, ಯಾರನ್ನು ಬೇಕಾದರೂ ಲೇಬರ್ ಲೀಡರ್ ಅನ್ನು ಕಿತ್ತು ಹಾಕಬಹುದು. ಯಾವ ಸಂಘದ ರಿಜಿಸ್ಟ್ರೇಷನ್ ಅನ್ನು ಕ್ಯಾನ್ಸಲ್ ಮಾಡಬಲ್ಲರು, ಯಾವ ಸಂಘದ ರಿಜಿಸ್ಟ್ರೇಷನ್ ಅನ್ನು ಮಾಡಬಲ್ಲರು. ಒಳ್ಳೆಯ ಅಧಿಕಾರಿಗಳು ಇದ್ದರು. ವಿ. ಹನುಮಂತಪ್ಪ, ರಹಮತುಲ್ಲಾ ಖಾನ್ ಅವರು ಲೇಬರ್ ಕಮಿಷನರ್ ಆಗಿದ್ದರು. ಒಳ್ಳೆಯವರು ಇಲ್ಲ ಎಂದು ಹೇಳುವುದಿಲ್ಲ. ಈ ಇಲಾಖೆಗೆ ನೀವು ಕೇಳಿರತಕ್ಕ ಹಣ ಏನು ಇದೆ ಅದಕ್ಕೆ 15 ಕೋಟಿ ರೂಪಾಯಿಗಳನ್ನು ಕೇಳುತ್ತಾ ಇದ್ದೀರಿ, ಹೋದ ವರ್ಷ 13 ಕೋಟಿ ರೂಪಾಯಿಗಳನ್ನು ಕೇಳಿದ್ದಿರಿ. ಹೋದ ವರ್ಷಕ್ಕಿಂತ ಎರಡು ಕೋಟಿ ರೂಪಾಯಿಗಳನ್ನು ಜಾಸ್ತಿ ಈ ವರ್ಷ ಕೇಳುತ್ತಾ ಇದ್ದೀರಿ. ವೈಯಕ್ತಿಕವಾಗಿ ಯಾರ ಮೇಲೂ ಭಿನ್ನಾಭಿಪ್ರಾಯವಿಲ್ಲ. ಕಾರ್ಮಿಕರ ಅಭಿವೃದ್ಧಿಗಾಗಿ ಯಾವ ತರಹ

ಯೋಜನೆಗಳೂ ನಿಮ್ಮ ಹತ್ತಿರ ಇಲ್ಲ. ಕಾರ್ಮಿಕರ ಕಲ್ಯಾಣದ ಬಗ್ಗೆ ಅವರ ವೆಲ್‌ಫೇರ್ ಬಗ್ಗೆ ಒದಗಿಸಿರತಕ್ಕ ಹಣ 1.80 ಲಕ್ಷ ರೂಪಾಯಿಗಳು. ಇದರಲ್ಲಿ 3/1 ಭಾಗ ಅಂದರೆ 55 ಸಾವಿರ ರೂಪಾಯಿಗಳನ್ನು ಉಳಿತಾಯ ಮಾಡಿದ್ದಾರೆ. ಕಾರ್ಮಿಕರ ಕ್ಷೇಮಾಭಿವೃದ್ಧಿ ಬೇಡ ಎಂದು ಇದರಿಂದ ಅರ್ಥವಾಗುತ್ತದೆ. ಆದ್ದರಿಂದ ನಿಮ್ಮ ಈ ರಿಪೋರ್ಟಿನಲ್ಲಿ ಏನು ಹಣ ಕೇಳಿದ್ದೀರಿ, ಆದರ ಬಗ್ಗೆ ಒಂದೆರಡು ವಿಷಯ ಹೇಳುತ್ತೇನೆ. ಅದರಲ್ಲಿ 17 ಅಂಶಗಳಾಗಿ ವಿಂಗಡಣೆ ಮಾಡಿದ್ದಾರೆ. ನಿಮ್ಮ ಡಿಮ್ಯಾಂಡಿನಲ್ಲಿ ಒಂದೊಂದು ಕ್ಲಾಸ್ ಸ್ಕೀಂಗೋಸ್ಕರ 65 ಸಾವಿರ ರೂಪಾಯಿಗಳನ್ನು ಕೇಳುತ್ತೀರಿ. ಸ್ಕೀಂ ಎಲ್ಲಿ ಇದೆ ? ಎಲ್ಲಿ ನಡೆಯುತ್ತಾ ಇದೆ. ಎನ್ನುವುದರ ಬಗ್ಗೆ ಮಂತ್ರಿಗಳು ವಿವರಣೆ ಕೊಡಬೇಕು. ಸ್ಪೆಷಲ್ ಎಂಪ್ಲಾಯ್‌ಮೆಂಟ್‌ಗೋಸ್ಕರ 35 ಸಾವಿರ ರೂಪಾಯಿಗಳನ್ನು ಕೇಳುತ್ತಾ ಇದ್ದಾರೆ. ಅದು ಎಲ್ಲಿ ಇದೆ ? ಹೀಗೆ 15 ಅಂತ ಗಳಿಗೆ ನೀವು ಒಂದು ಕೋಟಿ 96 ಲಕ್ಷ ರೂಪಾಯಿಗಳ ಖರ್ಚು ಕೇಳುತ್ತಾ ಇದ್ದೀರಿ. ನಾನು ಇದರ ಬಗ್ಗೆ ಒಂದು ಪಟ್ಟಿಯನ್ನು ಟೈಪ್‌ಮಾಡಿಸಿ ತಂದಿರುತ್ತೇನೆ. ಮಾನ್ಯ ಮಂತ್ರಿಗಳಿಗೆ ಅದನ್ನು ಕಳುಹಿಸುತ್ತೇನೆ, ಪ್ರತಿಯೊಂದಕ್ಕೂ ಅವರು ಕ್ಲಾರಿಫೈ ಮಾಡಿ ಉತ್ತರ ಹೇಳಿದರೆ ನನಗೆ ಸಂತೋಷವಾಗುತ್ತದೆ. ಅಲ್ಲದೆ ಕಳೆದ ವರ್ಷದಿಂದ ಕಾರ್ಖಾನೆಗಳಲ್ಲಿ 13 ಕೋಟಿ ರೂಪಾಯಿ ಲುಕ್ಸಾನು ಆಗಿದೆ. ಈಗಿನ ಪರಿಸ್ಥಿತಿಯಲ್ಲಿ ಇದು ಸಣ್ಣ ಮೌಲ್ಯವಲ್ಲ. ಈ ಇಲಾಖೆಯಲ್ಲಿ 15 ವರ್ಷಗಳಿಂದ ಕೂತಿರತಕ್ಕ ರಾಜರು ಇದ್ದಾರೆ. ಅವರಿಗೆ ನೀವು ಪ್ರಮೋಷನ್ ಕೊಡುತ್ತೀರಿ. ಇವರಿಗೆ ಯಾವ ಕಾರ್ಯಕ್ಕೋಸರ ಕೊಡುತ್ತೀರೋ ಗೊತ್ತಿಲ್ಲ. ನಿಮ್ಮ ರಿಪೋರ್ಟಿನಲ್ಲಿ ನೀವು ಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ಅವಾರ್ಡ್ ಆಗಿದ್ದನ್ನು ಜಾರಿಗೆ ತರಲಿಲ್ಲ. ನೀವು ನಿಮ್ಮ ಹತ್ತಿರ ಇತ್ಯರ್ಥಕ್ಕೋಸ್ಕರ 166 ಕೇಸುಗಳು ಕಳೆದ ವರ್ಷ ಬಂದಿದ್ದರೆ ನೀವು ಇತ್ಯರ್ಥ ಮಾಡಿರುವುದು ಕೇವಲ ನಾಲ್ಕು ಮಾತ್ರ. ಇದರಿಂದ ನಿಮ್ಮ ಇಲಾಖೆ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದೆ ಎನ್ನುವುದನ್ನು ತಿಳಿಯುತ್ತದೆ. ಆದ್ದರಿಂದ ನೀವು ಕಾರ್ಮಿಕರ ಬಗ್ಗೆ ಅವರ ಶ್ರೇಯಸ್ಸಿಗೋಸ್ಕರ, ಅವರ ಅಭಿವೃದ್ಧಿಗೋಸ್ಕರ ಹೆಚ್ಚಿನ ಸಹಾಯ ಮಾಡತಕ್ಕ ನೀತಿ ಇಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಷ್ಟು ದುಡ್ಡನ್ನು ಖರ್ಚು ಮಾಡತಕ್ಕ ಜನ, ಇನ್ನೊಂದು ಸ್ವಲ್ಪ ಹೆಚ್ಚಾಗಿ ದುಡ್ಡನ್ನು ಕೇಳಿದರೂ ಭಿನ್ನಾಭಿಪ್ರಾಯವಿಲ್ಲ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ಹಣವನ್ನು ಕೇಳಲಿಲ್ಲ ಎಂದು ನಾನು ಪಶ್ಚಾತ್ತಾಪ ಪಡುತ್ತೇನೆ. 20–30 ವರ್ಷಗಳಕಾಲ ಕಾರ್ಮಿಕರ ಕೆಲಸ ಮಾಡಿದ ವ್ಯಕ್ತಿ ಮಂತ್ರಿಯಾಗಿರಬೇಕಾದರೆ ನೀವು ಕಾರ್ಮಿಕರ ಕಲ್ಯಾಣಕ್ಕೋಸ್ಕರ ಹೆಚ್ಚು ಹಣವನ್ನು ಕೇಳದಿದ್ದರೆ ಇನ್ನು ಯಾರು ಕೇಳುತ್ತಾರೆ. ರೆವಿನ್ಯೂ ಮತ್ತು ಇತರೆ ಡಿಪಾರ್ಟ್‌ಮೆಂಟಿನವರು ಹಣ ಕೇಳುವಾಗ, ತಾವು ಇದ್ದ ಇಲಾಖೆಯಲ್ಲಿ ಹೆಚ್ಚು ಹಣವನ್ನು ಕಾರ್ಮಿಕರಿಗೋಸ್ಕರ, ಅವರ ಅಭಿವೃದ್ಧಿಯ ಬಗ್ಗೆ ಯೋಜನೆ ಮಾಡುವುದಕ್ಕೆ ತಾವು ಕೇಳಿರತಕ್ಕ ಹಣ ಸಾಕೇ ? ನೀವು ಕೇಳಿರತಕ್ಕ ಹಣ ಬರೀ ಅಧಿಕಾರಿಗಳ ಸಂಬಳಕ್ಕೋಸ್ಕರ ಎಂದು ಹೇಳಿದರೆ ತಪ್ಪಾಗಲಾರದು. ಪ್ರಪಂಚದಲ್ಲಿ ತಾವು ನೋಡಿದರೆ, ಕಾರ್ಮಿಕರ ಅಭಿವೃದ್ಧಿಗೋಸ್ಕರ ಯಾವ ರೀತಿಯಲ್ಲಿ ಕೆಲಸ ಮಾಡಬೇಕು ಯಾವ ರೀತಿಯಲ್ಲಿ ಅವರ ವೇತನಗಳು ಇರಬೇಕು, ಅಭಿವೃದ್ಧಿ ಹೊಂದಿರತಕ್ಕ ಯಾವುದೇ ರಾಜ್ಯವನ್ನು ತೆಗೆದುಕೊಂಡರೂ ಕೂಡ, ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿವೆ ಎನ್ನುವುದು ಪತ್ರಿಕೆಗಳ ಮುಖಾಂತರ ಗೊತ್ತಾಗುತ್ತದೆ. ಅದು ನಮ್ಮೆಲ್ಲರಿಗೂ ಗೊತ್ತಿದೆ ; ಕೆಲವು ಸಂದರ್ಭದಲ್ಲಿ ನೀವು ಹೆದರುತ್ತೀರಿ ಎಂದು ಗೊತ್ತಾಗುತ್ತದೆ. ದೇಶದ ದೃಷ್ಟಿಯಿಂದ ಹೇಳುತ್ತೇನೆ, ದೇಶದ ಹಿತದೃಷ್ಟಿಯಿಂದ, ಕಾರ್ಮಿಕರ ಅಭಿವೃದ್ಧಿ ದೃಷ್ಟಿಯಿಂದ ಯಾರು ಮುಖಂಡತ್ವ ಬೆಳೆಸುವುದಾದರೂ ನನ್ನ ಅಭ್ಯಂತರವಿಲ್ಲ. ಇವರ ಮುಖಂಡತ್ವವನ್ನು ರಾಜಕೀಯಕ್ಕೋಸ್ಕರ ಬೆಳೆಸುವುದಾದರೆ ಅದಕ್ಕೆ ನಾವು ಅವಕಾಶ ಮಾಡಬಾರದು, ಇದು ದೇಶದ್ರೋಹವಾಗುತ್ತದೆ. ಒಂದು ಕಡೆ ಉತ್ಪನ್ನಕ್ಕೆ ಧಕ್ಕೆ ತರತಕ್ಕ ಮಾತನ್ನು ಹೇಳುತ್ತೇನೆ. ಮೈಸೂರು ಮೆಷಿನರಿ, ಎಚ್.ಎಂ.ಟಿ. ಕಾರ್ಖಾನೆಗಳು ತಿಂಗಳಗಟ್ಟಲೆ ನಿಂತಿವೆ, ಕೋಟಿಗಟ್ಟಲೆ ಹಣ ಲುಕ್ಸಾನು ಆಗಿದೆ, ಏಕೆ ? ಇದರ ಬಗ್ಗೆ ಕೇಳುವುದಕ್ಕೆ ಸರ್ಕಾರಕ್ಕೆ ಅಧಿಕಾರವಿಲ್ಲವೇ ? ಸ್ಟ್ರೈಕ್ಸ್,

ಲಾಕ್‌ಔಟ್ಸ್ ಮುಂತಾದುವುಗಳನ್ನು ಪ್ರಾಹಿಬಿಟ್ ಮಾಡಿ ಒಂದು ವಾರದೊಳಗೆ ಇತ್ಯರ್ಥಮಾಡಿ ಕೆಲಸ ಒದಗಿಸಿಕೊಡುವುದಕ್ಕೆ ಇವರಿಗೆ ಶಕ್ತಿ ಇಲ್ಲವೇ ? ಅಥವಾ ಇವರಿಗೆ ಮನಸ್ಸಿಲ್ಲವೇ? ಈ ಪ್ರಶ್ನೆಗೆ ತಾವು ಉತ್ತರ ಹೇಳಬೇಕು. ಮೈಸೂರು ಮೆಷಿನರಿ ಫ್ಯಾಕ್ಟರಿ ಫೆಬ್ರವರಿ 14 ರಂದು ಮುಚ್ಚಿದ್ದು, ಇನ್ನೂ ಅದರ ಬಗ್ಗೆ ವ್ಯವಹಾರ ನಡೆಯುತ್ತಾ ಇದೆ. ಮೂರು ನಾಲ್ಕು ತಿಂಗಳು ಆದರೂ ಕೂಡ ಎರಡು ಸಾವಿರ ಜನ ಕಾರ್ಮಿಕರು ಕೆಲಸವಿಲ್ಲದೆ ಬೀದಿಯಲ್ಲಿ ಸುತ್ತಾಡುತ್ತಿದ್ದಾರೆ. ಇದು ಮಾಲೀಕರಿಗೂ ಗೊತ್ತಿದೆ. ತಮಗೂ ಗೊತ್ತಿದೆ. 1967 ರಲ್ಲಿ ಒಂದು ಸಲ ಮುಚ್ಚಿದರು, ಆಗ ಪೊಲೀಸರನ್ನು ಬಿಟ್ಟು ಹೊಡೆಸಿದರು. ಮಾಲೀಕರಿಗೆ ಅನುಕೂಲವಾಗುವ ರೀತಿಯಲ್ಲಿ ನೀವು ಕೂಡ ವರ್ತಿಸುವುದಾದರೆ ಮತ್ತೆ ಕಾರ್ಮಿಕರು ಯಾವ ರೀತಿಯಲ್ಲಿಯೂ ನಿಮ್ಮನ್ನು ನಂಬುವುದಕ್ಕೆ ಸಾಧ್ಯವಿಲ್ಲ ಎನ್ನುವ ಪ್ರಶ್ನೆ ಬರುತ್ತದೆ. ಇದು ಬಹಳ ಕಹಿಯಾದ ಮಾತಾಗಿರುತ್ತದೆ. ಇದನ್ನು ನಾನು ಹೇಳದೆ ಹೋದರೆ ವಿಧಿಯಿಲ್ಲ. ಹೊಸದಾಗಿ ಕಾರ್ಮಿಕರಿಗೋಸ್ಕರ ಯಾವುದೇ ತರಹದ ಯೋಜನೆಗಳನ್ನು ನೀವು ತಂದಿಲ್ಲ. ಅವರನ್ನು ಅಭಿವೃದ್ಧಿಪಡಿಸತಕ್ಕಂಥ ಯಾವುದೇ ಯೋಜನೆಗಳನ್ನು ತರುವುದಕ್ಕೆ ನಿಮಗೆ ಇಚ್ಛೆಯಿಲ್ಲ ಎಂದು ಕಾಣುತ್ತದೆ. ಇದರಿಂದ ಕಾರ್ಮಿಕರಿಗೆ ಎಷ್ಟು ಅನಾನುಕೂಲವಾಗುತ್ತದೆ ಎಂದು ಯೋಚನೆ ಮಾಡಿ. ಇಲಾಖೆಯವರು ಇವರ ಬಗ್ಗೆ ಯಾವ ಯೋಜನೆಯನ್ನು ಇಟ್ಟಿಲ್ಲ. ಬರೀ ಸಂಬಳ ತೆಗೆದುಕೊಂಡು ಕಾಲಹರಣ ಮಾಡುವುದಾಗಿದ್ದರೆ ಪುಣ್ಯವಾಗುತ್ತಿತ್ತು. ಈ ಮಾತನ್ನು ನಾನು ಬಹಳ ಪಶ್ಚಾತ್ತಾಪದಿಂದ ಹೇಳುತ್ತೇನೆ. ನೋಟೀಸುಗಳನ್ನು ಕೊಡುತ್ತಾ ಇದ್ದಾರೆ, ಲೆಕ್ಕಾ ಕೊಡಬೇಕು, ಎಂದು. ಇನ್ನೂ ಅವಧಿ ಇರಬೇಕಾದರೆ ಸಂಘಗಳನ್ನು ಕ್ಯಾನ್ಸಲ್ ಮಾಡುವುದು ಅದೇ ಹೆಸರಿನಲ್ಲಿ ಇನ್ನೊಂದು ಸಂಘವನ್ನು ರಿಜಿಸ್ಟ್ರೇಷನ್ ಮಾಡುವುದು ಎಲ್ಲಿಯಾದರೂ ಸಾಧ್ಯವೇ? ಕಾನೂನಿಗೆ ವಿರೋಧವಾಗಿ ಒಂದು ಸಂಘಕ್ಕೆ ಒಂದು ಹೆಸರು ಇದ್ದರೆ, ಅದನ್ನು ಕ್ಯಾನ್ಸಲ್ ಮಾಡಿ ಮತ್ತೇ ಅದೇ ಹೆಸರಿನಲ್ಲಿ ಸಂಘವನ್ನು ರಿಜಿಸ್ಟರ್ ಮಾಡುವುದು ಹೇಗೆ ಸಾಧ್ಯ ?

ಶ್ರೀ ಅಜೀಜ್ ಸೇಟ್ :—ಅಂತಹದು ಯಾವುದು ? ಹೆಸರು ಹೇಳುತ್ತೀರಾ ?

ಶ್ರೀ ಕೆ. ಶ್ರೀರಾಮುಲು :—ಸೂರ್ಯೋದಯ ಮಿಲ್ಸ್, ತಮ್ಮ ಇಲಾಖೆಯಿಂದ ಇವರಿಗೆ ನೋಟೀಸ್ ಕೊಟ್ಟಿದ್ದಾರೆ. ಮೇ 20ನೇ ತಾರೀಖು ನೋಟೀಸ್‌ಅನ್ನು ಕಳುಹಿಸುವುದಕ್ಕೆ ಅವಕಾಶವಿತ್ತು.

ಯಾವ ವ್ಯಕ್ತಿಗಳಿಗೆ ಸ್ಟೇ ಕೊಟ್ಟಿದ್ದಾರೆ ಆ ವ್ಯಕ್ತಿಗಳನ್ನೇ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಇನ್ನೊಂದು ಸಂಘವನ್ನು ರಿಜಿಸ್ಟ್ರೇಷನ್ ಮಾಡುತ್ತಾರೆ. ಮಾಲೀಕರು ಹೇಳಿದಂತೆ ಇಲಾಖೆಯವರು ನಡೆದುಕೊಂಡು ಬಂದಿದ್ದಾರೆಂದು ಹೇಳುವುದು ತಪ್ಪು. ನಿಜವಾಗಿ ಹೇಳಿದರೆ ಯಾವ ಅಧಿಕಾರಿಗಳು ಅದನ್ನು ಮಾಡಿದರೋ, ಅವರನ್ನು ಶಿಕ್ಷೆಗೆ ಒಳಪಡಿಸಬೇಕು. ನಮ್ಮ ಕಾರ್ಮಿಕರ ನೀತಿ ಯಾವ ರೀತಿ ಇದೆ ಎನ್ನುವುದಕ್ಕೆ ಮಂತ್ರಿಗಳ ವಿಚಾರ ಹೇಳುತ್ತೇನೆ. ಅವರು 20–30 ವರ್ಷಗಳ ಕಾಲ ಕಾರ್ಮಿಕರಿಗಾಗಿ ಕೆಲಸ ಮಾಡಿದವರು. ನನ್ನ ಕ್ಷೇತ್ರದಲ್ಲಿ ನೀವು 4ನೇ ತಾರೀಖು ನಾನು ಇಲ್ಲದೇ ಇದ್ದಾಗ ಕಾರ್ಮಿಕರ ಸಭೆ ಏತಕ್ಕೆ ನಡೆಸಬೇಕಾಯಿತು ? ಯಾರೋ ಸತ್ತು ಹೋದವರಿಗೆ ಒಂದು ಇಷ್ಟು ಹಣವನ್ನು ಕೊಡಬೇಕಾಗಿತ್ತು. ಅದಕ್ಕೆ ನನ್ನ ಅಭ್ಯಂತರವಿಲ್ಲ. ನೀವು ಮಾಡಿದ್ದು ಏನು ಎಂದರೆ ನಡೆಯುತ್ತಾ ಇರುವ ಕಾರ್ಖಾನೆಯನ್ನು ಒಂದು ಗಂಟೆ ನಿಲ್ಲಿಸಿ ನೀವು ಭಾಷಣ ಮಾಡಿ ಚೆಕ್ಕು ಕೊಟ್ಟು ಬಂದಿರಿ. ಎಷ್ಟೇ ಅಭಿಪ್ರಾಯ ಭೇದವಿದ್ದರೂ ಕೂಡ ನಾನು ಮೀಟಿಂಗಿನಲ್ಲಿ ಭಾಗವಹಿಸುತ್ತಿದ್ದೆ. ನಾನು ಇಲ್ಲದೇ ಇದ್ದಾಗ ನನ್ನ ಕ್ಷೇತ್ರದಲ್ಲಿ ಒಂದು ಮೀಟಿಂಗ್ ಮಾಡಿ, ನನ್ನ ವಿರುದ್ಧವಾಗಿ ಎತ್ತಿಕಟ್ಟತಕ್ಕ ಅಭಿಪ್ರಾಯ ಯಾತಕ್ಕೆ ? ಏನು ಅಗತ್ಯವಿದೆ ? ಅದು ಕಾರ್ಮಿಕರಿಗೆ ಒಳ್ಳೆಯದು ಮಾಡತಕ್ಕ ನೀತಿಯೋ ? ನನಗೆ ತೋಂದರೆ

ಆದರೂ ಚಿಂತೆಯಿಲ್ಲ, ದೇಶದಲ್ಲಿರತಕ್ಕ ಕಾರ್ಮಿಕರಿಗೆ ನ್ಯಾಯವಾಗಬೇಕು, ಪ್ರೊಡಕ್ಷನ್ ಲುಕ್ಸಾನು ಮಾಡತಕ್ಕ ಕೆಲಸ ಯಾರು ಮಾಡಿದರೂ ಅದು ದೇಶದ ದೃಷ್ಟಿಯಿಂದ ಒಳ್ಳೆಯದು ಅಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಅದರ ಬಗ್ಗೆ ಅರ್ಧ ಗಂಟೆ ಚರ್ಚೆ ನೋಟೀಸು ಕಳುಹಿಸಿದ್ದೆ, ಎರಡೂವರೆ ತಿಂಗಳು ಆಯಿತು ಚಿಂತೆಯಿಲ್ಲ. ಅದಕ್ಕೆ ಇನ್ನೂ ಒಂದು ಅವಕಾಶ ಸಿಗಲಿಲ್ಲ. ನಾನು ಕೇಳುವುದೂ ಇಲ್ಲ. ಮನಸ್ಸಿನಲ್ಲಿರುವುದನ್ನು ಹೇಳತಕ್ಕ ವ್ಯಕ್ತಿ ನಾನು, ಮಂತ್ರಿಗಳು ಆದವರು ತಪ್ಪು ಮಾಡಿದರೆ ಅದನ್ನು ತಿದ್ದಿಕೊಳ್ಳಬೇಕು, ನಾನು ಈ ಬಗ್ಗೆ ಅನೇಕ ಸಲ ಹೇಳಿದ್ದೇನೆ. ನಿಮ್ಮ ಛೇಂಬರ್‌ನಲ್ಲಿ ಸಂಬಂಧಪಟ್ಟವರನ್ನು ಕರೆಸಿ ಅನೇಕ ಒಪ್ಪಂದಗಳನ್ನು ಮಾಡಿದ್ದೀರಿ. ಅದು ಒಳ್ಳೆಯದು ಆದರೆ ನೀವು ರುಜು ಮಾಡಬೇಡಿ ಅಧಿಕಾರ ಇದ್ದರೆ ಅವರಿಂದ ಕಾನೂನು ಪ್ರಕಾರ ರುಜು ಮಾಡಿಸಿ, ಮಿಲ್ ಲಾಕೌಟ್ ಆಗಿದ್ದ ಸಂದರ್ಭದಲ್ಲಿ ಮೇ 1972ರಲ್ಲಿ ನೀವು ಒಪ್ಪಂದ ಮಾಡಿಸಿದಿರಿ ಆಗ ಮಂತ್ರಿಗಳಿಗೆ ಅಧಿಕಾರವಿಲ್ಲವೆಂದು ಅವರು ಕೋರ್ಟಿಗೆ ಹೋದರು. ಆ ದೃಷ್ಟಿಯಿಂದ ತಾವು ರುಜು ಮಾಡಬೇಡಿ ಅಧಿಕಾರಿಗಳು ಮಾಡಬೇಕು ಅವರಿಗೆ ಇರುವುದು ಅಧಿಕಾರ ಅವರಿಂದ ಮಾಡಿಸಿ ಎಂದರೆ ಕೇಳುವುದಿಲ್ಲ. ಆದರಿಂದ ಏನು ಆಗುತ್ತದೆ ಎಂದರೆ ಸಾವಿರಾರು ಜನ ಕಾರ್ಮಿಕರು ಕೆಲಸ ಕಳೆದುಕೊಳ್ಳತಕ್ಕ ವ್ಯವಸ್ಥೆಗೆ ಒಳಪಡುತ್ತಾರೆ. ನಾನು ಮತ್ತೆ ತಮಗೆ ಹೇಳುತ್ತೇನೆ ನೀವು ಈ ವರ್ಷ ಸಾಕಷ್ಟು ದುಡ್ಡು ಕೇಳುವುದಿಲ್ಲ ಬರುವ ವರ್ಷ ಹೆಚ್ಚಾಗಿ ದುಡ್ಡು ಕೇಳಬೇಕಾಗುತ್ತದೆ. ಕಾರ್ಮಿಕರ ಅಭಿವೃದ್ಧಿಗೋಸ್ಕರ ಕೇಳಬೇಕು.

ಶ್ರೀ ಅಜೀಜ್‌ಸೇಠ್ :—ಅಗ್ರಿಮೆಂಟ್ ಸೈನ್ ಮಾಡಿದ ಬಗ್ಗೆ ಕೋರ್ಟಿಗೆ ಹೋದರು ಎಂದು ಹೇಳಿದಿರಿ. ಅದು ಯಾವುದು ?

ಶ್ರೀ ಕೆ. ಶ್ರೀರಾಮುಲು :—ಅದು ಮೈಸೂರು ಮಿಲ್ ಮತ್ತು ಮಿನರ್ವ ಮಿಲ್ ಮ್ಯಾನೇಜ್‌ಮೆಂಟಿನವರನ್ನು ಕರೆದು ಒಪ್ಪಿಸಿದಿರಿ. ಮಿನಿಸ್ಟರಿಗೆ ಅಧಿಕಾರವಿಲ್ಲ ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ ಎಂದು ಆಕ್ಷೇಪಿಸಿ ಕೊನೆಗೆ ಕೋರ್ಟಿನಲ್ಲಿ ಉಡಾಯಿಸಿ ಬಿಟ್ಟರು, ಈಗ 300 ಜನ ಕೆಲಸ ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ :—ಮಾನ್ಯ ಮಂತ್ರಿಗಳು ಛೇಂಬರಿಗೆ ಕರೆಸಿ ಅವರೇ ಸೈನ್ ಮಾಡಿದ್ದು ತಪ್ಪೇ ಅಥವಾ ಅವರನ್ನು ಕರೆಸಿದ್ದು ತಪ್ಪೇ ?

ಶ್ರೀ ಕೆ. ಶ್ರೀರಾಮುಲು :—ಕೃಷ್ಣನ್‌ರವರು ಈ ಪ್ರಶ್ನೆ ಕೇಳಬಾರದಾಗಿತ್ತು, ನೀವು ಎಲ್ಲಾ ವಿದ್ಯಾರ್ಥಿಗಳು ಆಗಿದ್ದಾಗ, ನಾನು ಮೊದಲೇ ಈ ಕಾರ್ಮಿಕರ ರಂಗಕ್ಕೆ ಬಂದೆ ನಾನು ಹೇಳುವಾಗ ಸರಿಯಾಗಿ ಹೇಳುತ್ತೇನೆ ಮಂತ್ರಿಗಳು ಅವರನ್ನು ಕರೆಸಿದ್ದು ತಪ್ಪು ಎಂದು ಹೇಳಲಿಲ್ಲ ಕಾರ್ಮಿಕರ, ಮಂತ್ರಿ ಎಲ್ಲಿ ಕಾರ್ಮಿಕರಿಗೆ ಅನಾನುಕೂಲವಾಗುತ್ತದೆ ಅಂಥ ಕಡೆ ಅನುಕೂಲ ಮಾಡುವುದಕ್ಕೆ ಪ್ರಯತ್ನ ಪಡುತ್ತಾರೆ ಅವರ ಬಗ್ಗೆ ಮೆಚ್ಚಿಗೆ ಇದೆ. ಅವರು ರುಜುಮಾಡಿದಾಗ ಮಾಲೀಕರು ಅವರಿಗೆ ಅಧಿಕಾರವಿಲ್ಲ ಎಂದು ಕೋರ್ಟಿನಲ್ಲಿ ಕ್ವೆಶ್ಚನ್ ಮಾಡುತ್ತಾರೆ. ಆದುದರಿಂದ ಅಲ್ಲಿ ಬರತಕ್ಕ ಅಸಿಸ್ಟೆಂಟ್ ಕಮೀಷನರ್‌ರವರು ಲೇಬರ್ ಕಮೀಷನರ್‌ರವರು ರುಜು ಮಾಡಲಿ ಎಂದು ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ನೀವು 1 ಕೋಟಿ 96 ಲಕ್ಷ ರೂಪಾಯಿಗಳನ್ನು ಈ ವರ್ಷ ಈ ಇಲಾಖೆಗೆ ಕೇಳಿದ್ದೀರಿ ಕಳೆದ ವರ್ಷ 1 ಕೋಟಿ 81 ಲಕ್ಷ ಕೇಳಿದ್ದರು. ಅಂದರೆ 15 ಲಕ್ಷ ಜಾಸ್ತಿ ಈ ವರ್ಷ ಕೇಳಿರತಕ್ಕದ್ದು ನಿಮಗೆ ಗೊತ್ತಿದೆ ಖಾಸಗೀ ಹಾಗೂ ನಿಮ್ಮ ಕಾರ್ಖಾನೆಗಳು ಬೇಕಾದಷ್ಟು ಇವೆ. ಈಗ ತಿಂಗಳಿಗೆ 25, 26 ದಿವಸ ಕಾರ್ಮಿಕರು ಕೆಲಸ ಮಾಡುತ್ತಾರೆ ಯಾವ ಖರ್ಚು ಇಲ್ಲದೆ ಹಣ ಖರ್ಚುಮಾಡದೇ ಪ್ರೊಡಕ್ಷನ್ ಜಾಸ್ತಿ ಮಾಡುವುದಕ್ಕೆ ಸಾಧ್ಯವಿದೆ. ಒಂದು ನಯಾಪೈಸೆ ಖರ್ಚು ಮಾಡಬೇಕಾಗಿಲ್ಲ. ದಿವಸಕ್ಕೆ 10 ರಿಂದ 11 ಲಕ್ಷ ಜನ ಹುಟ್ಟುತ್ತಿದ್ದಾರೆ ಅದರ ಬಗ್ಗೆ

ಯಾತಕ್ಕೆ ನಿಧಾನ ಮಾಡುತ್ತಿದ್ದಾರೆ. ಎಂ. ಎಲ್. ಎ. ಹೇಳಿ ನೀವು ತಿಳಿದುಕೊಳ್ಳಬೇಕೇ ? ಆರನೇ ಒಂದು ಭಾಗ ಹೆಚ್ಚಿಗೆ ಎಂಪ್ಲಾಯ್‌ಮೆಂಟ್ ಕೊಡುವುದಕ್ಕೆ ಸಾಧ್ಯವಿದೆ. ಆರನೇ ಒಂದು ಭಾಗ ಹೆಚ್ಚಿಗೆ ಪ್ರೊಡಕ್ಷನ್ ಬರುವುದಕ್ಕೆ ಸಾಧ್ಯವಿದೆ ಯಾರೂ ಅದಕ್ಕೆ ವಿರೋಧ ಮಾಡುವುದಕ್ಕೆ ಸಾಧ್ಯವಿಲ್ಲ. ಅಂಥ ಕೆಲಸ ಮಾಡುವುದಕ್ಕೆ ಯಾತಕ್ಕೆ ಪ್ರಯತ್ನ ಮಾಡಲಿಲ್ಲ?

ಶ್ರೀ ಅಜೀಜ್ ಸೇಠ್:—ಆರನೇ ಒಂದು ಭಾಗ ಕಾರ್ಮಿಕರಿಗೆ ಕೆಲಸ ಸಿಗಬೇಕು ಎಂದು ಹೇಳುತ್ತೀರಿ, ಅದರ ಜೊತೆಗೆ ನ್ಯಾಷನಲ್ ಡಿಸಿಪ್ಲೀನ್ ಒಪ್ಪಿಕೊಳ್ಳುತ್ತೀರಾ?

ಶ್ರೀ ಕೆ. ಶ್ರೀರಾಮುಲು:—ಧಾರಾಳವಾಗಿ ಉತ್ಪತ್ತಿ ಜಾಸ್ತಿ ಮಾಡುವುದಕ್ಕೆ ವಿರೋಧ ಮಾಡುವ ಜನ ನಾವು ಆದರೆ ಇನ್ನು ಯಾವ ಜನ ಇದನ್ನು ಒಪ್ಪಬೇಕು? ಅದರ ಬಗ್ಗೆ ಶಂಕೆ ಬೇಡ ಹೀಗೆ ಮಾಡುವುದಾದರೆ ಲಕ್ಷಾಂತರ ಜನಕ್ಕೆ ಮುಂದಿನ ವರ್ಷದಲ್ಲಿ ಕೆಲಸ ಕೊಡುವುದಕ್ಕೆ ಸಾಧ್ಯವಿದೆ. ಇದನ್ನು ಪ್ರಯತ್ನ ಪಡುವುದು ಒಳ್ಳೆಯದೆಂದು ಹೇಳುತ್ತೇನೆ. ಬಾಕಿ ಕೆಲಸಗಾರರಿಗೂ ಕೆಲಸ ಬರುತ್ತದೆ ಭಾನುವಾರ ರಜ ಇರುವುದಿಲ್ಲ. ಆರನೇ ಒಂದು ಭಾಗ ಎಂಪ್ಲಾಯ್‌ಮೆಂಟ್ ಜಾಸ್ತಿಯಾಗುತ್ತದೆ. ಅಷ್ಟು ಜಾಸ್ತಿ ಕಾರ್ಮಿಕರು ಕೆಲಸ ಮಾಡುತ್ತಾರೆ. ಪ್ರೊಡಕ್ಷನ್ ಅಷ್ಟು ಜಾಸ್ತಿ ಬರುತ್ತದೆ. ಈ ದೃಷ್ಟಿಯಿಂದ ಈ ವಿಷಯ ಹೇಳುತ್ತೇನೆ. ಲುಕ್ಸಾನು ಜಾಸ್ತಿಯಿಲ್ಲ ಅಡಿಷನಲ್ ಬರ್ಡನ್ ಇಲ್ಲ ಯಾತಕ್ಕೆ ಇದನ್ನು ಮಾಡಬಾರದು ? ಆದುದರಿಂದ ಹೀಗೆ ಮಾಡುವುದಕ್ಕೆ ತಮ್ಮ ಕಾಲದಲ್ಲಿ ಪ್ರಯತ್ನ ಮಾಡುತ್ತೀರಾ ? ಯಾರು ಯಾರು ತಮ್ಮ ಅಧಿಕಾರಾವಧಿಯಲ್ಲಿ ಏನು ಒಳ್ಳೆಯದು ಮಾಡಿದರು ಎನ್ನುವ ಪ್ರಶ್ನೆ ಕೊನೆಗೆ ಉಳಿಯುವುದು. ಆ ಕೀರ್ತಿ ನೀವೇ ಪಡೆಯಿರಿ. ಉತ್ಪತ್ತಿ ಏನು ಬರುತ್ತದೆ ಒಟ್ಟು ಉತ್ಪತ್ತಿಯಲ್ಲಿ ಕಾರ್ಮಿಕರಿಗೆ ಒಂದು ಭಾಗ ಕೊಡುವುದನ್ನು ಯೋಚನೆಮಾಡಿ. ರೈತರಿಗೆ ಭೂಮಿ ಕೊಡುತ್ತೀರಿ ಅಧಿಕಾರಿಗಳಿಗೆ ಸಂಬಳ ಕೊಡುತ್ತೀರಿ ಮತ್ತೆ ದುಡಿಯತಕ್ಕ ಪ್ರೊಡಕ್ಷನ್ ಕೊಡತಕ್ಕ ಕಾರ್ಮಿಕರಿಗೆ ಏನು ಕೊಡುತ್ತೀರಿ? ಅವರ ಕ್ಷೇಮಾಭಿವೃದ್ಧಿಗೋಸ್ಕರ ಅವರ ಮಕ್ಕಳ ವಿದ್ಯಾಭ್ಯಾಸಕೋಸ್ಕರ ಅವರ ಪ್ರೊಡಕ್ಷನಲ್ಲಿ ಲಾಭ ಒದಗಿಸಿ ಕೊಡುತ್ತೀರಾ? ಇಷ್ಟು ಅನುಕೂಲ ಮಾಡಿಕೊಡದೆ ನೀವು ಅವರನ್ನು ದುಡಿಯಬೇಕೆಂದು ಬರೀ ; ಕಾರ್ಖಾನೆಯ ಯಂತ್ರಗಳ ಹಾಗೆ ಕಾರ್ಮಿಕರು ದುಡಿಯುವುದು ಕಷ್ಟವಾಗುತ್ತದೆ. ಇಲಾಖೆಯವರಿಗೆ ಗೊತ್ತಿಲ್ಲವೆ ? ಅಲ್ಲಿ ಅನುಭವ ಇರತಕ್ಕ ವ್ಯಕ್ತಿ ಇಲ್ಲವೇ? ದಾವಣಗೆರೆ ಕಾಟನ್ ಮಿಲ್ಸ್ ನೋಡಿದ್ದೇನೆ, ಅಲ್ಲಿ ಕೆಳಗಡೆ ಲೇಬರ್ ಇನ್ಸ್‌ಪೆಕ್ಟರ್‌ರವರ ಆಫೀಸು ಇರುವುದು ನಾನು ಕೇಳುತ್ತೇನೆ ಅಲ್ಲಿ ಕಾರ್ಖಾನೆಯಲ್ಲಿ ಕಾರ್ಮಿಕರು ಎಷ್ಟುಗಂಟೆ ಕೆಲಸ ಮಾಡುತ್ತಾರೆಂದು ಹೇಳುವುದಕ್ಕೆ ಸಾಧ್ಯವೇ ? ಹೆಣ್ಣು ಮಕ್ಕಳನ್ನು ನೋಡಿದ್ದೀರಾ ನೀವು ? ಟಿ. ಬಿ. ಇದ್ದ ಹಾಗೆ ಇದ್ದಾರೆ ಅವರು 10, 12 ಗಂಟೆ ಕಾಲ ಕಾರ್ಖಾನೆಯಲ್ಲಿ ಕೆಲಸ ಮಾಡಬೇಕು ಫ್ಯಾಕ್ಟರಿ ಇನ್ಸ್‌ಪೆಕ್ಟರ್ ಕಾರ್ಖಾನೆಯ ಗೇಟ್‌ಬಾಗಿಲಲ್ಲಿ ಇದ್ದಾರೆ. ಫ್ಯಾಕ್ಟರಿ ಇನ್ಸ್‌ಪೆಕ್ಟರ್‌ರವರಿಗೆ ದೇಶದ ಜನತೆಯ ಮೇಲೆ ಯಾತಕ್ಕೆ ಮಮತೆ ಇಲ್ಲ ? ನೀವು ಬೇರೆ ದೇಶದಿಂದ ಹುಟ್ಟಿ ಬಂದವರೇ ? ಅಥವಾ ಇವರು ಬೇರೆ ಯಾರಿಗೋಸ್ಕರ ದುಡಿಯುತ್ತಾರೆ ? ಕಾನೂನಿನಲ್ಲಿರತಕ್ಕಂಥ ರಕ್ಷಣೆಯನ್ನು ಕಾರ್ಮಿಕರಿಗೆ ಸರಿಯಾಗಿ ಒದಗಿಸದೇ ಮಾಲೀಕರೊಬ್ಬರನ್ನೇ ನೀವು ರಕ್ಷಣೆ ಮಾಡುವುದಕ್ಕೆ ಹೋಗುವುದು ಸರಿಯಲ್ಲ. ಇದಕ್ಕಾಗಿ ನಾವು ನಿಮಗೆ 2 ಕೋಟಿ ರೂಪಾಯಿ ನಿಮಗೆ ಕೊಡಬೇಕೇ ? ನೀವು ಮಾಡುವ ತಪ್ಪನ್ನು ಕೂಲಿಗಾರರ ಮೇಲೆ ಹೊರಿಸುತ್ತೀರಾ? ಸುಮ್ಮನಿದ್ದವರನ್ನು ಎಬ್ಬಿಸಿ ಚಳುವಳಿ ಮಾಡಿಸುವವರು ನೀವೇ, ಕೇಸ್ ಹಾಕಿಸುವವರು ನೀವೇ, ಕೊನೆಗೆ ತದ್ವಿರುದ್ಧವಾಗಿ ಆಪಾದನೆಗಳನ್ನು ಹೊರಿಸಿ ಮಾಲೀಕರನ್ನು ಬಲಪಡಿಸುವವರೂ ನೀವೇ. ನೀವು ಅವರಿಗೆ ಹೆದರಿರುವುದರಿಂದ ಕಳೆದ ವರ್ಷ ಇದರಲ್ಲಿ 13 ಕೋಟಿ ರೂಪಾಯಿ ಲುಕ್ಸಾನು ಆಗಿದೆ. ಇದಕ್ಕೋಸ್ಕರ ಮತ್ತೆ ನಿಮಗೆ 2 ಕೋಟಿ ರೂಪಾಯಿ ಕೊಡಬೇಕೇ ಎಂದು ನಾವು ಪ್ರಶ್ನೆ ಮಾಡಬೇಕಾಗಿದೆ.

ಮಾನ್ಯ ಅಧ್ಯಕ್ಷರೇ, ಇನ್ನು ಹೆಣ್ಣುಮಕ್ಕಳು ಕೆಲಸ ಮಾಡುವಂಥ ಕಾರ್ಖಾನೆಯಲ್ಲಿ ಅವರಿಗೆ ಏನೂ ಭದ್ರತೆ ಇಲ್ಲ. ಉದಾಹರಣೆ ಹೇಳುವುದಾದರೆ ಮಂಗಾರಾಂ ಬಿಸ್ಕತ್ ಫ್ಯಾಕ್ಟರಿಯಲ್ಲಿ 103 ಜನ ಹೆಣ್ಣುಮಕ್ಕಳು ಕೆಲಸ ಮಾಡುತ್ತಿದ್ದಾರೆ. ಅವರು ಯೂನಿಯನ್‌ಗೆ ಸೇರುವುದಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ಏತಕ್ಕೆಂದರೆ ಅಲ್ಲಿರುವ ಕೂಲಿಗಾರರಿಗೆ ಇನ್ನೂ ಅವರ ಕೆಲಸವನ್ನು ಭದ್ರತೆ ಮಾಡಿಕೊಟ್ಟಿಲ್ಲ. ಆದುದರಿಂದ ನಿಮ್ಮ ಲೇಬರ್ ಡಿಪಾರ್ಟ್‌ಮೆಂಟಿನವರು ಅವರಿಗೆ ರಕ್ಷಣೆ ಕೊಡಬೇಕು.

ಇನ್ನು ಮಿನರ್ವಾ ಮಿಲ್ ಮತ್ತು ಶ್ಯಾಮರಾವ್ ಅಂಡ್ ಕಂಪನಿ ಬಗ್ಗೆ ಹೇಳುತ್ತೇನೆ. ಇದರ ಬಗ್ಗೆ ಕಾರಣಗಳನ್ನು ಕೊಟ್ಟು ಅಸಿಸ್ಟೆಂಟ್ ಲೇಬರ್ ಕಮೀಷನರ್‌ಗೆ ಮತ್ತು ಡೆಪ್ಯೂಟಿ ಲೇಬರ್ ಕಮೀಷನರಿಗೆ ಕಾಗದವನ್ನು ಬರೆದಿದ್ದೆ. ಲೇಬರ್ ಡಿಪಾರ್ಟ್‌ಮೆಂಟಿನವರು ಅಲ್ಲಿರುವ ಕಾರ್ಮಿಕರುಗಳನ್ನು ಮಾಲೀಕರ ಗುಲಾಮರನ್ನಾಗಿ ಮಾಡಿದ್ದಾರೆ. ಇದನ್ನು ಯಾವುದೇ ಒಬ್ಬ ಮಂತ್ರಿಯಿಂದಾಗಲಿ ಸರಿಪಡಿಸುವುದಕ್ಕೆ ಆಗುತ್ತದೆಯೋ. ನೀವು ಈ ಬಗ್ಗೆ ಮನಸ್ಸು ಮಾಡಿ ಸರಿಯಾದ ಧೋರಣೆಯನ್ನು ತಾಳಬೇಕು. ಆದರೆ ಈ ಇಡೀ ಲೇಬರ್ ಇಲಾಖೆ ಕಾರ್ಮಿಕರ ಹಿತರಕ್ಷಣೆಯನ್ನು ಮಾಡದೆ ಮಾಲೀಕರಿಗೆ ಸಹಾಯ ಮಾಡುವುದಾದರೆ ಈ ಇಲಾಖೆಯನ್ನು ಮಾಲೀಕರ ಏಜೆಂಟರು ಎಂದು ಕರೆಯುವುದರಲ್ಲಿ ತಪ್ಪು ಏನು ಇದೆ ಎಂದು ನಾನು ಕೇಳುತ್ತೇನೆ. ಈ ಇಲಾಖೆಯಲ್ಲಿ ಬಹಳ ಬುದ್ಧಿವಂತರು ಇದ್ದಾರೆ. ಸೆಕ್ಷನ್ 35 ರ ಪ್ರಕಾರ ಅವಾರ್ಡ್‌ನ್ನು ಜಾರಿಗೆ ಕೊಡದೇ ಹೋದರೆ ಆ ಪ್ರೊಪ್ರೈಟರ್ ಮೇಲೆ ಈ ಬಗ್ಗೆ ಕೇಸು ಹಾಕುವವರು ನೀವೇ ? ನಂತರ ಮಾಲೀಕರಿಗೆ ಸಹಾಯ ಮಾಡುವುದಕ್ಕೋಸ್ಕರ ಆ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳುವ ಹಾಗೆ ಮಾಡುವವರು ನೀವೇ. ಇದರಲ್ಲಿ ಏನು ಅರ್ಥ ಇದೆ? ಈ ಕೆಲಸವನ್ನು ನಿಮ್ಮ ಇಲಾಖೆಯವರು ಮಾಡಿಲ್ಲ ಎಂದು ಹೇಳಿಬಿಡಿ, ನೋಡೋಣ. ಈಗ ಮೈಸೂರು ಮಿನರ್ವಾ ಮಿಲ್ ವಿಚಾರ ತೆಗೆದುಕೊಂಡರೆ ಸುಮಾರು ಒಂದು ಲಕ್ಷ ರೂಪಾಯಿ ಕಾಂಪನ್ಸೇಷನ್ ಕೊಡಬೇಕಾಗುತ್ತದೆ. ಇದರ ಬಗ್ಗೆ ಒಂದು ಒಪ್ಪಂದ ಮಾಡಿಕೊಂಡಿದ್ದರೂ ಕೂಡ ನೀವು ಆ ಒಪ್ಪಂದವನ್ನು ಜಾರಿಗೆ ತರಲಿಲ್ಲ. ಅಧಿಕಾರಿಗಳು ಹೋಗಿ ಈ ಬಗ್ಗೆ ಏನಾಯಿತು ಎಂದು ಪರಿಷ್ಕರಣೆ ಮಾಡಲಿ. ಈ ಬಗ್ಗೆ ಮಾಲೀಕರನ್ನು ಒಪ್ಪಿಸುವ ಹಾಗೆ ಡೆಪ್ಯೂಟಿ ಲೇಬರ್ ಕಮೀಷನರ್ ಹೋಗಿ ಪ್ರಯತ್ನ ಪಡಲಿಲ್ಲವೇ ? ಇಂಥಾ ವಿಷಯಗಳು ತಮ್ಮ ಗಮನಕ್ಕೆ ಬಂತೋ ಇಲ್ಲವೋ ಗೊತ್ತಿಲ್ಲ. ಕಳೆದ ವರ್ಷ ಮೈಸೂರು ಮಿನರ್ವಾ ಮಿಲ್ ಲಾಕ್ ಔಟ್ ಆದಾಗ ಅವರ ಕಾಂಪನ್ಸೇಷನ್ 2 ಲಕ್ಷ ರೂಪಾಯಿ ಆಗುತ್ತದೆ ಎಂದು ರಿಪೋರ್ಟ್ ಕೊಟ್ಟಿದ್ದಾರೆ. ಇಷ್ಟು ವರ್ಷವಾದರೂ ಆ ಕೇಸುಗಳು ತೀರ್ಮಾನವಾಗಿಲ್ಲ. ಆ ಕೇಸುಗಳು ಪೆಂಡಿಂಗ್‌ನಲ್ಲೇ ಇವೆ. ಈ ಬಗ್ಗೆ ತಾವು ಒಂದು ವರ್ಡ್ ಕೂಡ ಹೇಳದೇ ಇರುವುದು ತಮಗೆ ಭೂಷಣವಲ್ಲ.

ಇನ್ನು 1966 ನೇ ಇಸವಿಯಲ್ಲಿ ಇದೇ ರೀತಿ ಆದಾಗ ಲೇಬರ್ ಕೋರ್ಟಿನಲ್ಲಿ ಈ ಕೇಸಸ್‌ಗಳನ್ನು ತೆಗೆದುಕೊಂಡು ಹೋಗಿದ್ದರೂ ಕೂಡ ಅವಾಗಿನಿಂದಲೂ ಅವರಿಗೆ ಕಾಂಪನ್ಸೇಷನ್ ಕೊಡದೆ ತಿಂಗಳುಗಟ್ಟಲೆ ಆ ಕೇಸುಗಳನ್ನು ಪೋಸ್ಟ್‌ಪೋನ್ ಮಾಡುತ್ತಿದ್ದಾರೆ ಇದು ನ್ಯಾಯವೇ? ನಿಮಗೆ ಅಧಿಕಾರ ಇದೆಯೆಂದು ಏನು ಬೇಕಾದರೂ ನಡೆಸಬಹುದೇ? ಈ ಬಗ್ಗೆ ಸುಪ್ರೀಂಕೋರ್ಟ್ ತೀರ್ಮಾನ ಬೇರೆ ಇದೆ. ಆ ಬಗ್ಗೆ ನಾನು ಕೇಳುತ್ತಾ ಇಲ್ಲ. ಈ ಲೇಬರ್ ಇಲಾಖೆ ಈ ರೀತಿಯಾಗಿ ಕೆಲಸ ಮಾಡುತ್ತಾ ಇದೆ ಎನ್ನುವುದಕ್ಕೆ ಉದಾಹರಣೆ ಕೊಟ್ಟೆ. ಇಂಥಾದ್ದಕ್ಕೆ ನಾವು ಏತಕ್ಕೆ 2 ಕೋಟಿ ರೂಪಾಯಿ ಕೊಡಬೇಕು? ಅವರು ಮಾಲೀಕರಿಗೆ ಸಂಪಾದನೆ ಮಾಡಿ ಕೊಡುವುದಕ್ಕೋಸ್ಕರ ನಾವು ಈ ದುಡ್ಡು ಕೊಡಬೇಕೇ? 1972ನೇ ಇಸವಿಯಲ್ಲಿ ಲಾಕ್ ಔಟ್ ಆಗಿದ್ದ ಮಿಲ್ಲುಗಳ ಬಗ್ಗೆ ಕೇಸುಗಳನ್ನು ಹಾಕಿದ್ದರೂ ಕೂಡ ಮಾಲೀಕರ ಕೈವಾಡದಿಂದ ಇವರು ಸುಮ್ಮನೆ

ಇದ್ದಾರೆ. ಆದರೆ ಈವೊತ್ತಿನ ದಿವಸ ಬಿಜಾಪುರದಲ್ಲಿ ನೇಕಾರರಿಗೆ ದಾರ ಇಲ್ಲ ಎಂದು ಈ ಸಭೆಯಲ್ಲಿ ಅವರು ಕೂಗಾಟ ಮಾಡಿದ್ದಾರೆ. ಆವೊತ್ತಿನ ದಿವಸ ಆ ಟೆಕ್ಸ್ಟೈಲ್ ಮಿಲ್ ತಿಂಗಳುಗಟ್ಟಲೆ ಮುಚ್ಚಿದಾಗ ಅದನ್ನು ಕೇಳುವವರೇ ಇರಲಿಲ್ಲ. ಈ ಫ್ಯಾಕ್ಟರಿಯನ್ನು ಮುಚ್ಚಿಸಿಬಿಟ್ಟು ನಿಮ್ಮ ಸಂಬಳವನ್ನು ತೆಗೆದುಕೊಳ್ಳುವುದು ನ್ಯಾಯವೇ ? ಹಾಗಿದ್ದ ಪಕ್ಷದಲ್ಲಿ ದೇಶದಲ್ಲಿ ನಾವು ಇವರಿಗೆ ಏತಕ್ಕಾಗಿ ಸಂಬಳ ಕೊಡಬೇಕು? ಆದರೆ ನಾನು ಹೇಳುತ್ತೇನೆ. ಅದೇನೇ ಇರಲಿ ಕೂಲಿಗಾರರು ತೀರಾ ಬಡವರು, ಆ ಜನಾಂಗದವರಿಗೆ ಒಳ್ಳೇದು ಮಾಡುವುದಕ್ಕೆ ಒಂದು ಯೋಜನೆ ಮಾಡಿ. ಈವಾಗ ಇದಕ್ಕೆ ನಾವು 2 ಕೋಟಿ ರೂಪಾಯಿ ಕೊಡುವುದಕ್ಕೆ ಒಪ್ಪಿಕೊಂಡರೂ ಕೂಡ ಆ ಬಡವರಿಗೆ ಒಳ್ಳೇದು ಮಾಡುವ ಒಂದು ಯೋಜನೆ ಹಾಕಿಕೊಳ್ಳಿ ಎಂಬ ಮತ್ತೊಮ್ಮೆ ನಾನು ಒತ್ತಿ ಹೇಳುತ್ತೇನೆ. ಈ ಬಗ್ಗೆ ನಾನು 2 ಗಂಟೆ ಮಾತನಾಡಲು ಅವಕಾಶ ಬೇಕಾಗಿತ್ತು. ಆದರೆ ಕಾಲಾವಕಾಶ ಹೆಚ್ಚಿಗೆ ಇಲ್ಲದೇ ಇರುವುದರಿಂದ ಈ ಬಗ್ಗೆ ಎಲ್ಲ ವಿಷಯಗಳನ್ನೂ ಒಳಗೊಂಡಂತೆ ಒಂದು ಸ್ಟೇಟ್‌ಮೆಂಟ್‌ನ್ನು ತಮಗೆ ಕಳುಹಿಸಿಕೊಡುತ್ತೇನೆ. ದಯವಿಟ್ಟು ಮಾನ್ಯ ಮಂತ್ರಿಗಳು ರಿಪ್ಲೈ ಮಾಡುವಾಗ ಆ ಸ್ಟೇಟ್‌ಮೆಂಟ್‌ನಲ್ಲಿರುವ ವಿಷಯಗಳಿಗೆ ಒಂದೊಂದಕ್ಕೂ ಉತ್ತರ ಕೊಡಬೇಕು ಎಂದು ಹೇಳಿ ಈ ಸ್ಟೇಟ್‌ಮೆಂಟನ್ನು ತಮಗೆ ಕಳುಹಿಸುತ್ತೇನೆ.

ಇನ್ನೊಂದು ವಿಷಯ ಲೇಬರ್ ಇಲಾಖೆ ಆಡಳಿತದ ಬಗ್ಗೆ ಹೇಳುತ್ತೇನೆ. ಈಗ ಕೈಗಾರಿಕಾ ವಿವಾದವನ್ನು ತೀರ್ಮಾನ ಮಾಡುವುದಕ್ಕೆ ಇದಕ್ಕೆ ಕೊಟ್ಟಿರುವ ಹಣ 2 ಕೋಟಿ ರೂಪಾಯಿಗಳು ತೀರಾ ಕಡಿಮೆ. ಇದು ಸಾಲದು. 1966 ನೇ ಇಸವಿಯಿಂದಲೂ ಕೂಡ ಕೇಸುಗಳು ಪೆಂಡಿಂಗ್ ಇವೆ. ತಿಂಗಳುಗಟ್ಟಲೆ ಆ ಕೇಸುಗಳನ್ನು ಅಡ್ಜರ್ನ್‌ಮೆಂಟ್ ಮಾಡುತ್ತಿದ್ದಾರೆ. ಈಗ ಇದಕ್ಕಾಗಿ ಎರಡು ಲೇಬರ್ ಕೋರ್ಟುಗಳು ಇವೆ. ಇದು ಸಾಲದು. ಇದುವರೆಗೆ ರೆಫರ್ ಆಗಿರುವ ಕೇಸುಗಳನ್ನು ಒಂದೆರಡು ತಿಂಗಳಿನಲ್ಲಿ ತೀರ್ಮಾನವಾಗುವ ಹಾಗೆ ಹೇಳಬೇಕು. ಇದನ್ನು ತಿಂಗಳುಗಟ್ಟಲೆ ಮುಂದುವರೆಸಿಕೊಂಡು ಹೋದರೆ ಗುಂಪುಗಳು ಹುಟ್ಟಿ ಮಾಲೀಕರು ಕೈವಾಡ ಮಾಡಲು ಸಹಾಯವಾಗುತ್ತದೆ. ಇದರಿಂದ ಬಡವರ ಮತ್ತು ಕೂಲಿಗಾರರ ಗತಿ ಏನಾಗುತ್ತದೆ ಎನ್ನುವುದನ್ನು ತಿಳಿಯಬೇಕು. ಈ ರೀತಿ ಮಾಡಿ ಕಾರ್ಮಿಕರ ತಿಂಗಳುಗಟ್ಟಲೆ ಸಂಬಳ ಇಲ್ಲದೆ ಕೋರ್ಟಿಗೆ ಅಲೆಯುವುದು ಒಳ್ಳೆಯದೇ ? ಈವಾಗ ನಮ್ಮ ಸರ್ಕಾರ ಈ ಕಾರ್ಮಿಕರ ಅಭಿವೃದ್ಧಿಗೋಸ್ಕರ, ಇವರ ಕ್ಷೇಮಾಭಿವೃದ್ಧಿಗೋಸ್ಕರ ಇವರ ಅವಶ್ಯಕತೆ ಏನು ಇದೆ ಎನ್ನುವುದನ್ನು ನೋಡಬೇಕು. ಪೇಮೆಂಟ್ ಆಫ್ ವೇಜಸ್ ಆಕ್ಟ್‌ನಲ್ಲಿ ಎರಡು ತಿಂಗಳಿನಲ್ಲಿ ಈ ಕೇಸಸ್‌ಗಳನ್ನು ಡಿಸ್‌ಪೋಸ್ ಮಾಡಬೇಕು ಎಂದು ಇದೆ. ಈವಾಗ ಆ ರೀತಿ ಡಿಸ್‌ಪೋಸ್ ಆಗುತ್ತಾ ಇಲ್ಲ. ಕಳೆದ 13 ತಿಂಗಳಿನಿಂದಲೂ ಕೂಡ ಆ ರೀತಿ ಡಿಸ್‌ಪೋಸ್ ಆಗಿಲ್ಲಾ. ಈ ಬಗ್ಗೆ ತಮ್ಮಿಂದ ನಮಗ ಉತ್ತರ ಸಿಗಲೇ ಬೇಕು.

ಇನ್ನು ಕೊನೆಯದಾಗಿ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ 15 ವರ್ಷದಿಂದಲೂ ಇದೆ. ಆ ಬಗ್ಗೆ ಒಂದೇ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇದರಲ್ಲಿ ಯಾರು ಯಾರು ಕಮಿಟಿ ಮೆಂಬರ್ಸ್ ಇದ್ದಾರೆ ಎನ್ನುವುದು ತಮಗೂ ಗೊತ್ತಿದೆ. ಅಲ್ಲಿ ಮಿಷನಿಸ್ಟ್ ಪೋಸ್ಟ್‌ಗೆ 25–30 ಸೀಟುಗಳು ಇದ್ದರೆ 7–8 ಸಾವಿರ ಅರ್ಜಿಗಳು ಬಂದರೆ ಇದರ ಅರ್ಥವೇನು ? ಆ ವಿಷಯದಲ್ಲಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಇಂಡಸ್ಟ್ರಿಯಲ್ ಇನ್ಸ್ಟಿಟ್ಯೂಟ್ ಇನ್ನೂ ಹೆಚ್ಚು ಮಾಡಬೇಕು ಎಂದು ಹೇಳುತ್ತೇನೆ. ಹಿಂದಿನ ಸರ್ಕಾರ ಇದನ್ನು 7 ಮೈಲಿಯಿಂದಾಚೆ ಹಾಕಿದ್ದಾರೆ. ಒಬ್ಬ ಹುಡುಗ ರಾಜಾಜಿನಗರದಿಂದಲೋ ಅಥವಾ ಶ್ರೀರಾಮಪುರದಿಂದಲೋ ಅವನು 7 ಮೈಲಿ ಸೈಕಲ್‌ನಲ್ಲಿ ಅಲ್ಲಿಗೆ ಹೋಗಬೇಕು ಎಂದರೆ ಎಷ್ಟು ಹೊತ್ತು ಹಿಡಿಯುತ್ತದೆ ನೋಡಿ. ಇದು ಬಹಳ ದೂರದಲ್ಲಿರುವುದರಿಂದ ಇದನ್ನು ನಗರದ ಮಧ್ಯದಲ್ಲಿ ಹಾಕಬೇಕು ಎಂದು ಹೇಳುತ್ತೇನೆ. ಮತ್ತು ಈ ಬಗ್ಗೆ ನಾನು ಇನ್ನೊಂದು ಸಲಹೆ ಕೊಡುವುದು

ಏನೆಂದರೆ ಪ್ರತಿ ಜಿಲ್ಲೆಗೂ 25–30 ಸಾವಿರ ಜನ ಇರತಕ್ಕಂಥ ಪ್ರದೇಶಕ್ಕೆ ಒಂದು ಸಣ್ಣ ಸಣ್ಣ ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್ಸ್ಟಿಟ್ಯೂಟ್‌ನ್ನು ತೆಗೆಯಬೇಕೆಂದು ಹೇಳುತ್ತೇನೆ. ಈಗಲೂ ಅದಕ್ಕೆ ಪ್ರಯತ್ನ ಮಾಡಬೇಕು. ಮೆಕ್ಯಾನಿಕ್ಸ್, ಫಿಟ್ಟರ್ಸ್, ಟರ್ನರ್ಸ್, ಡ್ರಿಲರ್ಸ್ ತಯಾರು ಮಾಡಬೇಕು. ಹಾಗೆ ಮಾಡಿದರೆ ಅವರಿಗೆಲ್ಲ ಕೆಲಸ ದೊರಕುತ್ತದೆ. ಬೊಂಬಾಯಿ, ಕಲ್ಕತ್ತ ನಗರಗಳಿಗೆ ಹೋಗಿ ಕಾರ್ಖಾನೆ ತೆರೆಯಿರಿ ಎಂದು ಹೇಳುತ್ತೀರಿ. ಅವರು ಕಾರ್ಖಾನೆಗಳನ್ನು ತೆಗೆದರೂ ಇಲ್ಲಿರುವರಿಗೆ ತರಪೇತಿ ಕೊಟ್ಟು ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕು. ಇಂಥ ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಹೆಚ್ಚಿನ ವ್ಯವಸ್ಥೆ ಮಾಡಬೇಕು. ಯಾವ ಸರ್ಕಾರ ಅಧಿಕಾರಕ್ಕೆ ಬಂದರೂ ಅದೇ ರೀತಿ ಎನ್ನುವ ಭಾವನೆ ಬೆಳೆಯಲಿಕ್ಕೆ ನಿಮ್ಮ ಅಧಿಕಾರಿಗಳು ಇಂದು ಅವಕಾಶ ಕೊಟ್ಟಿದ್ದಾರೆ. ದೇಶದ ದೃಷ್ಟಿಯಿಂದ ಮತ್ತು ಕಾರ್ಮಿಕರ ದೃಷ್ಟಿಯಿಂದ ನೋಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER : The House will now rise and meet tomorrow at 9 a.m.

The House adjourned at Forty Minutes past Six of the Clock to meet again at Nine of the Clcok on Saturday the 28th April 1973.

MYSORE LEGISLATIVE ASSEMBLY

Saturday, 28th April 1973 Vaishaka 8, 1895 S.E.

The House met in the Assembly Chamber, Vidhana Soudha, at Nine of the Clock.

Madam SPEAKER (Smt. K. S. NAGARATHNAMMA) in the Chair.

BUDGET ESTIMATES FOR 1973-74

DEMANDS FOR GRANTS

Demand Nos. 4 and 26

(DEBATE Contd.)

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) :—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಕಾರ್ಮಿಕ ಮತ್ತು ಸಾರಿಗೆ ಇಲಾಖೆಯ ಬೇಡಿಕೆಯನ್ನು ಮಾನ್ಯ ಮಂತ್ರಿಗಳು ಇಟ್ಟಿರುವುದನ್ನು ನಾನು ವಿರೋಧಿಸಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೋದ ವರ್ಷ ಈ ಬೇಡಿಕೆಯನ್ನು ತಮ್ಮ ಮುಂದೆ ಇಟ್ಟಾಗ ಒಂದೆರಡು ಮಾತಿನಲ್ಲಿ ಮಾನ್ಯ ಮಂತ್ರಿಗಳನ್ನು ಶ್ಲಾಘಿಸಿ ಮಾತನಾಡಿದ್ದೆ. ಆಗ ಅನೇಕ ನ್ಯೂನತೆಗಳು ಇವೆ ಎಂದೂ ಸಹ ನಾನು ಹೇಳಿದ್ದೆ. ಕೈಗಾರಿಕಾ ಸಂಬಂಧದ ಬಗ್ಗೆ ಎಷ್ಟೋ ಕೆಲಸಗಳನ್ನು ಮಾಡಬೇಕಾಗಿದೆ, ಆದರೂ ಸಹ ಒಂದು ವಿಷಯವನ್ನು ನಾನು ಪ್ರಸ್ತಾಪ ಮಾಡಿ ಹಿಂದೆ ಇದ್ದಂಥ ಧೋರಣೆಗೂ, ಕಳೆದ ವರ್ಷದ ಧೋರಣೆಗೂ ಸ್ವಲ್ಪಮಟ್ಟಿಗೆ ವ್ಯತ್ಯಾಸವಿದೆಯೆಂದು ನಾನು ಹೇಳಿದ್ದೆ. ಕಾರ್ಮಿಕರ ಮತ್ತು ಮಾಲೀಕರ ಮಧ್ಯೆ ಬಂದಂಥ ವಾದವಿವಾದಗಳನ್ನು ಇತ್ಯರ್ಥ ಮಾಡಬೇಕಾದರೆ ಕೆಳಗಿನ ಮಟ್ಟದಲ್ಲಿ ಇತ್ಯರ್ಥವಾಗದಿದ್ದರೆ ಅಥವಾ ಮಾಲೀಕರಿಗೂ, ಕಾರ್ಮಿಕರಿಗೂ, ನೇರವಾಗಿ ಮಾತುಕತೆಯಾಗಿ ಇತ್ಯರ್ಥವಾಗದೆ ಹೋದರೆ ಜಟಿಲ ಸಮಸ್ಯೆಗಳು ಬಂದಾಗ ಮಾನ್ಯ ಮಂತ್ರಿಗಳು ಕರೆಸಿ ಮಾತನಾಡಿ ಚರ್ಚೆ ಮಾಡುವುದು ಯೋಗ್ಯ ಎನ್ನುವ ಒಳ್ಳೆಯ ಅಭಿಪ್ರಾಯವನ್ನು ನಾನು ಇಟ್ಟುಕೊಂಡಿದ್ದೆ. ಅದೇ ರೀತಿ ಹೋದ ಅವಧಿಯಲ್ಲಿ ಒಂದೆರಡು ಕೆಲಸಗಳನ್ನು ಈ ರೀತಿ ಮಾಡಿದ್ದರಿಂದ ಕೈಗಾರಿಕಾ ಒಪ್ಪಂದಗಳು ಆದುವು. ಆ ಸಂದರ್ಭದಲ್ಲಿ ತಾಳಿದ ಧೋರಣೆ ಸರಿ ಎಂದು ನಾನು ಅವರನ್ನು ಶ್ಲಾಘಿಸಿದ್ದೇನೆ. ಅದಾದನಂತರ ಈ ಅವಧಿಯಲ್ಲಿ ಅದೇ ಧೋರಣೆ ಮುಂದುವರಿಯುತ್ತಿದೆಯೋ, ಕೈಗಾರಿಕಾ ಸಂಬಂಧಗಳನ್ನು ಬೆಳೆಸುವುದಕ್ಕೆ ಪ್ರಯತ್ನ ನಡೆಯುತ್ತಿದೆಯೋ, ಅಥವಾ ಹೆಚ್ಚು ಹೆಚ್ಚು ಕೈಗಾರಿಕಾ ಅಶಾಂತಿಯ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಬಂದಿದೆಯೋ ಎನ್ನುವುದನ್ನು ಸ್ವಲ್ಪಮಟ್ಟಿಗೆ ಅವಲೋಕನ ಮಾಡಬೇಕಾಗಿದೆ. ಕಾರ್ಮಿಕರ ಬಗ್ಗೆ ಸರ್ಕಾರದ ಧೋರಣೆ ಮುಂದೆ ಹೋಗಿದೆಯೋ, ಹಿಂದೆ ಸರಿದಿದೆಯೋ ಎಂಬುದನ್ನು ಸ್ವಲ್ಪ ವಿಮರ್ಶೆ ಮಾಡಬೇಕಾಗಿದೆ. ನನ್ನ ಅಭಿಪ್ರಾಯದಲ್ಲಿ ಕಳೆದ ಒಂದು ವರ್ಷದಲ್ಲಿ ಎಷ್ಟು ದೂರ ಮುಂದುವರಿಯಬೇಕಾಗಿತ್ತೋ ಅಷ್ಟು ಮುಂದುವರಿಯದೆ ಹಿಂಜರಿದಿದ್ದೇವೆ. ಜನತೆಯ ಆಶೋತ್ತರಗಳನ್ನು

Asterisks indicate that remarks or speeches have not been revised by the member concerned.

ಈಡೇರಿಸುವಲ್ಲಿ ಕೆಲವು ಸರ್ಕಾರಗಳು ಹಿಂದೆ ಮುಂದೆ ಹೋಗುತ್ತವೆ. ಇಲ್ಲಿ ಏನಾಗಿದೆ ಎಂದರೆ, ಸ್ವಲ್ಪ ಹಿಂದಕ್ಕೆ ಹೋಗಿದ್ದಾರೆ ಎಂದು ನಾನು ಹೇಳಬೇಕಾಗಿದೆ. ಕೈಗಾರಿಕಾ ವಾದ ವಿವಾದಗಳನ್ನು ಇತ್ಯರ್ಥಮಾಡುವುದರೊಳಗೆ ಅವರು ಅಸಮರ್ಥತೆಯನ್ನು ಹೊಂದಿದ್ದಾರೆ ಮತ್ತು ಈ ಬಗ್ಗೆ ಅವರು ಎಷ್ಟು ದೂರ ಕೆಲಸ ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲ ಎಂದು ಮಾತ್ರ ಹೇಳಬೇಕಾಗಿದೆ. ಕಳೆದ ಅವಧಿಯಲ್ಲಿ ಸುಮಾರು 12–14 ಸೆಟ್ಲ್‌ಮೆಂಟ್‌ಗಳು ಆಗಿವೆ ಎನ್ನುವುದು ನನಗೆ ಗೊತ್ತು. ಹೊಸ ಲೇಬರ್ ಕಮಿಷನರ್ ಬಂದಮೇಲೆ ಒಳ್ಳೆಯ ಧೋರಣೆ ತಾಳಿದ್ದಾರೆ ಎಂದರೆ ತಪ್ಪಾಗಲಾರದು. ಇದರ ಬಗ್ಗೆ ಒಳ್ಳೆಯ ಮನೋಭಾವವನ್ನು ಇಟ್ಟು ಕೊಂಡಿದ್ದಾರೆ ಎಂದರೆ ತಪ್ಪಾಗಲಾರದು. ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಅದೇ ಸಮಯಕ್ಕೆ ಮೂಲಭೂತವಾದ ಧೋರಣೆಯಲ್ಲಿ ಹಿಂದೆ ಹೋಗಿದ್ದಾರೆ ಎನ್ನುವುದಕ್ಕೆ ಎರಡು ನಿದರ್ಶನಗಳನ್ನು ಕೊಡುತ್ತೇನೆ. ಮೊದಲನೆಯದು ಮೈಸೂರು ಮೆಷಿನರಿ ಮ್ಯಾನ್ಯುಫ್ಯಾಕ್ಚರಿಂಗ್ ಕೆಲಸಗಾರರ ವಿಷಯದೊಳಗೆ ಮಾನ್ಯ ಶ್ರೀ ತಾಮುಲು ಅವರು ಮಾತನಾಡಿದರು. ನಾನು ಕೂಡ ಇದನ್ನು ಒತ್ತಿ ಹೇಳಬೇಕಾಗಿದೆ. ಸುಮಾರು 15,000 ಜನ ಕಾರ್ಮಿಕರು ಎರಡು ತಿಂಗಳಿಂದ ಕೆಲಸವಿಲ್ಲದೆ ಅಲೆಯುತ್ತಿದ್ದಾರೆ ಮತ್ತು ವಿನಾಕಾರಣ ಅಲ್ಲಿನ ಮಾಲೀಕ ಕಾರ್ಮಿಕ ರೆಲ್ಲರನ್ನು ವಜಾ ಮಾಡಿದ್ದಾರೆ. ಪ್ರಶ್ನೆ ಏನೆಂದರೆ, ಏತಕ್ಕೋಸ್ಕರ ಹೀಗಾಗಿದೆ ಎಂದರೆ, ಆ ಮಾಲೀಕ ಸಚಿವರ ಮುಂದೆ ಒಪ್ಪಂದ ಮಾಡಿಕೊಂಡು ಆ ಒಪ್ಪಂದವನ್ನು ಜಾರಿಗೆ ತೆಗೆದು ಕೊಂಡು ಬಂದಿಲ್ಲ. ಅವನನ್ನು ಇಲಾಖೆಯವರಿಂದ ಹದ್ದುಬಸ್ತಿಗೆ ತರುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಮಂತ್ರಿಗಳಿಗೂ ಅದು ಸಾಧ್ಯವಾಗಿಲ್ಲ. ನನಗೆ ತಿಳಿದಮಟ್ಟಿಗೆ ಈ ಮಾಲೀಕ ಸರ್ಕಾರಕ್ಕೆ ಮೋಸಮಾಡಿ, ಜನಗಳಿಗೆ ಮೋಸ ಮಾಡುವವನು, ಕಾರ್ಮಿಕರಿಗೆ ಮೋಸ ಮಾಡುವವನು ಎಂಬುದಕ್ಕೆ ಎರಡು ಅಂಶಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದು ಎಲ್ಲರಿಗೂ ಗೊತ್ತಿದೆ. ಅವನು ಸರ್ಕಾರಕ್ಕೆ ಸೇಲ್ಸ್ ಟ್ಯಾಕ್ಸ್ ಕೊಡಬೇಕಾದುದು 2,77,293 ರೂಪಾಯಿ, 4–1–1971 ರವರೆಗೆ ಕಾರ್ಮಿಕರಿಗೆ ಕೊಡಬೇಕಾದಂಥ ಪ್ರಾವಿಡೆಂಟ್ ಫಂಡ್‌ಅನ್ನು ನುಂಗಿ ಹಾಕಿರುವ ಹಣ 45,932 ರೂಪಾಯಿಗಳು. ಇ. ಎಸ್. ಐ. ಫಂಡ್ ಕೊಡವೆ ಇರುವುದು 7,000 ರೂಪಾಯಿಗಳು. ಕಾರ್ಮಿಕರಿಗೆ ಕೊಡಬೇಕಾದ ಮನೆಬಾಡಿಗೆ ನುಂಗಿ ಹಾಕಿರುವುದು 17,500 ರೂಪಾಯಿ, ಮತ್ತು ಇನ್‌ಕಂ ಟ್ಯಾಕ್ಸ್‌ಅನ್ನು ಯಾವ ನೌಕರರು ಕೊಟ್ಟಿದ್ದಾರೋ ಅದನ್ನು ಸರ್ಕಾರಕ್ಕೆ ಪಾವತಿ ಮಾಡದೆ ಇರುವ ಹಣ 18,600 ರೂಪಾಯಿಗಳು. ಇಷ್ಟನ್ನು ಒಬ್ಬ ಮಾಲೀಕ ಬೆಂಗಳೂರು ನಗರದೊಳಗೆ ನಿಮ್ಮ ಕಣ್ಣು ಎದುರಿಗೇ ಮಾಡಿದ್ದಾನೆ ಎನ್ನುವುದು ಗೊತ್ತಿದ್ದರೂ ಸರ್ಕಾರದವರು ಈತನ ಮೇಲೆ ಏನೂ ಪರಿಣಾಮಕಾರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ಮಂತ್ರಿಗಳ ಹತ್ತಿರ ಮಾಲೀಕ ಬಂದು ವಿವಾದವನ್ನು ಇತ್ಯರ್ಥ ಮಾಡಿ ಕೊಳ್ಳುವುದಕ್ಕೆ ತಯಾರಾಗಿಲ್ಲ. ಇವನ ಕತ್ತುಪಟ್ಟಿ ಹಿಡಿಯುವುದಕ್ಕೆ ಸರ್ಕಾರಕ್ಕೆ ಅಧಿಕಾರ ವಿಲ್ಲವೇ? ಕೈಗಾರಿಕಾ ಮಂತ್ರಿಗಳಿಗೆ ಅಧಿಕಾರವಿಲ್ಲವೇ ? ಮುಖ್ಯಮಂತ್ರಿಗಳಿಗೆ ಅಧಿಕಾರವಿಲ್ಲವೇ ? ಹಣಕಾಸಿನ ಮಂತ್ರಿಗಳಿಗೆ ದುಡ್ಡು ಬರಬೇಕು, ಅವರಿಗೆ ಅಧಿಕಾರವಿಲ್ಲವೇ ? ಈ ಒಂದು ಕೆಲಸ ಮಾತ್ರ ಮಾಡಿದರು. ಕೇಸ್ ಹಾಕಿದರು, ಪೋಲೀಸರು ಕರೆದುಕೊಂಡು ಹೋದರು, ಸ್ಟೇಷನ್‌ನಲ್ಲಿ ಇವರಿಗೆ ಕಾಫಿ ತಿಂಡಿ ಕೊಡಿಸಿದಮೇಲೆ ಮನೆಗೆ ಕಳುಹಿಸಿ ಬಿಟ್ಟರು. ಹೀಗೆ ಆದರೆ ಕೈಗಾರಿಕಾ ಸಂಬಂಧ ಹೇಗೆ ಬೆಳೆಯುವುದಕ್ಕೆ ಸಾಧ್ಯ ? ನಮಗೆ ಅನುಮಾನ ಬರುತ್ತದೆ. ವಾದವಿವಾದಗಳನ್ನು ಇತ್ಯರ್ಥ ಮಾಡುವುದಾದರೂ ಯಾವ ರೀತಿ ? ನನಗೆ ತಿಳಿದಮಟ್ಟಿಗೆ ಹೇಳುತ್ತಿದ್ದೇನೆ.

ಜಬರದಸ್ತು ಮಾಡಿ ಅವರು ಮಾಡಬೇಕಾಗಿದ್ದುದು ಅವರು ಮಾಡದಿದ್ದರೆ ಚೀಫ್ ಮಿನಿಸ್ಟರ್‌ರವರು ಮಾಡಬೇಕಾಗಿತ್ತು. ಈ ಟ್ರಾನ್ಸ್‌ಫರ್ ವಿವಾದ ಬಗ್ಗೆ ಎಡ್ವರ್ಡ್ ರೋಡಿ ನಲ್ಲಿರುವ ಕಾಂಗ್ರೆಸ್ ಆಫೀಸಿನಲ್ಲಿ ಚರ್ಚೆ ನಡೆಯಿತು. ಅಲ್ಲಿ ಚರ್ಚೆ ನಡೆದು ಅಲ್ಲೂ ಕೂಡ

ಇತ್ಯರ್ಥವಾಗಲಿಲ್ಲ. ನನ್ನ ಮೂಲಭೂತ ಅಭಿಪ್ರಾಯ ಏನು ಎಂದರೆ ಕಾಂಗ್ರೆಸ್ ಪಾರ್ಟಿ, ಕಮ್ಯುನಿಸ್ಟ್ ಪಾರ್ಟಿ ಎಂದು ಮಾಲೀಕನ ಜೊತೆಗೆ ಚರ್ಚೆ ಮಾಡುವುದು ಅಲ್ಲ. ತಾವು ಇಲ್ಲಿ ಕುಳಿತುಕೊಂಡು ಕಛೇರಿಗೆ ಕರೆಸಿ ಸರ್ಕಾರ ಅಧಿಕಾರವನ್ನು ಉಪಯೋಗ ಮಾಡಿ ಮಂತ್ರಿಗಳು ಮಾಡಿದ ಒಪ್ಪಂದವನ್ನು ಜಾರಿಗೆ ತರುವ ಜವಾಬ್ದಾರಿ ಇದೆ, ಅದರಲ್ಲಿ ಕರ್ತವ್ಯ ಪಾಲನೆ ಮಾಡಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ರಾಜಾಜಿನಗರ ಕೋ–ಆಪರೇಟಿವ್ ಸೊಸೈಟಿಯ ವಿಷಯ. ಅಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆ ಸೊಸೈಟಿಯ ಸೆಕ್ರೆಟರಿ ಯಾರಪ್ಪ ಎಂದರೆ ಸರ್ಕಾರಿ ಅಧಿಕಾರಿ. ಸೊಸೈಟಿಯ ಆಕ್ಟ್ ವಿರುದ್ಧ, ಸರ್ಕಾರದ ಕಾನೂನು ವಿರುದ್ಧ ಆ ಅಧಿಕಾರಿ ಸೆಕ್ರೆಟರಿ ಆಗಿದ್ದಾನೆ. ಆ ಅಧಿಕಾರಿಯನ್ನು ತೆಗೆಯುವ ಛಾತಿ ಸರ್ಕಾರಕ್ಕೆ ಇಲ್ಲ. ಈ ಕಾರ್ಮಿಕರ ಪ್ರಶ್ನೆ ಇತ್ಯರ್ಥ ಮಾಡಬೇಕು. ಇಲ್ಲದಿದ್ದರೆ ಕೈಗಾರಿಕೆಗಳು ಹೇಗೆ ಬೆಳೆಯುವುದಕ್ಕೆ ಸಾಧ್ಯ? ಇನ್ನು ಮೂರನೆಯ ನಿದರ್ಶನವನ್ನು ಕೊಡಬೇಕೆಂದರೆ ವಾಟರ್ ಸಪ್ಲೈ ಬೋರ್ಡ್ ಮತ್ತು ಕೈಗಾರಿಕಾ ಸಂಬಂಧ, charity begins at home ಎಂದು ಹೇಳುತ್ತಾರೆ. ನಮ್ಮ ಸರ್ಕಾರದ ಇಲಾಖೆ ಯಾವ ರೀತಿ ನಡೆದುಕೊಳ್ಳುತ್ತಿದೆ? ಸರ್ಕಾರದ ಮಂತ್ರಿಗಳ ಮತ್ತು ಅಧಿಕಾರಿಗಳ ಮೇಲೆ ಇಲಾಖೆಯ ಸಂಬಂಧ ಹೊಂದಿಕೊಂಡಿದೆ. ಈಗ ಏನಾಗಿದೆ ಎಂದರೆ ಒಬ್ಬ ಮಂತ್ರಿಗಳ ಮಾತು ಇನ್ನೊಬ್ಬರು ಕೇಳುವುದಿಲ್ಲ. ಇಲ್ಲಿ ಎರಡು ಇಲಾಖೆಗಳು ಇವೆ. ಒಬ್ಬರು ಮಾನ್ಯ ಬಸವಲಿಂಗಪ್ಪನವರು ಮುನಿಸಿಪಲ್ ಅಡ್ಮಿನಿಸ್ಟ್ರೇಟಿವ್ ಮಿನಿಸ್ಟರು, ಇನ್ನೊಬ್ಬರು ಮಾನ್ಯ ಚನ್ನಬಸಪ್ಪನವರು. ಇವರಿಬ್ಬರೂ ಅಜೀಜ್ ಸೇಠ್‌ರವರ ಮಾತು ಕೇಳುವುದಿಲ್ಲ, ಕೇಳುವುದಕ್ಕೆ ತಯಾರು ಆಗಿಲ್ಲ. ಬೆಂಗಳೂರು ವಾಟರ್ ಸಪ್ಲೈ ಸುಯೇಜ್ ಬೋರ್ಡ್ ಇಂಜಿನಿಯರ್–ಇನ್–ಚೀಫ್, ಸ್ಕೇರ್ಸಿಟಿ ಕೋ–ಆರ್ಡಿನೇಟರ್ ಮುಗ್ದುಂ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಅವರ ಕೈಗಾರಿಕಾ ಸಂಬಂಧಗಳ ಬಗ್ಗೆ ಅಪ್ರೋಚ್ ಏನು ಇದೆ ಎಂದರೆ ಮ್ಯಾನೇಜ್‌ಮೆಂಟ್ ಮತ್ತು ಚೇರ್ಮನ್ ಅವರ ಅಪ್ರೋಚ್, ಅಲ್ಲಿ ಇರುವ ನೌಕರರಿಗೆ ತೀರಾ ವಿರುದ್ಧ. ಅದನ್ನು ಪದೇ ಪದೇ ಹೇಳಿದ್ದೇನೆ. ಇದುವರೆಗೂ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇದು ಎಲ್ಲಿಯತನಕ ಹೋಗಿದೆ ಎಂದರೆ, ಈ ನೌಕರರು ಸಂಘ ಮಾಡಿಕೊಳ್ಳುವುದಕ್ಕೆ ಹಕ್ಕು ಇಲ್ಲ. ಇದು ಕೈಗಾರಿಕೆ ಅಲ್ಲ ಎಂದು ವಾದಿಸಿ, ಕೋರ್ಟಿನಲ್ಲಿ ಮುಖಕ್ಕೆ ಮಸಿ ಬಳಸಿಕೊಂಡರು. ಆದರೂ ಸಹ ಆ ವಾದ ಮಾಡುತ್ತಿದ್ದಾರೆ. ಫೈನ್ ಹಾಕಿರುವ ಕೆಲಸಗಾರರ ಮೇಲೆ ಫೈನ್ ಹಾಕಿರುವುದು ಸರಿಯಲ್ಲ ಎಂದು ಲೇಬರ್ ಕೋರ್ಟ್ ಹೇಳಿತು. ಸರ್ಕಾರದ ಇಲಾಖೆಯವರು ಹೈಕೋರ್ಟಿಗೆ ಹೋಗಿದ್ದಾರೆ. 20 ಜನಕ್ಕೆ 5 ರೂಪಾಯಿ ಫೈನ್ ವಾಪಸ್ಸು ಕೊಡಬೇಕು. ಅಲ್ಲಿಗೆ 150 ರೂಪಾಯಿ ಕೊಡಬೇಕಾಗುತ್ತದೆ. ಹೈಕೋರ್ಟಿನ ಮೇಲೆ ರಿಟ್ ಅಪ್ಲಿಕೇಷನ್ ಹಾಕಿಕೊಂಡು ಹೋಗಿದ್ದಾರೆ. ಮಂತ್ರಿಗಳು ಶಾಮೀಲು ಆಗಿದ್ದಾರೆ. ಬಸವಲಿಂಗಪ್ಪನವರು ಶಾಮೀಲು ಆಗಿದ್ದಾರೆ. ಸಾವಿರಾರು ರೂಪಾಯಿ ಖರ್ಚು ಮಾಡುತ್ತಾರೆ. ಕೋರ್ಟಿನ ತೀರ್ಮಾನ ಜಾರಿಗೆ ಕೊಡುವುದಕ್ಕೆ ಆಗದೇ ಹೋದರೆ ಮಂತ್ರಿಗಳಿಗೆ ಸರಿಯಾಗಿ ಪಾಠ ಹೇಳಿಕೊಡುವ ಜವಾಬ್ದಾರಿ ಸರ್ಕಾರದ್ದು ಅಲ್ಲವೇ? ಅಧಿಕಾರಿ ಸರಿಯಾಗಿ ನಡೆದುಕೊಳ್ಳದೇ ಹೋದರೆ ಅವರಿಗೆ ಪಾಠ ಹೇಳುವ ಜವಾಬ್ದಾರಿ ಸರ್ಕಾರದ್ದು ಅಲ್ಲವೇ? ಬೆಂಗಳೂರು ವಾಟರ್ ಸಪ್ಲೈ ಸುಯೇಜ್ ಬೋರ್ಡ್‌ನಲ್ಲಿ ಕಾರ್ಮಿಕರಿಗೂ, ಮಾಲೀಕರಿಗೂ ಸಂಬಂಧಿಸಿದ ಆಕ್ಟನ್ನು ಜಾರಿಗೆ ತರಬೇಕೆಂದು ಹೇಳಿ ನೋಟೀಸು ಕೊಟ್ಟು 6 ತಿಂಗಳುಗಳು ಆದರೂ ಇವತ್ತಿನ ದಿವಸದವರೆಗೂ ಜಾರಿಗೆ ತೆಗೆದುಕೊಂಡು ಬಂದಿಲ್ಲ. ಡೆಪ್ಯುಟಿ ಲೇಬರ್ ಕಮಿಷನರ್‌ರವರು ನೋಟೀಸು ಕೊಟ್ಟರು. ಆದರೆ ಜಾರಿಗೆ ತರಬೇಕಾಗಿಲ್ಲ ಎಂದು ಮುಗ್ದುಂರವರು ನಮಗೆ ಅಪ್ಲೈ ಆಗುವುದಿಲ್ಲ, ಅದನ್ನು ಜಾರಿಗೆ ತರಬೇಕಾಗಿಲ್ಲ ಎಂದು ಹೇಳಿದರು. ಲೇಬರ್ ಕಮಿಷನರ್‌ರವರು ಇವತ್ತಿನ ದಿವಸ ಏನು ಉತ್ತರ ಕೊಟ್ಟರೋ ಗೊತ್ತಿಲ್ಲ. ಯೂನಿಯನ್ ಅವರು ಒಂದು ಲೆಟರ್ ಬರೆದರು. ನೀವು ಪ್ರಾಸಿಕ್ಯೂಟ್ ಮಾಡದೇ ಹೋದರೆ ಕಾನೂನು ಪ್ರಕಾರ ನಾವು ಪ್ರಾಸಿಕ್ಯೂಟ್ ಮಾಡಬೇಕಾಗುತ್ತದೆಂದು ಸೆಕ್ರೆಟರಿ

ನಾರಾಯಣರವರನ್ನು ಪ್ರಾಸಿಕ್ಯೂಟ್ ಮಾಡುವುದಕ್ಕೆ ನಮಗೆ ಅಧಿಕಾರ ಕೊಡಿ ಎಂದು ಯೂನಿಯನ್ ಅವರು ಮುಗ್ದಂರವರಿಗೆ ಬರೆದರೆ ನನಗೆ ತಮ್ಮಿಂದ ಲೆಟರ್ ಬಂದಿದೆ, ಏನು ಎಂದರೆ, It has been sent to concerned authorities ಎಂದು who is the concerned authority that has been sent to? ಅಲ್ಲಿಂದ ಮತ್ತೆ ಅದು ಲೇಬರ್ ಡಿಪಾರ್ಟ್‌ಮೆಂಟ್ ಸೆಕ್ರೆಟರಿಗೆ ಹೋಗಿ ಪುನಃ ಅವರಿಂದ it has gone to the Chairman of the Water Supply Board. Chairman of the Water Supply Boardಗೆ ಹೋದರೆ is he the concerned authority? ಅವರು ಉತ್ತರ ಕೊಟ್ಟಿದ್ದಾರೆ, ಅಧಿಕಾರ ಕೊಡುವುದಕ್ಕೆ ಆಗುವುದಿಲ್ಲ ಎಂದು. ಏನಪ್ಪಾ ನಿನ್ನನ್ನು ಪ್ರಾಸಿಕ್ಯೂಟ್ ಮಾಡಬೇಕು, ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿದ್ದೀಯಾ ಎಂದು ಯಾರ ಮೇಲೆ ಅಪಾದನೆ ಇದೆಯೋ ಅವರನ್ನೇ ಕೇಳುವ ಪರಿಸ್ಥಿತಿಗೆ ಸರ್ಕಾರ ಬಂದಿದೆ ಎಂದರೆ ಒಳ್ಳೆಯ ಇಂಡಸ್ಟ್ರಿಯಲ್ ರಿಲೇಷನ್ಸ್ ತರುವುದಕ್ಕೆ ಸಾಧ್ಯವಾಗುತ್ತದೆಯೇ? ಅದರಲ್ಲಿಯೂ ಇದು ಕ್ವಾಸಿ ಡಿಪಾರ್ಟ್‌ಮೆಂಟಲ್ ಇನ್‌ಸ್ಟಿಟ್ಯೂಷನ್. ಇದೇ ರೀತಿ ಪಿ. ಡಬ್ಲ್ಯು. ಡಿ. ವರ್ಕ್ ಚಾರ್ಜ್‌ಡ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಇರುವವರನ್ನು ಪರ್ಮನೆಂಟ್ ನೌಕರರಾಗಿ ಪರಿಗಣಿಸಬೇಕು. ಅವರು ಹತ್ತಾರು ವರ್ಷಗಳಿಂದ ಕೆಲಸ ಮಾಡಿರುತ್ತಾರೆ. ಅವರನ್ನು ಕಿತ್ತು ಹಾಕಿದರೆ ಅವರ ಮನೆ ಮಠ ಏನು ಆಗಬೇಕು? ಅವರ ಸಂಸಾರಗಳು ಏನು ಆಗಬೇಕು? ಅವರಿಗೆ ಪರ್ಮನೆಂಟ್ ಕಂಡಿಷನ್ ಆಫ್ ಸರ್ವಿಸ್ ಇರಬೇಕೆಂದು, ವರ್ಕ್ ಚಾರ್ಜ್ ಎಸ್ಟಾಬ್ಲಿಷ್‌ಮೆಂಟ್ ಸಂಘದವರು ಪದೇ ಪದೇ ಒತ್ತಾಯ ಮಾಡಿದ್ದಾರೆ. ಸರ್ಕಾರದ ಅಭಿಪ್ರಾಯ ಏನು ಎಂದರೆ it is not an industry ಎಂದು, ಆದುದರಿಂದ ಕೈಗಾರಿಕಾ ವಿವಾದ ಶಾಸ್ತ್ರೀಯವಾಗಿ ಅವರಿಗೆ ಅನ್ವಯವಾಗುವುದಿಲ್ಲ. ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಸುಪ್ರೀಂ ಕೋರ್ಟಿನ ತೀರ್ಮಾನ, ಹೈಕೋರ್ಟಿನ ತೀರ್ಮಾನ ಯಾತಕ್ಕೆ ಸರ್ಕಾರ ಒಪ್ಪುವುದಿಲ್ಲ? ಚೀಫ್ ಮಿನಿಸ್ಟರ್‌ರವರು ಅವರಿಗೆ ಪಾಠ ಹೇಳಿಕೊಟ್ಟು ಸರಿಮಾಡಬೇಕು, ಇಲ್ಲದೇ ಹೋದರೆ ಹಾಸ್ಯಾಸ್ಪದವಾಗುತ್ತದೆ. ಬೇರೆಯವರಿಗೆ ಪ್ರೀಚ್ ಮಾಡುವುದಕ್ಕೆ ಮೈಸೂರು ಮೆಷಿನರಿ, ಮತ್ತು ಬೇರೆ ಖಾಸಗೀ ಮಾಲೀಕರಿಗೆ ಹೇಳುವುದಕ್ಕೆ ನಿಮಗೆ ಏನು ಅಧಿಕಾರವಿದೆ? ಕೈಗಾರಿಕಾ ಸಂಬಂಧ ಯಾವ ರೀತಿ ಉತ್ತಮ ಮಾಡುವುದಕ್ಕೆ ಸಾಧ್ಯವಿದೆ? ಈ ಇಲಾಖೆಗೆ ಹಣವನ್ನು ಕೊಡಬೇಕೆಂದು ಹೇಳುತ್ತಾರೆ. ಯಾತಕ್ಕೆ ಕೊಡಬೇಕೆಂದು ಕೇಳುತ್ತೇನೆ? ಎಲ್ಲಾ ಸರಿಮಾಡಬೇಕೆಂದು ನಾವು ಕಟುವಾದ ಟೀಕೆ ಮಾಡುವುದು. ಖಾಸಗಿ ಮಾಲೀಕರ ಜೊತೆಗೆ ಮಾತುಕತೆ ನಡೆಸಬೇಕು ಎಂದರೆ ದಾವಣಗೆರೆಯಲ್ಲಿ ಚಂದ್ರೋದಯ ಮಿಲ್ ಮಾಲೀಕರನ್ನು ಒಂದು ಸಾರಿ ಕರೆಸಿದರು. ಅಲ್ಲಿ ಇದುವರೆಗೂ ಮಾತುಕತೆ ನಡೆದಿಲ್ಲ, ದಾವಣಗೆರೆ ಎಂದರೆ ಗಾಬರಿ. ಏನೋ ನಡೆದು ಹೋಗುತ್ತದೆ, ಏನೋ ಅನ್ಯಾಯ ನಡೆಯುತ್ತದೆ, ಅಲ್ಲಿಯ ಕಾರ್ಮಿಕರು ಗೂಂಡಾಗಳು ಎನ್ನುವ ಭಾವನೆ ಬಂದಿದೆ. ಅವರಿಗೆ ಅದು ಸರಿಯಲ್ಲ ಎಂದು ಹೇಳುತ್ತೇನೆ. ಸರ್ಕಾರ ತನ್ನ ಕರ್ತವ್ಯ ಪರಿಪಾಲನೆ ಮಾಡಬೇಕು. ಸರ್ಕಾರ, ಕಾರ್ಮಿಕರೂ, ಮಾಲೀಕರೂ ಕೂತುಕೊಂಡು ಚರ್ಚೆ ಮಾಡಬೇಕು, ಕೂತುಕೊಂಡರೆ ಅನೇಕ ವಿಷಯ ಇತ್ಯರ್ಥವಾಗುತ್ತದೆ. ನನಗೆ ತಿಳಿದು ಬಂದಿರುವುದು ಏನೆಂದರೆ ಕಾಂಗ್ರೆಸ್ ಕಮಿಟಿಯವರು ಅಥವಾ ಅಧ್ಯಕ್ಷರು, ಇದು ಚೀಫ್ ಮಿನಿಸ್ಟರ್‌ರವರಿಗೆ ಗೊತ್ತಿಲ್ಲ, ಅವರು ಇವತ್ತಿನ ದಿವಸ ಬ್ಯಾನ್ ಹಾಕಿದ್ದಾರೆ. ಇನ್ನು ಮುಂದೆ ಮಂತ್ರಿಗಳ ಚೇಂಬರ್‌ನಲ್ಲಿ ಮಾಲೀಕರನ್ನು ಕರೆಸಬೇಡಿ ಎಂದು. ಶ್ರೀರಾಮುಲುರವರು ಈ ವಿಚಾರ ಚೆನ್ನಾಗಿ ಹೇಳಿದರು. ಮಾಲೀಕರನ್ನು ಕರೆಸುವುದು ನ್ಯಾಯವಾದದ್ದು. ಅಗ್ರಿಮೆಂಟ್ ಆದಾಗ ಮಾತ್ರ ನೀವು ಸೈನ್ ಮಾಡಬೇಡಿ, ಲೇಬರ್ ಡಿಪಾರ್ಟ್‌ಮೆಂಟಿನ ಅಧಿಕಾರಿ ಸೈನ್ ಮಾಡಲಿ ಎಂದು ಕಾನೂನಿಗೆ ಅಸಂಗಣವಾದ ಅಂಶ ಹೇಳಿದ್ದಾರೆ.

ಶ್ರೀ ಅಜೀಜ್ ಸೇಟ್ :—ನಾನು ಯಾವುದೂ ಸೈನ್ ಮಾಡಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ :—ಕರೆಸಲಿಕ್ಕೆ ಕೂಡದು ಎಂದು what right have the Congress Committee or Congress President to decide that way I cannot understand. ಸರ್ಕಾರ ಕರೆಸಿ ಮಾತನಾಡಬೇಕು, ಇಲ್ಲದಿದ್ದರೆ ಕೈಗಾರಿಕಾ ಸಂಬಂಧ ಹೇಗೆ ಬೆಳೆಯುತ್ತದೆ ? ಕಾರ್ಮಿಕರಿಗೂ, ಮಾಲೀಕರಿಗೂ ವಿವಾದ ಹೇಗೆ ಇತ್ಯರ್ಥ ವಾಗುತ್ತದೆ ? ಎಲ್ಲರನ್ನೂ ಕರೆಸಬೇಕು. ಲಾಕ್‌ಔಟ್‌ನಿಂದ ಪರಿಸ್ಥಿತಿ ಕೆಟ್ಟುಹೋಗಿದೆ, ಅದನ್ನು ಸರಿಪಡಿಸಬೇಕು. ಅದರಲ್ಲಿರುವುದು ನಿಜವೋ, ಸುಳ್ಳೋ ಹೇಳಬೇಕು.

ಅದಕ್ಕೆ ನಾನು ಸ್ಪಷ್ಟವಾಗಿ ಹೇಳುತ್ತೇನೆ. ನನಗೆ ವರ್ತಮಾನ ಬಂದಿದೆ. ಅದಕ್ಕೆ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಆರ್. ಟಿ. ಒ. ಅವರ ಹಸ್ತಕ್ಷೇಪ ಈ ಕೈಗಾರಿಕೆಗಳಲ್ಲಿ ಏನು ಸಂಬಂಧ ಇದೆಯೋ ಏನೋ ಗೊತ್ತಿಲ್ಲ. ಆಡಳಿತ ವರ್ಗದ ಧೋರಣೆಯಿಂದ ನೀವು ಹಿಂಜರಿಯುತ್ತಿದ್ದೀರಿ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಇನ್ನು ಎರಡನೆಯದು ಈಗ ಎಷ್ಟು ಸ್ಟ್ರೈಕ್ ಆಗಿವೆ ಎನ್ನುವ ಬಗ್ಗೆ ಅಂಕಿಅಂಶ ಕೊಟ್ಟಿದ್ದೀರಿ. ಇದರಲ್ಲಿ ಬಿ. ಇ. ಎಲ್. ಮತ್ತು ಹೆಚ್. ಎಂ. ಟಿ. ಹೆಸರನ್ನು ಹೇಳಿದ್ದೀರಿ. ಅಲ್ಲಿ ಏತಕ್ಕೆ ಸ್ಟ್ರೈಕ್ ಆಯಿತು ? ಯಾವ ಕಾರಣಕ್ಕಾಯಿತು ? ಕಾರ್ಮಿಕ ಮುಖಂಡರು ರಾಜಕೀಯ ಮಧ್ಯೆ ಪ್ರವೇಶಿಸಿದ್ದರಿಂದ ಸ್ಟ್ರೈಕ್ ಆಯಿತು ಎಂದು ಕೆಲವರು ಹೇಳಿದರು, ಅದನ್ನು ನಾನು ಒಪ್ಪುವುದಿಲ್ಲ. ಈವೊತ್ತಿನ ದಿವಸ ಏನಾದರೂ ಆ ಯೂನಿಯನ್ ಕಬಳಿಸಬೇಕು ಎನ್ನುವ ದೃಷ್ಟಿ ಇಟ್ಟುಕೊಂಡಿದ್ದರೆ ಅದು ಸರಿಯಲ್ಲ ಅಥವಾ ಅಲ್ಲಿ ಯಾರೋ ಕೆಲವರು ವಿಧ್ವಂಸಕಾರರು ಸೇರಿಕೊಂಡು ಈ ರೀತಿ ಮಾಡಿದ್ದಾರೆ ಎಂದರೆ, ಅದೂ ಸಹ ಸರಿಯಾದ ಕಾರಣವಲ್ಲ. ಅದಷ್ಟು ಮಟ್ಟಿಗೆ ಸ್ಟ್ರೈಕ್ ಮಾಡುವುದನ್ನು ಕಡಿಮೆ ಮಾಡಬೇಕು. ಮುಷ್ಕರಗಳಿಗೆ ಕಾರಣ ಮ್ಯಾನೇಜ್‌ಮೆಂಟ್ ಧೋರಣೆ ಮತ್ತು ಸರ್ಕಾರದ ಧೋರಣೆ ಎಂದು ಹೇಳುತ್ತೇನೆ. ಯಾವ ಒಂದು ಕೈಗಾರಿಕೆಯನ್ನು ನೋಡಿದರೂ ಕೂಡ ಸ್ಟ್ರೈಕ್ ಆಗುತ್ತಾ ಇದೆ, ಲಾಕ್‌ಔಟ್ ಆಗುತ್ತದೆ, ಇದಕ್ಕೆ ಕಾರಣ ಏನು ? ಹೆಚ್. ಎಂ. ಟಿ. ಏನಿದೆ ಅದರ ಬಗ್ಗೆ it is a other machine which manufactures other machines ; jewel among public sectors ಅಂತ ನೆಹರೂ ಹೇಳಿದ್ದರು. ಸ್ಟ್ರೈಕ್ ಮತ್ತು ಲಾಕ್‌ಔಟ್ ಆದದ್ದು ಯೂನಿಯನ್ ರೆಕಗ್ನಿಷನ್ ವಿಷಯದಲ್ಲಿ. ಹೆಚ್. ಎಂ. ಟಿ.ಯಲ್ಲಿ ಯಾವ ನೌಕರ ಸಂಘಕ್ಕೆ ಮಾನ್ಯತೆ ನೀಡಬೇಕು ಎನ್ನುವುದರ ಬಗ್ಗೆ ಮಾನ್ಯ ಸಿದ್ದಪ್ಪನವರು ಹೇಳಿದ ಹಾಗೆ ರಹಸ್ಯ ಮತದಾನವನ್ನು ಏತಕ್ಕೆ ಮಾಡಲಿಲ್ಲ ? ಮಾನ್ಯ ಪುಟ್ಟಸ್ವಾಮಿಯವರು ಹಿಂದೆ ಕಾರ್ಮಿಕ ಮಂತ್ರಿಗಳಾಗಿದ್ದಾಗ Code of discipline is a scrap of paper ; it has no value at all and it should be thrown into the dust bin ಎಂದು ಹೇಳಿದರು. ಕೋಡ್ ಆಫ್ ಡಿಸಿಪ್ಲಿನ್ ಬಗ್ಗೆ ಅನೇಕ ಸಾರಿ ಹೇಳಿದರೂ ಅದರಿಂದ ಏನೂ ಆಗಲಿಲ್ಲ. ನೀವು ಬಂದಾಗಲೂ ಸಹ ಇಂಡಸ್ಟ್ರಿಯಲ್ ರಿಲೇಷನ್ ಕಮಿಟಿ ಬಗ್ಗೆ ರಾಜಕೀಯ ದೃಷ್ಟಿ ಇಟ್ಟುಕೊಂಡು ಸೆಟ್ಲ್ ಮಾಡಲಿಲ್ಲ. ನಾವು ಹೇಳುತ್ತೇವೆ, ಮ್ಯಾನೇಜ್‌ಮೆಂಟ್‌ನವರೂ ಸಹ ಹೇಳುತ್ತಾರೆ, ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀಮಾನ್ ರಘುನಾಥ ರೆಡ್ಡಿಯವರೂ ಸಹ ಹೇಳಿದ್ದಾರೆ ; ಈ ಬಗ್ಗೆ ಏತಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ಎಂದು ಮತ್ತು ಇದಕ್ಕೆ ಯಾರು ಯಾರು ಜವಾಬ್ದಾರರು ಇದ್ದಾರೋ ಅಂಥಾವರ ಮೇಲೆ ಕ್ರಮ ತೆಗೆದುಕೊಳ್ಳದೇ ಹೋದರೆ ಯು ಆರ್ ರೆಸ್ಪಾನ್ಸಿಬಲ್ ಫಾರ್ ಇಟ್ ಎಂದು ಹೇಳಿದ್ದಾರೆ. ಇದು ಮಾಡದೇ ಹೋದರೆ ನಿಮ್ಮ ಮೇಲೆ ಜವಾಬ್ದಾರಿ ಹೊರಿಸಬೇಕಾಗುತ್ತದೆ. ಒಂದು ಕಡೆ ಹೆಚ್. ಎಂ. ಟಿ. ಯೂನಿಯನ್‌ಗೆ ಮಾನ್ಯತೆ ಕೊಟ್ಟಿಲ್ಲ. ಇನ್ನೊಂದು ಕಡೆ ಬಿ.ಇ.ಎಲ್.ನಲ್ಲಿರುವ ಯೂನಿಯನ್ನಿಗೂ ಮಾನ್ಯತೆ

ಕೊಡದೆ ಅವರೊಂದಿಗೆ ಮಾತುಕತೆ ನಡೆಸಿದ್ದೀರಿ. ಇದು ಸರಿಯಲ್ಲ. ಬಿ. ಇ. ಎಲ್. ಬಗ್ಗೆ ಕೋಡ್ ಆಫ್ ಡಿಸಿಪ್ಲಿನ್ಸ್ ಬಗ್ಗೆ ಏಕೆ ಮಾತನಾಡುತ್ತೀರಿ ? ಈಗ ಬಿ.ಇ.ಎಲ್. ತೆಗೆದುಕೊಳ್ಳಿ. ಅದು ಇಂಡಸ್ಟ್ರಿಯಲ್ ರಿಲೇಷನ್ ಕಮಿಟಿಗೆ ಒಳಪಟ್ಟಿಲ್ಲವೆ ? ಹೆಚ್.ಎಂ.ಟಿ. ಯೂನಿಯನ್ ರೆಕಗ್ನಿಷನ್ ಬಗ್ಗೆ ಮಾನ್ಯತೆ ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ. ಮತ್ತೆ 15 ದಿವಸದೊಳಗೆ ಯಾರೋ ಕಾಗದ ಬರೆದಿದ್ದಾರೆ ಎಂದು ಕೊಡಲಿಲ್ಲ. ಇದನ್ನು ಅವರಿಗೇಕೆ ತಿಳಿಸಿಲ್ಲ ? ನನಗೆ ಅನಿಸುತ್ತದೆ, It is a first rate political conspiracy. ಅಲ್ಲಿ ಸಂಘಕ್ಕೆ ಮಾನ್ಯತೆ ವಿತಕ್ಕೆ ಕೊಡುವುದಿಲ್ಲ ಎನ್ನುವುದಕ್ಕೆ ನೀವು ಹೇಳಿದ ಪ್ರಶ್ನೆಗಳು ಆಧಾರವಾಗುವುದಿಲ್ಲ. ಈ ಪರಿಸ್ಥಿತಿ ಜಟಿಲವಾಗುತ್ತದೆ. ಈ ಕೈಗಾರಿಕೆಗೆ ಸಂಬಂಧಪಟ್ಟಂತೆ ಯಾರು ಹೊಣೆಗಾರರಾಗಿದ್ದಾರೋ ಅಂದರೆ ಐ.ಎನ್.ಟಿ.ಯು.ಸಿ.ಯವರು ಮಾಡಿರತಕ್ಕಂಥ ತೀರ್ಮಾನವನ್ನು ವಿತಕ್ಕೆ ಒಳಕ್ಕೆ ಇಟ್ಟುಕೊಳ್ಳುತ್ತೀರಿ ? You should have simply passed it on to the Management and the Union, but you have not done it. ಆ ಯೂನಿಯನ್ ರೆಕಗ್ನಿಷನ್ ಕೊಡದೇ ಇರುವುದರಿಂದ ಈ ಪರಿಸ್ಥಿತಿ ಬಂದಿದೆ.

ಇನ್ನು ವಾಟರ್‌ಸಪ್ಲೈ ಬೋರ್ಡ್ ಯೂನಿಯನ್‌ಗೆ ರೆಕಗ್ನಿಷನ್ ಕೇಳಿದಾಗ ಅದಕ್ಕೆ ತಮ್ಮ ರಿಪ್ಲೈ ಬಂದಿರುವುದು 'The matter will be looked into. The matter has been sent to the concerned authorities' ಈ ಪದಗಳನ್ನು ಹೇಳುತ್ತಾ ಇರುತ್ತೀರಿ. Mr. Mugdam is not prepared to act according to what you say. ನಿಮ್ಮನ್ನೇ ರಾಜೀನಾಮೆ ಕೊಡಿ ಎಂದು ಹೇಳುತ್ತಾರೆ. ಈ ರೀತಿ ಇರುವಾಗ ಕೋಡ್ ಆಫ್ ಡಿಸಿಪ್ಲಿನ್ ಹೇಳುತ್ತೀರಿ. ಇದರ ರೆಕಗ್ನಿಷನ್ ಬಗ್ಗೆ ಸರಿಯಾದ ಧೋರಣೆ ತಾಳಿ. ಬಿ.ಇ.ಎಲ್., ಬಿ.ಇ.ಎಂ.ಎಲ್., ಹೆಚ್. ಎಂ. ಟಿ. ಈ ಯೂನಿಯನ್‌ಗೆ ರೆಕಗ್ನಿಷನ್ ಕೊಟ್ಟರೆ ಆಗ ಎಲ್ಲವೂ ಸರಿಯಾಗಿ ನಡೆಯುತ್ತದೆ. Don't be guided by pressures or pulls of this party or that party.

ಇನ್ನು ಇಂಪ್ಲಿಮೆಂಟೇಷನ್ ಆಫ್ ಅವಾರ್ಡ್ಸ್ ಅಂಡ್ ಅಗ್ರಿಮೆಂಟ್ಸ್ ವಿಷಯ. ಈ ಬಗ್ಗೆ ಮಾನ್ಯ ಸಿದ್ದಪ್ಪನವರು ಹೇಳಿದರು ಮತ್ತು ಮಾನ್ಯ ಕೆ. ಶ್ರೀರಾಮುಲು ಅವರು ಹೇಳಿದರು. ನಿಮ್ಮ ಪ್ರಕಾರ 166 cases are there out of which 162 remain unimplemented. ಇದರಲ್ಲಿ 4 ಮಾತ್ರ ಇಂಪ್ಲಿಮೆಂಟ್ ಮಾಡಿದ್ದೀರಿ. Further proof is not necessary for the inefficiency of the department. ಅದು ಹೇಗೆ ಆಯಿತು ಎನ್ನುವುದಕ್ಕೆ ತಾವು ಎಕ್ಸ್‌ಪ್ಲನೇಷನ್ ಕೊಡಬೇಕು.

ಇನ್ನು 2-3 ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ನಿಮ್ಮ ಡಿಪಾರ್ಟ್‌ಮೆಂಟಿನ ಇನ್‌ಎಫಿಷಿಯೆನ್ಸಿ ಬಗ್ಗೆ ಫ್ಯಾಕ್ಟರಿ ಇನ್‌ಸ್ಪೆಕ್ಟರ್ ಏನು ಇದ್ದಾರೋ ಅವರಿಗೆ The Assistant Commissioner is also authorised to act under the Factories Act ಈ ರೀತಿ ಎಂಪವರ್ ಮಾಡಿದ್ದಾರೆ. ಅವರು ಒಂದು ವರದಿ ಕೊಟ್ಟಿದ್ದಾರೆ. ಅವರು ಫ್ಯಾಕ್ಟರಿ ಇನ್‌ಸ್ಪೆಕ್ಟರನ್ನು ಕಳುಹಿಸದೇ ಮಾಡುವುದಿಲ್ಲ. ಅವರು ಅಮ್ಮಸಂದ್ರ ಸಿಮೆಂಟ್ ಮತ್ತು ಬಿರ್ಲಾರವರಿಗೆ ಸೇರಿದ ಹರಿಹರದ ಪಾಲಿಫೈಬರ್ಸ್ ಅದರ ಇನ್‌ಸ್ಯಾನಿಟರಿ ಕಂಡಿಷನ್ ಬಗ್ಗೆ ಫ್ಯಾಕ್ಟರಿ ಇನ್‌ಸ್ಪೆಕ್ಟರ್ ಮತ್ತು ಡೆಪ್ಯೂಟಿ ಕಮಿಷನರ್ ಅಲ್ಲಿಗೆ ಹೋಗಿ ಒಂದು ವರದಿ ಕಳುಹಿಸಿದ್ದಾರೆ. ಅದಲ್ಲದೆ ತಜ್ಞರೂ ಕೂಡ ಒಂದು ರಿಪೋರ್ಟ್‌ನ್ನು ಕಳುಹಿಸಿದ್ದಾರೆ. ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಇದು ಮಾನ್ಯ ಸಿದ್ದವೀರಪ್ಪನವರ ಖಾತೆಗೆ ಸೇರಿರುವುದರಿಂದ ಅವರು ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು.

Sri H. SIDDAVEERAPPA (Minister for Health).—Either it must be the Municipal Administration or Industries or Health or all the three put together. In any case it has not been found that is exactly in my portfolio.

ಶ್ರೀ ಎಂ.ಎಸ್. ಕೃಷ್ಣನ್ :—ಇದರಿಂದಲೇ ನಿಮ್ಮ ನಿಮ್ಮ ಜಗಳವನ್ನು ಹೇಗೆ ತೋರಿಸುತ್ತೀರಿ ಎನ್ನುವುದು ಗೊತ್ತಾಗುತ್ತದೆ.

Sri H. SIDDAVEERAPPA.—I am sorry it is not "ಜಗಳ though these things come under different portfolios, all the same, we are working to see that man is brought to some senses.

ಶ್ರೀ ಎಂ. ಎಸ್. ಕೃಷ್ಣನ್ :—ನಿಮ್ಮ ಡಿಪಾರ್ಟ್‌ಮೆಂಟಿಗೆ ಯಾವುದು ಸೇರುತ್ತದೆ, ಅವರ ಡಿಪಾರ್ಟ್‌ಮೆಂಟಿಗೆ ಯಾವುದು ಸೇರುತ್ತದೆ ಎನ್ನುವುದು ಇದುವರೆಗೂ ಇತ್ಯರ್ಥವಾಗಿಲ್ಲ ಎಂದು ಮಾನ್ಯ ಆರೋಗ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಲೇಬರ್ ಕಮಿಷನರ್, ಡೆಪ್ಯುಟಿ ಲೇಬರ್ ಕಮಿಷನರ್ ಮುಂತಾದವರು ಏನೇನು ರಿಪೋರ್ಟ್‌ಗಳನ್ನು ಕಳುಹಿಸುತ್ತಾರೆ, ಅವುಗಳನ್ನು ಫ್ಯಾಕ್ಟರಿ ಇನ್‌ಸ್ಪೆಕ್ಟರುಗಳು ಕಾರ್ಯಗತ ಮಾಡುವ ಹಾಗೆ ಮಾಡಬೇಕು. ಅವರು ಯಾವುದನ್ನೂ ಕಾರ್ಯಗತ ಮಾಡುತ್ತಿಲ್ಲ.

ಅದೇ ರೀತಿ ಬಿ.ಇ.ಎಲ್. ನಲ್ಲಿ, ರಜಾ ದಿನ ಕೆಲಸ ಮಾಡಿದ ಕಾರ್ಮಿಕರಿಗೆ ಕಾಂಪೆನ್‌ಸೇಟರಿ ಹಾಲಿಡೇಸ್ ಅನೇಕ ದಿವಸಗಳಿಂದ ಕೊಡುತ್ತಿಲ್ಲ. ಲೇಟಾಗಿ ಬರುವವರಿಗೆ ಪೇಮೆಂಟ್ ಆಫ್ ವೇಜಸ್ ಆಕ್ಟ್ ಪ್ರಕಾರ ಕೂಲಿ ಕಡಮೆ ಮಾಡುತ್ತಿದ್ದಾರೆ. ಎಚ್.ಎಂ. ಟಿ.ಯಲ್ಲಿ ವರ್ಕ್ಸ್ ಕಮಿಟಿ ಇಲ್ಲ, ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್‌ಗೆ ವಿರೋಧವಾಗಿ ನಡೆಯುತ್ತಿದೆ. ಕಬ್ಬನ್‌ಪೇಟೆಯಲ್ಲಿ ಸಿಲ್ಕ್ ಫಿಲೇಚರ್ಸ್ ಇವೆ. ಅಲ್ಲಿ ಗೂಡುಗಳಲ್ಲಿ ಮಕ್ಕಳನ್ನು ಸೇರಿಸಿಕೊಂಡು ಕೆಲಸ ಮಾಡಿಸುತ್ತಾರೆ, ಹೆಣ್ಣು ಮಕ್ಕಳಿಂದ ಕೆಲಸ ಮಾಡಿಸುತ್ತಾರೆ. ಫ್ಯಾಕ್ಟರಿ ಕಾನೂನು ಯಾರೂ ಗಮನಕ್ಕೇ ತೆಗೆದುಕೊಳ್ಳುತ್ತಿಲ್ಲ. ಇನ್‌ಸ್ಪೆಕ್ಟರುಗಳು ಹೋಗಿ, ಎಲ್ಲರೂ ಅದೇ ರೀತಿ ಮಾಡುತ್ತಾರೆಂದು ಹೇಳುವುದಿಲ್ಲ, ಕೆಲವರು ದುಡ್ಡು ತೆಗೆದುಕೊಂಡು ಏನೂ ನೋಡದೆ ಬಂದು ಬಿಡುತ್ತಾರೆ. ಇದರಿಂದ ಅಲ್ಲಿ ಕೆಲಸ ಮಾಡುವವರಿಗೆ ಮಾಲೀಕರಿಂದ ಬಹಳ ತೊಂದರೆಯಾಗುತ್ತಿದೆ.

ಟ್ರಿಬ್ಯುನಲ್ ಮತ್ತು ಲೇಬರ್ ಕೋರ್ಟ್ ವಿಷಯದಲ್ಲಿ ಹೇಳಬೇಕು ಎಂದರೆ ಕೇಸುಗಳು ಇತ್ಯರ್ಥವಾಗುವುದರಲ್ಲಿ ಬಹಳ ನಿಧಾನವಾಗುತ್ತಿದೆ. ಅವುಗಳಿಗೆ ಕಾಲಮಿತಿಯೇ ಇಲ್ಲ, ಇಷ್ಟ ಬಂದ ರೀತಿಯಲ್ಲಿ ಹೋಗುತ್ತಾರೆ. ಡಿಸೆಂಬರ್ 1972 ರಲ್ಲಿ 267 ಕೇಸುಗಳು ಬಾಕಿ ಇತ್ತು ಎಂದು ಹೇಳಿದ್ದಾರೆ. ಹೋದ ವರ್ಷ ಇದ್ದುದಕ್ಕಿಂತ ಇನ್ನೂ 14 ಕೇಸುಗಳು ಜಾಸ್ತಿಯಾಗಿ ಉಳಿದಿವೆ. ಅಲ್ಲಿಗೆ ರೆಫರ್ ಮಾಡುವ ಕೇಸುಗಳು ಇತ್ಯರ್ಥವಾಗುತ್ತಿಲ್ಲ. ರೆಫರೆನ್ಸ್ ಮಾಡುವುದೂ ಕೂಡ ಸರಿಯಾಗಿ ಮಾಡುತ್ತಿಲ್ಲ. ಅದರಲ್ಲಿಯೂ ಮುನಿಸಿಪಾಲಿಟಿಗಳ ವಿಷಯಕ್ಕೆ ಬಂದರೆ ಟ್ರಿಬ್ಯುನಲ್‌ಗೆ ರೆಫರ್ ಮಾಡುವುದಿಲ್ಲ. ಮಂಗಳೂರು ಮುನಿಸಿಪಾಲಿಟಿ ಕೆಲಸಗಾರರಿಗೆ ಸಂಬಂಧಪಟ್ಟ ವಿವಾದವನ್ನ ಇದುವರೆಗೂ ರೆಫರ್ ಮಾಡಿಲ್ಲ. ಮಾಲೀಕರು ಮತ್ತು ಕಾರ್ಮಿಕರು ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟಿನ ಸೆಕ್ಷನ್ 10 (2) ಪ್ರಕಾರ ವಿವಾದವನ್ನು ಟ್ರಿಬ್ಯುನಲ್‌ಗೆ ರೆಫರ್ ಮಾಡಲು ಒಪ್ಪಿಕೊಂಡರೂ ಮಾಡಿಲ್ಲ. It is a violation by the Government of its own rules in Mysore Cement.

ಈ ಬಗ್ಗೆ 11-6-1971 ರಲ್ಲಿ ಅಗ್ರಿಮೆಂಟ್ ಆಗಿದೆ. ಇದುವರೆಗೂ ಏನಾಗಿದೆ ಎನ್ನುವುದು ಗೊತ್ತಿಲ್ಲ. ಎರಡೂ ಪಾರ್ಟಿಗಳು ಒಪ್ಪಿಕೊಂಡಿದ್ದರೂ ಅದನ್ನು ರೆಫರ್ ಮಾಡಿಲ್ಲ ವೆಂದರೆ ಈ ಸರ್ಕಾರದಲ್ಲಿರುವ ದಕ್ಷತೆಯಾದರೂ ಏನು ಎಂದು ಕೇಳಬೇಕಾಗುತ್ತದೆ. ನಾನು ಕೋರ್ಟು ಮತ್ತು ಟ್ರಿಬ್ಯುನಲ್‌ಗಳಲ್ಲಿ ನಂಬಿಕೆ ಇರುವವನಲ್ಲ. ಬೈಪಾರ್ಟೈಟ್ ನೆಗೋಷಿಯೇಷನ್‌ನಲ್ಲಿ ನಂಬಿಕೆ ಇಟ್ಟುಕೊಂಡಿರುವವನು. ಹೆಚ್ಚು ವಿವಾದಗಳಿದ್ದರೆ ಕೋರ್ಟುಗಳನ್ನು ಮತ್ತು ಟ್ರಿಬ್ಯುನಲ್‌ಗಳನ್ನು ಜಾಸ್ತಿ ಮಾಡಬೇಕೇ ಹೊರತು ಇರುವ ಕೋರ್ಟುಗಳಿಗೆ ವಿವಾದಗಳನ್ನು ಇತ್ಯರ್ಥ ಮಾಡಲು ಕಾಲಮಿತಿಯನ್ನು ಹಾಕಬೇಕೇ ಹೊರತು, ಯಾವುದನ್ನೂ ಮಾಡದೆ ವಿವಾದಗಳು ಸುಮ್ಮನೆ ಪೆಂಡಿಂಗ್‌ನಲ್ಲಿರುವಂತೆ ಮಾಡುವುದು ಸರಿಯಲ್ಲ. ಶ್ರೀ ವಿ. ವಿ. ಗಿರಿ ಅವರು ಕೇರಳ ರಾಜ್ಯದಲ್ಲಿ ಗವರ್ನರ್ ಆಗಿ ಇದ್ದಾಗ ಕೈಗಾರಿಕಾವಾರು ಮಾಲೀಕರು ಮತ್ತು ಕಾರ್ಮಿಕರು ಸೇರಿ ಚರ್ಚೆ ಮಾಡಿ ಒಪ್ಪಂದ ಮಾಡಿಕೊಳ್ಳುವುದಕ್ಕೆ ಅವಕಾಶವಿರುವಂತೆ ಒಂದು ಪದ್ಧತಿಯನ್ನು ಜಾರಿಗೆ ತಂದಿದ್ದರು. ಅದೇ ರೀತಿ ಇಲ್ಲಿಯೂ ಪ್ರಯತ್ನ ಮಾಡಬೇಕು. ಕೈಗಾರಿಕಾವಾರು ಒಪ್ಪಂದ ಮಾಡುವುದಕ್ಕೆ, ಎರಡೂ ಪಕ್ಷಗಳು ಸೇರಿ ಬೈಪಾರ್ಟೈಟ್ ನೆಗೋಷಿಯೇಷನ್ ಮೂಲಕ ಇತ್ಯರ್ಥ ಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಬೇಕು. ಅದು ಆಗದೆ ಹೋದರೆ, ಅವರಿಬ್ಬರಿಗೂ ಗಿಟ್ಟದೆ ಹೋದರೆ ಯಾವ ರೀತಿ ಬೇಕಾದರೂ ಮಾಡಿಕೊಂಡು ಹೋಗಲಿ.

ಲೇಬರ್ ವೆಲ್‌ಫೇರ್ ಬೋರ್ಡ್ ಒಂದೂವರೆ ವರ್ಷವಾದರೂ ರೀ ಕಾನ್‌ಸ್ಟಿಟ್ಯೂಟ್ ಮಾಡಿಲ್ಲ. ಅದನ್ನು ಕೂಡಲೇ ರೀ ಕಾನ್‌ಸ್ಟಿಟ್ಯೂಟ್ ಮಾಡಬೇಕು. ಕೋಲ್ ಮೈನ್ಸ್‌ನಲ್ಲಿ ತಂದಿರುವ ಹಾಗೆ ಎಂಪ್ಲಾಯೀಸ್ ಕಾಂಟ್ರಿಬ್ಯೂಷನ್ ಟರ್ನ್ ಓವರ್ ಮೇಲೆ ಒಂದು ಪರ್ಸೆಂಟ್ ಚಾರ್ಜ್ ಮಾಡಿ, ಲೇಬರ್ ವೆಲ್‌ಫೇರ್ ಫಂಡ್ ಜಾಸ್ತಿ ಮಾಡಿ ಅದರಿಂದ ಲೇಬರ್ ವೆಲ್‌ಫೇರ್ ಸೆಂಟರ್ಸ್ ಮಾದರಿಯಲ್ಲಿ ಕಾರ್ಮಿಕರ ವಿಹಾರಧಾಮ, ಹಾಸ್ಪಿಟಲ್ಸ್ ಇಂಥವುಗಳನ್ನು ಮಾಡಬೇಕೆಂದು ಸೂಚನೆ ಮಾಡುತ್ತಿದ್ದೇನೆ.

ಪ್ಲಾಂಟೇಷನ್ ಲೇಬರ್ ಆಕ್ಟ್‌ಗೆ ಕಮಿಟಿ ಮಾಡಿದ್ದಾರೆ. ಅದರಲ್ಲಿ ತಾರತಮ್ಯ ಮಾಡಿದ್ದಾರೆ. ಎಲ್ಲ ಟ್ರೇಡ್ ಯೂನಿಯನ್‌ಗಳಿಗೂ ಅದರಲ್ಲಿ ಪ್ರಾತಿನಿಧ್ಯವಿರಬೇಕು. ಕನ್‌ಸೀಲಿಯೇಷನ್ ನಲ್ಲಿ ನಿಧಾನವಾಗದ ಹಾಗೆ ನೋಡಿಕೊಳ್ಳಬೇಕು.

ಆಡಳಿತದ ಬಗ್ಗೆ ಹೇಳುವುದಾದರೆ, ಮೂರು ಜನ ಡೆಪ್ಯುಟಿ ಲೇಬರ್ ಕಮಿಷನರನ್ನು ಹೊಸ ದಾಗಿ ಮಾಡಿದ್ದಾರೆಂದು ಕೇಳಿದ್ದೇನೆ. ಒಬ್ಬ ಜಾಯಿಂಟ್ ಲೇಬರ್ ಕಮಿಷನರನ್ನು ಮಾಡಿದ್ದಾರೆ. ಡೆಪ್ಯುಟಿ ಲೇಬರ್ ಕಮಿಷನರನ್ನು ಮಾಡಿರುವುದಕ್ಕೆ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಆದರೆ ಇಷ್ಟು ಮಾತ್ರ ಮಾಡಿದರೆ ಸಾಲದು, ಅವರ ಕೆಲಸಕಾರ್ಯಗಳೇನು ಎನ್ನುವುದನ್ನು ತಿಳಿಸ ಬೇಕು. ಅಸಿಸ್ಟೆಂಟ್ ಕಮಿಷನರ್‌ಗೆ ಬದಲಾಗಿ ಡೆಪ್ಯುಟಿ ಕಮಿಷನರ್ ಎಂದು ಸಂಬಳ ಜಾಸ್ತಿ ಕೊಡುವುದಾದರೆ ಏನೂ ಪ್ರಯೋಜನವಿಲ್ಲ. ರಾಜ್ಯವನ್ನು ಕೆಲವು ಜೋನ್‌ಗಳಾಗಿ ವಿಂಗಡಿಸಿ ಒಂದೊಂದು ಜೋನ್‌ಗೂ ಒಬ್ಬೊಬ್ಬ ಡೆಪ್ಯುಟಿ ಲೇಬರ್ ಕಮಿಷನರನ್ನು ನೇಮಕಮಾಡಿ, ಅದರ ಜವಾಬ್ದಾರಿಯನ್ನು ಅವರಿಗೇ ಕೊಡುವುದಲ್ಲದೆ, ಅಡಿಷನಲ್ ಲೇಬರ್ ಕಮಿಷನರ್ ಎಂದು ನೇಮಕಮಾಡಿದ್ದೀರಿ, ಅವರಿಗೆ ಹುಬ್ಬಳ್ಳಿ ಹೆಡ್‌ಕ್ವಾರ್ಟರ್ಸ್ ಕೊಟ್ಟು ಲೇಬರ್ ಕಮಿಷನರಿಗೆ ಬೆಂಗಳೂರು ಹೆಡ್‌ಕ್ವಾರ್ಟರ್ಸ್ ಎಂದು ಮಾಡಿದರೆ ವಿವಾದಗಳನ್ನು ಇತ್ಯರ್ಥ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಈಗ ಪೇಮೆಂಟ್ ಆಫ್ ವೇಜಸ್ ಆಕ್ಟ್ ಮತ್ತು ಪೇಮೆಂಟ್ ಆಫ್ ಬೋನಸ್ ಆಕ್ಟ್ ಇವುಗಳಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ಅಥಾರಿಟೀಸ್ ಇದ್ದಾರೆ. ಇದರಿಂದ ಕಾರ್ಮಿಕರಿಗೆ ತೊಂದರೆ ಯಾಗುತ್ತಿದೆ. ಆದ್ದರಿಂದ ಎರಡನ್ನೂ ಒಬ್ಬರ ಅಧಿಕಾರಕ್ಕೇ ಕೊಡಬೇಕು ಮತ್ತು ಡೆಪ್ಯುಟಿ

ಲೇಬರ್ ಕಮಿಷನರಿಗೆ ಇದನ್ನು ಕೊಟ್ಟು ಒಂದೇ ಅಥಾರಿಟಿ ಮಾಡಬಹುದು ಎಂದು ಕಾಣುತ್ತದೆ. ಅನೇಕ ಕಡೆ ಐ. ಎ. ಎಸ್. ಅಧಿಕಾರಿಗಳನ್ನು ನೇಮಕ ಮಾಡುತ್ತಿದ್ದೀರಿ. ಐ. ಎ. ಎಸ್. ಅಲ್ಲದೆ ಇರುವವರು ಈಗ ಲೇಬರ್ ಕಮಿಷನರ್ ಆಗಿದ್ದಾರೆ. ಲೇಬರ್ ಅಂಡ್ ಎಂಪ್ಲಾಯ್‌ಮೆಂಟ್ ಡೈರೆಕ್ಟರ್ ಐ. ಎ. ಎಸ್.ನವರೇ ಆಗಿರಬೇಕೆಂದಿಲ್ಲ. ಐ. ಎ. ಎಸ್. ಅಲ್ಲದೆ ಇರುವವರನ್ನೂ ಅಲ್ಲಿಗೆ ಹಾಕಬಹುದು. ಆ ರೀತಿ ಸ್ಟ್ರೀಮ್‌ಲೈನ್ ಮಾಡಬೇಕೆಂದು ಹೇಳುತ್ತೇನೆ.

ಗ್ರಾಚ್ಯುಯಿಟಿ ಕೊಡುವುದಕ್ಕೆ ಸಂಬಂಧಪಟ್ಟ ಆಕ್ಟ್ ಕೆಳಗೆ ಕೇಂದ್ರದವರು ರೂಲ್ಸ್ ಮಾಡಿ ಒಂದೂವರೆ ವರ್ಷವಾಗಿದೆ. ಅದನ್ನು ನಮ್ಮ ಸರ್ಕಾರದವರು ಇನ್ನೂ ಮಾಡಿಲ್ಲ. ಕಾಪಿ ಮಾಡುವುದಕ್ಕೆ ಒಂದೂವರೆ ವರ್ಷವಾದರೂ ಆಗದೆ ಇದ್ದರೆ ಕಾರ್ಮಿಕರು ಹೇಗೆ ಬದುಕಬೇಕು ? ಇದನ್ನು ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಸಿದ್ದಯ್ಯ (ಸಂತೇಮಾರಹಳ್ಳಿ) :—ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಸಚಿವರು ನಮ್ಮ ಮುಂದೆ ಇಟ್ಟಿರತಕ್ಕ ಕಾರ್ಮಿಕ ಮತ್ತು ಸಾರಿಗೆ ಸಂಸ್ಥೆಗಳ ಬೇಡಿಕೆಗಳನ್ನು ಸ್ವಾಗತ ಮಾಡುತ್ತ ಒಂದೆರಡು ಸಲಹೆಗಳನ್ನು ಸರ್ಕಾರದ ಗಮನಕ್ಕೆ ತಮ್ಮ ಮೂಲಕ ತರಬೇಕೆಂದು ಇಚ್ಛೆಪಡುತ್ತೇನೆ. ಈ ಹಿಂದೆ ಮಾತನಾಡಿದ ಸದಸ್ಯರು ಕಾರ್ಮಿಕರ ಕೇಳಿಕೆ ವಿಚಾರದಲ್ಲಿ ಮಾತನಾಡಿದ್ದಾರೆ. ಸರ್ಕಾರ ಇದುವರೆಗೂ ಬಹುಮಟ್ಟಿಗೆ ಕಾರ್ಖಾನೆ ಕಾರ್ಮಿಕರಿಗೆ ಸಾಕಾದಷ್ಟುಮಟ್ಟಿಗೆ ಸಹಾಯವನ್ನು ಮಾಡಿಸಿದ್ದಾರೆ. ಆದರೆ ಮಿನಿಮಂ ವೇಜಸ್ ಆಕ್ಟ್ ಪ್ರಕಾರ ವ್ಯವಸಾಯ ಕಾರ್ಮಿಕರಿಗೆ ಇದುವರೆಗೂ ಯಾವ ಅನುಕೂಲವೂ ಆಗಿಲ್ಲ. ವ್ಯವಸಾಯ ಕಾರ್ಮಿಕರ ಸಂಖ್ಯೆ ಕೈಗಾರಿಕೆ ಮತ್ತು ಕಾರ್ಖಾನೆಗಳ ಕಾರ್ಮಿಕರ ಸಂಖ್ಯೆಗಿಂತಲೂ ಬಹಳ ಹೆಚ್ಚಿನದಾಗಿದೆ. ಅವರ ಕಷ್ಟಕಾರ್ಪಣ್ಯಗಳನ್ನು ನಿವಾರಣೆ ಮಾಡಲು ಸಾಕಾದಷ್ಟು ಗಮನವನ್ನು ಇದುವರೆಗೂ ಕೊಟ್ಟಿಲ್ಲ. ರೈತರೇ ದೇಶದ ಬೆನ್ನೆಲುಬು ಎಂದು ಹೇಳುತ್ತಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ರೈತರಿಗಿಂತಲೂ ವ್ಯವಸಾಯ ಕಾರ್ಮಿಕರು ನಿಜವಾಗಿಯೂ ನಮ್ಮ ದೇಶದ ಬೆನ್ನುಮೂಳೆ ಇದ್ದ ಹಾಗೆ. ಅವರ ಬಗ್ಗೆ ಸರ್ಕಾರ ಆದ್ಯ ಗಮನವನ್ನು ಕೊಡಬೇಕಾದ್ದು ಸರ್ಕಾರದ ಕರ್ತವ್ಯ. ಅವರಿಗೆ ದೊರಕುತ್ತಿರತಕ್ಕ ಕೂಲಿ ಬಹಳ ಕಡಮೆ. ಸರ್ಕಾರದ ಅನೇಕ ಯೋಜನೆಗಳು ಅವರಿಗೆ ಸ್ವಲ್ಪವೂ ತಲುಪುತ್ತಿಲ್ಲ. ಸರ್ಕಾರ ಸಾರ್ವಜನಿಕರ, ದೇಶದ ಎಲ್ಲ ಜನರ ಏಳಿಗೆಗಾಗಿ ಯೋಜನೆಗಳನ್ನು ಮಾಡಿದೆ. ಆ ಯೋಜನೆಗಳು ಯಾವುವೂ ಸಹ ಪರಿಣಾಮಕಾರಿಯಾದ ರೀತಿಯಲ್ಲಿ ಆ ಜನಗಳಿಗೆ ತಲುಪುತ್ತಿಲ್ಲ. ಅವರ ಕಷ್ಟಕಾರ್ಪಣ್ಯಗಳು ಹಿಂದೆ ಯಾವ ರೀತಿ ಇದ್ದುವೋ ಅದೇ ರೀತಿ ಸ್ವಾತಂತ್ರ್ಯ ಬಂದು 25 ವರ್ಷವಾದರೂ ಅವರ ಸ್ಥಿತಿಗತಿ ಅಷ್ಟೇನೂ ಸುಧಾರಿಸಿಲ್ಲ.

ಇವರಿಗೆ ಸರಕಾರ ಒದಗಿಸತಕ್ಕ ಕ್ರೆಡಿಟ್ ಫೆಸಿಲಿಟೀಸ್‌ಗಳು ಅಥವಾ ಜನಗಳ ಆರೋಗ್ಯಕ್ಕಾಗಿ ಒದಗಿಸತಕ್ಕ ಮೆಡಿಕಲ್ ಫೆಸಿಲಿಟೀಸ್‌ಗಳ ಬಗ್ಗೆ ಹಾಗೂ ಸರಕಾರಿ ನೌಕರಿಗಳಲ್ಲಿ ಒದಗಿಸತಕ್ಕ ಎಲ್ಲ ಸೌಲಭ್ಯಗಳು ಎಂದರೆ ಎಜುಕೇಷನಲ್ ಫೆಸಿಲಿಟೀಸ್‌ಗಳು ಅಥವಾ ಇನ್ನಾವ ಹೆಚ್ಚಿಗೆ ಸೌಕರ್ಯಗಳನ್ನೂ ಒದಗಿಸುತ್ತಿಲ್ಲ, ಇದರಿಂದಾಗಿ ಬಡವರಾಗಿರುವ ಜನಗಳು ಬಡವರಾಗಿಯೇ ಇದ್ದು ಎಲ್ಲ ತೊಂದರೆಗಳನ್ನೂ ಅನುಭವಿಸಬೇಕಾಗಿದೆ. ಅನೇಕ ಕಡೆ ಇರುವ ಹಳ್ಳಿಗಳಲ್ಲಿ ಇರುವ ಬಡಜನರಿಗೆ ಸಾಕಷ್ಟು ಸೌಲಭ್ಯಗಳು ದೊರೆಯುತ್ತಿಲ್ಲ. ಸರಕಾರದ ನೌಕರಿದಾರರುಗಳಿಗೆ ಔಷಧಿ ಖರ್ಚುಗಳನ್ನು ತೆಗೆದುಕೊಳ್ಳಲೂ ಸಹಾಯ ಮಾಡುತ್ತಿದ್ದಾರೆ, ಆದರೆ ಕೂಲಿಯನ್ನೇ ಅವಲಂಬನೆ ಮಾಡುತ್ತಿರುವ ಬಡಜನಕ್ಕೆ ಇಂತಹ ಅವಕಾಶಗಳಿಲ್ಲ. ಸರಕಾರ ಇಂತಹ ಬಡಜನರಿಗೆ ಸರಕಾರದ ಖರ್ಚಿನಿಂದ ಔಷಧಿಗಳ ಸಹಾಯವನ್ನು ಒದಗಿಸುವ ಏರ್ಪಾಡು ಮಾಡಬೇಕು, ವಿದ್ಯಾಭ್ಯಾಸದಲ್ಲಿ ಕೂಡ ಈ ಕೂಲಿ ಜನರು ಬಹಳ ಹಿಂದುಳಿದಿದ್ದಾರೆ. ಹೊಸದಾಗಿ ವ್ಯವಹಾರ ಮಾಡುತ್ತಿರುವ ಕಾರ್ಮಿಕರುಗಳಿಗಾಗಿ ಸಹಾಯ ಮಾಡಲು ಇಂದು ಬಜೆಟ್ಟಿನಲ್ಲಿ ಕೂಡ ಸಾಕಷ್ಟು ಹಣವನ್ನು

ಒದಗಿಸಿಲ್ಲ. ಇನ್ನು ಅಗ್ರಿಕಲ್ಚರಲ್ ಲೇಬರರುಗಳಿಗೆ ಹಾಗೂ ಸಣ್ಣ ಪುಟ್ಟ ಹಿಡುವಳಿದಾರರುಗಳಿಗೆ ಅನುಕೂಲ ಮಾಡಿಕೊಡಬೇಕು. ಈ ಜನಕ್ಕೆ ವಿದ್ಯಾಭ್ಯಾಸದ ಸೌಲಭ್ಯಗಳು, ಸರಕಾರದ ನೌಕರಿ ಸೌಲಭ್ಯಗಳು ಪರಿಣಾಮಕಾರಿಯಾದ ರೀತಿಯಲ್ಲಿ ಇವರುಗಳಿಗೆ ಸಿಗುತ್ತಿಲ್ಲ. ಸರಕಾರದ ನೌಕರಿಯಲ್ಲಿರುವವರಿಗೆ ಎಲ್ಲ ಸಹಾಯಗಳೂ ಸಿಗುತ್ತವೆ. ಆದರೆ ಯಾವ ಬಡ ಜನರು ಸದಾ ಕಾಲದಲ್ಲೂ ಭೂಮಿಯಲ್ಲೇ ಇದ್ದು ಬೇಸಾಯ ಮಾಡುತ್ತಿದ್ದಾರೋ ಅಂತಹವರಿಗೆ ಲೇಬರರುಗಳಿಗೆ ಸಿಗುವಂತಹ ಮಿನಿಮಂ ಸೌಲಭ್ಯಗಳೂ ಸಿಗುತ್ತಿಲ್ಲ. ಇದನ್ನು ಒದಗಿಸುವುದರ ಕಡೆಗೆ ವ್ಯವಸ್ಥೆ ಮಾಡಬೇಕು. ಅನೇಕ ಕಡೆಗಳಲ್ಲಿರುವ ಗ್ರಾಮಾಂತರ ಜನರಿಗೆ ಸರಕಾರದವರೇನೋ ಜಮೀನುಗಳನ್ನು ಹಾಗೂ ಅದನ್ನು ಕೊಳ್ಳಲು ಹಣ ಸಹಾಯವನ್ನು ಸರಕಾರ ಮಾಡುತ್ತಿದ್ದರೂ ಅದು ಬಡಜನರಿಗೆ ಸರಿಯಾಗಿ ತಲಪುತ್ತಿಲ್ಲ. ಇದರ ಬಗ್ಗೆ ಒಂದೆರಡು ಸಲಹೆಗಳನ್ನು ಸರಕಾರಕ್ಕೆ ಕೊಡಬೇಕಾಗಿದೆ. ಸರಕಾರದವರು ಬೇರೆಕಾರ್ಮಿಕರಿಗೆ ಫೈನಾನ್ಷಿಯಲ್ ಏಡ್ ಕೊಡಬೇಕಾದರೆ ಅವರ ಸಂಘ ಸಂಸ್ಥೆಗಳ ಮೂಲಕ ಪಡೆದುಕೊಳ್ಳಬಹುದು, ಇದರಿಂದ ಸ್ವಲ್ಪಮಟ್ಟಿಗೆ ಹಣದ ಸಹಾಯ ಇವರಿಗೆ ಸಿಗುತ್ತಿದೆ. ಆದರೆ ಹಳ್ಳಿಗಾಡಿನಲ್ಲಿರುವ ಬಡಜನರು ಮೂರು ಹೊತ್ತು ಭೂಮಿಯ ಮೇಲೆ ಇದ್ದು ವ್ಯವಸಾಯ ಮಾಡುತ್ತಿರುವ ಜನರೇ ನಮಗೆಲ್ಲಾ ಮತಕೊಟ್ಟು ಇಲ್ಲಿಗೆ ಕಳುಹಿಸಿರುತ್ತಾರೆ, ಹಾಗೂ ನಮ್ಮ ಸರಕಾರಕ್ಕೆ ಅವರ ಬೆಂಬಲವನ್ನೂ ಕೊಟ್ಟಿದ್ದಾರೆ. ಇಂತಹ ಬಡಜನತೆಗೆ ಸರಕಾರ ಏನಾದರೂ ಅನುಕೂಲಗಳನ್ನು ಮಾಡುತ್ತದೆ ಎನ್ನುವ ಆಸೆಯನ್ನೂ ಇಟ್ಟುಕೊಂಡಿದ್ದಾರೆ. ಇದಕ್ಕಾಗಿ ಸಾಧ್ಯವಾದ ಮಟ್ಟಿಗೆ ಇಂತಹ ಜನರ ಸಂಕಷ್ಟಗಳನ್ನು ನಿವಾರಣೆ ಮಾಡುವುದು ಸರಕಾರದ ಆದ್ಯ ಕರ್ತವ್ಯ. ಇದರಲ್ಲೂ ಸಹ ಅಗ್ರಿಕಲ್ಚರಲ್ ಆಪರೇಷನ್ಸ್ ಆಗುತ್ತಿರುವ ಕಡೆಗಳಲ್ಲಿ ಇನ್ನೂ ಜೀತಾ ಸಿಸ್ಟಂ ಜಾರಿಯಲ್ಲಿದೆ. ಈ ಬಡಜನರನ್ನು ಎಕ್ಸ್‌ಪ್ಲಾಯಿಟ್ ಮಾಡುತ್ತಿರುವುದರಿಂದ ಇಂದೂ ಕೂಡ ಕೆಲವು ಕಡೆಗಳಲ್ಲಿ ಜೀತಾ ಪದ್ಧತಿ ಇದೆ. ಇದು ನೂರಾರು ವರ್ಷಗಳಿಂದಲೂ ಬಂದಿರುವ ಒಂದು ಕೆಟ್ಟ ಪದ್ಧತಿ. 20–25 ವರ್ಷಗಳ ಹಿಂದೆ ಐವತ್ತು ಇಲ್ಲವೇ ನೂರು ರೂಪಾಯಿಗಳನ್ನು ಸಾಲವಾಗಿ ಕೊಟ್ಟು ಅದು ತೀರುವವರೆಗೂ ಅದರ ಬಡ್ಡಿಗಾಗಿ ಅವರ ಮನೆಯಲ್ಲಿ ಜೀತ ಮಾಡಿ ದುಡಿಯುವುದು ವಾಡಿಕೆಯಾಗಿ ಬಂದಿದೆ. ಇದರಲ್ಲಿ ಒಬ್ಬರು ಸಾಲ ಕೊಟ್ಟರೆ ಅವನು ಸತ್ತ ಮೇಲೆ ಅವನ ಮಕ್ಕಳು ಇಲ್ಲವೇ ಮೊಮ್ಮಕ್ಕಳು ಕೂಡ ಸಾಲ ಕೊಟ್ಟವರ ಮನೆಯಲ್ಲಿ ದುಡಿಯುತ್ತ ಬರುತ್ತಿದ್ದಾರೆ. ಇದರ ರಕ್ಷಣೆ ಎಲ್ಲಾ ಅವರಿಗೇ ಸೇರಿರುತ್ತೆ. ಅವರಲ್ಲಿದ್ದ ಅಲ್ಪ ಸ್ವಲ್ಪ ಜಮೀನು ಕೂಡ ಅವರಿಗೇ ಸೇರಿಹೋಗುತ್ತದೆ. ಆ ಜಮೀನು ಸಾಲ ಪೂರೈಕೆಯಾಗುವವರೆಗೂ ಅವರು ದುಡಿದು ಸಾಲ ತೀರಿಸಿ ಋಣಮುಕ್ತವಾಗಬೇಕು. ಇಂತಹ ಜನರನ್ನು ಎಕ್ಸ್‌ಪ್ಲಾಯಿಟ್ ಮಾಡುವವರು ಹೆಚ್ಚಾಗಿದ್ದಾರೆ. ಇದಕ್ಕಾಗಿ ಸರಕಾರ ಸಹಾಯ ಮಾಡಲು ಮುಂದೆ ಬರಬೇಕು ಮತ್ತು ಇಂತಹ ಬಡಜನರು ಅವರೇ ಒಂದು ಸಂಘ ಅಥವಾ ಸಂಸ್ಥೆಗಳನ್ನು ಕಟ್ಟಲು ಪ್ರೋತ್ಸಾಹ ಮಾಡಿಕೊಡಬೇಕು ಮತ್ತು ಲೇಬರು ಇಲಾಖೆಯಲ್ಲಿ ಇಂತಹ ಜನಕ್ಕಾಗಿಯೇ ಒಂದು ವೆಲ್‌ಫೇರ್ ಫಂಡನ್ನು ತೆಗೆಯಬೇಕು. ಎಜುಕೇಶನ್ ಡಿಪಾರ್ಟ್‌ಮೆಂಟಿನಲ್ಲಿ ಹಾಗೂ ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಇವರಿಗಾಗಿ ಸ್ವಲ್ಪ ಹಣ ತೆಗೆದಿಟ್ಟು ಇದನ್ನು ಅಗ್ರಿಕಲ್ಚರಲ್ ಲೇಬರರ್ಸ್ ವೆಲ್‌ಫೇರ್‌ಗಾಗಿ ಮೀಸಲಾಗಿಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಇಂತಹ ಬಡ ಜನಕ್ಕಾಗಿ ಎಂದು ಸರಕಾರ ಐವತ್ತು ಎಕರೆ ಭೂಮಿ ಕೊಟ್ಟರೆ ಇದನ್ನು ಅವರು ಒಬ್ಬರೇ ಉತ್ತು ಬೆಳೆ ಮಾಡಲು ಅಸಾಧ್ಯವಾಗುತ್ತದೆ. ಆಗ ಬೇರೆಯವರನ್ನು ಆಶ್ರಯ ಮಾಡಬೇಕಾಗುತ್ತದೆ. ಇದಕ್ಕಾಗಿ ಯಾವುದಾದರೂ ಒಂದು ಲಿಮಿಟ್ ಇಟ್ಟು ವೆಲ್‌ಫೇರ್ ಸೆಸ್ ಎಂದುಹಾಕಿ ವಸೂಲು ಮಾಡಬಹುದು. ಇದಕ್ಕಾಗಿ ಬೇಕಾದರೆ ಒಂದು ಕಾನೂನು ಮಾಡಿ ತರಬಹುದು, ಇಂತಹ ಒಂದು ವೆಲ್‌ಫೇರ್ ಫಂಡನ್ನು ಮಾಡುವುದರ ಕಡೆಗೆ ಸರಕಾರ ಲಕ್ಷ್ಯ ಕೊಡಬೇಕು. ಸ್ವಲ್ಪ ಶ್ರೀಮಂತರಾಗಿರುವವರು ಇಂತಹ ತೆರಿಗೆಯನ್ನು ಕೊಡಬಹುದು.

ಸರಕಾರ ಈ ತೆರಿಗೆಯನ್ನು ವಸೂಲು ಮಾಡಿ ಇಂತಹ ಬಡ ಜನಕ್ಕೆ ಸಹಾಯಮಾಡಬೇಕೆಂದು ಇಲ್ಲಿ ಸಲಹೆ ಮಾಡುತ್ತೇನೆ.

ಇನ್ನು ಗವರ್ನಮೆಂಟ್ ಡಿಪಾರ್ಟ್‌ಮೆಂಟುಗಳಲ್ಲಿ ಸರಕಾರ ಕ್ಯಾಷುಯಲ್ ಲೇಬರರುಗಳು ಎಂದು ಪಿ.ಡಬ್ಲ್ಯು.ಡಿ. ಎಲೆಕ್ಟ್ರಿಸಿಟಿ ಬೋರ್ಡು, ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ, ಅಗ್ರಿಕಲ್‌ಚರ್ ಹಾಗೂ ಸೆರಿಕಲ್‌ಚರ್ ಡಿಪಾರ್ಟ್‌ಮೆಂಟುಗಳಲ್ಲಿ ಇಂತಹ ಕಾರ್ಮಿಕರುಗಳನ್ನು ನೇಮಿಸಿ ಕೊಳ್ಳುತ್ತಿದ್ದಾರೆ. ಆದರೆ ನ್ಯಾಯವಾಗಿ ಕೊಡಬೇಕಾದ ಮಿನಿಮಂ ವೇಜಸ್‌ಗಳನ್ನೂ ಕೊಡುವುದು ಬಹು ಕಡಿಮೆ. ಈಚೆಗೆ ಪಿ. ಡಬ್ಲ್ಯು. ಡಿ. ಮಂತ್ರಿಗಳು ಇಲ್ಲಿ ಒಂದು ಸಂದರ್ಭ ದಲ್ಲಿ ಹೇಳಿದಾಗ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಕೂಲಿ ಕೊಡುತ್ತಿರುವುದು ಕನಿಷ್ಟ ಒಂದು ಆಳಿಗೆ ಕೂಲಿ ಕೊಡುತ್ತಿರುವುದು 1-40 ಪೈಸೆ. ಆದರೆ ಎಷ್ಟು ಕಾಲ ಕೆಲಸ ಮಾಡುತ್ತಾರೆಂದು ತಿಳಿಸಲಿಲ್ಲ. ಒಂದು ತಿಂಗಳಿಗೆ ಹತ್ತು ರೂಪಾಯಿಗಳು ಡಿ. ಎ. ಸೇರಿ ಎಂದು ಹೇಳಿದರು. ಅಗ್ರಿಕಲ್‌ಚರಲ್ ಲೇಬರರುಗಳು ಒಂದು ದಿನಕ್ಕೆ ಎಂಟು ಗಂಟೆ ಕಾಲ ಕೆಲಸ ಮಾಡುತ್ತಾರೆ. ಇಂತಹ ಜನಕ್ಕೆ ಇಂದಿನ ಸ್ಟ್ಯಾಂಡರ್ಡಿನಲ್ಲಿ ಒಂದು ದಿನಕ್ಕೆ ಕೇವಲ 1-40 ಪೈಸೆ ಎಂದು ಕೊಟ್ಟರೆ ಇದರಿಂದ ಅವರು ಯಾವ ರೀತಿ ಜೀವನ ಮಾಡಲು ಸಾಧ್ಯ? ಸರಕಾರ ಅಂಗೀಕರಿಸಿರುವ ಸಮಾಜ ವಾದದ ತತ್ವಕ್ಕೆ ಇದು ಸರಿಹೋಗುವುದಿಲ್ಲ. ಇದಕ್ಕಾಗಿ ಇವರ ವೇಜಸ್‌ಗಳನ್ನು ಕೊಡುವುದರ ಬಗ್ಗೆ ರಿವೈಸು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಸರಕಾರದ ನೌಕರರುಗಳಿಗೆ ಜೀವನ ವೆಚ್ಚ ಹೆಚ್ಚಾಯಿತು ಎಂದು ಅವರು ಡಿಮ್ಯಾಂಡುಗಳನ್ನು ಮಾಡಿದಂತೆ ಸರಕಾರ ಹೆಚ್ಚು ಮಾಡಿದೆ, ಸುಮಾರು ಹತ್ತೊಂಬತ್ತು ಸಾರಿ ಈ ರೀತಿ ಸರಕಾರದ ನೌಕರರುಗಳಿಗೆ ಅವರ ವೇತನಗಳನ್ನು ಹೆಚ್ಚುಮಾಡಿ ಕೊಡುತ್ತಿದ್ದಾರೆ. ಬಹುಶಃ ಇಂತಹ ನೌಕರರುಗಳಿಗಾಗಿಯೇ ಸುಮಾರು 78 ಕೋಟಿಯಷ್ಟು ಖರ್ಚಾಗುತ್ತಿದೆ. ಇನ್ನು ವ್ಯವಸಾಯ ಕಾರ್ಮಿಕರಿಗೆ ಎಷ್ಟು ಸಲ ವೇಜಸ್‌ಗಳನ್ನು ರಿವೈಸು ಮಾಡಿದ್ದಾರೋ ನನಗಂತೂ ಗೊತ್ತಿಲ್ಲ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇದರಲ್ಲಿ ಸ್ಕಿಲ್ಡ್ ಲೇಬರರುಗಳಿಗೆ ಒಂದು ರೀತಿ ಕೂಲಿ ಅನ್‌ಸ್ಕಿಲ್ಡ್ ಲೇಬರರುಗಳು ಎಂದು 1-40 ಪೈಸೆ ಕೊಟ್ಟರೆ ಇದರಿಂದ ಜನಕ್ಕೆ ಅನುಕೂಲಗಳು ಸಿಗುವುದಿಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿ ಮುಂದೆ ಲ್ಯಾಂಡ್ ರಿಫಾರಂಸ್ ಕಾನೂನು ತರುವಾಗ ಸರಕಾರ ಪ್ರತಿಯೊಬ್ಬರಿಗೂ ಎಷ್ಟು ಖರ್ಚು ಬರುತ್ತೆ ಇದನ್ನು ನೋಡಿ ಕೊಡಬೇಕು ಮತ್ತು ಇದರ ಕಡೆಗೆ ಸಾಕಷ್ಟು ಗಮನ ಕೊಡುವುದುಸೂಕ್ತ.

ಈ ಮಿನಿಮಮ್ ವೇಜಸ್ ಆಕ್ಟ್ ಬಗ್ಗೆ ಸರ್ಕಾರದವರೇ ಷೆಡ್ಯೂಲ್ ಪಾರ್ಟ್—1 ಮತ್ತು ಷೆಡ್ಯೂಲ್ ಪಾರ್ಟ್—2 ಎಂದು ತಯಾರು ಮಾಡಿದ್ದಾರೆ. ಷೆಡ್ಯೂಲ್ ಪಾರ್ಟ್—1 ರಲ್ಲಿ ಹತ್ತು ಹನ್ನೊಂದು ಐಟಂಗಳನ್ನು Construction and maintenance of roads and buildings ಗೆ ಸಂಬಂಧಪಟ್ಟಂತೆ ಸೇರಿಸಿದ್ದಾರೆ. ಹೊಸದಾಗಿ ಕೆಲವನ್ನು ಸೇರಿಸಲಾಗಿದೆ, ಈಗ ಒಟ್ಟು 29 ಐಟಂಗಳು ಇದರಲ್ಲಿ ಸೇರಿವೆ ಎಂದು ಸರ್ಕಾರದವರು ಹೇಳಿದ್ದಾರೆ. ಒಂದು ಪಕ್ಷ ಕೆಲವನ್ನು ಸೇರಿಸದೇ ಇದ್ದ ಪಕ್ಷದಲ್ಲಿ ಕೂಡಲೇ ಸೇರಿಸಿ ಮಿನಿಮಂ ವೇಜಸನ್ನು 4 ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಂದು ವ್ಯವಸಾಯ ಕ್ಷೇತ್ರವನ್ನು ಸಹ ಇದರಲ್ಲಿ ಸೇರಿಸಿದ್ದರೂ ಸಹ ಅನೇಕರಿಗೆ ಸರ್ಕಾರದವರು ನಿಗದಿ ಮಾಡಿದ ಸಂಬಳ ಸಿಗುತ್ತಿಲ್ಲ. ಕೆಲವು ಭೂಮಾಲೀಕರು ವ್ಯವಸಾಯ ಕಾರ್ಮಿಕರನ್ನು ತಮ್ಮ ಮನೆಯಲ್ಲಿ ಜೀತಕ್ಕೆ ಪ್ರೋನೋಟ್ ಬರೆಸಿಕೊಂಡು ಇಟ್ಟು ಕೊಂಡಿರುತ್ತಾರೆ. ಇಂತಹವರಿಗೆ ಭೂಮಾಲೀಕರು ಸರಿಯಾದ ಸಂಬಳ ಕೊಡುವುದಿಲ್ಲ, ಇಂತಹ ಸಂದರ್ಭಗಳಲ್ಲಿ ಜೀತಕ್ಕೆ ಇರುವವರ ಕಾನೂನು ಪ್ರಕಾರ ಲೇಬರರ್ಸ್ ಕೋರ್ಟಿನಲ್ಲಿ ಪ್ಲೀಡ್ ಮಾಡಬಹುದು. ಆದರೆ ಕೋರ್ಟಿಗೆ ಒಪ್ಪಿಗೆಯಾಗುವಂಥ ಸಾಕ್ಷಿ ಕೊಡುವುದು

ಕಷ್ಟವಾಗುತ್ತದೆ. ನಾನು ಲಾಯರ್ ಆಗಿ ಕೆಲಸ ಮಾಡಿದ ಅನುಭವದಿಂದ ಇದನ್ನು ಹೇಳುತ್ತಿದ್ದೇನೆ. ಸರಿಯಾದಂಥ ಸಾಕ್ಷಿ ಕೊಡುವುದು ಕಷ್ಟವಾದ್ದರಿಂದ ಅವರು ಕೋರ್ಟಿನಲ್ಲಿ ಗೆಲ್ಲುವುದು ಕಷ್ಟವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಏನು ಮಾಡಬೇಕೆಂದರೆ, ಕೆಲಸಗಾರರಾದವರು ಇಂತಹವರ ಮನೆಯಲ್ಲಿ ಕೂಲಿಗಾಗಿ ಕೆಲಸ ಮಾಡುತ್ತಿದ್ದೇನೆಂದು ಹೇಳಿದರೆ ಮತ್ತು ಇಷ್ಟು ಸಂಬಳ ಬಾಕಿ ಬರಬೇಕಾಗಿದೆ ಎಂದು ಕೋರ್ಟಿನಲ್ಲಿ ಹೇಳಿಕೆ ಕೊಟ್ಟರೆ Burden of proof must be placed on the employer. ಅಂದರೆ ಬರ್ಡನ್ ಎಂಪ್ಲಾಯರ್ ಮೇಲೆ ಇರಬೇಕೇ ಹೊರತು ಎಂಪ್ಲಾಯಿ ಮೇಲೆ ಇರಬಾರದೆಂದು ಹೇಳುತ್ತೇನೆ.

ಇನ್ನು ಮೋಟಾರ್ ವಹಿಕಲ್ಸ್ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಮಾನ್ಯ ಸದಸ್ಯರು ಕೆಲವರು ಈ ಇಲಾಖೆಯಲ್ಲಿ ಲಂಚರುಷುವತ್ತು ಬಹಳ ಜಾಸ್ತಿ ಇದೆ ಎಂದು ಹೇಳಿದರು. ಅದರಲ್ಲಿಯೂ ಡ್ರೈವರ್ ಮತ್ತು ಕಂಡಕ್ಟರ್‌ಗಳಿಗೆ ಲೈಸೆನ್ಸ್ ಕೊಡುವಾಗ ಇದು ಇದ್ದೇ ಇರುತ್ತದೆ ಎಂದು ಹೇಳಿದರು. ಇದನ್ನು ಪೂರ್ತಿಯಾಗಿ ಹೋಗಲಾಡಿಸುವುದು ಕಷ್ಟವಿದೆ. Practically it is impossible. ಆದರೂ ಇದನ್ನು ಯಾವರೀತಿ ಕಡಿಮೆ ಮಾಡಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಯಾರು ಲೈಸೆನ್ಸ್ ಬೇಕೆಂದು ಅರ್ಜಿ ಹಾಕಿ ಕೊಳ್ಳುತ್ತಾರೋ ಅಂತವರ ಬಗ್ಗೆ ಒಂದು ಸೀರಿಯಲ್‌ವಾರ್ ಲಿಸ್ಟನ್ನು ತಯಾರು ಮಾಡಬೇಕು. ಅದರ ಪ್ರಕಾರ ಲೈಸನ್ಸ್ ಕೊಡುತ್ತಾ ಹೋಗಬೇಕು. ಹತ್ತು ಜನ ಲೈಸೆನ್ಸ್‌ಗೆ ಅರ್ಜಿ ಹಾಕಿಕೊಂಡಾಗ, ಆ ಹತ್ತು ಜನರನ್ನು ಬಿಟ್ಟು ಹನ್ನೊಂದನೆಯವನಿಗೆ 'ಏನಾದರು ಲೈಸೆನ್ಸ್ ಕೊಟ್ಟರು ಎಂದು ಗೊತ್ತಾದರೆ there must d- some thing ಎನ್ನತಕ್ಕಂಥ presumption ಬರುತ್ತದೆ. ಅದಕ್ಕೆ ಅವಕಾಶ ಕೊಡದಿರಬೇಕಾದರೆ, ಹನ್ನೊಂದನೆಯವರಿಗೆ ಯಾವ ಕಾರಣಕ್ಕಾಗಿ ಕೊಟ್ಟರು, ಮೊದಲು ಹತ್ತು ಜನರಿಗೆ ಯಾವಕಾರಣಕ್ಕಾಗಿ ಕೊಡಲಿಲ್ಲ ಎಂಬುದನ್ನು ಸಂಬಂಧಪಟ್ಟವರಿಗೆ ವಿವರವಾಗಿ ತಿಳಿಸಬೇಕು. ಈ ಪದ್ಧತಿಯನ್ನು ಜಾರಿಗೆ ತರದಿದ್ದರೆ ಲಂಚ ತೆಗೆದುಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಆದ್ದರಿಂದ ಇದರ ಕಡೆಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ಬಗ್ಗೆ ಮಾನ್ಯ ಸದಸ್ಯರು ಬೇಕಾದಷ್ಟು ವಿಷಯಗಳನ್ನು ಹೇಳಿದ್ದಾರೆ. ಈ ಇಲಾಖೆಯಲ್ಲಿ ನ್ಯೂನತೆಗಳು ಇವೆ ಎಂದು ತಿಳಿಸಿದ್ದಾರೆ. ಇಂತಹ ನ್ಯೂನತೆಗಳು ಎಲ್ಲ ಇಲಾಖೆಯಲ್ಲಿಯೂ ಇರುತ್ತವೆ. ಅದರಲ್ಲಿಯೂ ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವ ಈ ಇಲಾಖೆಯಲ್ಲಿ ನ್ಯೂನತೆಗಳು ಇರುವುದು ಸಹಜ. ಇದನ್ನು ಪೂರ್ತಿಯಾಗಿ ಹೋಗಲಾಡಿಸುವುದು ಯಾರಿಗೂ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಆದರೆ ಈ ದಿಕ್ಕಿನಲ್ಲಿ ಎಷ್ಟರಮಟ್ಟಿಗೆ ಕಡಿಮೆ ಮಾಡಬಹುದು ಎಂಬ ಬಗ್ಗೆ ಈಗಾಗಲೇ ಕಾರ್ಪೊರೇಷನ್ ಅವರು ಕೆಲಸ ಮಾಡುತ್ತಿದ್ದಾರೆ. ಪಿಲ್‌ಫರೇಜ್ ಕಡಿಮೆ ಮಾಡುವುದಕ್ಕೆ ಸ್ಪೆಷಲ್ ಸ್ಕ್ವ್ಯಾಡ್ ಇಟ್ಟು ಅವರ ಮೂಲಕ ಚೆಕಿಂಗ್ ಮಾಡಿಸುತ್ತಿದ್ದಾರೆ. ಇಂದು ಸಾವಿರಾರು ಬಸ್‌ಗಳನ್ನು ಓಡಾಡಿಸುತ್ತಿರುವುದರಿಂದ ಪ್ರತಿಯೊಂದು ಬಸ್ಸನ್ನು ಚೆಕ್ ಮಾಡಬೇಕೆಂದರೆ ಸ್ಪೆಷಲ್ ಸ್ಕ್ವ್ಯಾಡನ್ನು ಜಾಸ್ತಿ ಮಾಡಬೇಕಾಗುತ್ತದೆ. ಈ ರೀತಿ ಜಾಸ್ತಿ ಮಾಡಲು ಖರ್ಚು ಎಷ್ಟು ಬರುತ್ತದೆ ಎಂಬುದನ್ನು ನೋಡಬೇಕು. ಇವರೂ ಸಹ ಸರಿಯಾಗಿ ಚೆಕ್ ಮಾಡುವುದಿಲ್ಲ ಎಂದರೆ ಇವರ ಮೇಲೆ ಮತ್ತೆ ಚೆಕ್ ಮಾಡಲು ಸಿಬ್ಬಂದಿ ಇಟ್ಟರೆ ಮತ್ತೂ ಖರ್ಚು ಜಾಸ್ತಿ ಬರುತ್ತದೆ. ಈ ದಿಕ್ಕಿನಲ್ಲಿ ಮಿನಿಮೈಸ್ ಮಾಡುವುದಕ್ಕೆ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟನ್ನೂ ಸಹ ಮಾಡುತ್ತಿದ್ದಾರೆ.

ಇಂದು ಕಾಂಟ್ರ್ಯಾಕ್ಟ್ ಬಸ್‌ಗಳು ಓಡಾಡುತ್ತಿರುವುದರಿಂದ ಎಂ. ಎಸ್. ಆರ್. ಟಿ. ಸಿ. ಬಸ್‌ಗಳಿಗೆ ನಷ್ಟವಾಗುತ್ತಿದೆ, ಆದ್ದರಿಂದ ಇವುಗಳನ್ನು ಸಹ ರಾಷ್ಟ್ರೀಕರಣ ಮಾಡಬೇಕೆಂದು ಕೆಲವರು

ಹೇಳಿದ್ದಾರೆ. ಮತ್ತೆ ಕೆಲವರು ಮಾಡಬಾರದು ಎಂದು ಹೇಳಿದ್ದಾರೆ. ಈ ಬಗ್ಗೆ ಯೋಚನೆ ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಈಗಿನ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಇವುಗಳನ್ನು ಸಹ ರಾಷ್ಟ್ರೀಕರಣ ಮಾಡುವುದು ಒಳ್ಳೆಯದು. ಆದರೆ ಆ ರೀತಿ ಮಾಡುವಾಗ ಆ ದಿಶೆಯಲ್ಲಿ ಬರುವ ಕಷ್ಟನಷ್ಟಗಳನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಇವುಗಳನ್ನು ವಹಿಸಿಕೊಂಡರೆ, ಆ ವಾಹನಗಳಿಗೆ ಬೇಕಾದಂಥ ಸ್ಪೇರ್ ಪಾರ್ಟ್ಸ್ ಮತ್ತು ಇತರೇ ಸಲಕರಣೆಗಳು ಸಾಕಷ್ಟು ಪ್ರಮಾಣದಲ್ಲಿ ಇದೆಯೋ ಎಂಬುದನ್ನು ನೋಡಿಕೊಂಡು ಬೈ—ಸ್ಟೇಜಸ್ ರಾಷ್ಟ್ರೀಕರಣ ಮಾಡುವುದು ಒಳ್ಳೆಯದೆಂದು ಸಲಹೆ ಮಾಡಿ, ನನಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri ABDUL KHUDDUS ANWAR (Bhadravati).—Madam Speaker, while supporting the Demand of the Labour Department, I wish to point out certain irregularities that are going on in the Labour Department. The Labour Department is set up to look after the welfare of the labour and to help in the speedy settlement of issues like bonus, gratutity and other benefits to the workers. In this regard the department is working very slow. I do not know how the affairs in the department have improved after the appointment of new officer. I think about 14 settlements have been reached during the short period. Due to the unnecessary interference of the Government, the department has become lethargic and has no interest in the settlement of several issues like bonus, fitments and other things. I will give a particular instance which is pending for the last four years.

Hon. Member Sri Siddappa was kind enough to say that some matters have gone to the Supreme Court. The matter is pending with the Government since last four years. Inspite of our repeated requests and sincere efforts there was a lock-out. Mr. Krishna was well aware and he also said that the lock-out was due to the mistake of management and not due to labour unrest. Our labour is one of the best in the State and particularly the labourers of Bhadravathi Iron & Steel, Tungabhadra Sugar factory and Mysore Paper Mills. They are very disciplined. Inspite of their following the code of discipline there was unnecessary interference of the management to help some of their people. Government had also come to a settlement recently and they had agree to give fitment also, but so far, no action has been taken in this direction. As a result of

this delay the people are dejected and the production has also gone down.

Then with regard to bonus I would like to mention that though the Bonus Act came into effect long ago and inspite of my best efforts the labourers working in Mines have not been given the bonus. The Conciliation Officer also passed an order that bonus for 1971-72 and 1972-73 should be paid to them, but unfortunately that order has not been implemented.

I have repeatedly requested the Government to do away with this contract labour. The contract labour should be abolished and all the labourers working in the mines should be treated as work-charged employees.

There has been the maximum production of 2 lakh tonnes of cement this year in the Cement plant. Though it was agreed long ago to give incentive bonus to the employees of the Cement plant so far that has not been given. The matter is still pending. I don't know why the Hon. Minister has not even given a reply to me as to whether this incentive bonus to Cement plant employees will be given or not.

Most of the cases with regard to maternity benefits, gratuity and bonus are still pending. Even though the Hon. Minister for Industries also stated that the employees of mines are entitled to bonus and other benefits no action has yet been taken to give these benefits to the employees.

Then in respect of elections to various employees associations in Mysore Paper Mills, Mysore Iron & Steel and Tungabhadra Sugar Factory, Hon. Member Sri Krishna stated that I was responsible for stopping these elections. I have been repeatedly insisting and requesting the Government to see that elections to the three unions of these concerns are conducted immediately. But so far action has not been taken in this regard.

Then in respect of Employment Exchanges, I would like to mention that there is lot of corruption going on. Some of the officers of Employment Exchanges join hands with the managements of industrial concerns and try their best to see that their

own people are selected and appointed. They will send list after list are rejected till the list of persons of their own choice appear in the list. The Employment Exchange officers should act independently and send the names of persons according to seniority of their registration for being selected and appointed.

The Sugar factories and other factories are not strictly adhering to the rules of recruitment. Now-a-days it has become a fashion to appoint some of the relatives of the officers directly ignoring the claims of those who have registered their names in the employment exchanges.

The Committees to look after the amenities to be provided to labourers has not been appointed by the Government for the past two and a half years. Action should be taken to set up these committees so that the labour get their legitimate benefits.

Then in the appointment of recruitment committees for labour and employment exchange committee the sitting members have been removed and instead of appointing local people, persons from other constituencies are being appointed in these committees. There is lot of discrimination being shown in the appointment of these committees.

Then lastly with regard to the special squad in the R. T. Os. Office, I would like to mention that even these people have joined hands with the police and are indulged in corruption. Corruption has increased with the introduction of this special squad in the R. T. Os. Office. I would request the Hon. Minister to abolish this special squad in the R. T. Os. Office. I feel that this special squad is meant for taking special bribe.

With these words, I thank the Chair and conclude my speech.

Sri C. M. ARUMUGHAM (K. G. F.).—

Madam Speaker, I understand that the Government are planning to take over about 400 contract carriages now run by private people. Though the Government have a large number of officers, technicians and are spending crores of rupees on transport, they are not in a position to provide better facilities in

transport to the public. Though the private contract carriage owners come from a lower strata, they are running these contract carriages very well and they strictly adhere to the timings. The breakdowns in Government buses are very common-break-down means loss of life and property. These breakdowns should be avoided. Of course, the Minister for Transport is taking interest and has purchased some new buses. In the Bombay-Karnatak and Hyderabad-Karnatak areas the MSRTC buses are not in good condition as a result of which the passengers get pain all over the body if they were to travel even a small distance of 10 to 20 miles. If the engineers and staff in charge are not able to give better facilities to the public, why are they meant for ?

The contract carriages have become a parallel Road Transport Corporation. These contract carriage buses earn four times more than what the MSRTC buses earn. We have seen that almost all the MSRTC buses running empty. I hold a MSRTC pass, but I have never travelled in MSRTC bus—I am prepared to give it back because there are a number of breakdowns. We see that the contract carriage buses are always full ; they pick up regular passengers also. The Government have given them permits to run buses between Belgaum and Bangalore, Bijapur and Bangalore, Coorg and Bangalore, and so on and so forth. Some Hon. members of this House are also running contract carriages. While these people earn more, the MSRTC is losing. Apart from nationalising these, can the Government not compete with these individuals ? In addition to an army of officers in the department, they have a Secretary to Government at the Secretariat level for this department. Can they not take proper steps to compete with private people ? The contract carriages charge less than the MSRTC buses. I request the Government to think over all these aspects before they decide to take over the contract carriages.

There is a Area Transport Authority in every district. These are not functioning properly. I hold the Hon. Minister responsible for this. When the Government has nationalised so many routes, where was the necessity to give permits to contract carriages ? When the Government has committed itself for

nationalisation of all the routes, how could these Regional Transport authorities grant permits to contract carriages ? I understand the Deputy Commissioner, the Superintendent of Police and the Executive Engineer of the district are on this Committee. How could these people act against the very policy of the Government in issuing licenses ? Madam Speaker, I am sorry to say that R.T.A. consists only of Congressmen as non-official members, who have no background about transport, and some of them have not even seen the Act. The Government should not make everything the property of the Congress Party and Congress members. I request the Government to put only competent persons on these committees. It had appeared in the Press that the Chief Minister in a meeting at Lal Bagh stated that he would like the fair-price shops being run by Congressmen. Does the Government belong to the Congress Party and its members only ? What about others ? If the Government wants to have non-official members on these Committees, they should select men of experience and administrative capacity and put them on these committees.

My friends Sri Krishnan and others spoke in detail about labour and they held a word of praise for the Labour Minister for he intervened in several labour disputes and settled them. It is a good thing for the Government to intervene in labour disputes and avoid unnecessary frustration among the workers and unnecessary delay in conciliation proceedings. I have something to say about the officers of the Labour Department. Most of these officers are not fully qualified. Unless they have the background about labour laws and know the difficulties of the workers, there is going to be delay in the conciliation proceedings.

I would like to say a few words about the Labour Department at the Centre. The Chief Labour Commissioner down to the Labour Officers in the Government of India are all qualified persons in labour matters. These officers are all specialised in labour matters. But in Mysore State, any I.A.S. Officer from the general pool will be appointed as Labour Commissioner who will not be having the knowledge of labour and the management. Such officers would be anti-labour and they would also support the managements. They would be helping the managements because some of their relatives might be running the industries. He will not have the mental outlook to help the

labour. The I.A.S. Officer will be lacking in assisting the labourers. He will not have the mental outlook to settle the labour disputes. I am of the view that I.A.S. Officers from the general pool who are not having the knowledge of labour matters should not be posted to the Labour Department.

MADAM SPEAKER.—The Hon. Member must conclude now.

Sri C. M. ARUMUGHAM.—During the stewardship of the present Minister, though he had held out so many assurances to help the labour, he has not implemented any of his assurances. He has not given any thought to improve the worker-management relations in the industries. He has not even dreamt of such a scheme. There are several public sector undertakings working on loss every year. As already pointed out by Sri M. S. Krishnan, the co-operation of the labour should be sought in increasing the production. If there is real co-operation between the labour and the management, the production would increase to a great extent. The labour should be allowed to participate in the management.

MADAM SPEAKER.—Now the Hon. Member must conclude his speech.

Sri C. M. ARUMUGHAM.—Unless sufficient time is given to me to offer my views, I cannot do full justice to the Demand under discussion. The Hon. Speaker need not be so curt towards me. How can I stop without concluding my speech? This is not at all good.

MADAM SPEAKER.—I am sorry I cannot help it.

Sri C. M. ARUMUGHAM.—I resent the action of the Hon. Speaker and I do not want to participate in this debate.

MADAM SPEAKER.—There cannot be a special favour to Hon. Member Sri Arumugham.

Sri C. M. ARUMUGHAM.—The Hon. Speaker cannot curtail my liberty to speak. It is wrong to do so.

MADAM SPEAKER.—The Hon. Member cannot say so many things.

Sri C. M. ARUMUGHAM.—I can say thousand things.

(He withdrew from the House.)

ಶ್ರೀ ಎಚ್. ಡಿ. ದೇವೇಗೌಡ :—ಇವತ್ತು ನಾನ್-ಅಫಿಷಿಯಲ್ ಡೇಯನ್ನು ನಾವು ಬಿಟ್ಟುಕೊಟ್ಟಿದ್ದೇವೆ.

ಅಧ್ಯಕ್ಷರು:—ಎಲ್ಲ ಸದಸ್ಯರೂ ಮಾತನಾಡುವುದಕ್ಕಾಗುವುದಿಲ್ಲ, It will be very difficult for me to regulate the business of the House. The Hon. Leader of the Opposition has given me the list and I am following the list strictly and observing the time. I am sorry the time stipulated is not adhered to by the Members.

Sri H. SIDDAVEERAPPA.—As a disciplined Leader of the Opposition, he has taken care of it. Is the Hon. Member Sri C. M. Arumugham, right in saying so many things against the Hon. Speaker ? I do not think it is correct. As a matter of fact, the Opposition party has the greatest indulgence in this House. On this side, nobody has taken half the time of what they have taken.

ಶ್ರೀ ಎಚ್. ಡಿ. ದೇವೇಗೌಡ :—ನಾನು ಆ ದೃಷ್ಟಿಕೋನದಿಂದ ಹೇಳಲಿಲ್ಲ. ನಾನ್-ಅಫಿಷಿಯಲ್ ಬಿಸಿನೆಸ್ಸನ್ನು ಬಿಟ್ಟುಕೊಡುವುದಕ್ಕೆ ನಾವು ಒಪ್ಪಿಕೊಂಡಿದ್ದೇವೆ.

Sri H. SIDDAVEERAPPA.—The Hon. Members can have a dig at us but they should not be harsh towards the Speaker.

MADAM SPEAKER.—I can read out from the list the time taken by the Opposition members.

ಶ್ರೀ ಬಿ. ಸತ್ಯನಾರಾಯಣಸಿಂಗ್ (ಹೊಸಪೇಟೆ) :—ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಸದನದ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ಸಮರ್ಥನೆ ಮಾಡುತ್ತಾ ಸಂಬಂಧಪಟ್ಟ ಇಲಾಖೆಯ ಬಗ್ಗೆ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ. ಸುಮಾರು 33 ಕೋಟಿ ರೂಪಾಯಿಗಳ ಬಂಡವಾಳ ವಹಿಸಿರುವ ಮೈಸೂರು ಸಂಸ್ಥಾನದ ಸಾರಿಗೆ ಸಂಸ್ಥೆ ಎಷ್ಟು ಲಾಭದಾಯಕವಾಗಿ ಕೆಲಸ ಮಾಡಬೇಕಾಗಿತ್ತೋ ಅಷ್ಟು ಲಾಭದಾಯಕವಾಗಿ ಕೆಲಸ ಮಾಡುತ್ತಾ ಇಲ್ಲ. ಸಾರ್ವಜನಿಕರಿಗೆ ಯಾವುದೇ ಪ್ರಯಾಣಿಕ ಸೌಲಭ್ಯಗಳು ಒದಗುತ್ತಾ ಇಲ್ಲ. ಈ ಸಂದರ್ಭದಲ್ಲಿ ಇವತ್ತಿನ ಈ ಸಂಸ್ಥೆಯ ಬಗ್ಗೆ ಕೇವಲ ಟೀಕೆ ಮಾಡದೆ ಕೆಲವಾರು ಸಲಹೆಗಳನ್ನೂ ಕೂಡ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಮೊಟ್ಟಮೊದಲನೆಯದಾಗಿ ಬೃಹದಾಕಾರವಾಗಿರುವ ಈ ಸಂಸ್ಥೆಯಲ್ಲಿ ಆಡಳಿತ ಚೊಕ್ಕಟವಾಗಿ ನಡೆಯಲು ಸಾಧ್ಯವಿಲ್ಲದ್ದಕ್ಕೆ ಇದನ್ನು ಕೂಡಲೇ ಚಿಕ್ಕ ಚಿಕ್ಕ ನಾಲ್ಕೈದು ಕಾರ್ಪೊರೇಷನ್‌ಗಳನ್ನಾಗಿ ಮಾಡಬೇಕೆಂದು ನಾನು ಇಚ್ಛೆಪಡುತ್ತೇನೆ. ಹಿಂದೆ ಮಾಡಿದಂಥ ಎಕ್ಸ್‌ಪೆರಿಮೆಂಟ್‌ಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಇದು ಯಶಸ್ವಿಯಾಗಿ ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ ನಾಲ್ಕೈದು ಮಿನಿ ಕಾರ್ಪೊರೇಷನ್‌ಗಳಾಗಿ ಪರಿವರ್ತನೆ ಮಾಡಿದರೆ ಕೆಲಸ ಬಹಳ ಚೊಕ್ಕಟವಾಗಿ ನಡೆಯುತ್ತದೆ.

ಆ ಒಂದು ದೃಷ್ಟಿಯಿಂದ ಇದರ ಬಗ್ಗೆ ಸರ್ಕಾರ ಯೋಗ್ಯಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಎರಡನೆಯದಾಗಿ ಇತ್ತೀಚೆಗೆ ಈ ಸದನದಲ್ಲಿ ನನಗೆ ಗೊತ್ತಿರುವ ಹಾಗೆ ನಮ್ಮ ಎಂ. ಎಸ್. ಆರ್. ಟಿ. ಸಿ. ಸಂಸ್ಥೆಯವರು ಈಗ ಕೆಲವು ಬೆಂಗಳೂರು ಚಾಸಿಗಳನ್ನು ಖರೀದಿ ಮಾಡುವುದಕ್ಕೆ ಹೋಗಿದ್ದಾರೆ. ನನ್ನ ಅನುಭವದಿಂದ ಒಂದು ಮಾತನ್ನು ಹೇಳುತ್ತೇನೆ. ಅದರಲ್ಲಿ ಒಂದು ದೊಡ್ಡ ಘಾತಕ ಇವತ್ತಿನ ದಿವಸ ಈ ಸಂಸ್ಥೆಗೆ ಬಂದಿದೆ. ಸ್ಟುಡೆಬೇಕರ್, ಬೆಡ್-ಫೋರ್ಡ್ ಮತ್ತು ಬೆಂಜ್ ಹಾಗೂ ಬೆಂಗಳೂರು ಚಾಸೀಸ್ ಬಗ್ಗೆ ಒಂದರಿಂದಲೇ ಸೇಕಡ 25ರಷ್ಟು ಮೇಂಟೆನೆನ್ಸ್ ಖರ್ಚು ಜಾಸ್ತಿ ಬರುತ್ತದೆ. ಡ್ಯೂರಬಿಲಿಟಿ ಸೇಕಡ 25 ಕ್ಕಿಂತ ಕಡಿಮೆಯಾಗಿರುತ್ತದೆ. ಅದರಲ್ಲಿ ಒಂದು ದೊಡ್ಡ ಆತಂಕ ಒದಗಿದೆ. ಅದನ್ನು ಪರಿಶೀಲನೆ ಮಾಡಬೇಕಾಗಿದೆ. ತಾಂತ್ರಿಕ ತಜ್ಞರ ಸಲಹೆಗೆ ವಿರೋಧವಾಗಿ ಈ ಚಾಸಿಗಳನ್ನು ಈ ಸಂಸ್ಥೆಯು ಕೊಳ್ಳುವುದಕ್ಕೆ ಹೋಗಿದೆ. ಇದರ ಬಗ್ಗೆ ಕೂಡಲೇ ಪರಿಶೀಲನೆ ಮಾಡಬೇಕು. ಒಂದು ತೀರ್ಮಾನಕ್ಕೂ ಬರಬೇಕು. ಇನ್ನು ಮೂರನೆಯದಾಗಿ ಅನೇಕ ಸಲ ಈ ಸದನದಲ್ಲಿಯೇ ಮಾನ್ಯ ಸಾರಿಗೆ ಮಂತ್ರಿಗಳು ಹಿಂದೆ ಕೊಂಡುಕೊಳ್ಳದೇ ಇರುವುದರಿಂದ ಹೆಚ್ಚಿಗೆ ಬಸ್ಸುಗಳನ್ನು ಹಾಕುವುದಕ್ಕೆ ತೊಂದರೆಯಾಗುತ್ತದೆಯೆಂದು ಹೇಳಿದರು. ಆಮ್ನಿ ಬಸ್ಸುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗ ಮಾಡುವುದಕ್ಕೆ ಹೋದರೆ ಆಗ ಈ ಸಂಸ್ಥೆ ಮುಂದೆ ಬರುತ್ತದೆ. ಅನೇಕ ರಾಜ್ಯಗಳಲ್ಲಿ ಅದನ್ನೇ ಉಪಯೋಗ ಮಾಡಿದ್ದಾರೆ. ಸ್ಟೇಟ್ ಬಸ್ಸುಗಳು ಇರುವ ಕಡೆಗಳಲ್ಲಿ ಹಾಗೂ ಮಫ್ಯೂಸಲ್‌ನಲ್ಲಿ ಸುಮಾರು 15–20 ಮೈಲಿಗಳವರೆಗೆ ಅವುಗಳು ಬಹಳ ಉಪಯುಕ್ತವಾಗಿ ಹೆಚ್ಚಿನ ಪ್ರಮಾಣದಲ್ಲಿ ಜಾರಿಗೆ ತರಬೇಕೆಂದು ಹೇಳುತ್ತೇನೆ. ನಾನು ಈ ಸಂದರ್ಭವಲ್ಲಿ ಹೇಳುವುದೇನೆಂದರೆ ಇನ್ನು ಮುಂದೆ ಆಮ್ನಿ ಬಸ್ಸುಗಳ ಪದ್ಧತಿಯನ್ನು ಜಾಸ್ತಿ ಮಾಡಿದರೆ ಹೆಚ್ಚಿಗೆ ಚಾಸಿಗಳನ್ನು ಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ನಾನು ಹೇಳುತ್ತೇನೆ.

ಇನ್ನು ಸಿಟಿ ಬಸ್ ಸರ್ವಿಸ್‌ನಲ್ಲಿ ಪೀಕ್ ಅವರ್ ಟ್ರಾಫಿಕ್ ಬಗ್ಗೆ ಒಂದು ವಿಷಯವನ್ನು ಈಗ ಹೇಳಲಿಚ್ಛಿಸುತ್ತೇನೆ. ಪೀಕ್ ಅವರ್ ಟ್ರಾಫಿಕ್‌ನಲ್ಲಿ ಬಸ್ಸುಗಳ ಕೊರತೆ ಬಹಳ ಇದೆ. ಜನಗಳಿಗೂ ಸಹ ಇದರಿಂದ ಬಹಳ ತೊಂದರೆಯಾಗಿದೆ. ಪೀಕ್ ಅವರ್ ಟ್ರಾಫಿಕ್‌ನಲ್ಲಿ ಕೇವಲ ಸ್ಟ್ಯಾಂಡಿಂಗ್ ಪ್ಯಾಸೆಂಜರ್ಸ್ ಬಸ್ಸುಗಳನ್ನು ಮಾತ್ರ ಹಾಕಿದರೆ ಸುಮಾರು ಒಂದೊಂದು ಬಸ್ಸಿನಲ್ಲಿ 80–90 ಜನರು ಪ್ರಯಾಣ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ರೀತಿಯಾಗಿ ಪೀಕ್ ಅವರ್‌ನಲ್ಲಿ ಜನರಿಗೆ ಅನುಕೂಲ ಮಾಡಬಹುದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ನಮ್ಮ ಮೈಸೂರು ರಾಜ್ಯದ ಎಂ. ಎಸ್. ಆರ್. ಟಿ. ಸಿ. ಸಂಸ್ಥೆಯ ಕಾರ್ಯಾಚರಣೆಯಲ್ಲಿ ಕೆಲವೊಂದು ಸೂಚನೆಗಳು ಬಹಳ ಸ್ಪಷ್ಟವಾಗಿ ಕಾಣುತ್ತವೆ. ಮೊಟ್ಟಮೊದಲನೆಯದಾಗಿ ಹೇಳುವುದಾದರೆ, ಈಗ ಬಸ್ ಯುಟಿಲೈಜೇಷನ್ ಕೆಪಾಸಿಟಿ ಈಗ ಏನು ಇದೆಯೋ ಅದರಲ್ಲಿ ಕೇವಲ ಸೇಕಡ 80ರಷ್ಟು ಮಾತ್ರ ಯುಟಿಲೈಜೇಷನ್ ಮಾಡುತ್ತಿದ್ದಾರೆ. ಈ ಯುಟಿಲೈಜೇಷನ್ ಏನೇನೂ ಸಾಲದು. ಇದನ್ನು ಇಂಪ್ರೂವ್ ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಂಬುದನ್ನು ತಿಳಿಸಬೇಕು. ಆಲ್ ಓವರ್ ಇಂಡಿಯಾ ಆವರೇಜನ್ನು ನೋಡಿದರೆ ಕೇವಲ 5, 2, 3 ಮಾತ್ರ ವ್ಯತ್ಯಾಸ ಇರುತ್ತದೆ, ಹೆಚ್ಚಿಗೆ ವ್ಯತ್ಯಾಸ ಇರುವುದಿಲ್ಲ. ಕನಿಷ್ಠಪಕ್ಷ ಸೇಕಡ 90ರಷ್ಟು ವರ್ಷೇ ವರ್ಷೇ ಈ ಪರ್ಸೆಂಟೇಜ್ ಜಾಸ್ತಿಯಾಗುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಂಬುದನ್ನು ತಿಳಿಸಬೇಕು. ಇವತ್ತಿನ ದಿವಸ ಆವರೇಜ್ ಯುಟಿಲೈಜೇಷನ್ ಆಫ್ ವೆಹಿಕಲ್ಸ್ ಎಷ್ಟೆಂಬುದನ್ನು ನೋಡಿದರೆ, ಪ್ರತಿದಿವಸವೂ ಎಂ. ಎಸ್. ಆರ್. ಟಿ. ಸಿ. ಬಸ್ 234 ಕಿಲೋ ಮೀಟರ್ ಹೋಗುತ್ತದೆಂದು ತಮ್ಮ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಖಾಸಗೀ ಕ್ಷೇತ್ರಗಳಲ್ಲಿ ಸರ್ವೇಸಾಮಾನ್ಯವಾಗಿ 400 ಕಿಲೋ ಮೀಟರ್ ಹೋಗುತ್ತದೆ. ಅಂದಮೇಲೆ ಸುಮಾರು ಶೇಕಡ 50ರಷ್ಟು ಅದಕ್ಕೂ ಇದಕ್ಕೂ ವ್ಯತ್ಯಾಸವಿದೆ. ಆದ್ದರಿಂದ ಈಗ ಪ್ರತಿ ದಿವಸವೂ ಒಂದೊಂದು ಬಸ್ ಇಷ್ಟು ಕಡಿಮೆ

ಪ್ರಮಾಣದಲ್ಲಿ ಹೋಗುತ್ತಿರುವುದರಿಂದ ಇದರ ಬಗ್ಗೆ ಆವರೇಜ್ ಯೂಟಿಲೈಜೇಷನನ್ನು ಬಹು ಹೆಚ್ಚಿನ ಪ್ರಮಾಣದಲ್ಲಿ ಇಂಪ್ರೂವ್ ಮಾಡುವ ಅವಶ್ಯಕತೆ ಇದೆಯೆಂದು ನಾನು ಹೇಳುತ್ತೇನೆ. ಅದೇ ರೀತಿಯಲ್ಲಿ ಇವರಿಗೆ ಕಿಲೋ ಮೀಟರ್‌ಗೆ 122 ಪೈಸೆ ಆದಾಯ ಇದೆ. ಈಗಿನ ಪರಿಸ್ಥಿತಿಯಲ್ಲಿ ನೋಡುವುದಾದರೆ, ನಿಜವಾಗಿಯೂ ಇದರಲ್ಲಿ ಪೂರ್ ಪರ್‌ಫಾರ್‌ಮೆನ್ಸ್ ಇದೆಯೆಂದು ಹೇಳಿದರೆ ತಪ್ಪಾಗುವುದಿಲ್ಲ. ಸಾಧಾರಣವಾಗಿ ಖಾಸಗೀ ಕ್ಷೇತ್ರಕ್ಕೂ ಮತ್ತು ಬೇರೆ ಕ್ಷೇತ್ರಕ್ಕೂ ಹೋಲಿಸಿದರೆ, ಖಾಸಗೀ ಕ್ಷೇತ್ರದಲ್ಲಿ ಒಂದು ಮೈಲಿಗೆ 3 ರೂಪಾಯಿಗಳು ಅಥವಾ ಒಂದು ಕಿಲೋ ಮೀಟರ್‌ಗೆ ಎರಡೂ ಕಾಲು ರೂಪಾಯಿಗಳ ಆದಾಯವಿದೆ. ಕೇವಲ ಒಂದು ರೂಪಾಯಿ 22 ಪೈಸೆ ಕಿಲೋ ಮೀಟರ್ ಆದಾಯದಲ್ಲಿ ಇವರು ಬಸ್ಸನ್ನು ಓಡಿಸುತ್ತಿದ್ದಾರೆಂದರೆ ಅದರಲ್ಲಿ ಏನೋ ತಪ್ಪು ಇದೆಯೆಂಬುದಾಗಿ ವ್ಯಕ್ತವಾಗುತ್ತದೆ.

ಇನ್ನು ಟ್ರಾಫಿಕ್ ವಿಚಾರದಲ್ಲಿ ನನ್ನ ಒಂದು ಸಲಹೆ, ಏನೆಂದರೆ ಪ್ರತಿ ಜಿಲ್ಲೆಯಲ್ಲೂ ಒಬ್ಬೊಬ್ಬ ಡಿಸ್ಟ್ರಿಕ್ಟ್ ಟ್ರಾಫಿಕ್ ಆಫೀಸರ್ ಎಂದು ಇದ್ದಾರೆ. ಇವರು ಪ್ರತಿ ತಿಂಗಳಲ್ಲೂ ಒಂದು ಆವರೇಜ್ ಯೂಟಿಲಿಟಿ ಆಫ್ ವೆಹಿಕಲ್ಸ್ ಬಗ್ಗೆ ಒಂದು ಸ್ಟೇಟ್‌ಮೆಂಟ್‌ನ್ನು ಕೊಡಬೇಕು. ಅದನ್ನು ಅವರು ಸರಿಯಾಗಿ ಕೊಡುತ್ತಿಲ್ಲ. ಇವರು ಅಲ್ಲೊಂದು ಇಲ್ಲೊಂದನ್ನು ಬದಲಾವಣೆ ಮಾಡಿ ಒಂದು ಸ್ಟೇಟ್‌ಮೆಂಟನ್ನು ಕೊಡುತ್ತಿದ್ದಾರೆ. ಅದು ಸರಿಯಾದುದಲ್ಲ. ಈ ಯೂಟಿಲೈಜೇಷನ್ ಆಫ್ ವೆಹಿಕಲ್ಸ್ ಪರ್ ಮೈಲಿಗೆ ಎಷ್ಟು ಜಾಸ್ತಿ ಬರುವಂತೆ ಇವರು ಷೆಡ್ಯೂಲನ್ನು ತಯಾರಿಸಿದರೆ ನಮಗೆ ಅಷ್ಟೂ ಆದಾಯ ಜಾಸ್ತಿ ಬರುತ್ತದೆ. ಆದುದರಿಂದ ಸರ್ಕಾರದವರು ನಾನು ಈಗ ಹೇಳಿದ ಈ ಮೂರು ವಿಷಯಗಳಿಗೆ ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ. ಇಲ್ಲವಾದರೆ ನಮ್ಮ ಉತ್ಪತ್ತಿ ಹೆಚ್ಚುವುದಿಲ್ಲ.

ಇನ್ನು ಎಂ. ಎಸ್. ಆರ್. ಟಿ. ಸಿ. ಕಾರ್ಮಿಕರ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಇವರಿಗೆ ಈಗ ಯಾವ ವಿಧವಾದ ಇನ್‌ಸೆಂಟಿವ್ ಬೋನಸ್ಸನ್ನೂ ಕೊಡುತ್ತಿಲ್ಲ. ಅದಕ್ಕಾಗಿ ನಾನು ಸಲಹೆ ಮಾಡುವುದೇನೆಂದರೆ ಅವರ ಸಂಬಳದ ನಾಲ್ಕನೇ ಒಂದಂಶವನ್ನಾದರೂ ಇವರಿಗೆ ಇನ್‌ಸೆಂಟಿವ್ ಬೋನಸ್ಸು ಕೊಡಬೇಕೆಂದು ಹೇಳುತ್ತೇನೆ. ಈಗ ಒಬ್ಬ ಡ್ರೈವರ್ ಇದ್ದಾನೆ, ಆತನು ಪೆಟ್ರೋಲಿನ ಕನ್‌ಸಂಪ್‌ಷನ್ ಬಗ್ಗೆ ಉಳಿತಾಯ ತೋರಿಸಿದರೆ ಮತ್ತು ಟೈರು ಮೈಲೇಜನ್ನು ಜಾಸ್ತಿ ತೋರಿಸಿದರೆ ಅಂಥವರಿಗೆ ಮತ್ತು ಒಂದು ತಿಂಗಳಲ್ಲಿ ಒಂದು ಸಲವೂ ಬ್ರೇಕ್‌ಡೌನ್ ಆಗದ ಹಾಗೆ ಯಾವ ಡ್ರೈವರ್ ಗಾಡಿಗಳನ್ನು ಓಡಿಸುತ್ತಾನೋ ಅಂಥವರಿಗೆ ಇನ್‌ಸೆಂಟಿವ್ ಬೋನಸ್ಸನ್ನು ಕೊಡಬೇಕೆಂದು ನಾನು ಸಲಹೆಮಾಡುತ್ತೇನೆ. ಇದನ್ನು ಮಾಡುವುದು ಬಹಳ ಒಳ್ಳೆಯದೆಂದು ಹೇಳುತ್ತೇನೆ.

ಅಧ್ಯಕ್ಷರೇ, ಇನ್ನು ಮೋಟಾರ್ ವೆಹಿಕಲ್ಸ್ ಡ್ರೈವಿಂಗ್ ಲೈಸೆನ್ಸಿನ ಬಗ್ಗೆ ಹೇಳುವುದಾದರೆ ಈದಿನ ರಾಜ್ಯದಲ್ಲಿ ಡ್ರೈವಿಂಗ್ ಲೈಸೆನ್ಸನ್ನು ಕೊಡುವುದಕ್ಕೆ ಸರಿಯಾದ ಒಂದು ವ್ಯವಸ್ಥೆಯನ್ನು ಎಲ್ಲಿಯೂ ಮಾಡಿಲ್ಲ. ಇದು ಬಹಳ ದುಃಖಕರವಾದ ಸಂಗತಿ. ರಾಜ್ಯದಲ್ಲಿ ಅಲ್ಲಲ್ಲೇ ತರಬೇತಿ ಕೇಂದ್ರಗಳನ್ನು ತೆರೆದು ಒಂದೆರಡು ತಿಂಗಳ ಕಾಲ ತರಬೇತಿಯನ್ನು ಕೊಟ್ಟು ಅವರಿಗೆ ಲೈಸೆನ್ಸ್ ದೊರೆಯುತಕ್ಕ ವ್ಯವಸ್ಥೆಯನ್ನು ಮಾಡಬೇಕು. ಅದರ ಜೊತೆಗೆ ಹಾಗೇ ಡ್ರೈವರುಗಳಿಗೆ ಒಂದು ರೆಫ್ರೆಷರ್ಸ್ ಕೋರ್ಸನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮಲ್ಲಿ ಓಡುತ್ತಿರುವ ಬಸ್ಸುಗಳ ವಿಚಾರಕ್ಕೆ ಬಂದರೆ 1943ರಲ್ಲಿ ತಯಾರಾದ ಬಸ್ಸುಗಳು ಈಗಲೂ ಇನ್ನೂ ಓಡುತ್ತಿವೆ. ವರ್ಷಂಪ್ರತಿ ಇಂಥ ಹಳೇ ಬಸ್ಸುಗಳನ್ನು ಕಂಡೆಮ್ ಮಾಡಬೇಕು......

ಶ್ರೀ ಅಜೀಜ್ ಸೇಟ್ :—ವೆಹಿಕಲ್ಸ್‌ಗೆ ಒಂದು ಟೈಂ ಲಿಮಿಟ್ಟನ್ನು ಫಿಕ್ಸ್ ಮಾಡಬೇಕೆಂದು ಹೇಳುತ್ತೀರಾ ?

ಶ್ರೀ ಬಿ. ಸತ್ಯನಾರಾಯಣ ಸಿಂಗ್ :—ಹೌದು. ಪ್ರತಿಯೊಂದು ಬಸ್ಸಿಗೂ 10 ಅಥವಾ 12 ವರ್ಷಗಳ ಒಂದು ಲೈಫ್‌ಟೈಂನ್ನು ನಿಗದಿ ಮಾಡಬೇಕೆಂದು ಹೇಳುತ್ತೇನೆ.

ಇನ್ನು ರೀಜನಲ್ ಟ್ರಾನ್ಸ್‌ಪೋರ್ಟ್ಸ್ ವಿಚಾರಕ್ಕೆ ಬಂದರೆ ಈಗ ಜಿಲ್ಲೆಯಲ್ಲಿ ಒಂದೇ ಒಂದು ಆಫೀಸಿರುವುದರಿಂದ ಇದರ ಕೆಲಸ ಜಾಸ್ತಿಯಾಗಿ ಯಾವುದೂ ಸರಿಯಾಗಿ ನಡೆಯುತ್ತಿಲ್ಲ. ಅದಕ್ಕೆ ಜಿಲ್ಲೆಗೆ ಎರಡು ಆಫೀಸನ್ನಾದರೂ ತೆರೆಯುವುದು ಅಗತ್ಯ ಎಂದು ಹೇಳುತ್ತೇನೆ. ಇನ್ನು ಮೋಟಾರ್ ವೆಹಿಕಲ್ ಟ್ಯಾಕ್ಸನ್ನು ಸ್ಟೇಟ್ ಬ್ಯಾಂಕುಗಳ ಮೂಲಕ ಪಡೆಯುವುದಕ್ಕೆ ಅವಕಾಶ ಮಾಡಬೇಕು.

ಇನ್ನು ಕಂಡಕ್ಟರುಗಳ ನೇಮಕದ ವಿಚಾರದಲ್ಲಿ ರೂಲ್ಸಿನಲ್ಲಿ ಕಂಡಕ್ಟರ್ ಕೆಲಸಕ್ಕೆ 7 ಸ್ಟಾಂಡರ್ಡ್ ಇದ್ದರೆ ಸಾಕೆಂದು ಹೇಳಿ, ಅವರನ್ನು ರೆಕ್ರೂಟ್ ಮಾಡಿಕೊಳ್ಳುವಾಗ ಅವರಿಗೆ ಎಸ್. ಎಸ್. ಸಿ. ಪಾಸಾಗಿರಬೇಕೆಂದು ಹೇಳುತ್ತಿದ್ದಾರೆ. ಇದರಿಂದ ಅವರಿಗೆ ಬಹಳ ತೊಂದರೆಯಾಗಿದೆ. ಈ ಎರಡರಲ್ಲಿ ಸರ್ಕಾರದವರು ಯಾವುದಾದರೊಂದನ್ನು ನಿಗದಿಮಾಡಬೇಕೆಂದು ಹೇಳುತ್ತೇನೆ. ನನ್ನ ಅಭಿಪ್ರಾಯದಲ್ಲಿ ಸೆವೆಂತ್ ಸ್ಟ್ಯಾಂಡರ್ಡ್ ಇದ್ದರೆ ಸಾಕೆಂದು ಹೇಳುತ್ತೇನೆ.

ಇನ್ನು ಕಾಂಟ್ರಾಕ್ಟ್ ಕ್ಯಾರೇಜುಗಳ ವಿಚಾರಕ್ಕೆ ಬಂದರೆ ಇವುಗಳನ್ನು ಚೆಕ್ ಮಾಡುವುದಕ್ಕೆ ಬೇಕಾದಷ್ಟು ಸಿಬ್ಬಂದಿ ಇದೆ. ಆ ಫ್ಲೈಯಿಂಗ್ ಸ್ಕ್ವಾಡ್ ಎಂತ ಏನಿದೆ ? ಅದು ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಫ್ಲೈ ಮಾಡುತ್ತಿದೆಯೇ ವಿನಾ ಅದು ಏನೂ ಕೆಲಸವನ್ನು ಮಾತ್ರ ಮಾಡುತ್ತಿಲ್ಲ. ಈ ಕಾಂಟ್ರಾಕ್ಟ್ ಕ್ಯಾರೇಜಂಗಳಲ್ಲಿ ಯಾವುದಕ್ಕೆ ಲೈಸೆನ್ಸ್ ಇದೆ, ಯಾವುದಕ್ಕೆ ಇಲ್ಲ ಎಂಬುದನ್ನು ಮತ್ತು ಅವು ರೂಲ್ಸಿಗೆ ಅನುಗುಣವಾಗಿ ಓಡುತ್ತಿವೆಯೋ ಎಂಬುದನ್ನು ಚೆಕ್ ಮಾಡುವುದಕ್ಕೆ ಅಕ್ರಮಗಳನ್ನು ತಡೆಗಟ್ಟುವುದಕ್ಕೆ ಪ್ರತಿಯೊಂದು ರಸ್ತೆಯಲ್ಲೂ ಮೂರು ಮೂರು ಕಡೆಗಳಲ್ಲಿ ಈ ಚೆಕ್ಕಿಂಗ್ ನಡೆಸತಕ್ಕ ಒಂದು ಖಾಯಂ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಆದರೆ ಬಹಳ ಮಟ್ಟಿಗೆ ಈ ಕಾಂಟ್ರಾಕ್ಟ್ ಕ್ಯಾರೇಜಂಗಳು ಬೆಂಗಳೂರು ಮತ್ತು ಮೈಸೂರುಗಳಿಂದಲೇ ಜಾಸ್ತಿ ಯಾಗಿ ಹೊರಡುತ್ತಿವೆ. ನಮ್ಮ ರಾಜ್ಯದಲ್ಲಿರತಕ್ಕ ಒಟ್ಟು 498 ಕಾಂಟ್ರಾಕ್ಟ್ ಕ್ಯಾರೇಜುಗಳಲ್ಲಿ 300 ಕಾಂಟ್ರಾಕ್ಟ್ ಕ್ಯಾರೇಜಂಗಳು ಬೆಂಗಳೂರು ಒಂದರಿಂದಲೇ ಹೊರಡುತ್ತವೆ. ಆದುದರಿಂದ ಇವುಗಳನ್ನು ರಾಷ್ಟ್ರೀಕರಣ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ನನಗೆ ಇಷ್ಟು ಮಾತನಾಡುವುದಕ್ಕೆ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಕ್ಕೆ ಅವರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಮಾದೇಗೌಡ (ಬನ್ನೂರು):—ಮಾನ್ಯ ಅಧ್ಯಕ್ಷರೇ, ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಬೇಡಿಕೆಯ ಮೇಲೆ ಮಾತನಾಡತಕ್ಕ ಕಾಲದಲ್ಲಿ ಈ ಎಂ. ಎಸ್. ಆರ್. ಟಿ. ಸಿ. ಕಾರ್ಯಾಲಯ ಮತ್ತು ಅದರ ಕಾರ್ಯವ್ಯಾಪ್ತಿ ಮತ್ತು ಅದರ ಕಾರ್ಯನಿರ್ವಹಣೆಗಳನ್ನು ದೃಷ್ಟಿಕೋನದಲ್ಲಿಟ್ಟು ಕೊಂಡು ನಾನು ಎರಡು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಯಾವ ಹಿಂದುಳಿದ ದೇಶದಲ್ಲಿ ಅದರ ಅಭಿವೃದ್ಧಿಗೆ ಮೂಲ ತಳಹದಿ ಅಂದರೆ ಸಮಾಜವಾದ ಒಂದೇ ಎಂಬುದನ್ನು ಪ್ರತಿಯೊಬ್ಬರೂ ಒಪ್ಪಿಕೊಂಡಿರತಕ್ಕ ಈ ಸಂದರ್ಭ ದಲ್ಲಿ ಆ ಸಮಾಜವಾದಕ್ಕೆ ಮೂಲ ತಳಹದಿಯಾದ ಈ ರಾಷ್ಟ್ರೀಕರಣ ನಮ್ಮಲ್ಲಿ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ನಾವು ಈಗ ಪರಿಶೀಲನೆ ಮಾಡತಕ್ಕ ಕಾಲ ಬಂದಿದೆ. ನಾವು ರಾಷ್ಟ್ರೀಕರಣ ಮಾಡತಕ್ಕ ಉದ್ದೇಶವಾದರೂ ಏನು ? ನಾವು ಯಾವುದನ್ನು ನಮ್ಮ ದೃಷ್ಟಿಕೋನದಲ್ಲಿಟ್ಟುಕೊಂಡು ಈ ರಾಷ್ಟ್ರೀಕರಣ ಮಾಡುತ್ತೇವೆ ಎಂಬುದರ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ದಿವಸ ನಮ್ಮ ಮೈಸೂರು ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ನಿನಲ್ಲಿ 3,600 ಬಸ್ಸುಗಳಿವೆ. ಇಷ್ಟು ಬಸ್ಸುಗಳನ್ನು ಹೊಂದಿರುವುದರ ಮೂಲ ಉದ್ದೇಶವಾದರೂ ಏನೆಂದರೆ—ಪ್ರಯಾಣಿಕರಿಗೆ ಮತ್ತು ಕಡುಬಡವರಿಗೆ ಸುಲಭ ದರದಲ್ಲಿ ಉತ್ತಮ ಪ್ರಯಾಣ ಸೌಕರ್ಯಗಳನ್ನು ಒದಗಿಸಬೇಕೆಂಬುದೇ ಆಗಿದೆ. ಇದು ಬಹಳ ಅವಶ್ಯಕವಾದುದರಿಂದ ಸಮಾಜ ವಾದದಲ್ಲಿ ಇದರ ಪ್ರಾಮುಖ್ಯತೆಯನ್ನು ಅರಿತು ನಾವು ಈ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡಿದೆವು. ಮತ್ತು ಈ ರಾಷ್ಟ್ರೀಕರಣದ ಎರಡನೇ ಉದ್ದೇಶವೇದರೆ ಒಬ್ಬ ಇಬ್ಬರಿಗೆ ಆಗುತ್ತಿದ್ದ ಹಣ ಸಂಪಾದನೆಯನ್ನು ತಪ್ಪಿಸಿ ಅದನ್ನು ಇಡೀ ದೇಶಕ್ಕೆ ಹಂಚತಕ್ಕ ಉದ್ದೇಶವೂ ಇದರಲ್ಲಿ ಅಡಗಿದೆ. ಈ ಎರಡು ಉದ್ದೇಶಗಳಿಂದ ಇದನ್ನು ಮಾಡಲಾಯಿತು. ಆದರೆ ನಾವು ಮಾಡಿದಂಥ ಈ ರಾಷ್ಟ್ರೀಕರಣದಿಂದ ರಾಜ್ಯಕ್ಕೇನಾದರೂ ಪ್ರಯೋಜನ ಆಗಿದೆಯೋ ಎಂದು ನೋಡಿದರೆ ಇಲ್ಲಿ ಹಿಂದೆ ಇದ್ದಂತೆ ಬಂಡವಾಳಶಾಹಿಗಳು ಲಕ್ಷಾಂತರಗಟ್ಟಲೆ ಇದರಿಂದ ಹಣವನ್ನು ಸಂಪಾದನೆ ಮಾಡುವುದೇನೂ ತಪ್ಪಿಲ್ಲ. ಜೊತೆಗೆ ಬಡವರಿಗೇನಾದರೂ ಪ್ರಯಾಣದ ಸೌಲಭ್ಯಗಳನ್ನು ಅಗ್ಗದ ದರದಲ್ಲಿ ಮಾಡಿದ್ದೇವೆಯೋ ಎಂದರೆ ಅದೂ ಕೂಡ ಇಲ್ಲ. ರಾಷ್ಟ್ರೀಕರಣದ ಉದ್ದೇಶ ಹೀಗಾದರೆ ಇಂಥ ರಾಷ್ಟ್ರೀಕರಣದಿಂದ ನಾವು ಸಮಾಜವಾದವನ್ನು ಜಾರಿಗೆ ತರುವುದಕ್ಕೆ ಸಾಧ್ಯವೇ ಎಂಬುದನ್ನು ಈಗ ಇನ್ನೊಮ್ಮೆ ಪರಿಶೀಲನೆ ಮಾಡಬೇಕಾದುದು ಅಗತ್ಯವೆಂದು ನನಗೆ ಕಾಣುತ್ತಿದೆ. ಈ ಎರಡನ್ನೂ ಸರಿಪಡಿಸುವುದಕ್ಕೆ ಇಲ್ಲಿ ನಾವು ಪದೇ ಪದೇ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದರೂ ಅವರು ಇದನ್ನು ಸರಿಪಡಿಸುವುದಕ್ಕೆ ಕಾನೂನಿನ ತಿದ್ದುಪಡಿಯನ್ನು ಅವರು ಆಲೋಚನೆ ಮಾಡುತ್ತಿರುವುದನ್ನು ನೋಡಿದರೆ ಅವರು ಗುರಿತಪ್ಪಿದ್ದಾರೆಂದು ನನಗೆ ಅನಿಸುತ್ತಿದೆ.

ಕಾನೂನುಗಳನ್ನು ಶಾಸನಸಭೆಗಳಲ್ಲಿ ಮಾಡಿದರೂ ಕೂಡ ಅವುಗಳನ್ನು ಸರಿಯಾಗಿ ಪಾಲಿಸದೆ ಇದ್ದರೆ, ಜಾರಿಗೆ ಕೊಡದೆ ಇದ್ದರೆ ಅದಕ್ಕೆಷ್ಟು ಬೆಲೆ ಬರುವುದು ಎಂಬುದನ್ನು ಉದಾಹರಣೆಯ ಮೂಲಕ ತಿಳಿಸುತ್ತೇನೆ. ಮೊನ್ನೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ 400 ಕಾಂಟ್ರ್ಯಾಕ್ಟ್ ಕ್ಯಾರೇಜುಗಳನ್ನು ರಾಷ್ಟ್ರೀಕರಣ ಮಾಡುವುದಾಗಿ ಹೇಳಿದರು. ಅವಲ್ಲದೆ ಪರ್ಮಿಟ್ ಇಲ್ಲದೆ ಓಡುತ್ತಿರುವ ಬಸ್ಸುಗಳನ್ನು ಹೇಗೆ ರಾಷ್ಟ್ರೀಕರಣ ಮಾಡುತ್ತೀರಿ? ಕಾನೂನನ್ನು ಪಾಲಿಸ ಬೇಕಾದವರು ಪಾಲಿಸದಿದ್ದರೆ ಕಾನೂನುಮಾಡಿ ಪ್ರಯೋಜನವೇನು? ಇದಕ್ಕೆ ಉತ್ತರ ಬೇಕು. ಎಷ್ಟೇ ರಾಷ್ಟ್ರೀಕರಣ ಮಾಡಿದರೂ ಕೂಡ ಕಾನೂನು ಮಾಡಿದಾಗ ಅದನ್ನು ಸರಿಯಾಗಿ ಪಾಲಿಸ ದಿರುವ ಅಧಿಕಾರಿಗಳಿರುವುದರಿಂದ ಕಾನೂನಿನ ಫಲ ದೊರಕದಿರುವುದರಿಂದ ಇದಕ್ಕೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಕೇಳುತ್ತೇನೆ. ಎಂ.ಎಸ್.ಆರ್.ಟಿ.ಸಿ. ನಲ್ಲಿ ನನಗೆ ತಿಳಿದ ಮಟ್ಟಿಗೆ ಟೈರುಗಳ ಅಭಾವ ಬಹಳಮಟ್ಟಿಗಿದೆ. ಹಾಗಿರುವಾಗ ಮೆಕ್ಯಾನಿಕ್ಸ್ ಬುದ್ಧಿವಂತಿಕೆಯ ಅಭಾವದಿಂದ ಸಾರಿಗೆ ಕೆಲಸಕ್ಕೆ ತೊಂದರೆಯಾಗುತ್ತಿದೆ. ಮೈಸೂರು ಡಿಪೋಕ್ಕೆ 800 ಟೈರು ಗಳನ್ನು ರೀಬಿಲ್ಡ್ ಮಾಡಲು ಕಳಿಸಿದರೆ ಅಷ್ಟೂ ರಿಜೆಕ್ಟ್ ಆಗಿವೆ. ಅವನ್ನು ರೀಬಿಲ್ಡ್ ಮಾಡಿ ದ್ದರೆ ಎಷ್ಟೋ ಅಭಾವ ತಪ್ಪುತ್ತಿತ್ತು. ರಿಜೆಕ್ಟ್ ಮಾಡಿರುವುದಕ್ಕೆ ಕಾರಣವೇನು? ಮೈಸೂರು ಡಿಪೋದಲ್ಲಿ ಸರಿಯಾದ ರೀತಿಯಲ್ಲಿ ಬಿಚ್ಚಿ ನೋಡದೆ ಅಲಕ್ಷ್ಯಮಾಡಿದ್ದಾರೆ ಎಂಬ ಆಪಾದನೆಯಿದೆ. ಈ ರೀತಿಯಾಗಿ ಮೆಕ್ಯಾನಿಕ್ಸ್ ಬುದ್ಧಿವಂತಿಕೆ ಉಪಯೋಗಮಾಡದೆ ಕೋಟ್ಯಂತರ ರೂಪಾಯಿ ನಷ್ಟವಾಗುತ್ತಿದೆ. ಇದನ್ನು ಸರಿಪಡಿಸಿದರೆ ನಮ್ಮ ಕಾರ್ಪೊರೇಷನ್ನಿಗೆ ಒಳ್ಳೆಯ ಉತ್ಪತ್ತಿ ಬಂದು ಗಾಡಿಗಳೂ ಕಾಲಕ್ಕೆ ಸರಿಯಾಗಿ ಓಡಲು ಅವಕಾಶವಾಗುವುದು.

ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರ ಟ್ಯಾಕ್ಸ್ ಪ್ಲಸ್ ಸರ್‌ಛಾರ್ಜ್ ವಸೂಲು ಮಾಡು ತ್ತಿದ್ದಾರೆ. ನನ್ನ ಸಲಹೆ ಈ ಎರಡನ್ನೂ ಒಟ್ಟಿಗೆ ಮಾಡಿದರೆ ಸರಕಾರಕ್ಕೆ ಉತ್ಪತ್ತಿ ಜಾಸ್ತಿ ಯಾಗುತ್ತದೆ ಎಂಬುದು. ಕಾರಣ ಇಷ್ಟೆ. ಟಿ.ಪಿ.ಜಿ. ಟ್ಯಾಕ್ಸ್ ಮರ್ಜ್ ಮಾಡಬೇಕು. ಮದ್ರಾಸಿನಲ್ಲಿ ಹೀಗೆ ಮಾಡಿದ್ದಾರೆ. ಇದಕ್ಕೆ ಅವಕಾಶವಿದೆ. ಅಧಿಕಾರಿಗಳ ಅದಕ್ಷತೆ, ಮತ್ತು

ಸಾಮೀಲಾಗಿ ಇರುವುದು ಲೋಪದೋಷಗಳಿಗೆ ಕಾರಣವಿರಬಹುದು. ಆದುದರಿಂದ ಬರಬೇಕಾದ ಟಿ.ಪಿ.ಜಿ. ಬರುತ್ತಿಲ್ಲ. ಟಿ.ಪಿ.ಜಿ.ಯನ್ನು ಟ್ಯಾಕ್ಸ್ ಜೊತೆಗೆ ಮರ್ಜ್ ಮಾಡಿ ತೆಗೆದುಕೊಳ್ಳುವುದು ಒಳ್ಳೆಯದು, ಲೆಕ್ಕ ಹೆಚ್ಚು ಇಡಬೇಕಾಗುವುದಿಲ್ಲ ಹಾಗೆ ಮಾಡಿದರೆ ಮತ್ತು ಸರಕಾರಕ್ಕೂ ಎರಡರಷ್ಟು ತೆರಿಗೆ ಬರುವುದು.

ಆರ್.ಟಿ ಒ. ಮತ್ತು ಆರ್.ಟಿ.ಎ.ಗಳಲ್ಲಿ ಪಕ್ಷಪಾತ ನಡೆಯುತ್ತಿದೆ. ಸರಕಾರಿ ಪಕ್ಷದಿಂದ ಪಕ್ಷಪಾತ ನಡೆಯುತ್ತಿದೆ. ಕೋರ್ಟು ಅವಕಾಶ ಕೊಡಬಾರದೆಂದು ಹೇಳಿರುವಾಗ ಕೂಡ ಆರ್.ಟಿ.ಎ.ಗಳು ಅದನ್ನು ಉಲ್ಲಂಘಿಸಿದ್ದಾರೆ. ಇದರಿಂದ ಕೆಲವು ಆಪರೇಟರುಗಳು ಪುನಃ ಕೋರ್ಟಿಗೆ ಹೋಗಿ ಸಾವಿರಾರು ರೂಪಾಯಿ ಖರ್ಚುಮಾಡಬೇಕಾಗಿದೆ, ಇದು ಸರಿಯಲ್ಲ. ಇದಕ್ಕೇನು ಮಾಡುತ್ತೀರಿ ?

ಶ್ರೀ ಅಜೀಜ್ ಸೇಟ್ :—ಅಂಥ ಕೇಸಸ್ ಇದ್ದರೆ ತಿಳಿಸಿ.

ಶ್ರೀ ಕೆ. ಮಾದೇಗೌಡ :—ತಿಳಿಸುತ್ತೇನೆ. ಇಂಥ ಸಂದರ್ಭಗಳು ಕೋರ್ಟಿಗೆ ಪುನಃ ಬಂದು ಕೋರ್ಟಿನ ಆಜ್ಞೆಯನ್ನು ಉಲ್ಲಂಘಿಸಿರುವುದಕ್ಕೆ ಸ್ಟ್ರಿಕ್ಚರ್ ಪಾಸ್ ಮಾಡಿದ್ದಾರೆ. ಕಾಲ ಮಿತಿ ಇರುವುದರಿಂದ ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ವಿ. ಕೃಷ್ಣರಾವ್ (ಗೌರಿಬಿದನೂರು):—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಸಾರಿಗೆ ಮತ್ತು ಕಾರ್ಮಿಕ ಇಲಾಖೆಯ ಸಚಿವರು ಮಂಡಿಸಿರುವ ಬೇಡಿಕೆಗಳಿಗೆ ಬೆಂಬಲ ಕೊಡುತ್ತಾ ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ರೋಡ್ ಟ್ರಾನ್ಸ್‌ಪೋರ್ಟ್ ವಿಚಾರ ತೆಗೆದುಕೊಂಡರೆ ಕೋಲಾರ ಜಿಲ್ಲೆ ರಾಷ್ಟ್ರೀಕರಣವಾಗಿರುವ ಜಿಲ್ಲೆ, ಇಲ್ಲಿನ ಬಸ್ಸುಗಳಲ್ಲಿ ಪ್ರಯಾಣ ಮಾಡಿದವರು ಬಹಳ ತೊಂದರೆಗಳನ್ನನುಭವಿಸಿದ್ದಾರೆ. ಇದಕ್ಕೆ ಕಾರಣವೇನೆಂದರೆ ಸರಕಾರಿ ಬಸ್ಸುಗಳು ಕಾಲಕ್ಕೆ ಸರಿಯಾಗಿ ಬರುತ್ತಿಲ್ಲ. ಇದರಿಂದ ಪ್ರಯಾಣಿಕರಿಗೆ ಬಹಳಮಟ್ಟಿಗೆ ತೊಂದರೆಯಾಗಿ ಅವರು ಸೇರಬೇಕಾದ ಸ್ಥಳವನ್ನು ಕಾಲಕ್ಕೆ ಸರಿಯಾಗಿ ಸೇರದೆ ಮಧ್ಯೆ ನಿಂತಿರುವ ಅನೇಕ ಪ್ರಕರಣಗಳಿವೆ. ಯಾವ ಸ್ಥಳವನ್ನು ಸೇರಬೇಕೋ ಅದನ್ನು ಸೇರುವ ನೆಚ್ಚಿಗೆಯೋ ಅನೇಕ ವೇಳೆ ಇರುವುದಿಲ್ಲ. ಅನೇಕ ವೇಳೆ ಪ್ರಯಾಣ ಮಾಡುವ ಹೆಣ್ಣುಮಕ್ಕಳು, ಸಂಸಾರಿಗಳು ರಾತ್ರಿ ಬಸ್ಸಿನಲ್ಲೇ ನಿದ್ರೆ ಮಾಡಬೇಕಾದ ಸಂದರ್ಭ ಬರುವುದುಂಟು. ಇದನ್ನು ನೋಡಿದರೆ ಸರಕಾರ ಏಕೆ ರಾಷ್ಟ್ರೀಕರಣ ಮಾಡಿತೋ ಅರ್ಥವಾಗುವುದಿಲ್ಲ. ರಾಷ್ಟ್ರೀಕರಣ ಮಾಡುವ ಉದ್ದೇಶವೇನೋ ಒಳ್ಳೆಯದು. ಸಮಾಜವಾದದ ಉದ್ದೇಶಕ್ಕನುಗುಣವಾಗಿ ಇದನ್ನು ಮಾಡಿದ್ದಾರೆ. ಬಂಡವಾಳಶಾಹಿಗಳು ಇದರಿಂದ ಹೆಚ್ಚು ಲಾಭ ಪಡೆಯುವರು, ಇದನ್ನು ಕಡಮೆ ಮಾಡಬೇಕು ಎಂಬ ಉದ್ದೇಶದಿಂದ ಸರಕಾರ ರಾಷ್ಟ್ರೀಕರಣ ಮಾಡಿರುವುದೇನೋ ಸರಿಯೇ. ಆದರೆ ಆ ಉದ್ದೇಶ ಎಷ್ಟುಮಟ್ಟಿಗೆ ನೆರವೇರುತ್ತಿದೆ ಎಂದು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಉದ್ದೇಶ ಸಂಪೂರ್ಣವಾಗಿ ನೆರವೇರಿಲ್ಲ.

ಸನ್ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಯ ಬಗ್ಗೆ ನಾನು ಹೇಳಬೇಕು ಎಂದರೆ, ಇವತ್ತಿನ ದಿವಸ ಅನೇಕ ಖಾಸಗಿ ಬಸ್ಸುಗಳು ನಮ್ಮ ಜಿಲ್ಲೆಯಲ್ಲಿ ಇಂಟರ್‌ಸ್ಟೇಟ್ ಪರ್ಮಿಟ್‌ನಿಂದ ಓಡುತ್ತಿವೆ. ಒಂದೇ ಒಂದು ಉದಾಹರಣೆ ಕೊಡಬೇಕು ಎಂದರೆ, ಆರ್. ಟಿ. ಸಿಟಿ ಬಸ್ ಎಂದು ಪ್ರೈವೇಟ್ ಬಸ್ ಇದೆ. ಬಸ್ ಯಾವ ಟೈಂನಲ್ಲಿ ಹೊರಡುತ್ತದೆ, ಯಾವ ಟೈಂನಲ್ಲಿ ಸೇರುತ್ತದೆ ಎನ್ನುವುದನ್ನು ಗಡಿಯಾರ ಇಟ್ಟುಕೊಂಡು ಹೇಳಬಹುದು. ಮತ್ತು ಈ ಬಸ್ಸನ್ನು ನೋಡಿಕೊಂಡು ನಾವು ಟೈಂಅನ್ನು ಅಡ್ಜಸ್ಟ್ ಮಾಡಬಹುದು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಗೌರಿಬಿದನೂರ್‌ಗೆ ಅದು ಆರು ಗಂಟೆಗೆ ಒಂದು ನಿಮಿಷವೂ ತಡವಾಗಿ ಬಂದಿರುವುದು ಕಾಣಲಿಲ್ಲ. ಇದನ್ನು ನಾನು ಗಡಿಯಾರ ಇಟ್ಟು ನೋಡಿದ್ದೇನೆ. ಕಾಲಕ್ಕೆ ಸರಿಯಾಗಿ ಬರುತ್ತದೆ. ಬಸ್ಸುಗಳ ವಿಚಾರದಲ್ಲಿ

ಕಾಲಕ್ಕೆ ಸರಿಯಾಗಿ ಬರತಕ್ಕ ಪದ್ಧತಿಯನ್ನು ಅನುಸರಿಸಿದ ಪಕ್ಷದಲ್ಲಿ ನಮ್ಮ ಉದ್ದೇಶ ಏನು ಇದೆ ಅದನ್ನು ಪಡೆಯಲು ಅವಕಾಶವಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಇನ್ನು ಮುಂದಾದರೂ ಕೂಡ ಯಾವ ಬಸ್ ಯಾವ ಕಾಲಕ್ಕೆ ಹೋಗಬೇಕು ಎನ್ನುವ ಒಂದು ಶಿಸ್ತನ್ನು ತಮ್ಮ ಕಾರ್ಪೊರೇಷನ್‌ನಲ್ಲಿ ಜಾರಿಗೆ ತರಲು ತಾವು ಪ್ರಯತ್ನಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತಾ ಇದ್ದೇನೆ.

ಎರಡನೆಯದು, ಬಸ್ ಚಾರ್ಜು ಏನು ಇದೆ ಅದು ಹೇರಳವಾಗಿ ಆಗಿರುವುದು ತಮ್ಮ ಗಮನಕ್ಕೆ ಬಂದಿದೆ ಎಂದು ನಾನು ಭಾವಿಸುತ್ತೇನೆ. ಪ್ರೈವೇಟ್ ಬಸ್‌ನಲ್ಲಿ ಬೆಂಗಳೂರಿನಿಂದ ಗೋರಿಬಿದನೂರಿಗೆ ಎರಡೂವರೆ ರೂಪಾಯಿ ತೆಗೆದುಕೊಳ್ಳುತ್ತಾರೆ, ಆದರೆ ಸರ್ಕಾರಿ ಬಸ್‌ನಲ್ಲಿ ಎರಡು ರೂಪಾಯಿ ತೊಂಭತ್ತು ಪೈಸೆಯನ್ನು ತೆಗೆದುಕೊಳ್ಳುತ್ತಾರೆ. ಸಾಮಾನ್ಯ ಪ್ರಯಾಣಿಕರಿಗೆ ಏನು ಅನುಕೂಲ ಇದೆಯೆಂದು ಪ್ರಶ್ನೆಮಾಡಿದರೆ ನಿಜವಾಗಿಯೂ ನಾವು ಉತ್ತರ ಕೊಡುವ ಸ್ಥಿತಿಯಲ್ಲಿಲ್ಲ. ಸಾಮಾನ್ಯವಾಗಿ ರಸ್ತೆಯಲ್ಲಿರುವ ಮುಖ್ಯ ಸ್ಥಳಕ್ಕೆ ಒಂದೆರಡು ಮೈಲಿ ದೂರದಲ್ಲಿ ಇರುವ ಸ್ಥಳಕ್ಕೆ ಅಥವಾ ಊರಿಗೆ ಹೋಗಿ ಬರುವ ಸಂದರ್ಭ ಇದೆ. ಇಂಥ ಊರುಗಳಿಗೆ ಹೋಗಿಬರುವ ಚಾರ್ಜನ್ನು ಪ್ರೈವೇಟ್ ಬಸ್‌ಗಳವರು ತೆಗೆದು ಕೊಳ್ಳುವುದಿಲ್ಲ, ಸರ್ಕಾರಿ ಬಸ್ಸುಗಳಲ್ಲಿ ಅಂಥ ಊರುಗಳಿಗೆ ಹೋಗಿ ಬರುವ ಚಾರ್ಜನ್ನೂ ತೆಗೆದುಕೊಳ್ಳುತ್ತಾರೆ. ಗೋರಿಬಿದನೂರಿನಿಂದ ಗುಡಿಬಂಡೆಗೆ ಹೋಗಿ ಬಂದರೆ, ಮಧ್ಯದಲ್ಲಿರುವ ಊರುಗಳಿಗೆ ಹೋದರೆ ರನ್ನಿಂಗ್ ಮೈಲೇಜ್ ಅನ್ನು ಕೊಡಬೇಕು ಎಂದು ಹೇಳುತ್ತಾರೆ. ಅದು ಮುಖ್ಯವಲ್ಲ. ಯಾವ ಸ್ಥಳದಿಂದ, ಯಾವ ಸ್ಥಳಕ್ಕೆ ಸೇರಬೇಕು ಎನ್ನುವ ಚಾರ್ಜನ್ನು ತೆಗೆದು ಕೊಂಡು ಮಧ್ಯೆ ಇರತಕ್ಕ ಇಂಟರ್‌ನಲ್ ಪ್ಲೇಸಸ್ ಏನು ಇರುತ್ತವೆ ಅದಕ್ಕೆ ಹೋಗಿಬಿಟ್ಟು ಬರತಕ್ಕ ಚಾರ್ಜಸ್ ಮನ್ನಾಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ. ಇವತ್ತಿನ ದಿವಸ ಕೋಲಾರ ಜಿಲ್ಲೆಯಲ್ಲಿರತಕ್ಕ ಬಸ್ಸುಗಳಲ್ಲಿ, ಪ್ರೈವೇಟ್ ಬಸ್‌ನವರು ಬಹಳಷ್ಟು ಸಂಪಾದನೆ ಮಾಡುತ್ತಾರೆ. ಆದ್ದರಿಂದ ರೋಡ್ ಟ್ರಾನ್ಸ್‌ಪೋರ್ಟ್‌ನಲ್ಲಿ ಏನು ನ್ಯೂನತೆಗಳು ಇವೆ ಅವುಗಳನ್ನು ಸರಿಪಡಿಸಿಕೊಂಡ ಪಕ್ಷದಲ್ಲಿ ಅವರು ಮಾಡಿರತಕ್ಕ ರಾಷ್ಟ್ರೀಕರಣದ ಉದ್ದೇಶ ಬಹಳ ಮಟ್ಟಿಗೆ ನೆರವೇರುತ್ತದೆ. ಇದೇ ರೀತಿಯಲ್ಲಿ ಕಂಟಿನ್ಯೂ ಆದ ಪಕ್ಷದಲ್ಲಿ ಖಂಡಿತವಾಗಿಯೂ ಕೋಲಾರ ಜಿಲ್ಲೆಯಲ್ಲಿ ಏನು ರಾಷ್ಟ್ರೀಕರಣ ಮಾಡಿದರೂ ಕೂಡ ಅದರಿಂದ ಒಳ್ಳೆಯದನ್ನು ಮಾಡುವ ಬದಲು ಕೆಟ್ಟದ್ದನ್ನು ಮಾಡಿದಂತಾಗುತ್ತದೆ ಎಂದು ಈ ಸಂದರ್ಭದಲ್ಲಿ, ನಾನು ಹೇಳುತ್ತೇನೆ. ಆದ್ದರಿಂದ ಇನ್ನು ಮುಂದಾದರೂ ಕೂಡ ಬಸ್ಸುಗಳು ಸಕಾಲಕ್ಕೆ ಬರತಕ್ಕ ಪದ್ಧತಿಯನ್ನು, ಯಾವ ಯಾವ ರೀತಿಯಲ್ಲಿ ಎಷ್ಟೆಷ್ಟು ಬಸ್ಸುಗಳು ಹೋಗಬೇಕು ಎನ್ನುವ ವ್ಯವಸ್ಥೆ ಮಾಡಬೇಕು ಎಂದು ಹೇಳಿಬಿಟ್ಟು, ಈ ಸೂಚನೆಯನ್ನು ಸರ್ಕಾರಕ್ಕೆ ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ವರ್ತೂರು) :—ಮಾನ್ಯ ಅಧ್ಯಕ್ಷರೆ, ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರದವರು ಕೈಗೊಂಡಿರತಕ್ಕಂಥ ಅನೇಕ ಕಾರ್ಯಕಲಾಪಗಳಲ್ಲಿ ಟ್ರಾನ್ಸ್‌ಪೋರ್ಟ್ ಸರ್ವಿಸ್ ಇಲಾಖೆ ಕೂಡ ಒಂದು. ಇದರಲ್ಲಿ ಪ್ರೈವೇಟ್ ಬಸ್ಸಿನವರ ವ್ಯವಹಾರವನ್ನು ಕಡಿಮೆಮಾಡಿ ದಿನೇ ದಿನೇ ಸರ್ಕಾರದವರು ಒಳ್ಳೆಯ ರೀತಿಯಿಂದ ಸೇವೆ ಕೊಡಬೇಕು ಎಂದು ಪ್ರಯತ್ನ ಪಟ್ಟರೂ ಪ್ರೈವೇಟ್ ಬಸ್ ಓನರ್ಸ್ ಹೇಳುವುದಕ್ಕಿಂತ ಸಾರ್ವಜನಿಕರು ಹೇಳುವ ದೃಷ್ಟಿಯಲ್ಲಿ ಯೋಚನೆ ಮಾಡಿದರೆ, ಆ ಮಟ್ಟಿಗೆ ವ್ಯವಸ್ಥೆಯಾಗಿಲ್ಲ ಎಂದು ಅನ್ನಬೇಕು. ಇದಕ್ಕೆ ಕಾರಣಗಳನ್ನು ನಾನು ಹೇಳುವುದಕ್ಕೆ ಹೋದರೆ ದಿನಗಟ್ಟಲೆಯಾಗುತ್ತದೆ. ಆದರೆ ಪ್ರಕೃತದಲ್ಲಿ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿರತಕ್ಕ ಕಷ್ಟಗಳು ಏನು ಎಂದು ತಿಳಿದು ಒಂದೆರಡು ವಿಚಾರಗಳನ್ನು ಸರ್ಕಾರದ ಮುಂದೆ ಇಡುವುದಕ್ಕೆ ಪ್ರಯತ್ನ ಪಡುತ್ತೇನೆ. ಮೊದಲಿನ ಕಷ್ಟ ಏನೆಂದರೆ ವೆಹಿಕಲ್ಸ್ ಸಾಲದು ಗಾಡಿಗಳಿಗೆ ಖಾಯಿಲೆ ಬೇಗ ಬೇಗ ಬರುತ್ತದೆ ಎಂದು ತಿಳಿದುಕೊಂಡಿದ್ದೇನೆ. ಆದರೆ ಈಗ

ಬ್ಯಾಂಕಿಂಗ್ ವ್ಯವಸ್ಥೆ ಬೇಕಾದಷ್ಟಿದೆ. ಬ್ಯಾಂಕ್ ನ್ಯಾಷನಲೈಸೇಷನ್ ಸ್ಕೀಂ ಮಾಡಿರುವುದರಿಂದ ಬ್ಯಾಂಕುಗಳವರು ಬೇಕಾದಷ್ಟು ದುಡ್ಡು ಕೊಡುತ್ತಾರೆ. ಬಸ್ಸುಗಳನ್ನು ತೆಗೆದುಕೊಳ್ಳಲು ವ್ಯವಸ್ಥೆ ಮಾಡುತ್ತಿದ್ದೇವೆ ಎಂದು ಹಿಂದೆ ಮಾನ್ಯ ಮಂತ್ರಿಗಳು ಅಪ್ಪಣೆ ಕೊಟ್ಟಿದ್ದರು. ಈಗ ಬಸ್ಸುಗಳನ್ನು ತರಿಸುವುದು ಕಷ್ಟ ಎಂದು ಇಟ್ಟುಕೊಂಡರೂ ಕೂಡ ಒಟ್ಟು ಎಷ್ಟು ಬಸ್ಸು ಬೇಕು ಎಂದು ಒಂದು ಪ್ಲಾನ್ ಮಾಡಿಕೊಂಡಿರಬೇಕು. ಅದನ್ನು ಸ್ಟೇಜ್ ಬೈ ಸ್ಟೇಜ್ ಕಾರ್ಯಗತ ಮಾಡುವುದಕ್ಕೆ ಏನು ತೊಂದರೆ ಇದೆಯೋ ಗೊತ್ತಿಲ್ಲ. ಹೆಚ್. ಎಂ. ಟಿ., ಬಿ. ಇ. ಎಲ್. ಸಂಸ್ಥೆಗಳ ಹತ್ತಿರ 400, 500 ಸ್ವಂತ ಬಸ್ಸುಗಳಿವೆ. ಅವರು ಟ್ರಾನ್ಸ್‌ಪೋರ್ಟ್ ಸೆಕ್ಷನ್ ಮುಚ್ಚುತ್ತೇವೆ, ನಮ್ಮಲ್ಲಿರುವ ಬಸ್ಸುಗಳನ್ನು ತೆಗೆದುಕೊಳ್ಳಿ ನಮಗೆ ಬಸ್ಸಿನ ಸರ್ವಿಸ್ ಯಾವಯಾವಾಗಬೇಕೋ ಆ ಸಮಯದಲ್ಲಿ ವ್ಯವಸ್ಥಿತ ಸರ್ವಿಸುಕೊಡಿ ಎಂದು ಹೇಳುತ್ತಾರೆ. ಆದ್ದರಿಂದ ಟರ್ಮಿನಸ್‌ಗಳಲ್ಲಿ ಡೆಡ್ ಮೈಲೇಜ್ ಉಳಿಯುತ್ತದೆ. This will also be economically useful from the national point of view HMT, HAL, BEL ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಅಲ್ಲಿ ಹರಕಲು ಮುರುಕಲು ಬಸ್ ಮೂಲೆಗೆ ಬಿದ್ದಿರುವುದನ್ನು ಬಣ್ಣಬಳಿಸಿ ತೆಗೆದುಕೊಂಡುಬಿಡಿ ಎಂದು ಹೇಳುತ್ತಾ ಇಲ್ಲ. You may follow your own method and examine their terms and conditions ಮುಖ್ಯವಾಗಿ 400 ಬಸ್ ಹೊಸದಾಗಿ ತಂದು ಇಟ್ಟುಕೊಳ್ಳುವ ಬದಲು ಕಂಡೀಷನ್‌ನಲ್ಲಿರುವ ಬಸ್‌ಗಳನ್ನು ತೆಗೆದುಕೊಂಡು ನಮಗೆ ಇರುವ ಬಸ್ಸಿನ ಕೊರತೆಯನ್ನು ಕಡಿಮೆಮಾಡಬೇಕು. ನಮಗೆ ಲಾಸ್ ಆಗಬಾರದು. ಆ ವಿಚಾರ ಆಗಲೇ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಅದನ್ನು ಪರೀಕ್ಷೆ ಮಾಡಿಸುತ್ತೇನೆ ಎಂದು ಹೇಳಿದರು. ಅದು ಯಾವ ಮಟ್ಟಕ್ಕೆ ಬಂದಿದೆಯೋ ಗೊತ್ತಿಲ್ಲ. ಬಸ್‌ಗಳನ್ನು ಪರೀಕ್ಷೆಮಾಡಿ ನೋಡಿ ನಾವು ತೆಗೆದುಕೊಳ್ಳುವುದು ಒಳ್ಳೆಯದು ಎಂದು ನಾನು ಸೂಚನೆ ಮಾಡುತ್ತೇನೆ. ಇದನ್ನು ಸ್ವಲ್ಪ ತರೋ ಎಗ್ಸಾಮಿನ್ ಮಾಡಬೇಕು ಅವರೇ ಬರಲಿ, ಆಮೇಲೆ ನೋಡುವ ಎನ್ನುವ ಅಭಿಪ್ರಾಯ ಬಿಡಬೇಕು. We have to throw our cards ಆ ರೀತಿ ಪ್ರಯತ್ನಪಟ್ಟು ಬಸ್‌ಗಳ ಸಂಖ್ಯೆ ಜಾಸ್ತಿಮಾಡಿಕೊಳ್ಳಬೇಕು ರೈಲಿನಲ್ಲಿ ಲಾಂಗ್ ಜರ್ನಿಯಲ್ಲಿ ಇಂಜನ್ ಛೇಂಜ್‌ಮಾಡುತ್ತೇವೆ. ಅದೇ ರೀತಿ ಲಾಂಗ್ ಡಿಸ್ಟೆನ್ಸ್ ಬಸ್‌ಗಳಲ್ಲಿ ಡ್ರೈವರ್ಸ್ ಛೇಂಜ್ ಮಾಡುವುದನ್ನು ಆಲೋಚನೆ ಮಾಡಬೇಕು. ಕೆಲವರು ವಯಸ್ಸಾದ ಡ್ರೈವರ್ಸ್ ಇರುತ್ತಾರೆ. ಅವನು ಸ್ಪೀಡಾಗಿ ಹೋದರೆ, ಅವನ ಗತಿ ಏನು ? ಅವನಿಗೆ ಫ್ಯಾಮಿಲಿ ಪೆನ್‌ಷನ್ ಕೊಡುವುದರ ಜೊತೆಗೆ ಅವನ ಕಷ್ಟ ತಪ್ಪಿಸುವುದು ಸೂಕ್ತ ಎಂದು ನನಗನ್ನಿಸುತ್ತದೆ. ಲಾಂಗ್ ಜರ್ನಿಯಲ್ಲಿ ಡ್ರೈವರ್ಸನ್ನು ಛೇಂಜ್‌ಮಾಡಬೇಕು ಬಸ್‌ನ್ನು ಕೂಡ ಛೇಂಜ್‌ಮಾಡುವುದಕ್ಕೆ ವ್ಯವಸ್ಥೆಮಾಡಬೇಕು. ಸರ್ವೀಸ್‌ನಲ್ಲಿರುವವರ ಕಷ್ಟ ಏನು ಎಂದು ನೋಡಬೇಕು. ಬಸ್ ಕಾದು ಅದನ್ನು ಮುಟ್ಟಿದರೆ ಅವನ ಕೈ ಬೊಬ್ಬೆ ಏಳುತ್ತದೆ. ಡ್ರೈವರ್ ಮೈ ಮುಟ್ಟುವುದಕ್ಕೆ ಆಗುವುದಿಲ್ಲ. ಆದುದರಿಂದ ಸ್ಟಾಫಿಂಗ್ ಪ್ಯಾಟರ್ನ್ ಏನು ಇದೆ ಎಂದು ಅದನ್ನು ವೆಲ್‌ಫೇರ್ ಮಿನಿಸ್ಟರ್ ವಿಮರ್ಶೆಮಾಡುವುದಕ್ಕೆ ಚಿಕ್ಕ ಕಮಿಟಿ ಮಾಡಬೇಕು How to improve the service conditions of the staff ಎಂದು ಸ್ವಲ್ಪ ನೋಡಬೇಕು. ಹಣ್ಣು ತಿನ್ನುವವನು ನುಣುಚಿಕೊಂಡ, ಸಿಪ್ಪೆ ತಿಂದವನು ಸಿಕ್ಕಿಹಾಕಿಕೊಂಡ ಎನ್ನುವ ಹಾಗೆ ಆಗಬಾರದು. ಅವರ ಹೆಂಡತಿ ಮಕ್ಕಳ ಕಷ್ಟ ನೋಡಬೇಕು. ನಗುತ್ತಾ ನಗುತ್ತಾ ನ್ಯಾಷನಲ್ ಮೈಂಡೆಡ್ ಔಟ್‌ಲುಕ್‌ನಿಂದ ಕೆಲಸ ಮಾಡುವವರಿಗೆ ಉತ್ತೇಜನ ಕೊಡಬೇಕು. ಮೆರಿಟ್ ಯಾರಿಗೆ ಇದೆಯೋ ಅವರಿಗೆ ರೆಕಗ್ನಿಷನ್ ಕೊಡಬೇಕು. ಹೊಟೇಲ್ ಮುನಾಪಲಿಮಾಡಿ, ಪಿಕ್ಚರ್ಸ್ ಹೌಸ್ ಮುನಾಪಲಿಮಾಡಿ ಎಂದು ಹೇಳುತ್ತಾ ಸರ್ಕಾರ ಎಲ್ಲದಕ್ಕೂ ಕೈಹಾಕುತ್ತಾರೆ. ಪ್ರೈವೇಟ್ ಬಸ್ಸಿನವರು ಸರ್ಕಾರದವರು ಒಂದು ಕೆಲಸವನ್ನೂ ಸರಿಯಾಗಿ ಮಾಡುವುದಕ್ಕೆ ಆಗುವುದಿಲ್ಲ. ಎಂದು ಹೇಳುವುದಕ್ಕೆ ಆಸ್ಪದ ಕೊಡಬಾರದು. ಕಾಂಟ್ರಾಕ್ಟ್ ಕ್ಯಾರೇಜಸ್ ಯಾವ ರೀತಿ ಕೆಲಸ ಮಾಡುತ್ತಿವೆ, ಗೌರ್ನಮೆಂಟ್ ಬಸ್‌ನಿಂದ ಎಷ್ಟು ವರಮಾನ ಬರುತ್ತದೆ ಎಂದು ಲೆಕ್ಕ ಹಾಕಿದರೆ

ಪ್ರೈವೇಟ್ ಬಸಸ್ ಬಹಳ ಚೆನ್ನಾಗಿ ಇಟ್ಟುಕೊಂಡಿರುವುದಲ್ಲದೆ ಅವುಗಳಿಂದ ಬಹಳ ಲಾಭ ಕೂಡ ಬರುತ್ತದೆ. ನಮ್ಮ ಸರ್ಕಾರದ ಬಸ್‌ಗಳು ತಿರುಕಲು ಮುರುಕಲು ಸೀಟಿಲ್ಲ ಜಾರುವುದು, ಬೀಳುವುದು, ಇಂಥಹ ಪರಿಸ್ಥಿತಿ ಇರುತ್ತದೆ. ಆದರೆ ಅವುಗಳನ್ನು ಚೆಕ್‌ಡ್ ಅಂಡ್ ಫೌಂಡ್ ಕರೆಕ್ಟ್ ಎಂದು ಬರೆದಿರುತ್ತಾರೆ. ಈ ರೀತಿ ಬಸ್‌ಗಳು ಇರುವುದು ಒಂದು ಕಡೆ ಇನ್ನೊಂದು ಕಡೆ ಆ ಬಸ್‌ಗಳಿಂದ ಲಾಭ ಕೂಡ ಬರುವುದಿಲ್ಲ. ನನಗೆ ಲೆಜಿಸ್ಲೇಚರ್ ಹೋಂ ಜ್ಞಾಪಕಕ್ಕೆ ಬರುತ್ತದೆ. ಮೂರು ರೂಪಾಯಿ ಕೊಡುತ್ತೇವೆ, ಒಳ್ಳೆಯ ಊಟ ಹಾಕಿ ಅಂದರೆ 25 ವರ್ಷಗಳಿಂದ ಒಳ್ಳೆಯ ಊಟ ಸಿಕ್ಕಿಲ್ಲ ಈಗ ಸ್ವಲ್ಪ ಚೆನ್ನಾಗಿದೆ. ನಮ್ಮ ಬಸ್‌ಗಳಿಂದ ಏಕೆ ಲಾಭ ಬರುವುದಿಲ್ಲ ಎಂದು ಯೋಚನೆ ಮಾಡಬೇಕಾಗಿದೆ. ಇನ್ನು ಬೆಂಗಳೂರಿನ ಆರ್.ಟಿ.ಓ. ಬಿಲ್ಡಿಂಗ್ ನೋಡಿ. ಸರ್ಕಾರಕ್ಕೆ ಒಳ್ಳೆಯ ಬಿಲ್ಡಿಂಗ್ ತೆಗೆದುಕೊಳ್ಳುವುದಕ್ಕೆ ಬಡತನವೆ? ಬೇಕಾದರೆ ನೀವೇ ಒಂದು ಬಿಲ್ಡಿಂಗ್ ಕಟ್ಟಿಕೊಳ್ಳಿ, ಇಲ್ಲದಿದ್ದರೆ ಕೂಡಲೇ ಇದನ್ನು ಒಂದು ಒಳ್ಳೆಯ ಬಿಲ್ಡಿಂಗಿಗೆ ಬದಲಾಯಿಸಬೇಕು ಎಂದು ಹೇಳುತ್ತೇನೆ. ಇಲ್ಲಿ ಬಹುತೇಕ ರಾಜಕೀಯ ಇದೆ. ಎಲ್ಲ ಸಮಸ್ಯೆಗಳು ಹುಟ್ಟುವ ಇಲಾಖೆ ಅಂದರೆ, ಈ ಇಲಾಖೆ. ಇಲ್ಲಿ ಬೇಕಾದಷ್ಟು ಪಾಲಿಟಿಕ್ಸ್ ಡೆವೆಲಪ್ ಆಗುತ್ತದೆ. ಸ್ಟಾಫ್ ಸೆಕ್ಷನ್ನಿನಲ್ಲಿ ಪೊಲೈಟ್ ಆಗಿ ಇಲ್ಲದೆ ಇರುವ ಜನ ಉಂಟು. ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು ಸರ್ವಿಸ್ ಮೈಂಡೆಡ್ ಇಲ್ಲದೇ ಇರುವ ಸ್ಟಾಫನ್ನು ಇರೆಸ್ಪೆಕ್ಟಿವ್ ಆಫ್ ಕ್ಯಾಡರ್ ಸ್ಕ್ರೂಟಿನೈಸ್ ಮಾಡಿ ಬದಲಾಯಿಸಬೇಕು. ಸರ್ವೀಸ್ ಮೈಂಡೆಡ್ ಇರುವ ಸ್ಟಾಫನ್ನು ಹೇಗೆ ಇಂಪ್ರೂವ್ ಮಾಡಬೇಕು ಎಂದು ಸಲಹೆ ಕೊಡುತ್ತೇನೆ.

ಇನ್ನು ಪಬ್ಲಿಕ್‌ಗೆ ಅನುಕೂಲವಾಗುವ ಹಾಗೆ ಬಸ್ ಷೆಲ್ಟರುಗಳನ್ನು ಹೆಚ್ಚಾಗಿ ನಿರ್ಮಿಸಬೇಕು. ಮಳೆಗಾಲದಲ್ಲಿ ಜನರಿಗೆ ವಿಪರೀತ ತೊಂದರೆಯಾಗುತ್ತಾ ಇದೆ. ಆದುದರಿಂದ ಬಸ್ ಷೆಲ್ಟರುಗಳನ್ನು ಹಾಕಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಬಸ್ಸುಗಳು ಏನಾದರೂ ಕೆಟ್ಟುಹೋದರೆ ರಿಪೇರಿ ಮಾಡಬೇಕಾದರೆ ವರ್ಕ್‌ಷಾಪ್‌ನಲ್ಲಿ 3 ದಿವಸ ಹಿಡಿಯುತ್ತದೆ. ಕಾರಣ ಕೇಳಿದರೆ ಅವನು ಆನ್ ಲೀವ್ ಆಫ್, ಎಂದು ಹೀಗೆಲ್ಲಾ ಹೇಳುತ್ತಾರೆ. ಆದುದರಿಂದ ಇದನ್ನು ತಪ್ಪಿಸಬೇಕಾದರೆ ನೈಟ್ ಟೈಮ್ ಎಕ್ಸ್‌ಟ್ರಾ ಸ್ಟಾಫ್ ಮತ್ತು ಷಿಫ್ಟ್ ಹಾಕಿ ಕೆಲಸ ಮಾಡುವಂತೆ ಮಾಡಬೇಕು. ಈವೊತ್ತು ರಿಪೇರಿಗೆ ಬಿಟ್ಟ ಬಸ್ಸು ನಾಳೆಯೋ ಟ್ರಿಪ್‌ಗೆ ಹೋಗುವ ಹಾಗೆ ಕೆಲಸ ಮಾಡಬೇಕು. ಹಾಗೆ ಮಾಡಿದರೆ ರಿಪೇರಿ ಜಾಡ್ಯ ಹೋಗುತ್ತದೆ.

ಇನ್ನು ಇವರ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಸರಿಯಾಗಿಲ್ಲ. ಇದರಿಂದ ಅವರಲ್ಲಿ ಗ್ರಂಬಲ್ ಇದೆ. ತಾವು ಈ ಬಸ್ಸುಗಳ ಮೇಲೆ ಕಂಟ್ರೋಲ್ ಇಟ್ಟುಕೊಳ್ಳಬೇಕು. ಮತ್ತು ಸ್ಟಾಫ್‌ಗೆ ಸರಿಯಾಗಿ ಅನುಕೂಲತೆ ಮಾಡಿಕೊಟ್ಟು ಅವರ ಗ್ರಂಬಲ್‌ನ್ನು ತಪ್ಪಿಸಿ ಇದರಲ್ಲಿ ಲಾಭ ಬರುವ ಹಾಗೆ ಮಾಡಬೇಕು. ಈ ಬಗ್ಗೆ ಥರೋ ಎಕ್ಸಾಮಿನ್ ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ.

ಇನ್ನು ಹೆಚ್. ಎ. ಎಲ್. ಬಸ್ಸುಗಳನ್ನು ಉಪಯೋಗಿಸಿಕೊಳ್ಳುವ ವಿಚಾರದಲ್ಲಿ ನನಗೆ ಉತ್ತರ ಹೇಳಬೇಕು ಮತ್ತು ಅವರ ಕಷ್ಟಸುಖವನ್ನು ನೋಡಿಕೊಳ್ಳಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು) :—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಈವೊತ್ತಿನ ದಿವಸ ಮಾನ್ಯ ಕಾರ್ಮಿಕ ಮಂತ್ರಿಗಳು ವಾಹನ ತೆರಿಗೆ ಮತ್ತು ಕಾರ್ಮಿಕ ಹಾಗೂ ಉದ್ಯೋಗಕ್ಕೆ

ಸಂಬಂಧಪಟ್ಟಂಥ ಬೇಡಿಕೆಗಳನ್ನು ನಮ್ಮ ಮುಂದೆ ಏನು ಇಟ್ಟಿದ್ದಾರೋ ಅದನ್ನು ವಿರೋಧ ಮಾಡುತ್ತಾ ಮತ್ತು ಈ ಬಗ್ಗೆ ನನ್ನ ಅನುಭವಕ್ಕೆ ಬಂದಂಥಾ ವಿಷಯಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮಂತ್ರಿಗಳು ಕಾರ್ಮಿಕ ನಾಯಕ ರಾಗಿದ್ದು ಈಚೆಗೆ ಈ ಶಾಖೆಯ ಮಂತ್ರಿತ್ವವನ್ನು ಹೊಂದಿದ್ದಾರೆ. ಅವರು ಅಧಿಕಾರಕ್ಕೆ ಬಂದು ಒಂದು ವರ್ಷ ಆಯಿತು. ಅವರು ಅಧಿಕಾರಕ್ಕೆ ಬಂದಾಗ ನನಗೆ ಅನಿಸಿತು ದೇಶದಲ್ಲಿ ಕಾರ್ಮಿಕ ವರ್ಗದವರ ಹಿತಚಿಂತನೆ ಬಹಳ ಚೆನ್ನಾಗಿ ನಡೆಯುತ್ತದೆ ಎಂದು. ಯಾರ್ಯಾರು ನಂಬಿದ್ದರೋ ಅವರಲ್ಲಿ ನಾನೂ ಒಬ್ಬ. ಇತ್ತೀಚೆಗೆ ಅವರು ಕೊಟ್ಟಂಥ ಹೇಳಿಕೆಗಳನ್ನು ನೋಡಿದಾಗ ಅಲ್ಲಲ್ಲಿ ಕಾರ್ಮಿಕರ ತೊಂದರೆಗಳು ಏನು ಇವೆ ಅದನ್ನು ಸರಿಪಡಿಸಬೇಕಾದರೆ ಪಟ್ಟಣಗಳಲ್ಲಿರತಕ್ಕಂಥ, ದೊಡ್ಡ ದೊಡ್ಡ ಅಧಿಕಾರಿಗಳಲ್ಲಿರತಕ್ಕಂಥ ಕಾರ್ಮಿಕರ ಹಿತರಕ್ಷಣೆ ಸಾಕಷ್ಟು ಚೆನ್ನಾಗಿ ನಡೆದಿದ್ದರೂ ಕೂಡ ತಾಲ್ಲೂಕಾ ಮಟ್ಟದಲ್ಲಿರತಕ್ಕಂಥ ಕಾರ್ಮಿಕರ ಹಿತರಕ್ಷಣೆಯನ್ನು ಸರ್ಕಾರ ನಿರ್ಲಕ್ಷ್ಯ ಮನೋಭಾವದಿಂದ ನೋಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಸಾಧಾರಣವಾಗಿ ತಾಲ್ಲೂಕಾ ಮಟ್ಟದಲ್ಲಿ ಷಾಪ್‌ನಲ್ಲಿ ಕೆಲಸಮಾಡತಕ್ಕಂಥ ಜನರು ಏನು ಇದ್ದಾರೆ ತಾತ ಮುತ್ತಾತನ ಕಾಲದಲ್ಲಿ ಇರತಕ್ಕಂಥ ಅಂಗಡಿಗಳಲ್ಲಿ ತಿಂಗಳು ಒಂದಕ್ಕೆ 50-60 ರೂಪಾಯಿನಂತೆ ಸಂಬಳ ತೆಗೆದುಕೊಂಡು ಕೆಲಸ ಮಾಡುತ್ತಾ ಇದ್ದಾರೆ. ಅವರ ಬಗ್ಗೆ ಯಾವ ರೀತಿಯಾದ ಕನಿಕರವೂ ಇಲ್ಲದೆ, ಯಾವ ರೀತಿಯಾಗಿಯೂ ಸಹಾಯವೂ ಇಲ್ಲದೆ ಅವರು ನಿರ್ಗತಿಕರಾಗಿ ಸಮಾಜದಲ್ಲಿ ಬಾಳಬೇಕಾದ ಪರಿಸ್ಥಿತಿ ಬಂದಿದೆ. ಮಾನ್ಯ ಮಂತ್ರಿಗಳು ತಾಲ್ಲೂಕಾ ಮಟ್ಟದಲ್ಲಿರುವ ಕಾರ್ಮಿಕ ಜನಕ್ಕೆ ಏನು ಸೌಕರ್ಯ ಒದಗಿಸಿಕೊಡುತ್ತಾ ಇದ್ದೀರಿ ಎಂದು ಕೇಳುತ್ತೇನೆ. ಮತ್ತು ಅಲ್ಲಿರತಕ್ಕಂಥ ಕಾರ್ಮಿಕರ ಸಂಖ್ಯೆ ಎಷ್ಟು? ಅವರ ಮೇಲ್ವಿಚಾರಣೆಯನ್ನು ಏನಾದರೂ ನೋಡಿದ್ದೀರಾ? ಅವರ ಕುಂದುಕೊರತೆಗಳು ಏನು ಇದೆ ಎಂದು ನೋಡಿದ್ದೀರಾ? ಈ ಬಗ್ಗೆ ನಾನು ಹೇಳುವುದಾದರೆ ಸರ್ಕಾರ ಇದರಲ್ಲಿ ನೂರಕ್ಕೆ ನೂರು ಪಾಲು ಅಷ್ಟು ವಿಫಲವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಉದಾಹರಣೆಗೆ ನಮ್ಮ ಊರಿನಲ್ಲಿ ಕಾರ್ಮಿಕ ಸಂಬಂಧಪಟ್ಟಂಥ ಅಧಿಕಾರಿಗಳು ಒಂದೊಂದು ಅಂಗಡಿಗೆ 3 ರಿಂದ 5 ರೂಪಾಯಿಯವರೆಗೆ ಮಾಮೂಲು ಮಾಡಿಕೊಂಡು ಬರುತ್ತಿದ್ದಾರೆ. ಈ ರೀತಿ ಆದರೆ ನೀವು ಕಾರ್ಮಿಕರ ಹಿತರಕ್ಷಣೆ ಏನು ಮಾಡುತ್ತೀರೋ ಏನೋ ಗೊತ್ತಿಲ್ಲ. ಅಧಿಕಾರಿಗಳು ಈ ರೀತಿ ಬೇಜವಾಬ್ದಾರಿಯಿಂದ ಕೆಲಸಮಾಡುತ್ತಾ ಇದ್ದರೆ ಅವರು ಕಾರ್ಮಿಕರ ಹಿತರಕ್ಷಣೆಯನ್ನು ಎಷ್ಟುಮಟ್ಟಿಗೆ ನೋಡಿಕೊಳ್ಳುತ್ತಾರೋ ಗೊತ್ತಿಲ್ಲ. ನಿಜವಾಗಿಯೂ ಅವರ ಪರಿಸ್ಥಿತಿ ಶೋಚನೀಯವಾಗಿದೆ. ಮುಂದೆ ಅವರ ಪರಿಸ್ಥಿತಿ ಬಹಳ ಕಷ್ಟವಾಗುತ್ತದೆ. ಆದುದರಿಂದ ನಾನು ಈ ಬಗ್ಗೆ ಒಂದು ಸಲಹೆ ಮಾಡುತ್ತೇನೆ. ಅದು ಏನೆಂದರೆ ಯಾವುದೇ ಒಂದು ಸಾರ್ವಜನಿಕ ಕೈಗಾರಿಕೆಯೋ ಆಗಲಿ ಸಾರ್ವಜನಿಕ ಉದ್ಯೋಗದಲ್ಲಿರತಕ್ಕಂಥ ಕಾರ್ಮಿಕ ವರ್ಗದವರಿಗೆ ಆ ಮಾಲೀಕರಿಗೆ 25 ಸಾವಿರ ರೂಪಾಯಿ ಮೇಲ್ಪಟ್ಟು ವರಮಾನ ಇದ್ದರೆ ಅದರಲ್ಲಿ ಇಂತಿಷ್ಟು ಅಮೌಂಟನ್ನು ಬೋನಸ್ ಆಗಿ ಕೊಡಬೇಕು ಎಂದು ಮಾಡಬೇಕು. ಅವರು ಇಷ್ಟು ವರ್ಷ ಕೆಲಸ ಮಾಡಿದರೆ ಇಷ್ಟು ಧನಸಹಾಯ ಮಾಡಬಹುದು ಎನ್ನುವುದನ್ನು ಮಾಡಬೇಕು. ಈ ಬಗ್ಗೆ ಸರ್ಕಾರದವರು ಮೊದಲು ಯೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಸಣ್ಣ ಸಣ್ಣ ಕೈಗಾರಿಕೆಗಳ ವಿಷಯವಾಗಿ ಹೇಳುವುದಾದರೆ ತೆಂಗಿನಕಾಯಿ ಕೈಗಾರಿಕೆ, ಪರಕೆ ಕೈಗಾರಿಕೆಯಲ್ಲಿ ಏನು ಕೆಲಸ ಮಾಡುತ್ತಾರೋ ಅವರಿಗೆ ಒಂದೇ ತರಹ ಕೂಲಿ ಇಲ್ಲ. ಒಬ್ಬೊಬ್ಬರು ಒಂದೊಂದು ತರಹ ಕೂಲಿ ಕೊಡುತ್ತಾರೆ. ಇದರಿಂದ ಕಾರ್ಮಿಕ ವರ್ಗದವರಿಗೆ ಬಹಳ ಅಸಮಾಧಾನವಾಗಿದೆ. ಆದುದರಿಂದ ಅವರಿಗೆ ಒಂದು ರಕ್ಷಣೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಇದಕ್ಕೆ ಸಂಬಂಧಪಟ್ಟಂತೆ ಒಂದು ವಿಷಯ ಹೇಳುವುದಾದರೆ ಸಮಾಜವಾದ ಹೇಳ ತಕ್ಕಂಥ ಸರ್ಕಾರ ಮೊದಲನೆಯದಾಗಿ ಕಾರ್ಮಿಕ ವರ್ಗದಲ್ಲಿ ಈ ರೀತಿ ತರಲಿ. ಯಾವ ರೀತಿ ಎಂದರೆ, ಯಾವ ಕಾರ್ಮಿಕನು ತಿಂಗಳು ಒಂದಕ್ಕೆ 100 ರೂಪಾಯಿ ಸಂಬಳ ತೆಗೆದುಕೊಳ್ಳು ತ್ತಾನೋ ಆತನ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ, ಉಚಿತ ಪುಸ್ತಕಗಳು, ಕಾಲೇಜು ವಿದ್ಯಾಭ್ಯಾಸ, ಉಚಿತ ಔಷಧಿಗಳನ್ನು ಅವರ ಕೈಯ್ಯಲ್ಲಿ ಕೊಡಿಸಬೇಕೆಂದು ಹೇಳುತ್ತೇನೆ.

ಇನ್ನು ಸಾರಿಗೆ ವಿಷಯದಲ್ಲಿ ಹೇಳುವುದಾದರೆ ಇದರಂಥ ಕೀಳುಮಟ್ಟದ ಕೆಲಸ ಮತ್ತಾವುದೂ ಇಲ್ಲ. ಯಾವ ಒಂದು ಘನ ಉದ್ದೇಶದಿಂದ ಜನತೆಯ ಉಪಯೋಗಕ್ಕೋಸ್ಕರ ಬಸ್ಸುಗಳನ್ನು ಏನು ರಾಷ್ಟ್ರೀಕರಣ ಮಾಡಿದ್ದಿರೋ ಅದರ ವ್ಯವಸ್ಥೆ ಸರಿಯಾಗಿಲ್ಲ. ಈ ಮನಾಪಲಿ ಲೈನ್‌ನಲ್ಲಿ ಏನು ಸರ್ಕಾರದ ಬಸ್ಸುಗಳು ಓಡಾಡುತ್ತಿವೆಯೋ ಅದು ಕಾಲಕ್ಕೆ ಸರಿಯಾಗಿ ಬರುವುದಿಲ್ಲ. ಬೇಕಾದರೆ ಮಂತ್ರಿಗಳೇ ಬಂದು ನೋಡಲಿ. ಉದಾಹರಣೆಗೆ ನಮ್ಮ ತಿಪಟೂರು ತೆಗೆದುಕೊಂಡರೆ ಆ ಮನಾಪಲಿ ರೂಟಿನಲ್ಲಿ ಸರ್ಕಾರಿ ಬಸ್ಸಿಗೆ ಸಹ ನೂರಾರು ಜನರು ಪ್ರತಿನಿತ್ಯವೂ ಕಾದು ಕಾದು ಟೈಮಿಗೆ ಸರಿಯಾಗಿ ಬರದೆ ಅವರ ಕೆಲಸ, ಅವರ ವ್ಯಾಪಾರದ ಕೆಲಸ, ಕೋರ್ಟ್ ಕೆಲಸ ಎಲ್ಲವೂ ವಿಫಲವಾಗಿದೆ. ಅನೇಕ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಇನ್ನು ಇದರ ಜೊತೆಗೆ ಕಾಂಟ್ರಾಕ್ಟ್ ಕ್ಯಾರೇಜಸ್ ಕೂಡ ರಾಷ್ಟ್ರೀಕರಣ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಸಂತೋಷ, ಆದರೆ ಸಮತಾವಾದದ ಸಮಾಜ ರಚನೆ ಮಾಡುತ್ತೇವೆ ಎಂದು ಹೇಳಿ ಸಾರ್ವಜನಿಕರಿಗೆ ತೊಂದರೆ ಕೊಡುವುದು ಬೇಡ. ಎಲ್ಲಿಯವರೆಗೆ ಸರ್ಕಾರಕ್ಕೆ ಶಕ್ತಿ ಇರುವುದಿಲ್ಲವೋ ಅಲ್ಲಿಯ ವರೆಗೆ ಪರಿಪೂರ್ಣವಾದ ಶಕ್ತಿ ಇರತಕ್ಕಂಥ ಜನರಿಗೂ ಕೊಡದೆ, ತಮಗೂ ಸಾಕಾದಷ್ಟು ಶಕ್ತಿ ಇರದೆ ಇಂಥಾ ಕ್ರಮಗಳನ್ನು ತೆಗೆದುಕೊಳ್ಳುವುದು ತಪ್ಪಾಗುತ್ತದೆ. ಮೊದಲು ರಾಷ್ಟ್ರೀಕರಣ ಮಾಡತಕ್ಕಂಥ ಮಾರ್ಗಗಳು ಏನು ಇವೆ ಅಲ್ಲಿ ಸರಿಯಾದ ರೀತಿಯಲ್ಲಿ ಜನರಿಗೆ ಸೌಕರ್ಯಗಳನ್ನು ಒದಗಿಸಿ ಕೊಡುವ ಯೋಜನೆ ಹಾಕಿಕೊಳ್ಳಿ. ಮೊದಲೇ ಸಾಕಷ್ಟು ಹಣ ಇಲ್ಲ. ಮತ್ತು ಸರಿಯಾಗಿ ಚಾಸಿ ಸಿಕ್ಕುವುದಿಲ್ಲ. ಪಬ್ಲಿಕ್ ಸೆಕ್ಟಾರ್‌ನಲ್ಲಿ ಹಣ ಸಂಪಾದನೆ ಮಾಡುತ್ತಿದ್ದಾರೆಂದು ಅವರ ಮಾರ್ಗವನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿದರೆ ಅದು ಸರಿಯಲ್ಲ. ಅವರ ಕಾಂಟ್ರಾಕ್ಟ್ ಕ್ಯಾರೇಜಸನ್ನು ಸರ್ಕಾರ ವಹಿಸಿಕೊಳ್ಳಲು ಹೋದರೆ ಆ ಬಸ್ಸುಗಳೂ ಕೂಡ ಈಗ ಸಾರಿಗೆ ಕಾರ್ಪೊರೇಷನ್ ಯಾವ ರೀತಿ ನಡೆಯುತ್ತದೆಯೋ ಆ ರೀತಿ ನಡೆದರೆ ಜನರಿಗೆ ಮತ್ತಷ್ಟು ತೊಂದರೆಯಾಗುತ್ತದೆ. ತಾವು ಇದನ್ನು ಯೋಚನೆ ಮಾಡಬೇಕು. ಯಾರಿಗೆ ತನ್ನ ಕೈಯ್ಯಲ್ಲಿ ಎಷ್ಟರವುಟ್ಟಿಗೆ ಸಾಧ್ಯ ಇರುತ್ತದೋ, ಎಷ್ಟರ ಮಟ್ಟಿಗೆ ಶಕ್ತಿ ಇರುತ್ತದೋ ಅಷ್ಟೇ ಪ್ರಮಾಣದಲ್ಲಿ ಅಷ್ಟೇ ಚೌಕಟ್ಟಿನಲ್ಲಿ ಕೆಲಸ ಮಾಡಬೇಕು. ಈಗ ರಾಷ್ಟ್ರೀಕರಣ ಮಾಡಿರತಕ್ಕಂಥ ಮಾರ್ಗಗಳು ಏನು ಇವೆ ಅದನ್ನು ಪರಿಪೂರ್ಣವಾಗಿ ನಡೆಸುವಂತೆ ಮಾಡಿ. ಅದನ್ನೇ ಸರಿ ಮಾಡದೆ ಇದನ್ನು ತೆಗೆದುಕೊಂಡು ಸರಿಯಾಗಿ ನಡೆಯದೇ ಹೋದರೆ ಜನರಿಗೆ ತೊಂದರೆಗಳನ್ನು ಕೊಟ್ಟ ಹಾಗೆ ಆಗುತ್ತದೆ.

ಈ ಎರಡೂ ಇಲಾಖೆಗಳಲ್ಲಿ ಪ್ರಾಮಾಣಿಕರಾಗಿರತಕ್ಕ ಅಧಿಕಾರಿಗಳ ಸಂಖ್ಯೆ ಬಹಳ ಕಡಿಮೆ ಇದೆ. ಒಳ್ಳೆಯವರೂ ಇದ್ದಾರೆ, ಇಲ್ಲವೆಂದು ಹೇಳುವುದಿಲ್ಲ. ಸರ್ವೇಸಾಮಾನ್ಯವಾಗಿ ಮೋಟಾರ್ ವೆಹಿಕಲ್ಸ್ ಇಲಾಖೆ ಅಧಿಕಾರಿಗಳು ಆರ್. ಟಿ. ಒ. ಆಫೀಸು ಅಧಿಕಾರಿಗಳು, ಬ್ರೇಕ್ ಇನ್‌ಸ್ಪೆಕ್ಟರ್ ಇವರೆಲ್ಲ ಹೆಚ್ಚು ಹಣವನ್ನು ಸಂಪಾದನೆ ಮಾಡುತ್ತಾರೆ. ಇದು ಎಲ್ಲಿಂದ ಬಂತು ಎಂದರೆ, ಯಾರು ಸರ್ಕಾರದ ಕಾನೂನನ್ನು ಮುರಿದು ಹಾಕುತ್ತಾರೆ, ಕಾನೂನನ್ನು ಉಲ್ಲಂಘನೆ ಮಾಡಿ ದುಡಿಯುತ್ತಾರೆ ಅಂಥವರು ಮಾತ್ರ ದುಡ್ಡು ಮಾಡುತ್ತಾರೆ. ಸರ್ಕಾರಕ್ಕೆ ಬರತಕ್ಕ ಆದಾಯವೇನೇ ಆಗಲೀ, ಅವರು ಮಾತ್ರ ಸ್ವಂತ ಸಂಪಾದನೆ ಮಾಡಿಕೊಳ್ಳುತ್ತಾರೆ.

ಡ್ರೈವಿಂಗ್ ಲೈಸೆನ್ಸ್ ಯಾರಿಗೆ ಬೇಕಾದರೂ ಕೊಡುತ್ತಾರೆ. ಕಾರ್ ನಡೆಸುವುದಕ್ಕೆ ಬರುತ್ತದೆಯೋ ಇಲ್ಲವೋ, ಯಾರಾದರೂ ಇನ್‌ಫ್ಲುಯೆನ್ಸ್ ಮಾಡಿದರೆ ಲೈಸೆನ್ಸ್ ಕೊಡುತ್ತಾರೆ. ಅದರಿಂದ ಅಪಘಾತಗಳು ಜಾಸ್ತಿಯಾಗುತ್ತವೆ. ಮೊದಲು ಸರಿಯಾಗಿ ಪರೀಕ್ಷೆ ಮಾಡಬೇಕು. ಮತ್ತು ಅನಂತರವೇ ಲೈಸೆನ್ಸ್ ಕೊಡಬೇಕು.

ಶ್ರೀ ಅಜೀಜ್ ಸೇಟ್ ಅವರು ಕಾರ್ಮಿಕ ನಾಯಕರು. ದೇಶದಲ್ಲಿರುವ ಕಾರ್ಮಿಕವರ್ಗದ ಹಿತರಕ್ಷಣೆಯಾಗಬೇಕು ಮತ್ತು ಅವರ ಕಷ್ಟಗಳೇನು ಎನ್ನುವುದನ್ನು ತಿಳಿದುಕೊಂಡಿದ್ದಾರೆ. ಅವರ ಕಾಲದಲ್ಲಿ ಕಾರ್ಮಿಕ ವರ್ಗಕ್ಕೆ ಒಳ್ಳೆಯದಾಗಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್) :— ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ದಿವಸ ಸಾರಿಗೆ ಖಾತೆಯ ಮಂತ್ರಿಯವರು ಇಟ್ಟಿರುವ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತ ನಾಲ್ಕಾರು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಸಾರಿಗೆ ವಿಚಾರದಲ್ಲಿ ಬಹುಶಃ ನಮ್ಮ ಸರ್ಕಾರಿ ಬಸ್ಸುಗಳು ಸುಸಜ್ಜಿತವಾದ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನಡೆಸುತ್ತಿಲ್ಲ ಎಂದು ಅನೇಕ ಸದಸ್ಯರು ಹೇಳಿದ್ದಾರೆ. ನಮ್ಮ ಅಧಿಕಾರಿಗಳು ಇದರ ಬಗ್ಗೆ ಹೆಚ್ಚು ನಿಗಾ ವಹಿಸಿ ಕಾಲಕ್ಕೆ ಸರಿಯಾಗಿ ಬಸ್ಸುಗಳು ಹೊರಡುವ ಬಗ್ಗೆ ಹಾಗೂ ಅದರ ಹತೋಟಿಯ ಬಗ್ಗೆ ಬಹಳ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು. ಚೆಕಿಂಗ್ ಮಾಡುವಂಥ ಇನ್‌ಸ್ಪೆಕ್ಟರ್ ಮತ್ತು ಅಧಿಕಾರಿಗಳು ಅವರವರೇ ಸೇರಿಕೊಂಡು ಸರ್ಕಾರದ ದುಡ್ಡನ್ನು ಅನ್ಯಾಯ ಮಾಡುತ್ತಿದ್ದಾರೆ. ಚೆಕಿಂಗ್ ಇನ್‌ಸ್ಪೆಕ್ಟರ್ ಒಂದು ಬಸ್ಸನ್ನು ಹಿಡಿದಾಗ ಬಸ್ಸಿನ ಹಿಂಭಾಗಕ್ಕೆ ಹೋಗಿ ದುಡ್ಡು ತೆಗೆದುಕೊಂಡು ಕೈ ಬಿಡುತ್ತಾರೆ. ಚೆಕಿಂಗ್ ಇದ್ದಷ್ಟೂ ಅನ್ಯಾಯ ಜಾಸ್ತಿಯಾಗುತ್ತಿದೆ ಎಂದು ಹೇಳಬಹುದು. ಯಾರನ್ನಾದರೂ ಸಸ್ಪೆಂಡ್ ಮಾಡಿದ ತಕ್ಷಣ ಅವರಿಂದ ಮೂರು ಅಥವಾ ನಾಲ್ಕು ನೂರು ರೂಪಾಯಿ ತೆಗೆದುಕೊಳ್ಳುವಂಥ ವ್ಯವಹಾರಗಳು ಜಾಸ್ತಿಯಾಗಿವೆ. ಆದುದರಿಂದ ರಸ್ತೆ ಸಾರಿಗೆ ವಿಚಾರದಲ್ಲಿ ಏನು ಮಾಡುವುದಕ್ಕೂ ಸಾಧ್ಯವಾಗುತ್ತಿಲ್ಲ. ಚೆಕಿಂಗ್ ಮಾಡುವುದಕ್ಕಾಗಿ ಸ್ಪೆಷಲ್ ಸ್ಕ್ವಾಡ್ ಇದೆ. ಸಾರಿಗೆ ಸಂಸ್ಥೆಯ ಒಬ್ಬ ಅಧಿಕಾರಿ, ಒಬ್ಬ ಪೋಲೀಸ್ ಅಧಿಕಾರಿ ಹಾಗೂ ಒಬ್ಬ ಟ್ರಾನ್ಸ್‌ಪೋರ್ಟ್ ಅಧಿಕಾರಿ ಅದರಲ್ಲಿರುತ್ತಾರೆ. ಅವರು ಎಷ್ಟರಮಟ್ಟಿಗೆ ಕೆಲಸ ಮಾಡಿ ಭ್ರಷ್ಟಾಚಾರ ಮಾಡುತ್ತಿದ್ದಾರೆ ಎನ್ನುವುದು ಗೊತ್ತು. ಅವರು ಖಾಸಗಿ ಮಾಲೀಕರ ಜೊತೆಯಲ್ಲಿ ಸೇರಿಕೊಂಡು ಅವರಿಗೆ ಹೆಚ್ಚು ಉತ್ತೇಜನ ಕೊಡುತ್ತಾರೆ. ಸರ್ಕಾರದ ಉಪ್ಪು ತಿನ್ನುತ್ತಿದ್ದಾರೆ, ಸರ್ಕಾರದಿಂದ ಸಂಬಳ ಪಡೆಯುತ್ತಾರೆ, ಆದರೂ ಇಂಥ ಕೆಲಸಗಳನ್ನು ಮಾಡುತ್ತಾರೆ. ಸರ್ಕಾರ ಈ ಬಗ್ಗೆ ಹೆಚ್ಚು ನಿಗಾವಹಿಸಬೇಕು. ಈ ಮೂರು ಜನ ಅಧಿಕಾರಿಗಳು ಇರುವಂಥ ಸ್ಕ್ವಾಡ್ ಎಷ್ಟು ಓವರ್‌ಲೋಡ್ ಕೇಸುಗಳನ್ನು ಹಿಡಿದಿದೆ, ಎಷ್ಟು ಕನ್‌ವಿಕ್ಷನ್ ಆಗಿವೆ ಎಂಬುದನ್ನು ನೋಡಬೇಕು. ಈ ಸ್ಕ್ವಾಡ್ ಮಾಡಿರುವ ಕೆಲಸವೇನು, ಅವರ ಪೀರಿಯ್ಯಾಡಿಕಲ್ ರಿಪೋರ್ಟ್ ಏನು. ಎಷ್ಟು ಕೇಸುಗಳು ಕನ್‌ವಿಕ್ಟ್ ಆಗಿವೆ ಎನ್ನುವ ಮಾಹಿತಿಯನ್ನು ಕೊಡಬೇಕೆಂದು ಕೇಳುತ್ತೇನೆ.

ಆನೇಕಲ್‌ನಲ್ಲಿ ಮೂರು ನಾಲ್ಕು ಬಸ್ಸುಗಳು ಷಾರ್ಟೇಜ್ ಇದೆ. ಇದರಿಂದ ಖಾಸಗಿಯವರಿಗೆ ಲಾಭವಾಗಿ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಡಿಪೋನಲ್ಲಿ ಕೇಳಿದರೆ ಬಸ್ಸುಗಳಿಲ್ಲವೆಂದು ಹೇಳುತ್ತಾರೆ. ಹೀಗಿದ್ದರೂ ಶ್ರೀಮಂತ ವರ್ಗದವರು ಬಂದರೆ ಅವರಿಗೆ ಮಣಿದು ಬಸ್ ಕೊಡುತ್ತಾರೆ. ಅನೇಕ ಇಂಥವನ್ನು ಅಧಿಕಾರ ವರ್ಗದವರ ಗಮನಕ್ಕೆ ತಂದಿದ್ದೇನೆ. ಯಾರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ, ಅವರಿಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕುತ್ತಿಲ್ಲ. ಯಾವ ಅಧಿಕಾರಿ ನ್ಯಾಯವಾಗಿ ಕೆಲಸ ಮಾಡುತ್ತಾನೆ, ದಕ್ಷತೆಯಿಂದ ಕೆಲಸ ಮಾಡುತ್ತಿರುತ್ತಾನೆ, ಅಂಥವರಿಗೆ ಶಹಭಾಸ್‌ಗಿರಿ ಕೊಡಬೇಕು ಮತ್ತು ಹೆಚ್ಚಿನ ಇನ್‌ಕ್ರಿಮೆಂಟ್ ಕೊಡಬೇಕೆಂದು ಹೇಳುತ್ತೇನೆ.

ಅನೇಕ ಕಡೆ ಷೆಲ್ಟರುಗಳಿಲ್ಲ. ಮಳೆ ಬಂದಾಗ ನಿಲ್ಲುವುದಕ್ಕೆ ಸ್ಥಳವಿಲ್ಲದೆ ಮಳೆಯಲ್ಲಿ ನೆನೆಯುವುದನ್ನು ನಾನು ನೋಡಿದ್ದೇನೆ. ಬೆಂಗಳೂರು ನಗರದಲ್ಲಿ ರಾಜಕೀಯಕ್ಕೋಸ್ಕರ, ಶ್ರೀಮಂತರಿಗೋಸ್ಕರ, ಐ. ಎ. ಎಸ್. ಅಧಿಕಾರಿಗಳಿಗೋಸ್ಕರ ಅವರ ಒತ್ತಡದಿಂದಲೋ ಏನೋ ಎಲ್ಲಿ ಬೇಕೋ ಅಲ್ಲಿ ಅವರಿಗೆ ಅನುಕೂಲವಾಗುವಂತೆ ಷೆಲ್ಟರ್ಸ್ ಕಟ್ಟಿಸಿದ್ದಾರೆ. ಬಡವರಿಗೆ ಹಾಗೂ ಪ್ರಯಾಣಿಕರಿಗೆ ಅನುಕೂಲವಾಗುವ ಕಡೆ ಷೆಲ್ಟರುಗಳಿಲ್ಲ. ಅಲ್ಲಿ ಷೆಲ್ಟರುಗಳ ವ್ಯವಸ್ಥೆ ಮಾಡಬೇಕು. ಬಸ್ಸುಗಳಲ್ಲಿ ಪ್ರಯಾಣ ಮಾಡುವಾಗ ಪೀಕ್ ಅವರ್‌ನಲ್ಲಿ ಜನರ ಒತ್ತಡ ಜಾಸ್ತಿಯಾಗಿರುತ್ತದೆ. ಬಸ್ಸುಗಳಲ್ಲಿ ದೊಡ್ಡದಾಗಿ ಬೋರ್ಡ್ ಹಾಕಿದ್ದಾರೆ, ಮುದುಕರಿಗೆ, ಹೆಂಗಸರಿಗೆ ಮತ್ತು ಮಕ್ಕಳಿಗೆ ಕೂಡುವುದಕ್ಕೆ ಅವಕಾಶ ಕೊಡಿ ಎಂದು. ಆದರೆ ಯಾರೂ ಈ ಬಗ್ಗೆ ಗಮನ ಕೊಟ್ಟು ಸ್ಥಳ ಕೊಡುವುದಿಲ್ಲ. ಕಂಡಕ್ಟರನಾದವನು ಟಿಕೆಟ್‌ಗಳನ್ನು ಕೊಡುತ್ತಾನೆ. ಟಿಕೆಟ್ ಕೊಡುವಾಗ ದೊಡ್ಡ ಕ್ಯೂ ಇರುತ್ತದೆ. ಒಂದು ವೇಳೆ ಆ ಬಸ್ಸಿನಲ್ಲಿ ಕುಳಿತುಕೊಳ್ಳಲು ಸ್ಥಳಾವಕಾಶವಿಲ್ಲದೆ ಇದ್ದರೆ, ಮತ್ತೊಂದು ಬಸ್ಸಿಗೆ ಹೋಗಬೇಕೆಂದರೆ ಆ ಟಿಕೆಟ್ ಅದಕ್ಕೆ ಉಪಯೋಗಿಸುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಆ ಬಸ್ಸಿಗೆ ಬೇರೆ ಟಿಕೆಟ್ ತೆಗೆದುಕೊಂಡು ಪ್ರಯಾಣ ಮಾಡುವ ಸ್ಥಿತಿ ಬರುತ್ತದೆ. ಹಳ್ಳಿಯ ಕಡೆಯಿಂದ ಬಂದಿರುವವನ ಹತ್ತಿರ ಎಂಟಾಣೆ ಮಾತ್ರ ಇದ್ದು, ಅವನು ಮಲ್ಲೇಶ್ವರದಿಂದ ಬಸವನಗುಡಿಗೆ ಹೋಗುವ ಪ್ರಮೇಯ ಬಂದಾಗ, ಕಂಡಕ್ಟರುಗಳು ಸರಿಯಾದ ಮಾರ್ಗದರ್ಶನ ಮಾಡದೆ ಹೋದರೆ ಅವನು ಟಿಕೆಟ್ಟಿಗೆ ಕೊಟ್ಟ ಹಣವನ್ನೂ ಕಳೆದುಕೊಳ್ಳುವುದಲ್ಲದೆ ಪ್ರಯಾಣವೂ ಸರಿಯಾಗಿ ಆಗುವುದಿಲ್ಲ. ಇಂಥದ್ದನ್ನು ಸರಿ ಮಾಡಬೇಕೆಂದು ಹೇಳುತ್ತೇನೆ.

ಲೇಬರ್ ಇನ್‌ಸ್ಪೆಕ್ಟರುಗಳಿದ್ದಾರೆ. ಏನೂ ಪರಿಶ್ರಮವಿಲ್ಲದೆ ಇರುವವರನ್ನು ಇಟ್ಟಿದ್ದಾರೆ. ಅಸಿಸ್ಟೆಂಟ್ ಲೇಬರ್ ಕಮಿಷನರ್ ಯಾರು ದಕ್ಷರಾಗಿದ್ದಾರೆ ಅವರನ್ನು ಹಾಕಬೇಕು. ರಿಕ್ರೂಟ್‌ಗಳನ್ನು ತಂದು ಹಾಕಿದರೆ ಅವರಿಗೆ ಲೇಬರ್ ಆಕ್ಟ್‌ನಲ್ಲಿರುವ ವಿಷಯಗಳೇ ಗೊತ್ತಿರುವುದಿಲ್ಲ, ಅದರ ಗಂಧವೇ ಇರುವುದಿಲ್ಲ. ಆದ್ದರಿಂದ ದಕ್ಷರಾಗಿರತಕ್ಕ ಅಧಿಕಾರಿಗಳನ್ನು ಹಾಕಬೇಕು ಮತ್ತು ಅವಶ್ಯಕವೆನಿಸಿದರೆ ಇನ್ನೂ ಒಂದೆರಡು ಇನ್‌ಕ್ರಿಮೆಂಟ್ ಕೊಟ್ಟು ಯಾವುದೇ ಒತ್ತಡಕ್ಕೆ ಮಣಿಯದೇ ಇರುವವರನ್ನೂ ಆ ಜಾತಿ ಈ ಜಾತಿ ಎನ್ನುವುದನ್ನು ಬಿಟ್ಟು, ದಕ್ಷರಾದ ಅಧಿಕಾರಿಗಳನ್ನು ಹಾಕಿ ಅವರಿಗೆ ಮಾನ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ.

ವರ್ಕ್‌ಷಾಪ್‌ನಲ್ಲಿ ಕೆಲಸ ಮಾಡುವವರು ಈಗ ಎರಡು ಷಿಫ್ಟ್ ಕೆಲಸ ಮಾಡುತ್ತಿದ್ದಾರೆ. ಅವರ ಬಗ್ಗೆ ಹೆಚ್ಚು ನಿಗಾ ಕೊಟ್ಟಿದೆ ಎಂದು ತಿಳಿದುಕೊಂಡಿದ್ದೇನೆ. ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಎರಡು ಷಿಫ್ಟ್‌ಗೆ ಬದಲಾಗಿ ಮೂರು ಷಿಫ್ಟ್ ಕೆಲಸ ಮಾಡಿದರೆ ಹೆಚ್ಚು ಬಸ್ಸುಗಳು ರಿಪೇರಿಯಾಗಬಹುದು. ಹೀಗೆ ಮಾಡಿ ಪ್ರಯಾಣಿಕರಿಗೆ ಹೆಚ್ಚು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎಚ್.ಎಂ.ಟಿ., ಬಿ.ಇ.ಎಲ್., ಎಚ್.ಎ.ಎಲ್., ನವರು ಓಡಿಸುತ್ತಿರುವ ಅವರ ಬಸ್ಸುಗಳನ್ನೆಲ್ಲ ತೆಗೆದುಹಾಕಿ ಸರ್ಕಾರಕ್ಕೆ ವಹಿಸಿಕೊಡುತ್ತಾರೆ ಎಂದು ಗೊತ್ತಾಗಿದೆ. ಆ ಬಸ್ಸುಗಳನ್ನು ತೆಗೆದುಕೊಂಡು ಒಳ್ಳೆಯ ರೀತಿಯಲ್ಲಿ ಇನ್ನೂ ಹೆಚ್ಚಿಗೆ ಲಾಭ ಬರುವ ರೀತಿಯಲ್ಲಿ ನಡೆಸುತ್ತಾರೆಂದು ನಂಬಿಕೊಂಡಿದ್ದೇನೆ.

ಕೊನೆಯದಾಗಿ ಈಗಿರತಕ್ಕ ಬಸ್ಸುಗಳಲ್ಲಿ ಸರಿಯಾಗಿ ಚೆಕ್ಕಿಂಗ್ ಮಾಡುತ್ತಿಲ್ಲ. ಇದರಿಂದಾಗಿ ಬಸ್ಸುಗಳು ಇನ್ನೂರು ಮೈಲಿ ದೂರ ಓಡಿದನಂತರ ಮಧ್ಯದಲ್ಲೇ ನಿಂತು ಹೋಗುತ್ತವೆ. ಇದಕ್ಕಾಗಿ ಬಸ್ಸುಗಳನ್ನು ಓಡಿಸುವುದಕ್ಕೆ ಮುನ್ನ ಅಧಿಕಾರಿಗಳು ಸರಿಯಾಗಿ ತನಿಖೆ ಮಾಡಿ ಆ ನಂತರ ಹೊರಕ್ಕೆ ಕಳುಹಿಸಬೇಕು. ಇನ್ನು ಕಾಂಟ್ರಾಕ್ಟು ಕ್ಯಾರೇಜು ಬಸ್ಸುಗಳಲ್ಲಿ ಸಾಕಷ್ಟು ಜನರನ್ನು ತುಂಬಿಸಿದ್ದರೂ ಒಂದಕ್ಕೆರಡರಷ್ಟು ಲೋಡು ಮಾಡಿ ಸಂಪಾದನೆ ಮಾಡುತ್ತಿದ್ದಾರೆ. ಇಂತಹ ಕಾಂಟ್ರಾಕ್ಟ್ ಕ್ಯಾರೇಜು ಬಸ್ಸುಗಳನ್ನು ಸೀಜ್ ಮಾಡಬೇಕು ಮತ್ತು ರೀಜನಲ್

ಟ್ರಾನ್ಸ್‌ಪೋರ್ಟ್ ಡಿಪೋಗಳನ್ನು ಬೇರೆ ಊರುಗಳಲ್ಲಿ ಕೂಡ ವ್ಯವಸ್ಥೆ ಮಾಡುವುದರ ಕಡೆಗೆ ಸರಕಾರ ಗಮನ ಕೊಡಬೇಕೆಂದು ಇಲ್ಲಿ ಸಲಹೆ ಮಾಡುತ್ತೇನೆ. ಮತ್ತು ಸಾರಿಗೆ ಬಸ್ಸುಗಳಲ್ಲಿ ಪ್ರಯಾಣ ಮಾಡುವ ಜನಕ್ಕೆ ಸಾಕಷ್ಟು ಸೌಕರ್ಯಗಳನ್ನೂ ಒದಗಿಸಿ ಕೊಡಬೇಕೆಂದು ಪ್ರಾರ್ಥನೆ ಮಾಡಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ) :—ಮಾನ್ಯ ಅಧ್ಯಕ್ಷರೇ, ಅನೇಕ ವರ್ಷಗಳಿಂದಲೂ ಮೋಟಾರು ವಾಹನಗಳ ಟ್ಯಾಕ್ಸನ್ನು ದಿನೇ ದಿನೇ ಹೆಚ್ಚು ಮಾಡುತ್ತಿದ್ದಾರೆ. ಆದರೆ ಇದಕ್ಕೆ ಸರಿಯಾಗಿ ಕೊಡಬೇಕಾದ ಕಾಂಪೆನ್‌ಸೇಷನ್‌ಗಳನ್ನು ಕೊಡುತ್ತಿಲ್ಲ. ಸರಕಾರ ಇದನ್ನು ಗಮನಕ್ಕೆ ತೆಗೆದುಕೊಳ್ಳದೇ ಇರುವುದು ತುಂಬಾ ಶೋಚನೀಯವಾದ ವಿಚಾರ. ಈಗ ಮೋಟಾರು ವೆಹಿಕಲ್ಸ್ ಟ್ಯಾಕ್ಸ್ ಒಂದರಿಂದಲೇ ಸರಕಾರಕ್ಕೆ ಸುಮಾರು ಹದಿಮೂರು ಕೋಟಿಯಷ್ಟು ಬರುತ್ತಿದೆ. ಇದರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಕೇವಲ ಒಂದು ಕೋಟಿ ಎಪ್ಪತ್ತೈದು ಲಕ್ಷ ಎಂದು ಕೆಲವು ಸ್ಥಳೀಯ ಸಂಸ್ಥೆಗಳಿಗೆ ಕೊಡುತ್ತಿದ್ದಾರೆ. ಎಲ್ಲ ಸ್ಥಳೀಯ ಸಂಸ್ಥೆಗಳಿಗೂ ಸುಮಾರು 15 ಲಕ್ಷದಷ್ಟು ಕೊಡಬೇಕಾಗಿದೆ. ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಮೋಟಾರು ವಾಹನಗಳ ತೆರಿಗೆ ಸುಮಾರು ಐದು ಕೋಟಿವರೆಗೆ ಬರುತ್ತದೆ. ಇದರಲ್ಲಿ ನಮ್ಮ ಕಾರ್ಪೊರೇಷನ್ನಿಗಾಗಿ 5,56 000 ಎಂದು ಕೊಡುತ್ತಿದ್ದಾರೆ. ಇದರ ಜೊತೆಗೆ ರೋಡು ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ನಡೆಸತಕ್ಕ ಬಸ್ಸುಗಳಲ್ಲಿ ಇನ್ನೂ ಅವ್ಯವಸ್ಥೆಗಳಿವೆ. ಇದನ್ನು ಇನ್ನೂ ಸಮರ್ಪಕವಾಗಿ ಮಾಡಲಾಗಲಿಲ್ಲ. ಅನೇಕ ಕಡೆಗಳಲ್ಲಿ ಪ್ರೈವೇಟು ಬಸ್ಸುಗಳು ಓಡಾಡುತ್ತಿವೆ. ಇದನ್ನು ತೆಗೆಯಬೇಕೆಂದು ಸರಕಾರ ಯೋಜನೆ ಮಾಡುತ್ತಿದೆ ಎಂದು ಕೇಳುತ್ತೇವೆ. ಇದರ ಬಗ್ಗೆ ನಾನು ಹೇಳುವುದು ಇಷ್ಟು. ರಾಜ್ಯದಲ್ಲಿರುವ ಪ್ರೈವೇಟು ಬಸ್ಸುಗಳು ಸರಕಾರದ ಸಾರಿಗೆಯ ಬಸ್ಸುಗಳಲ್ಲಿ ಸುಮಾರು ಅರ್ಧಕ್ಕಿಂತಲೂ ಹೆಚ್ಚಾಗಿ ಓಡಾಡು ತ್ತಿವೆ ಮತ್ತು ಜನತೆಗೆ ಬಹಳ ತೃಪ್ತಿಕರವಾಗಿ ಸೇವೆ ಮಾಡಿ ಸೌಕರ್ಯಗಳನ್ನು ಒದಗಿಸಿ ಕೊಡುತ್ತಿವೆ. ಇಂತಹ ಸೌಕರ್ಯಗಳು ಇನ್ನೂ ನಮ್ಮ ಸರಕಾರಿ ಬಸ್ಸುಗಳಲ್ಲಿ ಒದಗುತ್ತಿಲ್ಲ. ಅವಸರದಲ್ಲಿ ಎಲ್ಲ ಪ್ರೈವೇಟು ಬಸ್ಸುಗಳನ್ನೂ ಸರಕಾರವೇ ವಹಿಸಿಕೊಳ್ಳಬೇಕು ಎಂದು ತೆಗೆದು ಕೊಂಡರೆ ಅದರಿಂದ ಇನ್ನು ಹೆಚ್ಚು ಅನಾನುಕೂಲಗಳು ಹಾಗೂ ತೊಂದರೆಗಳು ಜನತೆಗೆ ಆಗುತ್ತವೆ ಎಂದು ಈ ಸನ್ನಿವೇಶದಲ್ಲಿ ಹೇಳಬೇಕಾಗಿದೆ. ಪೀಕ್ ಅವರ್ಸ್‌ನಲ್ಲಿ ಬಸ್ಸುಗಳಲ್ಲಿ ಸ್ಟ್ಯಾಂಡಿಂಗ್ ಅಕಾಮಡೇಷನ್ ಇರುವಂತೆ ವ್ಯವಸ್ಥೆ ಮಾಡಬೇಕು. ಇದರ ಕಡೆಗೆ ಸರಕಾರ ಲಕ್ಷ್ಯ ಕೊಟ್ಟು ವಿಚಾರ ಮಾಡಬೇಕು ಎಂದು ನನ್ನ ಸಲಹೆ.

ಇನ್ನು ಎಂಪ್ಲಾಯ್‌ಮೆಂಟ್ ಬಗ್ಗೆ ಹೇಳಬೇಕಾದರೆ ಇಂದು ಇರುವ ರಾಜ್ಯದ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜುಗಳಲ್ಲಿ ಸುಮಾರು ಮೂರು ಲಕ್ಷ ಜನರು ರಿಜಿಸ್ಟರು ಮಾಡಿದ್ದಾರೆ, ಇದರಲ್ಲಿ 1.75 ಸಾವಿರ ಜನರು ಎಜುಕೇಟೆಡ್ ಇದ್ದಾರೆ. ಇದರಲ್ಲಿ ಅಂಡರ್ ಗ್ರ್ಯಾಜುಯೇಟರುಗಳು ರಿಜಿಸ್ಟರು ಮಾಡದೇ ಇರುವವರೂ ಇದ್ದಾರೆ. ಆದರೆ ಸರಕಾರ ನಿರುದ್ಯೋಗಿಗಳಿಗೆ ಸರಿಯಾಗಿ ಉದ್ಯೋಗಗಳನ್ನು ಒದಗಿಸಿ ಕೊಡುವುದರಲ್ಲಿ ವಿಫಲವಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜುಗಳಲ್ಲಿ ಕ್ರಾಫ್ಟ್ಸ್‌ಮನ್ ಕೋರ್ಸು ಕಾರ್ಪೆಂಟ್ರಿ ಮೆಷಿನರಿ ಇಂತಹ ಜಾಬ್ ಓರಿಯಂಟೆಡ್ ಉದ್ಯೋಗಗಳಲ್ಲಿ ತರಬೇತಿ ಪಡೆದವರಿಗೆ ರಿಜಿಸ್ಟರು ಮಾಡಿಸಿಕೊಳ್ಳಲು ಇದರಲ್ಲಿ ವ್ಯವಸ್ಥೆ ಮಾಡಬೇಕು. ಇಂತಹ ಜನರಿಗೆ ಸಾರಿಗೆ ವ್ಯವಸ್ಥೆಯಲ್ಲಿ ಕೆಲಸಗಳನ್ನು ಕೊಡಿಸುವ ವ್ಯವಸ್ಥೆ ಮಾಡಬೇಕು, ಮತ್ತು ಸಾರಿಗೆ ವ್ಯವಸ್ಥೆಯ ಬಗ್ಗೆ ಹೇಳಬೇಕಾದರೆ ಮಾನ್ಯ ಮಂತ್ರಿಗಳು ಹೇಳುವಂತೆ ಇಲ್ಲಿ ಉತ್ತಮವಾಗಿ ಕೆಲಸಗಳು ನಡೆಯುತ್ತಿಲ್ಲ ಮತ್ತು ಇಲ್ಲಿ ಹೆಚ್ಚು ಸಮರ್ಪಕವಾಗಿ ಕೆಲಸಗಳು ನಡೆಯುವಂತೆ ಮಾಡಬೇಕು. ನಾವು ಅನೇಕ ಸಂದರ್ಭಗಳಲ್ಲಿ ಸಾರಿಗೆ ಬಸ್ಸುಗಳ ಅವ್ಯವಸ್ಥೆಯನ್ನು ಹೇಳುತ್ತಿದ್ದರೂ ಇದನ್ನು ಸರಕಾರ ಗಮನಕ್ಕೇ ತೆಗೆದುಕೊಳ್ಳುತ್ತಿಲ್ಲ. ಈಚೆಗೆ ಸಾರಿಗೆ ಬಸ್ಸು

ಗಳವರು ಕೆಲವು ಕಡೆ ಇದ್ದ ಬಸ್ ಸ್ಟಾಪುಗಳನ್ನು ತೆಗೆದು ಬಹಳ ಕಡೆ ಹಿಂದು ಮುಂದು ಮಾಡಿ ಬದಲಾವಣೆ ಮಾಡಿದ್ದಾರೆ. ಇದರಿಂದ ಜನರು ಹಿಂದೆ ಇದ್ದ ಬಸ್ ಸ್ಟಾಪಿಗಿಂತ ಹೆಚ್ಚಾಗಿ ಅರ್ಧಮೈಲಿ ಹಾಗೂ ಮುಕ್ಕಾಲು ಮೈಲಿಗಳಷ್ಟು ದೂರ ಈಗ ಹೆಚ್ಚಾಗಿ ನಡೆಯಬೇಕಾಗಿದೆ, ಇದನ್ನು ಪರಿಶೀಲನೆ ಮಾಡಿ ರೂಟುಗಳಲ್ಲಿ ಹಿಂದೆ ಇದ್ದ ಬಸ್ಸು ಸ್ಟಾಪುಗಳನ್ನು ಕಿತ್ತು ಹಾಕದೆ ಅಲ್ಲೇ ಇರುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ರೋಡು ಆಕ್ಸಿಡೆಂಟುಗಳು ಇಂದು ವಿಪರೀತವಾಗುತ್ತಿದೆ, ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ರೋಡು ಟ್ರಾನ್ಸ್‌ಪೋರ್ಟು ಡಿಪಾರ್ಟುಮೆಂಟು ಇಲಾಖೆಗೂ, ಪಿ. ಡಬ್ಲ್ಯು. ಡಿ. ಡಿಪಾರ್ಟುಮೆಂಟಿಗೂ ಸರಿಯಾದ ಕೋಆರ್ಡಿನೇಷನ್ ಇಲ್ಲ. ಇದರಿಂದಾಗಿ ರಸ್ತೆಗಳನ್ನು ಸರಿಯಾಗಿ ಸುಧಾರಿಸುವುದಕ್ಕಾಗುತ್ತಿಲ್ಲ. ಇವೆರಡು ಡಿಪಾರ್ಟುಮೆಂಟುಗಳಿಗೂ ಸರಿಯಾಗಿ ಕೋಆರ್ಡಿನೇಷನ್ ಇರುವಂತೆ ವ್ಯವಸ್ಥೆ ಮಾಡಬೇಕು ಇಲ್ಲದಿದ್ದರೆ ಇಲ್ಲಿ ಸುಮುಖವಾಗಿ ಕೆಲಸಗಳನ್ನು ಮಾಡುವುದು ಕಷ್ಟವಾಗುತ್ತದೆ, ರೋಡ್ ಟ್ರಾನ್ಸ್‌ಪೋರ್ಟು ಇಲಾಖೆಯಲ್ಲಿ ಗ್ರೂಪಿಸಂ ಜಾಸ್ತಿ ಈಗ ಬೆಳೆಯುತ್ತಿದೆ ಎಂದು ಕೇಳುತ್ತೇವೆ. ಟಾಪ್ ಲೆವೆಲ್‌ನಲ್ಲಿ ಬೇರೆ ಬೇರೆ ಗುಂಪು ಮಾಡಿಕೊಂಡು ಕೆಲಸಗಳಾಗುತ್ತಿರುವುದರಿಂದ ಇಲ್ಲಿ ಜನರಿಗೆ ತೊಂದರೆಯಾಗುತ್ತಿದೆ, ಇದನ್ನು ಪರಿಶೀಲನೆ ಮಾಡಿ ಇಲ್ಲಿರುವ ಅವ್ಯವಸ್ಥೆಗಳನ್ನು ಸರಿಪಡಿಸಿ ಸರಿಯಾಗಿ ಪರಿಶೀಲನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಲಂಚದ ಹಾವಳಿ ಸಾರಿಗೆ ಬಸ್ಸುಗಳಲ್ಲಿ ಜಾಸ್ತಿಯಾಗುತ್ತಿದೆ. ಆದುದರಿಂದ ನಮ್ಮ ರೋಡ್ ಟ್ರಾನ್ಸ್‌ಪೋರ್ಟು ಇಲಾಖೆಯ ಬಸ್ಸುಗಳು ಸರಿಯಾಗಿ ಲಾಭ ಬರುವ ರೀತಿಯಲ್ಲಿ ಕೆಲಸಗಳನ್ನು ಸಮರ್ಪಕವಾಗಿ ಮಾಡುತ್ತಿಲ್ಲ. ಇದರಿಂದಾಗಿ ಜನರ ಸೇವೆ ಮಾಡುವುದರಲ್ಲಿ ಇದು ವಿಫಲವಾಗಿದೆ. ಇದಕ್ಕೆ ಕಾರಣಗಳೇನು ಎನ್ನುವುದನ್ನು ಸರಕಾರ ಕೊಡಬೇಕೆಂದು ಇಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ದೇಶದಲ್ಲಿರುವ ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ಒದಗಿಸುವುದರಲ್ಲಿರುವ ಅಡ್ಡಿ ಆತಂಕಗಳೇನು ಎನ್ನುವುದನ್ನು ಸರಿಯಾಗಿ ಯೋಚನೆ ಮಾಡಬೇಕು, ನನಗೆ ಮಾತನಾಡಲು ಅಧ್ಯಕ್ಷರು ಇಷ್ಟು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ) :—ಮಾನ್ಯ ಅಧ್ಯಕ್ಷರೇ, ಮಾನ್ಯ ಟ್ರಾನ್ಸ್‌ಪೋರ್ಟು ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಮಾಡುತ್ತಾ ಕೆಲವು ಸಲಹೆಗಳನ್ನು ನೀಡಬಯಸುತ್ತೇನೆ. ನಮ್ಮ ಮೈಸೂರು ದೇಶದಲ್ಲಿ ಎಂ. ಎಸ್. ಆರ್. ಟಿ. ಸಿ. ಕಾರ್ಪೊರೇಷನ್ ಬಹಳ ಪ್ರಾಮುಖ್ಯವಾದುದು. ಇಂದು ಬಸ್ಸುಗಳಲ್ಲಿ ಓಡಾಡುವ ಪ್ರಯಾಣಿಕರ ಸಂಖ್ಯೆ ಬಹಳ ಜಾಸ್ತಿಯಾಗಿದೆ, ಆದರೆ ಬಸ್ಸುಗಳಲ್ಲಿ ಪ್ರಯಾಣಿಕರಿಗೆ ಅದಕ್ಕೆ ತಕ್ಕಂತೆ ಸೌಲಭ್ಯಗಳನ್ನು ಕೊಡುತ್ತಿಲ್ಲ. ಇದಕ್ಕೆ ಕಾರಣವೇನು ಎನ್ನುವುದನ್ನು ನಾವು ನೋಡಬೇಕು, ನಮ್ಮ ಹಾಸನದಲ್ಲಿ ಒಂದು ಡಿವಿಜನ್ ಇದೆ. ಇದು ಬಹಳ ದೊಡ್ಡ ಡಿವಿಜನ್ನಾಗಿದೆ. ಇಂದು ಇಲ್ಲಿ ಓಡಾಡುತ್ತಿರುವ ಬಸ್ಸುಗಳಿಂದ ಹೆಚ್ಚು ಲಾಭ ಬರುತ್ತಿಲ್ಲ. ಮೈಸೂರು ದೇಶದಲ್ಲಿ ಬಸ್ಸುಗಳನ್ನು ನ್ಯಾಷನಲೈಸು ಮಾಡಬೇಕೆಂದು ಆರಂಭಮಾಡಿದಾಗ ನಮ್ಮ ಹಾಸನ ಜಿಲ್ಲೆಯಲ್ಲೇ ಮೊದಲು ಆರಂಭ ಮಾಡಿದರು ಮತ್ತು ಹಾಸನದ ಏರಿಯಾ ಪೂರ್ತಿ ನ್ಯಾಷನಲೈಸು ಮಾಡಿದ್ದಾರೆ, ಇಲ್ಲಿ ಪ್ರೈವೇಟು ಬಸ್ಸುಗಳು ಹೆಚ್ಚಾಗಿ ಬರುವಂತಿಲ್ಲ. ಕಾಂಟ್ರಾಕ್ಟ್ ಕ್ಯಾರೇಜಸ್ ಎಂದು ಕೆಲವರಿಗೆ ಪರ್ಮಿಟ್ಟು ಕೊಟ್ಟರೆ ಇದರಿಂದ ಎಂ. ಎಸ್. ಆರ್. ಟಿ. ಸಿ. ಗೆ ಪ್ರಯೋಜನವಾಗುವುದಿಲ್ಲ. ಹಾಸನದ ಆರ್. ಟಿ. ಎ.ನಲ್ಲಿ ಒಂದು ಕಾಂಟ್ರಾಕ್ಟು ಕ್ಯಾರೇಜಿಗೂ ಪರ್ಮಿಟ್ಟು ಕೊಟ್ಟಿಲ್ಲ. ಆದರೆ ಬೇರೆ ಬೇರೆ ಜಿಲ್ಲೆಗಳಲ್ಲಿ ಈಚೆಗೆ ಕಾಂಟ್ರಾಕ್ಟು ಕ್ಯಾರೇಜು ಬಸ್ಸುಗಳಿಗೆ ಜಾಸ್ತಿ

ಪರ್ಮಿಟ್ಟುಗಳನ್ನು ಕೊಡಲು ಕಾರಣವೇನು ಎನ್ನುವುದು ಗೊತ್ತಾಗುತ್ತಿಲ್ಲ. ಇದರಲ್ಲಿ ಬಹಳ ಲೋಪದೋಷಗಳಿವೆ. ಇನ್ನು ಮುಂದೆ ಮೋಟಾರು ವೆಹಿಕಲ್ಸ್ ಇಲಾಖೆ R.T.A. ಯವರು ಕಾಂಟ್ರಾಕ್ಟು ಕ್ಯಾರೇಜುಗಳಿಗೆ ಪರ್ಮಿಟ್ಟು ಕೊಡುವುದನ್ನು ನಿಲ್ಲಿಸಬೇಕು. ನಮ್ಮ ಹಾಸನ ದಲ್ಲಿರುವ ಡಿವಿಜನ್ನನ್ನು ಎರಡು ಭಾಗ ಮಾಡಿ ಒಂದನ್ನು ಶಿವಮೊಗ್ಗದಲ್ಲೋ ಇಲ್ಲವೇ ಮಂಗಳೂರಿನಲ್ಲೋ ಒಂದು ಡಿವಿಜನ್ ಇರುವಂತೆ ಮಾಡಬೇಕೆಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ. ಈಗ ಬಸ್ಸುಗಳಲ್ಲಿ ಲೀಕೇಜುಗಳು (Leakage) ಬಹಳ ಜಾಸ್ತಿಯಾಗಿದೆ. ಕೆಲವು ಕಡೆ ಇರುವ ಕಂಡಕ್ಟರುಗಳು ಚಿಲ್ಲರೆ ಕೊಡಬೇಕೆಂದು ಒಂದು ನೆಪ ಮಾಡಿ ಅವರು ಕೊಡುವ ಟಿಕೆಟ್ಟುಗಳ ಹಿಂದೆ ಗುರುತುಮಾಡುತ್ತಾರೆ ಅನಂತರ ಚಿಲ್ಲರೆ ವಾಪಸ್ಸು ಕೊಟ್ಟ ಮೇಲೆ ಟಿಕೆಟ್ಟುಗಳನ್ನು ಪಡೆದು ಅದೇ ಟಿಕೆಟ್ಟನ್ನು ಇನ್ನೊಬ್ಬ ಪ್ರಯಾಣಿಕರಿಗೆ ಕೊಡುತ್ತಾರೆ, ಇದರಿಂದ ಸರಕಾರಕ್ಕೆ ಬರುವ ದುಡ್ಡು ನಷ್ಟವಾಗುತ್ತದೆ, ಇದರ ಬಗ್ಗೆ ಮಾನ್ಯ ಮಂತ್ರಿಗಳೂ ಗಮನಿಸುತ್ತಿರುವುದು ಸಂತೋಷ. ಹೀಗೆ ಟಿಕೆಟ್ಟುಗಳನ್ನು ಕೊಡುವುದರಲ್ಲಿ ಅನೇಕ ಲೋಪ ದೋಷಗಳಿವೆ, ಇದನ್ನು ಪರಿಶೀಲನೆ ಮಾಡಿ ಸರಿಪಡಿಸಬೇಕು ಮತ್ತು ಸೂಕ್ತವಾದ ಕ್ರಮಗಳನ್ನೂ ಬೇಗ ತೆಗೆದುಕೊಳ್ಳಬೇಕು. ಲಂಚದ ಹಾವಳಿಯಿಂದ ಶೇಕಡ 35 ರಷ್ಟು ನಷ್ಟವಾಗುತ್ತಿದೆ, ಇದಕ್ಕೆ ಅವಕಾಶ ಕೊಡದೆ ಸರಕಾರಕ್ಕೆ ಜಾಸ್ತಿ ಲಾಭವಾಗುವಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ?

ಇನ್ನು ಬಸ್ಸು ಷೆಲ್ಟರುಗಳನ್ನು ಸಾರಿಗೆ ಇಲಾಖೆಯವರು ಅಲ್ಲಲ್ಲಿ ಕಟ್ಟಿಸಬೇಕೆಂದು ಮಾಡುತ್ತಿದ್ದಾರೆ. ಆದರೆ ಆರಂಭ ಮಾಡಿರುವ ಕೆಲವು ಬಸ್ ಷೆಲ್ಟರುಗಳ ಕಂಟ್ರಾಕ್ಟರುಗಳು ಕೇಸು ಮಾಡದೇ ಅರ್ಧಕ್ಕೆ ಬಿಟ್ಟು ಹೋಗಿರುತ್ತಾರೆ, ಇಂತಹ ಕೆಲಸಗಳನ್ನು ಪತ್ತೆ ಹಚ್ಚಿ ಪುನಃ ಇಲ್ಲಿನ ಕೆಲಸಗಳನ್ನು ಮಾಡಿಸಿ ಇನ್ನೂ ಹೆಚ್ಚು ಬಸ್ ಸ್ಟಾಪ್‌ಗಳಲ್ಲಿ ಬಸ್ ಷೆಲ್ಟರು ಕೆಲಸಗಳನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ನಮ್ಮ ಸಾರಿಗೆ ಬಸ್ಸುಗಳು ದಾರಿಯಲ್ಲೇ ನಿಂತು ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. ಸಾರಿಗೆ ಇಲಾಖೆಯಲ್ಲಿರುವ ವರ್ಕ್‌ಷಾಪುಗಳಲ್ಲಿ ಬಸ್ಸುಗಳನ್ನು ಸರಿಯಾಗಿ ರಿಪೇರಿ ಮಾಡಿ ನೋಡಿಕೊಳ್ಳಬೇಕು ಮತ್ತು ಪ್ರತಿಯೊಂದು ಬಸ್ಸುಗಳಲ್ಲೂ ಸ್ವಲ್ಪ ರಿಪೇರಿ ಮಾಡುವ ಇಂಪ್ಲಿಮೆಂಟುಗಳು ಎಂದರೆ ಮೆಷಿನರಿಯು ಸಲಕರಣೆಗಳನ್ನು ಇರುವಂತೆ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ನಾವು ಎಷ್ಟು ಹೇಳಿದರೂ ಕಡಿಮೆ. ಇದಕ್ಕಾಗಿ ನಾನು ಸಾರಿಗೆ ಮಂತ್ರಿಗಳಲ್ಲಿ ಸಲಹೆ ಮಾಡುವುದೇನೆಂದರೆ ಅನಿರೀಕ್ಷಿತವಾಗಿ ಕೆಲವು ಕಡೆ ಓಡಾಡುವ ಬಸ್ಸುಗಳನ್ನು ಚೆಕ್ ಮಾಡಲು ಆರಂಭಮಾಡಿದರೆ ಇದರಲ್ಲಿರುವ ವಾಸ್ತವಾಂಶಗಳು ಅವರಿಗೆ ಚೆನ್ನಾಗಿ ಗೊತ್ತಾಗುತ್ತವೆ.

ಇನ್ನು ಬಸ್‌ಸ್ಟಾಪುಗಳು ಹಾಗೂ ಷೆಲ್ಟರುಗಳಲ್ಲಿ ನೈರ್ಮಲ್ಯದ ಕಡೆಗೆ ಗಮನ ಕೊಡಬೇಕು. ಬಸ್ಸು ಸ್ಟ್ಯಾಂಡುಗಳಲ್ಲಿರುವ ಹೋಟೇಲುಗಳಲ್ಲಿ ಸರಿಯಾಗಿ ನೈರ್ಮಲ್ಯದ ಕಡೆಗೆ ಗಮನ ಕೊಡುತ್ತಿಲ್ಲ. ಇವರು ಹೋಟೆಲುಗಳನ್ನು ಶುಚಿಯಾಗಿಡಬೇಕು ಮತ್ತು ರುಚಿಯಾದ ಆಹಾರಗಳನ್ನು ಪ್ರಯಾಣಿಕರಿಗೆ ಒದಗಿಸಿಕೊಡಬೇಕು. ಇದರ ಕಡೆಗೆ ಸರಿಯಾದ ವ್ಯವಸ್ಥೆ ಮಾಡಬೇಕೆಂದು ನನ್ನ ಸಲಹೆ.

ಇನ್ನು ಗ್ರಾಮಾಂತರ ಮಲೆನಾಡು ಪ್ರಾಂತದಲ್ಲಿ ಇಲಾಖೆಯಲ್ಲಿ ಪ್ಲಾಂಟೇಷನ್‌ಗಳು ಬಹು ಪ್ರಾಮುಖ್ಯವಾದುದು. ನಮ್ಮ ದೇಶದಲ್ಲಿರುವ ಪ್ಲಾಂಟೇಷನ್‌ಗಳ ಉತ್ಪತ್ತಿಯಿಂದಲೇ ಸುಮಾರು ನಾನ್ನೂರು ಕೋಟಿ ರೂಪಾಯಿಗಳಷ್ಟು ಫಾರಿನ್ ಎಕ್ಸ್‌ಚೇಂಜು ಬರುತ್ತಿದೆ. ಇದರಲ್ಲಿ ಲಕ್ಷಾಂತರ ಮಂದಿ ಕಾರ್ಮಿಕರುಗಳು ಕೆಲಸಮಾಡುತ್ತಿದ್ದಾರೆ. ಅನೇಕ ಮಧ್ಯವರ್ತಿ ಕಾರ್ಮಿಕರು ಇವರ ಮಧ್ಯದಲ್ಲಿ ಸೇರಿಕೊಂಡು ಕಾರ್ಮಿಕರುಗಳಿಗೆ ತೊಂದರೆ ಕೊಡುತ್ತಿದ್ದಾರೆ. ಕಾರ್ಮಿಕ ಇಲಾಖೆಯಲ್ಲಿ ದಕ್ಷತೆಯಿಂದ ಕೆಲಸ ಮಾಡತಕ್ಕ ಜನ ಬೇಕು. ಪ್ಲಾಂಟೇಷನ್‌ಗಳಲ್ಲಿ ಕೆಲಸಮಾಡುವ ಕಾರ್ಮಿಕರುಗಳಿಗೆ ಸರಿಯಾಗಿ ಸಲಹೆ ಮಾಡುವ ಸಲಹೆಗಾರರು ಇರಬೇಕು, ಇವರುಗಳಿಗೆ ನ್ಯಾಯವಾಗಿ

ಕೊಡಬೇಕಾದ ಮಿನಿಮಂ ವೇಜಸ್ ಇತ್ಯಾದಿಗಳನ್ನು ಸರಿಯಾಗಿ ಕೊಡುತ್ತಿಲ್ಲ ಎನ್ನುತ್ತಾರೆ. ಇದರ ಕಡೆಗೆ ವಿಚಾರ ಮಾಡಿ ಸರಿಯಾಗಿ ವ್ಯವಸ್ಥೆ ಮಾಡಬೇಕು.

ಕೆಲವು ಕಾರ್ಮಿಕ ಮುಖಂಡರು ದುಡ್ಡು ತಿಂದುಹಾಕುತ್ತಿದ್ದಾರೆ. ಮೊನ್ನೆ ಸಕಲೇಶಪುರ ತಾಲ್ಲೂಕಿನ ಕಾಡುಮನೆ ಎಸ್ಟೇಟಿನಲ್ಲಿ ಲಾಕ್‌ಔಟ್ ಆಗುವುದಕ್ಕೂ ಸಹ ಈ ಮಧ್ಯವರ್ತಿ ಜನರೇ ಕಾರಣ ಇದು ಐದೂವರೆ ಸಾವಿರ ಎಕರೆ ಜಮೀನು ಇರುವ ಟೀ-ಎಸ್ಟೇಟ್ ಆಗಿದೆ. ಇಲ್ಲಿ 2 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಲಾಕ್-ಔಟ್ ಆದ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಂಡು ಅದನ್ನು ಪರಿಹಾರ ಮಾಡಿದರು. ಇಲ್ಲಿಯೂ ಸಹ ಐ. ಎನ್. ಟಿ. ಯು. ಸಿ. ಯೂನಿಟ್ ಇದೆ. ಅದು ಬಹಳ ವರ್ಷದಿಂದ ಕೆಲಸ ಮಾಡುತ್ತಿದೆ. ಮುಖ್ಯವಾಗಿ ನಾನು ಕೇಳಿಕೊಳ್ಳುವುದೇನೆಂದರೆ, ಈ ಪ್ಲಾನಟೇಷನ್ ಏರಿಯಾದಲ್ಲಿ ಕಾರ್ಮಿಕರು ಏನಿದ್ದಾರೆ ಅವರ ಹಿತರಕ್ಷಣೆಯನ್ನು ಕಡ್ಡಾಯವಾಗಿ ಈ ಕಾರ್ಮಿಕ ಇಲಾಖೆಯವರು ನೋಡಿ ಕೊಳ್ಳಬೇಕು.

ಇನ್ನು ಬೆಂಗಳೂರಿನಲ್ಲಿರುವ ಎಂಪ್ಲಾಯಮೆಂಟ್ ಎಕ್ಸ್‌ಛೇಂಜ್ ಆಫೀಸ್‌ನಲ್ಲಿ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಕೇಳಿ ಬರುತ್ತಿದೆ. ಇಲ್ಲಿ ಕನ್ನಡದವರಿಗಿಂತ ಹೆಚ್ಚಾಗಿ ಕೇರಳಾದವರು ಮತ್ತು ಮದ್ರಾಸ್‌ನವರು ರಿಜಿಸ್ಟರ್ ಮಾಡಿಸುತ್ತಿದ್ದಾರೆ. ಮತ್ತು ಇವರುಗಳು ತಮ್ಮ ಹಿಂದಿನ ಎಕ್ಸ್‌ಪೀರಿಯನ್ಸ್ ಜಾಸ್ತಿ ಇದೆ ಎಂಬ ಬಗ್ಗೆ ಫಾಲ್ಸ್‌ಸರ್ಟಿಫಿಕೇಟ್‌ಗಳನ್ನು ಕೊಟ್ಟು ಕೆಲಸಕ್ಕೆ ಸೇರುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದವರು ತೀವ್ರವಾದ ಗಮನ ಕೊಟ್ಟು ಈ ರೀತಿ ಯಾಗುತ್ತಿರುವುದನ್ನು ತಡೆಗಟ್ಟದೇ ಹೋದರೆ ನಾಳೆ ಮೈಸೂರಿನ ಕನ್ನಡಿಗರಿಗೆ ಕೆಲಸಗಳೇ ಸಿಕ್ಕದೆ ಹೋಗಬಹುದು. ಎಲ್ಲ ಕೆಲಸಗಳು ಹೊರಗಿನ ರಾಜ್ಯದವರ ಪಾಲಾಗಬಹುದು. ಇದರಿಂದ ನಮ್ಮ ಜನರ ಹಿತರಕ್ಷಣೆಯಾಗುವುದಿಲ್ಲ. ಈ ವಿಚಾರದಲ್ಲಿ ನಮ್ಮ ಜನರಲ್ಲಿ ಬಹಳ ಅಸಂತುಷ್ಟಿ ಇದೆ. ಆದಕಾರಣ ಮಾನ್ಯ ಮಂತ್ರಿಗಳು ಆಗಾಗ್ಗೆ ಈ ಕಛೇರಿಗೆ ಭೇಟಿ ಕೊಟ್ಟು ಇದನ್ನೆಲ್ಲಾ ತಹಬಂದಿಗೆ ತರಬೇಕೆಂದು ಕೇಳಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ ತೀರ್ಥಹಳ್ಳಿ :—ಮಾನ್ಯ ಅಧ್ಯಕ್ಷರೇ ನಾನು ಹೆಚ್ಚು ಮಾತ ನಾಡುವುದಕ್ಕೆ ಹೋಗುವುದಿಲ್ಲ. ಒಂದೇ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ನಮ್ಮ ಊರಿನ ರೂಟ್‌ಗಳಲ್ಲಿ ಎಷ್ಟೊಂದು ಅನ್ಯಾಯವಾಗುತ್ತಿದೆ ಎಂಬ ಬಗ್ಗೆ ಒಂದು ಅರ್ಜಿಯನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕಳಿಸಿಕೊಡುತ್ತೇನೆ. ರಸ್ತೆ ಸಾರಿಗೆ ಇಲಾಖೆಯ ಬಗ್ಗೆ ಗದ್ಯದ ಮೂಲಕ ಹೇಳುವುದಕ್ಕೆ ಬದಲು ಪದ್ಯದ ಮೂಲಕ ಹೇಳುವುದು ಒಳ್ಳೆಯದೆಂದು ನನಗೆ ಕಾಣುತ್ತದೆ.

ಅಧ್ಯಕ್ಷರು :—ಪದ್ಯದ ಮೂಲಕ ಹೇಳುವುದಕ್ಕೆ ತಬಲ ತಂಬೂರಿ ಒದಗಿಸಬೇಕೇನು ?

ಶ್ರೀ ಕೋಣಂದೂರು ಲಿಂಗಪ್ಪ :—ಎಲ್ಲ ಅವರೇ ಆದ್ದರಿಂದ ರಸ್ತೆ ಸಾರಿಗೆ ಇಲಾಖೆಯ ಬಗ್ಗೆ ನಾನು ಪದ್ಯದ ರೂಪದಲ್ಲಿ ಹೇಳುತ್ತೇನೆ :—

" ಅಜೀಜ್ ಸೇಟು, ಜಾಂದೆ ಅಣ್ಣ ರೈಟು
ಅಜೀಜ್ ಸೇಟರು ಬ್ರೇಕಿಲ್ಲದ ಮೋಟರು
ಹವಾ ಇಲ್ಲದೆ ಗಾಡಿ ಬಿಡುವ ಭೂಪರು
ಖಾಸಗಿ ಬಸ್ಸು, ಜುಬ್ಬದ ಜೇಬು ತೂಗುವ ತೇರು-
ಆದರು ನಮ್ಮ ಸೇಠರಿಗಿಲ್ಲ ಮನಸಿಗೆ ನೋವು
ಜಾಂದೆ ಅಣ್ಣ ರೈಟ್,

ಬೂದು ಬಣ್ಣದ ತಿಗಣೆ ತುಂಬಿದ ಸೀಟು
ನೀರಿಲ್ಲದ, ಲೈಟಿಲ್ಲದ ಸೇರರ ಮೋಟರು
ಭೂಮಿಗು ಆಕಾಶಕು ಕುಣಿದಾಡುವ ಪ್ಲೇಟು
ಕೈತೋರಿದ ಕಡೆ ಹಾಲ್ಟು, ಆದರೂ ಅದು ಎಕ್ಸ್‌ಪ್ರೆಸ್ಸು
ಜಾಂದೆ ಅಣ್ಣ ರೈಟ್, "

ಶ್ರೀ ಎಂ. ಬಿ. ರಾಮಸ್ವಾಮಿ ;—ಇದರ ರಚನಾಕಾರರು ಯಾರು ?

ಶ್ರೀ ಕೋಣಂದೂರು ಲಿಂಗಪ್ಪ :—ನಾನೆ. ....

MADAM SPEAKER.—Now the Hon. Minister for Labour may reply to the debate.

Sri AZEEZ SAIT (Minister for Labour).—Madam Speaker, I would like to thank the Hon. Members for having enlightened me with their valuable suggestions. I should say that critics were less and suggestions were more. I must also admit that the Hon. Members have given a fair deal to me by accepting what has been done by me is good. They have also brought to my notice what has not been done by my Departments.

I shall deal separately the remarks offered by one or two members sometime later. I shall now deal with the representations made by the Hon. Members about the Motor Vehicles Department. I do agree with the Hon. members that we have been encouraging the private operators and we are not putting our efforts to nationalise them. Some Hon. Members feel that we are just threatening them to nationalise their routes. I may only submit that they are not correct in holding such a view. The MSRTC has by now nationalised 52 per cent of the routes. The MSRTC has prepared a scheme for nationalisation of certain pockets. We have to call for objections from the interested persons and hear their views in the matter. This is a formality which has to be observed before nationalisation is effected. Some of the Hon. Members have stated that some of the pockets in Raichur District are pending from time immemorial. I may inform the Hon. Members that our Chief Minister as per authority vested in him has heard the objection from the concerned persons. We had met twice in this connection and we propose to meet in the next month also. The MSRTC is now trying to cover the eastern sector of Mysore District. They are also trying to bring

out a comprehensive scheme for nationalisation of contract carriages. This matter has been raised time and again and I have also been answering. The contract carriages in the State of Mysore are there since many years whether it is right or wrong, they are there. There are 398 contract carriages for which permits have been issued. Any Hon. Member from this House may kindly go to the Transport Commissioner's Office and ascertain who has issued these permits. They might have been issued either by the previous Government or during the Governor's regime. But during my regime, about 29 or 30 permits have been issued by the RTAS and I may assure the Hon. Members that I have never interfered or intervened in the issue of these permits. I have never talked or telephoned either to the RTA or RTOS or any non-official member in this connection. The Committee is a quasi judicial body which is empowered to issue permits. That is the main reason why the Ministers of all Southern States at the Southern Zonal Council meeting have recommended to the Government of India to bring in an amendment......We have also tried to introduce two Bills in this House. I want to take away the powers of the RTA and vest them with the RTO.

The MSRTC is contemplating to nationalise all the buses which are running without permits. I do concede that there has been clandestine operations of buses. The other day in the House, I have stated that a Special squad has been put to detect such clandestine operations. As a result of which, the Special squad has booked 2,400 cases of clandestine operations and they have also realised a huge amount. I might say that I am still not satisfied.

We have received a proposal from the Transport Commissioner for reorganisation of the Department. One of the recommendations envisaged is institution of Mobile Courts. I am agreeable to their proposal in this regard.

Hon. Members have spoken about the rampant corruption in the Motor Vehicles Department. I agree that taking bribe is an offence but the person who offers the bribe is also corrupt. People bribe the officials in order to get their work done. I should say that the bribers and the bribed are not outsiders;

they are all our people. I appeal to the general public that they being the responsible citizens of this country and particularly of this State, they should not adopt ways and means of paying something to the officials in order to get their work done quickly.

They should bring to the notice of the Officers of the Department or to the Government that such and such a thing is happening. The Government or the Officer will not keep silent and immediate action will be taken. I will come to the salient features of the Department and I am going to tell you what the Department has done in this direction.

There has been constant increase in the revenue of the Department year after year. Ever since this Government took charge during 1971-72 the revenue was Rs. 12,73,11,657 registering an increase of nearly Seventy Four Lakhs over the receipt of 1970-71. The anticipated receipt during the year 1972-73 would be more than 15 crores. The percentage of expenditure in the Department is only 2.75%. We hope to increase the revenue of the Department substantially during the coming years. The arrears of taxes of the past several years have accumulated to the tune of nearly Four Crores. Extensive drive has been taken for the scrutiny of these arrears and their settlement.

We know the present system of collection of tax is cumber some and inconvenient. We thought over the matter and arrived at some decision, so that the people could be free from harassment. The salient features of the new system are :

1. Payment of tax by Bank Draft and postal order ;
2. Arrangements to deliver the tax-token to the door of the tax-payer ;
3. New form of tax-token with a perforated slip with the endorsement of the acceptance of tax which could be torn from the tax-token and pasted in the Registration Certificate. It will not be necessary for the tax-payer to give the Registration Certificate ;

and 4. we are thinking of establishing Four Zonal Offices. I have also discussed with the Transport Commissioner and also with the Secretary to Government regarding all these matters

and requested them to contact the Government of Goa and get their system of registration and collection of taxes, so that we could minimise the harassment to the public, and also bring down the corruption to some extent at least. Now I will come to the measures we propose to take for checking the clandestine traffic. Some of the measures have already been taken. We have proposed to take preventive measures by establishment of net-work of Flying Squads. We propose to bring amendments to the existing provisions of the Act stipulating the following :

(1) Transfer of powers for the issue of Inter-regional Contract Carriage Permits from Regional Transport Authorities to the State Transport Authority ;

(2) Inflicting penalty of suspension and the Cancellation of permits for offences of misuse of carriages ;

(3) Making provision for the Government to issue directives to the Regional Transport Authorities and the State Transport Authority whenever found necessary.

We propose for the establishment of Mobile Courts which would be constantly on the move in the different areas, book the cases of offences and decide them at the spot. With a view to check the increasing rate of accidents, exhaustive proposals for the modernisation of the existing driving Schools and for prescribing rigorous tests for the issue of Driving licences are being undertaken. In the proposed amendments maximum age limit of the drivers and the physical and eye test of the drivers have been prescribed.

There were several Inter-State matters with the neighbouring States pending finalisation for a number of years. As you know the neighbouring States are Andhra Pradesh, Maharashtra, Tamilnadu, Goa, and Kerala. In June 1972, the meeting with the Representatives of Tamilnadu, Andhra Pradesh, Maharastra were held at Bangalore and the long pending matters were settled by mutual agreements.

In regard to increase in the number of Inter-State services, agreements have been entered into between the States to introduce several new Inter-State routes between the States of Mysore, Andhra Pradesh, Tamilnadu, Maharashtra. Several

important long distance services have already been started on the routes between Mangalore-Bombay, Bangalore-Bombay, Bangalore-Pondicherry, Bangalore-Madras, etc. Services between Sholapur-Hyderabad, Usmanabad-Hyderabad have also been commenced by the S. T. Undertakings of Mysore, Maharastra, and Andhra Pradesh.

On the basis of model rules framed by the Government of India, this Government have framed Rule-123(A) for grant of endorsement of permits for countrywide operation in respect of 10 tourist omni-buses and 15 tourist cabs. The quota of these services has been enhanced from 10 to 25 in the case of Omini-buses. This was as per the decision of All India Transport Ministers' Meeting. To facilitate easy movements of Goods the Public Carriers have been allowed to run on National and State Highways instead of being confined to 3 State routes in the States.

I want to say one or two words about the proposals for the re-organisation of the Department. For the first time in the history of the Department, comprehensive proposals having significant impact on the future working of the Department have been prepared. In these proposals, amendments to the existing provisions of the Act have been suggested. New Avenues of substantial increase in the Revenue of the Department have been offered. Various schemes for improving the present working of the Department, expeditious collection of taxes and effective control of the operations of the vehicles have been proposed. The existing staffing pattern of various field offices like the offices of the RTOs, the Deputy Transport Commissiones and the other office staff which is most inadequate at the moment, resulting in several handicaps in efficient working of the Department is being changed entirely. The existing procedures which are out-moded are being simplied with the assistance of the Administrative Staff College of India.

As far as Transport Department is concerned, I am happy to say that the Department is progressing well. Measures have been taken to improve the Department and to provide facilities to the travelling public. This Department has been criticised bitterly by the Hon. Members that the Department is not working

satisfactorily. After the re-organisation of the Department, the efficiency of the Department has been increased considerably. After doing re-conditioning for 3 times to a Bus, we are running it. They are also doing good service. Efficiency has been increased and the pilferage has gone down to a great extent though not it is completely routed.

There is no mercy petition. We say that if any one steals in the M.S.R.T.C., he is dodging the nation, because it is a Nationalised Institution, and every workman of nationalised institution must be honest to the core. Till now, we did not have one uniform standing order. After this Ministry came into existence it persuaded the MSRTC to have one uniform Standing Order. It was not there eversince 1957. When this Ministry came into existence there were about 490 vehicles off the road. I am glad to inform you that between the period of August and December 1972. The M.S.R.T.C. Divisions celebrated 'No VEHOCLES OFF THE ROAD DAYS'. That was the first time in the history of the M.S.R.T.C. to have delebrated that day as a day of pride for M.S.R.T.C. But, unfortunately, Nature has gone against us. There are no rains. Because of shortage of rain, there is no power and for want of power there is shortage of tyres and the output of the chassis has come down by a considerable number. In spite of this, this Ministry, on behalf of the M.S.R.T.C. took care to see that tyres were supplied to the Road Transport Corporation by the Tamil Nadu Tyre Manufacturing Units in exchange for power. That is an example which the other States lieke the Maharashtra have followed. Actually, I think we are going back to the practices of the good old ages when we were giving something and taking something. Formerly Leyland was manufactured at the rate of 25 but now we are able to manufacture only 11 to 12 per month because of shortage of power.

Sri M. S. KRISHNAN.—The Hon. Minister for P. W. D. has said that not a single unit of power would be given to other States, because we ourselves are facing shortage. You have stated that power has been given in exchange for tyres. Is it not a violation of that assurance given by the Hon. Minister for Public Works and Electricity ?

Sri AZEEZ SAIT.—I do not admit that there is any violation of assurance. In a country like ours, we have to take a decision as and when the situation requires it. This decision is in the interests of the people of the State. Suppose, the M.S.R.T.C. does not have tyres, the buses go off the road. I cannot allow the people of the nationalised routes to suffer. In such a case, I have to go to the Hon. Minister for Electricity and plead before him on behalf of the M.S.R.T.C. We have not lost anything. I think this concept you have to appreciate.

ಶ್ರೀ ಕಾಗೋಡು ತಿಮ್ಮಪ್ಪ :—ಮದ್ರಾಸ್ ರಾಜ್ಯಕ್ಕೆ ವಿದ್ಯುಚ್ಛಕ್ತಿ ಕೊಟ್ಟು ಟೈಯರ್ ಪಡೆದುಕೊಳ್ಳಬೇಕೆಂದು ನಮ್ಮ ಸಾರಿಗೆ ಮಂತ್ರಿಯವರು ಒಪ್ಪಂದ ಮಾಡಿಕೊಂಡಿದ್ದಾರೆ. ಸಾರಿಗೆ ಮಂತ್ರಿಯವರು ಬೇರೆ ರಾಜ್ಯಕ್ಕೆ ವಿದ್ಯುಚ್ಛಕ್ತಿ ಒದಗಿಸಿ ಕೊಡುವುದರ ಬಗ್ಗೆ ಹೇಗೆ ಒಪ್ಪಂದ ಮಾಡಿಕೊಂಡರು ಎಂಬುದನ್ನು ಹೇಳಬೇಕು.

Sri AZEEZ SAIT.—Whatever the information the Hon. Members want, they can ask in the end. I will take notes of their points and answer them in the end. If they go on interrupting me, I will lose the trend. I am not yielding. Whatever points they want to ask, they may please note down and ask me in the end. I am not going to be scared away. I will answer in the end. Why should they interrupt in the middle ?

Time and again, I have told this very House that there have been strikes now and then and there is acute shortage of the buses—Leyland and Benz. There has been a demand from the Hon. Members that you must have new buses. I may tell them that I am only interested to see that the buses are on the road. I do not care whatever type of buses are there. I am answerable to the Legislature in regard to the omissions and commissions of the M.S.R.T.C., and about the shortcomings and also regarding the difficulties faced by the people. And, as a Minister in charge of M.S.R.T.C. I have got powers under the Act, to discuss these matters, to have meetings and to guide them on behalf of the Government and the people and explain the policy of the Government, I do not think there is anything wrong in the Hon- Members putting questions. If the Hon. Members stop putting questions and stop asking about the short comings in the M.S.R.T.C., I will simply sit in my room. Because they ask me, I have to answer. If they ask about the amenities, I have to answer ; if they ask about other things, I have to answer, if it pertains to defects in the Corporation.

Lastly, the M.S.R.T.C. was in a position to purchase 540 new vehicles. We require many more buses. Most of the buses have been re-conditioned for the third time and we cannot allow the buses to go on for a long time. Therefore, the M.S.R.T.C. is to have a phased scheme to keep on changing the buses. At the same time we have to put buses on new routes also. I quite agree with most Hon. Members that re-routing is quite essential The M.S.R.T.C. has already taken up a scheme of re-routing.

I am also agreeable to one of the suggestions made by the Members to see whether it is possible to bifurcate the Corporation or bringing in a number of Corporations, rather than having one Central Corporation in the State. I think that is a good suggestion for consideration. I will ask the Department and the Board to examine this matter, because I believe that a smaller corporation will be able to work more efficiently.

Again there was a demand that Hassan Division being a very big division should be bifurcated. There were also similar suggestion in respect of Shimoga and Mangalore Divisions. They are also before the Board for its consideration.

As regards the inter-state routes, there are 32 vehicles. In respect of Maharashtra, there are about 14 services running from 1-1-1972 and about 2 in regard to Tamil Nadu. The Madurai service was stopped owing to a decision of the Mysore Appellate Tribunal. As regards Andhra Pradesh, the question of opening new inter-State service will be taken up as soon as the popular Government is installed in that State.

Coming to Welfare amenities of the workers, the M.S.R.T.C. rates of wages of the operating staff was enhanced and it was linked to the production at an annual cost of 24 lakhs. Repast allowance was increased to 35 paise per day to those who attend to work at odd hours. The D.A. was enhanced twice during the year at a total cost of 50 lakhs. The Minimum Bonus of 8⅓ per cent was paid to the employees at a cost of 43 lakhs. Industrial housing tenaments were commissioned at Raichur. 24 quarters at Bellary, 24 at Hubli, 48 in Bangalore and 24 in Mercara was started. The Corporation sanctioned a loan of 1.75 lakhs to the Housing Co-operative societies at Bijapur and encouraged people to get similar loans even at Hubli, Bangalore and Gulbarga.

Regarding fares, they were increased from 30 to 40 paise and it was reduced in deference to public opinion to 35 paise for the first stage in February 1973. As you know, Madam Speaker, after the Central Budget came, most of the prices in respect of spares, diesel and tyres of vehicles have gone up. At the same time the amenities and welfare expenditure for workers of the MSRTC have had to be kept at the present level, which is costing heavy sums. I think there may be a time when we have to re-think and revise our fares for buses in the State by effecting a marginal increase. The travelling will have to pay a little more for the buses which they use. Some Hon. Members have compared the working of private operators with the working of the MSRTC. There can be no such comparison, because the private operators chose only a profitable route for his purpose. The MSRTC cannot do it. It has to provide travelling convenience in the nationalised area whether a route is remunerative or not. For instance, Mr. Ramaswamy of Anekal requested me that a bus may be put to Anekal. We introduced a Bus. But it happened that nobody paid the fare and bought the ticket. We were forced to withdraw the bus. Again a representation was made to me to put the bus. We have to provide conveniences to the travelling public in the interior parts of the State whether the route is paying or not. Once you nationalise, you cannot anybody else to run his vehicle anywhere in that area. Sri Bapu Rao, the Hon. Member from Aurad said that his area needs buses. There is a tendency for the travelling public to demand conveniences all over the State. You have to consider that. Let us not view this from the political angle. We have to give relief to all people. But we cannot afford to go on losing on all fronts. If amenities have to be increased and if re-organisation the entire department is necessary, re-thinking is necessary and revising the cost of operational methods will have to be welcomed. I am one with you when you say that the MSRTC should not and need not look to the Maharashtra or Tamil Nadu for efficiency. They must look immediately below their nose and see how the private operator is running his vehicle. The MSRTC should in this respect compete with the private operator. The suggestion of Mr. T. R. Shamanna that there should be standing accommodation in buses during peak hours, I have considered. I am happy

to tell you that we have not only introduced standing accommodation in buses, but double decker buses also. We may have to withdraw the Road Train because they are very slow and not very convenient to a city like Bangalore. Wherever it is possible, we will introduce double deckers and we will increase the frequency.

It is also necessary to take up the re-routing of the entire Bangalore city area, since the routing that was done 10-15 years ago still remains. Conditions have changed. We want to study the entire thing and re-route in such a way that the floating population and the travelling public in Bangalore will get better convenience.

Sir, so much regarding the M.S.R.T.C.

I will now come to the Labour Department. First of all, I would like to make it very clear to my friend Sri M. S. Krishnan, I am not barred from holding conciliation proceedings in my Chamber. It may be held wherever convenient. I must also mention here about the efficiency with which the Labour Commissioner Mr. Siddaiah Puranik has worked. After he has assumed office, he has cleared 14 knotty problems, within a short time. In cases where it is warranted that I should interfere, that my interference is quite essential and the Labour Department desires that it should be done before me, I have never hesitated to call a joint meeting.

Regarding Mysore Machineries, it is a known fact that the Department have given permission to the Union to prosecute the management for the bonus. The Provident Fund Commissioner has taken action to collect the balance of provident fund as an arrear of land revenue and the Deputy Commissioner has also taken action. As a result of it, the management was arrested and later on released on bail. What is the case about the Mysore Machinery ? Really, he has terminated 26 workers and allowed other workers to work. The workers demand that 26 workers should taken back. The management said no. This is going on between the workers and management. I do not call it a strike or lockout—conciliation has been taken up and the matter is still under negotiation and I am not sure whether negotiation will take place in the Congress Office or

in any other place. As far as my information goes, the matter is with the Asst. Labour Commissioner and he is attending to this matter.

Sri M. S. KRISHNAN.—It has not taken place at the office of the Assistant Labour Commissioner. The Management does not come to the Assistant Labour Commissioner.

Sri AZEEZ SAIT.—We will see how best we could do in this matter. Mr. M. S. Krishnan must also know that we have our own limitations under the Act. I cannot drag him by the nose. We can only use methods of persuasion and I hope we can do something.

Sri M. S. KRISHNAN.—If only you cut off electricity, he will come round.

Sri AZEEZ SAIT.—About recognition of the H.M.T. Unions. I would like to pose one question to my colleague, whether a strike is necessary just because of recognition. He made a remark that in implementing the evaluation committee, we took a political decision. I respectfully submit to my colleague Sri M. S. Krishnan that on the evaluation committee, the members of the central workers including his own party man, Sri M. C. Narasimhan was present.

Sri M. S. KRISHNAN.—And he opposed it.

Sri AZEEZ SAIT.—This was a matter pending since 1968 and I was called upon as Chairman of the Committee to take up this matter and discuss. On the verification that was done in 1968, somebody expected that I should do something in 1972. So after much discussion, argument, counter argument, we heard both the representatives. But what I found was there was a little flaw on the part of my Department in not correctly following or doing the verification within the specified period. The entire verification and the result should be known within 30 days. Here is a case pending from 1968 up to 1972. We said status may be maintained. Any union is free to make an application for recognition. Now that I have received their application, I assure the Hon. Member that this time I am not going to appoint a departmental officer for verification purpose but I am going to appoint a retired Judge to go into this question

Sri A. R. BADARINARAYAN.—Grants given to Pre-Primary education is only very small. The Social Welfare Department also gives some grants. Since this is very small, and we have not taken in a big way, wherever there is application and wherever there is enthuiasm for starting pre-primary education, naturally we give them some assistance. In the old Mysore area, 50 per cent of the total admissible expenditure in urban areas and 70 per cent in rural areas is given. In addition 50 per cent D.A. is given. In the ex-Madras area, 50 per cent of the authorised expenditure ; in ex-Bombay area, 25 per cent of the maintenance and 50 per cent of D.A. is given.

Sri D. B. KALMANKAR.—It is mentioned in the answer that uniform grant-in-aid code is under preparation. May I know how much time it will take ?

Sri A. R. BADARINARAYAN.—I have answered just now that it will be done very soon.

DRINK WATER FACILITIES AT ANNIGERI AND MORAB VILLAGES

862. Sri M. K. KULKARNI (Navalgund).—

Will the Minister for Community Development and Social Welfare be pleased to state :—

(*a*) whether it has come to the notice of the Government that there is acute scarcity of drinking water in Annigeri and Morab Villages of Navalgund Taluk ;

(*b*) if so, the reasons for not providing drinking water facilities to these villages so far by the Government ?

Sri M. MALLIKARJUNASWAMY (Minister for Community Development and Social Welfare).—

(*a*) Yes.

(*b*) It is not correct to say that drinking water facility is not provided.

ಶ್ರೀ ಎಂ. ಕೆ. ಕುಲಕರ್ಣಿ :—(ಆ) ಗೆ ಉತ್ತರವಾಗಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿರುವುದಿಲ್ಲ ಎಂಬುದು ವಾಸ್ತವಾಂಶವಲ್ಲ ಎಂದು ಹೇಳಿದ್ದೀರಿ. ಹಾಗಾದರೆ ಇದನ್ನು ಯಾವ ರೀತಿಯಾಗಿ ಒದಗಿಸುತ್ತಾ ಇದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಈಗ ಅಣ್ಣಿಗೇರಿ ಗ್ರಾಮ ಏನು ಇದೆ ಅದು ಈವೊತ್ತಿನ ದಿವಸದ ಜನಸಂಖ್ಯೆ 14,681 ಇದೆ. 1959 ನೇ ಇಸವಿಯಲ್ಲಿ ಇದಕ್ಕೆ 1 ಲಕ್ಷ 31 ಸಾವಿರ 800 ರೂಪಾಯಿ ಖರ್ಚು ಮಾಡಿ ಒಂದು ಡ್ರಿಂಕಿಂಗ್ ಪ್ಲಾಂಟ್ ಮಾಡಿ ಈವೊತ್ತಿನ ದಿವಸ 9 ಸಾವಿರ ಜನಸಂಖ್ಯೆಗೆ ಪೂರೈಸಲಾಗಿದೆ. ಮತ್ತೆ ಇನ್ನೊಂದು ಪ್ಲಾಂಟ್ ಮಾಡಿ 1990 ನೇ ಇಸವಿಗೆ 13 ಸಾವಿರ ಜನಸಂಖ್ಯೆಗೆ ಕುಡಿಯುವ ನೀರು ಪೂರೈಸಬೇಕೆಂದು ಮುಂದಿನ ಒಂದು ದೃಷ್ಟಿ ಇಟ್ಟುಕೊಂಡು ಯೋಚನೆ ಮಾಡಿತ್ತು. ಈಗ ಅದಕ್ಕಿಂತಲೂ ನಿರೀಕ್ಷಣೆ ಮೀರಿ ಜನಸಂಖ್ಯೆ ಜಾಸ್ತಿಯಾಗಿದೆ. ಈ ಪ್ಲಾಂಟ್ ಕೊಟ್ಟದ್ದು 31-3-1970 ನೇ ಇಸವಿಯಲ್ಲಿ ಆ ನೀರಿನ ಸರಬರಾಯಿ ಯೋಜನೆಯನ್ನು ಪಂಚಾಯಿತಿಗೆ ವಹಿಸಿಕೊಟ್ಟೆವು. ಈವೊತ್ತಿನ ದಿವಸ ಆ ನೀರು ಸಾಕಾಗುತ್ತಾ ಇಲ್ಲ. ಅದರ ಜೊತೆಗೆ ಮಾರುತಿ ವೆಲ್ ಇದೆ. ಆ ಓವರ್ ಟ್ಯಾಂಕ್‌ಗೆ ನೀರನ್ನು ಪಂಪ್ ಮಾಡುತ್ತಾ ಇದ್ದೇವೆ. ಈವಾಗ ಆ ಹಳ್ಳಿಗೆ ಬಹುಶಃ ಒಂದು ವಾರಕ್ಕೆ 2-3 ದಿವಸ

ಮಾತ್ರ ನೀರು ಕೊಡುವುದಕ್ಕೆ ಸಾಧ್ಯ ಇದೆ. ಈಗ ಅಲ್ಲಿ 6 ಪಬ್ಲಿಕ್ ವೆಲ್ಸ್ ಮತ್ತು 13 ಪ್ರೈವೇಟ್ ಬಾವಿಗಳು ಇವೆ. 1972 ಮೇ ಮತ್ತು 1973 ರ ಫೆಬ್ರವರಿ ತಿಂಗಳಲ್ಲಿ ಸುಮಾರು 12 ಬಾವಿಗಳನ್ನು ಡೀಸಲ್ ಮಾಡಿಸುವುದಕ್ಕೆ 1,339 ರೂಪಾಯಿಗಳು ಖರ್ಚಾಗಿದೆ.

ಕೆಲವು ಬಾವಿಗಳಲ್ಲಿ ಬ್ರಾಕಿಷ್ ವಾಟರ್ ಸಿಕ್ಕುತ್ತಿದ್ದು ಅದನ್ನು ಕುಡಿಯುವುದಕ್ಕೆ ಉಪಯೋಗಿಸದೆ ಇದ್ದರೂ ಕೂಡ ಬಟ್ಟೆ ಒಗೆಯುವುದಕ್ಕೆ ದನಕರುಗಳಿಗೆ ಕುಡಿಸುವುದಕ್ಕೆ ಉಪಯೋಗಿಸುತ್ತಿದ್ದಾರೆ. ಅಲ್ಲಿ ಒಂದು ಬೋರ್‌ವೇಲ್ ಕೂಡ ಹಾಕಿದ್ದೇವೆ. 171 ಅಡಿ ಆಳ ಹೋಗಿದ್ದರೂ ಕೂಡ ಅಲ್ಲಿ ನೀರು ಸಿಕ್ಕಲಿಲ್ಲ. 64,600 ರೂಪಾಯಿ ಖರ್ಚು ಮಾಡಿ ಒಂದು ಕೆರೆಯನ್ನು ಕಟ್ಟಿಸಿದೆವು. ಮಳೆ ಬಾರದೆ ಇದ್ದುದರಿಂದ ಕೆರೆಗೆ ನೀರು ಬರಲಿಲ್ಲ. ಆದುದರಿಂದ ಈವಾಗ ಬಿಲ್ಲದಕಟ್ಟೆಯಿಂದ ನೀರನ್ನು ಟ್ರಕ್ ಮೂಲಕ ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಎಂ. ಕೆ. ಕುಲಕರ್ಣಿ :—12 ಬಾವಿಗಳನ್ನು ಆಳ ಮಾಡಿದರೂ ಅದರಲ್ಲಿನ ನೀರು ಕುಡಿಯುವುದಕ್ಕೆ ಬಾರದ ಉಪ್ಪು ನೀರಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಎಲ್ಲದರಲ್ಲಿಯೂ ಉಪ್ಪು ನೀರು ಇಲ್ಲ.

ಶ್ರೀ ಎಂ. ಕೆ. ಕುಲಕರ್ಣಿ :—ಅಲ್ಲಿ ಕುಡಿಯುವುದಕ್ಕೆ ನೀರು ದೊರಕುವುದಿಲ್ಲ. ಬೇರೆ ಉಪಯೋಗಕ್ಕೆ ಮಾತ್ರ ದೊರಕುತ್ತದೆ. ಆದುದರಿಂದ ಸರ್ಕಾರ ಅಲ್ಲಿಗೆ ಲಾರಿಯಿಂದಲಾದರೂ ನೀರನ್ನು ಒದಗಿಸುತ್ತದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಅದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಇದರ ಜೊತೆಗೆ ಪಬ್ಲಿಕ್ ಹೆಲ್ತ್ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿಗೆ ಡೈರೆಕ್ಷನ್ ಕೊಟ್ಟು ಆ ಗ್ರಾಮಕ್ಕೆ ಯಾವ ತರಹದಲ್ಲಿಯೂ ನೀರಿನ ತೊಂದರೆಯಿಲ್ಲದೆ ಪರ್ಮನೆಂಟ್ ಮೆಷರ್ ಮಾಡುವುದಕ್ಕೆ ಇನ್‌ವೆಸ್ಟಿಗೇಷನ್ ಮಾಡಿಸಿ ರಿಪೋರ್ಟ್ ಕಳುಹಿಸಿ ಎಂದು ಹೇಳಿದ್ದೇವೆ.

REMISSION OF LAND REVENUE IN SRINIVASAPUR TALUK

885. Sri S. BACHI REDDY (Srinivasapur).—

Will the Minister for Revenue be pleased to state :—

(a) the average yield of dry crops per acre in Srinivasapur Taluk ;

(b) the number of tanks in the Taluk which received water during the year 1972 ;

(c) whether Government intended to grant remission of Land Revenue due to failure of crops in this area ?

Sri N. HUTCHAMASTHY GOWDA (Minister for Revenue).—

(a) More than 50 per cent.
(b) 362 tanks.
(c) No.

ಶ್ರೀ ಎಸ್. ಬಾಚಿರೆಡ್ಡಿ :—ಮಾನ್ಯ ಮಂತ್ರಿಗಳ ಉತ್ತರದಲ್ಲಿ, ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಸಾಕಾದಷ್ಟು ಮಳೆಯಾಗಿದೆ ಮತ್ತು ಬೆಳೆಗಳು 50 ಪರ್ಸೆಂಟ್ ಆಗಿದೆ, ಆದ್ದರಿಂದ ಆ ತಾಲ್ಲೂಕಿನಲ್ಲಿ ಕಂದಾಯ ಮಾಫಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ವಾಸ್ತವವಾಗಿ ಹೇಳಬೇಕಾದರೆ 50 ಪರ್ಸೆಟ್ ಬೆಳೆಯಾಗಿದೆ ಎನ್ನುವುದು ಪಹಣಿ ಆಧಾರದ ಮೇಲೆ. ಸಾಮಾನ್ಯವಾಗಿ ಸೆಕೆಂಡ್ ಡಿವಿಷನ್ ಗುಮಾಸ್ತರು ಪಹಣಿ ಬರೆಯುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ಮತ್ತು ಇಡೀ ಕೋಲಾರ ಜಿಲ್ಲೆಯಲ್ಲಿ ಮಳೆ ಸಾಕಾದಷ್ಟು ಬಾರದೆ ಕೆಲವು ಸಂದರ್ಭಗಳಲ್ಲಿ ಬೆಳೆ ಇಟ್ಟ ಎರಡೂವರೆ ತಿಂಗಳವರೆಗೆ ಮಳೆ ಬಾರದೆ ಬೆಳೆಯಲ್ಲ ಒಣಗಿ ಹೋಗಿದೆ. ಅಂಥ ಸಂದರ್ಭದಲ್ಲಿ, ಅಭಾವ ಒದಗಿದಂಥ ಸಂದರ್ಭದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಮತ್ತು ಇತರ ಮಂತ್ರಿಗಳು ಆ ಪ್ರದೇಶದಲ್ಲಿ ಸಂಚರಿಸಿ ಆ ತಾಲ್ಲೂಕಿನಲ್ಲಿ ಅಭಾವ ಪರಿಸ್ಥಿತಿ ಇದೆ, ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಆದೇಶ ಕೂಡ ಕೊಟ್ಟಿದ್ದಾರೆ; ಅನೇಕ ಕಾರ್ಯಕ್ರಮ ಕೂಡ ತೆಗೆದುಕೊಂಡಿದ್ದಾರೆ. ಈ ದೆಸೆಯಿಂದ ಈಗಲಾದರೂ ಕೂಡ ಮಾನ್ಯ ಮಂತ್ರಿಗಳು ಮಾನವೀಯತೆಯ ದೃಷ್ಟಿಯಿಂದ ಪುನರ್ಪರಿಶೀಲಿಸಿ ಆ ತಾಲ್ಲೂಕಿಗೆ ಪರಿಹಾರ ಕೊಡುವ ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ನನಗೆ ಸಾಮಾನ್ಯವಾಗಿ ಬರತಕ್ಕ ವರದಿ ರೆವಿನ್ಯೂ ಅಧಿಕಾರಿಗಳಿಂದ ಎಂದರೆ ಗ್ರಾಮಾಧಿಕಾರಿಗಳು ಸ್ಥಳದಲ್ಲಿ ಬರೆಯುವ ಪಹಣಿ ಆಧಾರವೇ ನಮಗೆ ಮುಖ್ಯವಾದ ಆಧಾರ. ಅದನ್ನು ನಂಬುವುದಕ್ಕಾಗುವುದಿಲ್ಲ, ಸರಿಯಾಗಿ ಬರೆದಿಲ್ಲ ಎಂದರೆ ನನಗೆ ಬೇರೆ ಆಧಾರ ಸಾಮಾನ್ಯವಾಗಿ ಇಲ್ಲ. ಅದರ ಜೊತೆಗೆ ಆಗಸ್ಟ್ ತಿಂಗಳಿನಲ್ಲಿ ನಾನು ಹೋಗಿ ನೋಡಿಕೊಂಡು ಬಂದೆ. ಆಗ ತೊಂದರೆ ಇತ್ತು. ಸೆಪ್ಟೆಂಬರ್ ತಿಂಗಳಿನಿಂದ ಮಳೆ ಪ್ರಾರಂಭವಾಗಿ ವಾರವಾರವೂ ಏನೇನು ಮಳೆಯಾಗಿದೆ ಎನ್ನುವ ವಿವರ ತಾಲ್ಲೂಕಾಫೀಸಿನಲ್ಲಿದೆ. ಅದನ್ನು ಕೂಡ ನೋಡಿದರೆ ಬೆಳೆಯಾಗಿದೆ, ಸೇಕಡ 50ಕ್ಕಿಂತ ಹೆಚ್ಚಾಗಿ ಬೆಳೆಯಾಗಿದೆ ಎನ್ನತಕ್ಕ ವರದಿ ಬಂದಿದೆ. ಅದರ ಜೊತೆಗೆ ಅಲ್ಲಿರತಕ್ಕ 56 ಮೇಜರ್ ಮತ್ತು 306 ಸಣ್ಣ ಕೆರೆಗಳಿಗೆ ನೀರು ಬಂದು ಅಲ್ಲಿಯೂ ಕೂಡ ಬೆಳೆಯಾಗಿದೆ ಎನ್ನತಕ್ಕ ವರದಿ ಇದೆ. ನನಗೆ ಇದಲ್ಲದೆ ಬೇರೆ ಆಧಾರವಿಲ್ಲ. ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ತೊಂದರೆಯಾಗಿದೆ ಎಂದು ಹೇಳುತ್ತಿದ್ದಾರೆ. ಈಗ ಹೋಗಿ ಪರೀಕ್ಷೆ ಮಾಡುವುದು ಕಷ್ಟ. ಬೆಳೆ ಬಂದಕಾಲದಲ್ಲಿ ಎಂದರೆ ಡಿಸೆಂಬರ್ ಜನವರಿ ತಿಂಗಳಿನಲ್ಲಿ, ಕಟಾವಿಗೆ ಬರತಕ್ಕಕಾಲದಲ್ಲಿ ಕ್ರಾಪ್‌ಕಟಿಂಗ್ ಎಕ್ಸ್‌ಪೆರಿಮೆಂಟ್ ಮಾಡುವುದಕ್ಕೆ ಸಾಧ್ಯವಿತ್ತು. ಈಗ ಹೋಗಿ ತಿಳಿದುಕೊಳ್ಳುವುದು ಬಹಳ ಕಷ್ಟವಿದೆ. ಆದುದರಿಂದ ಪಹಣಿಯನ್ನೇ ನಂಬಿ, ಮಾನ್ಯಸದಸ್ಯರಿಗೆ ನೋವಾದರೂಕೂಡ ಅದೇ ಉತ್ತರವನ್ನು ಹೇಳಬೇಕಾಗಿದೆ.

ಶ್ರೀ ಎ. ವಿ. ಮುನಿಸ್ವಾಮಿ :—ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಮಳೆಯಾಗಿದೆ, 362 ಕೆರೆಗಳು ತುಂಬಿವೆ ಎಂದು ಹೇಳಿದರು. ಕೆರೆಗಳು ಎಷ್ಟುಸಾರಿ—ತುಂಬಿದರೆ ಬೆಳೆಯಾಗುತ್ತದೆ ಎನ್ನುವುದನ್ನು ಹೇಳುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಆ ಕೆರೆಗಳನ್ನು ನೋಡಿ ಹೇಳಬೇಕು. ಒಂದು ಸಾರಿ ತುಂಬಿದರೆ ಬೆಳೆಯಾಗುತ್ತದೆಯೋ, ಎರಡುಸಾರಿ ತುಂಬಿದರೆ ಬೆಳೆಯಾಗುತ್ತದೆಯೋ ಎನ್ನುವುದು ಆಯಾ ಕೆರೆಗೆ ಎಷ್ಟು ನೀರು ಬರುತ್ತದೆ, ಆ ವರ್ಷ ಎಷ್ಟು ಮಳೆಯಾಯಿತು, ಎಷ್ಟು ಜಮೀನು ಅದರ ಮೇಲೆ ಅವಲಂಬಿಸಿದೆ ಎನ್ನುವ ವಿವರಗಳೆಲ್ಲ ನನ್ನಹತ್ತಿರ ಇಲ್ಲ. ನನಗೆ ಬಂದಿರುವ ವರದಿಯನ್ನು ಸಭೆಗೆ ತಿಳಿಸಿದ್ದೇನೆ.

ಶ್ರೀ ಕೆ. ಎಂ. ದೊರೆಸ್ವಾಮಿನಾಯ್ಡು :—ಕೋಲಾರ ಜಿಲ್ಲೆಯಲ್ಲಿ ಮಳೆ ಬರುವುದು 20–25 ಅಂಗುಲ. ಅದು ಕಾಲದಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿ ಬಂದು ಅಲ್ಪ ಸ್ವಲ್ಪ ಕೆರೆಗಳಲ್ಲಿ ನೀರು ಬಂದು ಬೆಳೆಯಾಗಿದೆ ಎಂದು ಹೇಳಿದ್ದಾರೆ. ಆ ನೀರಿನಿಂದ ಖಂಡಿತ ಬೆಳೆಯಾಗಿಲ್ಲ ಆದ್ದರಿಂದ ಕೋಲಾರ ಜಿಲ್ಲೆಯನ್ನು ಅಭಾವ ಪ್ರದೇಶವೆಂದು ಸಾರಿ, ಕಂದಾಯ ಮಾಫಿ ಮಾಡಬೇಕು ಮತ್ತು ಸಾಲ ವಸೂಲಿ ಮುಂದಕ್ಕೆ ಹಾಕಬೇಕು ಈ ಕೆಲಸ ಮಾಡುತ್ತೀರಾ ಸ್ವಾಮಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಕೆರೆಗಳ ಹಿಂದೆ ಬೆಳೆಯಾಗದೆ ಇದ್ದರೆ ಆದಕ್ಕೆ ಒಂದು ಮಾರ್ಗವಿದೆ. ಸಂಬಂಧಪಟ್ಟ ಅಸಿಸ್ಟೆಂಟ್ ಕಮೀಷನರ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್ ಸ್ಥಳಗಳಿಗೆ ಹೋಗಿ, ಆ ಕೆರೆಯಿಂದ ಬೆಳೆಯಾಗಿದೆಯೋ ಇಲ್ಲವೇ ಎಂದು ನೋಡಿ, ಗ್ರಾಮದಲ್ಲಿ ವಿಚಾರಣೆಮಾಡಿ ಬೆಳೆಯಾಗಲಿಲ್ಲವೆಂದು ಕಂಡುಬಂದರೆ ವಾಟರೇಟ್ ವಜಾಮಾಡತಕ್ಕ ಒಂದು ಕ್ರಮವಿದೆ ಅಧಿಕಾರಿಗಳನ್ನು ಕಳುಹಿಸಿ, ಕೆರೆಗಳ ಹಿಂದೆ ಬೆಳೆಯಾಯಿತೇ ಇಲ್ಲವೇ ಎನ್ನುವ ಬಗ್ಗೆ ವರದಿಯನ್ನು ತರಿಸಿಕೊಂಡು ಬೆಳೆಯಾಗಿಲ್ಲವೆಂದು ಕಂಡುಬಂದರೆ ವಾಟರೇಟ್ ವಜಾ ಮಾಡತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ELECTRIFICATION OF VILLAGES IN SRINIVASAPUR TALUK

905. Sri S. BACHI REDDY (Srinivasapur).—

Will the Minister for Public Works and Electricity be pleased to state :—

(a) the number of villages included in the village electrification programme for the year 1972-73 together with names of villages in Srinivasapur Taluk ;

(b) the number of villages electrified ;

(c) the reasons for not taking up the remaining villages ?

Sri H. M. CHANNABASAPPA (Minister for Public Works and Electricity).—

(a) 92 villages were included in the consolidated programme drawn up for the years 1971-72 and 1972-73 as indicated in the Statement appended.

(b) Of these, 56 have been electrified till the end of March 1973.

(c) Preliminary works connected with the electrification of the remaining villages are under various stages of progress.

STATEMENT

Names of Villages and Hamlets included for Electrification for the Years 1971-72 and 1972-73 in Srinivasapur Taluk.

1 Pagalapalli
2 Therhanalli
3 Aramakalahalli
4 Kendithivaripalli
5 Bhamaguttapalli
6 Pindiganur
7 Kothur
8 Kamalavaripalli
9 Kaddavanahalli
10 Byrappalli
11 Kappali
12 Goniyakatapalli
13 Karipalli
14 Kummagunta
15 Kethaganapalli
16 Doddopalli
17 Chikkandavenapalli
18 Thadigal
19 Achenapalli
20 Reddimpalli
21 Burkagalakote
22 Madrankapalli
23 Ktmpireddiyaripalli
24 Adirajapalli
25 Kaniganahalli
26 Chiruvanahalli
27 Koosandra
28 Koppavaripalli
29 Pathakote
30 Manjevaripalli
31 Kuppahalli
32 Hebbatte
33 Kotragali
34 Gottikunte
35 Palya
36 Kotekallugu
37 Kollur
38 Seegepalli
39 Gudipalli
40 Yelavahalli
41 Hosahalli
42 Arakere
43 G. Thummalapalli
44 Kotapalli
45 Sangavadi
46 Kambalapalli
47 Kondamari
48 Upparapalli
49 Fathur
50 Misaganahalli
51 Yendlahalli
52 Manchinnelakota
53 Gowdathathanagaddy
54 Bandapalli
55 Jupalli
56 Gudisivarpalli
57 Thimmasandra
58 Shivakavarapalli
59 Chikkaralahalli
60 Bogamavarapalli
61 Reddyvaripalli
62 Bykothur
63 Kuntorapalli
64 Gangarajapalli
65 Sankamvaripalli
66 Kandlevaripalli

ಶ್ರೀ ಎಸ್. ಬಾಚಿರೆಡ್ಡಿ :—92 ಗ್ರಾಮಗಳಲ್ಲಿ ವಿಲೇಜ್ ಎಲೆಕ್ಟ್ರಿಫಿಕೇಷನ್ ನಡೆಸಬೇಕೆಂದು ಪ್ರೋಗ್ರಾಂನಲ್ಲಿ ಸೇರಿಸಿದ್ದರೂ ಕೂಡ ಸುಮಾರು 56 ಗ್ರಾಮಗಳಲ್ಲಿ ಮಾತ್ರ ನಡೆಸಿದ್ದೀರಿ. ಇದು ಸ್ಥಳೀಯ ಅಧಿಕಾರಿಗಳ ತಪ್ಪು ಎಂದು ನನ್ನ ಭಾವನೆ. ಅವರು ಹೆಚ್ಚು ಶ್ರದ್ಧೆ ತೆಗೆದುಕೊಂಡಿಲ್ಲ. ಇನ್ನಾದರೂ ಉಳಿದ ಗ್ರಾಮಗಳಿಗೆ ಎಲೆಕ್ಟ್ರಿಫಿಕೇಷನ್ ನಡೆಸುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಶ್ರದ್ಧೆ ತೆಗೆದುಕೊಂಡಿಲ್ಲವೆನ್ನುವುದನ್ನು ಒಪ್ಪುವುದಕ್ಕಾಗು ವುದಿಲ್ಲ ಕಾರಣ, ಒಟ್ಟು 92 ಹಳ್ಳಿಗಳಲ್ಲಿ ಸೇಕಡ 60 ರಷ್ಟು ಎಂದರೆ 56 ಹಳ್ಳಿಗಳಲ್ಲಿ ಈಗಾಗಲೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. ಇನ್ನು 36 ಹಳ್ಳಿಗಳ ಪೈಕಿ ಬೋರ್ಡಿನವರು ತಮ್ಮ ಭಾಗದ ಕೆಲಸವನ್ನು ಪೂರೈಸಿ ಫಾರ್ಮಾಲಿಟೀಸ್ ಪಂಚಾಯತಿಯವರು ಮಾಡದೇ ಇರತಕ್ಕ 10 ಹಳ್ಳಿ ಗಳಿವೆ. ಎಸ್ಟಿಮೇಟ್ ಸ್ಯಾಂಕ್ಷನ್ ಆಗಿ ತೆಗೆದುಕೊಳ್ಳತಕ್ಕ 10 ಹಳ್ಳಿಗಳಿವೆ ಮತ್ತು ಎಲೆಕ್ಟ್ರಿಫಿಕೇಷನ್ ಪ್ರೋಗ್ರೆಸ್‌ನಲ್ಲಿರುವ ನಾಲ್ಕು ಹಳ್ಳಿಗಳಿವೆ. ಎಸ್ಟಿಮೇಟ್ ತಯಾರಾಗಿರತಕ್ಕ 12 ಹಳ್ಳಿಗಳಿವೆ, ಒಟ್ಟು 36 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕಾಗಿದೆ. ಒಟ್ಟಿನಲ್ಲಿ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಇದುವರೆಗೆ ಎಲೆಕ್ಟ್ರಿಫಿಕೇಷನ್ ಮಾಡಿರುವುದು ಸ್ಟೇಟ್ ಆವರೇಜ್ 54 ಇದ್ದರೆ ಶ್ರೀನಿವಾಸಪುರ ತಾಲ್ಲೂಕಿನಲ್ಲಿ 55 ಪರ್ಸೆಂಟ್ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದೆ. Therefore you have absolutely no ground for grouse

Madam Speaker :—Now Questions are over.

Questions for Answers on the Day
(but not taken up)

GRANT OF EXTENSION OF SERVICES TO HEADS OF DEPARTMENTS

82. Sri M. H. JAYAPRAKASH NARAYAN (Sirsi).—

Will the Chief Minister be pleased to state :—

(a) the general policy of the Government with regard to the extension of services or re-appointment of the Heads of the Departments after their attaining the age of superannuation ;

(b) the particulars of the Heads of the Departments to whom extension of services or re-appointment have been given since the last two years as also the number of such extensions and the period of each such extension or reappointment in each individual case and the reasons therefor :

(c) since how long the Heads of the Departments to whom extension of services was given had already worked as Heads of the Departments at the time of granting such extension of service or re-appointing them ?

Sri D. DEVARAJ URS (Chief Minister).—

(a) As per general policy of Government, extension of service or re-employment of the Government servants after the age of superannuation is restricted to cases where special difficulty is experienced in getting qualified persons to fill particular posts belonging to Technical Departments.

(b) and (c) *vide* statement placed on the Table of the House.*

BRIDGE ACROSS KABINI RIVER NEAR SATTUR VILLAGE

680. Sri N. S. GURUSIDDAPPA (Biligere).—

Will the Minister for Public Works and Electricity be pleased to state :—

(a) whether there is any proposal before the Government to construct a bridge across the Kabini river at Sattur village ;

(b) whether the plan and estimate of the bridge is ready ; if so, the reasons for not taking up the work till now "

Sri H. M. CHANNABASAPPA (Minister for Public Works and Electricity).—

(a) Yes.

(b) The approximate cost of the bidge is Rs. 30 lakhs. However, detailed plans and estimates for it have been got up. The work will be taken up for execution after Government of India accords approval to it, under the "Inter-State and Economic Importance " programme.

CREATION OF A NEW DISTRICT WITH HEADQUARTERS AT DAVANGERE

903. Smt. NAGAMMA C. KESHAVAMURTHY (Davangere) —

Will the Minister for Revenue be pleased to state :—

(a) whether the Government has received representations from the public regarding the creation of a new district with its headquarters at Davangere ;

---

*Copy placed in the Mysore Legislature Library *vide* No. 33 Dated 30-4-1973.

(*b*) if so, the steps taken by the Government in this regard ?

Sri N. HUTCHAMASTHY GOWDA (Minister for Revenue).—

(*a*) Yes.

(*b*) It is proposed to examine this request along with similar requests for the redistribution of Districts and Taluks.

Calling Attention to matters of urgent Public Importance

(i) Re.: Issue of Licence for the construction of a Cinema Theatre near Ramakrishna Ashrama, Basavanagudi, Bangalore.

MADAM SPEAKER.—Now calling Attention Notices.

Sri RAJA PID NAIK (Shorapur).—I call the attention of the Minister of State for Home to the situation that has arisen due to issue of a licence for the construction of a Cinema Theatre near Ramakrishna Ashram, Basavangudi, Banaglore.

Sri R. D. Kittur (Minister of State for Home).—I make the following statement: An application was received by the District Magistrate, Bangalore and the Licensing Authority for the issue of a 'No Objection Certificate' for the construction of a permanent cinema theatre on vacant Site No. 13/1 Bull Temple Road, Basavanagudi and it was rejected by the District Magistrate on 7-5-1971. It is reported that an appeal against the order dated 7-5-1971 of the District Magistrate, Bangalore is preferred by the applicant to the Divisional Commissioner, Bangalore and the matter is pending before the Divisional Commissioner and is *sub judice*.

As this matter is *sub judice*. I request that there may not be any discussion or supplementaries on this subject.

ಶ್ರೀ ಕೋಣಂದೂರು ಲಿಂಗಪ್ಪ :—ಅಧ್ಯಕ್ಷರೇ, ರಾಮಕೃಷ್ಣಾಶ್ರಮ ಒಂದು ಶಾಂತಿಯುತವಾದ ಪ್ರದೇಶ, ಇಂತಹ ಶಾಂತ ವಾತಾವರಣದಲ್ಲಿ ಇಲ್ಲಿ ಸಿನಿಮಾ ಥಿಯೇಟರನ್ನು ಕಟ್ಟಿಸುವ ವಿಚಾರದಲ್ಲಿ ಗಮನಕೊಡಬಾರದು ಎಂದು ಸರಕಾರದ ಒಂದು ನೀತಿ ಇದೆ. ಈ ನೀತಿಯನ್ನು ಸರ್ಕಾರದವರು ಒಪ್ಪುತ್ತಾರೆಯೋ ?

(ii) re: Acute scarcity of drinking water in the village of Lingasugur Taluk.

Sri C. N. PATIL (Lingasugur) :—I call the attention of the Minister for Community Development and Social Welfare to the situation that has arisen due to acute scarcity of drinking water in villages of Lingasugur Taluk.

Sri M. MALLIKARJUNA SWAMY (Minister for Community Development and Social Welfare):—1. Five Villages *viz.*, Jaladurg, Hanchinal, Yelagundi, Yergudi and Khaderguddi form an Island on the Bank of River Krishna. These villagers were using the river water near Jawoor. The Upper Krishna Project authorities have taken up construction of an earthern bund near the point where the above five villagers were using water. On this account, flow of water in the river branch has been stopped. Since the residents of these villages began to experience difficulty for water, the Deputy Commissioner, Raichur District has taken action to provide bore wells to Hanchinal, Yelagundi, Yergudi and Khaderguddi. The work is in progress in these villages. Pending completion of the bore wells, the villagers are using water from the temporary pits dug in the river bed and from the old wells which are deepened and also from private irrigation wells. Arrangements have also been made to supply water through tankers and trucks to these and other villages as and when require. Jaladurga Island is adversely affected by construction of earthern Dam at Narayanapura. The Divisional Commissioner has addressed the Chief Engineer, Irrigation North to construct sluice to provide water to Island villages. The villagers are now taking water from Krishna River Bed.

II. Out of the 10 villages on the River Bank noted in the *next page* bore wells have been constructed at Roundalabanda and one open well at Hire-Javoor. Water is available in the wells. In the remaining 8 villages, water is available in the wells at present. Action has also been taken to desilt and to deepen the existing wells. Arrangements have also been made to supply water through tankers and trucks to these villages.

1. Arkanal. 2. Upnal. 3. Tondinal.
4. Haltawatagi. 5. Navali. 6. Kammaldinni.
7. Chittapur. 8. Gudijavoor. 9. Hirejavoor.
10. Roundalabanda.

III. Out of the following 5 villages the position in each village is as follows:

1. Mudgal. 2. Lingsugur. 3. Kuppigudda
4. Sarjapur. 5. Gudadnal.

1. Mudgal:—Eight old wells have been deepened. Water is supplied from these wells. Execution of National Rural Water Supply Scheme has been started.

2. Lingsugur:—To augment supply of water sinking of bore wells has been sanctioned. Work will be started as soon as a Rig can be secured.

3. Kuppigudda:—Watar is available in the existing wells. Action has been taken to sink a bore well also.

4. Sarjapur:—Water is available in a tank. Action has been taken to provide a bore well to this village also.

5. Gudadnal:—Water is being used from temporary pits dug in the Nalabed. A bore well was sunk. But saltish water was tapped. Action has been taken to sink another bore well.

ಶ್ರೀ ಸಿ. ಎನ್. ಪಾಟೀಲ್ :—ನಮ್ಮ ಕಡೆ ಇರುವ ಜಲದುರ್ಗ ಹಳ್ಳ ಅಪ್ಪರು ಕೃಷ್ಣಾ ಸ್ಕೀಮಿನಲ್ಲಿ ಬರುತ್ತದೆ. ಇಲ್ಲಿಗೆ ಬರುವ ನೀರನ್ನು ಕಟ್ ಮಾಡಬಾರದು, ಹಾಗಿರುವಾಗ ಇಲ್ಲಿನ ಅಧಿಕಾರಿಗಳು ಇದರ ಬಗ್ಗೆ ಸರಿಯಾದ ಮುಂಜಾಗರೂಕತೆಯ ಕಾರ್ಯಕ್ರಮಗಳನ್ನು ತೆಗೆದು ಕೊಂಡು ಇಲ್ಲಿನ ಜನಕ್ಕೆ ಏಕೆ ನೀರು ಕೊಡುವ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ?

ರೌಂಡಲಬಂಡಾ ಮತ್ತು ಹಿರೇಜೆವೂರ್ ಇಲ್ಲಿಗೇನೋ ಎರಡು ಬಾವಿಗಳನ್ನು ತೋಡಿಸಿ ಒಂದು ಹ್ಯಾಂಡ್‌ಪಂಪನ್ನು ಹಾಕಿಸಿಕೊಟ್ಟಿದ್ದಾರೆ. ಇದನ್ನು ಸರಿಯಾಗಿ ಉಪಯೋಗ ಮಾಡಲಾಗು ತ್ತಿಲ್ಲ, ಏಕೆಂದರೆ ಯಾವಾಗಲೂ ಇದು ರಿಪೇರಿ ಮಾಡಬೇಕಾಗಿದೆ, ಆಗಾಗ್ಗೆ ಕೆಟ್ಟುಹೋಗುತ್ತಿದೆ, ಇದಕ್ಕಾಗಿ ಇಲ್ಲಿಗೆ ಪವರು ಡ್ರಿವನ್ ಪಂಪ್‌ಸೆಟ್‌ಗಳನ್ನು ಇಲ್ಲವೇ ಡೀಸೆಲ್ ಪಂಪುಸೆಟ್ಟುಗಳನ್ನು ಹಾಕಿ ಶಾಶ್ವತವಾಗಿ ಇಲ್ಲಿನ ಜನಕ್ಕೆ ನೀರನ್ನು ಒದಗಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳ ಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಹಂಚನಾಳು, ಉಪನಾಲ್, ನಾವಲಿ ಇಲ್ಲಿರುವ ಬಾವಿಗಳ ಬಗ್ಗೆ ಹೇಳಿರುವ ವಿಚಾರಗಳು ಸರಿಯಾದುವಲ್ಲ. ಇದರ ಬಗ್ಗೆ ಸರಕಾರ ವೆರಿಫೈ ಮಾಡಬೇಕೆಂದು ಕೇಳುತ್ತೇನೆ. ಇಂದು ಕೂಡ ನಾನು ಟ್ರಂಕ್‌ಕಾಲ್ ಮಾಡಿ ವಿಚಾರ ಕೇಳಿದೆ, ಇಲ್ಲಿಗೆ ನೀರು ಕೊಟ್ಟಿಲ್ಲ. ಹೀಗೆ

ತಪ್ಪು ವರದಿ ಕೊಟ್ಟು ಸರಕಾರದ ಮೂಲಕ ಇಲ್ಲಿ ತಪ್ಪುಹೇಳಿಕೆ ಕೊಟ್ಟ ಅಧಿಕಾರಿಗಳ ಬಗ್ಗೆ ಸರಕಾರ ಸೂಕ್ತಕ್ರಮ ತೆಗೆದುಕೊಂಡು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಕ್ಷೆ ತೆಗೆದುಕೊಳ್ಳುವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ ಮತ್ತು ಈ ನಾಲ್ಕು ಹಳ್ಳಿಗಳಿಗೆ ನೀರು ಸಿಗುವಂತೆ ವ್ಯವಸ್ಥೆ ಮಾಡಿಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ :—ಮಾನ್ಯ ಸದಸ್ಯರು ಹೇಳಿದ ಮೊದಲನೆ ಸಲಹೆ ಒಂದನ್ನು ಬಿಟ್ಟು ಉಳಿದವುಗಳನ್ನು ಪರಿಶೀಲನೆ ಮಾಡಿ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

Pitiable Conditions of Weavers in Tiptur Taluk

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು) :—ರೂಲ್ 63 ರ ಪ್ರಕಾರ ನಮ್ಮ ತಾಲ್ಲೂಕಿನಲ್ಲಿರುವ 2–3 ಸಾವಿರ ನೇಕಾರರ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೆ. ನಾನು ಮೊನ್ನೆ ನಮ್ಮ ತಾಲ್ಲೂಕಿಗೆ ಭೇಟಿ ಕೊಟ್ಟಾಗ ಸಾವಿರಾರು ನೇಕಾರರ ಸಂಸಾರಗಳು ಮಾಡುವುದಕ್ಕೆ ಕೆಲಸವಿಲ್ಲದೆ ಭಿಕಾರಿಗಳಾಗಿ ಅಲೆಯುತ್ತಿದ್ದಾರೆ. ಇವರ ಮಕ್ಕಳುಗಳು ಬಸ್‌ಸ್ಟ್ಯಾಂಡ್‌ನಲ್ಲಿ ಬಿಕ್ಷೆ ಬೇಡುತ್ತಿವೆ. ಈ ಜನರು ಅನ್ನವಿಲ್ಲದೆ ನರಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದವರು ಒಂದು ಹೇಳಿಕೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :—ತಾವು ಕಳುಹಿಸಿರುವುದನ್ನು ನೋಡಿಸುತ್ತೇನೆ.

Press Report about Statement of the Chief Minister on the Cauvery Water Issue.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :—ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ಆಗಮಿಸಿದ್ದಾರೆ. ಕಾವೇರಿ ನದಿ ನೀರಿನ ಬಗ್ಗೆ ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಒಂದು ರೀತಿಯ ಗೊಂದಲ ಎಲ್ಲ ಕಡೆಗಳಲ್ಲಿಯೂ ಉಂಟಾಗಿದೆ. ನಮಗೆ ಬರಬೇಕಾದಂಥ ನೀರಿನ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಯಾವುದೋ ಉದಾರ ಮನೋಭಾವದ ದೃಷ್ಟಿ ಇಟ್ಟುಕೊಂಡು ಆ ಮಾತನ್ನು ಹೇಳಿದ್ದಾರೆ ಮತ್ತು ಆ ಮಾತಿನ ಅಡಿಯಲ್ಲಿ ನಮಗೆ ಅನ್ಯಾಯವಾಗುವಂಥ ನಿಲುವು ತಳೆದಿದ್ದಾರೆಂದು ನನಗನ್ನಿಸಿದೆ. ಇದರ ಬಗ್ಗೆ ಈ ಸದನಕ್ಕೆ ಅವರು ಒಂದು ಹೇಳಿಕೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಗಳು) :—ಪೇಪರ್‌ನಲ್ಲಿ ಬಂದಿರುವ ಹೇಳಿಕೆಯ ಬಗ್ಗೆ ಅನುಮಾನ ಬಂದಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದರ ಬಗ್ಗೆ ವಿರೋಧ ಪಕ್ಷದ ನಾಯಕರಿಗೆ ಅನುಮಾನ ಇಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ತಿಮ್ಮಪ್ಪನವರಿಗೂ ಅದರ ಬಗ್ಗೆ ಅನುಮಾನ ಬಂದಿಲ್ಲ ; ಆದರೆ ಮಾನ್ಯ ಲಿಂಗಪ್ಪನವರಿಗೆ ಅನುಮಾನ ಬಂದಿದೆ. ಅವರು ಅನುಮಾನ ಪ್ರಕೃತಿಯವರು ಎಂದು ಕಾಣುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ:—ಅಂದರೆ ಪೇಪರ್‌ನಲ್ಲಿ ಬಂದಿರುವುದೇ ಸರಿಯೋ ?

ಶ್ರೀ ಡಿ. ದೇವರಾಜ ಅರಸ್ :—ಸರಿಯಾಗಿಲ್ಲದಿದ್ದರೆ ಸರಿಯಲ್ಲ ಎಂದು ಹೇಳುತ್ತೇವೆ. ಆದರೆ ಇಂದು ಬಂದಿರುವುದು ಸರಿಯಾಗಿದೆ.

Koyana Waters Issue

ಶ್ರೀ ಎಸ್.ವೈ. ಪಾಟೀಲ್ (ಸಿಂದ್ಗಿ) :—ಮೊನ್ನೆ ದಿವಸ ಸರ್ಕಾರದವರು ಹೇಳಿಕೆ ಕೊಡುತಾ- ಕೊಯ್ನಾದಿಂದ ನಮಗೆ ನೀರು ಬಂದಿದೆ ಎಂದು ಹೇಳಿದರು. ಆದರೆ ಅಲ್ಲಿಯ ಜನರು ನೀರು ಬಂದಿಲ್ಲ ಎಂದು ಹೇಳುತ್ತಿದ್ದಾರೆ. 3ನೇ ತಾರೀಕಿನಿಂದ ಈ ಸಭೆ ಮುಂದಕ್ಕೆ ಹೋಗುವುದಿದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಖಚಿತವಾದ ಉತ್ತರ ಕೊಡಬೇಕೇ ಹೊರತು ಹಾರಿಕೆ ಉತ್ತರ ಕೊಡುವುದು ಸರಿಯಲ್ಲ. ನೀರು ನಿಜವಾಗಿ ಬಂದಿದ್ದರೆ ನಮ್ಮನ್ನು ಅಲ್ಲಿಗೆ ಕರೆದು ಕೊಂಡು ಹೋಗಿ ತೋರಿಸಿಕೊಡಿ. ಇಲ್ಲದಿದ್ದರೆ ಈ ರೀತಿ ಸುಳ್ಳು ಹೇಳುವುದನ್ನು ಬಿಟ್ಟುಬಿಡಿ.

ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ) ;—ನಾನು ಇಂದೇ ಬಿಜಾಪುರದಿಂದ ಬಂದಿದ್ದೇನೆ ಕೃಷ್ಣಾ ನದಿಯಲ್ಲಿ ನೀರು ಬರುವುದಕ್ಕೆ ಎಲ್ಲ ಏರ್ಪಾಡು ಮಾಡಿದ್ದೇವೆಂದು ಮಾನ್ಯ ವ್ಯವಸಾಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದರಿಂದ ನಮಗೆಲ್ಲಾ ಅನುಕೂಲವಾಗುತ್ತದೆಂದು ಆನಂದ ಪಟ್ಟಿದ್ದೆವು. ಆದರೆ ನಾನು ಕೋಲಾರ ಮತ್ತು ಚಿಕ್ಕಪರಿಷಿನಿಗೆ ಹೋಗಿ ನೋಡಿದಾಗ ಅಲ್ಲಿ ಒಂದು ಹನಿ ನೀರು ಕೂಡ ಬಂದಿರಲಿಲ್ಲ. ಮೊನ್ನೆ ದಿವಸ ಏತಕ್ಕೆ ಆ ರೀತಿ ಉತ್ತರ ಕೊಟ್ಟರು ಎಂಬುದು ನನಗೆ ಅರ್ಥವಾಗಲಿಲ್ಲ ? ಎಲ್ಲ ವಿಧವಾದ ಪ್ರಯತ್ನಗಳನ್ನು ಮಾಡಿದ್ದೇವೆ ಇನ್ನು 2-3 ದಿವಸಗಳಲ್ಲಿ ನೀರು ಬರುತ್ತದೆಂದು ನಾಲ್ಕೈದು ದಿವಸಗಳ ಕೆಳಗೆ ಸರ್ಕಾರದವರು ಹೇಳಿಕೆ ಕೊಟ್ಟರೂ ಸಹ ಇಲ್ಲಿಯವರೆಗೆ ನೀರು ಬಂದಿಲ್ಲ. ಅಲ್ಲಿಯ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರನ್ನು ಇದರ ಬಗ್ಗೆ ಕೇಳಿದಾಗ. ಮಹಾರಾಷ್ಟ್ರದವರು ನೀರು ಬಿಟ್ಟಿದ್ದಾರೆ, ಆದರೆ ನಮಗೆ ಇನ್ನೂ ಬಂದಿಲ್ಲ ಎಂದು ಹೇಳಿದರು. ಮತ್ತು ಅವರು ಬಿಟ್ಟ ನೀರನ್ನು ಮಹಾರಾಷ್ಟ್ರದವರೇ ಉಪಯೋಗಿಸಿಕೊಳ್ಳುತ್ತಿದ್ದಾರೆಂದು ಕೇಳಿದ್ದೇನೆ, ಅದು ನಿಜವೋ ಅಥವಾ ಇಲ್ಲವೋ ಎಂಬುದು ಗೊತ್ತಿಲ್ಲ ಎಂದು ಸಹ ಹೇಳಿದರು.

ಶ್ರೀ ಎಚ್.ಎಂ. ಚೆನ್ನಬಸಪ್ಪ:—ನಾವು ಹೇಳಿರತಕ್ಕದ್ದು ಖರೆ, ನೀವು ಹೇಳಿರತಕ್ಕದ್ದು ಖರೆ. ಅವರು ನೀರು ಬಿಟ್ಟಿರುವುದು ನಿಜ ; ಅದು ಬರುತ್ತಿದೆ. ಈಗ ಮಹಿಷಾಳದಿಂದ 25 ಮೈಲಿ ದೂರದವರೆಗೆ ಬಂದಿದೆ. ಆದ್ದರಿಂದ ಆತುರ ಪಡಬೇಕಾಗಿಲ್ಲ. ಅಲ್ಲಿಂದ ಬರುವುದಕ್ಕೆ ಸ್ವಲ್ಪ ಕಾಲ ತೆಗೆದುಕೊಳ್ಳುತ್ತದೆ. ಓಟಿ ಇರುವ ಕಡೆಗಳಲ್ಲಿ ನೀರು ಜಾಗ್ರತೆ ಬರುತ್ತದೆ.

ಶ್ರೀ ಡಿ. ದೇವರಾಜ್ ಅರಸ್ :—ಅದನ್ನು ಪೂರ್ತಿ ಓದಿಬಿಡಿ.

Statement by the Minister for Public Works and Electricity

Re. : Release of Koyana Waters

Sri H. M. CHANNABASAPPA (Minister for Public Works and Electricity).—As per the Agreement reached with the Maharashtra Government, a request was made for release of 6,000 cusecs of water a day from Koyana in three instalments of 2,000 cusecs a day over a period of 4 days in each fortnight of April and May with the arrangement that the water so far released be measured at Maisal Weir which

is near Mysore Border. Accordingly, the Maharashtra Government have released water from Maisal Weir on 23rd April, 1973 at 4 P.M. and stopped on 27-4-1973 at 10 A.M. In this connection, a detailed note from the Superintending Engineer, Ghataprabha Canal Circle, placed at Pages 427-428/cf. and at Pages 437 to 444 cf. may kindly be seen. A total discharge of 1,920 day cusecs was received near Manjari Bridge which is about 27 miles from the Maisal Weir and about 14 miles from border was received. The Superintending Engineer, Belgaum Circle has informed to-day on phone that the water has not flowed beyond Manjari Bridge since the discharge so far received have been absorbed in the various pools fallen on the river. Many of the pools are as big as 2 to 3 miles in length. A second instalment of release of water as per the agreement reached will be from 8th May onwards. Due to sandy river bed and due to big pools and absorption and evaporation losses it is opined by the Superintending Engineer, that unless a discharge of 4,000 cusecs per day water may not reach many of the villages and also the head works of Bijapur Water Supply Scheme. But it may not be possible for this discharge of 4,000 cusecs at Maisal Weir as it is learnt that maximum capacity of river sluice at Koyana Dam is 2,100 cusecs and that at Maisal Weir is only 1,000 cusecs. Hence, it will be necessary to get 1,000 day cusecs for 4 days continuously in order to see that some water is available all along a river down-stream of Manjari Bridge. It may be necessary to request Maharashtra Government to release 1,000 cusecs of water for 4 days instead of 1,000 cusecs a day in 2 instalments. Even though this arrangement may not give the expected relief fully, some water may be available for drinking for villages located on the banks of the river. Water may not reach Bijapur.

As Malaprabha Dam is in full and there is flow in Malaprabha River, there may not be much difficulty down-stream of confluence of Ghataprabha and Upper Krishna Rivers. The Maharashtra Government will be requested to release water at the rate of 1,000 cusecs for 4 days immediately instead of on 8th as scheduled.

ಶ್ರೀ ಜೆ. ಎಲ್. ಕಬಾಡಿ :—ಇಂದು ಬಿಜಾಪುರ ಸಿಟಿಯ ಪರಿಸ್ಥಿತಿಯನ್ನು ನೋಡಿದ್ದೇ ಆದರೆ, ಸಾವಿರಾರು ಜನರಿಗೆ ಕಾಲರಾ ಅಟ್ಯಾಕ್ ಆಗಿದೆ. ಇನ್‌ಫ್ಲೂಯೆಂಜ ಅಟ್ಯಾಕ್ ಆಗಿದೆ. ಇದಕ್ಕೆ ಕಾರಣ ಜನರು ಮಡ್ಡಿ ವಾಟರನ್ನು ಕುಡಿಯುತ್ತಿರುವುದು. ಮೇ 8ನೇ ತಾರೀಖಿನವರೆಗೂ ಇದೇ ಪರಿಸ್ಥಿತಿ ಮುಂದುವರೆಯುವುದಾದರೆ, ಅಲ್ಲಿಯವರೆಗೆ ಎಷ್ಟೋ ಅನಾಹುತಗಳು ಆಗಬಹುದು ಎಂಬ ಸ್ಪಷ್ಟಚಿತ್ರ ಕಂಡುಬರುತ್ತಿದೆ. ಈ ದೃಷ್ಟಿಯಿಂದ ಹೆಚ್ಚಿನ ಪ್ರಮಾಣದಲ್ಲಿ ನಾಳೆಯಿಂದಲೇ ನೀರನ್ನು ಬಿಡುವುದಕ್ಕೆ ಮಹಾರಾಷ್ಟ್ರದವರಿಗೆ ತಿಳಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ :—ಬಿಜಾಪುರಕ್ಕೆ ನೀರು ಬರುವುದಿಲ್ಲ ಎಂದು ನನಗನ್ನಿಸುತ್ತದೆ. ನಾವೂ ನೀವೂ ಕೂಡಿಕೊಂಡು ದೇವರಿಗೆ ಅಪೀಲ್ ಮಾಡೋಣ ಎಂದು ಮಾನ್ಯ ವ್ಯವಸಾಯ ಇಲಾಖೆಯ ಮಂತ್ರಿಗಳು ಮೊನ್ನೆ ದಿವಸ ಹೇಳಿದರು. ಜಾಗ್ರತೆ ಅಲ್ಲಿಯ ಜನರಿಗೆ ನೀರನ್ನು ಒದಗಿಸದಿದ್ದರೆ ಅವರು ಸಾಯುವ ಕಾಲ ದೂರವಿಲ್ಲ ಎಂದು ನನಗನ್ನಿಸಿದೆ. ಅಲ್ಲಿ ನೀರಿನ ಅಭಾವವಿದ್ದು ಜನರು ತೊಂದರೆಪಡುತ್ತಿದ್ದರೆ, ಇಲ್ಲಿ ಮಾನ್ಯ ಚನ್ನಬಸಪ್ಪನವರು ನಗುತ್ತಿದ್ದಾರೆ. ನಿಮಗೆ ನಮ್ಮ ಜನರ ಮೇಲೆ ನಿಜವಾದ ಪ್ರೀತಿ ಇದ್ದರೆ ಕೂಡಲೆ ಸ್ವಚ್ಛವಾದ ನೀರನ್ನು ತಾವು ಜವಾಬ್ದಾರಿ ತೆಗೆದುಕೊಂಡು ಸಪ್ಲೈ ಮಾಡಬೇಕು. ಇದು ಆಗದಿದ್ದರೆ ನನ್ನನ್ನು ವಾಟರ್ ಸಪ್ಲೈ ಮಿನಿಸ್ಟರ್ ಎಂದು ಮಾಡಿ ಒಂದು ಕೋಟಿ ರೂಪಾಯಿಗಳನ್ನು ಕೊಡಿ. ನಾನು ರೈಲ್ವೆ ವ್ಯಾಗನ್‌ಗಳಲ್ಲಿ ನೀರನ್ನು ತರಿಸಿಕೊಡುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ :—ಬೇಕಾದರೆ ಮಾನ್ಯ ಸದಸ್ಯರನ್ನು ವಾಟರ್ ಸಪ್ಲೈ ಮಂತ್ರಿಗಳನ್ನಾಗಿ ಮಾಡೋಣ. ಬಿಜಾಪುರ ಸಿಟಿಯಲ್ಲಿ ಬಾಕಿ ಹಳ್ಳಿಯವರಿಗೆ ಇರುವಷ್ಟು ಕಷ್ಟವಿಲ್ಲ ಎಂಬುದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆ. ಈಗಾಗಲೇ ಅನೇಕ ಕಡೆ ವಾಟರ್ ಸಪ್ಲೈ ನಡೆಯುತ್ತಿದೆ. ಡಿಸ್ಟ್ರಿಬ್ಯೂಷನ್ ಪ್ರಮಾಣದಲ್ಲಿ ಸ್ವಲ್ಪ ತಂಟೆ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಪ್ರಶ್ನೆಯನ್ನು ಮಾನವೀಯತೆಯ ದೃಷ್ಟಿಯಿಂದ ನೋಡಿ ನೀರನ್ನು ಪೂರೈಕೆ ಮಾಡಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. 4 ದಿವಸ ಆ ಸ್ಲೂಯಿಸ್‌ನಲ್ಲಿ ಕಂಟಿನ್ಯೂಯಸ್‌ಆಗಿ ಒಂದು ಸಾವಿರ ಕ್ಯೂಸೆಕ್ಸ್ ನೀರನ್ನು ಬಿಟ್ಟರೆ ಸರಿಹೋಗುತ್ತದೆ. ಆ ರೀತಿ ಬಿಡುವಂತೆ ನಾವು ಹುಕುಂ ಮಾಡುತ್ತೇವೆ.

FINANCIAL BUSINESS BUDGET ESTIMATES FOR 1973-74

DEMANDS FOR GRANTS—

Demand Nos.: 1, 5, 10A, 15C, 34, 39, 39B, 40, 41, 52, and 54

Sri M. Y. GHORPADE (Minister for Finance).—Madam Speaker, on the recommendation of the Governor, I beg to move :

" That a sum not exceeding Rs. 11,33,000, inclusive of the sum granted ' on account ', be granted to the Government to defray the charges which will come in course of payment during the financial year ending 31st day of March 1974, in respect of ' Taxes on Income other than Corporation Tax.

MADAM SPEAKER.—Motion moved:

"That a sum not exceeding Rs. 11,33,000, inclusive of the sum granted 'on account', be granted to the Government to defray the charges which will come in course of payment during the financial year ending 31st day of March 1974, in respect of 'Taxes on Income other than Corporation Tax."

Along with this Demand No. 1, the other Demands *viz.* Nos. 5, 10A, 15C, 34, 39, 39B, 40, 41, 52 and 54 are also deemed to have been moved.

Demand Nos. 9 and 11

Sri D. K. NAIKAR (Minister for Law and Parliamentary Affairs).—Madam Speaker, on the recommendation of the Governor, I beg to move:

"That a sum not exceeding Rs. 60,39,000 inclusive of the sum granted 'on account', be granted to the Government to defray the charges which will come in course of payment during the financial year ending 31st day of March 1974, in respect of 'State Legislature and Elections."

MADAM SPEAKER.—Motion moved:

"That a sum not exceeding Rs. 60,39,000 inclusive of the sum granted 'on account', be granted to the Government to defray the charges which will come in course of payment during the financial year ending 31st day of March 1974, in respect of "State Legislature and Elections."

Along with this Demand, the other Demand No. 11 is also deemed to have been moved.

All the demands are before the House for discussion. Hon. Member Sri Kagodu Thimmappa to initiate the discussion.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :—ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ನಮ್ಮ ರಾಜ್ಯದ ಲಾಟರಿ ವ್ಯವಸ್ಥೆಯನ್ನು ಪ್ರಬಲವಾಗಿ ವಿರೋಧಮಾಡಬೇಕಾಗಿದೆ. ಹಣವನ್ನು ಶೇಖರಣೆ ಮಾಡುವ ಉದ್ದೇಶದಿಂದ ಹಿಂದಿನ ಸರ್ಕಾರದವರು ಲಾಟರಿ ವ್ಯವಸ್ಥೆಯನ್ನು ಜಾರಿಗೆ ತಂದರು. ಈ ಸರ್ಕಾರದವರು ಅದನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಆದರೆ ಲಾಟರಿ

ಮುಖಾಂತರ ಸಂಪಾದನೆ ಮಾಡಿರತಕ್ಕ ಹಣದಿಂದ ಪ್ರಗತಿಯಾಗಿದೆಯೇ ಎಂದು ನೋಡಿದರೆ ಉತ್ಪತ್ತಿಗಿಂತ ಖರ್ಚೇ ಜಾಸ್ತಿಯಾಗಿದೆ. 1969-70 ನೇ ಇಸವಿಯಲ್ಲಿ ಪ್ರಾರಂಭವಾದಂತಹ ಲಾಟರಿ ಯೋಜನೆಯಿಂದ 1972-73 ನೇ ಇಸವಿಯವರೆಗೆ 18 ಕೋಟಿ 14 ಲಕ್ಷ ರೂಪಾಯಿ ವರಮಾನ ಬಂದಿದೆ. ಆದರೆ ಇದಕ್ಕೆ ಆಗಿರತಕ್ಕ ಖರ್ಚು 11 ಕೋಟಿ 50 ಲಕ್ಷ ರೂಪಾಯಿಗಳು. ಎಂದರೆ ಇದರಲ್ಲಿ ನಮಗೆ ಲಾಭ ಸಿಕ್ಕಿರುವುದು ಕೇವಲ 6 ಕೋಟಿ 64 ಲಕ್ಷ ರೂಪಾಯಿಗಳು. ಈ ಲಾಟರಿ ಯೋಜನೆಯನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಕಾರ್ಪೋರೇಷನ್ನಿಗೆ ಇದರ ಜವಾಬ್ದಾರಿಯನ್ನು ವಹಿಸಿಕೊಟ್ಟಿದ್ದಾರೆ. ಅವರಿಗೆ 25 ಪರ್ಸೆಂಟ್ ಹಣವನ್ನು ಕೊಟ್ಟು ಇದರ ಜವಾಬ್ದಾರಿಯನ್ನು ಅವರಿಗೆ ವಹಿಸಿಕೊಟ್ಟಿದ್ದಾರೆ. ಸರ್ಕಾರದ ಯಾವುದೇ ಒಂದು ವ್ಯವಹಾರಕ್ಕಾಗಲೀ ಕಾರ್ಪೋರೇಷನ್ ರಚನೆ ಮಾಡತಕ್ಕ ಒಂದು ಹುಚ್ಚು ಈ ಸರ್ಕಾರಕ್ಕೆ ಹಿಡಿದಿದೆ. ಪ್ರತಿಯೊಂದಕ್ಕೂ ಕಾರ್ಪೋರೇಷನ್ ರಚನೆ ಮಾಡುವುದು ಎತಕ್ಕೆ ? ಈಗ ಹೇಗೂ ಫೈನಾನ್ಸ್ ರಾಜ್ಯಸಚಿವರು ಇದ್ದಾರೆ. ಅವರಿಗೆ ಸಿಬ್ಬಂದಿ ವರ್ಗ ಇದೆ. ಆದ್ದರಿಂದ ಅವರಿಗೆ ಈ ಲಾಟರಿ ಯೋಜನೆಯ ಕೆಲಸವನ್ನು ನೇರವಾಗಿ ಎತಕ್ಕೆ ವಹಿಸಬಾರದು ? ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ಈ ಸೇಲ್ಸ್ ಇಂಟರ್‌ನ್ಯಾಷನಲ್ ಕಾರ್ಪೋರೇಷನ್ ರದ್ದು ಮಾಡಿ ಈ ಲಾಟರಿ ಯೋಜನೆಯನ್ನು ಸರ್ಕಾರದವರೇ ವಹಿಸಿಕೊಂಡು ಮಾಡಿದರೆ ಒಳ್ಳೆಯದು. ನಾಲ್ಕು ಕಾಸನ್ನು ಸಂಪಾದನೆ ಮಾಡೋಣ ಎಂದು ಈ ಲಾಟರಿ ಟಿಕೇಟ್ ಅನ್ನು ಮಾರಾಟ ಮಾಡುವುದಕ್ಕೆ ಸಣ್ಣ ಮಕ್ಕಳೂ ಕೂಡ ಶುರು ಮಾಡಿದ್ದಾರೆ. ಯಾರೇ ಪ್ರಯಾಣಿಕರು ರೈಲಿನಲ್ಲಿ ಹೊರಡಲಿ, ಬಸ್ಸಿನಲ್ಲಿ ಹೊರಡಲಿ ಅಲ್ಲಿಗೆ ಹುಡುಗರು ಬಂದು ಲಾಟರಿ ಟಿಕೇಟ್ ಅನ್ನು ಕೊಂಡುಕೊಳ್ಳಿ ಎಂದು ಕೇಳುತ್ತಾರೆ. ಇದರಿಂದಾಗಿ ಸಣ್ಣಮಕ್ಕಳ ಮನಸ್ಸನ್ನು ಕೆಡಿಸತಕ್ಕ ಒಂದು ಪ್ರವೃತ್ತಿ ಬಂದಿದೆ. ಇದು ಒಳ್ಳೆಯದಲ್ಲ. ಅವರು ಕಷ್ಟಪಟ್ಟು ದುಡಿದು ಸಂಪಾದನೆ ಮಾಡಿ ಬದುಕಿಕೊಳ್ಳತಕ್ಕಂಥಾ ಒಂದು ಪ್ರವೃತ್ತಿ ಮಕ್ಕಳಲ್ಲಿ ಬೆಳೆಯಬೇಕು. ಆದರೆ ಈ ಲಾಟರಿ ಯೋಜನೆಯಿಂದ ಸಣ್ಣಮಕ್ಕಳ ಮನಸ್ಸಿನಲ್ಲಿಯೂ ಒಂದು ಕೆಟ್ಟ ಪ್ರವೃತ್ತಿ ಬೆಳೆಯುತ್ತಿದೆ. ಆದ್ದರಿಂದ ಈ ಒಂದು ಕೆಟ್ಟ ಪ್ರವೃತ್ತಿ ಮಕ್ಕಳಲ್ಲಿ ಬೆಳೆಯದ ಹಾಗೆ ನಿಲ್ಲಿಸಬೇಕು. ದುರ್ಬಲ ವರ್ಗದವರಿಗೆ ಅಶಕ್ತ ವರ್ಗದವರಿಗೆ ಇದರಿಂದ ಯಾವುದೇ ರೀತಿಯ ದುಷ್ಪರಿಣಾಮವಾಗಬಾರದು. ಒಂದು ಕೆಟ್ಟ ಪ್ರವೃತ್ತಿ ಅವರಿಗೆ ಉಂಟಾಗಬಾರದು. ಸೇಲ್ಸ್ ಇಂಟರ್‌ನ್ಯಾಷನಲ್ ಕಾರ್ಪೋರೇಷನ್ ರದ್ದು ಮಾಡಬೇಕು ಅದನ್ನು ಮಂತ್ರಿಗಳಿಗೆ ವಹಿಸಿ ಅವರು ಇದನ್ನು ಚೆನ್ನಾಗಿ ನಿರ್ವಹಿಸುತ್ತಾರೆ. ಈಗ ಹಣಕಾಸಿನ ರಾಜ್ಯಸಚಿವರು ಅದಕ್ಕೋಸ್ಕರ ಇದ್ದು ಅವರಿಗೆ ಕೆಲಸವೇ ಇಲ್ಲದಂತಾಗಿದೆ. ಅವರು ಒಳ್ಳೆಯ ವಿದ್ಯಾವಂತರು, ಹಿಂದುಳಿದ ವರ್ಗಕ್ಕೆ ಸೇರಿದವರು ಒಳ್ಳೆಯ ಉತ್ಸಾಹ ಶಾಲಿಗಳು ಅವರಿಗೆ ಆ ಕೆಲಸವನ್ನು ವಹಿಸಿದರೆ ಅವರು ಅದನ್ನು ಚೆನ್ನಾಗಿ ನಿರ್ವಹಿಸುತ್ತಾರೆ. ಸೇಲ್ಸ್ ಇಂಟರ್‌ನ್ಯಾಷನಲ್ ಕಾರ್ಪೋರೇಷನ್ ತೆಗೆದು ಲಾಟರಿ ವ್ಯವಹಾರವನ್ನು ಸರ್ಕಾರದವರು ನೇರವಾಗಿ ವಹಿಸಿಕೊಂಡು ನಡೆಸಿದರೆ ಶೇಕಡಾ 10ಕ್ಕಿಂತ ಜಾಸ್ತಿ ಖರ್ಚು ಆಗದಹಾಗೆ ನೋಡಿಕೊಳ್ಳಬಹುದು.

ಈಗ ಎಷ್ಟೋ ಜನ ಲಾಟರಿಯಲ್ಲಿ ಬಹುಮಾನವನ್ನು ಪಡೆದವರು ಅದನ್ನು ಪಡೆಯುವುದಕ್ಕೆ ಮುಂದೆ ಬಾರದ ಇರುವವರು ಎಷ್ಟೋ ಜನಗಳು ಇದ್ದಾರೆ. ಈ ಲಾಟರಿ ವ್ಯವಹಾರವನ್ನು ನಿರ್ವಹಿಸುತ್ತಿರುವ ಸಂಸ್ಥೆಯ ಕೆಲವರು ಗುಪ್ತದಳ ರಚಿಸಿ ತಾವೇ ಬಹುಮಾನಿತರನ್ನು ಸೃಷ್ಟಿಸಿ ಅನ್‌ಕ್ಲೈಮ್ಡ್ ಅಮೌಂಟನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ಸರ್ಕಾರದವರು ಗಮನಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಮತ್ತು ಈ ಕೂಡಲೇ ಈ ಅನ್‌ಕ್ಲೈಮ್ಡ್ ಪ್ರೈಜ್ ಅಮೌಂಟನ್ನು ಹೊಡೆಯುವುದಕ್ಕೆ ಯಾರು ಯಾರು ಪ್ರಯತ್ನ ಮಾಡಿದ್ದಾರೆ ಎಷ್ಟೆಷ್ಟು ಹಣವನ್ನು ಯಾರು ಯಾರು ಹೊಡೆದಿದ್ದಾರೆ ಎಂಬ ಬಗ್ಗೆ ಕೂಡಲೇ ಸರ್ಕಾರದವರು ತನಿಖೆ ನಡೆಸಿ ಬಂದು ಪೂರ್ಣವರದಿಯನ್ನು ತರಿಸುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಇಂಥಾ

ಅವ್ಯವಹಾರವನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಶಿರಸಿಯಲ್ಲಿ ಯಾರೋ ಒಬ್ಬ ಪರದೇಶಿಗೆ ಒಂದು ಲಕ್ಷ ರೂಪಾಯಿ ಲಾಟರಿಯಲ್ಲಿ ಪ್ರೈಜ್ ಬಂದರೆ ಯಾರೋ ಆ ದುಡ್ಡನ್ನು ಹೊಡೆದುಕೊಂಡು ಹೋಗಿದ್ದಾರೆ. ಬಡವರ ಮನೆಗೆ ಭಾಗ್ಯದ ಲಕ್ಷ್ಮಿ ಬಂದಹಾಗೆ ಆ ಪರದೇಶಿಗೆ ಒಂದು ಲಕ್ಷ ರೂಪಾಯಿ ಪ್ರೈಜ್ ಬಂದರೂ ಕೂಡ ಅದನ್ನು ಪಡೆಯುವುದಕ್ಕೆ ಅವನಿಗೆ ಅವಕಾಶವಾಗಲಿಲ್ಲ. ಅದನ್ನು ಯಾರೋ ಸಿಕ್ಕಿದವರು ಹೊಡೆದುಕೊಂಡು ಹೋಗಿದ್ದಾರೆ. ಇಂಥಾ ಅವ್ಯವಹಾರಗಳು ನಡೆಯುತ್ತಿವೆ. ಆದ್ದರಿಂದ ಇದನ್ನು ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ನಮ್ಮ ಸ್ಮಾಲ್ ಸೇವಿಂಗ್ ವಿಚಾರವಾಗಿ ಹೇಳುವುದಾದರೆ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಬಹಳ ಕಸರತ್ ಮಾಡಿ ಪಬ್ಲಿಕ್ ವತಿಯಿಂದ ಒಂದುಕೋಟಿ 32 ಲಕ್ಷ ರೂಪಾಯಿ ಗಳನ್ನು ಸಂಗ್ರಹಮಾಡಿದ್ದಾರೆಂದು ವರದಿಯಾಗಿದೆ. ಸುಳ್ಳು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆಂಬ ಅಂಶ ನನ್ನ ತಿಳುವಳಿಕೆಗೆ ಬಂದಿದೆ. ಆ ರೀತಿ ಸಂಗ್ರಹ ಆಗಿದ್ದರೆ ಅದನ್ನು ಶ್ಲಾಘನೆ ಮಾಡುತ್ತೇನೆ. ಅದು ಮೆಚ್ಚತಕ್ಕಂಥಾದ್ದೇ. ನೀವು ಹೋದಂಥ ಕಾಲದಲ್ಲಿ ಅಲ್ಲಿ ಹಣ ಎಷ್ಟು ಸಂಗ್ರಹ ವಾಗಿತ್ತೆಂಬುದನ್ನು ತಿಳಿಸಿಲ್ಲ. ಹಿಂದೆ ಎಷ್ಟು ಹಣ ಸಂಗ್ರಹವಾಗಿತ್ತು ಎಂಬುದನ್ನೂ ಸಹ ತಿಳಿಸಿಲ್ಲ.

ಶ್ರೀ ಬಿ. ಶಿವಣ್ಣ (ಹಣಕಾಸು ಇಲಾಖೆಯ ರಾಜ್ಯಸಚಿವರು) :—ಒಟ್ಟು ಎರಡು ಕೋಟಿ 60 ಲಕ್ಷ ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದು. ಅದರಲ್ಲಿ ಒಂದು ಕೋಟಿ 32 ಲಕ್ಷ ರೂಪಾಯಿ ಗಳು ಮೈಸೂರು ಸಿಟಿಯಲ್ಲಿ ಪಬ್ಲಿಕ್ ವತಿಯಿಂದ ಕಲೆಕ್ಟ್ ಆದುದು.

ಶ್ರೀ ಕಾಗೋಡು ತಿಮ್ಮಪ್ಪ ;—ನನಗೆ ಕೊಟ್ಟಿರುವ ವರ್ತಮಾನದ ಪ್ರಕಾರ ಒಂದು ಕೋಟಿ ಚಿಲ್ಲರೆ ರೂಪಾಯಿಗಳು ಆ ದಿವಸವೇ ಸಂಗ್ರಹಣೆ ಆಗಿಲ್ಲವೆಂದು. ಒಂದು ವೇಳೆ ಅದೇದಿವಸವೇ ಆಗಿದ್ದರೆ ತಾವು ಎಲ್ಲಾ ಜಿಲ್ಲೆಗಳಿಗೆ ಹೋಗಿ ಬರಬಹುದು.

Sri D. Devaraj Urs.—In Mysore, people wanted me to go there and that they would make a big collection. My minister had taken lot of trouble and had prepared the ground there for collection on that day.

ಶ್ರೀ ಕಾಗೋಡು ತಿಮ್ಮಪ್ಪ :—ಮುಖ್ಯಮಂತ್ರಿಗಳು ಎಲ್ಲಾ ಜಿಲ್ಲೆಗಳಿಗೂ ಹೋಗುವುದರಿಂದ ಅರ್ಧ ಕೋಟಿ ರೂಪಾಯಿಗಳು ಒಂದೊಂದು ಜಿಲ್ಲೆಯಿಂದ ಸಿಗುತ್ತದೆ. ಎಂದರೆ ಅಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಬೇರೆ ಕಡೆಗಳಿಗೂ ಹೋಗಿ ಅಲ್ಲಿಯೂ ಕಲೆಕ್ಟ್ ಮಾಡೋಣವೆಂದು ನನ್ನ ಮನಸ್ಸಿಗೆ ಬಂದಿದೆ.

ಶ್ರೀ ಡಿ ದೇವರಾಜ್ ಅರಸ್ :—ಅದು ಒಳ್ಳೆಯ ಯೋಜನೆ. ಈ ವರ್ಷದ ಪ್ರೋಗ್ರಾಂನಲ್ಲಿ ಇದನ್ನು ಸೇರಿಸಿ ಈಗಿನ ಟಾರ್ಜೆಟ್ ಹೆಚ್ಚುವ ಹಾಗೆ ಪ್ರಯತ್ನಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ :—ಮಾನ್ಯ ವ್ಯವಸಾಯ ಮಂತ್ರಿಗಳೂ ಕೂಡ 65 ಲಕ್ಷ ರೂಪಾಯಿಗಳನ್ನು ಸಂಗ್ರಹ ಮಾಡಿದಂಥ ವರದಿಯೂ ಇದೆ. ಹುಬ್ಬಳ್ಳಿ ಮತ್ತು ಧಾರವಾಡ ಪ್ರದೇಶಗಳಿಂದ, ಕೈಗಾರಿಕೆಗಳಿರತಕ್ಕ ಪ್ರದೇಶಗಳಿಂದ ವಸೂಲುಮಾಡುವಾಗ ನಮ್ಮ ಮಾನ್ಯಮುಖ್ಯ ಮಂತ್ರಿಗಳು ಇದ್ದಿದ್ದರೆ, ಇನ್ನೂ ಜಾಸ್ತಿಯಾಗಿ ಅಲ್ಲೇ ಕೋಟಿ ರೂಪಾಯಿಗಳು ಕಲೆಕ್ಟ್ ಆಗುತ್ತಿತ್ತು. ಇದರಿಂದ ಬರುವುದು ಕಡಿಮೇಯಾಯಿತು. ಆದ್ದರಿಂದ ದುಡ್ಡು ಕಲೆಕ್ಟ್ ಮಾಡುವಾಗ ಯಾರ ಮುಖ ನೋಡಿದರೆ ದುಡ್ಡು ಸಿಗುತ್ತದೆಯೋ ಅಂತಹವರನ್ನು ಕರೆದುಕೊಂಡು ಹೋಗಬೇಕು. ನಮಗೆ ದುಡ್ಡು ಬೇಕು. ಅಂತಹ ಕೆಲಸಗಳನ್ನು ನಾವು ಸ್ಮಾಲ್ ಸೇವಿಂಗ್ಸ್ ಸ್ಕೀಮಿನಲ್ಲಿ

ಮಾಡಬೇಕೆಂದು ನಾನು ಅರಿಕೆಮಾಡಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಸಾವಿರ ರೂಪಾಯಿಗಳ ಸಂಬಳ ತೆಗೆದುಕೊಳ್ಳುವ ನೌಕರರು ಏನು ಇದ್ದಾರೋ ಅಂತಹವರಿಂದ ಕಡ್ಡಾಯವಾಗಿ ಸ್ಮಾಲ್ ಸೇವಿಂಗ್ಸ್ ಸ್ಕೀಮಿನಲ್ಲಿ ಹಣ ಹಾಕಬೇಕೆಂದು ನಿರ್ದೇಶ ಕೊಡಬೇಕು. ಒಂದು ವರ್ಷದಲ್ಲಿಯೇ ಕೋಟಿ ರೂಪಾಯಿಗಳಷ್ಟು ನಾವು ಸಂಗ್ರಹಮಾಡುವುದಕ್ಕೆ ಸಾಧ್ಯವಿದೆ. ಜೊತೆಗೆ ಇನ್‌ಕಂ ಟ್ಯಾಕ್ಸ್, ಹಾಗೂ ಸೇಲ್ಸ್‌ಟ್ಯಾಕ್ಸ್ ಕೊಡುವವರು ಗೊತ್ತಾದ ರೀತಿಯಲ್ಲಿ ಕಟ್ಟುವುದು, ಮತ್ತು ದೊಡ್ಡ ದೊಡ್ಡ ಕಾರ್ಪೊರೇಷನ್ ಹಾಗೂ ಕಂಪೆನಿಗಳು ಏನಿವೆಯೋ ಅವರಲ್ಲಿ ಸ್ವಲ್ಪಮಟ್ಟಿಗೆ ಹಣವನ್ನು ಸೇವಿಂಗ್ಸ್‌ಗಾಗಿ ಇನ್‌ವೆಸ್ಟ್ ಮಾಡಬೇಕು ಎಂಬುದಾಗಿ ಕಡ್ಡಾಯ ಮಾಡುವ ಕ್ರಮವನ್ನು ತೆಗೆದುಕೊಂಡರೆ ನಿಜವಾಗಿಯೂ ನಾವು ಪಬ್ಲಿಕ್‌ನಿಂದ ಹೆಚ್ಚಿಗೆ ಹಣವನ್ನು ಸಂಗ್ರಹಮಾಡಬಹುದು. ಇಂತಹ ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳಬೇಕು.

ಇನ್ನು ನಮ್ಮ ತೆರಿಗೆ ಇಲಾಖೆಗಳಿಗೆ ಸಂಬಂಧಪಟ್ಟಂತೆ ವಾಣಿಜ್ಯ ತೆರಿಗೆಗೆ ಸಂಬಂಧಪಟ್ಟ ವಿಷಯ. ಇದು ಇವತ್ತು ನಮ್ಮ ರಾಜ್ಯದ ಬೇಡಿಕೆಗಳಿಗೆ ಹೆಚ್ಚಿನ ಹಣವನ್ನು ತಂದುಕೊಡತಕ್ಕ ಇಲಾಖೆಯಾಗಿದೆ. ಇದನ್ನು ಈಗ ದುರಸ್ತು ಮಾಡುವ ಕೆಲಸವನ್ನು ಅರ್ಥಮಂತ್ರಿಗಳು ಮಾಡಬೇಕು. ಏಕೆಂದರೆ ಅವರಿಗೆ ತುಂಬಾ ಬುದ್ಧಿ ಇದೆ. ಸಾಮರ್ಥ್ಯವಿದೆ. ಇದರ ಬಗ್ಗೆ ಅಷ್ಟು ಮುಗ್ಧವಾಗಿ ಕೂತುಕೊಳ್ಳುವುದು ಬೇಡ. ಈ ಇಲಾಖೆಯಲ್ಲಿ ಹಣವನ್ನು ಸಂಪಾದನೆ ಮಾಡುವುದಕ್ಕೆ ಅಧಿಕಾರಿಗಳು ಸಾಕಷ್ಟು ಶೇಖರಣೆಯಾಗಿದ್ದಾರೆಂಬುದು ತಮಗೂ ಗೊತ್ತಿದೆ. ಒಬ್ಬ ಅಸಿಸ್ಟೆಂಟ್ ಸೇಲ್ಸ್‌ಟ್ಯಾಕ್ಸ್ ಅಧಿಕಾರಿಯ ಹುದ್ದೆಗೆ ನೇರವಾಗಿ ನೇಮಕಮಾಡಿದ್ದಾರೆ. ನಮ್ಮ ಊರಿನಲ್ಲಿಯೂ ಅಂತಹ ನೌಕರಿ ಪಡೆಯಬೇಕೆಂದು ಸುಮಾರು 15 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಅಂದಮೇಲೆ ಸಾಮಾನ್ಯವಾಗಿ ಎ. ಸಿ. ಟಿ. ಒ. ನೌಕರಿಯನ್ನು ಪಡೆಯಬೇಕಾದರೆ 15 ಸಾವಿರ ಅಲ್ಲ, 20 ಸಾವಿರ ರೂಪಾಯಿಗಳಾಗಿದ್ದರೂ ಸಹ ಲುಕ್ಸಾನು ಆಗುವುದಿಲ್ಲ. ಇಲ್ಲಿ ಸಾಕಷ್ಟು ಸಂಪಾದನೆ ಮಾಡಿಕೊಳ್ಳುವುದಕ್ಕೆ ಅವಕಾಶವಿರುತ್ತದೆ. 15-20 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದರೂ ಕೂಡ ಏನೂ ತೊಂದರೆಯಾಗುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ :—ಅದರೂ ಕೂಡ ಪಬ್ಲಿಕ್ ಸರ್ವಿಸ್ ಕಮಿಷನ್ನಿನಿಂದ ರೆಕ್ರೂಟ್‌ಮೆಂಟ್ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ :—ಅಷ್ಟೊಂದು ಖರ್ಚುಮಾಡಿದಂಥ ಅಧಿಕಾರಿಗಳು ಈ ಇಲಾಖೆಗೆ ಬಂದರೆ, ಅವರು ಸ್ವಾಭಾವಿಕವಾಗಿ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಹಣ ವಸೂಲುಮಾಡುತ್ತಾರೆ. ಅಂತಹ ಅಧಿಕಾರಿಗಳಿಂದ ಸಮಾಜದಲ್ಲಿ ಉತ್ತಮವಾದ ಆಡಳಿತ ಬರುತ್ತದೆ. ದೇಶಾಭಿವೃದ್ಧಿ ಆಗುತ್ತದೆ. ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು ವಿರೋಧ ಪಕ್ಷದಲ್ಲಿದ್ದಾಗ್ಗೆ ಅವರಿಗೆ ಈ ವಿಚಾರ ಚೆನ್ನಾಗಿ ಗೊತ್ತಿದೆ. ಈ ಒಂದು ಮೂಲವನ್ನು ಹಿಡಿದು ನಾವು ಕೆಲಸ ಮಾಡಬೇಕು. ಭದ್ರವಾದ ಕೆಲಸಗಳನ್ನು ಮಾಡಬೇಕು. ಯಾವಾಗಲೂ ಉತ್ತಮವಾದಂಥ ಹಾಗೂ ನಿಷ್ಠಾವಂತ ಅಧಿಕಾರಿಗಳನ್ನು ಅಂತಹ ಕಡೆಗಳಲ್ಲಿ ಹಾಕಬೇಕು. ಏಕೆಂದರೆ ಮೇಲಿನಿಂದ ಹಿಡಿದು ಕೆಳಗಿನವರೆಗೆ ಭ್ರಷ್ಟಾಚಾರ ಪ್ರವೃತ್ತಿ ಬೆಳೆದಿದೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅಲ್ಲಿ ಕೆಲವರು ಉತ್ತಮರೂ ಇದ್ದಾರೆ. ಇಷ್ಟು ಕೆಟ್ಟ ವಾತಾವರಣ ಬೆಳೆದು ನಿಂತಿರುವ ಇಂತಹ ಇಲಾಖೆಯು ದುರಸ್ತು ಕೆಲಸ ಮಾಡದೆಹೋದರೆ ಏನೂ ನ್ಯಾಯವಿಲ್ಲ, ಇಡೀ ರಾಜ್ಯದ ಬೇಡಿಕೆಗಳಿಗೆ ಇವತ್ತು ಅತಿ ಪ್ರಾಮುಖ್ಯವಾಗಿ ಆದಾಯವನ್ನು ತರತಕ್ಕ ಇಲಾಖೆ ಇದು ಆಗಿರುವುದರಿಂದ ಇದನ್ನು ಕ್ರಮಬದ್ಧವಾಗಿ ದುರಸ್ತು ಮಾಡದೇಹೋದರೆ ರಾಜ್ಯಕ್ಕೆ ಉತ್ಪಾದನೆ ಮಾಡತಕ್ಕ ಕ್ರಮದಲ್ಲಿ ಅಷ್ಟು ಹಣವನ್ನು ಶೇಖರಣೆ ಮಾಡುವುದಕ್ಕೆ ಹೇಗೆ ಆಗುತ್ತದೆ ? ಈಗ ಮಾನ್ಯ ಶ್ರೀ ಟಿ. ಆರ್. ಸತೀಶಚಂದ್ರ ಅವರನ್ನು ಒಬ್ಬ ಕಮಿಷನರ್ ಆಗಿ ಅಲ್ಲಿಗೆ ಹಾಕಿದ್ದಾರೆ.

ಅವರನ್ನು ಮೂರು ತಿಂಗಳಲ್ಲಿ ವರ್ಗಮಾಡುವ ಸಂದರ್ಭ ಹಾಗೂ ವಿಶೇಷವಾದಂಥ ಕಾರಣ ವೇನಿತ್ತು ? ಅಂಥಾದ್ದು ಏನೂ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಹಿಂದೆ ಅವರು ಜಿಲ್ಲಾಧಿಕಾರಿಗಳಾಗಿದ್ದರು. ಅವರು ಉತ್ತಮ ಆಡಳಿತಗಾರರು. ಪ್ರಾಮಾಣಿಕ ಅಧಿಕಾರಿ. ಅಂತಹ ಒಬ್ಬ ಒಳ್ಳೆಯ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡಿ ಬೇರೆಯವರನ್ನು ಅಲ್ಲಿ ತಂದು ಕುಳ್ಳಿರಿಸುವ ಪ್ರಬಲವಾದ ಕಾರಣಗಳು ಏನಿದ್ದುವು ? ಅಂಥಾದ್ದು ಏನೂ ಇರಲಿಲ್ಲ. ಅಂಥಾದ್ದು ಇದ್ದಿದ್ದರೆ ಅದು ರಾಜಕಾರಣಿಗಳ ಪ್ರಭಾವವೇ ಇರಬಹುದು. ಪ್ರಾಮಾಣಿಕ ಅಧಿಕಾರಿಗಳ ಆವಶ್ಯಕತೆ ಅಲ್ಲಿಗೆ ಬೇಕು. ಅಂತಹ ಕ್ಷೇತ್ರಗಳಲ್ಲಿ ಇಂತಹ ಪ್ರಾಮಾಣಿಕರಾದ ಅಧಿಕಾರಿಗಳನ್ನೇ ಅಲ್ಲಿ ಕುಳ್ಳಿರಿಸಬೇಕು. ಅಲ್ಲಿ ಅವರಿಗೆ ಪ್ರಮುಖವಾದ ಜವಾಬ್ದಾರಿಯನ್ನು ಕೊಡಬೇಕು. ಒಂದು ವೇಳೆ ಅವರು ಉತ್ತಮವಾಗಿ ಕೆಲಸಮಾಡುವುದಕ್ಕೆ ಅಲ್ಲಿ ಕೂತರೆ ಅವರ ಮೇಲೆ ಇಲ್ಲದಸಲ್ಲದ ಪ್ರಭಾವ ಬೀರಿ ಮತ್ತೊಂದು ಏನಾದರೂ ನಡೆಯುತ್ತದೆ. ಇದರಿಂದ ಅವರಿಗೆ ಅಲ್ಲಿ ಏನು ಕೆಲಸಮಾಡುವುದಕ್ಕೂ ಆಗದೇ ಇರುವ ಪರಿಸ್ಥಿತಿ ಉಂಟಾಗುತ್ತದೆ. ನಾವು ಇವತ್ತು ಪ್ರಮುಖ ವಾದ ಸ್ಥಾನದಲ್ಲಿ ಉತ್ತಮವಾದ ವ್ಯಕ್ತಿಗಳನ್ನು ತಂದರೆ ಆ ಇಲಾಖೆಯ ದುರಸ್ತು ಮಾಡುವ ಕೆಲಸವನ್ನು ಅವರು ಮಾಡಬಹುದು. ಮೇಲಾಗಿ ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ಅಡ್ವೈಜರಿ ಕಮಿಟಿ ಎಂಬುದಾಗಿ ಮಾಡಿದ್ದಾರೆ. ಆದರೆ ಅವರು ಇದುವರೆಗೂ ಒಂದು ಸಭೆ ಯನ್ನೂ ಕರೆದಿಲ್ಲ. ಅವರು ಏಕೆ ಕರೆದಿಲ್ಲವೋ ಗೊತ್ತಾಗಲಿಲ್ಲ. ಅವರು ಅಲ್ಲಿ ಅನೇಕ ನ್ಯೂನತೆ ಗಳನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಮೇಲಾಗಿ ಅವರು ಪರಸ್ಪರ ಕುಳಿತು ಚರ್ಚೆ ಮಾಡಿದರೆ ಅನೇಕ ಇಲಾಖೆಗಳ ದುರಸ್ತು ಕೆಲಸಗಳನ್ನು ಮಾಡಬಹುದು. ಸೇಲ್ಸ್‌ಟ್ಯಾಕ್ಸ್ ಅಡ್ವೈಜರಿ ಕಮಿಟಿಗಳನ್ನು ವರ್ಷಕ್ಕೆ ಮೂರು ನಾಲ್ಕುಸಾರಿ ಸೇರಿಸುವ ಕೆಲಸವನ್ನು ಮಾಡಬೇಕು ಆ ರೀತಿಯಾಗಿ ಸೇರಿಸಿ ಎಲ್ಲ ವರ್ಗದ ಜನರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಇದು ಪ್ರಾರಂಭವಾಗಬೇಕಾದರೆ ಮೊದಲು ಕಮಿಷನರ್ ಆಫ್ ಸೇಲ್ಸ್‌ಟ್ಯಾಕ್ಸ್ ಆಗಿರುವ ಅಧಿಕಾರಿ ಪ್ರಾಮಾಣಿಕವಾಗಿ ಕೆಲಸಗಳನ್ನು ಮಾಡಬೇಕು. ಈಗ ಒಬ್ಬರು ಇದ್ದಾರೆ. ಹಾಲಿನ ಡೈರಿಯಲ್ಲಿ ಹಿಂದೆ ಏನೇನು ನಡೆಯಿತೆಂಬುದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ನಾನು ಅದನ್ನು ಶೋಷಣೆ ಮಾಡುವುದಿಲ್ಲ. ಆದ್ದರಿಂದ ಮಾನ್ಯ ಶ್ರೀ ಸತೀಶಚಂದ್ರ ಅವರು ನಿಷ್ಪಕ್ಷಪಾತರಾಗಿರು ವುದರಿಂದ, ಅಂತಹ ಅಧಿಕಾರಿಯನ್ನು ಅಲ್ಲಿಗೆ ನೇಮಿಸಿದರೆ, ಆಗ ಅಲ್ಲಿನ ಆಡಳಿತವನ್ನು ಶುದ್ಧೀ ಕರಣಮಾಡುವುದಕ್ಕೆ ಅನುಕೂಲವಾಗುತ್ತದೆ.

ಮತ್ತೆ ಅನೇಕ ನೌಕರರು ಮತ್ತು ಅಧಿಕಾರಿಗಳು ಒಂದೇ ಕಡೆಯಲ್ಲಿ 4–5 ವರ್ಷಗಳ ಕಾಲ ಉಳಿದು ಬಿಡುತ್ತಾರೆ. ಇದು ಸರಿಯಾದುದಲ್ಲ, ಈ ಇಲಾಖೆಯಲ್ಲಿ ಯಾವ ಅಧಿಕಾರಿಯೇ ಆಗಲಿ ಒಂದು ಸ್ಥಳದಲ್ಲಿ 3 ವರ್ಷಗಳಿಗೆ ಹೆಚ್ಚು ಕಾಲ ಉಳಿಯಲು ಅವಕಾಶ ಇರಬಾರದು. ಮೂರು ವರ್ಷಕ್ಕೊಮ್ಮೆ ಇವರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಮಾಡಬೇಕಾದ್ದು ಅತ್ಯವಶ್ಯಕ ಎಂದು ಹೇಳುತ್ತೇನೆ. ಇನ್ನು ಈ ಇಲಾಖೆಯಲ್ಲಿ ಹೆಚ್ಚಿನ ಕೇಸುಗಳನ್ನು ಕೋರ್ಟಿನ ಮೂಲಕ ತೀರ್ಮಾನ ಮಾಡುವುದಕ್ಕೆ ಬದಲಾಗಿ ನಿಮ್ಮ ಇಲಾಖೆಯ ಅಧಿಕಾರಿಗಳ ಮೂಲಕವೇ ತೀರ್ಮಾನವಾಗುವಂತೆ ಮಾಡುವುದು ಉತ್ತಮ. ಇನ್ನು ನಮ್ಮಲ್ಲಿ ಅನೇಕ ಚೆಕಿಂಗ್ ಸ್ಟೇಷನುಗಳಿವೆ. ಆದರೆ ಇವುಗಳಿಂದೇನೂ ಪ್ರಯೋಜನವಿಲ್ಲ. ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸಂಪಾದನೆ ಮಾಡಿಕೊಳ್ಳುವುದಕ್ಕೆ ಮಾತ್ರ ಈ ಚೆಕ್‌ಪೋಸ್ಟ್‌ಗಳು ಸಹಾಯಕ ವಾಗಿವೆ. ಇಲ್ಲಿಯವರೆಗೂ ಈ ಚೆಕ್‌ಪೋಸ್ಟ್‌ಗಳಿಂದ ಯಾವ ಒಂದು ಹದ್ದುಬಸ್ತನ್ನೂ ತರುವುದಕ್ಕೆ ಸಾಧ್ಯವಾಗಿಲ್ಲ. ಇವುಗಳಿದ್ದೂ ತೆರಿಗೆಯನ್ನೂ ಜಾಸ್ತಿಯಾಗಿ ವಸೂಲಾಗುತ್ತಿಲ್ಲ. ಭೂತಲಿಂಗಂ ಸಮಿತಿ ಅವರೂ ಕೂಡ ಈ ಚೆಕ್ ಪೋಸ್ಟುಗಳನ್ನು ತೆಗೆಯುವುದೇ ಲೇಸೆಂದು ಹೇಳಿದ್ದಾರೆ. ಇವುಗಳನ್ನು ಈಗಲಾದರೂ ತೆಗೆದು ಹಾಕಿದರೆ ಸರ್ಕಾರಕ್ಕೆ ವಿಶೇಷವಾಗಿ ಹಣ ಉಳಿತಾಯವಾಗುತ್ತದೆ. ಆದುದರಿಂದ ಇವುಗಳನ್ನು ರದ್ದು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈ ಇಲಾಖೆಯಲ್ಲಿ ಹಾಲಿ 71,792 ಕೇಸುಗಳು 1972–73 ಕ್ಕೆ ಇನ್ನೂ ಫೈಸಲಾಗದೆ ಹಾಗೇ ಉಳಿದಿರುತ್ತವೆಂದು ತಿಳಿದು ಬಂದಿದೆ. ಇದಕ್ಕೆ ಕಾರಣವೇನು ? ಈ ಇಲಾಖೆಯಲ್ಲಿ ಅಧಿಕಾರಿಗಳು ಏನು ಕೆಲಸ ಮಾಡುತ್ತಿದ್ದಾರೆ ? ಹೀಗಾಗಿ ಈ ದಿವಸ ವರ್ತಕರು ವರ್ಷವೆಲ್ಲಾ ವಾಣಿಜ್ಯ ತೆರಿಗೆ ಇಲಾಖೆಗೆ ತಿರುಗುತ್ತಿರಬೇಕಾಗುವುದು. ಆಯಾಯ ವರ್ಷದ ಕೇಸುಗಳು ಆಯಾಯ ವರ್ಷವೇ ಫೈಸಲಾಗಬೇಕು. ಈ ವರ್ಷ ಒಬ್ಬ ವರ್ತಕನ ಆದಾಯ 50ಸಾವಿರ ಎಂದು ಆತ ಡಿಕ್ಲೇರ್ ಮಾಡಿಕೊಂಡರೆ ಸುಮ್ಮನೆ ಅದನ್ನು ಒಪ್ಪದೆ ಅದಕ್ಕೆ ಶೇಕಡಾ 15ರಷ್ಟನ್ನು ಸೇರಿಸಿ ಅದನ್ನು ಮತ್ತೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ವೇರಿಫೀಕೇಷನ್ ಬಗ್ಗೆ ಕಳುಹಿಸುತ್ತಾರೆ. ಅವರು ಮತ್ತೆ ಅದನ್ನು ಆ ಮೊಬಲಗನ್ನು ರೆಡ್ಯೂಸ್ ಮಾಡಿ ಪುನಃ ಅದನ್ನು ಅವರು ಆ ಯಾರು ಕಳುಹಿಸಿದ್ದರೋ ಆ ಎ. ಸಿ. ಟಿ. ಓ. ಗೆ ಕಳುಹಿಸಿಕೊಡುತ್ತಾರೆ. ಹೀಗೆ ಫೈಲು ಸುಮ್ಮನೆ ಮೇಲಿಂದ ಕೆಳಕ್ಕೆ ಕೆಳಗಿನಿಂದ ಮೇಲಕ್ಕೆ ಓಡಾಡುತ್ತ ವೃಥಾ ಕಾಲಹರಣೆಯಾಗುತ್ತದೆ. ಈ ಇಲಾಖೆಯಲ್ಲಿ ಈ ದಿವಸ ಇಷ್ಟೊಂದು ಕೇಸುಗಳು ಪೆಂಡಿಂಗ್ ಉಳಿಯಬೇಕಾಗಿದ್ದರೆ ಬಹುಶಃ ಇದೇ ಕಾರಣ ವಿರಬೇಕು. ಆದರೆ ಇಂಥದ್ದಕ್ಕೆ ಅವಕಾಶವಿರಬಾರದು. ಇದರಿಂದ ಇಲ್ಲದ ಕಿರುಕುಳ ವನ್ನು ವರ್ತಕರಿಗೆ ಕೊಡುವುದಕ್ಕೆ ಅವಕಾಶವಾಗುತ್ತದೆಯೇ ವಿನಾ ಇದರಿಂದ ಅನುಕೂಲವೇನೂ ಆಗುವುದಿಲ್ಲ. ಇದರಿಂದ ಆದರೆ ಲಂಚಕ್ಕೆ ಅವಕಾಶವಾಗಬಹುದು. ಈ ಇಲಾಖೆಯಲ್ಲಿ ವರ್ತಕರಿಗೆ ಕಿರುಕುಳವಾಗದಂತೆ, ಗೌರವದಿಂದ ತೆರಿಗೆಯನ್ನು ವಸೂಲ್ಮಾಡಿದರೆ ಸರ್ಕಾರ ಸುಲಭವಾಗಿ ತಾನು ನಿರೀಕ್ಷಿಸಿರತಕ್ಕ ಹಣವನ್ನು ಪಡೆಯುವುದಕ್ಕೆ ಯಾವ ಅಭ್ಯಂತರವು ಇಲ್ಲ. ಆದರೆ ಕೆಲವರು ತೆರಿಗೆ ಕಳ್ಳರೂ ಇಲ್ಲ ಎಂದು ಹೇಳುತ್ತಿಲ್ಲ. ಈ ದಿವಸ ವರ್ತಕರು ಅಥವಾ ತೆರಿಗೆದಾರ ಆಫೀಸಿಗೆ ಹೋದರೆ ಆತನಿಗೆ ಮರ್ಯಾದೆಯಿಲ್ಲ – ಗೌರವ ಇಲ್ಲ. ಹೀಗಾದರೆ ಇವರು ಏನು ಕೆಲಸಮಾಡುತ್ತಾರೆ ? ಅವರು ಲಂಚವನ್ನು ಕೊಡದಿದ್ದರೆ ವಾರಕ್ಕೆ ಒಂದು 15 ದಿನಕ್ಕೆ ಒಂದು ಆದಾದ ನಂತರ ತಿಂಗಳಿಗೊಂದು ಅಲ್ಲಸಲ್ಲದ ಕ್ವೈರಿ ಹಾಕಿಕೊಂಡು ಆ ವರ್ತಕನು ಯಾವಾಗಲೂ ಇವರ ಆಫೀಸಿಗೆ ತಿರುಗುತ್ತಲೇ ಇರುವಹಾಗೆ ಮಾಡುತ್ತಿದ್ದಾರೆ. ಇಂಥ ಕಿರುಕುಳ ಮೊದಲು ತಪ್ಪಬೇಕು. ಆ ಓಚರಿಲ್ಲ ಎಂದು ಒಂದು ತಕರಾರನ್ನು ಹಾಕಿ 15 ದಿನಗಳನ್ನು ಬಿಟ್ಟು ಮತ್ತೆ ಇನ್ನೊಂದು ಓಚರಿಲ್ಲ ಎಂದು ಇನ್ನೊಂದು ಕ್ವೈರಿ ಹಾಕುವುದು. ಇದು ಕುಟಿಲತನವಲ್ಲದೆ ಮತ್ತೇನು ? ಆ ಫೈಲಿನಲ್ಲಿ ಏನೇನು ತಪ್ಪುಗಳಿವೆ ಅವುಗಳೆಲ್ಲವನ್ನೂ ಒಂದೇ ಸಾರಿ ಏಕೆ ಅವರು ಎತ್ತಿ ಅವುಗಳ ಬಗ್ಗೆ ಸಮಧಾನ ಕೇಳಬಾರದು ? ಹೀಗೆ ವರ್ತಕರಿಗೆ ತೊಂದರೆ ಕೊಡುತ್ತಾ ಹೋದರೆ ಅವರಾಗಿ ಅವರೇ ಲಂಚ ಕೊಡುತ್ತಾರೆ ಎಂಬ ಭಾವನೆ ಅಲ್ಲದೆ ಮತ್ತೇನು ? ಆದುದರೀದ ಈ ದಿವಸ ಈ ಇಲಾಖೆಯನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಈ ದಿವಸ ಯಾವ ಯಾವ ದರ್ಜೆ ಅಧಿಕಾರಿಗೆ ಏನು ಒಂದು ಅಧಿಕಾರವನ್ನು ಕೊಟ್ಟಿದೆ ಅದಕ್ಕೂ ಜಾಸ್ತಿ ಅಧಿಕಾರವನ್ನು ಅವನಿಗೆ ಕೊಟ್ಟು ಇಲಾಖೆ ಕೆಲಸಗಳು ಬೇಗ ಬೇಗ ಮುಗಿಯುವಂತೆ ಮಾಡಬೇಕೆಂದು ಹೇಳುತ್ತೇನೆ. ಒಂದು ವರ್ಷದ ಕೇಸುಗಳು ಆ ವರ್ಷಾಖೈರಿಗೆ ಮುಗಿಯಲೇಬೇಕು. ಇಲಾಖೆಯಲ್ಲಿ ಅಧಿಕಾರಿಗಳ ಕೊರತೆ ಇದ್ದರೆ ಅಲ್ಲಿಗೆ ಕೆಲವರನ್ನು ಡೆಪ್ಯುಟೇಷನ್ ಕಳುಹಿಸಿ ಕೇಸುಗಳನ್ನು ಬೇಗ ಫೈಸಲಾಗುವಂತೆ ಮಾಡಬೇಕು. ಕೆಲವು ಜಿಲ್ಲೆಗಳಲ್ಲಿ 5–6 ವರ್ಷಗಳ ಕೇಸುಗಳು ಫೈಸಲಾಗದೆ ಇನ್ನೂ ಹಾಗೆ ಉಳಿದಿವೆ. ಹೀಗೆ ವೃಥಾ ಕೇಸ್‌ಗಳನ್ನು ಬೇಗ ಫೈಸಲ್ಮಾಡದೆ ಇದ್ದು ಒಂದು ವರ್ಷದಲ್ಲಿ ಯಾವಾಗಲೋ ತೀರ್ಮಾನ ಮಾಡಿ ಆ ವರ್ತಕನನ್ನು ಅವನು ತೆರಬೇಕಾದ 5–6 ವರ್ಷದ ಎಲ್ಲಾ ಹಣವನ್ನೂ ಒಂದೇ ಸಾರ್ತಿಗೆ ಕಟ್ಟಬೇಕೆಂದು ಹೇಳಿ ಆತನು ಕೊಡದಿದ್ದರೆ ಅವನ ಅಂಗಡಿಯನ್ನು ಹರಾಜ್ ಮಾಡು ವುದು ಇವೆಲ್ಲಾ ಬರುತ್ತದೆ. ಏಕೆಂದರೆ ಯಾವ ವರ್ತಕನಿಗೂ 5–6 ವರ್ಷಗಳ ತೆರಿಗೆಯನ್ನು ಒಂದೇ ಗಂಟಿನಲ್ಲಿ ಕಟ್ಟುವುದಕ್ಕಾಗುವುದಿಲ್ಲ. ಆದ್ದರಿಂದ ಇಂಥ ಅನಾನುಕೂಲಗಳಿಗೆ ಅವಕಾಶ ಕೊಡದಂತೆ ಇಲಾಖೆಯವರು ಆಯಾ ವರ್ಷದ ತೆರಿಗೆ ಹಣವನ್ನು ಸಾಧ್ಯವಾದಮಟ್ಟಿಗೂ ಆಯಾ ವರ್ಷವೇ ವಸೂಲ್ಮಾಡುವಂತೆ ವ್ಯವಸ್ಥೆ ಮಾಡಬೇಕು.

ಇನ್ನು ತಮಗೆ ನೇರವಾಗಿ ಈ ಪೋಲೀಸ್ ಇಲಾಖೆಯಲ್ಲಿ ಸಿ. ಐ. ಡಿ. ಬ್ರಾಂಚ್ ಇದ್ದ ಹಾಗೆ ಕೆಲವು ಗುಪ್ತ ಅಧಿಕಾರಿಗಳ ತಂಡವನ್ನು ನೇಮಕ ಮಾಡಿಕೊಂಡು ಅವರ ಮೂಲಕ ಯಾವ ಯಾವ ಅಧಿಕಾರಿಯ ನಡತೆ, ದಕ್ಷತೆ, ಕಾರ್ಯಚಟುವಟಿಕೆಗಳು ಯಾವ ರೀತಿ ಇರುತ್ತ ವೆಂಬುದನ್ನು ತಾವು ಈ ಗುಪ್ತದಳದ ಮೂಲಕ ಸಂಗ್ರಹ ಮಾಡುವುದು ಒಳ್ಳೆಯದು. ಇದರಿಂದ ಈ ಅಧಿಕಾರಿಗಳಲ್ಲೂ ಸ್ವಲ್ಪ ಭಯ ಹುಟ್ಟುವುದಕ್ಕೆ ಅವಕಾಶವಾಗುತ್ತದೆ.

ಹಾಗೆ ಮಾಡುವುದಾದರೆ ಅಧಿಕಾರಿಗಳಿಗೆ ಹೆದರಿಕೆ ಇರುವುದು. ಇದಕ್ಕಾಗಿ ಒಂದು ಸೇಲ್ ಕ್ರಿಯೇಟ್ ಮಾಡಿ ಅದರಲ್ಲಿ ಉತ್ತಮ ಅಧಿಕಾರಿಗಳನ್ನಿಟ್ಟು ಅವರ ಮೂಲಕ ಇಲಾಖೆಯಲ್ಲಿರ ಬಹುದಾದ ಭ್ರಷ್ಟಾಚಾರ ತಡೆಯುವುದು, ಸರಿಯಾಗಿಲ್ಲದ ಅಧಿಕಾರಿಗಳನ್ನು ನಿವೃತ್ತಿ ಮಾಡುವುದು ಮುಂತಾದ ಕ್ರಮ ತೆಗೆದುಕೊಳ್ಳಬೇಕು, ಹೀಗೆ ಮಾಡಿದರೆ ನೇರವಾಗಿ ಕ್ರಮತೆಗೆದುಕೊಳ್ಳ ಬಹುದು. ಇರುವ ಲೋಪದೋಷಗಳನ್ನು ಸರಿಪಡಿಸಬಹುದು. ವಾಣಿಜ್ಯ ತೆರಿಗೆ ಇಲಾಖೆ ದುರಸ್ತು ಮಾಡಬೇಕು ಎಂಬ ದೃಷ್ಟಿಯಿಂದ ಇದನ್ನು ಹೇಳುತ್ತಿದ್ದೇನೆ. ಅಧಿಕಾರಿಗಳು ಬೇಕಾದಷ್ಟು ಕೊಳ್ಳುವ ಬಂಗಾರವೇನು. ಕಾರುಗಳೇನು, ಇತರ ವಸ್ತುಗಳೇನು ಎಂಬುದನ್ನು ನೋಡಬಹುದು. ಕೆಲವು ಎ.ಸಿ.ಟಿ.ಓ. ಗಳಿದ್ದಾರೆ, ಅವರು ಅಂಗಡಿಗಳಿಗೆ ಹೋಗಿ ಸೀರೆ ಬೇಕು ಎಂದು ಹೇಳುವರು ಹಣದ ಮಾತಿಲ್ಲ, ಅದನ್ನು ಕೊಡಲೇಬೇಕು, ಇನ್ನೊಂದು ವಸ್ತು ಬೇಕೆಂದರೆ ಅದನ್ನು ಉಚಿತ ವಾಗಿ ಅಂಗಡಿಯವರು ಕೊಡಲೇಬೇಕು. ಅವರು ಹೋದರೆ ಮಾರಿ ಹೊಕ್ಕಹಾಗಾಗುತ್ತದೆ. ಇಂಥ ಪರಿಸ್ಥಿತಿಯಿದೆ. ಇಂಥ ಅಧಿಕಾರಿಗಳು ಇಲಾಖೆಯಲ್ಲಿ ಮುಂದುವರೆಯಲು ಅವಕಾಶ ವಿಲ್ಲದಂತೆ ಕೂಡಲೆ ಕ್ರಮ ತೆಗೆದುಕೊಳ್ಳಬೇಕು. ಹಣಕಾಸಿನ ಇಲಾಖೆಯಲ್ಲಿ ದಕ್ಷರಾದ ಅಧಿಕಾರಿಗಳಿದ್ದಾರೆ, ಅವರಿಗೆ ವಹಿಸಿದರೆ ಜಾಗ್ರತೆ ದುರಸ್ತುಮಾಡುವರು.

ನಮ್ಮ ವಿಧಾನಮಂಡಲಕ್ಕೆ ಸಂಬಂಧಪಟ್ಟ ಬೇಡಿಕೆ ವಿಷಯದಲ್ಲಿ ಒಂದು ಮಾತನ್ನು ಮುಖ್ಯ ಮಂತ್ರಿಗಳಿಗೆ ಹೇಳಬೇಕಾಗಿದೆ. ಈಗ ವಿಧಾನಮಂಡಲದ ಸೆಕ್ರೆಟೇರಿಯಟ್ ಇದೆ, ಅದರಲ್ಲಿ ವಿಧಾನಸಭೆಗೆ ಸಂಬಂಧಪಟ್ಟ ಅಧಿಕಾರವರ್ಗ ಮತ್ತು ಸಿಬ್ಬಂದಿವರ್ಗ ಇದೆ. ಅದಕ್ಕೆ ಸರಕಾರ ಪ್ರತ್ಯೇಕ ವ್ಯವಸ್ಥೆ ಮಾಡಿಕೊಳ್ಳಬೇಕು. ಅಧ್ಯಕ್ಷರಿದ್ದಾರೆ. ಅನೇಕ ಸಾರಿ ಅವರು ಕಳುಹಿಸುವ ಪತ್ರಗಳಿಗೆ ಸರಿಯಾಗಿ ಗಮನ ಕೊಡದೆ ತೊಂದರೆಯಾಗುವುದು. ಹೈಕೋರ್ಟ್ ಈಗ ಪ್ರತ್ಯೇಕವಾಗಿರುವಾಗ ವಿಧಾನಮಂಡಲದ ಸೆಕ್ರೆಟೇರಿಯಟ್ಟನ್ನು ಕೂಡ ಸ್ವತಂತ್ರವಾಗಿರುವ ಹಾಗೆ ವ್ಯವಸ್ಥೆಮಾಡಬೇಕು, ಸ್ವತಂತ್ರವಾಗಿ ಅದು ತನ್ನ ಕಾರ್ಯವನ್ನು ನಿರ್ವಾಹಮಾಡಲು ತನ್ನ ಸಿಬ್ಬಂದಿಯ ವರ್ಗ, ಮುಂತಾದ ವಿಷಯಗಳಲ್ಲಿ ಅದು ಸ್ವತಂತ್ರವಾಗಿ ನಿಯಂತ್ರಿಸಲು ಅವಕಾಶ ಮಾಡಬೇಕು. ಇದಕ್ಕೆ ಬೇಕಾದ ಕೆಲವು ರೂಲ್ಸ್ ಬದಲಾಯಿಸಬೇಕು. ರಾಜ್ಯದಲ್ಲಿ ಸಾರ್ವಭೌಮತ್ವ ಪಡೆದಿರುವ ಈ ಇಲಾಖೆಗೆ ತಕ್ಕ ಅನುಕೂಲ ಕಲ್ಪಿಸಬೇಕು. ವಿಧಾನ ಮಂಡಲದ ಆಡಳಿತವನ್ನು ಮತ್ತೊಬ್ಬರು ಪ್ರಶ್ನೆ ಮಾಡುವುದಾದರೆ ಅದಕ್ಕಿರಬೇಕಾದ ಗೌರವ, ಅಂತಸ್ತು, ಜವಾಬ್ದಾರಿ ಮುಂತಾದುವುಗಳಿಗೆ ತೊಂದರೆಯಾಗುವುದು. ಆದುದರಿಂದ ಹೈಕೋರ್ಟಿನಲ್ಲಿರುವಹಾಗೆ ಪ್ರತ್ಯೇಕ ಸಿಬ್ಬಂದಿ ವಗೈರೆ ಇಟ್ಟುಕೊಂಡು ಸ್ವತಂತ್ರವಾಗಿ ತನಗೆ ಸಂಬಂಧಪಟ್ಟ ವಿಷಯಗಳಲ್ಲಿ ವರ್ತಿಸಲು ಅವಕಾಶವಿರುವಂತೆ ಒಂದು ವ್ಯವಸ್ಥೆಯನ್ನು ನಿರ್ಮಾಣಮಾಡಿಕೊಡಬೇಕು. ವಿಧಾನಮಂಡಲದ ಸೆಕ್ರೆಟೇರಿಯಟ್ಟಿನಲ್ಲಿ ಕೆಲಸಮಾಡುವ ಕನ್ನಡ ಶೀಘ್ರಲಿಪಿಗಾರರಿಗೆ ಕಳೆದ ವರ್ಷ ಹೆಚ್ಚು ಸಹಾಯಮಾಡಬೇಕೆಂದು ಹೇಳಿದ್ದೆ, ಅದರಂತೆ ಮಾಡಿಲ್ಲ. ಅವರು ಸಿಕ್ಕುವುದು ಕಷ್ಟ. ಕನ್ನಡ ಶೀಘ್ರಲಿಪಿಗಾರರ ಅಭಾವವಿದೆ. ಅವರಿಗೆ ಪ್ರೋತ್ಸಾಹ ಕೊಡಬೇಕು. ಹೆಚ್ಚಿನ ವೇತನ ಕೊಡಬೇಕು. ಹೆಚ್ಚು ಸಿಬ್ಬಂದಿ ಕೂಡ ಕೊಡಬೇಕು ವಿಧಾನಮಂಡಲದ ಎರಡು ಸಭೆಗಳು ನಡೆಯುವಾಗ ಭೂಸುಧಾರಣಾ ವಿಧೇಯಕಕ್ಕೆ ಸಂಬಂಧಪಟ್ಟ ಜಾಯಿಂಟ್ ಸೆಲೆಕ್ಟ್ ಕಮಿಟಿ ಸೇರಿತ್ತು, ಅಲ್ಲಿ ಕಾರ್ಯಕಲಾಪಗಳನ್ನು ಬರೆದುಕೊಳ್ಳಲು ಶೀಘ್ರಲಿಪಿ ಗಾರರು ಇರಲಿಲ್ಲ, ಇದರಿಂದ ಅನಾನುಕೂಲವಾಯ್ತು. ಅಲ್ಲಿಗೆ ವರದಿಗಾರರು ಬರಲು

ಅವಕಾಶವಾಗಲಿಲ್ಲ. ಇಂಥ ಪರಿಸ್ಥಿತಿಯಿರುವಾಗ ಶೀಘ್ರಲಿಪಿಗಾರರ ಸಂಖ್ಯೆ ಹೆಚ್ಚಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ನಮ್ಮ ರಾಜ್ಯದ ಶ್ರೇಷ್ಠ ನ್ಯಾಯಾಲಯದ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇದರ ವಿಚಾರದಲ್ಲಿ ವ್ಯಸನದಿಂದ ಒಂದು ವಿಷಯವನ್ನು ಹೇಳಬೇಕಾಗಿದೆ. ಏಕೆಂದರೆ ಈ ದಿವಸ ಹೈಕೋರ್ಟಿನ ನ್ಯಾಯಾಧೀಶರಲ್ಲಿ ಎರಡು ಪಂಗಡಗಳಿವೆ. ಇದರ ಬಗ್ಗೆ ಏನು ಮಾಡಬೇಕೆಂಬು ದನ್ನು ಯೋಚನೆಮಾಡಿ. ಏಕೆಂದರೆ ಸರಿಯಾದ ನ್ಯಾಯ ದೊರಕಿಸಿಕೊಳ್ಳಲು ರಾಜ್ಯದ ಎಲ್ಲರೂ ಉಚ್ಚ ನ್ಯಾಯಾಲಯದ ಮರೆಹೋಗಬೇಕಾಗಿದೆ. ವ್ಯಕ್ತಿಯ ಆಧಾರದ ಮೇಲೆ ಹೈಕೋರ್ಟಿನಲ್ಲಿ ಎರಡು ಪಂಗಡಗಳಾಗಿವೆ, ಒಬ್ಬ ನ್ಯಾಯಾಧೀಶರಿದ್ದಾಗ ಅವರ ಜೊತೆಗೆ ಬೇರೆಯವರು ಹೋಗು ವುದಿಲ್ಲ. ಕೆಲವರು ಒಬ್ಬರ ಜೊತೆಗೆ ಹೋಗಲು ತಯಾರಿಲ್ಲ ಇಂಥ ಪರಿಸ್ಥಿತಿ ಬಂದರೆ ಹೇಗೆ? ಇದಕ್ಕೆ ವಿಷಾದಪಡಬೇಕಾಗಿದೆ. ಇಂಥ ದುರಂತ ನಡೆಯುತ್ತಿದೆ. ನಮ್ಮ ಉಚ್ಚ ನ್ಯಾಯಾಲಯ ದಲ್ಲಿ ಈ ದಿವಸ ಒಬ್ಬ ಹರಿಜನ ಜಡ್ಜ್ ಇದ್ದಾರೆ. ಅವರು ಒಂದು ಬೆಂಚಿಗೆ ಹೋದರೆ ಕೆಲವರು ಅವರ ಜೊತೆಗೆ ಹೋಗುವುದಿಲ್ಲ. ಏಕೆ ಎಂಬುದು ಗೊತ್ತಿಲ್ಲ. ಈ ರೀತಿಯ ನಡವಳಿಕೆ ಬೆಳೆಯಲು ಅವಕಾಶವಿರಬಾರದು. ಇದನ್ನು ತಪ್ಪಿಸುವುದಕ್ಕಾಗುವುದಿಲ್ಲ ಎಂಬ ಭಾವನೆ ಸರಕಾರಕ್ಕಿದ್ದರೆ ಹಿಂದೆ ಒಂದು ಸಾರಿ ಶ್ರೇಷ್ಠ ನ್ಯಾಯಾಧೀಶರನ್ನು ರಾಜ್ಯದ ಹೊರಗಡೆಯಿಂದ ತಂದಿದ್ದರು, ಆಗ ಆಡಳಿತ ಒಂದು ತಹಬಂದಿಗೆ ಬಂದಿತ್ತು. ಸರಿಯಾದ ನ್ಯಾಯ ಜನತೆಗೆ ದೊರೆಯಲು ಹಾಗೆ ಹೊರಗಿನಿಂದ ತರಬೇಕಾದರೆ ಆದಕ್ಕೆ ಸರಕಾರ ಹಿಂದುಮುಂದು ನೋಡ ಬಾರದು. ಹಾಗೆ ಮಾಡಬೇಕಾದರೆ ಯೋಗ್ಯರಾದವರನ್ನು ಹೊರಗಿನಿಂದ ತರಬಹುದು. ಮುಖ್ಯವಾಗಿ ಜನತೆಗೆ ನ್ಯಾಯ ದೊರೆಯಬೇಕು. ತಾರತಮ್ಯ ಇರಬಾರದು. ನ್ಯಾಯ ತೀರ್ಮಾನವನ್ನು ಯಾರು ಪ್ರಶ್ನಿಸುವಂತಿರಬಾರದು. ಇಂದು ಭ್ರಷ್ಟಾಚಾರ, ಲಂಚರುಷುವತ್ತು ಇಲ್ಲದಿರುವ ಇಲಾಖೆ ನ್ಯಾಯಾಂಗ ಇಲಾಖೆ ಒಂದೇ. ಇಂದು ನ್ಯಾಯಾಂಗ ಇಲಾಖೆ ಉತ್ತಮ ವಾಗಿದೆ. ಒಬ್ಬಬ್ಬರು ಸರಿಯಾದವರು ಇಲ್ಲದಿರಬಹುದು ಹೈಕೋರ್ಟ್ ಸರಿಯಾಗಿಲ್ಲದಿರುವುದರಿಂದ ಕೆಳಗಿನ ಕೋರ್ಟುಗಳಿಗೂ ದೋಷ ಹಬ್ಬಬಹುದು. ಮೇಲೆ ಯಾವ ನ್ಯಾಯಧೀಶರಿರುವರೋ ಅವರಂತೆ ಕೆಳಗಿನ ಕೋರ್ಟುಗಳ ನ್ಯಾಯಾಧೀಶರು, ಮುನ್ಸೀಫರು ಮತ್ತು ಮ್ಯಾಜಿಸ್ಟ್ರೇಟರುಗಳು ಇರುವರು. ಇದು ಸರಿಯಲ್ಲ. ಇದಕ್ಕೆ ಅವಕಾಶವಿಲ್ಲದಂತೆ ಸರಿಪಡಿಸಬೇಕು.

ಇದರ ಬಗ್ಗೆ ನೇರವಾಗಿ ತಮ್ಮ ಮನಸ್ಸನ್ನುಹರಿಸಬೇಕು. ಇದನ್ನು ಹರಿಯ ಬಿಡುವುದಕ್ಕೆ ಹೋಗಬಾರದು ಎಂದುಕೇಳಿಕೊಳ್ಳುತ್ತೇನೆ. ಆಮೇಲೆ ನಮ್ಮ ಹೈ ಕೋರ್ಟಿನಲ್ಲಿ ಇನ್ನೂ 3-4 ನ್ಯಾಯಾಧೀಶರನ್ನು ನೇಮಕ ಮಾಡತಕ್ಕ ಸಂದರ್ಭ ಸರ್ಕಾರಕ್ಕೆ ಇದೆ. ಆಗ ಸ್ವಲ್ಪ, ಯಾವ ಪ್ರಾತಿನಿಧ್ಯವನ್ನೂ ಪಡೆಯದೆ ಇರತಕ್ಕ ಜನ ಇದ್ದಾರೆ, ಕೆಲವರು ವಕಾಲತ್ತನ್ನು ಉತ್ತಮವಾಗಿ ಮಾಡುವವರು ಇದ್ದಾರೆ, ಹರಿಜನರಿಗೆ ಕೊಡಿ. ಬೇರೆಯವರೂ ಉತ್ತಮ ವಾಗಿ ಕೆಲಸಮಾಡತಕ್ಕ, ಅರ್ಹತೆ ಇದ್ದವರು ಇದ್ದಾರೆ. ಅವರಿಗೂ ಸ್ವಲ್ಪಸ್ಥಾನಮಾನಗಳನ್ನು ಕೊಡತಕ್ಕ ಕೆಲಸಮಾಡಬೇಕು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ತಾವು ಸಮಾಜವಾದಿಗಳು ಸಮಾಜವಾದವನ್ನು ಹೇಳುತ್ತೀರಿ ....

ಶ್ರೀ ಎಚ್. ಎಸ್. ಸಿದ್ದಪ್ಪ :—ಮಾನ್ಯ ಶಂಕರ್ಆಳ್ವ ಅವರಿಗೆ ಕೊಟ್ಟರೆ ಹೇಗೆ ಇರುತ್ತದೆ?

ಶ್ರೀ ಕಾಗೋಡತಿಮ್ಮಪ್ಪ :—ಅದನ್ನು ನೀವೇ ಊಹಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ :—ಕೆಲವು ಜನ, ಪ್ರಾತಿನಿಧ್ಯಸಿಕ್ಕದೆ ಇರುವವರು ಇರುತ್ತಾರೆ.

ಶ್ರೀ ಎಚ್.ಡಿ. ದೇವೇಗೌಡ ;—ಈ ಸರ್ಕಾರದ ಧೋರಣೆ, ಜಡ್ಜಸ್ ಅಪಾಯಿಂಟ್‌ಮೆಂಟ್ ಮಾಡತಕ್ಕ ಕಾಲದಲ್ಲಿ ಹೇಗೆ ಎಂದು ಮಾನ್ಯ ಹುಚ್ಚುಮಾಸ್ತಿಗೌಡರನ್ನು ಕೇಳಿದರೆ ಹೇಳುತ್ತಾರೆ

ಮೊನ್ನೆ ಮೂರು ಜನ ಜಸ್ಟೀಸ್ ರಾಜೀನಾಮೆ ಕೊಟ್ಟ ನ್ಯಾಯಾಧೀಶರ ಪೈಕಿ ಒಬ್ಬರು. ಕ್ರಿಶ್ಚಿಯನ್ನರೂ ಇದ್ದರು.

ಶ್ರೀ ಕಾಗೋಡು ತಿಮ್ಮಪ್ಪ :—ಕೆಲವು ಡಿಸ್ಟ್ರಿಕ್ಟ್ ಪ್ರಾಸಿಕ್ಯೂಟರ್ಸ್‌ನ್ನು ನೇಮಕ ಮಾಡತಕ್ಕಂಥ ಕಾಲದಲ್ಲಿ ಒಬ್ಬರು ನ್ಯಾಯಾಧೀಶರು ಒಂದು ದಿವಸವೂ ಪ್ರಾಕ್ಟೀಸು ಮಾಡಲಿಲ್ಲದವರಿಗೆ ವಿಪರೀತವಾದಂಥ ಶಿಫಾರಸ್ ಮಾಡಿದ್ದಾರೆ. ಇವರ ಜೊತೆಗೆ ಇನ್ನೊಬ್ಬ ಕ್ರಿಶ್ಚಿಯನ್ 5-6 ವರ್ಷದಿಂದ ಜಿಲ್ಲಾ ಕೋರ್ಟಿನಲ್ಲಿ ಉತ್ತಮವಾದಂಥ ಕೆಲಸ ಮಾಡಿದರೂ ಅವರಬಗ್ಗೆ ಒಂದು ಚಕಾರ ಶಬ್ದವೂ ಇಲ್ಲದೆ ಬೇರೆಯವರಿಗೆ ಶಿಫಾರಸ್ ಮಾಡಿದ್ದಾರೆ. ಇಂಥ ಉದಾಹರಣೆಗಳು ಇವೆ.

ಶ್ರೀ ಎಚ್. ಡಿ. ದೇವೇಗೌಡ.—ಮೊನ್ನೆ ಮೂರು ಜನ ರಾಜೀನಾಮೆ ಕೊಟ್ಟ ನ್ಯಾಯಾಧೀಶರ ಪೈಕಿ ಒಬ್ಬರು ಕ್ರಿಶ್ಚಿಯನ್‌ರೂ ಇದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :—ಅಂತೂ ನ್ಯಾಯಾಧೀಶರನ್ನು ನೇಮಕ ಮಾಡಕತಕ್ಕಂಥ ಕಾಲದಲ್ಲಿ ಬೇರೆ ವರ್ಗದವರೂ ಇದ್ದಾರೆ. ದಯವಿಟ್ಟು ಅವರನ್ನು ತಾವು ನೇಮಕ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಹೈಕೋರ್ಟಿನಲ್ಲಿ ಉದ್ಭವವಾಗಿರುವ ಕೆಟ್ಟ ಪ್ರವೃತ್ತಿ ಏನು ಇದೆ ಅದು ಹೋಗಬೇಕು. ಹಿಂದೆ ಹೊಂಬೇಗೌಡರು ಉತ್ತಮವಾಗಿ ಕೆಲಸ ಮಾಡಿ ಉತ್ತಮ ಸಂಪ್ರದಾಯವನ್ನು ಬೆಳಸಿಕೊಂಡು ಬಂದಿದ್ದರು. ಅದೇ ರೀತಿ ಉತ್ತಮ ಸಂಪ್ರದಾಯವನ್ನು ಉಳಿಸಿಕೊಂಡು ಬರುವುದಕ್ಕೆ ನ್ಯಾಯಾಂಗ ಇಲಾಖೆ ಪ್ರಯತ್ನ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ ಮಹಿಳಾ ಪ್ರತಿನಿಧಿ ಹೈಕೋರ್ಟಿನಲ್ಲಿ ಇಲ್ಲ. ತಾವೂ ಸಹ ಈ ಸ್ಥಾನಕ್ಕೆ ಬರಬೇಕಾದರೆ ಎಷ್ಟು ಕಷ್ಟ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಸ್ಥಾನ ಮಾನದಲ್ಲಿ ಮಹಿಳೆಯರನ್ನು ದುರ್ಬಲ ವರ್ಗ ಎಂದು ಕಾಣಬೇಕು. ಪ್ರಧಾನ ಮಂತ್ರಿಯವರ ಹಾಗೆ ಎಲ್ಲ ಮಹಿಳೆಯರಿಗೂ ಸ್ಥಾನಮಾನಸಿಕ್ಕುತ್ತದೆ ಎನ್ನುವುದು ಸುಳ್ಳು. ಮಂತ್ರಿಯಾಗತಕ್ಕ ತಮ್ಮನ್ನು ಸ್ಪೀಕರ್ ಮಾಡಿ ಕೂಡಿಸಿದ್ದಾರೆ. ದುರ್ಬಲ ವರ್ಗದಲ್ಲಿ ವಿಚಾರ ಶಕ್ತಿ ಬೆಳೆದಾಗ ಸ್ಥಾನಮಾನ ಪಡೆಯುವುದಕ್ಕೆ ಯೋಗ್ಯತೆ ಬಂದಾಗ ಹೈಕೋರ್ಟಿನಲ್ಲೂ ಸಹ ಅಂಥವರಿಗೆ ಸ್ಥಾನಮಾನಗಳನ್ನು ಕೊಡಬೇಕು. ಕೆಲವರಿಗೆ ಅದು ಮೀಸಲಾಗಿದೆ ಎನ್ನುವ ಭಾವನೆ ಬೆಳೆಯುವುದಕ್ಕೆ ಅವಕಾಶ ಕೊಡಬಾರದು ಎಂದು ಕೇಳಿಕೊಳ್ಳುತ್ತೇನೆ. ಈ ನಮ್ಮ ವಿಧಾನಮಂಡಲದ ಲೈಬ್ರರಿಗೆ ಬೇಕಾದಂಥ ಬಿಲ್ಡಿಂಗ್ ಅನ್ನು ಪ್ರತ್ಯೇಕವಾಗಿ ಕಟ್ಟಿಸಿಕೊಡಬೇಕು ಎಂದು ಮನವಿಯನ್ನೂ ಕೂಡ ಕಳುಹಿಸಿದ್ದೇವೆ; ಮತ್ತು ಟ್ರೆಜರಿಯನ್ನುಬೇರೆ ಕಡೆಗೆ ವರ್ಗಾಯಿಸುತ್ತಾರೆ ಎನ್ನುವ ವಿಷಯ ಗೊತ್ತಿದೆ. ಒಂದು ವೇಳೆ ಅದನ್ನು ವರ್ಗಾಯಿಸಿದರೆ, ಅಲ್ಲಿ ಲೈಬ್ರರಿಯನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಉತ್ತಮವಾದ ಲೈಬ್ರರಿ ವಿಧಾನಮಂಡಲದಲ್ಲಿದ್ದರೂ ಕೂಡ ಅದು ಯಾರಿಗೂ ಉಪಯೋಗವಾಗುತ್ತಿಲ್ಲ. ಅಲ್ಲಿ ಒಂದು ಗಂಟೆ ಕೂತುಕೊಂಡು ಓದುವುದಕ್ಕೆ ಸ್ಥಳವಿಲ್ಲ, ಆದ್ದರಿಂದ ಅಲ್ಲಿ ಲೈಬ್ರರಿ ಇದ್ದರೂ ಕೂಡ ಅದರ ಪ್ರಯೋಜನ ಯಾರಿಗೂ ಸಿಕ್ಕುವುದಿಲ್ಲ. ನಾವು ಇದಕ್ಕಾಗಿ ಹೇರಳವಾಗಿ ಹಣವನ್ನು ಖರ್ಚು ಮಾಡುತ್ತಿದ್ದೇವೆ. ದಯವಿಟ್ಟು ವಿಧಾನಮಂಡಲದ ಲೈಬ್ರರಿಯನ್ನು ಸುವ್ಯವಸ್ಥಿತವಾಗಿಡುವುದಕ್ಕೆ, ಅದಕ್ಕೆ ಬೇಕಾದಂಥ ಸ್ಥಳಾವಕಾಶ, ಬೇಕಾದಂಥ ಸಿಬ್ಬಂದಿ, ಬೇಕಾದಂಥ ಹಣಕಾಸನ್ನು ಕೊಡಬೇಕು. ರಾಜ್ಯದಲ್ಲಿ ಇದಕ್ಕೆ ಸಾರ್ವಭೌಮತ್ವವನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ ತಮಗೆ ನನ್ನ ಕೃತಜ್ಞತೆಯನ್ನು ಅರ್ಪಿಸಿ ನನ್ನಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ) :—

ಸನ್ಮಾನ್ಯ ಅಧ್ಯಕ್ಷರೇ, ಈಗ ಹಾಲಿ ಇರತಕ್ಕಂಥ ಬೇಡಿಕೆಗಳಲ್ಲಿ ನ್ಯಾಯಾಂಗ ಮತ್ತು ಎಲೆಕ್ಷನ್ಸ್ ಬೇಡಿಕೆ ಇದೆ, ಇದರ ಬಗ್ಗೆ ನಾನು ಎರಡು ಮಾತುಗಳನ್ನು ಹೇಳಬೇಕು ಎಂದು ಇಷ್ಟ

ಪಡುತ್ತೇನೆ. ಎರಡು ದಿನಗಳ ಹಿಂದೆ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಮುಖಂಡರೂ ಸೇರಿ ಮಾನ್ಯ ರಾಯ್ ಅವರ ನೇಮಕಾತಿಯ ಬಗ್ಗೆ ಗಲಾಟೆಯನ್ನು ಎಬ್ಬಿಸಿದ್ದಾರೆ. ದೇಶದಲ್ಲಿ ಮುಖ್ಯ ನ್ಯಾಯಾಧೀಶರನ್ನು ನೇಮಕ ಮಾಡುವಾಗ, ಅದು ನ್ಯಾಯಾಂಗದಲ್ಲಿ, ಉತ್ತಮ ಸ್ಥಾನ ಎನಿಸಿಕೊಂಡಿರತಕ್ಕ ಸ್ಥಾನಕ್ಕೆ ನೇಮಕಾತಿ ಮಾಡುವಾಗ ಕೇವಲ ಸೀನಿಯಾರಿಟಿ ಒಂದೇ ಅಳತೆಗೋಲು ಆಗಬೇಕು ಅಥವಾ ಯೋಗ್ಯತೆಯನ್ನೂ ಕೂಡ ಪ್ರಾಮಾಣಿಕವಾಗಿ ವಿಚಾರಮಾಡಬೇಕು ; ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಅಮೆರಿಕಾದಲ್ಲಿ ಒಂದು ಪದ್ಧತಿ ಇದೆ. ನ್ಯಾಯಾಂಗಕ್ಕೆ ನ್ಯಾಯಾಧೀಶರನ್ನು ಚುನಾವಣೆಯ ಮುಖಾಂತರ ನೇಮಿಸುತ್ತಾರೆ. ಅದರಲ್ಲಿ ಸೀನಿಯಾರಿಟಿ ಪ್ರಶ್ನೆಯೇ ಬರುವುದಿಲ್ಲ. ಯಾರು ಬಹುಮತ ಪಡೆಯುತ್ತಾರೋ ಅಂಥವರು ಚೀಫ್ ಜಸ್ಟೀಸ್ ಆಗುತ್ತಾರೆ. ಶ್ರೀ ಎಂ.ಸಿ. ಚಾಗಲಾ ಅವರು 1958ನೇ ಇಸವಿಯಲ್ಲಿ ಲಾ ಕಮಿಷನ್ ಸದಸ್ಯರು ಆಗಿದ್ದರು. ಅವರು ನೇಮಕಾತಿಯೊಳಗೆ ಸೀನಿಯಾರಿಟಿ ಬೇಕಿಲ್ಲ, ಯೋಗ್ಯತೆ ಆಧಾರದ ಮೇಲೆ ನೇಮಕಾತಿಯನ್ನು ಮಾಡಬಹುದು ಎನ್ನುವ ಅಭಿಪ್ರಾಯವನ್ನು ಕೊಟ್ಟಂಥ ಚಾಗಲಾ ಅವರು ಇವತ್ತು ತಮ್ಮ ಅಭಿಪ್ರಾಯಕ್ಕೆ ವಿರೋಧವಾಗಿ ಹೇಳುವುದು ಎಂದರೆ ಅದನ್ನು ಈ ಮನೆಯ ಸದಸ್ಯರು ಯೋಚನೆ ಮಾಡಬೇಕಾಗುತ್ತದೆ. ಕಾಲಬಂದಾಗ ಒಂದೊಂದು ಅಭಿಪ್ರಾಯವನ್ನೂ ಹೇಳತಕ್ಕಂಥಾದ್ದು. ಕಾಲ ಬಂದಾಗ ಅದನ್ನು ವ್ಯತ್ಯಾಸ ಮಾಡತಕ್ಕಾಂಥಾದ್ದು ಬುದ್ಧಿವಂತರ ಲಕ್ಷಣ ಅಲ್ಲ ಎಂದು ನನಗನ್ನಿಸುತ್ತದೆ. ಯಾವುದಾದರೂ ಅಭಿಪ್ರಾಯವನ್ನು ಒಂದು ವರ್ಷದ ಹಿಂದೆ ಕೊಟ್ಟಿದ್ದನ್ನು ಇವತ್ತು ವ್ಯತ್ಯಾಸ ಮಾಡುವುದಾದರೆ ಅದು ಧರ್ಮಕ್ಕೆ ಸೂಕ್ತವಲ್ಲ. ಮತ್ತು ಇದು ಕೇವಲ ಟೀಕೆ ಟಿಪ್ಪಣಿಗೋಸ್ಕರ ಎಂದು ನಾನು ಹೇಳದೆ ಇರಲಾರೆ. ಪ್ರಗತಿಪರ ವಿಚಾರ ಇಟ್ಟುಕೊಂಡಿರತಕ್ಕ ನ್ಯಾಯಾಧೀಶರನ್ನು ಅವರ ಯೋಗ್ಯತೆ ಆಧಾರದ ಮೇಲೆ ಜನತೆಯ ಆಶೋತ್ತರಗಳನ್ನು ಈಡೇರಿಸತಕ್ಕದನ್ನು ನೋಡಿ ಅಳತೆ ಗೋಲು ಇಟ್ಟು ನೇಮಕ ಮಾಡಿದರೆ ಇವರಿಗೇಕೆ ಸಿಟ್ಟು ಬಂತು ಎಂದು ಅರ್ಥವಾಗುವುದಿಲ್ಲ. ಈ ಒಂದು ನೇಮಕಾತಿಯ ಬಗ್ಗೆ ಮಹಾಪ್ರಧಾನ ಕಾರ್ಯಕ್ರಮ ಏನು ಇದೆ ಅದಕ್ಕೆ ಸಂಪೂರ್ಣವಾಗಿ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇವತ್ತು ಕೋರ್ಟುಗಳಲ್ಲಿ ಇವರ ಲಾರ್ಡ್‌ಷಿಪ್ ಎನ್ನುವುದನ್ನೂ ತೆಗೆದುಹಾಕಿದ್ದಾರೆ. ಜನತೆಯ ಆಶೋತ್ತರಗಳನ್ನು ಈಡೇರಿಸತಕ್ಕ ನ್ಯಾಯಮೂರ್ತಿಗಳು ಏನು ಇದ್ದಾರೆ ಅವರಿಗೂ ಸಹ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು :—ತಾವು ಹೇಳುವುದು ಈ ಡಿಮ್ಯಾಂಡಿಗೆ ಸಂಬಂಧ ಬರುತ್ತದೆಯೇ ?

ಶ್ರೀ ಎಸ್. ಎಂ. ಶೀರನ್ನಾಳಿ ಚಂದ್ರಶೇಖರ್ :—ಸ್ಟೇಟ್ ಲೆಜಿಸ್ಲೇಚರ್ ಬಗ್ಗೆ ಎರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ನಾನು ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿದೆ. ಅದನ್ನು ಮಾನ್ಯ ಅಧ್ಯಕ್ಷಿಣಿಯವರು ಅಲೋ ಮಾಡಲಿಲ್ಲ. ನಾನು ಅದರ ಬಗ್ಗೆ ಮಾತನಾಡಿದರೆ ಶ್ರೀಮಾನ್ ದೇವೇಗೌಡರಿಗೆ ಸಿಟ್ಟು ಬರಬಹುದು. ನಾವು ಒಂದು ದಿವಸಕ್ಕೆ 25,000 ರೂಪಾಯಿ ಖರ್ಚುಮಾಡತಕ್ಕ ಈ ಒಂದು ಸದನದಲ್ಲಿ ಎಷ್ಟು ಕಾಲವನ್ನು ಉಪಯುಕ್ತವಾಗಿ ಉಪಯೋಗಿಸಿಕೊಳ್ಳುತ್ತೇವೆ ಎನ್ನುವುದನ್ನು ನೋಡಬೇಕು.

ಅಧ್ಯಕ್ಷರು :—ಅದನ್ನು ಇಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ,

ಶ್ರೀ ಎಸ್. ಎಂ. ಶೀರನ್ನಾಳಿ ಚಂದ್ರಶೇಖರ್ :—ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ, ನಾನು ಹೇಳಬೇಕೆಂದಿರುವ ಅಂಶಗಳನ್ನು ಪೂರೈಸದೇ ಇದ್ದರೂ ಕುಳಿತು ಕೊಳ್ಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು) :—ಸನ್ಮಾನ್ಯ ಅಧ್ಯಕ್ಷಿಣಿಯರೇ, ಈ ದಿವಸ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧಮಾಡುತ್ತಾ ಕೆಲವೊಂದು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ, ಈ ಮಾರಾಟ ತೆರಿಗೆಯ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷಿಣಿಯರೇ, ಈ ಮಾರಾಟ ತೆರಿಗೆ ನಮ್ಮ ಸರ್ಕಾರಕ್ಕೆ ಬಹಳವಾಗಿ ಆದಾಯ ಬರತಕ್ಕ ಒಂದು ತೆರಿಗೆ. ಈ ತೆರಿಗೆ ಹಾಕದೇ ಈಗಿರತಕ್ಕಂಥ ಸ್ಥಿತಿಯಲ್ಲಿಯೇ ಇದ್ದು ದಕ್ಷರಾದಂಥ ಅಧಿಕಾರಿಗಳು ನ್ಯಾಯವಾಗಿ, ಪ್ರಾಮಾಣಿಕವಾಗಿ ತೆರಿಗೆಯನ್ನು ವಸೂಲು ಮಾಡಿದರೆ, ಈಗ ಏನು ತೆರಿಗೆ ಸರ್ಕಾರಕ್ಕೆ ಬರುತ್ತಾ ಇದೆ ಅದಕ್ಕಿಂತಲೂ ಎರಡರಷ್ಟು ಹಣ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ ಎಂದು ಎಲ್ಲರೂ ಹೇಳತಕ್ಕ ವಿಚಾರ. ಇದು ನಿರ್ವಿವಾದವಾದ ವಿಚಾರ. ಆದರೆ ಇಷ್ಟು ಹಣವನ್ನು ಜನತೆಯಿಂದ ಯಾರು ತೆಗೆದುಕೊಳ್ಳುತ್ತಿದ್ದಾರೋ ಅವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆಯೆಂದು ನೋಡಿದ ಪಕ್ಷದಲ್ಲಿ ಸರ್ಕಾರ ಆ ಮಟ್ಟಿಗೆ ತನ್ನ ಕರ್ತವ್ಯದಲ್ಲಿ ಪೂರ್ಣ ವಿಫಲಗೊಂಡಿದೆಯೆಂದು ಹೇಳುವುದಕ್ಕೆ ಬಯಸುತ್ತೇನೆ. ನಾನು ಮಾನ್ಯ ಘೋರ್ಪಡೆಯವರಲ್ಲಿ ನಂಬಿಕೆ ಇಟ್ಟಂಥ ಒಬ್ಬ ಮನುಷ್ಯ. ಅವರು ಒಳ್ಳೆಯ ದಕ್ಷ ಆಡಳಿತಗಾರರು. ನಿಸ್ವಾರ್ಥವಾಗಿ ರಾಜ್ಯಕ್ಕೆ ಆಡಳಿತವನ್ನು ಕೊಡುತ್ತಾರೆ ಮತ್ತು ಸಮಾಜವಾದವನ್ನು ಕಾರ್ಯಗತ ಮಾಡುವುದರಲ್ಲಿ ಮತ್ತು ಸರ್ಕಾರಕ್ಕೆ ಬರಬೇಕಾದಂತಹ ಎಲ್ಲ ತರಹದ ತೆರಿಗೆಗಳನ್ನು ವಸೂಲು ಮಾಡುವುದರಲ್ಲಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಾನಾದರೂ ನಂಬಿದ್ದೆ. ಈ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಇದರ ಒಂದು ದುರ್ವ್ಯವಹಾರ ಮೊದಲಿಗಿಂತಲೂ ದ್ವಿಗುಣವಾಗಿ ಬೆಳೆಯುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಹಗಲು ರಾತ್ರಿ ಕಷ್ಟಪಟ್ಟು ದುಡಿಯುತ್ತಾ ಇರತಕ್ಕ ವರ್ತಕರಾಗಲಿ ಅಥವಾ ರೈತರಾಗಲಿ ಸುಖಪಡುವುದಕ್ಕೆ ಸಾಧ್ಯವಿಲ್ಲದೆ ಹೋಗಿದೆ. ಆದರೆ ಇವರ ಹತ್ತಿರ ತೆರಿಗೆ ವಸೂಲು ಮಾಡುವ ಸಣ್ಣಪುಟ್ಟ ಅಧಿಕಾರಿಗಳ ಭೋಗಜೀವನವನ್ನು ನೋಡಿದರೆ, ಇವರಿಗೆ ಎಲ್ಲಿಂದ ಹಣ ಬರುತ್ತದೆ, ಯಾವ ರೀತಿ ಹಣವನ್ನು ಉತ್ಪತ್ತಿ ಮಾಡುತ್ತಾರೆ ಎಂದು ಸ್ವಲ್ಪ ನಾವು ಯೋಚನೆ ಮಾಡಬೇಕು. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಗೊತ್ತಿದ್ದರೂ ಸಹ ಸರ್ಕಾರ ಏತಕ್ಕೋಸ್ಕರ ಕಣ್ಣುಮುಚ್ಚಿ ಕುಳಿತಿದೆ ? ಸರ್ಕಾರ ನಮ್ಮ ದೇಶದಲ್ಲಿ ಇದೆಯೋ ಅಥವಾ ಇಲ್ಲವೆ ಎಂದು ಯೋಚನೆ ಮಾಡಬೇಕಾಗಿದೆ. ಸಣ್ಣಪುಟ್ಟ ವ್ಯಾಪಾರಸ್ಥರು ಮತ್ತು ಪೆಟ್ಟಿ ಅಂಗಡಿ ಇಟ್ಟಿರುವವರು ಮಾಮೂಲು ಕೊಟ್ಟರೆ ಅವರನ್ನು ಬಿಟ್ಟುಬಿಟ್ಟು, ಇಲ್ಲದಿದ್ದರೆ ಅವರಿಗೆ ತೊಂದರೆಕೊಟ್ಟರೆ ವ್ಯಾಪಾರಸ್ಥರು ವ್ಯಾಪಾರಮಾಡಿ ದೇಶದಲ್ಲಿ ಎಷ್ಟರಮಟ್ಟಿಗೆ ತೆರಿಗೆಯನ್ನು ನ್ಯಾಯರೀತಿಯಲ್ಲಿ ಸರ್ಕಾರಕ್ಕೆ ಪಾವತಿ ಮಾಡಬಹುದು ಎಂದು ನಾವು ನೋಡಬೇಕು. ಹೀಗಾಗಿ ಸರ್ಕಾರಕ್ಕೆ ಆದಾಯ ಕಡಿಮೆಯಾಗಿದೆ. ಅಧಿಕಾರಿಗಳು, ಯಾವ ರೀತಿ ಲೆಕ್ಕ ಬರೆದರೆ ತೆರಿಗೆ ಯಾವರೀತಿ ಕಡಿಮೆ ಮಾಡಿಕೊಳ್ಳಬಹುದು ಎಂಬುದನ್ನು ವ್ಯಾಪಾರಸ್ಥರಿಗೆ ಹೇಳಿಕೊಡುತ್ತಾರೆ. ಸರ್ಕಾರದ ವತಿಯಿಂದ ಸಂಬಳ ಪಡೆಯುತ್ತಿರುವ ಅಧಿಕಾರಿಗಳು ವ್ಯಾಪಾರಸ್ಥರಿಗೆ ಮೋಸಮಾಡುವ ದಾರಿಯನ್ನು ಹೀಗೆ ತೋರಿಸಿಕೊಟ್ಟರೆ ಬೇಲಿಯೇ ಎದ್ದು ಹೊಲವನ್ನು ಮೇದಾಗ ಎಲ್ಲಿ ರಕ್ಷಣೆ ಇದೆ ಎಂದು ನಾನು ಕೇಳಬಯಸುತ್ತೇನೆ. ಸನ್ಮಾನ್ಯ ಘೋರ್ಪಡೆಯವರು ಅಧಿಕಾರ ಪಡೆದ ಒಂದು ವರ್ಷದ ಅವಧಿಯಲ್ಲಿ ಈ ರೀತಿ ದುರ್ವ್ಯವಹಾರದಲ್ಲಿ ತೊಡಗಿರುವ ಎಷ್ಟು ಅಧಿಕಾರಿಗಳನ್ನು ತಲಾಸೆ ಮಾಡಿ ಶಿಕ್ಷೆ ಮಾಡಿದ್ದಾರೆ ಎಂದು ಜವಾಬು ಕೊಡುವಾಗ ಹೇಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸರ್ವೇ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಸಣ್ಣ ಸಣ್ಣ ಸಿನಿಮಾ ಟೆಂಟ್‌ಗಳಿರುತ್ತವೆ, ಮತ್ತು ಪಟ್ಟಣಗಳಲ್ಲಿ ಸಿನಿಮಾ ಟಾಕೀಸ್ ಇರುತ್ತವೆ. ಅಲ್ಲಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಹಾಕುತ್ತಾರೆ. ಅಲ್ಲಿ ಟ್ಯಾಕ್ಸ್ ಸರಿಯಾಗಿ ವಸೂಲು ಮಾಡಿದ್ದೇ ಆದರೆ ದ್ವಿಗುಣವಾಗಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಬರುತ್ತದೆ.

ಆದರೆ ಒಂದು ಸಲ ಹರಿದುಕೊಟ್ಟ ಟಿಕೆಟ್ಟನ್ನೆ ಪುನಃ ಕೊಟ್ಟು ಸರ್ಕಾರಕ್ಕೆ ಬರತಕ್ಕ ತೆರಿಗೆಯನ್ನು ಮೋಸ ಮಾಡಿದವರ ಮೇಲೆ ಯಾವ ರೀತಿ ಕ್ರಮ ತೆಗೆದುಕೊಳ್ಳದೆ, ಬೇರೆ ಬೇರೆ ಪದಾರ್ಥಗಳ ಮೇಲೆ ತೆರಿಗೆ ಹಾಕಿ ಅಥವಾ ತೆರಿಗೆಯ ದರವನ್ನು ಹೆಚ್ಚಿಸಿ ಜನರಿಗೆ ಕಿರುಕುಳ ಕೊಡುವುದರಿಂದ ಟ್ಯಾಕ್ಸನ್ನು ಸರಿಯಾಗಿ ವಸೂಲು ಮಾಡುವ ಶಕ್ತಿ ಮತ್ತು ಯೋಗ್ಯತೆ ಸರ್ಕಾರಕ್ಕೆ ಇಲ್ಲ ಎಂದು ಹೇಳಬಯಸುತ್ತೇನೆ. ಸರ್ಕಾರದವರು ಏನು ಆಹಾರ ಪದಾರ್ಥಗಳ ಮೇಲೆ ತೆರಿಗೆಯನ್ನು ಹಾಕಿದ್ದಾರೋ ಅದನ್ನು ತೆಗೆಯಬೇಕು. ವ್ಯವಸಾಯಕ್ಕೆ ಸಂಬಂಧಪಟ್ಟ ಟ್ರ್ಯಾಕ್ಟರುಗಳು ಮತ್ತು ರೈತರು ಉಪಯೋಗಿಸತಕ್ಕ ವ್ಯವಸಾಯದ ಉಪಕರಣಗಳ ಮೇಲೆ ಮಾರಾಟ ತೆರಿಗೆಯನ್ನು ರದ್ದು ಮಾಡಿದರೆ ರೈತನಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಗ್ರೀನ್ ರೆವಲ್ಯೂಷನ್‌ಗೆ ಪ್ರೋತ್ಸಾಹ ಕೊಟ್ಟು ರೈತರಿಗೆ ತೆರಿಗೆ ವಿನಾಯಿತಿ ಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಸೇಲ್ಸ್ ಟ್ಯಾಕ್ಸ್‌ನಲ್ಲಿ ನ್ಯೂನತೆ ಏನೆಂದರೆ, ಮೆಣಸಿನಕಾಯಿ, ಬೆಲ್ಲ, ಬ್ರೂಮ್‌ಸ್ಟಿಕ್ಸ್ ಮುಂತಾದ ಅನೇಕ ಪದಾರ್ಥಗಳ ಮೇಲೆ ಮಲ್ಟಿಪಾಯಿಂಟ್ ಟ್ಯಾಕ್ಸನ್ನು ಹಾಕಿದ್ದಾರೆ. ಇದನ್ನು ಒಂದೇ ಜಾಗದಲ್ಲಿ ಹಾಕದೆ, ಕೈಯಿಂದ ಕೈಗೆ ಹೋಗುತ್ತಾ ಇದ್ದಾಗ ಟ್ಯಾಕ್ಸ್ ಹಾಕಿದರೆ ಅದು ದ್ವಿಗುಣವಾಗುತ್ತದೆ. ಆಗ ಅದರಲ್ಲಿ ವರ್ತಕ ಮೋಸ ಮಾಡತಕ್ಕ ಪ್ರವೃತ್ತಿ ಜಾಸ್ತಿಯಾಗುತ್ತದೆ. ಸರ್ಕಾರಕ್ಕೆ ಬರತಕ್ಕ ಆದಾಯ ಕಡಿಮೆಯಾಗುತ್ತದೆ ಮತ್ತು ಅಧಿಕಾರಿಗಳು ಕಿರುಕುಳ ಕೊಡುವುದು ಜಾಸ್ತಿಯಾಗುತ್ತದೆ. ಆ ಕಿರುಕುಳ ತಪ್ಪಿಸಬೇಕು. ಮಾರಾಟ ತೆರಿಗೆ ಅಧಿಕಾರಿಗಳು ಪ್ರಾಮಾಣಿಕರಾಗಿ, ದಕ್ಷರಾಗಿ ಇಲ್ಲದೇ ಹೋದ ಪಕ್ಷದಲ್ಲಿ ಸರ್ಕಾರಕ್ಕೆ ಬರತಕ್ಕ ಆದಾಯ ಮುಕ್ಕಾಲು ಭಾಗ ಕಡಿಮೆಯಾಗುತ್ತದೆ. ಆದುದರಿಂದ ನಾನು ಹೇಳುವುದು, ಅಧಿಕಾರಿಗಳು ಕೆಲಸಕ್ಕೆ ಸೇರಿದಾಗ ಮೊದಲು ಅವರ ಆಸ್ತಿ ಏನಿತ್ತು, ಅವರಿಗೆ ಮದುವೆ ಆಗಿದ್ದರೆ ಹೆಂಡತಿಗೆ ಆಸ್ತಿ ಎಷ್ಟಿತ್ತು, ಎಂದು ಮೊದಲು ಲೆಕ್ಕ ತೆಗೆದುಕೊಳ್ಳಬೇಕು. ಬೆಂಗಳೂರು ನಗರದಲ್ಲಿ ಸೇಲ್ಸ್‌ಟ್ಯಾಕ್ಸ್ ಆಫೀಸರು, ಡೆಪ್ಯುಟಿ ಕಮೀಷನರ್, ಎ.ಸಿ.ಟಿ.ಓ. ಅವರುಗಳು ಕಟ್ಟಿದ ಬಂಗಲೆಗಳನ್ನು ನಾವೂ ನೀವೂ ಕಟ್ಟುವುದಕ್ಕೆ ಆಗುವುದಿಲ್ಲ. ಅವರಿಗೆ ದುಡ್ಡು ಎಲ್ಲಿಂದ ಬಂತು? ಅವರು ಸರ್ಕಾರಕ್ಕೆ ನ್ಯಾಯವಾಗಿ ತೆರಿಗೆ ಕೊಟ್ಟು ಹಣ ಸಂಪಾದನೆ ಮಾಡಿದ್ದಾರೆಯೇ ? ಬಡ ಜನತೆಯ ಶೋಷಣೆಯನ್ನು ಮಾಡುವ ಅಧಿಕಾರಿಗಳನ್ನು ಇನ್ನೂ ನಮ್ಮ ಸರ್ಕಾರದಲ್ಲಿ ಇಟ್ಟುಕೊಳ್ಳುವುದಾದರೆ, ಈ ರಾಜ್ಯ ಆಳುವುದಕ್ಕೆ ಆಗುತ್ತದೆಯೇ ಎಂದು ಆಲೋಚನೆ ಮಾಡಿ. ಇದು ಗಂಭೀರವಾದ ಪ್ರಶ್ನೆ. ದಿನನಿತ್ಯ ಈ ಅಧಿಕಾರಿಗಳು ಒಂದು ಕಡೆ ವ್ಯಾಪಾರಸ್ಥರಿಂದ ಹಣ ತೆಗೆದುಕೊಳ್ಳುವುದು, ಇನ್ನೊಂದು ಕಡೆ ಸರ್ಕಾರದಿಂದ ಸಂಬಳ ತೆಗೆದುಕೊಂಡು ಸರ್ಕಾರಕ್ಕೆ ಮೋಸ ಮಾಡತಕ್ಕದ್ದನ್ನು ನಾವು ನೋಡುತ್ತಿದ್ದೇವೆ. ಇಂತಹ ಅಧಿಕಾರಿಗಳನ್ನು ಇಟ್ಟುಕೊಂಡು ರಾಜ್ಯಭಾರ ಮಾಡಿದರೆ ಎಷ್ಟರಮಟ್ಟಿಗೆ ಸರ್ಕಾರಕ್ಕೆ ಬರತಕ್ಕ ರೆವಿನ್ಯು ಕಡಿಮೆಯಾಗಿ, ಸರ್ಕಾರದ ಯೋಜನೆಗಳು ಕುಂಠಿತವಾಗುತ್ತವೆ ಎಂಬುದನ್ನು ಆಲೋಚನೆ ಮಾಡಬೇಕು. ಈ ಸೇಲ್ಸ್ ಟ್ಯಾಕ್ಸ್ ಬಗ್ಗೆ ಗಂಭೀರವಾಗಿ ವಿಚಾರಮಾಡಬೇಕು. ಇದು ತಾತ್ಸಾರ ಮಾಡುವ ಇಲಾಖೆಯಲ್ಲ. ಸರ್ಕಾರಕ್ಕೆ ಆಗತಕ್ಕ ಅನ್ಯಾಯವನ್ನು ಕೂಡಲೆ ತಡೆಗಟ್ಟಬೇಕು. ಅಧಿಕಾರಿಗಳು ಸಣ್ಣಪುಟ್ಟ ವರ್ತಕರಿಗೆ ಅನಾವಶ್ಯವಾಗಿ ತೊಂದರೆಗಳನ್ನು ಕೊಡುತ್ತಾ ಇದ್ದಾರೆ. ಇದರ ಬಗ್ಗೆ ಕೂಡಲೆ ಅಧಿಕಾರಿಗಳಿಗೆ ಆದೇಶ ಕೊಡಬೇಕು. 3,000, 4,000 ರೂಪಾಯಿ ವ್ಯಾಪಾರ ಮಾಡತಕ್ಕ ಸಣ್ಣಸಣ್ಣ ಅಂಗಡಿಗಳಲ್ಲಿ ತೆರಿಗೆ ಇಲ್ಲದೇ ಇರತಕ್ಕ ಪದಾರ್ಥಗಳಿರುತ್ತವೆ. ಅವರಿಗೆ ನೋಟೀಸ್ ಕೊಡುವುದು, ನೋಟೀಸ್ ಜಾರಿಮಾಡುವುದು ಜವಾನನಿಗೆ 5 ರೂಪಾಯಿ ಕೊಡುವುದು, ಇಂತಹ ಒಂದು ಪರಿಸ್ಥಿತಿ ಇರಬೇಕಾದರೆ ಯಾರು ನ್ಯಾಯ ಪಾಲಿಸುವುದಕ್ಕೆ ಸಾಧ್ಯವಾಗುತ್ತದೆ? ಸರ್ಕಾರದ ಬೊಕ್ಕಸ ತುಂಬತಕ್ಕ ವರ್ತಕ. ಯಾರು ನ್ಯಾಯದಿಂದ ತೆರಿಗಿ ಕೊಡುತ್ತಾನೋ ಅವನನ್ನು ಏತಕ್ಕೆ ಶೋಷಣೆ ಮಾಡಬೇಕು ? ಅವನಿಗೆ ಪ್ರೋತ್ಸಾಹ ಕೊಟ್ಟು ತೆರಿಗೆ ವಸೂಲು ಮಾಡತಕ್ಕ ದಕ್ಷತೆ ನಿಮ್ಮಲ್ಲಿ ಬರಬೇಕು.

ಯಾವುದೋ ಒಂದು ಕಾಲದಲ್ಲಿ ಬ್ರಿಟಿಷ್ ಪರಂಪರೆಯನ್ನು ಹಾಕಿಕೊಂಡು ಬಂದಿರತಕ್ಕ ಲಾರ್ಡ್‌ಷಿಪ್ ಪದ ಮತ್ತು ಕೆಲವು ನೇಮಕಾತಿ ವಿಚಾರವನ್ನು ಪುನರಾವರ್ತಿ ಯೋಚನೆ ಮಾಡದೇ ಹೋದರೆ ಪ್ರಜಾಪ್ರಭುತ್ವದ ಅರ್ಥ ಬಂದಿಲ್ಲ ಎಂದು ಹೇಳಬೇಕಾಗುತ್ತದೆ. ನಮಗೆ ಯಾವುದು ಒಳ್ಳೆಯದು, ಅದನ್ನು ಪರಂಪರೆಯಿಂದ ತೆಗೆದುಕೊಂಡು ಬರೋಣ. ಪಾಶ್ಚಿಮಾತ್ಯರು ಎಂದರೆ ಅವರಲ್ಲಿರತಕ್ಕ ಒಳ್ಳೆಯದನ್ನು ಪರಿಷ್ಕಾರ ಮಾಡಬಾರದು ಎಂದು ಅರ್ಥವಲ್ಲ, ಏನು ಒಂದು ಸಂಪ್ರದಾಯ ಹಾಕಿಕೊಂಡಿದ್ದಾರೆ ಎಂದು ಹೇಳಿ ಅದನ್ನು ಇವತ್ತಿಗೂ ಪಾಲನೆ ಮಾಡಬೇಕು ಎಂದು ಹೇಳುವುದು ನಮ್ಮ ರಾಷ್ಟ್ರದ ದೃಷ್ಟಿಯಿಂದ ಸರಿ ಆಗಲಾರದು ಎನ್ನುವ ಅಭಿಪ್ರಾಯ ನನ್ನದು ಆಗಿದೆ. ಇವತ್ತು ನ್ಯಾಯ ಎಂಥ ವೈಪರೀತ್ಯವಾಗಿದೆ ಎಂದರೆ, ಯಾವುದು ದೇಶದಲ್ಲಿ ನ್ಯಾಯವನ್ನು ಎತ್ತಿಹಿಡಿಯಬೇಕು, ಅದರಲ್ಲಿ ಈವೊತ್ತು ಏನು ಆಗುತ್ತಿದೆ, ಯಾರಿಗೆ ಇವತ್ತು ನ್ಯಾಯಾಂಗದ ಸವಲತ್ತು ಸಲ್ಲುತ್ತಿದೆ ನೋಡಬೇಕು. ಎಷ್ಟು ಸಮಾಜವಾದ ಮಾತನಾಡಿದರೂ ಎಷ್ಟು ದೊಡ್ಡ ದೊಡ್ಡ ಭಾಷಣಗಳನ್ನು ಬಿಗಿದರೂ ಕೂಡ, ನ್ಯಾಯಾಂಗ ಕೇವಲ ಉಳ್ಳವರ ಸ್ವತ್ತಾಗಿದೆ. ನಾನು ಒಂದು ನಿದರ್ಶನವನ್ನು ಕೊಡುತ್ತೇನೆ. ಗುಡ್ಡಳ್ಳಿಯಲ್ಲಿ ಸೋಮಾಜಿ ಯವರು ಎನ್ನುವವರು ಇದ್ದಾರೆ. ಅವರಿಗೆ 4 ಎಕರೆ ಜಮೀನು ಇದೆ. ಆ 4 ಎಕರೆ ಜಮೀನು ಪೂರಾ ಗೇಣಿ ಕೊಟ್ಟುಕೊಂಡಿದ್ದಾರೆ. ಗೇಣಿ ಕೊಟ್ಟುಕೊಂಡು ಗೇಣಿ ದಾವ ಹಾಕಿ ಡಿಗ್ರಿ ಸಿಕ್ಕಿತು. ಆ ಮನುಷ್ಯನ ಕೈಯಲ್ಲಿ ಕಾಸು ಇಲ್ಲ, ಜನ ಬಲ ಇಲ್ಲ, ಊರಲ್ಲಿ ಕೇಳುವವರು ಇಲ್ಲ, ಅನಾಥ ಶಿಶು ಡಿಕ್ರಿಯನ್ನು ತೆಗೆದುಕೊಂಡು ಹೋಗಿ, ಜಪ್ತಿಮಾಡಿ ಏನಾದರೂ ಇದ್ದರೆ ತೆಗೆದುಕೊಂಡು ಬರುವ ಶಕ್ತಿಯಿಲ್ಲ. ಇವತ್ತು ಕೋರ್ಟ್ ತೀರ್ಮಾನ ಕೊಡತಕ್ಕ ಕೆಲಸ ಮಾಡುತ್ತಾರೆಯೇ ಹೊರತು ತೀರ್ಮಾನವನ್ನು ಸಾಫಲ್ಯ ಪಡಿಸುವುದಕ್ಕೆ ಅವಕಾಶವಿಲ್ಲ. ಯಾರು ಊರಿನಲ್ಲಿ ಸಾಮರ್ಥ್ಯಶಾಲಿ ಇದ್ದಾರೆ, ಯಾರಿಗೆ ಜನ ಬಲ, ಧನ ಬಲ ಇದೆ, ಅಂಥವರಿಗೆ ನ್ಯಾಯ ದೊರಕುತ್ತದೆ. ಬಡವರಿಗೆ ನ್ಯಾಯ ದೊರೆಯುವುದಿಲ್ಲ. ಶಕ್ತಿ ಇಲ್ಲದವರಿಗೆ ನ್ಯಾಯ ದೊರೆಯುವುದಿಲ್ಲ. ಇಂಥ ಪರಿಸ್ಥಿತಿಯನ್ನು ಹೋಗಲಾಡಿಸದಿದ್ದರೆ ನ್ಯಾಯಾಂಗದ ಅರ್ಥ ಏನು, ತಾವೇ ಯೋಚನೆ ಮಾಡಿ.

ಇನ್ನೊಂದು ಡೆಟರ್ಸ್ ರಿಲೀಫ್ ಆಕ್ಟ್ ತೆಗೆದುಕೊಂಡು ಬಂದಿದ್ದಾರೆ. ಹೈಕೋರ್ಟ್‌ನಲ್ಲಿ ಆ ಆಕ್ಟನ್ನು ಸ್ಕ್ವಾಷ್ ಮಾಡಿದರು. ಏನು ಆಯಿತು ? ಬೇರೆ ಏನಾದರೂ ಕಾನೂನು ತಂದಿದ್ದಾರೆಯೇ ಎಂದರೆ ಇವತ್ತಿನವರೆಗೂ ತಂದಿಲ್ಲ. ಅದರಿಂದ ಆಗಿರುವುದಾದರೂ ಏನು ? ಹಣ ಕೊಟ್ಟವನು ಕೋಡಂಗಿ, ಹಣ ತೆಗೆದುಕೊಂಡವನು ವೀರಭದ್ರ ಎನ್ನುವ ರೀತಿ ಆಗಿದೆ. ಡಿಕ್ರಿ ತೆಗೆದುಕೊಳ್ಳುವ ಹಾಗಿಲ್ಲ. ಹೈಕೋರ್ಟ್‌ನಲ್ಲಿ ಡೆಟರ್ಸ್ ರಿಲೀಫ್ ಆಕ್ಟ್ ಸ್ಕ್ವಾಷ್ ಆಗಿದೆ. ಬೇರೆ ಯಾವ ಕಾನೂನು ಬಂದಿಲ್ಲ. ಇಂಥ ತ್ರಿಶಂಕು ಸ್ವರ್ಗವನ್ನು ನಾವು ಹೋಗಲಾಡಿಸದೇ ಹೋದರೆ ಜನಕ್ಕೆ ನ್ಯಾಯ ಏನು ಸಿಗಬೇಕೋ ಅದು ಸಿಗುವುದಿಲ್ಲ ಎನ್ನುವ ಮಾತನ್ನು ತಮ್ಮ ಗಮನದಲ್ಲಿ ಇಡಬಯಸುತ್ತೇನೆ.

ಇನ್ನೊಂದು ನ್ಯೂನತೆ ಇದೆ, ಹೇಳುತ್ತೇನೆ. ಗೇಣಿ ದಾವ 1965–66ನೇ ವರ್ಷದಲ್ಲಿ ಹಾಕಿದರು. ಆ ವರ್ಷದ ಬೆಲೆ ನಿರ್ಧಾರ ಆಗಿಲ್ಲ ಎನ್ನುವ ಕಾರಣಕ್ಕಾಗಿ ಹೈಕೋರ್ಟ್‌ನಲ್ಲಿ ಕೆಲವು ನ್ಯಾಯಾಧೀಶರು ವರ್ಷದ ಗೇಣಿ ಬಾಕಿ ದಾವವನ್ನು ಜಾರಿಗೆ ಕೊಡುವುದಕ್ಕೆ ಆಗುವುದಿಲ್ಲ ಎಂದು ತೀರ್ಪನ್ನು ಕೊಟ್ಟರು. ಇದರಿಂದ ಏನು ಆಯಿತು ? ಪ್ರತಿಯೊಂದು ದಾವಾ ಕೂಡ ಮೂಲೆಗೆ ಬಿದ್ದಿದೆ. ಅದು ಯಾರ ತಪ್ಪು ? ಯಾರ ತಪ್ಪಿಗಾಗಿ ಯಾರಿಗೆ ಶಿಕ್ಷೆ ? ಯಾರೋ ಒಬ್ಬ ತಹಶೀಲ್ದಾರ್ ತಾಲ್ಲೂಕು ಮಟ್ಟದಲ್ಲಿ ನಿರ್ಣಯ ಮಾಡದೇ ಇರುವ ತಪ್ಪಿಗಾಗಿ ಇವತ್ತು ಬರೀ ಗೇಣಿಯನ್ನೇ ನಂಬಿಕೊಂಡು ಜೀವನ ಮಾಡತಕ್ಕ ವರ್ಗ ಏನು ಇದೆ; ಆ ವರ್ಗಕ್ಕೆ ಹೊಟ್ಟೆಯ ಮೇಲೆ ನೀರಿನ ಬಟ್ಟೆ ಹಾಕಿಕೊಳ್ಳತಕ್ಕಂಥ ಪರಿಸ್ಥಿತಿ ಬಂದರೆ, ಎಷ್ಟು ಜನರ ಶಾಪ ತಟ್ಟುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ನ್ಯಾಯವನ್ನು ಎಲ್ಲರಿಗೂ ದೊರಕಿಸಿ

ಕೊಡಬೇಕು, ಪ್ರಜಾಪ್ರಭುತ್ವದಲ್ಲಿ ನ್ಯಾಯ ದೊರಕಿಸುವುದಕ್ಕೆ ಸಹ ಹಿಮ್ಮೆಟ್ಟಿದರೆ, ನಿಮ್ಮನ್ನು ಜನ ಶಪಿಸದೇ ಇರಲಾರರು ಎಂಬುದನ್ನು ನೀವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ನಾನು ಪ್ರಾತಿನಿಧ್ಯದ ಬಗ್ಗೆ ಮಾತನಾಡಬೇಕಾಗುತ್ತದೆ. ಕಾಗೋಡು ತಿಮ್ಮಪ್ಪನವರು ಹೇಳಿದರು, ಇವತ್ತು ನಾವು ಏನು ಅಪಾಯಿಂಟ್‌ಮೆಂಟ್ಸ್ ಮಾತನಾಡುತ್ತೇವೆ, ಪಬ್ಲಿಕ್ ಪ್ರಾಸಿಕ್ಯೂಟರ್ ಆಗಲೀ, ಅಥವಾ ಗವರ್ನಮೆಂಟ್ ಪ್ಲೀಡರ್ಸ್ ಆಗಲೀ ಅಥವಾ ಮ್ಯಾಜಿಸ್ಟ್ರೇಟ್ ಅಪಾಯಿಂಟ್‌ಮೆಂಟ್ಸ್ ಆಗಲೀ ಅಥವಾ ಡಿಸ್ಟ್ರಿಕ್ಟ್ ಜಡ್ಜಸ್ ಆಗಲೀ, ಯಾವುದೇ ಅಪಾಯಿಂಟ್ ಮೆಂಟ್ಸ್ ಆಗಲೀ, ಆತನ ಯೋಗ್ಯತೆಯ ಆಧಾರದ ಮೇಲೆ ಎಷ್ಟು ವರ್ಷ ಕಾನೂನಿನಲ್ಲಿ ಕುಸ್ತಿ ಆಡಿದ್ದಾನೆ ಎನ್ನುವ ಆಧಾರದ ಮೇಲೆ ಅವನನ್ನು ಅಪಾಯಿಂಟ್‌ಮೆಂಟ್ಸನ್ನು ಮಾಡುತ್ತೇವೆಯೋ ಅಥವಾ ಇನ್ನು ಯಾವುದಾದರೂ ಅನುಬಂಧಕ್ಕೆ ಕಟ್ಟುಬಿದ್ದು ಹುದ್ದೆಗಳಿಗೆ ನೇಮಕಾತಿಯನ್ನು ಮಾಡುತ್ತೇವೆಯೋ ಎನ್ನುವುದನ್ನು ಯೋಚನೆ ಮಾಡಿದರೆ, ಬಹುತೇಕ ಯಾವುದೋ ಒಂದು ಅನುಕಂಪಕ್ಕೆ, ಯಾವುದೋ ಒಂದು ವಾತ್ಸಲ್ಯಕ್ಕೆ ಕಟ್ಟುಬಿದ್ದು ಆ ಹುದ್ದೆಗಳಿಗೆ ನೇಮಕ ಮಾಡು ವುದು ಜಾಸ್ತಿ ಎಂದು ನನಗೆ ಅನ್ನಿಸುತ್ತದೆ. ಆದರಿಂದ ಆಗತಕ್ಕ ಕಷ್ಟಗಳನ್ನು ತಾವು ಯೋಚನೆ ಮಾಡಬೇಕು. ಪಬ್ಲಿಕ್ ಪ್ರಾಸಿಕ್ಯೂಟರ್ ಅಪಾಯಿಂಟ್‌ಮೆಂಟ್ ಮಾಡುತ್ತಾರೆ. ಯಾವುದಾದರೂ ಜಟಿಲವಾದ ಕ್ರಿಮಿನಲ್ ಮೊಕದ್ದಮೆ ಕೋರ್ಟ್ ಮುಂದೆ ಬಂದಾಗ ನಿಮಗೆ ನೇಮಕ ಮಾಡಿರತಕ್ಕ ವ್ಯಕ್ತಿ ಸಾಕಾಗುವುದಿಲ್ಲ ಎಂದು ಹೇಳಿ ಬೆಂಗಳೂರಿನಿಂದ ದೊಡ್ಡ ವಕೀಲರನ್ನು ದಿನಕ್ಕೆ 500 ರೂಪಾಯಿ ಕೊಟ್ಟು ಮತ್ತೆ 5–10 ಸಾವಿರ ರೂಪಾಯಿ ಫೀಜ್ ಕೊಟ್ಟು ಕೇಸ್ ನಡೆಸುವುದಕ್ಕೆ ಕಳುಹಿಸುತ್ತೀರಿ. ಇಂಥ ವೈಪರೀತ್ಯ ಯಾವ ಕಾರಣಕ್ಕಾಗಿ ? ಯೋಗ್ಯತೆ ಇಲ್ಲದೇ ಇರುವವರನ್ನು ಅಪಾಯಿಂಟ್ ಮಾಡಬಾರದು. 3 ತಿಂಗಳು ಜೈಲಿಗೆ ಹೋದವರಿಗೆ ಪೆನ್‌ಷನ್ ಕೊಡಬೇಕು ಎಂದು ಹೇಳುವರೀತಿ, ಇದು ಪೊಲಿಟಿಕಲ್ ಪೆನ್‌ಷನ್ ಅಲ್ಲಿ ದೇಶದ ಹಿತವನ್ನು ನ್ಯಾಯವನ್ನು ಎತ್ತಿ ಹಿಡಿಯತಕ್ಕಂಥ ಸ್ಥಾನದಲ್ಲಿ ಯೋಗ್ಯತೆಗೆ ಪ್ರಾಧಾನ್ಯತೆ ಕೊಡದೇ ಹೋದರೆ ಸರ್ಕಾರಕ್ಕೆ ಲುಕ್ಸಾನು. ಜನತೆಗೆ ಅನ್ಯಾಯ ಎನ್ನುವುದನ್ನು ನಾವು ಗಮನಿಸಬೇಕಾಗುತ್ತದೆ ಡಿಸ್ಟ್ರಿಕ್ಟ್ ಜಡ್ಜ್‌ಸ್ ಅಪಾಯಿಂಟ್‌ಮೆಂಟ್‌ನಲ್ಲಿ ಕೂಡ ಅಷ್ಟೇ ಹಿಂದುಳಿದ ವರ್ಗವನ್ನು ನಾವು ಮುಂದೆ ತರಬೇಕು ಎನ್ನುವ ನೀತಿಗೆ ಮೊಟ್ಟಮೊದಲನೆಯದಾಗಿ ನಾನು ತುಂಬಾ ಅನುಕಂಪದಿಂದ ಬೆಂಬಲ ಕೊಡತಕ್ಕವನು. ಆದರೆ ಇಲ್ಲಿ ಯೋಗ್ಯತೆಗೆ ಪ್ರಾಧಾನ್ಯತೆ ಕೊಡಬೇಕಾಗುತ್ತದೆ. ನ್ಯಾಯಾಂಗದಲ್ಲಿ ಅವನವನ ಯೋಗ್ಯತೆಗೆ ತಕ್ಕಂತೆ ಅಪಾಯಿಂಟ್ ಮೆಂಟ್ ಕೊಡದೇ ಹೋದರೆ ದೇಶಕ್ಕೆ ಆಗತಕ್ಕ ಅನ್ಯಾಯ ವಿವರಿಸುವುದಕ್ಕೆ ಆಗುವುದಿಲ್ಲ. ಯಾರಿಗೂ ಆ ನಷ್ಟವನ್ನು ತುಂಬಿಸುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ತಾವು ಗಮನಿಸ ಬೇಕಾಗುತ್ತದೆ. ಇನ್ನು ತಾವು ಲ್ಯಾಂಡ್ ಗ್ರಾಂಟ್ ಕಮಿಟಿಯೊಳಗೆ, ನಾವು ಸಾಗುವಳಿ ಚೀಟಿ ಕೊಡುತ್ತೇವೆ. ಸಾಗುವಳಿ ಚೀಟಿಯಲ್ಲಿ ಭೂಮಿಯನ್ನು ಪರಭಾರೆ ಮಾಡಬಾರದೆಂದು ಒಂದು ಕ್ಲಾಜ್ ಹಾಕುತ್ತಾರೆ. ಅದನ್ನು ಸಾವಿರ ಸಲ ಈ ಸದನದಲ್ಲಿ ಹೇಳಿರಬಹುದು. ಈ ಕ್ಲಾಸ್ ಹಾಕುವುದರ ಉದ್ದೇಶ ಏನು ಎಂದರೆ, ಯಾರೋ ಒಬ್ಬ ಹರಿಜನನಿಗೆ 5 ಎಕರೆ ಜಮೀನು ಕೊಟ್ಟರೆ ಊರಿನಲ್ಲಿದ್ದಂಥ ಪ್ರಬಲರು ಅದನ್ನು ಕಬಳಿಸಿಕೊಂಡಾರು, ಅದನ್ನು ವ್ಯಾಪಾರಮಾಡಿ ಕೊಂಡು ಹೋದಾರು, ಅದು ಇನ್ನೊಬ್ಬನ ಸ್ವಂತ ಸ್ವತ್ತು ಆಗುತ್ತದೆ, ಅದು ಆಗಕೂಡದು. ಎನ್ನುವುದು. But according to section 10 of the Transfer of Property Act, absolute prohibition is void.

ಈ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಕ್ಲಾಸ್ 10 ಎಲ್ಲಿಯವರಿಗೆ ಅಮೆಂಡ್ ಆಗು ವುದಿಲ್ಲವೋ ಅಲ್ಲಿಯವರೆಗೆ ಅಂಥ ಪ್ರೊಹಿಬಿಷನ್ ನಾವು ಹಾಕುವುದಕ್ಕೆ ಬರುವುದಿಲ್ಲ. ಇದನ್ನು ನ್ಯಾಯಾಂಗ ಇಲಾಖೆಯವರು ಯೋಚನೆ ಮಾಡಬೇಡವೇ ಎಂದು ತಮ್ಮ ಮುಂದೆ ಕೇಳಲಿಕ್ಕೆ ಬಯಸುತ್ತೇನೆ.

ಇನ್ನೊಂದು ನ್ಯೂನತೆ ಹೇಳುತ್ತೇನೆ. ಈಗ ಸಬ್ ಇನ್ಸ್‌ಪೆಕ್ಟರ್ ಇಂಥ ಕಡೆ ಇಂಥ ಘಟನೆ ನಡೆದಿದೆ ಎಂದು ಎಫ್. ಐ. ಆರ್ ಕೋರ್ಟಿಗೆ ಕೊಡುತ್ತಾನೆ. ಒಬ್ಬನ ಮೇಲೆ 1970ನೇ ಇಸವಿಯಲ್ಲಿ ರಿಪೋರ್ಟ್ ಕೊಟ್ಟರೆ ಚಾರ್ಜ್‌ಶೀಟನ್ನು 72 ರಲ್ಲಿ ಆದರೂ ಹಾಕಬೇಡವೇ? ತಿಂಗಳು ತಿಂಗಳು ಅವನನ್ನು ಸ್ಟೇಷನ್ನಿಗೆ ಕರೆಯುವುದು ಮತ್ತು ಪಬ್ಲಿಕ್ ಹೆರಾಸ್‌ಮೆಂಟ್ ಎಷ್ಟು ಆಗುತ್ತದೆ ? ಅವನು ರುಜು ಹಾಕಬೇಕು, ಸಲಾಮು ಹೊಡೆಯಬೇಕು. ಎಫ್.ಐ.ಆರ್. ಕೊಟ್ಟ ಮೇಲೆ ಚಾರ್ಜ್‌ಷೀಟ್ ಫೈಲ್ ಮಾಡಲು ಯಾತಕ್ಕೆ ಕಾಲ ಮಿತಿಯನ್ನು ಹಾಕಬಾರದು ? 6 ತಿಂಗಳು ಅಥವಾ ಒಂದು ವರ್ಷ ಮಿತಿಯನ್ನು ಹಾಕಿ. ಆದರಿಂದ ಅನೇಕ ಸಾರ್ವಜನಿಕರಿಗೆ ಕಷ್ಟಕಾರ್ಪಣ್ಯ ತಪ್ಪಿಸುವುದಕ್ಕೆ ಅವಕಾಶವಿದೆ.

ಎರಡನೆಯದಾಗಿ ಹೇಳುವುದು ಏನೆಂದರೆ ವ್ಯವಸಾಯದ ಉಪಕರಣಗಳ ಮೇಲೆ ತೆರಿಗೆಗಳನ್ನು ತೆಗೆಯತಕ್ಕಂಥಾದ್ದು ಮತ್ತು ಆಹಾರ ಪದಾರ್ಥಗಳ ಮೇಲೆ ತೆರಿಗೆಯನ್ನು ತೆಗೆಯತಕ್ಕಂಥಾದ್ದಕ್ಕೆ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಸ್ಟೇಟ್ ಲಾಟರಿ ಸಂಬಂಧಪಟ್ಟ ವಿಷಯದಲ್ಲಿ ಹೇಳುವುದಾದರೆ 1971–72 ನೇ ಇಸವಿಯಲ್ಲಿ ಇದರಿಂದ 238 ಲಕ್ಷ ರೂಪಾಯಿ ಇನ್‌ಕಂ ಬಂದಿದೆ ಎಂದು ತೋರಿಸಿದ್ದೀರಿ, ಇವಾಗ 160 ಲಕ್ಷ ರೂಪಾಯಿ ಇನ್‌ಕಂ ಬಂದಿದೆ ಎಂದು ತೋರಿಸಿದ್ದೀರಿ. ಈ ಲಾಟರಿಯಲ್ಲಿ ಈವರ್ಷ ಆದಾಯ ಕಡಿಮೆ ಬರುವುದಕ್ಕೆ ಕಾರಣ ಏನು ? ಇದರಿಂದ ಏನು ಕಾಣಿಸುತ್ತಾ ಇದೆ ಎಂದರೆ ಒಂದು ಕಡೆ ಸಮಾತಾವಾದದ ಸಮಾಜವಾದದಲ್ಲಿ ಯೂನಿಟಿ ಇರಬೇಕು ಮತ್ತು ಭೇದಭಾವ ಇರಕೂಡದು ಎಂದು ಹೇಳುತ್ತೀರಿ. ಆದರೆ ಒಂದೇ ಸಾರಿ ಒಬ್ಬನನ್ನು ಲಕ್ಷಾಧೀಶ್ವರರನ್ನಾಗಿ ಮಾಡಿಬಿಡುತ್ತೀರಿ. ಆದುದರಿಂದ ಇದಕ್ಕೆ ನನ್ನ ಅಭಿಪ್ರಾಯ ಏನೆಂದರೆ ಇದಕ್ಕೆ ಇನ್ನೂ ಹೆಚ್ಚು ಆಕರ್ಷಕವಾದ ಬಹುಮಾನ ಇಡಬೇಕು ಎಂದು ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಅದು ಯಾವುದೆಂದರೆ ಟ್ರೆಜರಿಗೆ ಸಂಬಂಧಪಟ್ಟದ್ದು. ಈಗ ತಾಲ್ಲೂಕು ಆಫೀಸಿನಲ್ಲಿರುವ ಟ್ರೆಜರಿ ಆಫೀಸರು ಏನು ಮಾಡುತ್ತಾರೆ ಎಂದು ಒಬ್ಬ ಪೆನ್‌ಷನ್‌ದಾರ ಸಂಬಳ ತೆಗೆದುಕೊಳುವುದಕ್ಕೆ. ಹೋದರೆ ಅವನಿಂದ ಎರಡು ರೂಪಾಯಿ ತೆಗೆದುಕೊಳ್ಳುತ್ತಾನೆ. ದಯವಿಟ್ಟು ಅಂಥಾವರನ್ನು ಕೂಡಲೇ ತೆಗೆದು ಹಾಕಿ. ಈವಾಗ ಪೊಲಿಟಿಕಲ್ ಸಫರರ್ಸ್‌ಗೆ ಯಾವರೀತಿಯಾಗಿ ಒಂದು ವ್ಯವಸ್ಥೆ ಮಾಡಿದ್ದೀರೋ ಅದೇರೀತಿ ಇವರಿಗೂ ಮನಿಆರ್ಡರ್ ಮೂಲಕ ಪೆನ್‌ಷನ್ ಮೊಬಲಗನ್ನು ಕಳುಹಿಸುವಂತೆ ಏರ್ಪಾಡು ಮಾಡಿ. ಏತಕ್ಕೆಂದರೆ ಪಬ್ಲಿಕ್‌ನಲ್ಲಿ ಆ ಮುದುಕರು ತಾಲ್ಲೂಕು ಆಫೀಸಿಗೆ ಹೋಗಿ 3–4 ಗಂಟೆಗಳಕಾಲ ಕಾದು ತುಂಬಾ ವ್ಯವಸ್ಥೆಗೊಂಡು ಅವರ ಪೆನ್‌ಷನ್ ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ ಇದನ್ನು ತಪ್ಪಿಸಿ ಎಂದು ಹೇಳುತ್ತೇನೆ.

ಇನ್ನು ನ್ಯಾಷನಲ್ ಸ್ಮಾಲ್ ಸೇವಿಂಗ್ಸ್ ಏನು ಇದೆ ಈ ವಿಚಾರವಾಗಿ ಹೇಳುವುದಾದರೆ ಇದನ್ನು ವಸೂಲ್ಮಾಡಬೇಕಾದರೆ ಬರೀ ಸರ್ಕಾರಿ ಆಫೀಸುಗಳಿಂದ ವಸೂಲ್ಮಾಡುವುದು ಮತ್ತು ಮುಜರಾಯಿ ಮತ್ತು ಮುನಿಸಿಪಾಲಿಟಿಗಳಿಂದ ಹಣ ವಸೂಲ್ಮಾಡತಕ್ಕಂಥಾದ್ದು ಮಾಡುತ್ತಾರೇ ವಿನಾ ಆ ಬಗ್ಗೆ ಪಬ್ಲಿಕ್‌ನಲ್ಲಿ ಪ್ರಾಪಗಾಂಡ ಮಾಡಿ ಅವರನ್ನು ಈ ಸ್ಕೀಮಿನಲ್ಲಿ ಸೇರುವಂತೆ ಮಾಡಬೇಕು. ಇನ್ನೂ ಈ ಬಗ್ಗೆ ಮಾತನಾಡಲು ಬೇಕಾದಷ್ಟು ಇತ್ತು ಆದರೆ ಹೆಚ್ಚು ಕಾಲಾವಕಾಶ ಇಲ್ಲದೆ ಇನ್ನೊಂದು ಮಾತನ್ನು ಹೇಳಿಬಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಕೊನೆಯದಾಗಿ ಪ್ರಾಸಿಕ್ಯುಟರ್ಸ್ ಎಂತ ತಾವು ನೇಮಕ ಮಾಡುತ್ತೀರಿ. ಅವರು ಕೇಸನ್ನು ಸರಿಯಾಗಿ ಡೀಲ್ ಮಾಡುವುದಿಲ್ಲ. ಉದಾಹರಣೆಗೆ ತಿಪಟೂರಿನ ಒಬ್ಬ ಪ್ರಾಸಿಕ್ಯೂಟ್ ಇನ್‌ಸ್ಪೆಕ್ಟರನ್ನು ನೇಮಕ ಮಾಡಿದಿರಿ. ಅವರು ಕೇಸ್ ನಡೆಸಬೇಕಾದರೆ ಅವರ ಹತ್ತಿರ ದುಡ್ಡು

ಈಸುಕೊಂಡು ಆ ಕಳ್ಳರ ಕಡೆಯೇ ವಾದ ಮಾಡಿ ಅವರನ್ನು ಬಿಡಿಸಿಕೊಟ್ಟಿರುತ್ತಾರೆ. ಅಂಥಾವರನ್ನು ತೆಗೆಯಬೇಕು. ಆದುದರಿಂದ ಅವರು ಮಾಡತಕ್ಕಂಥ ಅವ್ಯವಹಾರ ಅದಕ್ಷತೆ ಬಗ್ಗೆ ಅವಕಾಶ ಕೊಡಬೇಡಿ. ಸರಿಯಾದಂಥಾವರನ್ನು ಹಾಕಿದರೆ ಎಲ್ಲರಿಗೂ ನ್ಯಾಯ ದೊರಕುತ್ತದೆ. ಆರೀತಿ ಮಾಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷಿಣಿಯವರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಸಜ್ಜನ (ಮುದ್ದೇಬಿಹಾಳ್) :—ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಸಭೆಯಲ್ಲಿ ಮಂಡಿಸಿದಂಥ ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್ ಬಗ್ಗೆ ಇರುವಂಥ ಬೇಡಿಕೆಯನ್ನು ಬೆಂಬಲಿಸಿ ಒಂದೆರಡು ಮಾತುಗಳನ್ನು ಕೆಲವು ವಿಷಯಗಳ ಮೇಲೆ ಹೇಳಲಿಚ್ಛಿಸುತ್ತೇನೆ. ನಮ್ಮ ನವತರುಣ ಕಾಯಿದೆ ಮಂತ್ರಿಗಳಾದಂಥ ಶ್ರೀಮಾನ್ ನಾಯಕರ್‌ರವರು ಈ ಒಂದು ನ್ಯಾಯಾಂಗ ಖಾತೆಯಲ್ಲಿ ಹೆಚ್ಚಿನ ಒಂದು ಮಿರುಗನ್ನು ತಂದುಕೊಟ್ಟಿರುವುದು ಬಹಳ ಸಂತೋಷದ ಸಂಗತಿ. ಈಗಾಗಲೇ ಈ ಬಗ್ಗೆ ಕೆಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಅವರನ್ನು ಮೊಟ್ಟಮೊದಲು ಅಭಿನಂದಿಸಿ ಮುಂದಿನ ಮಾತುಗಳನ್ನು ಹೇಳಲಿಚ್ಛಿಸುತ್ತೇನೆ.

ಮೊಟ್ಟಮೊದಲನೆಯದಾಗಿ ಹೇಳಬೇಕಾದರೆ ಡೈರಕ್ಟೊರೇಟ್ ಆಫ್ ಪಬ್ಲಿಕ್ ಪ್ರಾಸಿಕ್ಯೂಷನ್ ಮತ್ತು ಟ್ರಾನ್ಸ್‌ಲೇಷನ್ ಡಿಪಾರ್ಟ್‌ಮೆಂಟ್ ಎಂದು ಮಾಡಿದ್ದಾರೆ. ಇದು ಕರ್ನಾಟಕದ ಎಲ್ಲಾ ಭಾಗಗಳಿಗೂ ಸಂಬಂಧಪಟ್ಟಂತೆ ಸುಪ್ರೀಂಕೋರ್ಟ್‌ನಲ್ಲಿ ಪೆಂಡಿಂಗ್ ಇದ್ದಂಥ ಕೇಸುಗಳನ್ನು ಬಹು ವೇಗದಿಂದ ಇತ್ಯರ್ಥ ಮಾಡಲು ಒಂದು ಲಾ ಆಫೀಸನ್ನು ಡೆಲ್ಲಿಯಲ್ಲಿ ತೆಗೆಯುವ ಆಲೋಚನೆ ಮಾಡುತ್ತಿದ್ದಾರೆ ಎಂದು ನನಗೆ ಕಾಣುತ್ತದೆ. ಹೀಗೆ ಹೊಸ ಹೊಸ ಯೋಜನೆಗಳನ್ನು ಕೈಗೊಂಡಿದ್ದಾರೆ. ಇದು ಬಹಳ ಒಳ್ಳೆಯದು ಎಂದು ಈ ಬಗ್ಗೆ ನಾನು ಕೆಲವು ಸೂಚನೆಗಳನು ಕೊಡಲಿಚ್ಛಿಸುತ್ತೇನೆ.

ಕೋರ್ಟುಗಳಲ್ಲಿ ನ್ಯಾಯಾಧೀಶರ ಯೋಗ್ಯತೆ, ಅವರ ಕರ್ತವ್ಯ ದಕ್ಷತೆ, ಕಾರ್ಯ ಸಾಮರ್ಥ್ಯ, ತೀವ್ರ ನ್ಯಾಯ ನಿರ್ಣಯ ಮತ್ತು ಸೂಕ್ತ ನ್ಯಾಯದಾನ ಇವೆಲ್ಲಾ ಹೆಚ್ಚಾಗಬೇಕಾದರೆ ಅವರಿಗೆ ಹೆಚ್ಚಿನ ಸಂಬಳ ಕೊಡಬೇಕು, ಅವರಿಗೆ ವಸತಿ ಸೌಕರ್ಯವನ್ನು ಒದಗಿಸಿ ಕೊಡಬೇಕು ಮತ್ತು ಇದೇರೀತಿ ಮುನ್ಸಿಫ್ಸ್ ಮತ್ತು ಮ್ಯಾಜಿಸ್ಟ್ರೇಟರವರಿಗೂ ಕೂಡ ಸರಿಯಾದ ವ್ಯವಸ್ಥೆ ಮಾಡಿ ಕೊಡಬೇಕು. ಈಗಾಗಲೇ ಈ ಬಗ್ಗೆ ನನಗೆ ಗೊತ್ತಿದ್ದಂತೆ 4 ವರ್ಷದಿಂದಲೂ ಕೂಡ ಪತ್ರ ವ್ಯವಹಾರಗಳು ನಡೆಯುತ್ತಾ ಇದೆ ಆದರೂ ಈ ಬಗ್ಗೆ ಯಾವ ನಿರ್ಣಯವನ್ನೂ ಕೈಗೊಂಡಿಲ್ಲ, ಆದುದರಿಂದ ಕೂಡಲೇ ಈ ಬಗ್ಗೆ ಒಂದು ನಿರ್ಣಯವನ್ನು ಕೈಗೊಂಡು ಅವರಿಗೆ ಸಂಬಳವನ್ನು ಜಾಸ್ತಿ ಒದಗಿಸಿ ಕೊಡಬೇಕೆಂದು ಹೇಳುತ್ತೇನೆ.

ಇನ್ನು ನ್ಯಾಯಾಧೀಶರನ್ನು ಬಡ್ತಿ ಮಾಡುವ ಕಾಲಕ್ಕೆ ಮಹಾರಾಷ್ಟ್ರದಲ್ಲಿ ಇರುವ ಪದ್ಧತಿಯಂತೆ ಮಾಡಬೇಕು. ಮುನ್ಸಿಫ್ ಮತ್ತು ಮ್ಯಾಜಿಸ್ಟ್ರೇಟ್‌ರನ್ನು ನೇಮಕ ಮಾಡಬೇಕಾದರೆ ಅವರ ಗುಣಮಟ್ಟವನ್ನು ತಿಳಿದುಕೊಳ್ಳುವುದಕ್ಕೆ ಹೈಕೋರ್ಟ್ ನ್ಯಾಯಾಧೀಶರನ್ನೊಳಗೊಂಡಂತೆ ಬೊಂಬಾಯಿ ಕೋರ್ಟಿನಲ್ಲಿರುವ ಹಾಗೆ ಅಂಥಾ ಒಂದು ಕಮಿಟಿ ಮಾಡಬೇಕು. ಆ ಕಮಿಟಿ ಇದನ್ನು ಪರಿಶೀಲಿಸಿ ಅವರು ಮಾಡಿದಂಥ ಶಿಫಾರಸುಗಳ ಮೇಲೆ ನ್ಯಾಯಾಧೀಶರನ್ನು ಬಡ್ತಿ ಮಾಡಬೇಕು. ಇದನ್ನು ಹೈಕೋರ್ಟಿನವರು ಮಾಡುವಂತ ಆದೇಶ ಕೊಡಬೇಕು. ಈ ಒಂದು ನ್ಯಾಯಖಾತೆಯಲ್ಲಿ ಎಫಿಷಿಯೆನ್ಸಿ, ಇಂಟೆಗ್ರಿಟಿ ಮತ್ತು ಕ್ಯಾರೆಕ್ಟರ್ ಇವಕ್ಕೆ ಮಹತ್ವ ಇದೆ, ಕೇವಲ ಜಾಣತನಕ್ಕೆ ಮಹತ್ವ ಇಲ್ಲ. ಆದುದರಿಂದ ಈ ಬಗ್ಗೆ ಒಂದು ಕಮಿಟಿ ಮಾಡಿ ಜುಡಿಷಿಯಲ್‌ನ ಒಂದು ಪ್ರಾಮಾಣಿಕತೆ ಮತ್ತು ಅದರ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಗಮನಕೊಡಬೇಕೆಂದು ಹೇಳುತ್ತೇನೆ. ಈ ಮಾತನ್ನು ನನ್ನ ಅನುಭವದಿಂದ ಹೇಳುತ್ತೇನೆ.

ಇನ್ನು ನ್ಯಾಯಾಧೀಶರನ್ನು ಅಂದರೆ ಮುನ್ಸಿಫ್ ಮತ್ತು ಮ್ಯಾಜಿಸ್ಟ್ರೇಟರನ್ನು ನೇಮಿಸ ಬೇಕಾದರೆ ಕಾಂಪಿಟೇಟೀವ್ ಎಕ್ಸಾಮಿನೇಷನ್ ಇಟ್ಟಿದ್ದೀರಿ. ಇದು ಅಷ್ಟು ಒಳ್ಳೆಯದಲ್ಲ ಎಂದು ನನ್ನ ಅಭಿಪ್ರಾಯ ಮತ್ತು ಅವರಿಂದ ಅಷ್ಟು ಒಳ್ಳೆಯ ಪ್ರತಿಫಲ ಸಿಕ್ಕುವುದಿಲ್ಲ ಎಂದು ನನ್ನ ಅನುಭವದಿಂದ ಹೇಳುತ್ತೇನೆ. ಮಹಾರಾಷ್ಟ್ರದಲ್ಲಿ ನೇಮಕ ಮಾಡಬೇಕಾದರೆ ಅವರ ವಕೀಲಿ ಅನುಭವ ಇಲ್ಲದೆ ಅವರ ಶೀಲ, ಸಚ್ಚಾರಿತ್ರ್ಯ, ಅವರ ದಕ್ಷತೆ ಅದನ್ನೆಲ್ಲಾ ನೋಡಿ ನೇಮಕ ಮಾಡುವಂಥ ಪದ್ಧತಿ ಎಷ್ಟೋ ಶತಮಾನಗಳ ಕಾಲದಿಂದಲೂ ಇದೆ. ಅದೇರೀತಿ ಇಲ್ಲೂ ಮಾಡಬೇಕು ಎಂದು ನಾನು ಸೂಚಿಸುತ್ತೇನೆ. ಹೈಕೋರ್ಟ್ ನ್ಯಾಯಾಧೀಶರನ್ನು ನೇಮಿಸುವ ಕಾಲದಲ್ಲಿ ಮತ್ತು ಡಿಸ್ಟ್ರಿಕ್ಟ್ ಜಡ್ಜ್‌ಗಳನ್ನು ನೇಮಕ ಮಾಡುವ ಕಾಲಕ್ಕೆ ಸರ್ಕಾರ ಯಾವರೀತಿ ಅನುಸರಿಸುತ್ತಾ ಇದೆ ಎನ್ನುವುದು ತಮಗೆಲ್ಲಾ ಗೊತ್ತಿದೆ. ಆದರೆ ಕೇವಲ ಮುನ್ಸಿಫ್ ಮತ್ತು ಮ್ಯಾಜಿಸ್ಟ್ರೇಟರಿಗೆ ಮಾತ್ರ ಪರೀಕ್ಷೆ ಬಂದಿದ್ದು ಏತಕ್ಕೆ ? ಈ ಪರೀಕ್ಷೆಯಿಂದ ಅಷ್ಟು ಒಳ್ಳೆಯ ಪ್ರತಿಫಲ ಸಿಕ್ಕುವುದಿಲ್ಲ ಎಂದು ನನ್ನ ಅನುಭವ ಏತಕ್ಕೆಂದರೆ ಈಗಾಗಲೇ ಎರಡು ಪದವಿಗಳನ್ನು ಪಡೆದುಕೊಂಡು ಇರುತ್ತಾರೆ. ಒಂದು ಡಿಗ್ರಿ ಪರೀಕ್ಷೆ ಅದು ಆರ್ಟ್ಸ್ ಆಗಲಿ, ಕಾಮರ್ಸ್ ಆಗಲಿ, ಸೈನ್ಸ್ ಆಗಲಿ ಪಾಸ್ ಮಾಡಿಕೊಂಡು ನಂತರ ಎಲ್. ಎಲ್. ಬಿ. ಪಾಸು ಮಾಡಿಕೊಂಡಿರುತ್ತಾರೆ. ಈ ಎರಡು ಡಿಗ್ರಿಗಳನ್ನೂ ಪಡೆದುಕೊಂಡು ಮತ್ತೆ ಮೂರನೇ ಪರೀಕ್ಷೆಗೆ ಕೂತಮೇಲಾದರೂ ವಕೀಲಿ ಮಾಡುವುದಕ್ಕೆ, ನ್ಯಾಯದಾನ ಮಾಡುವುದಕ್ಕೆ ಬರುತ್ತದೆಯೆ ? ಇದು ನನ್ನ ಅನುಭವದಲ್ಲಿ ಕಂಡಿಲ್ಲ. ಯಾವ ಕೋರ್ಟ್‌ನಲ್ಲೇ ಆಗಲಿ ವಕೀಲರನ್ನು ನೇಮಕ ಮಾಡಬೇಕಾದರೆ ಅವರ ಅನುಭವದ ಮೇಲೆ, ಅವರ ಚಾರಿತ್ರ್ಯದ ಮೇಲೆ ನೇಮಕವಾಗಬೇಕು ಎಂದು ಹೇಳುತ್ತೇನೆ. ಇಂಥಾ ವ್ಯವಸ್ಥೆಯನ್ನು ಇದುವರೆಗೆ ಮಾಡಿಲ್ಲ. ಅಂಥಾ ಒಂದು ಸರಿಯಾದ ವ್ಯವಸ್ಥೆಯನ್ನು ಮಾಡುವಂತೆ ಸರ್ಕಾರ ಮನಸ್ಸು ಮಾಡಬೇಕು ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಅನನುಭವಿಕ ನ್ಯಾಯಾಧೀಶರು, ಏಕ್‌ದಂ ಕಾಗದದ ಪರೀಕ್ಷೆ ಮೇಲೆ ನೇಮಕವಾದ ನ್ಯಾಯಾಧೀಶ ಮನುಷ್ಯರಿಗೆ ನ್ಯಾಯ ತಿಳಿದುಕೊಳ್ಳುವುದಕ್ಕೇ ಒಂದು ವರ್ಷ ಬೇಕಾಗುತ್ತದೆ, ನಿರ್ಣಯ ಕೊಡುವುದಕ್ಕೆ ಎರಡು ವರ್ಷ ಬೇಕಾಗುತ್ತದೆ. ಹೀಗೆ ವೇಳೆ ಹೋಗುತ್ತದೆ. ಬಹಳ ಗಡಿಬಿಡಿ ಮಾಡಿದರೆ ಎಲ್ಲ ನ್ಯಾಯಗಳೂ ಅರ್ಧಮರ್ಧವಾಗಿ ತೊಂದರೆಯಾಗುತ್ತದೆ. ಒಳ್ಳೆಯ ಅನುಭವಿಕ ವಕೀಲರನ್ನು, ಅರ್ಹ ವಕೀಲರನ್ನು ಜಡ್ಜಿಗಳ ಸಿಫಾರಸಿನ ಮೇಲೆ ನೇಮಕ ಮಾಡಿದರೆ ಲಘುವಾಗಿ, ಬೇಗ ಒಳ್ಳೆಯ ರೀತಿಯಿಂದ ನ್ಯಾಯಗಳು ಆಗುತ್ತವೆ. ಎನ್ನುವ ಮಾತನ್ನು ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ನ್ಯಾಯ ಖಾತೆಯಲ್ಲಿ ಮುಖ್ಯವಾಗಿ ಬೇಕಾದ್ದು ಅನುಭವ, ಶೀಲ, ದಕ್ಷತೆ ಮತ್ತು ಸಚ್ಚಾರಿತ್ರ್ಯ. ಇದನ್ನು ಒಳಗೊಂಡಂಥ ಅನುಭವಿಕ ವಕೀಲರನ್ನು ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಲಾ ಕೋರ್ಸ್ ಮೂರು ವರ್ಷ ಮಾಡಿದ್ದಾರೆ. ಒಬ್ಬ ವಿದ್ಯಾರ್ಥಿ ಮೂರು ವರ್ಷ ಕಲಿಯ ಬೇಕು. ನನಗೆ ಗೊತ್ತಿದ್ದ ಹಾಗೆ ಮೆಟ್ರಿಕ್ ಪಾಸ್ ಮಾಡಿದವ ಹೈಕೋರ್ಟ್ ಪ್ಲೀಡರ್ ಕೆಲಸ ಮಾಡುತ್ತಾನೆ, ಇಂಟರ್ ಮಾಡಿಕೊಂಡು ಎಲ್.ಎಲ್.ಬಿ. ಅಭ್ಯಾಸ ಮಾಡಿ ವಕೀಲ ಮಾಡುತ್ತಾನೆ. ಈಗ ಎಂ.ಎ., ಎಲ್.ಎಲ್.ಬಿ. ಮಾಡಿದ ವಕೀಲರಿದ್ದಾರೆ. ಬಿ.ಎ., ಬಿ.ಎಸ್ಸಿ ಮಾಡಿದ ನಂತರ ಎಲ್. ಎಲ್. ಬಿ. ಮಾಡಿ .ವಕೀಲಿ ಮಾಡುತ್ತಿದ್ದಾರೆ. ಅವರ ಅನುಭವದಿಂದ ನ್ಯಾಯ ಏನು ಎನ್ನುವುದನ್ನು ಅನುಭವದಿಂದ ಹೇಳಬಹುದು. ಈಗ ವ್ಯಾಸಂಗದ ಅವಧಿಯನ್ನು ಮೂರು ವರ್ಷ ಮಾಡಿದ್ದರಿಂದ ಹರಿಜನರಿಗೆ, ಬಡವರಿಗೆ, ಹಿಂದುಳಿದವರಿಗೆ ಅಷ್ಟು ಖರ್ಚು ಮಾಡಿ ಕಲಿಯುವುದಕ್ಕೆ ಸಾಧ್ಯವಿಲ್ಲ. ಹಿಂದೆ ಎರಡು ವರ್ಷದ ಎಲ್.ಎಲ್.ಬಿ. ಕಲಿಯತಕ್ಕ ವ್ಯವಸ್ಥೆ ಏನಿತ್ತು ಅದನ್ನೇ ಮುಂದುವರಿಸಬೇಕು. ಮೂರು ವರ್ಷದ ಅವಧಿಯನ್ನು ತೆಗೆದು ಹಾಕಬೇಕು.

ವಿದ್ಯಾರ್ಥಿಗಳು ಎಲ್‌ಎಲ್.ಬಿ. ಪಾಸ್ ಮಾಡುವ ಕಾಲಕ್ಕೆ ಪುಸ್ತಕ ಓದುವುದರ ಜೊತೆಗೆ ಕೋರ್ಟಿನ ಅನುಭವ ಮಾಡಿಕೊಳ್ಳಲು ಯಾವುದೇ ಕೋರ್ಟಿನಲ್ಲಿ ದಿನಕ್ಕೆ ಒಂದು ತಾಸು ಹೋಗಿ ಕುಳಿತು ಅಲ್ಲಿ ನಡೆಯತಕ್ಕ ವಿದ್ಯಮಾನಗಳನ್ನು ಮತ್ತು ನಡೆಯತಕ್ಕ ನಡೆನುಡಿಗಳನ್ನು, ಕೆಲಸಗಳನ್ನು ಕಲಿತುಕೊಳ್ಳತಕ್ಕ ಯೋಗ್ಯ ಕ್ರಮವನ್ನು ಏರ್ಪಾಟು ಮಾಡಬೇಕೆಂದೂ ಮುಂದೆ ಅದರಿಂದ ವಕೀಲಿ ಮಾಡುವುದಕ್ಕೆ ಅನುಭವ ಬರುತ್ತದೆಂದೂ ಹೇಳುತ್ತೇನೆ.

ಕೋರ್ಟ್ ಆಫೀಸಿನ ಒಳಗಿನ ಕೆಲಸದ ಬಗ್ಗೆ ಮಾನ್ಯ ಸದನದ ಗಮನಕ್ಕೆ ಕೆಲವು ಟಿಪ್ಪಣಿಗಳನ್ನು ಕೊಡಲು ಇಚ್ಛಿಪಡುತ್ತೇನೆ. ನ್ಯಾಯಧೀಶರಿಗೆ ಕೋರ್ಟ್ ಸ್ಟೆನೋ ಇಲ್ಲ ಇದರಿಂದ ಅವರಿಗೆ ನ್ಯಾಯ ಕೊಡಲಿಕ್ಕೆ ತಡವಾಗುತ್ತದೆ. ಎಷ್ಟೋ ಸಲ ನ್ಯಾಯಾಧೀಶರು ನ್ಯಾಯ ನಿರ್ಣಯವನ್ನು ಬಾಯಲ್ಲಿ ಹೇಳಿದಾಗ ಅದನ್ನು ಬರೆದುಕೊಳ್ಳತಕ್ಕ ಜನರು ಪ್ರತಿಯೊಬ್ಬ ನ್ಯಾಯಾಧೀಶರಿಗೂ ಕೂಡಲೇ ಒದಗುವಂತೆ ವ್ಯವಸ್ಥೆ ಮಾಡಬೇಕು. ಅಲ್ಲದೆ ಕೆಲವೊಂದು ಪ್ರದೇಶಗಳಲ್ಲಿ ಭಾಷೆಯ ಗೊಂದಲ ಬೇರೆ ಬರುತ್ತದೆ. ಒಬ್ಬನಿಗೆ ಒಂದು ಭಾಷೆ ಬಂದರೆ ಇನ್ನೊಬ್ಬನಿಗೆ ಮತ್ತೊಂದು ಭಾಷೆ ಬರುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಆಯಾ ಕಡೆಯ ಎಲ್ಲ ಭಾಷೆಗಳನ್ನೂ ಬಲ್ಲಂಥ ಒಬ್ಬ ಕಾರಕೂನ ಅಥವಾ ಅಧಿಕಾರಿಯನ್ನು ಟ್ರಾನ್ಸ್‌ಲೇಟರನ್ನು ನೇಮಕ ಮಾಡಬೇಕು. ಕನಿಷ್ಟಪಕ್ಷ ಜಿಲ್ಲಾ ಮಟ್ಟದ ಕೋರ್ಟಿನಲ್ಲಾದರೂ ಅವರನ್ನು ಇಟ್ಟರೆ ಯಾವ ಯಾವ ಕೋರ್ಟಿನಲ್ಲಿ ಕೆಲಸ ಇರುತ್ತದೆ ಅಲ್ಲಿಗೆ ಅವರನ್ನು ಕಳುಹಿಸಿಕೊಟ್ಟು ಭಾಷೆಗೆ ಸಂಬಂಧಪಟ್ಟ ವಿಚಾರವನ್ನು ಇತ್ಯರ್ಥ ಮಾಡುವಂಥ ವ್ಯವಸ್ಥೆಯಾಗಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇಲ್ಲವಾದರೆ ಮುನಸೀಪ್ ಕೋರ್ಟುಗಳಲ್ಲಿ ಟ್ರಾನ್ಸ್‌ಲೇಷನ್ ಆಗಿಲ್ಲ. ಆದಾಗಬೇಕು ಎಂದು ನ್ಯಾಯ ತೀರ್ಮಾನ ಮುಂದಕ್ಕೆ ಹೋಗಿ ಬಡವರಿಗೆ ನ್ಯಾಯ ದೊರಕುವುದಕ್ಕೆ ಬಹಳ ತ್ರಾಸವಾಗುತ್ತದೆ.

ಎಲ್ಲ ಕೇಸುಗಳಲ್ಲಿಯೂ ನ್ಯಾಯಾಲಯಕ್ಕೆ ಹೋದ ಜವಾಬುಗಳು ಪಕ್ಷಕ್ಕೆ ಅಥವಾ ಆ ಪಕ್ಷದ ವಕೀಲರಿಗೆ ಸಿಕ್ಕುವಂಥ ವ್ಯವಸ್ಥೆ ಮಾಡಬೇಕು . ಜವಾಬು ಸಿಕ್ಕಿದರೆ ಪಕ್ಷದ ವಕೀಲರು ಅಭ್ಯಾಸ ಮಾಡಿ ಖಟ್ಲೆಗಳನ್ನು ಬೇಗ ಇತ್ಯರ್ಥ ಮಾಡಲಿಕ್ಕೆ ಅನುಕೂಲವಾಗುತ್ತದೆ ಮತ್ತು ನ್ಯಾಯ ನಿರ್ಣಯ ತೀವ್ರತರವಾಗಿ ಆಗುತ್ತದೆ ಎಂದು ಹೇಳುತ್ತೇನೆ.

ದರಖಾಸ್ತು ಮಾಡಿದರೆ ಎಷ್ಟೋ ನ್ಯಾಯಾಲಯಗಳಲ್ಲಿ ಡಿಕ್ರಿ ಆಗುತ್ತದೆ. ಅದರ ಬಗ್ಗೆ ಹುಕುಂನಾಮೆ ಸಿಕ್ಕಬೇಕಾದರೆ ಹತ್ತಿಪ್ಪತ್ತು ವರ್ಷ ಬೇಕಾಗುತ್ತದೆ. ನಾನು ವಕೀಲಿ ಮಾಡುವ ಅನುಭವದಿಂದ ಹೇಳುವುದಾದರೆ ಯಾವುದಾದರೂ ಕಾರಣದಿಂದ ಅದು ಸಿಕ್ಕದೆ ಮಾಡುವುದನ್ನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ದರಖಾಸ್ತು ಹುಕುಂ ಇಂಥ ಕಾಲದೊಳಗೇ ಮುಗಿಯಬೇಕು ಎನ್ನುವ ಒಂದು ಅವಧಿಯನ್ನು ನಿರ್ಧರ ಮಾಡಬೇಕು.

ನ್ಯಾಯ ಕೆಲಸ ಮಾಡುವುದರೊಳಗೆ ಒಬ್ಬರೇ ಇರುವ ಕಡೆ ಮುನ್‌ಸೀಫರೇ ಮ್ಯಾಜಿಸ್ಟ್ರೇಟರ ಕೆಲಸವನ್ನೂ ಮಾಡಬೇಕು. ಆ ಕಾಲಕ್ಕೆ ಎರಡೂ ಕೇಸುಗಳು ನಡೆಯುವ ಕಾಲಕ್ಕೆ ಯಾವುದರಲ್ಲಿ ಅವರಿಗೆ ಇಂಟರೆಸ್ಟ್ ಇರುತ್ತದೆ ಅದನ್ನೇ ಹೆಚ್ಚಿಗೆ ಮಾಡುತ್ತ ಹೋಗಿ ಮತ್ತೊಂದು ಕೇಸನ್ನು ಹಾಕುವುದಿಲ್ಲ. ದಯವಿಟ್ಟು ಇಂಥ ಕೋರ್ಟುಗಳಲ್ಲಿ ಕ್ರಿಮಿನಲ್ ಕೇಸುಗಳು ನಡೆಯುವ ದಿನಗಳೇ ಬೇರೆ ಎಂದು ಮಾಡಬೇಕು. ಒಂದು ವಾರದಲ್ಲಿ ಮೂರು ದಿವಸ ಕ್ರಿಮಿನಲ್ ಕೇಸುಗಳು, ಎರಡು ದಿವಸ ಸಿವಿಲ್ ಕೇಸುಗಳು, ಒಂದು ದಿವಸ ದಿರಖಾಸ್ತು ಎಂದು ಮಾಡಿದರೆ ಮತ್ತು ಸರಳವಾಗಿ ಕೆಲಸ ಮಾಡಲಿಕ್ಕೆ ಅನುಕೂಲವಾಗುತ್ತದೆ. ಈ ಕೆಲಸವನ್ನು ಕೂಡ ಮಾಡುತ್ತಾರೆಂದು ನಾನು ನಂಬಿದ್ದೇನೆ.

ಅಸಿಸ್ಟೆಂಟ್ ಗವರ್ನಮೆಂಟ್ ಪ್ಲೀಡರ್‌ಗಳನ್ನು ಪ್ರತಿಯೊಂದು ಕೋರ್ಟಿಗೂ ನೇಮಕ ಮಾಡಿರುತ್ತಾರೆ. ಅವರಿಗೆ ಆಫೀಸಿನಲ್ಲಿ ಸ್ಟೆನೋ ಇರುವುದಿಲ್ಲ. ಮುನಸೀಫ್ ಕೋರ್ಟಿನಲ್ಲಾಗಲೀ, ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಾಗಲೀ ಕೆಲಸ ಮಾಡುವ ಕಾರಕೂನರಿಗೆ ಅಸಿಸ್ಟೆಂಟ್

ಪ್ಲೀಡರ್ ಕೆಲಸ ಮಾಡಲು ದಿವಸಕ್ಕೆ ಒಂದು ತಾಸು ಅಥವಾ ವಾರಕ್ಕೆ ಒಂದೆರಡು ತಾಸು ಟೈಪ್ ಮಾಡಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದರೆ ಅಸಿಸ್ಟೆಂಟ್ ಪ್ಲೀಡರ್ ಹಣೇಬರಹ ಚಲೋ ಆಗುತ್ತದೆ. ನನ್ನ ಹನ್ನೆರಡು ವರ್ಷದ ಅಸಿಸ್ಟೆಂಟ್ ಪ್ಲೀಡರ್ ಅನುಭವದಿಂದ ಹೇಳುತ್ತಿದ್ದೇನೆ.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಆಗುವುದು ಅತ್ಯವಶ್ಯವಿದೆ. ಬೆಂಗಳೂರು ಹೈಕೋರ್ಟ್‌ನಲ್ಲಿ ಇರತಕ್ಕ ಎಲ್ಲ ಖಟ್ಲೆ, ಎಲ್ಲ ಕೇಸುಗಳನ್ನೂ ಲೆಕ್ಕ ಹಾಕಿದರೆ ಉತ್ತರ ಕರ್ನಾಟಕ ದಲ್ಲಿರುವ ಖಟ್ಲೆಗಳ ಸಂಖ್ಯೆಯೇ ಜಾಸ್ತಿ ಇರುತ್ತದೆ. ಆ ಭಾಗದ ಜನರು 400 ಮೈಲಿ, 500 ಮೈಲಿ ದೂರದಿಂದ ಬೆಂಗಳೂರಿಗೆ ಬರಬೇಕಾಗಿದೆ. ಬಡವರಿಗೆ ಬರುವುದಕ್ಕೆ ಸಾಧ್ಯ ವಾಗುವುದಿಲ್ಲ, ಹೈಕೋರ್ಟಿನಲ್ಲಿ ಕೇಸು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಅವರು ಹೈಕೋರ್ಟಿನಲ್ಲಿ ಕೇಸು ದಾಖಲೆ ಮಾಡುವುದಿಲ್ಲ. ಉತ್ತರ ಕರ್ನಾಟಕದ ಕೇಸುಗಳು ಹೆಚ್ಚಾಗಿ ಇರುವುದರಿಂದ ಮತ್ತು ಆ ಭಾಗದ ಜನರಿಗೆ ಖರ್ಚು ಕಡಮೆಯಾಗುವುದರಿಂದ ಉತ್ತರ ಕರ್ನಾಟಕದ ಯಾವುದೇ ಭಾಗದಲ್ಲಿ ಹೈಕೋರ್ಟ್ ಹಾಕುವುದು ಅವಶ್ಯವಿದೆ. ಆ ಭಾಗದಿಂದ ಬಂದಂಥ ಶಾಸಕರು ಕೂಡಿಕೊಂಡು ಒಂದು ಮನವಿಯನ್ನು ಮಾನ್ಯ ಮಂತ್ರಿಗಳಿಗೆ ಸಲ್ಲಿಸಿದ್ದೇವೆ. ಅದರ ತಪಾಸಣೆ ನಡೆದಂತೆ ಇದೆ. ಮಾನ್ಯ ಕಾನೂನು ಮಂತ್ರಿವರ್ಯರಿಗೆ ನಾನು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ಒಂದು ಹೈಕೋರ್ಟ್ ಬಹು ತೀವ್ರಗತಿಯಿಂದ ಉತ್ತರ ಕರ್ನಾಟಕದ ಯಾವುದೇ ಸ್ಥಳದಲ್ಲಿ ಸ್ಥಾಪನೆಯಾಗುವಂತೆ ವ್ಯವಸ್ಥೆಯಾಗಬೇಕು ಎನ್ನುವ ಮಾತನ್ನು ಹೇಳಿ, ಮಾನ್ಯ ಅಧ್ಯಕ್ಷರು ಇಷ್ಟು ಅವಕಾಶ ಕೊಟ್ಟದ್ದಕ್ಕೆ ಅವರಿಗೆ ವಂದನೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ) :—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಹೊತ್ತಿನ ಹಣಕಾಸು ಮತ್ತು ನ್ಯಾಯಾಂಗ ಬೇಡಿಕೆ ಏನಿದೆ ಅದನ್ನು ಜನತಾ ದೃಷ್ಟಿಯಿಂದ ಪೂರ್ಣವಾಗಿ ವಿರೋಧಿಸದೇ ಗತ್ಯಂತರವಿಲ್ಲ. ಮೊಟ್ಟಮೊದಲನೆಯದಾಗಿ ಸೇಲ್ಸ್‌ಟ್ಯಾಕ್ಸ್ ಬಗ್ಗೆ ಮಾನ್ಯ ಸಚಿವರ ಗಮನವನ್ನು ಕೆಲವು ವಿಷಯಗಳನ್ನು ತಮ್ಮ ಮುಖಾಂತರ ಸೆಳೆಯಬೇಕೆಂದು ಇಚ್ಛೆ ಪಡುತ್ತೇನೆ. ಸೇಲ್ಸ್ ಟ್ಯಾಕ್ಸ್‌ನಿಂದ ಜನರಿಗೆ ಬಹಳ ಅಗಾಧವಾದ ಹಿಂಸೆಯಾಗುತ್ತಿದೆ. ನಿಮ್ಮ ಅಧಿಕಾರಿಗಳು ಜನರಿಗೆ ಯಾವ ಯಾವ ತರಹ ಹಿಂಸೆಕೊಡುತ್ತಿದ್ದಾರೆ ಎಂದು ವರ್ಣನೆ ಮಾಡುವುದಕ್ಕೆ ನಾಲ್ಕಾರು ಕವಿಗಳನ್ನು ಇಟ್ಟರೂ ಕಡಮೆಯಾಗುತ್ತದೆ, ಅವರ ಕೈಯಲ್ಲಿ ವರ್ಣನೆ ಮಾಡುವುದಕ್ಕಾಗುವುದಿಲ್ಲ. ಗೆಳೆಯರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಜವಳಿ ಅಂಗಡಿಗೆ ಹೋಗಿ ಸೀರೆ ಪ್ಯಾಕ್ ಮಾಡಿಸಿಕೊಂಡು ಬರುತ್ತಾರೆ ನಿಮ್ಮ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು.

ಈ ಸೇಲ್ಸ್‌ಟ್ಯಾಕ್ಸ್ ಅಧಿಕಾರಿಗಳು ಕುಟುಂಬ ಸಮೇತ ಅವರ ಮಕ್ಕಳು ಅವರ ತಮ್ಮನೇ ಇಲ್ಲವೇ ಅಣ್ಣನಮನೆಯವರು ಹೀಗೆ ಎಲ್ಲರನ್ನೂ ಕೂಡಿಕೊಂಡು ಪ್ರಯಾಣ ಬೆಳೆಸುತ್ತಾರೆ. ಅವರ ಏರಿಯಾದಲ್ಲಿ ಇಲ್ಲಿರುವ ಡೆಪ್ಯೂಟಿಕಮೀಷನರವರು ದೊಡ್ಡ ಸಾಹೇಬರು ಬಂದಿದ್ದಾ ರೆಂದು ಅಲ್ಲಿರುವ ವರ್ತಕರು ಇವರಿಗೆ ತಂಗುವುದಕ್ಕೆ ವ್ಯವಸ್ಥೆಮಾಡಿ ಒಳ್ಳೆಯ ಭೋಜನಕ್ಕೂ ವ್ಯವಸ್ಥೆ ಮಾಡುತ್ತಾರೆ. ಅವರ ಭೋಜನಕ್ಕಾಗಿ ಹೊಸದಾಗಿ ಸ್ಟೇನ್‌ಲೆಸ್ ಸ್ಟೀಲುಪಾತ್ರೆಗಳು ಇತ್ಯಾದಿ ಸಾಮಾನುಗಳನ್ನು ತಂದು ಅವರಿಗೆ ಕೊಡುತ್ತಾರೆ ಇವರು ಪುಷ್ಕಳವಾಗಿ ಭೋಜನ ಮಾಡಿದ್ದೂ ಅಲ್ಲದೆ ಅವರಿಗಾಗಿ ಕೊಟ್ಟ ಎಲ್ಲ ಪಾತ್ರೆ ಪದಾರ್ಥಗಳನ್ನೂ ಲೂಟಿಮಾಡಿಕೊಂಡು ಹೋಗುತ್ತಿದ್ದಾರೆ. ಇಂಥಹ ಅಧಿಕಾರಿಗಳು ನಿಮ್ಮ ಸೇಲ್ಸ್‌ಟ್ಯಾಕ್ಸ್ ಇಲಾಖೆಯಲ್ಲಿದ್ದಾರೆ. ಇದನ್ನು ಯಾವರೀತಿಯಾಗಿ ತಹಬಂದಿಗೆ ತರುತ್ತೀರಿ. ಎನ್ನುವುದಕ್ಕಾಗಿ ಸರಕಾರದ ಗಮನಕ್ಕೆ ತರುತ್ತಿದ್ದೇನೆ. ಇದರಬಗ್ಗೆ ಏನುಕಾರ್ಯಕ್ರಮ ತೆಗೆದುಕೊಂಡಿರಿ ಎನ್ನುವುದಕ್ಕೆ ಈಗ ಅಲ್ಲ ದಿದ್ದರೂ ಮುಂದಿನ ಅಧಿವೇಶನಕ್ಕೆ ನಾವು ಬರುವುದೊರಳಗೆ ಯಾವರೀತಿ ಇದನ್ನು ತಡೆಗಟ್ಟಲು

ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸರಕಾರಕ್ಕೆ ಈಗ ಎಷ್ಟು ಹಣ ಬರುತ್ತಿದೆ. ಅಷ್ಟೇ ಹಣ ಲಂಚದ ರೂಪದಲ್ಲಿ ಇಲ್ಲಿರುವ ಎಲ್ಲ ಅಧಿಕಾರಿಗಳಿಗೂ ಬರುತ್ತಿದೆ ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ.

ಇನ್ನು ಲಾಟರಿ ಬಗ್ಗೆ ನಾನು ಕಳೆದ ಅಧಿವೇಶನದಲ್ಲೂ ಪ್ರಸ್ತಾಪ ಮಾಡಿದ್ದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ತೀವ್ರವಾದ ಗಮನವನ್ನು ಹರಿಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು ಇದು ನಿಜವಾಗಿಯೂ ಟೀಕೆಯಾಗುತ್ತಿರುವ ವಿಷಯ ಎಂದು ಅವರು ಹೇಳಿದ್ದರು. ಇವತ್ತು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಈ ಲಾಟರಿಯಿಂದ ಏನು ಪರಿಣಾಮವಾಗುತ್ತದೆ ಮತ್ತು ಹಾಗೂ ಮುಂದಿನ ಪೀಳಿಗೆಗೆ ಏನಾಗುತ್ತದೆ ಎನ್ನುವುದನ್ನು ವಿಶದವಾಗಿ ಹೇಳಿದ್ದಾರೆ. ಒಂದು ವಿಷಯ ಮಾತ್ರ ಇಲ್ಲಿ ಹೇಳುತ್ತೇನೆ ಲಾಟರಿ ಟಿಕೆಟ್ಟಿನಿಂದ ಬಹುಮಾನ ಬಂದ ಕಪ್ಪು ಹಣ ಯಾವರೀತಿಯಾಗಿ ಆಗುತ್ತಿದೆ ಎಂದರೆ ಶೇಕಡಾ 10 ರಷ್ಟು ಇರುವ ಕಪ್ಪು ಹಣ ಶೇಕಡಾ 15 ರಷ್ಟು ಏರಲು ಅವಕಾಶವಾಯಿತು. ಇಂತಹ ಅವ್ಯವಹಾರ ಗಳನ್ನು ನಿಲ್ಲಿಸುವುದಕ್ಕೆ ಸರಕಾರ ಪ್ರಯತ್ನಮಾಡಬೇಕು ಮತ್ತು ಇದನ್ನು ನಿಲ್ಲಿಸುವುದಕ್ಕೆ ಪ್ರಯತ್ನಮಾಡಬೇಕು ಎಂದು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಮುಖ್ಯ ಮಂತ್ರಿಗಳು ಕಳೆದ ಅಧಿವೇಶನದಲ್ಲಿ ಹೇಳಿದಂತೆ ಇದನ್ನು ನಿಲ್ಲಿಸಬೇಕು. ಲಾಟರಿ ಹಣದ ನೆಪದಲ್ಲಿ ಕಪ್ಪು ಹಣ ಬಿಳೀ ಹಣವಾಗಲು ಅವಕಾಶ ಕೊಟ್ಟಂತಾಗುತ್ತಿದೆ. ಇದರಿಂದ ಬರತಕ್ಕ ಉತ್ಪತ್ತಿಯೂ ಕಡಿಮೆ. ಆದುದರಿಂದ ಇದನ್ನು ಪ್ರತಿಭಟಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಜ್ಯುಡುಷಿಯರಿ ಬಗ್ಗೆ ಹೇಳಬೇಕಾದರೆ ಇಲ್ಲಿ ಲಂಚ ಎನ್ನುವುದು ಪ್ರತಿಯೊಂದು ಬೆಂಚಿಗೂ ಜನ ಕೊಡಬೇಕಾಗಿದೆ ನ್ಯಾಯಾಂಗ ಇಲಾಖೆಯಲ್ಲಿರುವ ಕೋರ್ಟುಗಳ ಎಲ್ಲಾ ಅಧಿಕಾರಿಗಳೂ ಲಂಚ ಕೊಡದೇ ಯಾವ ಕೆಲಸಗಳೂ ಆಗುವುದೇ ಇಲ್ಲ. ಆದರೆ ಇಲ್ಲಿರುವ ಮುನಸೀಫರುಗಳು ಹಾಗೂ ಸೆಷೆನ್ಸ್ ಜಡ್ಜ್‌ಗಳು ಇವರ ವರೆಗೆ ಇದು ಬರುತ್ತೋ ಇಲ್ಲವೋ ಇದರ ಬಗ್ಗೆ ಹೇಳಲು ನನಗೆ ಅನುಭವವಿಲ್ಲ ಗ್ರಾಮಾಂತರ ಜನರು ಕೋರ್ಟಿಗೆ ಹೋದಾಗ ಪ್ರತಿಯೊಬ್ಬ ಕ್ಲಾರ್ಕಿಗೂ ಎಂದರೆ ಪ್ರೊಸೆಸ್ ಸರ್ವರುಗಳಿಂದ ಹಿಡಿದು ಪ್ರತಿಯೊಬ್ಬ ಕೋರ್ಟಿನ ಅಧಿಕಾರಿಗಳಿಗೂ ಲಂಚ ಕೊಡಬೇಕಾಗಿದೆ ಇವು ದಿನ ನಿತ್ಯ ಕೋರ್ಟುಗಳಲ್ಲಿ ನಡೆಯುವ ವ್ಯವಹಾರಗಳಾಗಿವೆ ಸಾಮಾನ್ಯ ಜನರಿಗೆ ಇದರಿಂದಾಗತಕ್ಕ ಹಿಂಸೆಗಳನ್ನು ತಪ್ಪಿಸಲು ತಕ್ಕಕ್ರಮ ಗಳನ್ನು ತೆಗೆದುಕೊಂಡು ಇದನ್ನು ತಪ್ಪಿಸಬೇಕು ಕೋರ್ಟುಗಳಲ್ಲಿ ಇಂದು ಸಾಮಾನ್ಯ ಜನರು ಕೋರ್ಟು ಡಿಕ್ರಿ ಇಲ್ಲವೇ ಬೇರೆ ಕಾಪಿಗಳನ್ನು ತೆಗೆದುಕೊಳ್ಳಬೇಕಾದರೆ ಒಂದು ಆರ್ಡರು ಕಾಪಿಗೆ ಹತ್ತು ಷೀಟುಗಳು ಬೇಕಾಗಿದ್ದರೆ ಇಲ್ಲಿ ಇಪ್ಪತ್ತು ಷೀಟುಗಳು ಬೇಕೆಂದು ಹೇಳುತ್ತಾರೆ ಇದನ್ನು ತಂದುಕೊಟ್ಟ ಮೇಲೆ ಇವರಿಗೆ ಬೇರೆ ದುಡ್ಡು ಕೊಡಬೇಕು. ಇದನ್ನು ಕೊಟ್ಟ ನಂತರವೇ ಇವರಿಗೆ ಕಾಪಿ ಬರುವುದು. ಇಂತಹ ಅವ್ಯವಹಾರಗಳನ್ನು ಕೋರ್ಟುಗಳಲ್ಲಿ ಆಗುವುದನ್ನು ತಪ್ಪಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಲಾಯರುಗಳ ಬಗ್ಗೆ ಹೇಳಬೇಕಾಗಿದೆ. ಲಾಯರುಗಳಿಗೆ ಇಂತಿಷ್ಟು ಫೀಸುಗಳನ್ನು ಕೊಡಬೇಕೆಂದು ಸಿವಿಲ್ ದಾವಾಗಳಲ್ಲಿ ನಿಗದಿಯಾಗಿದೆ, ಆದರೆ ಕ್ರಿಮಿನಲ್ ಕೇಸುಗಳಲ್ಲಿ ಇದನ್ನು ನಿಗದಿ ಮಾಡಿಲ್ಲ. ಕ್ರಿಮಿನಲ್ ಕೇಸಿನಲ್ಲಿ ವಕಾಲತ್ತು ಹಾಕುವಾಗ ಲಾಯರುಗಳು ಅವರಿಗಿಷ್ಟ ಬಂದಂತೆ ಫೀಸನ್ನು ವಸೂಲು ಮಾಡುತ್ತಾರೆ ಇದರಿಂದ ಜನತೆಗೆ ಬಹಳ ಕಷ್ಟವಾಗು ತ್ತಿದೆ. ಕ್ರಿಮಿನಲ್ ಕೇಸಿನಲ್ಲಿ ಯಾರಾದರೂ ಅಪರಾಧಿ ಜ್ಯುಡಿಷಿಯಲ್ ಕಸ್ಟಡಿಯಲ್ಲಿದ್ದರೆ ಅಂತಹವರ ಬಗ್ಗೆ ಲಾಯರ ಬಳಿ ಜನ ಬಂದಾಗ ಲಾಯರಾದವರು ಇದಕ್ಕೆ ಪ್ರಧಾನಮಂತ್ರಿ ಯವರ ಕಡೆಯಿಂದ ಕಾಗದ ತರುತ್ತೇನೆ ಮತ್ತು ಇವರನ್ನು ಬಿಡಿಸುತ್ತೇನೆಂದು ಹೇಳಿ ರಾತ್ರಿ ವೇಳೆಗೆ ಅವರ ಹೆಂಡತಿ ಬಳಿ ಮನೆಗೆ ಹೋಗಿ ಸಿಕ್ಕಾಪಟ್ಟೆ ದುಡ್ಡು ಹೊಡೆಯುವ

ಲಾಯರುಗಳೂ ಇರುತ್ತಾರೆ. ಇಂತಹ ವ್ಯವಸ್ಥೆಯನ್ನು ಸರಕಾರ ಕೂಡಲೇ ತಪ್ಪಿಸಬೇಕು ಮತ್ತು ಸರಿಯಾಗಿ ಪರಿಶೀಲನೆ ಮಾಡಬೇಕು. ಇನ್ನೊಂದು ಸಲಹೆ ಸರಕಾರಕ್ಕೆ ಮಾಡುವುದು ಎಂದರೆ ರಾಜಕೀಯದಲ್ಲಿರುವವರು ಲಾಯರುಗಳಾಗಿ ಕೆಲಸ ಮಾಡಬಾರದು.

ಶ್ರೀ ಹೆಚ್. ಡಿ. ದೇವೇಗೌಡ:—ಮಂತ್ರಿಗಳಾಗಿದ್ದು ವಾಪಸಾಗಿ ಹೋದಾಗ ಅವರು ಲಾಯರು ಕೆಲಸ ಮಾಡಬಾರದೇ ?

ಶ್ರೀ ಹೆಚ್. ಎಸ್. ಸಿದ್ದಪ್ಪ : ಇದಕ್ಕೆ ಉದಹಾರಣೆ ಹೇಳುತ್ತೇನೆ. ಯಾವುದಾದರೂ ಒಂದು ಕೇಸು ರೆವೆನ್ಯೂ ಮಂತ್ರಿಗಳ ಮುಂದೆ ಇಲ್ಲವೇ ನಮ್ಮ ಮಂತ್ರಿಗಳಾದ ಶ್ರೀಮಾನ್ ಆಳ್ವರವರ ಮುಂದೆ ಒಂದು ಕೇಸು ಇದ್ದರೆ, ಇದಕ್ಕೆ ರಾಜಕೀಯ ಕ್ಷೇತ್ರದಲ್ಲಿರುವ ಲಾಯರು ವಕಾಲತ್ತು ತೆಗೆದುಕೊಂಡರೆ ಹೇಗಾಗುತ್ತದೆ ಎಂದರೆ ಅವರು ವಕಾಲತ್ತು ತೆಗೆದುಕೊಳ್ಳುವಾಗಲೇ ಅವರು ಮಂತ್ರಿಗಳಿಗೆ ಶಿಫಾರಸು ಮಾಡಿಸಿ ಅವರ ಕೆಲಸ ಮಾಡಿಸಿಕೊಡುತ್ತೇವೆಂದು ಒಂದಕ್ಕೆರಡರಷ್ಟು ದುಡ್ಡು ಹೊಡೆಯುತ್ತಾರೆ, ರೈತಾಪಿ ಜನರು ಇದನ್ನು ನಂಬಿ ಕೊಡುತ್ತಾರೆ, ಅನಂತರ ಅವರ ಕೇಸು ಏನಾಗುತ್ತದೋ ಹೇಳವಂತಿಲ್ಲ. ನಿಮ್ಮ ಸರಕಾರ ಬಡಜನರನ್ನು ರಕ್ಷಣೆ ಮಾಡುತ್ತೇವೆ ಎಂದು ಬಡ ಜನರ ರಕ್ತವನ್ನು ವಿಷ ಹೀರಿದಂತೆ ಹೀರುವುದೇ ನಿಮ್ಮ ಸಮಾಜ ವಾದವೇ ? ಗರೀಬೀ ಹಠವೋ ತರುತ್ತೇವೆ ಎನ್ನುವ ಜನ ನೀವು. ತಾವು ಇಂತಹ ರಾಜಕೀಯ ಲಾಯರು ಗಳಿಗೆ ವಕಾಲತ್ತು ಕೊಡುವುದನ್ನು ತಪ್ಪಿಸಬೇಕು ನನಗೆ ಒಬ್ಬರು ದೊಡ್ಡ ಲಾಯರು ಲಾಯರುಗಳ ಬಗ್ಗೆ ಒಂದು ವಿಚಾರ ಹೇಳಿದರು. ಅವರ ವ್ಯವಹಾರಗಳನ್ನೆಲ್ಲಾ ಹೇಳಿ ಇದಕ್ಕಾಗಿ ಇಂತಹ ಕಸಬು ಮಾಡುವವರಿಗೆ ವಕೀಲರು ಎಂದು ಹೇಳುತ್ತಾರೆಂದರು. ವಕೀಲರು ಎಂದರೇನು ಎಂದು ಅವರನ್ನು ಕೇಳಿದಾಗ ಅದಕ್ಕೆ ಈ ರೀತಿ ಅರ್ಥ ವಿವರಣೆ ಕೊಟ್ಟರು. ವ—ಎಂದರೆ ವಚನ ಭ್ರಷ್ಟ ಎಂದು ಕೀ—ಎಂದರೆ ಕ್ರಿಯಾ ಭ್ರಷ್ಟ ಲ–ಎಂದರೆ ಲಂಚಕೋರ ಎಂದು, ಮತ್ತು ರು–ಎಂದರೆ ಋಣಪಾತಕ ಎಂದು ? ಇಂತಹ ಗುಣಗಳಿರುವವರು ಎಂದರೆ ವಕೀಲರು ಆಗಬಹುದು ಎಂದು ಹೇಳಿದರು. ಇದಕ್ಕಾಗಿ ತಮ್ಮ ಘನತೆಯ ಕಳಕಳಿಯಿಂದ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿ ಕೊಳ್ಳುವುದು ತಿಳಿಯದ ಹಳ್ಳಿಯ ಜನರು ಬಂದಾಗ ಇಂತಹ ಲಾಯರುಗಳಿಗೆ ವಕಾಲತ್ತನ್ನು ಕೊಡುವುದನ್ನು ತಡೆಗಟ್ಟಬೇಕು.

ಶ್ರೀ ಹೆಚ್. ಡಿ. ದೇವೇಗೌಡ :—ಇದನ್ನು ಹೇಗೆ ತಪ್ಪಿಸಬೇಕು ? ನೀವು ಹೇಳುವುದೇನೋ ನಿಜ. ಹಿಂದೆ ಇಲ್ಲಿ ಶ್ರೀಧರ್ಮವೀರರ ಆಡಳಿತ ಇದ್ದಾಗ ಲೋಕ ಸಭೆಯ ಸದಸ್ಯರು ಒಬ್ಬರು ಇಂತಹ ಒಂದು ಅರ್ಜಿ ತಂದಾಗ ಯಾವ ರೀತಿ ಇದು ಲಾ ಡಿಪಾರ್ಟ್‌ಮೆಂಟಿಗೆ ಹೋಗಿ ಹೇಗೆ ಚರ್ಚೆಯಾಯಿತು ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಇದು ಕಷ್ಟಸಾಧ್ಯ.

ಶ್ರೀ ಹೆಚ್. ಎಸ್. ಸಿದ್ದಪ್ಪ :—ಇನ್ನೊಂದು ಕೋರ್ಟುಗಳಲ್ಲಿ ಆಗುತ್ತಿರುವುದು ಒಂದು ಕೇಸು ಐದಾರು ವರ್ಷಗಳಾದರೂ ಮುಗಿಯುವುದಿಲ್ಲ. ಇಲ್ಲಿರುವ ಲಾಯರುಗಳು ಕೂಡ ಜನರಿಂದ ದುಡ್ಡು ಸಂಪಾದನೆ ಮಾಡಬೇಕೆಂದು ಕೇಸು ಬಂದಾಗಲೆಲ್ಲಾ ಅದನ್ನು ಅಡಜರ್ನ್‌ಮೆಂಟು ಎಂದು ಮಾಡಿಸಿ ಮುಂದೂಡುತ್ತಲೇ ಹೋಗುತ್ತಾರೆ. ಇದರಿಂದ ಹಳ್ಳಿಗಾಡಿನ ಜನಕ್ಕೆ ಬರಲು ಕಷ್ಟ. ಏಕೆಂದರೆ ಸಕಾಲದಲ್ಲಿ ನಮ್ಮ ಶ್ರೀ ಅಜೀಜ್‌ಸೇಟರ ಬಸ್ಸುಗಳು ಬರುವುದಿಲ್ಲ. ಬಂದರೂ ದಾರಿಯಲ್ಲೇ ನಿಲ್ಲುತ್ತವೆ. ಹೀಗಾಗಿ ಕೋರ್ಟುಕೇಸುಗಳು ಮುಗಿಯುವುದಿಲ್ಲ. ಇದಕ್ಕಾಗಿ ಒಂದು ಕೇಸನ್ನು ಸಿವಿಲ್ ಕೇಸುಗಳಾದರೆ ಇಂತಿಷ್ಟು ದಿನಗಳಲ್ಲಿ ಮುಗಿಸಬೇಕೆಂದು ನಿಗದಿ ಮಾಡಬೇಕು. ಇದೇ ರೀತಿ ಕ್ರಿಮಿನಲ್ ಕೇಸುಗಳಲ್ಲಿ ಇಂತಿಷ್ಟೆ ದಿನಗಳಲ್ಲಿ ಮುಗಿಸಬೇಕು ಎಂದು ಕಾಲವನ್ನು ನಿಗದಿ ಮಾಡಬೇಕು. ಇದರ ಬಗ್ಗೆ ತಕ್ಕ ವ್ಯವಸ್ಥೆಯನ್ನು ಸರಕಾರ ಮಾಡಬೇಕೆಂದು ಹೇಳ ಬಯಸುತ್ತೇನೆ.

ಇನ್ನು ಕೊನೆಯದಾಗಿ ಟ್ರೆಜರಿಗಳ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ತಾಲ್ಲೂಕು ಟ್ರೆಜರಿಗಳಲ್ಲಿರುವ ಜನರು ನರಹಿಂಸೆ ಮಾಡುತ್ತಿದ್ದಾರೆ. ಪ್ರತಿಯೊಂದು ಬಿಲ್ಲನ್ನು ಇಲ್ಲಿ ಪಾಸು ಮಾಡಬೇಕಾದರೂ ಇವರಿಗೆ ಇಂತಿಷ್ಟು ಪರ್ಸ್‌ಂಟೇಜು ಕೊಡಬೇಕೆಂದು ಮಾಮಾಲು ಇದೆ. ಅದನ್ನು ಕೊಟ್ಟರೇ ಅಧಿಕಾರಿಗಳು ಬಿಲ್ಲು ಪಾಸುಮಾಡುವುದು ಇಲ್ಲದಿದ್ದರೆ ಇಲ್ಲ. ಇದರಲ್ಲೂ ಮಾರ್ಚಿ 31 ರೊಳಗೆ ಬಿಲ್ಲುಗಳು ಪಾಸಾಗುವಾಗ ಇಲ್ಲಿರುವ ಅಧಿಕಾರಿಗಳು ಲೂಟಿ ಹೊಡೆಯುತ್ತಾರೆ. ಸಾವಿರಗಟ್ಟಲೆ ಇವರಿಗೆ ಸಂಪಾದನೆಯಾಗುತ್ತದೆ. ಈಚೆಗೆ ಇದರಲ್ಲಿ ಇನ್ನೊಂದು ಅವ್ಯವಸ್ಥೆಯಾಗುತ್ತಿದೆ. ಈಗ ಇಲ್ಲಿರುವ ಹುಜೂರು ಟ್ರೆಷರಿಯಲ್ಲಿ ಒಂದು ಬಿಲ್ಲು ಕೊಟ್ಟರೆ ಅದಕ್ಕೆ ಟೋಕನ್ ಎಂದು ಕೊಡುತ್ತಾರೆ. ಈ ಟೋಕನ್ ಯಾವಾಗ ಬರುತ್ತದೆ ಎಂದರೆ-ಸುಮಾರು ಎರಡು ಎರಡೂಕಾಲು ಗಂಟೆಗೆ ಕೊಟ್ಟರೆ ಆ ನಂತರ ಇದನ್ನು ಸ್ಟೇಟು ಬ್ಯಾಂಕಿಗೆ ತೆಗೆದುಕೊಂಡು ಹೋಗಿ ಅಲ್ಲಿ ಕ್ಯಾಷ್ ತರಬೇಕು. ಟೋಕನ್ ತೆಗೆದುಕೊಂಡು ರಿಸರ್ವ್‌ಬ್ಯಾಂಕು ಇಲ್ಲವೇ ಸ್ಟೇಟು ಬ್ಯಾಂಕಿಗೆ ಹೋಗುವ ಹೊತ್ತಿಗೆ ಅಲ್ಲಿನ ಆಫೀಸು ಮುಚ್ಚಿರುತ್ತದೆ.

ಶ್ರೀ ಎಂ. ವೈ. ಘೋರ್ಪಡೆ ;—ಈಗ ಎಲ್ಲ ಕಡೆಯೂ ಚೆಕ್ ಸಿಸ್ಟಮ್‌ನ್ನು ಜಾರಿಗೆ ತರುತ್ತಿದ್ದೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ :—ಈಗ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಪೊಲಿಟಿಕಲ್ ಪೆನ್‌ಷನ್‌ದಾರರಿಗೇ ಆಗಲೀ, ಸರ್ಕಾರಿ ನೌಕರರ ಪೆನ್‌ಷನ್‌ಗೆ ಸಂಬಂಧಪಟ್ಟಂತೆ ಆಗಲಿ, ಅವರ ಪೆನ್‌ಷನ್ ಹಣ ನೇರವಾಗಿ ಎಂ. ಒ. ಮೂಲಕ ವಾಗಲೀ, ಚೆಕ್ ಮೂಲಕವಾಗಿಯಾಗಲೀ ಕಳಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ಈ ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಜಿ. ಬಣಕಾರ (ಹಿರೇಕೆರೂರು) :—ಮಾನ್ಯ ಅಧ್ಯಕ್ಷಣಿಯವರೇ, ಇಂದು ಹಣಕಾಸಿನ ಸಚಿವರು ಮತ್ತು ಕಾಯಿದೆ ಸಚಿವರು ಸಭೆಯ ಮುಂದಿಟ್ಟಿರುವ ಬೇಡಿಕೆಗಳನ್ನು ಸಮರ್ಥಿಸುತ್ತಾ 3-4 ಮಾತುಗಳನ್ನು ಹೇಳಬಯಸುತ್ತೇನೆ. ಕಳೆದ ವರ್ಷದಲ್ಲಿ ಹಣಕಾಸಿನ ಮಂತ್ರಿಗಳು ಹಾಗೂ ಕಾಯಿದೆ ಮಂತ್ರಿಗಳು ತಮ್ಮ ತಮ್ಮ ಖಾತೆಗಳಲ್ಲಿ ಗಣನೀಯ ಸಾಧನೆಗಳನ್ನು ಮತ್ತು ಪ್ರಗತಿಯನ್ನು ಸಾಧಿಸಿದ್ದರೂ ಕೂಡ ಇನ್ನೂ ಅನೇಕ ತರಹದ ಸುಧಾರಣೆಗಳು ಈ ಎರಡು ಖಾತೆಗಳಲ್ಲಿ ಆಗತಕ್ಕದ್ದು ಅವಶ್ಯವಿದೆ ಎಂದು ಹೇಳಬಯಸುತ್ತೇನೆ.

ಸೇಲ್ಸ್ ಟ್ಯಾಕ್ಸ್ ಇಲಾಖೆಯು ಬಗ್ಗೆ ಹೇಳಬೇಕಾದರೆ, ಇದು ದೊಡ್ಡ ಉತ್ಪನ್ನ ಕೊಡುವ ಖಾತೆಯಾಗಿದೆ. ಈ ಖಾತೆಯು ಬೇಡಿಕೆ ಹಣ ಕಡಿಮೆ ಇದ್ದರೂ ಸಹ ದೊಡ್ಡ ಉತ್ಪನ್ನ ಕೊಡುವ ಖಾತೆಯಾಗಿದೆ. ಈ ಖಾತೆಯು ಎಲ್ಲ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಿ ತೆರಿಗೆಯನ್ನು ವಸೂಲಿ ಮಾಡಿದ್ದೇ ಆದರೆ ಸರ್ಕಾರಕ್ಕೆ ದೊಡ್ಡ ಪ್ರಮಾಣದ ಉತ್ಪನ್ನ ಬರುತ್ತದೆ. ಮತ್ತು ಈಗ ಸೋರಿಹೋಗುತ್ತಿರುವುದನ್ನು ಸಹ ಬಂದೆ ಮಾಡಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ದೊಡ್ಡ ಊರುಗಳಲ್ಲಿ ಅನೇಕ ವ್ಯಾಪಾರಸ್ಥರಿದ್ದಾರೆ. ಇವರ ಅಂಗಡಿಗಳಿಗೆ ಸೇಲ್ಸ್ ಟ್ಯಾಕ್ಸ್ ವಸೂಲಿ ಮಾಡಲು ಹೋಗುವ ಎ.ಸಿ.ಟಿ.ಒ.,ಸಿ.ಟಿ.ಒ. ಮತ್ತು ಸ್ಕ್ವ್ಯಾಡ್‌ನವರು ಮಾಮೂಲಿ ಮಾಡಿಕೊಂಡು ಅಂಗಡಿಯವರಿಂದ ಸಾಮಾನುಗಳನ್ನು ತರುವ ಒಂದು ಅನಿಷ್ಟ ಪದ್ಧತಿ ಇದೆ. ಇದಕ್ಕೆ ಮೊದಲು ತಡೆ ಹಾಕಬೇಕು. ಅಧಿಕಾರಿಗಳು ಏನಾದರು ಒಳ್ಳೆಯ ರೀತಿಯಿಂದ ನಡೆಯಲಿಲ್ಲ ಎಂದರೆ ಮತ್ತು ಅಧಿಕಾರಿಗಳು ಏನಾದರು ಹಾದಿ ಬಿಟ್ಟು ನೀತಿ ಒಪ್ಪಿ ನಡೆದರೆ ಅದರ ಕೆಟ್ಟ ಹೆಸರು ಸರ್ಕಾರಕ್ಕೇ ಬರುತ್ತದೆ. ಇಂದು ಶೇಕಡ 60 ರಷ್ಟು ಒಳ್ಳೆಯ ಅಧಿಕಾರಿಗಳು ಇದ್ದಾರೆ. ಆದರೆ ಶೇಕಡ 40 ರಷ್ಟು ಅಧಿಕಾರಿಗಳು

ಲಂಚಕೋರ ಅಧಿಕಾರಿಗಳು ಸಹ ಇದ್ದಾರೆ. ಇವರಿಂದಲೇ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದು. ಇವರುಗಳನ್ನು ಸರ್ಕಾರದವರು ಹಿಡಿತದಲ್ಲಿಟ್ಟುಕೊಳ್ಳಬೇಕು. ಇವರ ಬಗ್ಗೆ ನಿಗಾ ವಹಿಸದಿದ್ದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದು ಖಂಡಿತ. ಇಂದು ಅಂಗಡಿಗಳಲ್ಲಿ ಲಕ್ಷಾಂತರ ರೂಪಾಯಿಗಳ ಸರಕು ಇರುತ್ತದೆ. ಆ ಸಾಮಾನುಗಳನ್ನು ಎಲ್ಲಿಂದ ತಂದರು ಎಂಬ ಬಗ್ಗೆ ಓಚರ್ ಇಟ್ಟಿರುವುದಿಲ್ಲ. ಮತ್ತು ಜಮಾ ಪಾವತಿ ಲೆಕ್ಕ ಸಹ ಕೊಡುವುದಿಲ್ಲ. ಈ ಸಾಮಾನುಗಳನ್ನು ಅವರು ಎಲ್ಲಿಂದ ತಂದರು, ಅವುಗಳ ಬೆಲೆ ಏನು ಎಂಬುದನ್ನು ತನಿಖೆ ಮಾಡುವ ಅಧಿಕಾರವನ್ನು ಎ.ಸಿ.ಟಿ.ಓ. ಅವರಿಗೆ ಮತ್ತು ಸಿ. ಟಿ. ಓ. ಅವರಿಗೆ ಅಥವಾ ಸ್ಕ್ವಾಡ್ ಅವರಿಗೆ ಕೊಡಬೇಕು. ಇಂದು ಅಧಿಕಾರಿಗಳು ಎಷ್ಟು ಮಾಲನ್ನು ಇಟ್ಟಿದ್ದಾರೆಂಬುದನ್ನು ತನಿಖೆ ಮಾಡುತ್ತಿಲ್ಲ. ಪ್ರತಿಯೊಬ್ಬ ಅಂಗಡಿಕಾರರು ಇಟ್ಟಿರುವ ಮಾಲಿನ ಬಗ್ಗೆ ಕಂಪಲ್ ಸರಿಯಾಗಿ ಜಮಾ ಪಾವತಿ ಕೊಡಬೇಕೆಂದು ಕಟ್ಟಪ್ಪಣೆ ಮಾಡಬೇಕು. ಅವರು ವರ್ಷದಲ್ಲಿ ಎಷ್ಟು ಮಾಲನ್ನು ಖರೀದಿ ಮಾಡಿದರು ಮತ್ತು ಎಷ್ಟನ್ನು ಮಾರಾಟ ಮಾಡಿದರು ಎಂಬ ಬಗ್ಗೆ ಸ್ಟೇಟ್‌ಮೆಂಟನ್ನು ಸೇಲ್ಸ್‌ಟ್ಯಾಕ್ಸ್ ಅಧಿಕಾರಿಗಳು ಪ್ರತಿಯೊಬ್ಬ ವ್ಯಾಪಾರಸ್ಥರಿಂದಲೂ ತೆಗೆದುಕೊಳ್ಳಬೇಕು.

ನಮ್ಮ ರಾಜ್ಯದಲ್ಲಿ ಇಂದು ಖಾಯಂ ಸಿನಿಮಾ ಥಿಯೇಟರ್‌ಗಳು ಮತ್ತು ಟೂರಿಂಗ್ ಟಾಕೀಸ್‌ಗಳು ಬೇಕಾದಷ್ಟು ಇವೆ. ಇವುಗಳಿಂದ ಎನ್‌ಟರ್‌ಟೈನ್‌ಮೆಂಟ್ ಟ್ಯಾಕ್ಸನ್ನು ಎ. ಸಿ. ಟಿ. ಓ. ಅವರು ವಸೂಲಿ ಮಾಡಬೇಕಾಗಿದೆ. ಆದರೆ ಈ ಅಧಿಕಾರಿಗಳು ಕೆಲವು ಕಡೆಗಳಲ್ಲಿ ಮಾಮೂಲಿ ಪದ್ಧತಿ ಇಟ್ಟುಕೊಂಡು ಟಿಕೆಟ್‌ಗಳ ಮೇಲೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಹಚ್ಚುತ್ತಿಲ್ಲ. ಇದು ಗ್ರಾಮಾಂತರ ಪ್ರದೇಶಗಳಲ್ಲಿರುವ ಟೂರಿಂಗ್ ಟಾಕೀಸ್‌ಗಳಲ್ಲಿ ಹೆಚ್ಚಾಗಿ ನಡೆಯುತ್ತಿದೆ. ಟಿಕೇಟ್ ಇಲ್ಲದೆಯೇ ಜನರನ್ನು ದುಡ್ಡು ತೆಗೆದುಕೊಂಡು ಒಳಗೆ ಬಿಡುತ್ತಿದ್ದಾರೆ. ಇದರಿಂದ ರಾಜ್ಯಸರ್ಕಾರಕ್ಕೆ ಬರುವ ಆದಾಯದಲ್ಲಿ ದೊಡ್ಡ ಖೋತಾ ಆಗುತ್ತಿದೆ. ಆದಕಾರಣ ಸಿನಿಮಾ ಥಿಯೇಟರ್‌ಗಳಿಂದ ಬರುವ ಉತ್ಪನ್ನ ಏನಿದೆ ಅದರ ಬಗ್ಗೆ ಸರ್ಕಾರದವರು ನಿಗಾವಹಿಸಬೇಕೆಂದು ಹೇಳುತ್ತೇನೆ.

ಕಮರ್ಷಿಯಲ್ ಸೇಲ್ಸ್ ಟ್ಯಾಕ್ಸ್ ಆಫೀಸರ್‌ಗಳು ಒಂದೇ ಕಡೆ ಹೆಚ್ಚು ಕಾಲ ಇರಬಾರದು ಇವರುಗಳು ಒಂದೇ ಕಡೆ ಇರುವುದಕ್ಕಾಗಿ ಎಂ.ಎಲ್.ಎ.ಗಳನ್ನು ಮತ್ತು ಮಂತ್ರಿಗಳನ್ನು ಹಿಡಿಯುತ್ತಾರೆ. ಇವರ ಕೆಲಸ ಮಾಡಿಕೊಡದಿದ್ದರೆ ನಿಮ್ಮಂಥ ಎಂ.ಎಲ್.ಎ.ಗಳನ್ನು ಎಷ್ಟೋ ಜನರನ್ನು ನೋಡಿದ್ದೇವೆಂದು ಹೇಳುತ್ತಾರೆ. ನಿಮ್ಮ ಅಧಿಕಾರದ ಅವಧಿ 5 ವರ್ಷಗಳಾದರೆ ನಾವು 35 ವರ್ಷಗಳ ಕಾಲ ಅಧಿಕಾರದಲ್ಲಿರುತ್ತೇವೆಂದು ಹೇಳಿಕೊಳ್ಳುತ್ತಾರೆ. ಇಂತಹವರಬಗ್ಗೆ ಹೆಚ್ಚು ನಿಗಾ ಇಡಬೇಕು. ಒಂದೇ ಊರಿನಲ್ಲಿ ಮುಂದುವರೆಯಬೇಕೆಂಬ ಮನೋಭಾವ ಇವರಲ್ಲಿ ಇರುತ್ತದೆ. ಉತ್ತಮರಾದ ಅಧಿಕಾರಿಗಳು ಬೇಕಾದರೆ ಒಂದೇ ಊರಿನಲ್ಲಿ ಮುಂದುವರೆಯಲಿ. ಆದರೆ ಯಾರು ಲಂಚ ತೆಗೆದುಕೊಳ್ಳುವುದರ ಮೂಲಕ ಸರ್ಕಾರಕ್ಕೆ ಬರುವ ಆದಾಯವನ್ನು ಕಡಿಮೆ ಮಾಡುತ್ತಿರುತ್ತಾರೋ ಅಂತಹ ಅಧಿಕಾರಿಗಳ ಮೇಲೆ ಕಣ್ಣಿಟ್ಟು, ಅಂತಹ ಅದಕ್ಷ ಅಧಿಕಾರಿಗಳನ್ನು ನಿರ್ದಾಕ್ಷಿಣ್ಯವಾಗಿ ಬೇರೆ ಕಡೆಗೆ ವರ್ಗ ಮಾಡಬೇಕು. ರೈಲ್ವೆ ಇಲಾಖೆಯಲ್ಲಿ ಉತ್ತಮವಾಗಿ ಕೆಲಸ ಮಾಡುವ ಸ್ಕ್ವಾಡ್‌ನವರಿಗೆ ಇನಾಂ ಕೊಡುವ ಪದ್ಧತಿ ಇದೆ. ಅದೇ ಪದ್ಧತಿಯನ್ನು ಬೇಕಾದರೆ ಇಲ್ಲಿಯೂ ಸಹ ಜಾರಿಗೆ ತಂದು ಉತ್ತಮ ರೀತಿಯಿಂದ ಟ್ಯಾಕ್ಸನ್ನು ವಸೂಲಿ ಮಾಡುವ ಅಧಿಕಾರಿಗಳಿಗೆ ಇನಾಂ ಕೊಡಿ. ಈ ರೀತಿ ಉತ್ತೇಜನ ಕೊಡುವುದರ ಮೂಲಕ ಅವರಿಂದ ಚೆನ್ನಾಗಿ ಕೆಲಸ ತೆಗೆದುಕೊಳ್ಳಿ.

ಲಾಟರಿ ವಿಷಯ ಹೇಳಬೇಕೆಂದರೆ, ಒಂದು ಲಕ್ಷ ಮತ್ತು 50 ಸಾವಿರ ರೂಪಾಯಿಗಳ ಬಹುಮಾನಗಳ ಮೊತ್ತವನ್ನು ಕಡಿಮೆ ಮಾಡಬೇಕೆಂದು ನನ್ನ ಸಲಹೆ. ಬಡವರೂ ಸಹ

ಒಂದೊಂದು ರೂಪಾಯಿ ಕೊಟ್ಟು ಟಿಕೇಟ್ ತೆಗೆದುಕೊಳ್ಳುವುದರಿಂದ, ಒಬ್ಬರಿಗೇ ಲಕ್ಷ ರೂಪಾಯಿಗಳ ಬಹುಮಾನ ಕೊಡುವುದಕ್ಕೆ ಬದಲು ಹತ್ತು ಜನರಿಗೆ ಹತ್ತು ಸಾವಿರ ರೂಪಾಯಿಗಳ ಬಹುಮಾನ ಕೊಡುವುದು ಒಳ್ಳೆಯದು. ಈ ಕಾರಣದಿಂದ ಮ್ಯಾಗ್ಸಿಮಮ್ ಬಹುಮಾನದ ಮೊತ್ತ ಹತ್ತು ಸಾವಿರ ರೂಪಾಯಿಗಳ ಇರಬೇಕೆಂದು ಹೇಳುತ್ತೇನೆ.

ಫ್ಯಾಮಿಲಿ ಪೆನ್‌ಷನ್ ಬಗ್ಗೆ ಹೇಳಬೇಕೆಂದರೆ, ಸರ್ಕಾರದ ಕೆಲಸಕ್ಕೆ ಸೇರಿದ ಒಂದು ವರ್ಷದೊಳಗೆ ಯಾರಾದರು ನೌಕರರು ಸತ್ತರೆ ಅಂತಹವರ ಕುಟುಂಬದವರಿಗೆ, ಅವರು ಸಾಯುವವರಿಗೆ ಅಥವಾ ಅವರು ಪುನಃ ಮದುವೆಯಾಗುವವರೆಗೆ ಫ್ಯಾಮಿಲಿ ಪೆನ್‌ಷನ್ ಕೊಡಬೇಕೆಂದು ತಾರೀಖು 1-12-1964 ರಂದು ಆಜ್ಞೆ ಹೊರಡಿಸಿದ್ದಾರೆ. ಈ ತಾರೀಖಿಗೆ ಮೊದಲು ಯಾರಾದರು ಸತ್ತಿದ್ದರೆ ಅಂತಹವರ ಕುಟುಂಬದವರಿಗೆ ಈ ಸೌಲಭ್ಯ ಸಿಗುತ್ತಿಲ್ಲ. ಆದ್ದರಿಂದ ಈ ತಾರೀಖಿಗೆ ಮೊದಲು ಯಾರಾದರು ಸರ್ಕಾರೀ ನೌಕರರು ಈ ರೀತಿ ಸತ್ತಿದ್ದರೆ ಅವರ ಕುಟುಂಬದವರಿಗೂ ಸಹ ಈ ಸೌಲಭ್ಯವನ್ನು ದೊರಕಿಸಿಕೊಡಬೇಕೆಂದು ಸಲಹೆ ಕೊಡಬಯಸುತ್ತೇನೆ.

ಇನ್ನು ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್ ಬಗ್ಗೆ ಹೇಳಬೇಕೆಂದರೆ, ನಮ್ಮ ದೇಶದಲ್ಲಿ ನ್ಯಾಯಾಲಯವೇ ದೇವಾಲಯ ಎಂದು ಹೇಳುತ್ತಾರೆ. ಇಂದು ನಮ್ಮ ರಾಜ್ಯದ ಅಥವಾ ದೇಶದಲ್ಲಿರುವ ನ್ಯಾಯಲಯಗಳ ವಿಷಯ ಹೇಳಬೇಕೆಂದರೆ, ಪ್ರಶಂಸೆಗೆ ಅರ್ಹವಾದಂಥ ಕೋರ್ಟ್‌ಗಳು ಬೇಕಾದಷ್ಟು ಇವೆ. ಮತ್ತು ಶೇಕಡ 90ರಷ್ಟು ಉತ್ತಮ ನ್ಯಾಯಾಧೀಶರುಗಳು ಇದ್ದಾರೆ.

ನಮ್ಮ ದೇಶದಲ್ಲಿ ನ್ಯಾಯಲಯಗಳು ಅವಶ್ಯಕ, ಪ್ರತಿಯೊಂದು ತಾಲ್ಲೂಕಿಗೂ ಒಂದುವರೆ ಲಕ್ಷ ಜನಸಂಖ್ಯೆ ಇರುವ ಕಡೆಗೆ ಒಂದೊಂದು ಮುನ್ಸೀಫ್ ಮ್ಯಾಜಿಸ್ಟ್ರೇಟರ ಕೋರ್ಟನ್ನು ಸ್ಥಾಪನೆ ಮಾಡಬೇಕು. ಈಗ ಒಂದು ವರ್ಷದಲ್ಲಿ ಸರ್ಕಾರದವರು ಅನೇಕ ಕೋರ್ಟುಗಳನ್ನು ಕೊಟ್ಟಿದ್ದಾರೆ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಕೋರ್ಟನ್ನು ಕೊಡಬೇಕು. ಮುನ್ಸೀಫ್ ಮ್ಯಾಜಿಸ್ಟ್ರೇಟರಿಗೆ ಲ್ಯಾಂಡ್ ಟ್ರಿಬ್ಯುನಲ್ ಕೇಸ್‌ಗಳು ಕ್ರಿಮಿನಲ್ ಪ್ರೊಸೀಜರ್ ಕೋಡಿನ ಸೆಕ್ಷನ್ 107, 109 ಪ್ರಕಾರ ಇರತಕ್ಕಂಥ ಪವರನ್ನೂ ಮತ್ತು ಸಿ. ಆರ್. ಪಿ. ಸಿ. 145ರ ಪ್ರಕಾರ ಇರತಕ್ಕಂಥಾ ಪವರನ್ನೂ ಅವರಿಗೆ ಕೊಡಬೇಕು. ಈಗ ಕೆಲವು ಜುಡಿಷಿಯಲ್ ಕೇಸುಗಳನ್ನು ನಡೆಸತಕ್ಕಂಥಾ ಅಧಿಕಾರವನ್ನು ತಹಶೀಲ್ದಾರರಿಗೆ ಮತ್ತು ಅಸಿಸ್ಟೆಂಟ್ ಕಮೀಷನರಿಗೆ ಏನು ಕೊಟ್ಟಿದ್ದಾರೆ ಅವುಗಳನ್ನು ಮುನ್ಸೀಫ್ ಮ್ಯಾಜಿಸ್ಟ್ರೇಟರಿಗೆ ಕೊಡಬೇಕು. ಮೈಸೂರು ಲ್ಯಾಂಡ್ ರವಿನ್ಯೂ ಕೋಡಿನಲ್ಲಿರುವ ರೆಕಾರ್ಡ್ಸ್ ಆಫ್ ರೈಟಿಗೆ ಸಂಬಂಧಪಟ್ಟ ಕೇಸುಗಳನ್ನು ಇತ್ಯರ್ಥ ಮಾಡಲು ಅಸಿಸ್ಟೆಂಟ್ ಕಮೀಷನರಿಗೆ, ಡೆಪ್ಯುಟಿ ಕಮೀಷನರಿಗೆ ಡಿವಿಜನಲ್ ಕಮೀಷನರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಅಧಿಕಾರವನ್ನು ಕೂಡ ಮುನ್ಸೀಫ್ ಮ್ಯಾಜಿಸ್ಟ್ರೇಟರಿಗೆ ಕೊಡಬೇಕು. ಅದಕ್ಕೆ ಸಂಬಂಧಪಟ್ಟ ತಿದ್ದುಪಡಿಯನ್ನು ಕಾಯಿದೆಯಲ್ಲಿ ಮಾಡಬೇಕು. ಕೋ ಆಪರೇಟೀವ್ ಡಿಪಾರ್ಟ್‌ಮೆಂಟ್‌ನಲ್ಲಿ ಕೇಸುಗಳನ್ನು ತೀರ್ಮಾನ ಮಾಡುವುದಕ್ಕಾಗಿ ಆರ್ಬಿಟ್ರೇಟರ್ಸ್‌ಅನ್ನು ನೇಮಿಸುತ್ತಾರೆ. ಇದಕ್ಕೆ ಸಂಬಂಧಪಟ್ಟ ಕೇಸುಗಳಿಗೆ ಸರ್ಕಾರದವರು ಆರ್ಬಿಟ್ರೇಟರಿಗೆ ಸುಮಾರು 27 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೋ ಆಪರೇಟೀವ್ ಆಕ್ಟ್ ಪ್ರಕಾರ ಆರ್ಬಿಟ್ರೇಷನ್ ಕೇಸುಗಳನ್ನು ಆದಷ್ಟು ಜಾಗ್ರತೆಯಾಗಿ ಮುಗಿಸುವ ದೃಷ್ಟಿಯಿಂದ ಇವುಗಳನ್ನು ಮುನ್ಸೀಫ್ ಮ್ಯಾಜಿಸ್ಟ್ರೇಟರಿಗೆ ವಹಿಸುವಂತೆ ಕಾಯಿದೆಯಲ್ಲಿ ತಿದ್ದುಪಡಿ ಮಾಡಬೇಕು.

ಇನ್ನು ನ್ಯಾಯಾಧೀಶರನ್ನು ನೇಮಿಸುವಾಗ ರಿಟನ್ ಟೆಸ್ಟ್ ಇಟ್ಟಿದ್ದಾರೆ. ಅದು ಆಗಬಾರದು. ನ್ಯಾಯಾಧೀಶರನ್ನು ನೇಮಿಸುವಾಗ ಯಾವುದೇ ವಕೀಲರಾಗಲೀ ಅವರು ಎಷ್ಟು ಕೇಸುಗಳನ್ನು

ಹಿಡಿದಿದ್ದಾರೆ ಎಷ್ಟು ಕೇಸುಗಳನ್ನು ಗೆದ್ದಿದ್ದಾರೆ ಎಂಬುದನ್ನು ನೋಡಿ ಅವರು ಹಿಡಿದಂತಹ ಮುನ್ಸೀಫ್ ಕೋರ್ಟಿನ ಕೇಸುಗಳಲ್ಲಿ 50ಕ್ಕಿಂತ ಹೆಚ್ಚು ಕೇಸುಗಳನ್ನು ಗೆದ್ದಿದ್ದರೆ ಅಂಥಾ ವಕೀಲರನ್ನು ಮುನ್ಸೀಫ್ ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಬೇಕು. ಬರೀ ಟೆಸ್ಟ್ ಮೇಲೆ ಅವರನ್ನು ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಬಾರದು.

ಡಿಸ್ಟ್ರಿಕ್ಟ್ ಜಡ್ಜ್‌ಗಳನ್ನು ನೇಮಿಸುವಾಗ ಯಾವುದೇ ವಕೀಲರು ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ ಪ್ರಾಕ್ಟೀಸ್ ಮಾಡುವಾಗ ಎಷ್ಟು ಕೇಸುಗಳನ್ನು ಹಿಡಿದಿದ್ದರು, ಎಷ್ಟು ಕೇಸುಗಳನ್ನು ಗೆದ್ದಿದ್ದಾರೆ ಎಂಬುದನ್ನು ನೋಡಿ ಅವರು ಗೆದ್ದಿರತಕ್ಕ ಕೇಸುಗಳು 50ಕ್ಕಿಂತ ಹೆಚ್ಚು ಇದ್ದರೆ ಮಾತ್ರ ಅಂಥವರನ್ನು ಡಿಸ್ಟ್ರಿಕ್ಟ್ ಜಡ್ಜ್ ಆಗಿ ನೇಮಿಸಬೇಕು.

ಮತ್ತು ಹೈಕೋರ್ಟ್ ಜಡ್ಜ್‌ಗಳನ್ನು ನೇಮಿಸುವಾಗ ಅವರು ಡಿಸ್ಟ್ರಿಕ್ಟ್ ಜಡ್ಜ್ ಆಗಿ ಎಷ್ಟು ಸೆಷನ್ ಕೇಸುಗಳನ್ನು ನಡೆಸಿದ್ದಾರೆ, ಎಷ್ಟು ಸಿವಿಲ್ ಕೇಸುಗಳನ್ನು ನಡೆಸಿದ್ದಾರೆ, ಎಷ್ಟು ಪೋಲೀಸ್ ಕೇಸುಗಳನ್ನು ನಡೆಸಿದ್ದಾರೆ ಅವುಗಳಲ್ಲಿ ಎಷ್ಟು ಕೇಸುಗಳಿಗೆ ಜಡ್ಜ್‌ಮೆಂಟ್ ಕೊಟ್ಟರು ಅವುಗಳಲ್ಲಿ ಎಷ್ಟು ಕೇಸುಗಳು ಹೈಕೋರ್ಟಿನಲ್ಲಿ ಕನ್‌ಫರ್ಮ್ ಆಗಿವೆ ಎಂಬುದನ್ನು ನೋಡಿ ಅಲ್ಲಿ 100ಕ್ಕೆ 50 ಕೇಸುಗಳು ಕನ್‌ಫರ್ಮ್ ಆಗಿದ್ದರೆ ಅಂಥವರನ್ನು ಮಾತ್ರ ಹೈಕೋರ್ಟ್ ಜಡ್ಜ್ ಆಗಿ ನೇಮಿಸಬೇಕು. ಹಾಗೆ ಪಬ್ಲಿಕ್ ಪ್ರಾಸಿಕ್ಯೂಟರನ್ನು ನೇಮಿಸುವಾಗ ಅವರು ಎಷ್ಟು ಕೇಸ್‌ಗಳನ್ನು ನಡೆಸಿದ್ದಾರೆ ಎಷ್ಟು ಕೇಸುಗಳನ್ನು ಗೆದ್ದಿದ್ದಾರೆ, ಎಂಬುದನ್ನು ನೋಡಿ ಆ ಪೈಕಿ 50 ಪರ್ಸೆಂಟಿಗಿಂತ ಹೆಚ್ಚು ಕೇಸುಗಳನ್ನು ಗೆದ್ದಿದ್ದರೆ ಅಂಥವರನ್ನು ಲಕ್ಷ್ಯದಲ್ಲಿ ತೆಗೆದುಕೊಂಡು ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಿಸಬೇಕು. ಗೌರ್ನಮೆಂಟ್ ಪ್ಲೀಡರನ್ನು ನೇಮಿಸುವಾಗಲೂ ಇದೇ ತತ್ವವನ್ನು ಅನುಸರಿಸಬೇಕು. ಈ ನ್ಯಾಯಾಧೀಶರ ಹುದ್ದೆಗಳಿಗೆ ನೇಮಿಸುವಾಗ ಯಾವುದೇ ರಾಜಕೀಯ ಪ್ರಭಾವಕ್ಕಾಗಲೀ ಅಥವಾ ಮತ್ತೆ ಯಾವುದೇ ಪ್ರಭಾವಕ್ಕಾಗಲೀ ಒಳಗಾಗಿ ನೇಮಿಸಬಾರದು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರುಲಿಂಗಪ್ಪ (ತೀರ್ಥಹಳ್ಳಿ):—

ಸನ್ಮಾನ್ಯ ಅಧ್ಯಕ್ಷರೇ ಮೊಟ್ಟಮೊದಲನೆಯದಾಗಿ ಮಾನ್ಯ ಅರ್ಥ ಸಚಿವರು ಹಾಗೂ ಮಾನ್ಯ ಕಾನೂನು ಸಚಿವರು ಈ ಸಭೆಯಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತಾ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ನಾನು ಅಪೇಕ್ಷೆ ಮಾಡುತ್ತೇನೆ. ಮಾರಾಟ ತೆರಿಗೆಯ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಅಪೇಕ್ಷೆ ಪಡುವುದಿಲ್ಲ. ಏತಕ್ಕೆಂದರೆ ಮಾರಾಟ ತೆರಿಗೆ ಇಲಾಖೆ ಬಗ್ಗೆ ಮಾತನಾಡುವುದು ಎಂದರೆ ಸಮುದ್ರಕ್ಕೆ ಉಪ್ಪು ಹಾಕಿದಂತೆ. ಅಲ್ಲಿ ಲಂಚ ತುಂಬಿ ತುಳುಕಾಡುತ್ತಿದೆ. ಮಾನ್ಯ ಅರ್ಥ ಸಚಿವರು ತಮ್ಮ ಭಾಷಣದಲ್ಲಿ ಈ ವರ್ಷ ನಾವು ಮಾರಾಟ ತೆರಿಗೆಯನ್ನು ಎರಡು ಕೋಟಿ ಹೆಚ್ಚು ವಸೂಲು ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದೇನು ಬಹಳ ದಕ್ಷತೆ ಎಂದು ಹೇಳುವುದಕ್ಕಾಗುವುದಿಲ್ಲ. ಈ ಮಾರಾಟ ತೆರಿಗೆ ಇಲಾಖೆಯಲ್ಲಿ 2 ಕೋಟಿ 4 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ವಸೂಲು ಮಾಡಿದ್ದೇವೆ ಹೆಚ್ಚಿಗೆ ವರಮಾನ ಬಂದಿದೆ ಎಂದು ಮಾನ್ಯ ಅರ್ಥ ಸಚಿವರು ಹೇಳಿದ್ದಾರೆ. ಆದರೆ ಇದರಲ್ಲಿ ವಾಸ್ತವವಾಗಿ ಇರುವುದು ಏನೆಂದರೆ ಆಹಾರಧಾನ್ಯ ಮುಂತಾದ ಪದಾರ್ಥಗಳ ಬೆಲೆಗಳು ಏರಿರುವುದರಿಂದ ಆ ಮೂಲಕ ಸ್ವಲ್ಪ ಹೆಚ್ಚು ತೆರಿಗೆ ಬಂದಿರುವುದೇ ಹೊರತು ನಿಜವಾಗಿ ದಕ್ಷತೆಯಿಂದ ಈ ಮಾರಾಟ ತೆರಿಗೆ ಇಲಾಖೆ ಕೆಲಸ ಮಾಡಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಈಗ ಈ ಮಾರಾಟ ತೆರಿಗೆಯ ಬಾಕಿ ಎಷ್ಟು ಕೋಟಿ ರೂಪಾಯಿಗಳು ಇದೆ, ಎಂಬುದನ್ನು ಲೆಕ್ಕ ಕೊಡಬೇಕು. ಈಗ ಆ ಬಾಕಿಯನ್ನು ವಸೂಲು ಮಾಡದೇ ಇರುವುದಕ್ಕೆ ಕಾರಣವೇನು ?

ಅದು ಎಷ್ಟು ದಿವಸಗಳಿಂದ ಬಾಕಿ ಇದೆ; ಎಷ್ಟು ಜನಗಳಿಗೆ ರಿಯಾಯಿತಿಯನ್ನು ಕೊಟ್ಟಿದ್ದಾರೆ; ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ಎಷ್ಟು ಜನ ಇದ್ದಾರೆ, ಅವರ ಆಸ್ತಿಪಾಸ್ತಿಗಳು ಏನು ಹಿಂದೆ ಅವರ ಆಸ್ತಿಪಾಸ್ತಿಗಳು ಎಷ್ಟಿತ್ತು, ಈಗ ಎಷ್ಟಿದೆ ಎನ್ನತಕ್ಕಂಥಾ ಅಂಕಿ ಅಂಶಗಳನ್ನು ಸಂಗ್ರಹ ಮಾಡಿದರೆ ಒಂದು ಸರಿಯಾದ ಮಾಹಿತಿ ಸಿಕ್ಕುತ್ತದೆ. ಇವೊತ್ತು ನಮ್ಮ ಕಡೆಯಲ್ಲಿರತಕ್ಕ ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿರತಕ್ಕ ಸಣ್ಣ ಅಧಿಕಾರಿಗಳು ಬೇರೆಯವರಿಗಿಂತ ಹೆಚ್ಚು ಅನುಕೂಲ ವಾಗಿರುವುದನ್ನು ನಾನು ರುಜುವಾತುಪಡಿಸುತ್ತೇನೆ. 300-400 ರೂಪಾಯಿಗಳ ಸಂಬಳ ತೆಗೆದುಕೊಳ್ಳುವವರಿಗೆ ಅಷ್ಟು ಆಸ್ತಿ ಎಲ್ಲಿಂದ ಬಂತು ? ಇದರ ಬಗ್ಗೆ ಸರ್ಕಾರದವರು ಕೂಡಲೇ ವಿಚಾರಣೆ ಮಾಡಬೇಕು. ನಮ್ಮ ರಾಜ್ಯದ ಯಾವುದೇ ಇಲಾಖೆಯನ್ನು ತೆಗೆದುಕೊಳ್ಳಿ. ಎಲ್ಲಾ ಇಲಾಖೆಯಲ್ಲಿಯೂ ಕೂಡ ಲಂಚಗುಳಿತನ ಮತ್ತು ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದೆ ಎಂದು ನಾನು ಅತ್ಯಂತ ವಿಷಾದದಿಂದ ಹೇಳಬಯಸುತ್ತೇನೆ. ಇದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ. ಲಾಟರಿಯ ಬಗ್ಗೆ ನನ್ನ ಸ್ನೇಹಿತರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ವಿವರವಾಗಿ ಹೇಳಿದ್ದಾರೆ. ಅದನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಕಾರ್ಪೊರೇಷನ್‌ಗೆ ವಹಿಸುವ ಬದಲು ಸರ್ಕಾರದವರೇ ಅದನ್ನು ವಹಿಸಿಕೊಂಡು ಅದನ್ನು ಹಣಕಾಸಿನ ಇಲಾಖೆಯ ರಾಜ್ಯ ಸಚಿವರಾಗಿರತಕ್ಕ ಶ್ರೀಮಾನ್ ಶಿವಣ್ಣನವರಿಗೆ ವಹಿಸುವುದು ಒಳ್ಳೆಯದು. ಅವರು ಅದನ್ನು ದಕ್ಷತೆಯಿಂದ ನಿರ್ವಹಿಸುತ್ತಾರೆ. ಬೇಕಾದರೆ ಅವರಿಗೆ ಸ್ವಲ್ಪ ಟ್ರೈನಿಂಗ್ ಕೊಡಬಹುದು. ಅವರಿಗೆ ಲಾಟರಿಯ ಜವಾಬ್ದಾರಿಯನ್ನು ವಹಿಸಿದರೆ ಅವರು ಅದನ್ನು ಚೆನ್ನಾಗಿ ನಿರ್ವಹಿಸುತ್ತಾರೆ.

ಇನ್ನು ಕೆಲವು ಘಟನೆಗಳ ಬಗ್ಗೆ ಇಲ್ಲಿ ಹೇಳದೇ ಇರುವುದು ಒಳ್ಳೆಯದೆಂದು ಇವತ್ತು ನನಗೆ ಒಂದು ಮನವಿ ಬಂದಿದೆ. ಅದನ್ನು ತಮ್ಮ ಕಡೆಗೆ ಕಳುಹಿಸುತ್ತೇನೆ. ಅದು ಅರ್ಥ ಸಚಿವರಿಗೆ ಸಂಬಂಧಪಡುತ್ತದೆ. ನಮ್ಮಲ್ಲಿ ಮೈಸೂರ್ ಬ್ಯಾಂಕ್‌ನಂತಹ ಇನ್ನೂ ಅನೇಕ ಬ್ಯಾಂಕುಗಳಿವೆ. ನಮ್ಮ ಜನರಿಗೆ ಕೆಲವು ಸೌಕರ್ಯಗಳು ಮಾತ್ರ ಸಿಗುತ್ತಿವೆ. ಅಲ್ಲಿ ಕನ್ನಡಿಗರಿಗೂ ಸಹ ಕೆಲವು ಸೌಕರ್ಯಗಳನ್ನು ಕೊಟ್ಟಿದ್ದಾರೆ. ನಾಲ್ಮಡಿ ಕೃಷ್ಣರಾಜೇಂದ್ರ ಒಡೆಯರ್ ಅವರ ಕಾಲದಲ್ಲಿ ಮಾನ್ಯ ಶ್ರೀ ವಿಶ್ವೇಶ್ವರಯ್ಯನವರು ಆರಂಭದ ಮಾಡಿದಂಥ ಪ್ರಥಮತಃ ಬ್ಯಾಂಕ್ ಅಂದರೆ ಮೈಸೂರು ಬ್ಯಾಂಕ್. ಆದರೆ ಇಲ್ಲಿ ನಮ್ಮ ನೆಲದ ಜನಗಳಿಗೆ ಅನ್ನ ಮತ್ತು ಬುತ್ತಿಯನ್ನು ಕೊಡಬೇಕೆಂಬ ಗುರಿ ಮೊದಲಿನಿಂದಲೂ ಇತ್ತು. ಆದರೆ ಇವತ್ತು ಬೆಳೆದಂಥ ಬ್ಯಾಂಕುಗಳಿಗೆ ಅಷ್ಟಾಗಿ ಇಲ್ಲವೆಂದು ಹೇಳಬಹುದು. ಇವತ್ತು ಕನ್ನಡಿಗರನ್ನು ಬ್ಯಾಂಕುಗಳಲ್ಲಿ ಸೇರಿಸಿ ಕೊಳ್ಳುವುದನ್ನು ಕಡಿಮೆಮಾಡುತ್ತಾ ಇದ್ದಾರೆ. ಕಾಂಗ್ರೆಸ್ಸಿನವರು ಅಧಿಕಾರಕ್ಕೆ ಬಂದಮೇಲೆ ಇವರ ಸಂಖ್ಯೆ ಕ್ರಮೇಣ ಕಡಿಮೆಯಾಗಿ ಇತ್ತೀಚೆಗೆ ಮೈಸೂರು ಬ್ಯಾಂಕ್, ಮದ್ರಾಸ್ ಬ್ಯಾಂಕ್ ಆಗುತ್ತಿದೆಂದು ನಾನು ಬಹಳ ವಿಷಾದವಾಗಿ ಹೇಳುತ್ತೇನೆ. ಹಾಗೆಯೇ ನಮ್ಮಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ರಾಂಚ್ ಕೂಡ ಇದೆ. ಅಲ್ಲಿ ಏನೇನು ಅನ್ಯಾಯ ನಡೆಯುತ್ತಿದೆ, ಎಷ್ಟು ಜನ ಕನ್ನಡಿಗರಿಗೆ ಅಲ್ಲಿ ಅವಕಾಶ ಕೊಡುತ್ತಿದ್ದಾರೆಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನನಗೆ ಕೆಲವಾರು ಮನವಿಗಳು ಬಂದಿವೆ. ಅವನ್ನು ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ಕೊಡುತ್ತೇನೆ.

ಇನ್ನು ನಾನು ಈರಾಜ್ಯದ ವಿಧಾನಮಂಡಲದ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಅದನ್ನು ಈಗಾಗಲೇ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ್ದಾರೆ. ಈ ಸದನದಲ್ಲಿ ಸಾರ್ವಭೌಮತ್ವ ಉಂಟಾದಮೇಲೆ ಇದರ ಹತೋಟಿ ಸರ್ಕಾರಕ್ಕೆ ಇರಬಹುದೇ ಸಾರ್ವಭೌಮ ಸದನದ ಮೇಲೆ ಸರ್ಕಾರದ ಹತೋಟಿ ಇರುವಾಗ ಅದು ಪ್ರಜಾಪ್ರಭುತ್ವದಲ್ಲಿ ಅದರ ಸಿದ್ಧಾಂತದ ಒಂದು ವಿಪರ್ಯಾಸವೆಂದು ಹೇಳಬೇಕಾಗಿದೆ. ಶಾಸಕಾಂಗದ ಆಡಳಿತವನ್ನು ನಡೆಸತಕ್ಕ ಸಾರ್ವಭೌಮ ಅಧಿಕಾರ ಶಾಸಕಾಂಗ ಕಾರ್ಯದರ್ಶಿ, ಸ್ಪೀಕರ್, ಹಾಗೂ ಚೇರ್‌ಮನ್

ಅವರಿಗೆ ಇರಬೇಕು. ಅದರ ಮೇಲೆ ಹತೋಟಿ ನಿಮಗೆ ಇರಕೂಡದು. ಆ ರೀತಿ ಇದ್ದರೆ ನಿಜವಾಗಿ ಅದರಿಂದ ನಮ್ಮ ಸ್ವಾತಂತ್ರಕ್ಕೇ ಧಕ್ಕೆ ಬರುತ್ತದೆ. ಈ ಮಾತನ್ನು ನಾನು ಒಂದು ತಾತ್ವಿಕದೃಷ್ಟಿಯಿಂದ ಹೇಳುವುದಕ್ಕೆ ಅಪೇಕ್ಷಿಪಡುತ್ತೇನೆ. ಕಳೆದ ವರ್ಷದಿಂದ ಕೆಲವು ಕನ್ನಡ ಶೀಘ್ರಲಿಪಿಗಾರರನ್ನು ಈ ವಿಧಾನಮಂಡಲದಲ್ಲಿ ಸೇರಿಸಿಕೊಂಡಮೇಲೆ ಈಗ ಒಟ್ಟು 13 ಜನರು ಇದ್ದಾರೆ. ಎರಡು ಸದನಗಳಿಗೆ ಸಂಬಂಧಪಟ್ಟಹಾಗೆ ಇವರ ಸಂಖ್ಯೆಯನ್ನು 13ರಿಂದ 16ಕ್ಕೆ ಅಥವಾ 20ಕ್ಕೆ ಏರಿಸಬೇಕು. ಅವರಿಗೆ ವಿಶೇಷವಾದಂಥ ವೇತನವನ್ನು ಕೊಡಬೇಕು. ಇವರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡಬೇಕು. ತಿಂಗಳಿಗೆ 50 ರೂಪಾಯಿಗಳನ್ನು ವಿಶೇಷ ಭತ್ಯವನ್ನಾಗಿ ಪ್ರತಿಯೊಬ್ಬರಿಗೂ ಕೊಡಬೇಕು. ಇವರ ಒಂದು ಸಂಖ್ಯೆಯನ್ನು 16 ಅಥವಾ 20ಕ್ಕೆ ಏರಿಸಬೇಕು. ಅಧಿವೇಶನ ನಡೆಯುವಾಗ ವಿಶೇಷ ಭತ್ಯವನ್ನು ಇವರಿಗೆ ಕೊಡುವುದರಲ್ಲಿ ಸರ್ಕಾರ ಹಿಂದು ಮುಂದು ನೋಡದೆ ಕೊಡಬೇಕು. ಆಗ ಶಾಸಕಾಂಗದ ಬಗ್ಗೆ ನಮಗೆ ಎಷ್ಟು ಕಳಕಳಿ ಇದೆಯೆಂದು ವ್ಯಕ್ತವಾಗುತ್ತದೆ. ಹೋದ ಅಧಿವೇಶನದಲ್ಲಿಯೇ ಈ ಸದನದಲ್ಲಿ ಸರ್ಕಾರದವರು ಇದರ ಬಗ್ಗೆ ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅವರು ನಮ್ಮ ಶಾಸಕಾಂಗದ ಎಲ್ಲಾ ನಡವಳಿಕೆಗಳನ್ನು ವರದಿ ಮಾಡುತ್ತಾರೆ. ಆ ನಡವಳಿಕೆಗಳನ್ನೆಲ್ಲಾ ಕನ್ನಡ ಶೀಘ್ರಲಿಪಿಯಲ್ಲಿ ಬರೆದುಕೊಂಡು ಟೈಪ್ ಮಾಡುತ್ತಾರೆ. ನಮ್ಮಲ್ಲಿ ಈಗ ಬಹಳ ಮಂದಿ ಕನ್ನಡ ಟೈಪಿಸ್ಟ್ ಸಿಗದೇ ಇರುವುದರಿಂದ ಇವರಿಗೆ ಹೆಚ್ಚಿನ ಭತ್ಯಗಳನ್ನು ಕೊಡಬೇಕಾದುದು ನ್ಯಾಯವಾಗಿದೆ. ಏಕೆಂದರೆ ಇಂಗ್ಲಿಷ್ ಟೈಪಿಸ್ಟ್‌ಗೆ ಈಗ ವಿಶೇಷ ಭತ್ಯವನ್ನು ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ವಿಶೇಷ ಭತ್ಯವನ್ನು ಕನ್ನಡ ಟೈಪಿಸ್ಟ್‌ಗಳಿಗೂ ಕೊಟ್ಟರೆ ಒಳ್ಳೆಯದು. ಆಗ ಅವರು ಎಷ್ಟು ಸಂಖ್ಯೆಯಲ್ಲಿ ಬೇಕಾದರೂ ಸಿಗುತ್ತಾರೆ. ಇಲ್ಲಿ ಇವರಿಗೆ ಎಷ್ಟು ಸವಲತ್ತುಗಳನ್ನು ಕೊಡಬೇಕೆಂಬ ಬಗ್ಗೆ ವಿಚಾರಮಾಡತಕ್ಕ ಒಂದು ಸಂಧರ್ಭದಲ್ಲಿ ನಾನು ಒಂದು ಪತ್ರವನ್ನು ತಮಗೆ ಹಾಗೂ ಮಂತ್ರಿಗಳಿಗೆ ಕಳುಹಿಸುವುದಕ್ಕೆ ಅಪೇಕ್ಷೆಪಡುತ್ತೇನೆ. ನೀವು ಅಂಡರ್ ಸೆಕ್ರೆಟರಿಗಳನ್ನು ಹೆಚ್ಚುಮಾಡುತ್ತೀರಿ, ಸೆಕ್ಷನ್ ಮ್ಯಾನೇಜರ್ ಹುದ್ದೆಗಳನ್ನು ಹೆಚ್ಚುಮಾಡುತ್ತೀರಿ. ಅದು ಸರಿಯಲ್ಲ. ಬೇರೆಯವರಿಗೆ ಬೇಕಾದಹಾಗೆ ಎಲ್ಲ ಸವಲತ್ತುಗಳನ್ನು ಕೊಡುವುದಕ್ಕೆ ಬದಲು ಹೊಸ ಹುದ್ದೆಗಳನ್ನು ಹೆಚ್ಚಿಗೆ ಮಾಡುವುದರ ಬದಲು ಈಗ ಇಲ್ಲಿ ಕೆಲಸ ಮಾಡುತ್ತಾ ಇರುವವರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಟ್ಟು ಹೆಚ್ಚಿಗೆ ಅನಾವಶ್ಯಕವಾಗಿ ಹುದ್ದೆಗಳನ್ನು ನಿರ್ಮಾಣಮಾಡುವುದು ಬೇಡ. ನಮ್ಮ ಊರು ಒಳ್ಳೆಯದು. ನಮ್ಮ ಭಾಷೆ ಸುಂದರವಾದಂಥಾದ್ದು, ಸುಮಾರು 35—40ಲಕ್ಷ ಜನ ಮಾತನಾಡತಕ್ಕ ಭಾಷೆ. ಹಿಂದಿ, ಮರಾಠಿ, ತಮಿಳು ಹಾಗೂ ತೆಲಗು ಭಾಷೆಗಳನ್ನು ಮಾತನಾಡತಕ್ಕ ಜನರು ನಮ್ಮಲ್ಲಿ ಲಕ್ಷಾಂತರ ಜನರು ಇದ್ದಾರೆ, ಅಂದಮೇಲೆ ನಮ್ಮ ಭಾಷೆಯ ಶ್ರೀಘ್ರಲಿಪಿಗಾರರನ್ನು ಇಲ್ಲಿ ಸಾಕಷ್ಟು ನೇಮಿಸದೇ ಇದ್ದರೆ, ಅದು ನಮ್ಮ ವಿಶಾಲ ಭಾರತೀಯ ಭಾಷೆಗಳಿಗೆ ತೋರಿಸತಕ್ಕ ಒಂದು ಅವಹೇಳನವಲ್ಲದೆ ಬೇರೆ ಏನೂ ಇಲ್ಲ. ಆದರೆ ಇಂಗ್ಲಿಷ್ ನಮ್ಮ ಜೀವ ಎನ್ನುವ ರೀತಿ ಈಗಲೂ ನಡೆಯುತ್ತಿದೆ. ಪರಂಗಿ ಭಾಷೆಗೆ ಬೇರೆ ಕಡೆಗಳಲ್ಲಿ ಕೊಡುತ್ತಿರುವ ಪ್ರೋತ್ಸಾಹದ ಹಾಗೆ ನಮ್ಮ ರಾಜ್ಯಭಾಷೆಗಳಿಗೆ ನಾವು ಇನ್ನೂ ಕೊಡಬೇಕಾದ ಪ್ರೋತ್ಸಾಹವನ್ನು ಇಲ್ಲಿ ಕೊಡಲಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಇದೇ ದೃಷ್ಟಿಯಿಂದ ನ್ಯಾಯ ಇಲಾಖೆಯನ್ನು ತೆಗೆದುಕೊಂಡು ನೋಡಿದ್ದೇ ಆದರೆ, ನೀವು ಈಗ ಕೊಡುತ್ತಾ ಇರುವ ನ್ಯಾಯ ಸರಿಯೋ ಎಂದು ನಾನು ಈಗ ಪ್ರಶ್ನೆಮಾಡಬೇಕಾಗಿದೆ. ಇಂಗ್ಲೆಂಡಿನ ಜನರಿಗೆ ನ್ಯಾಯ ಕೊಡುವವರು ತಾವು, ಕರ್ಣಾಟಕ ಜನತೆಗೆ ನ್ಯಾಯ ಕೊಡುವವರು ತಾವು. ಈ ರಾಜ್ಯದ ಜನರ ಪ್ರತಿನಿಧಿಗಳಾಗಿ ನಾವು ಇರುವಾಗ ಸರ್ಕಾರ ನಿಜವಾಗಿ ಜನರ ಭಾಷೆಯಲ್ಲಿ ನ್ಯಾಯ ದೊರಕಿಸುವುದಕ್ಕೆ ಪ್ರಯತ್ನಮಾಡಬೇಕು. ಆದರೆ ಆ ರೀತಿ ಆಗುತ್ತಾ ಇಲ್ಲವೆಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಕಳೆದ 25 ವರ್ಷಗಳಿಂದಲೂ ನಮ್ಮ ಜನರಿಗೆ ಸರಿಯಾಗಿ ನ್ಯಾಯ ದೊರಕುತ್ತಾ ಇಲ್ಲ. ನಮ್ಮ ಜನರ ಭಾಷೆಯಲ್ಲಿ ಯಾವಾಗ ನಮ್ಮ ಜನರಿಗೆ ನ್ಯಾಯ ಲಭ್ಯವಾಗುವುದಿಲ್ಲವೋ ಆಗ ಅವರ ಪಾಲಿಗೆ

ನ್ಯಾಯವಿಲ್ಲ ಅದು ಅನ್ಯಾಯ ಎಂಬುದಾಗಿ ನಾನು ಭಾವಿಸುತ್ತೇನೆ. ಇದಕ್ಕೆ ನಾನು ಒಂದು ಸಣ್ಣ ಉದಾರಣೆಯನ್ನು ಕೊಡುತ್ತೇನೆ. ಇವತ್ತು ಅಧಿಕಾರಿಗಳು ಯಾರೇ ಇರಲಿ, ಅವರಿಗೆ ಕನ್ನಡ ಬಾರದೇ ಇದ್ದರೆ, ಅಂತಹ ಅಧಿಕಾರಿಗಳು ಕನ್ನಡದಲ್ಲಿ ಬರೆಯುವುದಕ್ಕೆ ಪ್ರಯತ್ನಗಳನ್ನು ಮಾಡಬೇಕು. ಆ ರೀತಿ ಮಾಡಿದರೆ ಅವರು ಏತಕ್ಕೆ ಬರೆಯುವುದಕ್ಕೆ ಸಾಧ್ಯವಿಲ್ಲ? ನಿಮ್ಮ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ನ್ಯಾಯಗಳನ್ನು ತೀರ್ಮಾನ ಮಾಡುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಿದರೆ, ಅದಕ್ಕೆ ಅಲ್ಲಿನ ಅಧಿಕಾರಿಗಳಿಗೆ ಸೂಕ್ತ ಆದೇಶವನ್ನು ಕೊಟ್ಟರೆ, ಕೇವಲ 24 ಗಂಟೆಗಳಲ್ಲಿ ನಿಮಗೆ ಬೇಕಾದಂಥ ಅಧಿಕಾರಿಗಳನ್ನು ಕನ್ನಡದಲ್ಲಿಯೇ ತೀರ್ಮಾನಗಳನ್ನು ಬರೆದು ಕೊಡುವುದಕ್ಕೆ ವ್ಯವಸ್ಥೆ ಮಾಡಬಹುದು. ಇಲ್ಲದಿದ್ದರೆ ನೀವು ಹೇಳಿದಂಥ ಶಿಕ್ಷೆಗೆ ನಾನು ಗುರಿಯಾಗುತ್ತೇನೆ. ನಿಮಗೆ ಅದರಲ್ಲಿ ಅಪಮಾನವಿಲ್ಲ. ಕಾನೂನು ಗದ್ದುಗೆಯಲ್ಲಿ ಕುಳಿತಿರುವವರು ನೀವು ಯಾವ ಒಂದು ಅಪಮಾನವಿಲ್ಲದೆ ನಿರಭಿಮಾನಿಕುಕ್ಷಿಯಾಗಿ ಕುಳಿತಿದ್ದೀರಿ. ಆದ್ದರಿಂದ ನ್ಯಾಯಾಲಯ ಭಾಷೆ ಕನ್ನಡವಾಗಬೇಕು. ಕಾನೂನು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕಾಯಿದೆ ಪುಸ್ತಕಗಳನ್ನೂ ಕೂಡ ಕನ್ನಡಕ್ಕೆ ಅನುವಾದಿಸಬೇಕು. ಕೋರ್ಟಿನ ವ್ಯವಹಾರದ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಸರ್ಕಾರ ಕಾನೂನು ಮಾಡುವುದಕ್ಕೆ ಮುಂಚೆ ಯಾರು ಹೇಗೆ ಮಾಡುತ್ತಾರೆಂಬ ಊಹೆಯ ಮೇಲೆ ರಿಟ್ ಅರ್ಜಿ ಹಾಕಿದರೆ ಅದರ ಮೇಲೆ ಸ್ಟೇ ಆರ್ಡರ್ ಕೊಡುತ್ತಾರೆ. ಉದಾಹರಣೆಗೆ ಹೇಳುವುದಾದರೆ ಹಿಂದೆ ಪಿ. ಎಸ್. ಸಿ. ಅಧ್ಯಕ್ಷರ ವಿಷಯವಾಗಿ ಸರ್ಕಾರದಿಂದ ಯಾವ ನಿರ್ಧಾರವೂ ಬಂದಿರಲಿಲ್ಲ. ಅಷ್ಟರೊಳಗೆ ಅವರು ಹೋಗಿ ರಿಟ್ ಹಾಕಿದರು. ಸ್ಟೇ ಕೊಟ್ಟರು. ಇವರನ್ನು ಬರತರ್ಫ್ ಮಾಡಿರಲಿಲ್ಲವೆಂಬ ಊಹೆಯ ಮೇಲೆ ಅರ್ಜಿ ಹಾಕಿದರು. ಕೋರ್ಟಿನವರು ಸ್ಟೇ ಕೊಟ್ಟರು. ಇದು ಪಕ್ಷಪಾತದೃಷ್ಟಿಯಿಂದ ನಡೆಯುತ್ತಿದೆಯೆಂದು ವ್ಯವಸ್ಥೆಯಾದುದೇ ?

Mr. DEPUTY SPEAKER.—Any judgment or decision of the High Court may not be criticised here.

ಶ್ರೀ ಕೋಣಂದೂರು ಲಿಂಗಪ್ಪ:—ಅದಕ್ಕೇನು ಆಧಾರವೆಂದರೆ, ಆರ್ಡರ್ ಕಾಪಿ ಕೈಲಿ ಇರಬೇಕು. ಇಲ್ಲದಿದ್ದರೆ ಆ ರೀತಿಯಾಗಿ ಎತ್ತಿ ಕಟ್ಟುವುದು ಅದು ಒಂದು ಒಳ್ಳೆಯ ಸಂಪ್ರದಾಯವಲ್ಲ. ಅಂತಹ ಜನರಿಗೆ ನ್ಯಾಯದಲ್ಲಿ ವಿಶ್ವಾಸವೇ ಹೋಗುತ್ತದೆ. ಅದಕ್ಕೆ ಪೂರ್ವಕವಾಗಿ ಸುಪ್ರೀಂ ಕೋರ್ಟಿನಲ್ಲಿ ನಡೆಯುವುದನ್ನು ಅವಲೋಕನೆ ಮಾಡಿದರೆ ಆಗ ಎಲ್ಲವೂ ಗೊತ್ತಾಗುತ್ತದೆ. ತತ್ಪೂರ್ವಕವಾಗಿ ಜನರಿಗೆ ಏನೋ ಒಂದು ಭೀತಿ ಉಂಟಾಗುವ ಪರಿಸ್ಥಿತಿ ನ್ಯಾಯ ತೀರ್ಮಾನಗಳಲ್ಲಿ ಆಗಬಾರದು. ಪಕ್ಷಪಾತ ದೃಷ್ಟಿಯನ್ನು ತೋರಿಸಬಾರದು. ಸರ್ಕಾರದವರು ಯಾರನ್ನೋ ತಮ ಮನಸ್ಸಿಗೆ ಬಂದ ಒಬ್ಬ ಡಿಸ್ಟ್ರಿಕ್ಟ್ ಜಡ್ಜ್ ಅವರನ್ನು ರಾಜ್ಯ ಮಟ್ಟದ ಒಂದು ಟ್ರಿಬ್ಯೂನಲ್‌ಗೆ ಹಾಕುವುದರಿಂದ ಇಂತಹ ಅವ್ಯವಹಾರಗಳು ಜಾಸ್ತಿಯಾಗುತ್ತವೆ. ಈ ಒಂದು ಜವಾಬ್ದಾರಿ ಮಾನ್ಯ ಶ್ರೀ ನಗರಾಳ್ ಸಂಗಪ್ಪನವರ ಮೇಲೆ, ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ಹಾಗೂ ಮಾನ್ಯ ಶ್ರೀ ಘೋರ್ಪಡೆಯವರ ಮೇಲೆ ಇದೆ. ಒಟ್ಟಿನಲ್ಲಿ ಇಂತಹ ಅನ್ಯಾಯಗಳು ಖಂಡಿತವಾಗಿ ಆಗಬಾರದು.

ಆ ಮಾತು ಎಲ್ಲಿ ಹೋಯಿತು? ನಮ್ಮ ಹೊಸನಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಿಗೆ ಒಂದೊಂದು ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ್ ಕೋರ್ಟನ್ನು ಕೊಡುವುದಾಗಿ ಹಿಂದೆ ತಿಳಿಸಿದ್ದರು. ಆದರೆ ಇಲ್ಲಿಯವರೆಗೂ ಕೂಡ ಅದನ್ನು ಕಾರ್ಯಗತ ಮಾಡಲಿಲ್ಲ. ಇನ್ನು ಈ ಮಾಜೀ ಸೈನಿಕರ ಬಗ್ಗೆ ಕೊಡುತ್ತಿರುವ ವಿಶ್ರಾಂತಿ ವೇತನ ಏನಿದೆ—ಮಾ—ಎಂದು ಮಾರುದ್ದ ಹಿಂದಕ್ಕೆ ಜೀ—ಎಂದರೆ ಜಿಗಿದು, ಸೈ—ಎಂದರೆ ಸೈರನ್ ಅಂತೆ ಕೂಗತಕ್ಕವರು ಯಾರಿದ್ದಾರೆ? ಇಂಥ ಮಾಜೀ ಸೈನಿಕರಿಗೆ ವಿಶ್ರಾಂತಿವೇತನ ಕೊಡುವುದನ್ನು ನಾನೂ ಒಪ್ಪುತ್ತೇನೆ. ಶ್ರೀ ಸಿದ್ದಪ್ಪನವರು ಲಾಯರ ವಿಷಯ ಹೇಳಿದ್ದಕ್ಕೆ ಇದನ್ನು ನಾನು ಹಾಸ್ಯಕ್ಕಾಗಿ ಹೇಳಿದೆ ಅಷ್ಟೆ. ಇನ್ನು ನನಗೆ ಪಾಠ ಹೇಳಿದ

ಗುರುಗಳು ರಿಟೈರಾಗಿ 8 ವರ್ಷಗಳಾದರೂ ಅವರಿಗಿನ್ನೂ ಪೆನ್‌ಷನ್ ಸಿಕ್ಕಿಲ್ಲ. ಅದನ್ನು ಬೇಗ ಸೆಟಲ್ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ನನಗೆ ಅಧ್ಯಕ್ಷರು ಮಾತನಾಡುವುದಕ್ಕೆ ಇಷ್ಟು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಘಟ್ಟಿ ಚಂದ್ರಶೇಖರ (ಗುಬ್ಬಿ) :—ಮಾನ್ಯ ಅಧ್ಯಕ್ಷರೇ ? ತಾವು ನನಗೆ ಕೊಟ್ಟಿರತಕ್ಕ 15 ನಿಮಿಷಗಳಲ್ಲಿ ನಾನು ಈ ಎಲ್ಲಾ ಡಿಮ್ಯಾಂಡುಗಳ ಮೇಲೂ ಮಾತನಾಡುವುದಕ್ಕೆ ಕಾಲಾವಕಾಶ ಇಲ್ಲದಿರುವ ಕಾರಣ ನಾನು ಈಗ ಈ ಅವಧಿಯಲ್ಲಿ ಮಾರಾಟ ತೆರಿಗೆಯ ಇಲಾಖೆಯ ಬಗ್ಗೆ ಮಾತ್ರ ಒಂದೆರಡು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ.

ಮೊಟ್ಟಮೊದಲನೇಯದಾಗಿ ಈ ಸೇಲ್ಸ್ ಟ್ಯಾಕ್ಸ್ ಬಾಬನ್ನು ಶ್ರೀ• ರಾಜಗೋಪಾಲಾ ಚಾರಿಯವರು ಜಾರಿಗೆ ತಂದರು. ಅವರು ಹಿಂದೆ ಮದ್ರಾಸ್ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಾಗ ಅಲ್ಲಿ ಹೆಂಡದ ಬಾಬನ್ನು ವಜಾ ಮಾಡಬೇಕಾಗಿ ಬಂದಾಗ ಅದರ ವರಮಾನವನ್ನು ಸರಿಗಟ್ಟಿ ಕೊಳ್ಳುವುದಕ್ಕಾಗಿ ಈ ಸೇಲ್ಸ್ ಟ್ಯಾಕ್ಸ್ ಬಾಬನ್ನು ಜಾರಿಗೆ ತಂದರು. ಆದರೆ ಈ ದಿನ ಈ ಎರಡೂ ಜಾರಿಯಲ್ಲಿವೆ. ಆದರೆ ಈ ದಿವಸ ಈ ಎರಡೂ ಇಲಾಖೆಗಳಿಂದ ಸರ್ಕಾರಕ್ಕೆ ಬಹಳ ಹೆಚ್ಚಿನ ವರಮಾನ ಬರುತ್ತಿದೆ. ಅನೇಕರು ಈ ಸೇಲ್ಸ್ ಟ್ಯಾಕ್ಸ್ ಬಾಬನ್ನು ಕಾಮಧೇನು ಎಂದು ಕರೆದಿದ್ದಾರೆ. ಈ ಸೇಲ್ಸ್ ಟ್ಯಾಕ್ಸ್ ಬಾಬಿನಿಂದ 1971-72 ರಲ್ಲಿ ಸರ್ಕಾರಕ್ಕೆ ಬಂದ ವರಮಾನ 4887 ಲಕ್ಷ ಆದರೆ, 1972-73 ಕ್ಕೆ ಇದರಿಂದ ಸರ್ಕಾರಕ್ಕೆ 5799.76 ಲಕ್ಷ ಆದಾಯ ಬಂದಿದೆ. ಹೀಗೆ ಈ ಬಾಬಿನಿಂದ ಸರ್ಕಾರಕ್ಕೆ ಬರತಕ್ಕ ಆದಾಯ ವರ್ಷೇ ವರ್ಷೇ ಹೆಚ್ಚುತ್ತಿದೆ. ಇದು ಸರ್ಕಾರಕ್ಕೆ ಜನರಿಂದ ಅಂದರೆ ವರ್ತಕರಿಂದ ನೇರವಾಗಿ ಬರತಕ್ಕ ಟ್ಯಾಕ್ಸ್ ಹಣವಾದರೆ ಇನ್ನು ಗೀಕ್ಸ್ ರೂಪದಲ್ಲಿ ಇದಕ್ಕೆ ಮೂರರಷ್ಟು ಅಧಿಕಾರಿಗಳ ಜೇಬಿಗೆ ಹೋಗುತ್ತದೆ. ಇದಕ್ಕೆಲ್ಲಾ ಮುಖ್ಯ ಕಾರಣ ಎಂದರೆ ಇವರ ಕಾನೂನಿನಲ್ಲಿ ಇರತಕ್ಕ ಲೋಪ ದೋಷಗಳೇ ಎಂದು ಹೇಳಬೇಕಾಗಿದೆ. ಅಷ್ಟೇ ಅಲ್ಲದೆ ಅಧಿಕಾರಿಗಳಲ್ಲಿ ಇರತಕ್ಕ ಅರೋಗೆನ್ಸ್ ಕೂಡ ಕಾರಣ ಎನ್ನಬಹುದು. ಅಂತೂ ಒಟ್ಟಿನಲ್ಲಿ ಈ ಆಫೀಸಿನಲ್ಲಿ ವರ್ತಕರಿಗೆ ಹೆಚ್ಚಿನ ಕಿರುಕುಳವಾಗುತ್ತಿದೆ. ಕೆಲವು ಸಾಮಾನುಗಳಿಗೆ ಮಲ್ಟಿಪಾಯಿಂಟ್ ಟ್ಯಾಕ್ಸನ್ನು ಹಾಕಿದ್ದಾರೆ. ಉದಾಹರಣೆಗೆ ಅಕ್ಕಿಗೆ ಮಲ್ಟಿ ಪಾಯಿಂಟ್ ಟ್ಯಾಕ್ಸನ್ನು ಹಾಕಿದ್ದಾರೆ. ಈ ದಿವಸ ಒಬ್ಬ ವರ್ತಕ ತುಮಕೂರಲ್ಲಿ ಅಕ್ಕಿಯನ್ನು ಕೊಂಡು ಅದನ್ನು ಗುಬ್ಬಿಯಲ್ಲಿ ಅಂದರೆ ತುಮಕೂರಿಗೆ 12 ಮೈಲಿ ದೂರದಲ್ಲಿರತಕ್ಕ ಬೇರೊಂದು ಊರಿನಲ್ಲಿ ಮಾರಾಟ ಮಾಡುವುದಕ್ಕೆ ತರಬೇಕಾಗಿದ್ದರೆ, ಅವನು ಅದಕ್ಕೆ ಒಂದೂವರೆ ಪರ್ಸೆಂಟ್ ಮಾರಾಟ ತೆರಿಗೆಯನ್ನು ಕೊಡಬೇಕು. ಅದರ ಮೇಲೆ ಲಾರಿ ಬಾಡಿಗೆ, ಅಂದರೆ ಒಂದು ಕ್ವಿಂಟಾಲಿಗೆ ಏನು ಇಲ್ಲಾ ಎಂದರೂ 8-9 ರೂಪಾಯಿಗಳು ತುಮಕೂರಿಗೆ--12 ಮೈಲಿದೂರದಲ್ಲಿರತಕ್ಕ ಗುಬ್ಬಿಯಲ್ಲಿ ಅದೇ ಅಕ್ಕಿಯನ್ನು ಮಾರಾಟ ಮಾಡುವುದಕ್ಕೂ ವ್ಯತ್ಯಾಸವಿರುತ್ತದೆ. ಅಂದಾಗ ಜನರು ಯಾರು ಗುಬ್ಬಿಯಲ್ಲಿ ಅಷ್ಟು ಹೆಚ್ಚಿನ ಬೆಲೆಯನ್ನು ಕೊಟ್ಟು ಅಕ್ಕಿಯನ್ನು ಕೊಳ್ಳುವುದಿಲ್ಲ. ಅವರೆಲ್ಲಾ ತುಮಕೂರಿಗೆ ಬಂದು ಇಲ್ಲೇ ಅಕ್ಕಿಯನ್ನು ಕೊಳ್ಳುತ್ತಾರೆ. ಅಂದರೆ ಆ ಗುಬ್ಬಿಯಲ್ಲಿ ಮಾರಾಟ ಮಾಡಲು ಕೊಂಡ ಅಕ್ಕಿ ಏನಾಗಬೇಕು ? ಈ ಇಲಾಖೆಯವರು ಚಾಪೆ ಕೆಳಗೆ ತೂರಿದರೆ—ವರ್ತಕರು ರಂಗೋಲೆ ಕೆಳಗೆ ತೂರತಕ್ಕ ಬುದ್ಧಿ ಅವರಲ್ಲಿದೆ. ಅವರು ತುಮಕೂರಿನಲ್ಲಿ ಅಕ್ಕಿಯನ್ನು ಕೊಂಡು ಅದಕ್ಕೆ ಬಿಲ್ಲನ್ನು ಹಾಕಿಸಿದಂತೆ ತರುತ್ತಾರೆ. ಅಲ್ಲಿ ಇದನ್ನು ಚೆಕ್‌ಮಾಡುವುದಕ್ಕೆ ಒಂದು ಚೆಕ್ ಪೋಸ್ಟ್ ಇಟ್ಟಿದ್ದಾರೆ. ಆದರೆ ವಾಸ್ತವವಾಗಿ ಅದು ಚೆಕ್ ಪೋಸ್ಟಲ್ಲ, ಅದು ಚೆಕ್—ಪಾಕೆಟ್ ಪೋಸ್ಟ್ ಅಷ್ಟೇ . ಈ ಅಕ್ಕಿ ಲಾರಿ ಆ ಚೆಕ್ ಪೋಸ್ಟಿನ ಹತ್ತಿರ ಹೋದಾಗ ಅಲ್ಲಿಯ ಅಧಿಕಾರಿ ' ಎಲ್ಲಿ ನಿಮ್ಮ ನಿಮ್ಮ ಬಿಲ್ಲು ಮತ್ತು ಪಟ್ಟಿ ಕೊಡಿ ಎಂದಾಗ ಆ ವರ್ತಕರು ಹತ್ತು ಇಂಟು ಐದು— ಹೀಗೆ ಐವತ್ತು ರೂಪಾಯಿಗಳನ್ನು ಕೊಟ್ಟಾಗ ಆ ಅಧಿಕಾರಿ ಮತ್ತೆ ಗಟ್ಟಿಯಾಗಿ, ಎಲ್ರೀ,

ತೆಗೀರಿ ? ಎಂದಾಗ ಆ ವರ್ತಕರು ಮತ್ತೆ ಐವತ್ತು ರೂಪಾಯಿಗಳನ್ನು ಮುಂದಿಡುತ್ತಾರೆ. ಆಗ ಲಾರಿ ಎಲ್ಲಿಗೆ ಬೇಕಾದರೂ ಹೋಗಬಹುದು. ಹೀಗೆ ನಡೆಯುತ್ತಿದೆ. ನಾನು ಹೇಳುತ್ತಿರುವುದು ಸುಳ್ಳೆ ಅಥವಾ ನಿಜವೇ ಎಂಬುದನ್ನು ಮಾನ್ಯ ಸಚಿವರು ಬೇಕಾದರೆ ಪರೀಕ್ಷೆ ಮಾಡಿ ನೋಡಬಹುದು. ಹಿಂದೆ ವಿಕ್ರಮರಾಜನು ತನ್ನ ರಾಜ್ಯದಲ್ಲಿ ಆಡಳಿತ ಸರಿಯಾಗಿ ನಡೆಯುತ್ತಿದೆಯೋ ಇಲ್ಲವೇ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ರಾತ್ರಿ ವೇಳೆಯಲ್ಲಿ ವೇಷವನ್ನು ಮರೆಸಿಕೊಂಡು ಹೋಗುತ್ತಿದ್ದನಂತೆ. ಆದರೆ ಈ ದಿವಸ ಈ ಅಕ್ಕಿ ಲಾರಿಯನ್ನು ಡ್ರೈವ್ ಮಾಡತಕ್ಕ ಡ್ರೈವರುಗಳೆಲ್ಲಾ ಸಾಮಾನ್ಯವಾಗಿ ಪಂಜಾಬಿಗಳು, ಸಿಕ್ಕರೇ ಇರುವುದರಿಂದ ಮಾನ್ಯ ಸಚಿವರು ತಾವು ಕೂಡ ಇದರಂತೆ ವೇಷಧರಿಸಿ ರಾತ್ರಿ ಒಂದು ಲಾರಿಯನ್ನು ಡ್ರೈವ್ ಮಾಡಿಕೊಂಡು ಆ ಚೆಕ್ ಪೋಸ್ಟ್‌ಗಳ ಹತ್ತಿರ ಹೋಗಿ ನಾನು ಹೇಳುತ್ತಿರುವುದರ ಸತ್ಯಾಂಶವನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಒಂದು ಸಾರಿ ಹೀಗೆ ಪರೀಕ್ಷೆ ಮಾಡಬೇಕೆಂದು ಹೇಳುತ್ತೇನೆ. ಹಿಂದೆ ಒಬ್ಬರು ಯಾರೋ ಮಾಜಿ ಮಂತ್ರಿಗಳು ದೇವರ ಫೋಟೋಗಳನ್ನೆಲ್ಲಾ ಕಿತ್ತೊಗೆಯಬೇಕೆಂದು ಹೇಳಿದ್ದರಲ್ಲಾ ಹಾಗೇ, ಅಂದರೆ ಈ ದಿವಸ ಈ ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಎಂದೋ ದೇವರುಗಳನ್ನು ಕಿತ್ತೆಸದಿದ್ದಾರೆ. ಆದರೆ ಅವರೀಗ ಅಧಿಕಾರದಲ್ಲಿರತಕ್ಕ ಮಂತ್ರಿಗಳ ಫೋಟೋವನ್ನು ಮಾತ್ರ ಇಟ್ಟುಕೊಂಡಿದ್ದಾರೆ; ಇದನ್ನು ಅವರು ಪೂಜೆ ಮಾಡುತ್ತಿದ್ದಾರೆ. ನಾನು ಕಳೆದ ಅಧಿವೇಶನದಲ್ಲಿ ಚಿಕ್ಕನಾಯಕನ ಹಳ್ಳಿಯಲ್ಲಿ ದಂಡ್ಡನ್ನು ಹೊಡೆಯುವುದಕ್ಕೆ ಹೋಗಿದ್ದಾಗ ಅಲ್ಲಿ 25–30 ವರ್ತಕರಿಂದ ಹೊಡೆತತಿಂದು ಬಂದಿದ್ದ ವಿಷಯವನ್ನು ತಿಳಿಸಿದ್ದೆ. ಸರ್ಕಾರದವರು ಆ ವಿಷಯದಲ್ಲಿ ಯಾವ ಒಂದು ಕಾರ್ಯಕ್ರಮವನ್ನೂ ತೆಗೆದುಕೊಳ್ಳದೆ ಇರುವುದರಿಂದ ಆ ಅಧಿಕಾರಿಗಳಿಗೆ ಇವರ ಬಗ್ಗೆ ಒಂದು ದೊಡ್ಡ ನಂಬಿಕೆ ಬಂದಿದೆ. ಅವರಿಗೆ ಇರುವುದೆಲ್ಲಾ ಒಂದೇ ಒಂದು ಗುರಿ; ಸರ್ಕಾರಕ್ಕೆ ಬರಬೇಕಾದ ಹಣವನ್ನು ಬರುವಂತೆ ಮಾಡಿದರಾಯಿತು—ಅಷ್ಟಾದರೆ ನಮ್ಮನ್ನು ಅವರೇನೂ ಕೇಡಿಸುವುದಿಲ್ಲ ಎಂಬ ನಂಬಿಕೆ, ಅವರಿಗೆ ಬಂದಿದೆ. ಹಿಂದೆ ಘಜ್ನಿಮಹಮ್ಮದನು ಇಂಡಿಯಾ ದೇಶದ ಮೇಲೆ ಹದಿನೆಂಟುಸಾರ್ತಿ ದಂಡೆತ್ತಿ ಬಂದಿದ್ದಾಗ ಅವನು ತನ್ನ ಸೈನಿಕರಿಗೆ ನೀವು ಎಷ್ಟು ಹಿಂದೂ ವಿಗ್ರಹಗಳನ್ನಾದರೂ ಧ್ವಂಸ ಮಾಡಿ ಎಷ್ಟು ಹಿಂದುಗಳನ್ನು ಬೇಕಾದರೂ ಜಾತಿ ಭ್ರಷ್ಟರನ್ನಾಗಿ ಮಾಡಿ. ಎಷ್ಟು ಹಣವನ್ನು ಬೇಕಾದರೂ ಲೂಟಿ ಮಾಡಿ, ಆದರೆ ನಿಮಗೆ ಎಲ್ಲಿಯಾದರೂ ಸುಂದರ ಸ್ತ್ರೀಯರು ಸಿಕ್ಕಿದರೆ ಅವರನ್ನು ತಂದು ನನ್ನ ಅಂತಃಪುರಕ್ಕೆ ಒಪ್ಪಿಸಬೇಕೆಂದು ಆಜ್ಞೆ ಮಾಡಿದ್ದನಂತೆ. ಅದೇ ರೀತಿಯಾಗಿ ಈ ಸಂದರ್ಭದಲ್ಲಿ ಮಾನ್ಯ ಸಚಿವರು ಅವರ ಅಧಿಕಾರಿಗಳಿಗೆ ನೀವು ಏನಾದರೂ ಮಾಡಿಕೊಳ್ಳಿ, ಸರ್ಕಾರಕ್ಕೆ ಮಾತ್ರ 5799 ಲಕ್ಷ ರೂಪಾಯಿಗಳನ್ನು ಮಾತ್ರ ತಂದೊಪ್ಪಿಸಬೇಕು ಎಂದು ಆಜ್ಞೆ ಮಾಡಿದಂತೆ ಕಾಣುತ್ತಿದೆ. ಇವರ ಈ ಆಶೀರ್ವಾದದಿಂದಲೇ ಅವರು ಹಾಗೆ ವರ್ತಿಸುತ್ತಿದ್ದಾರೆ. ಈ ದಿವಸ ತುಮಕೂರಲ್ಲಿ ಈ ಸೇಲ್ಸ್ ಟ್ಯಾಕ್ಸ್ ಇಲಾಖೆ ಸಿಬ್ಬಂದಿ ಲೆಕ್ಕವಿಲ್ಲದಷ್ಟಿದೆ. ನಾನಾ ಬಗೆಯ ಸಿಬ್ಬಂದಿ ಇದೆ. 25 ಎ. ಸಿ. ಟಿ. ಒ. ಗಳಿದ್ದಾರೆ. ಅವರ ಮೇಲೆ ಸಿ. ಟಿ. ಒ. ಗಳು ಅಲ್ಲದೆ ಫ್ಲೈಯಿಂಗ್ ಸ್ಕ್ವಾಡ್ ಬೇರೆ. ಅವರ ಮೇಲೆ ಇಂಟಲಿಜೆನ್ಸ್ ಬ್ಯೂರೂ ಬೇರೆ. ಹೀಗೆ ಲೆಕ್ಕವಿಲ್ಲದಷ್ಟಿದ್ದಾರೆ ಜನ. ಆದರೆ ಸರ್ಕಾರಕ್ಕೆ ಬರಬೇಕಾದ ದುಡ್ಡು ಮಾತ್ರ ಸರಿಯಾಗಿ ಬರುತ್ತಿಲ್ಲ. ಈ ನಾನಾ ಬಗೆಯ ಸಿಬ್ಬಂದಿಯೇನಿದೆ. ಇವರು ಪೈಪೋಟಿಯಿಂದ ಒಬ್ಬರಿಗಿಂತ ಇನ್ನೊಬ್ಬರು ಲಂಚವನ್ನು ಹೊಡೆಯುವುದರಲ್ಲಿ ಖದೀಮರಾಗಿದ್ದಾರೆ. ಹೀಗೆ ಇವರು ವರ್ತಕರ ಒಂದುಪಾಲು ರಕ್ತವನ್ನು ಹೀರಿದರೆ, ವರ್ತಕರು ಇವರ ಹತ್ತು ಪಟ್ಟು ಜಾಸ್ತಿ ರಕ್ತವನ್ನು ಕೊಂಡು ತಿನ್ನುವವರಿಂದ ಹೀರುತ್ತಾರೆ. ಒಟ್ಟಿನಲ್ಲಿ ಸರ್ಕಾರಕ್ಕೆ ದೊಡ್ಡ ಅನ್ಯಾಯವಾಗುತ್ತಿದೆ.

ನಾನಾಗಲೇ ಹೇಳಿದಂತೆ ಇದಕ್ಕೆ ಕಾರಣ ಡಿಫೆಕ್ಟೀವ್ ರೂಲ್ಸ್. ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಇನ್ನು 7—8 ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡತಕ್ಕ ವರ್ತಕರಿಗೆ

ಈ ಎ. ಸಿ. ಟಿ. ಒ. ಗಳು ತುಂಬಾ ಕಿರುಕುಳ ಕೊಡುತ್ತಿದ್ದಾರೆ. ಉದ್ದೇಶವಾಗಿ ನಿಮ್ಮ ಟರ್ನೋವರ್ 25—30 ಸಾವಿರ ರೂಪಾಯಿ ಇದೆ. ನೀವು ಹೆಚ್ಚಿಗೆ ಟ್ಯಾಕ್ಸನ್ನು ಕೊಡಬೇಕೆಂದು ಅವರನ್ನು ಹಿಂಡುತ್ತಿದ್ದಾರೆ. ಅಷ್ಟು ಟಾಕ್ಸನ್ನು ಕೊಡಬೇಕಾಗಿದ್ದರೆ ಅವರು ತಮ್ಮ ಹೆಂಡತಿಯ ಕೊರಳಲ್ಲಿರತಕ್ಕ ತಾಳಿ ಒಡವೆ ಎಲ್ಲ ಮಾರಾಟ ಮಾಡಿದರೂ ಸಾಧ್ಯವಿಲ್ಲ. ಸಾಲದ್ದಕ್ಕೆ ಒಂದೂವರೆಯಷ್ಟು ಪೆನಾಲ್ಟಿ ಬೇರೆ.

ಈ ಹೊರೆಯನ್ನು ತಪ್ಪಿಸಿಕೊಳ್ಳಲು 250–300 ರೂಪಾಯಿ ಕೊಡುವುದುಂಟು. ಒಂದು ಲಕ್ಷ ರೂಪಾಯಿಗಳ ಎರಗಿರುವ ಕೇಸುಗಳು ಎ. ಸಿ. ಟಿ. ಒ. ಗಳಿಗೆ ಸೇರಿರುವುದು, ಅದಕ್ಕೆ ಮೇಲ್ಪಟಿರುವುದು ಸಿ. ಟಿ. ಒ. ಗಳಿಗೆ ಬರುವುದು. ಎ. ಸಿ. ಟಿ. ಒ. ಗಳಿಗೆ ಸಂಬಂಧಪಟ್ಟಿರುವ ಕೇಸುಗಳಿಗೆ ಪೆನಾಲ್ಟಿ ವಜಾಮಾಡಿದರೆ ವರ್ತಕರಿಗೂ ಅನುಕೂಲ ಮತ್ತು ಲಂಚದ ಹಾವಳಿ ಕಡಮೆಯಾಗುವುದು. ಸೆಕ್ಷನ್ 12 (ಬಿ) (2) ರ ಪ್ರಕಾರ ಇರುವ ಪೆನಾಲ್ಟಿಯನ್ನು ಒಂದು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟ ವ್ಯವಹಾರಗಳಿಗೆ ಅನ್ವಯಿಸಿ ಅಂಥವರಿಗೆ ಹಾಕಿದರೆ ಒಳ್ಳೆಯದು. ಹಾಗೆ ಮಾಡುವುದು ಸೂಕ್ತ.

ಎರಡನೆಯದು ಲೈಸೆನ್ಸ್ ವಿಷಯದಲ್ಲಿ ನಡೆಯುವ ಅಪಚಾರ. ಒಂದು ಸಣ್ಣ ಅಂಗಡಿಯವರು ಸಾಮಾನು ತಂದರೆ ಲೈಸೆನ್ಸ್ ಪಡೆದಿರಬೇಕು, ಪ್ರತಿದಿವಸವೂ ಲೆಕ್ಕ ಇಡಬೇಕು ಹತ್ತೊಂಬತ್ತು ಐಟಂಗಳಿವೆ, ಸಿಮೆಂಟು, ಸೀಮೆಎಣ್ಣೆ, ಆಹಾರ ಪದಾರ್ಥಗಳು, ಎಸೆನ್‌ಷಿಯಲ್ ಆರ್ಟಿಕಲ್ಸ್, ಮುಂತಾದ ಹತ್ತೊಂಬತ್ತು ಐಟಂಗಳಿಗೆ ಷಾಪ್ ಆಕ್ಟಿನ ಪ್ರಕಾರ ಲೆಕ್ಕವಿಡಬೇಕು. ಇದರಿಂದ ಯಾವರೀತಿಯ ಫೋಟೋ ಹಾಕುವುದಕ್ಕೂ ಅಂಗಡಿಯಲ್ಲಿ ಜಾಗವಿರುವುದಿಲ್ಲ. ಎಲ್ಲ ಐಟಂಗಳಿಗೂ ಲೆಕ್ಕವಿಟ್ಟು ಅದನ್ನು ತಗಲುಹಾಕಬೇಕು ಅಂಗಡಿಯಲ್ಲಿ. ಅಧಿಕಾರಿಗಳು ಬಂದಾಗ ಅದನ್ನು ತೋರಿಸಬೇಕು. ಎಲ್ಲರಿಗೂ ಲಂಚ ಕೊಡಬೇಕು, ಇಲ್ಲದಿದ್ದರೆ ಏನಾದರೂ ತಪ್ಪು ಹೊರಿಸಿ ತೊಂದರಗೀಡುಮಾಡುವರು. ಒಂದು ಕೇಸಿನಲ್ಲಿ ಒಂದು ಸಾವಿರ ರೂಪಾಯಿ ಜುಲ್ಮಾನೆ 3 ತಿಂಗಳ ಸಜ ಶಿಕ್ಷೆ ವಿಧಿಸಿದ್ದಾರೆ. ಆದುದರಿಂದ ಒಂದು ಲಕ್ಷ ರೂಪಾಯಿಗೆ ಮೇಲ್ಪಟ್ಟು ಟರ್ನ್‌ಓವರ್ ಇರುವವರರಿಗೆ ಮಾತ್ರ ನಿರ್ಬಂಧ ಮಾಡಿದರೆ ಒಳ್ಳೆಯದು.

ವೈಟ್ಸ್ ಅಂಡ್ ಮೆಷರ್ಸ್ ಇಲಾಖೆ ಒಂದಿದೆ. ಸ್ಕೇಲ್‌ಗೆ ಸೀಲ್ ಹಾಕಲು 15 ರೂಪಾಯಿ ಕೊಡಬೇಕು ಸರಕಾರಕ್ಕೆ. ಕೆಲವು ಸಲ ಅದು ಸರಿಯಾಗಿಲ್ಲ; ರಿಪೇರಿ ಮಾಡಿಸಬೇಕು ಎಂದು ಹೇಳುವರು. ಅದಕ್ಕೆ 60 ರೂಪಾಯಿ ಚಾರ್ಜುಮಾಡುವರು. ರಿಪೇರಿಯನ್ನು ಅಧಿಕಾರಿಗಳು ಹೇಳಿದ ಕಡೆಯೇ ಮಾಡಿಸಬೇಕು. ಬೇರೆ ಕಡೆ ಮಾಡಿಸಿದರೆ 5 ರೂಪಾಯಿಗಳಲ್ಲಿ ಕೆಲಸ ವಾಗುವುದು. ಅಧಿಕಾರಿಗಳು ಹೇಳಿದ ಕಡೆ ರಿಪೇರಿ ಮಾಡಿಸಬೇಕಾಗಿರುವುದರಿಂದ ರೂ 60 ಕೊಡಲು ಅನೇಕರಿಗೆ ತೊಂದರೆಯಾಗಿದೆ. ಇದರ ಬಗ್ಗೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಂಡು ವರ್ತಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ವರ್ತಕರಿಗೆ ಇದರಿಂದ ಬಹಳ ಜುಗುಪ್ಸೆಯಾಗಿದೆ. ಕೋನಂದೂರು ಲಿಂಗಪ್ಪನವರು ಹೇಳಿದ ಹಾಗೆ ಅಧಿಕಾರಿಗಳ ಆಸ್ತಿ ಬಗ್ಗೆ ಪ್ರತಿವರ್ಷ ಲೆಕ್ಕ ತೆಗೆದು ಕೊಂಡರೆ ಅವರ ಸಂಪಾದನೆ ಗೊತ್ತಾಗುವುದು. ಒಂದು ವರ್ಷ ಸೇಲ್ಸ್ ಟ್ಯಾಕ್ಸ್ ಆಫೀಸರಾಗಿದ್ದರೆ 70 ಸಾವಿರ ರೂಪಾಯಿಗಳ ಒಂದು ಮನೆ ಮಾಡುವರು, 2 ವರ್ಷ ಅಧಿಕಾರಿಯಾಗಿದ್ದರೆ 3 ಮನೆ ಮಾಡುವರು. ಮುಂದಿನ ವರ್ಷ ಬೇಕಾದರೆ ನಾನೆ ಆಸ್ತಿಪಟ್ಟಿ ಕೊಡುತ್ತೇನೆ. ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಾದರೆ ಕೊಡಬಹುದು, ಇಲ್ಲದಿದ್ದರೆ ಪ್ರಯೋಜನವಿಲ್ಲ.

ಶ್ರೀ ಎಂ. ವೈ ಘೋರ್ಪಡೆ :—ಹಿಂದೆ ಹೇಳಿದ ವಿಚಾರ ಪರಿಶೀಲಿಸಲಾಯ್ತು. ಒಬ್ಬ ಸದಸ್ಯರು ಒಂದು ರೀತಿ ಹೇಳಿದರೆ ಇನ್ನೊಬ್ಬರು ಅದಕ್ಕೆ ವಿರುದ್ಧವಾಗಿ ಹೇಳುವರು. ವರದಿ

ತರಿಸಿ ನೋಡಲು ಕ್ರಮ ತೆಗೆದುಕೊಳ್ಳಲು ಅವಕಾಶವಿರಲಿಲ್ಲ. ಆದುದರಿಂದ ಸರಕಾರ ನೋಡುವುದಿಲ್ಲ ಎಂದು ತಿಳಿಯಬಾರದು.

ಶ್ರೀ ಗಟ್ಟಿ ಚಂದ್ರಶೇಖರ :—ನಾನು ಅಸೆಂಬ್ಲಿಯಲ್ಲಿ ಎರಡು ಸಲ ಹೇಳಿದೆ. ಆದರೂ ಕ್ರಮ ತೆಗೆದುಕೊಂಡಿಲ್ಲ. ಇತರ ಇಲಾಖೆಗಳಲ್ಲಿ ಆರೋಪ ಬಂದಾಗ ಸಂಬಂಧಪಟ್ಟ ಅಧಿಕಾರಿಯನ್ನು ಸಸ್ಪೆಂಡ್‌ಮಾಡಿ ವಿಚಾರಣೆ ನಡೆಸುವರು. ನಾವೇನಾದರೂ ಹೇಳಿದರೆ ಸಂಬಂಧಪಟ್ಟವರನ್ನು ಸಸ್ಪೆಂಡ್ ಮಾಡಿದರೆ ಇಲಾಖೆಯಲ್ಲಿ ಬಿಗಿಯಿರುವುದು. ಅದಿಲ್ಲದೆ ವರದಿ ತರಿಸಿದರೆ ಪ್ರಯೋಜನವಾಗುವುದಿಲ್ಲ. ಮೇಲಿನಿಂದ ಕೆಳಗಿನವರೆಗೆ ಎಲ್ಲಾ ಅಧಿಕಾರಿಗಳೂ ಒಂದೇ ಇದು. ಅವ್ವ ನಿನ್ನ ಮಗ ಕಳ್ಳನೇ ಎಂದು ಕೇಳಿದಹಾಗೆ, ಕೇಳಿದರೆ ಮಗ ಕದಿಯುವುದಿಲ್ಲ ಎಂದು ತಾಯಿ ಹೇಳುವುದು ಸ್ವಾಭಾವಿಕ. ಮೇಲಧಿಕಾರಿಗಳು ಸರಿಯಾಗಿ ಹೇಳುವುದಿಲ್ಲ. ಹೇಳಿದ ದಿವಸವೇ ಕ್ರಮ ತೆಗೆದುಕೊಂಡರೆ ಒಳ್ಳೆಯದು. ನಾನು ಹಿಂದೆ 30 ಜನ ವರ್ತಕರು ಸಹಿ ಹಾಕಿದ್ದ ಅರ್ಜಿ ಕಳಿಸಿದೆ, ಅದರಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಲಿಲ್ಲ. ಮುಂದಾದರೂ ವಿಷಯ ತಿಳಿದ ತಕ್ಷಣ ಕ್ರಮ ತೆಗೆದುಕೊಳ್ಳಬೇಕು, ಇಲಾಖೆಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಬೇಕು, ವರ್ತಕರಿಗೆ ಇಲಾಖೆಯಿಂದ ಕಿರುಕುಳ ತಪ್ಪಿಸಬೇಕು ಎಂದು ತಿಳಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) :—ಸನ್ಮಾನ್ಯ ಸಭಾಧ್ಯಕ್ಷರೇ. ಅರ್ಥ ಸಚಿವರು ಸಭೆಯ ಮುಂದಿಟ್ಟಿರುವ ಬೇಡಿಕೆಗಳನ್ನು ವಿರೋಧಿಸಿ ಇದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಫೈನಾನ್ಸ್ ಇಲಾಖೆ ಒಂದು ವರದಿ ಕೊಟ್ಟಿದೆ. ಬೇರೆ ರೀತಿಯಲ್ಲಿ ಅದಿರುವುದು ಎಂದು ನಾನು ಎಣಿಸಿದೆ, ಮಾನ್ಯ ಸಚಿವರು ಆರ್ಥಿಕ ವಿಚಾರವನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆ, ಅಷ್ಟೇ ಅಲ್ಲದೆ ಅವರು ಸಮತಾವಾದಿ ತತ್ವಗಳನ್ನು ಜೀರ್ಣಿಸಿಕೊಂಡಿದ್ದಾರೆ. ಅವರು ಬೇರೆ ರೀತಿಯಲ್ಲಿ ವರದಿ ನೀಡಬಹುದೆಂದು ನಾನು ಎಣಿಸಿದ್ದೆ. ಅವರು ಕೊಡುವ ವರದಿಯ ಆಧಾರದ ಮೇಲೆ ಇಲಾಖೆ ಧೋರಣೆಯ ಮೇಲೆ ಮಾತನಾಡಬಹುದು ಎಂದು ನಾನು ಅಂದುಕೊಂಡಿದ್ದೆ. ಆದರೆ ದುರದೃಷ್ಟವಶಾತ್ ಆ ರೀತಿ ವರದಿ ಬಂದಿಲ್ಲ. ನಾನು ಎಲ್ಲಾ ಶಾಖೆಗಳ ಬಗ್ಗೆ ಮಾತನಾಡುವುದಿಲ್ಲ, ಕೇವಲ ಎರಡುಮೂರು ಶಾಖೆಗಳ ವಿಷಯ ಮಾತ್ರ ಪ್ರಸ್ತಾಪಿಸುತ್ತೇನೆ. ಮೊದಲನೆಯದಾಗಿ ಲಾಟರಿ ವಿಚಾರ ತೆಗೆದುಕೊಳ್ಳೋಣ. ಎಲ್ಲಾ ಸರಕಾರಗಳೂ ಕೂಡ ಲಾಟರಿ ಸರಕಾರಗಳಾಗಿವೆ ಎಂಬ ಟೀಕೆ ಸರ್ವೇಸಾಮಾನ್ಯವಾಗಿವೆ. ಬೇರೆ ರೀತಿ ವರಮಾನ ಪಡೆಯಲು ಸಾಧ್ಯವಿಲ್ಲದಿದ್ದರೆ ಸರಕಾರ ಇದಕ್ಕೆ ಕೈಹಾಕಬೇಕು. ಬೇರೆ ರೀತಿಯಲ್ಲಿ ವರಮಾನ ಪಡೆಯಲು ಸರಕಾರ ಪ್ರಯತ್ನಮಾಡಿದೆಯೋ, ಅದರ ಬಗ್ಗೆ ಭರವಸೆ ಕೊಡುವರೇ ? ಸರಕಾರ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಲಾಟರಿಯ ಆದಾಯ ಇಳಿಮುಖವಾಗುತ್ತಿದೆ, 239 ಲಕ್ಷವಿದ್ದ ಇದರ ವರಮಾನ 160 ಲಕ್ಷಕ್ಕೆ ಇಳಿದಿದೆ, ಇದರಿಂದ ವರಮಾನ ಬರುಬರುತ್ತಾ ಕಡಮೆಯಾಗುತ್ತಿದೆ. ಇದೇನು ತೋರಿಸುವುದು ಈ ರೀತಿ ವರಮಾನ ಪಡೆಯಬೇಕೇ ಅಥವಾ ಬೇಡವೇ ಎಂಬುದು. ಏಕೆಂದರೆ ಲಾಟರಿಯಿಂದ ಬರುವ ವರಮಾನವೇನೂ ದೊಡ್ಡದಲ್ಲ, ಇದರಿಂದ ಖರ್ಚು ಸಿಕ್ಕಾಪಟ್ಟೆ ಆಗುತ್ತಿದೆ. ವರಮಾನಕ್ಕೂ ಖರ್ಚಿಗೂ ಹೋಲಿಕೆ ಮಾಡಿ ನೋಡಿದರೆ ಖರ್ಚು ಹೆಚ್ಚಾಗುತ್ತಿದೆ. ಇಂದು ವರಮಾನವಿಲ್ಲದೆ ಇರುವ ಶಾಖೆ ಇಟ್ಟುಕೊಂಡು ಪ್ರಯೋಜನವೇನು ? ಇಂದು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಗೆ ಲಾಟರಿ ಟಿಕೆಟ್ಟುಗಳ ಮಾರಾಟವನ್ನು ವಹಿಸಿ ಆ ಸಂಸ್ಥೆಗೆ ಕಮಿಷನ್ ಕೊಡುತ್ತಿದ್ದಾರೆ. ಬೇರೆ ಯಾವ ಕೆಲಸವೂ ಆ ಸಂಸ್ಥೆಗೆ ಇಲ್ಲವೆಂದು ಕಾಣುವುದು. ಒಂದು ಕಾಲಕ್ಕೆ ಈ ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯು ನಮ್ಮ ರಾಜ್ಯದ ಎಲ್ಲಾ ಕೈಗಾರಿಕೆಗಳ ಉತ್ಪನ್ನಗಳು ಮತ್ತಿತರ ಸಾಮಗ್ರಿಗಳನ್ನು ಮಾರಾಟಮಾಡಿ ಕಮಿಷನ್ ಪಡೆಯುತ್ತಿತ್ತು.

ಆದುದರಿಂದ ಈ ಶಾಖೆ ಇರಬೇಕು, ಇದರಿಂದ ರಾಜ್ಯಕ್ಕೆ ಅನುಕೂಲ, ಕೈಗಾರಿಕೆಗಳಿಗೆ ಅನುಕೂಲ ಎಂಬ ಭಾವನೆ ಇತ್ತು.

ಆದರೆ ಇವತ್ತು ಏನಾಗಿದೆ ಎಂದರೆ ಇವೆಲ್ಲವೂ ಹೋಗಿ ಬರೀ ಲಾಟರಿ ಮಾತ್ರ ಉಳಿದು ಕೊಂಡಿದೆ. ಇವತ್ತಿನ ದಿವಸ ಜನರನ್ನು ಇಂಡ್ಯೂಸ್ ಮಾಡಿದರೂ ಸಹ ಕೊಂಡುಕೊಳ್ಳುವ ಜನ ಇಲ್ಲ. ಮಾನ್ಯ ತಿಮ್ಮಪ್ಪನವರು ಹೇಳಿದ ಹಾಗೆ, ಬಸ್ಸುಗಳಲ್ಲಿ ಸಣ್ಣ ಸಣ್ಣ ಮಕ್ಕಳೂ ಸಹ ಲಾಟರಿ ಟಿಕೆಟ್ ಕೊಂಡುಕೊಳ್ಳಿ ಎಂದು ಹೇಳುವ ಅಭ್ಯಾಸವಾಗಿದೆ. ಇದರೀಿದ ಒಂದು ರೀತಿಯ ವರಮಾನವನ್ನು ಏಜೆಂಟರುಗಳು ಇಟ್ಟುಕೊಂಡು ಸಣ್ಣ ಮಕ್ಕಳನ್ನು ಕಳುಹಿಸಿಕೊಡು ತ್ತಾರೆ. ಹೆಚ್ಚು ವರಮಾನ ಏನೂ ಬರಲಾರದು, ಕಾಫಿ ಖರ್ಚಿಗೆ ಆಗಬಹುದು, ಎಂದು ಕಾಣುತ್ತದೆ. ಮೊದಲನೆಯ ಲಾಟರಿ ಎಲ್ಲಾ ಟಿಕೆಟ್ಟುಗಳನ್ನು ತೆಗೆದುಕೊಳ್ಳುತ್ತಾರೆ ಎಂದು ಜಯಾಬಾಧುರಿ ಮುಂತಾದ ಸಿನೀಮಾತಾರೆಯರನ್ನು ಕರೆಸಿಕೊಂಡು ಅವರ ಕೈಯಿಂದ ಲಾಟರಿ. ಎತ್ತಿಸಿದರು. ಇಷ್ಟೆಲ್ಲಾ ಮಾಡಿದರೂ ಆದರಿಂದ ಬಂದಿರುವ ವರಮಾನ ಸುಮಾರು 160 ಲಕ್ಷ ರೂಪಾಯಿಗಳು ಮಾತ್ರ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ, ಇದು ನಿರರ್ಥಕ ಎಂದು ನನ್ನ ಅಭಿಪ್ರಾಯ. ನನಗನ್ನಿಸುತ್ತದೆ, ತಾವು ಇದನ್ನು ಮುಚ್ಚಿಬಿಡಬೇಕು ಎಂದು ಮತ್ತು ಉಪಯೋಗವಾಗತಕ್ಕಂಥ ಕಾರ್ಯ ಮಾಡಿದರೆ ಜನಗಳಿಗೆ ಅನುಕೂಲವಾಗುತ್ತದೆ. ಜನರಿಗೂ ಕೆಟ್ಟ ಯೋಚನೆ ಬರುವುದಿಲ್ಲ.

ಶ್ರೀ ಬಿ. ಶಿವಣ್ಣ :—ಇನ್‌ಕಂಟ್ಯಾಕ್ಸ್ ಸಲುವಾಗಿ ಇದು ಡಿಕ್ಲೈನ್ ಆಗಿದೆ, ಸ್ಟೇಟ್ ಗವರ್ನಮೆಂಟ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ.

ಶ್ರೀ ಎಂ. ಎಸ್. ಕೃಷ್ಣನ್ :—ಸಮಾಜವಾದಿ ರಾಷ್ಟ್ರಗಳಾದ ರುಮೇನಿಯಾ, ಹಂಗೇರಿ ಯಲ್ಲೂ ಕೂಡ ಈ ಲಾಟರಿ ಇದೆ, ಅಲ್ಲಿರುವ ಲಾಟರಿ ಬೇರೆ ರೀತಿಯಿದೆ. ಒಂದು ರೀತಿಯ ರ್‍ಯಾಫೆಲ್ ಸಿಸ್ಟಂ ಇಟ್ಟಿದ್ದಾರೆ. ಅವರ ರೂಪರೇಶೆಗಳು ಎಲ್ಲವೂ ನನಗೆ ಗೊತ್ತಿಲ್ಲ. ಆದರೆ ಇಷ್ಟೊಂದು ಬಂಪರ್ ಪ್ರೈಸಸ್ ಅನ್ನು ಅವರು ಏನೂ ಇಟ್ಟಿಲ್ಲ.

ಉಪಾಧ್ಯಕ್ಷರು :—ಮಾಹಿತಿ ಇದ್ದರೆ ಕೊಡಿ.

ಶ್ರೀ ಎಂ. ಎಸ್. ಕೃಷ್ಣನ್ :—ಇದರ ಬಗ್ಗೆ ರೂಪರೇಶೆಗಳನ್ನು ಅಭ್ಯಾಸ ಮಾಡಲಿಕ್ಕೆ ನನಗೆ ಅವಕಾಶವಾಗಲಿಲ್ಲ, ಅವರು ಮಾಡುತ್ತಿರುವ ರೀತಿಯೇ ಬೇರೆ ಎಂದು ಅಷ್ಟು ಮಾತ್ರ ಹೇಳು ತ್ತೇನೆ. ಅಲ್ಲಿ ಏನಾಗಿದೆ ಎಂದರೆ ಪರ್ಚೇಸಿಂಗ್‌ಪವರ್ ಜಾಸ್ತಿ ಇರುವುದರಿಂದ ವರಮಾನ ಜಾಸ್ತಿ ಇರುವಂತೆ ಕಾಣುತ್ತದೆ. ಪರ್ಚೇಸಿಂಗ್‌ಪವರ್ ಇಲ್ಲದೆ ಇರುವಾಗ ಅದನ್ನು ಜಾಸ್ತಿ ಮಾಡಿ. ಗವರ್ನಮೆಂಟ್ ಆಫ್ ಇಂಡಿಯಾದವರು 34.5 ಪರ್ಸೆಂಟ್ ತೆರಿಗೆ ಹಾಕುತ್ತಾರೆ, ಅದನ್ನು ತೆಗೆದುಹಾಕಿದರೆ ಉತ್ತಮವಾಗುತ್ತದೆ. ಅದನ್ನು ಮಾಡದೆ ಸುಮ್ಮನೆ ಲಾಟರಿಯನ್ನು ಇಟ್ಟುಕೊಂಡರೆ ಏನು ಪ್ರಯೋಜನ ?

ಎರಡನೆಯದಾಗಿ, ಎಂ. ಜಿ. ಐ. ಡಿ. ಬಗ್ಗೆ, ಒಂದು ಅಂಶವನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೈಸೂರಿನವರು ಈ ರೀತಿಯ ವಿಮಾ ಯೋಜನೆಯನ್ನು ತಯಾರು ಮಾಡಿದವರಲ್ಲಿ ಮೊದಲಿನವರು ಎಂದು ನಾನು ಹೇಳಬೇಕಾಗಿದೆ. ಒಳ್ಳೆಯ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ, ಬಹಳ ಸಂತೋಷ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ ಬದಲಾವಣೆ ಯಾಗಿದೆ. ಲೈಫ್ ಇನ್‌ಷೂರೆನ್ಸ್‌ಕಾರ್ಪೊರೇಷನ್ ಮಾಡಿದ್ದಾರೆ, ಜನರಲ್ ಇನ್‌ಷೂರೆನ್ಸ್ ಕಾರ್ಪೊರೇಷನ್ ಉಳಿದುಕೊಂಡಿದ್ದು. ಅದೂ ಇವತ್ತಿನದಿವಸ ರಾಷ್ಟ್ರೀಕರಣವಾಗಿದೆ ಹೀಗೆ ಇರಬೇಕಾದರೆ, ನನಗೆ ಅನ್ನಿಸುತ್ತದೆ, ಎಂ. ಜಿ. ಐ. ಡಿ. ಇರಬೇಕೆ ಎನ್ನುವ ಪ್ರಶ್ನೆ ಬರುತ್ತದೆ.

ಇದರ ಔಚಿತ್ಯ ಏನು ? ಹೀಗೆ ಇದ್ದರೆ ಎರಡು ಮೂರು ರೀತಿಯ ತೊಂದರೆಗಳು ಬರುತ್ತವೆ. ಮುಖ್ಯವಾಗಿ ಅಲ್ಲಿರುವ ನೌಕರರ ಪರಿಸ್ಥಿತಿ, ಅವರಿಗೆ ಸಂಬಳಸಾರಿಗೆಗಳು, ಮತ್ತು ಇತರೆ ಅನುಕೂಲಗಳಲ್ಲಿ ಲೈಫ್ ಇನ್‌ಷೂರೆನ್ಸ್ ಕಾರ್ಪೊರೇಷನ್ ನೌಕರರಿಗೂ, ಇವರಿಗೂ ಸ್ವಲ್ಪಮಟ್ಟಿಗೆ ವ್ಯತ್ಯಾಸವಿದೆ. ಆ ರೀತಿ ವ್ಯತ್ಯಾಸವಿಲ್ಲದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ನಿಮ್ಮದು. ಜನರಲ್ ಇನ್‌ಷೂರೆನ್ಸ್ ಮತ್ತು ಲೈಫ್ ಇನ್‌ಷೂರೆನ್ಸ್ ಕಾರ್ಪೊರೇಷನ್‌ಗಳು ಸೇರಿದರೆ ಒಂದು ರೀತಿಯ ಏಕರೂಪತೆ ಬರುತ್ತದೆ. ವಿಮಾ ಯೋಜನೆಯ ಬಗ್ಗೆ ಏಕರೂಪತೆ ಇರುವುದು ಒಳ್ಳೆಯದು. ಸಿಬ್ಬಂದಿಯ ಟ್ರಾನ್ಸ್‌ಫರ್ ಬಗ್ಗೆ ಒಂದು ರೀತಿಯ ಗೊಂದಲ ಎದ್ದಿದೆ. ಕೆಲವರನ್ನು ಜನರಲ್ ಇನ್‌ಷೂರೆನ್ಸ್‌ಗೆ ಟ್ರಾನ್ಸ್‌ಫರ್ ಮಾಡಬೇಕೆಂಬ ಕಂಪ್ಲೇಂಟ್ ಬಂದಿದೆ. ಈ ರೀತಿಯ ಕಂಪ್ಲೇಂಟ್ ಬಂದಿರಬೇಕಾದರೆ ನನ್ನ ಅಭಿಪ್ರಾಯದಲ್ಲಿ ಇದು ಇರುವಂಥ ಔಚಿತ್ಯ ಏನೂ ಇಲ್ಲ. ನ್ಯಾಷನಲ್ ಇನ್‌ಷೂರೆನ್ಸ್ ಸೆಕ್ಟಾರ್, ಆಗುವ ಹಾಗೆ ಜನರಲ್ ಇನ್‌ಷೂರೆನ್ಸ್ ಮತ್ತು ಎಲ್. ಐ. ಸಿ. ಯನ್ನು ಅದಕ್ಕೆ ಸೇರಿಸುವುದು ಒಳ್ಳೆಯದು ಎಂದು ಕಾಣುತ್ತದೆ. ಇದು ಅಡ್ಮಿನಿಷ್ಟ್ರೇಷನ್ ದೃಷ್ಟಿಯಿಂದ ಒಳ್ಳೆಯದು. ರಾಷ್ಟ್ರದ ದೃಷ್ಟಿಯಿಂದ ಒಳ್ಳೆಯದು, ಇಂಟೆಗ್ರೇಟಿ ದೃಷ್ಟಿಯಿಂದು ಒಳ್ಳೆಯದು ಮತ್ತು ಇದು ಯೋಜನೆಬದ್ಧವಾಗಿ ಮುಂದೆ ಹೋಗುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಹಿಂದಿನ ಮಾದರಿಯಂತೆ ನಡೆದುಕೊಂಡಿದ್ದೇವೆ ಎನ್ನುವುದನ್ನು ಬಿಟ್ಟು ಇದನ್ನು ಜಾರಿಗೆ ತೆಗೆದುಕೊಂಡುಬರುವುಧು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟಮೆಂಟ್ ಬಗ್ಗೆ ಎರಡು ಮಾತನ್ನು ಹೇಳುತ್ತೇನೆ. ಇದರ ಬಗ್ಗೆ ನಮ್ಮ ಸ್ನೇಹಿತರನೇಕರು ಹೇಳಿದ್ದಾರೆ. ಒಂದು ಅಗ್ರಿಕಲ್ಚರ್ ಸೆಕ್ಟಾರ್ ಮೇಲೆ ನೀವು ಟ್ಯಾಕ್ಸ್ ಹಾಕಬೇಕೇ ಬೇಡವೇ ಎನ್ನುವುದು ಇದೆ. ಇನ್ನೂ ಹೆಚ್ಚು ಅಗ್ರಿಕಲ್ಚರ್ ಇನಕಂ ಟ್ಯಾಕ್ಸ್ ಎಷ್ಟು ದೂರ ಬರುತ್ತದೆ, ಇನ್ನೂ ಬರಬೇಕು ಎನ್ನುವ ಸಮಸ್ಯೆ ನಮ್ಮ ಮುಂದೆ ಇದೆ. ಅದರಲ್ಲಿ ರೈತನ ಮೇಲೆ ತೆರಿಗೆ ಹಾಕಕೂಡದು ಎಂದು ನಮ್ಮ ಸ್ನೇಹಿತರುಗಳು ಹೇಳಿದ್ದುಂಟು. ಅಗ್ರಿಕಲ್ಚರ್ ಅನ್ನು ಎಷ್ಟು ದೂರ ಅಟ್ಯಾಕ್ ಮಾಡಬೇಕಾಗಿತ್ತೋ ಅಷ್ಟು ದೂರ ಮಾಡಿಲ್ಲ ಎಂದು ನನ್ನ ಅಭಿಪ್ರಾಯ. ಭೂತಲಿಂಗಂ ಕಮಿಟಿಯವರು ಸಹ ಇದೇ ಅಭಿಪ್ರಾಯ ಪಟ್ಟಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಒಂದೇ ಮಾತಿನಲ್ಲಿ ಹೇಳಿದ್ದಾರೆ.

"In their study on the 'Incidence of Taxation in Mysore State', the National Council of Applied Economic Research has shown that while the incidence of tax system as a whole (including Central taxes) is progressive in the urban sector, it is regressive in the rural sector. Thus the total incidence of taxatoin rises from 10.1 per cent in the lowest income class to 24 per cent in the highest in the urban sector. In the rural sector, however, the incidence falls from 9 percent in the lowest class to 5.7 per cent in the highest income class......

There can, therefore, be little doubt about the need for or the rightness of a graded income-tax on those above a certain level of income." ಇವತ್ತಿನ ದಿವಸ ಅಗ್ರಿಕಲ್ಚರ್ ಇನಕಂ ಟ್ಯಾಕ್ಸನ್ನು ಸ್ವಲ್ಪಮಟ್ಟಿಗೆ ಪುನರ್‌ವಿಮರ್ಶೆ ಮಾಡುವಂಥ ಕಾಲ ಬಂದಿದೆ. ಏಕೆಂದರೆ, ಬ್ಯಾಂಕುಗಳಾಗಲೀ, ಫಿನಾನ್ಷಿಯಲ್ ಇನ್‌ಸ್ಟಿಟ್ಯೂಷನ್ಸ್ ಆಗಲೀ ಎಲ್ಲವೂ ಸಹ ಅಗ್ರೇರಿಯನ್ ಸೆಕ್ಟಾರ್‌ಗೆ ಹಣವನ್ನು ಪಂಪ್ ಮಾಡುತ್ತಿವೆ. ಇವತ್ತು ಕೇಂದ್ರ ಸರ್ಕಾರದ ಮನಸ್ಸೂ ಸಹ, ತಮ್ಮ ವರದಿಯಲ್ಲಿ ಇದನ್ನೇ ಹೇಳಿದ್ದಾರೆ.

ನನಗೆ ತಿಳಿದಮಟ್ಟಿಗೆ A new rich peasant is being created by the policies of the Government ಆದ್ದರಿಂದ ಅಂಥವರಿಗೆ ಇವತ್ತಿನ ದಿವಸ ತೆರಿಗೆಗಳನ್ನು ಹಾಕಬೇಕು. ಮಾನ್ಯ ತಿಮ್ಮಪ್ಪನವರು The green revolution about which the Government is speaking of has produced the new rich peasent ಎಂದು ಹೇಳಿದ್ದಾರೆ. ಅಂಥವರ ಮೇಲೆ ತೆರಿಗೆಯನ್ನು ಹಾಕಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಭೂತಲಿಂಗಂ ಅವರು ಮಾಡಿದ ಸಜೆಷನ್ಸ್ ಅನ್ನು ಒಪ್ಪಿಕೊಂಡಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ಇದನ್ನು ತಾವೇಹೇಳಬೇಕು. ಇನ್ನೊಂದು ವಿಷಯ ಏನೆಂದರೆ, ನಾವು ಕಮರ್ಷಿಯಲ್ ಟ್ಯಾಕ್ಸ್ ಬಗ್ಗೆ ಮಾತನಾಡಬೇಕಾದರೆ, ಕರಪ್ಷನ್ ಬಗ್ಗೆ ಅನೇಕ ಸ್ನೇಹಿತರು ಹೇಳಿದ್ದಾರೆ. ಅದನ್ನು ಎಲ್ಲರೂ ಒಪ್ಪಿಕೊಳ್ಳುವಂಥಾದ್ದು. ಅಲ್ಲಿ ಅತಿ ಅನ್ಯಾಯ ನಡೆಯುತ್ತಿದೆ. ನಮ್ಮ ಸ್ನೇಹಿತರು ಒಬ್ಬರು, ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ, ಅಲ್ಲಿ ಕ್ಲಾರ್ಕ್ ಆಗಿದ್ದವರು, ಈಗ ಅಸಿಸ್ಟೆಂಟ್ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಆಗಿದ್ದಾರೆ. ಕೆಲವು ದಿವಸಗಳ ಹಿಂದೆ, ನನ್ನ ಹತ್ತಿರ ಅವರು ಬಂದಿದ್ದರು. ಆತ ನನ್ನ ಹತ್ತಿರ ಐದುಲಕ್ಷ ರೂಪಾಯಿಗಳನ್ನು ಮಾಡಿದ್ದೇನೆ ಎಂದು ಹೇಳಿದ. ಆಗ ನಾನು ಏನಯ್ಯ, ಕ್ಲಾರ್ಕ್ ಆಗಿದ್ದೆ ಇಷ್ಟೊಂದು ಹಣವನ್ನು ಹೇಗೆ ಮಾಡಿದೆ ಎಂದು ಕೇಳಿದ್ದಕ್ಕೆ ಆತ ನಾನು ಮಾಡಿರುವುದು ಬಹಳ ಕಡಿಮೆ 20-30 ಲಕ್ಷ ರೂಪಾಯಿಗಳನ್ನು ಮಾಡಿದವರೂ ಇದ್ದಾರೆ ಎಂದು ಡೆಪ್ಯೂಟಿ ಕಮೀಷನರ್ ಒಬ್ಬರು ಮೈಸೂರಿನಲ್ಲಿದ್ದಾರೆ, ಅವರು ಎಷ್ಟೋ ಲಕ್ಷ ರೂಪಾಯಿಗಳ ಆಸ್ತಿಯನ್ನು ಮಾಡಿಕೊಂಡಿದ್ದಾರೆ, ಇದರ ಬಗ್ಗೆ ವಿಜಿಲೆನ್ಸ್ ಕಮಿಷನ್‌ಗೂ ಹೇಳಿದ್ದೇನೆ. ಕೆಲವು ಮಂತ್ರಿಗಳೂ ಆಸ್ತಿಯನ್ನು ಮಾಡಿಕೊಂಡಿರಬಹುದು, ಅವರ ಅಸೆಟ್ಸ್ ಗೊತ್ತಾಗಿದೆ. ಸುಳ್ಳು ಲೆಕ್ಕ ಕೊಟ್ಟಿರಬಹುದೋ ಏನೋ ಗೊತ್ತಿಲ್ಲ. ಇವರಿಗಿಂತ 10–20ರಷ್ಟು ಆಸ್ತಿ ಮಾಡಿಕೊಂಡಿರುವ ಆಫೀಸರ್ಸ್ ಇದ್ದಾರೆ. This is one of the most corrupt department. ಇನ್ನೊಂದು ಬೆಂಗಳೂರಿನಲ್ಲಿ ಗ್ಯಲಾಕ್ಸಿ ಥಿಯೇಟರ್. ಆ ಥಿಯೇಟರ್‌ನವರು ಒಂದೂವರೆ ಲಕ್ಷ ರೂಪಾಯಿ ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಕೊಡಬೇಕಾಗಿತ್ತು.

ಒಂದೂವರೆ ಲಕ್ಷ ರೂಪಾಯಿಗೆ ಚೆಕ್ ಕಳುಹಿಸಿದ್ದರು, ಅದು ಡಿಸ್‌ಹಾನರ್ ಆಯಿತು. ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ? ಯಾರು ಜವಾಬ್ದಾರರು ಎಂದರೆ ಕ್ಲಾರ್ಕ್ ಮೇಲೆ ಗೂಬೆ ಕೂಡಿಸಿದರು. ಅದಕ್ಕೆ ಎ.ಸಿ.ಟಿ.ಓ ಜವಾಬ್ದಾರರು. ಅವರನ್ನು ಬಿಟ್ಟು ಕ್ಲಾರ್ಕ್ ಮೇಲೆ ಗೂಬೆ ಕೂಡಿಸುವುದು ಸರಿಯಲ್ಲವೆಂದು ಹೇಳಬೇಕಾಗಿದೆ. ಸರಿಯಾದ ಕ್ರಮ ತಗೆದುಕೊಳ್ಳಬೇಕು.

ಇನ್ನು ಎರಡು ವಿಷಯಗಳನ್ನು ಹೇಳುತ್ತೇನೆ. ಲೆಜಿಸ್‌ಲೇಷನ್ ಬಗ್ಗೆ ನಾನು ಮತ್ತು ನಮ್ಮ ಸ್ನೇಹಿತರು ಹೇಳಿರುವುದನ್ನು ಪೂರ್ತಿ ಒಪ್ಪಿಕೊಳ್ಳುವುದು ಅಲ್ಲದೆ ಅಡಿಷನಲ್ ಅಪಾಯಿಂಟ್‌ಮೆಂಟ್ಸನ್ನು ತಾವು ಒಪ್ಪಿಕೊಳ್ಳಬೇಕು. ಲೆಜಿಸಲೇಚರ್ ಬ್ರಾಂಚ್‌ನಲ್ಲಿ ಸ್ಟೇನೋ ಟೈಪಿಸ್ಟ್ಸ ಬೇರೆಯವರಿಗಿಂತ ಜಾಸ್ತಿ ಕೆಲಸ ಮಾಡುತ್ತಾರೆ. ಅವರಿಗೆ ಸ್ಪೆಷಲ್ ಅಲೋಯೆನ್ಸ್ ಕೊಡುವುದು ಅತಿ ಮುಖ್ಯ. ಎರಡನೆಯದು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿ ಮತ್ತು ಇತರ ಕಮಿಟಿಗಳಿಗೆ ಸರಿಯಾದ ವ್ಯವಸ್ಥೆಯಿಲ್ಲ, ರೂಮುಗಳು ಇಲ್ಲ. ಟೈಪಿಸ್ಟ್ ಇಲ್ಲ. ಅದನ್ನು ಮಾಡಿಕೊಳ್ಳಬೇಕು. ವಿರೋಧಪಕ್ಷದವರಿಗೆ ರೂಮ್ ಕೊಟ್ಟಿದ್ದೀರಿ. ರೂಮ್ ಮಾತ್ರ ಇದೆ. ಜವಾನ ಇದ್ದಾನೆ, ನೀರು ಲೋಟ ಕೂಡ ಇಲ್ಲ. ಒಬ್ಬ ಸ್ಟೆನೋ ಟೈಪಿಸ್ಟ್ ಕಾಯಂ ಆಗಿ 8 ಗಂಟೆಗಳ ಕಾಲ ಕೆಲಸ ಮಾಡಿ ವರ್ಷವೆಲ್ಲಾ ಇರುವ ಹಾಗೆ ಮಾಡಬೇಕು. ಲೈಬ್ರರಿ ಬಗ್ಗೆ ಸ್ನೇಹಿತರು ಹೇಳಿದರು, ಲೈಬ್ರರಿ ಬಹಳ ಮುಖ್ಯ We have to make use of the library properly. ಲೈಬ್ರರಿ ಸ್ಟಾಫ್ ಜಾಸ್ತಿ ಮಾಡಬೇಕು ಎಂದು ಹೇಳಿ ಇಷ್ಟುಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ) :—ಮಾನ್ಯ ಸಭಾಪತಿಗಳೇ, ಈ ದಿವಸ ಸದನದ ಮುಂದೆ ಇರತಕ್ಕ ಡಿಮ್ಯಾಂಡುಗಳ ಬಗ್ಗೆ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಮಾತನಾಡಿರತಕ್ಕಂಥ ನಮ್ಮ ಎಲ್ಲಾ ಸ್ನೇಹಿತರುಗಳೂ ಕೂಡ ಈ ಸೇಲ್ಸ್ ಟ್ಯಾಕ್ಸ್, ಇನಕಂ ಟ್ಯಾಕ್ಸ್‌ಗಳ ಬಗ್ಗೆ ಬಹಳ ಕೂಲಂಕಷವಾಗಿ ಪ್ರಸ್ತಾಪಿಸಿದ್ದಾರೆ. ಆದರೂ ನನಗೆ ಕೊಟ್ಟಿರತಕ್ಕ ಅಲ್ಪಕಾಲಾವಧಿಯನ್ನು ಉಪಯೋಗಿಸಿಕೊಂಡು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸೇಲ್ಸ್ ಟ್ಯಾಕ್ಸ್ ಮತ್ತು ಇನ್‌ಕಂ ಟ್ಯಾಕ್ಸ್ ಇವತ್ತಿನ ದಿವಸ ಯಾವ ಮಟ್ಟದಲ್ಲಿ ಇದೆ ಎಂದರೆ ಅಧಿಕಾರಿಗಳು ತಾಲ್ಲೂಕ್ ಹೆಡ್ ಕ್ವಾರ್ಟರ್ಸ್‌ಗೆ ಬಂದು ವಸೂಲಿಯನ್ನು ಮಾಡತಕ್ಕಂಥ ಒಂದು ನೀತಿ ಕಂಡುಬರುತ್ತದೆ. ಸರ್ಕಾರಕ್ಕೆ ಬರಬೇಕಾದಂಥ ಹಣವನ್ನು ವಸೂಲಿ ಮಾಡಿ, ಸರ್ಕಾರದ ಬೊಕ್ಕಸಕ್ಕೆ ಸಲ್ಲಿಸುತ್ತಾ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು. ವರ್ಷದ ಮೊದಲು ಅಥವಾ ಕೊನೆಯಲ್ಲಿ ಬಂದು ವರ್ತಕರನ್ನು ಕೊಠಡಿಗೆ ಕರೆಸಿಕೊಂಡು ಮಾತನಾಡುವುದು ಅವರನ್ನು ಹೆದರಿಸಿ, ಒಂದು ಸಾವಿರ ಅಥವಾ ಎರಡು ಸಾವಿರ ರೂಪಾಯಿ ಟ್ಯಾಕ್ಸ್ ಬಿದ್ದಿದೆ. ಕೊಡದೇ ಹೋದರೆ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆಂದು ಹೆದರಿಸಿ ಅವರ ಹತ್ತಿರ ದುಡ್ಡು ಕಿತ್ತು ಕೊಂಡು ಅವರಿಂದ ಹೆಚ್ಚಿನ ಮಟ್ಟದಲ್ಲಿ ಸರ್ಕಾರದ ಬೊಕ್ಕಸಕ್ಕೆ ಟ್ಯಾಕ್ಸ್ ಸಂದಾಯವಾಗುತ್ತಾ ಇಲ್ಲ. ಇದು ತಪ್ಪಬೇಕು. ಈಗ ವರ್ತಕರ ಶೋಷಣೆಯಾಗುತ್ತಿದೆ. ಸರ್ಕಾರಕ್ಕೆ ಆಗಲೀ, ವರ್ತಕರಿಗಾಗಲೀ, ಯಾವ ವಿಧವಾದ ಲಾಭವಾಗುತ್ತಾ ಇಲ್ಲ. ಟ್ಯಾಕ್ಸ್‌ಗಳನ್ನು ವಿಧಾಯಕ ಮಾಡಬೇಕಾದರೆ ಯಾವ ಯಾವ ರೀತಿ ವ್ಯಾಪಾರಿಗಳಿಗೆ ಏನೇನು ಟ್ಯಾಕ್ಸ್‌ಗಳನ್ನು ಹಾಕಬೇಕೆಂದು ನಿಯಮಾವಳಿಯನ್ನು ತಾರದೇ ಹೋದರೆ ವರ್ತಕರು ಕಿರುಕುಳ ಅನುಭವಿಸಬೇಕಾದ ಸಂದರ್ಭ ಬರುತ್ತದೆ. ಒಂದು ದಿನಕ್ಕೆ ಎರಡು ರೂಪಾಯಿ, 3 ರೂಪಾಯಿ ಲಾಭ ಬಾರದೇ ಇರುವ ಪೆಟ್ಟಿಶಾಪ್ಸ್ ಇಟ್ಟಿರುವವರಿಗೆ ಕೇಸು ಹಾಕುತ್ತೇವೆಂದು ಹೆಚ್ಚಿನ ಸುಲಿಗೆ ಮಾಡುತ್ತಿರುವುದು ಕಂಡು ಬರುತ್ತಿದೆ. ಇಂಥ ಒಂದು ಪರಿಸ್ಥಿತಿಯಲ್ಲಿ ವ್ಯವಹಾರ ನಡೆಯುತ್ತಿದೆ ಆದುದರಿಂದ ಇಂಥ ಪರಿಸ್ಥಿತಿ ತಪ್ಪಬೇಕು. ನನ್ನ ಅಭಿಪ್ರಾಯದ ಪ್ರಕಾರ ಯಾವ ಯಾವ ಬಗೆಯ ವ್ಯವಹಾರಗಳಿಗೆ ಎಷ್ಟೆಷ್ಟು ನಿಗದಿಯಾದಂಥ ತೆರಿಗೆ ಎಂದು ವಿಧಿಸಿದ್ದಾರೆ. ಅವನು ಆ ನಿಗದಿಯಾದಂಥ ತೆರಿಗೆ ಕೊಟ್ಟು ಧಾರಾಳವಾಗಿ ವ್ಯಾಪಾರ ಮಾಡತಕ್ಕ ಅನುಕೂಲತೆ ಆಗಬೇಕು, ಆದರಿಂದ ದೇಶಕ್ಕೆ ಹೆಚ್ಚಿನ ಪ್ರಯೋಜನವಾಗಬಹುದು ಎಂದು ನನಗಾದರೂ ಅನ್ನಿಸುತ್ತದೆ. ಜವಳಿ ವ್ಯಾಪಾರ ಮಾಡತಕ್ಕಂಥವರು ಇಷ್ಟು ಟ್ಯಾಕ್ಸ್ ಕೊಡಬೇಕು, ಚಿಲ್ಲರೆ ಅಂಗಡಿಗಳವರು ಇಷ್ಟು ಟ್ಯಾಕ್ಸ್ ಕೊಡಬೇಕೆಂದು ವ್ಯಾಪಾರದ ಮೇಲೆ ಗೊತ್ತಾದಂಥ ನಿಗದಿಯಾದಂಥ ಟ್ಯಾಕ್ಸ್‌ನ್ನು ಹಾಕುವುದರಿಂದ ಸುಲಿಗೆ ಮಾಡತಕ್ಕಂಥದ್ದು ತಪ್ಪುತ್ತದೆ. ಮತ್ತು ಸರ್ಕಾರಕ್ಕೆ ಹೆಚ್ಚಿನ ಹಣ ಸಂದಾಯವಾಗುತ್ತದೆ ಎಂದು ನನಗಾದರೂ ಅನ್ನಿಸುತ್ತದೆ. ಈ ರೀತಿ ಸೂಕ್ತ ಕಂಡರೆ ಇದನ್ನು ಕಾರ್ಯಗತ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್‌ಕಂ ಟ್ಯಾಕ್ಸ್ ವಿಷಯದಲ್ಲಿಯೂ ಅಷ್ಟೇ. ಇನ್‌ಕಂ ಟ್ಯಾಕ್ಸ್ ವಿಷಯದಲ್ಲಿ ಸುಳ್ಳು ಲೆಕ್ಕ ಬರೆಯುವುದನ್ನು ಸಹ್ಮ ಇನ್‌ಕಂ ಟ್ಯಾಕ್ಸ್ ಅಧಿಕಾರಿಗಳೇ ಹೇಳಿ ಕೊಡುತ್ತಾರೆ. ನನಗೆ ಇಷ್ಟು ಕೊಟ್ಟರೆ ನಿಮಗೆ ತೆರಿಗೆ ತಪ್ಪಿಸುತ್ತೇನೆ ಎಂದು ಜನಗಳ ಹತ್ತಿರ ಪ್ರಚಾರ ಮಾಡಿ ಇಲಾಖೆಯಿಂದ ಯಾವ ವಿಧವಾದ ಲಾಭವೂ ಸರ್ಕಾರಕ್ಕೂ ಆಗುತ್ತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಅವರಿಗೆ ಕೊಡತಕ್ಕ ವೇತನವೆಷ್ಟು ಟ್ಯಾಕ್ಸ್ ವಸೂಲು ಮಾಡುತ್ತಾರೋ ಇಲ್ಲವೋ ಎಂದು ನನಗೆ ಅನ್ನಿಸುತ್ತದೆ. ಅದು ಸರಿಯಾಗಬೇಕಾದರೆ ದಕ್ಷರು ಮತ್ತು ನೀತಿಯುತರಾದಂಥವರನ್ನು ಅಧಿಕಾರಿಗಳನ್ನಾಗಿ ನೇಮಕ ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಲೋಪದೋಷಗಳನ್ನು ಯಾವ ಮಟ್ಟಕ್ಕೆ ಹೋಗಿದೆಯೆಂದು ಈಗಾಗಲೇ ಮಾತನಾಡಿದಂಥ ಸಿದ್ದಪ್ಪನವರು, ಕೋಣಂದೂರು ಲಿಂಗಪ್ಪನವರು ಮತ್ತಿತರರೂ ಹೇಳಿದ್ದಾರೆ. ಇನ್ನು ಲಾಟರಿ

ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಈಗಾಗಲೇ ಬಸ್ ಸ್ಟ್ಯಾಂಡಿನಲ್ಲಿ ರೈಲ್ವೆ ಪ್ಲಾಟ್‌ಫಾರಂನಲ್ಲಿ ರಸ್ತೆಯಲ್ಲಿ ಹೋಗುವ ಜನರಿಗೆ ಹುಡುಗರು ಕೊಡುವ ಹಿಂಸೆ ನೋಡಿದರೆ, ಹುಡುಗರನ್ನು ಯಾವ ಮಟ್ಟಿಗೆ ತಯಾರು ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಸಣ್ಣತನದಲ್ಲಿ ಈ ವೃತ್ತಿಗೆ ಅವರನ್ನು ಇಳಿಸಿದ್ದಾರೆ. ಮುಂದೆ ಅವರು ತಿರುಪೆ ಮಾಡಲು ಹೋಗುವುದಕ್ಕೆ ಕೂಡ ಸಾಧ್ಯವಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಈ ಒಂದು ನಿಯಮಾಳಿಯನ್ನು ತಪ್ಪಿಸಬೇಕು. ಯಾವನು ಟಿಕೆಟ್ಟುಗಳನ್ನು ಮಾರಾಟ ಮಾಡುವುದಕ್ಕೆ ಅಧಿಕಾರವನ್ನು ಪಡೆದಿದ್ದಾನೆ ಅಂಥವನು ಮಾತ್ರ ಮಾರಾಟ ಮಾಡಬೇಕು. ಬೇರೆಯವರ ಮುಖಾಂತರ ಕಮಿಷನ್ ಕೊಡುತ್ತಾರೆಂದು ಹೇಳಿ ಬೀದಿ ಬೀದಿಯಲ್ಲಿ ಮಾರಿ ಎಂದು ಮಾರಾಟ ಮಾಡುವುದನ್ನು ತಪ್ಪಿಸಬೇಕು. ಯಾವನಿಗೆ ಟಿಕೆಟ್ಟುಗಳನ್ನು ತೆಗೆದುಕೊಳ್ಳಬೇಕೆಂದು ಇಚ್ಛೆ ಇರುತ್ತದೆ ಅವನು ಗೊತ್ತಾದ ಸ್ಥಳಕ್ಕೆ ಹೋಗಿ ಟಿಕೆಟ್ಟುಗಳನ್ನು ಕೊಂಡು ಕೊಳ್ಳುವ ವ್ಯವಸ್ಥೆ ಮಾಡಬೇಕು. ಇದರಲ್ಲಿ ಇನ್ನೊಂದು ಅನ್ಯಾಯ ನಡೆಯುತ್ತಿದೆ ಎಂದು ಕೇಳಿದ್ದೇನೆ. ನಿಜವೋ ಸುಳ್ಳೋ ಗೊತ್ತಿಲ್ಲ. ಕೆಲವರು ಇನಕಂ ಟ್ಯಾಕ್ಸ್ ತಪ್ಪಿಸಿಕೊಳ್ಳುವುದಕ್ಕೋಸ್ಕರ ಲಾಟರಿ ಟಿಕೆಟ್ ಡ್ರಾ ಮುಗಿದ ಮೇಲೆ ಯಾವುದು ಟಿಕೆಟ್ ಉಳಿದಿರುತ್ತದೆ ಅವುಗಳನ್ನು ಕೊಂಡು ಕೊಂಡಿರುವವರ ಕಡೆಯಿಂದ 6 ಕಾಸು ಒಂದು ಆಣೆ ಕೊಟ್ಟುಕೊಂಡು ಇನ್‌ಕಂ ಟ್ಯಾಕ್ಸ್ ಡಿಪಾರ್ಟ್‌ಮೆಂಟಿಗೆ ತೋರಿಸಿ ತಾನು ಲಾಟರಿ ಗೋಸ್ಕರ ಇನ್‌ವೆಸ್ಟ್ ಮಾಡಿದ್ದೇನೆ ಎಂದು ಇನಕಂ ಟ್ಯಾಕ್ಸ್ ತಪ್ಪಿಸಿಕೊಳ್ಳುತ್ತಿದ್ದಾರೆ ಎನ್ನು ವಂಥದನ್ನು ಕೇಳಿದ್ದೇನೆ. ಇದು ನಿಜವೋ ಸುಳ್ಳೋ ಗೊತ್ತಿಲ್ಲ. ಒಂದು ವಿಧದಲ್ಲಿ ನಮಗೆ ಬರತಕ್ಕ ಆದಾಯ ಈ ಮಾಲ್ ಪ್ರಾಕ್ಟೀಸ್ಸಿನಿಂದ ಕಡಿಮೆಯಾಗುತ್ತಿದೆಂದು ಹೇಳಿದರೆ ತಪ್ಪಾಗ ಲಾರದೆಂದು ನನಗನ್ನಿಸುತ್ತದೆ. ಇನ್ನೊಂದು ವಿಷಯ.

ಕೋರ್ಟಿನ ಫೀಸು ಬಗ್ಗೆ ಚರ್ಚೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಕೋರ್ಟುಗಳಲ್ಲಿ ಯಾವು ದಾದರೂ ಒಂದು ಕೇಸನ್ನು ಕೊಟ್ಟರೆ ತತಕ್ಷಣ ವಿಚಾರಣೆಯಾಗಿ, ಒಂದು ತೀರ್ಮಾನ ಆಗುತ್ತಾ ಇಲ್ಲ. ಎರಡು ವರ್ಷ, ಮೂರು ವರ್ಷ 4, 5 ವರ್ಷಗಳವರೆಗೆ ಕೇಸು ಮುಂದುವರಿಸಿಕೊಂಡು ಹೋಗುತ್ತಾರೆ. ಒಂದೊಂದು ಕೇಸು ಅಡ್ಮಿಟ್ ಆದರೆ ಮೂರು—ನಾಲ್ಕು ಮುನ್ಸೀಫ್ ವರ್ಗಾವಣೆ ಆಗಿ ಹೋದರೂ ಕೂಡ ಒಂದು ತೀರ್ಮಾನವನ್ನು ತೆಗೆದುಕೊಂಡಿರುವುದಿಲ್ಲ. ಈ ಒಂದು ಪರಿಸ್ಥಿತಿಯಲ್ಲಿ ಕೋರ್ಟುಗಳು ನಡೆಯುತ್ತಿರುವಾಗ ಯಾರು ಕೇಸನ್ನು ಕೊಟ್ಟಿರುತ್ತಾರೋ ಅವರಿಗೆ ನ್ಯಾಯ ವಿಳಂಬ ಆಗುತ್ತಾ ಇದೆ. ಅದು ತಪ್ಪಿ ತತಕ್ಷಣ 6 ತಿಂಗಳೋ ಅಥವಾ ವರ್ಷ ದಲ್ಲೋ ನ್ಯಾಯ ದೊರೆಯುವಂತಾಗಬೇಕು.

ಇಲ್ಲದೇ ಹೋದರೆ ರೈತನಿಗೆ ಯಾವ ಫಲವು ಸಿಕ್ಕುವುದಿಲ್ಲ. ಅವನ ಶೋಷಣೆಯಾಗುವುದು ತಪ್ಪುವುದಿಲ್ಲ. ಕೇಸು ವಿಳಂಬವಾದಂತೆ ಖರ್ಚು ಜಾಸ್ತಿಯಾಗುತ್ತದೆ, ಫೀಸು ಜಾಸ್ತಿ ಕೊಡ ಬೇಕಾಗುತ್ತದೆ. ಲಾಯರುಗಳು ಫೀಸು 100 ರೂಪಾಯಿ ಆದರೆ ಕೇಸ್ ವಿಳಂಬವಾದಷ್ಟೂ ಅದರ ನಾಲ್ಕರಷ್ಟು ಐದರಷ್ಟು ಫೀಸ್ ಆತ ಕೊಡುತ್ತಾ ಹೋಗಬೇಕಾಗುತ್ತದೆ. ಆದುದರಿಂದ ಕೇಸ್ ಇಷ್ಟೇ ತಿಂಗಳಲ್ಲಿ ತೀರ್ಮಾನವಾಗಬೇಕು ಎಂದು ಒಂದು ನಿಯಾಮಾವಳಿಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಪತ್ಯಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇಂದಿನ ಸೆಷನ್ನಿನಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಮ್ಯಾಜಿಸ್ಟ್ರೇಟ್ ಮುನ್ಸೀಫ್ ಕೋರ್ಟುಗಳನ್ನು ಕೊಡುತ್ತೇವೆ. ಆದರಿಂದ ಕೇಸುಗಳ ಸಂಖ್ಯೆ ಕಡಿಮೆಯಾಗುತ್ತದೆ. ಜಾಗ್ರತೆ ತೀರ್ಮಾನವಾಗುತ್ತದೆ ಎಂದು ನಮ್ಮ ಮಂತ್ರಿಗಳು ವಾಗ್ದಾನ ಮಾಡಿದರು. ನಮ್ಮ ತಾಲ್ಲೂಕಿನ ವಿಷಯ ತೆಗೆದುಕೊಳ್ಳುವುದಾದರೆ, ಬೆಂಗಳೂರು ಜಿಲ್ಲೆಯಲ್ಲಿ ಹೆಚ್ಚಿನ ಮಟ್ಟದ ಕೇಸುಗಳು ಸೆಕೆಂಡ್ ಮುನ್ಸೀಫ ಕೋರ್ಟಿನಲ್ಲಿದೆ ಎಂದು ತಿಳಿದುಕೊಂಡಿದ್ದೇನೆ. ನಮ್ಮಲ್ಲಿ ಒಂದು ಮ್ಯಾಜಿ ಸ್ಟ್ರೇಟ್ ಮುನ್ಸೀಫ್ ಕೋರ್ಟು ಕೊಡುತ್ತೇವೆ ಎಂದು ಹೈಕೋರ್ಟು ನ್ಯಾಯಾಧೀಶರುಗಳು ಸ್ಥಳ ಪರಿಶೀಲನೆಮಾಡಿ, ನಾವು ಸ್ಥಳಾವಕಾಶ ಒದಗಿಸಿ ಕೊಟ್ಟರೇ ಕೋರ್ಟ್ ಕೊಡಿಸಿಕೊಡುತ್ತೇವೆ

ಎಂದು ಹೇಳಿದ್ದರು. ಸಂಬಂಧಪಟ್ಟ ಕಟ್ಟಡವನ್ನು ತಾತ್ಕಾಲಿಕವಾಗಿ ಬಿಟ್ಟು ಕೊಡುತ್ತೇವೆ ಎಂದು ಬರಹದ ಮುಖಾಂತರ ನಾವು ಕಳುಹಿಸಿಕೊಟ್ಟಿದ್ದೇವೆ. ಅದು ಏತಕ್ಕೋಸ್ಕರ ವಿಳಂಬ ವಾಗುತ್ತಿದೆಯೋ ಗೊತ್ತಿಲ್ಲ. ಈ ರೀತಿ ಬೇಗನೆ ಕೋರ್ಟುಗಳನ್ನು ಕೊಡದೇ ಹೋದರೆ ಜನಗಳು ಬಹಳ ಕಷ್ಟ ಪಡಬೇಕಾಗುತ್ತದೆ.

ಇನ್ನು ಈಗಿನ ಕಾಲದಲ್ಲಿ ಬಸ್ಸುಗಳಲ್ಲಿ ಪ್ರಯಾಣ ಮಾಡುವುದು ಕಷ್ಟವಾಗಿದೆ. ಬಸ್ಸು ಓಡಿಸಲು ಹೆಚ್ಚಿಗೆ ಲೈನು ಕೊಡಿ ಅಂದರೆ ಆರ್.ಟಿ.ಓ. ನವರು ಮಂಜೂರು ಮಾಡುವುದಿಲ್ಲ. ಮಂಜೂರು ಮಾಡಿಕೊಟ್ಟ ಸಂದರ್ಭದಲ್ಲಿ ಕೂಡ ಜನರು ಕೋರ್ಟಿಗೆ ಹೋಗಿ ಸ್ಟೇ ತಂದು ಬಸ್ ಓಡಿಸದಂತೆ ಮಾಡುತ್ತಾರೆ. ಇರತಕ್ಕ ಬಸ್ಸುಗಳಲ್ಲಿ ನಿಂತುಕೊಂಡು ಹೋಗುವುದಕ್ಕೂ ಸ್ಥಳಾವಕಾಶ ಇರುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಪ್ರಯಾಣ ಮಾಡಬೇಕಾದರೆ ನಾನು ಯಾವತ್ತೂ ಬಸ್ಸಿನಲ್ಲಿ ಕುಳಿತುಕೊಂಡು ಪ್ರಯಾಣ ಮಾಡಿಲ್ಲ. ಕಂಡಕ್ಟರುಗಳು ಎಂ. ಎಲ್. ಎ. ಬಂದರು ಎಂದು ದುಡ್ಡುಕೊಟ್ಟು ಕುಳಿತುಕೊಂಡು ಪ್ರಯಾಣಮಾಡುವ ಪ್ಯಾಸೆಂಜರ್‌ಗಳಿಗೆ ತೊಂದರೆಕೊಟ್ಟು ನಮಗೆ ಸೀಟು ಕೊಡುವುದಕ್ಕೆ ಪ್ರಯತ್ನ ಪಡುತ್ತಾರೆ. ನಾನು ಆರೀತಿ ಕುಳಿತುಕೊಳ್ಳುವುದಕ್ಕೆ ಇಚ್ಛೆಪಡದೆ ಕುಳಿತುಕೊಂಡಿರುವವರನ್ನು ಏಳಿಸಬೇಡಿ, ನಾನು ನಿಂತು ಕೊಂಡೇ ಬರುತ್ತೇನೆ ಎಂದು ಎಷ್ಟೋಸಾರಿ ಹೇಳಿದ್ದೇನೆ. ಡೆಪ್ಯುಟಿ ಕಮೀಷನರ್ ಎಷ್ಟು ಲೈನ್ ಬೇಕಾದರೂ ಕೊಡುವುದಕ್ಕೆ ತಯಾರಿದ್ದೇವೆ ಎಂದು ಹೇಳುತ್ತಾರೆ. ಆದರೆ ಲೈನುಗಳನ್ನು ಸಾಂಕ್ಷನ್ ಮಾಡಿದಾಗ ಅಪೀಲು ಹೋಗಿ ಸ್ಟೇ ಆರ್ಡರ್ ತರುತ್ತಾರೆ. ಅದಕ್ಕೋಸ್ಕರ ಕೋರ್ಟುಗಳು ಸ್ಟೇ ಕೊಡುವ ವ್ಯವಸ್ಥೆಯು ಕಡಿಮೆಯಾಗಿದ್ದರೆ, ಈಗಿರುವ ದುಸ್ಥಿತಿ ತಪ್ಪುತ್ತದೆ ಎಂದು ಡೆಪ್ಯುಟಿ ಕಮೀಷನರ್ ಹೇಳಿದರು. ಯಾವ ಕೋರ್ಟಿಗೆ ಅಪೀಲು ಹಾಕಿದರೂ ತಕ್ಷಣ ವಿಚಾರಣೆ ನಡೆಸಿ ತೀರ್ಮಾನ ಕೊಡಲಿ, ಸ್ಟೇ ಕೊಡತಕ್ಕದ್ದನ್ನು ತಪ್ಪಿಸಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕ್ಕಾಗಿ ಕೇಳಿಕೊಳ್ಳುತ್ತೇನೆ. ಲೈಸನ್ಸ್ ಕೊಟ್ಟರೆ ಸರ್ಕಾರಕ್ಕೆ ಟ್ಯಾಕ್ಸ್ ಬರುತ್ತದೆ. ಸಂಬಂಧಪಟ್ಟವರು ಇಷ್ಟಪಟ್ಟರೆ ಬಸ್ ಓಡಿಸಲಿ, ಇಲ್ಲದೇ ಹೋದರೆ ಬಿಟ್ಟು ಬಿಡಲಿ. ನಷ್ಟವಾದವನು ಬಸ್ ಓಡಿಸುವುದನ್ನು ನಿಲ್ಲಿಸುತ್ತಾನೆ. ಲಾಭ ಬಂದರೆ ಓಡಿಸುತ್ತಾನೆ. ನೀವು ಇದರ ಬಗ್ಗೆ ಯೋಚನೆ ಮಾಡಬಾರದು. ಬೇಡಿಕೆ ಬಂದಾಗಲೆಲ್ಲ ಲೈನು ಮಂಜೂರು ಮಾಡಿಕೊಡಬೇಕು. ಈ ರೀತಿ ಏರ್ಪಾಡು ಜಾರಿಗೆ ತರಬೇಕು. ಅವನು ಕೋರ್ಟಿಗೆ ಹೋದಾಗ ತಕ್ಷಣ ವಿಚಾರಣೆ ಮಾಡಿ ತೀರ್ಮಾನ ಕೊಡಬೇಕು ಎಂದು ಸಂಬಂಧ ಪಟ್ಟ ನ್ಯಾಯಾಧೀಶರಿಗೆ ತಿಳಿಸಬೇಕು ಎಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಇನ್ನು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕಬೇಕು ಎಂದು ನನ್ನ ಸ್ನೇಹಿತರಾದಂಥ ಕೃಷ್ಣನ್‌ರು ಇಲ್ಲಿ ಅಪ್ಪಣೆ ಕೊಡಿಸಿದರು. ಆದರೆ ನಾನು ಒಂದು ವಿಷಯ ಹೇಳುತ್ತೇನೆ. ಯಾವುದೇ ಸ್ಕೀಮನ್ನು ತಂದರೂ ಕೂಡ ಅದನ್ನು ವ್ಯವಸ್ಥಿತವಾಗಿ ತರಬೇಕು, ಯಾರ ಮೇಲೆ ತೆರಿಗೆಯನ್ನು ಹಾಕಬೇಕು, ಯಾರ ಮೇಲೆ ತೆರಿಗೆಹಾಕಬಾರದು ಎಂದು ಒಂದು ನಿರ್ಧಾರಕ್ಕೆ ಬಂದು ಗೊತ್ತಾದಂಥ ಆದಾಯವನ್ನು ನಿಗದಿಮಾಡಿ, ಅದರ ಮೇಲ್ಪಟ್ಟು ವರಮಾನ ಬರತಕ್ಕವರಿಗೆ ತೆರಿಗೆಯನ್ನು ಹಾಕಲಿ, ಬೆರಳು ತೋರಿ ಸಿದರೆ ಹಸ್ತ ನುಂಗುತ್ತಾರೆ ಎಂದು ಒಂದು ಗಾದೆ ಇದೆ. ಅದಕ್ಕೆ ಅವಕಾಶ ಕೊಟ್ಟರೆ ನಾಳೆ ಒಂದು ಎಕರೆ ಮುಸುಕಿನ ಜೋಳ ಹಾಕಿದರೂ ಟ್ಯಾಕ್ಸ್ ಹಾಕುತ್ತೇವೆ ಎಂದು ಹೇಳುವ ಪರಿಸ್ಥಿತಿ ಬರಬಾರದು. ಇಷ್ಟು ಆದಾಯ ಬರತಕ್ಕವನಿಗೆ, ಇಷ್ಟು ಎಕರೆ ಜಮೀನು ಮಾಡತಕ್ಕವನಿಗೆ ಆದಾಯ ನೋಡಿಕೊಂಡು ಇನ್‌ಕಂ ಟ್ಯಾಕ್ಸ್ ಹಾಕಿ. ನೀರಾವರಿ ಪ್ರದೇಶದಲ್ಲಿ ಹೆಚ್ಚಿಗೆ ಜಮೀನು ಇಟ್ಟುಕೊಂಡಿರುವವರಿಗೆ ಹೆಚ್ಚಿಗೆ ಆದಾಯ ತೆಗೆದುಕೊಳ್ಳುವವರಿಗೆ ಇನ್‌ಕಂ ಟ್ಯಾಕ್ಸ್ ಹಾಕಿ, ಬೇಡ ಎಂದು ಹೇಳುವುದಿಲ್ಲ. ಅದು ಬಿಟ್ಟು ಎಲ್ಲರ ಮೇಲೆ ಹಾಕಿದರೆ ತೊಂದರೆಯಾಗುತ್ತದೆ. ಅದು ಆಗಬಾರದು. ಜನರಿಗೆ ಸರಿಯಾಗಿ ತಿಳುವಳಿಕೆ ಕೊಟ್ಟು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್

ಹಾಕುವುದನ್ನು ಜಾರಿಗೆ ತರಬೇಕು ಎಂದು ಹೇಳುತ್ತೇನೆ. ಅನೇಕ ವಿಷಯಗಳನ್ನು ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಇಚ್ಛೆ ಇದ್ದರೂ ಕೊಟ್ಟಿರತಕ್ಕ ಕಾಲ ಅಲ್ಪವಾದುದರಿಂದ ಎಲ್ಲ ವಿಷಯಗಳನ್ನು ತಿಳಿಸುವುದಕ್ಕೆ ಸಾಧ್ಯವಿಲ್ಲ. ಇಷ್ಟು ವಿಷಯಗಳನ್ನು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಸಭಾಪತಿಯವರಿಗೆ ಹೃತ್ಪೂರ್ವಕವಾಗಿ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ) :—ಸಭಾಧ್ಯಕ್ಷರೆ, ಈಗಾಗಲೇ ಅನೇಕಬಾರಿ ಸೇಲ್ಸ್ ಟ್ಯಾಕ್ಸ್ ಬಗ್ಗೆ ನಾನು ಮಾತನಾಡಿದ್ದೇನೆ. ಒಂದು ವಿಚಾರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸೇಲ್ಸ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಸ್ವಲ್ಪ ಅದಕ್ಷತೆಗೆ ಕಾರಣವಾಗಿರುವುದು ನಿಜವಾಗಿ ಸೀನಿಯಾರಿಟಿ ಲಿಸ್ಟ್ ತಯಾರು ಮಾಡದೆ ಇರುವುದು. ಆದುದರಿಂದ ಸೀನಿಯಾರಿಟಿ ಲಿಸ್ಟ್ ಆದಷ್ಟು ಬೇಗ ತಯಾರು ಮಾಡಿದರೆ ಅಲ್ಲಿ ನಡೆಯುವ ಕೆಲಸಗಳಿಗೆ ಸ್ವಲ್ಪ ಅನುಕೂಲವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎರಡನೆದಾಗಿ ಸಿಂಗಲ್ ಪಾಯಿಂಟ್ ಸೇಲ್ಸ್‌ಟಾಕ್ಸ್ ಬಗ್ಗೆ ಸಾಕಾದಷ್ಟು ಮಾತನಾಡಿದ್ದೇನೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ತೀವ್ರವಾಗಿ ಯೋಚನೆಮಾಡಿ ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಲೆಕ್ಕಪತ್ರಗಳನ್ನು ಇಡುವುದಕ್ಕೆ ಸಾಕಾದಷ್ಟು ತೊಂದರೆ ವರ್ತಕರಿಗೆ ಇದೆ. ಅನೇಕ ವರ್ತಕರಿಗೆ ಲೆಕ್ಕಪತ್ರಗಳನ್ನು ಬರೆಯುವುದಕ್ಕೆ ಸಾಧ್ಯವಿಲ್ಲವಾಗಿದೆ. ಅದರಿಂದ ಕಿರುಕುಳ ಜಾಸ್ತಿಯಾಗುತ್ತಿದೆ. ಆದುದರಿಂದ ಅಕೌಂಟೆಂಟ್ ಸಿಸ್ಟಂ ಸಿಂಪ್ಲಿಫೈ ಮಾಡಿ ಟ್ಯಾಕ್ಸ್ ಕಲೆಕ್ಟ್ ಮಾಡುವುದಕ್ಕೆ ಅವಕಾಶ ಮಾಡಬೇಕು. ಲೆಕ್ಕ ಬರೆಯುವುದಕ್ಕೆ ಒಬ್ಬ ಗುಮಾಸ್ತನಿಗೆ ತಿಂಗಳಿಗೆ 100 ರೂಪಾಯಿ ಕೊಡುವ ಬದಲು, ಸಾವಿರ ರೂಪಾಯಿ ಸರ್ಕಾರಕ್ಕೆ ಟ್ಯಾಕ್ಸ್ ರೂಪದಲ್ಲಿ ಕೊಡುವಂತೆ ಮಾಡಲಿ. ಈಗ ಕೊಟ್ಟಿರತಕ್ಕ ಪಟ್ಟಿ ನೋಡಿದರೆ ಒಂದೊಂದು ಐಟಂಗೆ ಒಂದೊಂದು ರಿಜಿಸ್ಟರ್ ಓಪನ್ ಮಾಡಬೇಕು ಎನ್ನುವುದು ಬಹಳ ಕಠಿಣವಾದುದು ಎಂದು ಅನೇಕ ವರ್ತಕರು ಹೇಳಿದ್ದಾರೆ. ಒಂದೊಂದು ಐಟಂಗೆ ಲೆಕ್ಕ ಇಡುವುದು ಕಷ್ಟವಾಗುತ್ತದೆ. ಸರ್ಕಾರಕ್ಕೆ ಲಾಭವಾಗುವಂಥ ರೀತಿ ಸರಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಆಮೇಲೆ ಸೇಲ್ಸ್‌ಟ್ಯಾಕ್ಸ್ ಆಫೀಸರನ್ನು ಟ್ರಾನ್ಸ್‌ಫರ್ ಮಾಡುವ ಬಗ್ಗೆ ಹೇಳಬೇಕಾದರೆ, ಸಾವಿರಾರು ರೂಪಾಯಿ ಖರ್ಚುಮಾಡಿ ಟ್ರಾನ್ಸ್‌ಫರ್ ಮಾಡಿಸಿಕೊಳ್ಳುತ್ತಿದ್ದಾರೆ ಮತ್ತು ಟ್ರಾನ್ಸ್‌ಫರ್ ಆಗಿದ್ದನ್ನು ಕ್ಯಾನ್ಸಲ್ ಮಾಡಿಸಿಕೊಳ್ಳುತ್ತಿದ್ದಾರೆಂದು ಕೇಳಿದ್ದೇನೆ. ಟ್ರಾನ್ಸ್‌ಫರ್ ಮಾಡುವುದನ್ನು ಮಂತ್ರಿಗಳು ತಾವು ಕೈಗೆ ತೆಗೆದುಕೊಳ್ಳಬೇಕು. ಅಧಿಕಾರಿಗಳ ಕೈಗೆ ಬಿಡಬಾರದು. ಅದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಆಮೇಲೆ ಸರ್ಕಾರಿ ನೌಕರರಿಗೆ ಡಿ. ಎ. ಹೆಚ್ಚು ಮಾಡಿದ್ದೀರಿ. ಈ ಕಷ್ಟಕಾಲದಲ್ಲಿ ಜೀವನ ಮಾಡುವುದಕ್ಕೆ ಪೆನ್‌ಷನನ್ನೇ ನಂಬಿಕೊಂಡಿರತಕ್ಕ ಪೆನ್‌ಷನ್‌ದಾರರಿಗೆ ಡಿಯರ್‌ನೆಸ್ ಅಲೋಯನ್ಸ್ ಅಥವಾ ಯಾವುದಾದರೂ ಅಲೋಯನ್ಸ್‌ನ್ನು ಹೆಚ್ಚಿಸುವ ಬಗ್ಗೆ ಆಲೋಚನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅನೇಕ ಪೆನ್‌ಷನ್ ಕೇಸ್‌ಗಳು ವರ್ಷಗಟ್ಟಲೆ ತೀರ್ಮಾನವಾಗುತ್ತಿಲ್ಲ. ಆ ಪೆನ್‌ಷನ್ ಕೇಸುಗಳನ್ನು ಬೇಗ ತೀರ್ಮಾನ ಮಾಡಬೇಕು. ರಿಟೈರ್ ಆಗುವುದಕ್ಕೆ ಮೊದಲು ಪೆನ್‌ಷನ್ ಕೇಸಸ್ ವರ್ಕಪ್‌ಮಾಡಿ ರಿಟೈರ್ ಆಗುವ ಕಾಲಕ್ಕೆ ಪೆನ್‌ಷನ್ ಸಿಕ್ಕುವಂತೆ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ನೀಡುತ್ತೇನೆ. ಫ್ಯಾಮಿಲಿ ಪೆನ್‌ಷನ್ ಸ್ವಲ್ಪ ಹೆಚ್ಚಿಸಿರತಕ್ಕದ್ದು ಸಂತೋಷದ ವಿಚಾರ. ಅನೇಕರಿಗೆ ಇದರ ವಿವರಗಳು ಗೊತ್ತೇ ಇರುವುದಿಲ್ಲ. ಅವರಿಗೆ ಗೊತ್ತಾಗುವ ರೀತಿಯಲ್ಲಿ ಫ್ಯಾಮಿಲಿ ಪೆನ್‌ಷನ್ ವಿವರಗಳನ್ನು ಒದಗಿಸಿಕೊಡಬೇಕು. ಓಲ್ಡ್ ಏಜ್ ಪೆನ್‌ಷನ್ ಕೂಡ ಅನೇಕ ಸಂದರ್ಭದಲ್ಲಿ ತೀರ್ಮಾನವಾಗಿಲ್ಲ. ಯಾರು ರೆವಿನ್ಯೂ ಇನ್ಸ್‌ಪೆಕ್ಟರಿಗೆ ದುಡ್ಡು ಕೊಡುತ್ತಾರೊ ಅವರಿಗೆ ಬೇಗ ಆಗುತ್ತದೆ.

ಎಂದು ಹೇಳುತ್ತಾರೆ. ನಿಜವಾಗಿಯೂ ಪೆನ್‌ಷನ್ ಪಡೆಯಲು ಅರ್ಹರಾಗಿರುವವರಿಗೆ ಸಿಕ್ಕುತ್ತಾ ಇಲ್ಲ ಎನ್ನುವ ದೂರು ಇದೆ. ಓಲ್ಡ್ ಏಜ್ ಪೆನ್‌ಷನ್ ಕೊಡುವುದನ್ನು ಸರ್ಕಾರದವರು ಘನ ಉದ್ದೇಶದಿಂದ ಮಾಡಿರುವುದರಿಂದ, ಯಾರು ನಿಜವಾಗಿ ನಿಶ್ಯಕ್ತರು ಮತ್ತು ಯಾರಿಗೆ ಜೀವನ ಮಾಡುವುದಕ್ಕೆ ಕಷ್ಟ ಇದೆಯೋ ಅಂತಹವರಿಗೆ ಬೇಗ ಪೆನಷನ್ ಸಿಕ್ಕುವುದಕ್ಕೆ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಆ ಸ್ಥಳಗಳಿಗೆ ಖುದ್ದಾಗಿ ಹೋಗಿ ವಿಚಾರಣೆ ಮಾಡಿ ಅಲ್ಲೇ ತೀರ್ಮಾನ ಮಾಡಿಬಿಟ್ಟರೆ ಬೇಗ ತೀರ್ಮಾನವಾಗುತ್ತದೆ. ಆದುದರಿಂದ ಸ್ಥಳದಲ್ಲೇ ಪರಿಶೀಲಿಸುವುದಕ್ಕೆ ನ್ಯಾಯರೀತಿಯಲ್ಲಿ ತೀರ್ಮಾನ ಮಾಡುವುದಕ್ಕೆ ಅನುಕೂಲವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಜುಡಿಷಿಯಲ್ ಬಗ್ಗೆ ಹೇಳುವುದಾದರೆ ಎಲ್ಲಾ ಡಿಪಾರ್ಟ್‌ಮೆಂಟುಗಳಲ್ಲೂ ಲಂಚ ಇದೆ ಎನ್ನುವುದು ಗೊತ್ತಿತ್ತು. ಮೊದಲು ಕಕ್ಷಿದಾರರು ಜಡ್‌ಜಸ್ ಮನೆಗಳಿಗೆ ಹೋಗಲು ಹೆದರುತ್ತಿದ್ದರು. ಆದರೆ ಈಗ ಏನಾಗಿದೆ ಎಂದರೆ ಅನೇಕ ಜಡ್‌ಜಸ್‌ಗಳಿಗೂ ಕೂಡ ದುಡ್ಡು ಕೊಟ್ಟರೆ ತೀರ್ಮಾನವಾಗುತ್ತದೆ. ಎಂದು ಕೇಳಿಬರುತ್ತಿದೆ, ಉದಾಹರಣೆಗೆ ರೆಂಟ್‌ಕಂಟ್ರೋಲಿನಲ್ಲಿ ಮನೆ ಸಿಗಬೇಕಾದರೆ ಲಂಚ ಕೊಟ್ಟರೆ ಮಾತ್ರ ಸಿಗುತ್ತದೆ. ನ್ಯಾಯವಾಗಿ ಹೋದರೆ ಮನೆ ಸಿಕ್ಕುವುದಿಲ್ಲ. ರೆಂಟ್‌ಕಂಟ್ರೋಲ್ ಬಗ್ಗೆ ವಿಚಾರಣೆಮಾಡಿ ಈ ರೀತಿ ಲಂಚ ತೆಗೆದುಕೊಂಡು ಮನೆ ಅಲಾಟ್ ಮಾಡುವುದು ಸರಿಯಲ್ಲ ಎಂದು ಹೇಳುತ್ತೇನೆ.

ಇನ್ನು ಅನೇಕ ಕೋರ್ಟುಗಳಲ್ಲಿ ಕಕ್ಷಿದಾರರುಗಳಿಗೆ ಕೂತುಕೊಳ್ಳುವುದಕ್ಕೆ ಜಾಗವಿಲ್ಲ. ಕೋರ್ಟುಗಳಲ್ಲಿ ಸರಿಯಾದ ಫರ್ನೀಚರ್ಸ್ ಇಲ್ಲ. ಈ ಬಗ್ಗೆ ಗಮನಕೊಡಬೇಕು ಎಂದು ಹೇಳುತ್ತೇನೆ. ಬೆಂಗಳೂರು ಕೋರ್ಟಿನಲ್ಲಿ ಕಟ್ಟಡಗಳು ಇಲ್ಲದೆ ಕೆಲಸಗಳು ಬಹಳ ತಡವಾಗುತ್ತಿದೆ. ಆದುದರಿಂದ ಬೇಗ ಕಟ್ಟಡಗಳು ಆಗುವಂತೆ ಮಾಡಬೇಕು.

ಇನ್ನು ಲಾಟರಿ ವಿಷಯದ ಬಗ್ಗೆ ಹೇಳುವುದಾದರೆ ಇದರಿಂದ ಅನೇಕರು ದುಡ್ಡನ್ನು ಕಳೆದುಕೊಳ್ಳುತ್ತಿದ್ದಾರೆ. ಈಗ ಪ್ರೊಹಿಬಿಷನ್ ಬೇರೆ ತೆಗೆದು ಬಿಟ್ಟಿದ್ದೀರಿ, ಅಲ್ಲದೆ ಕುಡಿಯುವುದಕ್ಕೆ ಬೇರೆ ಅವಕಾಶವಿದೆ. ನಿಮಗೆ ದುಡ್ಡೆ ಪ್ರಾಧಾನ್ಯತೆ ಅನ್ನುವುದಾದರೆ ವೇಶ್ಯಾಗೃಹಗಳನ್ನು ಶುರು ಮಾಡಿ, ಒಂದು ಕಡೆ ಕುಡಿಯುವುದು, ಒಂದು ಕಡೆ ಜೂಜು ಆಡುವುದು, ಒಂದು ಕಡೆ ವೇಶ್ಯಾವೃತ್ತಿ ಆದರೆ ಎಲ್ಲವೂ ಸರಿಹೋಗುತ್ತದೆ. ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಬೇರೆ ಕಡೆ ಈ ರೀತಿ ಇದೆ ಎಂದು ಹೇಳಿದರು. ನಿಮಗೆ ದುಡ್ಡೆ ಪ್ರಾಧಾನ್ಯತೆ ಅನ್ನುವುದಾದರೆ ಲಾಟರಿಯಿಂದ ಪ್ರಯೋಜನವಾಗುವುದಿಲ್ಲ. ಆದುದರಿಂದ ಲಾಟರಿಯನ್ನು ತೆಗೆದುಬಿಡಿ ಎಂದು ಹೇಳುತ್ತೇನೆ. ಏತಕ್ಕೆಂದರೆ ಅದರಿಂದ ವರಮಾನಕ್ಕಿಂತ ಖರ್ಚು ಜಾಸ್ತಿಯಾಗಿದೆ. ಲಾಟರಿಯನ್ನು ಇಟ್ಟುಕೊಳ್ಳುವುದಾದರೆ ವೇಶ್ಯಾವೃತ್ತಿಯನ್ನೂ ಸಹ ಇಟ್ಟುಕೊಳ್ಳಿ.

ಇನ್ನು ಪೆನ್‌ಷನ್‌ದಾರರ ಬಗ್ಗೆ ಹೇಳುವುದಾದರೆ ಅನೇಕರು ತಮ್ಮ ಕಷ್ಟಕಾಲದಲ್ಲಿ ಅಂದರೇ ಅವರ ಮನೆಯ ಮದುವೆ ಮುಂಜಿಗೋಸ್ಕರವಾಗಿ ಅವರ ಪೆನ್‌ಷನ್‌ನ್ನು ಕಮ್ಯೂಟ್ ಮಾಡಿಸಿಕೊಂಡಿರುತ್ತಾರೆ. ಇದರಿಂದ ಅವರಿಗೆ ತಮ್ಮ ಪೆನ್‌ಷನ್ ಬರುವುದು ಕಡಿಮೆಯಾಗಿರುತ್ತೆ. ಅವರು ಎಂಭತ್ತು ವರ್ಷ ತನಕವೂ ಬದುಕಿದರೆ ಅವರಿಗೆ ಕಡಿಮೆಪೆನ್‌ಷನ್ ಬರುತ್ತದೆ. ಆದುದರಿಂದ ಅವರ ವಿಚಾರದಲ್ಲಿ ದಯೆ ತೋರಿಸಿ ಜಾಸ್ತಿ ಪೆನ್‌ಷನ್ ಕೊಡುವುದಕ್ಕೆ ಸಾಧ್ಯವಿದ್ದರೆ ಮಾಡಿ ಕೊಡಿ ಎಂದು ಹೇಳುತ್ತೇನೆ.

ಇನ್ನು ಸರ್ಕಾರದವರು ಡಿಸ್ಟಿಂಗ್‌ವಿಷ್‌ಡ್ ಮತ್ತು ಮೆರಿಟೋರಿಯಲ್ ಸರ್ವಿಸ್ ಮಾಡಿದವರಿಗೆ ಕೇವಲ ಎರಡುಸಾವಿರ ಇಟ್ಟಿದ್ದೀರಿ. ನ್ಯಾಯವಾಗಿ ನೋಡಿದರೆ ಕೋಟ್ಯಾಂತರ ರೂಪಾಯಿ ಕೊಡಬೇಕು. ಇದು ಬಹಳ ಕಡಿಮೆ. ಇದನ್ನು 2 ಲಕ್ಷಕ್ಕಾದರೂ ಜಾಸ್ತಿ

ಮಾಡಿ ಯಾರುಯಾರಿಗೆ ಕೊಡಬೇಕೋ ಅವರಿಗೆ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ

ಇನ್ನು ಕೊನೆಯದಾಗಿ ಹೇಳುವುದಾದರೆ ನಮ್ಮ ಸರ್ಕಾರದ ಜವಾಬ್ದಾರಿ ಬಹಳ ಜಾಸ್ತಿ ಇದೆ. ಒಂದು ಕಡೆ ವರಮಾನ ಬರುವುದು ಕಡಿಮೆಯಾಗಿದೆ. ಆದುದರಿಂದ ನನ್ನ ಕೊನೆ ಸಲಹೆ ಏನೆಂದರೆ ಸರ್ಕಾರದಲ್ಲಿ ಅನಾವಶ್ಯಕವಾದ ಖರ್ಚುಗಳನ್ನು ಆದಷ್ಟು ಕಡಮೆ ಮಾಡಿ ಸಾಧ್ಯವಾದಷ್ಟು ತೆರಿಗೆ ಹಾಕಿರತಕ್ಕಂಥ ಟ್ಯಾಕ್ಸ್‌ಗಳನ್ನು ನ್ಯಾಯವಾದ ರೀತಿಯಲ್ಲಿ ವಸೂಲ್ಮಾಡುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ತೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಮಂತ್ರಿಗಳು) :—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಇಲಾಖೆಗೆ ಸಂಬಂಧಪಟ್ಟ ಕೆಲವು ಮುಖ್ಯವಾದ ಅಂಶಗಳನ್ನು ಈ ಇಲಾಖೆಯ ವರದಿಯಲ್ಲಿ ಪ್ರಸ್ತಾಪ ಮಾಡಿದ್ದೇನೆ ಆದರೂ ಕೂಡ ಈವೊತ್ತು ಈ ಚರ್ಚೆಗೆ ಉತ್ತರ ಕೊಡುವಾಗ ಅದರಲ್ಲೂ ಕೂಡ ಕೆಲವು ಮುಖ್ಯ ಅಂಶಗಳನ್ನು ನಾನು ಪುನಃ ಒತ್ತಿ ಹೇಳಬೇಕಾಗಿದೆ. ಹಾಗೆ ಹೇಳುವಾಗ ಈ ಚರ್ಚೆಯಲ್ಲಿ ಬಂದಿರತಕ್ಕಂಥ ಹಲವಾರು ವಿಷಯಗಳ ಬಗ್ಗೆ ಸಾಕಷ್ಟು ವಿವರಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಏತಕ್ಕೆಂದರೆ ಹೆಚ್ಚು ಕಾಲ ನಾನು ತೆಗೆದುಕೊಳ್ಳುವ ಹಾಗಿಲ್ಲ. ಮತ್ತು ಮಾನ್ಯ ಕಾನೂನು ಮಂತ್ರಿಗಳು ಕೂಡ ಉತ್ತರ ಕೊಡುವವರಿದ್ದಾರೆ.

ಮೊಟ್ಟಮೊದಲನೆಯದಾಗಿ ಸ್ಮಾಲ್ ಸೇವಿಂಗ್ಸ್ ಬಗ್ಗೆ ಹೇಳುತ್ತೇನೆ. ಈ ಸ್ಮಾಲ್ ಸೇವಿಂಗ್ಸ್‌ನಲ್ಲಿ ಏನು ತೋರಿಸುತ್ತದೆ ಎಂದರೆ, ಸರ್ಕಾರ ಈ ಬಗ್ಗೆ ಎಷ್ಟು ಪ್ರಾಮುಖ್ಯತೆ ಕೊಟ್ಟಿದೆ. ಈ ಬಗ್ಗೆ ಏನು ಮಾಡಿದೆ ಎಂದು ಹೇಳಿದ್ದೆ. ಆದರೂ ಈ ಬಗ್ಗೆ ಇನ್ನೂ ಹೆಚ್ಚು ಹೆಚ್ಚಾಗಿ ಗಮನ ಕೊಡಬೇಕೆಂದು ನನಗೆ ಅನಿಸಿದೆ. ಮತ್ತು ಈಗ ಆಗಿರತಕ್ಕಂಥ ಒಂದು ಪ್ರಗತಿ ತೃಪ್ತಿಕರವಾಗಿದೆ ಎಂದು ಹೇಳಬಹುದು. ಏತಕ್ಕೆಂದರೆ ಸರ್ಕಾರದ ಅಂಕಿಅಂಶ ಪ್ರಕಾರ 1969-70 ರಲ್ಲಿ ಸ್ಮಾಲ್ ಸೇವಿಂಗ್ಸ್ ನೆಟ್ ಇನ್‌ಕಂ 5 ಕೋಟಿ ರೂಪಾಯಿಗಿಂತ ಕಡಿಮೆ ಇತ್ತು. ಈ ವೊತ್ತು 12 ಕೋಟಿ ರೂಪಾಯಿ ಆಗಿದೆ. ಇನ್ನು 1972-73 ರಲ್ಲಿ ನಮ್ಮ ಟಾರ್ಗೆಟ್ ಏನು ಇತ್ತೋ ಅದು ನಮ್ಮ ನಿರೀಕ್ಷೆಗಿಂತಲೂ ಜಾಸ್ತಿಯಾಗಿದೆ. ತಮಗೆಲ್ಲಾ ಗೊತ್ತಿರುವ ಹಾಗೆ ಇದರಲ್ಲಿ $\frac{2}{3}$ ಭಾಗ ಕೇಂದ್ರದಿಂದ ಸಾಲದ ರೂಪದಲ್ಲಿ ಬರುತ್ತದೆ. ಹೆಚ್ಚು ಟ್ಯಾಕ್ಸನ್ನು ಹಾಕುವುದಕ್ಕೆ ಪ್ರಾರಂಭ ಮಾಡಿದರೆ ಜನರಿಗೆ ಅನಾನುಕೂಲವಾಗುತ್ತದೆ. ಅವರು ಸ್ಮಾಲ್ ಸೇವಿಂಗ್ಸ್ ಜಾಸ್ತಿ ಮಾಡಿದರೆ ಅವರಿಗೆ ಅನಾನುಕೂಲವಾಗುವುದಿಲ್ಲ. ಆದುದರಿಂದ ಇದರ ಮೇಲೆ ಒಂದು ಹೆಚ್ಚಿನ ಗಮನ ಕೊಡಬೇಕು ಎಂದು ನನ್ನ ಅಪೇಕ್ಷೆ. ಈ ವಿಷಯವಾಗಿ ಈ ಚರ್ಚೆಯಲ್ಲಿ ಒಂದು ಮಾತು ಬಂದಿದೆ. ಆಯಾಯ ಜಿಲ್ಲೆಯ ಸಂಬಂಧಪಟ್ಟ ಮಂತ್ರಿಗಳಿಗೆ ಇದರ ಜವಾಬ್ದಾರಿಯನ್ನು ವಹಿಸಿದರೆ ಒಳ್ಳೆಯದು ಎಂದು ಹೇಳಿದರು. ಅದನ್ನು ನಾನೂ ಕೂಡ ಒಪ್ಪುತ್ತೇನೆ. ಇದು ಒಬ್ಬರಿಂದ ಆಗುವ ಕೆಲಸವಲ್ಲ. ಇದರಲ್ಲಿ ಆಯಾಯ ಜಿಲ್ಲೆಗೆ ಸಂಬಂಧಪಟ್ಟ ಮಂತ್ರಿಗಳು ಇದರಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಈ ಬಗ್ಗೆ ಒಂದು ಚಳುವಳಿ ಮಾಡಿದರೆ ಈ ಸ್ಮಾಲ್ ಸೇವಿಂಗ್ಸನ್ನು ಇನ್ನೂ ಹೆಚ್ಚು ಇಂಪ್ರೂವ್ ಮಾಡುವುದಕ್ಕೆ ಪುಷ್ಟೀಕರಣ ತಂದುಕೊಟ್ಟಂತಾಗುತ್ತದೆ, ಅದನ್ನು ಮಾಡಬೇಕು ಎಂದು ಹೇಳುತ್ತೇನೆ. ಇನ್ನು ಈವೊತ್ತಿನ ದಿವಸ ಅದರ ಪ್ರಗತಿ ನೋಡಿದರೆ ಅದರ ಅಂಕಿಅಂಶ ನೋಡಿದರೆ ಇವೊತ್ತಿನ ಸ್ಮಾಲ್‌ಸೇವಿಂಗ್ಸ್‌ನ ಪರ್ ಕ್ಯಾಪಿಟಾ ಇನ್‌ಕಂ 4 ರೂಪಾಯಿ ಇದೆ. ಹೋದ ವರ್ಷ 3 ರೂಪಾಯಿ ಬರುತ್ತಿತ್ತು. ದೇಶದಲ್ಲಿ ಈ ಬಗ್ಗೆ ಏನು ಒಂದು ಪ್ರಮಾಣ ಇರಬೇಕಾಗಿತ್ತೋ ಅದಕ್ಕೆ ಸರಿಯಾಗಿದೆ. ಈ ಬಗ್ಗೆ ಇನ್ನೂ ಹೆಚ್ಚು ಪ್ರಯತ್ನ ಮಾಡಬೇಕು. ಇದಕ್ಕೆ ಬರೇ ಮಂತ್ರಿಗಳು ಮಾತ್ರವಲ್ಲ ಪ್ರತಿಯೊಬ್ಬರೂ ಕೂಡ ಇದರಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಒಂದು

ದೊಡ್ಡ ಪ್ರಮಾಣದಲ್ಲಿ ಚಳುವಳಿ ಮಾಡಿದರೆ ಮುಂದಿನ 5 ವರ್ಷದಲ್ಲಿ ಇನ್ನೂ ಹೆಚ್ಚು ಪ್ರಮಾಣ ದಲ್ಲಿ ಮಾಡುವುದಕ್ಕೆ ಸಾಧ್ಯ ಎಂದು ನನಗೆ ಅನಿಸುತ್ತದೆ.

Eevn in Panchayats there is a great scope for it and we should do it. It will reduce tax burden if you can get more by way of Small Savings.

ಇನ್ನು ಲಾಟರಿ ಬಗ್ಗೆ ಇದನ್ನು ರದ್ದು ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದರ ಭವಿಷ್ಯ ಏನು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏತಕ್ಕೆಂದರೆ ಈ ಬಗ್ಗೆ ಪ್ರಾಮಾಣಿಕತೆಯಿಂದ ಹೇಳುವುದಾದರೆ ನಮ್ಮ ದೇಶದ ಪರಿಸ್ಥಿತಿಯಲ್ಲಿ ಲಾಟರಿ ಭವಿಷ್ಯ ಏನು ಇದೆ ಎನ್ನುವುದು ಮಾತ್ರ ನಾನು ಹೇಳಲಿಕ್ಕೆ ಸಾಧ್ಯವಿಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ತಕ್ಷಣ ಇದನ್ನು ರದ್ದು ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ಹೆಚ್ಚು ಕಡಿಮೆ ಒಂದು ಕೋಟಿ 60 ಲಕ್ಷ ರೂಪಾಯಿ ನೆಟ್ ಇನ್‌ಕಂ ಏನು ಬರುತ್ತಿತ್ತೋ ಅದು ಈವೊತ್ತಿನ ದಿವಸದ ಪರಿಸ್ಥಿತಿಯಲ್ಲಿ ಕಡಿಮೆ ಎಂದು ಹೇಳಿಕೊಳ್ಳೋಣ. ಆದರೂ ಕೂಡ ಈವೊತ್ತಿನ ದಿವಸ ಪ್ರತಿಯೊಂದಕ್ಕೂ ಕೂಡ ಹಣ ಬೇಕಾಗಿದೆ. ಇದರಲ್ಲಿ ವರಮಾನಕ್ಕಿಂತ ಖರ್ಚು ಜಾಸ್ತಿ ಎಂದು ಮಾನ್ಯಸದಸ್ಯರು ಹೇಳಿದರು. ಇದರ ಬಗ್ಗೆ ತಮಗೆ ಅಪೇಕ್ಷೆ ಇದ್ದರೆ ಅದರ ಅಂಕಿ ಅಂಶ ಕೊಡುತ್ತೇನೆ. 1972—73 ರಲ್ಲಿ ಲಾಟರಿ ಸಂಬಂಧದಲ್ಲಿ ಒಟ್ಟು ಖರ್ಚಾದುದು 2,15,00,000 ರೂಪಾಯಿ ಅದರಲ್ಲಿ ಬಹುಮಾನಗಳಿಗೋಸ್ಕರ 1, 26, 00, 000 ರೂಪಾಯಿ ಮತ್ತು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಗೆ ಕಮಿಷನ್ ರೂಪದಲ್ಲಿ ಕೊಟ್ಟದ್ದು 84 ಲಕ್ಷ ರೂಪಾಯಿ ಮಾರಾಟವಾದ ಟಿಕೆಟ್ಟಿನ ಮೇಲೆ 25 ಪರ್ಸೆಂಟ್ ಪ್ರಕಾರ ಕಮಿಷನ್ ಕೊಡುತ್ತೇವೆ. ಅದರಲ್ಲಿ 15 ಪರ್ಸೆಂಟ್ ಸಬ್ ಏಜೆಂಟರಿಗೆ ಮತ್ತು ಐದು ಪರ್ಸೆಂಟ್ ಪಬ್ಲಿಸಿಟಿಗೋಸ್ಕರ ಖರ್ಚಾಗುತ್ತದೆ. ಅವರಿಗೆ ಇದರಿಂದ ಲಾಭ ಬರುವುದು ಕೇವಲ 4 ಪರ್ಸೆಂಟ್ 84 ಲಕ್ಷ ರೂಪಾಯಿಗಳಲ್ಲಿ ನಾಲ್ಕು ಪರ್ಸೆಂಟ್ ಲಾಭವಾಗುತ್ತದೆ. ಆದಕಾರಣ ಅವರಿಗೆ ಜಾಸ್ತಿ ಕೊಡುತ್ತಿದ್ದೇವೆನ್ನುವ ವಾದಮಾಡುವುದು ಅಷ್ಟೊಂದು ಸರಿಯಲ್ಲ. ಇದೂ ಕೂಡ ಒಂದು ಗೌವರ್ನಮೆಂಟ್ ಕನ್‌ಸರ್ನ್ ಪ್ರೈವೇಟ್ ಕನ್‌ಸರ್ನ್ ಲಾಭ ಮಾಡುವುದಕ್ಕೆ ಕೊಟ್ಟಿದ್ದಲ್ಲ. ಸರ್ಕಾರ ಇದಕ್ಕೋಸ್ಕರವೇ ಸ್ಥಾಪನೆ ಮಾಡಿರತಕ್ಕ ಸಂಸ್ಥೆ. ಆ ಸಂಸ್ಥೆಗೆ ಮಾರಾಟವಾಗುವ ಟಿಕೆಟ್ಟುಗಳ ಮೇಲೆ ಲಾಭವಾದರೆ ಜಾಸ್ತಿ ವೇಸ್ಟ್ ಆಗುತ್ತಿದೆ, ದುಡ್ಡು ಲೋವಾಗುತ್ತಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಲಾಟರಿಯಲ್ಲಿ ಏನು ಒಳ್ಳೆಯ ಅಂಶವಿದೆ ಎಂದು ಕೇಳುವುದಾದರೆ, ಇದರಿಂದ ಸುಮಾರು 15 ಸಾವಿರ ಜನಗಳಿಗೆ ಕೆಲಸ ಸಿಕ್ಕುತ್ತದೆ. ಎಂಪ್ಲಾಯ್‌ಮೆಂಟ್ ದೃಷ್ಟಿಯಿಂದ ಇದು ಒಂದು ಒಳ್ಳೆಯ ಅಂಶವಿದೆ. ಲಾಟರಿ ಟಿಕೆಟ್ಟುಗಳ ಮಾರಾಟ ಕ್ರಮೇಣ ಕಡಮೆಯಾಗುತ್ತಿದೆ. ಅದಕ್ಕೇ ಅದರ ಭವಿಷ್ಯ ಹೇಳುವುದಕ್ಕಾಗುವುದಿಲ್ಲವೆಂದು ನಾನು ಹೇಳಿದ್ದು. ಆದರೆ ಅದನ್ನು ಕೂಡಲೇ ರದ್ದು ಮಾಡುವುದಕ್ಕೂ ಆಗುವುದಿಲ್ಲ. ಬೇರೆ ರಾಜ್ಯಗಳ ಲಾಟರಿ ಟಿಕೆಟ್ಟುಗಳನ್ನು ನಮ್ಮ ರಾಜ್ಯದಲ್ಲಿ ಮಾರಾಟ ಮಾಡುವುದಕ್ಕೆ ಪರವಾನಗಿ ಕೊಡಬೇಕಾಗಿದೆ, ರೆಸಿಪ್ರೋಕಲ್ ಅರೇಂಜ್‌ಮೆಂಟ್ಸ್ ಇರಬೇಕು: ಅವರೂ ನಮ್ಮ ರಾಜ್ಯದ ಲಾಟರಿ ಟಿಕೆಟ್ಟುಗಳನ್ನು ಮಾರಲು ಅವಕಾಶ ಮಾಡಿ ಕೊಡಬೇಕು. ಈ ಬಗ್ಗೆ ತಮಿಳುನಾಡು ಸರ್ಕಾರ ಮತ್ತು ಕೇರಳ ಸರ್ಕಾರಗಳು ಒಪ್ಪಿವೆ.

ಶ್ರೀ ಟಿ. ಆರ್. ಶಾಮಣ್ಣ:—ಹೆಚ್ಚು ಮೊತ್ತದ ಬಹುಮಾನಗಳನ್ನು ಇಡುವುದಕ್ಕೆ ಬದಲಾಗಿ ಸಣ್ಣ ಮೊತ್ತದ ಬಹುಮಾನಗಳನ್ನು ಇಟ್ಟರೆ ಅನುಕೂಲವಾಗುವುದಿಲ್ಲವೇ ?

ಶ್ರೀ ಎಂ ವೈ. ಘೋರ್ಪಡೆ :—ಅದನ್ನು ಕೂಡ ಯೋಚನೆ ಮಾಡುತ್ತಿದ್ದೇವೆ. ಜನರ ಅಭಿರುಚಿಗೆ ತಕ್ಕಂತೆ ಪ್ರೈಜ್ ಪಾಲಿಸಿಯನ್ನು ಬದಲಾವಣೆ ಮಾಡುವ ವಿಚಾರವನ್ನೂ ಸರ್ಕಾರ ಪರಿಶೀಲಿಸಬೇಕಾಗಿದೆ. ಈ ಹೊತ್ತು ಗ್ಯಾಂಬ್ಲಿಂಗ್ ಇನ್‌ಸಿಡೆನ್ಸ್ ಇದೆ. ಅದನ್ನು ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ಒಂದಲ್ಲ ಒಂದು ರೂಪದಲ್ಲಿ ಗ್ಯಾಂಬ್ಲಿಂಗ್ ಮಾಡುವುದು ಮನುಷ್ಯನ ಸ್ವಭಾವವಿದೆ. ಅದರ ಬಗ್ಗೆ ವೈಯಕ್ತಿಕ ಅಭಿಪ್ರಾಯವನ್ನು ಕೊಡುವುದಕ್ಕೆ ಹೋಗುವುದಿಲ್ಲ. ಗ್ಯಾಂಬ್ಲಿಂಗ್ ಹಳೇಕಾಲದಿಂದ ಬಂದಿರತಕ್ಕದ್ದು. ಅದನ್ನು ಸಂಪೂರ್ಣವಾಗಿ ತೆಗೆದುಹಾಕುವುದಕ್ಕೆ ಆಗುವುದಿಲ್ಲ ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಕಾಗೋಡು ತಿಮ್ಮಪ್ಪ :—ಧರ್ಮರಾಯ ರಾಜ್ಯವನ್ನೇ ಕಳೆದುಕೊಂಡ.

ಶ್ರೀ ಎಂ. ವೈ. ಘೋರ್ಪಡೆ :—ರಾಜ್ಯ ಕಳೆದುಕೊಳ್ಳದೆ ಹೋಗಿದ್ದರೆ ಧರ್ಮಯುದ್ಧ ಮಾಡುವುದಕ್ಕಾಗುತ್ತಿರಲಿಲ್ಲ.

ಇನ್ನು ಡೈರೆಕ್ಟರ್ ಆಫ್ ಟ್ರೆಜರೀಸ್ ಬಗ್ಗೆ ಒಂದೆರಡು ಮಾತು ಹೇಳಬೇಕಾಗುತ್ತದೆ. ಇದರಲ್ಲಿ ಸ್ವಲ್ಪ ಬದಲಾವಣೆಯನ್ನು ನಾವು ಮಾಡುತ್ತಿದ್ದೇವೆ. 19 ಜಿಲ್ಲಾ ಟ್ರೆಜರಿಗಳಷ್ಟೇ ಅಲ್ಲ, ನಮ್ಮ ರಾಜ್ಯದಲ್ಲಿ ಒಟ್ಟು 165 ಸಬ್ ಟ್ರೆಜರಿಗಳಿವೆ. ಇದರಲ್ಲಿ ಚೆಕ್ ಸಿಸ್ಟಂ ತರಬೇಕು ಎಂದು ಇದ್ದೇವೆ: ಮೈಸೂರು, ದಕ್ಷಿಣ ಕನ್ನಡ, ಬೆಳಗಾಂ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಜೂನ್ ತಿಂಗಳಿನಿಂದ ಚೆಕ್ ಸಿಸ್ಟಂ ಜಾರಿಯಲ್ಲಿ ತರುತ್ತೇವೆ ಮತ್ತು ಇನ್ನು ಎರಡು ವರ್ಷಗಳಲ್ಲಿ ಇಡೀ ರಾಜ್ಯದಲ್ಲಿ ಚೆಕ್ ಸಿಸ್ಟಂ ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಪೆನ್‌ಷನರ್ಸ್ ಅನುಕೂಲತೆಗೋಸ್ಕರ ಕಾರ್ಡೆಕ್ಸ್ ಸಿಸ್ಟಂ ಮಾಡಿದೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತು. ಬೆಂಗಳೂರಿನಲ್ಲಿ ಈ ರೀತಿ ಮಾಡುತ್ತಿದ್ದೇವೆ. ಇದರಿಂದ ಪೆನ್‌ಷನರ್ಸ್‌ಗೆ ಕಾಯುವುದು ಮತ್ತೆ ಏನೇನೋ ಹಿಂಸೆಯಾಗುತ್ತಿತ್ತು ಅದನ್ನೆಲ್ಲ ಬಹುಮಟ್ಟಿಗೆ ತಪ್ಪಿಸಲಿಕ್ಕೆ ಸಾಧ್ಯವಾಗುತ್ತದೆ. ಇದೇ ರೀತಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಈ ಕಾರ್ಡೆಕ್ಸ್ ಸಿಸ್ಟಂ ಮತ್ತು ಮನಿ ಆರ್ಡರ್ ಮೂಲಕ ನೇರವಾಗಿ ಪೆನ್‌ಷನ್ ಅವರ ಮನೆಗೆ ಕಳುಹಿಸಿಕೊಡುವ ಪದ್ಧತಿಯನ್ನು ಎಲ್ಲ ಕಡೆಗೂ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆ.

ಬಜೆಟರಿ ಕಂಟ್ರೋಲ್ ಬಗ್ಗೆ ಒಂದು ಮಾತು. ಕಂಪ್ಯೂಟರ್‌ಗಳನ್ನು ಉಪಯೋಗಿಸಿ, ಬಜೆಟ್ ಸರಿಯಾಗಿ ಮಾಡುವುದಕ್ಕೋಸ್ಕರ ಡಾಟ ಕಲೆಕ್ಟ್ ಮಾಡಬೇಕಾಗುತ್ತದೆ. ಆ ಕೆಲಸವನ್ನು ನಾಲ್ಕೈದು ವರ್ಷದಿಂದ ಪ್ರಾರಂಭಮಾಡಿದ್ದೇವೆ. ಒಂದೆರಡು ವರ್ಷದಲ್ಲಿ ಬಜೆಟ್‌ಗೋಸ್ಕರ ನಾವು ಕಂಪ್ಯೂಟರ್ ಉಪಯೋಗ ಮಾಡುವ ಕೆಲಸ ಪ್ರಾರಂಭ ಮಾಡಿದರೆ ಯಾವ ಮಟ್ಟದಲ್ಲಿ ಈ ಹೊತ್ತು ಬಜೆಟ್ ಮಾಡುತ್ತಿದ್ದೇವೆ ಅದನ್ನು ಬಹಳ ಹೆಚ್ಚಿನ ಪ್ರಮಾಣದಲ್ಲಿ ಸುಧಾರಣೆ ಮಾಡುವುದಕ್ಕೆ ಸಾಧ್ಯ. ನಮ್ಮ ದೇಶದ ರಾಜ್ಯಗಳಲ್ಲಿ ಮದ್ರಾಸ್‌ನಲ್ಲಿ ಈ ಪ್ರಯತ್ನ ನಡೆದಿದೆ ಮತ್ತು ಮೈಸೂರಿನಲ್ಲಿ ನಡೆದಿದೆ. ನಾವು ಮೊಟ್ಟಮೊದಲು ಈ ಪ್ರಯತ್ನ ಮಾಡುತ್ತಿದ್ದೇವೆ, ಪಯೋನೀರ್ಸ್ ಎಂಟರ್ ತಪ್ಪಾಗಲಿಕ್ಕಿಲ್ಲ.

ಇನ್‌ಷೂರೆನ್ಸ್ ಬಗ್ಗೆ ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ಈ ಹೊತ್ತು 1,80,000 ಪಾಲಿಸಿಗಳು ನಮ್ಮ ರಾಜ್ಯದಲ್ಲಿವೆ. 1,20,000 ಜನಗಳಿಗೆ ಅನುಕೂಲವಾಗುವ ರೀತಿಯಲ್ಲಿ ಇನ್‌ಷೂರೆನ್ಸ್ ಕೆಲಸ ನಡೆದಿದೆ. ಆದರೂ ಕೂಡ ನನ್ನನ್ನು ಕೇಳಿದರೆ ಇದು ತೃಪ್ತಿಕರವಾಗಿಲ್ಲ. ಇನ್ನೂ ಹೆಚ್ಚು ಪ್ರಮಾಣದಲ್ಲಿ ನಡೆಯಬೇಕು. ಪ್ರತಿಯೊಬ್ಬರೂ ಇನ್‌ಷೂರೆನ್ಸ್ ಪಾಲಿಸಿಗಳನ್ನು ತೆಗೆದುಕೊಂಡರೆ ಆವಾಗ ಹೆಚ್ಚಿನ ಪ್ರಮಾಣ ದಲ್ಲಿ ಕಾರ್ಯಕ್ರಮ ನಡೆದು ನಮ್ಮ ಎಂಪ್ಲಾಯೀಸ್‌ಗೆ ಹೆಚ್ಚಿನ ಅನುಕೂಲ ಮಾಡಿಕೊಟ್ಟ

ಹಾಗಾಗುತ್ತದೆ. ವಿದ್ಯಾಭ್ಯಾಸಕ್ಕೋಸ್ಕರ, ಬೇರೆ ಬೇರೆ ಅತ್ಯಾವಶ್ಯಕ ಕೆಲಸಗಳಿಗೋಸ್ಕರ ಸಾಲ ಕೊಡಲಿಕ್ಕೆ ಅಸ್ಪದವಿದೆ. ಆದುದರಿಂದ ಇನ್‌ಷೂರೆನ್ಸ್ ಮಾಡುವ ಕ್ರಮವೇನಿದೆ, ಇದು ಸುಧಾರಿಸ ಬೇಕು ಎಂದು ನನ್ನ ಅಭಿಪ್ರಾಯವಿದೆ. ಈ ಬಗ್ಗೆ ನಾನು ಕೆಲಸ ಮಾಡುತ್ತಿದ್ದೇನೆ.

ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಬಗ್ಗೆ ಸಾಕಷ್ಟು ಟೀಕೆ ಪ್ರತೀಸಲ ಕೇಳಬೇಕಾಗುತ್ತದೆ. ಈ ಟೀಕೆ ಅನ್ಯಾಯವಾದುದು ಎಂದು ನಾನು ಹೇಳುವುದಿಲ್ಲ, ಹೇಳಲಿಕ್ಕೆ ಸಾಧ್ಯವೇ ಇಲ್ಲ. ಕಮರ್ಷಿಯಲ್ ಟ್ಯಾಕ್ಸಸ್‌ನಲ್ಲಿ ಇನ್ನೂ ಆದಾಯ ಹೆಚ್ಚು ಮಾಡಲಿಕ್ಕೆ ಅವಕಾಶ ವಿಲ್ಲವೆಂದು ನಾನು ಹೇಳುವುದಿಲ್ಲ. ಅದರಲ್ಲಿ ಅಡಕವಾಗಿರತಕ್ಕ ಸಮಸ್ಯೆಗಳನ್ನು ಶ್ರೀ ಕಾಗೋಡು ತಿಮ್ಮಪ್ಪನವರು, ಶ್ರೀ ಟಿ. ಆರ್. ಶಾಮಣ್ಣನವರು ಚೆನ್ನಾಗಿ ಅರಿತಿದ್ದಾರೆ. ಈ ಸಮಸ್ಯೆಗಳನ್ನು ಬಿಡಿಸುವುದು ಬಹಳ ಕಷ್ಟ. ಅದರ ಬಗ್ಗೆ ನಾವು ಸಾಕಷ್ಟು ಯೋಜನೆ ಮಾಡಬೇಕಾಗುತ್ತದೆ. ಬಹಳ ಸ್ಪಷ್ಟವಾದ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ನನಗೆ ತಿಳಿದ ಮಟ್ಟಿಗೆ ಒಂದೆರಡು ವಿಚಾರಗಳನ್ನು ತಮ್ಮ ಮುಂದೆ ಇಡುತ್ತೇನೆ. ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಆಗದೇ ಇದ್ದರೂ ಕೂಡ ಸೇಲ್ಸ್‌ಟ್ಯಾಕ್ಸ್ ಅಡ್ವೈಸರಿ ಕಮಿಟಿಯನ್ನು ಮುಂದಿನ ತಿಂಗಳ ಕೊನೆಯಲ್ಲಿ ಕರೆಯುವವನಿದ್ದೇನೆ. ಆ ಸಭೆಯಲ್ಲಿ ತಿಳುವಳಿಕೆ ಇರತಕ್ಕ ಸಾಕಷ್ಟು ಸದಸ್ಯರು ಮತ್ತು ಅನುಭವವಿರತಕ್ಕ ಜನರು ಇರುವುದರಿಂದ ಇದರ ಬಗ್ಗೆ ಪರಿಣಾಮಕಾರಿಯಾಗಿ ಚರ್ಚೆ ಮಾಡಲಿಕ್ಕೆ ಅವಕಾಶವಿರುತ್ತದೆ. ಇಷ್ಟೊಂದು ತೊಂದರೆಗಳಿದ್ದರೂ ಕೂಡ ಸಂಪೂರ್ಣವಾಗಿ, ತೃಪ್ತಿಕರ ವಾಗಿಲ್ಲ ಎಂದು ಒಪ್ಪಿಕೊಂಡರೂ ಕೂಡ ಇದರಿಂದ ಬರತಕ್ಕ ಆದಾಯ ಸಾಕಷ್ಟು ಪ್ರಮಾಣದಲ್ಲಿ ಜಾಸ್ತಿಯಾಗುತ್ತ ಬಂದಿದೆ.

ಇದು ನಮ್ಮ ಸುದೈವದಿಂದ ಇರಬಹುದು ಇಲ್ಲವೇ ಇದಕ್ಕೆ ಬೇರೆ ಕಾರಣಗಳೂ ಇರಬಹುದು. ಇದರ ಅಂಕೆ ಸಂಖ್ಯೆಗಳನ್ನು ನೋಡಿದರೆ 1970–71 ರಲ್ಲಿ ಸೇಲ್ಸ್ ಟ್ಯಾಕ್ಸು ಬಾಬಿನಿಂದ ನಮ್ಮ ರಾಜ್ಯಕ್ಕೆ 48 ಕೋಟಿ ರೂಪಾಯಿಗಳಷ್ಟು ಆದಾಯವಿದೆ. ಈ ವರ್ಷ ಎಂದರೆ 72-73ನೇ ಸಾಲಿನಲ್ಲಿ 58 ಕೋಟಿ ರೂಪಾಯಿಗಳಷ್ಟು ಆಗಿದೆ. ಎಂದರೆ ಎರಡು ವರ್ಷಗಳಲ್ಲಿ ಸುಮಾರು ಹತ್ತು ಕೋಟಿಯಷ್ಟು ಜಾಸ್ತಿಯಾಗಿದೆ. ಇದನ್ನು ಇನ್ನೂ ಹತ್ತು ಕೋಟಿಯಷ್ಟು ಜಾಸ್ತಿ ಮಾಡಲು ಸಾಧ್ಯವಿಲ್ಲವೇ ಎಂದು ಹೇಳಬಹುದು. ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಸರಿಯಾಗಿ ಆದಾಯ ಬರುವಂತೆ ನೋಡಿಕೊಳ್ಳುವುದಕ್ಕೋಸ್ಕರವೇ ಈಗ ನಾವು ಕೆಲವು ಚೆಕಿಂಗು ಇನ್ಸ್‌ಪೆಕ್ಟರುಗಳನ್ನು, ಕ್ರಾಸ್ ವೆರಿಫಿಕೇಷನ್‌ಗಳನ್ನು ಟೆಸ್ಟ್ ಚೆಕ್‌ಗಳನ್ನು ಮಾಡಲು ಚೆಕ್‌ಪೋಸ್ಟು ಗಳನ್ನು ಹೆಚ್ಚು ಮಾಡಿದ್ದೇವೆ ಮತ್ತು ಒಂದು ವಿಜಿಲೆನ್ಸ್ ಸ್ಕ್ವಾಡ್‌ನ್ನು ಮಾಡಬೇಕೆಂದು ಮಾಡಿ ದ್ದೇವೆ, ಇವಿಷ್ಟು ಮುಖ್ಯ ಅಂಶಗಳ ಬಗ್ಗೆ ಈಗ ವ್ಯವಸ್ಥೆ ಮಾಡಲಾಗಿದೆ. ಆದರೆ ಇದರಲ್ಲಿ ಟರ್ನ್ ಓವರು ಕಮ್ಮಿಕೊಡುವ ಪದ್ಧತಿ ಇದೆ ಎಂದು ಕೇಳುತ್ತೇವೆ. ಇದನ್ನು ಯಾವ ರೀತಿ ತಡೆಗಟ್ಟ ಬಹುದು ಎನ್ನುವುದಕ್ಕೆ ಉಪಾಯವನ್ನು ಕಂಡುಹಿಡಿಯಬೇಕಾಗಿದೆ. ಇದರಲ್ಲಿ ಒಂದು ವಿಚಾರ ಇದೆ. ಇನ್‌ಕಂ ಟ್ಯಾಕ್ಸ್‌ನಲ್ಲಿ ಯಾವ ರೀತಿ ರಿಟರ್ನ್‌ಗಳನ್ನು ಫೈಲು ಮಾಡುತ್ತಾರೆ ಮತ್ತು ಅರಿಯರ್ಸ್‌ಗಳು ಯಾವ ರೀತಿ ಇವೆ ಇದನ್ನು ಪಬ್ಲಿಷ್ ಮಾಡುತ್ತಾರೆ. ಇದೇ ರೀತಿ ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಕೂಡ ಟರ್ನ್ ಓವರು ಇವುಗಳನ್ನು ಪಬ್ಲಿಷ್ ಮಾಡಲು ಸಾಧ್ಯವೇ ಎಂದು ನೋಡಲು ಇದರ ಬಗ್ಗೆ ಸರಕಾರಕ್ಕೆ ಸಾಕಷ್ಟು ಇನ್‌ಫರ್‌ಮೇಷನ್‌ಗಳು ಬೇಕಾಗಿವೆ. ಈ ಮುಂದಿನ ತಿಂಗಳ ಕೊನೆಯೊಳಗೆ ಸೇಲ್ಸ್ ಟ್ಯಾಕ್ಸ್ ಅಡ್ವೈಸರಿ ಕಮಿಟಿಯನ್ನು ಕರೆಯುವುದ ರಲ್ಲಿದ್ದೇನೆ. ಇದರ ಬಗ್ಗೆ ಆಗ ಸರಿಯಾದ ಸಲಹೆಗಳು ನಮಗೆ ಬಂದರೆ ಇದನ್ನು ಯೋಚನೆ ಮಾಡುತ್ತೇವೆ. ಸ್ಪಷ್ಟವಾದ ಹಾಗೂ ನಿರ್ದಿಷ್ಟವಾದ ಸಲಹೆಗಳು ನಮಗೆ ಆಗ ಬರಬಹುದು. ಆದರಿಂದ ಯಾವ ರೀತಿ ಅದರಲ್ಲಿ ಆದಾಯವನ್ನು ಹೆಚ್ಚು ಮಾಡಲು ಸಾಧ್ಯ ಎನ್ನುವುದನ್ನು ತಿಳಿದ ಹೊರತು ಇದರ ಬಗ್ಗೆ ನಾವು ಇಲ್ಲಿ ಹೇಳಿಕೆ ಕೊಡಲು ಈಗ ಸಾಧ್ಯವಿಲ್ಲ. ಕೆಲವರು ಹೇಳಬಹುದು ಇನ್ನು ಹೆಚ್ಚು ಆದಾಯ ಬರಬಹುದು ಎಂದು, ಇನ್ನು ಕೆಲವರು ಉತ್ಪ್ರೇಕ್ಷೆಯಿಂದ

ಇದರಲ್ಲಿ ಇನ್ನೂ 50 ಕೋಟಿ ಹೆಚ್ಚು ಆದಾಯ ಬರಲು ಸಾಧ್ಯ ಎಂದು. ಆದರೆ ಇದಕ್ಕೆ ತಕ್ಕ ಅಂಕೆ ಸಂಖ್ಯೆಗಳು ಇದರಲ್ಲಿಲ್ಲ. ಸಾಕಷ್ಟು ಇದಕ್ಕಾಗಿ ಪ್ರಯತ್ನ ಮಾಡಿ ಹೆಚ್ಚಿಗೆ ಆದಾಯ ಪಡೆಯಲು ಪ್ರಯತ್ನ ಮಾಡುತ್ತೇವೆ. ಇದನ್ನು ಯಾವ ರೀತಿ ಮಾಡಬೇಕು ಎನ್ನುವುದನ್ನು ಈಗಲೇ ಹೇಳಲು ಸಾಧ್ಯವಿಲ್ಲ. ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ. ಇನ್ನು ಅರಿಯರ್ಸ್ ಬಗ್ಗೆ ಇಲ್ಲಿ ಕಳಕಳಿಯಿಂದ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ವಾಸ್ತವಿಕ ಸ್ಥಿತಿ ಏನಿದೆ ಎನ್ನುವುದನ್ನು ತಮ್ಮ ಮುಂದೆ ಇಡಬೇಕಾಗಿದೆ. ಸೇಲ್ಸ್ ಟ್ಯಾಕ್ಸ್ ಅರಿಯರ್ಸ್ ಹೆಚ್ಚು ಕಡಿಮೆ ಸುಮಾರು ಏಳು ಕೋಟಿ ರೂಪಾಯಿಗಳವರೆಗೆ ಇರಬಹುದು. ಇದರಲ್ಲಿ ನಮ್ಮ ರಾಜ್ಯದ ಸೇಲ್ಸ್ ಟ್ಯಾಕ್ಸ್ 4.95 ಲಕ್ಷ. ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಬಾಬಿನಿಂದ 2.42 ಲಕ್ಷ ರೂಪಾಯಿ ಬರಬೇಕಾಗಿದೆ. ಇದರ ಅನಾಲಿಸಿಸ್ ಮಾಡಿಕೊಡಲಾಗಿದೆ. ಇದರಲ್ಲಿ ನಿಷ್ಕಾರಣವಾಗಿ ಬರತಕ್ಕ ಅರಿಯರ್ಸ್ ಬಹು ಕಡಿಮೆ. ನಮ್ಮ ಮೈಸೂರು ರಾಜ್ಯದಲ್ಲಿರುವ 4.95 ಲಕ್ಷದಷ್ಟು ಅರಿಯರ್ಸ್‌ನಲ್ಲಿ ಸುಮಾರು 1.27 ಲಕ್ಷ ಅರಿಯರ್ಸ್ ಬಗ್ಗೆ ಷೋಕಾಸು ನೋಟೀಸುಗಳನ್ನು ಕೊಡಲಾಗಿದೆ. ಇದರಲ್ಲಿ ರೂಲು 13 ಎ ಪ್ರಕಾರ 1.43 ಲಕ್ಷ ಬಾಕಿ ಇರುವುದರಲ್ಲಿ 88 ಲಕ್ಷ ರೂಪಾಯಿಗಳ ಕೇಸುಗಳಿಗೆ ಸ್ಟೇ ಆರ್ಡರುಗಳನ್ನು ಇಷ್ಯೂ ಮಾಡಲಾಗಿವೆ. ಹೀಗೆ ಹಲವಾರು ಕಾರಣಗಳಿಂದ ಇದರಲ್ಲಿ ಲಿಟಿಗೇಷನ್ ಕೇಸುಗಳು ಜಾಸ್ತಿಯಾಗಿವೆ. ಹೀಗಿರುವುದರಿಂದ ಇಲ್ಲಿ ಅರಿಯರ್ಸ್‌ಗಳು ಬಂದಿವೆ. ಇದರ ಟೋಟಲ್ ಡಿಮ್ಯಾಂಡು ಪ್ರಕಾರ ಪರ್ಸೆಂಟೇಜು ನೋಡಿದರೆ ಇದು ಶೇಕಡ ಹತ್ತು ಅಥವಾ ಹನ್ನೊಂದರವರೆಗೆ ಬರುತ್ತದೆ. ಇದೇ ಪರಿಸ್ಥಿತಿ ಎಲ್ಲ ಇತರ ದೇಶಗಳಲ್ಲೂ ಇದೆ. ನಮ್ಮ ದೇಶದಲ್ಲೂ ಇದೆ. ಇದು ಜಾಸ್ತಿ. ಇದನ್ನು ಸಂಪೂರ್ಣವಾಗಿ ತೆಗೆಯಲು ಸಾಧ್ಯವಿಲ್ಲ. ಅರಿಯರ್ಸ್ ಪ್ರಮಾಣವನ್ನು ಕಡಿಮೆ ಮಾಡಬೇಕೆನ್ನುವುದನ್ನು ನಾನೂ ಒಪ್ಪುತ್ತೇನೆ. ಇದಕ್ಕಾಗಿಯೇ ಈಚೆಗೆ ಕಮರ್ಷಿಯಲ್ ಟ್ಯಾಕ್ಸ್ ಇಲಾಖೆಯಲ್ಲಿ 14 ಕಮರ್ಷಿಯಲ್ ಟ್ಯಾಕ್ಸ್ ಇನ್ಸ್‌ಪೆಕ್ಟರುಗಳ ಪೋಸ್ಟುಗಳನ್ನು ಜಾಸ್ತಿ ಮಾಡಲಾಗಿದೆ, ಮುಂದೆ ಬರುವ ಎರಡು ಮೂರು ವರ್ಷಗಳಲ್ಲಿ ಅರಿಯರ್ಸ್‌ಗಳ ಪ್ರಮಾಣ ಆದಷ್ಟು ಕಡಿಮೆ ಮಾಡಲಿಕ್ಕೆ ಸಾಧ್ಯವಾಗಬಹುದು. ಇನ್ನು ವರ್ಕ್ ಲೋಡುಗಳ ಬಗ್ಗೆ ಹೇಳಬೇಕಾದರೆ ಮೊದಲು ಎ. ಸಿ. ಟಿ. ಬಸ್‌ಗಳಲ್ಲಿ ಇದ್ದ ಕೇಸುಗಳು 900, ಈಗ ಇದು 540 ಕೇಸುಗಳಿಗೆ ಇಳಿದಿವೆ. ವರ್ಕ್ ಲೋಡು ಬಹಳ ಹೆಚ್ಚು ಮತ್ತು ಇದರಲ್ಲಿ 58 ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತದೆ ಎಂದು ಇದರಲ್ಲಿ ಶೇಕಡ ಎರಡರಷ್ಟು ಸಿಬ್ಬಂದಿಗಾಗಿ ಖರ್ಚು ಮಾಡುವುದೇನೂ ಜಾಸ್ತಿ ಏನಲ್ಲ. ಇದನ್ನು ಹೇಳಲು ನಾನು ಮೊದಲೇ ಹೇಳಿದಂತೆ 900 ಕೇಸುಗಳಿದ್ದುದನ್ನು 540 ಕೇಸುಗಳಿಗೆ ಇಳಿಸಿದ್ದೇನೆ. ಸಿ. ಟಿ. ಒ. ಗಳಲ್ಲಿ ಮೊದಲು 560 ಕೇಸುಗಳಿತ್ತು. ಇದನ್ನು 360 ಕೇಸುಗಳಿಗೆ ಇಳಿಸಲಾಗಿದೆ. ಅಸಿಸ್ಟೆಂಟು ಕಮಿಷನರುಗಳ ಬಳಿ 240 ಕೇಸುಗಳಿಗೆ ಇಳಿಸಲಾಗಿದೆ. ಇದನ್ನು ನಾವು ವಿಚಾರ ಮಾಡಿ ನೋಡಿದರೆ ವರ್ಕ್ ಲೋಡು ಕೆಲಸಗಳನ್ನು ಕಡಿಮೆ ಮಾಡಿರುವುದರಿಂದ ಇಲ್ಲಿ ಕೆಲಸಗಳು ತೃಪ್ತಿಕರವಾಗಿ ಹಾಗೂ, ಪರಿಣಾಮಕಾರಿಯಾಗಿ ಮಾಡಲು ಅವಕಾಶ ಮಾಡಿಕೊಡುತ್ತದೆ ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ.

ಇನ್ನು ಸೇಲ್ಸ್ ಟ್ಯಾಕ್ಸ್, 1972-73 ರಲ್ಲಿ 108 ಲಕ್ಷ ರೂಪಾಯಿ ಸಿಬ್ಬಂದಿ ಎಕ್ಸ್‌ಪೆಂಡಿಚರಿಗಾಗಿ ಸ್ವಲ್ಪ ಜಾಸ್ತಿ ಖರ್ಚು ಮಾಡಬೇಕೆಂದು ಸಿಬ್ಬಂದಿ ಜಾಸ್ತಿ ಮಾಡಿ ಅವರ ವರ್ಕ್ಸ್ ಲೋಡನ್ನು ಸ್ವಲ್ಪ ಕಡಿಮೆ ಮಾಡಲಾಗಿದೆ. ಈ ರೀತಿ ಇದನ್ನು ಸುಧಾರಿಸಲು ಸಾಧ್ಯ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಅಗ್ರಿಕಲಚರ್ ಇನ್‌ಕಂ ಟ್ಯಾಕ್ಸ್ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಇದರ ಬಗ್ಗೆ ಅವಸರದಲ್ಲಿ ನಾವು ಲೆಕ್ಕ ಹಾಕುವುದಕ್ಕಾಗುವುದಿಲ್ಲ. ಕೇಂದ್ರ ಸರಕಾರ ಅಗ್ರಿಕಲಚರ್ ಇನ್‌ಕಂ ಟ್ಯಾಕ್ಸ್ ಹಾಕಬೇಕೆಂದು ಕಾನೂನು ಮಾಡಿರುವುದರಿಂದ ಇದರಲ್ಲಿ ನಾವು ಬೇರೆ ಅಗ್ರಿಕಲ್‌ಚರ್ ಇನ್‌ಕಂ ಟ್ಯಾಕ್ಸ್ ಎಂದು ಹಾಕಲು ಬರುವುದಿಲ್ಲ. ಕೇಂದ್ರದವರು ಮಾಡಿರುವುದರಿಂದ ನಮ್ಮ

ರಾಜ್ಯಕ್ಕೂ ಇದರಿಂದ ಸಾಕಷ್ಟು ಅನುಕೂಲಗಳು ಸಿಗುತ್ತವೆ. ಎಲ್ಲವನ್ನು ಅವರೇ ಇಟ್ಟುಕೊಳ್ಳುವ ಹಾಗಿಲ್ಲ. ಎಲ್ಲ ರಾಜ್ಯಗಳಿಗೂ ಅವರು ಹಂಚಿಕೆ ಮಾಡಬೇಕಾಗುತ್ತದೆ. ಇದರ ಬಗ್ಗೆ ರಾಜ್ ಕಮಿಟಿ ರಿಪೋರ್ಟು ಬಂದಿದೆ. ಇದರಲ್ಲಿ ಅಗ್ರಿಕಲ್‌ಚರ್ ಇನ್‌ಕಂಗೆ ಯಾವ ರೀತಿ ಆರ್ಥಿಕ ಪ್ರಗತಿಗೆ ಧಕ್ಕೆ ಇಲ್ಲದಂತೆ ಮಾಡಬೇಕು ಎನ್ನುವ ದೃಷ್ಟಿಯಿಂದ ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ವರದಿಯನ್ನು ಸರಕಾರ ಪರಿಶೀಲನೆ ಮಾಡುತ್ತಿದೆ. ಇದರ ಬಗ್ಗೆ ಸರಕಾರ ಇನ್ನೂ ಯಾವ ಒಂದು ನಿರ್ದಿಷ್ಟವಾದ ತೀರ್ಮಾನವನ್ನೂ ಇನ್ನೂ ಕೈಗೊಂಡಿಲ್ಲ. ಆದರೆ ಇದನ್ನು ಕೈಬಿಡುತ್ತೇವೆಂದು ಅಲ್ಲ. ಇದರ ಬಗ್ಗೆ ಯೋಚನೆ ಮಾಡಬೇಕು. ಬೇರೆ ಭಾಗಗಳಲ್ಲಿ ಯಾವ ರೀತಿ ಮಾಡುತ್ತದೆ ಎನ್ನುವುದನ್ನು ನಾವು ವಿಚಾರ ಮಾಡಿ ಇದರ ಬಗ್ಗೆ ಸೂಕ್ತವಾದ ಒಂದು ಧೋರಣೆ ಕೈಗೊಳ್ಳಬೇಕಾಗುತ್ತದೆ ಎಂದು ಇಷ್ಟು ಮಾತ್ರ ಹೇಳುತ್ತೇನೆ. ನಾನೂ ಕೂಡ ರೈತಾಪಿ-ಭಾಗದಿಂದ ಬಂದವನು. ರೈತರ ಮೇಲೆ ಟ್ಯಾಕ್ಸನ್ನು ಹಾಕಲೇ ಬಾರದು ಎಂದು ನಾನು ಹೇಳುತ್ತಿಲ್ಲ.

ಬರೀ ಒಂದು ಅಭಿಪ್ರಾಯದ ಮನೋಭಾವದಿಂದ ರೈತರ ಮೇಲೆ ತೆರಿಗೆ ಹಾಕುವುದಕ್ಕೆ ಹೋದರೆ ಆಗ ರೈತರಿಂದ ಬರುವ ಒಂದು ಆದಾಯ ಏನಿದೆ ಅದಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕಾಗುತ್ತದೆ. ಈಗ ರಾಜ್ಯಕ್ಕೆ ಬರುವ ವರಮಾನದಲ್ಲಿ ಅರ್ಧಕ್ಕೆ ಅರ್ಧದಷ್ಟು ಆದಾಯ ವ್ಯವಸಾಯ ಕ್ಷೇತ್ರದಿಂದಲೇ ಬರುತ್ತಿದೆ. ಈ ದೃಷ್ಟಿಯಿಂದ ನಾವೇನಾದರೂ ಮತ್ತೆ ಟ್ಯಾಕ್ಸನ್ನು ಹೆಚ್ಚು ಮಾಡುವ ಉತ್ಸಾಹದಲ್ಲಿ ಸ್ವಲ್ಪ ತಪ್ಪು ಮಾಡಿದರೂ ಸಹ ಬಹಳ ಮುಖ್ಯವಾದ ಈ ಸೆಕ್ಟಾರ್ ಮೇಲೆ ಪೆಟ್ಟು ಬೀಳಬಹುದು. ಆದರೂ ಎಷ್ಟರಮಟ್ಟಿಗೆ ಜಾಸ್ತಿ ಮಾಡುವುದಕ್ಕೆ ಸಾಧ್ಯ ಎಂಬುದನ್ನು ನೋಡಿಕೊಂಡು ಮಾಡುವ ಧೋರಣೆ ಇದೆ. ಸಮಾಜವಾದಿ ಸಮಾಜದಲ್ಲಿ ಹಸಿರು ಕ್ರಾಂತಿಯಿಂದ ಯಾರಿಗೆ ಎಷ್ಟು ಅನುಕೂಲವಾಗುತ್ತದೋ, ಅದಕ್ಕೆ ತಕ್ಕ ಹಾಗೆ ಸಮಾಜಕ್ಕೋಸ್ಕರ ಟ್ಯಾಕ್ಸ್ ಕೊಡಬೇಕಾಗುತ್ತದೆ. ಇದರ ಬಗ್ಗೆ ವಿವಾದವಿಲ್ಲ. ಈ ಒಂದು ಧೋರಣೆಯನ್ನು ಇಟ್ಟುಕೊಂಡೇ ಹೋದ ವರ್ಷ ನೀರಿನ ತೆರಿಗೆಯನ್ನು ಜಾಸ್ತಿ ಮಾಡಲಾಯಿತು. ಅದನ್ನು ಕಲೆಕ್ಟ್ ಮಾಡುವುದರಲ್ಲಿ ನಿಧಾನವಾಗಿದ್ದರೆ ಅದು ಬೇರೆ ವಿಷಯ. ಜಾಸ್ತಿ ಮಾಡಬೇಕೆಂಬ ಧೈರ್ಯದಿಂದಲೇ ಹೋದ ವರ್ಷ ನಾವು ಈ ತೆರಿಗೆಯನ್ನು ಜಾಸ್ತಿ ಮಾಡಿದೆವು. ನಾವು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದರೆ, ಮಹಾರಾಷ್ಟ್ರದಲ್ಲಿ ಷುಗರ್‌ಕೇನ್ ಮೇಲೆ ಹಾಕಿರುವ ಟ್ಯಾಕ್ಸ್ ಒಂದನ್ನು ಬಿಟ್ಟರೆ, ಬೇರೆ ಐಟಂಗಳ ಮೇಲಿನ ತೆರಿಗೆ ಬೇರೆ ರಾಜ್ಯಗಳಿಗಿಂತ ಬಹಳ ಕಡಿಮೆ ಏನೂ ಇಲ್ಲ. ಈಗ ನಾವು ಏನಾದರೂ ರಾಜ್ ಕಮಿಟಿಯ ರಿಪೋರ್ಟ್ ಪ್ರಕಾರ ಟ್ಯಾಕ್ಸ್ ಹಾಕಿದರೂ ಸಹ ಅದರಿಂದ ದೊಡ್ಡ ಆದಾಯ ಬರುತ್ತದೆಂದು ತಿಳಿದುಕೊಳ್ಳುವುದಕ್ಕೆ ಆಸ್ಪದವಿಲ್ಲ. ಅಂತಹ ಸ್ಕೋಪ್ ಏನೂ ಇಲ್ಲ. ಆದರೂ ಸಹ ಎಲ್ಲಿ ಸೂಕ್ತವಾಗಿ ಕಾಣುತ್ತದೋ, ಎಷ್ಟರಮಟ್ಟಿಗೆ ಜಾಸ್ತಿ ಮಾಡುವುದಕ್ಕೆ ಸಾಧ್ಯವೋ ಅಷ್ಟರಮಟ್ಟಿಗಾದರೂ ಸಹ ಜಾಸ್ತಿ ಮಾಡುವುದಕ್ಕೆ ನಾವು ಹೆದರುವುದಿಲ್ಲ. ಆದರೆ ಆ ರೀತಿ ಮಾಡುವುದರಿಂದ ಆಗುವ ಪರಿಣಾಮ ಏನು ಎಂದು ತಿಳಿದುಕೊಳ್ಳದೆ ಹೆಚ್ಚು ಟ್ಯಾಕ್ಸ್ ಹಾಕುವುದಕ್ಕೆ ಹೋಗುವುದಿಲ್ಲ. ಮುಖ್ಯವಾಗಿ ದೇಶದ ಹಿತದೃಷ್ಟಿಯಿಂದ, ರೈತರ ಹಿತದೃಷ್ಟಿಯಿಂದ ಏನು ಮಾಡಬಹುದೋ ಅದನ್ನು ಖಂಡಿತವಾಗಿ ಮಾಡುತ್ತೇವೆ; ಅದನ್ನು ಮಾಡಿದಾಗ ವಿರೋಧಪಕ್ಷದ ಸದಸ್ಯರು ಬೆಂಬಲ ಕೊಡುತ್ತಾರೆಂದು ನಾನು ನಂಬಬೇಕಾಗಿದೆ.

ಮಾನ್ಯ ಶಾಮಣ್ಣನವರು ಕಟ್ ಮೋಷನ್ಸ್ ಕೊಟ್ಟಿದ್ದಾರೆ ಅದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಸೀನಿಯಾರಿಟಿ ಲಿಸ್ಟ್ ಬಗ್ಗೆ ಪ್ರಸ್ತಾಪ ಮಾಡಿದರು. ಆ ಪ್ರಶ್ನೆ ಈ ರೀತಿ ಇದೆ: ನಾನ್-ಗೆಜೆಟೆಡ್ ನೌಕರರ ಸೀನಿಯಾರಿಟಿಗೆ ಲಿಸ್ಟನ್ನು 1972ರಲ್ಲಿ ತಯಾರು ಮಾಡಿರುವುದರಿಂದ ಅದರ ಬಗ್ಗೆ ತೊಂದರೆ ಇಲ್ಲ. ಕ್ಲಾಸ್ 2 ಗೆಜೆಟೆಡ್ ಆಫೀಸರ್ಸ್, ಇವರ ಸೀನಿಯಾರಿಟಿ ಲಿಸ್ಟ್ ತಾ॥ 1-12-1968ರಲ್ಲಿ ಅಪ್ರೂವ್ ಆಯಿತು. ಇನ್ನೂ ಒಂದು

ಹೊಸ ಲಿಸ್ಟ್ ತಯಾರಾಗುತ್ತಿದೆ. ಆಮೇಲೆ ಕ್ಲಾಸ್-1 ಆಫಿಸರ್ಸ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನು ತಯಾರು ಮಾಡುವುದರಲ್ಲಿ ತಡವಾಯಿತೆಂಬುದು ಎಲ್ಲರಿಗೂ ಗೊತ್ತಿದೆ. ಈ ಲಿಸ್ಟನ್ನು ಕೇಂದ್ರಸರ್ಕಾರದವರು ಫೈನಲೈಜ್ ಮಾಡಬೇಕಾಗುತ್ತದೆ. ಅದನ್ನು ಕೂಡ ಅವರು ಮಾಡುತ್ತಿದ್ದಾರೆ. ಈ ಮಧ್ಯೆ ಇಬ್ಬರು ಗೆಜೆಟೆಡ್ ಅಧಿಕಾರಿಗಳು ಅವರ ರ್‍ಯಾಂಕ್ ಬಗ್ಗೆ ಕೋರ್ಟಿಗೆ ಹೋದರು. ಕೋರ್ಟಿನವರು ಅದನ್ನು ಎಕ್ಸಾಮಿನ್ ಮಾಡಬೇಕೆಂದು ತಿಳಿಸಿದ್ದಾರೆ. ಮುಖ್ಯವಾಗಿ ಕ್ಲಾಸ್-1ಗೆ ಸಂಬಂಧಪಟ್ಟಂತೆ ಫೈನಲ್ ಲಿಸ್ಟನ್ನು ಮಾಡುವುದು ತಡವಾಯಿತು. ಅದನ್ನು ಸಹ ಇಷ್ಟರಲ್ಲಿಯೇ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಇಷ್ಟು ಮಾತ್ರ ಹೇಳುವುದಕ್ಕೆ ಸಾಧ್ಯ ; ಇದನ್ನು ಮಾನ್ಯ ಶಾಮಣ್ಣನವರು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಎಸೆನ್ಶಿಯಲ್ ಕಮೊಡಿಟೀಸ್ ಮೇಲೆ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಆದಷ್ಟು ಎಲ್ಲ ಎಸೆನ್ಶಿಯಲ್ ಕಮಾಡಿಟೀಸ್ ಮೇಲೂ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಬೇಕೆಂಬುದೇ ಸರ್ಕಾರದ ಧೋರಣೆಯಾಗಿದೆ. ಆದರೆ ಒಂದೇ ಸಲ ಮಲ್ಟಿಪಾಯಿಂಟ್‌ನಿಂದ ಸಿಂಗಲ್ ಪಾಯಿಂಟ್‌ಗೆ ಬದಲಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಅದನ್ನು ಕ್ರಮೇಣ ಮಾಡಬೇಕಾಗುತ್ತದೆ. ಈ ವರ್ಷದ ಬಡ್ಜೆಟ್‌ನಲ್ಲಿ ಎಷ್ಟು ಐಟಂಗಳ ಮೇಲೆ ಸಿಂಗಲ್ ಪಾಯಿಂಟ್ ಹಾಕುವುದಕ್ಕೆ ಸಾಧ್ಯವೋ ಅಷ್ಟನ್ನೂ ಮಾಡಿದ್ದೇವೆ. ಇನ್ನೂ ಯಾವ ಯಾವ ವಸ್ತುಗಳ ಮೇಲೆ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕುವುದಕ್ಕೆ ಸಾಧ್ಯ ಎಂಬ ಬಗ್ಗೆ ಸೇಲ್ಸ್ ಟ್ಯಾಕ್ಸ್ ಆಡ್ವೈಸರಿ ಕಮಿಟಿ ಸದಸ್ಯರ ಮುಂದೆ ಹೇಳಿದರೆ ಮತ್ತು ರಚನಾತ್ಮಕವಾದ ಸಲಹೆಗಳು ಆ ಬಗ್ಗೆ ಬಂದರೆ ಅದನ್ನು ಕಮಿಟಿಯ ಸದಸ್ಯರು ಸಂತೋಷದಿಂದ ಸ್ವೀಕಾರ ಮಾಡುತ್ತಾರೆ, ಮತ್ತು ಅದನ್ನು ಒಪ್ಪಿಕೊಳ್ಳುವುದರಲ್ಲಿಯೂ ಸಹ ಯಾವ ತೊಂದರೆಯೂ ಇರುವುದಿಲ್ಲ. ಆದರೆ ನೋಡಿ ಮಾಡಬೇಕಾಗುತ್ತದೆ ; ಸಿಂಗಲ್ ಪಾಯಿಂಟ್ ಟ್ಯಾಕ್ಸನ್ನು ಎಲ್ಲ ವಸ್ತುಗಳ ಮೇಲೂ ಹಾಕುವ ಒಂದು ಪ್ರಯತ್ನವನ್ನು ಸರ್ಕಾರ ಸಂಪೂರ್ಣವಾಗಿ ಮಾಡುತ್ತದೆ ; ಆದರೆ ಒಂದೇ ಸಲ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಯಾರಿಗೂ ಅನುಮಾನ ಇರಬೇಕಾಗಿಲ್ಲ. Simplification of system of collection of sales tax ಇದರ ಬಗ್ಗೆ ಸಹ ಮಾನ್ಯ ಸದಸ್ಯರು ಹೇಳಿದ್ದಾರೆ. ಸಿಂಪ್ಲಿಫೈ ಮಾಡುವ ಉದ್ದೇಶದಿಂದಲೇ ಎಕ್ಸೆಂಪ್‌ಷನ್ ಲಿಮಿಟನ್ನು 15 ಸಾವಿರದಿಂದ 25 ಸಾವಿರಕ್ಕೆ ಏರಿಸಿದ್ದೇವೆ. ಇದರಿಂದ ಕಾಲುಭಾಗ ಸೇಲ್ಸ್‌ಟ್ಯಾಕ್ಸ್ ಬರುವುದು ಕಡಿಮೆಯಾಗಿದೆ ಎಂದು ಹೇಳಬಹುದು. ಇದರ ಜೊತೆಗೆ ಸೆಲ್ಫ್ ಅಸೆಸ್‌ಮೆಂಟ್ ಮಾಡಬೇಕು ಎಂಬುದು ಮುಖ್ಯವಾದ ಧೋರಣೆ ಇದೆ. ಬೆಸ್ಟ್ ಆಫ್ ಜಡ್ಜ್‌ಮೆಂಟ್ ಪ್ರಕಾರ ಅಧಿಕಾರಿಗಳು ಈ ಕೆಲಸ ಮಾಡುತ್ತಿದ್ದಾಗ, ಅವರಿಂದ ಹಿಂಸೆಯಾಗುತ್ತಿದೆ ಎಂದು ಹೇಳಿದಾಗ, ಅದನ್ನು ತಪ್ಪಿಸುವ ದೃಷ್ಟಿಯಿಂದ ಇದನ್ನು ಜಾರಿಗೆ ತಂದಿದ್ದೇವೆ. ಅಕೌಂಟ್ಸ್ ಪದ್ಧತಿಯನ್ನು ಸಾಕಷ್ಟು ಪ್ರಮಾಣದಲ್ಲಿ ಸಿಂಪ್ಲಿಫೈ ಮಾಡಿದ್ದೇವೆ. ಇದಕ್ಕೂ ಹೆಚ್ಚು ಸಿಂಪ್ಲಿಫೈ ಮಾಡುವುದಕ್ಕೆ ಸಾಧ್ಯ ಎಂದು ಅನುಭವವಿರುವ ವರ್ತಕರು ಬಂದು ಹೇಳುವುದಾದರೆ ಮತ್ತು ಯಾವ ರೀತಿಯಿಂದ ಮಾಡುವುದಕ್ಕೆ ಸಾಧ್ಯ ಎಂಬುದನ್ನು ನಿರ್ದಿಷ್ಟವಾಗಿ ಮತ್ತು ಸ್ಪಷ್ಟವಾಗಿ ಹೇಳುವುದಾದರೆ ಅದನ್ನು ಸೇಲ್ಸ್‌ಟ್ಯಾಕ್ಸ್ ಅಡ್ವೈಸರಿ ಕಮಿಟಿಯ ಮೆಂಬರ್ಸ್ ಒಪ್ಪುವುದಾದರೆ ಅದರಂತೆ ಮಾಡೋಣ. ಇದರ ಬಗ್ಗೆ ಇಲ್ಲಿ ಪದೇಪದೇ ಚರ್ಚೆ ಮಾಡಿದರೆ ಆಗುವುದಿಲ್ಲ, ಅವರು ಹೇಳತಕ್ಕಂಥ ಸ್ಟೇಟ್‌ಮೆಂಟ್ಸನ್ನು ನಾವು ವಿವರವಾಗಿ ವರ್ಕ್ ಔಟ್ ಮಾಡಿ ನೋಡಬೇಕಾಗುತ್ತದೆ. Simplification is a continuous process ಇದನ್ನು ಒಂದೇಸಲ ಮಾಡುವುದಕ್ಕಾಗುವುದಿಲ್ಲ. Continuous process of simplification, ಏನಿದೆ ಇದನ್ನು ಸರ್ಕಾರ ಖಂಡಿತವಾಗಿಯೂ ಮಾಡುತ್ತದೆ, ಇದರ ಬಗ್ಗೆ ಯಾರಿಗೂ ಅನುಮಾನ ಇರಬೇಕಾಗಿಲ್ಲ.

ಇನ್ನು ಓಲ್ಡ್ ಏಜ್ ಪೆನ್‌ಷನ್ ಕೊಡುವುದರಲ್ಲಿ, ತಡವಾಗುತ್ತಿದೆ ಎಂದು ಹೇಳಿದರು. ಇದರ ಬಗ್ಗೆ ಉತ್ತರ ಕೊಡುವುದಾದರೆ, ನಿರ್ಧಿಷ್ಟವಾದ ಕಾಲ ಮಿತಿಯನ್ನು ಹಾಕಿಕೊಂಡು ಅಂದರೆ 3 ತಿಂಗಳೊಳಗೆ ಡಿಸ್‌ಪೋಸ್ ಮಾಡಬೇಕೆಂದು ಹೇಳಿದೆ. ಯಾವುದೋ ಒಂದು ಕಾರಣದಿಂದ ತಡವಾದರೆ 6 ತಿಂಗಳಲ್ಲಿಯಾದರೂ ಅದನ್ನು ಡಿಸ್‌ಪೋಸ್ ಮಾಡಬೇಕು Three to six months in our view is the time limit to be fixed for disposing of the old age pension cases. ಮತ್ತು ಇದರ ಬಗ್ಗೆ ಅಧಿಕಾರ ವಿಕೇಂದ್ರೀಕರಣವಾಗಬೇಕು. ಜಿಲ್ಲಾಧಿಕಾರಿಗಳಿಗೆ ಇರುವ ಅಧಿಕಾರವನ್ನು ತಹಶೀಲ್ ದಾರರಿಗೆ ಕೊಡಬೇಕು ಎಂಬ ಮಾತು ಕೂಡ ಬಂತು. ನಾನಂ ಈ ಬಗ್ಗೆ ಹಲವಾರು ತಹಸೀಲ್ ದಾರರ ಹತ್ತಿರ ಮಾತನಾಡಿದಾಗ ಅವರು ಈ ಅಧಿಕಾರ ನಮಗೆ ಬೇಡ, ಆರೀತಿ ನಮಗೆ ಅಧಿಕಾರ ಕೊಟ್ಟರೆ ನಮ್ಮ ಮೇಲೆ ಒತ್ತಾಯ ಜಾಸ್ತಿಯಾಗುತ್ತದೆ. ನಾವು ಗ್ರಾಮದಲ್ಲಿರುವವರು, ಜನರಿಗೆ ಹತ್ತಿರದಲ್ಲಿ ಸಿಗುತ್ತೇವೆ, ಆಗ ಪ್ರೆಜರ ಜಾಸ್ತಿಯಾಗುತದೆ, ಆದ್ದರಿಂದ ಹಾಗೆ ಮಾಡಬೇಡಿ ಎಂದು ಹೇಳಿದರು. ಬೇಕಾದರೆ ಲಿಸ್ಟನ್ನು ತಹಶೀಲ್‌ದಾರರು ತಯಾರುಮಾಡಿ ಅಸಿಸ್ಟೆಂಟ್ ಕಮೀಷನರ್ ಮೂಲಕ ಜಿಲ್ಲಾಧಿಕಾರಿಯವರಿಗೆ ಕಳಿಸುವ ಬದಲು ನೇರವಾಗಿ ಡಿ. ಸಿ. ಅವರಿಗೆ ಕಳಿಸಿಕೊಟ್ಟರೆ ಆಗ ಪೆನ್‌ಷನ್ ಜಾಗ್ರತೆ ಸ್ಯಾಂಕ್ಷನ್ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಕಾಣುತ್ತದೆ. ಎರಡು ದೃಷ್ಟಿಗಳಿಂದ ಇದನ್ನು ನಿಧಾನ ಮಾಡುವುದನ್ನು ತಪ್ಪಿಸುವುದಕ್ಕೆ ಸಾಧ್ಯವಿದೆ ಅಂದರೆ We have to fix a time limit from three to six months and implify the procedure.

ಇನ್ನು ಕಮ್ಯುಟೇಷನ ಪೆನ್‌ಷನ್ ಬಗ್ಗೆ ಶ್ರೀಮಾನ್ ಶಾಮಣ್ಣನವರು ಹೇಳಿದ್ದಾರೆ. ಕಮ್ಯುಟ್ ಮಾಡಿದನಂತರ ಅವರು ಜಾಸ್ತಿ ವರ್ಷ ಬದುಕಿದ್ದರೆ ಪುನಃ ಅವರಿಗೆ ಫುಲ್ ಪೆನ್‌ಷನ್ ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿದ್ದಾರೆ. ಕಮ್ಯುಟ್ ಮಾಡಿ ಅಷ್ಟು ವರ್ಷ ಅವರು ಬದುಕದಿದ್ದರೆ ಕಮ್ಯುಟ್ ಮಾಡಿದ ಹಣವನ್ನು ಯಾರೂ ವಾಪಸ್ ಕೊಡುವುದಿಲ್ಲ. ಇನ್‌ಷೂರೆನ್ಸ್ ಪ್ರಿನ್ಸಿಪಲ್ ಪ್ರಕಾರ ಕಮ್ಯುಟೇಷನ್ ಪೆನ್‌ಷನ್ ಅನ್ನು ಫಿಕ್ಸ್ ಮಾಡಿರುತ್ತಾರೆ. ಆದ್ದರಿಂದ ಶ್ರೀಮಾನ್ ಶಾಮಣ್ಣನವರ ಸಲಹೆಯನ್ನು ಒಪ್ಪುವುದಕ್ಕಾಗುವುದಿಲ್ಲ. ಪೆನ್‌ಷನರ್ಸ್ ಬಗ್ಗೆ ನನಗೆ ಸಹಾನುಭೂತಿ ಇದೆ. ಈಗ ಜೀವನಾವಶ್ಯಕವಸ್ತುಗಳ ಬೆಲೆಗಳು ಜಾಸ್ತಿಯಾಗಿವೆ. ಆದ್ದರಿಂದ ಅವರಿಗೆ ತೊಂದರೆಯಾಗುತ್ತಿದೆ. ಅವರ ಆದಾಯ ಜಾಸ್ತಿಯಾಗುವುದಿಲ್ಲ. ಆದಕಾರಣ ಅವರ ರಿಯಲ್ ಇನ್‌ಕಂ ಬಹಳ ಕಡಿಮೆಯಾಗುತ್ತದೆ, ತೊಂದರೆಯಾಗುತ್ತದೆ, ಅದಕ್ಕೆ ಪರಿಹಾರ ಒದಗಿಸಬೇಕಾದರೆ ಬಹಳ ಯೋಚನೆ ಮಾಡಬೇಕಾಗುತ್ತದೆ. ಅವರಿಗೆ ಪೆನ್‌ಷನ್ ಜಾಸ್ತಿಮಾಡುವುದಕ್ಕಾಗುವುದಿಲ್ಲ. ಪೆನ್‌ಷನ್ ಸ್ವಲ್ಪ ಜಾಸ್ತಿ ಮಾಡಿದರೆ ರಾಜ್ಯದ ಹಣಕಾಸಿನ ಮೇಲೆ ದೊಡ್ಡ ಪರಿಣಾಮವುಂಟಾಗುತ್ತದೆ. ಐದು ರೂಪಾಯಿ ಡಿ. ಎ. ಜಾಸ್ತಿ ಮಾಡಿದರೆ ಏನಾಗುತ್ತದೆ ಎಂಬುದು ಗೊತ್ತಿದೆ. ಪೆನ್‌ಷನ್ ಜಾಸ್ತಿ ಮಾಡುವುದಕ್ಕೆ ಯಾವ ಕಾಲಕ್ಕೆ ಮಾಡುವುದಕ್ಕೆ ಸಾಧ್ಯವಿದೆ ಎಂಬುದು ಸರ್ಕಾರದ ವಿಚಾರ ಇದೆ. ಪೆನ್‌ಷನ್ ಜಾಸ್ತಿ ಮಾಡಿ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಪೆನ್‌ಷನರ್ಸ್, ತಾಲ್ಲೂಕು ಮಟ್ಟದಲ್ಲಿ ಒಂದು ಅಸೋಸಿಯೇಷನ್ ಮಾಡಿಕೊಂಡು ಯಾವುದಾದರೂ ಒಂದು ರೆಮ್ಯುನರೇಟೀವ್ ಕೆಲಸ ನಡೆಸುವುದಾದರೆ ಅವರಿಗೆ ಸರ್ಕಾರ ಸಾಕಷ್ಟು ಸಹಾಯವನ್ನು ಕೊಡುವುದಕ್ಕೆ ಸಿದ್ಧವಾಗಿದೆ. ಸೊಡೂರಿನಲ್ಲಿ ಕೆಲವು ಪೆನ್‌ಷನರ್ಸ್ ನನ್ನನ್ನು ಒಂದು ನೋಡಿದರು. ಅದಕ್ಕೆ ನಾನು ಅವರಿಗೆ—ನೀವು ಒಂದು ಪೆನ್‌ಷನರ್ಸ್ ಅಸೋಸಿಯೇಷನ್ ಮಾಡಿಕೊಂಡು ಸ್ಮಾಲ್‌ಸ್ಕೇಲ್ ಇಂಡಸ್ಟ್ರಿ ಮಾಡಿ ಆಕ್ಟಿವಿಟೀಸ್ ಪ್ರಾರಂಭ ಮಾಡಿದರೆ ಅದಕ್ಕೆ ಸರ್ಕಾರದವರು ಸಹಾಯ ಮಾಡುತ್ತಾರೆ ಎಂದು ಹೇಳಿದ್ದೇನೆ. ಪೆನ್‌ಷನರ್ಸ್ ಬರೀ ಪೆನ್‌ಷನ್ ನಿಂದ ಸ್ಟ್ಯಾಂಡರ್ಡ್ ಆಫ್ ಲೈಫ್ ಅನ್ನು ಮೇಂಟೇನ್ ಮಾಡುವುದಕ್ಕಾಗುವುದಿಲ್ಲ,

ಆದ್ದರಿಂದ ಒಂದು ರೆಮ್ಯುನರೆಟೀವ್ ಆಕ್ಟಿವಿಟೀಸ್ ಮಾಡಿ, ಕನ್‌ಸ್ಯೂಮರ್ಸ್ ಸೊಸೈಟಿ ಮಾಡಿ, ಅದರಿಂದ ತಿಂಗಳಿಗೆ ಒಬ್ಬರಿಗೆ 20–30 ರೂಪಾಯಿ ಉಳಿತಾಯವಾಗುತ್ತದೆ ಎಂದು ಹೇಳಿದ್ದೇನೆ. ಆದ್ದರಿಂದ ಪೆನ್‌ಷನರ್ಸ್ ಆಯಾ ಸ್ಥಳದಲ್ಲಿ ರೆಮ್ಯುನರೆಟೀವ್ ಆಕ್ಟಿವಿಟೀಸ್ ಮಾಡಿಕೊಂಡು ಸ್ಮಾಲ್‌ಸ್ಕೇಲ್ ಇಂಡಸ್ಟ್ರಿ ಪ್ರಾರಂಭ ಮಾಡಿದರೆ ಅದಕ್ಕೆ ಸರ್ಕಾರದವರು ಖಂಡಿತ ಸಹಾಯ ಮಾಡುತ್ತಾರೆ. I think this is a constructive line of thinking.

Sri T. R. SHAMANNA : It is a good suggestion.

Sri M. Y. GHORPADE : If they come forward, I would be too happy to help them. But they will never be satisfied with a little more pension.

Minimum pension in Mysore is higher than the minimum pension anywhere in the country, including the Government of India. ನಾವು ಮಿನಿಮಂ ಪೆನ್‌ಷನ್‌ಗೆ ಡಿ.ಎ. ಸೇರಿಸಿ 55 ರೂಪಾಯಿಗಳನ್ನು ಕೊಡುತ್ತಿದ್ದೇವೆ ಇಂಡಿಯಾ ಸರ್ಕಾರದಲ್ಲಿ 45–50 ರೂಪಾಯಿ ಎಂದರೆ ನಮಗಿಂತ 5–10 ರೂಪಾಯಿ ಕಡಿಮೆ ಕೊಡುತ್ತಿದ್ದಾರೆ. ಆದಕಾರಣ ಈ ಪರಿಸ್ಥಿತಿಯಲ್ಲಿ ಇದನ್ನು ಯೋಚನೆ ಮಾಡ ಬೇಕಾಗುತ್ತದೆ.

ಎಂಟರ್‌ಟೇನ್‌ಮೆಂಟ್ ಟ್ಯಾಕ್ಸ್ ಬಗ್ಗೆ ಸಾಕಷ್ಟು ಚರ್ಚೆ ಆಯಿತು. ಇದರಲ್ಲಿ ಜಾಸ್ತಿ ಲೀಕೇಜ್ ಆಗುತ್ತಿದೆ, ಎಂದು ಹೇಳಿದ್ದಾರೆ. ಥಿಯೇಟರುಗಳಲ್ಲಿ, ಈ ಟ್ಯಾಕ್ಸ್ ಲೀಕೇಜ್ ಆಗುತ್ತಿದೆ, ಮಫ್ಯುಜಲ್ ಏರಿಯಾದಲ್ಲಿ ಸ್ವಲ್ಪ ಲೀಕೇಜ್ ಇದೆ. ಅದನ್ನು ಸ್ವಲ್ಪಮಟ್ಟಿಗೆ ಒಪ್ಪಲೇಬೇಕು.

ಶ್ರೀ ಟಿ. ಆರ್. ಶಾಮಣ್ಣ :—ಟ್ಯಾಕ್ಸ್ ಹಾಕದೆ ಟಿಕೆಟ್ ಮಾರಾಟ ಮಾಡುತ್ತಾರೆ.

ಶ್ರೀ ಎಂ. ವೈ. ಘೋರ್ಪಡೆ :—ಅದನ್ನು ತಡೆಗಟ್ಟುವುದು ಹೇಗೆ? ಎಲ್ಲಿ ಈ ತರಹ ಭ್ರಷ್ಟಾಚಾರ ನಡೆಯುತ್ತಿದೆ ಅಲ್ಲಿಗೆ ಒಂದು ತಿಂಗಳಿಗೆ ಒಂದೆರಡು ಸಲ ಭೇಟಿ ಕೊಟ್ಟು ಇನ್‌ಸ್ಪೆಕ್ಷನ್ ಮಾಡಿ, ಚೆಕ್ ಮಾಡಿ, ಆ ರೀತಿ ಚೆಕ್ ಮಾಡಿದಾಗ ತಪ್ಪು ಸಿಕ್ಕಿದರೆ ಆಮೇಲೆ ಷೋಕಾಸ್ ನೋಟಿಸ್ ಕೊಟ್ಟು ಅವರಿಗೆ ಶಿಕ್ಷೆ ಮಾಡುವುದು ಬಹಳ ತಡವಾಗುತ್ತದೆ. ಅದು ಅಷ್ಟು ಎಫೆಕ್ಟೀವ್ ಆಗಿಲ್ಲ. ಕಾರನ್ನು ಸ್ಪೀಡ್ ಆಗಿ ನಡೆಸಿದರೆ, ಅದಕ್ಕೆ ಸಮರಿ ಮೆಥೆಡ್ ನಲ್ಲಿ ಫೈನ್ ಹಾಕುತ್ತಾರೆ. ಅದೇ ರೀತಿ ಇವರಿಗೆ ಏನಾದರೂ ಪನಿಷ್‌ಮೆಂಟ್ ಮಾಡುವುದಕ್ಕೆ ತಯಾರಾದರೆ ಸ್ವಲ್ಪ ಭಯ ಹುಟ್ಟಬಹುದು. ಇಲ್ಲದಿದ್ದರೆ, ಇವರಿಗೆ ಭಯ ಇರುವುದಿಲ್ಲ. 70–80 ಪರ್ಸೆಂಟ್ ಸೀಟುಗಳು ಫಿಲ್‌ಅಪ್ ಆಗುತ್ತವೆ. ಆ ಬೇಸಿಸ್ ಮೇಲೆ ಟ್ಯಾಕ್ಸ್ ಹಾಕಿದರೆ, ಇವರು ಕೋರ್ಟಿಗೆ ಹೋಗುತ್ತಾರೆ, ಮತ್ತು ಇದು ಇಲ್ಲೀಗಲ್ ಆಗಿದೆ ಅಷ್ಟು ಟಿಕೆಟ್ ಮಾರಾಟವಾಗಿಲ್ಲ ಎಂದು ಹೇಳುತ್ತಾರೆ. ಇದರಲ್ಲಿ ಸ್ವಲ್ಪ ಲೂಪ್ ಹೋಲ್ಸ್ ಇದೆ. ಆದ್ದರಿಂದ ಸ್ವಲ್ಪ ಲೀಕೇಜಸ್ ಆಗುತ್ತದೆ. ಆದರೆ ಎಷ್ಟು ಲೀಕೇಜಸ್ ಆಗುತ್ತದೆ ಎಂಬುದನ್ನು ಹೇಳವುದ ಕ್ಕಾಗುವುದಿಲ್ಲ. ಬೋಗಸ್ ಟಿಕೆಟ್ ಸೇಲ್ಸ್, ಸಂಪೂರ್ಣವಾಗಿ ದೊರೆಯುತ್ತಾ ಇಲ್ಲ. ಅದಕ್ಕೆ ಪರಿಹಾರ ಕಂಡುಹಿಡಿಯಬೇಕಾದರೆ. Summary method of detection and punishment ಮಾಡಬೇಕಾತ್ತದೆ. ಈ ವಿಷಯದಲ್ಲಿ ಯಾವ ರೀತಿ ಮಾಡಬೇಕೆಂಬ ಬಗ್ಗೆ ಮಾನ್ಯ ಸದಸ್ಯರ ಸಲಹೆಯನ್ನು ಕೊಟ್ಟರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

I accept that there may be some leakage in this, and in my feeling the effective solution would be some summary detection and punishemnt without offending the principles of law. Kindly think about these things and in the next meeting of the Sales Tax Advisory Committee if there are some constructive suggestions of pluging loopholes in this tax, I shall welcome them.

ಶ್ರೀಮಾನ್ ಎಂ. ಎಸ್. ಕೃಷ್ಣನ್ ಅವರು ಎಂ. ಜಿ. ಐ. ಡಿ. ಗೆ ಜನರಲ್ ಇನ್‌ಷ್ಯೂರೆನ್ಸ್ ಕಾರ್ಪೋರೇಷನ್ ನಿಂದ ಇಂಡಿಯಾ ಸರ್ಕಾರದವರು ಯಾರಯಾರನ್ನೋ ಹಾಕಬೇಕೆಂದು ಸೆಲೆಕ್ಟ್ ಮಾಡಿದ್ದಾರೆ. ಅದು ಒಂದು ಪ್ರೊಸೆಸ್ ನಡೆದಿದೆ. ಎಂ. ಜಿ. ಐ. ಡಿ. ನಲ್ಲಿ ಅಡಿಷನಲ್ ಇನ್‌ಷ್ಯೂರೆನ್ಸ್ ಮಾಡುವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದಕ್ಕೆ ಕೇಂದ್ರ ಸರ್ಕಾರ ಒಪ್ಪಿದೆ. ಫೈರ್‌ಇನ್‌ಷ್ಯೂರೆನ್ಸ್, ಮಿಸಲೇನಿಯಸ್ ಇನ್‌ಷ್ಯೂರೆನ್ಸ್ ಮತ್ತು ಮೆರೀನ್ ಇನ್‌ಷ್ಯೂರೆನ್ಸ್ ಮಾಡಬೇಕೆಂದಿದ್ದೇವೆ. ಇದರ ಬಗ್ಗೆ ಸಿಚ್ಯುಯೇಷನ್ ಯಾವರೀತಿ ಡೆವಲಪ್ ಆಗುತ್ತದೆ ಎಂಬುದನ್ನು ನೋಡೋಣ.

ಶ್ರೀ ಕಾಗೋಡು ತಿಮ್ಮಪ್ಪನವರು ರಿಪೋರ್ಟರ್ಸ್ ಬಗ್ಗೆ ಹೇಳಲಿಲ್ಲ, ಅದು ದುಡ್ಡಿನ ಪ್ರಶ್ನೆಯಲ್ಲ, ಅದನ್ನು ಸ್ವಲ್ಪ ನೋಡಬೇಕಾಗುತ್ತದೆ ಎಂದು ಹೇಳಿದರು. ಅವರ ಸಂಬಳಗಳನ್ನು ಜಾಸ್ತಿ ಮಾಡುವುದರಿಂದ ದುಡ್ಡಿನ ಪ್ರಶ್ನೆ ಬರುತ್ತದೆ, ಇದರಿಂದ ಬೇರೆಯುವರ ಸ್ಯಾಲರಿ ಸ್ಟ್ರಕ್ಚರ್ ಮೇಲೆ ಏನು ಪರಿಣಾಮ ಉಂಟಾಗುತ್ತದೆ ಎಂಬುದನ್ನು ನೋಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :—ಕೇವಲ 13 ಜನ ರಿಪೋರ್ಟರ್ಸ್ ಇದ್ದಾರೆ, ಅವರಿಗೆ ತಿಂಗಳಿಗೆ 50 ರೂಪಾಯಿ ಅಲೋಯೆನ್ಸ್ ಕೊಡಬೇಕು. ಆಂಧ್ರ ವಿಧಾನ ಮಂಡಲದಲ್ಲಿ ಪ್ರತಿಯೊಬ್ಬ ರಿಪೋರ್ಟರ್‌ಗೂ 50 ರೂಪಾಯಿ ಅಲೋಯೆನ್ಸ್ ಕೊಟ್ಟಿದ್ದಾರೆ. ಅದರಿಂದ ಇದು ಯಾವ ಇಲಾಖೆಯ ಮೇಲೂ ಏನೂ ಪರಿಣಾಮವಾಗುವುದಿಲ್ಲ.

Sri M. Y. GHORPADE : Sir, I have already said that we have taken note of the suggestion made by several Hon. Members on this. This is not a subject on which it would be right on my part to take a decision while replying to a debate of the Finance Department.

ಶ್ರೀ ಡಿ. ಕೆ. ನಾಯ್ಕರ್ :—ಮಾನ್ಯ ಅಧ್ಯಕ್ಷರೇ, ಹಿಂದಿನ ದಿವಸ ನಾನು ಮಂಡಿಸಿದ ಡಿಮ್ಯಾಂಡ್ ಮೇಲೆ ಮಾತನಾಡುತ್ತಾ ಸಂಸದೀಯ ವ್ಯವಹಾರಗಳ ಬಗ್ಗೆ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಮತ್ತು ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಎರಡು ಸಲಹೆಗಳನ್ನು ಕೊಟ್ಟಿದ್ದಾರೆ. ಅವೇನೆಂದರೆ ಲೆಜಿಸ್ಲೇಚರ್ ಸೆಕ್ರೆಟೇರಿಯಟ್ ಪ್ರತ್ಯೇಕವಾಗಿರಬೇಕೆಂದು ಹೇಳಿದ್ದಾರೆ. ಆ ಬಗ್ಗೆ ಸರ್ಕಾರ ಕೂಲಂಕಷವಾಗಿ ಈಗಾಗಲೇ ಪರಿಶೀಲನೆಮಾಡುತ್ತಾ ಇದೆ. ಇನ್ನು ಯಾವುದೇ ಕೊನೆಯ ನಿರ್ಣಯವನ್ನು ಈ ವಿಷಯದಲ್ಲಿ ತೆಗೆದುಕೊಂಡಿಲ್ಲ. ಇದರ ಬಗ್ಗೆ ಆದಷ್ಟು ಜಾಗ್ರತೆಯಾಗಿ ಸೂಕ್ತವಾದ ನಿರ್ಣಯವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಂದು ನಾನು ಈ ಸಭೆಯಲ್ಲಿ ಭರವಸೆ ಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ :—ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಇನ್ನೆಷ್ಟು ದಿವಸಗಳು ಬೇಕೆಂದು ನಾನು ಪ್ರಶ್ನೆಮಾಡಬೇಕಾಗಿದೆ.

ಶ್ರೀ ಡಿ.ಕೆ. ನಾಯ್ಕರ್ :—ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಬಿಲ್, ಸರ್ವಿಸ್ ಕಂಡೀಷನ್ ವಗೈರೆ ವಿಷಯವನ್ನು ಈ ಸಭೆಯಲ್ಲಿ ಮಾತನಾಡಬೇಕಾಗಿದೆ. ಅದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗಿದೆ. ಶೀಘ್ರದಲ್ಲಿಯೇ ಇದರ ಬಗ್ಗೆ ಒಂದು ಯೋಗ್ಯವಾದ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳುತ್ತದೆಂದು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನೊಂದು ವಿಷಯ. ಮೈಸೂರು ವಿಧಾನಮಂಡಲದ ಕನ್ನಡ ವರದಿಗಾರರ ಬಗ್ಗೆ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಕೆಲವಾರು ಸಲಹೆಗಳನ್ನು ಮಾಡಿದ್ದಾರೆ. ಈಗ ಇರತಕ್ಕ ಅವರ ಸಂಖ್ಯೆ ಅಷ್ಟೊಂದು ಸಮರ್ಪಕವಾಗಿಲ್ಲ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ವರದಿಗಾರರನ್ನು ಮೈಸೂರು ವಿಧಾನಮಂಡಲದಲ್ಲಿ ನೇಮಕಮಾಡಬೇಕು. ಕಡಿಮೆ ಸಂಖ್ಯೆಯಲ್ಲಿ ಇವರು ಇದ್ದುದರಿಂದಲೇ ಮೊನ್ನೆ ನಡೆದಂಥ ಜಾಯಿಂಟ್ ಸೆಲೆಕ್ಟ್ ಕಮಿಟಿ ಮೀಟಿಂಗಿಗೆ ಬಹಳ ತೊಂದರೆಯಾಯಿತು. ಸರ್ಕಾರದ ಪತಿಯಿಂದ ಇವರ ಸಂಖ್ಯೆ ಕಡಿಮೆ ಇದೆಯೆಂಬುದನ್ನು ನಾನು ಒಪ್ಪುತ್ತೇನೆ. ಈಗಿರತಕ್ಕ ಕನ್ನಡ ವರದಿಗಾರರ ಸಂಖ್ಯೆಯನ್ನು ಹೆಚ್ಚಿಸುವ ವಿಚಾರವನ್ನು ಸದ್ಯದ ಆರ್ಥಿಕ ತೊಂದರೆಗೋಸ್ಕರ ಈಗ ಮಾತ್ರ ಕೈಬಿಟ್ಟಿದ್ದೇವೆ. ಅದನ್ನು ಮುಂದೆ ವಿಚಾರಮಾಡಬೇಕಾಗುತ್ತದೆ.

Sri H. D. DEVE GOWDA.—You are a practising Lawyer. You can take a decision on the basis of records.

ಶ್ರೀ ಕಾಗೋಡು ತಿಮ್ಮಪ್ಪ : ಹಣಕಾಸಿನ ಸಚಿವರು ದುಡ್ಡಿನ ತೊಂದರೆ ಏನೂ ಇಲ್ಲವೆಂದು ಹೇಳುತ್ತಾರೆ. ಇವರು ಆರ್ಥಿಕ ತೊಂದರೆ ಇದೆಯೆಂದು ಹೇಳುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ :—ಮೈಸೂರು ವಿಧಾನಮಂಡಲದ ವರದಿಗಾರರ ಸಂಬಳ ಸಾರಿಗೆಗಳ ಬಗ್ಗೆ ವಿಚಾರಮಾಡುವಾಗ ಮಂತ್ರಿಗಳು ದುಡ್ಡು ಇಲ್ಲವೆಂದು ಹೇಳಿದರೆ ಈ ದೇಶಕ್ಕೇ ಅಗೌರವ ತಂದಂತಾಗುತ್ತದೆ.

ಶ್ರೀ ಡಿ. ಕೆ. ನಾಯ್ಕರ್ :—ಕನ್ನಡ ಮತ್ತು ಇಂಗ್ಲಿಷ್ ರಿಪೋರ್ಟರ್ಸ್ ಬಗ್ಗೆ ಅವರ ಸಂಬಳ ಸಾರಿಗೆಗಳ ವಿಚಾರದಲ್ಲಿ ಈಗ ಹೆಚ್ಚು ಮಾಡುವುದಕ್ಕೆ ಸದ್ಯಕ್ಕೆ ಸಾಕಷ್ಟು ಆರ್ಥಿಕ ತೊಂದರೆ ಇದೆಯೆಂಬ ಮಾತನ್ನು ನಾನು ಮುಚ್ಚುಮರೆ ಇಲ್ಲದೆ ಹೇಳುತ್ತಿದ್ದೇನೆ. ಇನ್ನೊಂದು ವಿಷಯ. ಮೊನ್ನೆ ಒಂದು ಸಾರಿ ಇವರ ಪೇ ಸ್ಕೇಲ್ ರಿವಿಷನ್ ಆಗಿದೆ. ನನಗೆ ತಿಳಿದಮಟ್ಟಿಗೆ ಇವರ ಪೇ ಸ್ಕೇಲ್ ಮೊದಲು 150 ರೂಪಾಯಿಗಳಿಂದ 500 ರೂಪಾಯಿಗಳವರೆಗೆ ಇತ್ತು. ಆ ಮೇಲೆ ಇವರ ಸಂಬಳ ಸಾರಿಗೆಯನ್ನು 200 ರಿಂದ 550 ರೂಪಾಯಿಗಳವರೆಗೆ ಅಫ್‌ಗ್ರೇಡ್ ಮಾಡಿದ್ದಾರೆ. ಆದಾದ ಮೇಲೆ ಪುನಃ ಆಗಸ್ಟ್ 1972 ರಲ್ಲಿ ವರದಿಗಾರರ ಹುದ್ದೆಗಳಲ್ಲಿ 6 ಹುದ್ದೆಗಳನ್ನು ಅಫ್‌ಗ್ರೇಡ್ ಮಾಡಿ ಅವರ ಪೇ ಸ್ಕೇಲನ್ನು 300 ರಿಂದ 700 ರೂಪಾಯಿಗಳವರೆಗೆ ರಿವೈಜ್ ಮಾಡಿದೆ. ಇಂತಹ ಪರಿಸ್ಥಿತಿಯಲ್ಲಿ ಪುನಃ ಅವರ ಪೇ ಸ್ಕೇಲನ್ನು ರಿವಿಜನ್ ಮಾಡುವುದು ಅಷ್ಟೊಂದು ಸಮಂಜಸವಲ್ಲವೆಂಬುದಾಗಿ ಒಂದು ನಿರ್ಣಯವನ್ನು ತೆಗೆದುಕೊಂಡಿದೆ.

ಇನ್ನು ವರದಿಗಾರರಿಗೆ ಹೆಚ್ಚಿಗೆ ಅಲೋಯನ್ಸ್ ಕೊಡುವ ವಿಷಯವಾಗಿ ಮಾನ್ಯ ಸದಸ್ಯರು ಕೆಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಆ ವಿಚಾರವನ್ನು ಈಗಾಗಲೇ ಮಾನ್ಯ ಹಣಕಾಸಿನ ಸಚಿವರು ಗಮನದಲ್ಲಿಟ್ಟುಕೊಂಡಿದ್ದಾರೆ. ಆ ಬಗ್ಗೆ ನಾವೂ ಸಹ ಗಮನದಲ್ಲಿಟ್ಟುಕೊಂಡಿದ್ದೇವೆ. ಅದರ ಬಗ್ಗೆ ಸೂಕ್ತ ಕ್ರಮವನ್ನು ಜಾಗ್ರತೆಯಾಗಿ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ :—ಹಿಂದೆ ಒಬ್ಬ ರಿಪೋರ್ಟರಿಗೆ ಸಂಬಳ ಮಿನಿಮಂ 150 ರೂಪಾಯಿಗಳು ಇತ್ತು. ಈಗ ಬೇರೆ ಕಡೆಗಳಲ್ಲಿ 150 ರೂಪಾಯಿಗಳಿಂತ ಜಾಸ್ತಿ ಸಂಬಳ

ಬರುತ್ತಾ ಇದೆ. ತಾಲ್ಲೂಕ್ ಆಫೀಸಿನ ಒಬ್ಬ ಗುಮಾಸ್ತೆನನ್ನು ತೆಗೆದುಕೊಂಡರೆ ಅವನಿಗೆ ಅವನ ಸಂಬಳದ ಜೊತೆಗೆ ಬೇರೆ ವ್ಯವಹಾರ ಮಾಡುವುದಕ್ಕೂ ಅವಕಾಶವಿದೆ. ತಾಲ್ಲೂಕು ಆಫೀಸಿನ ಸೆಕೆಂಡ್ ಡಿವಿಷನ್ ಕ್ಲರ್ಕ್ಸ್ ಮುಂತಾದವರು ಬೇಕಾದರೆ ಸ್ವಲ್ಪ ಕೈಚಾಚುವುದಕ್ಕೂ ಅವಕಾಶವಿದೆ. ಆದರೆ ನಮ್ಮ ವಿಧಾನ ಮಂಡಲದ ವರದಿಗಾರರಿಗೆ ಅಂತಹ ಅವಕಾಶ ಯಾವುದೂ ಇಲ್ಲ. ನಾವೇ ಯಾರಾದರೂ ಒಂದೊಂದು ಸಾರಿ ಕಾಫಿ ಕೊಡಿಸಬೇಕಾಗುತ್ತದೆ. ಆದ್ದರಿಂದ ಮೂರನೆಯ ದರ್ಜೆಯ ಅಧಿಕಾರಿಗಳ ಸಂಬಳದವರ ಜೊತೆಗೆ ಇವರನ್ನು ಹೋಲಿಸುವುದಕ್ಕೆ ಹೋಗಬೇಡಿ. ಇವರಿಗೇ ಒಂದು ಸ್ಪೆಷಲ್ ಸ್ಕೇಲ್, ಸ್ಪೆಷಲ್ ಕೇಡರ್ ಇರಬೇಕು. ಇವರ ವಿಷಯವನ್ನು ಸರ್ಕಾರದವರು ಸ್ಪೆಷಲ್ ಕೇಸಾಗಿ ವಿಚಾರಮಾಡಬೇಕು. ಏಕೆಂದರೆ ಇವರದು ಅತ್ಯಂತ ಹೆಚ್ಚಿನ ಜವಾಬ್ದಾರಿಯುತವಾದ ಕೆಲಸ ಹಾಗೂ ಬಹಳ ಕಠಿಣವಾದ ಕೆಲಸ. ಆದಕ್ಕೋಸ್ಕರ ಈ ವಿಚಾರದಲ್ಲಿ ಸರ್ಕಾರದವರು ಜಾಗ್ರತೆಯಾಗಿ ತೀರ್ಮಾನವನ್ನು ತೆಗೆದುಕೊಳ್ಳಬೇಕು.

ಶ್ರೀ ಡಿ. ಕೆ. ನಾಯ್ಕರ್ ; ಈಗಾಗಲೇ ಮೂರು ಜನ ಕನ್ನಡ ವರದಿಗಾರರನ್ನೂ ಮತ್ತು ಮೂರು ಜನ ಇಂಗ್ಲೀಷ್ ವರದಿಗಾರರನ್ನು ಅಪ್‌ಗ್ರೇಡ್ ಮಾಡಿದ್ದೇವೆಂದು ಹೇಳಿದ್ದೇವೆ. ಇನ್ನೂ ಉಳಿದವರ ಬಗ್ಗೆಯೂ ವಿಚಾರಮಾಡೋಣ. ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡಿದೆ. ಮಾನ್ಯ ಸದಸ್ಯರ ಈ ಒಂದು ಸಲಹೆಯನ್ನು ನಾವು ಪರಿಶೀಲನೆಮಾಡುತ್ತೇವೆ.

ಇನ್ನು ನ್ಯಾಯಾಂಗ ಖಾತೆಯ ಬಗ್ಗೆ ಮಾತನಾಡುತ್ತಾ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಒಂದು ಕಟುವಾದ ಟೀಕೆಯನ್ನು ಮಾಡಿದ್ದಾರೆ. ಅವರ ಟೀಕೆ ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಅದು ಸಮಂಜಸವಾಗಿರುವುದಿಲ್ಲ. ಅದು ಸರಿಯಿಲ್ಲವೆಂದು ನಾನು ತಿಳಿಯುತ್ತಿದ್ದೇನೆ. ಇನ್ನು ಬೆಂಚ್ ಎಷ್ಟು ಇರಬೇಕೆಂಬ ವಿಷಯವೇನಿದೆಯೋ ಅದು ಹೈಕೋರ್ಟ್ ಮುಖ್ಯನ್ಯಾಯಾಧೀಶರಿಗೆ ಒಳಪಟ್ಟಂಥ ವಿಷಯ. ಅದು ಅವರ ಅಧಿಕಾರದಲ್ಲಿ ಒಳಪಟ್ಟಿರುತ್ತದೆ. ಯಾವ್ಯಾವ ದರ್ಜೆಯಲ್ಲಿ ಎಷ್ಟೆಷ್ಟು ಮಾಡಬೇಕೆಂಬುದು ಅವರ ಅಧಿಕಾರದಲ್ಲಿ ಬರತಕ್ಕ ವಿಷಯ. ಅವರೇ ಅದನ್ನು ರಚನೆ ಮಾಡಬೇಕಾಗಿದೆ. ಅವರು ಹಾಗೆ ಕಾನ್‌ಸ್ಟಿಟ್ಯೂಟ್ ಮಾಡತಕ್ಕ ಬೆಂಚುಗಳಿಗೆ ಯಾವ ಜಡ್ಜನ್ನೂ ಹಾಕುತ್ತಾ ಇಲ್ಲವೆಂಬುದು ಅವರ ಟೀಕೆ. ನಮಗೆ ಅದು ಸಮಂಜಸ ಹಾಗೂ ಸರಿಯೆಂದು ಕಂಡುಬರುವುದಿಲ್ಲ. ಇನ್ನು ಹೈಕೋರ್ಟ್ ಒಳಾಡಳಿತದ ಬಗ್ಗೆ ಕೆಲವು ಮಾತುಗಳನ್ನು ಮಾನ್ಯ ಸದಸ್ಯರು ಆಡಿದ್ದು ಸರಿಯಲ್ಲವೆಂದು ನಾನು ಇಷ್ಟು ಮಾತ್ರ ಹೇಳುತ್ತೇನೆ. ಆದ್ದರಿಂದ ಅವರ ಅಭಿಪ್ರಾಯವನ್ನು ನಾನು ಪೂರ್ಣವಾಗಿ ನಿರಾಕರಿಸುತ್ತೇನೆ. ಇನ್ನು ಮುಂದೆ ಈ ನ್ಯಾಯಾಧೀಶರ ನೇಮಕದ ಬಗ್ಗೆ ಮಾನ್ಯ ಸದಸ್ಯರು ಬೇರೆ ಜನರಿಗೂ ಅವಕಾಶಮಾಡಿಕೊಡಬೇಕು, ಒಳ್ಳೆಯವರಿಗೆ ಆ ಸ್ಥಾನ ಕೊಡಬೇಕೆಂದು ಕೆಲವಾರು ಸಲಹೆಗಳನ್ನು ಮಾಡಿದ್ದಾರೆ. ಅಂತಹ ಮಹನೀಯರಿಗೆ ಪ್ರಾತಿನಿಧ್ಯ ಕೊಡುವ ಬಗ್ಗೆ ನನ್ನದು ಬೇರೆ ಅಭಿಪ್ರಾಯವಿಲ್ಲ. ಇವರ ನೇಮಕದ ಬಗ್ಗೆ ಇರತಕ್ಕ ರಾಜಕೀಯ ಅನುಭವ ಏನಿದೆಯೋ ಅದು ಬಹಳ ಮುಖ್ಯ. ಇವುಗಳ ವಿಚಾರದ ಮೇಲೆ ಹೈಕೋರ್ಟ್ ನ್ಯಾಯಾಧೀಶರ ನೇಮಕವನ್ನು ಮುಖ್ಯ ನ್ಯಾಯಾಧೀಶರ ಶಿಫಾರಿಸಿನ ಮೇಲೆ ಮಾಡುವಂತಹ ಪ್ರಸಂಗವಿದೆ. ಆದ್ದರಿಂದ ತಮ್ಮ ಅನುಭವದ ಪ್ರಕಾರ ಆ ಹುದ್ದೆಗೆ ಸ್ತ್ರೀಯರು ಇರಬೇಕೆಂದು ಪರಿಶೀಲಿಸಿದಲ್ಲಿ ಅವರು ಪರೀಕ್ಷೆಯಲ್ಲಿ ಅರ್ಹತೆ, ಅನುಭವ ಪಡೆದಿದ್ದರೆ, ಅದನ್ನೂ ಗಮನದಲ್ಲಿಟ್ಟುಕೊಂಡು ನೇಮಕ ಮಾಡುವ ಪ್ರೊಪ್ರೈಟಿ ಇರುತ್ತದೆ. ಅದನ್ನೂ ಸಹ ಪರಿಶೀಲನೆ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ :—ಅವರನ್ನು ಶ್ರೇಷ್ಠ ನ್ಯಾಯಾಧೀಶರ ಸಲಹೆ ಪಡೆಯದೆ ನೇಮಕಮಾಡಿದರೆ ಹೇಗೆ ?

ಶ್ರೀ ಡಿ. ಕೆ. ನಾಯ್ಕರ್ :—ಆ ರೀತಿಯಾಗಿ ಮಾಡುತ್ತಾ ಇಲ್ಲ. ಇದರ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿಯೂ ವಿಚಾರ ವಿನಿಮಯವಾಗಿದೆ. ಅದು ಡೆಕನ್ ಹೆರಾಲ್ಡ್‌ನಲ್ಲಿಯೂ ಪಬ್ಲಿಷ್

ಆಗಿದೆ. ಆದರೆ ನಾನು ಸುಪ್ರೀಂ ಕೋರ್ಟಿನ ಬಗ್ಗೆ ಏನು ಹೇಳುವುದಕ್ಕೂ ಮನಸ್ಸು ಮಾಡುತ್ತಾ ಇಲ್ಲ. ನಾನು ಸುಪ್ರೀಂ ಕೋರ್ಟಿನ ವಿಚಾರವನ್ನು ನಮ್ಮ ಅಧಿಕಾರ ದೃಷ್ಟಿಯಿಂದ ಮಾತನಾಡುತ್ತಾ ಇಲ್ಲ.

ಇನ್ನು ಅವರಿಗೆ ಬಡ್ತಿ ಕೊಡುವ ಬಗ್ಗೆ ಸಬಾರ್ಡಿನೇಟ್ ಜಡ್ಜ್‌ಗಳ ಎಫಿಷಿಯನ್ಸಿ, ಜಸ್ಟೀಸ್ ಗಮನದಲ್ಲಿಟ್ಟುಕೊಂಡು ಕೊಡಬೇಕೆಂದು ಮಾನ್ಯ ಶ್ರೀ ಸಜ್ಜನ್ ಅವರು ಹೇಳಿದ್ದಾರೆ. ಈ ವಿಚಾರವಾಗಿ ಮಾನ್ಯ ಸದಸ್ಯರಿಗೆ ತಿಳಿಸಬೇಕಾದರೆ ಜಡ್ಜ್‌ಗಳಿಗೆ ಬಡ್ತಿ ನೀಡುವ ವಿಚಾರ ಸರ್ಕಾರದಲ್ಲಿ ಪುನರ್‌ಪರಿಶೀಲನೆಯಲ್ಲಿದೆ. ಅದನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳಬೇಕು. ಒಟ್ಟಿನಲ್ಲಿ ಅವರಿಗೆ ಅನ್ಯಾಯವಾಗದ ರೀತಿಯಲ್ಲಿ ಅವರಿಗೆ ಬಡ್ತಿ ದೊರಕುವ ವ್ಯವಸ್ಥೆ ಮಾಡಲಾಗುತ್ತದೆ.

ಇನ್ನು ನ್ಯಾಯಾಂಗ ಕೇವಲ ಉಳ್ಳವರ ಸ್ವತ್ತಾಗಿದೆ. ಬಡವರಿಗೆ ನ್ಯಾಯ ದೊರಕುತ್ತಾ ಇಲ್ಲ. ಇದು ಸರಿಯಲ್ಲವೆಂದು ಮಾನ್ಯ ಶ್ರೀ ಶೀರನಾಳಿ ಚಂದ್ರಶೇಖರ್ ಅವರು ಒಂದು ಕಟುವಾದ ಟೀಕೆಯನ್ನು ಮಾಡಿದ್ದಾರೆ. ನಿಜಕ್ಕೂ ಈ ಟೀಕೆ ಸರಿಯಲ್ಲ. ಮಾನ್ಯ ಸದಸ್ಯರು ತಿಳುವಳಿಕೆಯಿಲ್ಲದೆ ಈ ಆಪಾದನೆಯನ್ನು ಮಾಡಬಾರದಾಗಿತ್ತು ಎಂಬುದಾಗಿ ನನ್ನ ಅಭಿಪ್ರಾಯ. ಏಕೆಂದರೆ ಕೋರ್ಟಿನ ಅಧಿಕಾರ ನ್ಯಾಯ ಮಾಡುವಂಥಾದ್ದು. ಯಾವಾಗಲೂ ಲಿಟಿಗೆಂಟ್ ಪಬ್ಲಿಕ್ ಕೋರ್ಟಿಗೆ ಬಂದು ತಮ್ಮ ಕೇಸುಗಳನ್ನು ದಾಖಲ್ ಮಾಡಿ ಹೋಗುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ :—ಮಂತ್ರಿಗಳು ಹೇಳಿದ್ದು ಸರಿಯಲ್ಲ. 25 ವರ್ಷಗಳಿಂದಲೂ ಬಡವರಿಗೆ ನ್ಯಾಯ ದೊರಕಿಲ್ಲ. ಚೀಫ್ ಜಸ್ಟೀಸ್ ನೇಮಕ ಮಾಡುವುದರಲ್ಲಿ ಬದಲಾವಣೆಮಾಡಿದ್ದಾರೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :—ಒಬ್ಬರೇ ಮುನ್ಸೀಫರು ಒಂದೇ ಟೈಪ್ ಆಫ್ ಡಾಕ್ಯು ಮೆಂಟಿನಲ್ಲಿ ಲ್ಯಾಂಡ್‌ಲಾರ್ಡ್ ಪರ ಟೆನೆಂಟಿಗೆ ವಿರೋಧವಾಗಿ ಕೊಟ್ಟಿರತಕ್ಕ ಜಡ್ಜ್‌ಮೆಂಟ್ ಬೇಕಾದರೆ ತೋರಿಸುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್ :—ನಾನು ಹೇಳುವುದನ್ನು ಪೂರ್ತಿಯಾಗಿ ಕೇಳಿ. ಈಗ ಡಿಕ್ರಿ ಕೊಡುವುದು, ಆರ್ಡರ್ ಮಾಡುವುದು ಕೋರ್ಟಿನ ವ್ಯವಹಾರಕ್ಕೆ ಸಂಬಂಧಪಟ್ಟದ್ದು. ಕೋರ್ಟಿನಿಂದ ಲಾಭ ಪಡೆಯುವುದು, ಆಮೇಲೆ ಬದಲಾವಣೆ ಮಾಡುವುದು ಪಾರ್ಟಿಗೆ ಸಂಬಂಧಪಟ್ಟದ್ದು. ಕೋರ್ಟಿನಿಂದ ಸ್ವತಃ ಹೀಗೆ ಬದಲಾವಣೆಯಾಗಿದೆಯೆಂದು ಯಾವ ಪರಿಪಾದವೂ ಇಲ್ಲ. ಆ ರೀತಿ ಯಾವ ಅಧಿಕಾರಿಯೂ ಹೇಳುವುದಿಲ್ಲ. ಯಾವನೇ ಆಗಲಿ ಲಿಟಿಗೆಂಟ್ ತನಗೆ ಲಾಭವಿಲ್ಲವೆಂದು ನ್ಯಾಯಾಧೀಶರ ಮೇಲೆ ಅಪವಾದ ಕೊಡುವುದು ಸರಿಯಲ್ಲ.

ಇನ್ನು ಜಡ್ಜ್‌ಮೆಂಟ್ ಎರಡು ಬಗೆಯಾಗಿ ಆಗುತ್ತಾ ಇವೆಯೆಂದು ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳುತ್ತಿದ್ದಾರೆ. ಇದನ್ನು ನಾನು ಒಪ್ಪುವುದಿಲ್ಲ. ಈಗ ಈ ಬಗ್ಗೆ ಹೈಕೋರ್ಟಿನವರು ಸಾಕಷ್ಟು ಆಸ್ಥೆ ವಹಿಸಿ ಕೆಲಸಮಾಡುತ್ತಿದ್ದಾರೆ.

ಅಲ್ಲಿ ವಿಜಿಲೆನ್ಸ್ ಸ್ಕ್ವಾಡ್ ಎಂತ ನೇಮಕ ಮಾಡಿದ್ದೇವೆ. ಅವರು ಅದನ್ನೆಲ್ಲಾ ನೋಡುತ್ತಾರೆ. ಇನ್ನು ಕೆಲವು ಮಾನ್ಯ ಸದಸ್ಯರು ಈ ಕೋರ್ಟುಗಳಲ್ಲಿರತಕ್ಕ ಕ್ಲಾರ್ಕುಗಳು 18 ಕಾಪಿಯಿಂಗ್ ಷೀಟ್ ಬೇಕಾಗಿರತಕ್ಕ ಕಡೆ 20 ಕಾಪಿಯಿಂಗ್ ಷೀಟನ್ನು ತರಿಸಿ ಅದರಲ್ಲಿ ದುಡ್ಡನ್ನು ತಿನ್ನುತ್ತಾರೆಂದು ಹೇಳಿದರು. ಒಬ್ಬ ಪಾರ್ಟಿ ಒಂದು ಕೇಸಿನಲ್ಲಿ ತನಗೆ ಬೇಕಾದ ತೀರ್ಮಾನದ ಕಾಪಿಗೆ 20 ಕಾಪಿಯಿಂಗ್ ಷೀಟುಗಳನ್ನು ಹಾಜರ್ಮಾಡಿದ್ದಾಗ ಅದರಲ್ಲಿ 10 ಮಾತ್ರ ಖರ್ಚಾಗಿ ಇನ್ನು 10 ಉಳಿದಿದ್ದರೆ ಅದಕ್ಕಾಗಿಯೇ ಒಂದು ರಿಜಿಸ್ಟರನ್ನು ಇಟ್ಟಿದೆ. ಅದರಲ್ಲಿ

ಆ ಪಾರ್ಟಿ ಕೊಟ್ಟ ಫೀಜ್ ಮತ್ತು ಅಲ್ಲಿ ಖರ್ಚಾದ ಫೀಟು ಹಾಗೂ ಅಲ್ಲಿ ಉಚಿತ ಫೀಟುಗಳೆಷ್ಟೆಂಬುದನ್ನು ಅದರಲ್ಲಿ ಬರೆದು, ಉಳಿದ ಕಾಪಿಯಿಂಗ್ ಫೀಟುಗಳನ್ನು ಪಾರ್ಟಿಗೆ ವಾಪಸ್ ಮಾಡಿದ್ದಕ್ಕೆ ಆ ರಿಜಿಷ್ಟರಲ್ಲಿ ಆ ಪಾರ್ಟಿಯು ಸೈನ್ ತೆಗೆದುಕೊಳ್ಳುತ್ತಾರೆ. ಆದುದರಿಂದ ಹಾಗೆ ಅವರು ಅದರಲ್ಲಿ ಲಂಚ ತಿನ್ನುತ್ತಾರೆಂದರೆ ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇನ್ನು ಇದರ ಮೇಲೆ ಸ್ಪೆಷಲ್ ಸ್ಕ್ವಾಡುಗಳನ್ನು ಬೇರೆ ಮಾಡಿದೆ. ಅವರು ಬೇರೆ ಇಂಥದನ್ನೆಲ್ಲಾ ಸೂಪರ್‌ವೈಜ್ ಮಾಡುತ್ತಿರುತ್ತಾರೆ. ಹಾಗೊಂದು ವೇಳೆ ಇಲ್ಲಿ ಏನಾದರೂ ಲಂಚಕ್ಕೆ ಅವಕಾಶ ಇದ್ದರೆ ಅದಕ್ಕೆ ಆ ಪಾರ್ಟಿ ಮತ್ತು ವಕೀಲರೇ ಕಾರಣ ಎಂದು ನಾನು ನನ್ನ ಅನುಭವದಿಂದ ಹೇಳುತ್ತೇನೆ. ನಾನು ಎಂದೂ ಪಾರ್ಟಿಗಳ ಕಡೆಯಿಂದ ಕ್ಲಾರ್ಕುಗಳಿಗೆ ದುಡ್ಡನ್ನು ಕೊಡಿಸಿಲ್ಲ. ಅಲ್ಲಿ ನಮ್ಮಲ್ಲಿ ಯಾವ ಕ್ಲಾರ್ಕಿಗೂ ಸೈತ ಐದು ರೂಪಾಯಿ ಕೊಡಿಸಿ ಅಥವಾ ಒಂದು ರೂಪಾಯಿ ಕೊಡಿಸಿ ಎಂದು ನನ್ನನ್ನು ಕೇಳತಕ್ಕ ಧೈರ್ಯ ಅಲ್ಲಿ ಯಾವ ಕ್ಲಾರ್ಕಿಗೂ ಇರಲಿಲ್ಲ. ಇದೆಲ್ಲಾ ಆಯಾ ವಾತಾವರಣಕ್ಕೆ ಅನುಸಾರವಾಗಿ ಬೆಳೆಯುತಕ್ಕ ಪದ್ಧತಿಗಳು. ಆದುದರಿಂದ ಈ ಲಂಚದ ವಿಚಾರದಲ್ಲಿ ಮಾನ್ಯ ಸದಸ್ಯರೇನು ಹೇಳಿದ್ದಾರೆ ಅದನ್ನು ನಾನು ಸಂಪೂರ್ಣವಾಗಿ ಅಲ್ಲಗಳೆಯುತ್ತೇನೆ. ಇನ್ನು ಮಾನ್ಯ ಎಚ್. ಎಸ್. ಸಿದ್ದಪ್ಪನವರು ವಕೀಲರ ಬಗ್ಗೆ ಬಹಳ ಕಟುವಾಗಿ ಟೀಕಾ ಮಾಡಿದ್ದಾರೆ. ಅಷ್ಟೇ ಅಲ್ಲದೆ ಈ ಶಾಸಕರೂ ಮತ್ತು ಎಂ. ಪಿ. ಗಳು ಪ್ರಾಕ್ಟೀಸ್ ಮಾಡುವುದಕ್ಕೆ ಅವಕಾಶವಿರಬಾರದೆಂದು ಅವರು ಹೇಳಿದ್ದಾರೆ. ಹಾಗೆ ಇವರನ್ನು ಡಿಸ್‌ಕ್ವಾಲಿಫೈ ಮಾಡುವುದಕ್ಕೆ ರಾಜ್ಯಾಂಗದಲ್ಲಿ ಯಾವ ವಿಧಿಯೂ ಇಲ್ಲ. ಇವರ ವಿಚಾರದಲ್ಲಿ ಒಂದು ಡಿಸ್‌ಕ್ವಾಲಿಫಿಕೇಷನ್ ಹಾಕುವುದಕ್ಕೆ ಅಥವಾ ಒಂದು ರೀಜನಬಲ್ ರಿಸ್ಟ್ರಿಕ್ಷನ್ ಹಾಕುವುದಕ್ಕೆ ರಾಜ್ಯಾಂಗದಲ್ಲಿ ಹೇಳಿರುವ ಆರ್ಟಿಕಲ್ 19 ಮತ್ತು 191 ಇವುಗಳಲ್ಲಿ ಏನೂ ಹೇಳಿಲ್ಲ.

ಶ್ರೀ ಕೆ. ಎಚ್. ಹನುಮೇಗೌಡ:—ತಾವು ತಮ್ಮ ಪಕ್ಷದ ವತಿಯಿಂದ ಡೈರೆಕ್ಷನ್ ಕೊಡಬಹುದಲ್ಲವೇ ?

ಶ್ರೀ ಡಿ. ಕೆ. ನಾಯ್ಕರ್:—ಅದೂ ಕೂಡ ಸಾಧ್ಯವಾಗಲಾರದು. ಆದುದರಿಂದ ಮಾನ್ಯ ಸದಸ್ಯರು ಈ ಶಾಸಕರ ಮತ್ತು ಎಂ. ಪಿ. ಗಳ ಬಗ್ಗೆ ಮಾಡಿದ ಟೀಕಾ ಸರಿಯಾದ್ದಲ್ಲ.

ಇನ್ನು ಕೆಲವು ಮಾನ್ಯ ಸದಸ್ಯರು ಕೋರ್ಟುಗಳನ್ನು ತಾಲ್ಲೂಕಿಗೊಂದರಂತೆ ಕೊಡಬೇಕೆಂದು ಕೇಳಿದ್ದಾರೆ. ಈಗಾಗಲೇ ಅನೇಕ ತಾಲ್ಲೂಕುಗಳಲ್ಲಿ ಕೋರ್ಟುಗಳನ್ನು ಸ್ಥಾಪನೆ ಮಾಡಲಾಗಿದೆ. ಇನ್ನು ಕೆಲವು ಸಂದರ್ಭಗಳಲ್ಲಿ ಹೈಕೋರ್ಟಿನವರು ಶಿಫಾರ್ಸು ಮಾಡುತ್ತಾರೆ ಆಗ ಸರ್ಕಾರದವರು ಅವರ ಸಿಫಾರ್ಶಿಗನುಸಾರವಾಗಿ ಕೋರ್ಟುಗಳನ್ನು ಕೊಡುತ್ತಾ ಹೋಗುತ್ತಾರೆ. ಆದರೆ ಇನ್ನು ಕೆಲವು ಸಂದರ್ಭಗಳಲ್ಲಿ ಕೆಲವು ತಾಲ್ಲೂಕುಗಳಿಗೆ ಕೋರ್ಟುಗಳನ್ನು ಕೊಡುವುದಕ್ಕಾಗದೆ ಇರುವಂಥ ಸಂದರ್ಭಗಳು ಬರಬಹುದು. ಒಂದು ತಾಲ್ಲೂಕಿನಲ್ಲಿ ಒಂದು ಕೋರ್ಟನ್ನು ಸ್ಥಾಪನೆ ಮಾಡಬೇಕಾದರೆ ಅಲ್ಲಿ ಇಂತಿಷ್ಟು ಖಟ್ಲೆ ನಡೆದಿರಬೇಕೆಂಬ ಒಂದು ಲೆಕ್ಕ ಇದೆ. ಅದಕ್ಕಿಂತ ಕಡಿಮೆ ಖಟ್ಲೆ ನಡೆದಿದ್ದರೆ ಅಂಥಾ ತಾಲ್ಲೂಕುಗಳಿಗೆ ಕೋರ್ಟನ್ನು ಸಾಮಾನ್ಯವಾಗಿ ಕೊಡುವುದಕ್ಕಾಗುವುದಿಲ್ಲ ಈ ಅಂಶವನ್ನೂ ಕೂಡ ಮಾನ್ಯ ಸದಸ್ಯರು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ ಸಾಕಷ್ಟು ಸಂಖ್ಯೆಯಲ್ಲಿ ಖಟ್ಲೆಗಳು ನಡೆಯುತ್ತಿರುವ ತಾಲ್ಲೂಕುಗಳಿಗೆ ಕೋರ್ಟುಗಳನ್ನು ಗ್ರ್ಯಾಂಟ್ ಮಾಡುವುದಕ್ಕೆ ಸರ್ಕಾರ ಎಂದೂ ಹಿಂದು ಮುಂದು ನೋಡುವುದಿಲ್ಲ.

ಇನ್ನು ಪಬ್ಲಿಕ್ ಪ್ರಾಸಿಕ್ಯೂಟರುಗಳ ಮತ್ತು ಗೌರ್ನಮೆಂಟ್ ಪ್ಲೀಡರುಗಳ ನೇಮಕದ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಟೀಕಾ ಮಾಡಿದ್ದಾರೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಡಿಸ್ಟ್ರಿಕ್ಟ್ ಜಡ್ಜರಿಂದ ಶಿಫಾರ್ಸು ಬಂದನಂತರ ಅವರ ಅರ್ಹತೆ ಶೀಲಗಳನ್ನು ನೋಡಿ ಅವರ ನೇಮಕ ಮಾಡಲಾಗುತ್ತದೆ ಎಂಬ ಅಂಶವನ್ನು ನಾನು ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ.

ಇನ್ನು ಜಮಾನೆಗಳ ಬಗ್ಗೆ ಇವುಗಳನ್ನು ದೊರಕಿಸಿಕೊಳ್ಳುವುದಕ್ಕಾಗಿ ಜಮಾನೆಗಳ ಅರ್ಟಿಫೈಡ್ ಕಾಪಿಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಇದನ್ನು ಫ್ರೀಯಾಗಿ ಕೊಡಬೇಕೆಂದು ಮಾನ್ಯ ಸದಸ್ಯರು ಒಬ್ಬರು ಹೇಳಿದ್ದಾರೆ. ಈಗ ಇದಕ್ಕೆ ಸಂಬಂಧಪಟ್ಟ ಹಾಗೆ ಸೆಂಟ್ರಲ್ ಲಾ ಕಮಿಷನ್ನಿನವರು ಲೀಗಲ್ ಏಡ್ ಟು ದಿ ಪೂರ್—ಅನ್ನುವಂಥಾ ಅಂಶವನ್ನು ಪರಿಶೀಲಿಸುತ್ತಿದ್ದಾರೆ. ಅಲ್ಲಿ ಅವರು ಅದನ್ನು ಯಾವ ರೀತಿ ಪರಿಶೀಲನೆ ಮಾಡುತ್ತಾರೋ ಅದರಂತೆ ಇದೂ ಕೂಡ ತೀರ್ಮಾನ ಮಾಡಲ್ಪಡುತ್ತದೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ನ್ಯಾಯಾಧೀಶರಿಗೆ ಉತ್ತಮ ಪಗಾರ ಅಂದರೆ ಸಂಬಳ ಸಾರಿಗೆಗಳನ್ನು ಕೊಡಬೇಕೆಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರ ಪಗಾರ ಶ್ರೇಣಿಯನ್ನು ಹೆಚ್ಚು ಮಾಡಬೇಕೆಂಬ ವಿಚಾರದಲ್ಲಿ ನನ್ನ ವೈಯಕ್ತಿಕ ಅಭಿಪ್ರಾಯವಿದ್ದರೂ ಸಧ್ಯದ ಹಣಕಾಸಿನ ಮುಗ್ಗಟ್ಟಿನಲ್ಲಿ—ಆರ್ಥಿಕ ಮುಗ್ಗಟ್ಟಿನಲ್ಲಿ ಅದನ್ನು ಮಾಡುವುದಕ್ಕಾಗುವುದಿಲ್ಲ. ಮುಂದೆ ಇದನ್ನು ಸರ್ಕಾರದವರು ಪರಿಶೀಲನೆ ಮಾಡಬಹುದೆಂದು ಹೇಳುತ್ತೇನೆ.

ಇನ್ನು ಚಂದ್ರಶೇಖರ್‌ರವರು ಒಂದು ಟೀಕೆ ಮಾಡಿದ್ದಾರೆ. ಏನೆಂದರೆ ಕ್ರಿಮಿನಲ್ ಸೈಡ್‌ನಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಎಫ್. ಐ. ಆರ್. ಕಳಿಸಿದ ನಂತರ ಚಾರ್ಜ್‌ಷೀಟ್ ಕಳಿಸುವುದಿಲ್ಲ. ಈ ಬಗ್ಗೆ ನಿರ್ದಿಷ್ಟ ಮಾಡಬೇಕು ಎಂದು ಸೂಚಿಸಿದ್ದಾರೆ. ಇದಕ್ಕಾಗಿ ಸರಕಾರದವರು ಡೈರೆಕ್ಟೊರೇಟ್ ಆಫ್ ಪ್ರಾಸಿಕ್ಯೂಷನ್ ಎಂದು ಒಂದು ಹೊಸದಾಗಿ ಮಾಡುವ ಸ್ಕೀಂ ಹೊಂದಿದ್ದಾರೆ, ಇದರ ಫಲವಾಗಿ ಯಾವುದೇ ಈ ರೀತಿ ವಿಳಂಬವಾಗುವುದಿಲ್ಲ ಎಂಬ ಆಸೆಯಿದೆ ಮತ್ತು ಸರಕಾರ ಈ ಬಗ್ಗೆ ಆಸ್ಥೆ ವಹಿಸಿ ಕೆಲಸ ಮಾಡುವುದು.

ಮುನ್ಸೀಫರ್ ರೆಕ್ರೂಟ್‌ಮೆಂಟ್ ಬಗ್ಗೆ ಕೆಲವರು ಡಿಸ್ಟ್ರಿಕ್ಟ್ ಜಡ್ಜ್‌ಗಳು ಮತ್ತು ಹೈಕೋರ್ಟ್ ಜಡ್ಜ್‌ಗಳ ನೇಮಕದ ಬಗ್ಗೆ ಯಾವ ನೀತಿ ಅನುಸರಿಸುವರೋ ಅದೇ ನೀತಿ ಅನುಸರಿಸಬೇಕು. ಇದಕ್ಕೆ ಎಕ್ಸಾಮಿನೇಷನ್ ಇರಬಾರದು ಎಂದು ಸಲಹೆ ಮಾಡಿದ್ದಾರೆ. ಇದರ ಬಗ್ಗೆ ನನ್ನ ಅಭಿಪ್ರಾಯ ಹೇಳುವುದಾದರೆ ಈ ನಿಯಮ ಸ್ವತಃ ಹೈಕೋರ್ಟು ಮಾಡಿದರೆ ಒಳ್ಳೆಯದು. ಆದರೆ ಕೋರ್ಟಿನವರು ಹೈಕೋರ್ಟ್ ಅಡ್ಮಿನಿಸ್ಟ್ರೇಷನ್ ಒತ್ತಡದಿಂದಾಗಿ ಇದನ್ನು ಹೈಕೋರ್ಟಿನವರು ಯಾವುದೋ ಕಾಲದಿಂದ ಬಿಟ್ಟಿದ್ದಾರೆ, ಈಗ ಪಿ.ಎಸ್.ಸಿ. ನೇಮಕಮಾಡುತ್ತಿದೆ. ಕೆಲವು ರಾಜ್ಯಗಳಲ್ಲಿ ಪಿ.ಎಸ್.ಸಿ. ಸೆಲೆಕ್ಷನ್ ಮಾಡುವಾಗ ಕೂಡ ನ್ಯಾಯಾಧೀಶರು ಭಾಗವಹಿಸುವ ಅವಕಾಶ ಹಿಂದಿತ್ತು. ಈಗ ಯಾವ ರೀತಿಯಿದೆ ಎಂಬುದನ್ನು ನೋಡಬೇಕು, ಈ ಸಲಹೆ ಒಳ್ಳೆಯದು, ಈ ಬಗ್ಗೆ ಮನ ಬೇಕು, ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ ಅಥವಾ ಪರಿಶೀಲಿಸುತ್ತೇವೆ ಎಂದು ಆಶ್ವಾಸನೆ ಈ ಮೂಲಕ ಕೊಡುತ್ತೇನೆ.

ಇನ್ನು ಮಾನ್ಯ ಸಜ್ಜನರವರು ಉತ್ತರ ಕರ್ನಾಟಕಕ್ಕೆ ಹೈಕೋರ್ಟ್ ಬೆಂಚನ್ನು ಕೊಡಬೇಕೆಂದು ಕೇಳಿಕೊಂಡಿದ್ದಾರೆ, ಅಲ್ಲದೆ 80 ಜನ ಸದಸ್ಯರು ಸಹಿ ಮಾಡಿದ ರೆಪ್ರೆಸೆಂಟೇಷನ್ ಸರಕಾರಕ್ಕೆ ಕೊಟ್ಟಿದ್ದೇವೆ, ಇನ್ನೂವರೆಗೆ ಯಾವುದೇ ನಿರ್ಣಯಮಾಡಿಲ್ಲ ಎಂದು ಹೇಳಿದ್ದಾರೆ. ಈ ಬಗ್ಗೆ ಉತ್ತರ ಕರ್ನಾಟಕದಲ್ಲಿ ಅಂಕಿಸಂಖ್ಯೆಗಳನ್ನು ಮೊಕದ್ದಮೆಗಳ ಬಗ್ಗೆ ಸಂಗ್ರಹ ಮಾಡಬೇಕಾಗಿದೆ. ಇನ್ನೂ ಕೊನೆಯ ನಿರ್ಣಯ ತೆಗೆದುಕೊಂಡಿಲ್ಲ. ಕೆಲವೊಂದು ತಿಂಗಳಲ್ಲಿ ಸರಕಾರ ಕೊನೆಯ ನಿರ್ಣಯ ತೆಗೆದುಕೊಳ್ಳುತ್ತದೆ.

ಕೋರ್ಟ್‌ಗಳಲ್ಲಿ ಕನ್ನಡ ಭಾಷೆ ಜಾರಿಗೆ ತರಬೇಕು ಎಂದು ಕೋಣಂದೂರು ಲಿಂಗಪ್ಪನವರು ತಮ್ಮ ಧಾಟಿಯಲ್ಲಿ ಒತ್ತಿಹೇಳಿದ್ದಾರೆ. ಈ ಸಂಗತಿಯನ್ನು ಹೋದ ಸಲ ಸಹ ಮಾನ್ಯ ಸದಸ್ಯರು ಹೇಳಿದರು. ಅವರು ಹೇಳಿದ ಹಾಗೆ ಈಗ ಸರಕಾರ ಕನ್ನಡ ಭಾಷೆಯನ್ನು ಎಲ್ಲಾ ಸಬಾರ್ಡಿನೇಟ್ ಕೋರ್ಟ್‌ಗಳಲ್ಲಿ, ಇತ್ತೀಚೆಗೆ ಹೈಕೋರ್ಟ್ ಬಿಟ್ಟು ಇತರ ಕಡೆಗಳಲ್ಲಿ ಡೈರೆಕ್ಷರ್

ಆಫ್ ಟ್ರಾನ್ಸ್‌ಲೇಷನ್ ಎಂಬ ಬ್ರ್ಯಾಂಚನ್ನು ತೆರೆಯಲಾಗಿದೆ. ಹೈ ಪವರ್ ಕಮಿಟಿ ಮಾಡಲಾಗಿದೆ. ಇದು ಸ್ಕ್ರೂಟಿನಿ ಮಾಡುವುದು ಮತ್ತು ಸ್ಟೇಟ್ ಆಕ್ಟುಗಳನ್ನು ಭಾಷಾಂತರ ಮಾಡುವುದು; ಸೆಂಟ್ರಲ್ ಆಕ್ಟುಗಳನ್ನು ಭಾಷಾಂತರ ಮಾಡುವ ಇನ್ನೊಂದು ಬ್ರಾಂಚ್ ಇದೆ. ಈ ಎರಡು ಬ್ರಾಂಚುಗಳಿಗೂ ಹೆಡ್ ಒಬ್ಬ ಡೈರೆಕ್ಟರನ್ನು ಮಾಡಿ ಸ್ಕೀಂ ಮಾಡಿ ಸರಕಾರದಿಂದ ಮಂಜೂರಾಗಿವೆ. ಸ್ವಲ್ಪ ದಿವಸಗಳಲ್ಲೇ ಕೆಲಸ ಶುರುವಾಗುವುದು. ಲ್ಯಾಂಗ್ವೇಜ್ ಕಮಿಷನ್ ಆಗಿರುವ ಪ್ರಕಾರ ಕಾನ್‌ಸ್ಟಿಟ್ಯೂಷನ್ ಕನ್ನಡದಲ್ಲಿ ಮಾಡಿ ಅಪ್ರೂವಲ್‌ಗೆ ಕೇಂದ್ರ ಸರಕಾರಕ್ಕೆ ಕಳಿಸಿದೆ. ಇದಲ್ಲದೆ 18-20 ಸ್ಟೇಟ್ ಆಕ್ಟುಗಳನ್ನು ಭಾಷಾಂತರಿಸಲು ಬಹಳ ಭರದಿಂದ ಯೋಗ್ಯ ಕ್ರಮ ಕೈಗೊಂಡಿದೆ.

ರಿಟ್ ಪೆಟಿಷನ್‌ಗಳಲ್ಲಿ ಸ್ಟೇ ಕೊಡುವ ಅಧಿಕಾರದ ಬಗ್ಗೆ ಲಿಂಗಪ್ಪನವರು ಎರಡು ಮಾತು ಹೇಳಿದ್ದಾರೆ. ಈಗ ಸ್ಟೇ ಕೊಡುವ ಅಧಿಕಾರವಿದೆ. ಎಂಥ ಕೇಸುಗಳಲ್ಲಿ ಸ್ಟೇ ಕೊಡಬೇಕು ಎಂದು ನೋಡಿ ಕೊಡುವರು. ಇದರ ಬಗ್ಗೆ ನಾವೇನೂ ಹೇಳುವುದಕ್ಕಾಗುವುದಿಲ್ಲ.

ಕೋರ್ಟ್‌ಗಳಲ್ಲಿ ಕೇಸುಗಳು ಐದಾರು ವರ್ಷಗಳಿಂದ ಮುಂದುವರೆಯುತ್ತಿವೆ, ಇದರಿಂದ ಸರಿಯಾದ ನ್ಯಾಯ ಸಿಕ್ಕುತ್ತಿಲ್ಲ ಎಂದು ಹೇಳಿದ್ದಾರೆ. ವಿಳಂಬವನ್ನು ತಪ್ಪಿಸಲು ಸರಕಾರ ಅನೇಕ ರೀತಿಯಿಂದ ವಿಚಾರ ಮಾಡುತ್ತಿದೆ, ಹೈಕೋರ್ಟ್ ಕೂಡ ಇದರ ಬಗ್ಗೆ ರಿಟರ್ನ್ ಕೆಳ ಕೋರ್ಟ್‌ಗಳಿಂದ ಕೇಳಿದೆ, 3 ತಿಂಗಳಿಗೆ ಅಥವ ತಿಂಗಳಿಗೊಂದು ಸಲ ಎಷ್ಟು ಕೇಸುಗಳ ಪೆಂಡಿಂಗ್ ಇವೆ ಎಂಬುದರ ಬಗ್ಗೆ ರಿಟರ್ನ್ ಕೇಳುತ್ತಿದೆ. ವಿಳಂಬವಾಗುವುದಕ್ಕೆ ಸಕಾರಣ ಕೊಡಬೇಕಾಗಿದೆ. ಇದನ್ನು ನೋಡಿ ಸೂಕ್ತ ಕ್ರಮ ತೆಗೆದುಕೊಳ್ಳುವರು.

ಶ್ರೀ ಎಂ. ಎಸ್. ಕೃಷ್ಣನ್ :—ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಮತ್ತು ಲೇಬರ್ ಟ್ರಿಬ್ಯೂನಲ್ ಅವರ ವ್ಯಾಪ್ತಿಗೆ ಬರುವುದಿಲ್ಲ, ಹೈಕೋರ್ಟ್ ಇವುಗಳ ವಿಷಯದಲ್ಲೂ ಚೆಕ್ ಮಾಡಲು ಸಾಧ್ಯವೇ ?

ಶ್ರೀ ಡಿ.ಕೆ. ನಾಯ್ಕರ್ :—ಈ ಸಲಹೆಯನ್ನು ಗಮನಿಸಿ ವಿಳಂಬವಾಗದ ಹಾಗೆ ನ್ಯಾಯದಾನ ದೊರೆಯುವ ಹಾಗೆ ಆದಷ್ಟು ಕ್ರಮ ಸೂಕ್ತ ರೀತಿಯಲ್ಲಿ ತೆಗೆದುಕೊಳ್ಳುವುದನ್ನು ವಿಚಾರ ಮಾಡಬೇಕಾಗಿದೆ. ಹಿಂದೆ ಹತ್ತು ವರ್ಷಗಳಲ್ಲಿ ಮಾಡದಿರುವುದನ್ನು ಸರಕಾರ ಒಂದೇ ವರ್ಷದಲ್ಲಿ ಮಾಡಿ ಒಂದು ಹೆಜ್ಜೆ ಮುಂದಿಟ್ಟಿದೆ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಕೋರ್ಟ್‌ಗಳ ಕಟ್ಟಡದ ಬಗ್ಗೆ ಸರಕಾರ ವಿಚಾರ ಮಾಡುತ್ತದೆ. ಈಗ ಹಣದ ಕೊರತೆಯಿದೆ. ಹರ್ಷಕ್ಕೆ ಇದಕ್ಕಾಗಿ ಒಂದು ಲಕ್ಷ ಅಥವ ಅರ್ಧ ಲಕ್ಷ ರೂಪಾಯಿ ಖರ್ಚು ಮಾಡಲಾಗುತ್ತಿದೆ.

ಶ್ರೀ ಎಚ್. ಡಿ. ದೇವೇಗೌಡ:—ಮೆಂಬರ್ ಆಫ್ ಎಕಾನಮಿ ಎಂದು ಹೇಳುವಾಗ ಅಡ್ವೊಕೇಟ್ ಜನರಲ್ ಮತ್ತು ಇನ್ನಿಬ್ಬರನ್ನು ದೆಹಲಿಯಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಆರ್ಗ್ಯುಮೆಂಟ್ ಆಗುವಾಗ ಕಳಿಸಿದ್ದೀರಿ. ಇದಕ್ಕೆಷ್ಟು ಹಣ ಖರ್ಚಾಗಿದೆ? ಅವರೇನು ಮಾಡಿದರು ? ಅಡ್ವೊಕೇಟ್ ಜನರಲ್‌ಗೆ ಒಂದು ದಿವಸಕ್ಕೆ ಒಂದು ಸಾವಿರ ರೂಪಾಯಿ, ಇನ್ನೊಬ್ಬರಿಗೆ 500 ರೂಪಾಯಿ ಪ್ರಕಾರ ಕೊಡಲಾಗಿದೆ. ಇದಕ್ಕಾಗಿ ಆದ ವೆಚ್ಚವೆಷ್ಟು ? ಯಾವ ಉದ್ದೇಶದಿಂದ ಇವರನ್ನು ಕಳಿಸಿದಿರಿ ?

ಶ್ರೀ ಡಿ. ಕೆ. ನಾಯ್ಕರ್ :—ಕಾನ್‌ಸ್ಟಿಟ್ಯೂಷನ್ನಿಗೆ ಸಂಬಂಧಪಟ್ಟ ಪ್ರಶ್ನೆ ಇತ್ಯರ್ಥವಾಗುವಾಗ ಎಲ್ಲಾ ಸ್ಟೇಟುಗಳವರೂ ಈ ರೀತಿಯಾಗಿ ತಮ್ಮ ಪರಿಯಿಂದ ಕಳಿಸಿದ್ದರು, ಹಾಗೆ ನಾವು ಕಳಿಸಿದ್ದೆವು. ಇದರಲ್ಲಿ ನ್ಯಾಷನಲ್ ಇಂಟರೆಸ್ಟ್ ಮತ್ತು ಸ್ಟೇಟ್ ಇಂಟರೆಸ್ಟ್ ಇದ್ದುದರಿಂದ ಖರ್ಚಾಗಿದೆ.

ಶ್ರೀ ಎಚ್.ಡಿ. ದೇವೇಗೌಡ :—ಅಲ್ಲಿ ಇವರು ಹೋಗಿ ಸಂಪ್ಮನೆ ನೋಡುತ್ತಿದ್ದರೇ ಅಥವ ಅವರಿಗೆ ಟ್ರೈನಿಂಗ್ ಕೊಡಲು ಕಳಿಸಿದ್ದಿರೋ ?

ಶ್ರೀ ಡಿ. ಕೆ. ನಾಯ್ಕರ್ :—ಅದನ್ನು ಪ್ರತ್ಯೇಕವಾಗಿ ಕೇಳಿದರೆ ವಿವರ ಕೊಡುತ್ತೇನೆ.

ಶ್ರೀ ಎಂ. ಎಸ್ ಕೃಷ್ಣನ್ :—ಒಂದು ರಿಟ್ ಪೆಟಿಷನ್ನಿಗೆ ನೂರು ರೂಪಾಯಿ ಫೀಜು, ಸ್ಟ್ಯಾಂಪ್ ಚಾರ್ಜು ಇದೆಲ್ಲಾ ಕೊಡಬೇಕು. ಸುಮಾರು 500 ರೂಪಾಯಿ ಸಾಮಾನ್ಯ ಜನರು ಕೊಡಬೇಕಾಗುವುದು. ಕಾರ್ಮಿಕರಿಗೆ 50 ರೂಪಾಯಿ, ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಏನೂ ಕೊಡಬೇಕಾಗಿಲ್ಲ ಎಂದು ಸೂಚಿಸುವಿರಾ ?

ಶ್ರೀ ಡಿ. ಕೆ. ನಾಯ್ಕರ್ :—ಪುನಃ ಹೈಕೋರ್ಟಿಗೆ ಸಂಭಂಧಪಟ್ಟ ತಿದ್ದುಪಡಿಯಾಗುವುದಿದೆ, ಅದರಿಂದ ಬಡವರಿಗೆ ಒಂದು ರೀತಿಯಲ್ಲಿ ಲಾಭವಾಗುತ್ತದೆ ಎಂಬ ಕಲ್ಪನೆಯಿದೆ.

ಶ್ರೀ ಎಂ. ಎಂ. ಸಜ್ಜನ :—ಮುನ್ಸೀಫ ಕೋರ್ಟಿನ ಮೇಲೆ ಸಿವಿಲ್ ಜಡ್ಜ್, ಅದರ ಮೇಲೆ ಡಿಸ್ಟ್ರಿಕ್ಟ್ ಜಡ್ಜ್, ನಂತರ ಹೈಕೋರ್ಟು ಈ ರೀತಿ ಇರುವಂತೆ ಮಾಡುವುದು ಒಳ್ಳೆಯದು, ಇದರಿಂದ ಸರಿಯಾದ ನ್ಯಾಯ ದೊರೆಯಲು ಅವಕಾಶವಾಗುವುದು ಈಗ ಮುನ್ಸೀಫರನ್ನು ಸಿವಿಲ್ ಜಡ್ಜ್ ಮಾಡಬೇಕಾದರೆ ಸೀನಿಯಾರಿಟಿ ಲಿಸ್ಟ್ ಪ್ರಕಾರ ಮಾಡುವುದು ಸರಿಯಲ್ಲ. ಇದರ ಬಗ್ಗೆ ಸರಕಾರದ ಅಭಿಪ್ರಾಯವೇನು ?

ಶ್ರೀ ಡಿ. ಕೆ. ನಾಯ್ಕರ್ :—ಡಿಸ್ಟ್ರಿಕ್ಟ್ ಜಡ್ಜ್ ತೀರ್ಮಾನವನ್ನು ಅಡ್ಮಿನಿಸ್ಟ್ರೇಟಿವ್ ಜಡ್ಜಸ್ ಚೆಕ್ ಮಾಡುವುದಿದೆ.

ಶ್ರೀ ಎಂ. ಎಂ. ಸಜ್ಜನ್ :—ಮುನ್ಸೀಫ್ ಸಿವಿಲ್ ಜಡ್ಜ್ ಮತ್ತು ಡಿಸ್ಟ್ರಿಕ್ಟ್ ಜಡ್ಜಗಳನ್ನು ಸೀನಿಯಾರಿಟಿ ಮೇಲೆ ನೇಮಕ ಮಾಡುತ್ತೀರಿ, ಇದನ್ನು ಮಾಡುವಾಗ ಎಫಿಷಿಯನ್ಸಿಯನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕು.

ಶ್ರೀ ಡಿ. ಕೆ. ನಾಯ್ಕರ್ :—ಅದನ್ನೂ ಗಮನದಲ್ಲಿಟ್ಟು ಕೊಂಡು ಅವರನ್ನು ನೇಮಕ ಮಾಡುತ್ತೇವೆ ಎಂದು ಈಗಾಗಲೇ ಹೇಳಿದ್ದೇನೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಕೊಟ್ಟಂಥ ಉತ್ತಮ ಸಲಹೆಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳುತ್ತಾರೆ. ಮತ್ತು ಯೋಗ್ಯ ಸಲಹೆಗಳನ್ನು ಕೊಟ್ಟ ಬಗ್ಗೆ ಸದಸ್ಯರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ, ಮತ್ತು ಇಷ್ಟು ಹೇಳಲು ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ.

MADAM SPEAKER:—The question is—"That the respective sums not exceeding the amounts mentioned in the list of demands inclusive of the sums granted on account be granted the Government to defray the charges which will come in course of payment during the financial year for the period ending with the 31st day of March, 1974, in respect of Demands Nos. 1, 5, 10A, 15C, 34, 39, 39B, 40, 41, 52, 54, 9, and 11."

The motion was adopted and Demands voted

As ordered by the Speaker the motion for Demands for Grants adopted by the House are reproduced below :

DEMAND NO. 1—TAXES ON INCOME OTHER THAN CORPORATION TAX

4. Taxes on Income Other than Corporation Tax

Madam/Sir, on the recommendation of the Governor I beg to move :

"That a sum not exceeding Rs. 11,33,000, inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of 'Taxes on Income other than Corporation Tax'."

DEMAND NO. 5—SALES TAX—ADMINISTRATION

12. Sales Tax

Madam/Sir, on the recommendation of the Governor, I, beg to move :

"That a sum not exceeding Rs. 1,64,98,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of 'Sales Tax—Administration'."

DEMAND NO, 10 A.—TREASURIES AND LOCAL FUND AUDIT

19. General Administration

Madam/Sir, on the recommendation of the Governor, I beg to move :

"That a sum not exceeding Rs. 1,02,15,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of 'Treasuries and Local Fund Audit'."

DEMAND NO. 15—C. SMALL SAVINGS

26. Miscellaneous Departments

Madam/Sir, on the recommendation of the Governor, I beg to move :

"That a sum not exceeding Rs. 5,50,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of 'Small Savings'."

DEMAND NO. 34—PENSIONS AND OTHER RETIREMENT BENEFITS

65. Pensions and Other Retirement Benefits

Madam/Sir, on the recommendation of the Governor, I beg to move :

"That a sum not exceeding Rs. 7,63,57,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of 'Pensions and Other Retirement Benefits'."

DEMAND NO. 39—MISCELLANEOUS

71. Miscellaneous

Madam/Sir, on the recommendation of the Governor, I beg to move :

"That a sum not exceeding Rs. 3,51,61,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March, 1974, in respect of 'Miscellaneous'."

DEMAND NO. 39=B—STATE LOTTERIES

71. Miscellaneous

Madam/Sir, on the recommendation of the Governor, beg to move :

"That a sum not exceeding Rs. 2,50,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of 'State Lotteries'."

DEMAND NO. 40—COMMUTATION OF PENSIONS.

72. Commutation of Pensions

Madam/Sir on the recommendation of the Governor, I beg to move :

"That a sum not exceeding Rs 65,00,000 inclusive of the sum granted 'on account' be granted to the Government to defray the charges which will come in course of payment during the financial ysar ending 31st day of March 1974, in respect of "Commutation of Pensions'."

DEMAND NO. 41—MISCELLANEOUS COMPENSATIONS AND ASSIGNMENTS.

76. Other Miscellaneous Compensations and Assignments

Madam/Sir, on the recommendation of the Governor, I beg to move :

"That a sum not exceeding Rs. 2,55,25,000, inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of 'Miscellaneous Compensations and Assignments'."

DEMAMD NO. 52—COMMUTED VALUE OF PENSIONS.

120. Payments of Commuted Value of Pensions

Madam/Sir, on the recommendation of the Governor, I beg to move :

"That a sum not exceeding Rs. 63,00,000 inclusive of the sum granted 'on account' be granted to the Government to defray the charges which will come in course of payment

during the financial year ending 31st day of March 1974, in respect of ' Commuted Value of pensions. "

DEMAND NO 54—ADVANCES AND LOANS.

Q. Loans and Advances by State/Union Territory Governments

Madam/Sir, on the recommendation of Governor, I beg to move :

" That a sum not exceeding Rs. 4,84,10,000 inclusive of the sum granted ' on account be ' to the Government to defray the charges which will come in course of payment during the financial year ending 31st day of March 1974, in respect of ' Advances and Loans '."

DEMAND NO 9.—STATE LEGISLATURE AND ELECTIONS.

18. Parliament, State/Union Territory Legislature

Madam/Sir, on the recommentation of the Governor, I beg to move :

"That a sum not exceeding Rs. 60,39,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of ' State Legislature and Elections.' "

DEMAND NO. 11.—ADMINISTRATION OF JUSTICE.

21. Administration of Justice

Madam/Sir, on the recommendation of the Governor, I beg to move :

"That a sum not exceeding Rs. 2,58,10,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of 'Administration of Justice.' "

MYSORE LEGISLATIVE ASSEMBLY

Tuesday, the 1st May, 1973/Vaishaka 11, 1895 S.E.

The House met in the Assembly Chamber, Vidhana Soudha, at One of the Clock.

[*Madam Speaker (Smt. K. S. Nagarathnamma) in the Chair*]

STARRED QUESTIONS

(To which oral answers were given)

BAZAR MOSQUE AT TARIKERE TOWN

95. Sri HANJI SHIVANNA (Tarikere).—

Will the Minister for Revenue be pleased to state :—

(a) the annual income of the Bazar Mosque at Tarikere Town for the past ten years ;

(*b*) the person who was looking after the accounts and correspondence work of the Mosque from 1960 ;

(*c*) whether the accounts of the Mosque have been audited and if so, what are the remarks of the Auditor ;

(*d*) whether it is a fact that in Aminiya School belonging to the Bazar Mosque one person is residing without obtaining permission from the proper authority and causing inconvenience to the running of the said school ;

(*e*) the number of Sewing Machines available belonging to the School and whether the School is working and if not the reasons therefor ?

Sri AZEEZ SAIT (Minister for Labour) [on behalf of Sri N. HUTCHAMASTHY GOWDA (Minister for Revenue)].—

(*a*) A Statement indicating the income of the Bazar Mosque, Tarikere for the period from 1-4-1961 to 31-3-67 is

---

Asterisks indicate that remarks or speeches have not been revised by the member concerned .

appended. The accounts for the subsequent period from 1-4-67 to 31-3-72 are being audited.

(*b*) Shri Mir Hayath, President and Shri Shaik Hyder, Secretary of the Managing Committee were managing the affairs of the Mosque up to 21st October, 1968 when its management was taken over under the direct control of the Mysore State Board of Wakfs.

(*c*) The accounts for the period from 1-1-1960 to 31-3-67 have been audited. The Audit Report has disclosed improper expenditure. The Report is before the Law Committee of the Wakf Board for enquiry. The accounts for the subsequent period are being audited and the report is awaited from the Auditor.

(*d*) Yes, it is a fact that one person is in occupation of a residential room adjoining the School, Legal proceedings have been initiated against that person. In the meanwhile he has promised to vacate the premises whenver required.

(*e*) There are 13 Sewing Machines in the School. The School is not working at present for want of suitable Sewing Mistress

STATEMENT

Showing the Annual Income of Masjid Bazar Trust, Tarikere.

Sl. No.	Year	Rents	Income from				Total
			Sale of areca crop	Sale of Mango crop	Sale of cocoanut	Misc.	
1	1961-62	1,971	13,665	1,565	100	359	17,660
2	1962-63	5,030	12,250	...	...	5,604	22,884
3	1963-64	5,656	15,267	1,555	164	136	22,778
4	1964-65	5,682	14,000	...	...	...	19,682
5	1965-66	5,592	13,000	1,100	34	40	19,766
6	1966-67	5,592	8,125	850	60	195	14,822

ಶ್ರೀ ಹಂಜಿ ಶಿವಣ್ಣ :—ಸ್ವಾಮಿ, ತಮ್ಮ ಉತ್ತರದಲ್ಲಿ ಹೇಳಿದಂತೆ ಈ ಆಡಳಿತವನ್ನು ಹಿಂದೆ ನಡೆಸುತ್ತಾ ಇದ್ದಂಥವರೇ ಮೀರ್ ಹಯಾತ್ ಅವರು ಅಧ್ಯಕ್ಷರಾಗಿಯೂ ಮತ್ತು ಶ್ರೀ ಶೇಖ್ ಹೈದರ್ ಅವರು ಕಾರ್ಯದರ್ಶಿಯಾಗಿಯೂ ಇದನ್ನು ನಡೆಸಿಕೊಂಡು ಬರುತ್ತಾ ಇದ್ದಾರೆ. ಇವರು ಸರ್ಕಾರಿ ನೌಕರಿಯಲ್ಲಿದ್ದು ಇದಕ್ಕೆ ಸಂಬಂಧಪಟ್ಟ ವ್ಯವಹಾರಗಳ ಬಗ್ಗೆ ಲಕ್ಷಾಂತರ ರೂಪಾಯಿಗಳಷ್ಟು ಹಣವನ್ನು ಪೋಲು ಮಾಡಿದ್ದು ನಿಜವೇ ?

ಶ್ರೀ ಅಜೀಜ್ ಸೇಟ್ :—ಅವರು ಸರ್ಕಾರಿ ಅಧಿಕಾರಿಗಳಾಗಿರುವುದು ನಿಜ. ಈ ಧರ್ಮ ಸಂಸ್ಥೆಗೆ ಸರ್ಕಾರಿ ಅಧಿಕಾರಿಗಳು ಅಧ್ಯಕ್ಷರು ಆಗಬಾರದು ಎನ್ನುವ ನಿಯಮವೇನೂ ಇಲ್ಲ. ಈ ಬಗ್ಗೆ ವಾಕ್ಫ ಬೋರ್ಡಿನ ಲಾ ಕಮಿಟಿಯವರು ಮಿಸ್‌ಅಪ್ರೋಪ್ರಿಯೇಷನ್ ಬಗ್ಗೆ ಅವರು ಮತ್ತು ಅವರ ಜೊತೆಯವರು ಈ ಇಬ್ಬರೂ 67 ಸಾವಿರ ರೂಪಾಯಿ ಕಟ್ಟಬೇಕೆಂದು ಈಗ್ಗೆ 15 ದಿನದ ಹಿಂದೆ ತೀರ್ಮಾನ ಮಾಡಿದ್ದಾರೆ.

ಶ್ರೀ ಹಂಜಿ ಶಿವಣ್ಣ :—ಈಗ ತೀರ್ಮಾನ ಆಗಿರುವುದು ಒಂದು ಕೇಸಿನಲ್ಲಿ. ಇನ್ನೂ ಒಂದು ಕೇಸಿನಲ್ಲಿ ಬಾಕಿ ಇದೆ. ಆದುದರಿಂದ ಆ ಹಣವನ್ನೂ ಕೂಡ ಆದಷ್ಟು ಜಾಗ್ರತೆ ವಸೂಲ್ಮಾ ಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಜೀಜ್ ಸೇಟ್ :—ತಾವು ಹೇಳಿದ ಪ್ರಕಾರ ಲಾ ಕಮಿಟಿಯಲ್ಲಿ ಇನ್ನೂ ಒಂದು ಕೇಸು ಇದೆ. ಒಂದು ಕೇಸಿನಲ್ಲಿ ಲ್ಯಾಂಡ್ ರೆವಿನ್ಯೂ ಕಲೆಕ್ಷನ್‌ನಿಂದ ವಸೂಲು ಮಾಡಲಿ ಎಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಇನ್ನೊಂದಕ್ಕೆ ಅಪೀಲು ಮಾಡಲು ಟೈಂ ಇದೆ. ಅದನ್ನೂ ಕೂಡ ಆದಷ್ಟು ಜಾಗ್ರತೆ ತೀರ್ಮಾನ ಮಾಡಬೇಕು ಎಂದು ಇದ್ದಾರೆ,

ಶ್ರೀ ಹಂಜಿ ಶಿವಣ್ಣ :—ಆ ಅಪೀಲು ಸರ್ಕಾರಕ್ಕೆ ಮಾಡಬೇಕೇ ಅಥವಾ ಹೈಕೋರ್ಟಿಗೆ ಹೋಗಬೇಕೇ ?

ಶ್ರೀ ಅಜೀಜ್ ಸೇಟ್ :—ಅದು ಹೈಕೋರ್ಟಿಗೆ ಹೋಗಬೇಕಾಗಿದೆ, ಸರ್ಕಾರಕ್ಕೆ ಬರುವುದಿಲ್ಲ.

EMOLUMENTS PAID TO WORKERS AND CLERICAL STAFF IN INDUSTRIES

159. Sri K. SRIRAMULU (Gandhinagar).—

Will the Minister for Industries be pleased to state :—

The amount of emoluments paid to the workers and clerical staff respectively working in the industries fully or partially owned by the Government (Industrywise information may be given) ?

Sri K.H. PATIL (Minister for Agriculture and Forests) on behalf of Sri S. M. KRISHNA (Minister for Industries)].—

(i) The information in respect of Industries fully owned by the Government is given in Statement I appended.

(ii) The information in respect of Industries partially owned by the Government is given in Statement II appended.

STATEMENT I

Emoluments paid to the workers and clerical staff in the Government Industrial concerns per annum.

	Name of the Company	Workers	Clerical Staff
		Rs.	Rs.
1.	Government Electric Factory, Bangalore. ...	28,00,368	10,27,200
2.	Central Industrial Workshop, Bangalore. ...	8,99,952	3,16 008
3.	Government Central Workshop, Mercara. ...	74,628	10.056
4	Government Soap Factory, Bangalore.	6,87,468	73.788
5.	Government Sandalwood Oil Factories, Mysore. ...	5,39,472	2,84,164
6.	do Shimoga. ...	2,90,964	1 66 708
7.	Mysore Implements Factory, Hassan ...	6,18,800	2,11 200
8	Government Silk Filatures, Channapatna. ...	11,69,844	18 705
9.	Government Silk Weaving Factory Mysore. ...	2,72,688	91,008
10.	Government Silk Filatures, Mysore. ...	4,09,728	18 400
11.	do Kollegal. ...	10,31,280	1 56 864
12.	do T. Narasipura. ...	7,68,000	96,000
13.	do Chamarajanagar. ...	29.43,240	4,47,600
14	do Mambalii. ...	1 98,000	31,200
15.	do Santhemaranahalli. ...	3,48,000	48,000
16.	do Mudigundum. ...	2,87,280	No clerical staff
17.	do Kanakapura ...	5,78,400	1,20,000

STATEMENT II

Emoluments paid to the workers and clerical staff of Government Companies per annum.

	Name of the Company	Workers	Clerical Staff
		Rs.	Rs.
1.	Mysore Sugar Company, Mandya. ...	46,30,800-00	14,19,720-00
2.	Mysore Iron and Steel Limited, Bhadravathi. ...	4,10,28,927-00	(No separate figures available)
3.	Mysore Lac and Paint Works Limited.	2,16,360-00	62,580-00
4.	Mysore Chrome Tanning Company, Limited, Bangalore. ...	86,117-76	49,608-36
5.	Mysore Porcelains Limited, Bangalore. ...	44,90,213-16	3,26,296-92
6.	Mysore Minerals Limited, Bangalore. ...	8,33,761-44	9,04,822-20
7.	Mysore Small Industries Corporation Limited, Bangalore. ...	No workers	1,78,040-00
8.	Hutti Gold Mines Company, Limited. ...	65,52,573-36	6,39,844-00
9.	NGEF Limited, Bangalore ...	77,59,728-53	50,03,778-64
10.	Remco Limited, Bangalore ...	55,62,000-00	10,41,000-00
11.	Mysore State Handicrafts Development Corporation, Limited.	No workers	4,75,122-00
12.	Mysore State Industrial Investment and Development Corporation, Bangalore. ...	23,358-00	49,570-00

ಶ್ರೀ ಕೆ. ಶ್ರೀರಾಮುಲು : —ಸ್ವಾಮಿ, 30 ಕೋಟಿ ರೂಪಾಯಿ ವ್ಯವಹಾರ ಮಾಡತಕ್ಕ ಈ ಭದ್ರಾವತಿ ಫ್ಯಾಕ್ಟರಿಯಲ್ಲಿ ಅಧಿಕಾರಿಗಳಿಗೆ ಕೊಡಲಾಗುತ್ತಿರುವ ವೇತನದ ಮೊತ್ತವೆಷ್ಟು ಎಂದು ಕೇಳಿದ್ದಕ್ಕೆ 'ನೋ ಸಪರೇಟ್ ಫಿಗರ್ಸ್ ಅವೈಲಬಲ್' ಎಂದು ಹೇಳಿದ್ದೀರಿ. ಇದಕ್ಕೆ ಫಿಗರ್ ಕೊಡದೇ ಇರುವುದು ಸರಿಯೇ ?

ಶ್ರೀ ಕೆ. ಹೆಚ್. ಪಾಟೀಲ್ :—ಮಾನ್ಯ ಸದಸ್ಯರು ಆ ಕೈಗಾರಿಕೆಯಲ್ಲಿರುವ ಕಾರ್ಮಿಕರು ಗುಮಾಸ್ತರು ಮತ್ತು ಆಯಾಯ ವರ್ಗಗಳಿಗೆ ಕೊಡಲಾಗುತ್ತಿರುವ ವೇತನದ ಮೊತ್ತವೆಷ್ಟು ಎಂದು ಕೇಳಿದ್ದೀರಿ. ಅದು ಕಾರ್ಪೊರೇಷನ್ ಆಗಿರುವುದು; ಆ ಫಿಗರ್ಸ್ ಈಗ ಇಲ್ಲದೇ ಇರುವುದರಿಂದ ಕೊಡಲಿಲ್ಲ.

ಶ್ರೀ ಕೆ. ಶ್ರೀರಾಮುಲು :—ಮೈಸೂರು ಮಿನರಲ್ಸ್ ಹಟ್ಟಿ ಗೋಲ್ಡ್ ಮೈನ್ಸ್‌ನಲ್ಲಿರುವ ಕಾರ್ಮಿಕರ ಸಂಬಳ ನೋಡಿದರೆ ಅಲ್ಲಿ ಕಾರ್ಮಿಕರಿಗಿಂತಲೂ ಸ್ಟಾಫ್ ಸಂಬಳ ಜಾಸ್ತಿಯಾಗಿದೆ ಎಂದು ಕಂಡುಬರುತ್ತಾ ಇದೆ. ಇದನ್ನು ಸರಿಪಡಿಸುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ :—ತಾವು ಆಯಾಯ ವರ್ಗದವರಿಗೆ ಕೊಡತಕ್ಕಂಥ ಪಗಾರ ಎಷ್ಟು ಜಾಸ್ತಿಯಾಗಿದೆ ಎಂದು ಕೇಳಿದ್ದೀರಿ. ಜಾಯಿಂಟ್ ಕಮಿಟಿ ರಿಪೋರ್ಟ್ ಆಧಾರದ ಮೇಲೆ ಅವರಿಗೆ ಪಗಾರವನ್ನು ಹೆಚ್ಚು ಮಾಡುತ್ತೇವೆ. ಆದುದರಿಂದ ಅವರಿಗೆ ಹೆಚ್ಚು ಎಂದು ಕಾಣುತ್ತದೆ.

ಶ್ರೀ ಕೆ. ಶ್ರೀರಾಮುಲು :—ನನ್ನ ಪ್ರಶ್ನೆ ಏನೆಂದರೆ ಅಲ್ಲಿಯ ಕಾರ್ಮಿಕರಿಗೆ ಎಷ್ಟು ಪಗಾರ ಕೊಡುತ್ತೀರೋ ಅವರಿಗಿಂತ ಸ್ಟಾಫ್‌ಗೆ ಜಾಸ್ತಿಯಾಗಿದೆ. ಆದುದರಿಂದ ನಾನು ಹೇಳುವುದು ಏನೆಂದರೆ ಅವರಿಗೆ ಒಂದು ಪ್ರೊಡಕ್ಷನ್ ಆಧಾರದ ಮೇಲೆ ಕೊಡುವುದು ಒಳ್ಳೆಯದು ಇಲ್ಲವೇ ಇದಕ್ಕೆ ಒಂದು ಸಮಿತಿ ಮಾಡಿ ಆ ಸಮಿತಿಯ ಶಿಫಾರಸಿನಂತೆ ಕಾರ್ಯಕ್ರಮ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ :—ಸಮಿತಿ ರಚನೆ ಮಾಡುವುದರಿಂದ ಇದು ಸುಧಾರಣೆ ಯಾಗುತ್ತದೆ ಎಂದು ಸರ್ಕಾರದ ಅಭಿಪ್ರಾಯಕ್ಕೆ ಬಂದರೆ ಹಾಗೆ ಮಾಡುತ್ತೇವೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ :—ಸ್ವಾಮಿ, ಸಂಬಳ ಸಾರಿಗೆಗಳನ್ನು ಗೊತ್ತು ಮಾಡುವುದರಲ್ಲಿ ಈಗ ಇರುವಂಥ ಏರುಪೇರುಗಳನ್ನು ಸರಿದೂಗಿಸಬೇಕು ಎನ್ನುವುದು ಈಗಿನ ಸಮತಾವಾದ ಸಮಾಜದ ಸಿದ್ಧಾಂತವಲ್ಲವೇ ? ಆದುದರಿಂದ ಈ ಸಂಬಳ ಸಾರಿಗೆಗಳ ವಿಚಾರದಲ್ಲಿ ಒಂದು ಗರಿಷ್ಠ ಮಿತಿ ಇರುವ ಹಾಗೆ ಸಂಬಳವನ್ನು ಗೊತ್ತು ಮಾಡಲು ಒಂದು ನಿಯಮವನ್ನು ಹಾಕುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ :—ಇದರಲ್ಲಿರುವ ಅಂತರವನ್ನು ಕಡಿಮೆ ಮಾಡುವುದೇ ಈಗಿನ ಸಮತಾವಾದ ಸಮಾಜದ ಸಿದ್ಧಾಂತ. ಎಲ್ಲರಿಗೂ ಒಂದೇ ರೀತಿ ಇರಬೇಕು ಎನ್ನುವುದು ಸಮಾಜವಾದ ಆಗಲಿಕ್ಕಿಲ್ಲ.

OFFICIALS OF FISHERIES DEPARTMENT ON DEPUTATION TO FISHERIES CORPORATION

819. Smt. WINNIFRED F. FERNANDES (Coondapur).—

Will the Minister of State for Fisheries be pleased to state :—

(*a*) the number of officers and officials (except Class IV) of Fisheries Department deputed to the Fisheries Corporation :

(*b*) the number of officers and officials transferred by the Fisheries Corporation and where ;

(*c*) the number of officers and officials repatriated by the Fisheries Corporation to their parent department and when ?

Sri K. H. PATIL (Minister for Agriculture and Forests) [on behalf of Sri K. T. RATHOD (Minister of State for Fisheries)].—

(*a*) The following number of Class I, Class II and Class III Officers and Officials are deputed to the Mysore State Fisheries Development Corporation from the Department of Fisheries.

Class I	*Class II*	*Class III*
1	5	87

(*b*) 34 Officers and officials were transferred during the period from 1st January 1971 to 31st March 1973 from one institution to another within the jurisdiction of the Corporation.

(*c*) 13 Officers and officials were repatriated from the Fisheries Corporation to the Fisheries Department during the period from 1st January 1971 to 31st March 1973.

Smt. WINNIFRED F. FERNANDES.—You have answered to my question (*a*) that 93 officers and officials are deputed to the Mysore State Fisheries Development Corporation from the Department of Fisheries. How many of them have got deputation allowance ?

Sri K. H. PATIL.—It is a matter different from the subject.

Smt. WINNIFRED F. FERNANDES.—How many officers and officials have been transferred within a period of two years ?

Sri K. H. PATIL.—Out of 192 persons, 93 are Class I, II and III officials and 99 are Class IV servants.

Smt. WINNIFRED F. FERNANDES.—I wanted to know how many officers and officials were transferred within a period of two years, because the policy of the Government is not to disturb officials within two years.

Sri K. H. PATIL.—The officers and officials are repatriated departmental officers and according to their willingness they have come back. It is not according to Government Order that they have been transferred.

Smt. WINNIFRED F. FERNANDES.—How many officers and officials have been transferred within a period of two years; I wanted to know this because, the policy of the Government is not to disturb them within two years, and there is information that some persons have been disturbed within two years.

Sri K. H. PATIL.—We have not transferred them back. It is on account of their willingness to come back to the department that they have been repatriated to the department.

Secondly, if the Hon. Members are under the impression that within two years nobody can be transferred, I wish to inform them that it is at the discretion of the Government to transfer any officer at any time but normally, we will follow the procedure not to disturb the officials within two years, because we are incurring heavy expenditure.

Smt. WINNIFRED F. FERNANDES.—Some persons who had been transferred have been brought back to the same place. Is it in the interest of the department ?

Sri K. H. Patil.—It is in the interest of the administration.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ :—ಸ್ವಾಮಿ, (ಇ)ಗೆ ಉತ್ತರವಾಗಿ 1-1-1971 ರಿಂದ 31-3-1973ರ ವರೆಗಿನ ಅವಧಿಯಲ್ಲಿ ಮೀನುಗಾರಿಕೆ ಇಲಾಖೆಗೆ ಮೀನುಗಾರಿಕೆ ಕಾರ್ಪೋರೇಷನ್‌ನಿಂದ 13 ಮಂದಿ ಅಧಿಕಾರಿಗಳನ್ನು ಹಾಗೂ ನೌಕರರುಗಳನ್ನು ವಾಪಸ್ಸು ಕಳುಹಿಸಿಕೊಡಲಾಗಿದ್ದಿತು ಎಂದು ಹೇಳಿದ್ದೀರಿ, ಇದರಲ್ಲಿ ನಾನು ಕೇಳುವುದು ಏನೆಂದರೆ ಈ 13 ಜನ ಏನು ವಾಪಸ್ಸು ಹೋಗಿರುತ್ತಾರೆ ? ಇದಕ್ಕೆ ಅವರೇ ಮನವಿ ಮಾಡಿದ್ದರೇ. ಅಥವಾ ನೀವೇ ಒತ್ತಾಯವಾಗಿ ಕಳುಹಿಸಿದ್ದೀರಾ ?

Sri K. H. PATIL.—According to me, there was no pressure.

SANCTION OF EXTRA BOARDING CHARGES TO SC/ST COLLEGE STUDENTS

890. Sri P. P. HEGRE (Chikodi).—

Will the Minister for Community Development and Social Welfare be pleased to state :—

(*a*) whether it has come to the notice of Government that extra boarding charges are not sanctioned to those Scheduled Castes and Scheduled Tribes College students who are residing outside the college hostels ;

(*b*) if so, whether the Government is aware of the fact that such students are to incur more expenses and are handicapped as they are to make such payments towards room rent and mess charges monthly ;

(*c*) whether there is any proposal before the Government to sanction extra boarding charges to such students also ;

(*d*) if not, the way in which the Government proposes to help these helpless and hard hit students ?

Sri M. MALLIKARJUNASWAMY (Minister for Community Development and Social Welfare).—

(*a*) Yes.

(*b*) No.

(*c*) No.

(*d*) Wherever there are no hostels either attached to the institutions or are run by the Voluntary Organizations, the Department is making efforts by encouraging Voluntary Organizations to open general hostels by giving them financial assistance up to Rs. 5,000 for the purchase of utensils and furniture for starting the hostels. Apart from the above, the managements of such hostels have to collect the mess charges from the students from their scholarship amounts. In case the expenditure incurred on boarding, lodging and establishment charges is more than the scholarship amount then the Department pays the extra charges up to Rs. 100 p.m., including the maintenance charges already paid to the students under the Scholarship Programme.

ಶ್ರೀ ಪಿ. ಜಿ. ಹೆಗಡೆ :—ಸ್ವಾಮಿ, ಇದೇ ಪ್ರಶ್ನೆಯ (ಅ) ಉತ್ತರವಾಗಿ ಬಂದಿದೆ ಎಂದು ಹೇಳಿದ್ದೀರಿ, ಮತ್ತು ಇದೇ ಪ್ರಶ್ನೆಯ (ಆ) ಮತ್ತು (ಇ) ಗೆ ಉತ್ತರವಾಗಿ ಗೊತ್ತಿಲ್ಲ ಮತ್ತು ಇಲ್ಲ ಎಂದು ಹೇಳಿದ್ದೀರಿ. ನನ್ನ ಪ್ರಶ್ನೆ ಏನೆಂದರೆ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಯ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಸ್ಥಾನ ಇಲ್ಲದೆ ಬೇರೆ ಕಡೆ ಉಳಿಯುತ್ತಿದ್ದಾರೆ. ಆದುದರಿಂದ ಅವರಿಗೆ ಆಯಾಯ ಸಂಸ್ಥೆಯ ಕಾಲೇಜಿನಲ್ಲಿ ಸ್ಥಾನ ಕೊಡುವಂತೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಈಗಾಗಲೇ ಆ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಆ ವಿಷಯ ಮಾನ್ಯ ಸದಸ್ಯರಿಗೂ ಗೊತ್ತಿದೆ.

ಶ್ರೀ ಪಿ. ಪಿ. ಹೆಗರೆ :—ಸ್ವಾಮಿ, ನಾನು ಕೇಳಿದ್ದು ಏನೆಂದರೆ, ಹರಿಜನ ವಿದ್ಯಾರ್ಥಿಗಳಿಗೆ ಕಾಲೇಜಿನ ವಿದ್ಯಾರ್ಥಿನಿಲಯಗಳಲ್ಲಿ ಸ್ಥಾನ ಇಲ್ಲದೆ ಹೊರಗೆ ಹೋಗಿದ್ದಾರೆ. ಅವರು ಎಕ್ಸ್‌ಟ್ರಾ ಬೋರ್ಡಿಂಗ್ ಛಾರ್ಜಸ್ ಕೊಡಬೇಕಾಗಂತ್ತದೆ. ಬೇರೆ ರೂಮ್ ಮಾಡಬೇಕಾಗುತ್ತದೆ, ಬೇರೆ ಊಟಕ್ಕೆ ದುಡ್ಡು ಕೊಡಬೇಕಾಗುತ್ತದೆ. ಆದುದರಿಂದ ಅವರು ಯಾವ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಾರೋ ಆ ಸಂಸ್ಥೆಗೆ ಸಂಬಂಧಪಟ್ಟ ಕಾಲೇಜು ವಿದ್ಯಾರ್ಥಿನಿಲಯಗಳಲ್ಲಿ ಅವರಿಗೆ ಸ್ಥಾನ ಕೊಡಬೇಕೆಂದು ಕಟ್ಟುನಿಟ್ಟಾಗಿ ಆ ಸಂಸ್ಥೆಗೆ ಆದೇಶ ಕಳುಹಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಈಗಾಗಲೇ ಹರಿಜನ ವಿದ್ಯಾರ್ಥಿಗಳಿಗೆ ಇಷ್ಟೊಂದು ಪರ್ಸೆಂಟೇಜ್ ಸ್ಥಾನಗಳನ್ನು ಎಲ್ಲ ಹಾಸ್ಟಲುಗಳಲ್ಲಿಯೂ ಇಡಬೇಕೆಂದು ನಿಯಮಗಳಲ್ಲಿದೆ.

ಶ್ರೀ ಪಿ. ಪಿ. ಹೆಗರೆ :—ಆ ನಿಯಮಾವಳಿಗಳನ್ನು ಪಾಲಿಸುವುದಿಲ್ಲ. ಇದರ ಬಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಪಾಲಿಸುವ ಹಾಗೆ ಮಾಡುತ್ತೇವೆ.

ಶ್ರಿ ಎಂ. ಹೆಚ್. ಜಯಪ್ರಕಾಶನಾರಾಯಣ್ :—ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿರತಕ್ಕ ಕಾಲೇಜು ವಿದ್ಯಾರ್ಥಿಗಳಿಗೆ ಎಕ್‌ಸ್ಟ್ರಾ ಬೋರ್ಡಿಂಗ್ ಚಾರ್ಜು ಕೊಡತಕ್ಕ ನಿಯಮವಿದ್ದರೂ ಸಕಾಲಕ್ಕೆ ಬರುವುದಿಲ್ಲ. ಎಕ್‌ಸ್ಟ್ರಾ ಬೋರ್ಡಿಂಗ್ ಚಾರ್ಜು ಮತ್ತು ಸ್ಕಾಲರ್‌ಷಿಪ್ ಎರಡೂ ಸೇರಿಸಿ ಒಟ್ಟು ಒಂದೇ ಸಾರಿ ಅವರಿಗೆ 125 ರೂಪಾಯಿ ಕೊಡತಕ್ಕ ರೀತಿಯಲ್ಲಿ ನಿಯಮ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಸಕಾಲದಲ್ಲಿ ಈ ವರ್ಷದಿಂದ ಅವರಿಗೆ ದೊರಕುವಂತೆ ಮಾಡಬೇಕೆನ್ನುವ ತೀರ್ಮಾನವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಅದರ ಜೊತೆಗೆ ಮಾನ್ಯ ಸದಸ್ಯರು 125 ರೂಪಾಯಿ ಕೊಡುವುದಕ್ಕೆ ಸಾಧ್ಯವಿಲ್ಲವೇ ಎಂದು ಕೇಳಿದರು. ಅದೂ ಕೂಡ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

Sri J. P. SARWESH.—I would like to know whether it is possible for Government to give whatever aid it gives, at the beginning of the academic year. Then only the voluntary organization can function well. What is happening now, is that after six months the aid is given. That will defeat the very object as voluntary organizations are very much discouraged.

Sri M. MALLIKARJUNASWAMY.—I agree with the Hon. Member. The voluntary organizations will have to undertake this effort of starting hostels in the beginning of the academic year.

ಶ್ರೀ ಪಿ. ಪಿ. ಹೆಗರೆ :—ವಾಲಂಟರಿ ಆರ್ಗನೈಜೇಷನ್ ಪ್ರಾರಂಭ ಮಾಡಿದರೆ ಸಹಾಯ ಮಾಡುವುದಾಗಿ ಹೇಳಿದ್ದಾರೆ. ಒಮ್ಮೆಗೇ ವಾಲಂಟರಿ ಆರ್ಗನೈಜೇಷನ್ ಮುಂದೆ ಬಂದು ಮಾಡುವುದು ಸಾಧ್ಯವೆಂದು ಕಾಣುವುದಿಲ್ಲ. ಆದ್ದರಿಂದ ಸರ್ಕಾರದವರು ಪ್ರತಿಯೊಂದು ಜಿಲ್ಲೆಯಲ್ಲಿಯೂ ನೂರು ವಿದ್ಯಾರ್ಥಿಗಳ ಸಲುವಾಗಿ ಹಾಸ್ಟಲ್ ಪ್ರಾರಂಭ ಮಾಡುವ ಬಗ್ಗೆ ವಿಚಾರ ಮಾಡುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :—ಹಾಸ್ಟೆಲ್ ಕಟ್ಟಡಗಳನ್ನು ಕಟ್ಟಿಸಬೇಕೆಂದು ಮಾತ್ರ ಯೋಚನೆ ಮಾಡಿದ್ದೇವೆ. ಹಾಸ್ಟೆಲ್ ಪ್ರಾರಂಭ ಮಾಡುತ್ತೇವೆಂದು ವಾಲಂಟರಿ ಆರ್ಗನೈಜೇಷನ್‌ಗಳು ಮುಂದೆ ಬಂದು ಕೆಲಸ ಮಾಡತಕ್ಕದ್ದು ಬಹಳ ಒಳ್ಳೆಯದು.

ESTABLISHMENT OF S.M.P. DISPENSARIES IN NORTH KANARA DISTRICT

893. Smt. RADHA BHAT (Ankola).—

Will the Minister for Health be pleased to state :—

(*a*) whether the Government is considering to establish S. M. P. Dispensaries in Mattighatta, Goli, Doranagiri of Sirsi Taluk and Hallurabalavalli Villages of Ankola Taluk in North Kanara District ;

(*b*) if so, when they will be established ?

Sri H. SIDDAVEERAPPA (Minister for Health).—

(*a*) No.

(*b*) Question does not arise.

ಶ್ರೀಮತಿ ರಾಧಾ ಭಟ್ :—(ಅ) ಭಾಗಕ್ಕೆ 'ಇಲ್ಲ' ಎಂದು ಹೇಳಿದ್ದೀರಿ. ಯಾವ ಕಾರಣದಿಂದ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ :—ಇವು ಹಳೇ ಕಾಲದ ಆಸ್ಪತ್ರೆಗಳು. ಆದಷ್ಟು ಮಟ್ಟಿಗೆ ಉತ್ತಮವಾದ ಆಸ್ಪತ್ರೆಗಳನ್ನು ಮಾಡಬೇಕು, ಹೆಚ್. ಯು. ಟಿ. ಮಾದರಿ ಆಸ್ಪತ್ರೆ ಮಾಡಬೇಕು ಮತ್ತು ಈಗಿರತಕ್ಕ ಆಸ್ಪತ್ರೆಗಳ ಗ್ರೇಡ್ ಸರಿಯಾಗಿಲ್ಲ. ಆದುದರಿಂದ ಈಗ ಏನು ಮಾಮೂಲಿನಿಂದ ನಡೆದುಕೊಂಡು ಬಂದಿದೆ, ಅವಷ್ಟನ್ನು ಇಟ್ಟುಕೊಂಡು ಹೊಸ ಆಸ್ಪತ್ರೆಗಳನ್ನು ತೆಗೆಯುವಾಗ ಹೆಚ್. ಯು. ಟಿ. ಆಸ್ಪತ್ರೆ ಮಾಡಬೇಕೆಂದಿದ್ದೇವೆ.

ಶ್ರೀಮತಿ ರಾಧಾ ಭಟ್ :—ಮಲೆನಾಡು ಪ್ರದೇಶದ ವಿಶಿಷ್ಟವಾದ ಪರಿಸ್ಥಿತಿಯನ್ನು ಗಮನಿಸಿ ಆಸ್ಪತ್ರೆ ತೆಗೆಯಲು ಇರುವ ನಿಯಮಗಳನ್ನು ಸಡಿಲಗೊಳಿಸುವ ವಿಚಾರವನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ :—ಅದನ್ನು ವಿಚಾರ ಮಾಡೋಣ. ಮಲೆನಾಡಿನಲ್ಲಿ 15 ಸಾವಿರ ಜನಸಂಖ್ಯೆ ಇರಬೇಕು ಎಂದರೆ ಕೆಲವು ಕಡೆ ಕಷ್ಟವಾಗಬಹುದು. ಅದನ್ನು ರಿಲ್ಯಾಕ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ :—ಉತ್ತರ ಕನ್ನಡ ಜಿಲ್ಲೆಯಲ್ಲಿ ಅದರಲ್ಲೂ ಸಿರ್ಸಿ, ಸಿದ್ದಾಪುರ ತಾಲ್ಲೂಕುಗಳಲ್ಲಿ ಬೊಂಬಾಯಿ ಸರ್ಕಾರದ ರೂಲ್ಸ್ ಪ್ರಕಾರವಾಗಿ ಎಸ್.ಎಂ.ಪಿ. ಔಷಧಾಲಯಗಳಿದ್ದು ಅವರಿಂದ ಅಲ್ಲಿರತಕ್ಕ ಜನಗಳಿಗೆ ಉಪಯೋಗವಾಗುತ್ತಿತ್ತು. ಈಗ ಇಂಥಾ ಔಷಧಾಲಯಗಳನ್ನು ಕೆಲವನ್ನು ಮುಚ್ಚಿಸಿಬಿಟ್ಟಿದ್ದೀರಿ. ಅದರಿಂದ ಅಲ್ಲಿರತಕ್ಕ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆಯಾದ್ದರಿಂದ ಅವುಗಳ. ಉಪಯೋಗವಾಗುವಂತೆ ಅವುಗಳನ್ನು ಮುಂದುವರಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ :—ಎಸ್. ಎಂ. ಪಿ. ಆಸ್ಪತ್ರೆಗಿಂತ ಉತ್ತಮ ದರ್ಜೆಯ ಆಸ್ಪತ್ರೆಗಳನ್ನು ಕೊಡಬೇಕೆಂಬ ಉದ್ದೇಶವಿದೆ ಎಂದು ಆಗಲೇ ಹೇಳಿದೆ. ಎಲ್ಲೆಲ್ಲಿ ಅವಶ್ಯಕತೆ ಇದೆ ಅಂಥ ಕಡೆ ಹೆಲ್ತ್ ಯೂನಿಟ್ ಟೈಪ್ ಆಸ್ಪತ್ರೆ ಮಾಡಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ. ಈಗಿರತಕ್ಕ ಸಬ್ಸಿಡೈಸ್ ಸ್ಕೀಂ ಆಸ್ಪತ್ರೆಗಳ ಬದಲಾಗಿ ಉತ್ತಮವಾದ ಆಸ್ಪತ್ರೆಗಳನ್ನು ಮಾಡಬೇಕು ಎಂದು ಯೋಚನೆ ಮಾಡಿದ್ದೇವೆ.

ಶ್ರೀಮತಿ ರಾಧಾ ಭಟ್ :—ಈ ಹಳ್ಳಿಗಳ ಜನರು ಬಹಳ ಕಷ್ಟಪಡುತ್ತಿದ್ದಾರೆ. ಅವರಿಗೆ ಎಷ್ಟು ಶೀಘ್ರಗತಿಯಿಂದ ಸೌಲಭ್ಯವನ್ನು ಒದಗಿಸಲಿಕ್ಕೆ ಯೋಚನೆ ಮಾಡಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ:—ಈಗಾಗಲೇ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರಿಂದ ಎಲ್ಲೆಲ್ಲಿ ಆಸ್ಪತ್ರೆ.ಗಳನ್ನು ತೆಗೆಯುವ ಅವಶ್ಯಕತೆ ಇದೆ ಅಂಥದನ್ನು ರಿಪೋರ್ಟ್ ಮಾಡಬೇಕು ಎಂದು ಕೇಳಿದ್ದೇವೆ ಅದು ಬಂದ ಮೇಲೆ ಅವಶ್ಯಕತೆ ಇದ್ದ ಕಡೆ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ :—ಎಸ್. ಎಂ. ಪಿ. ಆಸ್ಪತ್ರೆಯನ್ನು ಬದಲಾಯಿಸಿ ಉತ್ತಮ ದರ್ಜೆಯ ಆಸ್ಪತ್ರೆಯನ್ನು ಮಾಡಬೇಕು ಎನ್ನುವ ವಿಷಯವನ್ನು ಹೇಳುತ್ತಿದ್ದಾರೆ. ಈ ಆಸ್ಪತ್ರೆಯಲ್ಲಿದ್ದಂಥ ವೈದ್ಯರು ಈ ದಿವಸ ಒಂದು ರೀತಿಯಲ್ಲಿ ನಿರುದ್ಯೋಗಿಗಳಾಗಿದ್ದಾರೆ. ಅವರನ್ನು ಸಹ ಮುಂದುವರಿಸುವುದಕ್ಕೆ ಅವಕಾಶ ಮಾಡಿದರೆ ಈ ತೊಡಕು ನಿವಾರಣೆಯಾಗುತ್ತದೆ. ಉತ್ತಮ ದರ್ಜೆಯ ಆಸ್ಪತ್ರೆ ಮಾಡುವಾಗ ಅರ್ಹತೆ ಇದ್ದರೆ ಅಂಥವರಿಗೆ ಸರ್ಕಾರಿ ಉದ್ಯೋಗಸ್ಥರು ಎಂದು ಮುಂದುವರಿಸುವುದಕ್ಕೆ ಅವಕಾಶ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ:—ಅದನ್ನು ವಿಚಾರ ಮಾಡೋಣ.

ಶ್ರೀಮತಿ ರಾಧಾ ಭಟ್ :—ಸಂತತಿ ನಿಯಂತ್ರಣ ಪ್ರಚಾರವನ್ನು ಮಲೆನಾಡು ಭಾಗದಲ್ಲಿ ಕಡಮೆ ಮಾಡಲು ಸರ್ಕಾರ ಯೋಚಿಸಿದೆಯೋ ?

ಶ್ರೀ ಎಚ್. ಸಿದ್ದವೀರಪ್ಪ:—ಮಲೆನಾಡು ಮತ್ತು ಮೈದಾನ ಪ್ರದೇಶವೆಂದು ಅದರಲ್ಲಿ ವ್ಯತ್ಯಾಸ ಮಾಡಲು ಕಾರಣವಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :—ಮಲೆನಾಡಿನಲ್ಲಿ ಜನಸಂಖ್ಯೆ ಬಹಳ ಕಡಮೆ ಇರುವುದರಿಂದ ಜನನಾಶಕ ಯೋಜನೆ ತರುವುದಾದರೆ ಆಗ ಬರೀ ಕಾಡು ಮಾತ್ರ ಉಳಿಯಬಹುದಾದ ಪರಿಸ್ಥಿತಿ ಬರಬಹುದಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ:—ಮಲೆನಾಡಿನಲ್ಲಿ ಅಂಥ ಪರಿಸ್ಥಿತಿ ಇನ್ನೂ ಉದ್ಭವವಾಗಿಲ್ಲ. ಬಂದಾಗ ನೋಡೋಣ.

Sri K. SIDDAIAH.—Madam Speaker, I may be permitted to put question No. 823 as it is a very important question relating to Scheduled Caste and Scheduled Tribe. Since the Member is absent, I request the chair to put it.

ಅಧ್ಯಕ್ಷರು :—ಸದಸ್ಯರು ಇಲ್ಲದೆ ಇದ್ದರೆ ನಾನೂ ಏನೂ ಮಾಡುವುದಕ್ಕಾಗುವುದಿಲ್ಲ. ಪ್ರಶ್ನೆ ಕಳುಹಿಸಿದ ಮೇಲೆ ನಮ್ಮ ಪ್ರಶ್ನೆಗಳು ಬರುವುದಿಲ್ಲವೆಂದು ಹೇಳುತ್ತಾರೆ. ಪ್ರಶ್ನೆ ಬಂದಾಗ ಪ್ರಶ್ನೆ ಕೇಳುವವರೇ ಇರುವುದಿಲ್ಲ. ಇದು ಐದನೆಯ ಸಲವೋ ಏನೋ ಹೀಗೆ ಆಗುತ್ತ ಇರುವುದು. ಈ ರೀತಿ ಆಗಬಾರದು.

BOOKS PURCHASED FROM RASHTROTTHANA PARISHAT

888. Sri KAGODU THIMMAPPA (Sagar).—

Will the Minister for Education be pleased to state :—

(*a*) the value of the books purchased during 1971-72 and 1972-73 from Rashtrotthana Sahithya Parishat and Bharath Bharathy Book Society ;

(*b*) the names of the books so purchased and their authors ;

(*c*) to whom the books so purchased have been distributed ;

(*d*) the Institutions and the departments through which the books from the above said firms have been purchased and the amount of expenditure incurred by each of them ?

Sri A. R. BADARINARAYANA (Minister for Education).—

(*a*) There is no separate firm by name Bharatha Bharathy Book Society. The Rashtrotthana Parishat publishes the books of Bharatha Bharathy Pusthaka Sampada series. The details of the books purchased from Rashtrotthana Parishat :

1971-72	Rs. 2,700-25
1972-73	Rs. 2,37,132-00

(*b*) Details are furnished in the Statement placed on the Table of the House.*

(*c*) The books have been distributed to Senior Primary and Secondary Schools through the District Educational Officers.

(*d*) Books have been purchased through the Government Text Books Department. The Government is not required to incur any separate expenditure for distribution of books purchased in 1972-73 from Bharatha Bharathy Pusthaka Sampada series. The said expenditure of Rs. 11,475 at the rate of 5% has been deducted from the bills of the publishers.

ಶ್ರೀ ಕಾಗೋಡು ತಿಮ್ಮಪ್ಪ:—ರಾಷ್ಟ್ರೋತ್ಥಾನ ಪರಿಷತ್ತಿನವರಿಂದ ಸುಮಾರು 2,37,132 ರೂಪಾಯಿಗಳಷ್ಟು ಬೆಲೆಯುಳ್ಳ ಪುಸ್ತಕಗಳನ್ನು ಒಂದೇ ಸಾಲಿನಲ್ಲಿ ಎಂದರೆ 1972-73ನೇ

---

* Copy placed in the Mysore Legislature Library *vide* No. 35 Dated 1-5-1973.

ಸಾಲಿನಲ್ಲಿ ಏಕೆ ಖರೀದಿ ಮಾಡಿದಿರಿ ? ಮತ್ತು ಬೇರೆ ಯಾವುದಾದರೂ ಸಂಘ ಸಂಸ್ಥೆಗಳವರಿಂದಲೂ ಬುಕ್ಕುಗಳನ್ನು ಕೊಳ್ಳುತ್ತೇವೆಂದು ತಿಳಿಸಿದ್ದೀರಾ ಮತ್ತು ಹಾಗೆ ಕೊಟ್ಟಿರತಕ್ಕ ಪುಸ್ತಕಗಳನ್ನು ವಿತರಣೆ ಮಾಡಲು ಯಾವ ಅಧಿಕಾರಿಗಳಿಗೆ ಇದನ್ನು ವಹಿಸಿದ್ದೀರಿ ?

ಶ್ರೀ ಎ. ಆರ್. ಬದರೀ ನಾರಾಯಣ್:—ಇದೊಂದು ಯೋಜನೆ. ಪ್ರೈಮರಿ ಶಾಲಾ ಮಕ್ಕಳಿಗಾಗಿ ಲೈಬ್ರರಿ ಮತ್ತು ರೀಡಿಂಗ್ ರೂಂ ಫೀಸಿನ ಹೆಡ್‌ನಲ್ಲಿ ಪುಸ್ತಕಗಳನ್ನು ಕೊಂಡು ಕೊಂಡು ಎಲ್ಲ ಪ್ರೈಮರಿ ಶಾಲಾ ಮಕ್ಕಳ ಲೈಬ್ರರಿಗಳಿಗೆ ಹಂಚಬೇಕೆಂದು ವ್ಯವಸ್ಥೆ ಮಾಡಲಾಗಿದೆ, ಇದರಲ್ಲಿ ಉಪಯುಕ್ತವಾದ ಪುಸ್ತಕಗಳು ಬಂದಿವೆ ಮತ್ತು ಬಣ್ಣದ ಬಣ್ಣ ಪುಸ್ತಕಗಳೂ ಬಂದಿವೆ, ದೊಡ್ಡ ದೊಡ್ಡ ದೇಶದ ನಾಯಕರು ಹಾಗೂ ದೇಶ ಪ್ರೇಮಿಗಳು ಹಾಗೂ ಚರಿತ್ರಾರ್ಹವಾದ ಪುಸ್ತಕಗಳು ಇವೆ. ಇವನ್ನೆಲ್ಲಾ ಮಕ್ಕಳು ಚೆನ್ನಾಗಿ ಓದಿ ಗೊತ್ತಾಗಲಿ ಮತ್ತು ಎಲ್ಲ ಮಕ್ಕಳಿಗೂ ಅರ್ಥವಾಗುವ ರೀತಿಯಲ್ಲಿ ಇರುವಂತಹ ಪುಸ್ತಕಗಳು, ಇವನ್ನು ಲೈಬ್ರರಿ ಹಾಗೂ ರೀಡಿಂಗ್ ರೂಂ ಫೀಸುಗಳನ್ನು ವಸೂಲು ಮಾಡುವುದರಲ್ಲಿ ಕೊಂಡುಕೊಳ್ಳಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ :—ಇಷ್ಟೊಂದೂ ಬಲ್ಕ್ ಪರ್ಚೇಸು ಮಾಡಲು ಏನಾದರೂ ಸ್ಕೀಂನ್ನು ಮಾಡಿದ್ದೀರಾ ?

ಶ್ರೀ ಎ. ಆರ್. ಬದರೀ ನಾರಾಯಣ್ :—ಇದು ಬಲ್ಕ್ ಪರ್ಚೇಸ್ ಅಲ್ಲ. ಇದಕ್ಕಾಗಿಯೇ ಒಂದು ಪ್ರತ್ಯೇಕವಾದ ಪ್ರಾಜೆಕ್ಟ್ ಇದೆ. ಆ ರೀತಿಯಾದ ಯೋಜನೆ ಮಾಡಿ ಮಕ್ಕಳಿಗೆ ಇಂತಹ ಪುಸ್ತಕಗಳನ್ನು ಹಂಚಬೇಕೆಂದು ಮಾಡಲಾಗಿದೆ ಮತ್ತು ಇದಕ್ಕಾಗಿ ಒಂದು ಕಮಿಟಿ ಇದೆ. ಇದರಲ್ಲಿ ಎಷ್ಟು ಬೆಲೆಯ ಪುಸ್ತಕಗಳು ಇರಬೇಕೆಂದು ನಿರ್ಣಯ ಮಾಡುತ್ತದೆ, ಆ ನಿರ್ಣಯದಂತೆ ಮುಂದಿನ ಕ್ರಮ ತೆಗೆದುಕೊಳ್ಳುವವರು ಡೈರೆಕ್ಟರ್ ಆಫ್ ಟೆಕ್ಸ್ಟ್ ಬುಕ್ಸ್ ಎನ್ನುವ ಅಧಿಕಾರಿಗಳಿದ್ದಾರೆ, ಅವರು ಇದನ್ನು ನೋಡಿ ಅನುಮತಿ ಕೊಟ್ಟು ಆ ನಂತರ ಇದರ ಹಂಚಿಕೆಯನ್ನು ವ್ಯವಸ್ಥೆ ಮಾಡುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ :—ಇಲ್ಲಿ ಪುಸ್ತಕಗಳನ್ನು ಕೊಳ್ಳುವುದಕ್ಕೆ ಮುಂಚೆ ಈ ಯೋಜನೆ ಪ್ರಕಾರ ಇಂತಹ ಪುಸ್ತಕಗಳು ಬೇಕು ಎಂದು ಪ್ರಕಟಣ ಸಂಸ್ಥೆಗಳಿಂದ ಅರ್ಜಿಗಳನ್ನೇನಾದರೂ ಕೊಡಬೇಕೆಂದು ಕೇಳಿದ್ದಿರಾ ? ಹಾಗೆ ಬಂದ ಅರ್ಜಿಗಳೆಷ್ಟು ? ಮತ್ತು ಇದರ ಬಗ್ಗೆ ಪರಿಶೀಲನೆ ಮಾಡಿ ವಿತರಣೆ ಮಾಡಲು ಇದಕ್ಕಾಗಿ ಒಂದು ಕಮಿಟಿ ಮಾಡಿದ್ದೀರಾ ಹೇಗೆ ?

ಶ್ರೀ ಎ.ಆರ್. ಬದರೀ ನಾರಾಯಣ್:— ಡೈರೆಕ್ಟರ್ ಆಫ್ ಟೆಕ್ಸ್ಟ್ ಬುಕ್ಸ್ ಇವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಇದೆ, ಅವರೇ ಇದನ್ನೆಲ್ಲಾ ನೋಡಿಕೊಳ್ಳುತ್ತಾರೆ. ಇದರಲ್ಲಿ ಬೇರೆಯವರಿಂದ ಅರ್ಜಿಗಳನ್ನೇನೂ ಕರೆದಿಲ್ಲ. ಇದು ಪ್ರೈಮರಿ ಶಾಲಾ ಮಕ್ಕಳಿಗಾಗಿ ಮಾಡಿರುವ ಒಂದು ಯೋಜನೆ.

ಶ್ರೀ ಕಾಗೋಡು ತಿಮ್ಮಪ್ಪ :—ಈ ಯೋಜನೆ ಯಾವಾಗ ಬಂತು ? ಇದರ ಉದ್ದೇಶವಾದರೂ ಏನು ?

ಶ್ರೀ ಎ. ಆರ್. ಬದರೀ ನಾರಾಯಣ್ :—ಹಿಂದಿನಿಂದಲೂ ಇಂತಹ ಒಂದು ಪದ್ಧತಿ ಈ ಇಲಾಖೆಯಲ್ಲಿ ನಡೆದುಕೊಂಡು ಬಂದಿದೆ.

ಶ್ರೀ ಕಾಗೋಡು ತಿಮ್ಮಪ್ಪ :—ರಾಜ್ಯದಲ್ಲಿ ಇಂತಹ ಹಲವಾರು ಕನ್ನಡ ಪುಸ್ತಕಗಳನ್ನು ಪ್ರಕಟ ಮಾಡುವ ಸಂಸ್ಥೆಗಳಿವೆ. ಹಾಗಿರುವಾಗ ಇಲ್ಲಿ ಒಂದು ಯೋಜನೆ ಮಾಡುವಾಗ ಪುಸ್ತಕಗಳನ್ನು ಕೊಳ್ಳತಕ್ಕ ಕಾಲದಲ್ಲಿ ಇಂತಹ ಪ್ರಕಟಣ ಸಂಸ್ಥೆಗಳಿಂದ ಅರ್ಜಿಗಳನ್ನು ಕರೆದಿದ್ದಿರಾ?

ಹಾಗೂ ಕೆಲವು ರಿಜಿಸ್ಟರ್ಡ್ ಪುಸ್ತಕ ವ್ಯಾಪಾರಿಗಳು ಇರುವುದರಿಂದ ಅವರಿಂದ ಪುಸ್ತಕಗಳನ್ನು ಕೊಳ್ಳಲು ಏನಾದರೂ ಸ್ಕೀಂ ಮಾಡಿದ್ದಾರೆಯೇ ?

ಶ್ರೀ ಎ. ಆರ್. ಬದರೀನಾರಾಯಣ್ :—ನಾನಾಗಲೇ ಹೇಳಿದ ಹಾಗೆ ಇದೊಂದು ಪ್ರಾಜೆಕ್ಟು. ಇದರಲ್ಲಿ ಯಾವ ತರಹ ಪುಸ್ತಕಗಳು ಇರಬೇಕು ಮತ್ತು ಇದರಿಂದ ಎಷ್ಟು ಅನುಕೂಲವಾಗುತ್ತದೆ ಇವನ್ನೆಲ್ಲಾ ಪರಿಶೀಲನೆ ಮಾಡಲು ನಮ್ಮಲ್ಲಿ ಒಳ್ಳೆಯ ರೈಟರುಗಳಿದ್ದಾರೆ ಮತ್ತು ಎಂತಹ ಪುಸ್ತಕಗಳು ಬೇಕು ಎನ್ನುವುದನ್ನು ಸಲಹೆ ಮಾಡುತ್ತಾರೆ. ಇದಕ್ಕಾಗಿ ಪ್ರತ್ಯೇಕ ವಾಗಿ ಪುಸ್ತಕಗಳನ್ನು ತೆಗೆದುಕೊಳ್ಳತಕ್ಕ ಒಂದು ಪದ್ಧತಿ ಈ ಇಲಾಖೆಯಲ್ಲಿ ಮೊದಲಿಂದಲೂ ಬಂದಿರತಕ್ಕ ಪದ್ಧತಿ.

ಶ್ರೀ ಜಿ. ರಾಮೇಗೌಡ :—ಈ ಯೋಜನೆಯನ್ನು ಯಾರು ಹಾಕಿದ್ದು ? ಇಂತಹ ಯೋಜನೆ ಗಳನ್ನು ಬೇರೆ ಯಾರಾದರೂ ಕೊಟ್ಟರೆ ಅದರ ಮೇಲೆ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ರವರು ಏನಾದರೂ ಶಿಫಾರಸುಗಳನ್ನು ಸರಕಾರಕ್ಕೆ ಕಳುಹಿಸಿದ್ದಾರೆಯೇ ? ಆ ಶಿಫಾರಸಿಗನುಗುಣ ವಾಗಿ ಅವರಿಂದ ಬಂದ ನಿರ್ಣಯವನ್ನು ಒಪ್ಪಿದ್ದೀರಾ ?

ಶ್ರೀ ಎ. ಆರ್. ಬದರೀನಾರಾಯಣ್ :—ಸರಕಾರಕ್ಕೆ ಬರಬೇಕಾಗಿದ್ದರೆ ಅದು ಬೇರೆ ಪುಸ್ತಕಗಳನ್ನು ವಿಮರ್ಶೆ ಮಾಡಿ ಕಳುಹಿಸುವಾಗ ಬರುತ್ತದೆ. ಇದಕ್ಕೆ ಬೇರೆ ನಿಯಮಗಳಿವೆ. ಆ ಯೋಜನೆ ಪ್ರಕಾರ ವಿಮರ್ಶೆ ಮಾಡಿ ಇದರಲ್ಲಿರುವ ಸಾಧಕಬಾಧಕಗಳೇನು ಎನ್ನುವುದನ್ನು ನೋಡಿ ಸರಕಾರಕ್ಕೆ ಆಗ ಶಿಫಾರಸನ್ನು ಮಾಡುತ್ತಾರೆ. ಇದು ಬೇರೆ ಒಂದು ರೀತಿಯಾದ ಯೋಜನೆ. ಇದರಲ್ಲಿ ಇದು ಬರುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ :—ತಾವು ಯೋಜನೆ ಪ್ರಕಾರ ಕೊಂಡುಕೊಂಡಿರುವ ಪುಸ್ತಕಗಳಲ್ಲಿ ಪ್ರತಿಯೊಂದು ಪುಸ್ತಕವನ್ನು ಪರಿಶೀಲನೆ ಮಾಡಿ ಅದರಲ್ಲಿ ನಿಜವಾಗಿಯೂ ನಮ್ಮ ದೇಶದ ಚರಿತ್ರಾರ್ಹವಾದ ವಿಷಯಗಳಿವೆ. ನಿಜವಾದ ರಾಷ್ಟ್ರದ ನಾಯಕರ ಜೀವನವನ್ನು ಕುರಿತದ್ದಾಗಿದೆ ಎಂದು ಅದನ್ನು ಖಚಿತ ಪಡಿಸಿಕೊಂಡಿದ್ದೀರಾ ? ಅಥವಾ ಕೆಲವು ಪುಸ್ತಕಗಳಲ್ಲಿ ತಪ್ಪು ಕಲ್ಪನೆ ಬರುವಂತಹ ನಾಯಕರ ಚರಿತ್ರೆಗಳೂ ಏನಾದರೂ ಇವೆಯೇ ?

ಶ್ರೀ ಎ. ಆರ್. ಬದರೀನಾರಾಯಣ್ :—ಮಾನ್ಯ ಸದಸ್ಯರು ಹೇಳತಕ್ಕ ವಿಚಾರವನ್ನು ನಾನೂ ಒಪ್ಪುತ್ತೇನೆ. ಪಠ್ಯ ಪುಸ್ತಕಗಳಲ್ಲಿ ಪಕ್ಷ ಪಂಗಡಗಳಿಗೆ ಅಥವಾ ಮತ ಮತಗಳಿಗೆ ಭಿನ್ನಾಭಿಪ್ರಾಯಗಳು ಬರುವಂತಹ ಪುಸ್ತಕಗಳಿದ್ದರೆ ಅದನ್ನು ತೆಗೆಸಬೇಕು ಎನ್ನುವುದನ್ನು ಒಪ್ಪುತ್ತೇನೆ. ಈಗ ಬಂದಿರತಕ್ಕ ಪುಸ್ತಕಗಳಲ್ಲಿ ಇವನ್ನೆಲ್ಲಾ ಪರಿಶೀಲನೆ ಮಾಡಿದೆ. ಇದರಲ್ಲಿ ಅಂತಹ ಯಾವ ಭಿನ್ನಾಭಿಪ್ರಾಯಗಳೂ ಬಂದಿಲ್ಲ. ಬರತಕ್ಕ ಸಂದರ್ಭಗಳೂ ಇಲ್ಲ. ಹಾಗೇನಾ ದರೂ ಅದಂತಹ ತಪ್ಪುಗಳು ಬಂದಿದ್ದರೆ ಅವನ್ನು ಎಡಿಟ್ ಮಾಡಿ ಸರಿಯಾಗಿ ಮಾಡಲೂ ಅವಕಾಶವಿದೆ.

ಶ್ರೀ ಹೆಚ್. ಡಿ. ದೇವೇಗೌಡ :—ರಾಷ್ಟ್ರೋತ್ಥಾನ ಪರಿಷತ್ ಮೂಲಕ ಬರುವ ಪುಸ್ತಕಗಳು ಒಳ್ಳೆಯ ರೀತಿಯಲ್ಲೇ ಬರುತ್ತಿವೆ. ಇವುಗಳಲ್ಲಿ ಕೆಲವು ಪುಸ್ತಕಗಳನ್ನು ನಾನೂ ಓದಿದ್ದೇನೆ. ಇದೇ ರೀತಿ ಉತ್ತಮವಾದ ಪುಸ್ತಕಗಳು ಇತರ ಸಂಸ್ಥೆಗಳೂ ಮಾಡಿವೆ. ಇಂತಹ ಪುಸ್ತಕಗಳನ್ನು ಖರೀದಿ ಮಾಡುವ ಕಾಲದಲ್ಲಿ ಇದಕ್ಕಿರುವ ನಿಯಮಗಳನ್ನು ಸರಿಯಾಗಿ ಪಾಲನೆ ಮಾಡಲಿಲ್ಲವೇ ? ಬೇರೆ ಪ್ರಕಟಣ ಸಂಸ್ಥೆಗಳಿಂದ ಪುಸ್ತಕಗಳನ್ನು ಕೊಳ್ಳುವ ಬಗ್ಗೆ ಸರಕಾರ ಪರಿಶೀಲನೆ ಮಾಡುತ್ತದೆಯೇ ?

ಶ್ರೀ ಎ. ಆರ್. ಬದರೀನಾರಾಯಣ್ ;—ನಮಗೆ ಬಂದಿರತಕ್ಕ ಪುಸ್ತಕಗಳ ಬೆಲೆ 75 ಪೈಸೆ ಬೆಲೆ ಇದೆ. ಇದರಲ್ಲಿ ಶೇಕಡ 20 ರಷ್ಟು ಡಿಸ್‌ಕೌಂಟು ಕೊಟ್ಟಿದ್ದಾರೆ ಎಂದರೆ ಒಂದು

ಪುಸ್ತಕಕ್ಕೆ ಕೇವಲ 60 ಪೈಸೆ ಬೀಳುತ್ತದೆ, ಇದು ಸುಲಭವಾಗಿದೆ ಎಂದು ಅಂದಾಜು ಮಾಡಿ ಖರೀದಿ ಮಾಡಲಾಗಿದೆ.

ಶ್ರೀ ಕೆ. ವೆಂಕಟಪ್ಪ :—ಈ ಯೋಜನೆ ಬೇರೊಬ್ಬರಿಂದ ಸರಕಾರಕ್ಕೆ ಬಂತು ಎಂದರೆ ಇದು ಈಗ ಶಾಲೆಯಲ್ಲಿ ಓದತಕ್ಕ ಹುಡುಗರಿಗೆ ಯಾವ ರೀತಿ ಪುಸ್ತಕಗಳು ಆಗಿರಬೇಕು ಎನ್ನುವುದಕ್ಕೆ ರೂಲ್ಸುಗಳಿಲ್ಲವೇ ? ಅದರಂತೆ ಟ್ರೇನಿಂಗು ಕೊಡಲು ಅನುಕೂಲವಾಗಿದೆ ಎಂದು ತಾವು ಇದನ್ನು ಅಪ್ರೂವ್ ಮಾಡಿದ್ದೀರಾ ? ಇಲ್ಲವೇ ಅವರೇ ಕಳುಹಿಸಿದ ಪ್ರಾಜೆಕ್ಟ್ ಸರಿಯಾಗಿದೆ ಎಂದು ಮಾಡಿದ್ದೀರಾ ?

ಶ್ರೀ ಎ. ಆರ್. ಬದರೀನಾರಾಯಣ್:—ಒಬ್ಬರು ಒಂದು ಯೋಜನೆ ಕೊಡುತ್ತಾರೆ. ಇದನ್ನು ಟೆಕ್ಸ್ಟ್ ಬುಕ್ ಕಮಿಟಿಯವರು ವಿಮರ್ಶೆ ಮಾಡಿರುತ್ತಾರೆ. ವಿಮರ್ಶೆ ಮಾಡಿ ಇದು ಯೋಗ ವಾಗಿದೆಯೇ ಇಲ್ಲವೇ,ಇದರಿಂದ ಲಾಭವಾಗುತ್ತದೆಯೇ ಇಲ್ಲವೇ ಎನ್ನುವುದನ್ನೆಲ್ಲಾ ವಿಚಾರ ಮಾಡಿ ಸರಿಯಾಗಿ ಲಾಭದಾಯಕವಾಗಿದೆ ಎಂದು ತಿಳಿದರೆ ಅದರಂತೆ ವಿಮರ್ಶೆ ಮಾಡಿ ಮಾಡುತ್ತಾರೆ.

ಶ್ರೀ ವಿ. ಎಸ್. ಪಾಟೀಲ್ :—ಇದರಲ್ಲಿರುವ ಪುಸ್ತಕಗಳಲ್ಲಿ ರಾಷ್ಟ್ರೀಯ ಭಾವನೆಗೆ ವಿರೋಧ ವಾಗುವಂತಹ ಜೀವನ ಚರಿತ್ರೆಗಳು ಬಂದಿವೆಯೇ ? ಅಥವಾ ರಾಜಕೀಯ ನಾಯಕರುಗಳ ಚರಿತ್ರೆಯನ್ನು ವಿರೋಧವಾಗಿ ಪ್ರಕಟ ಮಾಡಿರುವ ಪುಸ್ತಕಗಳೇನಾದರೂ ಇವೆಯೇ ?

ಶ್ರೀ ಎ. ಆರ್. ಬದರೀನಾರಾಯಣ್ :—ಪುಸ್ತಕಗಳನ್ನು ನಾನೂ ನೋಡಿದ್ದೇನೆ. ಎಲ್ಲ ಒಳ್ಳೆಯ ವಿಚಾರವುಳ್ಳ ಪುಸ್ತಕಗಳು.

ಶ್ರೀ ಟಿ. ಆರ್. ಶಾಮಣ್ಣ :—ಬಂದಿರತಕ್ಕ ಪುಸ್ತಕಗಳಲ್ಲಿ ರಾಷ್ಟ್ರಹಿತಕ್ಕೆ ಧಕ್ಕೆಯಾಗುವಂತಹ ಪುಸ್ತಕಗಳೇನಾದರೂ ಬಂದಿವೆಯೇ ?

ಶ್ರೀ ಎ. ಆರ್. ಬದರೀನಾರಾಯಣ್ :—ಅಂತಹವುಗಳು ಇವೆ ಎಂದು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ನಾವು ಆಲೋಚನೆ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ :—ತಾವು ಪುಸ್ತಕಗಳನ್ನು ಕೊಂಡುಕೊಳ್ಳುವಾಗ ಈ ದೇಶಕ್ಕಾಗಿ ತ್ಯಾಗ ಮಾಡಿದ ಜನರು ಎಂದರೆ ಪುರಂದರದಾಸರಂತಹವರ ಪುಸ್ತಕಗಳನ್ನು ಬರೆದಿದ್ದಾರೆ. ಇನ್ನು ಬೇರೆ ಬೇರೆ ರಾಷ್ಟ್ರದ ನಾಯಕರುಗಳ ಚರಿತ್ರೆಗಳನ್ನು ಬರೆದಿರುವವರೂ ಇದ್ದಾರೆ, ಇಂತಹ ಪ್ರಕಟಣ ಸಂಸ್ಥೆಗಳಿಂದ ಬರೆದಿರುವ ಪುಸ್ತಕಗಳನ್ನೇಕೆ ತೆಗೆದುಕೊಳ್ಳಲಿಲ್ಲ. ಬೇರೆ ಸಂಸ್ಥೆಗಳನ್ನು ಬಿಟ್ಟು ಒಂದೇ ಒಂದು ಸಂಸ್ಥೆಯಿಂದ ಒಂದೇ ಒಂದು ವರ್ಷದಲ್ಲಿ ಸುಮಾರು 2.37 ಲಕ್ಷ ಚಿಲ್ಲರೆ ಬೆಲೆಯುಳ್ಳ ಪುಸ್ತಕಗಳನ್ನು ಸರಕಾರ ಏಕೆ ಕೊಂಡುಕೊಳ್ಳಬೇಕಾಗಿತ್ತು ? ರಾಜ್ಯದಲ್ಲಿ ಬೇರೆ ಇಂತಹ ಪ್ರಕಟಣೆ ಸಂಸ್ಥೆಗಳು ಇರಲಿಲ್ಲವೇನು? ಈ ಒಂದು ಸಂಸ್ಥೆಗೆ ಇಷ್ಟು ವಿಶೇಷವಾದ ಪ್ರೋತ್ಸಾಹ ಕೊಡಲು ಇದ್ದಂತಹ ಕಾರಣಗಳೇನು ?

ಶ್ರೀ ಎ. ಆರ್. ಬದರೀನಾರಾಯಣ್ :—ಇದರಲ್ಲಿ ಏನೂ ಅಂತಹುದಿಲ್ಲ. ತಾವು ಹೇಳುವಂತೆ ಬೇರೆ ಸಂಸ್ಥೆಗಳ ಪುಸ್ತಕಗಳೂ ಇವೆ ? ಎಂದರೆ ಅದನ್ನೂ ಪರಿಶೀಲಿಸುವುದಕ್ಕೆ ಅವಕಾಶವಿದೆ.

ಶ್ರೀ ಕೋಣಂದೂರು ಲಿಂಗಪ್ಪ :—ಇಂತಹ ಯೋಜನೆಗಳಿವೆ ಎಂದು ಮತ್ತು ನಮ್ಮ ಕರ್ನಾಟಕದ ಅನೇಕ ಕನ್ನಡ ಪ್ರಕಟಣಾ ಸಂಸ್ಥೆಗಳಿವೆ ಎಂದು ತಮ್ಮ ಗಮನಕ್ಕೆ ತರಲಿಲ್ಲವೇ? ಹಾಗೆ ಬೇರೆ ಸಂಸ್ಥೆಗಳು ಇದ್ದರೂ ಅವನ್ನು ಮರೆಮಾಚಿದಂತಹ ಅಧಿಕಾರಿಗಳ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎ. ಆರ್. ಬದರಿನಾರಾಯಣ್ :—ಇಂತಹವುಗಳು ಏನಾದರೂ ಇದ್ದರೆ ಅದಕ್ಕೆ ತಕ್ಷಣ ಗಮನ ಕೊಡುತ್ತೇನೆ.

ಶ್ರೀ ಜಿ. ರಾಮೇಗೌಡ :—ಈ ಯೋಜನೆಯನ್ನು ಮಾಡಿ ಎಷ್ಟು ವರ್ಷಗಳಾದವು? ಒಂದೇ ವರ್ಷದಲ್ಲಿ ಒಂದು ಸಂಸ್ಥೆಯಿಂದಲೇ ಸುಮಾರು 2.37 ಲಕ್ಷ ರೂಪಾಯಿ ಬೆಲೆಯ ಪುಸ್ತಕಗಳನ್ನು ಕೊಳ್ಳುವುದರ ಅವಶ್ಯಕತೆಯಾದರೂ ಏನಿತ್ತು?

ಶ್ರೀ ಎ. ಆರ್. ಬದರೀನಾರಾಯಣ್ :—ಇಂದು ನಮ್ಮ ದೇಶದಲ್ಲಿ ಸುಮಾರು 34 ಸಾವಿರ ಪ್ರೈಮರಿ ಶಾಲೆಗಳಿವೆ. ಇವನ್ನು ಎಲ್ಲ ಪ್ರೈಮರಿಶಾಲೆಗಳಿಗೂ ಹಂಚಲು ಆಗುವುದಿಲ್ಲ; ಇದರಲ್ಲಿ ಸುಮಾರು ಹತ್ತು ಸಾವಿರ ಪ್ರೈಮರಿ ಶಾಲೆಗಳಿಗೆ ಹಂಚಬಹುದು. ಇದನ್ನು ಲೈಬ್ರರಿ ಹಾಗೂ ರೀಡಿಂಗು ರೂಂ ಫೀಸು ಎಂದು ವಸೂಲು ಮಾಡಿರುವ ಹಣದಲ್ಲಿ ಖರೀದಿ ಮಾಡಿ ಹಂಚುವ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಸಿ. ಬೈರೇಗೌಡ :—ಈ ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ತಿನವರಿಗೂ ಆರ್. ಎಸ್. ಎಸ್. ನವರಿಗೂ ನೇರವಾದ ಸಂಪರ್ಕ ಇದೆ. ಈ ದೃಷ್ಟಿಯಿಂದ ತಾವು ಇದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುವುದು ಸರಿಯೇ

ಶ್ರೀ ಎ.ಆರ್. ಬದರಿನಾರಾಯಣ್ :—ಆ ಒಂದು ದೃಷ್ಟಿಯಿಂದ ಸರ್ಕಾರ ಅದನ್ನು ನೋಡುತ್ತಿಲ್ಲ; ಅವರ ಹತ್ತಿರ ಪುಸ್ತಕಗಳು ಇವೆ, ಅವರ ಹತ್ತಿರ ಒಳ್ಳೆಯ ಯೋಜನೆ ಇದೆ ಎಂದು ಪುರಸ್ಕಾರ ಮಾಡಿದ್ದು. ಇಂದು ಕಾಂಗ್ರೆಸ್‌ನವರು ಪುಸ್ತಕಗಳನ್ನು ಪ್ರಿಂಟ್ ಮಾಡಬಹುದು, ಇನ್ನೊಂದು ಪಾರ್ಟಿಯವರು ಪ್ರಿಂಟ್ ಮಾಡಬಹುದು, ನಾವು ಈ ಬಗ್ಗೆ ಪಾರ್ಟಿ, ಪಕ್ಷದ ದೃಷ್ಟಿಯಿಂದ ಹೋಗಿಲ್ಲ. ಪುಸ್ತಕಗಳು ಉಪಯೋಗವಾಗುತ್ತವೆಯೇ ಇಲ್ಲವೇ ಎಂಬುದನ್ನು ನೋಡಿಕೊಂಡು ಅದರ ಆಧಾರದಿಂದ ಇದನ್ನು ಮಾಡಿರುವುದು.

SCHEDULED CASTES/SCHEDULED TRIBES EMPLOYEES IN N. G. E. F.

823. Sri DODDA THIMMAIAH (Gulur).—

Will the Minister for Industries be pleased to state :—

(*a*) the total number of employees (Categorywise) in N. G. E. F. Ltd. ;

(*b*) of them, the number of Scheduled Castes/Scheduled Tribes (Categorywise) ?

Sri K. H. PATIL (Minister for Agriculture and Forests) [on behalf of Sri S. M. KRISHNA (Minister for Industries)].—

(*a*) and (*b*) The particulars are furnished in the Statements I and II appended.

STATEMENT I

Showing the number of employees of the NGEF, Ltd., on roll as on 27th March 1973 together with the number of persons belonging to Scheduled Castes Scheduled Tribes.

Sl. No.	Category		Total as on 27-3-1973	No. of Scheduled Castes/ Scheduled Tribes
1	Managers and above	...	5	...
2	Divisional Managers, Works Managers	...	13	
3	Chief of Dept./Deputy Divl. Managers	...	40	3
4	Senior Engineers	...	5	..
5	Technical Superintendents	...	70	3
6	Research Engineer	...	1	...
7	Section Officers	...	29	1
8	Senior Foremen	...	21	2
9	Junior Engineers	...	200	5
10	Programmers	...	3	...
11	Chemists	...	3	...
12	Foremen	...	49	2
13	Commercial Superintendents	...	37	...
14	Senior Draughtsmen	...	4	
15	Technical Supervisors	...	110	4
16	Commercial Supervisors	...	71	...
17	Draughtsmen	...	78	...
18	Staff Nurse	...	2	1
19	Senior Assistants	...	115	3
20	Senior Stenographers	...	13	...
21	Telephone Operators	...	3	...
22	Junior to Stenographers	...	57	4
23	Junior Assistants	...	175	4
24	Typists	...	7	2
25	Attenders	...	33	4
26	Peons	...	56	5
			1,220	43

STATEMENT II

Showing the number of persons employed in the NGEF Ltd., as on 1st March 1973, belonging to Scheduled Castes and Scheduled Tribes (Workers only).

Sl. No.	Category		Total as on 1-3-1973	Number of S. C.	S. T.
1	Unskilled workers	...	737	97	9
2	Semi-skilled workers	...	920	86	3
3	Skilled workers	...	696	29	4
	Total	...	2,353	212	16

Sri DODDA THIMMIAH : May I know whether the Government have issued strict instructions to all the factories, that the reservation order should be strictly enforced ?

Sri K. H. PATIL : We have issued instructions.

Sri DODDA THIMMIAH : In view of the fact that there is general indifference on the part of the authorities of the factories in recruiting scheduled castes, will the Government associate some non-officials in the recruitment committees of the factories ?

Sri K. H. PATIL : Government is very keen to enforce the representation of the scheduled castes which is guaranteed under the constitution in all the Government concerns. Therefore I do not think non-officials' association in any recruitment committee will give any remedy.

ಶ್ರೀ ಕೆ. ಸಿದ್ದಯ್ಯ :—ರಿಜರ್ವೇಷನ್ ಆರ್ಡರ್ ಎನ್‌ಫೋರ್ಸ್ ಮಾಡಬೇಕೆಂದು ಇನ್‌ಸ್ಟ್ರಕ್ಷನ್ಸ್ ಯಾವಾಗ ಇಸ್ಯೂ ಮಾಡಿದ್ದೀರಿ ? ಸರ್ಕಾರದವರು ಕೊಟ್ಟಿರುವ ಇನ್‌ಸ್ಟ್ರಕ್ಷನ್ಸ್ ಎನ್. ಜಿ. ಇ. ಎಫ್. ನವರಿಗೂ ಸಹ ಅನ್ವಯುವಾಗುವುದಿಲ್ಲವೇ ; ಹೇಗೆ ?

ಶ್ರೀ ಕೆ. ಹೆಚ್. ಪಾಟೀಲ್ :—ಈ ಬಗ್ಗೆ ಸರ್ಕಾರದವರು ಅವರಿಗೆ ಮತ್ತೊಂದು ಸಲ ಹೇಳಬೇಕಾಗಿಲ್ಲ. ಎಲ್ಲಿ ಕಾರ್ಪೊರೇಷನ್ ಅವರು ಮತ್ತು ಸರ್ಕಾರೀ ಕ್ಷೇತ್ರದ ಕೈಗಾರಿಕೆಗಳವರು ಕಾನ್‌ಸ್ಟಿಟ್ಯೂಷನ್ ಪ್ರಕಾರ ಈ ಜನಾಂಗದವರಿಗೆ 18 ಪರ್ಸೆಂಟ್ ಜಾಗಗಳನ್ನು ಕೊಡಲೇಬೇಕು. ಆದಕಾರಣ ಅದರ ಬಗ್ಗೆ ಪುನಃ ಪುನಃ ಅವರುಗಳಿಗೆ ಹೇಳಬೇಕಾಗಿಲ್ಲ. ಆದರೆ ಇಲ್ಲಿ ಅದರ ಪ್ರಕಾರ ಕೊಡದಿರುವುದು ತಪ್ಪು ಎಂದು ಸರ್ಕಾರ ಗಮನಿಸಿದೆ.

Sri DODDA THIMMIAH : This factory was established 12 years back and every time when we put questions, the answer given

is that they committed a mistake. Should we satisfy with this answer or will you take steps to see that adequate representation is given in the factory for the scheduled castes ? It is a sorrowful thing to see that even for unskilled jobs there is not adequate representation given to the scheduled castes ? Would you kindly do something ?

Sri K. H. PATIL : I myself am not satisfied with the representation given. Therefore I once again say that the Government will do its best. But the Hon. Members will appreciate that the Government cannot do all the thing in one day. We cannot disturb the seniority and rights vested in the persons already working there.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ :—ಮಾನ್ಯ ಮಂತ್ರಿಗಳು ಹೇಳಿದ ಉತ್ತರ ನೋಡಿದರೆ ಸರ್ಕಾರ ಮಾಡಿರುವ ಆಜ್ಞೆಯನ್ನು ಇವರು ಪರಿಪಾಲನೆ ಮಾಡದಿರುವುದು ಗೊತ್ತಾಗುತ್ತಿದೆ. ಇಲ್ಲಿ 1220 ಪೋಸ್ಟ್‌ಗಳ ಪೈಕಿ ಕೇವಲ 43 ಜಾಗಗಳನ್ನು ಮಾತ್ರ ಕೊಟ್ಟಿದ್ದಾರೆ. ಸರ್ಕಾರೀ ಆಜ್ಞೆಯಾದಮೇಲೆ ಇಲ್ಲಿಯವರೆಗೆ ಎಷ್ಟು ಅಪಾಯಿಂಟ್‌ಮೆಂಟ್‌ಗಳಾಗಿವೆ ಮತ್ತು 18 ಪರ್ಸೆಂಟ್ ರಿಜರ್ವೇಷನ್ ಏತಕ್ಕೆ ಕೊಡಲಿಲ್ಲ ಎಂಬುದನ್ನು ತಿಳಿಸಬೇಕು. ಸರ್ಕಾರದವರು ನಿಯಮದ ಉಲ್ಲಂಘನೆ ಮಾಡಿದವರ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕು. ಮತ್ತು 18 ಪರ್ಸೆಂಟ್ ರಿಜರ್ವೇಷನನ್ನು ಮೇಕಪ್ ಮಾಡುವುದಕ್ಕೆ ಡೈರಕ್ಷನ್ ಕೊಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್ :—ವೇಕೆನ್ಸಿ ಬಿದ್ದ ಹಾಗೆ ತೆಗೆದುಕೊಳ್ಳಬೇಕು ಎಂದು ಹೇಳಬಹುದು. ಆದರೆ ಈಗ ನೇಮಕವಾಗಿರುವ ಪೋಸ್ಟ್‌ಗಳ ಬಗ್ಗೆ ಬದಲಾವಣೆ ಮಾಡುವುದು ಇಂಡಸ್ಟ್ರಿಯಲ್ ಆಕ್ಟ್ ಪ್ರಕಾರ ಕಠಿಣವಾಗುತ್ತದೆ.

MADAM SPEAKER : Again I observe the Hon. Member Sri K. H. Hanume Gowda is not here to put his short notice Question. Now the Questions are over.

Questions for Answers on the Day
(But not taken up)

LAND GRANTED TO HYPROTEX FOODS PRIVATE LTD. FIRM IN HASSAN TALUK

445. Sri M. NANJE GOWDA (Gandasi).—

Will the Minister for Agriculture and Forests be pleased to state :—

(*a*) the extent of land granted to Hyprotex Foods Private Ltd. Firm at Thirumaladevaragudda Kaval of Saligrama Hobli in Hassan Taluk ;

(*b*) the condition stipulated while granting the land and their purpose ;

(*c*) whether the said conditions are fulfilled ;

(*d*) if not, the action taken or proposed to be taken by the Government ?

Sri K. H. PATIL (Minister for Agriculture and Forests).—

(*a*) 1,000 Acres.

(*b*) The land has been granted subject to the following conditions :—

1. The lease is for 30 years on a lease rent of Rs. 25 per acre per year with a right of renewal for a like period on a lease amount subject to a ceiling of Rs. 50 per acre per year.

2. The land should be used for the purpose for which it is granted.

3. The cattle maintained by the company should not be allowed for grazing in the surrounding regenerated forest areas.

4. The grantee should pay Rs. 27,594 together with interest representing the cost of plantations before taking possession of the land.

5. The lessee should utilise the land within 5 years by utilising 300 acres within 2 years, a further 200 acres before the end of 3 years, a further extent of 250 acres before the end of 4 years and the entire balance area before the end of 5 years.

6. Casein produced by the industry should be used for the manufacture of casein based food products by itself or sold to other industries for use in the production of casein based food products. The manufacture of casein and its diversion for industrial uses not connected with food products should be specially prohibited.

The above conditions are stipulated to see that the land is utilised for the purpose for which it has been granted.

(*c*) Not fully.

(*d*) The matter is under examination of Government as to further action to be taken against the Firm.

ALLOTMENT OF SUGAR TO WHOLE-SALE DEALERS IN MYSORE CITY

584. Sri K. PUTTASWAMY (Chamundeswari):—

Will the Minister of State for Food and Civil Supplies be pleased to state :—

(*a*) the names of whole-sale dealers in sugar in Mysore City and monthwar allotment of sugar to each of them during 1972 ;

(*b*) whether it is not a fact that only co-operative institutions were the whole-sale dealers in sugar till the year 1972 ;

(*c*) whether a merchant was allotted sugar during 1972 even though the Co-operative institutions were in a position to handle the same ;

(*d*) whether there was complaint that the entire quantity of sugar was managed to be sold as open market sugar ;

(*e*) whether there was an enquiry in this behalf and if so the result of the enquiry ?

Smt. E. E. VAZ (Minister of State for Food and Civil Supplies)—

(*a*)

SUGAR ALLOTTED (In quintals)

Name of the Whole-sale Nominee	January 1972	February 1972	March 1972	April 1972	May 1972	June 1972
1	2	3	4	5	6	7
1. M.D.C.C.W. Stores ; Mysore (Whole-sale Agent).	3,000	3,220	3,680	2,260	2,890	2,860
2. T.A.P.C.M. Society ; Mysore	1,500	1,000	1,000	1,000	1 630	1,500
3. Sri Vedavyasa Traders ; Parakal Mutt Buildings ; Santhepet, Mysore.	...	...	...	1,000	...	...

SUGAR ALLOTTED (In quintals)

Name of the Whole-sale Nominee	July 1972	August 1972	September 1972	October 1972	November 1972	December 1972
	8	9	10	11	12	13
1. M.D.C.C.W. Stores ; Mysore (Whole-sale Agent).	2,960	2,800	2,860	3,000	2,270	2,500
2. T.A.P.C.M. Society ; Mysore.	1,580	1,600	1,600	2,260	2,089	2,200
3. Sri Vedavyasa Traders ; Parakal Mutt Buildings ; Santhepet, Mysore.						

(*b*) Yes.

(*c*) Only during the month of April 72 a merchant was allotted sugar.

(*d*) There were complaints but not to the effect indicated in the question.

(*e*) Does not arise in view of reply to clause (*d*) above.

PREVENTION OF ELEPHANTISIS.

610. Sri DAMODARA MULKI (Mudabidri).—

Will the Minister for Health be pleased to state :—

(*a*) whether Government have conducted enquiry into the spreading of elephantisis in Mulki Town of South Kanara District ;

(*b*) if so, the details of the enquiry conducted ;

(*c*) the action taken by the Government to prevent the menace of this disease ?

Sri H. SIDDAVEERAPPA (Minister for Health).-

(*a*) Yes.

(*b*) As a result of an enquiry conducted in 1957 it was found that extent of infection of the disease was 6.4 per cent

and the number of persons suffering from this disease was 1.6 per cent. When an enquiry was reconducted in 1972 it was found that the infection of this disease was 4.5 per cent and the number of persons suffering from this disease was 0.7 per cent.

(*c*) The State Government have not taken up any independent programme to prevent the menance of this disease in Mulki Town. But the National Elephantisis Preventive Units have been established in Mangalore and Udipi Town Municipal areas of S. K. District and Gulbarga and Shorapur Town Municipal areas of Gulbarga District. In addition, the Panchayats of Coondapur, Puttur, Karkala of South Kanara District and the Panchayats of Batkal, Gokarna in N.K. District have been conducting programmes for prevention of elephantisis by obtaining the grant facilities from the Government in their respective areas.

SHORT NOTICE QUESTIONS AND ANSWERS

LANDS GIVEN TO HYPROTEX FOODS PRIVATE Ltd. IN HASSAN TALUK

58. Sri K. H. HANUME GOWDA (Hassan).—

Will the Minister for Agriculture and Forests be pleased to state :—

(*a*) the extent of acres and the purpose for which the land was given to Hyprotex Foods Private Ltd., in Hassan Taluk ;

(*b*) out of this, the number of acres of land is being utilised for growing specified crops ;

(*c*) the number of years fixed in the conditions laid down for fulfilling the purpose for which the land was given ;

(*d*) the programme taken up by the company in manufacturing the High Proteins food and the results thereof ?

Sri K. H. PATIL (Minister for Agriculture and Forests).—

(*a*) 1,000 acres. The land has been leased for setting up a farm to produce milk, eggs, soyabeans, etc., which are the main ingredients of High Protein food.

(*b*) 600 acres are developed but are not used for the specific purposes due to draught conditions.

(*c*) 5 years.

(i) 300 acres within a period of 2 years from 17th July 1969, *i.e.*, the date of execution of the agreement—*vide* clause 4 (*e*) of the agreement.

(ii) 200 acres before the end of 3rd year.

(iii) 250 acres before the end of 4th year.

(iv) 250 acres before the end of 5th year.

(*d*) The firm have sunk 10 tube wells in the area and brought sprinklers. They constructed storage sheds and have grown crops in some area. They have spent considerable amount to develop the area. It is too early to expect any result.

Calling Attention to matters of urgent Public Importance

(i) Re.: Failure of T.A.P.C.M. Society to render services to the Ryots

Sri B. SATHYANARAYANA SINGH (Hospet).—I call the attention of the Minister for Co-operation to the failure of T.A.P.C.M. Societies at Kudligi, Siruguppa, Kampli, Hadagalli, Harapanahalli and Hospet to render services to the ryots of those areas.

Sri A. SHANKARA ALVA (Minister for Co-operation).—I make the following statement :

The Taluka Agricultural Produce Co-operative Marketing Societies at Kudligi, Siruguppa, Kampli, Hadagalli, Harapanahalli, and Hospet have not failed completely. They are even now undertaking all their normal activities including supply of seeds, fertilisers and foodgrains.

Instances of misappropriation, mismanagement and misapplication of funds have been noticed and remedial action is being taken in all cases. In Hadagalli, the persons responsible for misappropriation have been prosecuted and action has also been taken to recover the money. In Hospet and Siruguppa,

inquiries are being held to fix up responsibilities. In Kudligi and Hadagalli where accounts books have been lost, the accounts are being reconstructed.

Remedial action is being taken in all cases by the Officers of the Department. Action to take over the Management of the Societies under Section 54 or to supersede them under Section 30 would be taken, if it is considered appropriate and necessary. The Officers of the Department have been asked to send periodical reports on the situation and the position will be reviewed from time to time.

ಶ್ರೀ ಬಿ. ಸತ್ಯನಾರಾಯಣಸಿಂಗ್ :—ಈ ವರದಿ ನೋಡಿದರೆ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ದುರ್ವ್ಯವಹಾರಗಳು ನಡೆಯುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಇಲ್ಲಿ Action to take over the Management of the societies under Section 54 or to supersede them under Section 30 would be taken, if it is considered appropriate and necessary ಎಂದು ಹೇಳಿದ್ದೀರಿ. ಇದರ ಪ್ರಕಾರ ತಕ್ಕ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಎಷ್ಟು ಕಾಲ ಬೇಕಾಗುತ್ತದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ :—ಈ 6 ಸೊಸೈಟಿಗಳಿಗೆ ಸಂಬಂಧಪಟ್ಟಂತೆ ಕೆಲವು ಸೊಸೈಟಿಗಳಲ್ಲಿ ಆಡಿಟ್ ಆಗಿಲ್ಲ, ಮತ್ತೆ ಕೆಲವು ಸೊಸೈಟಿಗಳಲ್ಲಿ ಮೊದಲಿನ ಅಧಿಕಾರವರ್ಗದವರು ಲೆಕ್ಕಪುಸ್ತಕಗಳನ್ನು ವಾಪಸ್ ಕೊಟ್ಟಿಲ್ಲ ; ಈ ಬಗ್ಗೆ ಪ್ರತಿಯೊಂದು ಕೇಸ್ ಬಗ್ಗೆಯೂ ಕೂಡ ನಿಯಮದ ಪ್ರಕಾರ ಕೆಲವು ಸಂದರ್ಭಗಳಲ್ಲಿ ಕ್ರಿಮಿನಲ್ ಕೇಸ್‌ಗಳನ್ನು ಫೈಲ್ ಮಾಡಲಾಗಿದೆ, ಮತ್ತೆ ಕೆಲವು ಸಂದರ್ಭಗಳಲ್ಲಿ ನಿಮ್ಮಿಂದ ಹಣವನ್ನು ಏತಕ್ಕೆ ವಸೂಲಿ ಮಾಡಬಾರದು ಎಂದು ನೋಟೀಸ್ ಕೊಟ್ಟು ಕೇಳಿದ್ದೇವೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಆಡಿಟ್ ರಿಪೋರ್ಟ್‌ನ್ನು ರೆವ್ಯೂ ಮಾಡುತ್ತಿದ್ದೇವೆ. ಸೆಕ್ಷನ್ 54 ಮತ್ತು ಸೆಕ್ಷನ್ 30 ರ ಪ್ರಕಾರ ಯಾವ ಯಾವ ಸೊಸೈಟಿಗಳ ಮೇಲೆ ಯಾವ ಯಾವ ಕ್ರಮ ಕೈಕೊಳ್ಳಬೇಕು ಎಂಬ ಬಗ್ಗೆ ಕೂಡಲೆ ಕಾರ್ಯಕ್ರಮ ಕೈಕೊಳ್ಳುತ್ತೇವೆ.

ಶ್ರೀ ಬಿ. ಸತ್ಯನಾರಾಯಣಸಿಂಗ್ :—ಈ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಗಳು ಸಮರ್ಪಕವಾಗಿ ಕೆಲಸ ಮಾಡದೆ ಇರುವುದರಿಂದ ರೈತರಿಗೆ ಗೊಬ್ಬರ ಮತ್ತು ಬೀಜ ಸಿಗದೆ ತೊಂದರೆಯಾಗುತ್ತಿದೆ. ಇದನ್ನು ನಿವಾರಣೆ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎ. ಶಂಕರ ಆಳ್ವ :—ಇಷ್ಟರವರೆಗೆ ತೊಂದರೆಯಾಗಿಲ್ಲ. ಎಲ್ಲ ಸೊಸೈಟಿಗಳವರು ಬ್ಯಾಂಕ್‌ನಿಂದ ಹಣ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಮತ್ತು ಈಗ ಕೆಲಸ ಮಾಡುತ್ತಿದ್ದಾರೆ. ತಾವು ಹೇಳುವಂಥ ಸ್ಥಿತಿಗೆ ಇನ್ನೂ ಬಂದಿಲ್ಲ.

(ii) Sub. : Termination of services of teachers of Taluk Board High Schools.

Sri S. M. SHEERANALY CHANDRASEKHAR (Hosanagara).—Madam, I call the attention of the Minister for Education to the termination of services of teachers of Taluk Board High Schools recently taken over by Government.

Sri A. R. BADARINARAYAN (Minister for Education).—Madam, in response to the Calling Attention Motion moved by the Hon. Member Sri S. M. Sheeranali Chandrasekhar, I wish to make the following statement :

In Government Order No. ED 40 SLB 70, dated 30-4-1971, sanction was accorded to the taking over of Municipal High Schools, Taluk Development Board High Schools and Town Panchayat High Schools run by the Local Bodies in the State to Government on consent basis. According to para 1 (7) of the above Government Order, staff appointments made by the Local Bodies after the date of receipt of D.O. letter No. ED 40 SLB 70, dated 8-4-1970 by the concerned Local Bodies shall not be recognised by the Government for purposes of absorption into Government service. Later on, on the proposal received from the Director of Public Instruction, as to how to treat the employees who have entered service in the Local Body High Schools after 8-4-1970 till 1-4-1971 for the purposes of absorption, it was clarified that the appointments made by the Local Bodies (teaching and ministerial) though made after 8-4-1970 and before 1-4-1971, if it is in conformity with the Rules of Recruitment and the accepted staffing pattern of the schools, they may also be absorbed into Government service.

In Government Order No. ED 15 LTS 72, dated 30th September 1972, it has been ordered that the schools referred to in the annexures to the Government Order No. ED 40 SLB 70, dated 30-4-1971, shall be deemed to have been taken over with effect from 1-4-1971, subject to the execution of agreement bonds, etc. It was further clarified in the Government letter No. ED 78 SLB 71, dated 6th October 1971 (Item 12) that from the date of take over *i.e.*, from 1-4-1971, the schools have become Government schools and the question of granting recognition, payment of grant-in-aid, etc., to these schools would not arise. In view of what is stated above, the Local Bodies were not competent to make appointments in the schools run by them which have been taken over by Government with effect from 1-4-1971. Therefore, the appointments, if any, made by the Local Bodies subsequent to 1-4-1971, are without Jurisdiction. On and after 1-4-1971, the Institutions having become Government Institutions, for the appointments to be made after 1-4-71,

the Rules of Recruitment, Reservation, etc., prescribed by the Department have to be followed. Appointments if any, made after 1-4-71 by the Local Bodies in the schools taken over by Government with effect from 1-4-1971 cannot be regularised as the Local Bodies had no powers to make such appointments and if the teachers and others so appointed irregularly by the Local Bodies were to be regularised, it would tantamount to by-passing the rules of recruitment, reservation, etc. In these circumstances, Government regret their inability to intervene in the matter of termination of services of teachers and others appointed by the Local Bodies in the taken over Local Body Schools on and after 1-4-1971.

ಶ್ರೀ ಎಸ್: ಎಂ. ಶೀರನಾಳಿ ಚಂದ್ರಶೇಖರ್ :—ಸ್ವಾಮಿ, ಸರ್ಕಾರದವರು ಈ ಶಾಲೆಗಳನ್ನು ತೆಗೆದುಕೊಂಡ ಮೇಲೆ ಉಪಾಧ್ಯಾಯರನ್ನು ನೇಮಕ ಮಾಡುವ ಪ್ರಶ್ನೆಯನ್ನು ನಾನು ಹೇಳಲಿಲ್ಲ, ಹಿಂದೆ ಈ ಶಾಲೆಗಳನ್ನು ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ಮೊದಲೇ ನೇಮಕ ಮಾಡಿರತಕ್ಕವರನ್ನು ಈ ಶಾಲೆಗಳನ್ನು ಸರ್ಕಾರದವರು ತೆಗೆದುಕೊಂಡಮೇಲೆ ಕೆಲಸದಿಂದ ತೆಗೆದಿದ್ದಾರೆ. ಅದರ ಬಗ್ಗೆ ನಾನು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೇನೆ. ಆದ್ದರಿಂದ ಆ ಉಪಾಧ್ಯಾಯರುಗಳನ್ನು ಏತಕ್ಕೆ ಕೆಲಸದಿಂದ ತೆಗೆದಿದ್ದಾರೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್ :— 1-4-1971 ರಲ್ಲಿ ಯಾವ ಯಾವ ತಾಲ್ಲೂಕ್ ಬೋರ್ಡ್ ಮತ್ತು ಮುನಿಸಿಪಲ್ ಹೈಸ್ಕೂಲುಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ, ಅಲ್ಲಿ ನೇಮಕ ಮಾಡಿದ್ದಂತಹ ಉಪಾಧ್ಯಾಯರುಗಳನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ಸರ್ಕಾರದವರು ಆ ಶಾಲೆಗಳನ್ನು ತೆಗೆದುಕೊಂಡಮೇಲೆ ಅಲ್ಲಿದ್ದಂತಹ ಉಪಾಧ್ಯಾಯರುಗಳ ಪೈಕಿ ಕೆಲವು ಉಪಾಧ್ಯಾಯರು ಕೆಲಸವನ್ನು ಕಳೆದುಕೊಂಡಿದ್ದಾರೆ. ಅವರು ಅರ್ಜಿಯನ್ನು ಕೊಟ್ಟರೂ ಏನೂ ಕ್ರಮ ತೆಗೆದುಕೊಂಡಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರೀನಾರಾಯಣ್ :— 1-4-1971 ರಲ್ಲಿ ಲೋಕಲ್ ಬಾಡೀಸ್ ವಶದಲ್ಲಿದ್ದ ಸ್ಕೂಲುಗಳನ್ನು ಸರ್ಕಾರದವರು ವಶಪಡಿಸಿಕೊಳ್ಳುವಾಗ ಯಾರು ಯಾರು ಅಲ್ಲಿ ಕೆಲಸದಲ್ಲಿ ಇದ್ದರೋ ಅವರುಗಳನ್ನು ಕೆಲಸದಿಂದ ತೆಗೆಯುವುದಿಲ್ಲ. ಅಂಥವರನ್ನು ಕೆಲಸದಿಂದ ತೆಗೆದಿರುವಂತಹ ನಿದರ್ಶನವನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ.

(iii) Sub. :—Lapse of grant sanctioned for acquisition of land for Hostel Building for Mangalore Government College.

Sri B. V. KAKKILAYA (Bantwal).—Madam, I call the attention of the Minister for Education to the situation that has arisen due to the lapse of grant sanctioned for acquisition of land for building a hostel for Mangalore Government College.

Sri A. R. BADARINARAYAN.—Madam, I wish to make the following statement :

It was decided at the meeting held in the Chief Minister's Chambers in August 1970 that special efforts should be made to have hostels for all Colleges. With this in view, the Principal, Government College, Mangalore was requested to select a suitable site in consultation with the Deputy Commissioner. A site was selected behind the Hall Hill Officers Quarters for the purpose. The land belonged to Government. But the Deputy Commissioner was not in favour of alloting the land as he was of the opinion that the location was not suitable for the construction of a Hostel. However, the Principal who was on the look out for another plot intimated that land measuring 2-66 acres in Survey No. 13/IA1 belonging to Shri W. E. Karkada was available for sale, and accordingly the Superintending Engineer was addressed on 14-5-1971 by the Director of Collegiate Education in Mysore, Bangalore to examine the proposal of the Principal and to furnish his opinion in the matter. He intimated to the Director of Collegiate Education in Mysore, Bangalore that the site was suitable for the construction of the Hostel building. The Director of Collegiate Education forwarded proposals to Government to accord administrative approval for the payment of acquisition charges.

Administrative sanction of Government was accorded in Government Order No. ED 22 MUN 72, dated 24-2-1972 to meet the expenditure which was estimated to be Rs. 1,33,000 from the provision made in the budget, under 52 Capital Outlay (Rs. 1,00,000 for fresh works) and 103 Capital Outlay (Rs. 50,000 for the construction of New Hostel building and expansion of existing Hostel).

The Superintending Engineer was, thereafter, addressed by the Director of Collegiate Education to take immediate action to acquire the land.

In the meanwhile the estimates for acquisition of land was called for from the executive Engineer, Mangalore and action was intimated to arrange for the publication of 4 (1) notification under the Land Acquisition Act in connection with the acquisition of the required land.

The notification under Section 4 (1) has been published in Part-II—I of the Gazette dated 31-8-1972. The Assistant Commissioner and Land Acquisition Officer, Mangalore has valued the land at Rs. 76,710 and requested for providing funds for the purpose. He has been intimated by the Director of Collegiate Education that the expenditure could be met under 50 Public Works for which a total provision of Rs. 3,50,000 is made in the budget, and to intimate immediately whether the land could be acquired before 31-3-1973, if the necessary funds are placed at his disposal. The Principal who was requested to contact the Assistant Commissioner in this behalf has reported that it will take some time to finalise the formalities and hence the payment towards acquisition charges cannot be made before 31-3-1973.

The Chief Engineer has also been requested to make provision for this item in the budget for 1973-74.

ಶ್ರೀ ಬಿ. ವಿ. ಕಕ್ಕಿಲಾಯ :—ತಮ್ಮ ಸ್ಟೇಟ್‌ಮೆಂಟಿನಲ್ಲಿರತಕ್ಕ ಒಂದೊಂದು ಪ್ಯಾರಾಗ್ರಾಫಿನಲ್ಲಿರುವ ತಾರೀಖುಗಳನ್ನು ನೋಡಿದರೆ ತಾವು ಜಮೀನನ್ನು 14-5-1971 ರಲ್ಲಿ ಸೆಲೆಕ್ಟ್ ಮಾಡಿದ್ದೀರಿ. ಆಮೇಲೆ ಅದಕ್ಕೆ 24-2-1972 ರಲ್ಲಿ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಮಾಡಿದರು. ಆಮೇಲೆ ಅದಕ್ಕೆ ಹಣವನ್ನು ಒದಗಿಸಿ ಆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು ಎಂದು 31-8-1972 ರಲ್ಲಿ ಆ ಕಾಲೇಜಿನ ಪ್ರಿನ್ಸಿಪಾಲರಿಗೆ ತಿಳಿಸಿದ್ದಾರೆ. ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂದು 31-8-1972 ರಲ್ಲಿ ಪ್ರಿನ್ಸಿಪಾಲರಿಗೆ ತಿಳಿಸಿದರೂ ಕೂಡ 31-8-1973 ರ ತನಕ ಆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡು ಕಟ್ಟಡವನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಿಲ್ಲ. ಇದನ್ನು ನೋಡಿದರೆ ಅವರು ಆಸಕ್ತಿಯನ್ನು ವಹಿಸಿಲ್ಲ ಎಂಬುದು ಸ್ಪಷ್ಟವಾಗಿದೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎ. ಆರ್. ಬದರೀನಾರಾಯಣ್ :—ಅಲ್ಲಿ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಆಗುವುದು ಸ್ವಲ್ಪ ನಿಧಾನವಾಗಿರುವುದರಿಂದ ಆ ಕೆಲಸ ಆಗುವುದು ನಿಧಾನವಾಗಿದೆ.

ಶ್ರೀ ಬಿ. ವಿ. ಕಕ್ಕಿಲಾಯ :—ಆದಷ್ಟು ಜಾಗ್ರತೆ ಹಾಸ್ಟಲ್ ಕಟ್ಟಡ ಬರುವ ಹಾಗೆ ಮಾಡುತ್ತೀರಾ ?

ಶ್ರೀ ಎ. ಆರ್. ಬದರೀನಾರಾಯಣ್ :—ಖಂಡಿತ ಮಾಡುತ್ತೇವೆ.

LEAVE OF ABSENCE TO SRI H. LINGA REDDY.—Grant of.

MADAM SPEAKER.—I have received a letter from the Hon. Member Sri H. Linga Reddy requesting for leave of absence from attending the current sittings of the House due to illness.

Is it the pleasure of the Assembly that permission be granted to Sri H. Linga Reddy for remaining absent from the current sittings of the House ?

Hon. MEMBERS.—Yes.

MADAM SPEAKER.—Permission to remain absent is granted.

Inadaquate relief measures taken in draught hit Areas

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್) :—ಮಾನ್ಯ ಆಹಾರ ಶಾಖೆಯ ಸಚಿವರು ನಮಗೆ 2-3 ಅಷ್ಯೂರೆನ್ಸ್ ಕೊಟ್ಟಿದ್ದರು. ಅದು ಏನೆಂದರೆ ಬರಗಾಲ ಪೀಡಿತ ಪ್ರದೇಶಗಳಿಗೆ ಅಕ್ಕಿ, ರಾಗಿ. ಜೋಳ ಕಳುಹಿಸುತ್ತೇವೆಂದು ಹೇಳಿದ್ದರು. ನಾನು ಇವೊತ್ತು ಬೆಳಿಗ್ಗೆ ಆ ಪ್ರದೇಶದಿಂದ ಬಂದಿದ್ದೇನೆ. ಅಲ್ಲಿ ಯಾವ ಫುಡ್‌ಗ್ರೈನ್ಸ್ ಕೂಡ ಇಲ್ಲ. ಒಂದು ಕೆ. ಜಿ. ಜೋಳಕ್ಕೆ 2-3 ರೂಪಾಯಿಗಳನ್ನು ಕೊಟ್ಟರೂ ಸಿಕ್ಕುವುದಿಲ್ಲ. ಅಲ್ಲಿಯ ಜನಗಳು ಹಸಿದ ಹೊಟ್ಟೆಯಲ್ಲಿ ಪರಿತಪಿಸುತ್ತಿದ್ದಾರೆ. ಮಾನ್ಯ ಆಹಾರ ಖಾತೆಯ ಸಚಿವರು ಆ ಪ್ರದೇಶಕ್ಕೆ ಆಹಾರ ಧಾನ್ಯವನ್ನು ಕಳುಹಿಸುತ್ತೇವೆ ಎಂದು ಹೇಳಿ ಅದನು ಕಳುಹಿಸದೆ ಅಲ್ಲಿಯ ಜನಗಳಿಗೆ ನಿರಾಶೆಯನ್ನುಂಟು ಮಾಡಿದೆ. ಆದ್ದರಿಂದ ದಯಮಾಡಿ ನಾನು ಈ ವಿಚಾರದಲ್ಲಿ ಕಳುಹಿಸಿರುವ ಅಡ್ಜರ್ನಮೆಂಟ್ ಮೋಷನ್ ಅನ್ನು ಅಲೋ ಮಾಡಿ ಆ ಬಗ್ಗೆ ಕೂಲಂಕಷವಾಗಿ ಡಿಸ್‌ಕಷನ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕರಮುಗಿದು ಬೇಡಿಕೊಳ್ಳುತ್ತೇನೆ.

ಅಧ್ಯಕ್ಷರು.—ನೋಟೀಸ್ ಕಳುಹಿಸಿದ್ದು ನನಗೆ ಗೊತ್ತಿದೆ. ಅದನ್ನು ಮಂತ್ರಿಗಳಿಗೆ ಕಳುಹಿದ್ದಾಗಿದೆ. ಅವರು ಏನಾದರೂ ಇದ್ದರೆ ನಾಳೆಯ ದಿವಸ ಸ್ಟೇಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದಾರೆ. ನಾಳೆಯ ದಿನ ಅಜೆಂಡಾದಲ್ಲಿ ಸೇರಿಸುತ್ತೇನೆ.

Sri H. S. SIDDAPPA.—Under Rule 312, I had given notice about draught conditions in Arsikere Taluk. I had written several letters to the Revenue Minister and the Minister for Co-operation; just to postpone the land revenue collection because people have no food to eat. I had also requested the Minister for Co-operation. ಅವರು ಹೇಳುವುದು ಹೇಳಲಿ : ಪುನಃ ಹಳೆಯ ರಾಗ ಹಿಡಿದರೆ ಕಷ್ಟವಾಗುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ :—ನಾಳೆಯ ದಿವಸ ಸ್ಟೇಟ್‌ಮೆಂಟ್ ಮಾಡಲಿ. ಅಲ್ಲಿಗೆ ಆಹಾರ ಧಾನ್ಯಗಳನ್ನು ಕಳುಹಿಸಿದ್ದೇವೆಂದು ಭರವಸೆ ಕೊಡುವ ರೀತಿಯಲ್ಲಿ ಅವರು ಹೇಳಿಕೆ ಕೊಡಬೇಕು. ಅಲ್ಲಿಗೆ ಅದನ್ನು ಕಳುಹಿಸಿದ್ದೇವೆಂದು ಹೇಳಿದರೆ ಸಾಕು.

ಅಧ್ಯಕ್ಷರು :—ಎಲ್ಲ ವಿಚಾರಗಳನ್ನು ಸರಿಯಾಗಿ ತಿಳಿದುಕೊಂಡು ಅಜೆಂಡಾದಲ್ಲಿ ಸೇರಿಸುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಅಲ್ಲಿ ಮಳೆ ಬೆಳೆ ಇಲ್ಲದೆ ಬಹಳ ತೊಂದರೆಯಾಗುತ್ತಿದೆ.

BUDGET ESTIMATES FOR 1973-74

DEMANDS FOR GRANTS

Demand Nos. 3, 10, 12, 13, 15B, 35 and 36

Sri D. DEVARAJ URS (Chief Minister).—Madam, on the recommendation of the Governor, I beg to move :

"That a sum not exceeding Rs. 2,41,34,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 3 'State Excise'."

"That a sum not exceeding Rs. 5,93,95,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 10 'General Administration (excluding Treasuries and Local fund Audit)'."

"That a sum not exceeding Rs. 1,12,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 12 'Jails'."

"That a sum not exceeding Rs. 14,34,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 13 'Police'."

"That a sum not exceeding Rs. 80,97,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 15 B 'Department of Information'."

"That a sum not exceeding Rs. 71,15,000 inclusive of the sum granted 'on account' be granted to the Government to defray the charges which will come in course of payment

during the financial year ending 31st day of March 1974, in respect of Demand No. 35 'Territorial and Political Pensions'."

"That a sum not exceeding Rs. 13,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 36 'Privy Purses and Allowances'."

MADAM SPEAKER.—Motion moved—

"That a sum not exceeding Rs. 2,41,34,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1974, in respect of Demand No. 3 'State Excise'."

All the other Demands are also before the House for discussion.

ಶ್ರೀ ಹೆಚ್.ಡಿ.ದೇವೇಗೌಡ (ಹೊಳೆನರಸೀಪುರ):—ಮಾನ್ಯ ಸಭಾಧ್ಯಕ್ಷಿಣಿಯವರೇ, ಈಗ ಏನು ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯ ಮುಂದೆ ಸಾಮಾನ್ಯ ಆಡಳಿತ, ಎಕ್ಸೈಜು, ಪೊಲೀಸ್ ಹಾಗೂ ಡಿಪಾರ್ಟ್‌ಮೆಂಟ್ ಆಫ್ ಇನ್‌ಫರ್‌ಮೇಷನ್—ಈ ಪ್ರಾಮುಖ್ಯವಾದಂಥ ಬೇಡಿಕೆಗಳನ್ನು ಇಟ್ಟಿದ್ದಾರೋ ಅವುಗಳ ಬಗ್ಗೆ ನಾನು ಮಾತನಾಡುವ ಕಾಲದಲ್ಲಿ ಕಳೆದ 25 ವರ್ಷಗಳಿಂದ ನಮ್ಮ ಆಡಳಿತದ ಅನುಭವದಿಂದ ಆಗಿರತಕ್ಕಂಥ ಒಂದು ಹೊಸ ಸಮಾಜವಾದ ಪದ್ಧತಿಯನ್ನು ಜಾರಿಗೆ ತರತಕ್ಕಂಥಾದ್ದಕ್ಕೆ ಯಾವ ಒಂದು ವಾತಾವರಣದಲ್ಲಿ ಅನುಭವಿಸಿಕೊಂಡು ಬಂದಿದ್ದೇವೆಯೋ ಆ ಅನುಭವದಿಂದ ಇಲಾಖೆಗಳಲ್ಲಿ ಅದರಲ್ಲಿಯೂ ಸಾಮಾನ್ಯ ಆಡಳಿತದಲ್ಲಿ ಸರ್ಕಾರದವರು ಹಲವಾರು ಮಾರ್ಪಾಡುಗಳನ್ನು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ನಾನು ಹೀಗೆ ಹೇಳುವ ಕಾಲದಲ್ಲಿ ಬಹು ಹೆಚ್ಚಿನ ಕಾಲವನ್ನು ಸಾಮಾನ್ಯ ಆಡಳಿತದ ಬಗ್ಗೆ ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಾರೆಂದು ನಾನು ತಿಳಿದಿದ್ದೆ. ಕಾರಣವಾದರೂ ಇಷ್ಟೇ. ರಾಷ್ಟ್ರದಲ್ಲಿ ಇನ್ನೊಂದು ಹೊಸ ರಾಜಕೀಯ ವಾತಾವರಣ ಮುಟ್ಟಿದಮೇಲೆ ಇವತ್ತು ಕಳೆದ 25 ವರ್ಷಗಳಲ್ಲಿ ಸಾಮಾಜಿಕ ನ್ಯಾಯ ಹಾಗೂ ಸಮಾಜದ ದಲಿತವರ್ಗದವರಿಗೆ, ಅದರಲ್ಲಿಯೂ ಸಮಾಜದಲ್ಲಿ ಉಪೇಕ್ಷಿಸಲ್ಪಟ್ಟ ಜನಾಂಗದವರಿಗೆ ಅನುಕೂಲಗಳನ್ನು ಮಾಡಿಕೊಡತಕ್ಕ ರೀತಿಯಲ್ಲಿ ನಾವು ಏನೊಂದು ಹೊಸ ವಾತಾವರಣವನ್ನು ನಿರ್ಮಾಣ ಮಾಡಿದಮೇಲೆ ಅದಕ್ಕೆ ಅನುಗುಣವಾಗಿ ನಮ್ಮ ಸರ್ವಿಸ್ ಕಂಡಿಷನ್ನಿನಲ್ಲಿ ಏನಾದರೂ ಮಾರ್ಪಾಡು ಆಗಿದೆಯೋ ಎಂಬುದನ್ನು ನಾನು ಪ್ರಶ್ನೆಮಾಡಬೇಕಾಗಿದೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಖಡಾಖಂಡಿತವಾಗಿ ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. 25 ವರ್ಷಗಳಿಂದ ಆಗಿರತಕ್ಕ ತಪ್ಪನ್ನು ಎತ್ತಿ ತೋರಿಸಬೇಕೆಂದು ನಿಶ್ಚಯಿಸಿದ್ದೇನೆ. ತಮ್ಮ ಅಧಿಕಾರ ಕಾಲಹರಣ ಮಾಡುವುದು ಬೇಡ. ಈಗಲೇ ಒಂದು ವರ್ಷ ಎರಡು ತಿಂಗಳು ಆದುವು. ಈ ಅವಧಿಯಲ್ಲಿ ಅವರಿಗೆ ಆಗಿರುವ ಅನುಭವ ಇವತ್ತು ಸಮಾಜದಲ್ಲಿರತಕ್ಕ ದೋಷಗಳ ನಿವಾರಣೆಗೆ ಹಾಗೂ ಸರ್ವಿಸ್ ಕಂಡಿಷನ್ನಿನಲ್ಲಿ ಮಾಡಬೇಕಾದ ಎಲ್ಲಾ ಏರ್ಪಾಡುಗಳನ್ನು ನೀವು ಮಾಡಿ. ಅದಕ್ಕೆ ಯಾರದೂ ಅಡ್ಡಿ ಇಲ್ಲವೆಂದು ನಾನು ಹೇಳುತ್ತೇನೆ. ಹೀಗೆ ಹೇಳುವಾಗ ಕೇವಲ ಅಧಿಕಾರಿಗಳ ಮೇಲೆ ಆರೋಪಣೆ ಮಾಡುವುದರಲ್ಲಿ ನಾನು ಮುಂದುವರಿಯುವುದರಲ್ಲಿ ಏನೂ ಅರ್ಥವಿಲ್ಲ.

ನಾನು ಪ್ರಧಾನ ಮಂತ್ರಿಗಳ ಭಾಷಣವನ್ನು ಈ ಸಂದರ್ಭದಲ್ಲಿ ಉಲ್ಲೇಖಮಾಡಿದರೆ ಅದು ಅಷ್ಟು ಉತ್ಪ್ರೇಕ್ಷೆ ಆಗಲಾರದು. ಸಮಾಜದಲ್ಲಿ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಮಾಡುವಾಗ ಅಧಿಕಾರಿಗಳಾದವರು ಅಡ್ಡಿ ಪಡಿಸುವ ಕೆಲವು ಸಂದರ್ಭಗಳೂ ಸಹ ಇವೆಯೆಂದು ಹೇಳಿರ ತಕ್ಕದ್ದನ್ನು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ. ಹಾಗೆ ಹೇಳುವಾಗ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಸೂಚನೆ ಕೊಡುತ್ತೇನೆ. ಕೇವಲ ಅಧಿಕಾರಿಗಳ ಮೇಲೆ ಆರೋಪಣೆಯೊಡ್ಡಿ ಇವತ್ತು ಪ್ರಗತಿಪರವಾದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಅಧಿಕಾರಿಗಳು ಅಡ್ಡಿ ಬರುತ್ತಾರೇದು ಹೇಳಿಕೊಂಡು ತಾವು ತಮ್ಮ ಕಾರ್ಯಭಾರದಿಂದ ನುಣಿಚಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವತ್ತು ಹೀಗೆ ಹೇಳುವಾಗ ಈ ಜನರಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟ್ ರಿಪೋರ್ಟ್ ಏನಿದೆಯೋ ಅದರ ಮೊದಲನೆ-ಪ್ಯಾರಾದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ :—

" The General Administration Department has under its control a large number of administrative activities which include among other things matters relating to services, their recruitment, morale and discipline, administrative improvements and integration of services. "

ನಾನು ಹೆಚ್ಚಿಗೆ ಇದರ ಬಗ್ಗೆ ಹೇಳಿರುವುದನ್ನು ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಇವತ್ತು ಆಡಳಿತದಲ್ಲಿ ಇಂಟಿಗ್ರೇಟ್, ಮೊರೇಲ್, ಮತ್ತು ಎಫಿಷಿಯನ್ಸಿ—ಇವು ನಮಗೆ ಒಂದು ಕಡೆ ಬೇಕು. ಮತ್ತೊಂದು ಕಡೆ ಸಾಮಾಜಿಕ ನ್ಯಾಯವನ್ನು ಒದಗಿಸಬೇಕಾಗಿದೆ. ಇವೆರಡರಲ್ಲಿ ಯಾವುದಾದರೂ ಒಂದು ತೀರ್ಮಾನ ಆಗಬೇಕು. ಇವತ್ತು ನಾವು ಬೆಳ್ಳಿಯ ಹಬ್ಬವನ್ನು ಆಚರಣೆ ಮಾಡಿದ್ದೇವೆ. 25 ವರ್ಷಗಳ ಅನುಭವದ ಸವಿಯನ್ನು ಊಟಮಾಡಿ ಆಚರಿಸಿದ್ದೇವೆ. ಕಳೆದ 25 ವರ್ಷಗಳಲ್ಲಿ ಏನು ಆಡಳಿತದಲ್ಲಿದ್ದಂತ ಕಹಿ ಮತ್ತು ಸಿಹಿ ಊಟಮಾಡಿದ್ದೇವೆಯೋ ಅದರ ಒಂದು ಆಧಾರದ ಮೇಲೆ ಇವತ್ತು ಸರ್ವಿಸ್ ಕಂಡೀಷನ್ಸಿನಲ್ಲಿರತಕ್ಕ ನಿಮ್ಮ ನಿಯಮಾವಳಿಯಲ್ಲಿ ಕೆಲವು ಮಾರ್ಪಾಡು ಗಳನ್ನು ಮಾಡಬೇಕಾಗುತ್ತದೆ. ಅವೆರಡರಲ್ಲಿಯೂ ನೀವು ಒಂದು ತೀರ್ಮಾನಕ್ಕೆ ಬರಬೇಕಾಗು ತ್ತದೆ. ಕಳೆದ 25 ವರ್ಷಗಳಲ್ಲಿ ಕೆಲವು ಜನಾಂಗದವರು ಉಪೇಕ್ಷಿಸಲ್ಪಟ್ಟಿದ್ದರೂ ಸಹ ಅವರಿಗೋಸ್ಕರ ಎಲ್ಲ ಸೌಲಭ್ಯಗಳನ್ನು ಕೂಡಲೇ ಕಲ್ಪಿಸಿಕೊಡಬೇಕು. ಅವರಿಗೆ ಇವತ್ತು ಸಾಮಾಜಿಕ ನ್ಯಾಯವನ್ನು ಕಲ್ಪಿಸುವುದರ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನಕೊಡಬೇಕು. ಸರ್ಕಾರದವರು ತಮ್ಮ ಒಂದು ದಿಟ್ಟನಿಲುವಿನಿಂದ ಹೋರಾಟಮಾಡಿ ಅದನ್ನು ಅವರಿಗೆ ಕಲ್ಪಿಸಿ ಕೊಡಬೇಕು. ನೀವು ಎಫಿಷಿಯನ್ಸಿ ಬಗ್ಗೆ ಗಮನಕೊಡುವುದಕ್ಕಾಗುವುದಿಲ್ಲ. ಪ್ರಾಮಾಣಿಕತೆಯ ಬಗ್ಗೆ ಲಕ್ಷ್ಯ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವೆರಡನ್ನೂ ಸೈಡ್ ಬೈ ಸೈಡ್ ಸರಿಮಾಡಿ ಕೊಂಡು ಹೋಗುವುದಕ್ಕಾಗುವುದಿಲ್ಲ. ಒಂದು ಕಡೆ ಎಫಿಷಿಯನ್ಸಿ ಮೇಂಟೇನ್ ಮಾಡುವು ದಾದರೆ, ಮತ್ತೊಂದು ಕಡೆ ಸಾಮಾಜಿಕ ನ್ಯಾಯದ ಬಗ್ಗೆ ಮಾನ್ಯತೆ ಕೊಡುವುದಾದರೆ, ಇವೆರಡನ್ನೂ ಸರಿದೂಗಿಸಿಕೊಂಡು ಮುಂದುವರಿಯುವುದಕ್ಕೆ ಸಾಧ್ಯ. ಸರ್ವಿಸ್ ಕಂಡೀಷನ್ಸಿನಲ್ಲಿ ನಾವು ರೂಲ್ಸನ್ನು ಜಾರಿಗೆ ತರುವಾಗ ಸ್ವಲ್ಪಮಟ್ಟಿಗೆ ಕಷ್ಟವಾಗುತ್ತದೆಂಬುದನ್ನು ನಿಮ್ಮ ಒಂದು ದೃಷ್ಟಿಯಿಂದ ನಾನು ಹೇಳುತ್ತೇನೆ. ಇವತ್ತು ಸೂಕ್ಷ್ಮರೀತಿಯಲ್ಲಿ ಪದೇ ಪದೇ ನಾನು ಆ ವಿಚಾರವಾಗಿ ಒತ್ತಿ ಹೇಳುತ್ತೇನೆ. ಈ ಸದನದಲ್ಲಿ ಒಂದು ವರ್ಷದಿಂದ ಏನೊಂದು ವಾದವನ್ನು ನಮ್ಮ ಮುಂದೆ ಇಟ್ಟುಕೊಂಡು ಬಂದಿದ್ದೀರೋ ಅದಕ್ಕೆ ಒಂದು ಅಂತ್ಯವಾಗಬೇಕು. ಆರ್ಟಿಕಲ್ 312ರ ಪ್ರಕಾರ ಏನೊಂದು ಆಲ್ ಇಂಡಿಯಾ ಕೇಡರ್ ಸೃಷ್ಟಿಮಾಡಬೇಕೆಂದಿದ್ದಾರೋ ಅದರ ಪ್ರಕಾರ ಕೇಂದ್ರ ಸರ್ಕಾರದ ವತಿಯಿಂದ ನೇಮಕಗಳು ಆಗುತ್ತಾ ಇರುವುದರಿಂದ ಅದರ ಬಗ್ಗೆ ಈ ಸಭೆಯಲ್ಲಿ ಈಗಾಗಲೇ ಪ್ರಸ್ತಾಪಮಾಡಿದ್ದೇವೆ.

ಈ ದಿವಸ ಕೂಡ ಮಾತೆತ್ತಿದರೆ ಇದೇ ಸಭೆಯಲ್ಲಿ ಶ್ರೀ ಆರ್ಮೊಗಂ ಮತ್ತು ಶ್ರೀ ಕಾಗೋಡು ತಿಮ್ಮಪ್ಪನವರು ಈ ಆಲ್ ಇಂಡಿಯಾ ಕೇಡರ್‌ನಲ್ಲಿ ನಾವು ಸಮಾಜದಲ್ಲಿ ಕೆಲವು ಜನಾಂಗದವರನ್ನು ಪದೇ ಪದೇ ಉಪೇಕ್ಷೆ ಮಾಡುತ್ತಿದ್ದೇನೆ ಎಂದು ಹೇಳುತ್ತಲೇ ಇದ್ದಾರೆ. ಇದಕ್ಕೆ ಇಂದಾದರು ಒಂದು ಅಂತಿಮ ರಾಗವನ್ನು ಹಾಡಲೇಬೇಕಾಗಿದೆ. ಇದಕ್ಕೆ ಅಂತಿಮ ರಾಗವನ್ನು ಹಾಡುವುದು ಎಂದರೆ--ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆ ಮತ್ತು ನಾವು ಏನು ಈ ಎಫಿಷಿಯನ್ಸಿ ಎಂದು ಕರೆಯುತ್ತೇವೆ—ಇವುಗಳನ್ನೆಲ್ಲಾ ಕೈಬಿಟ್ಟು ಇವಕ್ಕೆ ತಿಲಾಂಜಲಿಯನ್ನೀಯಬೇಕಾಗುತ್ತದೆ. ಇವುಗಳಿಗೆ ತಿಲಾಂಜಲಿಯನ್ನೀಯದೆ ಈಗ ಸಾಮಾಜಿಕ ನ್ಯಾಯವನ್ನು ದೊರೆಕಿಸಿಕೊಡುವುದಕ್ಕಾಗುವುದಿಲ್ಲ. ಅಂಥಾ ಒಂದು ಕಾರ್ಯಕ್ರಮವನ್ನು ಸರ್ಕಾರದವರು ಈಗ ಹಾಕಿಕೊಳ್ಳಬೇಕಾಗಿದೆ. ಆದರೆ ಇದರಲ್ಲಿ ಒಂದು ಸಿದ್ಧಾಂತ--ಏನೆಂದರೆ ಈ ಸಾಮಾಜಿಕ ನ್ಯಾಯ ಮತ್ತು ದಕ್ಷತೆ ಹಾಗೂ ಪ್ರಾಮಾಣಿಕತೆ ಇವುಗಳು ಒಟ್ಟಿಗೆ ಇರುವುದಕ್ಕೆ ಸಾಧ್ಯವಿಲ್ಲ. ಹಾಗೆ ಇವುಗಳನ್ನು ಸಾಧಿಸುವುದಕ್ಕೆ ಸಾಧ್ಯವಿದೆ ಎಂದು ನಮ್ಮ ಮುಖ್ಯ ಮಂತ್ರಿಗಳು ಹೇಳುವುದಾದರೆ ಈ ಎರಡನ್ನೂ ಸರಿದೂಗಿಸುವಂಥ ಒಂದು ಅಸ್ತ್ರ ನಿಮ್ಮಲ್ಲಿ ಏನಿದೆ ಎಂದು ಕೇಳುತ್ತೇನೆ ? ಈ ಸಮಾಜದ ಏರುಪೇರುಗಳಿಂದ, ಹೋರಾಟಗಳಿಂದ ಆಡಳಿತದಲ್ಲಿ ಕೆಲವು ಲೋಪದೋಷಗಳು ಆಗೇ ಆಗುತ್ತವೆ. ಅವುಗಳನ್ನು ಪರಿಹಾರ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕಾಗಿದೆ. ನಾವು ಈ ದಿವಸ ಈ ಆಲ್ ಇಂಡಿಯಾ ಕೇಡರ್ ಬಗ್ಗೆ ಮಾತನಾಡತಕ್ಕ ಕಾಲದಲ್ಲಿ ಈ ಅಧಿಕಾರಿಗಳಲ್ಲಿ ಏನಾದರೂ ಅದಕ್ಷತೆ ಇದೆಯೆಂಬುದಾದರೆ ಅದಕ್ಕೆ ಕಾರಣರು ಮುಖ್ಯ ಮಂತ್ರಿಗಳ ಮೊದಲುಗೊಂಡು ಕ್ಲಾಸ್ ಫೋರ್ ಸರ್ವೆಂಟ್‌ವರೆಗೂ ಇರತಕ್ಕ ಪ್ರತಿಯೊಬ್ಬರೂ ಕಾರಣ ಎಂದು ಹೇಳಬೇಕಾಗುತ್ತದೆ. ಈ ದಿವಸ ಅಧಿಕಾರಿಗಳಲ್ಲಿ ಅದಕ್ಷತೆ, ಅಪ್ರಮಾಣಿಕತೆ, ಇನ್ನೆಫಿಷಿಯೆನ್ಸಿ ಇತ್ಯಾದಿಗಳಿದ್ದರೆ ಅದಕ್ಕೆ ಮುಖ್ಯ ಮಂತ್ರಿಗಳಿಂದ ಹಿಡಿದು ಕಡೇ ದರ್ಜೆಯ ನೌಕರರವರೆಗೂ ಇರತಕ್ಕ ಜನರೇ ಕಾರಣ ಎಂದು ಹೇಳುತ್ತೇನೆ. ಆದರೆ ನಾನು ಈ ಮಾತುಗಳನ್ನು ಹೇಳುತ್ತಿರುವಾಗ ನನ್ನ ಮನಸ್ಸಿನಲ್ಲಿ ನಾನು ಯಾವ ಒಬ್ಬ ಅಧಿಕಾರಿಯನ್ನೂ ಇಟ್ಟುಕೊಂಡು ಮಾತನಾಡುತ್ತಿಲ್ಲ. ಇದಕ್ಕೆ ಮುಖ್ಯವಾಗಿ ಶ್ರೀಮಾನ್ ದೇವರಾಜ ಅರಸ್ ಅವರೊಬ್ಬರೇ ಕಾರಣ ಎಂದು ಹೇಳುವುದಕ್ಕೆ ನಾನು ಸಿದ್ಧವಾಗಿಲ್ಲ. ನಮಗೆ ಎಂದು ಸ್ವರಾಜ್ಯ ಬಂದಿತೋ ಅಂದಿನಿಂದಲೂ ಮಂತ್ರಿ ಮಂಡಲದಲ್ಲಿದ್ದವರೆಲ್ಲಾ ಇದಕ್ಕೆ ಸಾಮೂಹಿಕವಾಗಿ ಜವಾಬ್ದಾರರಾಗಬೇಕಾಗುವುದು. ಆಡಳಿತದಲ್ಲಿ ದಕ್ಷತೆ ಹಾಗೂ ಪ್ರಾಮಾಣಿಕತೆಗಳು ಹೆಚ್ಚಬೇಕಾದರೆ ಇದು ಮೇಲಿರತಕ್ಕ ಮಂತ್ರಿಗಳಿಂದಲೂ ಪ್ರಾರಂಭವಾಗಬೇಕಾಗಿದೆ. ಅಲ್ಲಿ ಅದು ಪ್ರಾರಂಭವಾಗದಿದ್ದರೆ ಮತ್ತೆ ಎಲ್ಲಿಯೂ ಅದಕ್ಕೆ ಸ್ಥಳವೇ ಇಲ್ಲ. ಈ ಶಾಸನ ಸಭೆಯು ಇನ್ನೇನು ಪ್ರಾರಂಭವಾಗುವುದಕ್ಕೆ ಒಂದೆರಡು ದಿನಗಳಿದೆ ಎನ್ನುವಾಗ ಮುಖ್ಯಮಂತ್ರಿಗಳಾಗಿದ್ದ, ಇನ್ನೂ ಅಲ್ಲಿತಾನೆ, ಶ್ರೀಮಾನ್ ಡಿ. ದೇವರಾಜ ಅರಸರು ಈ ಶಾಸಕರಿಗೆಲ್ಲಾ ಒಂದು 'ಕೋಡಾಫ್ ಕಾಂಡಕ್ಟನ್ನು' ಜಾರಿಗೆ ತರುವುದಾಗಿ ಹೇಳಿದ್ದರು. ಆದರೆ ಆ ಪ್ರಶ್ನೆ ಈಗ ಎಲ್ಲಿಗೆ ನಿಂತಿದೆ ? ಈ ದಿವಸ ಶಾಸಕರ ಕರ್ತವ್ಯವೇನು ಅವನ ನೀತಿ ನೇಮಗಳನ್ನು ಪ್ರಶ್ನೆ ಮಾಡತಕ್ಕಂಥ ಒಂದು ಪ್ರಜ್ಞೆ ಜನರಲ್ಲಿ ಬೆಳೆದಿದೆ. ಇವರು ಆ ಕೋಡಾಫ್ ಕಾಂಡಕ್ಟನ್ನು ತರಲಿ ಬಿಡಲಿ, ಜನರೇ ಈ ದಿವಸ ಅದನ್ನು ಪ್ರಶ್ನೆ ಮಾಡತಕ್ಕ ಕಾಲ ಬಂದಿದೆ. ಇದು ಹಿಂದಿದ್ದ ಹಾಗಲ್ಲ. ಹಿಂದೆ ಅಠಾರಾ ಕಛೇರಿಯಲ್ಲಿ ಚಿನ್ನದ ದಂಡವನ್ನು ಮುಂದೆ ಹಿಡಿದುಕೊಂಡು ಬರುತ್ತಿದ್ದರೆ ಅವರ ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಕೆ. ಹನುಮಂತಯ್ಯನವರು ಮತ್ತು ಬೆಳ್ಳಿದಂಡವನ್ನು ಹಿಡಿದು ಬರುವವರ ಹಿಂದೆ ಶ್ರೀ ಸಿದ್ದವೀರಪ್ಪನವರಂಥ ಸಾಮಾನ್ಯ ಮಂತ್ರಿಗಳು ಬರುತ್ತಿದ್ದ ಕಾಲ ಈಗ ಹೋಯಿತು. ಈ ದಿವಸ ಜನರಲ್ಲಿ ಪ್ರಜ್ಞೆ, ದಕ್ಷತೆ ಮೂಡಿವೆ. ಆಡಳಿತದಲ್ಲಿ ಮೊಟ್ಟಮೊದಲನೇಯದಾಗಿ ಮಂತ್ರಿಗಳು ತಮ್ಮ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ದಕ್ಷತೆ ಇಂದ ಪ್ರಾಮಾಣಿಕತೆಯಿಂದ ಕೆಲಸ ಮಾಡದಿದ್ದರೆ ಮುಂದೆ ಬಹಳ ಕಷ್ಟಕ್ಕೆ ಬರುತ್ತದೆ. ಆದುದರಿಂದ ಅವರು ತಮ್ಮ ಆಡಳಿತದಲ್ಲಿ ತಮ್ಮ ಧೋರಣೆಗಳನ್ನು ತಿದ್ದಿ ಸರಿಪಡಿಸಿಕೊಳ್ಳಬೇಕು ; ಕೆಲವನ್ನು ಕೂಡಲೆ ಬದಲಾವಣೆ

ಮಾಡಿಕೊಳ್ಳಬೇಕು. ನನಗೆ ಹೇಳಬೇಕೆಂದರೆ ಈ ವಿಚಾರದಲ್ಲಿ ಹಲವಾರು ನಿದರ್ಶನಗಳು ನನಗೆ ಗೊತ್ತಿದೆ. ಆದರೆ ನಾನು ಯಾರ ಮುಖಕ್ಕೂ ಟಾರನ್ನು ಬಳಿಯಬೇಕೆಂಬ ಇಚ್ಛೆ ನನಗಿಲ್ಲ. ಆದರೆ ನಾನಂತೂ ಅವರಿಗೆ ಖಚಿತವಾಗಿ ಇಷ್ಟು ಮಾತ್ರ ಹೇಳುತ್ತಿದ್ದೇನೆ—ಅವರು ತಮ್ಮ ವರ್ತನೆಯನ್ನು ಮತ್ತು ತಮ್ಮ ಕಾರ್ಯವ್ಯಾಪ್ತಿ ಮತ್ತು ನಿರ್ವಹಣೆಯ ಕ್ರಮ ಮತ್ತು ನೀತಿಗಳನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ದಿವಸ ಒಬ್ಬ ಸೀನಿಯರ್ ಪೋಸ್ಟ್ ಅಧಿಕಾರಿ ಒಬ್ಬ ಮಂತ್ರಿಗಳನ್ನು ನೋಡುವುದಕ್ಕೆ ಅವರ ಛೇಂಬರಿಗೆ ಹೋದಾಗ ಅವರನ್ನು ಆ ಸಚಿವರು ಕ್ಲಾಸ್ ಫೋರ್ ಸರ್ವೆಂಟಿಗಿಂತಲೂ ತುಚ್ಛವಾಗಿ ಅವಾಚ್ಯ ಶಬ್ದಗಳನ್ನು, ಅಷ್ಟು ಕೀಳುಮಟ್ಟದಲ್ಲಿ ಬಳಸುವುದಾದರೆ, ನಾನು ಇದನ್ನು ಬಣ್ಣ ಹಚ್ಚಿ ಹೇಳುತ್ತಿಲ್ಲ, ಯಾವ ಅಧಿಕಾರಿಯೂ ಪ್ರಾಮಾಣಿಕನಾಗಿ ಉಳಿಯುವುದಕ್ಕೆ ಸಾಧ್ಯವಿಲ್ಲ. ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಸಹೋದ್ಯೋಗಿಗಳಿಗೆ ದಯವಿಟ್ಟು ಈ ವಿಚಾರದಲ್ಲಿ ತಮ್ಮ ನಡೆಯನ್ನು ಬದಲಾವಣೆ ಮಾಡಿಕೊಳ್ಳುವಂತೆ ಬುದ್ಧಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಮಂತ್ರಿಗಳು ತಮ್ಮ ಇತಿಮಿತಿಗಳನ್ನು ಅರಿತು ನಡೆಯಬೇಕು. ಅವರ ಇಂಥಾ ಒಂದು ವರ್ತನೆಯಿಂದ ಈಗಿನ ಮಂತ್ರಿ ಮಂಡಲಕ್ಕೆ ಖಂಡಿತ ಒಳ್ಳೆಯ ಹೆಸರು ಬರುವುದಿಲ್ಲ; ಎಂಬುದಾಗಿ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಲ್ಲಿಚ್ಛಿಸುತ್ತೇನೆ. ಆದರೆ ಆ ಹೊಸಬಿಸಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಾವು ಅಧಿಕಾರವನ್ನು ವಹಿಸಿಕೊಂಡ ದಿನವೋ ಅಥವಾ ಅದರ ಮಾರನೆ ದಿನವೋ—ನಾನು ಪ್ರತಿಯೊಂದು ಹಳ್ಳಿಗೂ ಹೋಗಿ ಅಲ್ಲಿ 3-4 ದಿನಗಳು ಉಳಿದು ಅಲ್ಲಿ ಜನರ ಕಷ್ಟ ಸುಖಗಳೇನೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡುತ್ತೇನೆಂದು ಅವರು ಹೇಳಿದ್ದಾರೆ. ಆದರೆ ಆ ಹೊಸ ಬಿಸಿಯಲ್ಲಿ ಹಾಗೆ ಹೇಳಿಬಿಟ್ಟಾಕ್ಷಣಕ್ಕೆ ಅವರಿಗೆ ಹಾಗೆ ಮಾಡುವುದಕ್ಕೆ ಕಾಲಾವಕಾಶ ಎಲ್ಲಿದೆ ? ಸರ್ಕಾರದಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಮಂತ್ರಿಗಳಿಂದ ಸಾಧ್ಯವಾಗದು—ಅದಕ್ಕೆ 216 ಜನ ಶಾಸಕರೂ ಸಹಾಯ ನೀಡಬೇಕು. ಇದನ್ನು ಪ್ರತಿಹಂತದಲ್ಲೂ ನಿಗಾ ಇಟ್ಟು ನೋಡುತ್ತಿರಬೇಕು. ಉದಾಹರಣೆಗೆ ಮಂತ್ರಿಗಳು ಕೆಲವು ಕಡೆ ಪ್ರವಾಸ ಹೋದಾಗ ಅಲ್ಲಿ ತಮ್ಮ ಜೊತೆಯಲ್ಲಿ 40–50 ಜನರನ್ನು ಕೂಡಿಸಿಕೊಂಡು ಊಟ ತಿಂಡಿಗಳನ್ನು ನಡೆಸಬೇಕಾದರೆ ಅಲ್ಲಿ ಖರ್ಚೆಷ್ಟು ಬರುತ್ತದೆ ? ನನಗೆ ಖಚಿತವಾಗಿ ತಿಳಿದುಬಂದಿದೆ—ಕೆಲವು ಸಂದರ್ಭಗಳಲ್ಲಿ ಮಂತ್ರಿಗಳು ಪ್ರವಾಸ ಮಾಡಿದ ಕಡೆ 700–800 ರೂಪಾಯಿಗಳ ಖರ್ಚು ಬಂದಿದೆ. ಅಂದಾಗ ಅಲ್ಲಿ ಆ ಖರ್ಚನ್ನು ನೋಡಿಕೊಳ್ಳತಕ್ಕ ಆ ಬಡಪಾಯಿ ನೌಕರನ ಗತಿಯೇನು ? ಅವನು ಅಷ್ಟು ಹಣವನ್ನು ಎಲ್ಲಿಂದ ತಂದು ಕೊಡಬೇಕು ? ಹೀಗಾದರೆ ಆಡಳಿತದಲ್ಲಿ ಮಂತ್ರಿಗಳು ಸತ್ಯಸಂಧತೆ ಮತ್ತು ದಕ್ಷತೆಗಳನ್ನು ಬೆಳೆಸುವುದಾದರೂ ಹೇಗೆ ? ಉಳಿಸುವುದಂತೂ ಸ್ವಪ್ನಪ್ರಾಯ. ಇವರಿಗೆ ಮುಖ್ಯ ಮಂತ್ರಿಗಳು ಏನು ಕೋಡಾಫ್ ಕಾಂಡಕ್ಟನ್ನು ಮಾಡಿದ್ದಾರೆ ? ನಾನೂ ಕೂಡ ಈ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಅಧ್ಯಕ್ಷನಾಗಿ ಅನೇಕ ಕಡೆಗಳಲ್ಲಿ ಪ್ರವಾಸ ಮಾಡಬೇಕಾಗುತ್ತದೆ. ಅಲ್ಲಿ ಸ್ಥಳೀಯ ಅಧಿಕಾರಿಗಳು ನಮ್ಮ ಅನುಕೂಲಕ್ಕೆ ತಕ್ಕಂತೆ ಖರ್ಚುಮಾಡಿ ಅನುಕೂಲಗಳನ್ನು ಮಾಡಿರುತ್ತಾರೆ. ಅದಕ್ಕಾಗಿ ನಾನು ಶಾಸನಸಭಾ ಕಛೇರಿಯ ಕಾರ್ಯದರ್ಶಿಯವರಿಗೆ ಅಂಥ ಕಡೆಗಳಿಂದ ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬುದನ್ನು ತರಿಸಿ ಅದನ್ನು ಸಂಬಂಧಪಟ್ಟ ಸದಸ್ಯರಿಂದ ವಸೂಲ್ಮಾಡಿ ಅವರಿಗೆ ಆ ಹಣವನ್ನು ರವಾನೆಮಾಡಬೇಕೆಂದು ನಿರ್ದಿಷ್ಟವಾಗಿ ತಿಳಿಸಿದ್ದೇನೆ. ಈ ವಿಷಯವನ್ನು ನಾನು ಉಳಿದ ಎಲ್ಲ ಅಧಿಕಾರಿಗಳಿಗೂ ಹೇಳಿದ್ದೇನೆ. ನಾವು ಹೀಗೆ ಎಲ್ಲಾ ಹಂತಗಳಲ್ಲೂ ಒಂದು ಶಿಸ್ತಿನಿಂದ ನಡೆದರಲ್ಲವೇ ಬಾಕಿಯವರಲ್ಲೂ ನಾವು ಶಿಸ್ತನ್ನು ಅಪೇಕ್ಷೆ ಮಾಡುವುದಕ್ಕೆ ಸಾಧ್ಯ ? ಹೀಗೆ ನಾನು ಮೊದಲು ನಡೆಯದೆ ಬೇರೆಯವರಲ್ಲಿ ಶಿಸ್ತನ್ನು ಪಾಲಿಸಬೇಕೆಂದು ಬೋಧೆ ಮಾಡಿದರೆ ಅದು ಖಂಡಿತ ಬರುವುದಿಲ್ಲ. ಈ ದಿವಸ ಈಗಿನ ಮಂತ್ರಿ ಮಂಡಲಕ್ಕೇನಾದರೂ ಕೆಟ್ಟ ಹೆಸರು ಬಂದಿದ್ದರೆ ಅದು ಅವರ ಕೆಲವು ಮಂತ್ರಿಗಳು ಆಡಳಿತದಲ್ಲಿ ಹದ್ದುಮೀರಿ ನಡೆದಿರುವುದು ಮತ್ತು ಹತೋಟಿ ಮೀರಿ ನಡೆದಿರುವುದೇ ಕಾರಣ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ.

ಯಾರನ್ನೂ ವೈಯಕ್ತಿಕವಾಗಿ ಕುರಿತು ಮಾತನಾಡುವ ಕಾಲವಲ್ಲ ಇದು. ಅಧಿಕಾರಿಗಳ ಒಡೆತನ ಎಂಬ ಪದ ಪ್ರಯೋಗ ಮಾಡುವುದಾದರೆ ಅಧಿಕಾರ ಶಾಶ್ವತವಲ್ಲ. ಅಧಿಕಾರಿ ತಪ್ಪುಮಾಡಿದರೆ ಡಿಸ್‌ಮಿಸ್ ಮಾಡಿ, ಕೆಲಸದಿಂದ ಕಿತ್ತುಹಾಕಿ. ಸರಕಾರ ಅಧಿಕಾರಿಗಳ ಒಡೆತನ ಎಂಬ ಪದ ಪ್ರಯೋಗವನ್ನು ಮೊಟಕುಮಾಡಬೇಕು. ಇಲ್ಲದಿದ್ದರೆ ಅದು ಕ್ಯಾನ್ಸರ್ ರೋಗದಂತೆ ಹರಡಿ ಸರ್ವನಾಶಮಾಡುವುದು.

ಮಂತ್ರಿಗಳ ಕಾರ್ಯವ್ಯಾಪ್ತಿ ವಿಚಾರ ಹೇಳುವಾಗ ಅವರ ಪ್ರೈವೇಟ್ ಸೆಕ್ರೆಟರಿ ಕೈಲಿ ಏನು ಕೆಲಸ ಮಾಡಿಸಬಹುದೆಂಬುದನ್ನು ನಿಗದಿಮಾಡಿ ಒಂದು ಸತ್ಸಂಪ್ರದಾಯ ಹಾಕಿ. ಇದಕ್ಕೆ ನಿಯಮ ಮಾಡಿ. ಮಂತ್ರಿಗಳು ತಾವು ಮೂರು ದಿವಸ ಕಾಯಿಲೆಬಿದ್ದರೆ ತಮ್ಮ ಅಧಿಕಾರವನ್ನು ಪ್ರೈವೇಟ್ ಸೆಕ್ರೆಟರಿಗೆ ವಹಿಸುವುದು ಸರಿಯಲ್ಲ, ಅವರಿಗೆ ಅಂಥ ಕಾಲದಲ್ಲಿ ತಮ್ಮ ಅಧಿಕಾರ ಡೆಲಿಗೇಟ್ ಮಾಡಿರುವುದಾಗಿ ಹೇಳಬಹುದು, ಇದು ಸರಿಯಲ್ಲ. ಒಬ್ಬ ಮಂತ್ರಿಗಳು ಆಗಲೇ ಹಾಗೆ ಮಾಡಿದ್ದುದಾಗಿ ತಿಳಿಸಿದ್ದಾರೆ. ಹೀಗೆ ಮಾಡಬಾರದು. ಪ್ರೈವೇಟ್ ಸೆಕ್ರೆಟರಿಗೆ ವಹಿಸುವ ಕಾರ್ಯಕ್ಕೆ ಒಂದು ಮಿತಿಯಿದೆ. ಇದಕ್ಕೆ ಕೆಲವು ನಿಯಮಾವಳಿಗಳಿವೆ. ಅದರ ಪ್ರಕಾರ ಅವರು ಮಾಡಬೇಕು. ಈ ವಿಷಯದಲ್ಲಿ ಒಂದು ಸುತ್ತೋಲೆ ಹೊರಡಿಸಿ ಪ್ರೈವೇಟ್ ಸೆಕ್ರೆಟರಿಗಳ ಕಾರ್ಯವ್ಯಾಪ್ತಿಯೇನು ಎನ್ನುವುದನ್ನು ಸ್ಪಷ್ಟಪಡಿಸಬೇಕು. ಅದನ್ನು ಮೀರಿ ಅವರು ನಡೆಯಲು ಅವಕಾಶ ಕೊಡಬಾರದು.

ಒಂದು ವಿಷಯವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಆಡಳಿತದಲ್ಲಿರುವ ಒಂದು ಮೂಲ ಲೋಪದೋಷ ಹೇಳುವುದಾದರೆ ಐ. ಎ. ಎಸ್. ಅಧಿಕಾರಿಗಳಿಂದ ಹಿಡಿದು ಮೂರನೆ ದರ್ಜೆ ನೌಕರರವರೆಗೆ ವರ್ಗದ ವಿಚಾರ ಮುಂತಾದುವುಗಳಲ್ಲಿ ಒಂದು ಜಾಡ್ಯವಿದೆ. ಇದು ಯಾರನ್ನೂ ಬಿಟ್ಟಿಲ್ಲ. ಈ ಔಷಧಿಗೆ ಒಂದು ಮದ್ದು ಕಂಡುಹಿಡಿಯಲೇಬೇಕು. ಎಂಥ ಕಠಿಣ ಪ್ರಸಂಗ ಬಂದರೂ ಕೂಡ ವರ್ಗದ ವಿಚಾರದಲ್ಲಿ ಆಸಕ್ತಿ ವಹಿಸಬಾರದು. ಬೆಳಗಿನಿಂದ ಸಾಯಂಕಾಲದವರೆಗೆ ವರ್ಗದ ವಿಚಾರಕ್ಕಾಗಿ ಶಾಸಕರನ್ನು ಕಾಡುವರು. ಇಂದು ಅನ್ಯಾಯವಾಗಿರುವುದೂ ಇದೆ. ಇಂದು ಮೇಲ್ಮಟ್ಟದ ಅಧಿಕಾರಿ ಅವ್ಯವಹಾರ ಮಾಡಿದಾಗ ಅವರಿಗೆ ಶಿಕ್ಷೆಯಾಗಬೇಕು ವರ್ಗದ ವಿಚಾರದಲ್ಲಿ ಸಹಾಯಮಾಡಬೇಕಾದ್ದು ಸದಸ್ಯರ ಕರ್ತವ್ಯ ಎಂಬ ಭಾವನೆ ಕೆಲವರಲ್ಲಿ ಬಂದಿದೆ. •ಇದರ ಬಗ್ಗೆ ಶಾಸಕರನ್ನು ಕಾಡುವ ಪ್ರವೃತ್ತಿ ಕೊನೆಯಾಗಬೇಕು. ಈ ಸಂಬಂಧದಲ್ಲಿ ತಪ್ಪಿತಸ್ತರಿಗೆ ಶಿಕ್ಷೆಮಾಡಲು ಸ್ವಲ್ಪಮಟ್ಟಿಗೆ ನಿಯಮವನ್ನು ಮಾರ್ಪಾಡು ಮಾಡುವುದು ಸೂಕ್ತ. ಬೇಕಾದವರು ಹತ್ತು ವರ್ಷವಾದರೂ ಒಂದೇ ಕಡೆ ಇರುವುದು, ಬೇಡದಿರುವವರು ನಾನ್ನೂರು ಮೈಲಿಯಾಚೆಗೆ ಹೋಗಬೇಕಾಗುವುದು ತಪ್ಪಬೇಕು. ಇಂಥ ಅವ್ಯವಹಾರ ನಡೆಯಲು ಕೆಲವು ಅಧಿಕಾರಿಗಳು ಜವಾಬ್ದಾರರಾಗಿರುವರು. ಕೆಲವು ದೊಡ್ಡ ಅಧಿಕಾರಿಗಳಿಗೆ ತಮ್ಮ ಕೈಕೆಳಗಿನವರನ್ನು ವರ್ಗ ಮಾಡಲು ಅಧಿಕಾರವಿದೆ, ಹಾಗೆ ಮಾಡುವಾಗ ಅವರು ತಮ್ಮ ಅಧಿಕಾರದ ಪರಿಮಿತಿ ಮೀರಿ ಮುಂದೆ ಹೋದರೆ ಅವರಿಗೆ ಶಿಕ್ಷೆ ಮಾಡಲು ಹೊಸ ನಿಯಮ ತರುವುದಾದರೆ ಅಡ್ಡಿಯಿಲ್ಲ. ಹಸ್ತಕ್ಷೇಪ ಪ್ರತಿಯೊಂದು ಹಂತದಲ್ಲೂ ಇದೆ. ಇದನ್ನು ಕೊನೆಗೊಳಿಸಲು ಪ್ರಯತ್ನಮಾಡಬೇಕು. ಶಾಸಕರ ಭವನಕ್ಕೆ ಇದಕ್ಕಾಗಿ ಅಧಿಕಾರಿಯನ್ನು ಹಾಕಿ ವಿಷಯ ಸಂಗ್ರಹಿಸಲು ಪ್ರಯತ್ನ ನಡೆಯಿತು, ಅದರಿಂದ ಪ್ರಯೋಜನವಾಗಲಿಲ್ಲ. ಶಾಸಕರ ಒತ್ತಡವಿರುವುದು, ಅದನ್ನು ನಿಲ್ಲಿಸುವುದು ಕಷ್ಟ. ತಮ್ಮ ಸ್ಥಾನವನ್ನುಳಿಸಿಕೊಳ್ಳಲು ಅದರ ಭದ್ರತೆಗಾಗಿ ಕೆಲವು ವೇಳೆ ಶಾಸಕರ ಮಾತಿಗೆ ಬೆಲೆ ಕೊಡಬೇಕಾಗುವುದು. ಶಾಸಕರ ಮನಸ್ಸಿಗೆ ನೋವಾದರೆ ಮಂತ್ರಿಗಳ ಬುಡಕ್ಕೆ ಸಂಚಕಾರಬರಬಹುದು ಎಂದು ಕೆಲವುವೇಳೆ ಅವರ ಮಾತಿಗೆ ಬೆಲೆ ಕೊಡಬೇಕಾಗಿ ಬರುವುದು. ಹೀಗಾದರೆ ದಕ್ಷತೆ ಹೆಚ್ಚಿಸಲು ಸಾಧ್ಯವಾಗುವುದಿಲ್ಲ. ಈ ವಿಷಯದಲ್ಲಿ ಏನಾದರೂ ವ್ಯವಸ್ಥೆ ಮಾಡಬೇಕು. ಸರಕಾರದ ಆಡಳಿತದ ಅನುಭವದಲ್ಲಿ

ಯಾವುದಾದರೂ ಇದಕ್ಕಾಗಿ ಹೊಸ ನಿಯಮ ಜಾರಿಗೆ ತರುವುದಾದರೆ ಅದಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ.

ಇಂದು ಸಾಮಾಜಿಕ ನ್ಯಾಯದ ಬಗ್ಗೆ ಹೇಳಬಹುದು. ಆಲ್ ಇಂಡಿಯಾ ಸರ್ವಿಸಸ್‌ನಲ್ಲಿ ಸಾಮಾಜಿಕ ನ್ಯಾಯ ದೊರಕಿಸಿಲ್ಲ. ಕೆಲವು ಸಲ ಇದರ ಬಗ್ಗೆ ಪೆಟ್ಟು ಬೀಳುತ್ತಿದೆ. ಕಳೆದ 25 ವರ್ಷಗಳ ಅನುಭವದಿಂದ ಹೇಳುವುದಾದರೆ ಸಾಮಾಜಿಕ ನ್ಯಾಯ ಮತ್ತು ದಕ್ಷತೆ ಈ ಸರಿದೂಗಿಸುವುದು ಕಷ್ಟ. ಇದಕ್ಕೆ ಪರಿಹಾರವನ್ನು ಕೂಡ ಪರಿಶೀಲಿಸಬೇಕು.

ಆಲ್ ಇಂಡಿಯ ಕೇಡರ್ ಬಗ್ಗೆ ಒಂದು ಪ್ರಶ್ನೆ ಇದೆ. ಇದಕ್ಕಾಗಿ ಜಾಗ ಬೇಕಾದರೆ ಸೃಷ್ಟಿಮಾಡುವರು. ಇದರಲ್ಲಿ ಪ್ರಾಂತೀಯ ಮನೋಭಾವನೆ ಇರಬಾರದು. ಅಧಿಕಾರಿಗಳಲ್ಲಿ ಪ್ರಾಮಾಣಿಕತೆಯಿರಬೇಕು. ಇಲಾಖೆಗಳಲ್ಲಿ ಇದು ಅತ್ಯಾವಶ್ಯಕ. ಆಡಳಿತದಲ್ಲಿ ಇದು ಜಾರಿಗೆ ಬರಬೇಕು. ಇದಕ್ಕೆ ತಿಲಾಂಜಲಿಯನ್ನು ಅರ್ಪಿಸುವ ರೀತಿಯಲ್ಲಿ ಇಂದು ವ್ಯವಹಾರ ನಡೆಯುತ್ತಿದೆ. ಇದನ್ನು ಯಾವುದೇ ಅಧಿಕಾರಿಯನ್ನು ಕುರಿತು ಹೇಳುತ್ತಿಲ್ಲ. ಜನಪ್ರಗತಿ ಪತ್ರಿಕೆಯನ್ನು ನೋಡಿ, ಅದರಲ್ಲಿ ಒಬ್ಬ ಸೀನಿಯರ್‌ಪೋಸ್ಟ್ ಆಫೀಸರಮೇಲೆ ಬರೆದಿದ್ದಾರೆ, ಅವರ ಅಕ್ರಮ ವರ್ತನೆ ವಿಚಾರ ಪ್ರಸ್ತಾಪಿಸಿದ್ದಾರೆ. ಇಂದು ಐ. ಎ. ಎಸ್. ಕೇಡರ್ ಮಾಡಿದ್ದಾರೆ. ಈ ಹೊಸ ಕೇಡರ್ ಒಂದನ್ನು ಸೃಷ್ಟಿಸುವುದರಿಂದ ರಾಜ್ಯದಲ್ಲಿ ದಕ್ಷತೆ ಹೆಚ್ಚುವುದು, ಪ್ರಮಾಣಿಕತೆ ಬೆಳೆಯುವುದು, ಪ್ರಾಂತೀಯ ಮನೋಭಾವನೆ ಇರುವುದಿಲ್ಲ ರಾಜಕೀಯ ಒತ್ತಡಕ್ಕೆ ಅವಕಾಶವಿರುವುದಿಲ್ಲ. ಕೆಲಸ ಚೆನ್ನಾಗಿ ನಡೆಯುವುದು ಎಂಬ ಭಾವನೆ ಏನಿತ್ತು ಇಂದು ಅದು ದೂರವಾಗುವಂಥ ಘಟನೆಗಳು ನಡೆದಿವೆ. ಅವರಿಗೂ ಕೂಡ ಮೊದಲೇ ಹೇಳಿದಹಾಗೆ ವರ್ಗದ ಭಯವಿದೆ. ಹೋಂ ಸೆಕ್ರೆಟರಿಗೂ ಕೂಡ ಮುಖ್ಯಮಂತ್ರಿಗಳು ತಮ್ಮನ್ನು ಬೇರೆ ಕಡೆಗೆ ಹಾಕಿದರೆ ಗತಿಯೇನು ಎಂಬ ಭಯವಿದೆ, ಈ ಜಾಡ್ಯ ಎಲ್ಲಾ ಕಡೆಯೂ ಹರಡಿದೆ. ಇದರಿಂದ ಆಡಳಿತದಲ್ಲಿ ದಕ್ಷತೆ ನಶಿಸಿಹೋಗಲು ಕಾರಣವಾಗಿದೆ. ಸೀನಿಯರ್ ಪೋಸ್ಟ್ ಆಫೀಸ್‌ರಿಂದ ಹಿಡಿದು ಡೈರೆಕ್ಟ್ ಆಗಿ ರೆಕ್ರೂಟ್ ಆಗಿರುವವರಿಗೆ ಕೂಡ ಯಾವ ಮಟ್ಟದಲ್ಲಿ ಸರಿಯಾದ ಕೆಲಸವಾಗುತ್ತಿಲ್ಲ. ಈ ದಿವಸ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಡಿ ಸಿ ಆಗಿ ಐ. ಎ. ಎಸ್ ಆಫೀಸರುಗಳೇ ಇದ್ದಾರೆ. ಅವರಿಗೆ ರೈತರ ಸಂಕಟ ಅರಿತು ಕೆಲಸಮಾಡಲು ಸಾಧ್ಯವಾಗಿಲ್ಲ. ಅನೇಕರು ಹುಡುಗರಿದ್ದಾರೆ, ಕೆಲವರು ಒಳ್ಳೆಯರಿರಬಹುದು ಬಹುತೇಕ ಒಂದು ಕೇಡರ್ ಏನು ಹೊಸದಾಗಿ ಸೃಷ್ಟಿಮಾಡಿದ್ದಾರೆ ಅದರ ಮೂಲ ಉದ್ದೇಶ ವಿಫಲವಾಗಿದ್ದೆ. ಇದಕ್ಕೆ ಕಾರಣ ಅವರ ಸುತ್ತ ರಾಜಕಾರಣಿಗಳಿರುವರು, ಅವರ ಮಾತಿಗೆ ಬೆಲೆ ಕೊಡಬೇಕಾಗುವುದು. ಈ ಪದ್ಧತಿ ಬೆಳೆದು ಬಂದಿದೆ. ಹಾಗೆ ಅವರ ಮಾತಿಗೆ ಬೆಲೆ ಕೊಡದಿದ್ದರೆ ತಮಗೆ ತೊಂದರೆಯಾಗ ಬಹುದೆಂಬ ಭಾವನೆ ಸಹ ಇರುವುದು. ಇದರಿಂದ ಅವರು ದಕ್ಷತೆಯಿಂದ ನಿಸ್ವಾರ್ಥ ಸೇವೆ ಮಾಡಲು ಸಾಧ್ಯವಾಗಿಲ್ಲ. ಈ ವಿಚಾರದಲ್ಲಿ ಎಚ್ಚರಿಕೆಯಿಂದಿರಬೇಕು.

ಇವತ್ತು ನಾನು ಈ ಮಾತು ಹೇಳತಕ್ಕಂಥ ಕಾಲದಲ್ಲಿ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡಬೇಕಾದರೆ ತಮ್ಮ ಜವಾಬ್ದಾರಿಯನ್ನು ನಿರ್ದಾಕ್ಷಿಣ್ಯವಾಗಿ ಕಾನೂನಿನ ಚೌಕಟ್ಟಿನಲ್ಲಿ ಮಾಡುತ್ತಾರೆ ಎನ್ನುವ ವಾತಾವರಣವನ್ನು ನಾವು ಕಾಣುತ್ತಿಲ್ಲ. ನನ್ನನ್ನು ಕಿತ್ತುಹಾಕಿದರೆ ಏನು ಗತಿ, ಬೆಂಗಳೂರನ್ನು ಬಿಟ್ಟುಹೋಗುವುದಕ್ಕಾಗುವುದಿಲ್ಲ. ಎನ್ನುವ ಭಾವನೆಯನ್ನು ನಾವು ಅವರಲ್ಲಿ ನೋಡಿದಾಗ ಆಡಳಿತದ ದಕ್ಷತೆಯನ್ನು ಉಳಿಸಿಕೊಳ್ಳುವುದಕ್ಕೆ ಏನು ಒಂದು ಕೇಡರ್ ಅನ್ನು, ಡೈರೆಕ್ಟ ರೆಕ್ರೂಟ್‌ಮೆಂಟ್ ಮಾಡುವುದಕ್ಕೆ ಆಲ್ ಇಂಡಿಯಾ ಕೇಡರ್ ಅನ್ನು ಏನು ನಿರ್ಮಾಣ ಮಾಡಿದ್ದೀರಿ, ಆ ಕೇಡರಿನ ಮೂಲ ಉದ್ದೇಶ ಹೋಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಸೆಂಟ್ರಲ್ ಗವರ್ನಮೆಂಟ್‌ನಲ್ಲಿರುವವರಿಗೆ 58 ವರ್ಷ ಸರ್ವೀಸ್ ಇರುತ್ತದೆ, ಸ್ಟೇಟ್ ಸರ್ವೀಸ್‌ನಲ್ಲಿರುವವರಿಗೆ 55 ವರ್ಷ ಸರ್ವೀಸ್ ಇರುತ್ತದೆ, ಇವರು ಮಾಡಿದ ಪಾಪ

ಏನು ? ಎಂ. ಎ. ಎಸ್. ಕೇಡರ್‌ನವರು ಇನ್ನೂ ಮೂರು ವರ್ಷ ಕೆಲಸ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲವೇ ? ಅವರಲ್ಲಿ ಇರತಕ್ಕ ಬುದ್ಧಿ ಚಮತ್ಕಾರ ಏನು, ಇವನಲ್ಲಿರತಕ್ಕ ದಡ್ಡ ಪರಮಾವಧಿ ಏನು ಎಂದು ನನಗರ್ಥವಾಗುವುದಿಲ್ಲ. ಏಕೆಂದರೆ, ಎಂ. ಎ. ಎಸ್. ಸೀನಿಯರ್ ಸ್ಕೇಲ್‌ನಲ್ಲಿ ಕೆಲಸಮಾಡತಕ್ಕಂಥವರು 55 ವರ್ಷದನಂತರ ಮನೆಗೆ ಹೋಗುತ್ತಾರೆ. ಇಂಥ ಏರುಪೇರುಗಳು ಸಲ್ಲದು ಎಂದು ನಾನು ಹೇಳುತ್ತೇನೆ. ತಾವು ಸಾಮಾಜಿಕ ನ್ಯಾಯುವನ್ನು ದೊರಕಿಸಿಕೊಡತಕ್ಕ ಕಾಲದಲ್ಲಿ ಈ ಕೇಡರ್ ಅನ್ನು ಕಿತ್ತುಹಾಕಿದರೂ ಚಿಂತೆಯಿಲ್ಲ. ಎಂ. ಎ. ಎಸ್. ಕೇಡರ್ ಅನ್ನು ಇಟ್ಟುಕೊಂಡು ಸಮಾಜದಲ್ಲಿ ಉಪೇಕ್ಷಿಸಲ್ಪಟ್ಟ ಅನೇಕ ಜನಾಂಗಕ್ಕೆ ಸಾಮಾಜಿಕ ನ್ಯಾಯುವನ್ನು ಕೊಡುವ ಮನೋಭಾವವನ್ನು ಕಲ್ಪನೆ ಮಾಡಬೇಕು. ಅನೇಕ ಸಾರಿ ಮಾನ್ಯ ಅರ್ಮುಗಂ ಅವರು ಮತ್ತು ತಿಮ್ಮಪ್ಪನವರು ಆಲ್ ಇಂಡಿಯಾ ಫಿಗರ್ಸ್ ಕೊಟ್ಟು ಮಾತನಾಡಿದ್ದಾರೆ. ಸಮಾಜದಲ್ಲಿ ಉಪೇಕ್ಷಿಸಲ್ಪಟ್ಟ ಜನ ಏನು ಇದ್ದಾರೆ, ಅವರನ್ನು ನಿರ್ಲಕ್ಷ್ಯ ಮನೋಭಾವದಿಂದ ಕಂಡುಕೊಂಡು ಬಂದಿರತಕ್ಕ ಕಾಲದಲ್ಲಿ ಅವರಿಗೆ ನ್ಯಾಯುವನ್ನು ದೊರಕಿಸಿಕೊಡಬೇಕು. ಆಲ್ ಇಂಡಿಯಾ ಕೇಡರ್‌ನ ಮೇಲ್ಪಟ್ಟ ಅಧಿಕಾರಿಗಳು ಬೇಡ ಎಂದು ದಿಟ್ಟತನವನ್ನು ತಾಳುವುದಾದರೆ ನಾನು ನಿಮಗೆ ಶಹಬಾಸಗಿರಿಯನ್ನು ಹೇಳುತ್ತೇನೆ. ಸಾಮಾಜಿಕ ನ್ಯಾಯಕ್ಕೆ ಮನ್ನಣೆ ಕೊಟ್ಟು ಆಡಳಿತ ದಕ್ಷತೆಯ ಪ್ರಾಮಾಣಿಕತೆಯನ್ನು ಹೆಚ್ಚಿಸಲಿಕ್ಕೆ ಮತ್ತೊಂದು ವಾತಾವರಣವನ್ನು ತಾವು ಕಲ್ಪನೆ ಮಾಡಬೇಕು ಎಂದು ಹೇಳುತ್ತೇನೆ. ಈ ಎರಡರಲ್ಲಿ ಯಾವಾಗ ತೀರ್ಮಾನಕ್ಕೆ ಬರುತ್ತೀರಿ ಎನ್ನುವ ಮಾತನ್ನು ತಿಳಿಸಬೇಕು. ಇವತ್ತು ಶಾಸಕರು ಮತ್ತು ಮಂತ್ರಿಗಳು ಸರ್ಕಾರಿ ಕಾರುಗಳನ್ನು ಉಪಯೋಗ ಮಾಡುತ್ತಾರೆ. ಮಾರ್ಕೆಟ್ ಹತ್ತಿರ ಮಂತ್ರಿಗಳ ಕಾರು ನಿಂತುಕೊಂಡಿರುತ್ತದೆ, ಆಫೀಸರ್ಸ್ ಕಾರು ಹೆಂಡದ ಅಂಗಡಿಯ ಹತ್ತಿರ ನಿಂತುಕೊಂಡಿರುತ್ತದೆ. ಈ ಸಂದರ್ಭದಲ್ಲಿ ಮಾನ್ಯ ಜತ್ತಿಯವರು ಹೇಳಿದಂಥ ಮಾತು ನೆನಪು ಬರುತ್ತದೆ, ಮಿನಿಸ್ಟರ್ ಈಸ್ ಎ ಮಿನಿಸ್ಟರ್ ಫಾರ್ ದಿ ಟ್ವೆಂಟಿಫೋರ್ ಹವರ್ಸ್ ಎಂದು ಹೇಳಿದರು.

Sri H. SIDDAVEERAPPA : What else is he ?

ಶ್ರೀ ಎಚ್. ಡಿ. ದೇವೇಗೌಡ :—ಸರ್ಕಾರಿ ಕೆಲಸಗಳಿಗೆ ಸರ್ಕಾರಿ ಕಾರು, ಖಾಸಗೀ ಕೆಲಸಗಳಿಗೆ ಸ್ವಂತ ಕಾರು ಎಂದು ನಮ್ಮ ರಾಜ್ಯದಲ್ಲಿ ಈ ಒಂದು ಪದ್ಧತಿಯನ್ನು ಅನುಕರಣೆ ಮಾಡತಕ್ಕಂಥ ಕಾಲದಲ್ಲಿ ......

ಶ್ರೀ ಎಚ್. ಸಿದ್ದವೀರಪ್ಪ :—ಮಿನಿಸ್ಟರ್ ಈಸ್ ಎ ಮಿನಿಸ್ಟರ್ ಎಂದರೆ, ಅವನು ಮಲಗಿಕೊಂಡಾಗ ಮಂತ್ರಿಯಲ್ಲವೇ ; ಊಟಮಾಡುವಾಗ ಮಂತ್ರಿಯಾಗುವುದಿಲ್ಲವೇ ; ಅದನ್ನು ಸ್ವಲ್ಪ ಕ್ಲಾರಿಫೈ ಮಾಡಿ ?

ಶ್ರೀ ಎಚ್. ಡಿ. ದೇವೇಗೌಡ :—ತಮ್ಮ ವ್ಯಾಖ್ಯಾನವನ್ನು ಬಹಳ ದೂರ ತೆಗೆದುಕೊಂಡು ಹೋಗುತ್ತೀರಿ. ಇಷ್ಟು ಮಾತ್ರ ಹೇಳುತ್ತೇನೆ, ಸರ್ಕಾರಿ ವಾಹನವನ್ನು ಉಪಯೋಗ ಮಾಡತಕ್ಕಂಥ ಕಾಲದಲ್ಲಿ ಎಚ್ಚರಿಕೆಯಿಂದ ಇರಬೇಕು ಎಂದು. ಮುಖ್ಯ ಮಂತ್ರಿಗಳ ವಾಹನವನ್ನು ಯಾವನೋ ತೆಗೆದುಕೊಂಡು ಹೋಗುವುದು, ಮುಖ್ಯ ಮಂತ್ರಿಗಳು ಹೋಗಲಿ ಬೇಡ ಎಂದು ಹೇಳುವುದಿಲ್ಲ. ಯಾವನೋ ನಾಲ್ಕು ಬಾಟ್ಲಿ ಲಿಕ್ಕರ್ಸ್ ತೆಗೆದುಕೊಂಡು ಬಾ ಎಂದು ಕಳುಹಿಸುತ್ತಾನೆ, ಹೀಗೆ ಆಗುವುದು ಬೇಡ ಎಂದು ನಾನು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ :—ಮಿಸ್ ಯೂಸ್ ಆಫ್ ವೆಹಿಕಲ್ಸ್ ಆಗಬಾರದು ಎಂದು ಹೇಳಿ, ಅದನ್ನು ಒಪ್ಪಿಕೊಳ್ಳೋಣ.

Sri C. M. ARUMUGHAM : When we go Brigade Road, near the Rex Theater and other theaters, we can see the Governor's Car, under such circumstances what has to be done we must say, because we have been seeing it. Governor's Car is found always in the Brigade Road. Now you may say what you want to say about it.

ಶ್ರೀ ಕೋಣಂದೂರು ಲಿಂಗಪ್ಪ :—ರಾಷ್ಟ್ರಪತಿಯವರು ವಿಸಿಟ್ ಕೊಟ್ಟಾಗ ಅವರ ಕಾರನ್ನೂ ಅಲ್ಲಿ ನೋಡಬಹುದು.

ಶ್ರೀ ಎಚ್. ಡಿ. ದೇವೇಗೌಡ :—Can I comment on the Governor or the President of India ? I know limitations. ಅವರೂ ಕೂಡ ಬೇರೆಯವರಿಗೆ ಮಾರ್ಗದರ್ಶನ ಮಾಡುವ ರೀತಿಯಲ್ಲಿ ನಡೆದುಕೊಳ್ಳಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದರ ಬಗ್ಗೆ ಲಂಬಿಸಿ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಅಡ್ಮಿನಿಸ್ಟ್ರೇಷನ್ ನಲ್ಲಿರತಕ್ಕ ಮೂಲ ದೋಷವನ್ನು ತಿದ್ದಲಿಕ್ಕೆ ಸರ್ವ ಪ್ರಯತ್ನವನ್ನು ಮಾಡಬೇಕು. ಮತ್ತು ಈ ಅಡ್ಮಿನಿಸ್ಟ್ರೇಷನ್‌ನಲ್ಲಿ ಇಂಟರ್‌ಫಿಯರೆನ್ಸ್ ಅನ್ನೂ ಕೂಡ ಕಡಿಮೆ ಮಾಡಲಿಕ್ಕೆ ಎಲ್ಲರೂ ಸಹಕರಿಸಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಕೆಲವು ಅಡ್ಮಿನಿಸ್ಟ್ರೇಷನ್ ಕಮಿಟಿಗಳ ರಿಪೋರ್ಟನ್ನು ನಾನು ಓದಿದ್ದೇನೆ, ಮಾನ್ಯ ಹನುಮಂತಯ್ಯನವರ ಕಮಿಟಿ ರಿಪೋರ್ಟನ್ನು ಓದಿದ್ದೇನೆ, ಶ್ರೀ ಎ.ಜ. ರಾಮಚಂದ್ರರಾಯರ ರಿಪೋರ್ಟನ್ನು ಓದಿದ್ದೇನೆ. ಅಗರವಾಲಾ ರಿಪೋರ್ಟನ್ನೂ ಓದಿದ್ದೇನೆ. ಇವುಗಳನ್ನೆಲ್ಲಾ ತಿರುಗಿ ಹಾಕಿ ನೋಡಿದರೂ ಎಫಿಷಿಯನ್ಸಿ ಇಂಪ್ರೂವ್ ಮಾಡುವುದಕ್ಕೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಬೆಳಗಾಂ ಭಾಲ್ಕಿ, ಮುಂತಾದ 400–500 ಮೈಲಿ ದೂರದಲ್ಲಿರತಕ್ಕವುಗಳಿಗೆ ಸರ್ಕಾರದಿಂದ ಹೊರಡತಕ್ಕಂಥ ಆರ್ಡರ್ ಏನು ಇದೆ. ಅದರ ಫಲ ದಕ್ಕಲಿಕ್ಕೆ ಸುಲಭ ರೀತಿಯಲ್ಲಿ ಇಲ್ಲ. ಎಲ್ಲಾ ವ್ಯವಹಾರಗಳನ್ನು ಡಿಸೆಂಟ್ರಲೈಸ್ ಮಾಡಬೇಕಾಗುತ್ತದೆ. ಮತ್ತು ನೇಮಕಗಳಲ್ಲಿ ಮತ್ತೊಂದು ಮಾಪಾರ್ಡನ್ನು ಮಾಡಬೇಕಾಗುತ್ತದೆ. ಡಿವಿಷನಲ್ ಕಮೀಷನರ್ ಅವರ ಹುದ್ದೆ ಬೇಕೇ ಬೇಡವೇ ಎನ್ನುವ ಪ್ರಶ್ನೆ ಇದೆ. ಡಿವಿಷನಲ್ ಕಮೀಷನರ್ ಅವರ ಹುದ್ದೆಯನ್ನು ಕಿತ್ತುಹಾಕಬೇಕು ; ಅಸಿಸ್ಟೆಂಟ್ ಕಮೀಷನರ್ ಅನ್ನೂ ಕಿತ್ತು ಹಾಕಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಇಷ್ಟು ಮಾತ್ರ ಹೇಳುತ್ತೇನೆ, ಇದನ್ನು ಕಿತ್ತು ಎಂದು ಹೇಳತಕ್ಕದ್ದರ ಬಗ್ಗೆ ಸ್ವಲ್ಪ ಸಂಶಯ ಇದೆ. ಇವತ್ತು ರಾಜ್ಯ ವಿಸ್ತಾರವಾದ ಮೇಲೆ 400–500 ಮೈಲಿ ದೂರದಲ್ಲಿರತಕ್ಕ ಸಾಮಾನ್ಯ ಪ್ರಜೆಗೆ ನ್ಯಾಯ ದೊರಕಬೇಕಾದರೆ, ಪ್ರತಿಯೊಬ್ಬರೂ ವಿಧಾನಸೌಧದ ಮೆಟ್ಟಿಲನ್ನು ತುಳಿಯುವುದಕ್ಕೆ ಆಗುವುದಿಲ್ಲದ ನಾಲ್ಕು ಡಿವಿಷನ್‌ಗಳನ್ನು ಮಾಡಿ ಕೆಲಸಮಾಡುತ್ತಿದ್ದೀರಿ. ಸಾಮಾನ್ಯವಾದಂಥ ರೈತ ಏನು ಇದ್ದಾನೆ, ಗ್ರಾಮಾಂತರ ಪ್ರದೇಶದಲ್ಲಿರುವವರು ಯಾರು ಇದ್ದಾರೆ ಮತ್ತು ಸಮಾಜದಲ್ಲಿ ಉಪೇಕ್ಷಿಸಲ್ಪಟ್ಟ ಜನ ಯಾರು ಇದ್ದಾರೆ ಅವರಿಗೆ ನ್ಯಾಯ ದೊರಕಿಸಲು ಮಾಡಿದಂಥ ಯೋಜನೆಗಳ ಫಲವನ್ನು ದೊರಕಿಸಿಕೊಳ್ಳತಕ್ಕ ಬಗ್ಗೆ ಪ್ರತಿಯೊಂದು ಹಂತದಲ್ಲಿ ಜವಾಬ್ದಾರಿಯನ್ನು ನಿರ್ವಹಣೆ ಮಾಡುವುದಕ್ಕೆ ಸಾಕಷ್ಟು ದಕ್ಷತೆಯಿಂದ ಕೆಲಸಮಾಡಬೇಕು. ದಕ್ಷತೆಯಿಂದ ಅಭಾವದಿಂದ ಯೋಜನೆಗಳ ಫಲಿತಾಂಶ ಸಾಮಾನ್ಯ ಜನಗಳಿಗೆ ದೊರೆಯುತ್ತಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಮ್ಮ ಅಧಿಕಾರಿಗಳು ಕೂಡ, ಕೆಲವು ಸೀನಿಯರ್ ಆಫೀಸರ್, ಡಿವಿಷನಲ್ ಕಮೀಷನರ್ಸ್, ಡೆಪ್ಯೂಟಿ ಕಮೀಷನರ್ಸ್ ಅವರು ಇನ್ಸ್‌ಪೆಕ್ಷನ್‌ಗೆ ಹೋದರೆ ಒಂದು ರೀತಿಯ ರೆಪ್ಯುಟೇಷನ್ ಇತ್ತು. ಈಗ 12ವರ್ಷದ ಫೈಲುಗಳನ್ನು ನೋಡಿದರೂ ಇನ್ಸ್‌ಪೆಕ್ಟ್ ಎಂದು ಬರೆದು ಟಿ. ಬಿ. ಹೋಗುತ್ತಾರೆ., ಕ್ಲಾರ್ಕ ಹೋಗಿ ನೋಟನ್ನು

ತಯಾರು ಮಾಡಿಕೊಂಡರೆ ಅದರ ಮೇಲೆ ಇನ್ಸ್‌ಪೆಕ್ಟ್ ಎಂದು ರುಜು ಹಾಕಿ ಹೋಗುತ್ತಾರೆ. ಟಿ. ಬಿ. ಗೆ ಹೋಗಿ ರಸಕವಳ ಊಟಮಾಡಿ ಅಲ್ಲಿ ಒಂದೂಕಾಲು ರೂಪಾಯಿ ಕೊಡುವುದು. As a Legislator I have observed all these things ಚೀಫ್ ಇಂಜಿನಿಯರುಗಳು ಟಿ. ಬಿ. ಯಲ್ಲಿ ತಯಾರು ಮಾಡಿದಂಥ ಊಟವನ್ನು What non-sense is it ? What sort of food is it ? ಎಂದು ಹೇಳುವವರು ಇದ್ದಾರೆ. ಮಾನ್ಯ ಬಸವಲಿಂಗಪ್ಪನವರಿಗೆ ಇದು ಅರ್ಥವಾಗಿರಬೇಕು.

Sri. C. M. Arumugam.—Please elaborate on it.

ಶ್ರೀ ಎಸ್. ಸಿದ್ದವೀರಪ್ಪ :—ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಚೇರ್ಮನ್‌ರಿಗೂ ಅರ್ಥವಾಗಿರಬೇಕು.

ಶ್ರೀ ಎಚ್. ಡಿ. ದೇವೇಗೌಡ :—ನಾವು ನಡೆದುಕೊಳ್ಳತಕ್ಕ ರೀತಿಯ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ನಾನು ಇದನ್ನು ಹೇಳುವಾಗ ಬರೀ ಮಿನಿಸ್ಟರ್ಸ್‌ಗೆ ಮಾತ್ರ ಹೇಳಲಿಕ್ಕೆ ತಯಾರಿಲ್ಲ. ಪಿ. ಎಸ್. ಸಿ. ಕೆಟ್ಟದಾಗಿ ವರ್ತನೆ ಮಾಡುವುದಾದರೆ, ಪಿ. ಎಸ್. ಸಿ. ಮೆಂಬರ್ ಅವ್ಯವಹಾರ ಮಾಡುವುದಾದರೆ ಅದು ಸರಿಯಿಲ್ಲ.

It is the responsibility of all the 216 members. ನಾವು ಪ್ರತಿ ಹೆಜ್ಜೆಯಲ್ಲಿ ನೋಡುತ್ತೇವೆ. ಕೇವಲ ಸಿದ್ದವೀರಪ್ಪ ಮತ್ತು ದೇವರಾಜ ಅರಸ್ ಎಂದು ಹೇಳಿ ನನ್ನ ಜವಾಬ್ದಾರಿಯನ್ನು ತಪ್ಪಿಸಿಕೊಂಡು ಹೋಗುವುದಕ್ಕೆ ನಾನು ತಯಾರು ಇಲ್ಲ. You are administering today ಆದ್ದರಿಂದ ನೀವು ಸ್ವಲ್ಪ ಇದರ ಕಡೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ನನ್ನ ಜವಾಬ್ದಾರಿಯಿಂದ ನಾನು ನುಣುಚಿಕೊಳ್ಳಬೇಕಾಗಿಲ್ಲ.

ಸಾಮಾನ್ಯ ಆಡಳಿತದ ಬಗ್ಗೆ ಹೇಳತಕ್ಕ ಕಾಲದಲ್ಲಿ ಅಡ್ಮಿನಿಸ್ಟ್ರೇಷನ್ನಿಗೆ ನಾವು ಖರ್ಚು ಮಾಡತಕ್ಕ ಹಣ ಲೆಕ್ಕ ಹಿಡಿಯಬೇಕು. ಅಧಿಕಾರಿಗಳು ಅದರ ಬಗ್ಗೆ ಆಲೋಚನೆ ಮಾಡಬೇಕು. ಇವತ್ತು ರಾಜ್ಯದಲ್ಲಿರತಕ್ಕ ಎರಡು ಪರ್ಸೆಂಟ್ ಜನಕ್ಕೆ ಎಷ್ಟು ಹಣವನ್ನು ಖರ್ಚು ಮಾಡುತ್ತೇವೆ, 98 ಪರ್ಸೆಂಟ್ ಜನಕ್ಕೆ ಏನು ಹಣವನ್ನು ಖರ್ಚು ಮಾಡುತ್ತೇವೆ ಎನ್ನುವುದು ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆ ಮಾಡುವ ಕಾಲದಲ್ಲಿ ಅವರ ಮನಸ್ಸಿಗೆ ತಾಕಿದರೆ ಸಾಕು. ಅಧಿಕಾರಿಗಳ ಮನೋಭಾವನೆ ಬದಲಾವಣೆಯಾಗಬೇಕು. ನಾನು ಅಧಿಕಾರಿಗಳಿಗೆ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ರಾಜಕೀಯ ಪಕ್ಷಗಳ ಮುಖಂಡರುಗಳಿಗೆ ಮಣಿಯುವುದು ಬೇಡ. ಇದನ್ನು ಚೀಫ್ ಮಿನಿಸ್ಟರ್‌ರವರು ಅಪ್ರಿಷಿಯೇಟ್ ಮಾಡುತ್ತಾರೆಂದು ಕಾಣುತ್ತದೆ. ಯಾರಿಗಾದರೂ ಆ ರೀತಿ ಕೆಲಸ ಮಾಡುವುದು ತಪ್ಪು. ಮುಖ್ಯಮಂತ್ರಿಗಳಿಗೆ ತಿಳಿಸತಕ್ಕ ಶಕ್ತಿ ಇಲ್ಲದಿದ್ದರೆ ಅವರು ಬೆನ್ನು ತಟ್ಟುತಕ್ಕ ಪ್ರವೃತ್ತಿಯನ್ನು ಬೆಳಸಿಕೊಳ್ಳಬೇಕಾಗುತ್ತದೆ. ಮಂತ್ರಿಗಳ ಅಪೇಕ್ಷೆಯಂತೆ ಮಾಡಿಬಿಡೋಣ ಎನ್ನುವ ಭಾವನೆ ಅಧಿಕಾರಿಗಳಲ್ಲಿ ಬೆಳೆದರೆ ಅಂಥ ಅಧಿಕಾರಿಗಳಿಂದ ರಾಜ್ಯಕ್ಕೆ ಒಳ್ಳೆಯ ಕೆಲಸ ಆಗುವುದಿಲ್ಲ, ಕಲ್ಯಾಣವಾಗುವುದಿಲ್ಲ, ಎನ್ನುವ ಮಾತನ್ನು ಹೇಳುತ್ತೇನೆ. ರಾಜಕಾರಣಿಗಳ ಮನಸ್ಸಿನೊಳಗೆ ಏನಿದೆ ಎನ್ನುವುದನ್ನು ಅರಿತು ನಡೆದುಕೊಳ್ಳುವ ಪ್ರವೃತ್ತಿ ಅಧಿಕಾರಿಗಳಲ್ಲಿ ಹೋಗಬೇಕು. ಈ ಭಾವನೆಯನ್ನು ಮುಂದುವರಿಸಿಕೊಂಡು ಹೋದರೆ ದೇಶಕ್ಕೆ ಒಳ್ಳೆಯದು ಅಲ್ಲವೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇಷ್ಟು ಹೇಳತಕ್ಕ ಕಾಲದಲ್ಲಿ ಎಲ್ಲಾ ಅಧಿಕಾರಿಗಳೂ ಕೆಳಮಟ್ಟದಲ್ಲಿ ನಡೆದುಕೊಳ್ಳುತ್ತಾರೆಂದು ಹೇಳುತ್ತಾ ಇಲ್ಲ. ಒಳ್ಳೆಯ ಆಫೀಸರ್ಸ್ ಇದ್ದಾರೆ. ಅವರಿಗೂ ಕೂಡ ಒಂದು ರೀತಿಯ ಡಿಜೆಕ್ಷನ್ ಆಗಿದೆ ನನಗೆ ಯಾಕೆ, ಹಾಳಾಗಿ ಹೋಗಲಿ ಎನ್ನುವ ಭಾವನೆ ಅವರಲ್ಲಿ ಇದೆ. ಯಾವುದೋ ಒಂದು ಇಸ್ಯೂ ಬಂದಾಗ ಒಂದು ಇಲಾಖೆ ಮೇಲೆ ಚರ್ಚೆ ಆದ ಮೇಲೆ ಸಾಕಷ್ಟು ಮಾಹಿತಿಗಳನ್ನು ಜನ ಕಳುಹಿಸಿಕೊಟ್ಟಿದ್ದಾರೆ, ವಿರೋಧ ಪಕ್ಷದ ನಾಯಕರಾದ ನನಗೆ ಹಲವಾರು ಕಡೆಯಿಂದ ಮಾಹಿತಿ ಬರುತ್ತದೆ. ಭದ್ರಾವತಿ

ಕಾರ್ಖಾನೆಗೆ ನಿಜಲಿಂಗಪ್ಪನವರು ಬರೆದ ಪತ್ರವನ್ನು ಈ ಸಭೆಯಲ್ಲಿ ತಂದು ಓದಿದಿರಿ. I will collect information from several sources. ಇಷ್ಟು ಮಾತ್ರ ಹೇಳುತ್ತೇನೆ. ರಾಜಕಾರಣಿಗಳಿಗೆ ಆಯುಸ್ಸು ಅಲ್ಪಾಯುಸ್ಸು. ಬಹಳ ಹೆಚ್ಚು ಎಂದರೆ 30 ವರ್ಷಗಳ ಕಾಲ ಇರುವುದು ಕಷ್ಟವಾಗುತ್ತದೆ. 30 ವರ್ಷಗಳ ಕಾಲ ಇರುವುದಕ್ಕೆ ಸಾಧ್ಯವಾಗುವುದಿಲ್ಲ. 2-3 ಎಲೆಕ್ಷನ್ ಆದ ಮೇಲೆ ಮನೆಗೆ ಕಳುಹಿಸಿ ಕೊಡುತ್ತಾರೆ. 5 ವರ್ಷಕ್ಕೆ ಒಂದು ಸಾರಿ ಎಲೆಕ್ಷನ್ ಆಗುವುದು ಸರ್ವೇಸಾಮಾನ್ಯ. ಹೊಸದಾಗಿ ಮಂತ್ರಿಗಳು ಆಗಿರತಕ್ಕವರು ಇದನ್ನು ತಿಳಿದುಕೊಳ್ಳಬೇಕು. ರಾಜಕಾರಣಿಗಳ ಆಯುಸ್ಸು ಅಲ್ಪಾಯುಸ್ಸು. ಈ ಅಲ್ಪಾಯುಸ್ಸು ಜನ ನಮ್ಮ ಅಧಿಕಾರಿಗಳ ಮೇಲೆ ಆಡಳಿತದಲ್ಲಿ ಕೆಟ್ಟ ಒಂದು ಸಂಪ್ರದಾಯವನ್ನು ಜಾರಿಗೆ ತರುವುದಕ್ಕೆ ಹೋಗಬಾರದು. ನಾನು ಒಂದು ಸಲಹೆಯನ್ನು ರಾಜ್ಯದ ಅಧಿಕಾರಿಗಳಿಗೆ ಈ ಸಭೆಯ ಮುಖೇನ ಕೊಡುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ಕಾರಣದಿಂದಲೂ ದೇಶದಲ್ಲಿರತಕ್ಕ ರಾಜಕಾರಣಿಗಳನ್ನು ಮೆಚ್ಚಿಸುವುದಕ್ಕೆ ಅಧಿಕಾರಿಗಳು ಹೋಗುವುದು ಬೇಡ. ಕಾನೂನನ್ನು ಅನುಷ್ಠಾನಕ್ಕೆ ತರಲು ಪ್ರಾಮಾಣಿಕತೆಯಿಂದ ದುಡಿಯಿರಿ ಎಂದು ತಿಳಿಸಿ ಇನ್ನು ಹೋಂ ಡಿಪಾರ್ಟ್‌ಮೆಂಟಿಗೆ ಬರುತ್ತೇನೆ. ಈ ಡಿಪಾರ್ಟ್‌ಮೆಂಟಿನಲ್ಲಿ ಒಂದು ವಿಷಯ ಕೇಳಿ ಸಂಕಟವಾಯಿತು. ಏನು ಎಂದರೆ ನಮ್ಮ ರಾಜ್ಯದ ಶಾಸಕರೊಬ್ಬರು ಸತ್ತಾಗ ಅವರ ಶವವನ್ನು......

Sri C. M. ARUMUGHAM.—May I bring to your notice and through you Madam Speaker to the notice of the Government that today apart from General administration, several Departments are included including police. Some of our friends have seen that several CID and members belonging to the Special Branch are in the lobby. I do not know whether you have permitted them. If you have permitted, we have nothing to say. Normally they should not enter the lobby of the Assembly without the permission of the Speaker. Today's business being devoted for the discussion of police administration, some of these police officials are present and they have been indulging in several activities. Some of us will have to speak about it. If that is the case, we will not be free in discharging our duties if the members of the police are present in the Assembly lobby.

Sri H. S. SIDDAPPA.—A Sub-Inspector who is involved in Coimbatore Diamonds case was in the lobby.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಕೆಲವು ಮಂತ್ರಿಗಳ ವರ್ತನೆ ಈಚೆಗೆ ಕೆಟ್ಟಿದೆ. ಅವರ ಮಾಹಿತಿಯನ್ನು ಪಡೆಯುವುದಕ್ಕಾಗಿ ಸಿ.ಐ.ಡಿ. ಲಾಬಿನಲ್ಲಿದ್ದಾರೆ. ಅವರಿಗೆ ಮುಖ್ಯಮಂತ್ರಿಗಳು ಏನಾದರೂ ಅನುಮತಿ ಕೊಟ್ಟಿದ್ದರೆ ನಮಗೇನೂ ಅಭ್ಯಂತರವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ :—ಶಾಸನ ಸಭೆಯ ಕಾರ್ಯಕಲಾಪ ನಡೆಯುತಕ್ಕ ಕಾಲದಲ್ಲಿ ನನ್ನ ಮಿತ್ರರು ಮತ್ತು ಶಾಸಕರು ಆದ ಪಾಟೀಲರು ಸತ್ತುಹೋದಾಗ, ಅವರ ಶವವನ್ನು ಸಂಬಂಧಪಟ್ಟ ಜಾಗಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಪೊಲೀಸ್ ಇಲಾಖೆಯಿಂದ ಸಹಾಯ ಸಿಕ್ಕಲಿಲ್ಲ. ರಾತ್ರಿ ಎಂಟೂವರೆ ಗಂಟೆಗೆ ಸತ್ತರೆ ಬೆಳಿಗ್ಗೆ ಒಂಬತ್ತೂವರೆ ಗಂಟೆಯಾದರೂ ಅವರ ಶವ ಅಲ್ಲಿಯೇ ಇತ್ತು ಎಂದು ಕೇಳಿದೆ. ಈ ಸಭೆಯ ಕಾರ್ಯಕಲಾಪ ನಡೆಯುತಕ್ಕ ಕಾಲದಲ್ಲಿ

ಇಂಥ ದುರ್ಘಟನೆ ನಡೆದಾಗ ಸಂಬಂಧಿಕರಿಗೆ ಶವವನ್ನು ಮುಟ್ಟಿಸುವ ಬಗ್ಗೆ ಅವಕಾಶವನ್ನು ಮಾಡಿಕೊಡಬೇಕಾಗಿತ್ತು. ಇದರ ಬಗ್ಗೆ ನಿಯಮಾವಳಿಗಳನ್ನು, ಸಂಪ್ರದಾಯಗಳನ್ನು ಹಾಕಿಕೊಂಡು ಬಂದಿದ್ದಾರೆ. ಈ ದಿಶೆಯಲ್ಲಿ ಇಲಾಖೆಯ ಅಧಿಕಾರಿಗಳು ಸರಿಯಾಗಿ ನಡೆದುಕೊಳ್ಳಲಿಲ್ಲ. ಯಾರೇ ಇರಲಿ, ಆ ರೀತಿ ಮಾಡಿದ್ದು ಸರಿಯಾದುದು ಅಲ್ಲ. ಮುಖ್ಯಮಂತ್ರಿಗಳು ಇತ್ತ ಕಡೆಗೆ ಸ್ವಲ್ಪ ಗಮನ ಹರಿಸಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮೇಲ್ಮಟ್ಟದ ಪೊಲೀಸ್ ಅಧಿಕಾರಿಗಳ ಬಗ್ಗೆ ಹೇಳುವುದಾದರೆ ಐ.ಜಿ.ಪಿ. ಕೆಲಸ ಮಾಡತಕ್ಕವರಿಗೆಲ್ಲಾ ದುಶ್ಚಟ ಇದ್ದಂಥ ಕಾಲ ಬಲ್ಲೆ. ಇವತ್ತು ಇರತಕ್ಕ ಅಧಿಕಾರಿಗಳು they are free from such vices. ಅಷ್ಟು ಹೇಳುವುದಕ್ಕೆ ನಾನು ಹಿಂದೂ ಮುಂದೂ ನೋಡಬೇಕಾದ್ದು ಇಲ್ಲ. ಈ ಇಲಾಖೆಯಲ್ಲಿ ರಾಜಕಾರಣಿಗಳ ಪ್ರವೇಶ ಇಲ್ಲದಿದ್ದರೆ ಉತ್ತಮವಾಗಿ ಕೆಲಸ ನಡೆಯಲಿಕ್ಕೆ ಸಾಧ್ಯವಾಗುತ್ತದೆ. ಈ ಇಲಾಖೆಯಲ್ಲಿ ದಕ್ಷತೆ ಅಭಾವ ಇದ್ದರೆ ಹೆಚ್ಚು ರಾಜಕಾರಣಿಗಳ ಪ್ರವೇಶ ಅದಕ್ಕೆ ಕಾರಣ ಎಂದು ಹೇಳಿದರೆ ತಪ್ಪಾಗಲಾರದು. ಅದನ್ನು ನಾನು ಹೇಳತಕ್ಕ ಕಾಲದಲ್ಲಿ ನಿದರ್ಶನಗಳನ್ನು ಕೊಡುತ್ತಾ ಹೋಗುತ್ತೇನೆ. ಮುಖ್ಯಮಂತ್ರಿಗಳು ಕೆಲಸ ಮಾಡತಕ್ಕ ಕಾಲದಲ್ಲಿ ಇಕ್ಕಟ್ಟಿನ ಪರಿಸ್ಥಿತಿ ಬರುತ್ತದೆ. ಒಬ್ಬ ಸಬ್‌ಇನ್ಸ್‌ಪೆಕ್ಟರನ್ನು 7-8 ದಿವಸಗಳಿಗೊಮ್ಮೆ ಟ್ರಾನ್ಸ್‌ಫರ್ ಮಾಡುವುದು ಆಮೇಲೆ ಕ್ಯಾನ್ಸಲ್ ಮಾಡುವುದು ಹೀಗೆ ಆಗಬಾರದು. ಇಂಥ ಘಟನೆಗಳು ನಡೆದಿವೆ. ಗುಂಪುಗಳ ಜಂಜಾಟದಲ್ಲಿ ಒಬ್ಬ ಇನ್ಸ್‌ಪೆಕ್ಟರವರಿಗೆ ಟ್ರಾನ್ಸ್‌ಫರ್ ಆರ್ಡರ್ ಇಶ್ಯು ಮಾಡಿ ಆಮೇಲೆ ಕ್ಯಾನ್ಸಲ್ ಮಾಡುವುದು ಸರಿಯಲ್ಲ. ದಕ್ಷತೆಯಿಂದ ಕೆಲಸ ಮಾಡುವಾಗ ಕೆಲವು ಎಡರುತೊಡರುಗಳು ಬರುತ್ತವೆ. ಈ ಇಲಾಖೆಯಲ್ಲಿ ದಕ್ಷತೆಯ ಅಭಾವ ಇದ್ದರೆ ಅದು ರಾಜಕಾರಣಿಗಳ ಪ್ರವೇಶವೇ ಕಾರಣ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಒಂದು ವರ್ಷದಿಂದ ಆಡಳಿತ ಅನುಭವ ಹೇಳುವುದಾದರೆ ಕೆಲವು ಫೈಲುಗಳನ್ನು ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಕಳುಹಿಸಿಕೊಟ್ಟಿದ್ದಾರೆ.

ಶ್ರೀಮಾನ್ ತಿಮ್ಮಪ್ಪನವರು ಹೆಚ್ಚಿಗೆ ಕಾಲ ಇದರ ಬಗ್ಗೆ ವಿನಿಯೋಗ ಮಾಡುತ್ತಾರೆ. ನಂದಗುಡಿ ರೇಂಜ್ ಪೊಲೀಸ್ ಸ್ಟೇಷನ್ ಬಗ್ಗೆ ಪೂರ್ಣ ವಿವರಣೆ ಇದೆ. ಅಲ್ಲಿ ಒಬ್ಬ ಹುಡುಗನನ್ನು ತೆಗೆದುಕೊಂಡು ಹೋಗಿ 28 ದಿವಸಗಳ ಕಾಲ ಅಕ್ರಮವಾಗಿ ಇಟ್ಟುಕೊಂಡು ಆಮೇಲೆ ಕೋರ್ಟ್ ಆರ್ಡರ್ ತೆಗೆದುಕೊಂಡಿರತಕ್ಕದ್ದು ಪ್ರತಿಯೊಂದು ಪೂರ್ಣ ವಿವರಣೆಗಳನ್ನು ಕೊಟ್ಟಿದ್ದಾರೆ. ಇದು ಹೊಸಕೋಟೆ ತಾಲ್ಲೂಕಿಗೆ ಸಂಬಂಧಪಟ್ಟಿದ್ದು. ರಾಜಕಾರಣಿಗಳ ಪ್ರವೇಶದಿಂದ ಒಂದೊಂದು ಸಾರಿ ಈ ರೀತಿ ಕಷ್ಟವಾಗುತ್ತದೆ. ಇದರಲ್ಲಿ ಒಂದು ವಿಚಾರ ಇಟ್ಟುಕೊಳ್ಳಬೇಕು. ಯಾವ ಪಕ್ಷದ ರಾಜಕಾರಣಿಯಾಗಲಿ, ಪ್ರತಿಪಕ್ಷದ ಜನತೆಯನ್ನು ಪೊಲೀಸ್ ಅಧಿಕಾರಿಗಳ ಸಹಾಯದಿಂದ ತಳಿದು ಇಡಲಿಕ್ಕೆ ಸಾಧ್ಯವಿಲ್ಲ ಎಂದು ಅನೇಕ ರಾಜಕೀಯ ಮಿತ್ರರಿಗೆ ಈ ಮಾತನ್ನು ಹೇಳವುದಕ್ಕೆ ಇಷ್ಟಪಡುತ್ತೇನೆ. ಕೆಲವರು ಹೊಸದಾಗಿ ಗೆದ್ದು ಬಂದ ಆವೇಶದಲ್ಲಿ ತಮ್ಮ ಎದುರಾಳಿಗಳನ್ನು ತುಳಿದು ಇಡಲಿಕ್ಕೆ ಸಾಧ್ಯ ಎಂದು ತಿಳಿದು ಕೊಂಡಿರಬಹುದು. ಹಾಗೆ ಮಾಡುವುದು ಸಾಧ್ಯವಿಲ್ಲ. ಚೆಂಡನ್ನು ನೆಲಕ್ಕೆ ಹೊಡೆದರೆ ಅಷ್ಟೇ ರಭಸದಿಂದ ಅದು ಮೇಲಕ್ಕೆ ಹಾರುತ್ತದೆ. ಹಾಗೆ ಎದುರಾಳಿಗಳನ್ನು ತುಳಿದು ಇಡುತ್ತೇವೆ ಎಂದು ತಿಳಿದುಕೊಂಡರೆ ಅದು ತಪ್ಪಾಗುತ್ತದೆ.

ಶ್ರೀ ಎ.ಎ. ದೇಸಾಯಿ :— ಅದು ತಮ್ಮ ಅನುಭವ ಎಂದು ಕಾಣುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ :—ತಾವು ವಿಷಯ ಸಂಗ್ರಹಣೆಮಾಡಿ, ಬೇಡ ಎಂದು ಹೇಳುವುದಿಲ್ಲ. I know Mr. Desai very well. Let him try to understand things.

Sri C. M. ARUMUGHAM : Does he require more than one year to understand things ?

ಶ್ರೀ ಹೆಚ್.ಡಿ. ದೇವೇಗೌಡ:—ಶ್ರೀ ಆರ್ಮುಗಂರವರು ಒಂದು ವರ್ಷದಲ್ಲಿ ಈ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ಆದರೆ ನನ್ನಂಥವನಿಗೆ ಅವರಿಗಿಂತಲೂ ಜಾಸ್ತಿ ಸಮಯ ಬೇಕು. ಪ್ರಾಸಂಗಿಕವಾಗಿ ಹೇಳುವುದಾದರೆ, ಕುಣಿಗಲ್‌ನಲ್ಲಿ ಒಂದು ವರ್ಷದಲ್ಲಿ ಐದು ಸಾರಿ ಕರ್ಫ್ಯೂ ಜಾರಿಯಾಗಿದೆ. ಆ ರೀತಿ ರಾಜಕೀಯ ಪ್ರವೇಶ ಆಗಬಾರದು. ಒಂದು ಹಳ್ಳಿಯೊಳಗೆ ಐದಾರು ಸಲ ಗುಂಪು ಘರ್ಷಣೆಗಳು ಆಗಿವೆಯೆಂದು ಒಂದು ಪತ್ರಿಕೆಯಲ್ಲಿ ಓದಿದೆ. ರಾಜಕೀಯ ಮುಖಂಡರುಗಳು ಪ್ರತಿ ಪಕ್ಷಗಳನ್ನು ಅಥವಾ ಅವರ ಎದುರಾಳಿಗಳನ್ನು ಹತ್ತಿಕ್ಕುವುದಕ್ಕೆ ಕೆಲವು ಸಂದರ್ಭಗಳಲ್ಲಿ ಪೊಲೀಸ್ ಅಧಿಕಾರಿಗಳನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಹೋಗುವುದರಿಂದ ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಬ್ಬ ಕಾನ್‌ಸ್ಟೇಬಲ್, ಹೆಡ್ ಕಾನ್‌ಸ್ಟೇಬಲ್ ಮತ್ತು ಸರ್ಕಲ್ ಇನ್‌ಸ್ಪೆಕ್ಟರ್ ಈ ಮೂರು ಜನ ಇದ್ದರೆ, ಸಹಸ್ರಾರು ಜನ ಇರತಕ್ಕ ಗುಂಪನ್ನು ಚದುರಿಸತಕ್ಕ ವಾತಾವರಣ ಬೆಳೆದುಕೊಂಡು ಬಂದಿದೆ. ಆ ರೀತಿ ಲಾ ಅಂಡ್ ಆರ್ಡರ್ ಸಿಚುಯೇಷನ್ ಮೇಂಟೈನ್ ಮಾಡುವ ಒಂದು ವಾತಾವರಣ ಬೆಳೆದುಕೊಂಡು ಬಂದಿದೆ. ಅದಕ್ಕೆ ತದ್ವಿರುದ್ಧವಾಗಿ ಹೋಗತಕ್ಕ ಪರಿಸ್ಥಿತಿಯಲ್ಲಿ ನಾವು ನಡೆದುಕೊಳ್ಳಬಾರದು. ಒಂದು ಸಾರಿ ಪೊಲೀಸ್ ಇಲಾಖೆಯಿಂದ ನ್ಯಾಯ ದೊರೆಯುವುದಿಲ್ಲ, ಏನು ಮಾಡಿದರೂ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ರಾಜಕೀಯ ಒತ್ತಡಗಳಿಂದ ಸಾಧ್ಯವಾಗುತ್ತದೆ ಎನ್ನುವ ವಾತಾವರಣ ನಿರ್ಮಾಣವಾದರೆ, ಎಷ್ಟು ರಿಸರ್ವ್ ಪೊಲೀಸ್ ತೆಗೆದುಕೊಂಡು ಹೋದರೂ ಪರಿಸ್ಥಿತಿಯನ್ನು ಸರಿಮಾಡಲಿಕ್ಕೆ ಸಾಧ್ಯವಿಲ್ಲ, ಕರ್ನಾಟಕಕ್ಕೆ ಸಂಬಂಧಪಟ್ಟ ಹಾಗೆ ಮೂರು ಕೋಟಿ ಜನ ಇರತಕ್ಕದ್ದು. ಪೊಲೀಸ್ ಸ್ಟಾಫ್ ಲಕ್ಷಗಟ್ಟಲೆ ಇರಲಾರದು. ಹೆಚ್ಚು ಹೆಚ್ಚು ಅಂದರೆ ಹತ್ತಿಪ್ಪತ್ತು ಸಾವಿರ ಪೊಲೀಸ್ ಕಾನ್‌ಸ್ಟೇಬಲ್ಸ್ ಇದ್ದಾರೆ. ಕಾನೂನು ರಕ್ಷಣೆ ಮಾಡುವ ಕಾಲದಲ್ಲಿ ಲಾ ಅಂಡ್ ಆರ್ಡರ್ ಮೇಂಟೈನ್ ಮಾಡುವ ಕಾಲದಲ್ಲಿ ಒಳ್ಳೆಯ ವಾತಾವರಣ ಕಲ್ಪಿಸಬೇಕಾಗುತ್ತದೆ. ಏನು ಮಾಡಿದರೂ ಚಿಂತೆ ಇಲ್ಲ. ರಕ್ಷಕರು ಇದ್ದಾರೆಂದು ಅವ್ಯವಹಾರವನ್ನು ಮಾಡಿದ್ದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಪೊಲೀಸ್ ಅಧಿಕಾರಿಗಳು ಪ್ರಯತ್ನ ಮಾಡಿದರೆ, ಜನತೆಯ ಮನಸ್ಸಿನಲ್ಲಿ ಕೆಟ್ಟ ವಾತಾವರಣ ಬೆಳೆದು ಲಾ ಅಂಡ್ ಆರ್ಡರ್ ಮೇಂಟೈನ್ ಮಾಡುವುದಕ್ಕೆ ಈಗಿರುವ ಪೊಲೀಸ್ ಕಾನ್‌ಸ್ಟೇಬಲ್‌ಗಳಿಂದ ಸಾಧ್ಯವಾಗುವುದಿಲ್ಲ. ಕೆಲವು ಕಡೆ ಅನೇಕ ಘಟನೆಗಳು ನಡೆದಿರುವುದು ನನ್ನ ಗಮನಕ್ಕೆ ಬಂದಿದೆ. ಅದನ್ನು ನಿಮ್ಮ ಕಡೆ ಕಳುಹಿಸಿಕೊಡುತ್ತೇನೆ. ಇವತ್ತು ನ್ಯಾಯವಾದ ಒಂದು ರಕ್ಷಣೆಯಾಗತಕ್ಕಂಥ ಕಾಲದಲ್ಲಿ ಯಾವ ರಾಜಕೀಯ ಪ್ರವೇಶಕ್ಕೂ ಎಡೆಕೊಡತಕ್ಕದ್ದು ಸಾಧುವಲ್ಲ ಎನ್ನುವ ವಾತಾವರಣ ನಿರ್ಮಾಣವಾಗಬೇಕು ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಒಂದು ಕಡೆ ವಿದ್ಯುಚ್ಛಕ್ತಿ ಇಲಾಖೆ ಅಫಿಶಿಯಲ್ಲನ್ನು ಪೊಲೀಸ್ ಆಫೀಸರು ಎಳೆದುಕೊಂಡು ಹೋಗಿ ಹೊಡೆದು ಬಡಿದು ಗಲಾಟೆಯಾಗಿರುವುದು ಪತ್ರಿಕೆಯಲ್ಲಿ ಬಂದಿರುವುದನ್ನು ನಾವು ಓದಿದ್ದೇವೆ. ಪೊಲೀಸ್ ಅಧಿಕಾರಿಗಳು ಎಲ್ಲೆ ಮೀರಿ ವರ್ತಿಸಿದರೆ ಅವರ ಮೇಲೆ ಕೇಸ್ ಹಾಕುವುದಕ್ಕೆ ಆಗುವುದಿಲ್ಲ, ಪೊಲೀಸರ ಮೇಲೆ ಕೇಸು ಹಾಕಲು ಪರವಾನಗಿ ಕೊಡಬೇಕೇ ಬೇಡವೇ ಅವರು ಹದ್ದು ಮೀರಿ ವರ್ತನೆ ಮಾಡಿದ್ದಾರೆಯೇ ಇಲ್ಲವೇ ಎಂದು ನಿಯಮಾವಳಿಯಲ್ಲಿ ಅದಕ್ಕೆ ಅವಕಾಶ ಇದೆಯೇ ಎಂದು ನೋಡುವುದರಲ್ಲಿ ಸಮಯ ಕಳೆವರೆ ಹೊಡೆದುಕೊಂಡಿರುವವರ ಪ್ರಾಣ ಹೋಗಿರುತ್ತದೆ. ದುರ್ವರ್ತನೆಯಿಂದ ನಡೆದುಕೊಂಡಿರ ತಕ್ಕಂಥ ಅಧಿಕಾರಿಗಳಿಗೆ ಶಿಕ್ಷೆ ಕೊಡುವುದು ಕಷ್ಟವಾಗುತ್ತದೆ. ಯಾವ ಅಧಿಕಾರಿ ಇನ್‌ವಾಲ್ವ್ ಆಗಿದ್ದಾನೋ ಅವನನ್ನು ಸಸ್ಪೆಂಡ್ ಮಾಡಿದರೆ, ಮೇಲಿಂದ ಒತ್ತಡ ಬಂದು ಅವನನ್ನು

ರೀ ಇನ್ವೆಸ್ಟಿಗೇಟ್ ಮಾಡುತ್ತಾರೆ. ನಾನು ಈ ಕೇಸಿನ ಪೂರ್ಣ ವಿವರಣೆಗಳನ್ನು ಕೊಟ್ಟು ಪ್ರಸ್ತಾಪ ಮಾಡಬೇಕಾದರೆ ಸಭೆಯ ಕಾಲವನ್ನು ಹೆಚ್ಚು ತೆಗೆದುಕೊಳ್ಳಬೇಕಾಗುತ್ತದೆ. ನನ್ನ ಹತ್ತಿರ ಸಂಬಂಧಪಟ್ಟ ಪೇಪರ್ಸ್ ಇದೆ. ಆ ಅಧಿಕಾರಿಯ ಹೆಸರು ಹೆಚ್. ಬಸವಯ್ಯ, ಸಬ್ ಇನ್ಸ್ಪೆಕ್ಟರ್ ಆಫ್ ಪೊಲೀಸ್, ಕಂಟ್ರೋಲ್ ರೂಂ, ಇನ್ಫೆಂಟರಿ ರೋಡ್, ಬೆಂಗಳೂರು. ಅವರು ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಪಟ್ಟ ನೌಕರನನ್ನು ಹಿಡಿದು ಹಿಂಸೆಗೆ ಗುರಿಮಾಡಿ, ಆತನ ಮೇಲೆ ಕೇಸ್ ಹಾಕಿದಾಗ, ಹೈಕೋರ್ಟಿನಲ್ಲಿ ಅದಕ್ಕೆ ಸರ್ಕಾರಿ ಪರ್ಮಿಷನ್ ಬೇಕು ಎಂದು ರೂಲ್‌ಔಟ್ ಆಗಿದೆ. ಏಟು ತಿಂದಿರತಕ್ಕ ಮನುಷ್ಯನಿಗೆ ಪರ್ಮಿಷನ್ ಸಿಕ್ಕಿಲ್ಲ. ಅಧಿಕಾರಿಗಳು ಎಲ್ಲೆ ಮೀರಿ ವರ್ತಿಸುತ್ತಿದ್ದಾರೆ. ಅವರಿಗೆ ಶಿಕ್ಷೆ ಮಾಡುವುದಕ್ಕೆ ಸುಲಭವಾಗಿ ನಿಯಮಾವಳಿಯಲ್ಲಿ ಬದಲಾವಣೆ ಮಾಡುವುದಕ್ಕೆ ಅವಕಾಶವಿದ್ದರೆ ಮಾಡಬೇಕು ಎಂದು ಹೇಳುತ್ತೇನೆ. ಹಾಗೂ ಪೊಲೀಸ್ ಇಲಾಖೆಯಲ್ಲಿ ಕೆಲವು ಮಾರ್ಪಾಡುಗಳು ಕೂಡ ಆಗಬೇಕಾಗುತ್ತದೆ, ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿ ಛೇರ್ಮನ್ ಆಗಿದ್ದಾಗ ಕೆಲವು ಜೈಲುಗಳಿಗೆ ಹೋಗಿದ್ದೆ. ಕೆಲವು ಅಪರಾಧಿಗಳಿಗೆ ಕೊಡುವ ಸೌಲಭ್ಯಗಳಲ್ಲಿ ಎ ಕ್ಲಾಸ್, ಬಿ ಕ್ಲಾಸ್ ಅಂತ ಮೂರು ದರ್ಜೆ ಇರುವುದು ಬೇಕಾಗಿಲ್ಲ. ಮರ್ಡರ್ ಮಾಡುವವರಿಗೆ ಎ ಕ್ಲಾಸ್, ಬಿ ಕ್ಲಾಸ್ ಅವಶ್ಯಕತೆ ಇಲ್ಲ. ಅದು ಹೋಗಬೇಕು. ಎಲ್ಲರಿಗೂ ಒಂದೇ ಕ್ಲಾಸ್‌ಮಾಡಿ, ಈ ಮೂರನೇ ದರ್ಜೆಯವರಿಗೆ ಕೊಡತಕ್ಕ ತೊಂದರೆ ಏನಿದೆ ಅದನ್ನು ನಿವಾರಣೆ ಮಾಡಿ ಅಲ್ಲಿ ಉತ್ತಮವಾದಂಥ ವಾತಾವರಣ ನಿರ್ಮಾಣ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಅವನಿಗೆ ಮಿನಿಮಮ್ ರಿಕ್ವೈರ್‌ಮೆಂಟ್ಸ್ ಕೊಡಬೇಕಾಗುತ್ತದೆ. ಇವತ್ತು ಎಫ್.ಐ. ಆರ್ ಕೊಟ್ಟ ಅಂಡರ್ ಟ್ರೈಯಲ್ ಮೇಲೆ ಛಾರ್ಜ್‌ಶೀಟ್ ಮಾಡುವುದಕ್ಕೆ ವರ್ಷಗಟ್ಟಲೆ ತೆಗೆದುಕೊಳ್ಳುವುದನ್ನು ನೋಡಿದ್ದೇವೆ. ಛಾರ್ಜ್‌ಶೀಟ್ ಕೊಟ್ಟ ಮೇಲೆ ಖೂನಿ ಮೊಕದ್ದಮೆಗಳು ತೀರ್ಮಾನವಾಗುವುದಕ್ಕೆ ಎರಡು ಮೂರು ವರ್ಷವಾಗುತ್ತದೆ. ಅಷ್ಟು ಹೊತ್ತಿಗೆ ಅವರ ಹೆಣ ಎತ್ತಿ ಹೋಗುತ್ತದೆ. ಮರ್ಡರ್ ಕೇಸುಗಳಲ್ಲಿ ಆಫೀಸರನ್ನು ಚಿತಾವಣೆ ಮಾಡಿ ದ್ವೇಷದಿಂದ ನಿರಪರಾಧಿಗಳ ಹೆಸರು ಸೇರಿಸಿರುವುದನ್ನು ನೋಡಿದ್ದೇವೆ. ಎಫ್.ಐ. ಆರ್ ಕೊಟ್ಟರೂ ವರ್ಷಾನುಗಟ್ಟಲೆ ಛಾರ್ಜ್‌ಶೀಟ್ ಕೊಟ್ಟಿಲ್ಲ. ಹೀಗಾಗಿ 2,3 ವರ್ಷ ಅಂಡರ್ ಟ್ರೈಯಲ್ ಆಗುವ ಪರಿಸ್ಥಿತಿ ನೋಡಿದ್ದೇವೆ. ಆತನು ಪನಿಷ್‌ಮೆಂಟ್‌ಗೆ ಒಳಪಟ್ಟರೆ 4 ವರ್ಷ, 5 ವರ್ಷ ಸಜಾ ಅನುಭವಿಸಬೇಕು ಅಂದರೆ ಇಲ್ಲೇ 3 ವರ್ಷ ಆಗಿರುತ್ತದೆ. ಅವನು ಒಟ್ಟಿನಲ್ಲಿ 7 ವರ್ಷ ಕಾಲ ಸಾಯಬೇಕಾಗುತ್ತದೆ. ಆದುದರಿಂದ ಅಂಡರ್ ಟ್ರೈಯಲ್ ಆಗಿದ್ದಾಗ 2ವರ್ಷ ಶಿಕ್ಷೆ ಅನುಭವಿಸಿರುವುದನ್ನು, ನ್ಯಾಯಾಲಯದಲ್ಲಿ ಕೊಡತಕ್ಕ ಶಿಕ್ಷೆಯಲ್ಲಿ ಕಳೆಯಬೇಕು ಎಂದು ನನ್ನ ಭಾವನೆ. ಇವತ್ತು ಅಂಡರ್ ಟ್ರೈಯಲ್ ಆಗಿ ಅನುಭವಿಸಿರುವ ಶಿಕ್ಷೆಯನ್ನು ಬಹುಶಃ ನ್ಯಾಯಾಧೀಶರು ಕೊಡತಕ್ಕ ತೀರ್ಪಿನಲ್ಲಿ ಕಳೆದರೆ, ಒಳ್ಳೆಯದಾಗುತ್ತದೆಂದು ನನ್ನ ಭಾವನೆ. ಅದನ್ನು ಆಲೋಚನೆ ಮಾಡಿರಿ.

ಇನ್ನೊಂದು ವಿಷಯ ಏನೆಂದರೆ ಎಫ್. ಐ. ಆರ್. ಕೇಸಸ್‌ಗೆ ವಿಟ್ನೆಸ್ ಇಲ್ಲ ಅದು ಇಲ್ಲ, ಇದು ಇಲ್ಲ ಎಂದು ಮುಂದುವರಿಸಿಕೊಂಡು ಹೋಗುವುದು ಯೋಗ್ಯವಲ್ಲ. ಅದನ್ನು ಆದಷ್ಟು ಬೇಗ ಡಿಸ್‌ಪೋಸ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಈಗ ಬೆಂಗಳೂರು ಮಧ್ಯಭಾಗದಲ್ಲಿರತಕ್ಕ ಸೆಂಟ್ರಲ್ ಜೈಲನ್ನು ಹೊರಗೆ ಹಾಕತಕ್ಕಂಥ ಕಾರ್ಯಕ್ರಮ ತೆಗೆದುಕೊಂಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಹಿಂದೆ ಈ ಬಗ್ಗೆ ಚರ್ಚೆಯಾಗಿದೆ. ಈ ವಿಷಯದಲ್ಲಿ ನಾನು ಹೇಳುವುದು ಏನೆಂದರೆ ಯಾವನಾದರೂ ಈ ಜೈಲಿಗೆ ಹೋಗಿ ಬಂದಮೇಲೆ ಅವನು ಉತ್ತಮನಾದ ನಾಗರೀಕನಾಗಿ ಬಾಳುವುದಕ್ಕೆ ಒಂದು ವಾತವರಣವನ್ನು ಉಂಟುಮಾಡುವಂಥ ಸುಧಾರಣೆ ಇದರಲ್ಲಿ ಆಗಬೇಕು ಎಂದು. ಈ ದಿಶೆಯಲ್ಲಿ ತೆಗೆದುಕೊಂಡು ಬರಬೇಕಾದರೆ ಈ ಸೆಂಟ್ರಲ್ ಜೈಲನ್ನು ಹೊರಗೆ ತೆಗೆದುಕೊಂಡು ಹಾಕಬೇಕು ಎಂದು ಹೇಳುತ್ತೇನೆ

ಇನ್ನು ಮೈಸೂರಿನಲ್ಲಿ ತಮ್ಮ ಹೆಸರಿನಲ್ಲಿ ಒಂದು ಘಟನೆ ನಡೆದಿದೆ. ಅದರಲ್ಲಿ ನಿಮ್ಮ ಹೆಸರು ದುರುಪಯೋಗವಾಗಿದೆ. ಈವೊತ್ತು ಬೆಳಗ್ಗೆ ಆ ಜನ ನನ್ನ ಹತ್ತಿರ ಬಂದಿದ್ದರು. ಅವರು ಹೆಸರು ಕೆ.ಎಸ್. ಜಯಮ್ಮಣ್ಣಿ. ಅವರ ಗಂಡ ಬಳ್ಳಾರಿಯಲ್ಲಿ ವರ್ಕ್ ಮಾಡುತ್ತಿದ್ದಾರೆ. ಇನ್ನೊಬ್ಬರು ಬಿ. ದೇವರಾಜ್ ಅರಸ್ ಅನ್ನುವವರು ಈ ಮನೆಯನ್ನು ಭೋಗ್ಯ ಮಾಡಿಕೊಂಡು ನಿಮ್ಮ ಹೆಸರು ದುರುಪಯೋಗ ಮಾಡಿ ಪೊಲೀಸ್ ಅಧಿಕಾರಿಗಳು ಅವರಿಗೆ ಹೆಚ್ಚು ಕಿರುಕುಳ ಕೊಡುತ್ತಿದ್ದಾರೆಂದು ನಾನು ಕೇಳಿದ್ದೇನೆ. ಈ ರೀತಿ ನಿಮ್ಮ ಹೆಸರು ದುರುಪಯೋಗ ಮಾಡಿ ಕೊಂಡಿರುವುದು ಎಷ್ಟೋ ಕೇಸುಗಳು ನಿಮ್ಮ ಗಮನಕ್ಕೆ ಬರುವುದಿಲ್ಲ. ಅವರು $3\frac{1}{2}$—4 ಸಾವಿರ ರೂಪಾಯಿ ಕೊಟ್ಟು ಆ ಮನೆಯನ್ನು ಇಳಿಭೋಗ್ಯ ಮಾಡಿಕೊಂಡಿದ್ದಾರೆಂದು ನಾನು ಕೇಳಿದ್ದೇನೆ. ಅವರು ಆ ಮನೆಯಲ್ಲಿ ವಾಸ ಮಾಡುವುದಿಲ್ಲ, ಅಲ್ಲಿ ವಾಸ ಮಾಡುತ್ತಾ ಇರುವವರಿಗೆ ಹೆಚ್ಚು ಕಿರುಕುಳ ಕೊಡುತ್ತಿದ್ದಾರೆ. ಇದರಲ್ಲಿ ತಪ್ಪಿತಸ್ಥರು ಯಾರೇ ಇರಲಿ ಅವರಿಗೆ ಶಿಕ್ಷೆ ಮಾಡಬೇಕು. ಅವರು ನಿಮ್ಮ ಹೆಸರನ್ನು ದುರುಪಯೋಗ ಮಾಡಿಕೊಂಡು ಸಬ್ ಇನ್‌ಸ್ಪೆಕ್ಟರನ್ನು ಕರೆದುಕೊಂಡು ಹೋಗಿ ಅವರನ್ನು ಗೋಳೊಯ್ದುಕೊಳ್ಳುತ್ತಿದ್ದಾರೆ. ಅಲ್ಲಿಯ ಸ್ಥಳೀಯ ಅಧಿಕಾರಿಗಳು ಈ ರೀತಿ ಮಾಡಬಾರದು. ಅದಕ್ಕೆ ನಾವು ಸೂಚನೆ ಕೊಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಪೊಲೀಸ್ ಇಲಾಖೆಯಲ್ಲಿ ಸ್ಥಳೀಯ ರಾಜಕಾರಿಣಿಗಳು ಆಗಲಿ, ರಾಜಕೀಯ ಮುಖಂಡರಾಗಲು ಮಧ್ಯೆ ಪ್ರವೇಶ ಮಾಡಬಾರದು.

ಶ್ರೀ ಜಿ. ರಾಮೇಗೌಡ :—ತಾವು ಈ ಬಗ್ಗೆ ಒತ್ತೊತ್ತಿ ಹೇಳುತ್ತಿದ್ದೀರಿ. ಇದರಲ್ಲಿ ರಾಜ ಕಾರಿಣಿಗಳು ಇಂಟರ್ ಫಿಯರ್ ಆಗಬಾರದು ಎಂದು ಒತ್ತೊತ್ತಿ ಹೇಳುತ್ತೀರಿ. ಈ ಬಗ್ಗೆ ಹೇಳಬೇಕಾದರೆ ಅವರನ್ನು ವರ್ಗ ಮಾಡುವ ಸಂದರ್ಭದಲ್ಲಿ 1 ನೇ ತಾರೀಖು ಒಂದು ಆರ್ಡರ್, 2 ನೇ ತಾರೀಖು ಒಂದು ಆರ್ಡರ್, 3 ನೇ ತಾರೀಖು ಒಂದು ಆರ್ಡರ್, 4 ನೇ ತಾರೀಖು ಒಂದು ಆರ್ಡರ್ ಈ ರೀತಿ ಒಂದೊಂದು ಆರ್ಡರ್ ಮಾಡುತ್ತಾರೆ. ಈ ರೀತಿ ಮಾಡಿದ ಪ್ರಕರಣಗಳಲ್ಲಿ ನಾವು ಕೆಲವರು ಇಂಟರ್‌ಫಿಯರ್ ಮಾಡುವುದು ತಪ್ಪಾಗುತ್ತದೆಯೇ.

ಶ್ರೀ ಹೆಚ್. ಡಿ. ದೇವೇಗೌಡ :—ಈ ರೀತಿ ಒಂದನೇ ತಾರೀಖು ಒಬ್ಬರನ್ನು ಪೋಸ್ಟ್ ಮಾಡುವುದು 2 ನೇ ತಾರೀಖು ಒಬ್ಬರನ್ನು 3 ನೇ ತಾರೀಖು ಒಬ್ಬರನ್ನು 5 ನೇ ತಾರೀಖು ಒಬ್ಬರನ್ನು ಪೋಸ್ಟ್ ಮಾಡುವುದು ಈ ರೀತಿ ಆರ್ಡರ್ ಮಾಡಿದರೆ ಮುಖ್ಯಮಂತ್ರಿಗಳಿಗೆ ಹೇಳಬೇಕು. ಅಧಿಕಾರಿಗಳ ಹತ್ತಿರ ನೀವು ಏತಕ್ಕೆ ಹೋಗಬೇಕು ?

ಶ್ರೀ ಜಿ. ರಾಮೇಗೌಡ :—ಮುಖ್ಯಮಂತ್ರಿಗಳಿಗೆ ಹೇಳೋಣ ಎಂದರೆ ಅಡ್ಮಿನಿಸ್ಟ್ರೇಷನ್ ನಡೆಸುವವರು ನಾವು, ಅವರಲ್ಲ, ಮುಖ್ಯಮಂತ್ರಿಗಳು ಏನು ಮಾಡುತ್ತಾರೆ ಎಂದು ಹೇಳುತ್ತಾರೆ.

ಶ್ರೀ ಹೆಚ್. ಡಿ. ದೇವೇಗೌಡ :—ಇದರಲ್ಲಿ ರಾಜಕೀಯ ಬಣ್ಣ ಮಾತನಾಡುವುದು ಬೇಡ. ಈ ಸಂದರ್ಭದಲ್ಲಿ ಒಂದು ವಿಷಯ ಹೇಳಬೇಕಾಗುತ್ತದೆ. ಶ್ರೀ ಮೊರಾರ್ಜಿ ದೇಸಾಯಿ ಅವರು ಮಹಾರಾಷ್ಟ್ರದಲ್ಲಿ ಚೀಫ್ ಮಿನಿಸ್ಟರ್ ಆಗಿದ್ದಾಗ ಅವರು ಹೇಳಿದ್ದರಂತೆ ಏನೆಂದರೆ ಯಾವ ಶಾಸಕರೇ ಆಗಲಿ, ಎಂ.ಎಲ್.ಎ. ಆಗಲಿ ಎಂ.ಎಲ್.ಸಿ. ಆಗಲಿ ಅದು ಅಧಿಕಾರಿಗಳನ್ನು ಹೋಗಿ ನೋಡಬಾರದು ಮಂತ್ರಿಗಳನ್ನು ಬಂದು ನೋಡಬೇಕು ಎಂದು ಬಿಗಿ ಇಟ್ಟಿದ್ದರಂತೆ. ಹಾಗೆ ಮಾಡಿದರೆ ಅನುಕೂಲವಾಗುತ್ತದೆ. ಒಂದೊಂದು ತಾಲ್ಲೂಕಿಗೂ ಒಬ್ಬೊಬ್ಬ ಮಂತ್ರಿಗಳು ಮಾಡುತ್ತಾ ಇರುವುದನ್ನು ನೋಡಿದರೆ ನಮಗೆ ಗೊತ್ತಾಗುತ್ತದೆ.

ಶ್ರೀ ಜೆ.ಎಲ್. ಕಬಾಡಿ :—ಮಹಾರಾಷ್ಟ್ರದಲ್ಲಿ ನಾವು ಇದ್ದೆವು. ಮಾನ್ಯ ಡೆಪ್ಯೂಟಿ ಸ್ಪೀಕರ್‌ರವರೂ ಕೂಡ ಇದ್ದರು, ಅಲ್ಲಿ ಏನು ನಡೆಯುತ್ತಿತ್ತು ಎನ್ನುವುದು ಮಾನ್ಯಉಪಾಧ್ಯಕ್ಷರಿಗೆ ಗೊತ್ತಿದೆ.

ಶ್ರೀ ಹೆಚ್.ಡಿ. ದೇವೇಗೌಡ:—ಮಂತ್ರಿಗಳು ಏನೇನು ವರ್ತನೆ ಮಾಡುತ್ತಿದ್ದಾರೆ ಎಂದು ನಾನು ನೋಡಿದ್ದೇನೆ.

ಶ್ರೀ. ಹೆಚ್. ಸಿದ್ದವೀರಪ್ಪ :—ಹಿಂದೆ ಇರಬಹುದು, ಈವೊತ್ತಿನ ದಿವಸ ಆ ರೀತಿ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ:—ನನ್ನನ್ನು ಕೆಣಕುವುದಕ್ಕೆ ಹೋಗಬೇಡಿ. ಈವೊತ್ತು ಯಾರ ಮುಖಕ್ಕೂ ಟಾರ್ ಹಾಕುವುದಕ್ಕೆ ಹೋಗುವುದಿಲ್ಲ. ನಾನು ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾತನಾಡುತ್ತಿದ್ದೇನೆಯೇ ಹೊರತು ಬೇರೆ ಏನೂ ಇಲ್ಲ. ನಾವು ಈ ದೀಶೆಯಲ್ಲಿ ಹೋಗೋಣ. ನಾವು ಅಧಿಕಾರಿಗಳ ಹತ್ತಿರ ಹೋಗಿ ಏತಕ್ಕೆ ಇಂಟರ್‌ಫಿಯರ್ ಆಗಬೇಕು. ಈವೊತ್ತು ರಾಜಕೀಯ ಹಂತದಲ್ಲಿ ಕೆಲಸ ಮಾಡುವಂಥ ದೊಡ್ಡ ದೊಡ್ಡ ಅಧಿಕಾರಿಗಳು ಇದ್ದಾರೆ, ಅವರ ಮೇಲ್ಪಟ್ಟು ಮಂತ್ರಿಗಳು ಇದ್ದಾರೆ ಅವರ ಮೇಲ್ಪಟ್ಟು ಮುಖ್ಯ ಮಂತ್ರಿಗಳು ಇದ್ದಾರೆ. ಈವೊತ್ತು ತಾವು ಒಂದು ಹೊಸ ಸರ್ಕ್ಯುಲರ್ ತಂದಿದ್ದೀರಿ ಎಂದು ಕೇಳಿದ್ದೇನೆ. ಅದು ಏನೆಂದರೆ ಯಾರು ಯಾರು ರಾಜಕಾರಿಣಿಗಳು ಪೋಲೀಸ್ ಸ್ಟೇಷನ್ನಿಗೆ ಹೋಗಿ ಯಾವ ಯಾವ ವಿಷಯದಲ್ಲಿ ಪ್ರವೇಶ ಮಾಡುತ್ತಾರೆ ಅವರು ಒಂದು ಮಾಹಿತಿ ಸಂಗ್ರಹಣೆ ಮಾಡುವುದಕ್ಕೆ ಮಾಡಿಸಿದ್ದೀರಾ ಎಂದು ತಿಳಿದು ಬಂದಿದೆ. ಅದಕ್ಕೆ ನಾನು ಸಂತೋಷ ಪಡುತ್ತೇನೆ. ಅಧಿಕಾರಿಗಳ ಹತ್ತಿರ ಹೋಗಿ ಒತ್ತಡ ತರುವ ಸಂದರ್ಭ ಇದೆ. ಆದರೆ ಪೋಲೀಸ್ ಅಧಿಕಾರಿಗಳಲ್ಲಿ ಎಲ್ಲರೂ ಉತ್ತಮರೂ ಇದ್ದಾರೆ ಎಂದು ಹೇಳುವುದಿಲ್ಲ.

ಅಲ್ಲಿ ಉತ್ತಮರೂ ಇದ್ದಾರೆ ಅಧಮರೂ ಇದ್ದಾರೆ. ಇದು ಪೋಲೀಸ್ ಇಲಾಖೆಗೆ ಒಂದಕ್ಕೆ ಅನ್ವಯವಾಗುತ್ತದೆ ಎಂತಲ್ಲಾ ಎಲ್ಲಾ ಇಲಾಖೆಗಳಿಗೂ ಅನ್ವಯವಾಗುತ್ತದೆ. ಆದರೆ ಅದರಲ್ಲಿ ಉತ್ತಮರಿಗೆ ರಕ್ಷಣೆ ಕೊಡಬೇಕು. ಅನೀತಿವಂತರಿಗೆ ಶಿಕ್ಷೆ ಕೊಡಬೇಕು. ಹಾಗೆ ಮಾಡಿ ಯಾವ ಅಂಜಿಕೆಗೂ ಅಳುಕದೆ ಶಿಕ್ಷೆ ಮಾಡುವಂತಾಗಬೇಕು. ಹಾಗಾದರೆ ನಾವು ಸಹಕರಿಸಬಹುದು.

Sri C. M. ARUMUGHAM : An elderly man who was the Chief Minister of Mysore used to say whenever there were complaints, that the accused was known to him. He used to phone and say ಅವನು ನಮ್ಮವನು. ನಮ್ಮ ಹುಡುಗನನ್ನು ಬಿಟ್ಟು ಬಿಡಪ್ಪಾ So we had persons like him as Chief Minister and there was no law and order during that period. Several persons who were booked, were set free. I must speak the truth. Several criminals were let free and treated as Hon. Gentlemen of the State.

ಶ್ರೀ ಹೆಚ್. ಡಿ. ದೇವೇಗೌಡ :—ನಮ್ಮ ಮಿತ್ರರಾದ ಶ್ರೀಮಾನ್ ಆರ್ಮುಗಂರವರು ಏನು ಹೇಳಿದ್ದಾರೆ. ಅದು ಸಾಧ್ಯತೆ ಇದೆ. ನನ್ನ ಹತ್ತಿರ ಕೂಡ ಅದೇರೀತಿ ಬೇಕಾದಷ್ಟು ನಿದರ್ಶನಗಳು ಇವೆ. ಅವುಗಳ ಬಗ್ಗೆ ಮಾತನಾಡಬಲ್ಲೆ. ಸುಮ್ಮನೆ ಅದರ ಬಗ್ಗೆ ಕಾಲಾಕ್ಷೇಪ ಮಾಡುವುದು ಬೇಡ. If there are such facts, let us condemn such things I do not want to shield anybody. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳವುದಾದರೆ ಮುಖ್ಯಮಂತ್ರಿಗಳು ಹೇಳಿ ಬಿಡಿಸುವುದು ಇರಲಿ, ಈ ಮರಿ ಮಂತ್ರಿಗಳ್ಳೂ ಪ್ರತಿ ತಾಲ್ಲೂಕಿಗೂ ಹೋಗಿ ಅವರನ್ನು ಹೆದರಿಸಿ ಬಿಡಿಸುವ ಕಾಲ ಬಂದಿದೆ. ಯು ಮಸ್ಟ್ ನೊ ದಟ ಕೆಲವರು ಅಲ್ಲಿ ಹೋಗಿ ಆ ಅಧಿಕಾರಿಗಳನ್ನು ಥ್ರೆಟ್ ಮಾಡುತ್ತಾರೆ. ನಿಮ್ಮನ್ನು 24 ಗಂಟೆ ಒಳಗೆ

ಒದ್ದು ಓಡಿಸಿ ಬಿಡುತ್ತೇವೆ ಎಂದು ಹೇಳುತ್ತಾರೆ. ಈ ರೀತಿ ಮಾಡಬಾರದು, ಇದು ತಪ್ಪು ಎಂದು ಹೇಳುತ್ತೇನೆ. ಈ ಬಗ್ಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಶ್ರೀಮಾನ್ ಧರ್ಮವೀರರ ಕಾಲದಲ್ಲಿ ಪಾರ್ಲಿಮೆಂಟ್ ಸದಸ್ಯರು ಹೋಗಿ ಎಷ್ಟೋ ಕೇಸಸ್‌ಗಳಲ್ಲಿ ಶಿಕ್ಷೆ ಕಡಿಮೆ ಮಾಡಿಸಿದ್ದಾರೆ. ಇವರು ನಮಗೆ ಬೇಕಾದವರು, ಐ ನೊ ಹಿಮ್ ಪರ್ಸನಲಿ ವೆಲ್ ಎಂದು ಹಾಗೆ ಹೀಗೆ ಹೇಳಿ ಶಿಕ್ಷೆ ಕಡಿಮೆ ಮಾಡಿಸಿದ್ದಾರೆ. ಬೇಕಾದರೆ ನಿಮ್ಮ ಫೈಲು ತೆಗೆದುನೋಡಿ, ಸಿಕ್ಕುತ್ತದೆ ಇದು ಏತಕ್ಕೆ ಆಯಿತೋ ಏನೋ ಗೊತ್ತಿಲ್ಲ, ಈ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ.

ಶ್ರೀ ಹೆಚ್. ಸಿದ್ದವೀರಪ್ಪ :—ಇವೆಲ್ಲಾ ಹಿಂದೆ ಆಗಿರಬಹುದು.

ಶ್ರೀ ಹೆಚ್. ಡಿ. ದೇವೇಗೌಡ :—ಈ ತರಹ ಪ್ರಚೋದನೆ ಮಾಡಬೇಡಿ ಹಿಂದೆ ಏನು ಆಗಿದೆ. ಈಗ ಏನು ಆಗಿದೆ ಎಂದು ಹೇಳುವುದಕ್ಕೆ ಹೋಗಬೇಡಿ. ಈಗ ಅಡ್ಮಿನಿಸ್ಟ್ರೇಷನ್ ಯಾವರೀತಿಯಲ್ಲಿ ನಡೆಯಬೇಕು ಎನ್ನುವುದರಲ್ಲಿ ಮಾತನಾಡೋಣ.

ಈ ಹೊತ್ತು ಒಂದು ವಾತಾವರಣವೇನಿದೆ ಅದನ್ನು ಸುಧಾರಣೆ ಮಾಡಬೇಕಾದರೆ ಎಲ್ಲರೂ ಸಹಕರಿಸಬೇಕಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಪೊಲೀಸ್ ಇಲಾಖೆಯಲ್ಲಿ ನೋಡಿದರೆ ಒಂದು ವರ್ಷದಿಂದೀಚೆಗೆ ಗುಲ್ಬರ್ಗದಲ್ಲಿ ಒಬ್ಬ ಮಾರವಾಡಿಯನ್ನು ಹೊಡೆದು ಸಾಯಿಸಿದರು, ಹೀಗೆಯೇ ಕೆಲವು ಘಟನೆಗಳು ನಡೆದಿವೆ. ನಾಲ್ಕೈದು ತೀವ್ರತರವಾದ ಘಟನೆಗಳು ನಡೆದಿವೆ, ಇವುಗಳ ಬಗ್ಗೆ ಸರಿಯಾದ ರೀತಿಯಲ್ಲಿ: ಪರಿಶೀಲನೆ ಮಾಡಿ ತಪ್ಪಿತಸ್ಥರಿಗೆ ಉಗ್ರ ಶಿಕ್ಷೆ ಕೊಡಬೇಕು. ಒಬ್ಬ ವಿದ್ಯಾರ್ಥಿ ಸೈಕಲ್ ಕದ್ದ ಎನ್ನುವ ನೆಪದ ಮೇಲೆ ಅವನ್ನು ಹಿಡಿದುಕೊಂಡು ಹೋಗಿ ಹೊಡೆದು ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸೇರಿಸಿದರು. ಆ ಹುಡುಗನಿಗೆ ಏಟು ಬಹಳ ಬಿದ್ದಿದೆಯೋ ಏನು ಎಂಬುದನ್ನು ನೋಡುವುದಕ್ಕೆ ಹೋಗಲು ಅಲ್ಲಿ ಪೋಲೀಸರ ಕಾವಲು, ಒಳಗೆ ಬಿಡುವುದಿಲ್ಲ. ಇಂಥ ಪರಿಸ್ಥಿತಿಯನ್ನು ಒಂದು ವರ್ಷದಿಂದ ನೋಡಿದ್ದೇವೆ. ಯಾರಾದರೂ ಅಧಿಕಾರಿಗಳು ಹದ್ದು ಮೀರಿ ವರ್ತನೆ ಮಾಡಿದರೆ ಅವರಿಗೆ ಶಿಕ್ಷೆ ಮಾಡಲು ಹಿಂದೆ ಮುಂದೆ ನೋಡಬೇಕಾಗಿಲ್ಲ. ಕೆಲವು ಸಂದರ್ಭಗಳಲ್ಲಿ ಹಾಗೆ ವರ್ತನೆ ಮಾಡಬೇಕಾಗುತ್ತದೆ ಆದರೆ ಯಾವ ಸಂದರ್ಭದಲ್ಲಿ ಹೇಗೆ ವರ್ತನೆ ಮಾಡಬೇಕು ಎನ್ನುವ ಡಿಸ್ಕಿಪ್ಲಿನ್ ಅವರಲ್ಲಿ ಇರಬೇಕು. ಕೆಲವು ಸಂದರ್ಭಗಳಲ್ಲಿ ಹಾಗೆ ವರ್ತನೆ ಮಾಡದೆ ಇದ್ದರೆ ದುಷ್ಟ ಶಕ್ತಿಗಳನ್ನು ನಿಗ್ರಹ ಮಾಡುವುದಕ್ಕಾಗುವುದಿಲ್ಲ. ಆದರೆ ಯಾವ ಸಂದರ್ಭದಲ್ಲಿ ಮಾಡಬೇಕು ಯಾವ ಸಂದರ್ಭದಲ್ಲಿ ಮಾಡಬಾರದು ಎನ್ನುವ ವಿವೇಚನೆಯನ್ನು ಉಪಯೋಗಿಸಬೇಕು ಎಂದು ಮಾತು ಹೇಳುತ್ತೇನೆ.

ಎಕ್ಸೈಸ್ ಬಗ್ಗೆ ಮಾತನಾಡಬೇಕಾದರೆ. ಗುತ್ತೇದಾರಿ ಬಂಡವಾಳವನ್ನು ಕಿತ್ತುಹಾಕುವುದಾಗಿ ಹೇಳಿದವರು ಡಿಸ್ಟ್ರಿಕ್ಟ್‌ವೈಸ್ ಎಕ್ಸೈಸ್ ಹರಾಜು ಹಾಕುವುದಕ್ಕೆ ಏಕೆ ಹೊರಟಿದ್ದೀರಿ ? ಗುತ್ತೇದಾರಿ ಬಂಡವಾಳಕ್ಕೆ ತಿಲಾಂಜಲಿ ಕೊಡುತ್ತೇವೆಂದು ಶ್ರೀ ಸಿದ್ದವೀರಪ್ಪನವರು ಒಮ್ಮೆ ಹೇಳಿದ್ದರು.

ಶ್ರೀ ಎಚ್. ಸಿದ್ದವೀರಪ್ಪ :—ಒಂದು ಜಿಲ್ಲೆಯಲ್ಲಿ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ :—ಇದರ ಬಗ್ಗೆ ಬದಲಾವಣೆ ಮಾಡುವುದು ನಿಮಗೆ ಕಷ್ಟ ಅನೇಕ ಫೋರ್ಸಸ್ ಇವೆ.

Sri D. DEVARAJ URS : For a moment please don't think that we are interested in continuing it. It is being continued only

with a view to safeguard the interests of the State and to get more and more revenue to the State.

ಶ್ರೀ ಹೆಚ್.ಡಿ. ದೇವೇಗೌಡ :—ರಾಜ್ಯದ ಬೊಕ್ಕಸಕ್ಕೆ ಆದಾಯ ಹೆಚ್ಚು ತರತಕ್ಕ ಗುರಿಯಿಂದ ಈ ಕೆಲಸ ಮಾಡಿದ್ದೇವೆಂದು ಹೇಳಿದ್ದಾರೆ. ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ರಾಜ್ಯಕ್ಕೆ ಆದಾಯ ಬರತಕ್ಕ ಒಂದೇ ದೃಷ್ಟಿಕೋನದಿಂದ ಸಮರ್ಥನೆ ಮಾಡಿದರೆ ಕೆಲವೇ ಕೆಲವರು ಮನಾಪಲಿ ಮಾಡಿಕೊಂಡಿದ್ದಾರೆ. ಸ್ವಲ್ಪ ಹಂತ ಹಂತವಾಗಿಯಾದರೂ ಈಗಿನ ಪದ್ಧತಿಯನ್ನು ಕೊನೆಗಾಣಿಸತಕ್ಕ ಪ್ರಯತ್ನ ಮಾಡಬೇಕು. ಕೆಲವು ಅಂಗಡಿಗಳನ್ನು ಜೋಡಣೆ ಮಾಡುವುದು ಈ ದಿಸೆಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜೇ ಅರಸ್ :—ಶ್ರೀ ಸಿದ್ಧವೀರಪ್ಪನವರು ಹೇಳಿರುವಂತೆ ಪ್ರಯತ್ನ ಮಾಡುತ್ತೇವೆ.

ಶ್ರೀ. ಎಚ್. ಡಿ. ದೇವೇಗೌಡ :—ಟಾಡಿಯಲ್ಲಿ ಅಡಲ್ಟರೇಷನ್ ಬಹಳ ಇದೆ ಎಂದು ಕೇಳಿದ್ದೇನೆ. ರಾಜ್ಯದಲ್ಲಿ ಈಚಲು ಮರಗಳಿಲ್ಲ, ಮತ್ತು ಬರುವುದಕ್ಕೆ ಕೆಲವು ರಾಸಾಯನಿಕ ವಸ್ತುಗಳನ್ನು ಮಿಶ್ರಣಮಾಡಿ ಕಂಟ್ರಾಕ್ಟರುಗಳು ಬೊಜ್ಜು ಬೆಳೆಸಿಕೊಳ್ಳುವುದಕ್ಕೆ ಹೆಚ್ಚು ಅವಕಾಶವಿದೆ ಎಂದು ಕೇಳಿದ್ದೇನೆ. ಈ ಅಡಲ್ಟರೇಷನ್ ಏನಿದೆ ಅದನ್ನು ತಡೆಗಟ್ಟಲು ಬಿಗಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕಳ್ಳಭಟ್ಟಿ ಕುಡಿದು 11 ಜನ ಸತ್ತರು ಎನ್ನುವ ವಿಚಾರ ಪ್ರಸ್ತಾಪ ಮಾಡಿದಾಗ ಸರ್ಕಾರ ಅದಕ್ಕೆ ಉತ್ತರ ಕೊಟ್ಟಿದೆ. ಇಂಥದ್ದಕ್ಕೆಲ್ಲ ಅವಕಾಶ ಕೊಡಬಾರದು. ಎಕ್ಸೈಜ್ ಇಲಾಖೆಯಲ್ಲಿ ಕೆಲವು ಅಧಿಕಾರಿಗಳಿಗೆ ದುಡ್ಡು ಇಡುವುದಕ್ಕೆ ಜಾಗವಿಲ್ಲ ಎಂದು ಕೇಳಿದ್ದೇನೆ. ಎಕ್ಸೈಜ್ ಇನ್‌ಸ್ಪೆಕ್ಟರುಗಳ ಕೆಲಸಕ್ಕೆ ಅರ್ಜಿ ಹಾಕಿರುವವರ ಪರದಾಟವನ್ನು ನೋಡಬೇಕು. ಹತ್ತು ಹದಿನೈದು ಇಪ್ಪತ್ತು ಸಾವಿರ ರೂಪಾಯಿ ಬೇಕಾದರೂ ಕೊಡುತ್ತೇವೆಂದು ಹೇಳಿಕೊಳ್ಳುತ್ತಿರುತ್ತಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಗಿಂತ ಇದರಲ್ಲಿ ಎಷ್ಟೋ ಭಾಗ ಭ್ರಷ್ಟಾಚಾರ ಹೆಚ್ಚಾಗಿದೆ. ಇದರ ಮುಂದೆ ಲೋಕೋಪಯೋಗಿ ಇಲಾಖೆ ಏನೇನೂ ಇಲ್ಲ. ಸ್ವಲ್ಪ ಬಿಗಿಯಾದ ಕ್ರಮ ತೆಗೆದುಕೊಂಡು ಅಡಲ್ಟರೇಷನ್ ಮಾಡುವುದು ಇದಕ್ಕೆಲ್ಲ ಅವಕಾಶ ಕೊಡಬಾರದು. ಒಂದು ಲಾರಿ ಹೆಂಡವನ್ನು ತಂದರೆ ಅದನ್ನು ಅಡಲ್ಟರೇಟ್‌ಮಾಡಿ ನಾಲ್ಕು ಲಾರಿ ಮಾಡಿ ಮಾರುವುದಲ್ಲದೆ ತೆರಿಗೆಯನ್ನು ಕೂಡ ಕದಿಯಲಿಕ್ಕೆ ಸಾಕಷ್ಟು ಅವಕಾಶವಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರೊಬ್ಬರು ಹಿಂದೆ ಹೇಳಿದ್ದಾರೆ. ಆದ್ದರಿಂದ ಈ ದಿಸೆಯಲ್ಲಿ ಹೆಚ್ಚು ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಪೊಲಿಟಿಕಲ್ ಪೆನ್‌ಷನ್ ಬಗ್ಗೆ ಹೇಳಬೇಕೆಂದರೆ, ಅಂಡರ್ ಟ್ರಯಲ್ ಪ್ರಿಸನರ್ಸ್ ಆಗಿ ಒಂದೆರಡು ತಿಂಗಳು ಹೋಗಿರುವವರಿಗೂ ಇದರ ಸೌಲಭ್ಯವನ್ನು ವಿಸ್ತರಿಸಬೇಕು. ದೇಶಕ್ಕೋಸ್ಕರ ಅವರು ತಮ್ಮ ಶಕ್ತಿಯನ್ನು ವಿನಿಯೋಗ ಮಾಡಿದ್ದಾರೆ. ಅನೇಕ ಜನರು ಆಸ್ತಿ ಕಳೆದುಕೊಂಡಿದ್ದಾರೆ ಇಂಥವರಿಗೆ 25 ರೂಪಾಯಿ ಕೊಟ್ಟರೆ ಅವರ ಮನಸ್ಸಿಗೆ ಸ್ವಲ್ಪ ಸಮಾಧಾನವಾಗುತ್ತದೆ. ಈ ದೇಶದ ಸ್ವಾತಂತ್ರ್ಯಕಾಲದಲ್ಲಿ ಹೋರಾಟ ಮಾಡಿದವರಿಗೆ ಮನಸ್ಸಿಗೆ ಸ್ವಲ್ಪ ನೆಮ್ಮದಿ ಬರುತ್ತದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಒಂದೆರಡು ತಿಂಗಳು ಜೈಲಿಗೆ ಹೋಗಿರುವವರಿಗೂ ರಾಜಕೀಯ ವಿಶ್ರಾಂತಿ ವೇತನವನ್ನು ಕೊಡುತ್ತಿದ್ದೀರೆಂದು ಕೇಳಿದ್ದೇನೆ. ಈವಾಗ ನಮ್ಮ ರಾಜ್ಯ ಸರ್ಕಾರದವರು 75 ರೂಪಾಯಿ ಕೊಡುತ್ತಿದ್ದಾರೆ. ಮತ್ತು ಕೇಂದ್ರ ಸರ್ಕಾರದವರು 200 ರೂಪಾಯಿ ಕೊಡುತ್ತಿದ್ದಾರೆ. ಅಂಡರ್ ಟ್ರಯಲ್‌ನಲ್ಲಿದ್ದವರಿಗೆ ತಿಂಗಳಿಗೆ 25 ರೂಪಾಯಿ ಬೇಕಾದರೂ ಕೊಡುವ ವ್ಯವಸ್ಥೆಮಾಡಿದರೆ ಅಂಥವರಿಗೂ ಮಾನಸಿಕವಾಗಿ ಸ್ವಲ್ಪ ಸಮಾಧಾನವಾಗುತ್ತದೆ.

ಈ ಇಲಾಖೆಗಳ ಮೇಲೆ ಚರ್ಚೆಮಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಸಿದ್ದಯ್ಯ :— (ಸಂತೆಮಾರಹಳ್ಳಿ) ಮಾನ್ಯ ಅಧ್ಯಕ್ಷರೇ, ನಾನು ಈ ಹೊತ್ತು ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತಿಸುತ್ತ ಈ ಬಗ್ಗೆ ಕೆಲವು ವಿಷಯಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛಿಪಡುತ್ತೇನೆ. ಸರ್ಕಾರಿ ನೌಕರಿಗಳ ಬಗ್ಗೆ ಮೊದಲು ಒಂದೆರಡು ಮಾತು ಹೇಳುತ್ತೇನೆ. ಅದರಲ್ಲಿಯೂ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್, ವೀಕರ್ ಸೆಕ್ಷನ್ಸ್‌ಗೆ ರಿಸರ್ವೇಷನ್ ಆರ್ಡರ್‌ನಿಂದ ಎಷ್ಟರಮಟ್ಟಿಗೆ ಬಾಧಕವುಂಟಾಗಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಮೊದಲನೆಯದಾಗಿ ರಿಸರ್ವೇಷನ್‌ಗೆ ಸಂಬಂಧಪಟ್ಟಂತೆ 1972 ಮತ್ತು 1971 ರಲ್ಲಿ ಹೊರಡಿಸಿರುವ ಆದೇಶಗಳು 1969 ನೇ ಇಸವಿಯಲ್ಲಿ ರಿಸರ್ವೇಷನ್ ಬಗ್ಗೆ ಹೊರಡಿಸಿರುವ ಆರ್ಡರ್‌ಗಳಲ್ಲಿ ಕೆಲವು ಬದಲಾವಣೆ ಮಾಡಿರುವುದನ್ನು ಸರ್ಕಾರದ ಗಮನಕ್ಕೆ ತರಬಯುಸುತ್ತೇನೆ. ಸೈಕಲ್ ಆಫ್ ಅಪಾಯಿಂಟ್‌ಮೆಂಟ್ಸ್ ಏನಿತ್ತು ಅದನ್ನು 1971ನೇ ಇಸವಿ ಮೇ ತಿಂಗಳಿನಲ್ಲಿ ಹೊರಡಿಸಿರುವ ಆರ್ಡರ್‌ನಲ್ಲಿ ಕಿತ್ತು ಹಾಕಿದ್ದಾರೆ. ಅದರಲ್ಲಿ ಅವರು ಕೊಟ್ಟಿರುವ ಕಾರಣಗಳು ಇಷ್ಟು. ದೇವದಾಸ್ ವರ್ಸಸ್ ಗವರ್ನ್‌ಮೆಂಟ್ ಆಫ್ ಇಂಡಿಯಾ ಇದರ ಬಗ್ಗೆ ಸುಪ್ರೀಂ ಕೋರ್ಟಿನವರು ಕೊಟ್ಟಿರುವ ತೀರ್ಪಿನ ಕೆಲವು ಭಾಗಗಳು 1969 ರಲ್ಲಿ ಹೊರಡಿಸಿದ್ದ ಆರ್ಡರಿಗೆ ವ್ಯತಿರಿಕ್ತವಾಗಿರುವುದರಿಂದ ಸೈಕಲ್ ಆಫ್ ಅಪಾಯಿಂಟ್‌ಮೆಂಟ್ಸ್ ಕಿತ್ತುಹಾಕಿದ್ದೇವೆ ಎಂದು ಹೇಳಿದ್ದಾರೆ. ಸುಪ್ರೀಮ್ ಕೋರ್ಟಿನ ತೀರ್ಪಿನಲ್ಲಿ ಹೇಳಿರುವುದೇನೆಂದರೆ ಹಿಂದುಳಿದ ಜನಾಂಗಗಳಿಗೆ ಮೀಸಲಿಡುವ ಸ್ಥಾನಗಳು 50 ಪರ್ಸೆಂಟ್‌ಗಿಂತ ಜಾಸ್ತಿಯಾಗಕೂಡದು ಎಂದು 1969 ನೇ ಇಸವಿ ಆರ್ಡರ್ ಪ್ರಕಾರ ರಿಸರ್ವೇಷನ್ ಪೋಸ್ಟ್ ಎಷ್ಟಿತ್ತು ಎಂದರೆ ಷೆಡ್ಯೂಲ್ ಕ್ಯಾಸ್ಟ್ 15, ಷೆಡ್ಯೂಲ್ ಟ್ರೈಬ್ಸ್ 3, ಇತರ ಹಿಂದುಳಿದ ವರ್ಗಗಳು 30, ಒಟ್ಟು 48 ಪರ್ಸೆಂಟ್ ಮಾತ್ರ ಇತ್ತು. ಸುಪ್ರೀಮ್‌ಕೋರ್ಟಿನ ತೀರ್ಪುಬರುವುದಕ್ಕೆ ಮುಂಚಿನಿಂದಲೂ ಅರ್ಧಭಾಗಕ್ಕಿಂತ ಕಡಿಮೆಯಾಗಿ ರಿಸರ್ವೇಷನ್ ಸ್ಥಾನಗಳಿದ್ದುವು. ಸುಪ್ರೀಂ ಕೋರ್ಟಿನ ತೀರ್ಪಿಗೆ ಯಾವುದೂ ವ್ಯತಿರಿಕ್ತವಾಗಿಲ್ಲ. ಇರುವಂಥ ವಿಷಯವೆಂದರೆ ಸೈಕಲ್ ಆಫ್ ಅಪಾಯಿಂಟ್‌ಮೆಂಟ್ಸ್‌ನಲ್ಲಿ ಮೊದಲ ಸ್ಥಾನ ಯಾರಿಗೆ ಸಿಕ್ಕಬೇಕು, ಎರಡನೇ ಸ್ಥಾನ ಯಾರಿಗೆ ಸಿಕ್ಕಬೇಕು ಎನ್ನುವುದನ್ನು ಹೇಳುವುದು. ಮೊದಲನೇದಾಗಿ ಅಪಾಯಿಂಟ್‌ಮೆಂಟ್‌ಗಳನ್ನು ಮಾಡುವಾಗ ಮೊದಲಾಗಿ ಷೆಡ್ಯೂಲ್ ಕ್ಯಾಸ್ಟು, ಆಮೇಲೆ ಷೆಡ್ಯೂಲ್ ಟ್ರೈಬ್ಸ್, ಆಮೇಲೆ ಮಿಕ್ಕ ಬ್ಯಾಕುವರ್ಡು ಕ್ಲಾಸು ಈ ರೀತಿ ರೆಕ್ರೂಟ್‌ಮೆಂಟಿನಲ್ಲಿರಬೇಕು.

This is concerning only appointments and not with reference to recruitment.

ಅಪ್ರೂವ್ಡ್ ಲಿಸ್ಟನ್ನು ತಯಾರು ಮಾಡುವಾಗ ಹಾಗೂ, ಆ ಲಿಸ್ಟಿನ ಪ್ರಕಾರ ನೇಮಕ ಮಾಡುವಾಗ ಯಾವ ರೀತಿ ಸೈಕಲ್ ಆಫ್ ಅಪಾಯಿಂಟ್‌ಮೆಂಟ್ಸ್‌ಗಳು ಇರಬೇಕು ಎನ್ನುವುದು. ಈ ಗವರ್ನ್‌ಮೆಂಟ್ ಆರ್ಡರಿನ ಅನೆಕ್ಸ್‌ಚರ್ (1)ರಲ್ಲಿದೆ. 1969 ನೇ ಇಸವಿಯಲ್ಲಿರುವ ಗವರ್ನ್‌ಮೆಂಟ್ ಆರ್ಡರಿನಲ್ಲಿ ಕಡಿಮೆ ಮಾಡಬೇಕೆಂದು ಇಲ್ಲ. ರೊಟೇನ್ ಆಗಿ ಮಾಡುವ ಅಪಾಯಿಂಟ್‌ಮೆಂಟುಗಳು, ಇದರಲ್ಲಿ ಸುಪ್ರೀಂ ಕೋರ್ಟು ಮಾಡಿರುವ ಡಿಸಿಷನ್‌ಗಳನ್ನು ವಯಲೇಟು ಮಾಡಿದೆ ಎಂದೂ ಇದರಲ್ಲಿಲ್ಲ. ಆದುದರಿಂದ ಇದನ್ನು ಮತ್ತೆ ರಿನ್ಯೂ ಮಾಡಬೇಕೆಂದು ಸರಕಾರದವಲ್ಲಿ ಕೇಳಿಕೊಳ್ಳುತ್ತೇನೆ. ಈ ಗವರ್ನ್‌ಮೆಂಟ್ ಆರ್ಡರಿನಲ್ಲಿ ಏನಿದೆ ಎಂದರೆ ಪ್ರಿಪರೇಷನ್ ಆಫ್ ಅಪ್ರೂವ್ಡ್ ಲಿಸ್ಟ್‌ನಲ್ಲಿ ಎರಡು ರೀತಿಯಾಗಿವೆ :

(1) Existing number of vacancies for the calendar year.

(2) Future number of vacancies—Unit Officer is the Recruiting Authority. The Selection in the order of Merit is 30 : 15 : 3. Ordinarily the S. C. and S. T. Candidates will be in the bottom—in effect it will be an appointment for the future number of vacancies and for the existing number of vacancies. In effect the S. C. people will be entitled to be appointed only in the future number of vacancies and not in the existing vacancies. Therefore it is an injustice done to these class of people.

Therefore my submission is, while preparing the approved list there should be a separate reservation for the existing number of vacancies and a separate reservation for the future number of vacancies.

1969ರಲ್ಲಿ ಮಾಡಿದ ಗವರ್ನಮೆಂಟ್ ಆರ್ಡರನ್ನು 1971 ರಲ್ಲಿ ಮಾಡಿಫೈ ಮಾಡಿದೆ. ಇದರಲ್ಲಿ ರೆಕ್ರೂಟ್‌ಮೆಂಟು ಆರ್ಡರನ್ನು ಕ್ಯಾನ್ಸಲ್ ಮಾಡಿಲ್ಲ. ಹಿಂದೆ ಸುಪ್ರೀಂ ಕೋರ್ಟ್‌ನಲ್ಲಿ ಆದ ಡಿಸಿಷನ್‌ಗಳು ಇದಕ್ಕೆ ಹೇಗೆ ವಿರೋಧವಾಗುತ್ತದೆ ಎಂಬುದು ನನಗೆ ಗೊತ್ತಾಗುತ್ತಿಲ್ಲ.

ಉಪಾಧ್ಯಕ್ಷರು :—ನಿಯಮ ಇರುವಂತೆ ಮಾನ್ಯ ಸದಸ್ಯರು ಮಾತನಾಡುವಾಗ ಯಾವ ಭಾಷೆಯಲ್ಲಿ ಭಾಷಣ ಮಾಡುತ್ತಾರೋ ಅದೇ ಭಾಷೆಯಲ್ಲಿ ಸದಸ್ಯರು ಭಾಷಣವನ್ನು ಮುಂದು ವರಿಸಬೇಕಾಗುತ್ತದೆ. ಮಾನ್ಯ ಸದಸ್ಯರು ಇಲ್ಲಿ ಹೇಳುವಾಗ ಮಧ್ಯ ಮಧ್ಯದಲ್ಲಿ ಇಂಗ್ಲಿಷ್ ಭಾಷೆ ಬಳಸುತ್ತಾ ಹೋದರೆ ಇದನ್ನು ರಿಪೋರ್ಟ್ ಮಾಡುವ ರಿಪೋರ್ಟರುಗಳಿಗೆ ಕಷ್ಟವಾಗುತ್ತದೆ.

ಶ್ರೀ ಕೆ. ಸಿದ್ದಯ್ಯ:—ಮೂರನೇದು. ರೆಕ್ರೂಟ್‌ಮೆಂಟು ಮಾಡುವಾಗ ಕ್ಲಾಸು ಎರಡನೇ ವರ್ಗ ಹಾಗೂ ಕ್ಲಾಸು ಮೂರನೇ ವರ್ಗ. ಇದರಲ್ಲಿ ಡಿಪಾರ್ಟ್‌ಮೆಂಟ್‌ವೈಸು ನೇಮಕ ಮಾಡುತ್ತಿದ್ದುದನ್ನು ಕ್ಯಾನ್ಸಲ್ ಮಾಡಿದ್ದಾರೆ. ಹೀಗೆ ಮಾಡಿರುವುದರಿಂದ ಇದು ಸುಪ್ರೀಂ ಕೋರ್ಟಿನ ತೀರ್ಪಿಗೆ ಹೇಗೆ ವಿರೋಧವಾಗುತ್ತದೆ? ಡಿಪಾರ್ಟ್‌ಮೆಂಟ್ ರೇಕ್ರೂಟ್‌ಮೆಂಟುಗಳನ್ನು ಮಾಡುವಾಗ ಅದನ್ನು ಸುಪ್ರೀಂ ಕೋರ್ಟಿನ ಆರ್ಡರಿಗೆ ವಿರೋಧವಾಗಿ ಮಾಡುವುದಿಲ್ಲ.

ನಾಲ್ಕನೇದಾಗಿ ರೆಕ್ರೂಟುಮೆಂಟು ಮಾಡುವಾಗ ಕ್ಯಾಟಗರಿವೈಸು ರೆಕ್ರೂಟುಮೆಂಟು ಮಾಡಬೇಕು.

ಐದನೇದಾಗಿ 1972ನೇ ಗವರ್ನಮೆಂಟು ಆರ್ಡರಿನಲ್ಲಿ ಏನಾಗಿದೆ ಎಂದರೆ ಸೈಕಲ್ ಆಫ್ ವೇಕೆನ್ಸಿಸ್‌ನಲ್ಲಿ ಎರಡು ಮೂರು ವೇಕೆನ್ಸಿಗಳನ್ನು ಫಿಲ್‌ಅಪ್ ಮಾಡುವಾಗ ರೆಕ್ರೂಟುಮೆಂಟಿನಲ್ಲಿ ರಿಸರ್ವೇಷನ್ ಅಪ್ಲೈ ಆಗುವುದಿಲ್ಲ. ಎಲ್ಲಿ ಮೂರು ವೇಕೆನ್ಸಿಗಳಿಗಿಂತ ಜಾಸ್ತಿ ಇದೆಯೋ ಅಲ್ಲಿ ಅದರಲ್ಲಿ ಒಂದು ಎರಡನೇ ವರ್ಗಕ್ಕೆ ನೇಮಕಗಳನ್ನು ಮಾಡಬಹುದು, ಒಂದು ವೇಳೆ ಮೂರಕ್ಕಿಂತ ಕಡಿಮೆ ವೇಕೆನ್ಸಿಗಳಿದ್ದರೆ ಇದರಲ್ಲಿ ಎಸ್.ಸಿ. ಹಾಗೂ ಎಸ್.ಟಿ. ವರ್ಗಗಳಿಗೆ ರಿಸರ್ವೇಷನ್ ಇರುವುದಿಲ್ಲ ಮತ್ತು ಇಂತಹ ಎಸ್.ಸಿ. ಹಾಗೂ ಎಸ್.ಟಿ. ಗಳನ್ನು ತೆಗೆದು ಕೊಳ್ಳಲು ಅವಕಾಶವೇ ಇಲ್ಲ. ಇದು ನ್ಯಾಯಾಂಗಕ್ಕೆ ವಿರೋಧವಾದುದೇನೂ ಅಲ್ಲ. ಮತ್ತು ಸುಪ್ರೀಂ ಕೋರ್ಟ್ ತೀರ್ಮಾನಕ್ಕೆ ಇದರಿಂದೇನೂ ಧಕ್ಕೆಯಾಗುವುದಿಲ್ಲ, ಆದುದರಿಂದ ಹಿಂದೆ

ಮಾಡಿರುವ ಗವರ್ನಮೆಂಟ್ ಆರ್ಡರನ್ನು ರೆಸ್ಟೋರು ಮಾಡಬೇಕೆಂದು ಸರಕಾರದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಸುಪ್ರೀಂ ಕೋರ್ಟಿನ ಕೇಸಿನಲ್ಲಿ ಎಂದರೆ ದೇವದಾಸ್ ವರ್ಸಸ್ ಗವರ್ನಮೆಂಟ್ ಆಫ್ ಇಂಡಿಯಾ ಕೇಸಿನಲ್ಲಿ ಅರ್ಧಕ್ಕಿಂತ ಜಾಸ್ತಿ ಇದ್ದ ವೇಕೆನ್ಸಿಗಳಲ್ಲಿ ಒಂದೇ ಗ್ರೂಪಿನ ಜನಗಳಿಗೆ ಕೆಲಸ ಕೊಡಬೇಕೆಂದರೆ ಇದು ಒಂದು ರೀತಿಯಾದ ಮನಾಪಲಿಸ್ಟಿಕ್ ಟೆಂಡೆನ್ಸಿಯಾಗುವುದಿಲ್ಲವೇ? ಈ ರೀತಿಯಾಗಬಾರದು. ನಾವು ಈ ದಿವಸ ಒಂದು ರೀತಿಯಾದ ಸಮಾಜವನ್ನು ನಿರ್ಮಾಣ ಮಾಡಲು ಹೊರಟಿರುವಾಗ ಸುಪ್ರೀಂ ಕೋರ್ಟಿನ ತೀರ್ಪಿನಲ್ಲಿ ಶೇಕಡ ಐವತ್ತಕ್ಕಿಂತ ಜಾಸ್ತಿ ಇದ್ದರೆ ಇದು ವಿರೋಧವಾಗುವುದಿಲ್ಲ. ಇಂತಹ ಒಂದು ತತ್ವ ಒಪ್ಪಿರುವಾಗ ಇದು ಒಂದೇ ಕ್ಲಾಸಿಗೆ ಏಕೆ ಅಪ್ಲೈ ಆಗಬೇಕು? Why noi to a family also? ಈಗ ಸರಕಾರದ ನೌಕರಿಗಳಿಗೆ ನೇಮಕಗಳನ್ನು ಮಾಡುವಾಗ ಇದರಲ್ಲಿ ಮೆರಿಟ್ ಲಿಸ್ಟು ಎಂದು ಮಾಡಿ ರೆಕ್ರೂಟು ಮಾಡುತ್ತಾರೆ. ಹಾಗೆ ಮಾಡುವಾಗ ಸರಕಾರದ ನೌಕರಿಯಲ್ಲಿರುವವರ ಮಕ್ಕಳೇ ಹೆಚ್ಚಾಗಿ ಬರುತ್ತಾರೆ. ಹಾಗೆ ಮಾಡಿದರೆ ಇದರಲ್ಲಿ ಎಸ್.ಸಿ..ಎಸ್.ಟಿ. ಬರಲು ಅವಕಾಶವೇ ಇರುವುದಿಲ್ಲ. ಸರಕಾರಿ ನೌಕರರುಗಳದೇ ಒಂದು ರೀತಿಯಾಗಿ ಮಾನಾಪಲಿ ಇದರಲ್ಲಾಗುವುದಿಲ್ಲವೇ? ಶೇಕಡಾ 90ರಷ್ಟು ಇವರೇ ಆದರೆ ಇತರ ವರ್ಗಗಳವರಿಗೆ ಇಲ್ಲಿ ಅವಕಾಶ ಸಿಗುವುದು ಕಷ್ಟ. ಇದಕ್ಕೆ ಸುಪ್ರೀಂ ಕೋರ್ಟ್ ತೀರ್ಪನ್ನು ಅಪ್ಲೈ ಮಾಡಬಾರದು. ಇನ್ನು ಬ್ಯಾಕ್‌ವರ್ಡ್ ಸರ್ಟಿಫಿಕೇಟು ಕೊಡಬೇಕು ಎಂದು ಇದೇ ಜಿ.ಓ.ನಲ್ಲಿದೆ. ಇದರ ಫಾರಂನಲ್ಲಿ ಕೊಟ್ಟಿರತಕ್ಕ ಕಾಲಂನಲ್ಲಿ ಹೀಗಿದೆ:—

Occupation of parent or guardian :

Indicate whether actual cultivator ;

Artisan, Petty Businessman, etc. :

Inferior service or Class IV including casual labour :

Any other occupation involving manual labour ;

The occupation to be specified.

ಎಂದು ಇದೆ. ಇದರ ವಿವರಗಳನ್ನು ಕೊಡಬೇಕು.

ಇಲ್ಲಿ ಪೆಟಿ ಬಿಸಿನೆಸ್‌ಮನ್ ಇಂದು ಹೇಳುತ್ತಾರೆ. ಅಂದರೆ ಯಾವ ಯಾವ ಬಿಸಿನೆಸ್ ಮಾಡುವವರು ಎಂದು ಹೇಳಿಲ್ಲ. ಇಂತಹ ಸಂದರ್ಭಗಳಲ್ಲಿ ವಿವರಗಳನ್ನು ಕೊಟ್ಟರೆ ಅನುಕೂಲವಾಗುತ್ತದೆ. ಮತ್ತು ಆಕ್ಚುಯಲ್ ಕಲ್ಟಿವೇಟರ್ ಎಂದು ಇದೆ. ಯಾವನು ನೇಗಿಲು ಹಿಡಿದು ವ್ಯವಸಾಯ ಮಾಡುತ್ತಾನೋ ಅವನು ಆಕ್ಚುಯಲ್ ಕಲ್ಟಿವೇಟರ್ ಆಗುತ್ತಾನೆಯೇ ವಿನಃ ಯಾರು ಕೂಲಿ ಕೊಟ್ಟು ಬೇರೆಯವರಿಂದ ವ್ಯವಸಾಯ ಮಾಡಿಸುತ್ತಾರೋ ಅಂತಹವರು ಆಕ್ಚುಯಲ್ ಕಲ್ಟಿವೇಟರ್ ಆಗುವುದಿಲ್ಲ. ಆದ್ದರಿಂದ ಇದರ ಬಗ್ಗೆಯೂ ಸಹ ಸರಿಯಾದ ವಿವರಗಳನ್ನು ಕೊಟ್ಟರೆ ಒಳ್ಳೆಯದಾಗುತ್ತದೆಂದು ಸರ್ಕಾರಕ್ಕೆ ಸೂಚನೆ ಮಾಡಬಯಸುತ್ತೇನೆ. Total annual incoume ಬಗ್ಗೆ salary of parent or guardian ಎಂದು ಹೇಳಿದ್ದಾರೆ. ಗಾರ್ಡಿಯನ್ ಅಂದರೆ ನಾನಾ ತರಹದ ಗಾರ್ಡಿಯನ್ಸ್ ಇರುತ್ತಾರೆ. ಕೋರ್ಟಿನವರು ಅಪಾಯಿಂಟ್ ಮಾಡಿರುವ ಗಾರ್ಡಿಯನ್ ಇರುತ್ತಾರೆ, ದಿಕ್ಕಿಲ್ಲದ ಗಾರ್ಡಿಯನ್ ಇರುತ್ತಾರೆ. ಇವರುಗಳ ಆದಾಯವನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ There is no need to insist upon the income of the guardian. Guardian is not concerned with the candidate. He might be responsible to proect that candidate. ಈ ಎಲ್ಲ

ಕಾರಣಗಳಿಂದ ಗಾರ್ಡಿಯನ್ ಬಗ್ಗೆ ಸಹ ಸೂಕ್ತ ವಿವರಣೆ ಇದ್ದರೆ ಒಳ್ಳೆಯದೆಂದು ಹೇಳಬಯಸುತ್ತೇನೆ. ಮುಂದೆ Land buildings and other sources of income ಎಂದು ಹೇಳಿದ್ದಾರೆ. ಲ್ಯಾಂಡ್ಸ್ ಬಗ್ಗೆ ಕೂಡ ವಿವರಗಳನ್ನು ಕೊಡುವಂತಿರಬೇಕು. ಯಾವ ಯಾವ ತರಹದ ಜಮೀನು ಎಷ್ಟು ಅಥವಾ ಗಾರ್ಡನ್ ಲ್ಯಾಂಡ್ಸ್ ಎಷ್ಟೆಷ್ಟು ಯಾವ ಯಾವ ಊರುಗಳಲ್ಲಿ ಇದೆ ಎಂಬುದರ ಬಗ್ಗೆ ವಿವರಗಳನ್ನು ತಿಳಿಸುವಂತಿರಬೇಕು. ಈ ರೀತಿಯ ವಿವರಗಳನ್ನು ಕೊಟ್ಟರೆ ಯಾರು ಬಡವರಿದ್ದಾರೆಂಬುದನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಅದರ ಒಂದು ಆಧಾರದ ಮೇಲೆ ಬಡವರಿಗೆ ಸರ್ಕಾರಿ ನೌಕರಿಯನ್ನು ಒದಗಿಸಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಮುಖ್ಯವಾಗಿ ಸ್ಯಾಲರಿ ಬಗ್ಗೆ ಮತ್ತು ಲ್ಯಾಂಡ್ಸ್ ಬಗ್ಗೆ ವಿವರಣೆ ಕೊಡುವಂತೆ ಇರಬೇಕು. ಇನ್‌ಕಮ್ ಬಗ್ಗೆ ತಹಶೀಲ್‌ದಾರರ ಸರ್ಟಿಫಿಕೇಟ್‌ನ್ನು ಕೊಡಬೇಕೆಂದು ಇದರಲ್ಲಿ ಇದೆ. To determine the income of an applicant, the certifying authority *viz.*, the Tahsildar will say: "I do hereby certify that on enquiry I have satisfied myself that the annual income is so much..." He must have certain particular evidence on which he is going to determine his income. Otherwise, it becomes arbitrary. ಈಗ ಏನಾಗುತ್ತಿದೆ ಎಂದರೆ, ಯಾರಾದರು ತನ್ನ ವರಮಾನದ ಬಗ್ಗೆ ತಹಶೀಲ್‌ದಾರರ ಹತ್ತಿರ ಹೋಗಿ ಸರ್ಟಿಫಿಕೇಟ್ ಬೇಕು ಎಂದು ಕೇಳುತ್ತಾನೆ. ಅವರು ನಿನ್ನ ವರಮಾನ ಎಷ್ಟು ಎಂದು ಕೇಳಿದರೆ ಆತ 200 ರೂಪಾಯಿಗಳು ಎಂದು ಹೇಳುತ್ತಾನೆ. ಅದು ಅವರಿಗೆ ಸ್ಯಾಟಿಸ್‌ಫೈ ಆಗುತ್ತದೆ. ಇದನ್ನು ಯಾರಾದರು ಒಪ್ಪುತ್ತಾರೆಯೇ? ಇಂತಹ ಸರ್ಟಿಫಿಕೇಟ್‌ಗಳನ್ನು ಗಣನೆಗೆ ತೆಗೆದುಕೊಂಡರೆ ಬಡವರಿಗೆ ನ್ಯಾಯ ದೊರಕಿಸಿಕೊಡುವುದು ಕಷ್ಟವಾಗುತ್ತದೆ. ಆದ್ದರಿಂದ ಇನ್‌ಕಮ್ ಬಗ್ಗೆ ಎವಿಡೆನ್ಸ್ ಕೊಡುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳಬಯಸುತ್ತೇನೆ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಇಲಾಖೆಯ ಬಗ್ಗೆ ಹೇಳಬೇಕೆಂದರೆ.

In the Annual Report of the General Administration of 1972 in page 3, it has been stated as follows:—

RESERVATION FOR SCHEDULED CASTES/SCHEDULED TRIBES

"In view of the fact that the representation of the persons belonging to Scheduled Castes and Scheduled Tribes in the State Services is not adequate, orders have been issued permitting carry forward of the direct recruitment vacancies reserved for Scheduled Castes and Scheduled Tribes upto the third occasion of recruitment, in case suitable candidates belonging to these classes are not available on the first two occasions. The vacancies carried forward are to be adjusted against the vacancies reserved for other Backward Classes subject to the condition that the reduction in the vacancies, reserved for other Backward classes, should not be more than half of the vacancies reserved for them and that the total reservation in favour of Scheduled

Castes/Tribes and other Backward classes, does not exceed 48 per cent on any occasion of recruitment." ಎಂದು ಹೇಳಿದ್ದಾರೆ. ಇದರಲ್ಲಿ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ವೇಕೆನ್ಸಿಗಳನ್ನು ಫಿಲಪ್ ಮಾಡುವಾಗ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರು ಸಾಕಷ್ಟು ಸಂಖ್ಯೆಯಲ್ಲಿ ಬರದೆ ಹೋದರೆ, ಅಂತಹ ವೇಕೆನ್ಸಿಗಳನ್ನು ಅದರ್ ಬ್ಯಾಕ್‌ವರ್ಡ್ ಕಮ್ಯುನಿಟಿಯವರಿಗೆ ಕೊಟ್ಟು ಇನ್ನೊಂದು ಸಲ ವೇಕೆನ್ಸಿಗಳನ್ನು ಫಿಲಪ್ ಮಾಡುವಾಗ ಕೊಡಬಹುದು ಎಂದು ಇಲ್ಲಿ ಹೇಳಿದ್ದಾರೆ. ಅಂದರೆ ಕ್ಯಾರಿ ಫರ್‌ವಾರ್ಡ್ ಮಾಡುವ ಪದ್ಧತಿಯನ್ನು ತಂದಿದ್ದಾರೆ. ಇದರಲ್ಲಿಯೂ ಸಹ ಯಾವ ರೀತಿ ತೊಂದರೆ ಬರುತ್ತದೆ ಎಂಬುದನ್ನು ಹೇಳುತ್ತೇನೆ. ಉದಾಹರಣೆಗೆ ಅದರ್-ಬ್ಯಾಕ್‌ವರ್ಡ್ ಕ್ಲಾಸಸ್ 30 ಜನರನ್ನು ಷೆಡ್ಯೂಲ್ ಕ್ಯಾಸ್ಟ್ 15 ಜನರನ್ನು, ಷೆಡ್ಯೂಲ್ ಟ್ರೈಬ್ಸ್ 3 ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದಿದ್ದಾರೆಂದು ಇಟ್ಟುಕೊಳ್ಳೋಣ. ಅಂತಹ ಸಂದರ್ಭದಲ್ಲಿ ಷೆಡ್ಯೂಲ್ ಕ್ಯಾಸ್ಟ್‌ನವರು ಕೇವಲ 5 ಜನರು ಬಂದರೆ, ಉಳಿದ ಹತ್ತು ಪೋಸ್ಟ್‌ಗಳನ್ನು ಈಗಿನ ನಿಯಮದ ಪ್ರಕಾರ ಅದರ್—ಬ್ಯಾಕ್‌ವರ್ಡ್ ಕ್ಲಾಸಸ್‌ನವರಿಗೆ ಕೊಡಬೇಕಾಗುತ್ತದೆ. ಮತ್ತೊಂದು ಸಲ ಪೋಸ್ಟ್‌ಗಳನ್ನು ಫಿಲ್‌ಪ್ ಮಾಡುವಾಗ ಅದರ್—ಬ್ಯಾಕ್‌ವರ್ಡ್ ಕ್ಲಾಸಸ್ 6 ಜನರನ್ನು, ಷೆಡ್ಯೂಲ್ ಕ್ಯಾಸ್ಟ್ 3 ಜನರನ್ನು, ಷೆಡ್ಯೂಲ್ ಟ್ರೈಬ್ಸ್ ಒಬ್ಬರನ್ನು ತೆಗೆದುಕೊಳ್ಳಬೇಕೆಂದಿರುತ್ತಾರೆಂದು ಇಟ್ಟುಕೊಳ್ಳೋಣ. ಈ ಮೊದಲಿನ ರೆಕ್ರೂಟ್‌ಮೆಂಟಿನಲ್ಲಿ ಅದರ್—ಬ್ಯಾಕ್‌ವರ್ಡ್‌ಕ್ಲಾಸಸ್‌ನವರಿಗೆ 30 ವೇಕೆನ್ಸಿಗಳ ಜೊತೆಗೆ ಷೆಡ್ಯೂಲ್ ಕ್ಯಾಸ್ಟ್‌ನವರು ಬರಲಿಲ್ಲವೆಂಬ ಕಾರಣದಿಂದ, ಅದರ ಪೈಕಿ ಹತ್ತು ವೇಕನ್ಸಿಗಳನ್ನು ಸಹ ಇವರಿಗೆ ಕೊಟ್ಟಿರುತ್ತಾರೆ. ಅಂದರೆ ಒಟ್ಟು 40 ಪೋಸ್ಟ್‌ಗಳನ್ನು ಇವರಿಗೆ ಕೊಡಲಾಗಿರುತ್ತದೆ. ಮತ್ತು ಅದನ್ನು ಕ್ಯಾರಿ–ಫರ್‌ವಾಡ್ ಮಾಡಿರುತ್ತಾರೆ. ಆದಕಾರಣ ಈ ಸಲ ಅದರ್_ಬ್ಯಾಕ್‌ವರ್ಡ್ ಕ್ಲಾಸಸ್‌ನವರಿಗೆ ಮೀಸಲಿಟ್ಟಿರುವ 6 ವೇಕೆನ್ಸಿಗಳಲ್ಲಿ ಅದನ್ನು ಕಳೆಯಬೇಕಾಗುತ್ತದೆ. ಆದರೆ ಇಲ್ಲಿ ಹೇಳಿರುವ ಪ್ರಕಾರ ನೋಡಿದರೆ 6 ವೇಕೆನ್ಸಿಗಳನ್ನು ಅದರ್-ಬ್ಯಾಕ್‌ವರ್ಡ್‌ಕ್ಲಾಸಸ್‌ನವರಿಂದ ಕಿತ್ತುಕೊಳ್ಳಬಾರದೆಂದು ಇದೆ. ಒಂದು ಸಲ ಎಷ್ಟು ಪೋಸ್ಟ್‌ಗಳನ್ನು ಕ್ಯಾರಿ–ಫರ್‌ವಾರ್ಡ ಮಾಡಿರುತ್ತಾರೋ ಅಷ್ಟೇ ಪೋಸ್ಟ್‌ಗಳನ್ನು ಮುಂದಿನ ಸಲ ರೆಕ್ರೂಟ್ ಮಾಡುವಾಗ ಏತಕ್ಕೆ ಕೊಡಬಾರದು ? ಎರಡನೇ ಸಲ ಪೋಸ್ಟ್‌ಗಳನ್ನು ಭರ್ತಿಮಾಡುವಾಗ ಈ ರೀತಿ ಮಾಡುವುದು ಸರಿಯಲ್ಲ : ಎಷ್ಟು ಪೋಸ್ಟ್‌ಗಳನ್ನು ಕ್ಯಾರಿ–ಫರ್‌ವಾರ್ಡ್ ಮಾಡಲಾಗಿರುತ್ತದೋ ಅಷ್ಟನ್ನೂ ಸಹ ಎರಡನೇ ಸಲ ಫಿಲ್‌ಪ್ ಮಾಡುವಾಗ ಕೊಡಬೇಕೆಂದು ಸರ್ಕಾರದವರಲ್ಲಿ ಈ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಸೆಲೆಕ್ಷನ್ ಮಾಡುವಾಗ ಅಭ್ಯರ್ಥಿಗಳಿಗೆ ಮೆರಿಟ್ ಇರಬೇಕು, ಕ್ವಾಲಿಫಿಕೇಷನ್ ಇರಬೇಕೆಂದು ನಿಯಮವಿದೆ. ಈ ಬಗ್ಗೆ ಕೂಡ ನಾನು ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಷೆಡ್ಯೂಲ್‌ಕ್ಯಾಸ್ಟ್‌ನವರು ಜನರಲ್ ಆಗಿ ಯಾವಾಗಲೂ ಕೆಳಗೆ ಇರುತ್ತಾರೆ. ಇದಕ್ಕೆ ನಾನಾ ಕಾರಣಗಳು ಇರುತ್ತವೆ. ಅವರು ಬೆಳೆದಿರತಕ್ಕಂಥ ಸನ್ನಿವೇಶ, ಅವರು ಪಡೆದಿರುವ ವಿದ್ಯಾಭ್ಯಾಸ, ಟ್ರೈನಿಂಗ್ ಮತ್ತು ಎನ್‌ವಿರನ್‌ಮೆಂಟ್ ಇವೆಲ್ಲಾ ಕಾರಣಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಇವರು ಸೆಲೆಕ್ಟ್ ಆಗುವುದು ಕಷ್ಟವಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಸೆಲೆಕ್ಷನ್ ಕಮಿಟಿಗಳಲ್ಲಿ ಷೆಡ್ಯೂಲ್ ಕ್ಯಾಸ್ಟ್ ರೆಪ್ರೆಸೆಂಟೇಷನ್ ಇರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಅನೇಕ ಅವ್ಯವಹಾರಗಳು ನಡೆಯುತ್ತವೆ. ನಮ್ಮವರು ಸೆಲೆಕ್ಷನ್ ಆಗಿರುವುದಕ್ಕೆ ಇದೂ ಒಂದು ಕಾರಣವೆಂದು ಹೇಳುತ್ತೇನೆ. ಎಫಿಷಿಯೆನ್ಸಿ ಟೆಸ್ಟ್ ಮಾಡುವಾಗ ಮತ್ತು ಪರೀಕ್ಷೆ ನಡೆಸುವ ಸಂದರ್ಭಗಳಲ್ಲಿ ಕೂಡ ಅನೇಕ ಅವ್ಯವಹಾರಗಳು ನಡೆಯುತ್ತವೆ. Efficiency and merit test—ಮಾಡುವ ಸಲುವಾಗಿ ಇಲಾಖಾ ಅಧಿಕಾರಿಗಳಿಗೆ ಅಧಿಕಾರವಿರುತ್ತದೆ. ಎಕ್ಸಾಮಿನೇಷನ್ ಅಥಾರಿಟಿ ಮತ್ತು ಸೆಲೆಕ್ಷನ್ ಅಥಾರಿಟಿ ಎರಡೂ ಸಹ ಇವರಿಗಿದೆ. ಪಬ್ಲಿಕ್ ಅಂಡರ್

ಟೇಕಿಂಗ್ಸ್‌ನಲ್ಲಿಯೂ ಸಹ ಸೆಲೆಕ್ಷನ್ ಮಾಡುವವರೂ ಸಹ ಅವರೇ ಆಗಿರುತ್ತಾರೆ, ಎಕ್ಸಾಮಿನೇಷನ್ ಕಂಡಕ್ಟ್ ಮಾಡುವವರು ಸಹ ಅವರೇ ಆಗಿರುತ್ತಾರೆ. ಈ ಎರಡು ಕೆಲಸಗಳನ್ನು ಒಬ್ಬರಿಗೇ ವಹಿಸಿದರೆ ಅದರಿಂದ ಎಷ್ಟು ಅನಾಹುತವಾಗುತ್ತದೆ ಎಂಬುದನ್ನು ಸರ್ಕಾರದವರು ತಿಳಿದುಕೊಂಡು, ಇವೆರಡು ಕೆಲಸಗಳನ್ನು ಬೇರೆ ಬೇರೆಯವರಿಗೆ ವಹಿಸಬೇಕು. ಮತ್ತು ಸೆಲೆಕ್ಷನ್ ಕಮಿಟಿಗಳಲ್ಲಿ ಷೆಡ್ಯೂಲ್ ಕ್ಯಾಸ್ಟ್ ರೆಪ್ರಸೆಂಟೇಷನ್ ಇರಬೇಕು. Whether in the official capacity or in a private capacity. ಈ ರೀತಿ ಷೆಡ್ಯೂಲ್ ಕ್ಯಾಸ್ಟ್ ರೆಪ್ರಸೆಂಟೇಷನ್ ಇದ್ದರೆ ಅದು ಕಮ್ಯುನಲ್ ಆಗುವುದಿಲ್ಲವೇ ಎಂದು ಯಾರಾದರು ಹೇಳುವುದಾದರೆ ಅದೇ ಕಮಿಟಿಗಳಲ್ಲಿ ಬೇರೆ ಜನಾಂಗದವರು ಇದ್ದರೆ ಅದು ಕಮ್ಯುನಲ್ ಆಗುವುದಿಲ್ಲವೇನು ?

ಕ್ಯಾಪಾಸಿಟಿ ಪ್ರತಿಯೊಬ್ಬರಿಗೂ ಇರುತ್ತದೆ. ಅವರು ಯಾವ ಜನಾಂಗದವರೇ ಆಗಲೀ ಅವರಿಗೆ ಕೆಲಸ ಮಾಡತಕ್ಕಂಥಾ ಒಂದು ಕ್ಯಾಪಾಸಿಟಿ ಇದ್ದೇ ಇರುತ್ತದೆ. ಈ ಸರ್ಕಾರಿ ಕೆಲಸಕ್ಕೆ ನೌಕರರನ್ನು ಆಯ್ಕೆ ಮಾಡತಕ್ಕಂಥಾ ಸಮಿತಿಗಳಲ್ಲಿ ಹರಿಜನಗಿರಿಜನರಿಗೆ ರೆಪ್ರೆಸೆಂಟೇಷನ್ ಕೊಡಬೇಕು.

ಎಫಿಷಿಯನ್ಸಿ ಟೆಸ್ಟ್ ಮಾಡತಕ್ಕಂಥಾ ಸಂದರ್ಭದಲ್ಲಿ ಸರ್ಕಾರಿ ಕೆಲಸಗಳಿಗೆ ಆಯಾ ಉದ್ಯೋಗಕ್ಕೆ ಸಂಬಂಧಪಟ್ಟ ಹಾಗೆ ಅವರು ಯಾವ ಯಾವ ಕೆಲಸವನ್ನು ಮಾಡಬೇಕು. ಅವರ ಕರ್ತವ್ಯವೇನು ? ಅವರ ಡ್ಯೂಟೀಸ್ ಅಂಡ್ ರೆಸ್‌ಪಾನ್ಸಿಬಿಲ್ಟೀಸ್ ಏನು ಎಂಬುದನ್ನು ತೀರ್ಮಾನಮಾಡಬೇಕು. ಮತ್ತು ಆ ಕೆಲಸಕ್ಕೆ ಎಷ್ಟು ಕ್ವಾಲಿಫಿಕೇಷನ್ ಬೇಕೋ ಅಷ್ಟನ್ನು ಮಾತ್ರ ಗೊತ್ತು ಮಾಡಬೇಕು. ಈಗ ಒಬ್ಬನನ್ನು ಗುಮಾಸ್ತ ಕೆಲಸಕ್ಕೆ ತೆಗೆದುಕೊಳ್ಳಬೇಕಾಗಿದೆ, ಅವನು ಗುಮಾಸ್ತನಾಗಬೇಕಾದರೆ ಅದಕ್ಕೆ ಫಸ್ಟ್‌ಕ್ಲಾಸ್ ಏತಕ್ಕೆ ಬೇಕು ? ಅವನು ಎಸ್. ಎಸ್. ಎಲ್. ಸಿ. ಪಾಸು ಮಾಡಿ ಡಿಪಾರ್ಟ್‌ಮೆಂಟಿನ ರೂಲ್ಸ್ ತಿಳಿದುಕೊಂಡಿದ್ದರೆ ಸಾಕು. ಆ ಬಗ್ಗೆ ಮೆರಿಟ್ ಪ್ರಶ್ನೆಯೇ ಬರುವುದಿಲ್ಲ. ಹರಿಜನಗಿರಿಜನರಿಗೆ ರಿಟನ್ ಟೆಸ್ಟ್, ವೈ. ಒ. ಓ. ಸಿ. ಕ್ವೆಶ್ಚನ್ ಕೇಳುವುದು ಇಂಥಾ ಸನ್ನಿವೇಶ ಇರುವುದರಿಂದ ಸೆಲೆಕ್ಷನ್‌ನಲ್ಲಿ ಹರಿಜನಗಿರಿಜನರು ತೀರಾ ಕೆಳಗಡೆ ಬರುತ್ತಾರೆ. ಅವರಿಗೆ ಕೆಲಸ ಸಿಕ್ಕುವುದಿಲ್ಲ. ಆದ್ದರಿಂದ ಯಾವ ಸರ್ಕಾರಿ ಕೆಲಸಕ್ಕೇ ಆಗಲೀ ಅಭ್ಯರ್ಥಿಗಳನ್ನು ತೆಗೆದುಕೊಳ್ಳುವಾಗ ಆಯಾ ಕೆಲಸಕ್ಕೆ ಎಷ್ಟು ಕ್ವಾಲಿಫಿಕೇಷನ್ ಬೇಕೋ ಅಷ್ಟು ಮಾತ್ರ ನಿರ್ಧಾರ ಮಾಡಿ ಆ ಕೆಲಸಗಳಲ್ಲಿ ಹರಿಜನಗಿರಿಜನ ಅಭ್ಯರ್ಥಿಗಳಿಗೆ ಕೆಲಸ ಸಿಕ್ಕುವ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ. ಫ್ರೀಡಂ ಫೈಟರ್ಸ್ ಬಗ್ಗೆ ಒಂದೆರಡು ವಿಷಯಗಳನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ದೇಶದ ಸ್ವಾತಂತ್ರ್ಯಕ್ಕೋಸ್ಕರ ಯಾರು ಯಾರು ಹೋರಾಟ ಮಾಡಿದ್ದಾರೆ, ಸೇವೆಯನ್ನು ಸಲ್ಲಿಸಿದ್ದಾರೆ ಅಂಥವರಿಗೆ ಸರ್ಕಾರದವರು ಏನು ಪೆನ್‌ಷನ್ ಕೊಡುತ್ತಿದ್ದಾರೆ ಅದು ನ್ಯಾಯವಾಗಿದೆ. ಆದರೆ ಅಂಥಾ ರಾಜಕೀಯ ಸಂತ್ರಸ್ಥರಿಗೆ ಪೆನ್‌ಷನ್ ಕೊಡಬೇಕಾದರೆ ಅವರು ಕೆಲವು ಕಂಡೀಷನ್‌ಗಳನ್ನು ಸ್ಯಾಟಿಸ್‌ಫೈ ಮಾಡಬೇಕು ಅಂಥವರಿಗೆ ಮಾತ್ರ ಅದು ಎಲಿಜಬಿಲಿಟಿ ಇರುತ್ತದೆ. ಅವರು ಮೂರು ತಿಂಗಳು ಜೈಲುವಾಸವನ್ನು ಅನುಭವಿಸಿರಬೇಕು ಎಂದು ಕೆಲವಾರು ಕಂಡೀಷನ್‌ಗಳನ್ನು ಹಾಕಿದ್ದಾರೆ. ಇದ್ದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಯಾರು ಸತ್ತು ಹೋಗಿದ್ದಾರೆ ಅಂಥವರ ಕುಟುಂಬದವರಿಗೆ ಪೆನ್‌ಷನ್ ಕೊಡಬೇಕು ಎಂದು ಮಾಡಿದ್ದಾರೆ. ಇದರಲ್ಲಿ ಸ್ವಾತಂತ್ರ್ಯ ಹೋರಾಟ ನಡೆಯುವಾಗ ಅದನ್ನು ನೋಡುವುದಕ್ಕೆ ಹೋಗಿ ಆಕಸ್ಮಿಕವಾಗಿ ಸತ್ತು ಹೋಗಿದ್ದಾರೆ ಅಂಥವರಿಗೂ ಈ ಪೊಲಿಕಲ್ ಪೆನ್‌ಷನ್ ಕೊಡುವುದು ತಪ್ಪಾಗುತ್ತದೆ. ಆದ್ದರಿಂದ ಅಂಥಾ ಕೇಸುಗಳಲ್ಲಿ ಹಿಂದಿನ ರೆಕಾರ್ಡ್‌ಗಳನ್ನೆಲ್ಲಾ ತರಿಸಿಕೊಂಡು ಸರಿಯಾಗಿ ನೋಡಿ ಅವರು ನಿಜವಾಗಿಯೂ ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗವಹಿಸಿ ಅದರಲ್ಲಿ ಅವರು ಸತ್ತುಹೋದರೆ ಅಥವಾ ಸುಮ್ಮನೆ ಆ ಹೋರಾಟವನ್ನು

ನೋಡುವುದಕ್ಕೆ ಹೋಗಿ ಸತ್ತುಹೋದರೆ' ಎಂಬುದನ್ನು ನೋಡಿ ಅವರು ನಿಜವಾಗಿಯೂ ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗವಹಿಸಿ ಸತ್ತುಹೋಗಿದ್ದರೆ ಅಂಥವರ ಕುಟುಂಬದವರಿಗೆ ಪೆನ್‌ಷನ್ ಆಗಲೀ ಅಥವಾ ಪರಿಹಾರವನ್ನಾಗಲೀ ಕೊಡುವುದು ನ್ಯಾಯ. ಅದಿಲ್ಲದೇ ಸುಮ್ಮನೆ ನೋಡುವುದಕ್ಕೆ ಹೋಗಿ ಆಕಸ್ಮಿಕವಾಗಿ ಆಕ್ಸಿಡೆಂಟಾಗಿ ಸತ್ತುಹೋಗಿದ್ದರೆ ಅಂಥವರಿಗೆಲ್ಲಾ ಸರ್ಕಾರದ ಹಣವನ್ನು ಕೊಡುತ್ತಾ ಹೋದರೆ ಸರ್ಕಾರ ದಿವಾಳಿಯಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ದೇಶದಲ್ಲಿ ಹಿಂದೆ ಮಹಾತ್ಮ ಗಾಂಧೀಜಿಯವರು, ಮತ್ತು ನೆಹರೂ ಅವರು ಮುಂತಾದ ಮಹನೀಯರು ನಮ್ಮದೇಶಕ್ಕೋಸ್ಕರ, ನಮ್ಮದೇಶದ ಸ್ವಾತಂತ್ರ್ಯಕ್ಕೋಸ್ಕರ ಬೇಕಾದಷ್ಟು ಹೊಡೆದಾಡಿ ಹೋರಾಟ ಮಾಡಿದ್ದಾರೆ. ಅವರು ದೇಶಕ್ಕಾಗಿ ಬೇಕಾದಷ್ಟು ತ್ಯಾಗ ಮಾಡಿದ್ದಾರೆ. ಅಂಥವರ ಜಯಂತಿ ಮಾಡಬೇಕು ಎಂದು ಹೇಳಿದ್ದಾರೆ. ಮಹಾತ್ಮ ಗಾಧೀಜಿಯವರು ಕಡ್ಡಾಯವಾಗಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳಿದರು, ಅಸ್ಪೃಶ್ಯತೆಯನ್ನು ನಿವಾರಣೆ ಮಾಡಬೇಕು ಎಂದು ಹೇಳಿದರು. ಈ ರೀತಿ ಇನ್ನೂ ಕೆಲವಾರು ತತ್ವಗಳನ್ನು ಆಚರಣೆಗೆ ತರುವುದರಲ್ಲಿ ಅವರು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಅವರು ಹೇಳಿದಂತಹ ತತ್ವಗಳನ್ನು ಯಾವ ಯಾವ ಹಳ್ಳಿಗಳಲ್ಲಿ ಶ್ರದ್ಧಾಪೂರ್ವಕವಾಗಿ ಆಚರಣೆಗೆ ತಂದಿದ್ದಾರೆ ಅಂಥಾ ಹಳ್ಳಿಗಳಿಗೆ ಸರ್ಕಾರದವರು 10—15 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಗಾಂಧೀಜಿಯವರ ತತ್ವಗಳನ್ನು ಎಷ್ಟು ಹಳ್ಳಿಗಳಲ್ಲಿ ಆಚರಣೆಗೆ ತಂದಿದ್ದಾರೆ ಎನ್ನುವಂತಹ ವಿವರಗಳು ಇದ್ದರೆ ಅವುಗಳನ್ನು ಕೊಡಬೇಕು ಎಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಪಾನನಿರೋಧವನ್ನು ಆಚರಣೆಗೆ ತರಬೇಕು ಎನ್ನುವುದು ಮಹಾತ್ಮ ಗಾಂಧೀಜಿಯವರ ಒಂದು ಮುಖ್ಯವಾದ ತತ್ವ. ಆದ್ದರಿಂದ ಯಾರೂ ಕುಡಿಯಬಾರದು ಅದರಿಂದ ಬಡವರಿಗೆ ತೊಂದರೆಯಾಗುತ್ತದೆ ಎನ್ನುವಂಥಾದ್ದನ್ನು ಮಹಾತ್ಮರ ಜಯಂತಿಯನ್ನು ಆಚರಿಸುವಂಥಾ ಕಾಲದಲ್ಲಿ ಜನಗಳಿಗೆ ಪ್ರಚಾರ ಮಾಡಬೇಕು. ಆದರೆ ಅಂಥಾ ಒಂದು ಪ್ರಚಾರ ನಡೆದಿಲ್ಲ.

ಇವೊತ್ತು ಬಡ ವ್ಯವಸಾಯ ಕೂಲಿಗಾರನಿಗೆ 2 ರೂಪಾಯಿಗಳಿಗಿಂತ ಕಡಿಮೆ ಕೂಲಿ ಸಿಕ್ಕುತ್ತದೆ. ಅದು ಒಬ್ಬನಿಗೆ ಒಂದು ಹೊತ್ತು ಊಟಕ್ಕೂ ಸಾಕಾಗುವುದಿಲ್ಲ. ಅಂಥಾ ಫ್ಯಾಮಿಲಿಯವರು ಏನು ಮಾಡಬೇಕು. ಅಂಥಾ ಜನಗಳ ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ ಸರ್ಕಾರದವರು ಇದುವರೆಗೂ ಯಾವ ಒಂದು ಯೋಜನೆಯನ್ನು ಮಾಡಲಿಲ್ಲ. ಅಂಥಾ ಬಡ ಕೂಲಿಗಾರರ ಸ್ಥಿತಿಯನ್ನು ಸುಧಾರಿಸುವ ಬಗ್ಗೆ ಒಂದು ಯೋಜನೆಯನ್ನು ಮಾಡಬೇಕು ಎಂದು ನಾನು ಸರ್ಕಾರದಲ್ಲಿ ವಿನತಿ ಮಾಡಿಕೊಳ್ಳುತ್ತೇನೆ. ಮತ್ತು ಬಡಜನಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಆ ಜನಗಳ ಪರಿಸ್ಥಿತಿಯನ್ನು ಸುಧಾರಣೆ ಮಾಡುವ ಬಗ್ಗೆ ಒಂದು ಸ್ಪೆಷಲ್ ಯೋಜನೆಯನ್ನು ಮಾಡಬೇಕು ಎಂದು ಸರ್ಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಇಷ್ಟುಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri N. B. SIRDESAI (Khanapur).—Mr. Deputy Speaker, Sir, I rise to oppose the Demand on General Administration. I have to oppose this demand because many defects are noticed in the administration of the Government. I want better administration from the Government. I am not interested in toppling down this Government or that Government. I want to point out the

defects in the administration and help the Government to streamline it and make it more conducive to the happiness of the people.

At the outset, I wish to draw the attention of the rulers to the high ideals of the Congress party which existed before independence. The ideal was to establish the Ram Rajya in India. Another high ideal of this Government was to establish the socialistic pattern of society. I wish to bring to the notice of the rulers that by mere utterances and slogans they cannot achieve these objectives. The Government or the rulers must strive hard for achieving those objectives. Each year, the demand on General Administration is discussed on the floor of this House and suggestions are made by the Hon. Members on both sides. Those suggestions are not taken into consideration by the Government. They are ignoring them. And taking advantage of majority in this House, if the Government goes on passing these demands, it is no use discussing these demands on the floor of this Assembly and offering suggestions.

At present, Mr. Deputy Speaker, Sir, I have no example before me to compare the administration of this Government. However, to substantiate the charges that I am going to level against the administration of the Government I must quote some appropriate example though it may not be appealing and though it may be unpleasant to the Government or the ruling party Members. Mr. Deputy Speaker, Sir, I do not want to ridicule any Minister. I do not want to lower down the prestige of any Minister. While quoting this example I think there is no better example than that I am quoting. I would like to compare the administration of this Government with the administration of the previous Government—predecessor Government—to the fullest extent. I want to compare this Government to the three monkeys on the match box, because in the picture on the match box, one monkey has kept its palm on its eyes, signifying that it is blind to the truths and facts. So also, this Government is blind to the truths and facts that are laid before it. This Government is ignoring the representations and suggestions made by the M.L.As. They are blind to these.

Another monkey in the picture has kept its palm on the mouth signifying that it does not want to speak out the truth

and so also this Government does not want to speak out the truth even if truths and facts are brought to their notice. A discriminating attitude is shown by this Government.

Then, the third monkey has kept its palm on the ear, signifying that it is deaf to all the facts and truths. This Government is deaf to the public representations and the requests of the public and to public censure.

Sir, now, coming to the administration, administration is defined in many ways by many persons. But I do not wish to go into the details of these definitions but I agree with the view that it is the sum total of all activities undertaken in pursuance of the objectives in view.

Generally and broadly speaking, the administration has three controls—legislative control, executive control and judicial control. I do not wish to speak on judicial control. I do not wish to lay stress on judicial control, because it is being discussed under a separate demand.

Under the legislative control, always, the Opposition Party tries to bring the ruling party to the right path by legislative tools such as Legislative Assembly questions, Adjournment Motions and Resolutions, etc. But the suggestions made by the Opposition Members are ignored by the Government.

Whenever injustices done to the people and the negligence shown by the executive officers are brought to the notice of the Government, they do not want to speak out ; they become dumb. They become blind to it. They do not want to see it. Government which has a majority always press aside all the Opposition. That should not be the case in a democratic set-up. They must know that they are here for ruling the masses and not for political purpose only and though the tools of legislative control are always used by the Members of the Opposition party—such as putting questions, moving resolutions and Adjournment motions, etc., Government are not paying any heed to them. Some evasive answers are being given and irresponsible answers are being given by the Ministers concerned. Even though it is a fact, they say 'Idu Sari Illua'

meaning that it is not correct. Thereby they are encouraging the executive officers and the irresponsible officers. That is why the socialistic programmes of this Government are at a standstill. They are unable to make any remarkable progress, because of the bureaucratic attitude of the Government Officers.

They are unable to achieve any remarkable progress, because of the bureaucratic attitude of the Government Officers. The various organs of the Government machinery or the administrative machinery are in conflict with one another. There is no co-ordination between any two departments of Government. Government must try their level best to bring about co-ordination amongst all these Departments. The Development Department is against the Revenue Department and they are not co-operating with one another. Police are against the excise. Like that. Judicial control is also essential. Though I have already said that I do not wish to say anything on judicial control, I only make some passing remarks because it comes under general administration. Judicial control protects the rights of citizens because at times the executive officers abuse their powers, there is lack of jurisdiction, error of law, error of fact. So implementation of justice is quite necessary and judicial control is quite essential in administration. In the process of policy making, series of decisions, and quick decisions are not being taken by this Government. For example in the Education Department, there was need at that time that primary school teachers should not be kept in their home taluks, and they must be transferred to places outside their home taluks. But times have changed and circumstances have changed and there is need to change that policy. The policy cannot hold good for all time to come. It must depend upon the circumstances. Also it must be in consonance with the provisions of the Constitution. But whatever may be the type of policy, it may be a general policy, political policy or executive policy or administrative policy or day to day policy or technical policy—whatever type of policy, it may be, it must be executed by the officers of Government. These officers are inordinately delaying and causing delays in the disposal of the cases because they are irresponsible and careless bureaucratic and they are bringing discredit to the Government.

Now proper planning is quite essential in administration. This Government must pay much attention towards proper planning in the agricultural, educational, public health, industries and PWD, etc. Budget is also one year plan. And we find that the budget allotments are not being spent regularly, economically and carefully by the executive officers. They are spending lavishly without achieving any tangible progress. Government are not assessing available resources for industrialisation. They are not assessing the raw materials, capital and man-power, etc. They are not giving priority to project works. They must have a definite policy to overcome the future difficulty. Bureaucracy is seen in all departments of the Government. It is of three types—caste bureaucracy, patronage bureaucracy and merit bureaucracy. The caste and patronage bureacracy is noticed and I believe that hereafter it will disappear. Then the relation between the employees and employers is not firm because of industrial disputes which are coming up frequently. It testifies to the fact that the relations between the employees and employers are not good.

Administration of Finance—it is said that all undertakings depend upon the finances and Government must know that revenue is paid by even the poorest man in the villages. Therefore, the public money must be spent economically, carefully and cautiously. But the PWD is spending Government money lavishly and with no care.

Now I will come to the point: the budget provision for Mysore Bhavan in New-Delhi is about 3,85,000. If the allegations against the Mysore Bhavan officer are true, he does not deserve to be there. Because, I have got a pamphlet which I am passing on to the Chief Minister through you, for any action that he might take. If the allegations are true, then it is not worth spending so much amount on this item. So, Government must take suitable action immediately at least to save Government money.

Then I come to the Mysore Vigilance Commission. The budget provision for this item in the Budget is 17,10,000. Of what use is it, I want to ask. Corruption is rampant and it is not eradicated by the Government. Progress is not satisfactory.

I am told—it may be right or wrong that the officers of the Vigilance Department are intimidating the officers of other Departments saying that they are going to book them. This happened in the past. So, it is up to the Vigilance Commission to root out corruption.

Then I refer to the book, Report on the General Administration Department. At page 7 it is said that the procedure for the elimination of delays had been laid down and it had toned up the administration. But it is not correct. Efficiency is not toned up and delays are continuing.

At page 11, it is said that if the population of linguistic minorities in any taluk is not less than 15 per cent, then petitions have to be accepted in the minority language and replies are to be given in the same language as far as possible. But it is not given. Notices and publicity material continue to be given in language other than minority language. Government notifications continue to be published in a language which the minorities are not able to understand and minority people are not getting any advantage. Government are not keeping their words and they are falling back upon their promise given to the minorities in the border areas. Premature transfers of Government officers are effected on account of the political pressure; this is unwarranted and unfair in a democratic set up. It will bring discredit and bad name to the Government.

A provision of Rs. 4.55 lakhs has been made for the disposal of land grant cases but there is no speedy disposal of those cases. During the absence of the Land Grant Committees, the Tahsildars have granted land to people owing lands and they have not cared for the landless people. A note must be taken of this fact.

As regards modernisation of taluka offices, my taluka is the most backward taluka and sufficient amount must be reserved for the renovation of the office building of my taluka.

With these words I conclude my speech and thank the chair.

ಶ್ರೀ ಸಿ. ಟಿ. ಗುಡ್ಡಕಾಯು (ಗೋಕಾಕ್) :— ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಮುಖ್ಯಮಂತ್ರಿಗಳಿಟ್ಟಿರುವ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಈಗ ಅಪರಾಧ ಮಾಡಲು ಕಾರಣವೇನು ಎಂದು ವಿಚಾರ ಮಾಡಿದರೆ

ಮುಖ್ಯವಾಗಿ ಬಡತನ, ಅಜ್ಞಾನ, ಆಸ್ತಿಪಾಸ್ತಿಗಳ ಹಂಚಿಕೆ, ಸ್ತ್ರೀ ಮುಂತಾದುವುಗಳ ಸಲುವಾಗಿ ಮಾಡುವರು. ಆದರೆ ಕಾನೂನಿನಿಂದ ಇದನ್ನು ತಡೆಗಟ್ಟಿ ಅಪರಾಧಿಗಳ ಮನಸ್ಸನ್ನು ಪರಿವರ್ತನೆ ಮಾಡುವುದಕ್ಕಾಗುವುದಿಲ್ಲ. ಅಪರಾಧ ಮಾಡುವವರು ಸಮಾಜಕ್ಕೆ ತೊಂದರೆ ಮಾಡುವರು. ಹಣವಂತರು ಅಪರಾಧ ಮಾಡಿದಾಗ ಅದನ್ನು ತಪ್ಪಿಸಿಕೊಳ್ಳಲು ಹಣ ಸುರಿಯುವರು. ಬಡವರು ಜೈಲಿಗೆ ಹೋಗುವರು. ಕೆಲವು ವೇಳೆ ನಿರಪರಾಧಿಗಳು ಕೂಡ ಜೈಲಿಗೆ ಹೋಗುವ ಪ್ರಸಂಗ ಬರುವುದು. ಜೈಲಿಗೆ ಅಪರಾಧಿಗಳನ್ನು ಕಳಿಸುವ ಮುಖ್ಯ ಉದ್ದೇಶ. ಅವನು ತನ್ನ ತಪ್ಪಿಗೆ ಪಶ್ಚಾತ್ತಾಪಪಟ್ಟು ಮುಂದೆ ಅಪರಾಧ ಮಾಡಬಾರದು ಎಂಬುದು. ಈಗ ಒಂದು ಬಾರಿ ಅಪರಾಧ ಮಾಡಿದವನು ಪದೇ ಪದೇ ಅಪರಾಧವೆಸಗಿ ಅನೇಕ ಸಲ ಜೈಲಿಗೆ ಹೋಗುವ ಪ್ರಸಂಗವಿದೆ. ಈಗ ಅಪರಾಧಿಗಳ ಸಂಖ್ಯೆಯನ್ನು ಕಡಮೆಮಾಡಲು ಸಾಧ್ಯವಾಗಿಲ್ಲ. ವಿಜ್ಞಾನದಿಂದ ಮತ್ತು ಸಂಶೋಧನೆಯಿಂದ ಇಂದು ಎಷ್ಟೋ ಸುಧಾರಣೆ ಮಾಡಿದ್ದಾರೆ. ಮೊದಲು ಕಠಿಣವಾಗಿ ಶಿಕ್ಷಿಸುತ್ತಿದ್ದರು, ಹಿಂಸೆ ಮಾಡುತ್ತಿದ್ದರು. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಹಾಗೆ ಮಾಡುತ್ತಿದ್ದರು. ಇಂದು ಶಿಕ್ಷೆ ಮಾಡುವುದಕ್ಕೂ ಹಿಂದೆ ಮಾಡುತ್ತಿದ್ದುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಇಂದು ಮನಸ್ಸಿನಮೇಲೆ ಪರಿವರ್ತನೆಯಾಗಿ ಅಪರಾಧಿಯು ಬಿಡುಗಡೆಯಾದ ಮೇಲೆ ತನ್ನ ಜೀವನ ಸಾಗಿಸುವಂತೆ ವ್ಯವಸ್ಥೆ ಮಾಡಿದ್ದಾರೆ. ಆದರೂ ಮನುಷ್ಯ ಆಸೆಯಿಂದ, ಅಜ್ಞಾನದಿಂದ, ಬಡತನದಿಂದ ಮತ್ತೆಮತ್ತೆ ತಪ್ಪುಮಾಡಿ ಜೈಲಿಗೆ ಹೋಗುತ್ತಿರುವುದು ಕಂಡುಬರುತ್ತಿದೆ. ಇದರ ಬಗ್ಗೆ ಇನ್ನೂ ಸುಧಾರಣೆಯಾಗಬೇಕು. ಕೇವಲ ಕಾನೂನಿನಿಂದ ಅಪರಾಧ ಮಾಡುವುದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಬಡತನ ಇರುವವರು ಕಳ್ಳತನ ಮಾಡುವರು. ಆದುದರಿಂದ ಬಡತನವನ್ನು ನಿವಾರಣೆ ಮಾಡಲು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕು. ಹಾಗೆ ಮಾಡಿದರೆ ಅನುಕೂಲವಾಗುವುದು. ಬರೀ ಕಾಯಿದೆಯಿಂದ ಅಪರಾಧ ಮಾಡುವುದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಅಪರಾಧ ಮಾಡುವವನು ಮುಂದೆ ಮಾಡದಂತೆ, ಸಮಾಜದಲ್ಲಿ ಸತ್‌ಪ್ರಜೆಯಾಗಿ ಬಾಳುವಂತೆ ತಕ್ಕ ಸುಧಾರಣೆ ಮಾಡಬೇಕಾಗಿದೆ. ಅದಕ್ಕೆ ತಕ್ಕ ಏಜೆನ್ಸಿ ಇರಬೇಕು. ಬಾಲಾಪರಾಧಿಗಳನ್ನು ತಿದ್ದಲು ತಂದೆ ತಾಯಿಗಳು ಹೆಚ್ಚು ಜವಾಬ್ದಾರಿ ವಹಿಸಿದರೆ ಅನುಕೂಲವಾಗುವುದು. ಪಾಶ್ಚಾತ್ಯ ದೇಶಗಳೊಂದಿಗೆ ನಮ್ಮ ದೇಶವನ್ನು ಹೋಲಿಕೆಮಾಡಿ ನೋಡಿದರೆ ಜೈಲಿಗೆ ಸಂಬಂಧಪಟ್ಟ ಹಾಗೆ ಎಷ್ಟೋ ಸುಧಾರಣೆ ಮಾಡಬೇಕಾಗಿದೆ. ಸಮಾಜಕ್ಕೆ ಕಂಟಕನೆಂದು ಅಪರಾಧಿಯನ್ನು ಜೈಲಿಗೆ ಕಳಿಸುವರು, ಅವನು ಸಮಾಜದಿಂದ ದೂರವಾಗುವನು. ಅವನು ಇದರಿಂದ ಪಾಠ ಕಲಿಯುವಂತೆ ತಕ್ಕ ಸನ್ನಿವೇಶವನ್ನು ಕಲ್ಪಿಸಬೇಕು. ಇದಕ್ಕಾಗಿ ಜೈಲಿನಲ್ಲೇನು ಮಾಡಬೇಕೆಂದರೆ ಕೇಸ್ ವರ್ಕರ್ಸ್ ಸರಿಯಾದ ಕೆಲಸ ಮಾಡಬೇಕು, ಅವರ ಸಂಖ್ಯೆ ಹೆಚ್ಚಿಸಬೇಕು. ಆ ಕೇಸ್ ವರ್ಕರುಗಳು ಅಪರಾಧಿಗಳು ಮಾರ್ಪಾಡು ಆಗುವಂತೆ ನೋಡಿಕೊಳ್ಳಬೇಕು. ಕೇವಲ ಕೇಸ್ ವರ್ಕರುಗಳಲ್ಲದೆ ಜೈಲಿನಲ್ಲಿರುವ ಆಫೀಸರುಗಳನ್ನು ಸಹ ಹೆಚ್ಚಿಸಬೇಕು. ಅವರಿಗೆ ಅಪರಾಧಿಗಳ ಮನಃಪರಿವರ್ತನೆ ಮಾಡುವ ಜವಾಬ್ದಾರಿ ಇರುವುದು. ಈಗ ಪ್ರೊಬೇಷನರಿ ಆಫೀಸರುಗಳು ಜೈಲಿನಲ್ಲಿಲ್ಲ. ಒಬ್ಬೊಬ್ಬರಿದ್ದರೆ ಅವರು ಖೈದಿಗಳ ಸಂಖ್ಯೆಗನುಗುಣವಾಗಿ ಇಲ್ಲ. ಸರಕಾರ ಇದನ್ನು ಗಮನಿಸಿ ಯೋಗ್ಯ ಸಂಖ್ಯೆಯಲ್ಲಿ ಕೇಸ್ ವರ್ಕರುಗಳು ಮತ್ತು ಪ್ರೊಬೇಷನರಿ ಆಫೀಸರುಗಳನ್ನು ಹೆಚ್ಚಿಸಬೇಕು. ಕೇವಲ ನಂಬರ್ ಹೆಚ್ಚಿಸಿದರೆ ಸಾಲದು ಅವರಿಗೆ ಟ್ರೈನಿಂಗ್ ಕೊಡಬೇಕು. ಕ್ರಿಮಿನಲ್ಸ್ ಜೈಲಿನಿಂದ ಬಿಡುಗಡೆಯಾದ ಕೂಡಲೆ ಸಮಾಜದಲ್ಲಿ ಮನುಷ್ಯರಾಗಿ ಯೋಗ್ಯರಾಗಿ ಬಾಳುವಂತೆ ಮಾಡುವ ಜವಾಬ್ದಾರಿ ಈ ಆಫೀಸರುಗಳ ಮೇಲಿರಬೇಕು. ಅದಕ್ಕೆ ತಕ್ಕಂತೆ ಈ ಆಫೀಸರುಗಳಿಗೆ ಶಿಕ್ಷಣ ಕೊಡಬೇಕು, ತರಬೇತಿ ಕೊಟ್ಟು ನೇಮಕ ಮಾಡಬೇಕು. ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಇವುಗಳಲ್ಲಿ ತರಬೇತಿ ಪಡೆದ ಸೀನಿಯರ್ ಆಫೀಸರುಗಳು ಕೆಲವರಿದ್ದಾರೆ. ಅವರಿಗೆ ಜವಾಬ್ದಾರಿ ಇರುವುದು, ಅವರಿಗೆ ಅಪರಾಧಿಗಳು ಜೈಲಿನಿಂದ ತಪ್ಪಿಸಿಕೊಂಡು ಹೋಗದಂತೆ ನೋಡಿಕೊಳ್ಳುವ ಜವಾಬ್ದಾರಿ

ಇರುವುದು. ಅವರನ್ನು ಕಂಟ್ರೋಲ್ ಮಾಡುವ ಶಕ್ತಿ ಬೇಕು. ಆಫೀಸರುಗಳಿಗೆ ಇಂಥ ವಿಚಾರಗಳಲ್ಲಿ ಸಾಕಷ್ಟು ತರಬೇತಿ ಕೊಡಲು ಸ್ಪೆಷಲ್ ಇನ್‌ಸ್ಟಿಟ್ಯೂಟುಗಳನ್ನು ರಾಜ್ಯದಲ್ಲಿ ತೆಗೆಯಬೇಕು. ತರಬೇತಿ ಇಲ್ಲದೆ ಏನು ಮಾಡುವುದಕ್ಕಾಗುವುದಿಲ್ಲ. ಜೈಲಿನಿಂದ ಓಡಿ ಹೋದವರನ್ನು ಹಿಡಿದು ತರುವ ಮತ್ತು ಹೋಗದಂತೆ ಸರಿಯಾಗಿ ನೋಡಿಕೊಳ್ಳುವ ಕಡೆ ಅಲ್ಲಿನ ಅಧಿಕಾರಿಗಳಿಗೆ ಜವಾಬ್ದಾರಿ ಇರುವುದು. ಪೊಲೀಸ್ ಆಫೀಸರುಗಳು ಒಳ್ಳೆಯ ಕಾರ್ಯ ಮಾಡಿದರೆ ಅವರಿಗೆ ಮೆಡಲು ಕೊಡುವರು. ಜೈಲುಗಳಲ್ಲಿರುವ ಅಧಿಕಾರಿಗಳಿಗೆ ಈ ರೀತಿಯ ಪ್ರೋತ್ಸಾಹವಿಲ್ಲ. ಅವರಿಗೂ ಪೋಲೀಸರಿಗೆ ಕೊಡುವಂತೆ ಮೆಡಲ್ ಮುಂತಾದುವನ್ನು ಕೊಟ್ಟು ಪ್ರೋತ್ಸಾಹ ನೀಡಿದರೆ ಅವರೂ ಸಹ ಹೆಚ್ಚು ದಕ್ಷತೆಯಿಂದ ಕೆಲಸ ಮಾಡುವರು. ಇದಕ್ಕೆ ಸರಕಾರ ಗಮನ ಕೊಡಬೇಕು.

ಅದರಂತೆ ಅಲ್ಲಿರುವ ವಾರ್ಡರ್ಸ್, ನೋಡಿದರೆ, ಕ್ಲಾಸ್ 4 ಸರ್ವೆಂಟ್ಸ್ ಡ್ಯೂಟಿಯನ್ನು ಅವರು ಮಾಡುವ ಕೆಲಸವನ್ನು ನೋಡಿದರೆ ಮನಸ್ಸಿಗೆ ತುಂಬಾ ನೋವಾಗುತ್ತದೆ. ಅವರು ಎಲ್ಲಿಯೋ ಒಂದು ಕಡೆ ಇರುತ್ತಾರೆ, ಡ್ಯೂಟಿ ಮಾಡುವ ಸ್ಥಳಕ್ಕೆ ಬರಬೇಕಾಗುತ್ತದೆ, ಊಟ ಇಲ್ಲದೆ ಅವನು ಡ್ಯೂಟಿಯನ್ನು ಮಾಡಬೇಕಾಗುತ್ತದೆ. ಇವರು ಯಾವಾಗಲೂ ತಮ್ಮ ಕಾರ್ಯದಲ್ಲಿ ಮಗ್ನರಾಗಿರಬೇಕು. ಇದನ್ನು ಸರ್ಕಾರದವರು ಮನಗಂಡು ಅವರಿಗೆ ಒಂದು ಟೈಂ ಫ್ರೀ ಊಟ ಕೊಡಬೇಕೆಂದು ನನ್ನ ಕಳಕಳಿಯ ವಿನಂತಿ ಇದೆ. ಇವರು ಯಾವಾಗಲೂ ಕೈದಿಗಳೊಂದಿಗೆ ಇರಬೇಕು, ಅವರ ಕೂಡ ಮಾತನಾಡಬೇಕು. ಅವರು ಮಾಡುವಂಥ ಕೆಲಸವನ್ನು ನೋಡಬೇಕು. ಅವರ ಜೀವನದಲ್ಲಿ ಎರಡನೆಯ ಸಂಪರ್ಕವೇ ಇಲ್ಲ. ಇವತ್ತು ಕೈದಿ ಜೈಲಿನಿಂದ ಹೊರಗೆ ಬಂದಮೇಲೆ, ಅವನು ಒಂದು ಮಹತ್ವದ ಕೆಲಸ ಮಾಡಬೇಕಾಗುತ್ತದೆ. ಆಫ್ಟರ್ ಕೇರ್ ಏಜೆನ್ಸಿಗಳ ಮೇಲೆ ಮಹತ್ವದ ಜವಾಬ್ದಾರಿ ಇದೆ. ಕೈದಿಗಳು ಮತ್ತೊಮ್ಮೆ ಜೈಲಿಗೆ ಬರಬಾರದು ಎನ್ನುವ ಮನೋವೃತ್ತಿಯನ್ನು ಮಾಡಬೇಕು. ಅವರಿಗೆ ಜೈಲಿನಲ್ಲಿ, ಜೈಲ್ ಇಂಡಸ್ಟ್ರೀಸ್ ಏನು ಇಟ್ಟಿದ್ದಾರೆ ಅದರಲ್ಲಿ ಇನ್ನೂ ಎಷ್ಟೋ ಬದಲಾವಣೆಯಾಗಬೇಕಾಗಿದೆ. ಅಲ್ಲಿ ಇವರಿಂದ ಜಮಖಾನ ನೇಯಿಸುತ್ತಾರೆ, ಇನ್ನೂ ಮುಂತಾದ ಉಪಕರಣಗಳನ್ನು ಮಾಡಿಸುತ್ತಾರೆ. ಇವರು ಜೈಲಿನಿಂದ ಹೊರಗೆ ಬಂದಮೇಲೆ ಜಮಖಾನವನ್ನು ಅವರಿಗೆ ಸ್ವಂತವಾಗಿ ನೇಯಲಿಕ್ಕೆ ಸಾಧ್ಯವೇ ಇಲ್ಲ. ಅವರಿಗೆ ದಿನಂಪ್ರತಿ ಕೂಲಿ ಬರುವಂಥ ಕೆಲಸ ಮಾಡುವುದನ್ನು ಅಲ್ಲಿ ಕಲಿಸಬೇಕಾಗುತ್ತದೆ. ಬೇರೆ ಏನು ಕಲಿಸಿದರೂ ಅವರಿಗೆ ಜೀವನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಜೈಲಿನಿಂದ ಅವನು ಹೊರಗೆ ಹೋದ ಕೂಡಲೇ ದಿನಂಪ್ರತಿ ಕೂಲಿ ಸಿಕ್ಕುವಂಥ ಅವನು ಸರಿಯಾಗಿ ಜೀವನಮಾಡಲು ಅನುಕೂಲವಾಗುವಂಥ ಕೆಲಸ ಕಲಿಸಬೇಕು. ಇದರ ಬಗ್ಗೆ ನನ್ನ ಸಲಹೆ ಏನೆಂದರೆ, ಈಗ ಎಷ್ಟೋ ಇಂಡಸ್ಟ್ರೀಸ್ ಬಂದಿವೆ, ಅವನು ಈ ಇಂಡಸ್ಟ್ರೀಸ್ ಕಡೆ ಹೋಗುವುದಕ್ಕೆ ಸಾಧ್ಯವಿಲ್ಲ, ಅಲ್ಲಿ ಕೇವಲ ಕಾರ್ಪೆಂಟರ್ ಮತ್ತು ಟೇಲರಿಂಗ್ ವಿನಹ ಏನನ್ನೂ ಕಲಿಸುವುದಿಲ್ಲ. ಈ ದೃಷ್ಟಿಯಿಂದ ಅವರಿಗೆ ಮೆಷಿನ್ ಪಾರ್ಟ್ಸ್ ಮಾಡುವಂಥ ಕೆಲಸವನ್ನು ಕಲಿಸಿ ಕೊಟ್ಟರೆ, ಅವನು ಪ್ರೈವೇಟ್ ಸೆಕ್ಟಾರಿನಲ್ಲೋ, ಪಬ್ಲಿಕ್ ಸೆಕ್ಟಾರ್‌ನಲ್ಲೋ ಕೆಲಸ ಹಿಡಿದು ಉಪಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಜೈಲು ಇಂಡಸ್ಟ್ರೀಸ್‌ನಲ್ಲಿ ಕಲಿಸುವ ಕೆಲಸದ ಪದ್ಧತಿಯಲ್ಲಿ ಸ್ವಲ್ಪ ಬದಲಾವಣೆ ಮಾಡುವುದು ಅವಶ್ಯಕ ಎಂದು ನನ್ನ ಕಳಕಳಿಯ ವಿನಂತಿ ಇದೆ. ಈಗಾಗಲೇ, ಆಫ್ಟರ್ ಕೇರ್ ಇನ್‌ಸ್ಟಿಟ್ಯೂಷನ್ಸ್ ಏನು ಇವೆ ಅವು ಚೀಫ್ ಇನ್ಸ್‌ಪೆಕ್ಟರ್ ಆಫ್ ಸರ್ಟಿಫೈಡ್ ಸ್ಕೂಲ್ಸ್ ಇವರ ಕಡೆ ಇದೆ. ನಿಜವಾಗಿ ನೋಡಬೇಕಾದರೆ, ಒಂದು ಸಾರಿ ಕೈದಿಯಾದವರ ಆಚಾರ ವಿಚಾರದ ರಿಕಾರ್ಡು ಜೈಲಿನಲ್ಲಿರುವುದಿಲ್ಲ. ಅದು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ನಲ್ಲಿದೆ. I feel it is not proper, that should be in the Jail Department. ಅವನು ಜೈಲಿನಿಂದ ಹೊರಗೆ ಹೋದ ಕೂಡಲೇ ಸಮಾಜದಲ್ಲಿ ಅವನಿಗೆ ಬಹಳ ತೊಂದರೆಗಳು ಇರುತ್ತವೆ. ಸಮಾಜದಲ್ಲಿ ಅವರನ್ನು ತುಚ್ಛ ಭಾವನೆಯಿಂದ ಕಾಣುತ್ತಾರೆ. ಸಮಾಜದಲ್ಲಿ ಇದಕ್ಕೆ ಪ್ರೊಬೇಷನರ್

ಆಫೀಸರ್ಸ್ ಸಹಾಯ ಬೇಕಾಗಿರುತ್ತದೆ. ಇದನ್ನು ಸೋಷಿಯಲ್ ಡಿಪಾರ್ಟ್‌ಮೆಂಟ್‌ಗೆ ಅಟ್ಯಾಚ್ ಮಾಡುವುದಕ್ಕಿಂತ ಜೈಲು ಡಿಪಾರ್ಟ್‌ಮೆಂಟ್‌ಗೆ ಅಟ್ಯಾಚ್ ಮಾಡಿದರೆ ಅನುಕೂಲವಾಗುತ್ತದೆ ಎಂದು ನನಗನ್ನಿಸುತ್ತದೆ.

ಇನ್ನು, ಗಂಡಸರು ಕೈದಿಗಳು ಇದ್ದ ಹಾಗೆ, ಹೆಂಗಸರನ್ನೂ, ಅವರ ಕೆಟ್ಟ ವೃತ್ತಿಯಿಂದ ಜೈಲಿಗೆ ಕಳುಹಿಸಬೇಕಾಗುತ್ತದೆ. ಅವರಿಗೆ ಅಲ್ಲಿ ಉಪಯೋಗವಾಗುವಂಥ ಕಸುಬುಗಳನ್ನು, ಅದರ ಜ್ಞಾನವನ್ನು ಕಲಿಸಬೇಕು. ಅವರು ಯಾವ ಕಸುಬನ್ನು ಕಲಿಸಿದರೂ ಅದು ಅವರ ಜೀವನಕ್ಕೆ ಉಪಯೋಗವಾಗುವಂತೆ ಇರಬೇಕು. ಅದರಿಂದ ಅವರು ಹೊರಗೆ ಹೋದಕೂಡಲೆ ಯಾವುದಾದರೂ ಒಂದು ಉದ್ಯಮವನ್ನು ಮಾಡುವುದಕ್ಕೆ ಅನುಕೂಲವಾಗಿರಬೇಕು. ಟಾಯ್ಸ್ ಕಸುಬನ್ನು ಏತಕ್ಕೆ ಕಲಿಸಬಾರದು ? ನೈತಿಕ ಮತ್ತು ಲೈಂಗಿಕ ವಿಚಾರಗಳಲ್ಲಿ ಅವರಿಗೆ ಯೋಗ್ಯ ಶಿಕ್ಷಣ ಕೊಡಲು ಅನೇಕ ಕೇಂದ್ರಗಳನ್ನು ಸ್ಥಾಪನೆ ಮಾಡಬೇಕು. ಹೀಗೆ ಮಾಡಿದರೆ ಸರ್ಕಾರಕ್ಕೆ ಹಾನಿಯಾಗುತ್ತದೆ, ಸಮಾಜಕ್ಕೂ ಹಾನಿಯಾಗುತ್ತದೆ. ನಮ್ಮ ಮಕ್ಕಳಿಂದ ದೇಶದ ಉದ್ಧಾರವಾಗಬೇಕಾಗಿದೆ, ಆದ್ದರಿಂದ ಇವರ ಮನೋವೃತ್ತಿಯನ್ನು ಬದಲಾವಣೆ ಮಾಡಬೇಕು. ಪ್ರತಿಯೊಂದು ಕಡೆಯಲ್ಲಿ ಗಂಡಸರ ಜೈಲಿನೊಂದಿಗೆಯೇ ಹೆಂಗಸರ ಜೈಲನ್ನೂ ಇಟ್ಟಿದ್ದಾರೆ. ತಮಿಳುನಾಡು, ವೆಲ್ಲೂರು, ಮತ್ತು ಮಹಾರಾಷ್ಟ್ರ ಮುಂತಾದ ಕಡೆ ಹೆಂಗಸರ ಜೈಲುಗಳು ಪ್ರತ್ಯೇಕ ಇವೆ. ಆ ಪ್ರಕಾರ ಮಾಡಿದರೆ ಏನಾದರೂ ಶಿಕ್ಷಣವನ್ನಾಗಲೀ, ಅಥವಾ ಕಸಬನ್ನು ಕಲಿಸುವುದಾಗಲೀ ಹೇಳಿಕೊಡುವುದಕ್ಕೆ ಅನುಕೂಲವಾಗುತ್ತದೆ ಎಂದು ನನ್ನ ದೃಷ್ಟಿಯಿಂದ ಅನ್ನಿಸುತ್ತದೆ. ಜೈಲಿನೊಳಗೆ ಅಪರಾಧಿಗಳು ಕೆಲಸಮಾಡುವಾಗ, ಅವರಿಗೆ ಕೂಲಿ ಕೊಡುವುದು ಬಹಳ ಕಡಿಮೆ. ಸ್ಕಿಲ್ಡ್ ವರ್ಕರ್ಸ್‌ಗೆ 50 ಪೈಸೆ ಕೊಡುತ್ತಾರೆ, ಸೆಮಿ ಸ್ಕಿಲ್ಡ್ ವರ್ಕರ್ಸ್‌ಗೆ 37 ಪೈಸೆ ಕೊಡುತ್ತಾರೆ. ನಾನ್ ಸ್ಕಿಲ್ಡ್‌ಗೆ 25ಪೈಸೆ ಕೊಡುತ್ತಾರೆ. ಇದರಿಂದ ಅವರಿಗೆ ಬೇರೆ ಯಾವ ಪದಾರ್ಥವೂ ಸಿಕ್ಕುವುದಿಲ್ಲ. ಈ ಕಿಮ್ಮತ್ತಿನಿಂದ ಅವರಿಗೆ ಯಾವ ಉಪಯೋಗವೂ ಆಗುವುದಿಲ್ಲ. ಈ ದೃಷ್ಟಿಯಿಂದ ಇವರ ವೇಜಸ್‌ಅನ್ನು ಸ್ವಲ್ಪ ಹೆಚ್ಚು ಮಾಡಬೇಕು. ಇಷ್ಟು ಮಿನಿಮಂ ವೇಜಸ್ ಕೊಡುವುದರಿಂದ ಅವನಿಗೆ ಏನು ಅನುಕೂಲವಾಗುತ್ತದೆ? ಗಂಜಿ ಕುಡಿಯುವುದಕ್ಕೂ ಆಗುವುದಿಲ್ಲ. ಅವರಿಗೆ ಹೊಟ್ಟೆ ಹೊರೆಯುವುದಕ್ಕೆ ಸಾಕಾಗುವಷ್ಟು ಕೊಟ್ಟು ಪ್ರೋತ್ಸಾಹ ಕೊಡಬೇಕು. ಅಲ್ಲಿ ಕೆಲಸ ಮಾಡುವ ವಾರ್ಡರ್ಸ್‌ಗೆ ಫ್ರೀ ಲಂಚ್ ಕೊಟ್ಟರೆ ಅವರು ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆ. ಬೇಸಿಕ್ ನೀಡ್ಸ್ ಅವರಿಗೆ ಕೊಡಬೇಕು ಎಂದು ನನಗನ್ನಿಸುತ್ತದೆ. ಕೋರಮಂಗಲದಲ್ಲಿ ಓಪನ್ ಏರ್ ಜೈಲನ್ನು ಮಾಡಿದ್ದಾರೆ. ಅದು ಸಕ್ಸಸ್‌ಫುಲ್ ಆಗಿದೆ. ಆ ತರಹ ಜೈಲುಗಳನ್ನು ಹೆಚ್ಚು ಮಾಡಿದರೆ ರಿಹ್ಯಾಬಿಲಿಟೇಷನ್ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನನಗನ್ನಿಸುತ್ತದೆ. ಈಗ ಕ್ರೈಮ್ಸ್‌ನಲ್ಲಿ ಕ್ಲಾಸಿಫಿಕೇಷನ್ ಮಾಡಿದ್ದಾರೆ. ಎ ಕ್ಲಾಸ್, ಬಿ ಕ್ಲಾಸ್ ಸಿ. ಕ್ಲಾಸ್ ಎಂದು. ಇದರಲ್ಲಿ ಯಾರೇ ಇದ್ದರೂ, ಶ್ರೀಮಂತರು ಇದ್ದರೂ ಒಂದೇ. ಇದರಲ್ಲಿ ಕ್ಲಾಸಿಫಿಕೇಷನ್ ಬೇಕಾಗಿಲ್ಲ. ಈ ಕ್ಲಾಸಿಫಿಕೇಷನ್ ಅನ್ನು ತೆಗೆದುಹಾಕಬೇಕು ಎಂದು ಸರ್ಕಾರದಲ್ಲಿ ನನ್ನ ಕಳಕಳಿಯ ಮನವಿ. ಸೈಂಟಿಫಿಕ್ ಬೇಸಿಸ್ ಮೇಲೆ ಇದನ್ನು ತೆಗೆದುಹಾಕಬೇಕು ಎಂದು ಕೇಳಿಕೊಳ್ಳುತ್ತೇನೆ. ಈ ಸಿಸ್ಟಂ ಬಹಳ ರಿಜಿಡ್ ಆಗಿದೆ. ಅದನ್ನು ಸಿಂಪ್ಲಿಫೈ ಮಾಡಿ. ಒಂದು ಸ್ಟ್ಯಾಂಡಿಂಗ್ ಅಡ್ವೈಸರಿ ಕಮಿಟಿ ಮಾಡಿ: ಹೈಕೋರ್ಟ್ ಜಡ್ಜನ್ನು ಚೇರ್ಮನ್ ಮಾಡಿದರೆ ಒಳ್ಳೆಯದು. ಇಲ್ಲದಿದ್ದರೆ ಪಕ್ಷಪಾತವಾಗುತ್ತದೆ. ಇದರಿಂದ ಲಾಂಗ್‌ಟರ್ಮ್ ಜೈಲಿನಲ್ಲಿದ್ದವರನ್ನು ಬಿಡುಗಡೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಕಡೆಯದಾಗಿ ಒಂದು ಶೋಚನೀಯ ಸಂಗತಿ ಏನೆಂದರೆ, ನಮ್ಮ ಪ್ರಿಸನ್ ಆಕ್ಟ್ ಪಾಸ್ ಮಾಡಿದ್ದು 1962-63 ರಲ್ಲಿ. ಆಗ ಮಾಡಿದಂಥ ಕಾನೂನು ಇನ್ನೂ ಕಾರ್ಯಗತವಾಗಿಲ್ಲ. ಹತ್ತು ವರ್ಷವಾಯಿತು. 1956ರಲ್ಲಿ ಸ್ಟೇಟ್ ರೀ-ಆರ್ಗನೈಸೇಷನ್ ಆದರೂ ಸಹ, 17 ವರ್ಷವಾದರೂ ಸಹ, ಯೂನಿಫಾರಂ ಜೈಲ್ ಮ್ಯಾನ್ಯುಯಲ್ ಇಲ್ಲ. ಬೆಳಗಾಂನಲ್ಲಿ ಒಂದು ರೀತಿ ಇದೆ, ಗುಲ್ಬರ್ಗ, ಬಳ್ಳಾರಿ, ಹೈದರಾಬಾದ್ ಮತ್ತು

ಬೆಂಗಳೂರು ಮೈಸೂರುಗಳಲ್ಲಿ ಬೇರೆ ಇದೆ. ಈ ತರಹ ಡಿಸ್ಕ್ರಿಪೆನ್ಸೀಸ್ ಆಗಬಾರದು. ಯೂನಿಫಾರಂ ರೂಲ್ ಇರಬೇಕು. ಮತ್ತು 1963ರಲ್ಲಿ ಪಾಸ್ ಆದ ಆಕ್ಟ್ ಕಾರ್ಯಗತ ವಾಗಬೇಕು ಎಂದು ಸರ್ಕಾರದಲ್ಲಿ ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ.

ಅಂಡರ್ ಟ್ರಯಲ್ ಪ್ರಿಜನರ್ಸ್, ಶಾರ್ಟ್ ಟರ್ಮ್ ಪ್ರಿಜನರ್ಸ್ ಅವರ ಕಡೆಯಿಂದ ಕೆಲಸ ತೆಗೆದು ಕೊಳ್ಳಬಾರದು ಎಂದು ಇದೆ. ಒಂದು ವರ್ಷ, ಎರಡು ವರ್ಷ ಅಂಡರ್ ಟ್ರಯಲ್ ಪ್ರಿಜನರ್ಸ್ ಇರುತ್ತಾರೆ. ಅದಕ್ಕೆ ಆಕ್ಟ್‌ನಲ್ಲಿ ಅಮೆಂಡ್‌ಮೆಂಟ್ ಮಾಡಿ we must take some work from them. ಕೂತು ಇರುವವರಿಗೆ ಊಟ ಹಾಕಬಾರದು. ಆದುದರಿಂದ ಸಂಬಂಧಪಟ್ಟ ಅಮೆಂಡ್‌ಮೆಂಟ್ ಮಾಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡಿಕೊಂಡು ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ) :—ಮಾನ್ಯ ಸಭಾಧ್ಯಕ್ಷರೇ ನಾನು ಜನರಲ್ ಅಡ್ಮಿನಿ ಸ್ಟ್ರೇಷನ್ ಬಗ್ಗೆ ಮಾತನಾಡುತ್ತಾ ಮುಖ್ಯಮಂತ್ರಿಗಳಲ್ಲಿ ಒಂದು ಕಳಕಳಿಯಿಂದ ಮನವಿ ಮಾಡು ತ್ತೇನೆ. ಜಾತಿ ಕೋಮು ಎಲ್ಲಾ ಎಲೆಕ್ಷನ್‌ನಲ್ಲಿ ಇಟ್ಟುಕೊಳ್ಳಿ, ಬೇಡ ಎಂದು ಹೇಳುವುದಿಲ್ಲ. ಆದರೆ ನ್ಯಾಯಾಂಗ ಇಲಾಖೆ ಮತ್ತು ವೈದ್ಯಕೀಯ ಇಲಾಖೆ ಈ ಎರಡು ಇಲಾಖೆಗಳಲ್ಲಿ ಮೆರಿಟ್ ಮೇಲೆ ನೇಮಕ ಮಾಡಿ ಎಂದು ಪ್ರಾರ್ಥನೆ ಮಾಡುತ್ತೇನೆ. ನ್ಯಾಯಾಧೀಶರನ್ನು ನೇಮಕ ಮಾಡುವಾಗ ಸಾಕಷ್ಟು ಪರಿಶ್ರಮ ಅನುಭವವಿಲ್ಲದೆ ಹೋದರೆ ಕೋರ್ಟಿಗೆ ಹೋಗು ವವರ ಗತಿ ಏನು ಆಗುತ್ತದೆ ? ಅವರಿಗೆ ಬಹಳ ಕಷ್ಟವಾಗುತ್ತದೆ. ಮತ್ತು ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳ ನೇಮಕ ಮಾಡುವಾಗ ಅನನುಭವಿಗಳನ್ನು ನೇಮಕ ಮಾಡಿದರೆ ಜನಗಳ ಮೇಲೆ ಎಕ್ಸ್‌ಪರಿಮೆಂಟ್ ಮಾಡುತ್ತಾ ಎಷ್ಟೋ ಜನಗಳನ್ನು ಕೊಲ್ಲಬೇಕಾಗಿ ಬರುತ್ತದೆಂದು ಹೇಳದೆ ವಿಧಿಯಿಲ್ಲ. ಮಂತ್ರಿ ಪದವಿ ಯಾರಿಗೆ ಬೇಕಾದರೂ ಕೊಡಿ ಆದರೆ ಈ ಎರಡು ಡಿಪಾರ್ಟ್‌ಮೆಂಟ್ ಗಳಲ್ಲಿ ಮೆರಿಟ್ ಮೇಲೆ ಕೆಲಸ ಕೊಡಿ.

ಶ್ರೀ ಹೆಚ್. ಡಿ. ದೇವೇಗೌಡ :— ಮೋಟಾರು ನಡೆಸುವ ಡ್ರೈವರ್ಸ್ ಎಫಿಷಿಯೆಂಟ್ ಆಗಿ ಇಲ್ಲದೇ ಇದ್ದರೆ ಒಳಗೆ ಕೂತಿರುವವರು ಸಾಯುತ್ತಾರೆ. ಮೋಟಾರು ಡಿಪಾರ್ಟ್‌ಮೆಂಟ್‌ನಲ್ಲಿ ಯಾತಕ್ಕೆ ಎಫಿಷಿಯೆನ್ಸಿ ಇರಬಾರದು ?

ಶ್ರೀ ಕೆ. ಎಂ. ನಾಗಣ್ಣ :— ಈ ಎರಡು ಇಲಾಖೆಗಳಲ್ಲಿ ಮೆರಿಟ್ ಇಲ್ಲದೆ ನೇಮಕ ಮಾಡ ಬೇಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ದೇವೇಗೌಡರವರು ಹೇಳಿದರು, ಬೆಂಗಳೂರಿನಲ್ಲಿರುವ ಜೈಲನ್ನು ಶಿಫ್ಟ್ ಮಾಡಬೇಕೆಂದು. ಒಂದು ಕಾರಣದಿಂದ ಇದನ್ನು ವಿರೋಧ ಮಾಡುತ್ತೇನೆ. ಜೈಲನ್ನು ಶಿಫ್ಟ್ ಮಾಡಿದರೆ ಬೆಲೆ ಬಾಳತಕ್ಕ ಸ್ಥಳ 300 ರೂ, 400 ರೂ ನಂತೆ ಚದರ ಗಜಕ್ಕೆ ಹೋಗುತ್ತದೆ. ಸರ್ಕಾರದ ಹತ್ತಿರ ಅಂಥ ಸ್ಥಳ ಇದ್ದರೆ ರಾಜಕೀಯ ಒತ್ತಡದಿಂದ ಎಷ್ಟು ಹಣ ಗಳಿಸಬೇಕೋ ಅಷ್ಟು ಗಳಿಸದೇ ಅನ್ಯಾಯ ಆಗುವಂಥ ಸ್ಥಿತಿ ಬರುತ್ತದೆ. ತಾವು ಗರೀಬಿ ಹಟಾವೋ ಘೋಷಣೆಯ ಮೇಲೆ ಓಟು ಪಡೆದು ಅಧಿಕಾರಕ್ಕೆ ಬಂದಿದ್ದೀರಿ. ಜನ ನೀವು ಹೇಳುವುದನ್ನು ನಂಬಿ, ನಿಮಗೆ ಮತ ಕೊಟ್ಟು ನಿಮಗೆ ಅಧಿಕಾರ ಕೊಟ್ಟಿದ್ದಾರೆ. ಆದರೆ ನೀವು ಮಾಡುತ್ತಾ ಇರುವುದಾದರೂ ಏನು ಎಂದರೆ ಲಾಟರಿಗಳನ್ನು ಹೆಚ್ಚು ಮಾಡಿದ್ದೀರಿ, ಗರೀಬಿ ಹಟಾವೋ ಮಾಡುವುದಿಲ್ಲ—ಯಾರನ್ನೋ ಒಬ್ಬನನ್ನು ಲಕ್ಷಾಧೀಶ ನನ್ನಾಗಿ ಮಾಡುತ್ತೀರಿ, ಈ ಬೆಂಗಳೂರು ನಗರದಲ್ಲಿ ರೇಸ್ ಆಗುತ್ತದೆ. ಮೇ 13 ರಿಂದ ಪ್ರಾರಂಭವಾಗಿ ಜೂನ್ 31 ರವರೆಗೆ ರೇಸ್ ಆಗುತ್ತದೆ. ಈ 30 ರೇಸ್ ಮೀಟಿಂಗ್‌ಗಳಿಗೆ ಸಾಮಾನ್ಯ ಜನ ಹೋಗಿ ಎಷ್ಟೋ ಹಣವನ್ನು ಕಳೆದುಕೊಳ್ಳುತ್ತಾರೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಅದರ ಜೊತೆಗೆ ಇನ್ನು ಒಂದು ಏನೆಂದರೆ ಈ ರೇಸ್‌ಗಳು ಸಾಮಾನ್ಯ

ಜನರು ಅಲ್ಲದೆ ನಿಮ್ಮ ಅಧಿಕಾರಿಗಳು ಸಹ ಹೋಗುತ್ತಿದ್ದಾರೆ. ಶನಿವಾರ ಭಾನುವಾರ ರೇಸ್ ಇರುತ್ತದೆ. ಅವರು ಶನಿವಾರ ಮಧ್ಯಾಹ್ನ ಆಫೀಸಿಗೆ ಹೋಗದೆ ರೇಸಿಗೆ ಹೋಗುತ್ತಾರೆ. ಅವರಿಗೆ ಬರುವ ಸಂಬಳದಲ್ಲಿ ರೇಸ್ ಆಡಲಿಕ್ಕೆ ಸಾಧ್ಯವಿಲ್ಲ, ಅದಕ್ಕೆ ಹಣ ಬೇಕು ಸಂಬಳ ಅಲ್ಲದೆ ಹೆಚ್ಚಿನ ವರಮಾನ ಇಲ್ಲದೆ ಅಧಿಕಾರಿಗಳು ರೇಸ್ ಆಡುವುದಕ್ಕೆ ಆಗುವುದಿಲ್ಲ. ನನ್ನ 50 ವರ್ಷದ ಅನುಭವದಲ್ಲಿ ರೇಸ್‌ನಲ್ಲಿ ಗೆದ್ದವನನ್ನು ನೋಡಿಲ್ಲ. ಎಲ್ಲರೂ ಅಲ್ಲಿ ಹಣ ಕಳೆಯು ತ್ತಾರೆ. ಜನರು ಅವರಿಗೆ ಹಣವನ್ನು ಕೊಡಬೇಕಾಗುತ್ತದೆ. ತಾವು ಈಗ ಆಗುತ್ತಾ ಇರುವುದು 30 ಮೀಟಿಂಗ್ ಸಾಲದು, ಬರಗಾಲ ಪೀಡಿತ ಪ್ರದೇಶಗಳಿಗೆ ಹಣವನ್ನು ಒದಗಿಸಬೇಕಾಗಿರುವುದ ರಿಂದ ವರ್ಷ ಇಡೀ ರೇಸ್ ಮಾಡಿ ಎಂದು ಟರ್ಫ್‌ಕ್ಲಬ್ಬಿಗೆ ಸರ್ಕಾರದವರು ಜನವರಿ ತಿಂಗಳಿನಲ್ಲಿ ಲೆಟರ್ ಬರೆದಿದ್ದಾರೆ. ಅದು ಮುಖ್ಯಮಂತ್ರಿಗಳಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ನಿನ್ನೆಯ ದಿವಸ ಟರ್ಫ್‌ಕ್ಲಬ್ ಮೀಟಿಂಗ್ ಇತ್ತು ಅಭಾವ ಪರಿಸ್ಥಿತಿ ಇರುವುದರಿಂದ ಹಣ ಬೇಕಾಗಿರುವುದರಿಂದ ರೇಸ್ ಜಾಸ್ತಿ ಮಾಡಿ ಎಂದು ಸರ್ಕಾರದವರು ಚೇರ್ಮನ್‌ರವರಿಗೆ ಬರೆದಿದ್ದಾರೆ. ಆದರೆ ಜನ ಎಷ್ಟನೆಮಟ್ಟಿಗೆ ಹಣವನ್ನು ಕಳೆದು ಕೊಳ್ಳುತ್ತಾರೆ ಎಂದು ನೋಡಬೇಕು. ಈ ರೀತಿ ಜೂಜಿಗೆ ಪ್ರೋತ್ಸಾಹ ಮಾಡುವುದು ಸರಿ ಯಾದ ನೀತಿಯೋ ಗರೀಬಿ ಹಟಾವೋ ನೀತಿಗೆ ಹೊಂದಿಕೊಂಡು ಹೋಗುತ್ತದೆಯೋ ಎಂಬುದನ್ನು ಯೋಚನೆ ಮಾಡಬೇಕು. ಮುಖ್ಯಮಂತ್ರಿಗಳಿಗೆ ಗೊತ್ತಿಲ್ಲದೆ ಸರ್ಕಾರದಿಂದ ಕಾಗದ ಹೋಗಿರ ಬಹುದು. ಆ ಕಾಗದವನ್ನು ವಾಪಸ್ ತರಿಸಿಕೊಳ್ಳಿ 30 ಮೀಟಿಂಗ್ ಮಾಡಿ ಜನಗಳನ್ನು ಲೂಟಿ ಮಾಡುವುದು ಸಾಕು.

ಶ್ರೀ ಎಚ್. ಡಿ. ದೇವೇಗೌಡ :—10 ತಿಂಗಳು ಬೆಂಗಳೂರಿನಲ್ಲಿ ರೇಸ್ ಆಗುತ್ತಿದೆ.

ಶ್ರೀ ಕೆ. ಎಂ. ನಾಗಣ್ಣ :—ಅದು ಬೇಡ ಎಂದು ಹೇಳುವುದು 10 ತಿಂಗಳು ರೇಸ್ ಆದರೆ ನನ್ನ ಗತಿ ಏನು ? ನಾನು ಎಷ್ಟು ಕಳೆದುಕೊಳ್ಳಲಿ ? ಇದು ಶ್ರೀಮಾನ್ ಅರಸುರವರಿಗೆ ಗೊತ್ತಿಲ್ಲದೇ ಇರಬಹುದು. ಆದುದರಿಂದ ಮುಖ್ಯಮಂತ್ರಿಗಳು ಅದಕ್ಕೆ ಜವಾಬ್ದಾರರು ಅಲ್ಲ. ನಾನು ಹೇಳುವುದು ಸರಿ ಎಂದು ಕಂಡುಬಂದಲ್ಲಿ ಸರ್ಕಾರದವರು ಲೂಟಿ ಮಾಡುವುದು ಬೇಡ ಎಂದು ಹೇಳಿದರೆ ಸರ್ಕಾರದ ಕಾಗದಕ್ಕೆ ಎಫೆಕ್ಟ್ ಕೊಡಬೇಕಾಗಿಲ್ಲ ಎಂದು ನಾಳೆಯೇ ಕಾಗದ ಬರೆಯ ಬೇಕು. ಮತ್ತು ವಿಂಟರ್ ರೇಸ್ ಆಗುವುದನ್ನು ತಪ್ಪಿಸಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಕುದುರೆ ರೇಸಿನ ಬಗ್ಗೆ ನನಗೆ 50 ವರ್ಷದ ಅನುಭವವಿದೆ. ಹುಡುಗನಾಗಿದ್ದಾಗಿನಿಂದಲೂ ರೇಸ್ ಆಡುತ್ತಿದ್ದೇನೆ.

ಇನ್ನು ಇಂಡಸ್ಟ್ರಿ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಹಿಂದೆ ಒಂದು ಪ್ರಶ್ನಾವಳಿ ಕಳುಹಿಸಿದ್ದೆ. ಅದರ ಮ್ಯಾನೇಜಿಂಗ್ ಡೈರೆಕ್ಟರಿಗೆ ಅನುಭವ ಏನೂ ಬೇಕಾಗಿಲ್ಲ ಎಂದು ಆ ದಿವಸ ತಾವು ಅಭಿಪ್ರಾಯ ಪಟ್ಟಿದ್ದೀರಿ. ಅವರು ತಮ್ಮ ರಿಪೋರ್ಟಿನಲ್ಲಿ 3 ಕೋಟಿ ವೆಚ್ಚ ಮಾಡುವುದಕ್ಕೆ ಪ್ಲಾನ್ ಹಾಕಿಕೊಂಡಿದ್ದಾರೆ. ಒಂದೊಂದು ಮಿನಿ ಥಿಯೇಟರ್‌ಗೆ ಎರಡು ಲಕ್ಷ 45 ಸಾವಿರ ಖರ್ಚು ಮಾಡಬೇಕೆಂದಿದ್ದಾರೆ. ಎಕ್ವಿಪ್‌ಮೆಂಟ್ ಎಲ್ಲಿ ತಯಾರು ಮಾಡಬೇಕು ಏನೇನು ಪ್ರೋಗ್ರಾಂ ಹಾಕಿಕೊಂಡಿದ್ದಾರೆ ? ಅದು ಬಹಳ ಕಾಂಪ್ಲಿಕೇಟೆಡ್ ಬಿಸಿನೆಸ್. ಸಾಕಷ್ಟು ಅನುಭವ ಇಲ್ಲದೇ ಹೋದರೂ ಕೂಡ ಸ್ವಲ್ಪ ಮಟ್ಟಿಗೆ ಆದರೂ ಅನುಭವ ಇರುವವರು ಇದ್ದರೆ ಒಳ್ಳೆಯದು, ಅವರಿಗೆ ಅನುಭವ ಇಲ್ಲ ಎಂದು ತಾವೇ ಒಪ್ಪಿಕೊಂಡಿದ್ದೀರಿ. ಅವರಿಗೆ ಅನುಭವ ಬರುವ ತರಹ ಮಾಡಬೇಕು. ಸರ್ಕಾರಕ್ಕೆ ಈಗಾಗಲೇ 5.1 ಲಕ್ಷ ಷೇರ್ ಕೊಟ್ಟಿದ್ದೀರಿ. 10 ಲಕ್ಷ ರೂಪಾಯಿ ಅಡ್ವಾನ್ಸ್ ಮಾಡಿದ್ದೀರಿ. 15 ಲಕ್ಷ ಹಣವನ್ನು ಕೊಡುತ್ತೇವೆಂದು ಕಮಿಟ್ ಮಾಡಿಕೊಂಡಿದ್ದೀರಿ. ಇಲ್ಲಿ ಹಣ ಅಪವ್ಯಯ ಆಗದ ಹಾಗೆ ಸಾಕಷ್ಟು ಮಟ್ಟಿಗೆ ಅನುಭವ ಇದ್ದರೆ ಒಳ್ಳೆಯದು ಎಂದು ಮತ್ತೊಮ್ಮೆ ಹೇಳುತ್ತೇನೆ. ಸಿಟಿಯೊಳಗೆ ಎಡಿಟಿಂಗ್ ರೂಮ್

ಮಾಡಬೇಕೆಂದು ಸೂಚನೆ ಇತ್ತು. ಬರುವವರು ಯಾರು ಹೋಗುವವರು ಎಂದು ಗೊತ್ತಿಲ್ಲದೆ ಪರಿಶೀಲನೆ ಮಾಡೋಣ ಎಂದು ಅಭಿಪ್ರಾಯ ಕೊಟ್ಟಿದ್ದಾರೆ. ಆದಕ್ಕೆ ಅನನುಭವಿಗಳು ಎಂದು ಹೇಳುವುದಕ್ಕೆ ಅವಕಾಶವಾಯಿತು. ದಯಮಾಡಿ ಮತ್ತೊಮ್ಮೆ ಈ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಎಕ್ಸೈಜ್ ಸ್ಟಾಫ್ ವಿಷಯ, ಎಷ್ಟೋ ಸಂಸಾರಿ ಮನೆಗಳ ಪಕ್ಕದೊಳಗೆ ಅರ್ಕ್‌ಷಾಪ್ ಲೈಸನ್ಸ್ ಕೊಟ್ಟಿದ್ದಾರೆ. ಇದು ಸರಿಯೋ ತಪ್ಪೋ ಎಂದು ಯೋಚನೆ ಮಾಡಬೇಕು. ಸಾಧಾರಣವಾಗಿ ಅರ್ಕ್‌ಷಾಪ್ ಟಾಡಿ ಷಾಪ್‌ಗಳಲ್ಲಿ ಊರಿನಿಂದ ಹೊರಗೆ ಇರಬೇಕೆಂದು ಸರ್ಕಾರದ ನೀತಿ ಇದೆ. ಅದು ತಮಗೆ ಗೊತ್ತಿದೆಯೋ ಇಲ್ಲವೋ, ಮೈಸೂರು ಬ್ಯಾಂಕ್ ಚೌಕದ ರಸ್ತೆಯ ಒಳಗೆ ಸಾಯಂಕಾಲ ಆದರೆ ಎಲ್ಲರೂ ಹೋಗಿ ಸಾರಾಯಿ ತೆಗೆದುಕೊಂಡು ಬಾಯಿಗೆ ಬಿಟ್ಟುಕೊಂಡು ಬಿಡುತ್ತಾರೆ. ಬಾಯಿಗೆ ಬಿಟ್ಟುಕೊಂಡಮೇಲೆ ಜನಕ್ಕೆ ಏನು ಆಗುತ್ತದೆ ಗೊತ್ತಿದೆ. ಅಲ್ಲಿ ರಸ್ತೆ ಯೊಳಗೆ ಜನಗಳು ಓಡಾಡುವುದಕ್ಕೆ ಆಗುತ್ತದೆಯೇ ಹೇಗೆ ? ಅದು ಸರಿಯೇ ಯೋಚನೆ ಮಾಡಿ. ಸರಿಯಲ್ಲ ಎಂದು ಕಂಡುಬಂದರೆ ಸಿಟಿಯೊಳಗೆ ಇರುವ ಶಾಪ್‌ಗಳನ್ನು ವಜಾ ಮಾಡಿ, ಎಕ್ಸ್‌ಟೆನ್‌ಷನ್ ಇದ್ದರೆ ಪರವಾಗಿಲ್ಲ ಅಲ್ಲಿ ಒಂದು ಬಂಗಲೆಯಿಂದ ಇನ್ನೊಂದು ಬಂಗಲೆಗೆ ಅಂತರ ಇರುತ್ತದೆ. ಬಡಜನರು ವಾಸ ಮಾಡುವ ಕಡೆ ಈ ರೀತಿ ತೆರೆಯಬಾರದು ಎಂದು ಅಭಿಪ್ರಾಯ ಪಡುತ್ತೇನೆ. ಈಗಿನ ಕಾಲದ ಟಾಡಿ ಹೇಗಿದೆ ಅಪ್ಪ ಎಂದರೆ ಸಕ್ಕರೆ ನೀರು ಇದ್ದ ಹಾಗೆ ಇರುತ್ತದೆ. ಟಾಡಿ ಕ್ವಾಲಿಟಿ ನೆಟ್ಟಗಲ್ಲಪ್ಪ ಕಾಲಕ್ಕೆ ಹೋಯಿತು. ಟಾಡಿ ಹೇಗೆ ಇರಬೇಕು, ಅರಾಕ್ ಹೇಗೆ ಇರಬೇಕು ಎಂಬುದಕ್ಕೆ ನಿಬಂಧನೆ ಇದೆ. ಅದರ ಪ್ರಕಾರ ಚೆಕ್ ಮಾಡುತ್ತಾ ಇಲ್ಲ. ವಾಸ್ತವವಾಗಿ ಜನಗಳ ಆಗುಹೋಗುಗಳ ಬಗ್ಗೆ ಅವರಿಗೆ ಲಕ್ಷ್ಯವಿಲ್ಲ ಎಂದು ಹೇಳಬೇಕಾಗಿರುತ್ತದೆ. ತಾವು ದಯಮಾಡಿ ಇದನ್ನು ಗಮನಿಸಬೇಕು. ಲಂಚಕೋರರು ಅಲ್ಲ ಎಂದು ಯಾರು ಕಂಡು ಬರುತ್ತಾರೋ ಅಂಥವರನ್ನು ಅಲ್ಲಿಗೆ ಕಳುಹಿಸಿ ಟಾಡಿ ಮತ್ತು ಅರಾಕ್ ಹೇಗೆ ಇರಬೇಕು ನಿಶಾ ಇಲ್ಲದೆ ಸಾರಾಯಿ ತಯಾರಿಸಿ ಸರ್ಕಾರದ ನೀತಿಗೆ ವಿರುದ್ಧವಾಗಿ ನಡೆಯುತ್ತಿದ್ದಾರೆ. ಅದಕ್ಕೆ ಗಮನವನ್ನು ಹರಿಸಬೇಕೆಂದು ಹೇಳುತ್ತೇನೆ.

ಇನ್ನು ಪೊಲೀಸ್ ಡಿಪಾರ್ಟ್‌ಮೆಂಟಿನ ಬಗ್ಗೆ ಕೆಲವು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗ ಮಿಸ್ಟರ್ ರಾವ್‌ರವರು ಪೊಲೀಸ್ ಐ.ಜಿ.ಪಿ. ಆಗಿದ್ದಾರೆ, ಒಳ್ಳೆಯವರು. ಆದರೆ ಅವರ ಸುತ್ತಮುತ್ತ ಇರುವ ಜನರಲ್ಲಿ ಒಳ್ಳೆಯವರು ಯಾರಿದ್ದಾರೂ, ಇದ್ದಾರೆಯೇ ಎಂದು ನೋಡಿದರೆ ಒಳ್ಳೆಯವರು ಸಿಗುವುದು ಕಷ್ಟ ಒಬ್ಬರು ಒಳ್ಳೆಯವರು ಇದ್ದರೆ ಒಳ್ಳೆಯದು ಮಾಡುವುದು ಕಷ್ಟವಾಗುತ್ತದೆ. ಐ.ಜಿ.ಪಿ. ಗಳ ಸುತ್ತ ಕೆಟ್ಟ ಜನಗಳು ಇರಬೇಕಾದರೆ ಒಳ್ಳೆಯವರು ಒಬ್ಬರು ಗುಂಪಿನೊಳಗೆ ಏನು ಮಾಡುವುದಕ್ಕೆ ಸಾಧ್ಯ? ಅದರ ಜೊತೆಗೆ ಅವರನ್ನು ಜೈಲ್ ಇಲಾಖೆಗೆ ಹಾಕಿ ಬೇರೆಯವರನ್ನೇ ನೇಮಕ ಮಾಡುತ್ತಾರೆ, ಎಂದು ವದಂತಿ ಇದೆ. ಅದನ್ನು ನಾನು ನಂಬುವುದಕ್ಕೆ ತಯಾರು ಇಲ್ಲ. ಐ.ಜಿ.ಪಿ. ನೇಮಕ ಮಾಡುವುದಕ್ಕೆ ಮುಖ್ಯಮಂತ್ರಿಗಳು ಜವಾಬ್ದಾರರು ಎಂದು ನಾನು ತಿಳಿದುಕೊಂಡಿರಬೇಕಾದರೆ ಅಂಥ ಒಳ್ಳೆಯ ಐ.ಜಿ.ಪಿ. ಯವರನ್ನು ಬೇರೆ ಕಡೆ ಕಳುಹಿಸುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಈ ರೀತಿ ಸುತ್ತಮುತ್ತ ಜನಗಳು ಅವರನ್ನು ಏನಾದರೂ ಮಾಡಿ ಆಚೆಗೆ ತಳ್ಳಿದರೆ ನಮ್ಮನ್ನು ಕೇಳುವವರು ಯಾರು ಎಂದು ತಿಳಿದುಕೊಂಡಿದ್ದಾರೆ, ದಯವಿಟ್ಟು ಆ ರೀತಿ ಮಾಡಬೇಡಿ ಎಂದು ಪ್ರಾರ್ಥನೆ ಮಾಡುತ್ತೇನೆ. ನನಗೆ ಸಾಧಾರಣವಾಗಿ ಪೊಲೀಸಿನವರನ್ನು ಟೀಕೆ ಮಾಡುವ ಅಭ್ಯಾಸವಿಲ್ಲ. ಅವರು ನಮ್ಮ ರಕ್ಷಣೆ ಗೋಸ್ಕರ ಇರುವವರು. ಈಚೆಗೆ ಬೆಂಗಳೂರು ನಗರದೊಳಗೆ ಏನು ಆಗಿದೆ ಎಂದರೆ ಪೊಲೀಸ್ ಸ್ಟೇಷನ್‌ಗೆ ಫಿರ್ಯಾದಿ ಕೊಡಲು ಹೋದರೆ ಲಾಕಪ್‌ನೊಳಗೆ ಹಾಕು ಎಂದು ಹೇಳುತ್ತಾರೆ. ಅವರು ಅಲ್ಲಿಂದ ತಪ್ಪಿಸಿಕೊಂಡು ಬರಬೇಕಾದರೆ ಸಾಕಾಗಿ ಹೋಗುತ್ತದೆ. ಇನ್ನೊಂದು ವಿಚಾರ ಹೇಳುತ್ತೇನೆ. ಚಿಕ್ಕಪೇಟೆಯಲ್ಲಿ ಕಪಾಲಿ ಹೋಟಲ್ ಇದೆ. ಮಲ್ಲಪ್ಪ ಮಾರ್ಕೆಟ್ ಪಕ್ಕದಲ್ಲಿ

ಇದೆ. ಸೆಂಟ್ರಲ್ ಲಾಡ್ಜ್ ನರಸಿಂಹರಾಜ ರೋಡ್‌ನಲ್ಲಿ ಇದೆ. ಜಿ.ಪಿ. ಹೋಟೆಲ್ ತುಳಿಸಿ ತೋಟದ ಪಕ್ಕದಲ್ಲಿ ಇದೆ. ಜಿ.ಪಿ. ಹೋಟಲ್‌ನಲ್ಲಿ ಕತೆ ವ್ಯವಹಾರ ನಡೆಯುತ್ತಿದೆ. ಅಲ್ಲಿ ಇಬ್ಬರು ಕಾನ್‌ಸ್ಟೇಬಲ್ ಹಾಕಿದ್ದಾರೆ. ಅಲ್ಲಿಗೆ ಆಗೊಬ್ಬ ಈಗೊಬ್ಬ ಹೋಗುತ್ತಾರೆ, ಅಷ್ಟು ಹೊತ್ತಿಗೆ ಒಬ್ಬಳು ಹುಡುಗಿಯು ಹೋಗುತ್ತಾಳೆ.

ಶ್ರೀ ಎಚ್. ಡಿ. ದೇವೇಗೌಡ :—ದೊಡ್ಡ ಪ್ರತಿಷ್ಠಿತ ಜನ ಸೂಳೆಗಾರಿಕೆ ಮಾಡಿದರೆ ಸುಮ್ಮ ನಿರುತ್ತೀರಿ, ಸಣ್ಣ ಹೋಟೆಲ್‌ನಲ್ಲಿ ನಡೆದರೆ ಗಮನಕ್ಕೆ ತೆಗೆದುಕೊಳ್ಳುತ್ತೀರಿ.

ಶ್ರೀ ಕೆ. ಎಂ. ನಾಗಣ್ಣ :—ಸಾಮಾನ್ಯ ಜನತೆಯ ಬಗ್ಗೆ ನಾವು ಮಾತನಾಡುವುದು. ಇಂಟರ್ ನ್ಯಾಷನಲ್ ಹೋಟೆಲ್‌ನಲ್ಲಿ ನಾವು ನೀವು ಹೋಗಿ ಏನು ಮಾಡಿದರೂ ದುಃಖ ಇಲ್ಲ. ಸಾಮಾನ್ಯ ಜನ ಇರುವ ಕಡೆ ಬೇಡ. ಜಿ. ಪಿ. ಹೋಟೆಲ್‌ನಲ್ಲಿ ಇಬ್ಬರು ಕಾನ್‌ಸ್ಟೇಬಲ್ ಹಾಕಿದರೂ ವ್ಯವಹಾರ ನಡೆಯುತ್ತಿದೆ, ನಿಂತಿಲ್ಲ. ಹಿಂದೆ ಗರುಡಾಚಾರ್ ಡಿ. ಎಸ್. ಪಿ. ಆಗಿದ್ದಾಗ 3 ಹೋಟೆಲ್‌ಗಳಲ್ಲಿ ನಡೆಯುವ ವ್ಯವಹಾರಗಳನ್ನು ನಿಲ್ಲಿಸಿದ್ದರು, ಹೋಟೆಲ್‌ಗಳನ್ನೇ ಬಂದ್ ಮಾಡಿಸಿದ್ದರು. ಕೆಂಪೇಗೌಡ ರಸ್ತೆಯೊಳಗೆ ಸಿನಿಮಾ ಥಿಯೇಟರ್ಸ್ ಮತ್ತು ಹೋಟೆಲ್‌ಗಳು ಇವೆ, ಅಲ್ಲಿ ರಾತ್ರಿ 10 ಗಂಟೆ ಆದ ಮೇಲೆ ಹೆಣ್ಣು ಮಕ್ಕಳ ಮೆರವಣಿಗೆ ನಡೆಯುತ್ತದೆ. ಅದಕ್ಕಾಗಿ ಬ್ರೋಕರ್ಸ್‌ಗಳು ಇದ್ದಾರೆ. ಪೋಲೀಸಿನವರು ಪ್ರತಿದಿವಸ ಎರಡು ಕಡೆಯಿಂದಲೂ ದುಡ್ಡು ತೆಗೆದುಕೊಂಡು ಹೋಗುವ ಕತೆಯಾಗಿದೆ. ಈ ಅವ್ಯವಹಾರ ಬೆಂಗಳೂರು ನಗರದಲ್ಲಿ ನಿಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಈ 4 ಹೋಟೆಲ್‌ಗಳನ್ನು ತಕ್ಷಣ ಮುಚ್ಚಿಸಿದರೂ ಚಿಂತೆಯಿಲ್ಲ ಕಪಾಲಿ ಹೋಟೆಲ್‌ಗೆ ಪೋಲೀಸಿನವರ ಬೆಂಬಲವಿದೆ. ಅಲ್ಲಿ ನಡೆಯುವ ಅವ್ಯವಹಾರಕ್ಕೆ ಪೋಲೀಸಿನವರು ಜವಾಬ್ದಾರರು ಎಂದು ಹೇಳಬೇಕಾಗುತ್ತದೆ. ಅದರ ಜೊತೆಗೆ ಬೆಂಗಳೂರು ನಗರದೊಳಗೆ ಕಳ್ಳಬಟ್ಟಿ ಸಾರಾಯಿ ಜಾಸ್ತಿಯಾಗುತ್ತಾ ಇದೆ. ಕಬ್ಬನ್ ಪೇಟೆ ಗಲ್ಲಿಯೊಳಗೆ ಇದು ನಡೆಯುತ್ತಾ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಅಲಸೂರು ಗೇಟ್ ಪೋಲೀಸಿನವರು ಯಾರೂ ಇದನ್ನು ಹಿಡಿಯುತ್ತಾ ಇಲ್ಲ, 3 ತಿಂಗಳಿಗೆ ಒಂದು ಸಾರಿ ಯಾರನ್ನಾದರೂ ಕರೆದುಕೊಂಡು ಹೋಗಿ ಕೋರ್ಟಿನಲ್ಲಿ ಜುಲ್ಮಾನೆ ಹಾಕಿಸುತ್ತಾರೆ. ಈಗ ಮಟಕ ನಡೆಯುತ್ತಿದೆ. ನಾನು ನನ್ನ 50 ವರ್ಷದಿಂದ ಜೂಜುಗಾರನಾದರೂ ಅದು ಏನು ಎಂದು ಗೊತ್ತಿರಲಿಲ್ಲ. ಇದು ಬೆಂಗಳೂರು ನಗರದೊಳಗೆ ನಡೆಯುತ್ತಿದೆ. ಎರಡು ಆಣೆಯಿಂದ ಬೆಟ್ಟಿಂಗ್‌ನಿಂದ ಶುರು ಆಗುತ್ತದೆ, ತಮ್ಮ ಕಾಲದಲ್ಲಿ ತಮ್ಮ ಕೈಯಲ್ಲಿ ಪೋರ್ಟ್‌ಫೋಲಿಯೋ ಇರುವಾಗ ಈ ಅನ್ಯಾಯಗಳನ್ನು ತೊಡೆದುಹಾಕಬೇಕು, ನನಗೆ 5 ನಿಮಿಷ ಜಾಸ್ತಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ) :—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ರಾಜ್ಯದ ಅಬ್ಕಾರಿ ಮತ್ತು ಸಾಮಾನ್ಯ ಆಡಳಿತ, ಬಂದಿಖಾನೆ, ಪೋಲೀಸ್, ವಾರ್ತಾ ಇಲಾಖೆ ಇತ್ಯಾದಿ ಬಗ್ಗೆ ಬಂದಿರತಕ್ಕಂಥ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡೋಣ ಎಂದು ಮನಸ್ಸು ಮಾಡಿದ್ದೇನೆ.

ಮೊಟ್ಟಮೊದಲಾಗಿ ಈ ಅಬ್ಕಾರಿ ವಿಷಯವನ್ನು ತೆಗೆದುಕೊಂಡರೆ ನಿಜವಾಗಿಯೂ ಕೂಡ ಒಂದು ಕಾರಣದಿಂದ 1967 ನೇ ಇಸವಿಯಲ್ಲಿ ಹೊಸದಾಗಿ ಚುನಾವಣೆ ಆಗಿ ನಾವು ಬಂದಾಗ ಈ ಪಾನನಿರೋಧ ಏನು ಜಾರಿಯಲ್ಲಿತ್ತೋ ಅದರಿಂದ ಆಗತಕ್ಕಂಥ ಅನ್ಯಾಯಗಳನ್ನು ತಡೆಗಟ್ಟುವುದಕ್ಕೆ ಈ ಪ್ರೊಹಿಬಿಷನ್ ತೆಗೆದುಹಾಕಿದರೆ ಒಳ್ಳೆಯದು ಎಂದು ಯೋಚನೆ ಮಾಡಿ ಇದನ್ನು ತೆಗೆದು ಹಾಕಿಸುವ ಬಗ್ಗೆ ನಾವೂ ಕೂಡಕಾರಣಕರ್ತರಾದೆವು. ಈಗ ನಡೆಯತಕ್ಕಂಥ ಸಂದರ್ಭ ನೋಡಿದರೆ ಸಮಾಜವಾದವನ್ನು ಜಾರಿಗೆ ತಂದು ಬಡವರನ್ನು ಉದ್ಧಾರ ಮಾಡಬೇಕು ಎಂದು

ಏನು ಯೋಚನೆ ಮಾಡಿದ್ದೇವೆ ಅದಕ್ಕೆ ತದ್ವಿರುದ್ಧವಾಗಿ ಈಗ ದಿನವಹಿ ನಡೆಯುತ್ತಾ ಇರುವುದನ್ನು ನೋಡುತ್ತಾ ಇದ್ದೇವೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಕಡೆ ಕಾಫಿ ಪ್ಲಾಂಟೇಷನ್ ಇದೆ. ಅಲ್ಲಿ ಕೂಲಿಗಾರರಿಗೆ ವಾರಕ್ಕೆ ಒಂದು ಸಾರಿ ಬಟವಾಡೆ ಮಾಡುವ ಪದ್ಧತಿ ಇದೆ. ಆ ಬಟವಾಡೆ ದಿವಸದಲ್ಲಿ ಶೇಕಡ 50 ಭಾಗಕ್ಕಿಂತಲೂ ಹೆಚ್ಚು ಜನ ಸೇಂದಿ ಮತ್ತು ಸರಾಬಿಗೆ ಖರ್ಚು ಮಾಡಿಬಿಡುತ್ತಾರೆ. ಅವರು ಅದಕ್ಕಾಗಿ ಖರ್ಚು ಮಾಡುತ್ತಾ ಇರುವುದನ್ನು ನಾವು ನೋಡುತ್ತಾ ಇದ್ದೇವೆ. ಇದರಿಂದ ನನ್ನ ಮನಸ್ಸಿಗೆ ಏನು ಅನಿಸಿದೆ ಎಂದರೆ ಈ ಪಾನ ನಿರೋಧವನ್ನು ಜಾರಿಗೆ ತರುವುದೇ ಸೂಕ್ತ ಎಂದು ಹೇಳಿಕೊಳ್ಳುವ ಕಾಲ ಬಂದಿದೆ ಎಂದು ನಾನು ವ್ಯಥೆಯಿಂದ ಹೇಳಬೇಕಾಗಿದೆ. ಈ ಬಗ್ಗೆ ಸರ್ಕಾರ ವಿಮರ್ಶೆ ಮಾಡಬೇಕು, ಮತ್ತು ಸರ್ಕಾರಕ್ಕೂ ಕೂಡ ಅನೇಕ ರೀತಿಯಲ್ಲಿ ಕಮಿಟ್‌ಮೆಂಟ್ ಇದೆ. ಅವರಿಗೆ ಹೆಚ್ಚು ಉತ್ಪಾದನೆಯೂ ಕೂಡ ಬೇಕಾಗಿದೆ. ಇದನ್ನು ಯಾವ ರೀತಿ ಬಗೆಹರಿಸುತ್ತೀರಿ ಎನ್ನುವುದನ್ನು ಯೋಚನೆ ಮಾಡಿ ಬಡವರ ಉದ್ಧಾರಕ್ಕೆ ಕಾರಣರಾಗಬೇಕು. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಪುನರ್ವಿಮರ್ಶೆ ಮಾಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಅಂಗಡಿವಾರು ಹರಾಜು ಮಾಡಿದರೆ ಸರ್ಕಾರಕ್ಕೆ ಹೆಚ್ಚು ಉತ್ಪತ್ತಿ ಬರುತ್ತದೆ ಮತ್ತು ಅದರಿಂದ ಸಮಾಜವಾದ ತರುವುದಕ್ಕೆ ಸಾಧ್ಯವಾಗುತ್ತದೆ ಎಂದು ಅನೇಕರು ಹೇಳಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ಆ ರೀತಿ ಮಾಡುತ್ತಾರೆ ಎಂದು ತಿಳಿದಿದ್ದೇನೆ. ಮೊದಲು ಅಂಗಡಿವಾರು ಹರಾಜು ಮಾಡುತ್ತಾರೆ, ನಂತರ ತಾಲ್ಲೂಕುವಾರು ಹರಾಜು ಮಾಡುತ್ತಾರೆ. ಇದರಲ್ಲಿ ಯಾವುದು ಜಾಸ್ತಿ ಬರುತ್ತದೆಯೋ ಅದಕ್ಕೆ ಕೊಡುತ್ತಾ ಇದ್ದಾರೆ. ಇದರಿಂದ ಸರ್ಕಾರಕ್ಕೆ ಹೆಚ್ಚು ಉತ್ಪನ್ನ ಬರುತ್ತದೆ ಎನ್ನುವ ದೃಷ್ಟಿಯಿಂದ ಇದು ಸಂಪೂರ್ಣವಾಗಿ ತಪ್ಪು ಎಂದು ಹೇಳುವುದಕ್ಕೆ ಅವಕಾಶವಾಗುವುದಿಲ್ಲ ಎಂದು ನನಗಂತೂ ಅರ್ಥವಾಗಿದೆ.

ಇನ್ನು ಸೇಂದಿ ಅಂಗಡಿಗಳನ್ನು ತೆಗೆಯುವ ವಿಷಯ. ಅನೇಕ ಜನ ಇದನ್ನು ಊರ ಮಧ್ಯದಲ್ಲಿ ತೆಗೆಯಬೇಡಿ ದೂರ ತೆಗೆಯಬೇಕು ಎಂದು ಹೇಳಿದರು. ನಿಜ. ಕೆಲವು ಸಂದರ್ಭದಲ್ಲಿ ಇದನ್ನು ಪರೀಕ್ಷೆ ಮಾಡುವುದಕ್ಕೆ ಮಾಡಬೇಕು. ದೂರ ತೆಗೆದರೆ ಏನಾಗುತ್ತದೆ ಎಂದರೆ ಯಾವ ದಯದಾಕ್ಷಿಣ್ಯವೂ ಇಲ್ಲದೇ ಇರುವ ರೀತಿಯಲ್ಲಿ ರಾತ್ರಿಹೊತ್ತು ಅಲ್ಲಿಗೆ ಹೋಗಿ ಕುಡಿದು, ಆರಾಮವಾಗಿ ಮಲಗಿಕೊಂಡು ಬೆಳಗ್ಗೆ ಬರುವ ಸಂದರ್ಭ ಇದೆ. ಆದುದರಿಂದ ಇದು ಕಡಿಮೆ ಮಾಡಬೇಕಾದರೆ ನನ್ನ ಮನಸ್ಸಿನಲ್ಲಿ ಇರುವುದು ಇದನ್ನು ಮಧ್ಯೆ ಹಾಕಿದರೆ ಸ್ವಲ್ಪ ಗೌರವವಾಗಿರುವ ಜನ ಅಲ್ಲಿಗೆ ಹೋಗುವುದು ಕಡಿಮೆಯಾಗಬಹುದು. ಇದನ್ನು ಊರ ಆಚೆ ಹಾಕಿದರೆ ಅಲ್ಲಿ ಸಂತೆಯಲ್ಲಿ ಕೂತುಕೊಳ್ಳುವ ಹಾಗೆ ಕೂತುಕೊಂಡು ಅಲ್ಲೇ ಮುಚ್ಚುಮರೆ ಇಲ್ಲದೆ ಕುಡಿದು, ಅಲ್ಲಿ ಆರಾಮವಾಗಿ ಮಲಗಿ ಬೆಳಗ್ಗೆ ಬರುತ್ತಾರೆ. ಆದುದರಿಂದ ಇದನ್ನು ಯಾವ ರೀತಿಯಾಗಿ ವಿಮರ್ಶೆ ಮಾಡಬೇಕು ಎಂದರೆ ಇದನ್ನು ಊರಿನ ಮಧ್ಯದಲ್ಲಿ ಇಟ್ಟರೆ ಸ್ವಲ್ಪ ಗೌರವಸ್ಥರಾದಂತ ಜನ ಹೋಗುವುದು ಕಡಿಮೆಯಾಗುತ್ತದೆ ಎಂದು ನನ್ನ ಭಾವನೆ ಇದೆ.

ಇನ್ನು ಸೇಂದಿ ಮಾರಾಟದ ವಿಷಯ. ಈ ವಿಷಯದಲ್ಲಿ ಹೇಳುವುದಾದರೆ ಕೆಮಿಕಲ್ಸ್ ಹಾಕಿದ ಸೇಂದಿಯನ್ನು ಕುಡಿಯಕೂಡದೆಂದು ಮಾಡಿದ್ದಾರೆ. ಆದರೂ ಕೂಡ ಕೆಮಿಕಲ್ಸ್ ಹಾಕಿದ ಸೇಂದಿಯನ್ನು ಬಾಟಲಿಗೆ ಹಾಕಿ ತೆಗೆದುಕೊಂಡು ಹೋಗಿ ಕುಡಿಯುತ್ತಾರೆ. ಇದರಿಂದ ಅದನ್ನು ಕುಡಿಯತಕ್ಕಂಥ ಜನರಿಗೆ ಏನಾಗಿದೆ ಎಂದರೆ ಅನೇಕರಿಗೆ ಕಣ್ಣು ಕಾಣುವುದಿಲ್ಲ. ಇದು ಒಳ್ಳೆಯ ಸೇಂದಿ ಅಲ್ಲ ಎಂದು ಸರಕಾರದ ಗಮನಕ್ಕೆ ಬಂದು ಇದನ್ನು ಪರೀಕ್ಷೆ ನಡೆಸಿದ್ದಾರೆ ಎನ್ನುವುದು ಗೊತ್ತಾಗಿದೆ. ಈ ಬಗ್ಗೆ ಹೆಚ್ಚಿನ ಕಾನೂನು ಹಾಕದೇ ಹೋದರೆ ಬಹುಶಃ ಒಂದು ದೃಷ್ಟಿಯಲ್ಲಿ ನೋಡಿದರೆ ದೇಶದ ಜನತೆಯ ಆರೋಗ್ಯ ಕೆಟ್ಟುಹೋಗುತ್ತದೆ. ಸಾಮಾನ್ಯ ಬಡವರು ಇದು ಕಡಿಮೆ ರೇಟಿನಲ್ಲಿ ಸಿಕ್ಕುತ್ತದೆ ಎಂದು ಕುಡಿಯುತ್ತಾರೆ. ಇದರಿಂದ ಜಾಸ್ತಿಯಾಗಿರುವುದರಿಂದ ಇದನ್ನು ಸರಿಪಡಿಸಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಸಾಮಾನ್ಯ ಆಡಳಿತ ವಿಷಯ ಹೇಳುವುದಾದರೆ ಅದಕ್ಕೆ ಹೆಸರು ಸಾಮಾನ್ಯ ಆಡಳಿತ ಇದ್ದರೂ ಕೂಡ ಅದು ಸಾಮಾನ್ಯವಾಗುವುದಿಲ್ಲ. ಇದು ಬಹಳ ಮುಖ್ಯವಾಗಿರತಕ್ಕಂಥ ಅಂಶ. ದೇಶದಲ್ಲಿ ಈವೊತ್ತು ಯಾವುದು ತೆಗೆದುಕೊಂಡರೂ ಕೂಡ ಆಡಳಿತ ಸುಧಾರಣೆ ಮಾಡುವುದಕ್ಕೆ ಸಾಧ್ಯ ಇದೆ. ಇದರ ಬಗ್ಗೆ ಇನ್ನೂ ಹೆಚ್ಚು ಸುಧಾರಣೆ ಆಗಬೇಕಾಗಿದೆ ಎಂದು ತಮ್ಮ ರಿಪೋರ್ಟಿನಿಂದ ಗೊತ್ತಾಗುತ್ತದೆ ಮತ್ತು ಈ ಬಗ್ಗೆ ಏನೇನೋ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ಈವೊತ್ತಿನ ದಿವಸ ಏನಾಗಿದೆ ಎಂದರೆ ದೇಶದಲ್ಲಿ ಕರಪ್‌ಷನ್ ಜಾಸ್ತಿಯಾಗಿದೆ. ಒಂದು ಕಾಗದ ಪತ್ರ ಒಂದು ಆಫೀಸಿಗೆ ಹೋದರೆ ಬಹುಶಃ ಕೆಲವು ಸಾರಿ 4-5-6 ವರ್ಷವಾದರೂ ಹೊರಗೆ ಬರುವುದಿಲ್ಲ. ಅದು ಏತಕ್ಕೆ ಬರುವುದಿಲ್ಲ ? ಕೆಲವರು ಹೇಳುತ್ತಾರೆ ನಾವು ಅರ್ಜಿ ಕೊಟ್ಟು 10 ವರ್ಷವಾಯಿತು. ಅದು ಎಲ್ಲಿಗೆ ಹೋಯಿತೋ ಗೊತ್ತಿಲ್ಲ ಎಂದು ಹೇಳುತ್ತಾರೆ. ಅದಕ್ಕೋಸ್ಕರ ಅವರು ಹೇಳುತ್ತಾರೆ. ಹಳೆಯ ಹೆಸರನ್ನೇ ಹೇಳಬೇಡಿ, ಹೊಸದಾಗಿ ಕೊಡಿ ಎಂದು ಹೇಳುತ್ತಾರೆ. ಆದುದರಿಂದ ಈ ವಿಷಯದಲ್ಲಿ ನಾನು ಹೇಳುವುದು ಏನೆಂದರೆ ಮಂತ್ರಿಗಳು ಪ್ರವಾಸಕ್ಕೆ ಹೋದಾಗ ಅವರವರಿಗೆ ಸಂಬಂಧಪಟ್ಟ ಇಲಾಖೆಗಳು ಏನು ಇರುತ್ತದೆಯೋ ಅಲ್ಲಿಗೆ ಹೋಗಿ ಒಂದು ಗಂಟೆ ಕಾಲ ತಾಲ್ಲೂಕು ಆಫೀಸ್ ಇನ್‌ಸ್ಪೆಕ್ಷನ್ ಮಾಡಿ ಅಲ್ಲಿ ಆ ಅಧಿಕಾರಿಗಳ ಟೇಬಲ್‌ನಲ್ಲಿರುವ ಡ್ರಾಯರನ್ನು ಎಳೆದು ಅವರ ಹತ್ತಿರ ಫೈಲುಗಳು ಎಷ್ಟು ಇವೆ ಅದನ್ನು ಇನ್‌ಸ್ಪೆಕ್ಷನ್ ಮಾಡಿದರೆ ಗೊತ್ತಾಗುತ್ತದೆ. ಇದನ್ನು ಮುಖ್ಯಮಂತ್ರಿಗಳೇ ಅಲ್ಲದೆ ಎಲ್ಲಾ ಮಂತ್ರಿಗಳೂ ಕೂಡ ಹೋಗಿ ಆ ಕೆಲಸವನ್ನು ಮಾಡಬೇಕು. ಕೆಲವರು ಆ ರೀತಿ ಮಾಡಿದ್ದಾರೆ ಎಂದು ನಾನು ಕೇಳಿದ್ದೇನೆ. ಎಲ್ಲರೂ ಹೋಗಿ ಇನ್‌ಸ್ಪೆಕ್ಷನ್ ಮಾಡಬೇಕು ಎಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

ಇನ್ನು ಡಿವಿಷನಲ್ ಕಮಿಷನರ್, ಡೆಪ್ಯೂಟಿ ಕಮಿಷನರ್ ಮತ್ತು ಅಸಿಸ್ಟೆಂಟ್ ಕಮಿಷನರ್ ಅವರುಗಳು ಅಲ್ಲಿಗೆ ಹೋಗಿ ಇನ್‌ಸ್ಪೆಕ್ಷನ್ ಮಾಡುವ ವಿಚಾರ ನಮ್ಮ ಮಂತ್ರಿಗಳಿಗೆ ಚೆನ್ನಾಗಿ ಗೊತ್ತಿದೆ. ಇದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಇವರು ಆಫೀಸಿನ ಇನ್‌ಸ್ಪೆಕ್ಷನ್‌ಗೆ ಹೋಗುವ ಕ್ರಮ ಹೇಗೆ ಎಂದರೆ ಮೊದಲು 3 ಜನ ಕೇಸ್ ವರ್ಕರ್ಸ್‌ನ್ನು ಈ ಆಫೀಸರು ಹೋಗುವ ಮುಂದಿನ ದಿನವೇ ಕಳುಹಿಸುತ್ತಾರೆ. ಅವರು ಹೋಗಿ ಅಲ್ಲಿ ಎಲ್ಲಾ ವಿಷಯಗಳನ್ನು ನೋಡಿ ನೋಟ್ಸ್ ತಯಾರು ಮಾಡಿಕೊಂಡು ಬರುತ್ತಾರೆ. ಅದನ್ನು ಟೇಬಲ್ ಮುಂದೆ ಇಡುತ್ತಾರೆ. ಆಫೀಸರು ಬಂದು ಕುರ್ಚಿಮೇಲೆ ಕೂತುಕೊಳ್ಳುತ್ತಾರೆ ತಾಸೀಲ್ದಾರರು ಕೂಡ ಬಂದು ಕೂತುಕೊಳ್ಳುತ್ತಾರೆ. ಆ ನೋಟ್ಸನ್ನು ತೆಗೆದುಕೊಂಡು ಅದು ಏತಕ್ಕೆ ಹಾಗಾಯಿತು, ಇದು ಏತಕ್ಕೆ ಹೀಗಾಯಿತು ಎಂದು ಕೇಳುತ್ತಾರೆ, ಅಷ್ಟೆ. ಕೇಸ್ ವರ್ಕರ್ಸ್ ಅಲ್ಲಿಗೆ ಹೋಗಿ ಏನು ನೋಟ್ಸ್ ತಯಾರು ಮಾಡುತ್ತಾರೋ ಅದರಲ್ಲಿ 2-3 ಪೆಂಡಿಂಗ್ ಇದೆ ಎಂದು ತೋರಿಸಿಬಿಟ್ಟಿರುತ್ತಾರೆ. ಜಾಸ್ತಿ ಏನೂ ತೋರಿಸಿರುವುದಿಲ್ಲ. ಯಾರೂ ಕೂಡ ಆ ಕೇಸ್ ವರ್ಕರ್ ಹತ್ತಿರ ಹೋಗಿ ಅವನ ಟೇಬಲ್‌ನಲ್ಲಿ ಡ್ರಾಯರ್ ಎಳೆದು ಎಷ್ಟು ರಿಕಾರ್ಡ್ ಇದೆ ಎಂದು ನೋಡುವುದಿಲ್ಲ, ಈ ರೀತಿ ಅವರು ಸರಿಯಾಗಿ ಇನ್‌ಸ್ಪೆಕ್ಷನ್ ಮಾಡುವುದಿಲ್ಲ. ಅವರು ಇನ್‌ಸ್ಪೆಕ್ಷನ್‌ಗೆ ಹೋದರೆ ಒಂದು ಗಂಟೆ ಕಾಲವೂ ಕೂಡ ಇರುವುದಿಲ್ಲ. ಅವರು ಮುಂಚಿನ ದಿನವೇ ತಮ್ಮ ಆಫೀಸಿನ ಕೇಸ್ ವರ್ಕರ್ಸ್‌ನ್ನು ಈ ನೋಟ್ಸ್ ತಯಾರು ಮಾಡುವುದಕ್ಕೆ ಕಳುಹಿಸಿಬಿಟ್ಟಿರುತ್ತಾರೆ. ಏನಾದರೂ ತಪ್ಪು ಆದೀತು ಎಂದು ಹೆಡ್ ಆಫೀಸಿನಿಂದ ಬರುವ ಕೇಸ್ ವರ್ಕರ್ಸ್‌ನ್ನು ಸರಿಯಾಗಿ ನೋಡಿಕೊಳ್ಳಬೇಕು ಮತ್ತು ಅವರುಗಳಿಗೆಲ್ಲಾ ಟಿ. ಬಿ. ಯಲ್ಲಿ ಇಳಿದುಕೊಂಡರೆ ಅವರು ಊಟ ಉಪಚಾರ, ಕಾಫಿ ಇವೆಲ್ಲಾ ಸರಿಯಾಗಿ ಏರ್ಪಾಡು ಮಾಡಿಕೊಡಬೇಕು. ಈ ರೀತಿ ಮಾಡಿ ಇನ್‌ಸ್ಪೆಕ್ಷನ್ ಮಾಡಿ ಮುಗಿಸಿ ಹೋಗುತ್ತಾರೆ. ಆ ಪದ್ಧತಿ ಈವೊತ್ತೂ ಕೂಡ ನಡೆಯುತ್ತಾ ಇದೆ. ಇದನ್ನು ಹೇಗಾದರೂ ಮಾಡಿ ಸರಿಪಡಿಸ ಬೇಕೆಂದು ಹೇಳುತ್ತೇನೆ. ಆದುದರಿಂದ ಈ ವಿಚಾರದಲ್ಲಿ ನಾನು ಹೇಳುವುದೇನೆಂದರೆ ತಾವು

ಪ್ರವಾಸ ಹೋದಾಗ 2 ದಿವಸವಾದರೂ ಕೂಡ ಒಂದು ತಾಲ್ಲೂಕಿನಲ್ಲಿ ಕ್ಯಾಂಪ್ ಮಾಡಿ ತಾಲ್ಲೂಕು ಆಫೀಸಿಗೆ ಹೋಗಿ ಆ ಅಧಿಕಾರಿಗಳ ಟೇಬಲ್ ಹತ್ತಿರ ಹೋಗಿ ಅವರ ಡ್ರಾಯರ್‌ನ್ನು ತೆಗೆದು ನೋಡಿದರೆ ಸಾಮಾನ್ಯವಾಗಿ ಒಂದು ವರ್ಷದ ರಿಕಾರ್ಡ್ ಕೂಡ ಸಿಕ್ಕುವುದಿಲ್ಲ. ಅದು ಎಲ್ಲಿ ಹೋಯಿತು ಎನ್ನುವುದನ್ನು ಕಂಡುಹಿಡಿಯಬೇಕು. ಈ ರೀತಿ ಇನ್‌ಸ್ಪೆಕ್ಷನ್ ಮಾಡಿದರೆ ಈಗ ಇರತಕ್ಕಂಥ ಅಡ್ಮಿನಿಸ್ಟ್ರೇಷನ್ ಇಂಪ್ರೂವ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಈ ಬಗ್ಗೆ ಇನ್ನೊಂದು ಉದಾಹರಣೆ ಹೇಳುವುದಾದರೆ ಭದ್ರಾ ಪ್ರಾಜೆಕ್ಟ್ ಹತ್ತಿರ ಒಂದು ಕೆರೆ ಅಂಗಳದಲ್ಲಿ ಒಂದು ಜಮೀನು ಸ್ಯಾಂಕ್ಷನ್ ಆಯಿತು. ನಾನೇ ಅದನ್ನು ಸರ್ಕಾರದಲ್ಲಿ ಸ್ಯಾಂಕ್ಷನ್ ಮಾಡಿಸಿದೆ. ಆ ಜಮೀನನ್ನು ಸ್ಯಾಂಕ್ಷನ್ ಮಾಡಿಸಿ ಡೆಪ್ಯೂಟಿ ಕಮೀಷನರ್ ಆಫೀಸಿಗೆ ಕಳುಹಿಸಿದೆ. ಡೆಪ್ಯೂಟಿ ಕಮೀಷನರ್ ಆಫೀಸಿಗೆ ಹೋದರೆ ಅದನ್ನು ತಾಲ್ಲೂಕು ಆಫೀಸಿಗೆ ಕಳುಹಿಸಿದ್ದೇನೆ ಎಂದು ಅದರ ನಂಬರ್ ತಾರೀಕು ಕೊಟ್ಟರು. ಆ ತಾಲ್ಲೂಕು ಆಫೀಸಿನಲ್ಲಿ ಈ ನಂಬರನ್ನು ತೆಗೆದುಕೊಂಡು ಹೋಗಿ ಕೇಳಿದರೆ ಅವರು ಆ ಫೈಲು ನಮಗೆ ಬಂದೇ ಇಲ್ಲ ಎಂದು ಹೇಳಿದರು. ಈ ರೀತಿ ಇಷ್ಟು ಕಷ್ಟಪಟ್ಟು ಮಾಡಿದರೂ ಕೂಡ ಫೈಲೇ ಸಿಕ್ಕಲಿಲ್ಲ. ಇದರಿಂದ ಜನರಿಗೆ ಏನು ಮನೋಭಾವ ಬಂದಿದೆ ಎಂದರೆ ಏನಾದರೂ ತಾಲ್ಲೂಕ್ಕು ಆಫೀಸಿನಲ್ಲಿ ದುಡ್ಡು ಕೊಟ್ಟಿದ್ದರೆ ಇಷ್ಟು ಹೊತ್ತಿಗೆ ಆ ಫೈಲು ಸಿಕ್ಕುತ್ತಿತ್ತು; ಮತ್ತು ನಮ್ಮ ಕೆಲಸವೂ ಕೂಡ ಇಷ್ಟು ಹೊತ್ತಿಗೆ ಆಗುತ್ತಿತ್ತು ಎಂದು. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳುವುದು ಏನೆಂದರೆ ಇದರಲ್ಲಿ ಸಾಕಷ್ಟು ಬದಲಾವಣೆ ಮಾಡಿ ಜಿಲ್ಲಾಧಿಕಾರಿಗಳು ಎಲ್ಲಾ ಆಫೀಸುಗಳಿಗೂ ಹೋಗಿ ಇನ್‌ಸ್ಪೆಕ್ಷನ್ ಮಾಡಬೇಕು. ಈ ಒಂದು ಅವಕಾಶವನ್ನು ಅವರಿಗೆ ಮಾಡಿಕೊಟ್ಟರೆ ಒಳ್ಳೆಯದು. ಇದು ಒಪ್ಪಿಕೊಳ್ಳಬೇಕಾದಂಥ ವಿಷಯ ಎಂದು ಹೇಳುತ್ತೇನೆ.

ಯಾರೋ ಗುಮಾಸ್ತರು ಹೋಗಿ ನೋಟ್ಸ್ ತಯಾರು ಮಾಡಿದುದನ್ನು ಹಿಡಿದುಕೊಂಡು ಯಾವುದೋ ಅಬ್ಜೆಕ್ಷನ್ ಹಾಕಿ ಅದಕ್ಕೆ ಉತ್ತರ ಕೊಡಿ ಎಂದು ಕೇಳುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಮಂತ್ರಿಗಳು ಪ್ರವಾಸ ಹೋದಾಗ ಕೆಲವು ಕಡೆಗಳಲ್ಲಾದರೂ ಒಂದೆರಡು ಗಂಟೆ ಮೀಸಲಾಗಿಟ್ಟು ಆಫೀಸುಗಳ ತನಿಖೆ ಮಾಡಬೇಕು. ಬರೀ ಸಮಾರಂಭಗಳಲ್ಲಿ ಮಾತ್ರ ಭಾಗ ವಹಿಸುವುದನ್ನು ಕಡಿಮೆ ಮಾಡಿ ಆಫೀಸುಗಳ ತನಿಖೆಗೂ ಸ್ವಲ್ಪ ಕಾಲವನ್ನು ಮೀಸಲಾಗಿಟ್ಟುಕೊಳ್ಳಬೇಕು. ಮತ್ತು ಆಫೀಸುಗಳಿಗೆ ಹೋದಾಗ ಮ್ಯಾನೇಜರ್, ಗುಮಾಸ್ತ ಇವರುಗಳು ಇರುವ ಕಡೆ ಹೋಗಿ ಅವರ ಟೇಬಲ್ ತೆಗೆದು ನೋಡಿದರೆ ಹೆಚ್ಚಿನ ರೀತಿಯಲ್ಲಿ ಆಡಳಿತವನ್ನು ಉತ್ತಮಪಡಿಸಬಹುದು ಎಂದು ಹೇಳುತ್ತೇನೆ.

ಸೆಕ್ರೆಟೇರಿಯಟ್‌ನಲ್ಲಿರುವ ಆಫೀಸುಗಳಿಗೆ ಮಧ್ಯಾಹ್ನ ಒಂದೂವರೆ ಗಂಟೆಗೆ ಕಾಫಿ ತೆಗೆದು ಕೊಳ್ಳಲು ಹೋಗುವುದಕ್ಕೆ ಅವಕಾಶವಿದೆ. ನಾಲ್ಕೂವರೆ ಗಂಟೆಯಾದರೂ ಬಂದಿರುವುದೇ ಇಲ್ಲ. ಕೆಲವು ಕಡೆ ಐದಾರು ಕುರ್ಚಿಗಳಿರುವ ಕಡೆ ಒಬ್ಬೊಬ್ಬರೇ ಇರುತ್ತಾರೆ. ಸಾಯಂಕಾಲ ಐದೂವರೆ ಗಂಟೆಗೆ ಆಫೀಸು ಮುಗಿಯುತ್ತದೆ. ಆದರೆ ನಾಲ್ಕೂವರೆ ಗಂಟೆಯಿಂದಲೇ ಬಸ್ಸಿಗಾಗಿ ಕ್ಯೂ ನಿಂತಿರುತ್ತಾರೆ. ಇದನ್ನು ಪ್ರತಿನಿತ್ಯವೂ ನೋಡಬಹುದು. ಇಲ್ಲಿಯೇ ಹೀಗೆ ಇದ್ದರೆ ಇನ್ನು ತಾಲ್ಲೂಕು ಆಫೀಸುಗಳಲ್ಲಿ ಏನು ಹೇಳುವುದಕ್ಕಾಗುತ್ತದೆ ? ಈ ಬಗ್ಗೆ ಯಾವ ತರಹ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಜಾಗೃತ ಆಯೋಗದವರ ಕಾರ್ಯ ನಮಗೆ ಹೆಚ್ಚಾಗಿ ಕಾಣುವುದಿಲ್ಲ. 1949ನೇ ಇಸವಿಯ ವಿಷಯವನ್ನು ಹೇಳುವುದಾದರೆ ನಾನು ಡಿಸ್ಟ್ರಿಕ್ಟ್ ಬೋರ್ಡ್ ವೈಸ್‌ಪ್ರೆಸಿಡೆಂಟಾಗಿದ್ದಾಗ ಒಬ್ಬ ಸಬ್‌ಇನ್‌ಸ್ಪೆಕ್ಟರ್ ಬಗ್ಗೆ ರಿಪೋರ್ಟ್ ಮಾಡಿದೆ. ಅದರ ಬಗ್ಗೆ ವಿಚಾರಣೆ ಎಂಟೇ ದಿವಸಗಳಲ್ಲಿ ನಡೆಯಿತು. ಆಗ ಆತ ನನ್ನ ಹತ್ತಿರ ಬಂದು ಅಳುತ್ತಾ ಕುಳಿತುಕೊಂಡು ಒಂದು ಸಾರಿ ಬರೆದ

ಮೇಲೆ ನಾನು ಮತ್ತೆ ಇಂಟರ್‌ಫಿಯರ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದೆ. ಬಹುಶಃ ಅವರಿಗೆ ಕಡ್ಡಾಯ ನಿವೃತ್ತಿಯಾಯಿತು ಎಂದು ಕಾಣುತ್ತದೆ. ನರಸಿಂಹರಾಜಪುರ ತಾಲ್ಲೂಕಿನಲ್ಲಿ ಕೆಲವು ವರ್ಷಗಳ ಹಿಂದೆ ಕೆರೆಗಳ ರಿಪೇರಿ ಮಾಡಿದರು. ಆ ಸಂಬಂಧದಲ್ಲಿ ಜೂನಿಯರ್ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನಿಯರ್ ಸರಿಯಾಗಿ ಕೆಲಸ ಮಾಡಲಿಲ್ಲವೆಂದು ದೂರು ಮಾಡಿರುವ ರಿಕಾರ್ಡ್ ನಾಲ್ಕು ವರ್ಷಗಳಿಂದ ಜಾಗೃತ ಆಯೋಗದವರಲ್ಲಿಯೇ ಇದೆ. ಈ ಹೊತ್ತಿನವರೆಗೂ ಯಾರೂ ಅಲ್ಲಿ ಹೋಗಿ ನೋಡಿಲ್ಲ. ಈಗ ಹೋದರೂ ಏನೂ ಸಿಕ್ಕುವುದಿಲ್ಲ. ಕಂಟ್ರಾಕ್ಟರಿಗೆ ದುಡ್ಡಿಲ್ಲ, ವ್ಯವಸಾಯಗಾರನಿಗೆ ನೀರಿಲ್ಲ, ಕೆರೆ ದಂಡೆ ಒಡೆದು ಹಾಕಿದ್ದಾರೆ. ಇದರಿಂದ ಆಗುತ್ತಿರುವ ತೊಂದರೆಗಳು ತಪ್ಪುವ ಹಾಗೆ ಇಲ್ಲ. ಜಾಗೃತ ಆಯೋಗ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದೆ ಎನ್ನುವುದರ ಕಡೆಗೆ ಮಾನ್ಯ ಮುಖ್ಯ ಮಂತ್ರಿಗಳು ಗಮನ ಕೊಡುವುದು ಒಳ್ಳೆಯದು. ಅವರು ಸ್ವಲ್ಪ ಸರಿಯಾಗಿ ಕೆಲಸ ಮಾಡಿದರೆ ನಿಜವಾಗಿ ಅವರ ಕೆಲಸ ಉತ್ತಮಗೊಳ್ಳುವುದಕ್ಕೆ ಸಾಕಷ್ಟು ಅವಕಾಶವಾಗುತ್ತದೆ.

ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಆಗುವಂಥ ನೇಮಕಗಳ ವಿಚಾರ. ಒಂದು ಕಡೆ ನಿರುದ್ಯೋಗವನ್ನು ನಿವಾರಣೆ ಮಾಡಬೇಕೆಂದು ಹೊರಟಿದ್ದೇವೆ, ಇನ್ನೊಂದು ಕಡೆ ಸಮಾಜ ವಾದವನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದೇವೆ. ಯಾರು ಕಾನ್‌ವೆಂಟ್‌ಗಳಲ್ಲಿ ಅಥವಾ ಬೆಂಗಳೂರಿನಲ್ಲಿರುವ ಉತ್ತಮವಾದ ಕೆಲವು ಖಾಸಗಿ ಸಂಸ್ಥೆಗಳಲ್ಲಿ ಓದಿರುತ್ತಾರೆ. ಅವರು ಮೆರಿಟ್‌ನಲ್ಲಿ ಬರುತ್ತಾರೆ. ಲಕ್ಷಗಟ್ಟಲೆ ಉತ್ಪತ್ತಿ ಇರುವವರಿಗೆ ಮಾತ್ರ ಇಂಥ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಸಾಧ್ಯ. ಈಗಿರತಕ್ಕ ಕಾನೂನು ಪ್ರಕಾರ ಪಬ್ಲಿಕ್ ಸರ್ವಿಸ್ ಕಮಿಷನ್ ನಡೆಸುವ ಪರೀಕ್ಷೆಗಳಲ್ಲಿ ಶ್ರೀಮಂತರ ಮಕ್ಕಳೇ ಪ್ರಥಮ ಶ್ರೇಣಿಯಲ್ಲಿ ಬರುತ್ತಾರೆ. ಹೀಗಿರಬೇಕಾದರೆ ನಿರುದ್ಯೋಗ ಸಮಸ್ಯೆ ಹೇಗೆ ನಿವಾರಣೆಯಾದೀತು ? ಕೆಲಸವಿಲ್ಲದವನಿಗೆ ಕೆಲಸ ಕೊಡುವುದರ ಮೂಲಕ ನಿರುದ್ಯೋಗವನ್ನು ನಿವಾರಣೆ ಮಾಡಬೇಕು. 1,200 ರೂಪಾಯಿಗಳಿಗಿಂತ ಕಡಮೆ ಉತ್ಪತ್ತಿ ಇರುವವರು ಹಿಂದುಳಿದವರು ಎಂದು ಮಾಡಿದ್ದಾರೆ. ಅದರಿಂದ ಯಾರಿಗೆ ಅನುಕೂಲ ವಾಗುತ್ತದೆ ಎಂಬುದನ್ನು ನೋಡೋಣ. ಒಬ್ಬ ಜವಾನನಿಗೆ 1,200 ರೂಪಾಯಿಗಳಿಗೆ ಮೇಲ್ಪಟ್ಟು ಆದಾಯ ಬರುತ್ತದೆ, ನನ್ನಂಥವರು ಬೇಕಾದರೆ 1,200 ರೂಪಾಯಿಗಿಂತ ಕಡಿಮೆ ವರಮಾನವಿದೆ ಎನ್ನುವ ಸರ್ಟಿಫಿಕೇಟನ್ನು ತಹಸೀಲ್ದಾರರಿಂದ ತೆಗೆದುಕೊಂಡು ಬಂದು ಅದರಿಂದ ಬರುವ ಸೌಲಭ್ಯಗಳನ್ನು ಪಡೆಯುವುದಕ್ಕೆ ಅವಕಾಶವಿದೆ. ಆದ್ದರಿಂದ ಈಗ ಇರುವುದರ ಮೂರುಪಟ್ಟು ಮಾಡಿದರೆ ಸಣ್ಣ ಅಧಿಕಾರಿಗಳಿಗೆ ಅನುಕೂಲವಾಗುತ್ತದೆ. ಯಾರಿಗೆ ಜೀವನಕ್ಕೆ ಮಾರ್ಗವಿರುವುದಿಲ್ಲ ಅಂಥವರಿಗೆ ಅವಕಾಶ ಸಿಕ್ಕುವ ವ್ಯವಸ್ಥೆ ಮಾಡಬೇಕು. ಜನರಲ್ ಪೂಲ್‌ನಲ್ಲಿ ಮೆರಿಟ್ ಇದ್ದವರನ್ನು ತೆಗೆದುಕೊಳ್ಳುವುದಲ್ಲದೆ, ಹಿಂದುಳಿದ ಪಂಗಡಗಳಲ್ಲಿಯೂ ಮೆರಿಟ್ ಬರಬೇಕು ಎಂದರೆ ಕಷ್ಟವಾಗುತ್ತದೆ. ಕೆಲಸಕ್ಕೆ ಒಂದು ಸಲ ತೆಗೆದುಕೊಂಡ ಮೇಲೆ ಅವರಿಗೆ ಅನುಭವ ಕ್ರಮೇಣ ಬಂದು ಒಳ್ಳೆಯ ಕೆಲಸಗಾರರಾಗುತ್ತಾರೆ ಎನ್ನುವುದರಲ್ಲಿ ಹೆಚ್ಚು ಯೋಚನೆ ಮಾಡಬೇಕಾಗಿಲ್ಲ.

ಪೊಲೀಸ್ ಇಲಾಖೆಯ ವಿಷಯದಲ್ಲಿ ಒಂದೆರಡು ಮಾತು. ಒಟ್ಟಿನಲ್ಲಿ ಈ ಇಲಾಖೆಯನ್ನು ಸರಿಪಡಿಸುವುದಕ್ಕೆ ಮುಖ್ಯ ಮಂತ್ರಿಗಳ ಪ್ರಯತ್ನ ನಡೆಯುತ್ತಿದೆ. ಈ ಒಂದು ವರ್ಷದಲ್ಲಿ ಸಾಕಷ್ಟು ಕೆಲಸವಾಗಿದೆ ಎಂದು ಒಪ್ಪಿಕೊಂಡರೂ ಆಗಬೇಕಾದ್ದು ಇನ್ನೂ ಇದೆ. ಕೊಪ್ಪದಲ್ಲಿ ಒಬ್ಬ ಸಬ್‌ಇನ್‌ಸ್ಪೆಕ್ಟರ್ ಇದ್ದಾರೆ. ಅವರು ಜೀಪ್ ತೆಗೆದುಕೊಂಡು ಹಳ್ಳಿಗಳಿಗೆ ಹೋಗಿ ನಿಮ್ಮಲ್ಲಿ ಬಂದೂಕು ಇದೆಯೇ, ಬತ್ತವನ್ನು ಇಟ್ಟುಕೊಂಡಿದ್ದೀರಾ ಎಂದು ಮುಂತಾಗಿ ಕೇಳಿ ನೂರು ರೂಪಾಯಿಗೆ ಕಡಿಮೆ ಯಾರಿಂದಲೂ ತೆಗೆದುಕೊಳ್ಳುವುದಿಲ್ಲ. ನೂರು ರೂಪಾಯಿ ಕೊಡಿ ಎಂದು ಕೇಳುತ್ತಾರೆ. ನಾನು ಸ್ವಲ್ಪಮಟ್ಟಿಗೆ ಸರ್ಕಾರದ ಗಮನಕ್ಕೂ ಇದನ್ನು ತಂದಿದ್ದೇನೆ. ಇಂಥದ್ದೆಲ್ಲ ನಡೆಯುತ್ತಿದೆ ಎಂದು ಮೇಲಧಿಕಾರಿಗಳಿಗೆ ಹೇಳಿದರೆ ನೀವು ಇಂಟರ್‌ಫಿಯರ್

ಏಕೆ ಮಾಡುತ್ತೀರಿ, ನಮಗೆ ಗೊತ್ತಿಲ್ಲವೋ ಎನ್ನುವ ರೀತಿಯಲ್ಲಿ ಮಾತನಾಡುತ್ತಾರೆ. ಇದರಿಂದ ಈ ಅಧಿಕಾರಿಗಳ ಸಹವಾಸವೇ ಬೇಡ ಎನ್ನುವ ಭಾವನೆ ನಮಗೆ ಬರುತ್ತದೆ. ಇಂಥದ್ದನ್ನೆಲ್ಲ ಸರಿಪಡಿಸಬೇಕು.

ನಮ್ಮಲ್ಲಿ ಬಾಳೆಹೊನ್ನೂರು ಮತ್ತು ಜಯಪುರ ಪ್ರದೇಶಗಳಲ್ಲಿ ಕಾಫಿ ಪ್ಲಾಂಟೇಷನ್‌ಗಳಿವೆ. ಅಲ್ಲಿ ಕೊಲೆ ವಗ್ಗೈರೆ ಆಗುತ್ತಿವೆ. ಈ ಎರಡೂ ಕಡೆಗಳಲ್ಲಿ ಪೊಲೀಸ್ ಔಟ್ ಪೋಸ್ಟ್‌ಗಳಿವೆ. ಇವೆರಡರ ಅಂತರ ಹತ್ತು ಮೈಲಿ ಮಾತ್ರ. ಆದ್ದರಿಂದ ಬಾಳೆಹೊನ್ನೂರಿನಲ್ಲಿ ಒಂದು ಪಕ್ಕ ಸ್ಟೇಷನ್ ಮಾಡಿ ಜಯಪುರದಲ್ಲಿರುವ ಔಟ್‌ಪೋಸ್ಟನ್ನು ತೆಗೆದುಹಾಕಿ ಬಾಳೆಹೊನ್ನೂರಿನಲ್ಲಿ ಒಬ್ಬ ಸಬ್‌ಇನ್‌ಸ್ಪೆಕ್ಟರು ಇರುವ ಹಾಗೆ ಮಾಡಿದರೆ ಅಲ್ಲಿನ ಪರಿಸ್ಥಿತಿಯನ್ನು ಹತೋಟಿಯಲ್ಲಿ ಇಡಬಹುದು. ಇಲ್ಲದೆ ಹೋದರೆ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಔಟ್ ಪೋಸ್ಟ್‌ಗಳನ್ನು ತೆಗೆದು ಪಕ್ಕ ಸ್ಟೇಷನ್ ಮಾಡಿದರೆ ಅನುಕೂಲವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶೃಂಗೇರಿಯನ್ನು ಟೂರಿಸ್ಟ್ ಸೆಂಟರ್ ಮಾಡಬೇಕೆಂದು ಆರೇಳು ವರ್ಷದಿಂದ ಹೇಳುತ್ತಾ ಇದ್ದೇನೆ. ಟೂರಿಸ್ಟ್ ಹೋಂ ಕಟ್ಟಲು ಸೈಟನ್ನು ನೋಡಿಕೊಂಡು ಬಂದಿದ್ದಾರೆ. ಇದುವರೆಗೆ ಏನೂ ಆಗಿಲ್ಲ. ಪಟ್ಟಿಯಲ್ಲಿ ಶೃಂಗೇರಿಗೆ 12ನೇ ಸ್ಥಾನವನ್ನು ಕೊಟ್ಟಿದ್ದಾರೆ. ಅಲ್ಲಿಗೆ ಬಹಳ ಜನ ಬರುವುದರಿಂದ ಆ ಜನರ ಸೌಕರ್ಯಕ್ಕಾಗಿ ಟೂರಿಸ್ಟ್ ಹೋಂ ಜಾಗ್ರತೆ ಮಾಡಿಸಿಕೊಡಬೇಕು ಮತ್ತು ಅದನ್ನು ಟೂರಿಸ್ಟ್ ಸೆಂಟರ್ ಎಂದು ಪರಿಗಣಿಸಬೇಕು ಎಂದು ಹೇಳುತ್ತೇನೆ.

ಗಂಗಾಮೂಲ ತುಂಗಭದ್ರಾ, ನೇತ್ರಾ ನದಿ ಹುಟ್ಟುವ ಜಾಗ, ಅದನ್ನೂ ಟೂರಿಸ್ಟ್ ಸೆಂಟರ್ ಮಾಡಬೇಕೆಂದು ಬಹಳ ಕಾಲದಿಂದ ಒತ್ತಾಯ ಮಾಡುತ್ತಿದ್ದೇವೆ. ಶ್ರೀ ಬಿ. ರಾಚಯ್ಯ ಅರಣ್ಯ ಖಾತೆಯ ಮಂತ್ರಿಗಳಾಗಿದ್ದಾಗ ತಕ್ಷಣ ಅಲ್ಲಿ ಬೇಕಾದ ಅನುಕೂಲತೆಗಳನ್ನು ಮಾಡಿಸಿಕೊಡುವುದಾಗಿ ಹೇಳಿದ್ದರು. 60 ಸಾವಿರ ರೂಪಾಯಿಗಳಿಗೆ ಎಸ್ಟಿಮೇಟ್ ಮಾಡಿ ಕಳುಹಿಸಿದ್ದರು. ಅಲ್ಲಿ ಕೂಡಲೇ ಒಂದು ಗೆಸ್ಟ್ ಹೌಸ್ ಕಟ್ಟಿಸಿಕೊಡಬೇಕೆಂದು ಹೇಳುತ್ತಿದ್ದೇನೆ.

ಶ್ರೀಮಾನ್ ಭಟ್‌ರವರು ಹಿಂದೆ ಇದರ ಬಗ್ಗೆ ಯೋಚನೆ ಮಾಡುತ್ತೇವೆಂದು ಹೇಳಿದರು ಮತ್ತು ಫಾರೆಸ್ಟ್ ಇಲಾಖೆಯವರೂ ಇದರ ಕಡೆಗೆ ಗಮನ ಕೊಡಲಿಲ್ಲ. ಈಗಲಾದರೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಗೆ ಒಂದು ಟೂರಿಸ್ಟ್ ಹೋಂ ಆಗುವಂತೆ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಶೃಂಗೇರಿಯಲ್ಲಿ ದಿನಪತ್ರಿ ಅನೇಕ ಬಸ್ಸುಗಳು ಇಲ್ಲಿಗೆ ಬರುತ್ತಿವೆ. ಇಲ್ಲಿ ಬರುವ ಪ್ರಯಾಣಿಕರುಗಳಿಗೆ ಅವರು ವಾಸಿಸಲು ಅನುಕೂಲವಾಗುವಂತೆ ಸೌಕರ್ಯಗಳನ್ನು ಮಾಡಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ ಮತ್ತು ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri C. M. ARUMUGHAM (K.G.F.).—Mr. Deputy Speaker, Sir, the General Administration Department is considered to be one of the most important departments and a key department in the Secretariat of Mysore. It is considered as a sort of Brahma, who writes the fate of all. The General Administration Department is like that. The department plays a very important role in deciding the fate and future of about a lakh of employees pertaining to our Government. In this department there is a big racket going on.

Sir, I have very great reespect for our Hon. Chief Minister. He is there for the last one year. As my every beloved friend. Mr. H. D. Deve Gowda put it, sin has been brewing and developing in its shape and it is time for it to burst. It has been there from 1947 onwards and it was more so after 1956. And, it has grown up in its size. Now, I want our Chief Minister should take action—to cut it to size or if it is not possible to cut it to size, to remove it or eradicate it. It requires a lot of surgical operation ; the sin is so big that no medicne can cure it ; you have to opperate the roots and branches of the General Adminisstration. Sir, it is a department full of all mal-administrations and malpractices. They are not following any rules or regulations. They are not following any recruitment rules, or anything. I can tell you, Sir, unless you take strong action, if not by dismissing at least by forfeiture of pension or confiscation of property, or suspension of certain officers, it is impossible to reform this department.

I would like to bring to the notice of the Chief Minister who is in charge of the General Administration that during the period of the Governor's rule, there were about 7941 appointments—non-gazetted appointments—. Governor's Rule means misrule in the State ; that is how I would call it. During the tenure of the Governor's Rule, 7941 appointments were made and those appointments were done by the Secretaries. They were calling themselves as Ministers, in those days. They had a lot of power—power to misrule, to mis-quote the rules and to misquote the Constitution. Out of 7941 appointments, 5,000 appointments have gone to one single community. Whoever, it might be, dismiss him immediately and send him from the Secretariat. Do you think this is administration ? What sort of Secretaries we are having today ? Have they guided or advised the Government properly ? If 5,000 appointments were to go to one community, how communal those officers should be ? Can you get any reformation or any reform from him, so long as he remains in the Secretariat ?

Apart from these non-gazetted posts—Class III and Class IV posts—, coming to the gazetted cadre, in the General Administration, they have appointed about 1050 gazetted officers. Out of them, I am sorry to say that this misrule in the General

Administration has made a single community to secure 600 posts. 600 Gazetted posts have gone to one single community. That is what happened under the Governor's Rule. Do you call this as general administration ?

Sir, there are 27 Secretaries in this fine building with nice windows, nicely white-washed or colour washed walls, fine tables and nice chairs. Some officers are getting rose pots in the morning from the Horticultural Department and they are sent back to Marigowda in the evening. However, I have not seen any flower pots in Chief Minister's chambers. They are leading a life of luxury. Some officer was saying that he has no caste. You cut his heart and see whether he has caste or not. His heart should speak. When this test was applied to Hanuman and they wanted to find out what was in his heart, Hanuman tore open his chest and his heart was beating 'Rama', 'Rama'. You ask these officers to face a similar test. I am not simply talking vaguely. I am going to name him also and take the consequences. See whether the officer practises communalism or not. Therefore, out of these 1050 Gazetted posts, 600 have gone to one single community. That was of course under the Governor's misrule.

Sir, the entire fate of all the officers in the State lies in a single man. He is the man who is controlling everything. He is the Chairman of Recruitment Committees So many Recruitments Committees are there ; he is the Chairman of all of them and he is the *de facto* Chief Secretary of Mysore. He was all important during Mr. Dharma Vira's rule. This is coming from the horse's mouth. Without his signature and without his initials, Governor would not sign or initial any paper and he controlled the entire Government. All those who wanted transfers and promotions were in his mercy. They must depend upon him. And Sir, if he wanted to spoil any officer, he would write to the immediate higher officer to write an adverse confidential report—what you call 'C.R.' What is this Confidential Report ?

So many persons who were taking very stringent action against people fighting for independence of the country, they have become big officers. They were opposed to Independence.

They have curtailed the promotions of others : they want promotions. If you call for a report from the entire State about the officials who have been punished with stoppage of promotions, who have been harassed, who have not got their increments—if you call for a report, I tell you, you must only appoint a Commission to place them before it. And now, I was told—the Chief Minister is there to reply—there are going to be some changes. The present Food Director—it may be a fact or not, I am putting before the House what I came to know, I understand, he is going to become Divisional Commissioner, Mysore Division. The Education Commissioner is going to become Home Secretary of Mysore. The present Home Secretary is going to Delhi. I do not know how far it is true. I understand the Chief Secretary is going to retire within nine months time. Let him remain for 10 years. I have nothing against him. For arguments sake, Mr. Fernadez, the Home Secretary, he was for sometime Chief Secretary of GOA administration. You have made him Commissioner for Home. What type of Commissioner! If you want to give them more money, you give them, But please take away this designation of Commissioner. These officers they have access to you. They are the persons who come to know about things and who write policy matters and execute it. You have got a Commissioner for Police, Commissioner for Industries, Commissioner for Revenue. By all means, you give them more money, but take off these Commissioner for Industries, Commissioner for Revenue. By all means, you give them more money, but take off these Commissioners. There are well-qualified persons in the Department. Your Secretaries are only IAS. I know there is an IAS officer who is only 23 or 24 years old. What experience can you expect from him ? At any rate, I know this Mr. Fernandez, Home Secretary—I know he has no back-ground knowledge of the work of the Planning Department in our State. He has not worked in planning. Why do you send him to Delhi ? Is it because of my friend Mr. G. V. K. Rao, a great, great gentleman among all the Secretaries ! Should you allow him to become Chief Secretary ? That is my question. Sir, in this country, so many dictators have gone. The dictators who ruled over RUSSIA for 30 years, Mr. Stalin is not only gone and

buried, but his dead body was removed and thrown in the streets, and his photos were removed from important places like courts and offices. Next comes Mr. Sukerno, a very big dictator. He has been removed and his whereabouts are not known. He is dead and gone. But here in this Secretariat, right under your leadership,—you must continue as Chief Minister. I want Mr. Devaraj Urs to continue for his full term, Mr. Deve Gowda !

Sri H. D. DEVE GOWDA.—Even if I demand, he is not going to resign.

Sri C. M. ARUMUGHAM.—All the more I welcome it. At any rate, when you are the Chief Minister, this should not happen. It can be possible if the SANYASI was the Chief Minister. When the Sanyasi was the Chief Minister, he could permit such a person to continue. He shall not be continued. I was told Mr. Dhar of the Government of India is very much after him. Please send him. I will arrange for a big procession in his honour, and send him off. Let him go. He has ruined enough. Let him not ruin others. There is no need for Mr. Fernandez, the Home Secretary to go to Delhi. But this person, Mr. G.V.K. Rao who has called himself as Development Commissioner, being *de facto* Chief Secretary, touring the entire State as Chairman of several committees, recruited his own men—he is the first man to go and give all his experience in Delhi. Otherwise, please save us from the clutches of this man and save the Government and save the general administration from his hands. I tell you one Puttaswamiah—he manipulated the papers in order to secure him a place. You know there is a court decision, let us at least have respect for court orders, respect for the decision of the Supreme Court and High Court. Otherwise, you will have to burn the Constitution. If you have got faith in the Constitution, if you have faith in the judiciary, you must implement the decision of the High Court and Supreme Court. There was a decision of the Supreme Court and High Court regarding the Director of the School of Mines. He was a III class officer getting Rs. 180. you made him class I officer as Director of the School of Mines, carrying a salary of Rs. 1,100 to Rs. 1,800. You have posted him somewhere else. I am not after him. He is the son-in-law of a very big man. But I still insist, kindly

implement the decision of the High Court and the Supreme Court. But now, what happens is, there is another instance. This Puttaswamiah who never knows about commercial tax and who was a class III officer in the Statistical section, has been promoted over-night as class I officer. Papers were manipulated. I know this is a serious allegation and I stand by it. And this is the work of the Development Commissioner.

Another thing as you know is, some delegation went from Mysore to the World Bank to get some loan. Instead of sending the Registrar of Co-operative Societies, he has manipulated and manoeuvred to send the Joint Registrar. Where was the need ? Without the permission or sanction of the Government, can you allow this to go on ? Sir, unless you take action immediately now and straighten the administration—I know sir, you have got consideration towards the poor and you hold progressive views. Kindly do not allow this to happen any longer. Such people must be weeded out. Officers should work as servants of the Government and not bosses of the Government. They are called Government servants—not bosses.

There was an officer who would sign any paper placed before him. Some Ministers also do it. No doubt it takes some time to understand the working of the department. Understanding is a difficult problem. Some officers have signed even their resignation letters. I do not know how many Ministers are in that position. The Government may look upon Sri G. V. K. Rao as a very big man in size and weight. Whatever he has said has been implemented. That must be stopped forthwith. That is my humble request to the Chief Minister on behalf of the three crores of the people of Mysore State. The General Administration Department must be streamlined and toned up. Some officers must be sent home for their sins of commission and omission. Let the Government send them away from our State and get new persons. What happened to Sri K. C. Reddy who was the first Chief Minister after getting independence ? He has gone and the Government is going on in a more progressive way. Next came our turban Chief Minister. He ruled this State for some years and went away, and the Government is going on in a more progressive way. Then came the old bald-headed sanyasi-like person and he also went away and

the Government is going on more progressively. Then another Chief Minister came and went away and are we not having a more progressive Government ? Therefore, let it not be thought that if a particular officer is not there, Government is going to collapse. No, that will not be the case ; on the other hand, the Government will have better and better officers. He is standing in the way of others coming up. My submission to the Government is that he may be sent to the Government of India and Fernandes may be retained here. Somebody was saying that Sri Fernandes is senior to Sri G. V. K. Rao and that is why he is being sent away to make room for G. V. K. Rao. I also want to know what are the orders passed by Dharma Veera and what are the notes submitted to him and who submitted them. Government must kindly go through them so that they will come to know what kind of injustice has been done to the civilian officers in the General Administration.

Coming to the Police, there are good and bad people among them. I shall give an example. In 1971, some shops were burnt in a fire accident in K. G. F. I pay my compliments to the officers of the Fire Brigade, the Superintendent of Police and his band of officers who came in the midnight, battled with the fire and put it down. I brought this to the notice of the I. G. P. and the D. I. G. The Municipality was willing to award something to them. But there was no reply from them, not even an acknowledgement from the Police Department. There are some people in the police force who do some good to the people and who are willing to save and sacrifice for the sake of the people. The Hon. Member Sri Naganna said that the I. G. P. is a good man but he is surrounded by bad elements. The Government should eliminate such bad elements and purify the department. In the Police Department the police officers are gaining a little more power and they are feeling that they are above the civilians. That tendency must be put down. During the session time some persons were taken to the police station but they never returned alive. The Leader of the Opposition Sri Deve Gowda touched that point. Such a thing should not be repeated as far as possible. The police must also change their outlook entirely in the context of the changed circumstances of today. Some police officers still feel that

because they have got some training in Scotland they can behave in the old bureaucratic fasion. They should be disabused of that idea.

(Madam Speaker in the Chair)

MADAM SPEAKER.—Mr. Arumugham's time is over. He may please conclude his speech.

Sri C. M. ARUMUGHAM.—I am not going to tolerate this kind of attitude.

MADAM SPEAKER.—He may please close his speech.

Sri C. M. ARUMUGHAM.—I am not going to.

MADAM SPEAKER.—This is nothing but arrogance.

Sri C. M. ARUMUGHAM.—You cannot carry your vengeance.

MADAM SPEAKER.—He must close.

Sri C. M. ARUMUGHAM.—I am not going to. You are not fair. You must behave as a Speaker.

MADAM SPEAKER.—Will Sri Arumugham close his speech ?

Sri C. M. ARUMUGHAM.—I am not going to close.

MADAM SPEAKER.—I call Sri M. M. Sajjan, to begin his speech.

Sri C. M. ARUMUGHAM.—You are carrying the vengeance of some previous day. You cannot carry it.

MADAM SPEAKER.—Will you sit down ?

Sri C. M. ARUMUGHAM.—I am not going to sit down.

MADAM SPEAKER.—As he going to withdraw ? Otherwise, I am going to name him.

Sri C. M. ARUMUGHAM.—You are carrying your vengeance. You should behave as a Speaker ; you cannot dictate.

MADAM SPEAKER.—The Hon. Member may keep quiet now.

Sri C. M. ARUMUGHAM.—No, I am not going to keep quiet. You must behave properly as a Speaker. You are carrying the vengeance of some previous day which I am not going to tolerate.

MADAM SPEAKER.—Sri Arumugham must behave like a member.

Sri C. M. ARUMUGHAM.—So long as you behave like a Speaker I will behave like a member. You are carrying vengeance ; I am not going to close. You must behave like the Speaker.

MADAM SPEAKER.—The Hon. Member must behave like a Member. He is not behaving.

Sri C. M. ARUMUGHAM.—Yes.

MADAM SPEAKER.—I know that. Let him not think that he can threaten.

Sri C. M. ARUMUGHAM.—Why should I threaten ? What do I want from you ?

MADAM SPEAKER.—You are an Hon. Member like all the other 216 Hon. Members. You are one of them.

Sri C. M. ARUMUGHAM.—Every one of them has a right and must be properly treated.

MADAM SPEAKER.—That is exactly what I am telling.

Sri C. M. ARUMUGHAM.—You are not a super-woman.

MADAM SPEAKER.—Nobody is ; if anybody thinks he is a superhuman, I condemn it. Sri Arumugham has taken time as follows :

Municipal Administration Demand 27 minutes, Health Demand 47 minutes.

Sri C. M. ARUMUGHAM.—So, you have come with the list ? These things cannot be tolerated.

MADAM SPEAKER.—I cannot tolerate this also.

Education : 17 minutes

Social Welfare : 37 minutes

Fisheries : 9 minutes

Revenue : 26 minutes

Labour and Transport : 12 minutes.

The other day when I asked the Hon. Member to "please" conclude, he walked out. I cannot understand it. I do not know whether he wanted the translation for the word 'please' or the spelling for the word 'please'. If he wanted, I could have enlightened him. He simply walked out. Excepting the Hon. Minister for Health nobody said anything. He just walked out. I said, no quarrel about it and you must close. This is the way he is behaving. The House will please judge whether the action of the Hon. Member is proper or not. Should I not regulate the business of the House? If that is not so, the Hon. Member can bring in an amendment to the rules and let him have any length of time to speak. I have no objection. But is this the way the Hon. Member should show courtesy to the Speaker? I want the Leader...

Sri D. DEVARAJ URS.—I am sorry the day on which whatever that took place, I was not present. Today I feel that the Hon. Member should not have entered into a discussion on this point. Nor should he have lost his temper. Usually we are all expected to maintain the dignity and decorum of the House firstly by respecting the Chair. The Chair of course has been given the power to ask a member to close his speech and I think we must all obey the Chair. Hon. Member, I am sure, will not repeat the performance, unfortunately the House witnessed just now today. He is a senior member and he knows how the House is controlled by the Chair. I am sorry we should not any more attribute motives while the Chair is functioning. I do not think there is any cause for attributing any motive. Therefore, in the heat of one's argument or by emotions, it may not be desirable to exhibit our temper or speak the words which do not bring dignity to the House or to the Chair. I would really appeal to the Hon. Member to put an end to this sort of altercation which certainly cannot be countenanced. He will perhaps agree that if anybody else were to do it, he would not countenance it. I would appeal to his good sense not to continue it. Let us stop at this. I think the Hon. Member would do well to think within himself whether he should speak or say things which do not bring credit either to himself or the House. I once again appeal to him through you Madam, that we should not allow such tempers to raise any more and he

should not cast aspersions on the Chair. I only wish, he is a gentleman I know, he behaves and speaks as a gentleman.

ಶ್ರೀ ಎಂ. ಎಂ. ಸಜ್ಜನ್ :—ಮಾನ್ಯ ಸಭಾಧ್ಯಕ್ಷಿಣಿಯವರೇ ......

Sri C. M. ARUMUGHAM.—Let me speak otherwise you can take whatever action you want to. In this House we are all members and we must be treated as members only and not as school boys. Secondly, we also command certain respect in this House and anything which goes against our self-respect, we are not here to tolerate. We are with the Speaker and her decision ; but if the Speaker were to carry instances that occurred on the previous day and bring them here, it is difficult and we become helpless. Today I have seen the Speaker coming out with my name showing the time I have taken.

MADAM SPEAKER.—It is not about the Hon. Member only. The whole list is here. It shows the time taken by all members who have spoken.

ಅಧ್ಯಕ್ಷರು :—ಈಗ ಮಾನ್ಯ ಸದಸ್ಯರಿಗೆ ಸಂಪೂರ್ಣವಾಗಿ ಉತ್ತರ ಬೇಕಾದರೆ ನಾಲ್ಕು ಜನ ಮಂತ್ರಿಗಳೂ ಉತ್ತರ ಕೊಡುತ್ತಾರೆ. ಮಾನ್ಯ ಸದಸ್ಯರು ಬೇಡ ಎಂದು ಹೇಳುವುದಾದರೆ ಅವರು ಉತ್ತರ ಕೊಡುವುದನ್ನು ನಿಲ್ಲಿಸುತ್ತಾರೆ.

Sri H. M. CHANNABASAPPA.—The issue involved can be considered in two aspects. One is, purification of water or utilisation of water for some other purpose without letting it into the Tungabhadra River. Hon. Minister for Health—Sri Siddaveerappa, has made it very clear that it has been found possible to utilise the water for agricultural purposes and therefore it is advantageous to us. The concerned industrialist has also approached him requesting him to get the plans and estimates prepared to have the water diverted for agricultural purposes; and the Hon. Minister has already assured that immediate action will be taken to get the plans and estimates prepared

to utilise that water for irrigation purposes The second aspect involved is in regard to the supply of water for villages situated on the banks of the river Tungabhadra. I may inform the House that Government will take immediate action to see that water is made available to the villages either by putting borewells, if that is not possible, we will make necessary arrangements to supply water by transport to the villages.

(ii) Re.: Boat tragedy in Angur Village, Hadagalli Taluk.

Sri B. B. SAYANAK (BELGAUM).—I call the attention of the Chief Minister to the loss of lives in the boat tragedy at Angur village in Hadagalli Taluk.

Sri H. M. CHANNABASAPPA (Minister for Public Works).—

Sir, on behalf of the Chief Minister I state as follows:

The Boat tragedy in Tungabhadra river at Angur village took place on 14-3-1973 at about 5.00 P.M. Angur is a small village situated on the right bank of Tungabhadra river in Bellary District with a population of 900 as per 1971 census. It appears that round about Angur village, plenty of fish is found in Tungabhadra river which attracts a large number of fishermen

The place of occurrence is Tungabhadra river flowing across the Dharwar—Bellary boundary, *i.e.*, Hadagalli and Shirahatti taluks. At this spot, the Tungabhadra river has forked into two streams forming an Island where the Temple of Gaddi Basaveswara is situated. On this Island, which is in the jurisdiction of Dharwar District, Basaveswara Jathra was being celebrated from a long time during the month of March. Pilgrims from the neighbouring villages on both the sides of the Tungabhadra river used to gather at this place during the Jathra. During this year, festival was observed on 13-3-1973 and 14-3-1973. As usual Police Constables were deputed to Angur village and to the Island for Bandobust duties. The width of the Tungabhadra river between Angur village bank side and Gaddi Basaveswara Island bank side is about 1¼ furlongs. The depth of water was about 30′ to 40′ during summer. About two miles west of Angur village, there is a ferry service by boat. The ferry is maintained by the Taluk Development Board of Hoovinahadagalli. One Basavannappa of Kotehal held licence for plying boats. It appears, on 14-3-1973 at 5-00 P.M., a ferry boat, the capacity of which is 8 to 10, carrying 50-60 persons was coming from the Temple side towards the Angur village. On account of overloading, the boat tilted on one side and some water got into the boat. The passengers got panicky and some of them jumped into the river capsizing the boat and throwing all the occupants including children over-board. The persons on the Gaddi Basaveswara bank side and those in the boat raised alarm. The fishermen and others of Angur village who saw the accident, immediately rushed to the rescue of the victims and rescued 36 persons including women and

children. In addition to this, 5 persons from the boat swam to the banks by 10-00 P. M. in the night on 15-3-1973. However, 17 persons lost their lives in this tragedy

The Police Constables who were on bandobust duty at Angur village along with fishermen and others arranged for the rescue of the drowned people. Information of this accident reached the Police Station at about 2.00 A.M. on 15-3-1973. The Circle Inspector immediately on receipt of the information at about 12-00 Noon on 15-3-1973, proceeded to the spot. The Assistant Commissioner and the Deputy Superintendent of Police, Hospet, secured the services of ambulance and fire service at Hospet with suficient personnel and reached this spot at 10-30 P. M. on the same day. By that time 16 dead bodies were traced. On 16-3-1973, another dead body was traced. All the 17 dead bodies were identified and post-mortem done.

On 16-3-1973, the Deputy Commissioner, Bellary, visited this spot, enquired into the accident and Rs. 1,610/-were distributed to the legal heirs of the deceased persons and the brave persons who rescued the persons from the sinking boats.

On 17-3-1973 at 3-00 P.M. the accused Basavannappa of Kotehal was arrested at Angur village. He had engaged one kotehal Eranna to assist him in rowing the boat. A case against the ferryman Basavannappa and Kotehal Eranna has been registered in Crime No. 3/73 of Hadagalli Police Station and is under investigation. The other accused Kotehal Eranna is absconding from the time of the incident. Investigation of the case is proceeding.

Sri B. B. SAYANAK.—Madam Speaker, 17 persons have died on accouut of the boat tragedy and the amount distributed by the Deputy Commissioner to the victims is only Rs. 1,610 including the brave persons. Whether the amount distributed is not a meagre amount? Will the Government at least pay Rs. 1,000 to each person; whether the Government will consider this sympathetically?

Sri H. M. CHANNABASAPPA.—That is a suggestion for action and the Government will examine it

ಶ್ರೀ ಬಿ. ಸತ್ಯನಾರಾಯಣಸಿಂಗ್ :—ಜಾತ್ರೆ ನಡೆಯುತ್ತಿದ್ದ ಜಾಗಕ್ಕೆ ಪೊಲೀಸ್ ಬಂದೋಬಸ್ತಿನ ಬಗ್ಗೆ ಕಾನ್‌ಸ್ಟೇಬಲ್‌ಗಳನ್ನು ಹಾಕಿತ್ತೆಂದು ಹೇಳಿದೆ. ಅಲ್ಲದೆ ಈ ದುರಂತ ನಡೆದಿರುವುದು ತಾರೀಖು 14-3-1973ನೇ ಸಂಜೆ 5 ಗಂಟೆಯ ಸಮಯದಲ್ಲಿ. ಪೊಲೀಸಿಗೆ ಸುದ್ದಿ ಮುಟ್ಟಿದ್ದು ತಾರೀಖು 15-3-1973ನೇ ರಾತ್ರಿ 2 ಗಂಟೆಗೆಂದೂ, ಅನಂತರ ಪೊಲೀಸ್ ಇನ್‌ಸ್ಪೆಕ್ಟರು ಸ್ಥಳಕ್ಕೆ ಹೋದದ್ದು ತಾರೀಖು 15-3-1973ನೇ 12 ಗಂಟೆಗೆ ಎಂದು ಹೇಳಿರುವುದರಿಂದ ಇಲ್ಲಿ ಪೊಲೀಸಿನವರ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಆದುದರಿಂದ ಸರ್ಕಾರದವರು ಇವರ ಬಗ್ಗೆ ಏನು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಎಲ್ಲಾ ದೃಷ್ಟಿಗಳಿಂದಲೂ ಈ ವಿಷಯವನ್ನು ವಿಚಾರ ಮಾಡಬೇಕೆಂದು ತಿಳಿಸಲಾಗಿದೆ.

(iii) Re. Outbreak of Smallpox in Rajgiri and other villages of Bidar District:

Sri V. N. PATIL (Humnabad) :—I call the attention of the Minister for Health to the reported death of some persons in Rajgiri and other villages of Bidar District due to outbreak of smallpox.

Sri H SIDDAVEERAPPA (Minister for Public Health):—I state as follows ;

The Director of Health and Family Planning Services, Bangalore has reported that in only one Village by name Rajgir in Bidari District, the incidence of smallpox has been reported. The details of the attacks and the measures taken by the Department of Health and Family Planning Services to control the disease are as follows :—

Sl. No.	Name of the District	Date of 1st attack	No. of Attacks	Cases of Deaths	Containment measures	
					Primary vaccination	Re-vaccination
1.	Bidar	6-2-1973	7	1	935	2363

The last date of attack was on 20-3-1973. Necessary action is being taken by the concerned authorities to contain the disease.

Sri. V. N. PATIL.—These epidemics are spreading on account of the shortage of water and due to excess of heat. Will the Government order for inoculation throughout the District as a precautionary measure ?

Sri. H. SIDDAVEERAPPA.—As the Hon. member is aware, we have got a modile hospital also which is going round the entire country. I think there are two mobile hospitals in Bidar District. All essential medicines are kept in store and whatever is necessary for containing the disease will be undertaken. We have taken all precautionary measures to contain the disease.

ಶ್ರೀ ಟಿ. ಆರ್. ಶಾಮಣ್ಣ:—ಬೆಂಗಳೂರಿನಲ್ಲೂ ಕೂಡ ಅನೇಕ ಕಡೆ ಕಾಲರಾ ಹಾವಳಿ ಹರಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು:—ಅದಕ್ಕೂ ಈಗ ಸಭೆಯ ಮುಂದೆ ಚರ್ಚೆಯಾಗುತ್ತಿರುವ ವಿಷಯಕ್ಕೂ ಹೇಗೆ ಸಂಬಂಧ ಬರುತ್ತೆ ?

(iv) Re. : Acute Scarcity of food-grains in Bidar District.

Sri. V. N. PATIL.—I call the attention of the Minister of State for Food and Civil Supplies to the grave situation that has arisen in Bidar District due to acute scarcity of food-grains there.

Smt. E. E. VAZ (Minister of State for Food and Civil Supplies).— I state as follows:

Bidar District is one of the acute scarcity affected district in the State. Food-grains are being distributed through fair price shops, the number of which is 687.

2. A statement showing the allocation of food-grains to Bidar District from January 1973 to April 1973, is enclosed.

3. As per the wireless message received from the Deputy Commissioner, Bidar, the food-grains available at the disposal of the Deputy Commissioner as on 30th April 1973 were as under :—

Rice	1,450 Quintals
Wheat	572 ,,
Maize	1,122 ,,

4. Besides these, there will be some stocks with the large number of fair-price shops and the total quantity is being ascertained.

5. The allocation of food-grains to Bidar District for May 1973 is as under :—

Rice	5,000 Quintals
Wheat	26,000 ,,

6. In addition an allotment of 40,000 quintals of Milo, 8,000 qtls of Maize made earlier is expected to be received by the Deputy Commissioner, Bidar shortly. These stocks will be cleaned and issued as quickly as possible. In fact, 5,000 quintals of cleaned milo are being moved from Gulbarga to Bidar to-day.

7. Further, arrangements have been made for the purchase of rice by merchants and Co-operative Societies in the following places to the extent indicated against each and to rush them to Bidar. The stocks have started moving.

From Davanagere	2,500 Quintals
,, Hubli	5,000 ,,
,, Raichur	1,000 ,,
,, Bellary	5,000 ,,

8. The total quantity of food-grains available for distribution in Bidar district during the current month, *i.e.*, May 1973 will be as under :

Rice	19,950 Quintals
Wheat	26,572 ,,
Milo	10,000 ,,
Maize	1,122 ,,
Total	57,644 ,,

9. The facts and figures indicated above would indicate that allegation that Government have failed to make available adequate food-grains to Bidar District is not borne by facts.

The allotment of foodgrains to Bidar from January 1973 to May 1973 are as under

Figures in Quintals

		Rice	Wheat	Other food-grains Milo/Maize
1.	January	5,000	12,500	8,000 (Maize
2.	February	5,000	10,000	10,000 (Milo)
3.	March	5,000	11,750	10,000 (Milo)
4.	April	35,000	13,000	20,000 (Milo)
5	May	5,000	26,000	...

Sri V. N. PATIL.—I want to know from the Hon. Minister whether the facts have been verified. The figures given by the Minister, may be wrong or right That is a different point The real fact is when we approached the fair-price shops, the people say the stock has not been received. Sometimes they receive only 2 to 5 bags of wheat. You may be having the stock in the godowns. Having stock in the godowns will not solve the problem if they are not distributed to the fair-price shops and Societies. Therefore I want to know whether the food-grains have been supplied in sufficient quantity and if so on what dates ? Stocks have been mixed with poisonous substance. That is also there.

Sri E. E. VAZ.—The Hon. Member says the fact is different. A recent wireless message received says the position of the food position is alright and it is being distributed through fair-price shops. The poisonous substance is found only in Milo and not in any other food-grain. All efforts have been made to distribute the food-grains through fair-price shops.

Sri V. N. PATIL.—In the reply given to the Call Attention notice, it is stated that 35,000 quital of rice has been supplied to Bidar District in the month of April. I believe it may be a mistake and a zero might have been added to 3,500 quintals. Every month 5,000 quintals were supplied up to April. But all of a sudden 35,000 is shown for the month of April. I believe it is wrong. Not even 1/4 of that quantity has been supplied and it is the considered opinion of the Legislators of that area. The Minister is probably misled.

Sri H. M. CHANNABASAPPA.—I would like to assure the Hon. Members that no efforts would be spared to see that adequate food supplies are made to the people and efforts have already been made to supply food-grains to meet the needs of the people and stocks are already in the hands of the officers who have got to distribute it, and some

stocks are in the pipe line. Bidar is a small District. As a matter of fact we have got stock in Gulbarga. Instructions have been issued to 3 Districts that if there is any shortage of food in any one of the Districts they should make it up. The Hon. Members may be rest assured that we will not spare no pains to see that food grains are made available. This assurance has been made on the floor of the House and we will keep it up.

ಶ್ರೀ ಬಿ. ವಿ. ಕಕ್ಕಿಲಾಯ :—ಆಹಾರಧಾನ್ಯಗಳನ್ನು ಕಳಿಸಿರುವುದು ಅಂಗಡಿಗಳಿಗೆ ತಲುಪಿ ಸರಿಯಾಗಿ ಹಂಚಿಕೆಯಾಗಿದೆಯೇ? ಕಳಿಸಿರುವುದು ಗೋಡೌನಿನಲ್ಲಿರಬಹುದು. ಕಳಿಸಿರುವುದು ಸರಿಯಾಗಿ ವಿತರಣೆಯಾಗಿದೆಯೇ ಎಂದು ವಿಚಾರಿಸಿ ಹಾಗೆ ಆಗಿಲ್ಲದಿದ್ದರೆ ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ :—ಇದರ ಬಗ್ಗೆ ಅನುಮಾನವಿದ್ದರೆ ತಕ್ಷಣದಲ್ಲೇ ವಿಚಾರಿಸಿ ಹಂಚಿಕೊಡಲು ವ್ಯವಸ್ಥೆಮಾಡುತ್ತೇವೆ. ಕಳಿಸಿರುವ ಉದ್ದೇಶ ಹಂಚಿಕೆ ಮಾಡಬೇಕೆಂಬುದೇ ಹೊರತು ಗೋಡೌನಿನಲ್ಲಿಡಬೇಕೆಂಬುದಲ್ಲ. ಇದರಲ್ಲೇನಾದರೂ ಅಲ್ಪಸ್ವಲ್ಪ ದೋಷವಿದ್ದರೆ ತಿಳಿಸಿದ ತಕ್ಷಣವೇ ವಿಚಾರಿಸಿ ಸರಿಯಾದ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ :—ಬೇರೆ ಕಡೆ ಪ್ರತಿ ಸದಸ್ಯರಿಗೂ ಆಯಾ ಜಿಲ್ಲೆಗೆ ಎಷ್ಟು ಹಂಚಿಕೆ ಮಾಡಿದೆ ಎಂಬುದರ ಬಗ್ಗೆ ಪಟ್ಟಿ ಕೊಡುವರು, ಇಲ್ಲೇಕೆ ಹಾಕಿ ಕೊಟ್ಟಿಲ್ಲ ?

Sri H. M. CHANNABASAPPA.—As I have already pointed out in the process of distribution if there has been any inadequacy in any part of the State, please let the Government know so that it could take action immediately.

ಶ್ರೀ ಎಂ. ಎಸ್. ಕೃಷ್ಣನ್ :— ಆಯಾ ಜಿಲ್ಲೆಗೆ ಹಂಚಿಕೆ ಮಾಡಿರುವುದರ ಬಗ್ಗೆ ಅಲ್ಲಿನ ಎಂ.ಎಲ್.ಎ. ಗಳಿಗೆ ಪಟ್ಟಿ ಕಳಿಸುವರು ಎಂದು ತಿಮ್ಮಪ್ಪನವರು ತಿಳಿಸಿದರು. ಅದರಂತೆ ಕಳಿಸಿದ್ದರೆ ಅದರಂತೆ ಬಂದಿದೆಯೇ ಇಲ್ಲವೇ ಗೊತ್ತಾಗುವುದು.

ಶ್ರೀ ಬಸವಗೌಡ ರಾಯಪ್ಪ :—ಮಾರ್ಚಿ ಅಂಕಿಅಂಶಗಳು ಕೇವಲ ಲೆಕ್ಕದಲ್ಲಿ ಮಾತ್ರ ಇವೆ. 28 ನೆಯ ತಾರೀಖು ನಿಗಧಿಯಾಗಿದೆ. 35 ಸಾವಿರ ಕ್ವಿಂಟಾಲ್ ಅಲಾಟ್ ಆಗಿದೆ. ಮರು ದಿವಸ ಅಲಾಟ್‌ಮೆಂಟ್ ಬರಬೇಕು. ಗುಲ್ಬರ್ಗಕ್ಕೆ ಡಿ. ಸಿ. ಕೊಡುತ್ತಿರುವುದು ಒಂದು ಸಾವಿರ ಕ್ವಿಂಟಾಲ್. ಇದು ಗುಲ್ಬರ್ಗಕ್ಕೆ ಮಾತ್ರ ಬೇರೆ ಕಡೆಗೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಮಾರ್ಚ್ 28ರಲ್ಲಿ ಕೊಟ್ಟಂಥ ಅಲಾಟ್‌ಮೆಂಟ್ ಬೋಗಸ್ ಅಲಾಟ್‌ಮೆಂಟ್. 35 ಸಾವಿರ ಕ್ವಿಂಟಾಲ್ ಅಲಾಟ್ ಮಾಡಿದ್ದರೆ, ಅಲ್ಲಿ ಕೇವಲ ಒಂದು ಸಾವಿರ ಕ್ವಿಂಟಾಲ್ ಗೋಡೌನಿನಲ್ಲಿದೆ. ಬಾಕಿದ್ದು ಇರಲಿಲ್ಲ. ಬೋಗಸ್‌ಫಿಗರ್ಸ್ ಕೊಡುವುದು ಯಾವ ಕಾಲಕ್ಕೂ ಮಾಡಬಾರದು.

ಶ್ರೀ ಎಚ್. ಎಂ. ಚೆನ್ನಬಸಪ್ಪ :—ಆಹಾರ ದವಸ ವಿತರಣೆ ನಡೆಯುವುದರಲ್ಲಿ ನಾವು ನೀವು ಎಲ್ಲಾ ಕೂಡಿ ಏನು ತೊಂದರೆಗಳೂ ಇದ್ದರೂ ಕೂಡ ತಕ್ಷಣ ಅದನ್ನು ನಿವಾರಣೆ ಮಾಡಬೇಕು ಎಂದ ಯೋಚನೆ ಮಾಡಿದ್ದೇವೆ. ಇದನ್ನು ಅಸೆಂಬ್ಲಿಯೊಳಗೆ ಚರ್ಚೆಮಾಡಬೇಕಾದಂಥ ಪ್ರಸಂಗ ಏನೂ ಇಲ್ಲ. ಅದರಲ್ಲೂ ಕ್ಷಾಮ ಪೀಡಿತ ಪ್ರದೇಶಗಳಿಗೆ ಆಹಾರವನ್ನು ಕಳುಹಿಸುವ ಬಗ್ಗೆ ಯಾವ ಕೊರತೆಯನ್ನು ಮಾಡಿಲ್ಲ. Recently when I went to Delhi, we had discussions with the Government of India. They have assured to make generous allotment during May.

ಶ್ರೀ ಬಾಪೂಗೌಡ ರಾಯಪ್ಪ :—ಮಧ್ಯಪ್ರದೇಶದಿಂದ ಐದು ಸಾವಿರ ಕ್ವಿಂಟಾಲ್ ಜೋಳ ಬರುತ್ತದೆ, ಮೂರು ಸಾವಿರ ಕ್ವಿಂಟಾಲ್ ಗೋಧಿ ಬರುತ್ತದೆ ಎಂದು ಗೊತ್ತಾಗಿದೆ. ಗುಲ್ಬರ್ಗ ಜಿಲ್ಲೆಗೆ ಒಂದು ಕಾಳೂ ಕೊಟ್ಟಿಲ್ಲ. ಯಾರಾದರೂ ಆಫೀಸರ್ಸ್ ಅನ್ನು ನನ್ನ ಜೊತೆಯಲ್ಲಿ ಕಳುಹಿಸಿದರೆ, ಅಲ್ಲಿ ಸ್ಟಾಕ್ ಎಷ್ಟು ಇದೆ ಎನ್ನುವುದು ಗೊತ್ತಾಗುತ್ತದೆ. ಬರೀ ಸ್ಟೇಟ್‌ಮೆಂಟ್ ಕೊಡುವುದರಿಂದ ಜನರಿಗೆ ಹೊಟ್ಟೆ ತುಂಬುವುದಿಲ್ಲ.

ಅಧ್ಯಕ್ಷರು :—ಗಲಾಟೆ ಮಾಡುವುದರಿಂದ ಹೊಟ್ಟೆ ತುಂಬುತ್ತದೆಯೆ ?

ಶ್ರೀ ಎಚ್. ಡಿ. ದೇವೇಗೌಡ :—ಶ್ರೀಮಾನ್ ಚೆನ್ನಬಸಪ್ಪನವರು ವಿವರಣೆ ಕೊಡುತ್ತಾ ಪ್ರಾಮಾಣಿಕವಾಗಿ ಸಮಸ್ಯೆಯನ್ನು ಬಿಡಿಸಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಅದರ ಬಗ್ಗೆ ನನ್ನ ಅಡ್ಡಿ ಇಲ್ಲ. ಜನತೆಗೆ ಲಾಭ ದೊರೆಯತಕ್ಕಂಥಾದ್ದರಲ್ಲಿ ಕೆಲವು ಅಡಚಣೆಯಾಗಿದೆಯೆಂದು ಕೇಳಿದ್ದೇನೆ. ಗಲಾಟೆ ಮಾಡುವವರಿಗೆ ಕೇಂದ್ರದವರು ಕಣ್ಣನ್ನು ಹೊರಳಿಸುತ್ತಾರೆ ಎನ್ನುವ ಭಾವನೆ ಇದೆ. ನಾಗಪುರದಲ್ಲಿ ಲಾಠಿ ಚಾರ್ಜ್ ಆಗಿ ಐದು ಜನ ಸತ್ತು ಹೋದರು, ಪಂಜಾಬ್‌ನಿಂದ ಇವತ್ತು ಟ್ರೇನ್‌ನಲ್ಲಿ ಗೋಧಿ ಮೂವ್ ಆಗುತ್ತಿದೆ ಎಂದು ಪತ್ರಿಕೆಯಲ್ಲಿ ವರದಿ ಬಂದಿದೆ. ಐವತ್ತುಸಾವಿರ ಟನ್ ಎರಡು ಷಿಪ್‌ಮೆಂಟ್ ಆಗಿದೆ ಎಂದು ಕೇಳಿದ್ದೇನೆ, ಮೈಸೂರು ರಾಜ್ಯ ಜನತೆ ಬಗ್ಗೆ ಸೌಮ್ಯತೆ ಮೀರಿ ವರ್ತಿಸುತ್ತಿದೆ. ಈ ರೀತಿ ಅಸಡ್ಡೆಯನ್ನು ತೋರಿಸುವುದಾದರೆ ಕೇಂದ್ರದ ವಿರುದ್ಧ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ರಾಜ್ಯದಲ್ಲಿ ಫೈರಿಂಗ್‌ಗೆ ಅವಕಾಶ ಮಾಡಿ ತೋರಿಸಬೇಕಾಗುತ್ತದೆ. ಕೇಂದ್ರದವರ ಜೊತೆಯಲ್ಲಿ ಹೋರಾಟ ಮಾಡಿ ಏನು ಅವಶ್ಯಕತೆ ಇದೆ ಅದನ್ನು ಈಡೇರಿಸಬೇಕು. ಮತ್ತು ಆಹಾರದ ಬಗ್ಗೆ ಕೇಂದ್ರದ ಕಣ್ಣನ್ನು ತೆರೆಯುವ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ :— ಈ ವಿಷಯದಲ್ಲಿ ತಾತ್ಸಾರ ಮಾಡಿಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ. ಕಾವೇರಿ ವಿಷಯದಲ್ಲಿ ನಾನು ಡೆಲ್ಲಿಗೆ ಹೋಗಿದ್ದಾಗ ಈ ವಿಚಾರವನ್ನೂ ಪ್ರಸ್ತಾಪ ಮಾಡಿ, ಪ್ರಾಮಾಣಿಕವಾಗಿ ಎಷ್ಟು ಅವಶ್ಯಕತೆ ಇದೆ, ಪರಿಸ್ಥಿತಿ ಎಷ್ಟು ಗಹನವಾಗಿದೆ ಎನ್ನುವುದನ್ನು ಮನದಟ್ಟು ಮಾಡಿದ್ದೇನೆ. They have given me specific assurance that in the month of May, they would definitely give very generous allotment. ಡಿಸ್ಟ್ರಿಬ್ಯೂಷನ್ ವ್ಯವಸ್ಥೆಯಲ್ಲಿ ತಾವುಗಳು ಎಲ್ಲಿಯಾದರೂ ಲೋಪದೋಷ ಇದೆ ಎಂದು ಹೇಳುವುದಾದರೆ ದೋಷ ಇಲ್ಲ ಎಂದು ನಾನು ಹೇಳುವುದಕ್ಕಾಗುವುದಿಲ್ಲ ಅದನ್ನು ಈ ಸಭೆಯಲ್ಲಿಯೇ ಚರ್ಚೆ ಮಾಡಬೇಕಾದುದು ಅನಗತ್ಯ. ಈ ಸಭೆಯಲ್ಲಿ ಹೇಳದೆ, ಯಾವ ಕಾಲದಲ್ಲಿ ಎಲ್ಲಿ ಬೇಕಾದರೂ ವಿಚಾರ ಮಾಡಿ ತಕ್ಷಣ ನಿವಾರಣೆ ಮಾಡತಕ್ಕಂಥಾದ್ದಕ್ಕೆ ನಾವು ಉಭಯತ್ರರೂ ಕೆಲಸ ಮಾಡಬೇಕಾಗಿದೆ, ಸರ್ಕಾರದ ಹೊಣೆಯನ್ನು ಅದು ಜವಾಬ್ದಾರಿಯಿಂದ ನಿರ್ವಹಿಸುತ್ತದೆ ಎಂದು ನಾನು ಭರವಸೆ ಕೊಡುತ್ತೇನೆ.

ಶ್ರೀ ವಿ. ಎನ್. ಪಾಟೀಲ್ :—ನಾನು ತಮ್ಮ ಸ್ಟೇಟ್‌ಮೆಂಟ್ ಅನ್ನು ಪ್ರಶ್ನೆ ಮಾಡುತ್ತಾ ಇಲ್ಲ. ಬಂದಿರುವ ಸಮಸ್ಯೆ ಏನೆಂದರೆ, ಲೋಯರ್ ಲೆವೆಲ್‌ನಲ್ಲಿ ಡಿಸ್ಟ್ರಿಬ್ಯೂಷನ್ ಬ್ಲಾಕಿಂಗ್ ಆಗುತ್ತಾ ಇದ್ದರೆ, ಆಹಾರ ಮಂತ್ರಿಗಳು ಬರೀ ಸ್ಟೇಟ್‌ಮೆಂಟ್ ಕೊಡುವುದರಿಂದ ಏನು ಪ್ರಯೋಜನ ? ಪ್ರತಿದಿನ ನಮಗೆ ಅಲ್ಲಿಂದ ಟೆಲಿಗ್ರಾಮ್ಸ್ ಬರುತ್ತಿವೆ. ಬ್ಲಾಕ್ ಮಾರ್ಕೆಟಿಯರ್ಸ್‌ಇಂದ ನಮಗೆ ಟೆಲಿಗ್ರಾಮ್ಸ್ ಬರುತ್ತಾ ಇಲ್ಲ. ಸೋಷಿಯಲ್ ವರ್ಕರ್ಸ್‌ಇಂದ ಟೆಲಿಗ್ರಾಮ್ಸ್ ಬರುತ್ತಿವೆ. ನಾನು ಫುಡ್ ಗ್ರೇನ್ಸ್ ಯಾವಾಗ ಕಳುಹಿಸುತ್ತೀರಿ ಎಂದು ಕೇಳಿದಾಗ . . . . 'within the time you reach Bidar District, foodgrains will reach there' ಅಂತ ಹೇಳಿದ್ದರು. 'No arrangement is being made' ಎಂದು ಹೇಳಿದ್ದರೆ ಒಪ್ಪುತ್ತಿದ್ದೆ. 'Food is being distributed' ಎಂದು ಈಗ ಹೇಳಿದ್ದಾರೆ. It is rather an insult to us.

SRI H. M. CHANNABASAPPA :—Hard words will not break bones. Let us discuss and see that the problem is solved. ತಮಗೆ ಟೆಲಿಗ್ರಾಮ್ಸ್ ಬಂದಿವೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಅದನ್ನು ಈ ಸಭೆಯಲ್ಲಿಯೇ ತೀರ್ಮಾನ ಮಾಡುವುದು ಆವಶ್ಯಕವಲ್ಲ. You can straight away discuss with the Hon' Minister of state for food and see that necessary remedy is applied and if necessary, you can also get into touch with me and we will see that remedies are applied.

ಶ್ರೀ ಎಚ್.ಡಿ. ದೇವೇಗೌಡ:—ಸತ್ಯಾಂಶ ಕೊಟ್ಟು ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದೀರಿ. ಆಹಾರ ಮಂತ್ರಿಗಳಿಗೂ ಇಕ್ಕಟ್ಟಿನ ಪರಿಸ್ಥಿತಿ ಬಂದಿದೆ, ಅವರು ಹಾಗೆಯೇ ಹೇಳಿಕೊಂಡು ಹೋಗಲಿ.

STATEMENT BY MINISTER FOR PUBLIC WORKS

Re. : Relaxations in restrictions on Consumption of Power for Domestic Purposes.

Sri H. M. CHANNABASAPPA (Minister for Public Works and Electricity) :— Madam Speaker, with your kind permission, I would like to make a statement.

The power cut imposed in the State with effect from 1-10-1972 is applicable to all the consumers of electricity except certain essential utility services like Railways, Hospitals, Water supply Installations, etc. All consumers whose monthly consumption of energy is not more than seven units are also exempted from the cut. Large number of representations are being received from the consumers all over the State requesting for some relaxation in the case of domestic lighting installations in view of the examination season and also severe summer necessitating the use of fans. Members of Legislature have also urged for some relaxation to domestic consumers. In response to these representations, Government has decided that all consumers whose monthly consumption of energy for domestic lighting purposes is not more than 50 units should be exempted from the power cut.

The supply of cotton yarn has become acute with the result that it has created a lot of uneasiness among the weavers in the drought affected areas of the State. Some of the spinning mills in the State have come forward with a proposal to supply yarn if additional power is made available to them. In order to give some relief to the weavers it has been decided to supply 50,000 units of power per day for one and half months to the spinning mills in the State on the condition that the yarn produced out of this additional quantum of power is made over by them to the Industries and Commerce Department for being allocated to the weavers in the scarcity affected districts.

The Members are aware that the prices of edible oils in the market are soaring up due to their short supply. There is fall in production of edible oils partly due to power cut made applicable to these mills also In order to step up production of edible oils which form part of our food it has been decided that all mills which produce edible oils should be fully exempted from the power cut with immediate effect.

Sri M. S. KRISHNAN.—You have stated that the exemption is in respect of all domestic consumers. Does it apply to people who have got heating and lighting—All Electric Homes—as they call them ?

Sri H. M. CHANNABASAPPA.—I cannot say straight away whether this exemption includes. All Electric Homes, which use electricity for domestic purposes. I will make a clarification later.

1. Mysore Police (Amendment) Bill, 1973.

2. Mysore P.S.C. (Conduct of Business and Additional Functions) (Amendment) Bill, 1973.

3. Mysore State Servants (Determination of Age,) Bill, 1973.—Introduction of

Sri H. M. CHANNABASAPPA (Minister for Public Works):—Madam Speaker, On behalf of the Chief Minister I beg to introduce :

The Mysore Police (Amendment) Bill, 1973.

The Mysore Public Service Commission (Conduct of Business and Additional Functions) (Amendment) Bill, 1973.

The Mysore State Servants (Determination of Age) Bill, 1973.

MADAM SPEAKER.—The Mysore Police (Amendment) Bill, 1973.

The Mysore Public Service Commission (Conduct of Business and Additional Functions (Amendment) Bill, 1973, and The Mysore State Servants (Determination of Age) Bill, 1973 are introduced—

Mysore Agricultural Lands (Prohibition of Alienation) *Bill, 1973 Introduction of

Sri N. HUTCHMASTHY GOWDA Minister for Revenue)—I beg to introduce :

The Mysore Agricultural Lands (Prohibition of Alienation) Bill, 1973.

MADAM SPEAKER: The Mysore Agricultural Lands (Prohibition of Alientaion) Bill, 1973— is introduced.

Mysore Agricultural Debtors' (Temporary Protection) Bill, 973— ntroduction of

*Bills appended as Annexures to this volume.

Sri A. SHANKARA ALVA (Minister for Co-operation).—Madam Speaker, I beg to introduce:

The Mysore Agricultural Debtors' (Temporary Protection) Bill 1973

MADAM SPEAKER: The Mysore Agricultural Debtors' (Temporary Protection) Bill 1973 Introduced.

Mysore V. P. and L. B. (Amend.) Bill 1973, introduction of

Sri M. MALLIKARJUNA SWAMY.—(Minister for Community Development and Social Welfare).—Madam Speaker, I beg to introduce

The Mysore Village Panchayat and Local Boards (Amendment Bill, 1973.

MADAM SPEAKER —The Mysore Village Panchayats and Loca Boards (Amendment) Bill, 1973 is introduced.*

The Criminal Law and Indentification of Prisoners (Mysore Extn. and Amend.) Bill 1973, intro duction of

Sri R. D. KITTUR (Minister of State for Home).—Madam Speaker I beg to introduce:

The Criminal Law and Identification of Prisoners (Mysore Extension and Amendment) Bill, 1973.

MADAM SPEAKER.—The Criminal Law and Identification of Prisoners (Mysore Extension and Amendment) Bill, 1973 is introduce.

Relief Measures taken by Government in droght Areas

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :—ಸನ್ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ಒಂದು ವಿಷಯವನ್ನು ತರಲಿಕ್ಕೆ ಅಪೇಕ್ಷಪಡುತ್ತೇನೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಬಹಳ ಭೀಕರವಾಗಿದೆ. ಅಲ್ಲಿಯ ಜನ ದಾರುಣ ಸ್ಥಿತಿಯಲ್ಲಿದ್ದಾರೆ. ಅಂತಹ ಸ್ಥಿತಿಯಲ್ಲಿ ನಮ್ಮ ರಾಜ್ಯದ ಮುಖಂಡರು ಮತ್ತು ಅಕ್ಕಪಕ್ಕದ ನಾಲ್ಕು ರಾಜ್ಯಗಳ ಕಾಂಗ್ರೆಸ್ ಶಾಸಕರು ಇಲ್ಲಿ ಸೇರುವ ಯೋಜನೆ ಏನು ಕೈಗೊಂಡಿದ್ದಾರೆ, ಅದರಿಂದ ಯಾವ ರೀತಿ ಜನರಿಗೆ ಪ್ರಯೋಜನವಾಗುತ್ತದೆ ಎನ್ನುವ ಬಗ್ಗೆ ಸರ್ಕಾರದವರು ವಿವರಣೆ ಕೊಡಬೇಕು. ಸಮತಾವಾದವನ್ನು ಹೇಳತಕ್ಕವರು, ಬಡವರನ್ನು ಉದ್ಧಾರ ಮಾಡತಕ್ಕವರು.

ಅಧ್ಯಕ್ಷರು :—ತಾವು ಆ ರೀತಿ ಎದ್ದು ಹೇಳಿಬಿಟ್ಟರೆ ಅದರ ಸ್ವಾರಸ್ಯ ಹೋಗಿಬಿಡುತ್ತದೆ. ಬರೆದು ಕಳಿಸಿ, ಆಮೇಲೆ ಯೋಚನೆ ಮಾಡೋಣ.

ಶ್ರೀ ಹೆಚ್. ಡಿ. ದೇವೇಗೌಡ :—ನಾಳೆ ಮಧ್ಯಾಹ್ನ ಬಹಳ ಜನರು ಬಂದು ಸೇರುತ್ತಾರೆ. ಸುಮಾರು 10 ಲಕ್ಷ ರೂಪಾಯಿ ವೆಚ್ಚದಲ್ಲಿ ಸೊಗಸಾದ ಮೇಳ ಏರ್ಪಾಡಾಗಿದೆ. ಈಗ ರಾಜ್ಯದಲ್ಲಿ ಬರಗಾಲ ಇದೆ. ಆದುದರಿಂದ ಇದು ಆಗಬಾರದಾಗಿತ್ತು. ಈ ಸಮ್ಮೇಳನ

*Bills appended as annexures to this volume.

ಮಾಡುವುದಕ್ಕೋಸ್ಕರ 8 ದಿವಸ ಅಸೆಂಬ್ಲಿ ಅಡ್ಜರ್ನ್ ಮಾಡಬಾರದಾಗಿತ್ತು. ಇದು ವಿಷಾದಕರವಾದ ವಿಷಯ. ರಾಜ್ಯದಲ್ಲಿ ಬಿಕ್ಕಟ್ಟು ಪರಿಸ್ಥಿತಿ ಇರುವ ಕಾಲದಲ್ಲಿ ಈ ಮೇಳ ನಡೆಸುವುದು, ಪ್ರದರ್ಶನ ನಡೆಸುವುದು ಅಷ್ಟು ಯೋಗ್ಯವಾದುದಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :—ಬೆಂಗಳೂರಿನಲ್ಲಿ ನಾಳೆಯಿಂದ ಕಾಂಗ್ರೆಸ್ ಅಧಿವೇಶನ ನಡೆಯುತ್ತದೆ. ಅದಕ್ಕೆ ಎಷ್ಟು ಆಹಾರ ಒದಗಿಸಿದ್ದಾರೆ, ಎಷ್ಟು ಕೋಳಿಗಳು, ಎಷ್ಟು ಕುರಿಗಳನ್ನು ಒದಗಿಸಿದ್ದಾರೆ ಎಂಬುದು ಗೊತ್ತಿಲ್ಲ. ಬರಗಾಲ ಪ್ರದೇಶದಲ್ಲಿ ಅನ್ನ ಇಲ್ಲ ಎಂದು ಜನ ಸಾಯುತ್ತಿದ್ದಾರೆ. ಶ್ರೀಮಾನ್ ಚೆನ್ನಬಸಪ್ಪನವರು ಅಲ್ಲಿಗೆ ಆಹಾರ ಧಾನ್ಯ ಕಳುಹಿಸಿರುವ ಬಗ್ಗೆ ರಿಪೋರ್ಟ್ ಕೊಟ್ಟಿದ್ದಾರೆ. ಅದು ಅಲ್ಲಿಗೆ ತಲುಪಿದೆಯೋ ಇಲ್ಲವೋ ಗೊತ್ತಿಲ್ಲ. ನಾಳೆ ನೂರಾರು ಜನರು ಇಲ್ಲಿ ಬರುತ್ತಾರೆ. ಗ್ಲಾಸ್ ಹೌಸ್ ಇಂದ್ರನ ಅರಮನೆಯಂತೆ ತಯಾರಾಗುತ್ತಿದೆ. ಈ ಸಮ್ಮೇಳನಕ್ಕೆ ಯಾವ ಸೋರ್ಸ್‌ನಿಂದ ಗೋಧಿ ಮತ್ತು ಅಕ್ಕಿ ತಂದಿರಿ ? ಈ ಸಭೆಯನ್ನು 4 ದಿವಸ ಮುಂದಕ್ಕೆ ಹಾಕುತ್ತಾ ಇರತಕ್ಕ ಉದ್ದೇಶವೇನು ? ಈ ಸಮ್ಮೇಳನಕ್ಕೆ ಎಷ್ಟು ಹಣವನ್ನು ಯಾವ ಯಾವ ಕೈಗಾರಿಕೋದ್ಯಮಿಗಳಿಂದ ಎಲ್ಲೆಲ್ಲಿ ತಂದಿದ್ದೀರಿ ? ಚಪ್ಪರದ ವ್ಯವಸ್ಥೆಗೆ ಒಬ್ಬರು, ಊಟದ ವ್ಯವಸ್ಥೆಗೆ ಒಬ್ಬರು, ಮಲಗುವ ಹಾಸಿಗೆ ವ್ಯವಸ್ಥೆಗೆ ಒಬ್ಬರು ಅಂಥ ಒಂದು ದೊಡ್ಡ ಲಿಸ್ಟ್ ಇದೆ. ಇಂತಹ ಬರಗಾಲದ ಸಮಯದಲ್ಲಿ ದಕ್ಷಿಣ ಪಲಯದಿಂದ ಜನರನ್ನು ಕರೆದುಕೊಂಡು ಬಂದು ಈ ವೈಭವದ ಸಮಾರಂಭ ನಡೆಸುವುದರ ಔಚಿತ್ಯವಾದರೂ ಏನು ? ದಯಮಾಡಿ ಇದನ್ನು ಸ್ಪಷ್ಟವಾಗಿ ಈ ಸಭೆಯಲ್ಲಿ ಹೇಳಬೇಕು ಎಂದು ಕೇಳಿ ಕೊಳ್ಳುತ್ತೇನೆ.

Budget estimates for 1973-74. Demands for grants. Demands Nos. 3, 10, 12, 13, 15 B, 35 and 36.

ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬೀಹಾಳ್) :—ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ನಾನು ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಈಗ ಹಿಂದುಳಿದ ಮತ್ತು ಹರಿಜನರ ಉದ್ಧಾರವಾಗಬೇಕಾದರೆ, ಈ ಜನರಿಗೆ ನೌಕರಿ ಸವಲತ್ತು ಸಿಕ್ಕಬೇಕಾದರೆ, ಅದರಲ್ಲಿ ಮುಖ್ಯವಾಗಿ ಗ್ರಾಮಾಂತರದಲ್ಲಿರತಕ್ಕ ಹರಿಜನರ ಮತ್ತು ಹಿಂದುಳಿದವರ ಅಭಿವೃದ್ಧಿಯಾಗಬೇಕಾದರೆ ನೌಕರಿ ಕೊಡತಕ್ಕ ನೀತಿಯಲ್ಲಿ ಬದಲಾವಣೆ ಆಗಬೇಕು ಎಂದು ಹೇಳಬಯಸುತ್ತೇನೆ. ಆಯಾಯ ವಿಭಾಗದಲ್ಲಿ ಇರತಕ್ಕ ಗ್ರಾಮಾಂತರದ ಜನರಿಗೆ, ಹಿಂದುಳಿದವರಿಗೆ, ಹರಿಜನರಿಗೆ ನೌಕರಿ ಕೊಡಲಿಕ್ಕೆ ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿ ಎಂದು ಹೇಳಿ ಸ್ಥಾಪನೆಯಾಗಿತ್ತು. ನನಗೆ ಗೊತ್ತಿದ್ದಂತೆ ಅದು ರದ್ದು ಆಗಿದೆ. ನಿಜಕ್ಕೂ ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿ ನೇಮಕವಾದರೆ ಯೋಗ್ಯವಾಗುತ್ತದೆ. ಇದರಿಂದ ಆಯಾಯ ಭಾಗದಲ್ಲಿ ಇರತಕ್ಕ ಒಕ್ಕಲು ಮಕ್ಕಳಿಗೆ, ಹರಿಜನರಿಗೆ, ಹಿಂದುಳಿದವರಿಗೆ ಫಾಯಿದೆಯಾಗುತ್ತದೆ ಎಂದು ಹೇಳುತ್ತೇನೆ. ನಾವೆಲ್ಲ ಸಮತಾವಾದದ ಮಾತು ಹೇಳುವವರು. ಗರೀಬಿ ಹಠಾವೋ ಘೋಷಣೆ ಮಾಡುವವರು. ಹರಿಜನರು ಹಿಂದುಳಿದವರನ್ನು ಮೇಲಕ್ಕೆ ತರಬೇಕು ಎನ್ನುವವರು. ಈ ಒಂದು ಆಕಾಂಕ್ಷೆ ಇರುವಾಗ ಆಯಾಯ ಭಾಗದ ಜನರಿಗೆ, ಆಯಾ ಭಾಗದ ಹಿಂದುಳಿದವರಿಗೆ ನೌಕರಿಗಳ ಸವಲತ್ತು ಸಿಕ್ಕಬೇಕಾದರೆ ಡಿವಿಜನಲ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ನೇಮಕ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಈಗಿರುವಂತೆ ಸ್ಟೇಟ್ ರೆಕ್ರೂಟ್‌ಮೆಂಟ್ ಕಮಿಟಿ ಮಾಡುವು ದಾದರೆ ಸರ್ಕಾರಕ್ಕೆ ಹೆಚ್ಚು ಖರ್ಚು ಬರುತ್ತದೆ. ಸ್ಟೇಟ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿ ಬೆಳಗಾಂ, ಬೀದರ್ ಮತ್ತು ಮೈಸೂರು ವಿಭಾಗಗಳಿಗೆ ಹೋಗಿ ಉಮೇದುವಾರರ ಸಂದರ್ಶನ ತೆಗೆದುಕೊಂಡು ಬರುವುದರಿಂದ ಅಲ್ಲಿನ ಜನರಿಗೆ ಲಾಭ ಮಾಡಿಕೊಟ್ಟಂತಾಗುವುದಿಲ್ಲ.

ಉಮೇದುವಾರರು ನೌಕರಿ ದೊರಕಿಸಿಕೊಳ್ಳುವ ಉದ್ದೇಶದಿಂದ ಬೆಂಗಳೂರಿಗೆ ಬಂದು ಹತ್ತಿಪ್ಪತ್ತು ಸಾವಿರ ರೂಪಾಯಿ ಖರ್ಚುಮಾಡುವ ಪ್ರಸಂಗ ಬರುತ್ತದೆ. ಹಿಂದುಳಿದವರಿಗೆ, ಹರಿಜನರಿಗೆ, ಗ್ರಾಮಾಂತರದಿಂದ ಬರತಕ್ಕ ಒಕ್ಕಲು ಮಕ್ಕಳಿಗೆ ಇಂತಹ ಖರ್ಚು ಉಳಿಸಬೇಕಾದರೆ ಡಿವಿಜನಲ್ ಲೆವೆಲ್ ಕಮಿಟಿಗಳನ್ನು ನೇಮಕ ಮಾಡಬೇಕು, ಮತ್ತು ಅಲ್ಲಿಂದ ಅಲ್ಲೇ ನೇಮಕಾತಿ ಹುಕುಂ ಕೊಡುವ ವ್ಯವಸ್ಥೆ ಮಾಡಬೇಕಾಗಿದೆ. ಈ ರೀತಿ ಸರ್ಕಾರದವರು ತಮ್ಮ ನೀತಿಯಲ್ಲಿ ಬದಲಾವಣೆ ಮಾಡಬೇಕು ಎಂದು ಹೇಳುತ್ತೇನೆ. ಇವರ ಜಾತಿಗೆ ಮುಖ್ಯವಾಗಿ ಹರಿಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಇಂಡಿಯನ್ ಕಾನ್‌ಸ್ಟಿಟ್ಯೂಷನ್‌ನಲ್ಲಿ ಇರುವ ಹಾಗೆ ರಿಜರ್ವೇಷನ್ ಸಿಕ್ಕಬೇಕಾದರೆ ಈ ಕಮಿಟಿ ಇರುವ ಅವಶ್ಯಕತೆ ಇದೆ. ನಾನ್‌ಅಫಿಷಿಯಲ್ ಜನರನ್ನು ಈ ಸಮಿತಿಯಲ್ಲಿ ಹಾಕಿಕೊಂಡು ಯಾವ ಯಾವ ಖಾತೆಯಲ್ಲಿ ನೌಕರಿಗಳನ್ನು ಕೊಡಬೇಕಾ ಗುತ್ತದೋ ಅಂತಹ ಖಾತೆಯ ಅಧಿಕಾರಿಗಳನ್ನು ಅದರಲ್ಲಿ ಸೇರಿಸಿಕೊಂಡು, ಉಮೇದುವಾರರನ್ನು ನೇಮಕ ಮಾಡಿ ಅಲ್ಲಿಂದ ಅಲ್ಲೇ ಹುಕುಂ ಕೊಟ್ಟರೆ, ಉಮೇದುವಾರರಿಗೂ ಖರ್ಚು ಬರುವುದಿಲ್ಲ ಮತ್ತು ಸರ್ಕಾರಕ್ಕೂ ಖರ್ಚು ಬರುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಈಗಾಗಲೇ ನಿಮಗೆ ಗೊತ್ತಿದ್ದಂತೆ ಎಸ್. ಡಿ. ಸಿ., ಎಫ್. ಡಿ. ಸಿ. ಗಳನ್ನು ಪಬ್ಲೀಕ್ ಸರ್ವೀಸ್ ಕಮಿಷನ್ ಅವರು ನೇಮಕ ಮಾಡುವ ಕಾಲಕ್ಕೆ, ಎಷ್ಟೋ ಅವಧಿ ತೆಗೆದುಕೊಳ್ಳುವುದರಿಂದ ಉಮೇದುವಾರರು ನೌಕರಿ ದೊರಕುವ ಇಚ್ಛೆಯಿಂದ ಬೆಂಗಳೂರಿಗೆ ತಿರುಗಾಡಿ ಅನೇಕ ತೊಂದರೆಗಳಿಗೆ ಮತ್ತು ಖರ್ಚಿಗೆ ಒಳಗಾಗುವ ಉದಾಹರಣೆಗಳು ಇರುತ್ತವೆ. ಈಗಿನ ಪದ್ಧತಿಯಿಂದ ಅರ್ಬನ್ ಉಮೇದುವಾರರಿಗೆ ನೌಕರಿ ದೊರೆಯುತ್ತದೆ, ಗ್ರಾಮಾಂತರ ಜನರಿಗೆ ಸಿಕ್ಕುವುದಿಲ್ಲ ಎನ್ನುವ ವಿಚಾರ ಇದೆ, ಎಸ್.ಡಿ.ಸಿ. ಪೋಸ್ಟ್, ಎಫ್.ಡಿ.ಸಿ. ಪೋಸ್ಟ್ ಮತ್ತು ಸಣ್ಣ ಸಣ್ಣ ನೌಕರಿಗಳಿಗೆ ನೇಮಿಸುವ ವಿಷಯದಲ್ಲಿ ಸರ್ಕಾರದ ನೀತಿ ಬದಲಾವಣೆಯಾಗಬೇಕು. ಈ ಕಾರಕೂನರ ನೇಮಕಾತಿಯನ್ನು ಆಯಾಯ ಡಿವಿಜನಲ್ ರೆಕ್ರೂಟ್ ಕಮಿಟಿಗಳು ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಸೀನಿಯಾರಿಟಿ ಮತ್ತು ಪ್ರಮೋಷನ್ಸ್ ವಿಷಯದಲ್ಲಿ ಅನೇಕ ದೋಷಗಳಿವೆ. ಅದಕ್ಕೆ ಅನೇಕ ಅಡೆ ತಡೆಗಳು ಉಂಟಾಗಿವೆ. ಅದಕ್ಕೆ ಕಾರಣ ಸೀನಿಯಾರಿಟಿ ಪಟ್ಟಿ ಆಗಲಿ ಅಥವಾ ಪ್ರಮೋಷನ್ಸ್ ಆಗಲಿ ಇದಕ್ಕೆ ಬೇಕಾದಂಥ ಏಕರೂಪವಾದ ವಿಧಿ ನಿಯಮಗಳನ್ನು ಮಾಡಲಿಲ್ಲ ಎಂದು ಕಾಣುತ್ತದೆ. ಅನೇಕ ಖಾತೆಗಳಲ್ಲಿ ಸೀನಿಯಾರಿಟಿ ಲಿಸ್ಟ್ ಆಗಿಲ್ಲ, ಪ್ರಮೋಷನ್ಸ್ ಬಂದಿಲ್ಲ ಎಂದು ಗೋಳು ಪಡತಕ್ಕ ಅನೇಕ ನೌಕರರಿದ್ದಾರೆ, ಸೀನಿಯಾರಿಟಿ ಲಿಸ್ಟ್ ಮಾಡಲಿಕ್ಕೆ ಮತ್ತು ಪ್ರಮೋಷನ್ಸ್ ಮಾಡಲಿಕ್ಕೆ ಬೇರೆ ಒಂದು ತಜ್ಞರ ಸಮಿತಿಯನ್ನು ನೇಮಿಸಿ ತೀವ್ರಗತಿಯಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳುತ್ತೇನೆ. ನಮ್ಮ ಕನ್ನಡ ರಾಜ್ಯ 1956ನೇ ಇಸವಿಯಲ್ಲಿ ಹುಟ್ಟಿದ ಲಾಗಾಯಿತು ಇಲ್ಲಿಯವರೆಗೆ ನೇಮಕಾತಿ ಮತ್ತು ಪ್ರಮೋಷನ್ಸ್ ವಿಷಯದಲ್ಲಿ ಮತ್ತು ಸೀನಿಯಾರಿಟಿ ಲಿಸ್ಟ್ ವಿಷಯದಲ್ಲಿ ಅನೇಕ ದೋಷಗಳಿವೆ ಎನ್ನುವುದು ಹೈಕೋರ್ಟಿನಲ್ಲಿ ಹಾಗೂ ಸುಪ್ರೀಂ ಕೋರ್ಟಿನಲ್ಲಿ ಪೆಂಡಿಂಗ್ ಇರತಕ್ಕ ಅನೇಕ ಸರ್ವೀಸ್ ಕೇಸುಗಳಿಂದ ಗೊತ್ತಾಗುತ್ತದೆ. ಸಾಮಾನ್ಯ ಆಡಳಿತದಲ್ಲಿ ಈ ವಿಷಯಕ್ಕೆ ಹೆಚ್ಚಿನ ಜಾಗೃತಿ ವಹಿಸಿಲ್ಲ ಹೆಚ್ಚಿನ ಕೆಲಸ ಪೂರೈಸಿಲ್ಲ, ಅದರ ಬಗ್ಗೆ ಒಂದು ಕ್ರಮಬದ್ಧ ವ್ಯವಸ್ಥೆ ನಮ್ಮ ಸರ್ಕಾರ ಮಾಡಿಲ್ಲ, ನಮ್ಮ ಸರ್ಕಾರ ಹಿಂದೇನೂ ಮಾಡಿಲ್ಲ, ಈಗಲೂ ಕೂಡ ಮಾಡುತ್ತಿಲ್ಲ. ಅದಕ್ಕಾಗಿ ಈ ವಿಷಯಕ್ಕೆ ಕೂಡಲೇ ಒಂದು ವ್ಯವಸ್ಥಿತವಾದ ನೀತಿಯನ್ನು ಸರ್ಕಾರದವರು ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ. ಇನ್ನೂ ಅನೇಕ ಖಾತೆಗಳಲ್ಲಿ ಎಷ್ಟೋ ಜಾಗಗಳು ಖಾಲಿ ಬಿದ್ದಿವೆ, ತುಂಬಿರುವುದಿಲ್ಲ. ಪಬ್ಲಿಕ್ ಸರ್ವೀಸ್ ಕಮಿಷನ್‌ನ್ನು ಕೇಳಿದರೆ ಖಾತೆಯವರಿಂದ ಎಷ್ಟು ಜಾಗ ತುಂಬಿಸಬೇಕೆಂದು ವಿವರಗಳು ಬಂದಿಲ್ಲ ಎಂದು ಹೇಳುತ್ತಾರೆ. ಖಾತೆಯವರನ್ನು ಕೇಳಿದರೆ, ಪಬ್ಲಿಕ್ ಸರ್ವೀಸ್ ಕಮಿಷನ್‌ನಿಂದ ಲಿಸ್ಟ್ ಬಂದಿಲ್ಲ ಎಂದು ಹೇಳುತ್ತಾರೆ, ಈ ಸ್ಟೇಟ್ ರೆಕ್ರೂಟ್‌ಮೆಂಟ್ ಕಮಿಟಿಯವರು ನೇಮಕಾತಿಗಳನ್ನು ಮಾಡುವುದರಿಂದ ಈ ರೀತಿ ಕೆಲಸಕಾರ್ಯಗಳು ತಡವಾಗುತ್ತವೆ

ಮತ್ತು ಸರ್ಕಾರಕ್ಕೆ ಹೆಚ್ಚಿನ ದುಡ್ಡು ಖರ್ಚಾಗುತ್ತದೆ, ಇದನ್ನು ತಪ್ಪಿಸಲು ಡಿವಿಜನಲ್ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ವಿಚಾರ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನ ನಿಯಮ ನಿಬಂಧನೆಗಳನ್ನು ಅನುಸರಿಸಿ ನಡೆಯುತ್ತಿಲ್ಲ. ಈ ಬಗ್ಗೆ ಅನೇಕ ಉದಾಹರಣೆಗಳನ್ನು ಕೇಳಬಹುದು. 1972ನೇ ಇಸವಿಯಲ್ಲಿ ಹೆಸರುಗಳನ್ನು ಉಡಾಯಿಸಿದ್ದವರಿಗೆ ನೌಕರಿ ಸಿಗುತ್ತಿದೆ. ಆದರೆ 1969-70ನೇ ಇಸವಿಯಲ್ಲಿ ಹೆಸರು ಉಡಾಯಿಸಿದ್ದ ಉಮೇದು ವಾರರಿಗೆ ಇನ್ನೂ ಕೆಲಸ ಸಿಕ್ಕಿಲ್ಲ. ನನಗೆ ಗೊತ್ತಿದ್ದಂತೆ ಅಲ್ಲಿಯೂ ಕೂಡ ಲಂಚಾವತಾರ ಇದೆ. ಎಂಪ್ಲಾಯ್‌ಮೆಂಟ್ ಆಫೀಸಿನಲ್ಲಿ ಅನ್ಯಾಯವಾಗುತ್ತಿದೆ. ನೌಕರಿ ದೊರೆಯಬೇಕು ಎಂದು ಇಚ್ಛೆ ಪಡತಕ್ಕ ಬಹಳ ಉಮೇದುವಾರರಿಗೆ ನೌಕರಿಯ ಸೌಲಭ್ಯ ಸವಲತ್ತುಗಳು ಸಿಕ್ಕಿಲ್ಲ. ಹಿಂದುಳಿದವರಿಗೆ, ಬಡವರಿಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸಿನಲ್ಲಿ ಅವಕಾಶ ದೊರಕುವಂತೆ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಕೆಲವು ನೇಮಕಾತಿ ಮಾಡುವ ಕಾಲಕ್ಕೆ ಮೌಕಿಕ ಪರೀಕ್ಷೆಮಾಡಿ ನೇಮಕ ಮಾಡುವ ಪದ್ಧತಿ ಇದೆ. ನನಗೆ ಗೊತ್ತಾದಂತೆ ಶ್ರೀ ಧರ್ಮವೀರರು ಗವರ್ನರ್ ಆಗಿದ್ದ ಕಾಲದಲ್ಲಿ ಮೊದಲು ಮೌಕಿಕ ಪರೀಕ್ಷೆಗಳಿಗೆ 100ಗುಣ ಗಳು ಇದ್ದಿದ್ದನ್ನು 30 ಗುಣಗಳನ್ನಾಗಿ ಮಾಡಿದರು ಎಂದು ಕೇಳಿದ್ದೇನೆ. 30 ಗುಣಗಳನ್ನು ಪರೀಕ್ಷೆಯಿಂದ ಬರುವ ಗುಣಗಳಿಗೆ ಕೂಡಿಸಿ ಉಮೇದುವಾರರನ್ನು ನೇಮಕಾತಿ ಮಾಡುವುದರಿಂದ ದೊಡ್ಡ ಅನ್ಯಾಯವಾಗಿದೆಯೆಂದು ತಿಳಿದು ಬಂದಿದೆ. ಅಡ್ವಾನ್ಸ್ ಕ್ಲಾಸಿನವರು ಹೆಚ್ಚಿನ ಮಾರ್ಕ್ಸ್ ಪರೀಕ್ಷೆಗಳಲ್ಲಿ ತೆಗೆದುಕೊಳ್ಳುವುದರಿಂದ ಮೌಕಿಕ ಪರೀಕ್ಷೆಗಳಿಗೆ 30 ಗುಣಗಳನ್ನು ಇಟ್ಟಿರುವುದರಿಂದ ಅವರಿಗೆ ಹೆಚ್ಚಿನ ಪ್ರಿಫರೆನ್ಸ್ ಸಿಗುತ್ತದೆ, ನೌಕರಿ ಸೌಲಭ್ಯ ಸಿಗುತ್ತದೆ. ಹಿಂದುಳಿದವರು ಮತ್ತು ಗ್ರಾಮಾಂತರದಿಂದ ಬರತಕ್ಕ ಉಮೇದುವಾರರು ಅಡ್ವಾನ್ಸ್ ಕ್ಲಾಸ್ ತೆಗೆದುಕೊಂಡು ಮಾರ್ಕ್ಸ್ ನಷ್ಟು ತೆಗೆದುಕೊಳ್ಳದೆ ಇರುವುದರಿಂದ ಅವರಿಗೆ ಮೌಕಿಕ ಪರೀಕ್ಷೆಯಲ್ಲಿ ಎಷ್ಟು ಮಾರ್ಕ್ಸ್ ಕೊಟ್ಟರೂ, ಅಡ್ವಾನ್ಸ್ ಕ್ಲಾಸ್ ಉಮೇದುವಾರರಿಗೆ ಒಳ್ಳೆಯ ಮಾರ್ಕ್ಸ್ ಬಂದು ಅವರಿಗೆ ನೌಕರಿ ಸಿಗುತ್ತದೆ. ಆದುದರಿಂದ ಮೌಕಿಕ ಪರೀಕ್ಷೆಗೆ 30 ಗುಣಗಳನ್ನು ಇಟ್ಟಿರುವುದನ್ನು ತೆಗೆದು ಹಾಕಿ 100 ಗುಣಗಳನ್ನು ಇಟ್ಟರೆ ಹಿಂದುಳಿದ ವರ್ಗದವರಿಗೆ ಅನುಕೂಲ ಮಾಡುವುದಕ್ಕೆ ಸಾಧ್ಯ ವಿದೆ. ಅಲ್ಲದೆ ಎಫ್. ಡಿ, ಸಿ., ಎಸ್. ಡಿ. ಸಿ.ಗಳನ್ನು ನೇಮಕ ಮಾಡುವಾಗ ಪಬ್ಲಿಕ್ ಸರ್ವೀಸ್ ಕಮಿಷನ್‌ನವರು ಮತ್ತೊಂದು ಪರೀಕ್ಷೆ ಮಾಡುವುದರಿಂದ ಸರ್ಕಾರಕ್ಕೆ ಹಾನಿಯಾಗುತ್ತದೆ. ಆದುದರಿಂದ ಈ ಪರೀಕ್ಷೆ ಅನಾವಶ್ಯಕ ಎಂದು ಹೇಳುತ್ತೇನೆ.

ಮುಖ್ಯವಾಗಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಒಕ್ಕಲು ಮಕ್ಕಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೌಕರಿ ಸಿಕ್ಕಿಲ್ಲ. ಸಿಟಿಯಲ್ಲಿರತಕ್ಕಂಥ ಅಧಿಕಾರಿಗಳ ಮಕ್ಕಳಿಗೆ ನೌಕರಿ ಸಿಕ್ಕುವ ಅವಕಾಶ ಹೆಚ್ಚಾ ಗಿರುತ್ತದೆ. ಅವರು ಹೆಚ್ಚಿಗೆ ಓದಲು ಅವಕಾಶವಿರುವುದರಿಂದ ಹೆಚ್ಚಿಗೆ ಗುಣ ಪಡೆದಿರುತ್ತಾರೆ. ಆದುದರಿಂದ ಒಕ್ಕಲು ಮಕ್ಕಳಿಗೆ ಸೆಲೆಕ್ಟ್ ಕಮಿಟಿಯವರು ಹತ್ತಿಪ್ಪತ್ತು ಗ್ರೇಸ್ ಮಾರ್ಕ್ಸ್ ಕೊಟ್ಟು, ಪ್ರಿಫರೆನ್ಸ್ ಕೊಟ್ಟು ನೇಮಕ ಮಾಡಬೇಕು ಎನ್ನುವ ಮಾತನ್ನು ನಾನು ಮಾನ್ಯ ಸದನದ ಗಮನಕ್ಕೆ ತರುತ್ತೇನೆ; ಮತ್ತು ಸರ್ಕಾರದ ಗಮನಕ್ಕೆ ತರುತ್ತೇನೆ. ನಾನು ಮೇಲೆ ಹೇಳಿದಂತೆ ಸರ್ಕಾರದ ನೇಮಕಾತಿ ನೀತಿಯಲ್ಲಿ ಬದಲಾವಣೆ ಮಾಡಿ ಡಿವಿಜನಲ್ ಲೆವೆಲ್ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಏರ್ಪಾಡು ಮಾಡುವುದರಿಂದ ಹಿಂದುಳಿದವರಿಗೆ ಮತ್ತು ಒಕ್ಕಲು ಮಕ್ಕಳಿಗೆ ನೌಕರಿ ಸಿಗಲು ಸಾಧ್ಯವಾಗುತ್ತದೆ. ಆದುದರಿಂದ ಸರ್ಕಾರದವರು ನೇಮಕಾತಿ ವಿಷಯದಲ್ಲಿ ತಮ್ಮ ನೀತಿಯನ್ನು ಬದಲಾವಣೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಆಲ್ ಇಂಡಿಯಾ ಸರ್ವೀಸ್ ಬಗ್ಗೆ ಹೇಳುವುದಾದರೆ, ಐ. ಎ. ಎಸ್., ಐ.ಎಫ್.ಎಸ್. ಇದೆ. ಇಂಜನಿಯರಿಂಗ್ ಇಲಾಖೆಯ ಬಗ್ಗೆ ಐ.ಇ.ಎಸ್. ಮಾಡಲಿಕ್ಕೆ ಕೂಡ ಸೆಂಟ್ರಲ್

ಗೌರ್ನಮೆಂಟ್‌ನವರು ಶಿಫಾರಸು ಮಾಡಿ ಕಳಿಸಿದ್ದಾರೆಂದು ಹೇಳಿದ್ದೇನೆ. ಐ.ಎ.ಎಸ್‌ಗೆ ಆಲ್ ಇಂಡಿಯಾ ಸರ್ವೀಸ್ ಇದ್ದರೆ, ಎಲ್ಲಾ ಖಾತೆಗಳಿಗೂ ಸಂಬಂಧಪಟ್ಟಂತೆ ಆಲ್ ಇಂಡಿಯಾ ಸರ್ವೀಸ್ ಇರತಕ್ಕದ್ದು ಒಳ್ಳೆಯದು. ಇಲ್ಲದಿದ್ದರೆ ಐ.ಎ.ಎಸ್. ಆಲ್ ಇಂಡಿಯಾ ಸರ್ವೀಸ್ ತೆಗೆದು ಹಾಕತಕ್ಕದ್ದು.

ಇಲ್ಲದೇ ಇದ್ದರೆ ಪಕ್ಷಪಾತ ತೋರಿಸಿದಂತಾಗುತ್ತದೆ. ಒಂದೊಂದು ಖಾತೆಯಲ್ಲಿ ಒಬ್ಬೊಬ್ಬರು ಐ.ಎ.ಎಸ್. ಆಫೀಸರು ಇರುವುದು ಮತ್ತೊಂದು ಖಾತೆಯಲ್ಲಿ ಐ.ಎ.ಎಸ್. ಆಫೀಸರು ಇಲ್ಲದೇ ಇರುವುದು, ಹೀಗೆ ಮಾಡಿದರೆ ಅವರ ಕರ್ತವ್ಯದ ಕಡೆಗೆ ನಿರುತ್ಸಾಹವಾಗುತ್ತದೆ. ಇದ್ದರೆ ಎಲ್ಲಾ ಖಾತೆಗಳಲ್ಲೂ ಐ.ಎ.ಎಸ್. ಅಧಿಕಾರಿಗಳು ಇರಬೇಕು. ಇಲ್ಲವಾದರೆ ಅದನ್ನು ತೆಗೆದು ಹಾಕಬೇಕು ಎಂದು ಹೇಳುತ್ತೇನೆ.

ಇನ್ನು ಹೋಮ್ ಗಾರ್ಡ್ಸ್ ವಿಷಯದಲ್ಲಿ ಹೇಳುವುದಾದರೆ ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು. ಈ ಹೋಮ್ ಗಾರ್ಡ್ಸ್‌ನಿಂದ ಸರ್ಕಾರಕ್ಕೆ ಹೆಚು ದುಡ್ಡು ಖರ್ಚಾಗುತ್ತದೆಯೇ ವಿನಾ ಇದರಿಂದ ಯಾವುದೇ ಅವಶ್ಯಕವಾದಂಥ ಉಪಯೋಗ ವಾಗುತ್ತಾ ಇಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇದು ನಿರ್ವಿವಾದ ಮಾತು. ಇವಾಗ ದೇಶದಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಇದೆ. ಅನೇಕರಿಗೆ ನೌಕರಿ ಸಿಕ್ಕದೇ ಇರುವಾಗ ಹೋಮ್‌ಗಾರ್ಡ್ಸ್‌ಗೆ ಎಷ್ಟು ದುಡ್ಡು ಖರ್ಚು ಮಾಡುತ್ತಿದ್ದೀರೋ, ಅಷ್ಟು ಹಣವನ್ನು ಖರ್ಚು ಮಾಡಿ ಪೊಲೀಸ್ ಖಾತೆಗೆ ಜನರನ್ನು ತುಂಬಿ ನಮ್ಮ ದೇಶದಲ್ಲಿ ಪೊಲೀಸರ ಸಂಖ್ಯೆ ಜಾಸ್ತಿ ಯಾಗಬೇಕಾಗಿರುವುದರಿಂದ ಹೆಚ್ಚು ಪೊಲೀಸರನ್ನು ನೇಮಿಸಿಕೊಳ್ಳಬೇಕು. ಹಾಗಾದರೆ ದೇಶದಲ್ಲಿ ಲಾ ಅಂಡ್ ಆರ್ಡರ್ ಸಿಚುಯೇಷನ್‌ಗೆ ಅನುಕೂಲವಾಗುತ್ತದೆ. ಈವೊತ್ತು ಕೂಡ ಹಳ್ಳಿಗಳಲ್ಲಿ ಹೋಮ್‌ಗಾರ್ಡ್ಸ್ ಸಿಕ್ಕುವುದಿಲ್ಲ, ನಾವು ಪೊಲೀಸಿನವರಿಗೆ ಕಾಗದ ಬರೆಯಬೇಕು. ಅದು ತಮಗೂ ಗೊತ್ತಿದೆ. ಆದುದರಿಂದ ಹೋಮ್‌ಗಾರ್ಡ್ಸ್ ಇರುವುದು ಒಳ್ಳೆಯದಲ್ಲ ಅದನ್ನು ತೆಗೆದು ಹಾಕಬೇಕು ಎಂದು ಹೇಳುತ್ತೇನೆ.

ಇನ್ನು ಪೊಲೀಸ್ ಖಾತೆಯಲ್ಲಿ ಸಿ. ಐ. ಡಿ. ಆಂಟಿ ಕರಪ್ಷನ್ ಮತ್ತು ವಿಜಿಲೆನ್ಸ್ ಈ ಬ್ರಾಂಚುಗಳು ಇವೆ. ಇದರಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥ ಜನಗಳು ಎಲ್ಲರೂ ಪೊಲೀಸ್ ಖಾತೆಯಿಂದ ಬಂದಿರತಕ್ಕಂಥಾವರು. ಈ ಬಗ್ಗೆ ನಾನು ಹೇಳುವುದಾದರೆ ಇದು ಪೊಲೀಸ್ ಖಾತೆಯಲ್ಲಿ ಇರತಕ್ಕಂಥದ್ದಲ್ಲ: ಇದಕ್ಕೆ ಬೇರೆ ಒಂದು ಸಿಬ್ಬಂದಿಯನ್ನೇ ಇಡಬೇಕು. ಇದು ಇಂಡಿಪೆಂಡೆಂಟ್ ಆಗಿ ಇರಬೇಕು ಎಂದು ಹೇಳುತ್ತೇನೆ. ಪೊಲೀಸ್ ಖಾತೆಯಲ್ಲಿ ಏನು ಒಂದು ನಿಯಮ ಇದೆಯೋ ತಮ್ಮ ಜನರನ್ನೇ ಸಿ.ಐ.ಡಿ.ಗೆ ಆಂಟಿ ಕರಪ್ಷನ್‌ಗೆ, ವಿಜಿಲೆನ್ಸ್‌ಗೆ ತೆಗೆದು ಕೊಳ್ಳುವುದು ಮಾಡಿದರೆ ಇದರಿಂದ ಪಕ್ಷಪಾತ ಮಾಡಿದಂತಾಗುತ್ತದೆ. ಈ ರೀತಿ ಆಗಬಾರದು. ಇದನ್ನು ಬೇರೆ ಒಂದು ಖಾತೆ ಮಾಡಿ, ಇದು ಇಂಡಿಪೆಂಡೆಂಟ್ ಆಗಿರುವಂತೆ ಮಾಡಬೇಕು. ಸಿ. ಐ. ಡಿ. ಮತ್ತು ಆಂಟಿ ಕರಪ್ಷನ್ ಸೇರಿದಂತೆ ಇದು ಇಂಡಿಪೆಂಡೆಂಟ್ ಆಗಿರಬೇಕೆಂದು ಹೇಳುತ್ತೇನೆ.

ಇನ್ನು ಮಾದಕಪಾನೀಯ ವಿಷಯ ಹೇಳುವುದಾದರೆ ಮಹಾತ್ಮಾ ಗಾಂಧೀಜಿಯವರ ತತ್ವವನ್ನು ನಾನು ಪರಿಪಾಲನೆ ಮಾಡಬೇಕಾಗಿದೆ. ಇದರ ಬಗ್ಗೆ ಪ್ರೊಹಿಬಿಷನ್ ತರಬೇಕು. ಪ್ರೊಹಿಬಿಷನ್ ತೆಗೆದರೆ ದುಡ್ಡು ಬರುತ್ತದೆ. ಅದು ಸ್ಕ್ಯ್ರಾಪ್ ಮಾಡುವುದು ಬೇಡ ಎನ್ನುವುದಾದರೆ, ನಿಮಗೆ ದುಡ್ಡೇ ಪ್ರಾಧಾನ್ಯ ಎನ್ನುವುದಾದರೆ ವೇಶ್ಯಾವೃತ್ತಿಯನ್ನು ಏತಕ್ಕೆ ತೆಗೆದುಹಾಕಬೇಕು. ಆದುದರಿಂದ ನೀವು ಪ್ರೊಹಿಬಿಷನ್ ತರುವುದಾದರೆ ವೇಶ್ಯಾವೃತ್ತಿಯನ್ನೂ ಕೂಡ ತೆಗೆಯಬೇಕು. ಇದನ್ನು ನಮ್ಮ ಸರ್ಕಾರ ಮನಸ್ಸು ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಈ ಮಾದಕ ಪಾನೀಯಗಳನ್ನು ಕುಡಿಯದಂತೆ ಒಂದು ನೀತಿಯನ್ನು ಅನುಸರಿಸಬೇಕು ಎಂದು ಹೇಳುತ್ತೇನೆ.

ಇನ್ನು ಅಂಗಹೀನರ ಬಗ್ಗೆ ಹೇಳುವುದಾದರೆ ಅನೇಕರಿಗೆ ನೌಕರಿಗೆ ಹೋಗಲು ಕಾಲು ಇರುವುದಿಲ್ಲ, ಕೈ ಇರುವುದಿಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ ಯಾವ ನೌಕರಿಗೆ ಅವನು ಯೋಗ್ಯ ಇರುತ್ತಾನೋ ಅಂಥಾ ಜಾಗವನ್ನು ಕೊಟ್ಟು ಅವರಿಗೆ ಪ್ರಾಶಸ್ತ್ಯ ಕೊಡಬೇಕು. ಈ ದಿಶೆಯಲ್ಲಿ ಸರ್ಕಾರದ ಮನಸ್ಸು ಬದಲಾವಣೆಯಾಗಬೇಕು ಎಂದು ಹೇಳುತ್ತೇನೆ.

ಇನ್ನು ಯಾವುದೇ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ತೆಗೆದುಕೊಳ್ಳಲಿ, ಅದು ಇಂಜಿನೀಯರಿಂಗ್ ಆಗಲಿ ವ್ಯವಸಾಯ ಖಾತೆ ಆಗಲಿ, ಯಾವುದೇ ಆಗಲಿ ಅವನು ಪರದೇಶಕ್ಕೆ ಹೋಗಿ ತನ್ನ ಒಂದು ಕೆಲಸದಲ್ಲಿ ಹೆಚ್ಚಿನ ಜ್ಞಾನ ಪಡೆದುಕೊಂಡು ಬಂದಮೇಲೆ ಅಂಥಾವನಿಗೆ ಇಲ್ಲಿ ಒಂದು ಸ್ಪೆಷಲ್ ಅಪಾಯಿಂಟ್‌ಮೆಂಟ್ ಕೊಟ್ಟು ಅವನ ಜ್ಞಾನವನ್ನು ಉಪಯೋಗಿಸಿಕೊಳ್ಳಬೇಕು. ಅವನಿಗೆ ಸೀನಿಯಾರಿಟಿ ಇಲ್ಲ ಎಂದು ಅವನಿಗೆ ಒಂದು ಸರಿಯಾದ ಹುದ್ದೆ ಕೊಡದೇ ಹೋದರೆ ಅದು ಲೋಪವಾಗುತ್ತದೆ. ಅವನ ಜ್ಞಾನವನ್ನು ಉಪಯೋಗ ಮಾಡಿಕೊಳ್ಳಬೇಕಾದರೆ ಸೀನಿಯಾರಿಟಿ ತೆಗೆದುಕೊಳ್ಳದೆ ಡೈರೆಕ್ಟ್ ಆಗಿ ನೇಮಕ ಮಾಡಿ ಅವನ ಜ್ಞಾನವನ್ನು ಉಪಯೋಗ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. B. SAYANAK (Belgum) :—Madam Speaker, I rise to oppose Demands Nos. 3, 10, 12, 13, 15B, 35 and 36.

At the outset I want to speak on General Administration. So many members have spoken on it. In all the offices, though the office time is 10-30 A. M. nobody will be in the office by that time. When we visit to these offices, we are told that the officers have not come or that they have gone to the Minister or somewhere else. The recess is at 1 P. M. but these officers will be coming to office at 4 P. M. If this is the case, what is the use of the office time? Instructions must be issued to the officers that they must be in the office from such and such time to such and such time. The Secretaries or Ministers never pay surprise visits to any office. Let them pay surprise visits. As a result of their non-observance of office time, the common people and the agriculturists are not getting justice.

Corruption is rampant. Even after the M. L. As. approach the Secretaries, Divisional Commissioners and Deputy Commissioners not once but several times, the work is not done. If this is the fate of the M. L. As., what will be the fate of the poor and down trodden agriculturists? I heard that the officers want three W's. If they get three W's, the work will be done immediately. The three W's means wealth, wine and women.

Regarding I.A.S. officers, my friend Sri Deve Gowda said that the I.A.S. cadre should be removed. India is a federal democratic country and I am of the opinion that in the interest of the integration of the country the I.A.S. cadre must be there. Not only that, there must also be all-India cadres in respect of Engineering, Forest, Medicine, Agriculture and Education.

Regarding the ex-servicemen, you have directed the Employment Exchanges to help them. I approached the Offices of the Employment

Exchanges so many times on behalf of the ex-servicemen. But, they are not getting the required assistance or services from these exchanges. What is the use of giving instructions to the Employment Exchanges? If one pays Rs. 100 they immediately get orders. This is the fate of the Employment Exchanges.

The Government is acquiring lands from agriculturists for establishing several industries. In this connection instructions have been issued to the concerned officers to give preference to persons who have lost their lands due to acquisition. In Belgaum there is the Indian Aluminium Factory and a number of persons have given their land to the Factory. All those lands belong to the agriculturists and many young boys from these agriculturists families who have passed B.A., B.Sc., B.Com. and even Diplomas have approached the factory for employment. But they do not get jobs. On the other hand persons from Dharwar, Bijapur and Gulbarga are given preference and they are getting jobs. Therefore, what is the use of the Government giving instructions to the Aluminium Factory?

In the matter of transfers of officers, there must be a general policy. In Belgaum there is one Block Development Officer. Though I do not like generally to mention castes of officers, in this particular case I should like to mention. He is a Lingayat. He was transferred to Belgaum in the month of June. Three months he was there, he has done very good service and all the M.L. As. and even the Taluk Board Members were impressed with his work and they all wanted this person to be retained in Belgaum. But within three months of his coming, there, he was transferred to Mysore. I sent a telegram to the minister concerned and even the Divisional Commissioner was against his transfer. There is the Government Order that when a person is to be transferred within three months, the consent of the Chief Minister must be obtained. I heard that this officer who was doing some good work there, has worked for the Syndicate Congress at Bijapur and so he was transferred to Mysore. If that is the case, how many officers have you verified that they belong either to Syndicate Congress or Indicate Congress? How many persons you are going to transfer on such considerations? Though I am pleading for Marathi speaking people, I am requesting that this man should be retained in Belgaum because he is a very honest one.

Regarding pension to freedom fighters, I am sorry to say that there are so many bogus cases in Belgaum district. It is very necessary that you to appoint a committee. There are so many old persons like Sri Channappa Wali, Sri Jivanarao Yalgi and Pundalikji Kalgade who are alive and who know who is the real freedom fighter. I do not know why the Government has not seriously looked into this matter.

In regard to Kannada language, I know it is the Official Language of the State and I have no objection for it. In the border areas we are in majority.

Sri S. BANGARAPPA.—The Minority Languages Commission has stated that Mysore has done more for minorities than other States like Maharashtra.

Sri B. B. SAYANAK It is stated by the Chief Minister on the floor of the House that the Maharashtra Mysore dispute is not solved and it is pending before the Parliament. There are so many villages which have cent per cent marathi speaking population and so many other villages where 50 per cent of the population speak marathi You have said in your report that where there are more than 15 per cent of pulation speaking minority languages, they can send their application in their language if the people of the border area, that is, Belgaum, Khanapur, Chokolli send their application in marathi, they do not get any reply in marathi and their work is not done. That is the experience of the marathi people in border areas

Sri S. BANGARPPA :—If a Kannadiga sends a letter in Kannada to the Chief Minister of Maharashtra, does he send reply in Kannada ?

Sri B. B. SAYANAK :—It is not my concern.

Regarding the excise department, during the Britishers' rule in India liquor shops used to be started outside the cities. In Belgaum there were only two liquor shops. But, today the present Government which is supposed to follow the tradition of Mahatma Gandhi and which supports the father of the Nation, has given permission to start liquor shops in every lane and by-lanes. Liquor shops are opened in front of schools. I have brought this to the notice of the Deputy Commissioner but these shops are not closed. I would tell the Government that if only they had started milk booths in all these lanes, the health of young boys would have improved. Now even the school going boys and girls are consuming liquor. Is this the way to build India ? Are we thinking that by starting these liquor shops we can get more income ? We are thinking only of income. Is it a good thing on the part of the government which is running administration in the name of Mahatma Gandhi to think that income is its only concern ? Therefore, I requeest the Government to stop opening of liquor shops in the lanes and ifat all they want to have they could it outside the city of Belgaum.

The Policeman when he is in uniform he does not behave like a human being but behaves as a brute and he would beat in the street even women and children. Secondly, when there was enhancement of fees in Private colleges of Karnatak University there was agitation and student belonging to R. B. V. College of Commerce Belgaum took out a procession towards the Lingaraj College. But the police did not allow them to Proceed. Again after some time when the students of Lingaraj College took out a Procession and marched towards the R. B. V. College of Commerce the Police quietly allowed them. Such sort of discrimination is being made by the police between students of marathi college and other colleges in Belgaum.

Then Mr. Lewis, an ex-I. G. P. has constructed big bungalows at Bangalore and Belgaum and is getting about one thousand rupees as rent. I know how corrupt he was. The D. I. G. of police in Belgaum now is no doubt a very nice man. But I don't know why he has been continued there for more than five years ? Is there no other suitable Person to replace him ?

With regard to Home Guards, I would like to mention that you are taking the services of the teachers in the Home Guards services Teachers are being utilised for serving during various festivals like Mohurrum, GanaPathi festival etc. The teachers take part in these activities because of the impression they have that they would not be transferred elsewhere from Belgaum. Further if the Teachers are engaged in these activities the student community will have to suffer. Therefore I request the Government not to allow the teachers to participate in these activities. With these w rds I thank the Chair and conclude my speech.

ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು) :—ಮಾನ್ಯ ಅಧ್ಯಕ್ಷಿಣಿಯವರೇ, ಇವೊತ್ತಿನ ದಿವಸ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಇವೊತ್ತಿನ ದಿವಸ ರಾಜ್ಯದಲ್ಲಿ ಜನತೆಗೆ ಬೇಕಾಗಿರುವುದು ಉಚ್ಚಮಟ್ಟದ ಆಡಳಿತ. ಅದಕ್ಕೆ ಸಾಕಷ್ಟು ಶ್ರಮವಹಿಸಿ ಜನತೆಗೆ ಅನುಕೂಲ ಮಾಡಿಕೊಡಲು ಇಂತಹ ಅಧಿಕಾರ ಸರಕಾರಕ್ಕೆ ಕೊಟ್ಟಿದೆ. ಇದನ್ನು ಸರಕಾರ ಉತ್ತಮ ರೀತಿಯಿಂದ ನಡೆಸಿಕೊಂಡು ಬರುತ್ತಿದ್ದರೆ ಆಗ ನಮ್ಮ ರಾಜ್ಯದಲ್ಲಿ ಉತ್ತಮವಾದ ಆಡಳಿತವಿದೆ ಎನ್ನುವ ಒಂದು ಪ್ರತೀತಿ ಎಲ್ಲ ಕಡೆಗೂ ಬರುತ್ತದೆ. ಜನತೆ ಕೇಳುತ್ತಿರುವುದು ಉತ್ತಮವಾದ ಆಡಳಿತ ಮತ್ತು ರಾಜ್ಯದ ಮುಖ್ಯ ಮಂತ್ರಿಗಳು ಒಂದು ಮಂತ್ರಿಮಂಡಲವನ್ನು ಮಾಡಿಕೊಂಡು ಅವರ ಸಲಹೆಗಳನ್ನು ಪಡೆಯಲು ರಾಜ್ಯದಲ್ಲಿರುವ ನೌಕರರುಗಳ ಸೇವೆಯನ್ನು ಪಡೆಯುತ್ತಿದ್ದಾರೆ. ಇದಕ್ಕಾಗಿ ನಮ್ಮ ರಾಜ್ಯದ ಎಲ್ಲ ಜನರೂ ಹಾಗೂ ಸಂಘ ಸಂಸ್ಥೆಗಳವರು ಉತ್ತಮವಾದ ರೀತಿಯಿಂದ ಸರಕಾರಕ್ಕೆ ಸಹಾಯ ಮಾಡುವಂತೆ ನಡೆದುಕೊಂಡರೆ ನಮ್ಮ ರಾಜ್ಯ ಇತರ ರಾಜ್ಯಗಳಿಗಿಂತ ಹಿಂದೆ ಏನು ರಾಮರಾಜ್ಯ ಎಂದು ಹೇಳುತ್ತಿದ್ದರೋ ಅಂತಹ ರಾಜ್ಯ ನಮ್ಮ ರಾಜ್ಯದಲ್ಲಿ ಬಂದೀತೋ ಏನೋ ಎಂದು ಭಾವಿಸುತ್ತಾರೆ. ಇದಕ್ಕಾಗಿ ನಮ್ಮ ರಾಜ್ಯದಲ್ಲಿರುವ ಎಲ್ಲ ಗ್ರಾಮ ಪಂಚಾಯತಿಗಳವರು ಇವರಿಂದ ಹಿಡಿದು ಇತರ ಎಲ್ಲ ಸಂಸ್ಥೆಗಳೂ ರಾಜ್ಯಕ್ಕೆ ಒಳ್ಳೆಯ ಹೆಸರು ಬರುವಂತೆ ಸಲಹೆಗಳನ್ನು ಕೊಟ್ಟು ಉತ್ತಮವಾದ ಹೆಸರು ಬರುವಂತೆ ಯತ್ನ ಮಾಡಬೇಕು. ಇಂತಹ ಒಳ್ಳೆಯ ಕೆಲಸಗಳನ್ನು ಮಾಡಬೇಕಾದರೆ ನಮ್ಮ ದೇಶದ ಹೊಣೆ ಹೊತ್ತಿರುವ ಮುಖ್ಯಮಂತ್ರಿಗಳಿಗೊಬ್ಬರಿಗೇ ಅಲ್ಲ, ಅವರ ಜೊತೆಗೆ ನಮ್ಮ ಎಲ್ಲ ಶಾಸಕರುಗಳು, ಹಾಗೂ ಇನ್ನಿತರ ಅನೇಕ ಸಂಘ ಸಂಸ್ಥೆಗಳು ಉಪಯುಕ್ತವಾದ ಸಲಹೆಗಳನ್ನು ಕಾಲಕಾಲಕ್ಕೆ ಕೊಡಬೇಕು, ಇದರಲ್ಲಿ ಪಂಚಾಯತಿಯಿಂದ ಹಿಡಿದು ಎಂದರೆ ಪಟೇಲ, ಶ್ಯಾನುಭೋಗರುಗಳು ಹಾಗೂ ಇನ್ನಿತರ ಜನರ ಸಹಕಾರ ಅಗತ್ಯವಾಗಿ ನಮ್ಮ ಸರಕಾರಕ್ಕೆ ಕೊಡಬೇಕು. ಹಾಗೆ ಮಾಡಿದರೆ ಉತ್ತಮವಾದ ಆಡಳಿತವನ್ನು ನಡೆಸಲು ಸಹಾಯವಾಗುತ್ತದೆ. ಹಾಗೆ ಉತ್ತಮವಾದ ಆಡಳಿತಗಳು ನಡೆಯಬೇಕಾದರೆ ಇದರಲ್ಲಾಗುವ ನೇಮಕಗಳ ಹಾಗೂ ವರ್ಗಾವಣೆಗಳ ಕಡೆಗೆ ನಾವು ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ನೇಮಕಗಳನ್ನು ಮಾಡುವಾಗ ದೊಡ್ಡ ದೊಡ್ಡ ಪ್ರಭಾವವುಳ್ಳವರಿಗೆ ಹಾಗೂ ಇವರ ಮಕ್ಕಳಿಗೇ ನೌಕರಿಗಳು ಸಿಗುತ್ತವೆ. ನೌಕರಿಗಳನ್ನು ಕೊಡುವಾಗ ಒಂದು ಕರಾರು ಮಾಡಬೇಕು. ನೌಕರಿಗೆ ಬರುವಾತನ ತಂದೆಗೆ ಅವರು ಯಾವ ಸ್ಥಿತಿಯಲ್ಲಿದ್ದಾರೆ ? ಅವರು ದೊಡ್ಡ ವ್ಯಾಪಾರಿಗಳೇ ?

ಅಥವಾ ದೊಡ್ಡ ಜಮೀನುದಾರರ ಮಕ್ಕಳೇ ಇವನ್ನೆಲ್ಲಾ ಪರಿಶೀಲನೆ ಮಾಡಬೇಕು. ಒಬ್ಬ ಜಮೀನುದಾರನಿಗೆ 40 ಎಕರೆ ಜಮೀನುಗಳಿದ್ದು ಅವರಿಗೆ ಎರಡು ಮಕ್ಕಳಿದ್ದರೆ ಅವರಲ್ಲಿ ಒಬ್ಬರು ಸರಕಾರದ ನೌಕರಿಗೆ ಬರಲು ಅರ್ಜಿ ಹಾಕಿದರೆ ಅಂತಹವರಿಗೆ ಸರಕಾರದಲ್ಲಿ ನೌಕರಿ ಕೊಡಬಾರದು? ಏಕೆಂದರೆ ಅವರಿಗಿರುವ ಜಮೀನಿನಲ್ಲೇ ಕೆಲಸ ಮಾಡಿಕೊಂಡು ಚೆನ್ನಾಗಿ ಜೀವನ ನಡೆಸಬಹುದು. ಒಬ್ಬರು ದೊಡ್ಡ ವ್ಯಾಪಾರಿಯಾಗಿದ್ದು ಅವರಿಗೆ ಇಬ್ಬರು ಮಕ್ಕಳಿದ್ದರೆ ಅವರಲ್ಲಿ ಕೂಡ ಸರಕಾರದ ಕೆಲಸಕ್ಕೆ ಬರಬೇಕೆಂದರೆ ಅಂತಹ ಜನಕ್ಕೆ ನೌಕರಿಗಳನ್ನು ಕೊಡಬಾರದು. ಏಕೆಂದರೆ ಅವರು ವ್ಯಾಪಾರ ಮಾಡಿಕೊಂಡು ಇರಬಹುದು. ಯಾರು ಬಡಜನರಾಗಿದ್ದಾರೆ ಮತ್ತು ಜೀವನ ಮಾಡಲು ಬೇರೆ ಯಾವ ಒಂದು ಕಸಬುಗಳು ಇರುವುದಿಲ್ಲವೋ ಅಂತಹ ಜನಕ್ಕೆ ಉದ್ಯೋಗಗಳನ್ನು ಒದಗಿಸಿಕೊಡತಕ್ಕದ್ದು.

ಇವೊತ್ತು ನಮ್ಮ ರಾಜ್ಯದಲ್ಲಿ ಜಮೀನು ಇಲ್ಲದವರ ಮಕ್ಕಳು ಏನಿದ್ದಾರೆ, ಬಡ ಸರ್ಕಾರಿ ನೌಕರರ ಮಕ್ಕಳು ಏನಿದ್ದಾರೆ, ಅವರುಗಳಿಗೆ ಮೊದಲು ನೌಕರಿ ದೊರೆಯಬೇಕು. ಈ ವಿಚಾರದಲ್ಲಿ ಪ್ರತಿ ತಾಲ್ಲೂಕ್‌ನಲ್ಲಿಯೂ ಎಸ್. ಎಸ್. ಎಲ್. ಸಿ. ಪಾಸ್ ಮಾಡಿದವರು ಎಷ್ಟು ಮಂದಿ ಇದ್ದಾರೆ, ಬಿ. ಎ. ಪಾಸ್ ಮಾಡಿದವರು ಎಷ್ಟು ಮಂದಿ ಇದ್ದಾರೆ, ಇತರೇ ಪರೀಕ್ಷೆಗಳನ್ನು ಪಾಸ್ ಮಾಡಿದವರು ಎಷ್ಟು ಮಂದಿ ಇದ್ದಾರೆಂಬ ಬಗ್ಗೆ ಸರ್ವೆ ನಡೆಸಿ ಆ ಒಂದು ಲೆಕ್ಕವನ್ನು ಇಡಬೇಕು. ಇಂದು ಅಭ್ಯರ್ಥಿಗಳನ್ನು ಕೆಲಸಕ್ಕೆ ತೆಗೆದುಕೊಳ್ಳುವ ಬಗ್ಗೆ ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟಗಳಲ್ಲಿ ರೆಕ್ರೂಟ್‌ಮೆಂಟ್ ಕಮಿಟಿಗಳು ಇವೆ. ಈ ಜಿಲ್ಲಾ ರೆಕ್ರೂಟ್‌ಮೆಂಟ್ ಕಮಿಟಿಯವರು ಪ್ರತಿ ತಾಲ್ಲೂಕ್‌ವಾರು ಇಷ್ಟಿಷ್ಟು ಸೀಟುಗಳು ಎಂದು ಕೊಡದೆ ಅಭ್ಯರ್ಥಿಗಳ ಆಳತೆಗೋಲನ್ನು ನೋಡಿಕೊಂಡು. ಅವರ ಸಾಮರ್ಥ್ಯವನ್ನು ನೋಡಿಕೊಂಡು, ಅವರ ಮೆರಿಟ್‌ನ್ನು ನೋಡಿಕೊಂಡು ಕೆಲಸ ಕೊಡಬೇಕೆಂದು ಹೇಳುತ್ತೇನೆ.

ಇನ್ನು ವರ್ಗಾವಣೆ ವಿಚಾರದಲ್ಲಿಯೂ ಸಹ ಮುಖ್ಯಮಂತ್ರಿಗಳು ಒಂದು ದೊಡ್ಡ ನಿಲುವು ತೆಗೆದುಕೊಳ್ಳದೇ ಹೋದರೆ ಈ ರಾಜ್ಯದ ಆಡಳಿತಕ್ಕೆ ಕೆಟ್ಟ ಹೆಸರು ಬರಬಹುದು. ಇಂದು ನಮ್ಮ ರಾಜ್ಯದಲ್ಲಿ ಉತ್ತಮ ರೀತಿಯಿಂದ 'ಕೆಲಸ ಮಾಡುವ ಅಧಿಕಾರಿಗಳೂ ಇದ್ದಾರೆ, ಅದರಂತೆ ಕೆಟ್ಟ ಅಧಿಕಾರಿಗಳೂ ಸಹ ಇದ್ದಾರೆ. ಇಂತಹವರ ಬಗ್ಗೆ ಸರ್ಕಾರದವರು ನಿಗಾ ಇಟ್ಟು ಅವರು ಸರಿಯಾಗಿ ಕೆಲಸ ಮಾಡಲಿಲ್ಲ ಎಂದರೆ ನಿರ್ದಾಕ್ಷಿಣ್ಯವಾಗಿ ಮನೆಗೆ ಕಳುಹಿಸಬೇಕು. ಎಲ್ಲೆಲ್ಲಿ ಉತ್ತಮ ಅಧಿಕಾರಿಗಳು ಇದ್ದಾರೆ ಅವರಿಗೆ ಇನ್ನೂ ಹೆಚ್ಚಿನ ಹುದ್ದೆಗಳನ್ನು ಕೊಟ್ಟು ಅವರಿಂದ ಇನ್ನೂ ಉತ್ತಮ ರೀತಿಯಿಂದ ಕೆಲಸಗಳನ್ನು ತೆಗೆದುಕೊಳ್ಳಿ. ಯಾವ ಯಾವ ಅಧಿಕಾರಿಗಳು ತಮ್ಮ ತಮ್ಮ ಊರಿನಲ್ಲಿಯೇ ಇದ್ದುಕೊಂಡು ತಮ್ಮ ಖಾಸಗೀ ಕೆಲಸಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಿದ್ದಾರೋ ಅಂತಹವರ ಬಗ್ಗೆ ನಿಗಾ ವಹಿಸಬೇಕೆಂದು ಹೇಳುತ್ತೇನೆ. ಕೆಲವು ಕಡೆಗಳಲ್ಲಿ ಡಾಕ್ಟರ್ ಇರುತ್ತಾರೆ. ಅವರು 5 ಗಂಟೆಗೆ ಕೆಲಸ ಮುಗಿಸಿಕೊಂಡು ತಮ್ಮ ಊರಿಗೆ ಹೊರಟು ಹೋಗಿ ತಮ್ಮ ಸ್ವಂತ ಕೆಲಸಗಳ ಕಡೆಗೆ ಗಮನ ಕೊಡುತ್ತಾರೆ. ಅಂತಹ ಸಂದರ್ಭಗಳಲ್ಲಿ ಯಾರಿಗಾದರೂ ಹಾವು ಕಚ್ಚಿದರೆ ಕೂಡಲೆ ಡಾಕ್ಟರ್ ಸಿಕ್ಕುವುದಿಲ್ಲ. ಆಗ ಜನರು ಈ ಸರ್ಕಾರದ ಆಡಳಿತದಲ್ಲಿ ಡಾಕ್ಟರ್ ಸಹ ಸಮಯದಲ್ಲಿ ಸಿಗುವುದಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ ತಹಶೀಲ್‌ದಾರರು ಮತ್ತು ಬಿ. ಡಿ. ಒ. ಗಳು ಸಹ ಆಯಾ ತಾಲ್ಲೂಕ್‌ಗಳಲ್ಲಿ ಇರದೆ ತಮ್ಮ ತಮ್ಮ ಊರುಗಳಿಗೆ ಕೆಲಸ ಮುಗಿದ ಮೇಲೆ ಹೋಗುವ ಪದ್ಧತಿ ಇದೆ. ಬೇಕಾದಾಗ ಇವರುಗಳು ಸಿಗುವುದಿಲ್ಲ. ಅದರಲ್ಲಿಯೂ ಬಿ. ಡಿ. ಒ. ಗಳು ರಾಜಕೀಯದಲ್ಲಿ ಪ್ರವೇಶ ಮಾಡಿ ರಾಜಕೀಯ ಧುರೀಣರ ಜೊತೆಯಲ್ಲಿ ಸೇರಿಕೊಂಡು ಅವರು ಹೇಳಿದಂತೆ ಕೆಲಸ ಮಾಡುವುದು ನಡೆಯುತ್ತಿದೆ. ಆಗ ಜನರು ತಮ್ಮ ಮಾತು ' ಏನೂ ನಡೆಯುವುದಿಲ್ಲ ಕೇವಲ ಪ್ರಭಾವಶಾಲಿಗಳ ಮಾತು ಮಾತ್ರ ನಡೆಯುತ್ತದೆ ಎಂದು ಹೇಳಿಕೊಳ್ಳುತ್ತಾರೆ.ಯಾವ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಮತ್ತು ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡುತ್ತಾರೆ ಅಂತಹವರ ಬಗ್ಗೆ ಉತ್ತಮ

ರೀತಿಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಜನರು ಹೇಳುತ್ತಾರೆ. ಇಂದು ರಾಜ್ಯದಲ್ಲಿ ಆಹಾರ ಪರಿಸ್ಥಿತಿ ಹದಗೆಟ್ಟಿದ್ದರೆ ಅದಕ್ಕೆ ಅಧಿಕಾರಿಗಳು ಸರಿಯಾಗಿ ಲೆವಿಯನ್ನು ವಸೂಲಿ ಮಾಡದಿರುವುದು. 50 ಪರ್ಸೆಂಟ್ ಕೂಡ ಪ್ರೊಕ್ಯೂರ್‌ಮೆಂಟ್ ಆಗಿಲ್ಲ. ಇಂದು ಅಕ್ಕಿಯ ರೇಟ್ ಕ್ವಿಂಟಾಲ್‌ಗೆ 120 ರಿಂದ 130ರವರೆಗೆ ಇದೆ. ಎಷ್ಟೋಜನರು ಭತ್ತವನ್ನು ರೈತರಿಂದ ಕೊಂಡು ಅಕ್ಕಿ ಮಾಡಿಸಿ ಬೆಂಗಳೂರು ಕಡೆಗೆ ಮತ್ತು ಮಹಾರಾಷ್ಟ್ರದ ಕಡೆಗೆ ಕಳಿಸುತ್ತಿದ್ದಾರೆ, ಇದರ ಕಡೆಯೂ ಸಹ ಅಧಿಕಾರಿಗಳು ಸರಿಯಾದ ಕ್ರಮ ತೆಗೆದುಕೊಳ್ಳುತ್ತಿಲ್ಲ ; ಮತ್ತು ಲೆವಿಯನ್ನು ಸಹ ಸರಿಯಾಗಿ ವಸೂಲಿ ಮಾಡುತ್ತಿಲ್ಲ ; ಇದರಿಂದ ಬ್ಲಾಕ್‌ನಲ್ಲಿ ಅಕ್ಕಿಯ ರೇಟ್ ಜಾಸ್ತಿಯಾಗುವುದಕ್ಕೆ ಅವಕಾಶವಾಗಿದೆಯೆಂದು ಜನರಿಂದ ಕೂಗು ಬರುತ್ತಿದೆ. ಇಂಥಾದ್ದಕ್ಕೆ ಸರ್ಕಾರದವರು ಅವಕಾಶ ಕೊಟ್ಟರೆ ಸರ್ಕಾರಕ್ಕೇ ಕೆಟ್ಟ ಹೆಸರು ಬರುತ್ತದೆ. ಮುಖ್ಯವಾಗಿ ಅಧಿಕಾರಿಗಳ ಬಗ್ಗೆ ಸರ್ಕಾರ ದವರು ಬಿಗಿ ಕ್ರಮ ಅನುಸರಿಸಬೇಕು. ಅನೇಕ ಜನ ಅಧಿಕಾರಿಗಳು ತಮಗೆ ಇಲ್ಲವೇ ತಮ್ಮ ಹೆಂಡರು ಮಕ್ಕಳಿಗೆ ಹವಾ ಹೊಂದುವುದಿಲ್ಲವೆಂಬ ಕಾರಣ ಕೊಟ್ಟು ಬೇರೆ ಕಡೆಗೆ ವರ್ಗ ಕೇಳು ತ್ತಾರೆ. ಮತ್ತು ಮಂತ್ರಿಗಳ ಮತ್ತು ಎಂ. ಎಲ್. ಎ. ಗಳ ವರ್ಚಸ್ಸನ್ನು ಸಹ ಇಂತಹ ಸಂದರ್ಭ ಗಳಲ್ಲಿ ಬೀರಿಸುವುದಕ್ಕೆ ಅವರ ಹಿಂದೆ ಕೂಡಬರುತ್ತಾರೆ. ಇದರಿಂದ ಇಂದು ಮಂತ್ರಿಗಳಾದವರು ಮತ್ತು ಎಂ. ಎಲ್. ಎ. ಗಳಾದವರು ತಮ್ಮ ಸಮಯದಲ್ಲಿ ಕಾಲುಭಾಗವನ್ನು ಈ ನೌಕರರ ಸಲುವಾಗಿಯೇ ಕಳೆಯಬೇಕಾಗಿದೆ. ಈ ರೀತಿ ವರ್ಗದ ಬಗ್ಗೆ ಯಾರಾದರು ಶಿಫಾರಸ್ ಮಾಡಿಸಿದರೆ ಮುಖ್ಯಮಂತ್ರಿಗಳು ಅದಕ್ಕೆ ನಿಗಾ ಕೊಡಬಾರದು ಮತ್ತು ರಾಜ್ಯದ ಯಾವುದೇ ಭಾಗಕ್ಕೆ ಹಾಕಿದರೂ ಸಹ ಹೋಗಬೇಕೆಂದು ಅವರಿಗೆ ಹೇಳಬೇಕು. ಇಂದು ರಾಜ್ಯದಲ್ಲಿ ಎರಡು ಲಕ್ಷ ಅಥವಾ 3 ಲಕ್ಷ ನೌಕರರು ' ಏನಿದ್ದಾರೆ ಅವರೆಲ್ಲರೂ ಸಹ ರಾಜ್ಯದ ಯಾವುದೇ ಭಾಗದಲ್ಲಿ ಯಾದರೂ ಕೆಲಸ ಮಾಡಲು ತಯಾರಿರಬೇಕು. ಇಂದು ಗ್ರಾಮಮಟ್ಟದಲ್ಲಿ ಪಟೇಲರು, ತಳವಾರರು, ಗ್ರಾಮಸೇವಕರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಇವರ ಸಂಬಳಸಾರಿಗೆಯ ಬಗ್ಗೆ ಸರ್ಕಾರದವರು ಅಷ್ಟೊಂದು ನಿಗಾ ಕೊಟ್ಟಿಲ್ಲ. ಗ್ರಾಮಮಟ್ಟದಲ್ಲಿ ಸರಿಯಾಗಿ ಆಡಳಿತ ನಡೆಯಬೇಕಾದರೆ, ಗ್ರಾಮ ಸರ್ಕಾರ ಉತ್ತಮ ರೀತಿಯಿಂದ ನಡೆಯಬೇಕಾದರೆ ಅವರ ಕುಂದು ಕೊರತೆಗಳನ್ನು ಮುಖ್ಯಮಂತ್ರಿಗಳು ಬಗೆಹರಿಸಬೇಕು ಮತ್ತು ಆ ಕಡೆಗೆ ನಿಗಾ ವಹಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ ಅರಸೀಕೆರೆ :—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಸಭೆಯ ಮುಂದೆ ಮಂಡಿಸಿರುವ ರಾಜ್ಯದ ಅಬಕಾರಿ, ಪೊಲೀಸು, ವಾರ್ತಾ ಪ್ರಸಾರ ಇಲಾಖೆ ಹಾಗೂ ಇತರೇ ಡಿಮ್ಯಾಂಡ್‌ಗಳು ಏನಿವೆ, ಅವುಗಳನ್ನು ವಿರೋಧಿಸುತ್ತಾ, ಇವೊತ್ತು ನಮ್ಮ ಸಾಮಾನ್ಯ ಆಡಳಿತ ಬಹಳ ಹದಗೆಟ್ಟಿದೆ ಎಂಬುದನ್ನು ನಮ್ಮ ಅನೇಕ ಮಿತ್ರರು ಹೇಳಿದ್ದಾರೆ. ಇದರ ಬಗ್ಗೆ ನಾನು ಹೇಳುವುದು ಇಷ್ಟೆ, ಸಾಮಾನ್ಯವಾಗಿ ಆಡಳಿತ ತೀರಾ ಸಾಮಾನ್ಯವಾಗಿ ಹೋಗಿದೆ ಎಂದು. ಆ ರೀತಿ ಆಗಬಾರದು. ಇದಕ್ಕೆ ಕಾರಣಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇಂದು ಉನ್ನತ ಅಧಿಕಾರಿಗಳು ಏನಿದ್ದಾರೆ, ಅವರು ಜವಾಬ್ದಾರಿಯನ್ನು ಹೊರುತ್ತಾ ಇಲ್ಲ. ಯಾವ ಜವಾಬ್ದಾರಿ ಬಂದರೂ ಸಹ, ಸೆಕ್ರೆಟೇರಿಯಟ್‌ನಲ್ಲಿರುವ ಸೆಕ್ರೆಟರಿಗಳನ್ನು ಷರೀಕ್ ಮಾಡಿಕೊಂಡು ಮತ್ತು ಅವರನ್ನು ಹದದಲ್ಲಿ ಇಟ್ಟುಕೊಂಡು ; ಮಂತ್ರಿಗಳ ಮುಂದೆ ಚೆನ್ನಾಗಿ ಇದ್ದುಕೊಂಡು ಕೆಲಸ ಮಾಡುತ್ತಿದ್ದಾರೆಯೇ ಹೊರತು, ಜನ ಸಾಮಾನ್ಯರು ಇಂದು ಅವರನ್ನು ಹೋಗಿ ಕಾಣತಕ್ಕ ಅವಕಾಶ ಇಲ್ಲವಾಗಿದೆ. ಮತದಾರರಿಗೆ ಯಾವ ರೀತಿ ಕೆಲಸ ಮಾಡಿ ಕೊಡಬೇಕೆಂಬುದನ್ನು ಅವರು ಮರೆತಿದ್ದಾರೆಂದು ಹೇಳುತ್ತೇನೆ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಮುಖ್ಯ ಮಂತ್ರಿಗಳಿಗೆ ಜನವರಿ ತಿಂಗಳಲ್ಲಿ ಒಂದು ಪತ್ರ ಬರೆದೆ. ಕಾಮಧೇನು ಎಂಟರ್‌ಪ್ರೈಜಸ್ ಎಂಬ ಸಂಸ್ಥೆಯವರು ಸುಳ್ಳು

ಹೆಸರು ಕೊಟ್ಟು ಸಂಸ್ಥೆಯನ್ನು ರಿಜಿಸ್ಟರ್ ಮಾಡಿಸಿ ಬೇಕಾದಷ್ಟು ಅವ್ಯವಹಾರ ಮಾಡಿದ್ದಾರೆ; ರೈತರಿಂದ 2 ಲಕ್ಷ ರೂಪಾಯಿಗಳವರೆಗೆ ಹಣ ದೋಚಿದ್ದಾರೆ. ಆದ್ದರಿಂದ ಈ ಸಂಸ್ಥೆಯ ಮೇಲೆ ತಕ್ಕ ಕ್ರಮ ಕೈಕೊಳ್ಳಬೇಕೆಂದು ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದ್ದಕ್ಕೆ ಅವರಿಂದ 3 ದಿವಸಗಳಲ್ಲಿಯೇ ನನಗೆ ಒಂದು ಪತ್ರ ಬಂತು. ಇದರ ಬಗ್ಗೆ ತನಿಖೆ ಮಾಡಿ ಸೂಕ್ತ ಕ್ರಮ ಕೈಕೊಳ್ಳುವುದಕ್ಕೆ ಹೋಂ ಸೆಕ್ರೆಟರಿಯವರಿಗೆ ಕಳಿಸಿ ಕೊಟ್ಟಿದ್ದೇನೆ, ಅವರು ಸೂಕ್ತ ಕ್ರಮ ತೆಗೆದುಕೊಂಡ ಮೇಲೆ ತಕ್ಷಣ ತಮಗೆ ಪುತ್ತೆ ಕಾಗದ ಬರೆಯುತ್ತೇನೆಂದು ಅದರಲ್ಲಿ ಹೇಳಿದ್ದರು. ಅಲ್ಲಿಂದ ಇಲ್ಲಿಯವರೆಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದು ನನಗೆ ತಿಳಿಯಲಿಲ್ಲ. ಈ ಬಗ್ಗೆ ನಾನು ಹೋಂ ಸೆಕ್ರೆಟರಿಯವರಿಗೆ ಮತ್ತು ಪೊಲೀಸ್ ಕಮಿಷನರ್ ಅವರಿಗೆ ಫೋನ್ ಮಾಡಿ ಕೇಳಿದರೆ ತಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಮುಖ್ಯ ಮಂತ್ರಿಗಳೇ ಜ್ಞಾಪಕ ಮಾಡಿಕೊಂಡು ಕೇಳಬೇಕಾಗಿದೆ. ಇದು ಹೋಗಬೇಕು. ಯಾವುದೇ ಮಂತ್ರಿಗಳಿಂದ ಆ ಇಲಾಖೆಯ ಮುಖ್ಯಾಧಿಕಾರಿಗಳಿಗೆ ಯಾವುದಾದರು ವಿಷಯದ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕೆಂದು, ತಿಳಿಸಿದರೆ, ಸಂಬಂಧಪಟ್ಟ ಅಧಿಕಾರಿಗಳು ಇಂತಿಷ್ಟೇ ಅವಧಿಯೊಳಗೆ ಕ್ರಮ ಕೈಕೊಳ್ಳುವಂತಿರಬೇಕು, ಇಲ್ಲವೇ ಅದು ಏನಾಗಿದೆ ಎಂಬುದನ್ನು ಸಂಬಂಧಪಟ್ಟ ಸಚಿವರಿಗೆ ವರದಿ ಮಾಡುವ ವ್ಯವಸ್ಥೆಯನ್ನು ಸಾಮಾನ್ಯ ಆಡಳಿತದಲ್ಲಿ ಜಾರಿಗೆ ತರಬೇಕು. ಅನಾವಶ್ಯಕವಾಗಿ ತಡವಾದರೆ justice delayed is justice denied ಎನ್ನುವಂತೆ ಆಗುತ್ತದೆಂದು ತಮ್ಮ ಗಮನಕ್ಕೆ ತರುತ್ತೇನೆ.

ಇನ್ನು ಪೊಲೀಸ್ ಇಲಾಖೆಯಲ್ಲಿರುವ ಉನ್ನತ ಅಧಿಕಾರಿಗಳಲ್ಲಿ ಬಹಳ ಅತೃಪ್ತಿ ಇದೆ ಎಂಬುದನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಮುಖ್ಯಮಂತ್ರಿಗಳಿಗೆ ಹೇಳಬಯಸುತ್ತೇನೆ. ಇಂದು ಅನೇಕ ಉನ್ನತ ಅಧಿಕಾರಿಗಳು ವಿದೇಶಗಳಲ್ಲಿ ತರಪೇತಿ ಹೊಂದಿ ಬಂದಿದ್ದಾರೆ. ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಿರುವ ಈ ಅಧಿಕಾರಿಗಳ ಮನಸ್ಸಿನಲ್ಲಿ ಏನಿದೆ ಎಂದರೆ, ತಮಗೆ ಸರಿಯಾದ ಅಧಿಕಾರ ಸಿಕ್ಕಲಿಲ್ಲ, ನಮ್ಮನ್ನೆಲ್ಲಾ ಓವರ್-ಲುಕ್ ಮಾಡಿದ್ದಾರೆ ಎಂಬುದು. ಈ ಒಂದು ವ್ಯಥೆ ಅವರ ಮನಸ್ಸಿನಲ್ಲಿ ಬಂದಿದೆ. ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ, ಕಳೆದ ಒಂದು ವರ್ಷದ ಅವಧಿಯಲ್ಲಿ ಬೆಂಗಳೂರಿನಲ್ಲಿ ಅನೇಕ ಬ್ಯಾಂಕ್‌ಗಳಲ್ಲಿ ದರೋಡೆ ನಡೆದಿದೆ.

ಯಾವ ವರ್ಷವೂ ಇಷ್ಟು ದರೋಡೆ ನಡೆದದ್ದನ್ನು ನಾನು ನೋಡಲಿಲ್ಲ. ರಾಯಚೂರು, ಗುಲ್ಬರ್ಗ, ಬಿಜಾಪುರದಲ್ಲಿ ದರೋಡೆ ನಡೆದಿದ್ದರೆ ಅಲ್ಲಿ ಹೊಟ್ಟೆಗೆ ಇಲ್ಲದೆ ದರೋಡೆ ನಡೆದಿದೆ ಎಂದು ಹೇಳಬಹುದು. ಬೆಂಗಳೂರಿನಲ್ಲಿ ಕಲ್ಯಾಣನಗರದಲ್ಲಿ ಹಾಡು ಹಗಲಿನಲ್ಲಿ ದರೋಡೆ ನಡೆದಿದೆ. ಬ್ಯಾಂಕುಗಳಲ್ಲಿ ದರೋಡೆ ನಡೆದಿದೆ. ಈ ರೀತಿ ದರೋಡೆ ನಡೆಯಬೇಕಾದರೆ ಪೊಲೀಸು ಉನ್ನತ ಅಧಿಕಾರಿಗಳ ದಕ್ಷತೆಯನ್ನು ನಾವು ಪ್ರಶ್ನೆ ಮಾಡಬೇಕಾಗಿದೆ. ಇದು ಬರೀ ಅವಮಾನ ಅಷ್ಟೇ ಅಲ್ಲ, ಈ ಪೋಲೀಸ್ ಇಲಾಖೆಯ ಪೋರ್ಟ್‌ಫೋಲೀಯೋವನ್ನು ನಿರ್ವಹಿಸ ತಕ್ಕ ಮುಖ್ಯಮಂತ್ರಿಗಳ ಮೇಲೆ ಎಂತಹ ಪರಿಣಾಮವನ್ನುಂಟುಮಾಡುತ್ತದೆ ಎಂಬುದನ್ನು ಅಧಿಕಾರಿಗಳು ಅರಿತುಕೊಳ್ಳಬೇಕು. ಈ ರೀತಿ ದರೋಡೆಗಳು ನಡೆದರೆ ಜನಸಾಮಾನ್ಯರ ಮೇಲೆ ಏನು ಪರಿಣಾಮವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಪೊಲೀಸ್ ಅಧಿಕಾರಿಗಳು ರಾಜ್ಯದ ಸೇವಕರು, ನಾವು ಕಾನೂನು ಮತ್ತು ಕಟ್ಟಲೆಗಳನ್ನು ನಿರ್ವಹಿಸತಕ್ಕ ಅಧಿಕಾರಿಗಳು ಎನ್ನುವುದನ್ನು ಮರೆತು ತಮ್ಮ ಸ್ವಪ್ರತಿಷ್ಠೆಯನ್ನು ಪ್ರತಿಬಿಂಬಿಸುವ ಅಧಿಕಾರಿಗಳಾಗಿದ್ದಾರೆ. ಮೊನ್ನೆತಾನೆ ಒಬ್ಬರು ಪತ್ರಿಕೋದ್ಯಮಿಯನ್ನು ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಅವರು ಹೀನಾಮಾನ ಮನಸ್ಸೋಚ್ಛೆ ಬೈಯುದಿರತಕ್ಕ ನಿದರ್ಶನಗಳಿವೆ. ನಾನು ಇಲ್ಲಿದ್ದೇನೆ, ನಿನ್ನ

ಚರ್ಮವನ್ನು ಸುಲಿಸುತ್ತೇನೆ ಎನ್ನುವ ಹಂತಕ್ಕೆ ಪೋಲೀಸ್ ಅಧಿಕಾರಿಗಳು ಹೋಗಿದ್ದಾರೆ. ಸಮಾಜವಾದವನ್ನು ಪ್ರತಿಬಿಂಬಿಸತಕ್ಕ ನಮ್ಮ ರಾಜ್ಯ ಪೋಲೀಸರಾಜ್ಯ ಆಗಬಾರದು. ಹಿಂದೆ ನಮ್ಮ ದೇಶದಲ್ಲಿ ಬ್ರಿಟಿಷರು ಇದ್ದಾಗಲೂ ಸಹ ಪೋಲೀಸನವರು ಇಷ್ಟೊಂದು ಹೀನಾಯವಾಗಿ ಮರ್ಯಾದೆಯಿಲ್ಲದೆ ಮಾತನಾಡಿರಲಿಲ್ಲ. ಉನ್ನತ ಮಟ್ಟದ ಪೋಲೀಸ್ ಅಧಿಕಾರಿಗಳು ಸರ್ಕಲ್ ಇನ್ಸ್‌ಪೆಕ್ಟರ್‌ಗಳಿಗೆ ಮೇಲ್ಪಟ್ಟು ಇರತಕ್ಕವರು ಸರಿಯಾದ ರೀತಿಯಲ್ಲಿ ವರ್ತನೆ ಮಾಡುತ್ತಿಲ್ಲ. ಅವರು ಸಾರ್ವಜನಿಕರು ನಮ್ಮ ಸಹೋದರರು ಎಂದು ತಿಳಿದುಕೊಂಡು ಅವರ ಕ್ಷೇಮಾಭಿವೃದ್ಧಿ ನೋಡತಕ್ಕ ಮನೋಭಾವ ಅವರಲ್ಲಿರಬೇಕು. ಅವರ ಕಷ್ಟಗಳು ಏನಿವೆ ಎಂಬುದನ್ನು ನೋಡುವ ಮನೋಭಾವ ಬರಬೇಕು ಎಂದು ನಾನು ಹೇಳುತ್ತೇನೆ.

ಐ ಎ ಎಸ್ ಅಧಿಕಾರಿಗಳು ನಮ್ಮ ಗೆಳೆಯರು. ಐ ಎ ಎಸ್ ಅಧಿಕಾರಿಗಳಲ್ಲಿ ಉತ್ತಮರಾದ ಅಧಿಕಾರಿಗಳು ಇದ್ದಾರೆ. ಅಂಥವರು 3–4 ಜನ ಇರಬಹುದು. ಜನಸಾಮಾನ್ಯರ ಬಗ್ಗೆ ಅಭಿಮಾನವನ್ನು ಇಟ್ಟುಕೊಂಡಿರತಕ್ಕವರು ಇದ್ದಾರೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಒಂದು ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ಕಮರ್ಷಿಯಲ್ ಟ್ಯಾಕ್ಸ್ ಕಮಿಷನರ್ ಅವರು ಬಹಳ ಚತುರರು, ಅಂಥವರನ್ನು ತೆಗೆದು ಬೆಂಗಳೂರು ಡೈರಿಗೆ ಹಾಕಿದ್ದಾರೆ ಎಂದು ಹೇಳಿದರು. ಇದು ಪತ್ರಿಕೆಯಲ್ಲಿ ವರದಿಯಾಗಿದೆ, ಅವರು ಹಾಗೆ ಹೇಳಲಿಲ್ಲ. ಈಗ ಕಮರ್ಷಿಯಲ್ ಟ್ಯಾಕ್ಸ್ ಕಮೀಷನರ್ ಅವರು ಇದ್ದಾರೆ ಅವರು ಅತ್ಯಂತ ದಕ್ಷ ಅಧಿಕಾರಿಗಳು ಎಂದು ನಾನು ಹೇಳಬಯಸುತ್ತೇನೆ. ವೀರರಾಜ ಅರಸ್ ಮತ್ತು ಬಾಲಸುಬ್ರಹ್ಮಣ್ಯ ಅವರು ಉನ್ನತ ಅಧಿಕಾರಿಗಳು, ಉತ್ತಮವಾದ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಜನಸಾಮಾನ್ಯರ ಬಗ್ಗೆ ಅಭಿಮಾನವುಳ್ಳವರಾಗಿದ್ದಾರೆ. ಮತ್ತು ಸತ್ಯಸಂಧರಾಗಿರತಕ್ಕ ಜನ 4–6 ಜನ ಇದ್ದಾರೆ. ಅಂಥವರ ಬಗ್ಗೆ ಸರ್ಕಾರ ಉತ್ತೇಜನ ಕೊಡಬೇಕು. ಉತ್ತಮರಾಗಿರತಕ್ಕ ಅಧಿಕಾರಿಗಳನ್ನು ಯಾವುದೋ ಸಂದಿಗ್ಧ ಪರಿಸ್ಥಿತಿಗೆ ಸಿಕ್ಕಿಸಿ ನಮ್ಮ ರಾಜ್ಯದ ಹೊರಗಡೆ ಕಳುಹಿಸುತ್ತಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಉತ್ತಮರಾಗಿರತಕ್ಕ ಅಧಿಕಾರಿಗಳನ್ನು ಹೊರಗಡೆ ಕಳುಹಿಸಿ, ಹೊರಗಡೆಯ ಅಧಿಕಾರಿಗಳು ಮೇಲಕ್ಕೆ ಬರತಕ್ಕ ಪರಿಸ್ಥಿತಿ ಆಗಬಾರದು. ಶ್ರೀಮಾನ್ ಆಮುರ್ಗಂ ಅವರು ಮಾತನಾಡುತ್ತಾ ನಮ್ಮ ರಾಜ್ಯದ ಉತ್ತಮ ಅಧಿಕಾರಿಗಳನ್ನು ಹೊರಗಡೆ ಕಳುಹಿಸಿ ಇನ್ನೊಬ್ಬರು ಬರುವ ವ್ಯವಸ್ಥೆ ನಡೆಯುತ್ತಿದೆ. ಆರೀತಿ ಆಗಬಾರದು, ಧಕ್ಷರಾದಂತಹ ಅಧಿಕಾಗಳಿಗೆ ಪ್ರೋತ್ಸಾಹ ಕೊಡಬೇಕು, ಒಳ್ಳೆಯ ನೀತಿವಂತರಾದ ಅಧಿಕಾರಿಗಳು ಸೇವೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಬೇಕೆಂದು ಹೇಳಿದರು ನನ್ನ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಒಂದು ವಿಷಯವನ್ನು ನಾನು ಮುಖ್ಯ ಮಂತ್ರಿಗಳಗಮನಕ್ಕೆ ತರುತ್ತೇನೆ.

Sri H. D. DEVEGOWDA.—My friend Sri Siddappa referred to the work of the Commercial Tax Commissioner. He is one of the honest and efficient officer who has got the highest integrity. I can dare say that. Sri Veeraj Urs has served as a Deputy Commissioner in Hassan District. I have seen the report in the Deccan Heralad. Sri Thimmappa has made a remark against the Excise Commissioner but not against Sri Veeraraj Urs.

ಶ್ರೀ ಎಚ್. ಎಸ್. ಸಿದ್ದಪ್ಪ :—ಎಕ್ಸೈಜ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಅಬ್ಕಾರಿಯಿಂದ ನಮ್ಮರಾಜ್ಯಕ್ಕೆ ಸಾಕಷ್ಟು ಆದಾಯ ಬರುತ್ತದೆ. ಈಗ ಸರ್ಕಾರದವರು ನಮ್ಮ ರಾಜ್ಯದಲ್ಲಿ ಟೆಂಪರೆನ್ಸ್ ಕಮಿಟಿಯನ್ನು ಮಾಡಿದ್ದಾರೆ. ಆ ಕಮಿಟಿಯ ಸದಸ್ಯರು ಯಾವುದಾದರೂ ಬಾರ್‌ನಲ್ಲೋ ಅಂಗಡಿಯಲ್ಲಿಯೋ ಕುಳಿತುಕೊಂಡಿರುತ್ತಾರೆ. ಆದರಲ್ಲಿ ಕುಡಿಯುವವರು ಎಷ್ಟೋ

ಜನ ಇದ್ದಾರೆ. ಅಂಥವರು ಜನಗಳಿಗೆ ಕುಡಿಯಬೇಡಿ ಎಂದು ನೀತಿಯನ್ನು ಹೇಳುತ್ತಾರೆ. ಈಗಿನ ಪ್ರೊಹಿಬಿಷನ್ ಪಾಲನೆಯಲ್ಲಿ ಟೆಂಪರೆನ್ಸ್ ಕಮಿಟಿಯ ಅವಶ್ಯಕತೆ ಇಲ್ಲ. ಅದನ್ನು ರದ್ದು ಮಾಡಬೇಕು ಎಂದು ನಾನು ಹೇಳುತ್ತೇನೆ.

ಸುದ್ದಿ ಮತ್ತು ಪ್ರಸಾರ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ವಿಷಯವನ್ನು ನಾನು ಹೇಳುತ್ತೇನೆ. ಪ್ರಪಂಚದಲ್ಲಿ ಬಹುತೇಕ ಪತ್ರಿಕೆಗಳು ವರದಿ ಮಾಡಿದ್ದನ್ನು ತಿಳಿಸ ತಕ್ಕ ಒಂದು ಜಾಗದಲ್ಲಿ ಒಬ್ಬ ಮೂರನೆಯ ದರ್ಜೆಯ 1 ಡಿವಿಜನ್ ಕ್ಲಾರ್ಕನ್ನು ಕೂಡಿಸಿದ್ದಾರೆ. ಸುದ್ದಿಪ್ರಸಾರದ ಇಲಾಖೆ ಅತ್ಯುತ್ತಮವಾಗಿ ಕೆಲಸ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿಯೊಬ್ಬರಿಗೂ ಗೊತ್ತಾಗುವ ಹಾಗೆ ಸರ್ಕಾರ ಏನೇನು ಮಾಡುತ್ತದೆ, ಸರ್ಕಾರದವರು ಏನು ಏನು ಯೋಜನೆಗಳನ್ನು ಮಾಡುತ್ತಾರೆ, ಅದರಲ್ಲಿ ಜನಗಳ ಪಾತ್ರ ಏನು ಎನ್ನುವ ಬಗ್ಗೆ ಜನಗಳನ್ನು ಹೊಡೆದೆಬ್ಬಿಸುವ ರೀತಿಯಲ್ಲಿ ಸುದ್ದಿಪ್ರಸಾರ ಇಲಾಖೆಯವರು ಕೆಲಸ ಮಾಡಬೇಕು. ಆ ಇಲಾಖೆಯಲ್ಲಿ ಹೆಂಡತಿ ಹೆಸರಿನಲ್ಲಿ ಒಂದು ಪತ್ರಿಕೆಯನ್ನು ಹೊರಡಿಸತಕ್ಕ ಒಬ್ಬ ಅಧಿಕಾರಿ ಇದ್ದಾರೆ. ಅಡ್ವರ್ಟೈಸ್‌ಮೆಂಟ್‌ಗಳನ್ನು ತಮ್ಮ ಹೆಂಡತಿ ಹೆಸರಿನಲ್ಲಿ ನಡೆಯುವ ಪೇಪರಿಗೆ ಕೊಡುತ್ತಾರೆ. ಸರ್ಕಾರದವರು ಸಣ್ಣ ಪತ್ರಿಕೆಗಳಿಗೆ ಉತ್ತೇಜನ ಕೊಡಬೇಕು. ಸಣ್ಣ ಸಣ್ಣ ಪತ್ರಿಕೆಗಳಿಗೆ ಸಾಕಷ್ಟು ಜಾಹಿರಾತು ಸುದ್ದಿ ಕೊಡಬೇಕು, ದೊಡ್ಡ ಪತ್ರಿಕೆಗಳಿಗೆ ಕೊಡಬಾರದು ಎಂದು ಅಲ್ಲ. ಅವುಗಳಿಗೆ ಉತ್ತೇಜನ ಕೊಡಬೇಕು. ಸಣ್ಣ ಸಣ್ಣ ಪತ್ರಿಕೆಗಳಿಗೆ ಕಂಪ್ಲೀಟ್ ಇನ್‌ಫರ್ಮೇಷನ್‌ಅನ್ನು ಬ್ರಾಡ್‌ಕ್ಯಾಸ್ಟಿಂಗ್‌ಗೆ ಕೊಟ್ಟು ಚೆನ್ನಾಗಿ ಪ್ರಸಾರ ಮಾಡಿ ಜನಗಳಿಗೂ ಸರ್ಕಾರಕ್ಕೂ ಒಂದು ನಿಕಟ ಬಾಂಧವ್ಯ ಬೆಳೆಯುವಂತೆ ಪ್ರಸಾರ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri SUBHAS ASTURE. (Bhalki):—Madam Speaker, at the outset I recall the words of late Sardar Patel who had once told that the civil servants are the steel framework of the administration. If we examine this statement minutely, I am afraid whether the present set up is worth its name. In the General Administration Department, the Police and the Revenue Departments occupy a most important place. In the Police Department, there are several cases wherein injustice is done, delay is caused and hardship is imposed upon the people. For instance, in the cases which are placed before the Courts, the prisoners for months together they are treated as undertrial prisoners and at the stage of filing the charge-sheet and evidence, a lot of delay is caused. Years are spent only at the evidence level and at filing the charge-sheet. Whether the accused is guilty or not, before the guilty is brought home, the person is kept in the jail for years together and months together. This is a great injustice. Therefore limitation should be imposed that within so much of time the charge-sheet should be filed and the evidence should be completed so that the person's fate which is hanging whether he is guilty or not should be decided as early as possible.

One more suggestion is in the Police Department generally if any person has got any complaint to make against an officer, and when he files a complaint or makes an allegation to redress his grievances, the superior officer sends that application or complaint to the very officer against whom the allegations are made. That is very bad. If such complaints are made, they should be investigated by an independent

Officer, but not by the person against whom the allegations are made. One more important thing I want to suggest and that is when allegations are made against any Police Officers, atleast 5 per cent of the cases may be investigated by the Inspector General of Police, 10 per cent by the Deputy Inspector General of Police and 15 to 20 per cent by the Superintendent of Police. They should examine the complaints made against the subordinate officers. But on the other hand the complaints/ made are not being enquired into by these officers themselves and they are being sent to the lower officers. Whenever such complaints are made to the higher officers, these complaints are again sent back to the District Officers, the District Officers in turn to the Superintendent of Police, the Superintendent of Police in turn to the Inspector of Police and the Inspector of Police in turn to the Sub-inspector. The purpose of making a complaint against the officers will not be served if the complaints are sent to person to person. If the complaint, on the other hand, is sent to the person against whom it made, the person who has sent that complaint will be harassed and put to a lot of trouble by the officer. The ultimate result would be that he becomes his enemy and as long as that officer is there, the man who made the complaint will not be happy and will be in trouble. Therefore these allegations and complaints should be entrusted to an independent officer who should conduct an enquiry and submit his report. The highest officers of the State should at least decide some percentage of the cases. The Inspector General of Police should decide 5 per cent of the cases, the Deputy Inspector General of Police should decide 10 per cent of the cases and the Superintendent of Police should decide 15 per cent of the cases. They should go to the spot, enquire into the allegations and give their report. If they do so, the subordinate officers will have some fear with the result there will be some honesty and integrity among the Police Officers.

Mr. Deputy Speaker in the chair

The bulk of the Constables are illiterates and they do not know even writing and reading. Sometimes they simply put their signatures. Therefore, a minimum qualification of Metriculation may be fixed for these Constables. This should be made compulsory. If we want honesty and integrity from the Officers, they must be given adequate facilities. Their children, and their aged parents should be looked after by the State Government. Their salary should be enhanced. You must keep them in a good position so that they must feel they are given adequate facilities and they need not indulge in such bad activities. Therefore I suggest that the pay of the Sub Inspector should be raised from Rs. 175 to 400 to 450/- per month. The same salary is being paid to the Sub-Inspectors of the Central Government.

I would like to suggest one more thing. Whoever may be in-charge of the Home Department, whether it may be Chief Minister, or an independent Minister to be in-charge of the Home Department, there should be one Deputy Secretary of the Cadre of Superintendent of Police, to inform the Minister concerned about the various activities going on the

Department so that the man at the helm of affairs should be in touch with the day to day affairs of the Department

As par as the Revenue Department is concerned, the same thing continues here also. There is no time limit for the disposal of the cases. There are instances wherein even more than 5 to 7 years had elapsed for the disposal of the cases. Cases are pending before the Deputy Commissioners, and Assistant Commissioners for a number of years. These officers here-after will have to decide the cases arising out of the Land Revenue Act and various other Acts. They are already over burdened with a number of cases. There are several instances where in the cases are adjourned for months together. Sometimes it so happens that the Bench Clerk comes and tells the Advocates waiting for the case that the Deputy Commissioner has gone urgently to inspect a village or to inspect the Taluk Board Office and so on and so forth, and the cases are adjourned for future dates. The Advocate sometimes have to wiat for more than 2 to 3 hours for the arrival of the Deputy Commissioner or the Assistant Commissioner. If the reply comes that they have gone out, think of the position of the Advocates and the clients. This sort of harassment should be stopped. Therefore. I suggest that Additional Deputy Commissioners and the Assistant Commissioners should be posted for this work and the regular Deputy Commissioners and the Assistant Commissioners should be left free to attend to administrative and development activities. They should not be given the judicial cases to decide upon. The officers of the Department are not ready to take or share the responsibility of anything that happens in the Department. There are various instances which have come to my notice that the Deputy Commissioner tries to shift his responsibility on the Assistant Commissioner, the Assistant Commissioner on the Tahasildar and the Tahasildar on the Clerk. Ultimately the poor clerk will be held responsible for all the omissins and commissions. If any mistake is done, the senior officer should be held responsible instead of the poor clerks. What a poor clerk can do? The Officer is there to look into everything. How a poor clerk is responsible for any omissions and commission?

There are a number of I. A. S. Officer in the State. As far as my experience goes I can say they are the must inexperienced people.

I. A. S people are posted for six months or three months, to look after the of R. I. but they never attend to that work. They simply sit in the office. An I A S. Officer must work for three years as Tashildar and for five years as Assistant Commissionere and then only he should be promoted for the cadre of Deputy Commission r, because the Deputy Commissioner is the key of the district administration. Therefore, after only gaining so much experience, an sfficer should be placed in charge of the Deputy Commissioner's duties ond not before it.

Now, Sir, I would like to talk a few words about the drought condition which is prevailing in my district. At the outset, I won't say that the work taken up is more then sufficient. Only 16% is employed as labourers. At least 50 to 60 per cent of the population are in need of the jobs. Therefore, we should ask for more relief works instead of saying that Government has not done anything. I would like to compliment the officers, especially P.W.D. officers, who are doing very good work in connection with the relief operations in the drought affected areas. I wish to appreciate the work that the M.S.E.B. has done specially the 36 kilometers line drawn between Karanji and Majra...

MR. DEPUTY SPEAKER :—This does not come under the Demands under discussion.

SRI SUBASH ASTURE :—I wish to speak about one or two points more. There is rise of the prices of articles in the recent days and this fact connot be denied. So many speakers inside and outside the House have made capital out of this. For the increase of prices there are several reasons...

MR DEPUTY SPEAKER :—The question is whether the matter which has been raised by the non-member comes under the Demands under discussion to-day. He cannot bring anything under the Sun here.

SRI SUBASH ASTURE :—It is a very important thing.

MR. DEPUTY SPEAKAR :—So many things are very important but they must come under the demand under discussion, Now he will please conclude his speech.

SRI SUBASH ASTURE :—In almost all countries like America and U. K., there was rise in the prices in the transition period, but always prices are controlled by the supply and demand theory. So much money is put in circulation by way of wages....

MR. DEPUTY SPEAKER :—How could the Hon. Member speak on food and civil Supplies? I have to come in the way because he is speaking on things which are not within the scope of to-day's discussions. Does he mean that I can allow him to speak anything under the sun?

SRI SUBASH ASTHURE:—Supporting this demand, I conclude my speech and I thank the Deputy Speaker for giving me an opportunity to speak.

ಶ್ರೀ ಹಂಜಿ ಶಿವಣ್ಣ (ತರೀಕೆರೆ) :—ಸನ್ಮಾನ್ಯ ಉಪಾಧ್ಯಕ್ಷರೇ : ಈ ದಿವಸ ನಮ್ಮ ಮುಂದೆ ಇರತಕ್ಕ ಬೇಡಿಕೆಗಳು ಬಹಳ ಮುಖ್ಯವಾದವುಗಳು. ಇವುಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತ ಕೆಲವು ವಿಷಯುಗಳನ್ನು ಸರ್ಕಾರದವರ ಗಮನಕ್ಕೆ ತರಬಯುಸುತ್ತೇನೆ.

ಜನರಲ್ ಅಡ್ಮಿನಿಸ್ಟ್ರೇಷನ್ ಬೇಡಿಕೆ ಏನಿದೆ ಇದು ಬಹಳ ಪ್ರಾಮುಖ್ಯವಾದ ಬೇಡಿಕೆ. ಈ ದಿವಸ ದೇಶದಲ್ಲಿ ಎಲ್ಲಿ ನೋಡಲಿ ಆಡಳಿತ ಕುಸಿದು ಬೀಳುತ್ತಿದೆ. ಅಧಿಕಾರಿಗಳಲ್ಲಿ ಅದ್ಯಕ್ಷತೆ

ಅಭಾವವಿದ್ದರೆ ಇನ್ನೊಂದು ಕಡೆ ಲಂಚದ ಹಾವಳಿ ಮೇರೆ ಮೀರಿದೆ. ಜನರು ಬಹಳ ಕಷ್ಟಕ್ಕೆ ತುತ್ತಾಗಿದ್ದಾರೆ, ಕಣ್ಣೀರನ್ನು ಇಡುತ್ತಿದ್ದಾರೆ. ಇದನ್ನು ಸರ್ಕಾರದವರು ಹೇಗಾದರೂ ಮಾಡಿ ನಿರ್ಮೂಲ ಮಾಡಬೇಕೆಂದು ನಾನು ಕಡ್ಡಾಯವಾಗಿ ಸರ್ಕಾರದವರಲ್ಲಿ ಮನವಿ ಮಾಡಿಕೊಳುತ್ತೇನೆ. ಅನೇಕ ಅಧಿಕಾರಿಗಳು ತಮ್ಮ ಅಧಿಕಾರವನ್ನು ಸಾಧ್ಯವಾದಷ್ಟೂ ದುರುಪಯೋಗ ಪಡಿಸಿ ಕೊಳ್ಳುತ್ತಿದ್ದಾರೆ. ಆದರೆ ಒಳ್ಳೆಯ ಅಧಿಕಾರಿಗಳಿರುವುದು ಬಹಳ ಅಪರೂಪ. ದೊಡ್ಡ ದೊಡ್ಡ ಹುದ್ದೆಗಳನ್ನು ಹಿಡಿದಿರತಕ್ಕ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ತಮ್ಮ ಹೊಣೆಯನ್ನು ಬೇರೊಬ್ಬರ ಮೇಲೆ ಹಾಕಿ ತಾವು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಹೀಗಾಗಿ ಜನರು ಕಷ್ಟನಷ್ಟಗಳಿಗೆ ಗುರಿಯಾಗುತ್ತಿದ್ದಾರೆ. ಈ ದಿವಸ ತಾಲ್ಲೂಕ್ ಅಫೀಸುಗಳ ಬಗ್ಗೆ ಮತ್ತು ಈ ಎನ್. ಇ. ಎಸ್. ಆಫೀಸುಗಳ ಮೇಲೆ ಜಿಲ್ಲಾಧಿಕಾರಿಗಳ ನಿಗಾ ಲೇಶಾಂಶವೂ ಇಲ್ಲ. ಅದರಿಂದ ಅಲ್ಲಿನ ಕೆಲಸಕಾರ್ಯಗಳೆಲ್ಲಾ ಬಹಳ ಅವ್ಯವಸ್ಥೆಯಲ್ಲಿ ನಡೆಯುತ್ತಿವೆ. ಅಂಥಾ ಅಧಿಕಾರಿಗಳಿಗೆ ಸರ್ಕಾರದವರು ಮಾನ್ಯತೆ ಕೊಡಬಾರದು ಮತ್ತು ಅವರಿಗೆ ಸೂಕ್ತ ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರದವರು ಸೂಚಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಪೊಲೀಸ್ ಇಲಾಖೆಯ ಬಗ್ಗೆ ಎರಡು ಮಾತುಗಳನ್ನಾಡಬಯಸುತ್ತೇನೆ. ನಮಲ್ಲಿ ಪೊಲೀಸ್ ಸ್ಟೇಷನ್ನಿನಲ್ಲೇ ಎರಡು ಕೊಲೆಗಳಾದವು. ಅವುಗಳನ್ನು ಅಲ್ಲಿನ ಪೊಲೀಸ್ ಇನ್‌ಸ್ಪೆಕ್ಟರು ಮತ್ತು ಪೊಲೀಸ್ ಸಬ್ ಇನ್‌ಸ್ಪೆಕ್ಟರುಗಳು ಸೇರಿಕೊಂಡು ಮುಚ್ಚಿ ಹಾಕಿದ್ದರು. ಆದರೆ ಆ ಕೇಸುಗಳು ಸಿ.ಐ.ಡಿ. ಇಲಾಖೆಯವರ ದಕ್ಷತೆಯಿಂದ ಬೈಲಿಗೆ ಬಂದವು. ಕಡೂರು ಪೊಲೀಸ್ ಸ್ಟೇಷನ್ನಿನಲ್ಲಿದ್ದ ಒಬ್ಬ ಸಬ್ ಇನ್‌ಸ್ಪೆಕ್ಟರು ತನ್ನನ್ನು ಯಾರೂ ಕೇಳತಕ್ಕವರಿಲ್ಲ ಎಂದು ಒಬ್ಬ ಹಳ್ಳಿಯವನನ್ನು ಸ್ಟೇಷನ್ನಿನಲ್ಲೇ ಹೊಡೆದು ಸಾಯಿಸಿದ ನಂತರ ಆ ಹೆಣವನ್ನು ಅಲ್ಲಿಗೆ 20 ಮೈಲಿ ದೂರದಲ್ಲಿರುವ ಕಾಡಿನಲ್ಲಿ ತೆಗೆದುಕೊಂಡು ಹೋಗಿ ಹೂತುಹಾಕಿಸಿದ್ದ. ಅದನ್ನು ಹೇಗೋ ಮಾಡಿ ಸಿ.ಐ.ಡಿ. ಪೊಲೀಸರು ಪತ್ತೆ ಮಾಡಿದರು. ಆದರೆ ಅವನನ್ನು ಉಳಿಸಿಕೊಳ್ಳಲು ಅಲ್ಲಿನ ಪೊಲೀಸ್ ಅಧಿಕಾರಿಗಳು ಅವನ ಬಗ್ಗೆ ಇಂಡಿಯನ್ ಪಿನಲ್‌ಕೋಡಿನ ಸೆಕ್ಷನ್ 302ರ ಪ್ರಕಾರ ಕೇಸನ್ನು ರಿಜಿಸ್ಟರ್ ಮಾಡಿದರೆ ಅವನನ್ನು ಜಾಮೀನ್ ಮೇಲೆ ಬಿಡಿಸುವುದಕ್ಕೆ ಆಗುವುದಿಲ್ಲ ಎಂದು ಬೇರೆ ಸೆಕ್ಷನ್‌ಗಳನ್ನು ಹಾಕಿ ಅವನನ್ನು ಹೊರಗಡೆಗೆ ಬಿಡಿಸಿದ್ದಾರೆ. ಹಾಗೇ ನಮ್ಮ ತಾಲ್ಲೂಕಿನಲ್ಲಿ ಲಿಂಗದಹಳ್ಳಿಯ ಒಬ್ಬ ವ್ಯಕ್ತಿಯನ್ನು ಸ್ಟೇಷನ್ನಿಗೆ ಎಳೆತರಿಸಿ ಅವನ ಮರ್ಮ ಸ್ಥಳಗಳಿಗೆಲ್ಲಾ ಹೊಡೆದು ಬೆಂಕಿ ಹತ್ತಿಸಿ ಅವನು ಸತ್ತ ನಂತರ ಅವನನ್ನು ಹೂತುಹಾಕಿದರು. ಸಿ. ಐ. ಡಿ. ಅವರಿಂದ ಇದೂ ಕೂಡ ಬೈಲಿಗೆ ಬಾತು. ಆದರೆ ಹೀಗೆ ಯಾರು ತಪ್ಪು ಮಾಡಿದ್ದಾರೋ ಅವರನ್ನು ಉಳಿಸುವುದಕ್ಕೆ ಪ್ರಯತ್ನ ಮಾಡತಕ್ಕ ಅವರ ಮೇಲಧಿ ಕಾರಿಗಳೇನಿದ್ದಾರೆ ಅವರನ್ನೂ ಕೂಡ ತಪ್ಪಿತಸ್ಥರೆಂದೇ ನಿರ್ಧಾರ ಮಾಡಿ ಅವರ ಮೇಲೂ ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಅಷ್ಟೇ ಅಲ್ಲ, ಇವರ ಬಗ್ಗೆ ಇನ್ನೂ ಉಗ್ರ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ತಾಲ್ಲೂಕುಗಳಲ್ಲಿ ಈ ಹೊತ್ತು ಲಂಚದ ಹಾವಳಿಯನ್ನು ಹೇಳವುವಕ್ಕಾಗದು. ದುಡ್ಡು ಕೊಡದಿದ್ದರೆ ಯಾವ ಕೆಲಸವೂ ಆಗುವುದಿಲ್ಲ. ಜನರು ಸಾಯುತ್ತಿದ್ದಾರೆ. ಅವರನ್ನು ಕೇಳ ತಕ್ಕವರೇ ಇಲ್ಲ. ಅವರು ಬಂದು ಸುಮ್ಮನೆ ನಮ್ಮಲ್ಲಿ ಕಾಡುತ್ತಿದ್ದಾರೆ. ಇನ್ನು ಸರ್ಕಾರದವರು ಈ ವಿಚಾರದಲ್ಲಿ ತಕ್ಕ ಕ್ರಮಗಳನ್ನು ಕೈಗೊಳ್ಳದಿದ್ದರೆ ಅಧಿಕಾರಿಗಳನ್ನು ಜನರು ಇನ್ನು ಸುಮ್ಮನೆ ಬಿಡುವುದಿಲ್ಲ.

ಏಕೆಂದರೆ ಇದು ಎಲ್ಲೆಲ್ಲೂ ಕಾಳಸಂತೆಯಿದೆ. ತಾಲ್ಲೂಕು ಆಫೀಸು, ಡಿಸ್ಟ್ರಿಕ್ಟ್ ಆಫೀಸು ಮತ್ತಿತರ ಎಲ್ಲಾ ಆಫೀಸುಗಳಲ್ಲೂ ಪ್ರಾಮಾಣಿಕತೆ ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಇನ್ನೂ ಎರಡು ಮಾತು ಹೇಳುತ್ತೇನೆ. ಕೆಲವು ಕಡೆ ಉದ್ದೇಶಪೂರ್ವಕವಾಗಿ ಒಂದೇ ಕೋಮಿಗೆ ಸೇರಿದವರನ್ನು ಮತ್ತು ತಮಗೆ ಬೇಕಾದವರನ್ನು ನೇಮಕಮಾಡುವುದು ವಾಡಿಕೆಯಾಗಿದೆ. ಇದನ್ನು ಆದಷ್ಟು ತಪ್ಪಿಸಬೇಕು. ಎಲ್ಲರಿಗೂ ಸಮಾನವಾದ ಅವಕಾಶ ಕಲ್ಪಿಸಬೇಕು.

ರಾಜಕೀಯ ಸಂತ್ರಸ್ಥರಿಗೆ ಈಗ ಮಾಸಾಶನ ಕೊಡುವ ಪದ್ಧತಿಯಿದೆ. ಇದರ ಬಗ್ಗೆ ಒಂದು ಅಂಶ ಹೇಳಬೇಕಾಗಿದೆ. ಕೆಲವು ರಾಜಕೀಯ ಸಂತ್ರಸ್ಥರಿಗೆ ಮಾಸಾಶನ ಕೊಡುವಾಗ ರಿಕಾರ್ಡ್ ಮಾಡಿ ತೀರ್ಮಾನಮಾಡಲು ಎರಡು ಮೂರು ವರ್ಷವಾಗುತ್ತಿದೆ. ಒಬ್ಬ ನನ್ನ ತಾಲ್ಲೂಕಿನ ಮನುಷ್ಯನಿಗೆ ಮಾಸಾಶನ ಕೊಡಲು ಹೀಗೆ ನಿಧಾನವಾಗಿದೆ. ಹಾಸನ ಜಿಲ್ಲೆಯಲ್ಲಿ 5 ಜನರಿಗೆ ಒಟ್ಟಾಗಿ ಶಿಕ್ಷೆಯಾಗಿದೆ. 1970ರಲ್ಲಿ ಮಾಸಾಶನಕ್ಕೆ ಅರ್ಜಿ ಕೊಟ್ಟರೂ ಇನ್ನೂ ಇತ್ಯರ್ಥವಾಗಿಲ್ಲ. ಇಲಾಖೆಯವರು ಕ್ವೆರಿ ಹಾಕಿ ತಾಲ್ಲೂಕು ಆಫೀಸಿನಿಂದ ಮೇಲಕ್ಕೆ ಕಳಿಸುವುದು ಮೇಲಿನವರು ಮತ್ತೆ ಏನಾದರೂ ಕೇಳುವುದು ಹೀಗಾಗಿ ನಿಧಾನವಾಗುತ್ತಾ ಇದೆ. ಒಂದೊಂದು ಆಫೀಸಿನಲ್ಲಿ ಕೆಲವು ಕಾಲ ಬಿದ್ದಿರುವುದು. ಹೀಗೆ ನಿಧಾನವಾಗಲು ಅವಕಾಶ ಕೊಡದೆ ಆದಷ್ಟು ಜಾಗ್ರತೆ ಇತ್ಯರ್ಥಮಾಡಬೇಕು. ಈಗ ನಾನು ಹೇಳಿದವರ ಅರ್ಜಿ ಸೆಕ್ರೆಟೇರಿಯಟ್ಟಿಗೆ 1970 ರಲ್ಲಿ ಬಂದಿದೆ. ಮಂತ್ರಿಗಳಿಗೆ ಇದರ ವಿಚಾರ ತಿಳಿಸಿ ಬೇಗ ವೇತನ ಕೊಡಬೇಕೆಂದು ಹೇಳಿದೆ. ಅವರು ತಮ್ಮ ಪಿ ಎ ಗೆ ಹೇಳಿ ರಿಕಾರ್ಡನ್ನು ಕಷ್ಟಪಟ್ಟು ಹುಡುಕಿಸಿದರು. ಅದನ್ನು ಹೊರಗೆ ತರುವುದೇ ಕಷ್ಟವಾಯ್ತು. ಇನ್ನು ಜಾಗ್ರತೆ ತೀರ್ಮಾನವಾಗಬಹುದು. ಈ ಅರ್ಜಿಗಳ ಬಗ್ಗೆ ನಿಧಾನಮಾಡದೆ ಆದಷ್ಟು ಜಾಗ್ರತೆ ಫೈಸಲು ಮಾಡಲು ತಕ್ಕ ಕ್ರಮ ತೆಗೆದುಕೊಳ್ಳಬೇಕು.

ಎಕ್ಸೈಜು ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸೇಂದಿ ಮರ ಹೆಚ್ಚಾಗಿ ಸಿಕ್ಕುತ್ತಿಲ್ಲ. ಆದುದರಿಂದ ಹೆಂಡ ಮಾಡಲು ಸಕ್ಕರೆ ಮತ್ತು ಕೆಮಿಕಲ್ಸ್ ಉಪಯೋಗಮಾಡಿ ತಯಾರಿಸಿ ಕೊಡುವರು. ಇದು ಆರೋಗ್ಯಕ್ಕೆ ಒಳ್ಳೆಯದಲ್ಲ, ಇದನ್ನು ತಯಾರಿಸಲು ಅವಕಾಶ ಕೊಡಬಾರದು. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣ ಮುಕ್ತಾಯ ಮಾಡುತ್ತೇನೆ. ಜೈ ಹಿಂದ್.

ಶ್ರೀ ಸಿ. ಬೈರೇಗೌಡ (ವೇಮಗಲ್):—ಅಧ್ಯಕ್ಷರೇ, ಇವತ್ತಿನ ದಿವಸ ಈ ಸಭೆಯ ಒಪ್ಪಿಗೆಗಾಗಿ ಪ್ರಾಮುಖ್ಯವಾಗಿ ಇಟ್ಟಿರುವ ಸಾಮಾನ್ಯ ಆಡಳಿತ, ಎಕ್ಸೈಜು, ಇನ್‌ಫರ್ಮೇಷನ್ ಅಂಡ್ ಬ್ರಾಡ್ ಕ್ಯಾಸ್ಟಿಂಗ್, ಪೊಲೀಸು ಮುಂತಾದ ಬೇಡಿಕೆಗಳೇನಿವೆ ಅವನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ. ಮೊದಲನೆಯದಾಗಿ ಸಾಮಾನ್ಯ ಆಡಳಿತ ಪದ್ಧತಿ ನಮ್ಮ ದೇಶದಲ್ಲಿ ಹಿಂದೆ ಬ್ರಿಟಿಷರ ಕಾಲದಲ್ಲಿ ಹೇಗಿತ್ತೋ ಹಾಗೆಯೇ ಇದೆ. ಬ್ರಿಟಿಷರನ್ನು ಹೋರಾಟಮಾಡಿ ಈ ದೇಶದಿಂದ ಓಡಿಸಿದ ಮೇಲೂ ಕೂಡ ಅವರ ಕಾಲದಲ್ಲಿ ಯಾವ ಆಡಳಿತ ಪದ್ಧತಿಯಿತ್ತೋ ಅದೇ ಇಂದೂ ಸಹ ಮುಂದುವರೆಯುತ್ತಿದೆ. 1947 ರಿಂದ ಈಚೆಗೆ ನಮ್ಮ ದೇಶದ ಪರಿಸ್ಥಿತಿ ಬದಲಾವಣೆಯಾಗಿದೆ. ಆದರೆ ಕೇವಲ ಜನರನ್ನು ಶೋಷಣೆ ಮಾಡುವ ಪದ್ಧತಿಯೇ ಇಂದೂ ಸಹ ಇದೆ. ವಾತಾವರಣ ಇಂದು ಬದಲಾಗಿರುವುದನ್ನು ಗಮನಿಸಿ ಅದಕ್ಕೆ ಹೊಂದಿಕೊಳ್ಳುವಂತೆ ಆಡಳಿತ ನಡೆಸಬೇಕಾದ್ದು ಅಧಿಕಾರಿಗಳ ಕರ್ತವ್ಯ. ಆದರೆ ಇಂದು ಪರಿಸ್ಥಿತಿ ಬದಲಾವಣೆಯಾಗಿಲ್ಲ. ಅಧಿಕಾರಿಗಳ ಮನೋಭಾವನೆ ಬದಲಾಗಿಲ್ಲ. ಮುಖ್ಯವಾಗಿ ತಳಹದಿ ರೆವಿನ್ಯೂ ಇಲಾಖೆ ಇಂದು ನಮ್ಮ ದೇಶದಲ್ಲಿ ಸಮಾಜವಾದ ಮುಂದುವರೆಯಬೇಕೆಂದು ಹೇಳುವಾಗ ಅದಕ್ಕೆ ತಕ್ಕಂತೆ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕಾದ್ದು ಅವಶ್ಯಕ. ಮೇಲಿನಿಂದ ಕೆಳಗಿನವರೆಗೆ ಇಂದು ಎಷ್ಟು ಜನರಿಗೆ ಸಮಾಜವಾದವೆಂದರೇನು ಎಂಬುದು ಅರ್ಥವಾಗಿದೆ ? ಯಾರಿಗೂ ಅದು ಸರಿಯಾಗಿ ಗೊತ್ತಿಲ್ಲ. ಚನ್ನಬಸಪ್ಪನವರು ಸೆಕ್ರೆಟರಿಗಳನ್ನಾಗಲಿ ಅಥವ ಸೆಕ್ರಟೇರಿಯಟಿನಲ್ಲಿರುವ ಇತರ ಅಧಿಕಾರಿಗಳಿಗಾಗಲಿ ಪ್ರಶ್ನೆ ಹಾಕಿದರೆ ಯಾರು ಇದಕ್ಕೆ ಸರಿಯಾಗಿ ಉತ್ತರ ಕೊಡಬಲ್ಲರು ? ಅಧಿಕಾರಿಗಳಿಗೆ ಇದಕ್ಕೆ ಸರಿಯಾದ ಉತ್ತರ ಕೊಡುವ ಶಕ್ತಿಯಿಲ್ಲ. ಇಂದು

ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ ಇದೆ, ಐ. ಸಿ. ಎಸ್. ಹೋಯಿತು. ಈ ಎರಡೂ ಕೂಡ ಸರಿಯಾದ ಪದ್ಧತಿಯಲ್ಲ. ಐ. ಎ. ಎಸ್. ಎಂದರೆ ಇಂಡಿಯನ್ ಆರೋಗೆಂಟ್ ಸರ್ವಿಸ್ ಎಂದು ಹೇಳಬಹುದು. ಕೆಲವರು ಒಳ್ಳೆಯ ಅಧಿಕಾರಿಗಳಿದ್ದಾರೆ, ಅವರಿಗೆ ಇಡೀ ದೇಶ ಕೃತಜ್ಞತೆಗಳನ್ನು ಅರ್ಪಿಸಬೇಕಾಗಿದೆ. ಅದೇ ರೀತಿಯಲ್ಲಿ ಆರೋಗೆಂಟ್ ಆಗಿರುವ ಅಧಿಕಾರಿಗಳನ್ನು ಖಂಡಿಸಬೇಕಾಗಿದೆ. ಈ ರೀತಿ ಮಾಡಿ ಆಡಳಿತದಲ್ಲಿರುವ ಲೋಪದೋಷಗಳನ್ನು ತಿದ್ದಬೇಕಾದ್ದು ಆಡಳಿತ ಪಕ್ಷದ ಮೊದಲನೆಯ ಕರ್ತವ್ಯ. ಇದನ್ನು ಇಲ್ಲಿಯವರೆಗೆ ಮಾಡಿಲ್ಲ. ಇದರಿಂದ ಇಂದು ಅನೇಕ ಸಂದರ್ಭಗಳಲ್ಲಿ ಜನರಿಗೆ ತೊಂದರೆಯಾಗುತ್ತಿದೆ. ಉದಾಹರಣೆಗೆ ಮೂರು ದಿವಸಗಳ ಹಿಂದೆ ಕೋಲಾರದಲ್ಲಿ 250 ರೂಪಾಯಿ ಸಾಲ ತೆಗೆದುಕೊಂಡಿದ್ದ ಒಬ್ಬ ಮನುಷ್ಯ ಅದನ್ನು ಎಲ್ಲಿ ಕೊಡಬೇಕೆಂದು ತಾಸೀಲ್ದಾರರನ್ನು ಕೇಳಿದರೆ ಅವರು ತಮ್ಮ ಹತ್ತಿರ ಲೆಕ್ಕವಿಲ್ಲವೆಂದು ಹೇಳಿದರು, ಅದನ್ನು ನನ್ನ ಹತ್ತಿರ ಆತ ತಂದ. ಸಾಮಾನ್ಯ ಜನರಿಗೆ ನ್ಯಾಯ ದೊರಕಿಸುವ ಪದ್ಧತಿಯೇ ಇದು ಎಂದು ಪ್ರಶ್ನೆಮಾಡಬೇಕಾಗಿದೆ. ಸುಪ್ರೀಂ ಕೋರ್ಟಿನಲ್ಲಿಂದು ಉನ್ನತ ನ್ಯಾಯಾಲಯದಲ್ಲಿ ಈ ದಿವಸ ನಡೆಯುವುದನ್ನು ಜಡ್ಜಿಗಳ ನೇಮಕವಾಗುವುದನ್ನು ನೋಡಿದರೆ ಇಂದಿನ ವಾತಾವರಣ ಚೆನ್ನಾಗಿ ಅರ್ಥವಾಗುವುದು. ಜನರಿಗೆ ನ್ಯಾಯ ದೊರೆಯುವ ಕೋರ್ಟುಗಳಲ್ಲಿ ಕೂಡ ಇದೇ ರೀತಿ ಯಾದರೆ ಏನು ಹೇಳಬೇಕು ? ಇದರಲ್ಲಿ ಮೂಲಭೂತವಾದ ಬದಲಾವಣೆಯಾಗಬೇಕು. ಅಡ್ಮಿನಿಸ್ಟ್ರೇಟಿವ್ ಸರ್ವಿಸ್‌ಗೆ ನೇಮಕ ಮಾಡುವಾಗ ಇಂದು ಬುದ್ಧಿವಂತರು ಬೇಕಾಗಿಲ್ಲ. ಅವರು ಕಳಿಸುವ ಸರ್ಕ್ಯುಲರುಗಳು, ಗವರ್ನಮೆಂಟ್ ಆರ್ಡರುಗಳು ನೋಡಿದರೆ ಗೊತ್ತಾಗುವುದು. ಅವುಗಳಿಗೆ ಇಪ್ಪತ್ತುಸಾರಿ ಕ್ಲಾರಿಫಿಕೇಷನ್ ಇಷ್ಯೂ ಆಗುವುದು. ಇಂಥ ಸರ್ಕ್ಯೂಲರುಗಳು ಸರಕಾರಿ ಆಜ್ಞೆಗಳು ಇಷ್ಯೂಮಾಡಲು ಬುದ್ಧಿವಂತರು ಬೇಕಾಗಿಲ್ಲ. ಅವರು ವಿಜ್ಞಾನ ಪ್ರಪಂಚಕ್ಕೆ ಬೇಕು. ಇಲ್ಲಿ ಬರೆದು ಕಳಿಸುವ ವ್ಯವಸ್ಥೆ ಇರುವುದರಿಂದ ಬುದ್ಧಿವಂತರ ಅವಶ್ಯಕತೆ ಇಲ್ಲದಿರು ವುದರಿಂದ ರೆಕ್ರೂಟ್‌ಮೆಂಟ್ ಪದ್ಧತಿಯಲ್ಲಿ ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕು.

ಇನ್ನೊಂದು ವಿಷಯ ಪ್ರಸ್ತಾಪಿಸಬೇಕಾಗಿದೆ. 1972 ರಿಂದೀಚೆಗೆ ನಮ್ಮ ದೇಶದಲ್ಲಿ ಜಾತೀಯತೆ ತಾಂಡವವಾಡುತ್ತಿದೆ. ಇಂದು ಜಾತಿಗಳ ಬಗ್ಗೆ ನೂರೆಂಟು ಸಮ್ಮೇಳನಗಳು ಬೆಂಗಳೂರಿನಲ್ಲಿ ನಡೆಯುತ್ತಿವೆ. ಇದರಲ್ಲಿ ಮಂತ್ರಿಗಳು ಸಹ ಭಾಗವಹಿಸುತ್ತಿದ್ದಾರೆ. ಜಾತಿ ಪದ್ಧತಿ ಮತ್ತು ಗೊಂದಲ ನಮ್ಮ ದೇಶದಲ್ಲಿ ಜಾಸ್ತಿಯಾದರೆ ಅನಾಹುತವಾಗುತ್ತದೆ. ಇದಕ್ಕೆ ಅವಕಾಶ ಕೊಡಬಾರದು. ಇಂದು ಸಮಾಜದಲ್ಲಿ ಎರಡು ವರ್ಗಗಳಿವೆ.

ಒಂದು ಶೋಷಣೆಗೆ ಒಳಪಟ್ಟಿರತಕ್ಕ ವರ್ಗ, ಮತ್ತೊಂದು ಶೋಷಣೆ ಮಾಡುತ್ತಿರುವ ವರ್ಗ. ವರ್ಗಗಳ ಆಧಾರದ ಮೇಲೆ ಆಡಳಿತ ನಡೆಸಿದರೆ, ಸಾಮಾಜಿಕ ನ್ಯಾಯವನ್ನು ದೊರಕಿಸುವ ಏರ್ಪಾಡು ಮಾಡಬೇಕು. ಜಾತಿಯ ಆಧಾರದ ಮೇಲೆ ಮಾಡಿದರೆ ದೊಡ್ಡ ಅನಾಹುತವಾಗು ತ್ತದೆ ಎಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಜನತೆ ಚೇತರಿಸಿಕೊಳ್ಳತಕ್ಕ ಕಾಲ ಬಂದಿರು ವಾಗ ಜಾತಿಯ ಆಧಾರದ ಮೇಲೆ ಆಡಳಿತ ಮಾಡುವುದಾದರೆ, ದೊಡ್ಡ ಅನಾಹುತವನ್ನು ತಂದಂತಾಗುತ್ತದೆ. ಆದ್ದರಿಂದ ಜಾತೀಯತೆಯನ್ನು ಆದಷ್ಟು ಕಡಿಮೆ ಮಾಡಬೇಕು. ಜಾತೀಯ ಆಧಾರದ ಮೇಲೆ ಯಾವ ತೀರ್ಮಾನವನ್ನೂ ಕೈಗೊಳ್ಳಬಾರದು ಎಂದು ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡಬಯಸುತ್ತೇನೆ. ಇವತ್ತಿನ ದಿವಸ ಎಲ್ಲಾ ಶಾಸಕರೂ, ಮಂತ್ರಿಗಳು ಗಮನಿಸ ತಕ್ಕದ್ದು ಏನೆಂದರೆ ಅಧಿಕಾರಿಗಳ ಟ್ರಾನ್ಸ್‌ಫರ್ ಬಗ್ಗೆ, ಒಬ್ಬ ಅಧಿಕಾರಿ ಒಂದು ಕಡೆ ಕೆಲಸ ಮಾಡುತ್ತಿದ್ದಾನೆ ಎಂದರೆ, ಅವನ ಮೇಲೆ ಬೇರೆಯವರು ಕಂಪ್ಲೇಂಟ್ ಕೊಡುವುದಾದರೆ ಅವನನ್ನು ಅದಕ್ಷ ಎಂದು ಹೇಳುವುದಾದರೆ, ಅವನು ಎಲ್ಲಿಯೂ ಕೆಲಸ ಮಾಡುವುದಕ್ಕೆ ಅಧಕ್ಷನಿರುತ್ತಾನೆ. ಅಂಥವನನ್ನು ತೆಗೆದುಹಾಕಿ ಮನೆಗೆ ಕಳುಹಿಸಿ. ಅದನ್ನು ಬಿಟ್ಟು ಆಡಳಿತ ಪಕ್ಷದವರು ಯಾರೋ ಹೇಳುತ್ತಾರೆ ಎಂದು ಕೆಲವರನ್ನು ಅಲ್ಲಿಯೇ ಇಡುವುದು, ಮತ್ತೆ ಕೆಲವರನ್ನು ಬೇರೆ ಕಡೆಗೆ

ವರ್ಗಾಯಿಸುವುದು ಸರಿಯಲ್ಲ. ಕೆಲವು ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ಅಲ್ಲಿಯೇ ಇಡಿ ಎಂದು ಆಡಳಿತ ಪಕ್ಷದ ಕೆಲವು ಸದಸ್ಯರು ಮಂತ್ರಿಗಳಿಗೆ ಕಾಗದ ಬರೆದ ಪ್ರತಿ ನನ್ನ ಹತ್ತಿರ ಇದೆ. ಇಂಥ ಪರಿಸ್ಥಿತಿ ಬರಬೇಕಾದರೆ, ಕೆಲವು ಸ್ಥಳಗಳನ್ನು ಇವರಿಗೆ ಬೇಕಾದವರಿಗೆ ಜಹಗೀರ್ ಆಗಿ ಇವರಿಗೆ ಕೊಟ್ಟುಬಿಡಲಿ. ಕೋಲಾರ ತಾಲ್ಲೂಕನ್ನು ಇಂತಿಂಥ ಸಬ್‌ಇನ್ಸ್‌ಪೆಕ್ಟರ್ ಇಂತಿಂಥ ಕಾನ್ಸ್‌ಟೇಬಲ್‌ಗಳಿಗೆ ಜಾಗೀರ್ ಎಂದು ಕೊಟ್ಟುಬಿಡಲಿ, ಕೆಲವರು ಹೇಳಿದರೆ ಮಾತ್ರ ಟ್ರಾನ್ಸ್‌ಫರ್ ಮಾಡುತ್ತಾರೆ. ಇಲ್ಲದೇ ಹೋದರೆ ಇಲ್ಲ, ಟ್ರಾನ್ಸ್‌ಫರ್ ಬೇಕಿಲ್ಲ, ಯಾವ ಅಧಿಕಾರಿ ಅದಕ್ಕೆ ಎಂದು ತಿಳಿದರೆ ಅಂಥವನನ್ನು ಕೆಲಸದಿಂದ ತೆಗೆದು ಡಿಸ್‌ಮಿಸ್‌ಮಾಡಿ ಮನೆಗೆ ಕಳುಹಿಸಿ, ಒಪ್ಪಿಕೊಳ್ಳುತ್ತೇನೆ. ಅದುಬಿಟ್ಟು ಯಾರು ಹೆಚ್ಚಿನ ಒತ್ತಾಯ ತರುತ್ತಾರೆ ಅಂಥವರು 20 ವರ್ಷ ತಮ್ಮ ಸರ್ವೀಸ್ ಪೂರ್ತಿ ಬೆಂಗಳೂರಿನಲ್ಲಿ ಇರುವುದು. ಇನ್ನು ಕೆಲವರನ್ನು ಪದೇ ಪದೇ ಟ್ರಾನ್ಸ್‌ಫರ್ ಮಾಡುವುದು ಸರಿಯಲ್ಲ. ಟ್ರಾನ್ಸ್‌ಫರ್ ಮಾಡುವುದರ ಬಗ್ಗೆ ಏನಾದರೂ ಒಂದು ಬೇಸಿಸ್ ಇರಬೇಕು. ಅಂಥ ಒಂದು ಬೇಸಿಸ್ ಮೇಲೆ ಟ್ರಾನ್ಸ್‌ಫರ್ ಮಾಡಿದರೆ, ಶಾಸಕರ ಹೆಚ್ಚಿನ ಸಮಯವನ್ನು ಈ ಅಧಿಕಾರಿಗಳು ಹಾಳುಮಾಡುವುದು ತಪ್ಪುತ್ತದೆ. ಇಲ್ಲದೆ ಹೋದರೆ ಅವರು ತಂದೆಗೆ ಕಾಯಿಲೆ, ಮಗನಿಗೆ ಕಾಯಿಲೆ ಎಂದು ಹೇಳಿಕೊಂಡು ನಮಗೂ ಕಾಯಿಲೆ ತರುತ್ತಾರೆ. ಆದ್ದರಿಂದ ತಾವು ಮನಸ್ಸಿಗೆ ಬಂದ ಹಾಗೆ ಸಿಕ್ಕಾಪಟ್ಟೆ ಟ್ರಾನ್ಸ್‌ಫರ್ ಮಾಡುವುದು ಸರಿಯಲ್ಲ. ಒಂದು ಆಧಾರದ ಮೇಲೆ ಟ್ರಾನ್ಸ್‌ಫರ್ ಮಾಡಿದರೆ ನಮಗೂ ನಮ್ಮ ಕೆಲಸ ಕಾರ್ಯಗಳನ್ನು ಮುಖ್ಯವಾಗಿ ನಮ್ಮ ಕ್ಷೇತ್ರದ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ. ಇವತ್ತಿನ ದಿವಸ ಆಡಳಿತದಲ್ಲಿ ಕಂಡುಬಂದಿರತಕ್ಕ ಲಂಚ ಎಲ್ಲಾ ಕಡೆಯೂ ಲಂಚಮಯವಾಗಿದೆ. ಸದಾಶಿವನಗರದಲ್ಲಿ ಇರುವ ಮನೆಗಳ ಅಂಕಿ ಅಂಶಗಳನ್ನು ಎತ್ತಿದರೆ, ಅಧಿಕಾರಿಗಳ ಮನೆ ಎಷ್ಟು ಇವೆ, ಈ ಮನೆಗಳನ್ನು ಅವರು ಕಟ್ಟಿಸಬೇಕಾದರೆ ಅವರಿಗೆ ಅಷ್ಟೊಂದು ಹಣ ಎಲ್ಲಿಂದ ಬಂತು ಸರ್ಕಾರ ಏನಾದರೂ ಕೂಡ ಶುದ್ಧವಾದ ಆಡಳಿತವನ್ನು ಕೊಡಬೇಕು, ನಮ್ಮ ರಾಜ್ಯದಲ್ಲಿ ನ್ಯಾಯ ಕೊಡಬೇಕು ಎನ್ನುವ ಮನಸ್ಸು ಇದ್ದರೆ, ಬೆಂಗಳೂರಿನಲ್ಲಿ ಯಾವ ಯಾವ ಅಧಿಕಾರಿಗಳಿಗೆ ಎಷ್ಟೆಷ್ಟು ಮನೆಗಳು ಇವೆ ಎನ್ನುವ ಅಂಕಿ ಅಂಶಗಳನ್ನು, ಯಾರ ಯಾರ ಹೆಸರಿನಲ್ಲಿ ಎಷ್ಟೆಷ್ಟು ಮನೆಗಳು ಇವೆ ಎನ್ನುವ ಅಂಕಿ ಅಂಶಗಳನ್ನು ಎತ್ತಿದರೆ, ಅವರಿಗೆ ಇಷ್ಟೊಂದು ಹಣ ಎಲ್ಲಿಂದ ಬಂತು ಎಂಬುದು ಎನ್‌ಕ್ವಯರಿ ಮಾಡಿದರೆ ಗೊತ್ತಾಗುತ್ತದೆ. ಇದನ್ನು ಸರ್ಕಾರ ಮಾಡುವುದಕ್ಕೆ ತಯಾರು ಇಲ್ಲ. ಒಬ್ಬ ಮಂತ್ರಿ, ಒಬ್ಬ ವಿಲೇಜ್ ಅಕೌಂಟೆಂಟ್ ಇಂಥ ಕಡೆ ಇರಬೇಕು ಎಂದು ಟೆಲಿಫೋನ್ ಮಾಡಿ ಹೇಳುವುದಾದರೆ ಇದರಲ್ಲಿ ಎಷ್ಟು ಘನತೆ ಇದೆ, ಇದರಲ್ಲಿ ಎಷ್ಟು ನೀತಿ ಇದೆ ಮತ್ತು ಇವರ ಕೆಳಗೆ ಕೆಲಸ ಮಾಡುವ ಅಧಿಕಾರಿಗಳು ಯಾವ ರೀತಿ ಇರುತ್ತಾರೆ ? ಇದನ್ನು ತಾವೇ ಹೇಳಬೇಕು. ಇವತ್ತಿನ ದಿವಸ ಯಾವುದೇ ಪಕ್ಷ ಆಡಳಿತದಲ್ಲಿದ್ದರೂ ಕೂಡ, ಅದು ಮುಂದು ವರಿಯಲು, ಪುನಃ ಅಧಿಕಾರಕ್ಕೆ ಬರಲು ಆಡಳಿತದ ದಕ್ಷತೆಯಿಂದ ಮಾತ್ರ ಸಾಧ್ಯ ಎಂದು ಎಲ್ಲರೂ ಒಪ್ಪಿಕೊಳ್ಳಬೇಕು.

ಇನ್ನು ಜೈಲಿನ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ, ತಪ್ಪು ಮಾಡಿದವರು ಅಪರಾಧಿ ನಿರಪರಾಧಿ ಎಂದು ತಿಳಿಯದೆ ಇರತಕ್ಕಂಥ ಪರಿಸ್ಥಿತಿಯಲ್ಲಿ ನಿರಪರಾಧಿಯಾದವರೂ ಕೆಲವು ವರ್ಷಗಳವರೆಗೂ ಅವರು ಜೈಲಿನಲ್ಲಿರಬೇಕಾಗುತ್ತದೆ. ಕನ್‌ವಿಕ್ಷನ್ ಮಾಡಿದರೆ ಜೈಲಿನಲ್ಲಿ ಅಂಡರ್ ಟ್ರಯಲ್ ಪಿರಿಯಡ್‌ನಲ್ಲಿರುವವರನ್ನೂ ಸೆಂಟೆನ್ಸ್‌ನಲ್ಲಿ ಸೇರಿಸುವುದಿಲ್ಲ. ಆದ್ದರಿಂದ ಸೆಂಟೆನ್ಸ್ ಜೊತೆಗೆ ಸೇರಿಸಿದರೆ, ಇದರಿಂದ ಕೆಲವರಿಗೆ ಅನುಕೂಲವಾಗುತ್ತದೆ ಎಂದು ನಾನು ಹೇಳುತ್ತೇನೆ. ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿ ಸ್ಕ್ವಾಡ್ ಇಟ್ಟಿದ್ದಾರೆ. ಇದರ ಬಗ್ಗೆ ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ. ಮಾಲೂರಿನಿಂದ ಬೆಂಗಳೂರಿಗೆ ಬರುವ ಮಧ್ಯದಲ್ಲಿ ಗದಿಗೆನಹಳ್ಳಿ ಹತ್ತಿರ ಕಾಡು ಇದೆ. ಹನ್ನೊಂದೂವರೆ ಗಂಟೆ ರಾತ್ರಿಯಲ್ಲಿ ನಾನು ಒಬ್ಬನೇ ನನ್ನ ಕಾರಿನಲ್ಲಿ ಬರುತ್ತಿದ್ದಾಗ ಅಲ್ಲಿ ನನ್ನನ್ನು ತಡೆದರು.

ಉಪಾಧ್ಯಕ್ಷರು :—ಮಾನ್ಯ ಹಗರಿಯವರು ಭಾಷಣ ಪ್ರಾರಂಭ ಮಾಡಬಹುದು.

ಶ್ರೀ ಪಿ. ಪಿ. ಹಗರಿ (ಚಿಕ್ಕೋಡಿ) :— ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ಮುಖ್ಯಮಂತ್ರಿಗಳು ಮಂಡಿಸಿದ ಡಿಮ್ಯಾಂಡುಗಳಿಗೆ ನನ್ನ ಬೆಂಬಲ ಉಂಟು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತಾಗ ದೇಶದ ಮುಂದೆ ದೊಡ್ಡ ಸಮಸ್ಯೆಗಳು ಇದ್ದುವು. ನಮ್ಮ ದೇಶದಲ್ಲಿ ಆರ್ಥಿಕ ವಿಷಮತೆ ಇತ್ತು, ಸಾಮಾಜಿಕ ವಿಷಮತೆ ಇತ್ತು. ಹಾಗಿದ್ದರೂ ನಮ್ಮ ಸಂವಿಧಾನ ಕಾರ್ಯಕರ್ತರು ನಮ್ಮ ದೇಶ ಸಾರ್ವಭೌಮ ಪ್ರಜಾರಾಜ್ಯ ಎಂದು ಘೋಷಣೆ ಮಾಡಿದರು. ಆ ಕಾಲಕ್ಕೆ ಈ ಪ್ರಶ್ನೆಗಳು ಅವರ ಜ್ಞಾಪಕಕ್ಕೆ ಬರಲಿಲ್ಲ ಎಂದು ಅಲ್ಲ. ಈ ಸಮಸ್ಯೆಗಳನ್ನು ಆರ್ಥಿಕ ವಿಷಮತೆ, ಸಾಮಾಜಿಕ ವಿಷಮತೆಯನ್ನು ಸರಿಪಡಿಸುವುದರ ಸಲುವಾಗಿ, ದುರ್ಬಲ ವರ್ಗದ ಬಗ್ಗೆ, ಸಾಮಾಜಿಕ ಆರ್ಥಿಕ ದೃಷ್ಟಿಯಿಂದ ಮತ್ತು ಶಿಕ್ಷಣ ಕ್ಷೇತ್ರದಲ್ಲಿ, ರಾಷ್ಟ್ರಕ್ಷೇತ್ರದಲ್ಲಿ ಅವರಿಗೆ ಸಾಕಷ್ಟು ಸವಲತ್ತುಗಳನ್ನು ಕೊಡಬೇಕು ಎಂದು ಸಂವಿಧಾನದಲ್ಲಿ ಬರೆದಿಟ್ಟು ಹೋದರು. ಆದರೆ ಇವತ್ತು ನಾವು ದುರ್ದೈವದಿಂದ ಹೇಳಬೇಕಾಗಿದೆ, ಸಂವಿಧಾನದೊಳಗೆ ದುರ್ಬಲ ವರ್ಗಗಳಿಗೆ ಸವಲತ್ತುಗಳನ್ನು ಕೊಡಬೇಕೆಂದು ಏನು ಹೇಳಿದ್ದರೋ ಅದನ್ನು ನಮ್ಮ ಸರ್ಕಾರ ಪೂರ್ಣಗೊಳಿಸುವ ಮನಸ್ಸು ಮಾಡಿಲ್ಲ ಎಂದು ಹೇಳಬೇಕಾಗುತ್ತದೆ.

ಇವತ್ತಿನ ಕಾಲದಲ್ಲಿ ಸಮಾಜದಲ್ಲಿ ಆಗುವ ಅನ್ಯಾಯಗಳ ಬಗ್ಗೆ ದಿನ ಬೆಳಗಾದರೆ ಒಂದೊಂದು ಸಂಗತಿಯನ್ನು ಕೇಳುತ್ತಿದ್ದೇವೆ. ಒಂದೆರಡು ತಿಂಗಳುಗಳಲ್ಲಿ ನಡೆದ ಘಟನೆಗಳನ್ನು ತಮ್ಮ ದೃಷ್ಟಿಗೆ ತರಬಯಸುತ್ತೇನೆ. ಒಂದು ಕಡೆ ಒಬ್ಬ ಕಾಲೇಜು ಹರಿಜನ ವಿದ್ಯಾರ್ಥಿಯನ್ನು ಕಂಬಕ್ಕೆ ಕಟ್ಟಿ ಕಂಡಕಂಡಂತೆ ಬಡಿದರು. ಇಂದು ನಮ್ಮ ಸ್ವಾತಂತ್ರ್ಯ ಬಂದು 25 ವರ್ಷಗಳು ಆದರೂ ಬೆಂಗಳೂರು ನಗರದಲ್ಲಿ ನಡೆಯುವ ಘಟನೆ ಇದು. ಇದು ನಮ್ಮ ಜನರಲ್ ಅಡ್ಮಿನಿಸ್ಟ್ರೇಷನ್ನಿನ ರೀತಿನೀತಿ. ಮತ್ತೊಂದು ಪ್ರಸಂಗದಲ್ಲಿ 7 ವರ್ಷದ ಒಬ್ಬ ಅಸ್ಪೃಷ್ಠ ಬಾಲಕ ಪ್ರಾರ್ಥನೆ ಮಾಡುವ ಸಲುವಾಗಿ ಚಾಮರಾಜ ನಗರದ ಶನಿದೇವರ ಮಂದಿರ ಗುಡಿಗೆ ತನ್ನ ತಂದೆಯೊಡನೆ ಹೋಗಿದ್ದ. ಒಬ್ಬ ಸನಾತನ ಹಿಂದು ಬಂದು ಹರಿಜನ ಬಾಲಕನು ಗುಡಿಗೆ ಬಂದದ್ದನ್ನು ಸಹಿಸದೆ ಅವನ ಕುತ್ತಿಗೆಗೆ ಕೈ ಹಾಕಿ ತಿರುಗಿಸಿ ಬಿಸಾಕಿದ, ಆ ಹುಡುಗ ಪ್ರಾಣ ಬಿಟ್ಟ. 7 ವರ್ಷದ ಬಾಲಕ ಇದನ್ನು ನೋಡಿ ಹಿಂದುಗಳು ನಾಚಿಕೆಪಡಬೇಕಾಗಿದೆ. ಈ ರೀತಿ ಸಮಾಜದಲ್ಲಿ ಇನ್ನು ಎಷ್ಟು ದಿವಸ ನಡೆದುಕೊಂಡು ಹೋಗಬೇಕು ? ಇಂಥ ಪ್ರಸಂಗಗಳು ಆಗದಂತೆ ಸರ್ಕಾರದವರು ಅತ್ಯಂತ ಜಾಗರೂಕತೆಯಿಂದ ನೋಡಿಕೊಳ್ಳಬೇಕು. ಕಾಯಿದೆ ಕಾನೂನು ಪ್ರಕಾರ ಕೊಲೆ ಮಾಡಿದವನಿಗೆ ಎರಡು ವರ್ಷ ಶಿಕ್ಷೆ ಕೊಡಬಹುದು. ಸಾವಿರ ರೂಪಾಯಿ ದಂಡ ಹಾಕಬಹುದು. ಆದರೆ ಇಂತಹ ರಾಕ್ಷಸೀ ಕೃತ್ಯ ಕೊಲೆ ಮಾಡಿದವನಿಗೆ he must be shot dead, or he should be hanged, ಇಂಥ ಕಾಯಿದೆ ದೇಶದಲ್ಲಿ ಬರಬೇಕು. ನಮ್ಮ ಭಾರತೀಯ ಸಂಸ್ಕೃತಿಯು ಉಚ್ಚತಮವಾದುದೆಂದು ಹೇಳುವ ಹಿಂದೂ ಸಮಾಜದಲ್ಲಿ ಈ ತರಹ ಅನ್ಯಾಯವಾಗುತ್ತಿದೆ. ಇದನ್ನು ಸರ್ಕಾರದವರು ತೀವ್ರವಾಗಿ ಯೋಚಿಸಬೇಕು. ಸಮಾಜದೊಳಗೆ ಹೆಚ್ಚಿಗೆ ದಿವಸ ಇದನ್ನು ಸಹನೆ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರದವರು ಧೈರ್ಯ ಮಾಡಿ ಸಮಾಜದಲ್ಲಿ ಕ್ರಾಂತಿ ಕಾರಕ ಬದಲಾವಣೆ ತರಬೇಕು. ಈ ವಿಷಯವನ್ನು ಬಿಟ್ಟು ಮತ್ತೊಂದು ವಿಷಯಕ್ಕೆ ಹೋಗುತ್ತೇನೆ. ಅದರ ಬಗ್ಗೆ ಇದೇ ಸದನದಲ್ಲಿ ಒಂದೆರಡು ಸಲ ಮಾತನಾಡಿದ್ದೇನೆ. ಶೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಅನ್ಯಾಯಗಳು ಆಗದೆ ಇರಬೇಕಾಗಿದ್ದರೆ ಅವರಿಗೆ ಉಚ್ಚಸ್ಥಾನ ಸರ್ಕಾರದ ನೌಕರಿಯಲ್ಲಿ ಕೊಡಬೇಕು. ಜಾತಿಯ ಮೇಲೆ ನಿಂತ ನಮ್ಮ ಹಿಂದೂ ಸಮಾಜದಲ್ಲಿ ಸ್ವಜನ ಪಕ್ಷಪಾತ ಇದ್ದೇ ಇರುತ್ತದೆ. ಯಾವುದೇ ಅಧಿಕಾರಿ ನೋಡಿದರೂ ಅವನು ಶೆಡ್ಯೂಲ್ಡ್ ಕ್ಯಾಸ್ಟ್, ಶೆಡ್ಯೂಲ್ಡ್ ಟ್ರೈಬ್ಸ್ ಮತ್ತು ಹಿಂದುಳಿದ ವರ್ಗದ ಜನರಿಗೆ ಯೋಗ್ಯ ಬೆಲೆ ಕೊಡುವುದಿಲ್ಲ. ಅವರ ದುಃಖ ಮತ್ತೆ ಅವರ ಕಷ್ಟವನ್ನು ಯಾರೂ ನಿವಾರಣೆ ಮಾಡುವುದಿಲ್ಲ,

ದುಃಖ ನಿವಾರಣೆ ಮಾಡಬೇಕಾದರೆ ಅವರು ಉನ್ನತ ಸ್ಥಾನದಲ್ಲಿದ್ದರೆ ಮಾತ್ರ ನಿವಾರಣೆ ಮಾಡಲು ಸಾಧ್ಯವಾಗುತ್ತದೆ. ಆದುದರಿಂದ ಬಡ ಜನರ ಮತ್ತು ಹಿಂದುಳಿದ ಜನಾಂಗದವರಿಗೆ ಮೇಲಿನ ಮುಖ್ಯ ಹುದ್ದೆಗಳನ್ನು ಸರ್ಕಾರ ಕೊಡಿಸುವ ಪ್ರಯತ್ನ ಮಾಡಬೇಕು. ನಮ್ಮ ನೆಚ್ಚಿನ ನಾಯಕರಾದ ಪ್ರಧಾನ ಮಂತ್ರಿಗಳು ಮೈನಾರಿಟೀಸ್ ಮತ್ತು ಹರಿಜನರಿಗೆ ನೌಕರಿಯಲ್ಲಿ ಉಚ್ಚಸ್ಥಾನ ಕೊಡಬೇಕೆಂದು, ಖಾಸಗೀ ಸಂಸ್ಥೆಗಳಲ್ಲಿಯೂ ಅವರಿಗೆ ಯೋಗ್ಯ ನೌಕರಿ ಕೆಲಸ ಕೊಡಬೇಕೆಂದೂ ಮೊನ್ನೆ ಹೇಳಿದ್ದಾರೆ. ಅವರು We are trying to put minority people in key positions. This does not solve the problem, but at least the prejudices that exists in the administration will go, if these people are there in key positions ಎಂದು ಹಿಂದುಳಿದವರಿಗೆ ನೌಕರಿಯಲ್ಲಿ ಉಚ್ಚಸ್ಥಾನ ಕೊಡುವ ವಿಷಯದಲ್ಲಿ ಇಂದಿರಾಗಾಂಧಿಯವರು ಒಪ್ಪುತ್ತಾರೆ. ಅವರಿಗೆ ಗೊತ್ತಾಗಿದೆ, ನಮ ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ಜನರ ಮುಖ್ಯ ಸ್ಥಾನದಲ್ಲಿದ್ದ ಹೊರತಾಗಿ ಅವರ ದುಃಖ ನಿವಾರಣೆ ಮಾಡುವುದಕ್ಕೆ ಸಾಧ್ಯ ಇಲ್ಲ ಎನ್ನುವುದು. ಅವರನ್ನು ಮೇಲಿನ ಸ್ಥಾನಗಳಿಗೆ ಹಾಕುವುದಕ್ಕೆ ಯೋಗ್ಯ ಶಿಕ್ಷಣ ಕೊಟ್ಟು ಅವರಿಗೆ ಕೆಲಸಗಳನ್ನು ಕೊಡಬೇಕು. ಇನ್ನೊಂದು ಸಂವಿಧಾನದಲ್ಲಿ ಇರುವ ರೀತಿ ಅವರಿಗೆ reservation of seats in Govt. services ದೊರೆಯುತ್ತಿಲ್ಲ. ಇದಕ್ಕೆ ಕಾರಣ ರಿಸರ್ವೇಷನ್ ಪರ್ಸೆಂಟೇಜ್ ಇಲ್ಲದೆ ಲೋಕಲ್ ಕ್ಯಾಂಡಿಡೇಟ್ಸ್ ತೆಗೆದುಕೊಳ್ಳುವುದು. ಆ ರೀತಿ ಸಾವಿರಾರು ಜನ ಲೋಕಲ್ ಕ್ಯಾಂಡಿಡೇಟ್ಸ್ ತೆಗೆದುಕೊಂಡಿದ್ದಾರೆ. ಅದರಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್—ಟ್ರಯಬ್ಸ್ ಜನರಿಗೆ ರಿಜರ್ವೇಷನ್ ಕೊಟ್ಟಿಲ್ಲ. ರಿಸರ್ವೇಷನ್ ಕಡಿಮೆ ಬಿದ್ದಿರುವುದರಿಂದ ಶೆಡ್ಯೂಲ್ಡ್ ಕ್ಯಾಸ್ಟ್—ಟ್ರೈಬ್ಸ್‌ಗೆ 18 ಪರ್‌ಸೆಂಟ್ ಆಗುವ ತನಕ ಅವರನ್ನು ಹುದ್ದೆಗಳಿಗೆ 25 ಪರ್‌ಸೆಂಟ್ ತುಂಬಬೇಕು. ಅದು ಆದನಂತರ ಹುದ್ದೆಗಳಿಗೆ 18 ಪರ್‌ಸೆಂಟ್ ತುಂಬಿಕೊಂಡು ಹೋಗುತ್ತಾ ಇರಬಹುದು ಎಂದು ಸೂಚನೆ ಮಾಡುತ್ತೇನೆ.

ಇನ್ನು ನೌಕರರ ವರ್ಗಾವರ್ಗಿ ಈ ವಿಷಯದಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್—ಟ್ರೈಬ್ಸ್‌ಗೆ ಅನ್ಯಾಯ ವಾಗುತ್ತಿದೆ, ಉದಾಹರಣೆಗೆ ಹೇಳಬಹುದು. ರಾಜಕಾರಣಿಗಳು ಎಂ. ಎಲ್. ಎ. ಗಳು ವರ್ಗಾವರ್ಗಿ ಬಗ್ಗೆ ಆಸಕ್ತಿ ತೆಗೆದುಕೊಳ್ಳಬಾರದೆಂದು ಸರ್ಕಾರದ ಆದೇಶ ಇದೆ. ಅದೇ ರೀತಿ ನಮ್ಮ ನೌಕರರ ಕಷ್ಟ ವಿಚಾರ ಮಾಡಿ ಅದನ್ನು ಪರಿಹರಿಸಲಿಕ್ಕೆ ಮೇಲಧಿಕಾರಿಗಳು ಪ್ರಯತ್ನ ಮಾಡಬೇಕು ಎಂದು ಸರ್ಕಾರಿ ಪರಿಪತ್ರವಿದೆ. ಆ ರೀತಿ ಆದೇಶ ಕೊಟ್ಟರೂ ಸಹ ಶೆಡ್ಯೂಲ್ಡ್ ಕ್ಯಾಸ್ಟ್—ಟ್ರೈಬ್ಸ್ ಮತ್ತು ಹಿಂದುಳಿದ ಜನರ ಕಷ್ಟ ನೋಡುವವರು ಯಾರೂ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಅವರ ವಿಷಯವನ್ನು ಯಾವಾಗಲೂ ತಿರಸ್ಕಾರ ಬುದ್ಧಿಯಿಂದ ನೋಡುತ್ತಾರೆ. ನೌಕರಿ ಮಾಡುವಂಥ ಇಂಥವರು ಎಷ್ಟು ದಿವಸ ಈ ರೀತಿ ನೌಕರಿ ಮಾಡಬೇಕು ? ನಮ್ಮ ನೆಂಟರು ಮತ್ತು ಸಂಬಂಧಿಕರು ಒಬ್ಬರಿಗೆ ತೊಂದರೆಯಾಗಿದೆ ಅವರು ಬೇರೆ ಕಡೆ ಕೆಲಸ ಮಾಡುವುದು ಅವರ ಹೆಂಡತಿ ಇನ್ನೊಂದು ಕಡೆ ಕೆಲಸ ಮಾಡುವುದು ಬೆಳಗಾವಿಯಲ್ಲಿ ಹೆಂಡತಿ ಕೆಲಸ ಮಾಡುತ್ತಿದ್ದರೆ ಬಿಜಾಪುರದಲ್ಲಿ ಗಂಡ ಕೆಲಸ ಮಾಡುತ್ತಿದ್ದಾನೆ. ನನ್ನ ಸಂಬಂಧಿಕನ ಕಷ್ಟನಿವಾರಣೆ ಮಾಡಬೇಕೆಂದು ಮಂತ್ರಿಗಳಿಗೆ ಹೇಳಿದೆ. ಮಂತ್ರಿಗಳು this is a genuine case and he should be transferred ಎಂದು ಹೇಳಿದರು. ಮಂತ್ರಿಗಳು ಈ ವಿಚಾರದಲ್ಲಿ ಏನು ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಮಂತ್ರಿಗಳು ನನ್ನ ಪತ್ರದ ಮೇಲೆ ಎಂಡಾರ್ಸ್‌ಮೆಂಟ್ ಮಾಡಿ ಕಳುಹಿಸಿರಬಹುದು. ಆದರೆ ಇನ್ನು ಟ್ರಾನ್ಸ್‌ಫರ್ ಆಗಿಲ್ಲ, ಕೊನೆಗೆ ಪರಿಣಾಮ ಏನು ಆಯಿತು ? ಎರಡು ವರ್ಷ ಸರ್ವಿಸ್ ಆಗಿಲ್ಲ, ನಿನ್ನನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಬರುವುದಿಲ್ಲ ಇದಕ್ಕೆ ಮುಂದೆ ಹೋಗಿ ಆ ಅಧಿಕಾರಿಯು you are warned for approaching a politician for your transfer ಎಂದು ವಾರ್ನಿಂಗ್ ಕೊಟ್ಟಿದ್ದಾರೆ, ಆ ಅಧಿಕಾರಿಗಳು ಆದುದರಿಂದ ಇಂಥ ಆಫೀಸರನ

ಕೈಯೊಳಗೆ ಆ ನೌಕರನ ಜೀವನ ಸುರಕ್ಷಿತ ಇಲ್ಲ ಇದು ಸ್ಪಷ್ಟವಾಗಿದೆ. ಇನ್ನು ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ ಯಾವ ರೀತಿ ಸಹನೆಯಿಂದ ಇರಬೇಕೋ ಗೊತ್ತಾಗುವುದಿಲ್ಲ. ಇಂಥ ಪ್ರಸಂಗದಲ್ಲಿ ಈ ನೌಕರನಿಗೆ ಈ ಅಧಿಕಾರಿಯಿಂದ ಎಂಥ ತೊಂದರೆ ಸಂಕಟಗಳನ್ನು ಅನುಭವಿಸ ಬೇಕಾದೀತೋ ಹೇಳಲಿಕ್ಕೆ ಬರುವಂತಿಲ್ಲ. ಆ ನೌಕರನಿಗೆ ಈ ಅಧಿಕಾರಿಯಿಂದ ಏನಾದರೂ ಅಪಾಯ ಸಂಭವಿಸಿದರೆ ಸಂಬಂಧಿಸಿದ ಮಂತ್ರಿಗಳು ಜವಾಬ್ದಾರರಾಗಬೇಕಾದೀತೆಂದು ನಾನು ಈ ಪ್ರಸಂಗದಲ್ಲಿ ಸರಕಾರದ ಗಮನಕ್ಕೆ ತರಬಯಸುತ್ತೇನೆ. ಇಂಥ ಪ್ರಸಂಗಗಳನ್ನು ತಪ್ಪಿಸಲು ಸರ್ಕಾರದವರು ಕಟ್ಟುನಿಟ್ಟಾಗಿ ಸಂವಿಧಾನದಲ್ಲಿ ಕಾಣಿಸಿದ ಸವಲತ್ತುಗಳನ್ನು ಶೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ಗೆ ಒದಗಿಸಿಕೊಡಬೇಕು ಎಂದು ಸರ್ಕಾರಕ್ಕೆ ಪ್ರಾರ್ಥಿಸಿ ಅಧ್ಯಕ್ಷರು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು (ಶಾಂತಿನಗರ) :—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಂದಿರತಕ್ಕ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತ ಈ ಸಂದರ್ಭದಲ್ಲಿ ಕೆಲವು ಸೂಕ್ತ ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ. ನಮ್ಮ ಅಧಿಕಾರಿಗಳಲ್ಲಿ ಯೋಗ್ಯತೆ ಮತ್ತು ದಕ್ಷತೆ ಇರಬೇಕು, ನಿಷ್ಠಾವಂತ ಅಧಿಕಾರಿಗಳು ಇರಬೇಕು ಎಂದು ಹೇಳಿದರೆ ಅಂತಹ ವರನ್ನು ನಾವು ಎಲ್ಲಿಂದ ತರೋಣ ? ಸರ್ಕಾರ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಇರುವ ಅವರೆಲ್ಲ ನಮ್ಮ ಅಣ್ಣ ತಮ್ಮಂದಿರಲ್ಲವೆ ? ಆದರೆ ತಮಗೆಲ್ಲ ಗೊತ್ತಿರುವ ಹಾಗೆ ಪ್ರಜಾಪ್ರಭುತ್ವಕ್ಕೆ ಮೂರು ಕಂಬಗಳು ಇವೆ—ಅವು ಯಾವುವೆಂದರೆ : (1) ಜುಡಿಷಿಯರಿ (2) ಎಗ್ಸಿಕ್ಯೂಟೀವ್ ಮತ್ತು (3) ಲೆಜಿಸ್ಲೇಚರ್. ಜುಡಿಷಿಯರಿ ಬೇಕಾದಷ್ಟು ತೀರ್ಮಾನಗಳನ್ನು ಕೊಡಬಹುದು ; ಲೆಜಿಸ್ಲೇಚರ್‌ನಲ್ಲಿ ನಾವು ಬೇಕಾದಷ್ಟು ಕಾನೂನುಗಳನ್ನು ಮಾಡಬಹುದು. ಆದರೆ ಕಾನೂನು ಗಳನ್ನು ಜಾರಿಗೆ ತರತಕ್ಕವರು ನಿಷ್ಠಾವಂತ ಅಧಿಕಾರಿಗಳೇ ಆಗಿರಬೇಕು. ಸಾರ್ವಜನಿಕ ಜೀವನ ದಲ್ಲಿ ಲೆಜಿಸ್ಲೇಚರ್ 5 ವರ್ಷ ಇರುತ್ತದೆ, ಆದರೆ ನಾವು 30 ವರ್ಷಗಳ ಕಾಲ ಸದಾ ಸೇವೆ ಮಾಡುತ್ತೇವೆ ಎನ್ನುವ ಭಾವನೆ ಈ ಅಧಿಕಾರಿಗಳಲ್ಲಿ ಪೂರ್ತಿ ಇರುತ್ತದೆ. ಅವರೂ ಸಹ ಪಬ್ಲಿಕ್ ಸರ್ವೆಂಟ್ಸ್, ದೇಶದ ಸೇವಕರು, ಎನ್ನುವ ಮನೋಭಾವನೆ ಅವರಲ್ಲಿ ಉದ್ಭವಿಸಬೇಕು ಎಂದು ಒತ್ತಿ ಹೇಳುತ್ತೇನೆ. ಜೊತೆಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಕೇವಲ 80 ಇಲಾಖೆಗಳಲ್ಲಿ ಮಾತ್ರ ಇದೆ. ಇನ್ನು ಎಷ್ಟೋ ಇಲಾಖೆಗಳಲ್ಲಿ ಕೇಡರ್ ಅಂಡ್ ರೆಕ್ರೂಟ್ ಮೆಂಟ್ ರೂಲ್ಸ್ ಇನ್ನೂ ಪೂರ್ತಿ ಆಗಿಲ್ಲ. ಆದಷ್ಟು ಜಾಗ್ರತೆ ಉಳಿದ ಇಲಾಖೆಗಳಲ್ಲಿ ಕೂಡ ಕೇಡರ್ ಮತ್ತು ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಮಾಡಿ ಮುಗಿಸಬೇಕು. ಇನ್ನು ರೆಗ್ಯುಲೆ ರೈಸೇಷನ್ ಆಫ್ ಸರ್ವೀಸ್ ಆಫ್ ಲೋಕಲ್ ಕ್ಯಾಂಡಿಡೇಟ್ಸ್ ಬಗ್ಗೆ ಹೇಳುವುದಾದರೆ, ಅವರ ಸರ್ವೀಸ್ ರೆಗ್ಯುಲರೈಸ್ ಮಾಡಬೇಕು. ಪದೇ ಪದೇ ಲೋಕಲ್ ಕ್ಯಾಂಡಿಡೇಟ್ಸನ್ನು ತೆಗೆದುಕೊಂಡು ಸಕಾಲದಲ್ಲಿ ಅವರ ಸರ್ವೀಸನ್ನು ರೆಗ್ಯುಲರೈಸ್ ಮಾಡದೇ ಇದ್ದರೆ ಅವರ ಸೀನಿಯಾರಿಟಿಗೆ ತೊಂದರೆಯಾಗುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಧಿಕಾರ ವರ್ಗದವರು ಮಾತೆತ್ತಿದರೆ ರೂಲ್ಸ್ ಮತ್ತು ರೆಗ್ಯುಲರೈಸೇಷನ್ ಹೀಗೆ ಹೇಳುತ್ತೆ ಎಂದು ಹೇಳುತ್ತಾರೆ. ಸಾಧ್ಯವಾದಮಟ್ಟಿಗೂ ಅವನ್ನು ಸಿಂಪ್ಲಿಫೈ ಮಾಡಬೇಕು ಎಂದು ಸೂಚಿಸುತ್ತೇನೆ.

ಇನ್ನು ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಏನಿದೆ ಅದು ಇದುವರೆಗೆ ಸರಿಯಾಗಿ ಪೂರ್ತಿ ಆಗಿಲ್ಲ. ಅಧಿಕಾರಿಗಳಲ್ಲಿ ಒಬ್ಬರಿಗೊಬ್ಬರಿಗೆ ಕೋ-ಆಪರೇಷನ್ ಇರುವುದಿಲ್ಲ. ಆಫೀಸಿನಲ್ಲಿ ಸರಿಯಾಗಿ ಕೆಲಸ ನಡೆಯುವುದಿಲ್ಲ. ಸೀನಿಯಾರಿಟಿ "ಓವ‌ರ್‌ಲುಕ್" ಮಾಡಿದರೆ ಆಫೀಸು ಗಳಲ್ಲಿ ಕೆಲಸ ಸರಿಯಾಗಿ ಆಗುವುದಿಲ್ಲ. ಆದುದರಿಂದ ಸೀನಿಯಾರಿಟಿ ಲಿಸ್ಟ್ ಜಾಗ್ರತೆ ಮಾಡಿ ಮುಗಿಸಲೇಬೇಕು.

ಇನ್ನುಮೇಲಾದರೂ ಕನ್ನಡಕ್ಕೂ ತೆಲುಗಿಗೂ ಒಂದು "ಕಾಮನ್ ಟೈಪ್‌ರೈಟರ್" ಮಾಡಬೇಕು. ಇದರಿಂದ ನ್ಯಾಷನಲ್ ಇಂಟಿಗ್ರೇಷನ್ ಮತ್ತು ಎಮೋಷನಲ್ ಇಂಟಿಗ್ರೇಷನ್ ಆಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೊದಲು ಐ.ಸಿ.ಎಸ್., ಐ.ಎ.ಎಸ್., ಐ.ಪಿ.ಎಸ್. ಆಫೀಸರು ಇರುತ್ತಿದ್ದರು. ಎಂ.ಎ.ಎಸ್. ಆಫೀಸರ್ ಏನಿದ್ದಾರೆ ಅವರಿಗೆ ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಎಂ.ಎಲ್.ಎಸ್., ಎಂ.ಎಲ್.ಸೀಸ್. ಮತ್ತು ಎಂ. ಪೀಸ್. ಸಂಬಂಧಪಟ ಅಧಿಕಾರಿಗಳ ಹತ್ತಿರ ಹೋಗಬಾರದೆಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಮಂತ್ರಿಗಳು ಬೇಕಾದರೆ ಒಬ್ಬ ಸಪರೇಟ್ ಕ್ಲಾರ್ಕ್‌ನ್ನು ಇಟ್ಟುಕೊಂಡು ಎಂ.ಎಲ್.ಎಸ್., ಎಂ ಎಲ್.ಸೀಸ್ ಮತ್ತು ಎಂ. ಪೀಸ್ ತಮ್ಮ ಹತ್ತಿರ ಬರುವ ಹಾಗೆ ಮಾಡಬೇಕು. ನಾವು ಅಧಿಕಾರಿಗಳ ಹತ್ತಿರ ಹೋದರೆ ಎಫಿಶಿಯನ್ಸಿ ಆಫ್ ಆಡ್ಮಿನಿಸ್ಟ್ರೇಷನ್ ಕಡಿಮೆಯಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಎಂ.ಎಲ್.ಏಸ್., ಎಂ.ಎಲ್. ಸೀಸ್. ಮತ್ತು ಎಂ. ಪೀಸ್ ಮಂತ್ರಿಗಳ ಹತ್ತಿರ ಹೋಗಿ ಅವರ ಮುಖಾಂತರ ಮಾತ್ರ ಕೆಲಸ ಮಾಡಿಸಬೇಕು ಎಂದು ಮತ್ತೊಮ್ಮೆ ಒತ್ತಿ ಹೇಳುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್, ಡಿಸ್ಟ್ರಿಕ್ಟ್ ರೆಕ್ರೂಟ್‌ಮೆಂಟ್ ಕಮಿಟೀಸ್ ಮತ್ತು ಪಬ್ಲಿಕ್ ಸರ್ವೀಸ್ ಕಮಿಷನ್ ಈ ಮೂರಕ್ಕೂ ಒಂದು ಕೋಆರ್ಡಿನೇಷನ್ ಇರಬೇಕು. ಕೆಲವು ಸಂದರ್ಭದಲ್ಲಿ ಕೋಆರ್ಡಿನೇಷನ್ ಇಲ್ಲದೆ ಅನೇಕ ಜನರು ತೊಂದರೆಗಳನ್ನು ಅನುಭವಿಸಿ ನಿರುದ್ಯೋಗಿಗಳಾಗಿದ್ದಾರೆ.

ಇನ್ನು ಅಬ್ಕಾರಿ ಇಲಾಖೆ ಬಗ್ಗೆ ಹೇಳುವುದಾದರೆ, ರೆಸಿಡೆನ್‌ಷಿಯಲ್ ಏರಿಯಾಸ್‌ನಲ್ಲಿ ಟ್ಯಾಡಿ ಶಾಪನ್ನು ಓಪನ್ ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿಯೇ ಹೇಳುವುದಾದರೆ ಕಾಲೇಜು ಮಧ್ಯದಲ್ಲಿ ಇಟ್ಟಿದ್ದಾರೆ. ಸಾಧ್ಯವಾದಮಟ್ಟಿಗೂ ಅವುಗಳನ್ನು ಊರಿನ ಹೊರಗೆ ಇಡಬೇಕು. ಇನ್ನು ಟೆಂಪರೆನ್ಸ್ ಕಮಿಟಿ ಬಗ್ಗೆ ಹೇಳುತ್ತೇನೆ. ದೇಶದಲ್ಲಿ ಅದರ ಬಗ್ಗೆ ಶಾಸನ ಇಲ್ಲದೆ ಇರುವಾಗ ಅದರ ಬಗ್ಗೆ ಏನು ಮಾಡುವುದಕ್ಕೂ ಆಗುವುದಿಲ್ಲ. ಆದುದರಿಂದ ಟೆಂಪರೆನ್ಸ್ ಕಮಿಟಿ ಓಪನ್ ಮಾಡಿ ಅಬ್ಕಾರಿಯಿಂದ ಬರತಕ್ಕ ಹಣದಿಂದ 20 ಪರ್ಸೆಂಟನ್ನು ಇದಕ್ಕಾಗಿಯೇ ಉಪಯೋಗಿಸಬೇಕು. ಪೂಜ್ಯ ಗಾಂಧೀಜಿಯವರು ಏತಕ್ಕೋಸ್ಕರ ದುಡಿದಿದ್ದಾರೆ ಎನ್ನುವುದನ್ನು ಮರೆತ್ತಿದ್ದೇವೆ. ಆದುದರಿಂದ ಗಾಂಧೀಜಿಯವರ ಉದ್ದೇಶವನ್ನು ನೆರವೇರಿಸುವ ಸಲುವಾಗಿ ಈಗ ಟೆಂಪರೆನ್ಸ್ ಕಮಿಟಿ ಮಾಡಬೇಕು ಎಂದು ಇಚ್ಛಿಸುತ್ತೇನೆ.

ಇನ್ನು ವಾರ್ತಾ ಇಲಾಖೆಯನ್ನು ಇಂಡಿಪೆಂಡೆಂಟ್ ಇಲಾಖೆ ಮಾಡಬೇಕು. ಟೂರಿಸ್ಟ್ ಸೆಂಟರ್‌ಗಳಲ್ಲಿ ಸಾಕಷ್ಟು ಅನುಕೂಲತೆಗಳನ್ನು ಒದಗಿಸುವುದರ ಜೊತೆಗೆ ಅವುಗಳಿಗೆ ಸಂಬಂಧಪಟ್ಟ ಸಾಹಿತ್ಯ ಅಥವಾ ಲಿಟರೇಚರ್ ಪಬ್ಲಿಷ್ ಮಾಡಬೇಕು. ಅಲ್ಲದೆ ನಮ್ಮ ಬೆಂಗಳೂರಿಗೆ ಮಾಡರ್ನ್ ವೆಲ್ ಎಕ್ವಿಪ್ಡ್ (Modren well equipped) ರೇಡಿಯೋ ಸ್ಟೇಷನ್ ಬೇಕು ಎಂದು ಹೇಳುತ್ತೇನೆ. ಈಗ ಅದು ಒಂದು ಹಳೇ ಕಟ್ಟಡದಲ್ಲಿ ಇದೆ. ಇಲ್ಲಿ ಮಾಡರ್ನ್ ರೇಡಿಯೋ ಸ್ಟೇಷನ್ ಇಲ್ಲ. ಆದುದರಿಂದ ಮಾಡರ್ನ್ ವೆಲ್ ಎಕ್ವಿಪ್ಡ್ ರೇಡಿಯೋ ಸ್ಟೇಷನ್‌ಬೇಕು ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಜೊತೆಗೆ ಟ್ರಾನ್ಸ್‌ಪೋರ್ಟೇಷನ್ ಫೆಸಿಲಿಟಿ ಟೂರಿಸ್ಟ್‌ಗಳಿಗೆ ಹೆಚ್ಚಿನ ರೀತಿ ಕೊಡಬೇಕು. ಅದರಿಂದ ವಿದೇಶೀ ವಿನಿಮಯ ಬೇಕಾದಷ್ಟು ಬರುತ್ತದೆ. ಕಾಂಟ್ರಾಕ್ಟ್ ಕ್ಯಾರೇಜಸ್ ಮತ್ತು ಪ್ರೈವೇಟ್ ಏಜನ್ಸೀಸ್ ಬೇಕಾದಷ್ಟು ಹಣ ಸಂಪಾದನೆ ಮಾಡುತ್ತಿದ್ದಾರೆ. ಫೈವ್ ಸ್ಟಾರ್ ಹೋಟೆಲ್ ಇದ್ದ ಹಾಗೆ ಮಾಡರ್ನ್ ಲಕ್ಸುರಿ ಬಸಸ್ ಏರ್ಪಾಡು ಮಾಡಿದರೆ, ಅದರಿಂದ ಫಾರಿನ್ ಎಕ್ಸ್‌ಚೇಂಜ್ ಅರ್ನ್ ಮಾಡಬಹುದು. ಆಯಾಯ ಸ್ಥಳಗಳ ಚರಿತ್ರೆಯನ್ನು ಫಾರಿನರ್ಸ್‌ಗೆ ತಿಳಿಸುವುದಕ್ಕೂ ಮತ್ತು ಹೇಳುವುದಕ್ಕೋಸ್ಕರ ರೆಕಗ್ನೈಸ್ ಗೈಡ್ಸನ್ನು ಅಪಾಯಿಂಟ್ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ಹಾಗೇ ಫಿಲಂ ಕಾರ್ಪೊರೇಷನ್ ಇದೆ. ಫಿಲಂ ಕಾರ್ಪೊರೇಷನ್‌ನ್ನು ಚೆನ್ನಾಗಿ ನುರಿತಂಥ ಮತ್ತು ಅರಿತಂಥವರ ಕೈಯಲ್ಲಿ ಕೊಡಬೇಕು. ಅಲ್ಲಿ ಸಾಧ್ಯವಾದಮಟ್ಟಿಗೂ ಮೈಸೂರಿನವರಿಗೆ ಉತ್ತೇಜನ ಕೊಡಬೇಕು ಎಂದು ಹೇಳುತ್ತೇನೆ. ಔಟ್ ಡೋರ್ ಮಿನಿ ಥಿಯೇಟರ್ಸ್‌ಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ನಮ್ಮಲ್ಲಿ ಈಗ 32 ಪರ್ಸೆಂಟ್ ಲಿಟರೆಸಿ ಇದೆ. ಆಡಿಯೋ ವಿಜುವಲ್ ಎಜುಕೇಷನ್ ಜನರಿಗೆ ಅಫೀಲ್ ಆಗುತ್ತದೆ. ಆದುದರಿಂದ ಸಾಧ್ಯವಾದ ಮಟ್ಟಿಗೂ ಮಿನಿ ಥಿಯೇಟರ್ಸ್ ಜಾಗ್ರತೆ ಕಟ್ಟಿಕೊಡಬೇಕು ಎಂದು ಸಲಹೆ ಮಾಡುತ್ತೇನೆ. ಹಾಗೆಯೇ ಫಿಲಂ ಟ್ರೈನಿಂಗ್ ಅಂಡ್ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ (Poona) ಪೂನಾದಲ್ಲಿದ್ದ ಹಾಗೆ, ಮಾಡರ್ನ್ ವೆಲ್ ಎಕ್ವಿಪ್‌ಡ್ ಇನ್‌ಸ್ಟಿಟ್ಯೂಟ್ ಇಲ್ಲಿ ಒಂದನ್ನು ಮಾಡಬೇಕು. ಈಗ ಅನೇಕ ಜನ ಕನ್ನಡಿಗರು ನೆರೆ ಪ್ರಾಂತಗಳಿಗೆ ಹೋಗಿ ಫಿಲಂಗಳನ್ನು ತೆಗೆಯಬೇಕಾಗಿದೆ. ನಮ್ಮ ಸಂಸ್ಥಾನದಲ್ಲೇ ಮಾಡರ್ನ್ ವೆಲ್ ಎಕ್ವಿಪ್‌ಡ್ ಥಿಯೇಟರ್ ಇರಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಹಾಗೆಯೇ ಪೊಲೀಸ್ ಇಲಾಖೆ ಬಗ್ಗೆ ನಾಲ್ಕು ಮಾತುಗಳನ್ನು ಹೇಳುತ್ತೇನೆ. ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ ನಮ್ಮ ದೇಶದಲ್ಲಿ ಮೂರು ಕೋಟಿ ಜನ ಇದ್ದೇವೆ. ಆದರೆ ಕೇವಲ 28,000 ಸಹಸ್ರ ಮಂದಿ ಕಾನ್‌ಸ್ಟೇಬಲ್ಸ್ ಮಾತ್ರ ಇದ್ದಾರೆ, ಇದು ಸಾಲದು. ಇನ್ನೂ ಹೆಚ್ಚಿನ ರೀತಿಯಲ್ಲಿ ಆಗಬೇಕು. ಈಗ ಮೇಲೆ ಇರತಕ್ಕ ಐ. ಜಿ. ಪಿ., ಡಿ. ಐ. ಜಿ. ಮುಂತಾದ ಮೇಲಿನ ಅಧಿಕಾರಿಗಳಿಗೆ ಹೆಚ್ಚಿನ ಸ್ಥಾನಮಾನವಿದೆ. ಆದರೆ ಕಾನ್‌ಸ್ಟೇಬಲ್‌ಗಳಿಗೆ ಬಹಳ ಕಡಿಮೆ ಸ್ಥಾನಮಾನವಿದೆ ಮತ್ತು ಸಂಬಳವೂ ಸಾಲದು. ಕಾನ್‌ಸ್ಟೇಬಲರಿಯನ್ನು ಹೆಚ್ಚಿನ ರೀತಿಯಲ್ಲಿ ಇನ್‌ಕ್ರೀಸ್ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಜೊತೆಗೆ ಈಗಿರತಕ್ಕ ಮಿನಿಸ್ಟೀರಿಯಲ್ ಸ್ಟಾಫ್ (Ministerial staff) ಸಾಲದು. ಅವರಿಗೆ ಕೆಲಸ ಜಾಸ್ತಿ ಇದೆ. ಆದುದರಿಂದ ಮಿನಿಸ್ಟೀರಿಯಲ್ ಸ್ಟಾಫ್‌ನ್ನು ಹೆಚ್ಚಿಸಬೇಕು ಎಂದು ಹೇಳುತ್ತೇನೆ. ಕಾನ್‌ಸ್ಟೇಬಲ್‌ಗಳನ್ನು ರೆಕ್ರೂಟ್ ಮಾಡುವ ಕಾಲದಲ್ಲಿ ಹಿಂದೆ ಫಿಸಿಕಲಿ ಫಿಟ್ ಆಗಿರುವವರನ್ನು ತೆಗೆದುಕೊಳ್ಳುತ್ತಿದ್ದರು. ಇನ್ನು ಮುಂದೆ ಎಸ್. ಎಸ್. ಎಲ್. ಸಿ. ಮಿನಿಮಂ ಕ್ವಾಲಿಫಿಕೇಷನ್ ಇದ್ದವರನ್ನು ಮಾತ್ರ ರೆಕ್ರೂಟ್ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. 1971 ರಿಂದೀಚೆಗೆ ಹೈಯ್ಯರ್ ಆಫೀಸರ್ಸ್‌ಗಳಿಗೆ ಮಾತ್ರ ಯೂನಿಫಾರಮ್ಸ್ ಅಲೋಯನ್ಸ್ ಕೊಡುತ್ತಿದ್ದಾರೆ. ಆದರೆ ಬಡ ಪೊಲೀಸ್ ಅಧಿಕಾರಿಗಳಿಗೆ ಅದನ್ನು ಕೊಡುತ್ತಾ ಇಲ್ಲ. ಇವರಿಗೆ ಎರಡು ಜೊತೆ ಬಟ್ಟೆಗಳನ್ನು ಮಾತ್ರ ಕೊಡುತ್ತಾರೆ. ಅದು ಸಾಲದು. ಬ್ರಿಟಿಷರ ಕಾಲದಲ್ಲಿ ಯೂನಿಫಾರ್ಂಗೆ ಬಹಳ ಪ್ರಾಮುಖ್ಯತೆ ಕೊಡುತ್ತಿದ್ದರು. ಪರೇಡಿಗೆ ಪ್ರಾಮುಖ್ಯತೆ ಕೊಡುತ್ತಿದ್ದರು. ಆದುದರಿಂದ ಯೂನಿಫಾರಂನ್ನು ತಾವು ಎರಡಕ್ಕೆ ಬದಲು ನಾಲ್ಕು ಕೊಡಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ. ಡೈರೆಕ್ಟ್ ರೆಕ್ರೂಟ್‌ಮೆಂಟ್ ಹಿಂದಿನಿಂದಲ್ಲೂ ಮಾಡುತ್ತಿದ್ದಾರೆ. ಸಬ್ ಇನ್‌ಸ್ಪೆಕ್ಟರ್ಸ್ ಪೋಸ್ಟ್ $66\frac{1}{2}$ ಪರ್ಸೆಂಟ್, ದಫೇದಾರ್ಸ್ ಪೋಸ್ಟ್ $33\frac{1}{2}$ ಪರ್ಸೆಂಟ್ ಪ್ರಮೋಷನ್ ಕೊಡಬೇಕು ಎಂದು 1958 ರಲ್ಲಿ ರೂಲ್ಸ್ ಮಾಡಿದ್ದಾರೆ. ಆದರೂ ಸಹ ಕೇವಲ 5 ಪರ್ಸೆಂಟ್ ಕೊಡುತ್ತಿದ್ದಾರೆ. ಇದು ಅನ್ಯಾಯ ಎಂದು ಹೇಳಲು ಇಚ್ಛೆಪಡುತ್ತೇನೆ. ಇದನ್ನು ಸರಿಪಡಿಸಬೇಕು. ಪೊಲೀಸ್ ಡಾಗ್ ಸ್ಕ್ವೇಡ್ ಬೆಂಗಳೂರಿನಲ್ಲಿದೆ. ಗ್ರಾಮಾಂತರ ಪ್ರದೇಶದಲ್ಲಿ ಇಲ್ಲ. ಮರ್ಡರ್ಸ್, ಕ್ರೈಮ್ಸ್ ಡಿಟೆಕ್ಟ್ ಮಾಡಬೇಕಾದರೆ ಇದು ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು Squad ಇರಬೇಕು ಎಂದು ಹೇಳುತ್ತೇನೆ. ಮದ್ರಾಸ್ ಪ್ರಾಂತದ ವೆಲ್ಲೂರಿನಲ್ಲಿರುವ ಪೊಲೀಸ್ ಟ್ರೈನಿಂಗ್ ಸ್ಕೂಲು ಬಹಳ ಎಫಿಶಿಯಂಟಾಗಿ ಕೆಲಸಮಾಡುತ್ತಾ ಇದೆ. ಅದರಂತೆ ನಮ್ಮಲ್ಲಿರುವ Mandya ಪೊಲೀಸ್ ಟ್ರೈನಿಂಗ್ ಸ್ಕೂಲು ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸಮಾಡಿ ನಮ್ಮ ಪೊಲೀಸರ ಸ್ಟಾಂಡರ್ಡ್ ಇನ್‌ಕ್ರೀಸ್ ಮಾಡಬೇಕು ಎಂದು ಹೇಳುತ್ತೇನೆ. ವಿ ರೆಸ್ಪೆಕ್ಟ್ ದೋಸ್ ಹು ಒಬೇ ಲಾ ಎಂದು ಬೋರ್ಡ್ ಹಾಕಿರುತ್ತಾರೆ.

"We respect those who obey law and we protect those who obey law" ಎಂದು ಕೂಡ ಬೋರ್ಡ್ ಹಾಕಬೇಕು. ಇಲ್ಲಿ (fleet of vehicles) ಫ್ಲೀಟ್ ಆಫ್ ವೆಹಿಕಲ್ಸ್ ಇದೆ. ಅದಕ್ಕಾಗಿ ಒಂದು ಸೆಂಟ್ರಲ್ ಇಂಡಸ್ಟ್ರಿಯಲ್ repair ವರ್ಕ್‌ಶಾಪ್ ಇರಬೇಕು ಎಂದು ಹೇಳುತ್ತೇನೆ.

ಇದರ ಜೊತೆಗೆ ಆಲ್ ಇಂಡಿಯಾ ಪೊಲೀಸ್ ಗೇಮ್ಸ್ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಅಂದರೆ ಆಲ್ ವರ್ಕ್ ಅಂಡ್ ನೊ ಪ್ಲೇ, ಮೇಕ್ಸ್‌ಜಾಕ್ ಎ ಡಲ್ ಬಾಯ್ ಎಂದು ಒಂದು English ಗಾದೆ ಇದೆ. All work and no play makes Jack a dull boy. ಒಟ್ಟಿನಲ್ಲಿ ಹಿಂದೆ ಮೈಸೂರಿನ ಪೊಲೀಸರಿಗೆ ಗೇಮ್ಸ್‌ನಲ್ಲಿ ಒಳ್ಳೆಯ ಹೆಸರು ಇತ್ತು. I had the privilege of training one or two All India Champions in Games also. ಆದುದರಿಂದ ಈ ಗೇಮ್ಸ್‌ಗೆ, ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ. (Scotlandyard) ಸ್ಕಾಟ್‌ಲೆಂಡ್ ಮುಂತಾದ ಪರದೇಶಗಳಿಗೆ ಪೊಲೀಸರನ್ನು ಹೆಚ್ಚಿನ ರೀತಿಯಲ್ಲಿ ಡೆಪ್ಯುಟೇಷನ್ ಕಳಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಪಬ್ಲಿಕ್ ಡ್ಯೂಟಿ ಮಾಡುವಾಗ ಆತನು ಸತ್ತುಹೋದರೆ ಆತನ ಮಕ್ಕಳಿಗೆ ಸ್ಕಾಲರ್‌ಶಿಪ್ ಮತ್ತು ಜಮೀನು ಕೊಡಬೇಕು ಎಂದು ಸಲಹೆ ಮಾಡುತ್ತೇನೆ. ಗಲಾಟೆಯ ಕಾಲದಲ್ಲಿ ಮೊದಲು ಆತ ಸಾಯುತ್ತಾನೆ. ಮುಖ್ಯವಾಗಿ ಏಟು ತಿನ್ನುವವನು ಪೊಲೀಸ್‌ನವ. ಆದುದರಿಂದ ಆತನ ಕುಟುಂಬದವರಿಗೆ ಹಣ, ಜಮೀನು ಮತ್ತು ಆತನ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. (Reserve) ರಿಜರ್ವ್ ಪೊಲೀಸ್‌ನಲ್ಲಿ ಎಂ. ಎ. ಆರ್. ಪಿ, ಸಿ. ಎ. ಆರ್, ಮತ್ತು ಸಿಟಿ ಪೊಲೀಸ್ ಎಂದು 3 ತರಹ ಇದೆ. ಇವರಿಗೆಲ್ಲರಿಗೂ ಯೂನಿಫಾರಂ ಸ್ಕೇಲ್ ಇರಬೇಕು. ಹೋಂ ಗಾರ್ಡ್ಸ್‌ಗೆ ಹೊರಗಿನ ವರನ್ನು ತೆಗೆದುಕೊಂಡು ಬರುತ್ತಾರೆ. ಅದು ಕೂಡದು. ನಮ್ಮ ಇಲಾಖೆಯಲ್ಲಿರತಕ್ಕ ಅಧಿಕಾರಿ ಗಳಿಗೆ ಎನ್‌ಕರೇಜ್ ಮಾಡಬೇಕು ಎಂದು ಹೇಳುತ್ತೇನೆ. ಇನ್ನೂ ಹೆಚ್ಚು ವಿಷಯಗಳನ್ನು ಹೇಳಬೇಕೆಂದು ಇದ್ದೆ, ಆದರೆ ಕಾಲಾವಕಾಶವಿಲ್ಲದೇ ಇರುವುದರಿಂದ ಅಧ್ಯಕ್ಷರ ಆಜ್ಞೆಮೇರೆಗೆ ಈ ನಾಲ್ಕು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಜೈ ಕರ್ನಾಟಕ.

ಶ್ರೀ ಎಸ್. ಬಂಗಾರಪ್ಪ (ಸೊರಬ) :—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಸಾಮಾನ್ಯ ಆಡಳಿತ, ಅಬ್ಕಾರಿ, ಪೊಲೀಸು, ಜೈಲು, ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್ ಈ ವಿಷಯಗಳನ್ನು ಕುರಿತು ನಾನು ವಿರೋಧ ಮಾಡಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ನಾನು ನನ್ನ ಭಾಷಣದಲ್ಲಿ ಎರಡು ಪ್ರಾಮುಖ್ಯವಾದ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಮೊಟ್ಟಮೊದಲನೆಯದಾಗಿ ಎಕ್ಸೈಜ್ ಮತ್ತು ಅಬ್ಕಾರಿ ವಿಷಯದಲ್ಲಿ ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಮಾನ್ಯ ಮುಖ್ಯಮಂತ್ರಿಗಳಾದಿಯಾಗಿ ಅವರು ಪಕ್ಷದ ಸದಸ್ಯರನ್ನೂ ಸೇರಿಸಿಕೊಂಡು ಹೇಳಬೇಕಾದರೆ ಹಿಂದೆ ಅವರು ಈ ಕಡೆ ಕೂತಿದ್ದಾಗ ಹಿಂದಿನ ಸರ್ಕಾರದ ಮೇಲೆ ಏನು ಆಪಾದನೆ ಮಾಡುತ್ತಾ ಇದ್ದರು ಎಂದರೆ ಪ್ರೈವೇಟ್ ಸೆಕ್ಟಾರ್‌ನಲ್ಲಿರತಕ್ಕಂಥ ಕೆಲವು ಡಿಸ್ಟಲರೀಸ್ ಅಂಡ್ ಬ್ರೆವರೀಸ್ ವಿಷಯದಲ್ಲಿ ನೀವು ಪಬ್ಲಿಕ್ ಸೆಕ್ಟಾರ್ಸ್‌ನ್ನು ಮರೆತು ಪ್ರೈವೇಟ್ ಸೆಕ್ಟಾರ್ಸ್‌ಗೆ ಲೈಸೆನ್ಸನ್ನು ಕೊಡುತ್ತಾ ಇದ್ದೀರಿ ಎಂದು ಆಪಾದನೆ ಮಾಡುತ್ತಾ ಇದ್ದರು. ಈ ವಿಷಯದಲ್ಲಿ ತಮ್ಮನ್ನು ಕೇಳಬೇಕಾದರೆ ತಾವು ಹಿಂದಿನ ಸರ್ಕಾರದ ನೀತಿ ನಿಯಮಗಳನ್ನು ಬಿಟ್ಟು ಬೇರೆ ಯಾವ ನೀತಿ ನಿಯಮಗಳನ್ನು ತಂದಿದ್ದೀರಿ, ಎಂದು ಕೇಳುತ್ತೇನೆ. ಖೋಡೇಸ್ ಡಿಸ್ಟಲರೀಸ್ ಅಂಡ್ ಬ್ರೆವರೀಸ್‌ಗೆ ಲೈಸೆನ್ಸ್ ಕೊಟ್ಟಿರುವುದು ಅದು ಯಾವ ರೀತಿ ಬೆಳವಣಿಗೆಯಾಗಿದೆ, ಅದು ಯಾವ ಕಾನೂನಿನ ಚೌಕಟ್ಟಿನ ಅಡಿಯಲ್ಲಿ

ಇದೆ ಮತ್ತು ಅದು ಯಾವ ರಕ್ಷಣೆಯಲ್ಲಿದೆ ಮತ್ತು ಯಾವ ಸರ್ಕಾರದ ರಕ್ಷಣೆಯಲ್ಲಿದೆ ಇದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ನಾನು ತಮ್ಮಲ್ಲಿ ಇನ್ನೊಂದು ವಿಷಯವನ್ನು ಪ್ರಶ್ನೆ ಮೂಲಕ ಕೇಳುತ್ತೇನೆ. ಪ್ರೈವೇಟ್ ಸೆಕ್ಟಾರ್‌ನಲ್ಲಿರತಕ್ಕಂಥ ಡಿಸ್ಟಲರೀಸ್ ಅಂಡ್ ಬ್ರೆವರೀಸ್‌ಗೆ ಮಾನ್ಯತೆ ಮಾಡಬಾರದು, ಪಬ್ಲಿಕ್ ಸೆಕ್ಟಾರ್‌ನಲ್ಲಿರುವಂಥಾದ್ದಕ್ಕೆ ಹೆಚ್ಚು ಗಮನ ಕೊಡಬೇಕು ಎಂದು ತಮ್ಮ ಬಾಯಿನಿಂದಲೇ ಕೇಳಿರುವುದು ನನಗೆ ನೆನಪು ಇದೆ. ಈ ಬಗ್ಗೆ ಖೋಡೇಸ್ ಡಿಸ್ಟಲರೀಸ್ ಅಂಡ್ ಬ್ರೆವರೀಸ್‌ಗೆ ಲೈಸೆನ್ಸ್ ಕೊಟ್ಟಿರುವುದಲ್ಲದೆ ನಂದಿ ಡಿಸ್ಟಲರೀಸ್ ಅಂಡ್ ಬ್ರೆವರೀಸ್‌ಗೆ ಲೈಸೆನ್ಸ್ ಕೊಟ್ಟಿದ್ದೀರಿ. ಇದನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ ಎಂದರೆ ಆ ಬಗ್ಗೆ ಹೇಳುತ್ತೇನೆ. ಇದಕ್ಕೆ ಲೈಸೆನ್ಸ್ ತೆಗೆದುಕೊಳ್ಳಬೇಕಾದರೆ 7,500 ರೂಪಾಯಿ ಕಟ್ಟಿ ಒಂದು ಅಪ್ಲಿಕೇಷನ್ ಹಾಕುತ್ತಾರೆ. ಅದನ್ನು ಏನು ಮಾಡಿದ್ದೀರಿ ಎಂದರೆ ಅಪ್ಲಿಕೇಷನ್ ನಮೂನೆಯನ್ನು 25,000 ರೂಪಾಯಿಗೆ ಏರಿಸಿ ಬೇರೆಯವರು ಅಪ್ಲಿಕೇಷನ್ ಏನು ಹಾಕಿದ್ದರೋ ಅವರು ವಿತ್‌ಡ್ರಾ ಮಾಡಿಕೊಳ್ಳುವ ಹಾಗೆ ಮಾಡಿ ಇವರಿಗೆ ಕೊಟ್ಟಿದ್ದೀರಿ. ಈ ರೀತಿ ಯಾಗಿ ನಿಮ್ಮ ಇಲಾಖೆಯವರು ಮಾಡಿದ್ದು ದಾಖಲೆಯಲ್ಲಿ ಇದೆ. ಖೋಡೇಸ್ ಡಿಸ್ಟಲರೀಸ್ ಮತ್ತು ಬ್ರೆವರೀಸ್ ಬಗ್ಗೆ ಹೇಳುವುದಿಲ್ಲ. ಆ ಬಗ್ಗೆ ತಮಗೆಲ್ಲಾ ಗೊತ್ತಿದೆ. ಆದರೆ ನಾನು ಈ ನಂದಿ ಡಿಸ್ಟಲರೀಸ್ ಅಂಡ್ ಬ್ರೆವರೀಸ್ ಬಗ್ಗೆ ಹೇಳುತ್ತೇನೆ. ಇದರಲ್ಲಿ ಯಾರು ಯಾರು ಸೇರಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ಶ್ರೀ ಎಂ.ಡಿ. ಶಿವನಂಜಪ್ಪ, ಅವರು ಹಿಂದೆ ಕಾಮರ್ಸ್ ಅಂಡ್ ಇಂಡ್ರಸ್ಟ್ರೀಸ್‌ನಲ್ಲಿ ಎಕ್ಸ್‌ಸೆಕ್ರೆಟರಿ ಆಗಿದ್ದರು, ಅವರ ಹೆಸರು ಇದೆ. ಇನ್ನೊಬ್ಬರು ಶ್ರೀ ಟಿ. ಶಾಮಣ್ಣ ಅವರು ಒಬ್ಬರು ರಿಟೈರ್ಡ್ ಅಫಿಷಿಯಲ್, ಅವರುಗಳು ಇದರಲ್ಲಿ ಸೇರಿದ್ದಾರೆ. ಈ ನಂದಿ ಡಿಸ್ಟಲರೀಸ್ ಅಂಡ್ ಬ್ರೆವರೀಸ್‌ಗೆ ಹಿಂದೆ ಎಕ್ಸೈಜ್ ಕಮೀಷನರ್ ಆಗಿದ್ದ ಈಗ ಡಿವಿಷನಲ್ ಕಮೀಷನರ್ ಆಗಿರುವ ಡಿ. ಬಾಲರಾಜ್ ಅವರು ಇದರಲ್ಲಿ ಷೇರು ಹಾಕಿದ್ದಾರೆ. ಎಂದು ತಿಳಿದುಬಂದಿದೆ. ಇದಕ್ಕೆ ಲೈಸೆನ್ಸ್ ಕೊಟ್ಟದ್ದು ಶ್ರೀ ಬಾಲರಾಜ್ ಅವರೇ. ಅವರು ಪ್ರೊಬೇಷನರಿ ಆಫೀಸರಾಗಿ 200 ರೂಪಾಯಿ ಸಂಬಳದ ಮೇಲೆ ಸೇರಿದ್ದರು. ಅವರು ಸಾಮಾನ್ಯ ಅಧಿಕಾರಿ ಎಂದು ತಿಳಿದಿದ್ದೇನೆ, ಅವರ ಚರಿತ್ರೆ ಬಹಳ ದೊಡ್ಡ ಚರಿತ್ರೆ. ಈವೊತ್ತಿನ ದಿವಸ ಅವರ ಹತ್ತಿರ ಎಷ್ಟೊಂದು ಪ್ರಾಪರ್ಟೀಸ್ ಇದೆ ಎಂದರೆ ಸಾಕಷ್ಟು ಪ್ರಾಪರ್ಟೀಸ್‌ನ್ನು ಮಾಡಿಕೊಂಡಿದ್ದಾರೆ. ಅವರು ಮೈಸೂರು, ಬೆಂಗಳೂರು ಮತ್ತು ಪಾಂಡಿಚೆರಿಯಲ್ಲಿ ಬೇಕಾದಷ್ಟು ಪ್ರಾಪರ್ಟೀಸ್‌ನ್ನು ಕೊಂಡುಕೊಂಡಿದ್ದಾರೆ. ಅದು ಅವರ ಒಬ್ಬರ ಹೆಸರಿನಲ್ಲೇ ಇಲ್ಲ, ಅವರ ಮಕ್ಕಳು, ಅವರ ಹೆಂಡತಿ, ಅವರ ಮಾವ ಇವರುಗಳ ಹೆಸರಿನಲ್ಲಿ ಇದೆ. ಅವರು ಈ ಪ್ರಾಪರ್ಟೀಸನ್ನು ಲೀಸ್‌ಗೆ ಕೊಡುತ್ತಿದ್ದಾರೆ. ಇದನ್ನು ವೆರಿಫೈ ಮಾಡ ಬೇಕು. ಈವೊತ್ತು ಅವರ ಪ್ರಾಪರ್ಟಿ ಸುಮಾರು 50 ಲಕ್ಷದ ಮೇಲೆ ಇದೆ. ಈವೊತ್ತಿನ ದಿವಸ ನಾನು ಛಾಲೇಂಜ್ ಮಾಡುತ್ತೇನೆ. ಈ ಬಗ್ಗೆ ಎನ್‌ಕ್ವೈರಿ ಮಾಡಿ. ನಾನು ಆ ಬಗ್ಗೆ ಡಾಕ್ಯುಮೆಂಟ್ಸ್ ಕೊಟ್ಟು ಪ್ರೂವ್ ಮಾಡುತ್ತೇನೆ. ಆದುದರಿಂದ ಇದಕ್ಕೆ ಒಂದು ಎನ್‌ಕ್ವೈರಿ ಕಮೀಷನ್ ನೇಮಕ ಮಾಡಬೇಕು ಎಂದು ಹೇಳುತ್ತೇನೆ. ಒಬ್ಬ ಅಫಿಷಿಯಲ್ ಹಿಂದೆ ಎಕ್ಸೈಜ್ ಕಮೀಷನರ್ ಆಗಿದ್ದವರು ಸುಮಾರು 50 ಲಕ್ಷದ ಮೇಲೆ ಪ್ರಾಪರ್ಟಿ ಮಾಡಿಕೊಂಡಿರಬೇಕಾದರೆ ಈ ಬಗ್ಗೆ ಎನ್‌ಕ್ವೈರಿ ಆಗಲೇಬೇಕು. ಅವರು ಪ್ರಾಪರ್ಟಿ ಮಾಡಿಕೊಂಡಿರುವುದನ್ನು ಹೇಳುತ್ತೇನೆ :—

(1) ಬೆಂಗಳೂರಿನ ಪ್ಯಾಲೇಸ್ ರೋಡಿನಲ್ಲಿ ಎರಡು ಮಲ್ಟಿ ಸ್ಟೋರೇಡ್ ಬಿಲ್ಡಿಂಗ್ ಇದೆ. ಒಂದು ದೊಡ್ಡ ಸೈಟಿನಲ್ಲಿ ಕಟ್ಟಿದ್ದಾರೆ.

(2) ಇನ್ನೊಂದು ಕುಕ್ಸ್ ಟೌನ್‌ನಲ್ಲಿ ಒಂದು ಡ್ವೆಲಿಂಗ್ ಹೌಸ್, ಮತ್ತೊಂದು ಮನೆ ಇದೆ.

(3) ಮೈಸೂರಿನಲ್ಲಿ ಲಲಿತಮಹಲ್‌ನಲ್ಲಿ ಎರಡು ಎಕರೆ ಅರ್ಬನ್ ಸೈಟ್ಸ್ ಲ್ಯಾಂಡ್ ಇದೆ.

(4) ಪಾಂಡಿಚೆರಿಯಲ್ಲಿ ವಿಪರೀತ ಪ್ರಾಪರ್ಟೀಸ್ ಇದೆ. ಮತ್ತು

(5) ನಂದಿ ಡಿಸ್ಟಲರೀಸ್ ಅಂಡ್ ಬ್ರೆವರೀಸ್‌ನಲ್ಲಿ ಷೇರ್ಸ್ ಇದೆ.

ಅವರ ಪ್ರಾಪರ್ಟಿಯನ್ನು ಈಗ ಲೆಕ್ಕಿ ಹಾಕಿದರೆ ಸುಮಾರು ಮುಕ್ಕಾಲು ಕೋಟಿ ರೂಪಾಯಿ ಗಿಂತಲೂ ಜಾಸ್ತಿ ಇದೆ. ಆದುದರಿಂದ ಈ ಬಗ್ಗೆ ವಿಚಾರಣೆ ಆಗಬೇಕು. ಈವೊತ್ತಿನ ದಿವಸ ಷ್ಯಾಂಕಿ ರೋಡಿನಲ್ಲಿರತಕ್ಕಂಥ ಪ್ರಾಪರ್ಟೀಯನ್ನು 8 ಲಕ್ಷಕ್ಕೆ ಕೊಂಡುಕೊಂಡಿದ್ದಾರೆ. ಆದರೆ ಸೇಲ್‌ಡೀಡ್‌ನ್ನು 45 ಸಾವಿರಕ್ಕೆ ಬರೆಸಿದ್ದಾರೆ ಎಂದು ಕೇಳಿದ್ದೇನೆ. ಇದನ್ನು ವೆರಿಫೈ ಮಾಡಿ ಎನ್‌ಕ್ವೈರಿ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಈ ಸಮಾಜವಾದದಲ್ಲಿ ಮುಖ್ಯಮಂತ್ರಿಗಳಿಗೆ ನಂಬಿಕೆ ಇದ್ದರೆ ಈ ಆಫೀಸರನ್ನು ಹಿಡಿತದಲ್ಲಿಡಬೇಕು. ಮತ್ತು ಈ ಬಗ್ಗೆ ಯಾವ ರೀತಿ ವಿಚಾರ ಮಾಡುತ್ತೀರಿ ಎನ್ನುವುದನ್ನು ತಮ್ಮ ಉತ್ತರದಲ್ಲಿ ಹೇಳಬೇಕು ಎಂದು ಹೇಳುತ್ತೇನೆ.

ಇನ್ನು ಸೇಂದಿಯಲ್ಲಿ ಕ್ಲೋರಲ್ ಹೈಡ್ರೇಟ್ ಉಪಯೋಗಿಸಿ ಮಾರುತ್ತಿದ್ದಾರೆ ಎಂದು ಕೇಳಿದ್ದೇನೆ. ಇದರ ಬಗ್ಗೆ ಪತ್ರಿಕೆಯಲ್ಲೂ ಕೂಡ ಬಂದಿದೆ. ಅದು ಇಂಡಿಯಾಕ್ಕೆ ಒಂದು ತಿಂಗಳಿಗೆ ಒಂದು ಟನ್ ಬೇಕಾಗುತ್ತದೆ ಎಂದು ಅಂದಾಜು ಮಾಡಿದ್ದಾರೆ. ಹಾಗಿದ್ದರೂ ಕೂಡ ಶ್ರೀ ಬಾಲ ರಾಜ್ ಅವರು ಎಕ್ಸೈಜ್ ಕಮೀಷನರ್ ಆಗಿದ್ದಾರೆ, ಎಷ್ಟು ಬೇಕಾದರೂ ತರಿಸಿಕೊಂಡು ಮಾರು ವುದಕ್ಕೆ ಪರ್ಮಿಟ್ಸ್ ಕೊಟ್ಟಿದ್ದಾರೆ. ಈ ಬಗ್ಗೆ ಡಾಕ್ಟರ್ ಅಡ್ವೈಸ್ ಮಾಡಿದ್ದಾರೆ. ಇದನ್ನು ಅದರಲ್ಲಿ ಎಷ್ಟುಮಟ್ಟಿಗೆ ಉಪಯೋಗಿಸಬೇಕೋ ಅಷ್ಟರಮಟ್ಟಿಗೆ ಉಪಯೋಗಿಸಬೇಕು. ಜಾಸ್ತಿ ಹಾಕಬಾರದು, ಜಾಸ್ತಿ ಹಾಕಿದರೆ ಹಾನಿಯಾಗುತ್ತದೆ ಎಂದು. ಆದರೂ ಕೂಡ ಇವರು ಡಾಕ್ಟರ್ ಅಡ್ವೈಸ್‌ನ್ನು ಬದಿಗೊತ್ತಿ ಸಾವಿರಾರು ಟನ್‌ಗಳನ್ನು ಸೇಂದಿಗೆ ಸೇರಿಸಿ ಮಾರಾಟ ಮಾಡುತ್ತಿದ್ದಾರೆ.

ಇಷ್ಟು ಮಾಡಿದಮೇಲೆ ಏನಾಯಿತು ಎಂದರೆ ಜನರ ಆರೋಗ್ಯ ಹಾಳಾಯಿತು, ಸೇಲ್ಸ್ ಜಾಸ್ತಿಯಾಯಿತು. ಕ್ಲೋರಲ್ ಹೈಡ್ರೇಟ್ ವಿಷಯ ಏಕೆ ಹೇಳುತ್ತಿದ್ದೇನೆಂದರೆ ಬೆಂಗಳೂರಿ ನಲ್ಲಿರುವ ಎಕ್ಸೈಜ್ ಕಂಟ್ರಾಕ್ಟರುಗಳು ಮತ್ತು ದೊಡ್ಡ ಕಂಟ್ರಾಕ್ಟರುಗಳಿಗೆ ಶ್ರೀ ಬಾಲರಾಜ್ ಅವರೇ ಇದಕ್ಕೆ ಪರ್ಮಿಟ್‌ಗಳನ್ನು ಕೊಟ್ಟಿದ್ದಾರೆ. ಅವರೂ ಇವರೂ ಸೇರಿಕೊಂಡು ಕಂಪೆನಿ ಗಳನ್ನು ನಡೆಸುತ್ತಿದ್ದಾರೆ. ಇದರ ಬಗ್ಗೆ ಕೂಡ ಕೂಲಂಕಷವಾಗಿ ವಿಚಾರಣೆ ಮಾಡಬೇಕು.

ಬಾಲರಾಜ್ ಅವರ ಪ್ರಾಪರ್ಟಿ ಕಥೆ ಇಷ್ಟಕ್ಕೇ ಮುಗಿಯಲಿಲ್ಲ. ಅವರು ಫಾರಿನ್ ಕಂಟ್ರೀಸ್‌ಗೆ ಪ್ರತಿ ವರ್ಷ ಹೋಗುತ್ತಿದ್ದಾರೆ. ಅವರು ಕ್ರಿಶ್ಚಿಯನ್ ಕಾನ್‌ಫರೆನ್ಸ್‌ಗಳಿಗೆ ಹೋಗುವ ನೆಪದಲ್ಲಿ ಫಾರಿನ್ ಟೂರ್ ಮಾಡಿದ್ದಾರೆ. ಅವರು ಸ್ಪೆಷಲ್ಲಾಗಿ ಸ್ವಿಟ್ಜರ್‌ಲೆಂಡ್‌ಗೆ ಹೋಗಿದ್ದಾರೆ. ಅವರು ಅಲ್ಲಿನ ಬ್ಯಾಂಕಿನಲ್ಲಿ ಹಣವನ್ನು ಇಟ್ಟಿದ್ದಾರೆಂದು ಕೇಳಿದ್ದೇನೆ. ಅವರು ಇಲ್ಲಿಂದ ಹೋಗಬೇಕಾದರೆ ಅವರ ಹೆಂಡತಿ ಮೈಮೇಲೆ ಎಲ್ಲ ಆಭರಣಗಳನ್ನೂ ಹಾಕಿಕೊಂಡು ಹೋಗಿ, ಹಣವನ್ನು ಮತ್ತು ಒಡವೆಯನ್ನು ಸ್ವಿಟ್ಜರ್‌ಲೆಂಡಿನ ಬ್ಯಾಂಕಿನಲ್ಲಿಟ್ಟು, ವಾಪಸು ಬಂದಾಗ ಕಸ್ಟಮ್ಸ್ ಅಧಿಕಾರಿಗಳಲ್ಲಿ ಆಭರಣಗಳೆಲ್ಲ ಕಳುವಾಯಿತು ಎಂದು ಕೊಟ್ಟಿರುವ ಹೇಳಿಕೆ ಗಳು ರಿಕಾರ್ಡ್ ಆಗಿವೆ. ಅವರು ಎಷ್ಟು ಸಾರಿ ರಾಷ್ಟ್ರದಿಂದ ಹೊರಗೆ ಹೋಗಿದ್ದಾರೆ, ಇದಕ್ಕೆಲ್ಲ ವಿದೇಶೀ ವಿನಿಮಯವನ್ನು ಯಾರು ಕೊಟ್ಟರು, ಎಷ್ಟು ಕೊಟ್ಟರು ಎನ್ನುವುದರ ಬಗ್ಗೆ ಸಂಪೂರ್ಣವಾಗಿ ತನಿಖೆಯಾಗಬೇಕು ಎನ್ನುವ ವಿಷಯವನ್ನು ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ.

ನಂದಿ ಬ್ರೂಯರಿಸಿಸ್ ವಿಷಯದಲ್ಲಿ ಹೇಳಬೇಕಾದರೆ ಮೊಲ್ಯಾಸಸ್ ಷಾರ್ಟೇಜ್ ಇದ್ದರೂ ಕೂಡ, ಅದು ಗೊತ್ತಿದ್ದರೂ ಕೂಡ ನಂದಿ ಬ್ರೂಯರೀಸ್ ಮತ್ತು ಖೋಡೆ ಬ್ರೂಯರೀಸ್ ಇವರಿಗೆ ಹೆಚ್ಚು ಕೊಟ್ಟಿದ್ದಾರೆ. ಪ್ರೈವೇಟ್ ಕಂಪೆನಿಗಳವರಿಗೆ ಜಾಸ್ತಿ ಕೊಟ್ಟಿದ್ದಾರೆ. ನಂದಿ

ಬ್ರೂಯರೀಸ್ ಲೈಸೆನ್ಸಿಗೆ ಅಪ್ಲೈ ಮಾಡಿದ್ದಾರೆ. ಅರಕ್ ತಯಾರು ಮಾಡಿ ಸಪ್ಲೈ ಮಾಡುವುದಕ್ಕಾಗಿ ಲೈಸೆನ್ಸ್ ಬೇಕು ಎಂದು ಕೇಳಿದ್ದಾರೆ. ಅದು ಮುಖ್ಯಮಂತ್ರಿಗಳ ಮುಂದೆ ಇದೆ ಎಂದು ಕೇಳಿದ್ದೇನೆ. ಪ್ರೈವೇಟ್ ಸೆಕ್ಟಾರಿನವರಿಗೆ ಅರಕ್ ಮತ್ತು ಇತರ ಪಾನೀಯಗಳನ್ನು ತಯಾರು ಮಾಡಿ ಸರಬರಾಜು ಮಾಡುವುದಕ್ಕೆ ಲೈಸೆನ್ಸ್ ಕೊಡಲು ಕೇಳಿದ್ದಾರೆ ಮತ್ತು ಇನ್ನು ಮೂರು ನಾಲ್ಕು ದಿವಸಗಳಲ್ಲಿ ಆ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆಂದು ಕೇಳಿದ್ದೇನೆ. ಮುಖ್ಯಮಂತ್ರಿಗಳಲ್ಲಿ ಈ ಪೋರ್ಟ್‌ಫೋಲಿಯೋ ಇರುವುದರಿಂದ ಅವರನ್ನು ನಾನು ಕೇಳಿಕೊಳ್ಳುತ್ತೇನೆ, ಪ್ರೈವೇಟ್ ಸೆಕ್ಟಾರೀದಲ್ಲಿರುವ ಕಂಪೆನಿಗಳಿಗೆ, ನಂದಿ ಬ್ರೂಯರೀಸ್‌ಗೆ ಅರಕ್ ತಯಾರು ಮಾಡುವುದಕ್ಕೆ ಏಕೆ ಲೈಸೆನ್ಸ್ ಕೊಡುತ್ತೀರಿ? ತಾವೇ ಏಕೆ ಪಬ್ಲಿಕ್ ಸೆಕ್ಟಾರಿನಿಂದ ತಯಾರು ಮಾಡುವುದಕ್ಕೆ ಪ್ರಯತ್ನ ಮಾಡಬಾರದು ಎಂದು ಕೇಳುತ್ತಿದ್ದೇನೆ.

ಈಗ ಖೋಡೆ ಮತ್ತು ನಂದಿ ಬ್ರೂಯರೀಸ್‌ನವರು ತಯಾರು ಮಾಡತಕ್ಕ ಲಿಕರ್ಸ್ ಬಗ್ಗೆ ಆಕ್ಷೇಪಣೆಗಳು ಬಂದಿವೆ. ನಂದಿ ಬ್ರೂಯರೀಸ್‌ನವರು ತಯಾರು ಮಾಡಿದ್ದ ಲಿಕರ್ಸ್ ವಾಪಸ್ಸು ಬಂದಿದ್ದು ಅದಕ್ಕೆ ಬೇರೆ ಲೇಬಲ್ ಹಾಕಿ ಮಾರಾಟ ಮಾಡಿದ್ದಾರೆನ್ನುವ ಆಪಾದನೆಗಳಿವೆ. ಇವರುಗಳು ತಯಾರು ಮಾಡುವ ಲಿಕರ್ಸ್ ಟೆಸ್ಟ್ ಮಾಡುವುದಕ್ಕೆ ಯಾವ ವಿಧಾನವನ್ನು ಅನುಸರಿಸುತ್ತಿದ್ದೀರಿ ? ಅದನ್ನು ಚೆಕ್‌ಮಾಡಿ, ಅದರಿಂದ ಆಗುವ ಕೆಟ್ಟ ಪರಿಣಾಮಗಳನ್ನು ನಿಲ್ಲಿಸುವುದಕ್ಕೆ ಏನು ಮಾಡಿದ್ದೀರಿ ಎಂದು ಕೇಳುತ್ತಿದ್ದೇನೆ. ಅಡಲ್ಟರೇಷನ್ ನಿಲ್ಲಿಸುವುದು ಬಹಳ ಮುಖ್ಯವಾದುದು, ಇದನ್ನು ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಬಾಲರಾಜ್ ಅವರಿಂದ ಆಗಿರತಕ್ಕ ಅನ್ಯಾಯಗಳ ಪಟ್ಟಿಗೆ ಇನ್ನೊಂದನ್ನೂ ಸೇರಿಸಿ ಕೊಳ್ಳಬೇಕು. ಅವರು ಈಗ ಡಿವಿಜನಲ್ ಕಮಿಷನರಾಗಿದ್ದಾರೆ. ಅವರು ಏನು ಮಾಡುತ್ತಿದ್ದಾರೆಂದರೆ ಥಿಯೇಟರುಗಳನ್ನು ಕಟ್ಟಲು ನೋ ಆಬ್ಜೆಕ್ಷನ್ ಸರ್ಟಿಫಿಕೇಟು ಬೇಕು. ಡಿವಿಜನಲ್ ಕಮಿಷನರು ಪ್ರತಿಯೊಬ್ಬ ಡೆಪ್ಯುಟಿ ಕಮಿಷನರಿಗೂ ಸೂಚನೆಯನ್ನು ಕೊಟ್ಟು, ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿಗೆ ಯಾರು ಹತ್ತು ಸಾವಿರ ರೂಪಾಯಿ ಕೊಟ್ಟು ಅಲ್ಲಿ ಷೇರು ತೆಗೆದುಕೊಳ್ಳುತ್ತಾರೆ ಅವರಿಗೆ ಮಾತ್ರ ಎನ್. ಒ. ಸಿ. ಕೊಡಿ, ಇಲ್ಲದೆ ಇದ್ದರೆ ಕೊಡಬೇಡಿ ಎಂದು ಹೇಳಿದ್ದಾರೆ. ಎನ್. ಒ. ಸಿ. ಪಡೆಯುವುದಕ್ಕಾಗಿ ಹತ್ತು ಸಾವಿರ ರೂಪಾಯಿ ಕೊಟ್ಟು ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ನಿನಲ್ಲಿ ಷೇರುಗಳನ್ನು ಕೊಂಡು ಕೊಂಡವರಿದ್ದಾರೆ. ಶ್ರೀ ಬಾಲರಾಜ್ ಅವರು ಸಂಪೂರ್ಣವಾಗಿ ಡೆಪ್ಯುಟಿ ಕಮಿಷನರುಗಳ ಮೇಲೆ ಇಂಥ ನಿರ್ಬಂಧವನ್ನು ಹಾಕಿದ್ದಾರೆ. ಶ್ರೀ ಕೆ. ಕೆ. ಮೂರ್ತಿ ಅವರ ಆಡಳಿತದಲ್ಲಿರುವ ಫಿಲಂ ಕಾರ್ಪೊರೇಷನ್ನಿಗೆ ಈ ರೀತಿ ಹಣವನ್ನು ಕೊಡಿಸಿಕೊಟ್ಟರೆ, ಅವರ ಮೂಲಕ ಮುಖ್ಯ ಮಂತ್ರಿಗಳಿಂದ ತಮಗೆ ಒಳ್ಳೆಯ ಹೆಸರು ಬರುತ್ತದೆ ಎಂದು ಮಾಡಿರಬಹುದು. ಇದರ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಗಳು ನೋಡಬೇಕು.

ಶ್ರೀ ಬಾಲರಾಜ್ ಅವರು ಎಕ್ಸೈಜ್ ಕಮಿಷನರಾಗಿದ್ದಾಗ ಅವರ ಬಂಧುಗಳ ಹೆಸರಿಗೆ ಸುಮಾರು 50 ಸಾವಿರ ಲೀಟರ್ ಡೀನೇಚರ್ಡ್ ಸ್ಪಿರಿಟ್‌ಗಾಗಿ ಫ್ರೆಂಚ್ ಪಾಲಿಷ್ ತಯಾರು ಮಾಡಲು ಪರ್ಮಿಟ್ ಕೊಟ್ಟಿದ್ದಾರೆ. ಸರ್ಕಾರಕ್ಕೆ ಒಂದು ಲೀಟರ್ ಡೀನೇಚರ್ಡ್ ಸ್ಪಿರಿಟ್ಟಿಗೆ ಅವರು ಕೊಡತಕ್ಕದ್ದು 75 ಪೈಸೆ, ಆದರೆ ಅವರು ಮಾರಾಟ ಮಾಡುವುದು 10 ರೂಪಾಯಿಗಳ ಪ್ರಕಾರ. ಇದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಹಾಳಾಗುವುದಕ್ಕೆ ಅವಕಾಶವಾಗಿದೆ.

ಖೋಡೆ ಬ್ರೂಯರಿ ಬಗ್ಗೆ ಇನ್ನೂ ಒಂದು ಮಾತು ಹೇಳಬೇಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿನ ರೂಲ್ಸ್ ಪ್ರಕಾರ ಇವರಿಗೆ ಸಂಪೂರ್ಣವಾಗಿ ಮಂಡ್ಯ ಡಿಸ್ಟಿಲರಿಯಿಂದ ಎಷ್ಟು ಬೇಕೋ ಅಷ್ಟು ರೆಕ್ಟಿಫೈಡ್ ಸ್ಪಿರಿಟ್ ತರುವುದಕ್ಕೆ ಅಧಿಕಾರವನ್ನು

ಕೊಟ್ಟಿದ್ದಾರೆ. ಇದರಿಂದ ಮಂಡ್ಯ ಡಿಸ್ಟಿಲರಿಗೆ ಭಾರಿ ಪ್ರಮಾಣದಲ್ಲಿ ನಷ್ಟವಾಗಿದೆ. ಮತ್ತು ಸರ್ಕಾರಕ್ಕೆ ಕೂಡ ಅನ್ಯಾಯವಾಗುತ್ತಿದೆ ಎಂದು ಹೇಳುತ್ತಿದ್ದೇನೆ.

ಎಕ್ಸೈಜ್ ಇಲಾಖೆಯಲ್ಲಿ ಅಧಿಕಾರಿಗಳು ಯಾರಿದ್ದಾರೆ ಅವರೆಲ್ಲರೂ ಖೋಡೆ ಅವರ ಕೃಪಾಕಟಾಕ್ಷದಿಂದ ಬೆಳೆಯುತ್ತಿದ್ದಾರೆ. ಇಲ್ಲದೆ ಹೋದರೆ ಅವರು ಉಳಿಯುವುದೇ ಕಷ್ಟ. ಖೋಡೆ ಅವರ ಕೃಪಾಕಟಾಕ್ಷ ಯಾರಿಗೆ ಇಲ್ಲ ಅವರು ಎಕ್ಸೈಜ್ ಕಮಿಷನರಾದರೂ ಉಳಿಯುವ ಹಾಗೆ ಇಲ್ಲ. ಅವರಿಗೆ ವಿರೋಧವಾಗಿ ಯಾರೂ ನಡೆಯುವ ಹಾಗೆಯೇ ಇಲ್ಲ. ನಮ್ಮ ಸರ್ಕಾರ ಅವರನ್ನು ಇಟ್ಟುಕೊಳ್ಳುತ್ತೇನೆಂದರೂ ಕೂಡ ಇಟ್ಟುಕೊಳ್ಳುವ ಹಾಗೆ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಏನೂ ಮಾಡುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಹತೋಟಿಗೆ ತರುವುದಕ್ಕೆ ಪ್ರಯತ್ನ ಮಾಡಿದರೆ ನಿಮ್ಮ ಸರ್ಕಾರವನ್ನೇ ತಲೆಕೆಳಗು ಮಾಡುವಂಥ ಶಕ್ತಿ ಖೋಡೆ ಮತ್ತು ನಂದಿ ಬ್ರೂಯರೀಸ್‌ನವರು ಇಟ್ಟುಕೊಂಡಿದ್ದಾರೆ. ಪ್ರೈವೇಟ್ ಸೆಕ್ಟಾರಿನಲ್ಲಿ ಕೋಟ್ಯಾಧೀಶರನ್ನು ಸಾಕತಕ್ಕ ಕಾನೂನು ಮಾಡಿದ್ದೀರಿ. ನಿಮಗೆ ಸಮಾಜವಾದದಲ್ಲಿ ನಂಬಿಕೆ ಇದ್ದರೆ ಕಾನೂನು ಬದಲಾವಣೆ ಮಾಡಿ ಪಬ್ಲಿಕ್ ಸೆಕ್ಟಾರಿನಲ್ಲಿ ಡಿಸ್ಟಿಲರಿ ಮತ್ತು ಬ್ರೂಯರೀಸ್ ಪ್ರಾರಂಭ ಮಾಡಿ.

ಟಾಡಿ ಮಾರಾಟವನ್ನು ಜಿಲ್ಲಾಮಟ್ಟದಲ್ಲಿ ಹರಾಜು ಮಾಡುತ್ತಿದ್ದೀರಿ. ಅದನ್ನು ತಪ್ಪಿಸಿ ಅರಕ್ ಹರಾಜು ಮಾಡುವಂತೆ ತಾಲ್ಲೂಕು ಮಟ್ಟದಲ್ಲಿ ಮಾಡಬೇಕು. ಟಾಡಿ ನಮ್ಮ ರಾಜ್ಯದಲ್ಲಿ ಸಿಕ್ಕುವುದಿಲ್ಲ, ಆಂಧ್ರದಿಂದ, ಮತ್ತೊಂದು ಕಡೆಯಿಂದ ತರಬೇಕು ಎಂದು ಹೇಳುತ್ತಾರೆ. ಆದರೆ ಕ್ಲೋರಲ್ ಹೈಡ್ರೇಟ್ ಸೇರಿಸಿ ಜನರಿಗೆ ಮಾರಾಟ ಮಾಡಿ ಅವರ ಆರೋಗ್ಯವನ್ನು ಹಾಳು ಮಾಡುತ್ತಿದ್ದಾರೆ. ಇದರ ಬಗ್ಗೆ ಕೂಡ ಗಮನ ಕೊಡಬೇಕೆಂದು ಹೇಳುತ್ತಿದ್ದೇನೆ.

ಕೊನೆಯದಾಗಿ ಪೊಲೀಸು ಡಿಪಾರ್ಟ್‌ಮೆಂಟು ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಭಾಷಣ ವನ್ನು ಮುಗಿಸುತ್ತೇನೆ. ಪೊಲೀಸು ಇಲಾಖೆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸಂತೋಷ ಪಡುತ್ತಿರಬಹುದು ನಿಜ, ಏಕೆಂದರೆ ಎಲ್ಲ ಆಫೀಸರುಗಳು ಇವರಿಗೆ ಸಲಾಂ ಹಾಕುತ್ತಾರೆ ಮತ್ತು ಪೊಲೀಸು ಇಲಾಖೆಯ ಬಗ್ಗೆ ಇಲ್ಲಿ ಯಾವ ರೀತಿ ಹೇಳಿಕೆಗಳನ್ನು ಕೊಟ್ಟಿದ್ದಾರೆ ಅದನ್ನು ನಾನು ಇನ್ನೂ ಮರೆತಿಲ್ಲ. ಪೊಲೀಸು ಸ್ಟೇಷನ್‌ಗೆ ಕಂಪ್ಲೇಂಟು ಕೊಡಲು ಬಂದವರನ್ನು ಪೊಲೀಸು ಸ್ಟೇಷನ್‌ಗೆ ಒಳಗೇನೆ ಕೂರಿಸಿ ಹೊಡೆಯುವುದು, ಇಂತಹ ನಿಲುವನ್ನು ನೀವು ಬಿಡಬೇಕು. ಪೊಲೀಸು ಸ್ಟೇಷನ್‌ಗೆ ದೂರು ಕೊಡಲು ಬಂದವರನ್ನು ಹೊಡೆಯಬೇಕು ಎಂದು ಬೇಕಾದರೆ ನಿಮ್ಮ ಪೊಲೀಸು ಕೋಡಿನಲ್ಲಿ ಮಾಡಿಬಿಡಿ. ಕೆಲವು ದಿನಗಳ ಹಿಂದೆ ನಾಗಮಂಗಲದಲ್ಲಿ ಕರೀಗೌಡ ಎನ್ನುವವರ ಕೊಲೆಯಾದಾಗ ಇಲ್ಲಿ ಪೊಲೀಸರಿಂದ ಬಂದ ಹೇಳಿಕೆಯನ್ನು ಚಾಚೂ ತಪ್ಪದೆ ಓದಿರುವುದನ್ನು ನಾವು ಕೇಳಿದ್ದೇವೆ. ಇದನ್ನು ನೋಡಿ ನಮಗೂ ಆಶ್ಚರ್ಯವಾಗಿದೆ. ಇದನ್ನು ಒಪ್ಪಬಹುದು, ಇಲ್ಲವೆ ಬಿಡಬಹುದು. ಆದರೆ ಇಂದು ಪೊಲೀಸು ಸ್ಟೇಷನ್ನಿಗೆ ದೂರು ಕೊಡಲು ಬಂದವರು ಇಲ್ಲಿನ ಸಬ್‌ಇನ್ಸ್‌ಪೆಕ್ಟರಿಗೆ ಹಣ ಕೊಟ್ಟರೆ ಅವರನ್ನೇನೂ ಮಾಡುವುದಿಲ್ಲ. ಅವರು ಹೇಗೆ ಬೇಕಾದರೆ ಹಾಗೆ ಮಾಡಿಕೊಂಡು ಹೋಗಬಹುದು. ಆದರೆ ಕಂಪ್ಲೇಂಟು ಕೊಡುವವ ರನ್ನು ಪೊಲೀಸು ಸ್ಟೇಷನ್‌ನಲ್ಲಿ ಹೊಡೆಯುವುದು ಎಂದರೆ ಇದು ಸರಿಯಲ್ಲ. ಇಂತಹ ಒಂದು ಪೊಲೀಸು ಡಿಪಾರ್ಟ್‌ಮೆಂಟು ನಿಮ್ಮಲ್ಲಿದೆ. ಇತ್ತೀಚೆಗೆ ಎಂದರೆ ಐದಾರು ದಿನಗಳ ಹಿಂದೆ ಇದೇ ಊರಿನಲ್ಲಿ ನಡೆದ ಮಹಾಲಕ್ಷ್ಮಿ ಲೇ ಔಟು ಪ್ರಕರಣದಲ್ಲಿ ಕೋರ್ಟು ಕೊಟ್ಟಿರುವ ಜಡ್ಜ್‌ಮೆಂಟು ಕಾಪಿ ನನ್ನಲ್ಲಿದೆ. ಇದರಲ್ಲಿರುವ ಕೆಲವು ವಿಚಾರಗಳನ್ನು ಸಭೆಯ ಅವಗಾಹನೆಗಾಗಿ ಓದುತ್ತೇನೆ: ಇದರಲ್ಲಿ ಮಾನ್ಯ ನ್ಯಾಯಾಧೀಶರು Though fingerprints were available they were not sent to the Expert for examination. If finger prints are available, then it would be a best evidence ಎಂದು

ಕರೆಕ್ಟ್ ಆಗಿ ಹೇಳಿದ್ದಾರೆ. ಇದರಲ್ಲಿ ಫಿಂಗರ್‌ಪ್ರಿಂಟುಗಳನ್ನು ಫಿಂಗರ್‌ಪ್ರಿಂಟ್ ಎಕ್ಸ್‌ಪರ್ಟ್‌ಗೆ ಕಳುಹಿಸಿ ಪರೀಕ್ಷೆ ಮಾಡಿಸಿದ್ದರೆ ನಿಜವಾದ ಅಪರಾಧಿಗಳನ್ನು ಪತ್ತೆಮಾಡಲು ಸಹಾಯವಾಗುತ್ತಿತ್ತು ಎಂದು ಹೇಳಿದ್ದಾರೆ. ಇನ್ನು ಇದರಲ್ಲಿರುವ ಎರಡು ಮೂರು ಪದಗಳನ್ನು ಮಾತ್ರ ಇಲ್ಲಿ ಓದುತ್ತೇನೆ.

I have got a copy of the judgement of the Mahalaxmi Lay out case. This case is a concocted one. Though fingerprints were available but they were not sent to the Fingerprints Expert for examination. If fingerprints are available, than it would be a best evidence. This opinion has been expressed by so many courts including the Supreme Court. I shall read out some portions of the judgement for the information of the House.

At page 28 it is said : " The entire story in this behalf appears to be too artificial..." Then at page 29 it is said as " untrue." Then at page 46—last para, it has been stated as follows.—

" Some useful material was available for the prosecution to pursue their investigation to arrive at the truth of the matter like the fingerprints as obtained by the Police photographer P.W. 24 Lakshman Singh in this case Strangely, however, the Police have thought it not necessary. Fingerprint science, as we all know, is more accurate than any other science. It would have been certainly, in the interest of justice, for the police to pursue investigation on this basis also to arrive at the truth of the matter. It is unfortunate that the Police rejected this important piece of evidence as not necessary even when it was available to them."

According to this judgement, Sri Krishnaswamy is not an accused.

ಇಷ್ಟು ಅನ್ಯಾಯಗಳು ಪೋಲೀಸು ಇಲಾಖೆಯ ಅಧಿಕಾರಿಗಳಿಂದ ಆಗುತ್ತಿದೆ. ಇಂತಹ ಪೋಲೀಸು ಅಧಿಕಾರಿಗಳ ಮೇಲೆ ಏತಕ್ಕೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬಾರದು ಎಂದು ನಾನು ಕೇಳುತ್ತೇನೆ. ಯಾವ ಅಧಿಕಾರಿಗಳು ಸರಕಾರದ ನೀತಿಗೆ ವಿರೋಧವಾಗಿ ಕೆಲಸ ಮಾಡುತ್ತಾರೋ ಅಂತಹವರನ್ನು ತೀವ್ರವಾದ ಶಿಕ್ಷೆಗೆ ಗುರಿಪಡಿಸಬೇಕು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತನಿಖೆ ಮಾಡುವ ಬಗ್ಗೆ ವಿಚಾರ ಮಾಡಬೇಕೆಂದು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ) :—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ಒಪ್ಪಿಕೊಂಡು ಮೂರು ವಿಷಯಗಳ ಬಗ್ಗೆ ಮಾತ್ರ ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ.

ಕಿತ್ತು ಬಿಸಾಡಿ ಎನ್ನುವಂತೆ ಹೇಳಿದರೆ ಯಾರು ಇಲ್ಲಿ ಪ್ರಮಾಣವಚನ ತೆಗೆದುಕೊಂಡು ಬಂದರೋ ಅಂತಹ ಪ್ರಮಾಣಕ್ಕೆ ಇದು ವಿರೋಧವಾಗುವುದಿಲ್ಲವೇ ?

ಶ್ರೀ ಕಾಗೋಡು ತಿಮ್ಮಪ್ಪ :—ನಾವು ದೇವರ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಳ್ಳ ಲಿಲ್ಲ; ಸತ್ಯದ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಶ್ರೀರಾಮುಲು :—ಅದು ನಿಮ್ಮ ವಾದ ಇರಬಹುದು. ತಾವು ದೇವರ ಹೆಸರನ್ನು ಒಪ್ಪದಿದ್ದರೆ ಭಾರತದ ರಾಜ್ಯಾಂಗ ಘಟನೆಯನ್ನು ನೀವು ಒಪ್ಪುವುದಿಲ್ಲವೇನು ? ಇಂದು ಪ್ರತಿ ಯೊಂದು ಮತದವರಿಗೂ ಸಹ ಅವರವರ ಮತಗಳನ್ನು ಬೆಳೆಸುವುದಕ್ಕೆ ಅವಕಾಶವಿರುವಾಗ, ಈ ರೀತಿ ದೇವರ ಫೋಟೋಗಳನ್ನು ಕಟ್ಟಿ ಬಚ್ಚಲಿಗೆ ಎಸೆಯಿರಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈ ರೀತಿ ಹೇಳಿರುವುದರಿಂದ ಅದು ಜನಸಾಮಾನ್ಯರ ಮನಸ್ಸಿನ ಮೇಲೆ ಏನು ಪರಿಣಾಮ ಉಂಟುಮಾಡಿದೆ, ಎಂತಹ ಪ್ರಸಂಗ ತಂದೊಡ್ಡಿದೆ ಎಂಬುದನ್ನು ಮುಖ್ಯಮಂತ್ರಿಗಳು ವಿಚಾರ ಮಾಡಿ ನೋಡಬೇಕು. ಈ ಬಗ್ಗೆ ವೈಯುಕ್ತಿಕವಾಗಿ ನನ್ನ ಅಭಿಪ್ರಾಯ ಹೇಳಬೇಕೆಂದರೆ, ಈ ಸಭೆಯ ಸದಸ್ಯರಾಗಿ ಆ ರೀತಿ ಯಾರೂ ಹೇಳಬಾರದು, ಮತ್ತು ಇಂಥಾದ್ದಕ್ಕೆ ತಾವು ಮುಖ್ಯ ಮಂತ್ರಿಗಳಾಗಿರುವವರೆಗೆ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ. ಈ ರೀತಿ ಹೇಳಿರುವುದರ ಪರಿಣಾಮವಾಗಿ ಇಂದು ನಮ್ಮ ಸರಕಾರಕ್ಕೇ ಕೆಡಕು ಉಂಟಾಗುತ್ತಿರುವುದಲ್ಲದೆ, ವಿರೋಧಿಗಳು ಸಹ ಉಂಟಾಗುತ್ತಿದ್ದಾರೆ. ಆದ್ದರಿಂದ ಈ ರೀತಿಯೆಲ್ಲಾ ಹೇಳುವುದಕ್ಕೆ ಅವಕಾಶ ಕೊಡಬಾರ ದೆಂದು ಮುಖ್ಯಮಂತ್ರಿಗಳನ್ನು ಕೇಳಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ಈ ಬೇಡಿಕೆಗಳನ್ನು ಒಪ್ಪುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ) :—ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿ ಗಳಿಗೆ ಸೇರಿರತಕ್ಕಂಥ ಸುಮಾರು 5–6 ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ. ಅದನ್ನು ಸಂಪೂರ್ಣವಾಗಿ-ಒಂದು ಸ್ವಲ್ಪ ಕೂಡ ಒಪ್ಪದೆ ವಿರೋಧ ಮಾಡುತ್ತೇನೆ. ಇವೊತ್ತು ಮಾನ್ಯ ಮುಖ್ಯಮಂತ್ರಿಗಳಾಗಿರತಕ್ಕಂಥ ಶ್ರೀಮಾನ್ ದೇವರಾಜ ಅರಸ್ ಅವರ ಬಗ್ಗೆ ವೈಯಕ್ತಿಕವಾಗಿ ನಾನು ಗೌರವ ಇಟ್ಟುಕೊಂಡಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಅವರಿಗೂ ನಿಮಗೂ ಒಂದು ರೀತಿಯ ಪ್ರೇಮ ಇದೆ ಎಂದು ಕೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :—ಕುರುಡು ಪ್ರೇಮ ;

ಶ್ರೀ ಎಚ್. ಎಸ್. ಸಿದ್ದಪ್ಪ :—ಕರಡಿ ಪ್ರೇಮ ;

ಶ್ರೀ ವಾಟಾಳ್ ನಾಗರಾಜ್ :—ಹಿಂದುಳಿದ ವರ್ಗದವರು ಈ ರಾಜ್ಯದಲ್ಲಿ ಮುಖ್ಯಮಂತ್ರಿ ಗಳಾಗಿರುವುದು ಒಂದು ಆದರ್ಶ ಎಂಬುದನ್ನು ನಾನು ಒಪ್ಪುತ್ತೇನೆ. ಇವರು ಅಧಿಕಾರ ವಹಿಸಿ ಕೊಂಡು ಒಂದು ವರ್ಷದ ಮೇಲೆ ಒಂದೆರಡು ತಿಂಗಳುಗಳು ಆಗಿರಬಹುದು. ಈ ಅವಧಿಯಲ್ಲಿ ಹಿಂದುಳಿದಿರತಕ್ಕಂಥ ಯಾವ ಯಾವ ಕೋಮಿನವರಿಗೆ ಅಧಿಕಾರ ವರ್ಗದಲ್ಲಿಯೇ ಆಗಲಿ, ಅಧಿಕಾರೇತರ ವರ್ಗದಲ್ಲಿಯೇ ಆಗಲಿ, ಖಾಸಗೀ ವರ್ಗದಲ್ಲಿಯೇ ಆಗಲಿ ಎಷ್ಟೆಷ್ಟು ಪುರಸ್ಕಾರ ಕೊಟ್ಟಿದ್ದೀರಿ ಎಂದು ಕೇಳುತ್ತೇನೆ. ಇಂದು ನಮ್ಮ ರಾಜ್ಯದಲ್ಲಿ ಹಿಂದುಳಿದಿರತಕ್ಕಂಥ ಅನೇಕ ಜಾತಿಗಳು ಇವೆ. ನಾನು ಶಾಸಕನಾದ ಮೇಲೆ ಇದೇ ಮೊದಲ ಸಲ ಜಾತಿಯ ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಇಲ್ಲಿಯವರೆಗೆ ನಾನು ಜಾತಿಯ ಪ್ರಶ್ನೆ ಬಗ್ಗೆ ಮಾತನಾಡಿರ ಲಿಲ್ಲ. ಮುಖ್ಯವಾಗಿ ಹಿಂದುಳಿದಿರುವವರ ಕಲ್ಯಾಣವಾಗಬೇಕಾಗಿದೆ. ಅದಕ್ಕಾಗಿ ದೊಡ್ಡ ಕ್ರಾಂತಿ

ಒಂದನೇದು, ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಯೋಧರು ಇಂದು ಬೀದಿ ಭಿಕಾರಿಗಳಾಗಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಇವರಲ್ಲಿ ಎಷ್ಟೋ ಜನಕ್ಕೆ ಕಣ್ಣು ಕಾಣಿಸುತ್ತಿಲ್ಲ. ಇವರ ಮನೆಯಲ್ಲಿ ಕೆಲಸ ಮಾಡತಕ್ಕ ಯುವಕರುಗಳಿಗೆ ಸರಕಾರ ಉದ್ಯೋಗಗಳನ್ನು ಕೊಡಲು ನಮ್ಮ ಸರಕಾರ ಇನ್ನೂ ವ್ಯವಸ್ಥೆ ಮಾಡಲಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ಇಂದು ನಮ್ಮ ರಾಜ್ಯದ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರಕ್ಕೋಸ್ಕರ ದುಡಿದಂತಹವರಿಗೋಸ್ಕರ ಸರಕಾರ ಇಂದು ತೋರಿಸುತ್ತಿರುವ ಗೌರವ ಇದೇನೇ ಎಂದು ಕೇಳಬೇಕಾಗಿದೆ. ಇಂದು ಇವರು ಬೀದಿಪಾಲಾಗಿದ್ದಾರೆ. ಇದಕ್ಕಾಗಿ ಸರಕಾರದಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದು. ದೇಶದ ಸ್ವಾತಂತ್ರ್ಯಕ್ಕಾಗಿ ಯಾರು ಹೋರಾಡಿದರೋ ಅಂತಹವರಿಗೆ ಎಲ್ಲ ಸೌಕರ್ಯಗಳನ್ನೂ ಒದಗಿಸಿ ಕೊಡಬೇಕು ಎನ್ನುವ ತತ್ವವನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ ಇನ್ನೂ ಇದಕ್ಕೆ ತಕ್ಕ ಯೋಜನೆ ಮಾಡಿ ಇವರಿಗೆ ಯಾವ ತರಹದ ಸೌಕರ್ಯಗಳೂ ಸಿಗಲಿಲ್ಲ. ಇದರ ಬಗ್ಗೆ ಕಾಲವೇನೋ ಕಳೆಯುತ್ತಿದೆ, ಕಾಲಕಳೆದಂತೆಲ್ಲಾ ಇದನ್ನು ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರಿದ್ದಾರೋ ಅವರು ಇಂತಹ ಯೋಧರ ಮಕ್ಕಳಿಗೆ ಸರಿಯಾಗಿ ಕೆಲಸಗಳನ್ನು ಒದಗಿಸಿಕೊಟ್ಟು ಸಹಾಯ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಪೋಲೀಸು ಇಲಾಖೆಯಲ್ಲಿರುವ ಅಧಿಕಾರಿಗಳು ಪೋಲೀಸಿನವರಿಂದಲೇ ಲಂಚ ಪಡೆಯುತ್ತಾರೆ, ಇದು ಹೇಗೆಂದರೆ ಪೋಲೀಸು ಸ್ಟೇಷನ್‌ನಲ್ಲಿರುವ ದಫೇದಾರ್‌ರವರು ಬೇರೆ ಕಡೆಗೆ ವರ್ಗ ಮಾಡಬೇಕಾದರೆ ಮೇಲಿನ ಅಧಿಕಾರಿಗಳಿಗೆ ಲಂಚ ಕೊಡಬೇಕು, ಅವರ ಪ್ರಮೋಷನ್ ಫೈಲು ಮೇಲಕ್ಕೆ ಹೋಗಬೇಕಾದರೆ ಲಂಚ ಕೊಡಬೇಕು, ಅವರಿಗೆ ಬೇರೆ ಜಾಗಕ್ಕೆ ವರ್ಗ ಮಾಡಬೇಕಾದರೆ ಅದಕ್ಕೆ ಲಂಚ ಕೊಡಬೇಕು. ಮತ್ತು ಅವರಿಗೆ ಲಾಭ ಬರುವಂತಹ ಪೋಲೀಸು ಸ್ಟೇಷನ್‌ಗೆ ವರ್ಗ ಮಾಡಬೇಕಾದರೆ ಲಂಚ ಕೊಡಬೇಕು. ಇದರ ಬಗ್ಗೆ ನನ್ನ ಅಭಿಪ್ರಾಯದಲ್ಲಿ ಖಚಿತವಾಗಿ ನಾನು ಸಲಹೆ ಮಾಡುವುದು ಯಾರಿಗೆ ಸೀನಿಯಾರಿಟಿ ಪ್ರಕಾರ ಏನೇನು ಸೌಲಭ್ಯಗಳು ದೊರಕಬೇಕೋ ಅವನ್ನೆಲ್ಲಾ ದೊರಕಿಸಿಕೊಡಲು ಸರಿಯಾದ ರೂಲ್ಸುಗಳನ್ನು ಮಾಡಬೇಕು. ಈಗಾಗಲೇ ಇದರ ಬಗ್ಗೆ ರೂಲ್ಸುಗಳಿದ್ದರೆ ಆ ರೂಲ್ಸುಗಳನ್ನು ಸರಿಯಾಗಿ ಪಾಲನೆ ಮಾಡುವಂತೆ ವ್ಯವಸ್ಥೆ ಮಾಡಬೇಕು. ಇನ್ನು ಇದೇ ಇಲಾಖೆಯಲ್ಲಿರುವ ಪಿ.ಸಿ.ಗಳು ಎಂದರೆ 150 ರೂಪಾಯಿಗಳಿಗಿಂತಲೂ ಕಮ್ಮಿ ಸಂಬಳ ಬರುವವರು ಸಾರ್ವಜನಿಕರಿಂದ ಲಂಚ ಪಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇದನ್ನು ತಪ್ಪಿಸಬೇಕು. ಹಿಂದೆ ಎಂದರೆ ಕಳೆದ ವರ್ಷ ಮಾನ್ಯ ಮುಖ್ಯ ಮಂತ್ರಿಗಳು ಪೋಲೀಸು ಇಲಾಖೆಯವರಿಗೆ ಸಂಬಳವನ್ನು ಜಾಸ್ತಿ ಕೊಟ್ಟು ಇವರ ರಕ್ಷಣೆ ಮಾಡುತ್ತೇವೆಂದು ಹೇಳಿದರೂ, ಇದುವರೆಗೂ ಇವರಿಗೆ ಯಾವ ರೀತಿಯಾದ ಸೌಕರ್ಯಗಳೂ ಸಿಗಲಿಲ್ಲ, ಈಗಲಾದರೂ ಇದನ್ನು ಮಾಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಕೊನೆಯ ಪಕ್ಷ 250 ರೂಪಾಯಿಗಳಷ್ಟು ಸಂಬಳ ಬರುವ ಹಾಗೆ ಮಾಡಿದರೆ ಇವರಲ್ಲಿ ಲಂಚದ ಹಾವಳಿ ಕಡಿಮೆಯಾಗಬಹುದು, ಇದರ ಕಡೆಗೆ ಸರಕಾರ ಹೆಚ್ಚು ಗಮನ ಕೊಡಬೇಕು. ಇನ್ನೊಂದು ವಿಚಾರದ ಬಗ್ಗೆ ಸರಕಾರದಲ್ಲಿ ನಾನು ಇಲ್ಲಿ ಹೇಳದೇಹೋದರೆ ಅದು ಕರ್ತವ್ಯಲೋಪ ಮಾಡಿದಂತಾಗುತ್ತದೆ, ಇದು ಬಹು ಮುಖ್ಯವಾದ ವಿಷಯ. ಸರಕಾರದ ಮೇಲೆ ಇದೇನು ಪರಿಣಾಮವಾಗಿದೆ ಎನ್ನುವುದನ್ನು ಇಲ್ಲಿ ಹೇಳಬೇಕು. ಎಲ್ಲ ಸದಸ್ಯರೂ ಈ ಸದನಕ್ಕೆ ಬರುವ ಮುನ್ನ ಇಲ್ಲಿ ಪ್ರಮಾಣವನ್ನು ಸ್ವೀಕರಿಸಿ ಇಲ್ಲಿಗೆ ಸದಸ್ಯರಾಗಿ ಬರುತ್ತೇವೆ. ಇದರಲ್ಲಿ ಪ್ರತಿಯೊಬ್ಬರೂ ಪರಮಾತ್ಮನ ಮೇಲೆ ನಾವು ಸತ್ಯದಿಂದ, ನಿಷ್ಠೆಯಿಂದ ಇಲ್ಲಿ ಜನತೆಗೆ ಸೇವೆ ಮಾಡಲು ಬರುತ್ತೇವೆಂದು ಪ್ರಮಾಣಮಾಡಿ ಬರುತ್ತೇವೆ, ಇವೊತ್ತು ಅನೇಕ ಪತ್ರಿಕೆಗಳಲ್ಲಿ ಬರುವ ಹೇಳಿಕೆಯನ್ನು ನೋಡಿದರೆ ದೇವರ ಪಟಗಳನ್ನು ಪೂಜಿಸುವುದನ್ನು ಬಿಟ್ಟು ಅದನ್ನು ಚರಂಡಿಗಳಲ್ಲಿ

ಯಾಗಬೇಕು. ಇಲ್ಲಿಯವರೆಗೆ ಯಾರು ಯಾರು ಎಲ್ಲ ಸೌಲಭ್ಯಗಳನ್ನು ಹೊಂದಿದ್ದಾರೆ, ಆ ಸೌಲಭ್ಯ ಗಳನ್ನು ನಿಲ್ಲಿಸಿಬಿಡೋಣ. ಅದೇ ಸೌಲಭ್ಯಗಳನ್ನು ಹಿಂದುಳಿದಿರುವ ಜಾತಿಯವರಿಗೆ ಕಲ್ಪಿಸಿ ಕೊಡುವುದಕ್ಕೆ ಹೋರಾಟ ಮಾಡಬೇಕಾಗಿದೆ. ನನ್ನ ಹತ್ತಿರ ಹಿಂದುಳಿದಿರತಕ್ಕ ಜಾತಿಯವರ ಬಗ್ಗೆ ಒಂದು ಪಟ್ಟಿಯೇ ಇದೆ. ಕೊರಚ, ಕೊರಮ, ಉಪ್ಪಾರ, ಭಜಂತ್ರಿ, ಅಗಸ, ಬೆಸ್ತ, ಕುಂಬಾರ, ಕುಂಚಗಾರ, ಅಕ್ಕಸಾಲಿಗ ಇನ್ನೂ ಮುಂತಾದ ಜಾತಿಯವರು ಹಿಂದುಳಿದಿದ್ದಾರೆ. ಹಿಂದುಳಿದಿರತಕ್ಕ ಜನರಿಗೆ ರಕ್ಷಣೆ ಕೊಡುತ್ತೇವೆ, ಅವರ ಅಭಿವೃದ್ಧಿಗಾಗಿ ತಮ್ಮ ಅಧಿಕಾರಾ ವಧಿಯಲ್ಲಿ ದುಡಿಯುತ್ತೇವೆಂದು ನೀವು ಘೋಷಣೆ ಮಾಡಿರುವ ಕಾರಣ, ಇಲ್ಲಿಯವರೆಗೆ ಅಂದರೆ ತಾವು ಅಧಿಕಾರ ವಹಿಸಿಕೊಂಡ ಮೇಲೆ ಈ ಹಿಂದುಳಿದ ಜನಾಂಗದವರ ಪೈಕಿ ಎಷ್ಟೆಷ್ಟು ಜನರನ್ನು ಐ.ಎ.ಎಸ್. ಅಧಿಕಾರಿಗಳನ್ನಾಗಿ ಮಾಡಿದ್ದೀರಿ, ಎಷ್ಟೆಷ್ಟು ಜನರನ್ನು ಐ.ಪಿ.ಎಸ್. ಅಧಿಕಾರಿಗ ಳನ್ನಾಗಿ ಮಾಡಿದ್ದೀರಿ, ಎಷ್ಟು ಜನರನ್ನು ಗೆಜೆಟೆಡ್ ಅಧಿಕಾರಿಗಳನ್ನಾಗಿ ಮಾಡಿದ್ದೀರಿ, ಎಷ್ಟು ಜನರನ್ನು ಚೀಫ್ ಇಂಜಿನಿಯರ್‌ಗಳನ್ನಾಗಿ ಮಾಡಿದ್ದೀರಿ ಮತ್ತು ಈ ದೊಡ್ಡ ದೊಡ್ಡ ಹುದ್ದೆ ಗಳನ್ನು ನಿರ್ದಾಕ್ಷಿಣ್ಯವಾಗಿ ಹರಿಜನರಿಗೆ ಎಷ್ಟು ಕೊಟ್ಟಿದ್ದೀರಿ ಎಂಬ ಬಗ್ಗೆ ಅಂಕಿಅಂಶಗಳನ್ನು ತಮ್ಮ ಉತ್ತರದಲ್ಲಿ ಕೊಡಬೇಕು. ಮತ್ತು ಈ ಜಾತಿಗಳ ಪೈಕಿ ನಿಮ್ಮ ಪಾರ್ಟಿಯಲ್ಲಿ ಎಷ್ಟು ಜನರನ್ನು ಶಾಸಕರನ್ನಾಗಿ ಆರಿಸಿದ್ದೀರಿ, ಎಷ್ಟು ಜನರನ್ನು ಮಂತ್ರಿಗಳನ್ನಾಗಿ ಮಾಡಿದ್ದೀರಿ ಎಂಬುದನ್ನು ಸಹ ತಿಳಿಸಬೇಕು. ಹಿಂದುಳಿದವರ ರಕ್ಷಣೆ ಮಾಡುವುದಾಗಿ ಮುಖ್ಯಮಂತ್ರಿಗಳು ಮುಖವಾಡ ಧರಿಸುವುದೇ ಅಲ್ಲದೆ, ಆ ಒಂದು ಕೀರ್ತಿಗೆ ಒಳಗಾಗಿದ್ದೇನೆಂದು ಸಹ ಹೇಳಿಕೊಳ್ಳುತ್ತಿದ್ದಾರೆ. ಇಂದು ವಿಧಾನಸೌಧದಲ್ಲಿ ಸೂಪರ್‌ಟೈಮ್ ಸ್ಕೇಲಿನ ಅಧಿಕಾರಿಗಳು ಇದ್ದಾರೆ. ಇವರುಗಳ ಪೈಕಿ ಹಿಂದುಳಿದ ಜನಾಂಗದವರು ಎಷ್ಟಿದ್ದಾರೆಂಬುದನ್ನು ತಿಳಿಸಬೇಕು. ಈ ಅಧಿಕಾರಿಗಳು ಇಂದು ದೊರೆಗಳ ಹಾಗೆ ಇದ್ದಾರೆ. ನಾವಾದರೂ 5 ವರ್ಷ ಇದ್ದು ಹೋಗುವವರು; ಆದರೆ ಈ ಅಧಿಕಾರಿಗಳು ತಮ್ಮ ನಿವೃತ್ತಿ ವಯಸ್ಸು ಮುಗಿಯುವವರೆಗೂ ಸಹ ದೊರೆಗಳ ಹಾಗೆಯೇ ಇರುತ್ತಾರೆ. ಇನ್ನೂ ಮುಂದೆ ಹೋಗಿ ಹೇಳಬೇಕೆಂದರೆ, ಶ್ರೀ ದೇವರಾಜ ಅರಸ್ ಅವರ ಮೇಲೆಯೇ ಇವರು ದೊರೆಗಳಾಗಿದ್ದಾರೆ. ನೂರಾರು ಜಾತಿಯವರು ಇಂದು ಹಿಂದುಳಿದ ವರ್ಗಕ್ಕೆ ಸೇರಿದ್ದಾರೆ. ಅವರೆಲ್ಲರ ಅಭಿವೃದ್ಧಿ ಬಗ್ಗೆ ಹೋರಾಟ ನಡೆಯಬೇಕಾಗಿದೆ. ಇಲ್ಲಿಯ ವರೆಗೆ ತಮ್ಮ ಅಧಿಕಾರಾವಧಿಯಲ್ಲಿ ಈ ಜಾತಿಯವರ ಪೈಕಿ ಎಷ್ಟೆಷ್ಟು ಜನರಿಗೆ ಕೆಳದರ್ಜೆಯ ನೌಕರಿಗಳನ್ನು ಕೊಟ್ಟಿದ್ದೀರಿ ಎಂಬುದನ್ನು ಹೇಳಬೇಕು. ಶ್ರೀಮಾನ್ ನಿಜಲಿಂಗಪ್ಪನವರು, ಶ್ರೀಮಾನ್ ವೀರೇಂದ್ರಪಾಟೀಲರು ಅನ್ಯಾಯ ಮಾಡಿದ್ದಾರೆಂದು ಹೇಳಿಕೊಳ್ಳೋಣ. ಅವರು ಒಳ್ಳೆಯವರಲ್ಲ ಎಂದು ಇವರು ಹೇಳುತ್ತಾರೆ. ಆದರೆ ಶ್ರೀಮಾನ್ ಚೆನ್ನಿಗರಾಮಯ್ಯನವರು ಪಬ್ಲಿಕ್ ಸರ್ವಿಸ್ ಕಮಿಷನ್ ಚೇರ್‌ಮನ್ ಆಗಿದ್ದಾಗ, ಶ್ರೀ ಟಿ. ಚೆನ್ನಯ್ಯನವರು ಟ್ರಸ್ಟ್ ಬೋರ್ಡ್ ಚೇರ್‌ಮನ್ ಆಗಿದ್ದಾಗ ಮತ್ತು ವಿದ್ಯುಚ್ಛಕ್ತಿ ಮಂಡಲಿಯ ಚೇರ್‌ಮನ್ ಆಗಿದ್ದಾಗ ಅವರುಗಳಿಗೆ ಫುಲ್ ಫ್ರೀಡಮ್ ಕೊಟ್ಟಿದ್ದರೂ ಸಹ ಅವರು ಈ ಜನಾಂಗದವರ ಏಳಿಗೆಯ ಬಗ್ಗೆ ಏನನ್ನೂ ಮಾಡಲಿಲ್ಲ. ಈಗ ತಾವು ಹಾವನೂರ್ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದ್ದೀರಿ ; ಆದರೆ ಹಿಂದಿನ ಸರ್ಕಾರದವರು ಬಿ. ಬಸವಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚನೆ ಮಾಡಿದ್ದರು.

ಶ್ರೀ ಎಚ್. ಡಿ. ದೇವೇಗೌಡ :—ಆ ಕಮಿಟಿಯಲ್ಲಿ ನಾನು ಸಹ ಮೆಂಬರ್ ಆಗಿದ್ದೆ.

ಶ್ರೀ ವಾಟಾಳ್ ನಾಗರಾಜ್ :—ಅವರು ಕೊಟ್ಟ ವರದಿ ಅಲ್ಲಿಯೇ ಸತ್ತು ಹೋಯಿತು ?

ಶ್ರೀ ಎಚ್. ಡಿ. ದೇವೇಗೌಡ :—ಅಸೆಂಬ್ಲಿ ಡಿಸಾಲ್ವ್ ಆದ್ದರಿಂದ ಆ ಕಮಿಟಿಯವರು ವರದಿ ಕೊಡುವುದಕ್ಕಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ :—ಮುಖ್ಯವಾಗಿ ನಾನು ಹೇಳುತ್ತಿರುವುದೇನೆಂದರೆ, ಈ ಹಿಂದುಳಿದವರ ಶೋಷಣೆಯನ್ನು ಮಾಡುವುದು ಬೇಡ. ಇವೊತ್ತು ಸೆಕ್ರೆಟೇರಿಯಟ್‌ನಲ್ಲಿ ಎರಡು ವರ್ಗವಾಗಿದೆ. ಒಂದು ಚೀಫ್ ಸೆಕ್ರೆಟರಿಯವರ ಗುಂಪು, ಇನ್ನೊಂದು ಅವರ ವಿರೋಧಿ ಗುಂಪು. ಹೋಂ ಡಿಪಾರ್ಟ್‌ಮೆಂಟ್ ಸೆಕ್ರೆಟರಿ ಆಗಿರುವ ಶ್ರೀ ಫರ್ನಾಂಡಿಸ್ ಅವರನ್ನು ದೆಹಲಿಗೆ ಕಳಿಸಿ ಕೊಡುವುದಕ್ಕೆ ಕಾರಣವೇನು ? ಇಂತಹ ಒಳ್ಳೆಯ ಅಧಿಕಾರಿಗಳು ನಮ್ಮ ರಾಜ್ಯದಲ್ಲಿಯೇ ಇದ್ದರೆ ಒಳ್ಳೆಯದು. ಶ್ರೀ ಮಾನ್ ಲೀಸ್ ಅವರು ಮುಖ್ಯಮಂತ್ರಿಗಳ ಆಪ್ತಕಾರ್ಯದರ್ಶಿ ಯಾಗಿರುವುದಕ್ಕಿಂತ ಜಿಲ್ಲಾಧಿಕಾರಿಯನ್ನಾಗಿ ಮಾಡಿದರೆ, ಅವರು ಜನರಿಗೆ ಒಳ್ಳೆಯದನ್ನು ಮಾಡು ತ್ತಾರೆ. ಮುಖ್ಯವಾಗಿ ಒಳ್ಳೆಯ ಅಧಿಕಾರಿಗಳಿಗೆ ರಕ್ಷಣೆ ಕೊಡಬೇಕೇ ಹೊರತು ಕೆಲವರ ಒತ್ತಡದ ಕಾರಣ ಬೇರೆ ಕಡೆಗೆ ಹಾಕುವುದು ಸರಿಯಲ್ಲ ಎಂಬ ಮಾತನ್ನು ಮುಖ್ಯ ಮಂತ್ರಿಗಳ ಕಿವಿಗೆ ಹೇಳುತ್ತಿದ್ದೇನೆ.

ಪೋಲೀಸ್ ಇಲಾಖೆಯ ಬಗ್ಗೆ ಹೇಳಬೇಕೆಂದರೆ ತಾವು ಅಧಿಕಾರಕ್ಕೆ ಬಂದಮೇಲೆ ಇಡೀ ಪೋಲೀಸ್ ಇಲಾಖೆಯನ್ನೇ ಸಂಪೂರ್ಣವಾಗಿ ಬದಲಾವಣೆ ಮಾಡಿದ್ದೀರಿ. ಐ. ಜಿ. ಪಿ. ಹೊಸಬರು ಬಂದರು. ಅವರು ಆ ಸ್ಥಾನಕ್ಕೆ ಯೋಗ್ಯರಾಗಿದ್ದಾರೆ. ಅವರು ಗೋವು ಇದ್ದ ಹಾಗಿದ್ದಾರೆ. ಹಿಂದೆ ಬಂದರೆ ಒದೆಯುವುದಿಲ್ಲ, ಮುಂದೆ ಬಂದರೆ ಹಾಯುವುದಿಲ್ಲ ;

ಐ.ಜಿ.ಪಿ. ಗಳು ಗೋವು ಇದ್ದಂತೆ ಪೋಲೀಸ್ ಕಮೀಷನರ್ ಶ್ರೀ ಮಾನ್ ಕೆ. ಜಿ. ರಾಮಣ್ಣ ನವರು ಗೋಮುಖವ್ಯಾಘ್ರದಂತೆ. ಚಾಮರಾಜಪೇಟೆಯಲ್ಲಿ ಟ್ರಾಫಿಕ್ ಜಾಸ್ತಿ, ಮಕ್ಕಳುಮರಿ ಗಳಿಗೆ ತೊಂದರೆಯಾಗುತ್ತದೆ ಎಂದು ಹೇಳಿದರೆ ಈ ಕಾಲದಲ್ಲಿ ಏತಕ್ಕೆ ಹೆಚ್ಚು ಮಕ್ಕಳನ್ನು ಹುಟ್ಟಿಸಬೇಕು? ಈ ವಿಷಯವನ್ನು ಶ್ರೀ ಮಾನ್ ಸಿದ್ದವೀರಪ್ಪನವರಿಗೆ(ಕುಟುಂಬ ಯೋಜನೆಖಾತೆ ಸಚಿವರಿಗೆ) ಹೇಳಿ ಎಂದು ಕಮೀಷನರು ಹೇಳಿದರು. ಈ ಪೋಲೀಸ್ ಕಮೀಷನರು ಬೇಜವಾ ಬ್ದಾರಿಯ ವರ್ತನೆಯನ್ನು ನಡೆಸಿದ್ದಾರೆ. ಇವೊತ್ತು ಅವರು ಪೋಲೀಸ್ ಕಮೀಷನರಾಗಿ ಏತಕ್ಕೆ ಇರಬೇಕು ? ಇವರ ವರ್ತನೆ ಕೆಟ್ಟ ವರ್ತನೆ. ಎಂ. ಎಲ್. ಎ. ಹತ್ತಿರ ಸರಿಯಾಗಿ ಮಾತನಾಡುವ ಸೌಜನ್ಯವಿಲ್ಲ. ಇಂಥವರು ಬೆಂಗಳೂರು ನಗರದಲ್ಲಿ ಏತಕ್ಕೆ ಪೋಲೀಸ್ ಕಮೀಷನರಾಗಿರಬೇಕು ? ಈ ಕಮೀಷನರು ಪಟ್ಟಭದ್ರ ಹಿತಾಸಕ್ತಿಗಳನ್ನು ಜೊತೆಗೆ ಹಾಕಿಕೊಂಡು ಒಂದು ದೊಡ್ಡ ಪಿತೂರಿ ಯನ್ನು ನಡೆಸಿದ್ದಾರೆ. ಇದು ಒಳ್ಳೆಯದಲ್ಲ ಯಾವುದೋ ಒಂದು ಒತ್ತಡಕ್ಕೆ ಮಣಿದು ನೀವು ಕೆಲಸ ಮಾಡುವುದಾದರೆ ಈ ಇಲಾಖೆಯನ್ನೇ ಕೊಲೆ ಮಾಡಿದಹಾಗಾಗುತ್ತದೆ. ಇವರು ಅಧಿಕಾರಕ್ಕೆ ಬಂದಮೇಲೆ ಒಬ್ಬರು ಸ್ಪೆಷಲ್ ಐ. ಜಿ. ಪಿ. ಯನ್ನು ನೇಮಕ ಮಾಡಿದ್ದಾರೆ. ಇವರು ಏತಕ್ಕೆ ಬೇಕಾಗಿತ್ತು ? ಈ ಇಲಾಖೆಯ ಕೆಲಸ ಚೆನ್ನಾಗಿ ನಡೆದಿದೆಯೇ ? ಬೇಲೂರು ಶ್ರೀನಿವಾಸ ಐಯ್ಯಂಗಾರ್ ಅವರ ಕೊಲೆಯಾದದ್ದನ್ನು ಹಿಡಿದದ್ದು ಬಿಟ್ಟರೆ ನಂತರ ಇಲ್ಲಿಯವರೆಗೂ ಬೆಂಗಳೂರು ನಗರದಲ್ಲಿ ಆದ ಯಾವ ಕೊಲೆಯನ್ನು ಪತ್ತೆ ಮಾಡಲಿಲ್ಲ. ಕಲಾಸಿ ಪಾಳ್ಯದಲ್ಲಿ ಒಂದು ಕೊಲೆ ಆಯಿತು. ಅದನ್ನು ಪತ್ತೆ ಮಾಡಲಿಲ್ಲ. ಮಹಾಲಕ್ಷ್ಮಿ ಲೇ ಔಟ್ ಕೊಲೆಯ ಮೊಕ ದ್ದಮೆಯೂ ಬಿದ್ದು ಹೋಯಿತು. ಚಾಮರಾಜಪೇಟೆಯಲ್ಲಿ ಒಬ್ಬರು ಇಂಜಿನಿಯರ ಮನೆಯಲ್ಲಿ ಅವರ ಹೆಂಡತಿ ಕೊಲೆ ಆಯಿತು. ಅದು ಇವೊತ್ತಿನವರೆಗೂ ಪತ್ತೆ ಆಗಿಲ್ಲ. ಇದು ಪೋಲೀಸ್ ಇಲಾಖೆಯ ದಕ್ಷತೆಯ ಪ್ರತೀಕ. ಮಹಾಲಕ್ಷ್ಮಿ ಲೇ ಔಟ್‌ನ ಕೇಸು ಕೋರ್ಟಿನಲ್ಲಿ ಬಿದ್ದುಹೋಗಿ ಕೃಷ್ಣಸ್ವಾಮಿಯನ್ನು ಬಿಡುಗಡೆ ಮಾಡಿದರು.

ಶ್ರೀ ಎಚ್. ಸಿದ್ದವೀರಪ್ಪ :—ಇಲಾಖೆಯದೇನಿದೆ ? ಜನ ಸಾಕ್ಷ್ಯ ಹೇಳಲು ಮುಂದೆ ಬರುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ :—ಕೃಷ್ಣಸ್ವಾಮಿ ಅಪ್ಪ ಮಾವ ಇಬ್ಬರೂ ಪೋಲೀಸ್ ಅಧಿಕಾರಿಗಳು ಏನುಮಾಡಬೇಕೋ ಅದನ್ನು ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :—ಬ್ಯಾಂಕಿನಲ್ಲಿ ದರೋಡೆ ಕಳ್ಳತನ ಮಾಡಿದವರನ್ನು ಹಿಡಿಯುವುದಕ್ಕೆ ಇವರ ಕೈಯಲ್ಲಿ ಆಗಲಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಎಂ. ಪಿ. ಸಿ. ಸಿ. ಮೀಟಿಂಗ್‌ನಲ್ಲಿ ಮಂತ್ರಿಗಳ ಪಾಕೆಟ್ ಕಳವಾದದ್ದನ್ನು ಪತ್ತೆ ಮಾಡಲಿಲ್ಲ. ಶ್ರೀಮಾನ್ ಕಿತ್ತೂರ್ ಅವರು ಪೋಲೀಸ್ ಶಾಖೆಯ ಮಂತ್ರಿಗಳು ಅವರ ಮನೆಯಲ್ಲಿ ಕಳವಾದದ್ದನ್ನು ಪತ್ತೆ ಮಾಡಲಿಲ್ಲ. ಇದು ಪೋಲೀಸ್ ಇಲಾಖೆಯ ದಕ್ಷತೆಯ ಪ್ರತೀಕ. ಪೊಲೀಸ್ ಇಲಾಖೆಗೆ ಜೀಪು ಬೇಕು, ಸ್ಕ್ವಾಡ್ ಬೇಕು, ಐ. ಜಿ. ಪಿ. ಕಮೀಷನರ್, ಇತ್ಯಾದಿ ಎಲ್ಲಾ ಸಿಬ್ಬಂದಿ ವರ್ಗದವರೂ ಬೇಕು. ಆದರೆ ದಕ್ಷತೆ ಮಾತ್ರ ಬೇಡ. ಚಳುವಳಿ ಮಾಡುವವರ ಮೇಲೆ ಲಾಠಿ ಚಾರ್ಜ್ ಮಾಡಿ ಕೇಸ್ ಹಾಕಿ ಕೋರ್ಟಿಗೆ ಅಲೆಸುವುದನ್ನು ಪೊಲೀಸಿನವರು ಕಲಿತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್ :—ಇಲ್ಲ ಸ್ವಾಮಿ, ನೀವು ಏನು ಮಾಡಿದರೂ ಸುಮ್ಮನಿರೋಣ.

ಶ್ರೀ ವಾಟಾಳ್ ನಾಗರಾಜ್ :—ಪೊಲೀಸ್ ಇಲಾಖೆಗೆ ದಕ್ಷತೆ ಇಲ್ಲ ಎಂದು ನಾನು ಹೇಳುತ್ತೇನೆ. ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಇಲ್ಲಿಯವರೆಗೂ ಪೊಲೀಸ್ ಇಲಾಖೆಗೆ ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ಈ ಪೊಲೀಸ್ ಇಲಾಖೆಯಲ್ಲಿ ಸಂಪೂರ್ಣ ಬದಲಾವಣೆ ಆಗಬೇಕು. ಅದಕ್ಕೆ ಒಂದು ಹೊಸ ರೂಪರೇಖೆಯನ್ನು ಕೊಡಬೇಕು. ಸರ್ಕಾರದವರು ಮನಸ್ಸು ಮಾಡಿದರೆ ಯಾರನ್ನು ಬೇಕಾದರೂ ಹಿಡಿಯಬಹುದು. ನನ್ನ ಮೇಲೆ ಸಿ. ಐ. ಡಿ., ಡಿ. ವೈಎಸ್. ಪಿ ಚಂದ್ರಶೇಖರ್ ಎನ್ನುವವರನ್ನು ಬಿಟ್ಟಿದ್ದಾರೆ. ಯಾವ ಕಾರಣದಿಂದ ನನ್ನ ಮೇಲೆ ಸಿ. ಐ. ಡಿ ಯನ್ನು ಹಾಕಿದ್ದಾರೆ. ನನ್ನ ಮೇಲೆ ಏನು ಮಾಡುತ್ತಾರೆ ? ನಮ್ಮ ಹತ್ತಿರ ಏನೂ ಅವರಿಗೆ ಸಿಕ್ಕುವುದಿಲ್ಲ. ಮುಖ್ಯ ಮಂತ್ರಿಗಳಿಗೆ ನನ್ನ ಮೇಲಿನ ರಿಪೋರ್ಟಿನಲ್ಲಿ ಏನೂ ಸಿಕ್ಕಿಲ್ಲ. ನನಗೆ ಗೊತ್ತು. ನೀವು ಈ ಸಣ್ಣ ಇಳಿದಿರುವುದು ಸರಿಯಲ್ಲ. ಯಾವ ಕಾರಣಕ್ಕಾಗಿ ನನ್ನ ಮೇಲೆ ಸಿ. ಐ. ಡಿ. ಯನ್ನು ಹಾಕಿದ್ದೀರಿ.

ಬಾಗಿಲತಾಯ ಅವರನ್ನು ಫುಡ್ ಸೆಲ್ಲಿಗೆ ಹಾಕಿದ್ದೀರಿ. ಅವರ ನಡತೆ ಮತ್ತು ಭ್ರಷ್ಟಾಚಾರದ ಬಗ್ಗೆ 15 ಜನ ನಿಮ್ಮ ಪಕ್ಷದವರೇ ಅರ್ಜಿ ಸಲ್ಲಿಸಿ ಅವರನ್ನು ಬೇರೆ ಕಡೆಗೆ ವರ್ಗ ಮಾಡಿ ಎಂದು ಹೇಳಿದ್ದಾರೆ. ಅವರು ದೊಡ್ಡ ದೊಡ್ಡ ರಾಜಕಾರಣಿಗಳನ್ನು ಹಿಡಿದು ಫುಡ್ ಸೆಲ್ಲಿಗೆ ಹಾಕಿಸಿಕೊಂಡರು ಒಬ್ಬರು ಸಬ್ ಇನ್‌ಸ್ಪೆಕ್ಟರು ಏನಾದರೂ ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ. ಈಗ ಶ್ರೀಮಾನ್ ಬಾಗಿಲತಾಯ ಅವರು ಸುಮಾರು 50 ಲಕ್ಷ ರೂಪಾಯಿಗಳ ಆಸ್ತಿಯನ್ನು ಮಾಡಿಕೊಂಡಿದ್ದಾರೆ. ಅವರ ಮೇಲೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಚಿನ್ನ, ರತ್ನ, ಮುತ್ತು ಸೇರಿ ಒಂದು ಕೋಟಿ ರೂಪಾಯಿಗಿಂತ ಮೇಲಿದೆ.

ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರು ಏನು ಹೇಳಿದ್ದಾರೆಂದರೆ, ಒಬ್ಬ ಆಫೀಸರ್ ಆಗಲೀ ಅಥವಾ ಸಬ್ ಇನ್‌ಸ್ಪೆಕ್ಟರ್ ಆಗಲೀ ನನ್ನ ಹತ್ತಿರ ಬಂದು ಹೇಳುವುದಕ್ಕೆ ಹೆದರುತ್ತಾರೆಂದು ಹೇಳಿದ್ದಾರೆ. ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರಿಗೆ ಬೇಕಾದರೆ ಹೇಳಿ, ನನ್ನ ವಿಷಯ ಅವರಲ್ಲಿ ಮಾತನಾಡಿ, ಏನೂ ಪರವಾ ಇಲ್ಲವೆಂದು ಕೆಲವು ಸಂದರ್ಭಗಳಲ್ಲಿ ಹೇಳಿದ್ದಾರೆ. ಒಂದು ಸಂದರ್ಭದಲ್ಲಿ ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರ ವಿಷಯದ ಬಗ್ಗೆ ಪೊಲೀಸ್ ಸ್ಟೇಷನ್ನಿನಲ್ಲಿ ಚರ್ಚೆಗೆ ಬಂದಾಗ ಅಲ್ಲಿನ ಸಬ್ ಇನ್‌ಸ್ಪೆಕ್ಟರ್ ಮಾತು ನಡೆಯಲಿಲ್ಲ. ಕೂಡಲೇ ಆಗ ಒಂದು ವಾರದೊಳಗೆ ಅವನನ್ನು ಅಲ್ಲಿಂದ ಕಿತ್ತುಹಾಕಿ ಅಲ್ಲಿನ ಸಿ.ಐ.ಡಿ. ಬ್ರಾಂಚಿಗೆ ಹಾಕಿದರು. ಅಂದ ಮೇಲೆ ಅವರಿಗೇನು ರಕ್ಷಣೆ ಇದೆ ? ಇವತ್ತು ನಾವು ಇಲ್ಲಿ ಅಸೆಂಬ್ಲಿಯಲ್ಲಿ ಮಾತನಾಡಿದ್ದು ನಿಮ್ಮ

ಕಮಿಂಷನರ್ ಅವರಿಗೆ ಗೊತ್ತಾಗುತ್ತದೆ. ಪೋಲೀಸ್ ಕಮಿಂಷನರ್‌ಗಳಲ್ಲಿ ಕೆಲವರು ಒಳ್ಳೆಯವರು ಇದ್ದಾರೆ. ಮಾನ್ಯ ಶ್ರೀ ಗರುಡಾಚಾರ್ ಅವರು ಬೆಂಗಳೂರಿನಲ್ಲಿಯೇ ಇದ್ದಾರೆ. ಅವರು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಮಾನ್ಯ ಶ್ರೀಮಾಧವರಾವ್ ಅವರು ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿದ್ದಾರೆ. ಅವರನ್ನು ಈಗ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಹಾಕಿದ್ದಾರೆ. ಇನ್ನೂ ಮಾನ್ಯ ಶ್ರೀ ಚಂದ್ರಶೇಖರ್ ಅವರೂ, ಮಾನ್ಯ ಶ್ರೀ ವಿಜಯ ದೇವರಾಜೆಅರಸ್‌ಅವರೂ,-ಹೀಗೆ ಇನ್ನೂ ಅನೇಕ ಜನ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಇನ್ನು ಮಾನ್ಯ ಶ್ರೀ ವೀರಭದ್ರಯ್ಯ ನವರನ್ನು ಸಂಸ್ಥಾಕಾಂಗ್ರೆಸ್ ಏಜೆಂಟ್‌ರಾಗಿರುವಂತೆ ಹಿಂದೆ ಮಾಡಿದ್ದರು. ಅದು ಹಿಂದೆ ಸಂಸ್ಥಾಕಾಂಗ್ರೆಸ್ ಸರ್ಕಾರದಲ್ಲಿ ಅವರು ಕಮಿಷನರ್ ಆಗಿದ್ದಾಗ ಮಾಡಿದ ಕೆಲಸದಿಂದ ಗೊತ್ತಾಯಿತು. ಆದರೆ ಯಾವ ಜಾತಿಯವರೇ ಆಗಲಿ, ಅವರು ಎಲ್ಲಿಯೇ ಅಧಿಕಾರಿಗಳಾಗಿರಲಿ, ಜಾತೀಯ ಮನೋಭಾವನೆಯನ್ನು ಮೊದಲು ಬಿಡಬೇಕು. ಏಕೆಂದರೆ ಇತ್ತೀಚೆಗೆ ಬಹಳವಾಗಿ ಒಬ್ಬರ ಮೇಲೆ ಇನ್ನೊಬ್ಬರು ಅಧಿಕಾರಿಗಳು ಎತ್ತಿಕಟ್ಟುತ್ತಿದ್ದಾರೆ. ಇದು ತಪ್ಪಬೇಕು. ನಿಮ್ಮ ಒಂದು ಅಧಿಕಾರದ ಗದ್ದುಗೆಯಲ್ಲಿ ಇಂತಹ ಕೆಲಸಗಳಿಗೆ ಹೆಚ್ಚಿಗೆ ಅವಕಾಶವಾಗುತ್ತದೆ. ಇನ್ನು ಕೇವಲ 6 ತಿಂಗಳುಗಳಲ್ಲಿ ನಿಮ್ಮ ಅಧಿಕಾರ ನಿಜವಾಗಿಯೂ ನುಚ್ಚುನೂರಾಗಿ ನಿರ್ನಾಮವಾಗಿ ಹೋಗುತ್ತದೆ. ಆದರೆ ನಾವು ಅಧಿಕಾರಕ್ಕೆ ಬರುವುದಿಲ್ಲ. ತಮ್ಮ ಅಧಿಕಾರವನ್ನು ತಪ್ಪಿಸಲು 43 ಜನರು ನಿಮ್ಮ ಮೇಲೆ ತಿರುಗಿ ಬಿದ್ದಿದ್ದಾರೆ. ಅಂತಹವರ ಮೇಲೆ ಪೋಲೀಸಿನವರು ದಬ್ಬಾಳಿಕೆ ಮಾಡುತ್ತಿದ್ದಾರೆ. ಇದರಿಂದ ನಿಮ್ಮ ಕೈಕೆಳಗೆ ಇರತಕ್ಕ ಅಧಿಕಾರ ವರ್ಗದವರಿಂದ ಹೆಚ್ಚಿಗೆ ನಿಮಗೆ ಸಹಕಾರ ಸಿಗಲಾರದು. ಹಿಂದೆ ಹೈದರಾಬಾದ್ ನೈಜಾಮರ ಅಧಿಕಾರ, ಮೈಸೂರು ಮಹಾರಾಜರ ವೈಭವ ಎಲ್ಲವನ್ನೂ ನೋಡಿದ್ದೇವೆ. ಅವರ ಒಂದು ಪರಿಸ್ಥಿತಿ ಈಗ ಏನಾಯಿತು, ಕಾಲಪರಿಸ್ಥಿತಿ ಎಷ್ಟರಮಟ್ಟಿಗೆ ಬದಲಾವಣೆಯಾಗಿದೆಯೆಂಬುದನ್ನು ನೋಡ ಬೇಕು. ಕೆಲವು ಸ್ಟೇಟ್ ಮಿನಿಸ್ಟರ್ಸ್ ರಬ್ಬರ್‌ಸ್ಟಾಂಪ್ ಮಾಡಿಕೊಂಡಿದ್ದಾರೆ. ಅವರಿಗೆ ಮರ್ಯಾದೆ ಇದ್ದರೆ ಅಧಿಕಾರ ಬಿಟ್ಟುಹೋಗಬೇಕು. ಅವರಿಗೆ ಕೊಟ್ಟಿರುವ ಅಧಿಕಾರ ಏನೇನೂ ಇಲ್ಲ. ಅವರಿಗೆ ಒಂದು ಕಾರು, ಬಂಗಲೆ, ಸಿಬ್ಬಂದಿ, ಹಾಗೂ ಇತರ ಸೌಕರ್ಯಗಳೂ ಎಲ್ಲಾ ಇವೆ. ಏತಕ್ಕೆ ಇಷ್ಟು ಸೌಕರ್ಯಗಳು ಅವರಿಗೆ ಇವೆಯೋ ಗೊತ್ತಿಲ್ಲ. ಅವರ ಕೈಲಿ ಯಾವುದಕ್ಕೂ ಸ್ವತಂತ್ರವಾಗಿ ಒಂದು ಆರ್ಡರ್ ಮಾಡುವುದಕ್ಕೆ ಅಧಿಕಾರವಿಲ್ಲ. ಕೇವಲ ಒಬ್ಬ ಅಸಿಸ್ಟೆಂಟ್ ಕಮಿಂಷನರನ್ನು ವರ್ಗಮಾಡುವುದಕ್ಕೆ ಅಧಿಕಾರವಿಲ್ಲ. ಕೆಲವರಿಗೆ ದಕ್ಷತೆ ಇದೆ, ಎಫಿಷಿಯನ್ಸಿ ಇದೆ. ಕೆಲವರು ಇನ್ನೂ ಯುವಕರಾಗಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ :—ಮಾನ್ಯ ಸದಸ್ಯರು ಹರಿಕಥೆ ಮಾಡುವ ಹಾಗೆ ಮಾತನಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್ : —ಅವರಿಗೆ ಇಲ್ಲಿ ಕೆಲಸ ಕಡಿಮೆ ಇದ್ದರೂ ಹೊರಗಡೆ ಕೆಲಸ ಬಹಳ ಹೆಚ್ಚಾಗಿದೆ. ಆದ್ದರಿಂದ, ಪಾಪ, ಅವರನ್ನು ರಬ್ಬರ್ ಸ್ಟಾಂಪ್ ಮಂತ್ರಿಗಳನ್ನಾಗಿ ಮಾಡಬೇಡಿ.

ಶ್ರೀ ಬಿ. ಪುಟ್ಟಸ್ವಾಮಯ್ಯ : — ಮಂತ್ರಿಗಳಿಗೆ ಒಂದು ಮಾತು ಹೇಳುತ್ತೇನೆ. ಬರೀ ಗಂಡಸರನ್ನೇ ಪ್ರೈವೇಟ್ ಸೆಕ್ರೆಟರಿಯನ್ನಾಗಿ ಮಾಡಿದರೆ, ಹೆಂಗಸರಿಗೆ ಅಪಮಾನ ಮಾಡಿದಂತಾಗುತ್ತದೆ,

ಶ್ರೀ ಎಂ.ಎಸ್. ಕೃಷ್ಣನ್ :—ಅವರಿಗೆ ಎಷ್ಟು ವಯಸ್ಸು ಆಗಿರಬೇಕೆಂಬುದು ಒಂದು ಪ್ರಶ್ನೆ.

ಶ್ರೀ ವಾಟಾಳ್ ನಾಗರಾಜ್ :—ನಮ್ಮಲ್ಲಿ ಒಂದು ಇಲಾಖೆಯೇ ಇದೆ. ಅಲ್ಲಿಂದ ಪಂಚಾಯತಿ ರಾಜ್ಯ ಎಂಬ ಪುಸ್ತಕ ಬರುತ್ತಿದೆ. ಮಾರ್ಚ್‌ಆಫ್ ಮೈಸೂರು ಎಂಬುದು ಬೇರೆ ಬರುತ್ತಿದೆ. ಅದು ಏಕೆ ಬೇಕು ? ಅದು ಕೇವಲ ಮಾನ್ಯ ಮುಖ್ಯಮಂತ್ರಿಗಳ ಮುಖ ಫೋಟೊ ಹಾಕುವುದಕ್ಕೆ

ಹಾಗೂ ಇತರೇ ಮಂತ್ರಿಗಳ ಪೋಟೋ ಹಾಕುವುದಕ್ಕೆ ಮಾತ್ರ ಇರುವುದೆಂದು ಕಾಣುತ್ತದೆ. ರಾಜ್ಯೋತ್ಸವ ನ್ಯೂಸರೀಲ್ ಎಂದು ತೋರಿಸಿದ್ದಾರೆ. ಅದರಲ್ಲಿ ಎಲ್ಲ ಅವರದೇ, ನಮ್ಮನ್ನು ಅದರಲ್ಲಿ ತೋರಿಸಿಲ್ಲ. ಆದ್ದರಿಂದ ಇಂತಹ ಅನ್ಯಾಯಗಳನ್ನು ಮುಂದೆ ಮಾಡದೇ ಇರುವ ಹಾಗೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. 16ನೇ ಕರ್ಣಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಅನೇಕ ಸಂಗತಿಗಳು ಪ್ರಕಟವಾಗಬೇಕಾಗಿತ್ತು. ಅವೆಲ್ಲವೂ ಈ ಇಲಾಖೆಯಲ್ಲಿದೆ. ಯಾವ ಒಂದು ಸಣ್ಣ ಪತ್ರಿಕೆಗಳಿಗೆ ಒಂದು ಜಾಹಿರಾತನ್ನು ಕೊಟ್ಟಿಲ್ಲ. ಕೇವಲ ದೊಡ್ಡ ಪತ್ರಿಕೆಗಳಿಗೆ ಮಾತ್ರ ಇದರ ಬಗ್ಗೆ ಜಾಹಿರಾತು ಕೊಟ್ಟಿದ್ದಾರೆ. ಆದ್ದರಿಂದ ಇನ್ನುಮುಂದೆ ಇಂತಹ ಸಂದರ್ಭಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕುಗಳಲ್ಲಿರುವ ಸಣ್ಣ ಹಾಗೂ ದೊಡ್ಡ ಪತ್ರಿಕೆಗಳಿಗೆ ಇವುಗಳ ಬಗ್ಗೆ ಒಂದೇ ಸಮನಾಗಿ ಜಾಹಿರಾತುಗಳನ್ನು ಕೊಡಬೇಕಾಗುತ್ತದೆ.

ಇನ್ನೊಂದು ವಿಷಯ. ನಾನು ಅನೇಕ ಸಾರಿ ಜೈಲಿಗೆ ಹೋಗಿದ್ದೇನೆ. ಅಲ್ಲಿನವರ ಪರಿಸ್ಥಿತಿಯನ್ನು ನಾನು ತಿಳಿದಿದ್ದೇನೆ. 25ನೇ ವರ್ಷದ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಹೆಚ್ಚಿನ ಶಿಕ್ಷೆಯನ್ನು ಅನುಭವಿಸಿರುವವರು ಅದರಲ್ಲಿಯೂ ಹೆಚ್ಚು ವಯಸ್ಸಾಗಿರುವವರನ್ನು ಜೈಲಿನಿಂದ ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ಜಫ್ತಿ ಶಿಕ್ಷೆಯಾಗಿ ಎಲ್ಲೋ ಕದ್ದು ಬಂದು ಕೇವಲ 2 ತಿಂಗಳು ಆಗಿದ್ದರೆ ಅಂತಹವರನ್ನು ಬಿಟ್ಟಿರುವಾಗ ಜಫ್ತಿ ಶಿಕ್ಷೆಯಾಗಿರುವವರನ್ನೆಲ್ಲಾ ಈಗ ಬಿಡುಗಡೆ ಮಾಡಿ. ಮಾನ್ಯ ಶ್ರೀ ದೇವರಾಜ ಅರಸ್ ಅವರು ಪೋಲೀಸ್ ವ್ಯಾನಿನಲ್ಲಿ ಗೂಂಡಾಗಳನ್ನು ಕುಳ್ಳಿರಿಸಿಕೊಂಡು ನಮ್ಮಂತಹವರ ವಿಷಯದಲ್ಲಿ ಅನೇಕ ರೀತಿಯಲ್ಲಿ ಗಲಾಟೆ ಮಾಡಿಸುತ್ತಿದ್ದಾರೆ. ಇದರಲ್ಲಿ ಜಿಲ್ಲಾ ಪ್ರಕರಣಗಳು ಅನೇಕ ಇವೆ. ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರು ಅವರ ಏಜೆಂಟರಾಗಿದ್ದಾರೆ. ಅವರ ಮೇಲೆ ನನ್ನ ಹತ್ತಿರ 18 ಚಾರ್ಜಸ್ ಇವೆ. ತಮ್ಮ ಅಪ್ಪಣೆಯ ಮೇರೆಗೆ ಈ ಸದನದಲ್ಲಿಯೇ ಮುಂದೆ ಆ ಎಲ್ಲ ಚಾರ್ಜುಗಳನ್ನು ಇಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳ ಬಗ್ಗೆ, ಒಬ್ಬ ಐ.ಜಿ.ಪಿ. ಬಗ್ಗೆ, ಎಂ.ಎಲ್.ಎ. ಗಳ ಬಗ್ಗೆ ಹಾಗೂ ಇತರೇ ಮಂತ್ರಿಗಳ ಬಗ್ಗೆ ಹೆಚ್ಚಿನ ಕಾರುಬಾರು ಮಾಡತಕ್ಕ ಒಬ್ಬ ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರ ನೀತಿ ನಿಜವಾಗಿ ಒಳ್ಳೆಯದಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ರಾಮಸ್ವಾಮಿ (ಆನೇಕಲ್) :—ಸನ್ಮಾನ್ಯ ಸಭಾಪತಿಯವರೇ, ಈ ದಿವಸ ಏನು ನಮ್ಮ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಬೇಡಿಕೆಗಳನ್ನು ಮಂಡಿಸಿದ್ದಾರೆ ಅವುಗಳನ್ನೆಲ್ಲಾ, ನಾನು ಸಂಪೂರ್ಣವಾಗಿ ಬೆಂಬಲಿಸುತ್ತ ನಾಲ್ಕಾರು ಮಾತುಗಳನ್ನು ಹೇಳಬಯಸುತ್ತೇನೆ.

ಮೊಟ್ಟಮೊದಲನೆಯದಾಗಿ ನಾನು ಎಕ್ಸೈಜ್ ಇಲಾಖೆಯ ಬಗ್ಗೆ ಹೇಳುವುದಾದರೆ ಈ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಬಡವರೂ, ನಿರ್ಗತಿಕರೂ ಮತ್ತು ಕಾರ್ಮಿಕರೂ ನಮ್ಮ ಆಡಳಿತ ಪಕ್ಷಕ್ಕೆ ಓಟ್ ಮಾಡಿದ್ದಾರೆ. ಆದರೆ ಈ ದಿವಸ ಈ ಇಲಾಖೆಗೆ ಸಂಬಂಧಪಟ್ಟ ಈ ಹೆಂಡ ಸಾರಾಯಿಗಳ ಮಾರಾಟ ಏನಿದೆ ಇದು ಕೆಲವೇ ಪಟ್ಟಭದ್ರ ಹಿತಾಸಕ್ತಿಗಳ ಕೈಸೇರಿ ಅದನ್ನು ಹದಗೆಡಿಸುತ್ತಿದ್ದಾರೆ, ಅದನ್ನು ಅಡಲ್ಟ್ರೇಟ್ ಮಾಡಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಬಡವರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಕಾರ್ಮಿಕ ವರ್ಗದವರು ಹೆಂಡವನ್ನು ಸೇವನೆ ಮಾಡುತ್ತಾರೆ. ಅದಕ್ಕಾಗಿ ನಾನು ಸಲಹೆ ಮಾಡುತ್ತಿರುವುದೇನೆಂದರೆ ಯಾವ ಅಡಲ್‌ಟ್ರೇಷನ್ನನ್ನೂ ಮಾಡದೆ ಹೆಂಡವನ್ನು ಸುಸಜ್ಜಿತವಾದ ರೀತಿಯಲ್ಲಿ ಮರದಿಂದ ಹೇಗೆ ಇಳಿಸಲ್ಪಡುತ್ತದೆಯೋ ಹಾಗೇ ಅದನ್ನು ಸೀಲ್ ಮಾಡಿ ತಂದು ಅದನ್ನು ಜನರಿಗೆ ವಿತರಣೆ ಮಾಡಬೇಕೆಂದು ಹೇಳುತ್ತೇನೆ. ಆದರೆ ಮಾನ್ಯ ಆರೋಗ್ಯ ಸಚಿವರಿಗೆ ಗೊತ್ತಿರಬಹುದು, ಈ ದಿವಸ ದೇಶದಲ್ಲಿ ರೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಜನರು ಈ ಹೆಂಡ ಸಾರಾಯಿಗಳನ್ನು ಕುಡಿದು ತಮ್ಮ ಆರೋಗ್ಯವನ್ನು ಹೇಗೆ ಹಾಳು ಮಾಡಿಕೊಳ್ಳುತ್ತಿದ್ದಾರೆಂಬುದು ದಿನ ಬೆಳಗಾದರೆ ನಾನು ಪತ್ರಿಕೆಗಳಲ್ಲಿ ಓದುತ್ತಿದ್ದೇನೆ. ಇದಕ್ಕೆ ಡೀನೇಚರ್ಡ್ ಸ್ಪಿರಿಟ್ ಇತ್ಯಾದಿ

ಏನೇನೋ ವಸ್ತುಗಳನ್ನು ಇದರಲ್ಲಿ ಬೆರೆಸಿ ಮಾರಾಟ ಮಾಡುತ್ತಿರುವುದರಿಂದ ಜನರ ಆರೋಗ್ಯ ಕೆಡುತ್ತಿದೆ. ಕೆಲವು ಕಂಟ್ರಾಕ್ಟರುಗಳು ಅಂದರೆ ಖೋಡೆ ಮತ್ತು ನಂದಿ ಬ್ರೆವರೀಸ್ ಇವರಿಬ್ಬರ ಕೈವಾಡವೇ ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಜಾಸ್ತಿಯಾಗಿದೆ. ಆದರೆ ಇನು ಮುಂದಕ್ಕಾದರೂ ಈ ಪಾನೀಯಗಳನ್ನು ಬಡವರಿಗೆ ಸುಲಭದರದಲ್ಲಿ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ದಿವಸ ಈ ಹೆಂಡ ಸಾರಾಯಿ ಇವು ಕೆಲವು ಶ್ರೀಮಂತರ ಕೈಗೆ ಸಿಕ್ಕಿ ಬಹಳ ಅನ್ಯಾಯ ನಡೆಯುತ್ತಿದೆ. ಅದನ್ನು ತಪ್ಪಿಸಬೇಕೆಂದು ನಾನು ಮಾನ್ಯ ಸರಕಾರದವರನ್ನು ಕಡ್ಡಾಯವಾಗಿ ಪ್ರಾರ್ಥಿಸುತ್ತೇನೆ. ಇನ್ನು ಎಕ್ಸೈಜ್ ಇಲಾಖೆಯಲ್ಲಿ ಕೇಡರ್ ಅಂಡ್ ರೆಕ್ರೂಯಿಟ್‌ಮೆಂಟ್ ರೂಲುಗಳಿಲ್ಲ; ಸೀನಿಯಾರಿಟಿ ಲಿಸ್ಟಿಲ್ಲ. ಇಲ್ಲಿ ಸ್ವಜಾತಿಯವರಿಗೆ ಮಾತ್ರ ಪ್ರೋತ್ಸಾಹ ಮನ್ನಣೆಗಳು ದೊರೆಯುತ್ತಿವೆ. ಅಲ್ಲಿ ಒಳ್ಳೆ ದಕ್ಷತೆ, ಪ್ರಾಮಾಣಿಕತೆ ಅನುಭವವುಳ್ಳ ನೌಕರರಿದ್ದರೂ ಅವರಿಗೆ ಮನ್ನಣೆಯಿಲ್ಲ, ಪ್ರೋತ್ಸಾಹವಿಲ್ಲ. ಅಲ್ಲಿ ಕೆಲವು ದಕ್ಷ ಅಧಿಕಾರಿಗಳು ಹೆಚ್ಚಿನ ಕ್ವಾಲಿಫಿಕೇಷನ್ ಉಳ್ಳವರಿದ್ದರೂ ಅವರಿಗೆ ಪ್ರಮೋಷನ್ ಸಿಗುತ್ತಿಲ್ಲ. ಅಲ್ಲಿ ಬಹಳ ಅನ್ಯಾಯ ನಡೆಯುತ್ತಿದೆ. ಸರ್ಕಾರದವರು ಯೋಗ್ಯರಿಗೆ ವಿದ್ಯಾವಂತರಿಗೆ, ದಕ್ಷರಿಗೆ ಪ್ರೋತ್ಸಾಹ ಸಿಗುವಂತೆ ಒಂದು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಇಲಾಖೆಯಲ್ಲಿ ಕೆಲವರಿಗೆ ಪ್ರಮೋಷನ್ ವಿಚಾರದಲ್ಲಿ ಬಹಳ ಅನ್ಯಾಯ ನಡೆದುದರಿಂದ ಅವರು ಹೈಕೋರ್ಟಿಗೆ ಹೋಗಿ ಅಲ್ಲಿಂದ ಅವರಿಗೆ ಪ್ರಮೋಷನ್ ಕೊಡಬೇಕಾಗಿರುತ್ತೆಂದು ಆಜ್ಞೆಯನ್ನು ತಂದಿದ್ದರೂ ಕೂಡ ಅದನ್ನು ಇನ್ನೂ ಇಂಪ್ಲಿಮೆಂಟ್ ಮಾಡಿಲ್ಲ. ಇನ್ನು ಈ ಇಲಾಖೆಯಲ್ಲಿ ಸೂಪರಿಂಟೆಂಡೆಂಟ್ ಮತ್ತು ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಎಕ್ಸೈಜ್ ಅಧಿಕಾರಿಗಳು ಮತ್ತು ಸ್ಕ್ವಾಡ್ ಅಂತ ಇದೆ. ಇವರನ್ನು ವರ್ಗಾವರ್ಗಿ ಮಾಡುವುದರಲ್ಲಿ ಯಾವ ಒಂದು ಸರಿಯಾದ ಧೋರಣೆಯೂ ಇರುವುದಿಲ್ಲ. ಇನ್ನು ಅಲ್ಲಿ ಕೆಲವು ಸಬ್ ಇನ್‌ಸ್ಪೆಕ್ಟರುಗಳಿದ್ದಾರೆ. ಅವರು ಹಿಂದೆ ಎಲ್ಲೆಲ್ಲಿ ಇದ್ದರು, ಏನು ಕೆಲಸಗಳನ್ನು ಮಾಡಿದ್ದಾರೆ, ಅವರ ಗುಣಚಾರಿತ್ರ್ಯಗಳೇನು ಎಂಬುದನ್ನು ತಿಳಿದು ಕೆಲಸ ಮಾಡಬೇಕು. ಅಲ್ಲದೆ ಅವರು ಎಷ್ಟೇ ದಕ್ಷರಾಗಿರಲಿ, ಒಳ್ಳೆಯವರಾಗಿರಲಿ ಎರಡು ವರ್ಷಗಳಿಗೆ ಮೇಲೆ ಒಂದು ಕಡೆ ಒಬ್ಬರನ್ನು ಇಡಬಾರದು, ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗಮಾಡಬೇಕು. ಆದರೆ ಖಾಸಗೀ ಜನರ ಎಂ. ಎಲ್. ಎ. ಒತ್ತಡಕ್ಕೆ ಮಣಿದು ಕೆಲವರನ್ನು ಒಂದು ಕಡೆ ಇಡುವುದಕ್ಕೆ ಅವಕಾಶ ಕೊಡುತ್ತಿದ್ದಾರೆ. ಹೀಗಾಗಿ ಕೆಲವರು 20 ವರ್ಷಗಳಿಂದಲೂ ಒಂದೇ ಕಡೆ ಕೆಲಸಮಾಡಿ ಕೊಂಡಿರುತ್ತಾರೆ. ಇಂಥವರ ವರ್ಗಕ್ಕೆ ಆಫೀಸಿನಲ್ಲಿ ಏನಾದರೂ ಒಂದು ನೋಟನ್ನು ಪುಟಪ್ ಮಾಡಿದರೆ ಸಾಕು ಅದು ಹೇಗೋ ಮಾಡಿ ಏನೋ ಮಾಡಿ ಅದನ್ನು ಬೈಲಿಗೆ ತಂದು ಅದಕ್ಕೆ ಇನ್‌ಫ್ಲುಯೆನ್ಸ್ ಮಾಡಿಸಿ ಅದನ್ನು ಕ್ಯಾನ್‌ಸಲ್ ಮಾಡುವುದಕ್ಕೆ ಪ್ರಯತ್ನಗಳು ನಡೆಯುತ್ತಿವೆ. ಆದುದರಿಂದ ಹೀಗೆ ಆಫೀಸಿನ ಗುಟ್ಟನ್ನು ಬಯಲು ಮಾಡತಕ್ಕವರಿಗೆ ಉಗ್ರ ಶಿಕ್ಷೆ ವಿಧಿಸಬೇಕೆಂದು ಹೇಳುತ್ತೇನೆ. ಇನ್ನು ಕೇಸುಗಳ ಡಿಟೆಕ್ಷನ್ ವಿಚಾರಕ್ಕೆ ಬಂದರೆ 9258 ಕೇಸುಗಳು ಡಿಟೆಕ್ಟ್ ಆಗಿವೆ. ಅಂಡರ್ ಇನ್‌ವೆಸ್ಟಿಗೇಷನ್ 16295 ಕೇಸುಗಳು, ಕೋರ್ಟಿನಲ್ಲಿ 6176 ಕೇಸುಗಳೂ ಮತ್ತು ಕೆಮಿಕಲ್ ಎಗ್ಜಾಮಿನರಲ್ಲಿ 2294 ಕೇಸುಗಳಿರುತ್ತವೆ ಎಂದು ಹೇಳಿದೆ. ಆದರೆ ಈ ವಿಚಾರದಲ್ಲಿ ಸರ್ಕಾರಕ್ಕೆ ದೊಡ್ಡ ಅನ್ಯಾಯವಾಗುತ್ತಿದೆ. ಇಲ್ಲಿ ಕೆಲಸ ಮಾಡತಕ್ಕ ಅಸಿಸ್ಟೆಂಟ್ ಪ್ರಾಸೆಕ್ಯೂಟರ್ಸ್ ಏನಿದ್ದಾರೆ ಅವರು ಒಳ್ಳೇ ರೀತಿಯಲ್ಲಿ ಪಂಚನಾಮೆ ಇತ್ಯಾದಿಗಳನ್ನು ಮಾಡಿ ಒಳ್ಳೇ ರೀತಿಯಲ್ಲಿ ಕೇಸುಗಳನ್ನು ನಡೆಸುವುದಕ್ಕೆ ಒಂದು ಉತ್ತಮ ವ್ಯವಸ್ಥೆಯನ್ನು ಮಾಡ ಬೇಕೆಂದು ಹೇಳುತ್ತೇನೆ. ಈ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಎಕ್ಸೈಜ್ ಇಲಾಖೆಯಿಂದ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶ ಗಳಲ್ಲಿ ಹೆಂಡ ಸಾರಾಯಿಗಳನ್ನು ದೇವಸ್ಥಾನ, ಮಕ್ಕಳು ಓದತಕ್ಕ ಶಾಲೆ ಇತ್ಯಾದಿ ಪವಿತ್ರ ಸ್ಥಳಗಳಲ್ಲಿ ಮಾರಾಟಕ್ಕಾಗಿ ಇಟ್ಟಿರುತ್ತಾರೆ. ಇದರಿಂದ ಊರುಗಳಲ್ಲಿ ವಿನಾ ಕಾರಣ ಜಗಳಕ್ಕೆ

ಕಾರಣವಾಗುತ್ತಿದೆ. ಆದುದರಿಂದ ಇವುಗಳನ್ನು ಊರು ಬಿಟ್ಟು ಆಚೆ ಕಡೆಗಳಲ್ಲಿ ಇಟ್ಟು ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ—ಇಲ್ಲಿ ರಾಜ್ಯಪಾಲರಾಗಿದ್ದ ಶ್ರೀ ಧರ್ಮವೀರ ಅವರ ಕಾಲಕ್ಕೆ ಆಗಬಾರದ್ದೆಲ್ಲಾ ಆಗಿಹೋಗಿದೆ. ನನಗೆ ತಿಳಿದಿರುವ ಹಾಗೆ ಕೆಲವು ಕಾರ್ಯದರ್ಶಿಗಳು ಸರ್ಕಾರವನ್ನೇ ತಲೆಕೆಳಗು ಮಾಡುವುದಕ್ಕೆ ಹೊರಟಿದ್ದರು. ಜಿ. ಎ. ಡಿ. ನಲ್ಲಿ ಹಾಲಿ ಇರತಕ್ಕ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳು ಸರಿಯಾಗಿಲ್ಲ. ಅವುಗಳನ್ನು ಸರಿಯಾದ ರೀತಿಯಲ್ಲಿ ರೀಪ್ರಿಂಟ್ ಸಹಾ ಮಾಡಿಸಿಲ್ಲ. ಯಾರಿಗೆ ಪ್ರಮೋಷನ್ ಸಿಕ್ಕಬೇಕೋ ಅವರಿಗೆ ಸಿಕ್ಕುತ್ತಿಲ್ಲ. ಕೆಲವರ ಬಗ್ಗೆ ಎಷ್ಟೇ ಒಳ್ಳೆಯ ಕಾನ್‌ಫಿಡೆನ್‌ಷಿಯಲ್ ರಿಪೋರ್ಟುಗಳಿರಲಿ, ಅವರ ಬಗ್ಗೆ ಎಷ್ಟೇ ಶಾಭಾಸ್‌ಗಿರಿಗಳಿದ್ದರೂ ಅವರಿಗೆ ಪ್ರಮೋಷನ್ ಸಿಕ್ಕಿಲ್ಲ. ನಮ್ಮ ಮುಖ್ಯ ಮಂತ್ರಿಗಳು ನಿಗಾವಹಿಸಿ ಇದನ್ನೆಲ್ಲಾ ಸರಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಜಿ. ಎ. ಡಿ.ನಲ್ಲಿ 20-30 ವರ್ಷಗಳಿಂದ ಕೆಲವರು ಇದ್ದ ಕಡೆಯಲ್ಲೇ ಇದ್ದಾರೆ. ಕೆಲವು ಕ್ಲಾಸ್ ಫೋರ್‌ನಲ್ಲಿದ್ದು ಅಂಡರ್ ಸೆಕ್ರೆಟರಿಗಳಾಗಿರತಕ್ಕವರೂ ಇದ್ದಾರೆ. ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಇಬ್ಬರು ಅಧಿಕಾರಿಗಳನ್ನು ಇನ್‌ಷೂರೆನ್ಸ್ ಇಲಾಖೆಗೆ ಕಳುಹಿಸಿದ್ದರು. ಅವರಲ್ಲಿ ಒಬ್ಬರು 9ನೇ ತಾರೀಖಿಗೆ ರಿಟೈರಾಗಬೇಕಾಗಿತ್ತು. ಅಂಥವರನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ಲೆಂಟ್ ಬೇಸಿಸ್ ಮೇಲೆ ಕಳುಹಿಸಿದರು. ಇಂಡಿಯಾ ಸರ್ಕಾರದವರು—ಅವರನ್ನು ನಾಲಾಯಕ್ ಎಂದು ವಾಪಸ್ ಕಳುಹಿಸಿದರು. ಹಾಗೆ ರಿಟೈರಾದವರ ಜಾಗದಲ್ಲಿ ಬೇರೊಬ್ಬರಿಗೆ ಬಡ್ತಿಮಾಡಿದ ಆರ್ಡರಾಗಿದ್ದರೂ ಅದನ್ನು ಜಾರಿಗೆ ತಾರದೆ ಡಿಲೇ ಮಾಡಿದ್ದಾರೆ. ಇದನ್ನು ಇದುವರೆಗೆ ಅನುಷ್ಠಾನಕ್ಕೆ ತಂದಿಲ್ಲ. ಬಹುಶಃ ಹರಿಜನ ಎಂದು ತರಲಿಲ್ಲವೋ ಏನೋ. ಅದು ಗೊತ್ತಿಲ್ಲ. ಹಣಕಾಸಿನ ಸಚಿವರ ಗಮನಕ್ಕೆ ತರದೆ ಹಣಕಾಸಿನ ಇಲಾಖೆಯ ಸೆಕ್ರೆಟರಿಗಳಾದ ಮಣಿನಾರಾಯಣ ಸ್ವಾಮಿಯವರೇ ಇದರ ಬಗ್ಗೆ ಆಸಕ್ತಿ ವಹಿಸಿ ಕೊನೆಯವರೆಗೆ ನೋಡಿಕೊಂಡರು, ಡೆಸ್‌ಪ್ಯಾಚಿಂಗ್ ಕ್ಲಾರ್ಕ್ ಕೆಲಸದಿಂದ ಹಿಡಿದು ಸೆಕ್ರೆಟರಿಯ ಕೆಲಸದವರೆಗೆ ಅವರೇ ನೋಡಿಕೊಂಡರು. 9ನೆಯ ತಾರೀಖು ರಿಲೀವ್ ಆಗಬೇಕಾದವರನ್ನು ರಿಲೀವ್ ಮಾಡದೆ ಒಂದು ವರ್ಷದ ಅವಧಿಯವರೆಗೆ ಮುಂದುವರೆಸಿದ್ದಾರೆ. ಒಂದು ನಿರ್ದಿಷ್ಟವಾದ ತಾರೀಖಿನಲ್ಲಿ ನಿವೃತ್ತರಾಗಬೇಕಾಗಿದ್ದವರನ್ನು ನಿವೃತ್ತಿಮಾಡದೆ ಅವರಿಗೆ ಎಕ್ಸ್‌ಟೆನ್‌ಷನ್ ಕೊಟ್ಟು ಮುಂದುವರೆಸಿದರು. ಇದರಿಂದ ಪ್ರಮೋಷನ್ ಸಿಕ್ಕಬೇಕಾಗಿದ್ದ ಅಧಿಕಾರಿಗೆ ಬೇಗ ಅದು ಸಿಕ್ಕಲಿಲ್ಲ.

ಕ್ಲಾಸ್ ಫೋರ್‌ನ ಕೆಲವರಿಗೆ ಪ್ರಮೋಷನ್ ಕೊಟ್ಟಿಲ್ಲ, ಅವರಿಗೆ ಎಸ್.ಎಸ್.ಎಲ್.ಸಿ. ಅರ್ಹತೆಯಿದೆ, ಅವರು ಬಡವರು. ಅವರಿಗೆ ನಾಲ್ಕನೆ ದರ್ಜೆಯಿಂದ ಮೂರನೆಯ ದರ್ಜೆಗೆ ಪ್ರಮೋಷನ್ ಕೊಡಬೇಕಾಗಿತ್ತು. ಇದನ್ನು ಹೇಳಿದೆ. ಬಡವರು, ಅವರಿಗೆ ಸಹಾಯ ಮಾಡಿ ಎಂದು ಹೇಳಿದೆ. ಅವರಿಗೆ ಪ್ರಮೋಷನ್ ಕೊಟ್ಟಿಲ್ಲ, ಕೊಡಬೇಕು.

ಪೋಲೀಸ್ ಇಲಾಖೆ. ಈ ಇಲಾಖೆ ಕೆಲಸ ದಕ್ಷತೆಯಿಂದ ನಡೆಯುತ್ತಿಲ್ಲವೆಂದು ಅನೇಕರು ಹೇಳಿದ್ದಾರೆ. ಇದು ನಿಜ. ನಮ್ಮ ಐ.ಜಿ. ಬಹಳ ದಕ್ಷರೆಂದು ಹೆಸರು ಪಡೆದಿದ್ದಾರೆ. ಅವರು ಅಧಿಕಾರಕ್ಕೆ ಬಂದಾಗ ಅವರಿಗೆ ಒಂದು ಪತ್ರ ಬರೆದೆ. ಓವರ್‌ಲೋಡ್ ಮಾಡಿರುವುದನ್ನು ನೋಡಲು ಒಂದು ಸ್ಕ್ವಾಡ್ ಇದೆ, ಅದರಲ್ಲಿ ಒಬ್ಬ ಪೋಲೀಸು ಅಧಿಕಾರಿ ಮತ್ತು ಎಂ.ಎಸ್. ಆರ್.ಟಿ.ಸಿ. ಅಧಿಕಾರಿ ಕೂಡಿ ಕೆಲಸ ಮಾಡಬೇಕು. ಆದರೆ ಅವರಿಗೆ ಹೊಂದಾಣಿಕೆ ಇಲ್ಲದೆ ಅನ್ಯಾಯವಾಗುತ್ತಿದೆ. ನನ್ನ ಕ್ಷೇತ್ರದಲ್ಲಿ ತಮಿಳುನಾಡಿಗೆ ಬಸ್ಸು ಹೋಗುವುದು, ಯಾವ ಪ್ರೈವೇಟ್ ಬಸ್ಸೂ ನನ್ನ ಕ್ಷೇತ್ರದಲ್ಲಿ ನಿಲ್ಲುವುದಕ್ಕೆ ಅವಕಾಶವಿಲ್ಲ. ಅದರ ಬಗ್ಗೆ ಸುಪ್ರೀಂ ಕೋರ್ಟ್ ಆಜ್ಞೆಯಾಗಿದೆ ಎಂದು ಹೇಳುವರು. ಅಲ್ಲಿ ಓವರ್‌ಲೋಡ್ ಮಾಡಿ 200-300

ಜನರನ್ನು ತುಂಬಿಕೊಂಡು ಹೋಗುವರು, ಅದು ನ್ಯಾಷನಲ್ ಹೈ ವೇ ನಂಬರು 7 ಹೆಬ್ಬಗೋಡಿ ಅತ್ತಿಬೆಲೆ ಬಸ್ ಅದು. ಇದಕ್ಕೆ ಗಮನ ಕೊಟ್ಟು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಪ್ರತಿಯೊಂದು ದಿವಸ ಪೋಲೀಸ್ ಸ್ಟೇಷನ್ನಿನಲ್ಲಿ ಹಣ ವಸೂಲು ಮಾಡುತ್ತಿದ್ದಾರೆ. ಪೋಲೀಸ್ ಅಧಿಕಾರಿಗಳ ಮೇಲೆ ಅನೇಕ ಆರೋಪಗಳಿವೆ. ಅಲ್ಲಿ ವಸೂಲಾಗುವ ಹಣ ಐ.ಜಿ.ಪಿ. ವರೆಗೆ ಸಲ್ಲುತ್ತದೆ ಎಂಬ ಭಾವನೆಯಿದೆ. ಇದರ ಬಗ್ಗೆ ನಿಗಾ ವಹಿಸಬೇಕು.

ಇನ್ನು ಜೈಲಿನ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಭಾಷಣ ಮುಗಿಸುತ್ತೇನೆ. ಜುಡಿಷಿಯಲ್ ಕಸ್ಟಡಿಯಲ್ಲಿರುವವರನ್ನು ನೋಡಲು ಅನೇಕರು ಗ್ರಾಮಾಂತರ ಪ್ರದೇಶಗಳಿಂದ ಬರುವರು, ಅವರಿಗೆ ಒಳ್ಳೆಯ ರೀತಿಯಿಂದ ಅವಕಾಶ ಕೊಡುತ್ತಿಲ್ಲ. ಜೈಲಿನಲ್ಲಿರುವ ಖೈದಿಯ ಹೆಂಡತಿಮಕ್ಕಳು, ಸಂಬಂಧಿಗಳು ಅವರನ್ನು ನೋಡಲು ದೂರದಿಂದ ಬರುವರು. ಅವರು ನೋಡುವುದಕ್ಕೆ ಹೋದರೆ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 2-3 ಗಂಟೆಯವರೆಗೆ ಕಾಯಬೇಕು. ಹಾಗೆ ಮಾಡದೆ ಅವರಿಗೆ ಜಾಗ್ರತೆ ಅವಕಾಶ ಕೊಡಬೇಕು, ಬರುವವರನ್ನು ಒಳ್ಳೆಯ ರೀತಿಯಿಂದ ಕಾಣಬೇಕು ಎಂದು ಪ್ರಾರ್ಥನೆಮಾಡಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಕೃಷ್ಣರಾವ್ (ಗೌರಿಬಿದನೂರು) :—ಅಧ್ಯಕ್ಷಿಣಿಯವರೇ, ಈ ದಿವಸ ಮುಖ್ಯ ಮಂತ್ರಿಯವರು ಮಂಡಿಸಿರುವ ಸಾಮಾನ್ಯ ಆಡಳಿತ, ಅಬ್ಕಾರಿ, ಪೋಲೀಸು ಮತ್ತಿತರ ಬೇಡಿಕೆಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವಾರು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಇಂದು ನಮ್ಮ ದೇಶದ ಸಾಮಾನ್ಯ ಆಡಳಿತ ಬಹಳ ಮಟ್ಟಿಗೆ ಯಾವ ಕಡೆ ಹೋಗುತ್ತಿದೆಯೆಂದರೆ ಲಂಚಗುಳಿತನ ಮತ್ತು ಅಸತ್ಯ ಎಂಬುದು ತಾಂಡವವಾಡುತ್ತಿದೆ, ಎಂದರೆ ಬಹಳ ಮಟ್ಟಿಗೆ ತಪ್ಪಾಗುವುದಿಲ್ಲವೇನೋ ಎಂದು ನಾನು ಭಾವಿಸುತ್ತಿದ್ದೇನೆ. ದೇಶದಲ್ಲಿ ಲಂಚಗುಳಿತನ ಹೋಗದೆ, ಪ್ರಾಮಾಣಿಕತೆ ಜಾಸ್ತಿಯಾಗದೆ ದೇಶದ ಆಡಳಿತ ಸರಿಹೋಗುವುದಿಲ್ಲ ಎಂಬುದನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಬಹಳ ಮುಖ್ಯವಾಗಿ ಲಂಚಗುಳಿತನ ಹೋಗಲಾಡಿಸುವುದು ಹೇಗೆ, ಪ್ರಾಮಾಣಿಕತೆ ಹೆಚ್ಚಿಸುವುದು ಹೇಗೆ ಎಂಬ ಮುಖ್ಯ ವಿಚಾರದ ಕಡೆ ಗಮನಿಸಿದಾಗ ನಮ್ಮಲ್ಲಿರುವ ಕಾನೂನು ಬಹಳ ಮಟ್ಟಿಗೆ ಸಾಲದೇನೋ ಎಂಬ ಭಾವನೆ ಬರುವುದು. ಇಂದು ಕೇವಲ ಸಿ.ಸಿ.ಎ. ರೂಲ್ಸ್ ಅಥವ ಆಂಟಿ ಕರಪ್‌ಷನ್ ಇಲಾಖೆ ಈ ಎರಡರಿಂದಲೇ ದೇಶದಲ್ಲಿರುವವರ ಅಪ್ರಾಮಾಣಿಕತೆ ಮತ್ತು ಲಂಚಗುಳಿತನ ಇವೆರಡೂ ಕೂಡ ಹೋಗುವುದಿಲ್ಲ. ಅತಿ ಮುಖ್ಯವಾಗಿ ಅಧಿಕಾರಿಗಳ ಮನಸ್ಸಿನ ಮೇಲೆ ಪರಿಣಾಮವಾಗುವಂಥ ವ್ಯವಸ್ಥೆಯಿರಬೇಕು. ಇದಾಗದ ಹೊರತು ಎಂಥ ಕಾನೂನು ಮಾಡಿದರೂ ಪ್ರಯೋಜನವಾಗುವುದಿಲ್ಲ. ಇದನ್ನು ಒತ್ತಿ ಹೇಳಬೇಕಾಗಿದೆ. ಈ ದೇಶದಲ್ಲಿರುವ ಬ್ಲಾಕ್ ಮಾರ್ಕೆಟ್, ಲಂಚಗುಳಿತನ, ಅಸತ್ಯ ಮುಂತಾದುವು ತೊಲಗಬೇಕಾದರೆ ಭದ್ರವಾದ ಕಾನೂನು ಅತ್ಯಗತ್ಯ ಎಂದು ಒತ್ತಿ ಒತ್ತಿ ಹೇಳಬೇಕಾಗಿದೆ. ಇಂಥ ಅಪರಾಧ ಮಾಡುವವರಿಗೆ ಉಗ್ರ ಶಿಕ್ಷೆ ಆಗದಿದ್ದರೆ ಭಯವಿರುವುದಿಲ್ಲ. ಭಯವುಂಟಾಗುವವರೆಗೆ ಪ್ರಯೋಜನವಾಗುವುದಿಲ್ಲ. ಬಹಳ ಮಟ್ಟಿಗೆ ಎಲ್ಲಾ ದರ್ಜೆ ಅಧಿಕಾರಿಗಳಲ್ಲೂ ಲಂಚಗುಳಿತನವಿದೆ, ಅಸತ್ಯವಿದೆ, ಅಧಿಕಾರಿಗಳಲ್ಲಿ ಇದು ತುಂಬಿ ತುಳುಕಾಡುತ್ತಿದೆ. ಇದಕ್ಕೆ ಒಂದೆರಡು ಉದಾಹರಣೆ ಕೊಡುತ್ತೇನೆ. ನನ್ನ ಮಿತ್ರರೊಬ್ಬರು ಇಂಥ ಕೆಲಸವಾಗಬೇಕು ಎಂದು ಹೇಳಿದಾಗ ಇನ್ನೂರು ರೂಪಾಯಿ ಕೊಡಿ ಕೆಲಸ ಮಾಡಿಸಿಕೊಂಡು ಬರುತ್ತೇನೆ ಎಂದು ಹೇಳಿದರು. ಇದರಿಂದ ಎಷ್ಟು ಉತ್ತಮವಾದ ಆಡಳಿತ ವ್ಯವಸ್ಥೆ ನಮ್ಮಲ್ಲಿದೆ ಎಂಬುದನ್ನು ಯೋಚನೆಮಾಡಬಹುದು. ಇದನ್ನು ತಡೆಗಟ್ಟಬೇಕು, ಭದ್ರಪಡಿಸಬೇಕು. ಆಂಟಿಕರಪ್‌ಷನ್ ಇಲಾಖೆಯನ್ನು ಸೃಷ್ಟಿಮಾಡಿದ್ದೇವೇ ಹೊರತು ಅದರಿಂದ ಸರಿಯಾದ ಪರಿಣಾಮವಾಗಿಲ್ಲ. ಆ ಇಲಾಖೆ ನಿಜವಾಗಿ ಎಷ್ಟು ಸಾಧಿಸಬೇಕೋ ಅಷ್ಟನ್ನು ಖಂಡಿತ ಸಾಧಿಸಿಲ್ಲ. ಆಂಟಿಕರಪ್‌ಷನ್ ಇಲಾಖೆ ಆಗುತ್ತಿದೆಯೇ ಹೊರತು ಯಾವ ಲಂಚಕೋರರಾದ ದೊಡ್ಡ ದೊಡ್ಡ ಅಧಿಕಾರಿಗಳನ್ನು ಹಿಡಿಯುತ್ತಿಲ್ಲ. ಅದು ಸಾಮಾನ್ಯವಾಗಿ

ಬಡ ಗುಮಾಸ್ತರನ್ನು 2 ರೂಪಾಯಿಯಿಂದ 10 ರೂಪಾಯಿಗಳವರೆಗೆ ಲಂಚ ಪಡೆಯುವ ಸಣ್ಣ ನೌಕರರನ್ನು ಮಾತ್ರ ಹಿಡಿಯುತ್ತಿದೆ. ಎರಡರಿಂದ ಹತ್ತು ಸಾವಿರ ರೂಪಾಯಿಗಳವರೆಗೆ ಲಂಚ ಪಡೆಯುವ ದೊಡ್ಡ ಅಧಿಕಾರಿಗಳಮೇಲೆ ಲಂಚನಿರೋಧ ಇಲಾಖೆ ಕ್ರಮ ತೆಗೆದುಕೊಳ್ಳದಿರುವುದು ಶೋಚನೀಯವಾದ ವಿಚಾರ. ಈ ಇಲಾಖೆಯಲ್ಲಿ ಸ್ವಲ್ಪ ದಕ್ಷರಾದ ಅಧಿಕಾರಿಗಳನ್ನು ನೇಮಕ ಮಾಡಬೇಕು.

ಎರಡನೆಯದು ಪೋಲೀಸು ಇಲಾಖೆ, ಇದರಲ್ಲಿ ಕೆಲವರು ಸತ್ಯಸಂಧರಾದ ಅಧಿಕಾರಿಗಳಿದ್ದರೂ ಕೆಲವರು ಜನರನ್ನು ಶೋಷಣೆ ಮಾಡುತ್ತಿದ್ದಾರೆ. ಇದರಲ್ಲಿ ಸಂದೇಹವಿಲ್ಲ. ಅವರ ಹೆಸರು ಹೇಳುವುದಿಲ್ಲ, ಒಬ್ಬ ಸಬ್‌ಇನ್‌ಸ್ಪೆಕ್ಟರು ಪೋಲೀಸು ಸ್ಟೇಷನ್ನಿನಲ್ಲಿ ಹಣ ಕೊಡಿ ಎಂದು ಕೇಳಿದರು. ಅವರು ತಾವು ಹತ್ತು ಸಾವಿರ ರೂಪಾಯಿ ಖರ್ಚುಮಾಡಿ ಸಬ್‌ಇನ್‌ಸ್ಪೆಕ್ಟರಾಗಿರುವುದಾಗಿಯೂ ಹೇಳಿದರು. ಇಂಥ ಅಧಿಕಾರಿಗಳಿದ್ದರೆ ದೇಶದಲ್ಲಿ ಪ್ರಾಮಾಣಿಕತೆ ಎಷ್ಟರಮಟ್ಟಿಗೆ ಇರುತ್ತದೆ, ಜನತೆಗೆ ನ್ಯಾಯ ಎಷ್ಟರಮಟ್ಟಿಗೆ ದೊರೆಯುತ್ತದೆ ಎಂಬುದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಇಂಥ ಒಂದು ರೀತಿಯ ಕೇಸುಗಳನ್ನು ತಮ್ಮ ಗಮನಕ್ಕೆ ತಂದಾಗ, ಉಗ್ರವಾದಂಥ ಶಿಕ್ಷೆಯನ್ನು ಮಾಡದೇ ಹೋದ ಪಕ್ಷದಲ್ಲಿ ದೇಶದಲ್ಲಿ ಪೋಲಿಸ್ ಭದ್ರತೆ ಇರುವುದಿಲ್ಲ. ಅಬ್ಕಾರಿ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಸೇಂದಿ, ಸಾರಾಯಿ ಈ ಎರಡು ಅಂಗಡಿಗಳಿಂದ ದೇಶಕ್ಕೆ ಹೆಚ್ಚು ಲಾಭ ಬರುತ್ತಿದೆ. ಈಗ ಸೇಂದಿ ಅಂಗಡಿಗಳನ್ನು ಡಿಸ್ಟ್ರಿಕ್ಟ್‌ವೈಸ್ ಹರಾಜು ಹಾಕುತ್ತಾರೆ. ತಾಲ್ಲೂಕುವೈಸ್ ಸೇಂದಿ ಅಂಗಡಿಗಳನ್ನು ಹರಾಜು ಹಾಕಿಸಿದರೆ, ಅವು ಕೇವಲ ಒಬ್ಬರ ಕೈಯ್ಯಲ್ಲಿ ಇರದೆ ಡೀಸೆಂಟ್ರಲೈಸ್ ಆಗುತ್ತದೆ. ತಾಲ್ಲೂಕುವೈಸ್ ಹರಾಜು ಹಾಕಿದರೆ, ತೆರಿಗೆಯಿಂದ ಹೆಚ್ಚಿನ ಲಾಭ ಬರುತ್ತದೆ. ಅದೇ ರೀತಿ ಸೇಂದಿ ಅಂಗಡಿಗಳನ್ನು ತಾಲ್ಲೂಕುವೈಸ್ ಹರಾಜು ಹಾಕಿದರೆ ಜಾಸ್ತಿ ತೆರಿಗೆ ಬರುತ್ತದೆ. ಎಂದು ನಿರೀಕ್ಷಿಸಬಹುದು. ಇನ್ನೊಂದು ನನ್ನ ಸಲಹೆ ಏನೆಂದರೆ ಮೊಲ್ಯಾಸಿಸ್ ಹೊರಗಡೆಯಿಂದ ಬರುತ್ತದೆ. ಇದು ಒಂದು ಟನ್‌ಗೆ ಸುಮಾರು 300 ರೂಪಾಯಿ ಮೇಲ್ಪಟ್ಟು ಬೆಲೆಯಾಗುತ್ತದೆ. ಇದನ್ನು ಸರ್ಕಾರ ನಿರ್ಬಂಧ ಮಾಡಿ ಕೇವಲ ಹತ್ತು ರೂಪಾಯಿಗೆ ತೆಗೆದುಕೊಳ್ಳುತ್ತಾರೆ. ಇದು ಸರಿಯಲ್ಲ. ರೇಟನ್ನಾದರೂ ಜಾಸ್ತಿಮಾಡಿ ಇಲ್ಲದೆ ಹೋದ ಪಕ್ಷದಲ್ಲಿ ಮೊಲ್ಯಾಸಿಸ್ ಅನ್ನು ಸ್ವಂತವಾಗಿ ಮಾಡಿಕೊಳ್ಳಲು ಅವಕಾಶ ಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಟೂರಿಸಂ ಬಗ್ಗೆ ಒಂದೆರಡು ಮಾತನ್ನು ಹೇಳುತ್ತೇನೆ. ಗೋರಿಬಿದನೂರು ತಾಲ್ಲೂಕಿನಲ್ಲಿ ವಿದುರಾಶ್ವತ್ಥ ಪುಣ್ಯಕ್ಷೇತ್ರವಿದೆ, ಸಹಸ್ರಾರು ಮಂದಿ ಯಾತ್ರಿಕರು ಪ್ರತಿನಿತ್ಯವೂ ಬರುತ್ತಾರೆ. ಹತ್ತಾರು ಟೂರಿಸ್ಟ್ ಬಸ್‌ಗಳು ಬರುತ್ತವೆ. ಇದು ಬಹಳ ಪವಿತ್ರವಾದ ಜಾಗ, ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾದ ಜಾಗ, ಆದ್ದರಿಂದ ಇದನ್ನು ಒಂದು ಟೂರಿಸ್ಟ್ ಸೆಂಟರ್ ಆಗಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಗೋರಿಬಿದನೂರು ಸಕ್ಕರೆ ಕಾರ್ಖಾನೆಗೆ ಒಂದು ಡಿಸ್ಟಿಲರಿ ಪ್ಲಾಂಟನ್ನು ಹಾಕಬೇಕು. ಈ ರೀತಿ ಮಾಡಿದರೆ ಅಲ್ಲಿ ಸಕ್ಕರೆ ಉತ್ಪತ್ತಿ ಜಾಸ್ತಿಯಾಗುತ್ತದೆ ಎಂದು ಕೇಳಿದ್ದೇನೆ. ಈಗಾಗಲೇ ನಾವು ಡಿಸ್ಟಿಲರಿ ಪ್ಲಾಂಟ್ ಬೇಕೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೇನೆ. ಆದಷ್ಟು ಬೇಗ ಇದಕ್ಕೆ ಸಂಬಂಧಪಟ್ಟ ಲೈಸೆನ್ಸ್‌ಅನ್ನು ಕೊಟ್ಟು ಒಂದು ಡಿಸ್ಟಿಲರಿ ಪ್ಲಾಂಟನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು ಅಧ್ಯಕ್ಷರು ನನಗೆ ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) :—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂಥ ಬೇಡಿಕೆಗಳನ್ನು ವಿರೋಧಿಸಿ ಒಂದೆರಡು ಮಾತುಗಳನ್ನು ಆಡಲು ಇಚ್ಛಿಪಡುತ್ತೇನೆ. ಮೊದಲನೆಯದಾಗಿ ಮಾನ್ಯ ವಾಟಾಳ್ ನಾಗರಾಜ್ ಅವರು ಮಾತನಾಡಿ ಒಂದು ವಿಷಯವನ್ನು ಬಿಟ್ಟಿದ್ದಾರೆ. ಜೈಲುಗಳಲ್ಲಿ ಏನಾಗಿದೆ ಎಂದರೆ ಅಲ್ಲಿ ಜೀವಾವಧಿ ಶಿಕ್ಷೆಯನ್ನು ಅನುಭವಿಸುವ ಕೈದಿಗಳು ಇದ್ದಾರೆ ಅವರನ್ನು ಬಿಡುಗಡೆ ಮಾಡುತ್ತೀರಾ ಎನ್ನುವ ಪ್ರಶ್ನೆಯನ್ನು ಹೋದ ಸಾರಿ ನಾನು ಕೇಳಿದ್ದೇನೆ. ಹೋದ ವರ್ಷ ಜುಲೈ 27 ರಂದು ಒಂದು ನೋಟಿಫಿಕೇಷನ್ ಬಂತು, ಏನೆಂದರೆ ಜೀವಾವಧಿ ಶಿಕ್ಷೆಯನ್ನು ಅನುಭವಿಸುವವರು ಇನ್ ಕ್ಲೂಡಿಂಗ್ ರೆಮಿಷನ್, ಇಂಥವರನ್ನೂ ಬಿಡುಗಡೆ ಮಾಡುತ್ತೇವೆ ಎಂದು ಪತ್ರಿಕೆಯಲ್ಲಿಯೂ ಬಂತು, ಅದು ಈ ರೀತಿ ಇದೆ :

"...including remission as a special case marking the silver jubilee of India's independence. This decision was taken by the Government of India...also prisoners suffering from cancer, tuberculosis and leprosy and also blind if they are so certified by medical practitioners..."

ಈ ರೀತಿ ಅವರನ್ನು ಬಿಡುಗಡೆ ಮಾಡಿ ತಾವು ನಡೆದುಕೊಂಡಿದ್ದರೆ ನನಗೆ ಸಂತೋಷವಾಗುತ್ತಿತ್ತು. ಆದರೆ ತಾವು ಹೇಳಿದ್ದು ಕಾರ್ಯರೂಪಕ್ಕೆ ಬರಲಿಲ್ಲ. ಇವತ್ತಿನ ದಿವಸ ಯಾರು ಲೈಫ್ ಪ್ರಿಸನರ್ಸ್ ಇದ್ದಾರೆ ಅವರನ್ನು ತಾವು ಬಿಟ್ಟಿಲ್ಲ. ಇದರ ಬಗ್ಗೆ ಹೋದ ಸಾರಿ ನನ್ನ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ 498 ಜನರನ್ನು ರಿಲೀಸ್ ಮಾಡಿದ್ದೇವೆ ಎಂದು ಹೇಳಿದ್ದೀರಿ. 498 ಜನ ಯಾರು? ಸರ್ವೇಸಾಧಾರಣವಾಗಿ ಶಿಕ್ಷೆ ಅನುಭವಿಸುವವರು, ಆದರೆ ಅನೇಕ ಜನ ಅಲ್ಲಿ ಜೀವಾವಧಿಶಿಕ್ಷೆ ಯನ್ನು ಅನುಭವಿಸುವವರೂ ಇದ್ದಾರೆ, 10 ವರ್ಷಕ್ಕಿಂತ ಜಾಸ್ತಿ ಶಿಕ್ಷೆಯನ್ನು ಅನುಭವಿಸಿರು-ವವರೂ ಇದ್ದಾರೆ, ಆಗಸ್ಟ್ 15 ರಂದು 4-5 ಜನಕ್ಕೆ 50 ಪರ್ಸೆಂಟು ರೆಮಿಷನ್ ಕೊಟ್ಟು ಬಿಡುಗಡೆ ಮಾಡಿದ್ದಾರೆ. 10 ವರ್ಷಕ್ಕಿಂತ ಜಾಸ್ತಿ ಶಿಕ್ಷೆಯನ್ನು ಅನುಭವಿಸಿರುವವರು ಬಹಳ ಜನ ನೊಂದಿದ್ದಾರೆ. ಯಾವುದೋ ಮರ್ಡರ್ ಕೇಸ್‌ನಲ್ಲಿ ಸಿಕ್ಕಿಹಾಕಿಕೊಂಡಿರತಕ್ಕ ಜನ ಯಾವುದೋ ಕಾರಣಾಂತರದಿಂದ ಅಪರಾಧಿಗಳಾದಂಥ ಜನ ಅವರು ಹೊರಗಡೆ ಬಂದಮೇಲೆ ಹೊಸ ಸಮಾಜಕ್ಕೆ ಅನುಗುಣವಾಗಿ ನಡೆದುಕೊಳ್ಳುವ ಆಶೆ ಇರುತ್ತದೆ. ಅಕ್ಟೋಬರ್ ತಿಂಗಳಲ್ಲಿ ಮಹಾತ್ಮ ಗಾಂಧಿಯವರ ಜನ್ಮದಿನೋತ್ಸವ ಬರುತ್ತದೆ. ಇಂಥ ಸಮಯದಲ್ಲಿ ಇಂಥವರನ್ನು ಬಿಡುಗಡೆ ಮಾಡಬಹುದು, ಇದರ ಬಗ್ಗೆ ಯಾವುದನ್ನೂ ತಾವು ಕಾರ್ಯರೂಪಕ್ಕೆ ತೆಗೆದುಕೊಂಡು ಬಂದಿಲ್ಲ, ಅದನ್ನು ತರಬೇಕು ಎಂದು ಹೇಳುತ್ತೇನೆ. ನಾನು ಜೈಲಿನ ಬಗ್ಗೆ ಅನೇಕ ಸಾರಿ ಮಾತನಾಡುವಾಗ ರಿಫಾರ್ಮ್ಸ್ ಮಾಡಬೇಕು ಎಂದು ಹೇಳಿದ್ದೇನೆ. ಜೈಲ್ ಬಗ್ಗೆ ತಾವು ಏನೂ ರಿಫಾರ್ಮ್ಸ್ ಮಾಡಿಲ್ಲ. ಎಷ್ಟು ಸುಧಾರಣೆ ಆಗಬೇಕೋ ಅದು ಆಗಿಲ್ಲ. ಮೊದಲು ಅಲ್ಲಿನ ಅಧಿಕಾರಿಗಳ ಸುಧಾರಣೆಯಾಗಬೇಕು. ಇದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಜೈಲ್ ಸೂಪರಿಂಟೆಂಡೆಂಟ್ಸ್ ಯಾರಿದ್ದಾರೆ ಅವರ ಸುಧಾರಣೆಯಾಗಬೇಕು, ಎಲ್ಲರೂ ಕೆಟ್ಟವರು ಇದ್ದಾರೆ ಎಂದು ನಾನು ಹೇಳುವುದಿಲ್ಲ. ಕೆಲವು ಸೂಪರಿಂಟೆಂಡೆಂಟ್ ಅವರು ಅಲ್ಲಿರುವ ಕೈದಿಗಳನ್ನು ಮನುಷ್ಯರು ಎಂದು ಯೋಚನೆ ಮಾಡುವುದಿಲ್ಲ. ಅವರನ್ನು ದನಗಳ ತರಹ ಹೊಡೆಯುವುದು, ಬಡಿಯುವುದು ರಾಡ್ ಹಾಕುವುದು ಹಿಂದೆ ಯಾವ ರೀತಿ ಮಾಡುತ್ತಿದ್ದರೋ ಆ ರೀತಿ ಈಗಲೂ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದೆ. ಇದು ಹೋಗಬೇಕು. ಅವರನ್ನು ಮನುಷ್ಯರನ್ನಾಗಿ ಮಾಡಿ, ಸರಿಯಾದ ರೀತಿ ಅವರ ಬಗ್ಗೆ ನಡೆದುಕೊಳ್ಳಬೇಕು ಎಂದು ನನ್ನ ಅಭಿಪ್ರಾಯ. ಮೂರನೆಯದು, ಜೈಲ್ ಸೂಪರಿಂಟೆಂಡೆಂಟ್ ಅವರಿಗೆ ಕೆಲವು ಕಡೆ, ನನಗೆ ತಿಳಿದ ಹಾಗೆ ಜೈಲಿನ ಎಲ್ಲಾ ಸಾಮಾನುಗಳೂ ತರಕಾರಿ ಮುಂತಾದುವುಗಳು ಜೈಲಿನಿಂದ ಹೋಗುತ್ತವೆ. ಅವರು ಒಂದು ನಯಾಪೈಸಾ ಕೊಟ್ಟು ಮಾರ್ಕೆಟ್ಟಿನಲ್ಲಿ ತರಕಾರಿಯನ್ನು

ಕೊಂಡುಕೊಳ್ಳಬೇಕಾಗಿಲ್ಲ. ಇದನ್ನೆಲ್ಲಾ ತಾವು ಯೋಚನೆ ಮಾಡಿ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯವನ್ನು ಈ ಜೈಲಿನ ಬಗ್ಗೆ ಹೇಳಬೇಕು ಎಂದರೆ ಓಪನ್ ಏರ್ ಜೈಲನ್ನು ಮಾಡಿದ್ದಾರೆ, ಇದನ್ನು ಬಹಳ ವಿಶಾಲವಾಗಿ, ಮತ್ತು ಹೆಚ್ಚಿನ ರೀತಿಯಲ್ಲಿ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಪೊಲೀಸ್ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಾಟಾಳ್ ನಾಗರಾಜ್ ಅವರು ಇದರ ಬಗ್ಗೆ ಬಹಳ ವ್ಯಾಖ್ಯಾನವಾಗಿ ಮಾತನಾಡಿದ್ದಾರೆ. ಪ್ರತಿಯೊಂದು ಸಾರಿಯೂ, ಈ ಇಲಾಖೆಯಲ್ಲಿ ಪೋಲೀಸರ ವರ್ತನೆ ಸರಿಯಿಲ್ಲ, ಇದನ್ನು ಬದಲಾವಣೆ ಮಾಡಿಕೊಳ್ಳಬೇಕು ಬದಲಾವಣೆ ಮಾಡಿಕೊಳ್ಳದಿದ್ದರೆ ತೊಂದರೆ ಬರುತ್ತದೆ ಎಂದೂ ಹೇಳಿದ್ದೇವೆ. ತಾವು ಅಧಿಕಾರಕ್ಕೆ ಬಂದು ಒಂದು ವರ್ಷ ಎರಡು ತಿಂಗಳಾಯಿತು. ನನಗಂತೂ ಯಾವರೀತಿಯ ಬದಲಾವಣೆಯೂ ಕಾಣುವುದಿಲ್ಲ. ಅಧಿಕಾರಿಗಳು ಬದಲಾವಣೆಯಾಗಿರಬಹುದು. ಆದರೆ ಮೂಲಭೂತವಾಗಿ, ಜನಗಳ ಜೊತೆಗೆ ಸಮರ್ಪಕವಾಗಿ ನಡೆದುಕೊಳ್ಳುವುದು ಮತ್ತು ಸಾಮಾನ್ಯ ಜನಕ್ಕೆ ನ್ಯಾಯ ದೊರಕಿಸುವುದರಲ್ಲಿ ವೈಫಲ್ಯತೆಯನ್ನು ಪೂರ್ಣವಾಗಿ ತೋರಿಸಿದೆ ಎಂದು ನನ್ನ ಅಭಿಪ್ರಾಯ. ಇದಕ್ಕೆ ಎರಡು ಮೂರು ನಿದರ್ಶನಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಪೊಲೀಸ್ ಇಲಾಖೆಯವರು ಕೇಸ್‌ಗಳನ್ನು ಹಾಕುವುದರಲ್ಲಿ ಇದ್ದಾರೆಯೇ ವಿನಹ ಎಷ್ಟು ಕೇಸ್‌ಗಳಲ್ಲಿ ನ್ಯಾಯ ದೊರಕಿದೆ ಎಂದು ಹೇಳುವ ಪರಿಸ್ಥಿತಿಯಲ್ಲಿ ಇಲ್ಲ. ಟ್ರಾಫಿಕ್ ಕೇಸುಗಳು ಎಷ್ಟು ? ರಾಬರಿ ಕೇಸುಗಳು ಎಷ್ಟು, ಕ್ರಿಮಿನಲ್ ಕೇಸುಗಳು ಎಷ್ಟು ಹಾಕಿದ್ದಾರೆ ಎನ್ನುವುದರ ಮೇಲೆ ಹೋಗುತ್ತಾ ಇದ್ದಾರೆ. ಪೊಲೀಸ್ ಇಲಾಖೆಯ ಬಗ್ಗೆ ಒಳ್ಳೆಯ ಪರ್ಸ್‌ಪೆಕ್ಟಿವ್ ಇಟ್ಟುಕೊಳ್ಳಬೇಕು ಇದು ವಿವಾದಾಸ್ಪದ ವಿಷಯ. ನಮ್ಮ ದೇಶದಲ್ಲಿ ಮಾತ್ರವಲ್ಲ ಎಲ್ಲಾ ಕಡೆ ಈ ವಿಚಾರ ಚರ್ಚೆಗೆ ಬಂದಿದೆ. ಕೇಸುಗಳನ್ನು ಜಾಸ್ತಿ ಹಾಕುವುದರಿಂದ ಪೊಲೀಸಿನವರು ಎಫಿಷಿಯೆಂಟ್ ಎಂದು ಹೇಳುವುದಕ್ಕಾಗುವುದಿಲ್ಲ. ಪೊಲೀಸಿನವರು ಎಷ್ಟು ಕೇಸುಗಳಲ್ಲಿ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ ಎನ್ನುವುದರ ಮೇಲೆ ಅವರು ಎಫಿಷಿಯೆಂಟ್ ಎಂದು ತಿಳಿದುಕೊಳ್ಳಬೇಕು. ಬರೀ ಕೇಸುಗಳನ್ನು ಹಾಕುವುದರಿಂದ ಅವರು ಎಫಿಷಿಯೆಂಟ್ ಎಂದು ತಿಳಿದುಕೊಳ್ಳಬಾರದು ಎಷ್ಟು ಕೇಸುಗಳಲ್ಲಿ ಸಾಮಾನ್ಯ ಜನರಿಗೆ ನ್ಯಾಯ ದೊರಕಿದೆ. ಎನ್ನುವುದನ್ನು ನೋಡಬೇಕೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ಅಂತರಾಷ್ಟ್ರೀಯ ಪೊಲೀಸ್ ಬಗ್ಗೆ ಏನು ಒಂದು ಸ್ಟಡಿ ಮಾಡಿದ್ದಾರೆ, ಆ ಸ್ಟಡಿ ಮಾಡಿರುವ ಒಂದು ಅಂಕಿಅಂಶಗಳ ಆಧಾರದ ಮೇಲೂ ಸಹ ಅವರು ಹೇಳುತ್ತಾರೆ ಪೊಲೀಸ್ ಇಲಾಖೆಯಲ್ಲಿ ಬರೀ ಸುಮ್ಮನೇ ಕೇಸುಗಳನ್ನು ಹಾಕಿಕೊಂಡರೆ ಪ್ರಯೋಜನವಿಲ್ಲ. ಅದರ ಬದಲು ಎಷ್ಟು ದೂರ ನ್ಯಾಯ ದೊರಕಿಸಿ ಕೊಟ್ಟಿದ್ದಾರೆ ಎಂದು ನೋಡಬೇಕು. ಬಿಹೇವಿಯರ್ ಆಫ್ ಮ್ಯಾನ್ ಬಗ್ಗೆ ಬದಲಾವಣೆ ಆಗಿಲ್ಲ ಅವರ ವರ್ತನೆ ಹಲವಾರು ರೀತಿಯಲ್ಲಿ ಹೊಂದಿಕೊಂಡಿದೆ. ಎನ್ನುವುದನ್ನು ನಿದರ್ಶನಗಳನ್ನು ಬೇಕಾದರೆ ಕೊಡಬಲ್ಲೆ. ಒಬ್ಬ ಮಂತ್ರಿಗಳು ಪೊಲೀಸಿನವರ ಕೆಲಸದೊಳಗೆ ಮಧ್ಯ ಪ್ರವೇಶ ಮಾಡಿ ಹಸ್ತಕ್ಷೇಪ ಮಾಡಿದಂಥ ನಿದರ್ಶನಗಳು ಬೇಕಾದಷ್ಟು ಕಂಡುಬಂದಿದೆ. ಮೂರು ನಿದರ್ಶನಗಳನ್ನು ಕೊಡುತ್ತೇನೆ.

ಇಂಥವರ ಮೇಲೆ ಕೇಸ್ ಹಾಕಿ ಎಂದು ರಾಜಕೀಯದ ದುರುದ್ದೇಶದಿಂದ ಕೇಸ್ ಹಾಕಿರುವ ಅನೇಕ ನಿದರ್ಶನಗಳು ನಮ್ಮ ಗಮನಕ್ಕೆ ಬಂದಿವೆ. ಪೊಲೀಸ್ ರೀತಿ ನಡೆದುಕೊಳ್ಳಬೇಕೆಂದು ಬಂದಿದೆ ಮೈಸೂರಿನಲ್ಲಿ ಮೇ ದಿನಾಚರಣೆಯ ಸಂಬಂಧದಲ್ಲಿ ಕಾರ್ಮಿಕರು ಮೆರವಣಿಗೆ ಹೋಗಕೂಡದು ಎಂದು ಮಂತ್ರಿಗಳು ಮೈಸೂರಿನ ಡಿ. ಎಸ್. ಪಿ. ಗೆ ಫೋನ್ ಮಾಡಿದರು. ಕಾರ್ಮಿಕರು

ಬೀದಿಯಲ್ಲಿ ಹೋದರೆ ಏನು ಆಗುತ್ತದೆಯೋ ಗೊತ್ತಿಲ್ಲ. ಏನು ಅನಾಹುತವಾಗುತ್ತಾ ಇರಲ್ಲಿಲ್ಲ. ಅಲ್ಲಿ ಚಪ್ಪರ ಹಾಕಿ ಮಜ್ಜಿಗೆ ನೀರು ಕೊಡಬೇಕೆಂದು ಇದ್ದರು. ಆದರೆ ಕಾರ್ಮಿಕರು. ಮೆರವಣಿಗೆಗೆ ಹೋಗಲೇ ಕೂಡದು ಎಂದು ಹೇಳಿದ್ದಾರೆ. ಈ ರೀತಿ ಮಂತ್ರಿಗಳು ರಾಜಕೀಯ ಹಸ್ತಕ್ಷೇಪವನ್ನು ನಡೆಸುತ್ತಿದ್ದಾರೆ. ಕೆಂಪೇಗೌಡ ರಸ್ತೆಯಲ್ಲಿ ಹೋಗುವುದಕ್ಕೆ ಬಿಡುವುದಿಲ್ಲ ನಿಮಗೆ ಮುಖ್ಯ ಟ್ರಾಫಿಕ್ ಫುಡ್‌ಗ್ರೇನ್ಸ್ ಡೀಲರ್ಸ್ ಅಲ್ಲ. ಆಹಾರಧಾನ್ಯ ವ್ಯಾಪಾರ ಮಾಡುವ ಬ್ಲಾಕ್ ಮಾರ್ಕೆಟೀಯರ್ಸ್ ಅಲ್ಲ. ಗುಂಡಾ ಆಕ್ಟ್ ಬೊಂಬಾಯಿ ನಗರದೊಳಗೆ ಜಾರಿ ಮಾಡಿದ್ದಾರೆ. ಗುಂಡಾ ಆಕ್ಟ್ ಜನಗಳ ವಿರುದ್ಧವಾಗಿ ಇರಕೂಡದು. ರಾಜಕೀಯ ದುರುದ್ದೇಶದಿಂದ ಕಾನೂನು ಜಾರಿ ಆಗಕೂಡದು, ರಾಜಕೀಯ ದುರುದ್ದೇಶದಿಂದ ಪಂಪಾಪತಿ ಮತ್ತು ಇತರ ಕಾರ್ಮಿಕ ಮುಖಂಡರ ಮೇಲೆ ಕಾನೂನು ಉಪಯೋಗ ಮಾಡಿದ್ದಾರೆ. ಈ ರೀತಿ ಮಾಡಕೂಡದು ಎಂದು ಹೇಳುತ್ತೇನೆ. ಒಂದು ಮಾತನ್ನು ಹೇಳುತ್ತೇನೆ. ಶ್ರೀಮಾನ್ ಅಜೀಜ್ ಸೇಠ್‌ರವರು ಮೈಸೂರಿನ ಪೊಲೀಸ್ ಅಧಿಕಾರಿಗಳಿಗೆ ಫೋನ್ ಮಾಡಿದರು.

ಶ್ರೀ. ಡಿ. ದೇವರಾಜ್ ಅರಸ್ :—ಅವರು ಹೇಳಿದರೆ ?

ಶ್ರೀ ಎಂ. ಎಸ್. ಕೃಷ್ಣನ್ :—ಇವತ್ತಿನ ದಿವಸ ಪೊಲೀಸ್ ಅಧಿಕಾರಿಗಳಿಗೆ ಕೇಳಿದರೆ ಅವರು ಒಪ್ಪಿಕೊಳ್ಳುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ.

Sri D. Devaraj Urs :—Then how can you say?

ಶ್ರೀ ಎಂ. ಎಸ್. ಕೃಷ್ಣನ್ :—ಅಜೀಜ್ ಸೇಠ್ ಹೇಳಿದರು ಎಂದು ನನಗೆ ತಿಳಿದು ಬಂದಿದೆ. ಇಲ್ಲ ಎಂದರೆ ತನಿಖೆ ಮಾಡಿ. I am not talking through my hat. I have come to know of it. It is for you to verify. Similarly in the case of Pampapathy of Davangere Cotton Mill, owner has influenced the Minister; and also in case of H.M.T. another Minister has interfered. Is this the way in which your Police Department should conduct itself ?

ಸರ್ಕಲ್ ಇನ್ಸ್‌ಪೆಕ್ಟರಿಂದ ಮೇಲಿನವರೆಗೆ ಯೂನಿಫಾರಂ ಕೊಡುತ್ತಾ ಇಲ್ಲ. ಕೆಲವು ಕಡೆ ಕೊಡುತ್ತಾರೆ. ಆದುದರಿಂದ ಮೇಲಿನವರೆಗೂ ಕೂಡ ಕೊಡಬೇಕು. ಪೊಲೀಸಿನವರ ಮಧ್ಯೆ ಕೋಮುವಾರು ಭಾವನೆ, ಜಾತಿ ಮನೋಭಾವನೆ, ಪ್ರಾಂತ ಮನೋಭಾವನೆ ಉಂಟಾಗದೆ ಹಾಗೆ ಪರಿಣಾಮಕಾರಿಯಾದ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಜನರಲ್ ಅಡ್ಮಿನಿಸ್‌ಟ್ರೇಷನ್ ಬಗ್ಗೆ ಮಾತನಾಡಬೇಕೆಂದು ಇದ್ದೆ, ಆದರೆ ಮಾತನಾಡುವುದಕ್ಕೆ ಅವಕಾಶವಿಲ್ಲ ಮಾನ್ಯ ಡೆಪ್ಯುಟಿ ಸ್ಪೀಕರ್‌ರವರು ಬೆಲ್ ಹೊಡೆಯುತ್ತಿದ್ದಾರೆ. ಇಷ್ಟು ಹೇಳಿ ನನ್ನ ಮಾತು ಮುಗಿಸಿ ಕೂತುಕೊಳ್ಳುತ್ತೇನೆ.

ಶ್ರೀ ಟಿ.ಆರ್. ಶ್ಯಾಮಣ್ಣ (ಕೋಟೆ):— ಸನ್ಮಾನ್ಯ ಸಭಾಧ್ಯಕ್ಷರೇ ನಾನು ಹೇಳಬೇಕಾದ್ದು ಹೆಚ್ಚಿಗೆ ಏನೂ ಇಲ್ಲ. ಒಂದು ಕಟ್‌ಮೋಷನ್ ರೂಪದಲ್ಲಿ ಕೊಟ್ಟಿದ್ದೇನೆ. ಮೊದಲನೆಯದಾಗಿ ಕಳ್ಳಭಟ್ಟಿ ಸಾರಾಯಿ ವ್ಯಾಪಾರ ಮತ್ತು ತಯಾರಿಕೆ ವಿಪರೀತ ಜಾಸ್ತಿಯಾಗಿ ಜನಗಳ ಆರೋಗ್ಯ ಕೆಡುವುದರ ಜೊತೆಗೆ ಸರ್ಕಾರದ ವರಮಾನ ಬಹಳ ಕಡಿಮೆಯಾಗುತ್ತಾ ಇದೆ. ಅದರ ಬಗ್ಗೆ ಸೂಕ್ತ ಕಾರ್ಯ ಕ್ರಮ ತೆಗೆದುಕೊಳ್ಳದೇ ಹೋದರೆ ಜನಗಳ ಆರೋಗ್ಯ ಕೆಡುವುದರ ಜೊತೆಗೆ ಸರ್ಕಾರದ ವರಮಾನ ಕೂಡ ಹೋಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಟಾಡಿ ಆಕ್ಷನ್‌ನಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಒಂದು ಮನಾಪಲಿ ಮಾಡಿಕೊಂಡು ಅನೇಕ ಸಬ್‌ಲೀಜಸ್ ಕೊಟ್ಟು ವಿಪರೀತ ಲಾಭ ಮಾಡುತ್ತಿದ್ದಾರೆ ತಾಲ್ಲೂಕ್ ಮಟ್ಟದಲ್ಲಿ ಹರಾಜು ಮಾಡಬೇಕು. ಶಾಪ್

ಮಟ್ಟದಲ್ಲಿ ಹರಾಜು ಮಾಡಬೇಕೆಂದು ಸಲಹೆ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಮತ್ತು ಟಾಡಿ ಅಂಗಡಿಗಳನ್ನು ಅರಾಕ್‌ಶಾಪ್‌ಗಳನ್ನು ಜನಗಳು ವಾಸಮಾಡತಕ್ಕ ರೆಸಿಡೆನ್‌ಷಿಯಲ್ ಏರಿಯಾದಲ್ಲಿ ಓಪನ್ ಮಾಡಿರುವುದರಿಂದ ಜನರಿಗೆ ವಿಪರೀತ ಹಾವಳಿ ಆಗುತ್ತಿದೆ. ದಯ ಮಾಡಿ ಟಾಡಿ ಶಾಪ್‌ಗಳನ್ನು ಜನಗಳು ವಾಸ ಮಾಡುವ ಜಾಗದಲ್ಲಿ ಕೊಡಬೇಡಿ ಎಂದು ಒತ್ತಾಯ ಪೂರ್ವಕವಾಗಿ ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ. ಈಗಲೂ ಕೂಡ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಬ್ರಾಂದಿ ಮತ್ತು ವಿಸ್ಕಿ ಶಾಪ್‌ಗಳು ಮೂಲೆ ಮೂಲೆಯಲ್ಲೂ ಓಪನ್ ಆಗುತ್ತಿದೆ. ಹುಡುಗರು ಅನೇಕರು ಕುಡಿಯುವುದಕ್ಕೆ ಅಭ್ಯಾಸ ಮಾಡಿದ್ದಾರೆ, ಇದನ್ನು ದಯವಿಟ್ಟು ಜನನಿಬಿಡ ಪ್ರದೇಶದಿಂದ ತೆಗೆದು ದೂರ ಹಾಕಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

General Administration ನೋಡುವಾಗ ತಾವು Report ನ preamble ನಲ್ಲಿ ಹೀಗೆ ಹೇಳಿದ್ದೀರಿ. The General Administration Department has under its control, a large number of administrative activities which include among other things, matters relating to services, their recruitment, morale and discipline, administrative improvements and integration of service. ಇಲಾಖೆಯಲ್ಲಿ ಲಂಚ ರುಷುವತ್ತು ತುಂಬಿರುವಾಗ, ಕೆಲಸ ಮಾಡುವವರು ಶ್ರದ್ಧೆಯಿಂದ ಕೆಲಸ ಮಾಡದೇ ಇರುವಾಗ, ಮೊರೇಲ್ ಎಲ್ಲಿ ಇರುತ್ತದೆ ? ಅಧಿಕಾರಿಗಳು ಹೈಕೋರ್ಟಿನಲ್ಲಿ ಹಾಕಿರುವ ಕೇಸ್ ಏನಾಯಿತು ಎಂದು ನೋಡುತ್ತಾ ಇರುವಾಗ, ತಮ್ಮ ಕಾರ್ಯದ ಬಗ್ಗೆ ಗಮನ ಕೊಡುವುದಿಲ್ಲ. ಆದುದರಿಂದ ಮೊರೇಲ್ ಆಗಲಿ, ಡಿಸಿಪ್ಲೈನ್ ಆಗಲಿ, ಅಡ್ಮಿನಿಸ್ಟ್ರೇಷನ್ನಿನಲ್ಲಿ ಇಂಪ್ರೂವ್‌ಮೆಂಟಾಗಲಿ ಇಲ್ಲದೇ ಇರುವುದು ಬಹಳ ಶೋಚನೀಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಸರ್ಕಾರದವರು ಎಸ್ಟಾಬ್ಲಿಷ್‌ಮೆಂಟ್‌ಗೆ ಬೇಕಾದಷ್ಟು ದುಡ್ಡು ಖರ್ಚು ಮಾಡುತ್ತಿದ್ದಾರೆ. ಎಫಿಶಿಯನ್ಸಿ ಸಾಕಾದಷ್ಟು ಮಟ್ಟಿಗೆ ಹೆಚ್ಚು ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಪೂರ್ವಕವಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ವಿಜಿಲೆನ್ಸ್ ಕಮಿಷನ್‌ಗೆ ದುಡ್ಡು ಖರ್ಚು ಮಾಡುತ್ತಿದ್ದಾರೆಯೇ ಹೊರತು ಅದರಿಂದ ಏನೂ ಪ್ರಯೋಜನವಾಗುತ್ತಿಲ್ಲ. ಬೆಂಗಳೂರು ನಗರ ಕಾರ್ಪೊರೇಷನ್ನಿನಲ್ಲಿ ವಿಜಿಲೆನ್ಸ್ ಕಮಿಷನ್ ಏರ್ಪಾಟುಮಾಡಿ ಒಂದೂವರೆ ವರ್ಷವಾಯಿತು. ಅವರು ಇದುವರೆಗೆ ಒಂದು ರಿಪೋರ್ಟ್ ಕೊಟ್ಟಿಲ್ಲ. ಸಸ್ಪೆನ್‌ಷನ್‌ನಲ್ಲಿ ಇಟ್ಟಿರುವವರು ಪ್ರಭಾವಶಾಲಿಗಳ ಮೂಲಕ ಅಥವಾ ದುಡ್ಡು ಕೊಟ್ಟು ತಮ್ಮ ಕೆಲಸಗಳನ್ನು ಮಾಡಿಕೊಂಡಿದ್ದಾರೆ. ಆದರೆ ಸಸ್ಪೆನ್‌ಷನ್‌ನಲ್ಲಿಟ್ಟಿರುವ ಬಡಪಾಯಿಗಳನ್ನು ಕೇಳುವವರೇ ಇಲ್ಲ. ಆದುದರಿಂದ ಕಾರ್ಪೊರೇಷನ್ ವಿಜಿಲೆನ್ಸ್ ಕಮಿಷನ್ ರಿಪೋರ್ಟ್ ಬೇಗ ತರಿಸಿ ಅವರ ಬಗ್ಗೆ ತೀರ್ಮಾನ ಮಾಡುವುದಕ್ಕೆ ಏರ್ಪಾಟು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಪೊಲೀಸ್ ಡಿಪಾರ್ಟ್‌ಮೆಂಟಿನ ರಿಪೋರ್ಟ್‌ನ್ನು ನೋಡಿದ ಪಕ್ಷದಲ್ಲಿ 16 ನೇ ಪುಟದಲ್ಲಿ ಹೀಗೆ ಹೇಳಿದ್ದಾರೆ. 1971ರಲ್ಲಿ 32,087 ಕ್ರೈಮ್ಸ್ ಇತ್ತು. ಈ ವರ್ಷ ಹೊಸ ಆಡಳಿತ ಬಂದ ಮೇಲೆ 37,295 ಆಗಿದೆ. ಕ್ರೈಮ್ಸ್ ವಿಪರೀತ ಜಾಸ್ತಿಯಾಗುತ್ತಿರುವ ಬಗ್ಗೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳದೆ ಇರುವುದು ವಿಷಾದಕರ. ಪೊಲೀಸರ ಸಂಖ್ಯೆಗಿಂತ ಆಫೀಸರ ಸಂಖ್ಯೆಯೇ ಬೆಳೆಯುತ್ತಾ ಇದೆ. The present strength of the Central Crime Branch is 2 Police Inspectors, 7 Sub-Inspectors, 12 Head Constables and 10 Police

Constables. ಈಗ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿ ಎಸ್ಟಾಬ್ಲಿಷ್‌ಮೆಂಟ್ ಕೆಲಸ ಸಮರ್ಪಕವಾಗಿ ನಡೆಯುತ್ತಾ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಪೋಲೀಸಿನವರಿಗೆ ಮಾಮೂಲು ಇಷ್ಟು ಕೊಡಬೇಕು ಅಂತ ಇದೆ. ಕ್ಲಬ್‌ನವರು ಇಷ್ಟು ಮಾಮೂಲು ಕೊಡಬೇಕು, ಕಂಪ್ಲೇಂಟ್ ಕೊಟ್ಟವರು ಇಷ್ಟು ಕೊಡಬೇಕು, ಯಾರ ಮೇಲೆ ಕಂಪ್ಲೇಂಟ್ ಕೊಟ್ಟಿದೆಯೋ ಆತ ಇಷ್ಟು ಕೊಡಬೇಕು ಅಂತ ಇದೆ. ಅನೇಕ ಮರ್ಡರ್ ಕೆಲಸಗಳಲ್ಲಿ ಕೂಡ ಲಂಚದ ಪ್ರಭಾವದಿಂದ ಕೆಲಸ ನಡೆಯದೆ ಇರುವ ಅನೇಕ ಸಂದರ್ಭಗಳಿವೆ. ಬಸವನಗುಡಿಯಲ್ಲಿ ಎರಡು ಮೂರು ಕೊಲೆಗಳು ಆದುವು. ಸಾಕಾದಷ್ಟು ಸಾಕ್ಷಿಗಳು ಇದ್ದರೂ ಕೂಡ, ಸರಿಯಾದ ಕ್ರಮ ತೆಗೆದುಕೊಳ್ಳದೆ ಅಧಕ್ಷತೆಗೆ ಅವಕಾಶವಾಗಿದೆ. ಕೆಲವು ಪೋಲೀಸ್ ಸ್ಟೇಷನ್ನಿನಲ್ಲಿ ಸಬ್ ಇನ್‌ಸ್ಪೆಕ್ಟರ್ ಪಾಳೆಯಗಾರರಾಗಿದ್ದಾರೆ. ಪೋಲೀಸರು ಜನಗಳ ಸ್ನೇಹಿತರಾಗಿ, ಜನರ ರಕ್ಷಕರಾಗಿ ಕೆಲಸ ಮಾಡದೇ ಹೋದ ಪಕ್ಷದಲ್ಲಿ ಅವರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಪೋಲೀಸ್ ಡಿಪಾರ್ಟ್‌ಮೆಂಟ್‌ಗೆ ವರ್ಷೇ ವರ್ಷೇ ಹೆಚ್ಚಿನ ಡಿಮ್ಯಾಂಡ್ ಕೊಡುತ್ತೇವೆ. ಹೀಗಿರುವಾಗ ಪೋಲೀಸರಿಂದ ರಕ್ಷಣೆಯಾಗದೆ ದಬ್ಬಾಳಿಕೆಯಾಗುತ್ತಿರುವುದರಿಂದ ಜನಗಳಿಗೆ ತೊಂದರೆಯಾಗುತ್ತಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅಡ್ವರ್‌ಟೈಸ್‌ಮೆಂಟ್ ಡಿಪಾರ್ಟ್‌ಮೆಂಟಿನ ಬಗ್ಗೆ ಒಂದು ಮಾತು. ಯಾರು ಯಾರಿಗೆ ಅನುಕೂಲ, ಮಾಡಿಕೊಡಬೇಕೋ ಯಾರು ಯಾರಿಗೆ ಪ್ಯಾಟ್ರನೇಜ್ ಕೊಡಬೇಕೋ ಅದರಂತೆ ಅಡ್ವರ್‌ಟೈಸ್‌ಮೆಂಟ್ ಖರ್ಜಾಗುತ್ತಿದೆಯೇ ಹೊರತು, ಕಾರ್ಖಾನೆಗಳಲ್ಲಿ ತಯಾರಾಗುತ್ತಿರುವ ಸಾಮಾನುಗಳ ಅಡ್ವರ್‌ಟೈಸ್‌ಮೆಂಟ್ ಆಗುತ್ತಾ ಇಲ್ಲ. ಇದನ್ನು ಸರಿಪಡಿಸಬೇಕು ಎಂದು ಹೇಳಿ, ಇಷ್ಟು ಮಾತುಗಳನ್ನು ಆಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) :—ಸ್ವಾಮಿ ಅಧ್ಯಕ್ಷರೇ, ಐದು ನಿಮಿಷಗಳ ಕಾಲ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ತಮ್ಮನ್ನು ಹೃತ್ಪೂರ್ವಕವಾಗಿ ನಮಸ್ಕರಿಸುತ್ತೇನೆ. ನಮ್ಮದು ಅಖಿಲ ಭಾರತ ರಾಜಕೀಯ ಪಕ್ಷವಾಗಿರುವುದರಿಂದ ಸೈದ್ಧಾಂತಿಕವಾಗಿ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. 5 ನಿಮಿಷಗಳಲ್ಲಿ ಏನು ಹೇಳುವುದು ? ನಾವು ತತ್ವ ಸಿದ್ಧಾಂತ ಇರುವ ಜನ. ಆದುದರಿಂದ 5 ನಿಮಿಷ ಕೊಟ್ಟಿದ್ದಕ್ಕಾಗಿ ಕೃತಜ್ಞತೆಯನ್ನರ್ಪಿಸಿ ವಿನಯಪೂರ್ವಕವಾಗಿ ಕುಳಿತುಕೊಳ್ಳುತ್ತೇನೆ.

Mr. DEPUTY SPEAKER: It is not a matter of expressing any gratitude for me. When the names were sent from the Opposition, there was no name from the Hon. Member's party. But when a request came from one of you, we thought of adjusting and that is how his name has been incorporated. I thought it is my duty to help all the members so that no one would feel that he is ignored. If the Hon. Member is willing to speak, he may kindly commence his speech—I want the Hon. Members to speak.

ಶ್ರೀ ಕೋಣಂದೂರು ಲಿಂಗಪ್ಪ :—ತಮಗೆ ನಾನು ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಶಿಸ್ತು, ಸಂಪ್ರದಾಯಗಳಿಗೆ ನಾನು ತಲೆಬಾಗಿ ಎರಡು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ಮೊದಲನೆಯದಾಗಿ, ಕಳೆದ 25 ವರ್ಷಗಳಿಂದ ಜನರಲ್

ಅಡ್ಮಿನಿಸ್ಟ್ರೇಷನ್‌ನನ್ನು ಸರ್ಕಾರ ನಡೆಸಿಕೊಂಡು ಬಂದಿದೆ. ಅದು ಬ್ರಿಟಿಷರ ಕಾಲದಲ್ಲಿ ಯಾವ ನಡೆಯಲ್ಲಿ ಬಂದಿದೆಯೋ ಅದನ್ನು ಬದಲಾಯಿಸಿಲ್ಲ. ಇದು ಪ್ರಜಾಪ್ರಭುತ್ವದ ಅಪಭ್ರಂಶ, ನಮ್ಮ ರಾಷ್ಟ್ರದಲ್ಲಿ ನಡೆಯುತ್ತಿರುವುದು. ಪ್ರಜಾಪ್ರಭುತ್ವ ಮತ್ತು ಅಧಿಕಾರಶಾಹಿ, ಇವೆರಡೂ ಒಟ್ಟೊಟ್ಟಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಆದರೂ ನಮ್ಮ ರಾಷ್ಟ್ರದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಡೆಮಾಕ್ರಸಿ ಮತ್ತು ಬ್ಯೂರೊಕ್ರಸಿ ಒಟ್ಟಿಗೆ ನಡೆಯುತ್ತದೆ. ಇವತ್ತು ಪ್ರಜೆಗಳಿಂದ ಆಯ್ಕೆಯಾದ ಪ್ರತಿನಿಧಿಗಳಿಗೆ ಯಾವರೀತಿಯ ಅಧಿಕಾರ ಮತ್ತು ವಿಶೇಷವಾದಂಥ ಘನತೆ ಗೌರವಗಳಿಲ್ಲ. ರಾಜ್ಯ ಮತ್ತು ರಾಷ್ಟ್ರದಲ್ಲಿ ಕೇವಲ ಅಧಿಕಾರಿಗಳಿಗೆ ಅದರಲ್ಲೂ ಐ. ಎ. ಎಸ್. ಅಧಿಕಾರಿಗಳಿಗೆ ಇರತಕ್ಕ ಗೌರವ, ಲಕ್ಷ ಜನರ ಪ್ರತಿನಿಧಿಯಾದ ಎಂ. ಎಲ್. ಎ. ಗೆ, ಅಥವಾ 10 ಲಕ್ಷ ಜನರ ಪ್ರತಿನಿಧಿಯಾದ ಎಂ. ಪಿ. ಗೆ ಅಥವಾ ಮಂತ್ರಿಗೆ ಇಲ್ಲ. ಇವತ್ತಿಗೂ ಕೂಡ ವಿಕ್ಟೋರಿಯಾ ರಾಣಿಯ ಕಾಲದಿಂದ ಇಂದಿನವರೆಗೆ ಏನು ಸಂಪ್ರದಾಯ ನಡೆದುಕೊಂಡು ಬಂದಿದೆಯೋ ಅದೇ ಪದ್ಧತಿ ಈಗಲೂ ನಡೆದುಕೊಂಡು ಹೋಗುತ್ತಾ ಇದೆ. ಇದು ಪ್ರಜಾ ಪ್ರಭುತ್ವದ ಅಪಭ್ರಂಶ. ಆದುದರಿಂದ ಕಾಂಗ್ರೆಸ್ ಸರ್ಕಾರಕ್ಕೆ ಮೊದಲು ಧಿಕ್ಕಾರ ಹಾಕಿ ನಾನು ಎರಡು ಮಾತನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ಇವರಿಗೆ ಪ್ರಜಾಪ್ರಭುತ್ವದಲ್ಲಿ ಪ್ರಮಾಣಿಕ ತನ ಮತ್ತು ಕಳಕಳಿ ಇದ್ದದ್ದೇ ಆದರೆ ಅಧಿಕಾರ ವಿಕೇಂದ್ರೀಕರಣ ಮಾಡಬೇಕು. ಸರ್ಕಾರದವರು ದೊಡ್ಡ ದೊಡ್ಡ ಹಂದ್ದೆಗಳನ್ನು ಸೃಷ್ಟಿಮಾಡಿ ಅಧಿಕಾರಿಗಳನ್ನು ನೇಮಿಸುವುದರಲ್ಲಿ ನಿಷ್ಣಾತ ರಾಗಿದ್ದಾರೆಯೇ ಹೊರತು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಯಾವ ಹೆಜ್ಜೆಯನ್ನೂ ಇಟ್ಟಿಲ್ಲ. ಈ ಬಗ್ಗೆ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ನಮ್ಮ ರಾಜ್ಯಕ್ಕೆ ಬೇಕಾದಂತ ಅಧಿಕಾರಿ ಗಳನ್ನು ನೇಮಕ ಮಾಡಿಕೊಳ್ಳತಕ್ಕ ಅಧಿಕಾರ ನಮಗೆ ಇರಬೇಕು. ಹಾಗೆಯೇ ಗೌರ್ನರ್ ಬಗ್ಗೆ ಹಿಂದೆ ಹೇಳಿದ್ದೇನೆ. ಪ್ರಜಾಪ್ರಭುತ್ವದಲ್ಲಿ ನಮಗೆ ಗೌರ್ನರ್ ಏತಕ್ಕೆ ಬೇಕು ? ಗೌರ್ನರ್ ಹುದ್ದೆ, ಜಿಲ್ಲಾಧಿಕಾರಿ, ತಹಶೀಲ್ದಾರ್ ಇವರುಗಳನ್ನೆಲ್ಲ ತೆಗೆಯಬೇಕು. ಅದಕ್ಕೆ ಬದಲು ಚುನಾಯಿತ ಪ್ರತಿನಿಧಿಗಳಿಗೆ ತಾಲ್ಲೂಕ್ ಬೋರ್ಡ್, ವಿಧಾನ ಪರಿಷತ್ತು, ವಿಧಾನಸಭೆ, ಮಂತ್ರಿಮಂಡಲಗಳಲ್ಲಿ ಇವರಿಗೆ ಸಂಪೂರ್ಣ ಅಧಿಕಾರವಿರಬೇಕು. ಇತ್ತೀಚೆಗೆ ರೆವಿನ್ಯೂ ಅಧಿಕಾರಿಗಳಿಗೆ ಅಪಾರವಾದ ಅಧಿಕಾರವನ್ನು ಕೊಟ್ಟಿದ್ದೀರಿ. ಆ ಅಧಿಕಾರ ಜನರಿಂದ ಚುನಾಯಿತರಾದ ಪ್ರತಿನಿಧಿಗಳಿಗೆ ಸಿಗಬೇಕು. ಈ ಒಂದು ವ್ಯವಸ್ಥೆಯನ್ನು ತಾವು ಜಾರಿಗೆ ತರುವವರೆಗೆ ಇದು ಪ್ರಜಾಪ್ರಭುತ್ವವಲ್ಲ, ಕೇವಲ ಪ್ರಜಾಪ್ರಭುತ್ವದ ಅಪಭ್ರಂಶ ಎಂದು ಮಾತ್ರ ಕರೆಯಲು ಅಪೇಕ್ಷೆಪಡುತ್ತೇನೆ.

ಇನ್ನು ಕೇವಲ ಎರಡು ವಿಷಯಗಳ ಬಗ್ಗೆ ಹೇಳಲು ಅಪೇಕ್ಷೆಪಡುತ್ತೇನೆ. ನಾನು ಸ್ವಲ್ಪ ಕಾಲದ ಹಿಂದೆ ನವದೆಹಲಿಗೆ ಹೋಗಿದ್ದೆ. ಅಲ್ಲಿ ಮೈಸೂರ್ ಹೌಸ್ ಅಂತ ಇದೆ. ಯಾವನೇ ಆದರೂ ಸ್ವಾಭಿಮಾನವಿರತಕ್ಕವನು ಕನ್ನಡ ನೆಲದ ವಾಸನೆ ಇರತಕ್ಕ ಮನುಷ್ಯ ಅಪಮಾನದಿಂದ ತಲೆತಗ್ಗಿಸಿಕೊಂಡು ಬರಬೇಕು. ಅಕ್ಕಪಕ್ಕದ ಗುಜರಾತಿ ಭವನ, ತಮಿಳುನಾಡು ಭವನ ಮತ್ತು ಕಾಶ್ಮೀರ ಭವನ ನೋಡಿ, ನಮ್ಮ ಮೈಸೂರು ಭವನವನ್ನು ನೋಡಿದರೆ ನಾಚಿಕೆಯಿಂದ ತಲೆ ತಗ್ಗಿಸಿಕೊಂಡು ಬರಬೇಕು. ಮೈಸೂರು ಭವನದಲ್ಲಿ ಒಳಗೆ ಇರತಕ್ಕ 56 ಜನರಲ್ಲಿ 3–4 ಜನ ಕನ್ನಡಿಗರನ್ನು ಬಿಟ್ಟು ಬೇರೆ ಯಾರೂ ಇಲ್ಲ, ಗುಜರಾತ್ ಭವನಕ್ಕೆ ಹೋದಾಗ ಅಲ್ಲಿ ಜನ ಬರೀ ಗುಜರಾತಿನವರೆ. ಅವರಿಗೆ ಬೇರೆ ಭಾಷೆ ಬರುವುದಿಲ್ಲ, ನಮ್ಮ ಅಧಿಕಾರಿ ಕೂಡ ಯಾರು ಅಂದರೆ, ಪಂಜಾಬ್ ಐ. ಎ. ಎಸ್. ಅವರು ದರ್ಬಾರು ನಡೆಸುತ್ತಿದ್ದಾರೆ. ಅಲ್ಲಿ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ. ಅದು ಮೈಸೂರು ಭವನವಂತೆ. ಆ ಮೈಸೂರು ಭವನಕ್ಕೆ ಯಾರು ಹೋದರೂ ಕೂಡ ನಾಚಿಕೆ ಪಟ್ಟುಕೊಂಡು ಬರಬೇಕು. ನಾನು ಗೋವಾಕ್ಕೆ ಹೋದಾಗ ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟನ್ನು ನೋಡಿಕೊಂಡು ಬಂದಿದ್ದೇನೆ. ನಮ್ಮ ರಾಜ್ಯದ ಬಗ್ಗೆ ಇಂಗ್ಲೀಷಿನಲ್ಲಿ ಎರಡು ಫಾಂಫ್ಲೆಟ್ ಹಾಕಿದ್ದಾರೆ. ಗೋವಾದಲ್ಲಿ ಪೋರ್ಚುಗೀಸ್ ಭಾಷೆ, ಕೊಂಕಣಿ ಭಾಷೆ, ಮತ್ತು

ಮರಾಠಿ ಭಾಷೆ ಇದೆ. ಅದರಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಒದಗಿಸಬೇಕು. ಅಲ್ಲಿನ ಜನರಿಗೆ ನಮ್ಮ ರಾಜ್ಯದ ಬಗ್ಗೆ ತಿಳುವಳಿಕೆ ಕೊಡಬೇಕು.

ಅದನ್ನು ನಾವು ಮಾಡಬೇಕು. ಈ ಮಾತನ್ನು ಹೇಳಿ ನಾನು ಒಂದು ವರ್ಷವಾಯಿತು. ಅಲ್ಲಿಂದ ಆ ಜನರನ್ನು ತೆಗೆದು ಬೇರೆಯವರನ್ನು ಅಪಾಯಿಂಟ್ ಮಾಡಿ. ಬೇಕಾದರೆ ಪೋರ್ಚುಗೀಸ್‌ನವರೂ ಇರಲಿ, ಹಾಗೆಯೇ ಕನ್ನಡದವರೂ ಇರಲಿ ವಿಧಾನಸೌಧದಲ್ಲಿ ಇರತಕ್ಕಂಥ ಇನ್‌ಫರ್ಮೇಷನ್ ಬಗ್ಗೆ ಹೇಳದೇ ಇರುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಈವೊತ್ತು ನಮ್ಮ ರಾಜ್ಯಕ್ಕೆ ಏನಾದರೂ ಒಳ್ಳೆಯ ಕೆಲಸ ಮಾಡಿದ್ದರೆ, ಏನಾದರೂ ಈ ಬಗ್ಗೆ ಪ್ರಚಾರ ಆಗಿದ್ದರೆ ಅದು ಇಂಗ್ಲೀಷ್‌ನಲ್ಲಿ ಮಾಡಿದ್ದೀರಿ. ಸಾಮಾನ್ಯವಾಗಿ ಹೊರಗಡೆಯಿಂದ ಬಂದಿರತಕ್ಕಂಥಾವರಿಗೆ ಒಳ್ಳೆಯ ಕೆಲಸ ಮಾಡಿದ್ದೀರಿ. ಯಾವ ರೀತಿಯಾಗಿಯೂ ಮೈಸೂರಿನ ಗೌರವವನ್ನು ತರತಕ್ಕಂಥ ಕೆಲಸ ಮಾಡಿಲ್ಲ. ಇದು ಸತ್ತ ಇಲಾಖೆ, ಇದಕ್ಕೆ ಜೀವಕಳೆ ಕೊಡಿ ಎಂದು ಹೇಳುತ್ತೇನೆ.

ಇನ್ನು ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಬಗ್ಗೆ ಒಂದು ವಿಷಯ ಮಾತ್ರ ಹೇಳುತ್ತೇನೆ. ತಾವು ಈ ಬಗ್ಗೆ ಒಳ್ಳೆಯ ಯೋಚನೆ ಮಾಡಿದ್ದೀರಿ. ಮಿನಿ ಥಿಯೇಟರ್ಸ್ ಮಾಡುವುದು ಒಳ್ಳೆಯ ಯೋಜನೆ. ಅದರ ಜೊತೆಗೆ ಖಾಸಗೀಯವರ ಸಿನಿಮಾದ ಬಗ್ಗೆಯೂ ಯೋಜನೆ ಮಾಡಬೇಕು. ಮೊದಲು ಇದು ಯಶಸ್ವಿಯಾಗಬೇಕಾದರೆ ಖಾಸಗೀ ಥಿಯೇಟರುಗಳು ಏನು ಇದೆ ಅದನ್ನು ಮೊದಲು ರಾಷ್ಟ್ರೀಕರಣ ಮಾಡಿ. ಹಾಗೆಯೇ ನಮ್ಮ ರಾಜ್ಯದಲ್ಲಿರತಕ್ಕಂಥ ಜನಪದ ಸಾಹಿತ್ಯ, "ಜನಪದ ಸಂಸ್ಕೃತಿ" ಮತ್ತು ಹಾಗೆಯೇ ನಾನಾ ಸಂಸ್ಕೃತಿಗಳ ವಿಷಯಗಳನ್ನು ಸಂಗ್ರಹಿಸಿ ಸಣ್ಣ ಸಣ್ಣ ಚಲನಚಿತ್ರಗಳನ್ನು ಮಾಡಬೇಕು. ಡಾಕ್ಯುಮೆಂಟರಿ ಫಿಲಂ ಮಾಡಬೇಕು. ಚಿಕ್ಕ ಮಕ್ಕಳಿಗೆ ಬೇಕಾದಂಥ ಸಿನಿಮಾಗಳನ್ನೂ ಚಿತ್ರಗಳನ್ನೂ ಮಾಡಬೇಕು. ಇದಕ್ಕೆ ಸಾಕಾದಷ್ಟು ಹಣವನ್ನು ಒದಗಿಸಬೇಕು ಎಂದು ಹೇಳುತ್ತೇನೆ. ಈಗ ಪೊಲೀಸರ ಬಗ್ಗೆ ಹೇಳಿದ್ದಾರೆ. ನಾನು ಆ ಬಗ್ಗೆ ಹೇಳುವುದಿಲ್ಲ. ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ ಇದು ಹೀಗೆ ಇದ್ದರೆ ಇದು ಆದಷ್ಟು ಬೇಗ ಮುಳುಗಿ ಹೋಗುತ್ತದೆ. ಆದಷ್ಟು ಹೆಚ್ಚಿಗೆ ಲಂಚ ತೆಗೆದುಕೊಳ್ಳಲಿ, ಜನತೆಯಲ್ಲಿ ಅಸಮಾಧಾನ ಉಂಟಾಗಲಿ, ಆದಷ್ಟು ಕ್ಷೋಭೆ ಉಂಟಾಗಲಿ, ಆದಷ್ಟು ಮಟ್ಟಿಗೆ ಇದರಲ್ಲಿ ಪರಿವರ್ತನೆ ಆಗಲಿ, ಆದಷ್ಟು ಬೇಗ ನಿಮ್ಮ ಸರ್ಕಾರ ಉರುಳಿ ಹೋಗಲಿ ಎಂದು ಹಾರೈಸುತ್ತೇನೆ. ಈ ಬಗ್ಗೆ ಹೇಳಿದರೂ ರಿಪೇರಿಯಾಗುವುದಿಲ್ಲ, ಇವರು ರಿಪೇರಿ ಮಾಡುವುದೂ ಇಲ್ಲ. ನೀವು ದೇಶಕ್ಕೆ ಒಳ್ಳೆಯದು ಮಾಡಿರಿ. ಇಲ್ಲದೇ ಹೋದರೆ ನೀವು ಕೆಳಕ್ಕೆ ಇಳಿಯಿರಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

Mr. DEPUTY SPEAKER. Just now the Hon. Member said that his party is an All India Party and it was not given sufficient time. I will just give an idea about the time taken by each Party up to yesterday on the discussion of Demands :

Congress (O)	...	13 hours 5 minutes
S.S.P. consisting of only two members	...	4 hours 14 minutes
C.P.I. consisting of only three members	...	4 hours 33 minutes
Janata Paksha consisting of only two members	...	2 hours 14 minutes
Independents	...	7 hours 9 minutes.

(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪುಸ್ತಕ ಕ್ರಮಾಂಕ Accession No. 6009
ದಿನಾಂಕ Date........
6009 (B)

Can the hon. member now say that we have not done justice ?

ಶ್ರೀ ಕೋಣಂದೂರು ಲಿಂಗಪ್ಪ :—ನನಗೆ ಮಾತನಾಡಲು 5 ನಿಮಿಷ ಕಾಲಾವಕಾಶ ಕೊಟ್ಟಿದ್ದರಿಂದ ನಾನು ಜಾಸ್ತಿ ಹೇಳಲಿಲ್ಲ. ಆದರೂ ಕೂಡ ಅದಕ್ಕೆ ನಾನು ಕ್ಷಮೆ ಕೇಳುತ್ತೇನೆ.

Mr. DEPUTY SPEAKER :—The hon. member need not make an imputation when nobody is against any party.

Sri M. S. KRISHNAN :—It is better that Leaders of each party are given half-an-hour's time

Mr. DEPUTY SPEAKER :—As far as my knowledge goes members of various parties have been given sufficient time while initiating discussion on various Demands. It is a matter which has to be discussed by the Opposition in consultation with their Leader. The best thing is to have an understanding amongst themselves.

Sri H. S SIDDAPPA :—We give the list of those parties which want us to give. But some parties do not want us to give their names.

Sri M. S. KRISHNAN :—Sir, I protest against what Sri Siddappa says.

Mr. DEPUTY SPEAKER :—I think we have given time whenever it was asked.

"7 *Destruction of photographs and records of measurements, etc., on acquittal*, -Where any person who, not having been previously convicted of an offence punishable with rigorous imprisonment for a term of one year or upwards, has had his measurements taken or has been photographed in accordance with the provisions of this Act is released without trial or discharged or acquitted by any court, all measurements and all photographs (both negatives and copies) so taken shall, unless the Court or (in a case where such person is released without trial) the District Magistrate or the Sub-Divisional Magistrate or in any area for which a Commissioner of Police has been appointed, the Commissioner of Police for reasons to be recorded in writing otherwise directs, be destroyed or made over to him." :

(5) in clause (*e*) of sub-section (2) of section 8 for the words "under section 3", the words "in accordance with the provisions of this Act" shall be substituted.

SCHEDULE

Sl. No.	*Year and number of enactment*	*Name of enactment*	*Area where enactment is in force*
1.	Bombay Act XI of 1922	The Identification of Prisoners (Bombay Amendment) Act, 1922.	Bombay Area
2.	Bombay Act XXI of 1935,	The Identification of Prisoners (Bombay Second Amendment) Act, 1935.	Bombay Area
3.	Bombay Act XV of 1948.	The Identification of Prisoners (Bombay Amendment) Act, 1948,	Bombay Area
4.	Bombay Act LVIII of 1953	The Identification of Prisoners (Bombay Amendment) Act, 1953.	Bombay Area
5.	Hyderabad Act XXVII of 1956	The Identification of Prisoners Application (Hyderabad Amendment) Act, 1956.	Hyderabad Area
6.	Mysore Act VI of 1922	Identification of Prisoners Act, 1922.	Mysore Area

STATEMENT OF OBJECTS AND REASONS

Identification of Prisoners Act 1920 (Central Act 33 of 1920) is in force in the Bombay Area, the Hyderabad Area, the Madras Area and the Coorg District. In the Mysore Area the Mysore Identification of Prisoners Act 1922 (Mysore Act VI of 1920) is in force. To bring about uniformity it is found necessary to extend the Central Act to the whole of the State of Mysore and to amend section 4 providing for the taking of measurements and photographs of persons arrested under section 55 Cr. P. C., section 96 of the Mysore Police Act, 1963, in connection with offences punishable with imprisonment for a term of one year or more or for the commission of which on a second or subsequent occasion enhanced an offence penalties have been provided. Provisions for taking measurements, etc., of habitual offenders against whom orders of restriction are made are also necessary.

2. The Criminal Law Amendment Act, 1932 (Central Act XXIII of 1932) is at present in force only in the Bombay Area, the Madras Area and the Coorg District. It is necessary to extend the Act to the other areas of the State.

3. Hence this Bill.

MEMORANDUM REGARDING DELEGATED LEGISLATION

Clause 4.—Sub-clause (2) of this clause empowers the State Government to prescribe by rules the manner in which measurements or photographs of unconvicted persons and habitual offenders against whom restriction order is made may be taken.

The delegation of the proposed legislative power is of a normal character.

R. D KITTUR

TE. HANUMANTHAPPA,

Secretary

MYSORE LEGISLATIVE ASSEMBLY

Thursday, 3rd May 1973 Vaishaka 13, 1895 S.E.

The House met in the Assembly Chamber, Vidhana Soudha, at Thirty Minutes past Nine of the Clock.

[*Madam Speaker (Smt. K. S. Nagarathnamma) in the Chair*]

BUDGET ESTIMATES FOR 1973—74

DEMANDS FOR GRANTS

Demand Nos. 3, 10, 12, 13, 15B, 35 and 36

MADAM SPEAKER.—The Hon. Minister of State for Home will begin his reply.

ಶ್ರೀ ಆರ್. ಡಿ. ಕಿತ್ತೂರು (ಗೃಹಶಾಖೆಯ ರಾಜ್ಯ ಮಂತ್ರಿಗಳು) :—ಮಾನ್ಯ ಅಧ್ಯಕ್ಷರೇ, ನಮ್ಮ ಮೈಸೂರು ರಾಜ್ಯದಲ್ಲಿರತಕ್ಕ ಒಟ್ಟು ಜೈಲುಗಳ ಸಂಖ್ಯೆ 94, ಇದರಲ್ಲಿ ಮುಖ್ಯವಾಗಿರುವ ನಾಲ್ಕು ಜೈಲುಗಳಿವೆ, ಎಂದರೆ ಬೆಂಗಳೂರು, ಬೆಳಗಾಂ, ಗುಲ್ಬರ್ಗಾ ಹಾಗೂ ಬಳ್ಳಾರಿಯಲ್ಲಿರುವ ಜೈಲುಗಳು. ಇವೆಲ್ಲ ಸೆಂಟ್ರಲ್ ಜೈಲುಗಳು. ಧಾರವಾಡದಲ್ಲಿ ಒಂದು ಬಾರ್‌ಸ್ಟಲ್ ಸ್ಕೂಲು ಇದೆ. ಇದರಲ್ಲಿ ಒಂದನೇ ದರ್ಜೆಯ ಡಿಸ್ಟ್ರಿಕ್ಟ್ ಜೈಲುಗಳು ಮತ್ತು ಎರಡನೇ ದರ್ಜೆಯ ಡಿಸ್ಟ್ರಿಕ್ಟ್ ಜೈಲುಗಳು ನಾಲ್ಕು ಇವೆ. ಇವು ಶಿವಮೊಗ್ಗಾ, ಮರ್‌ಕೆರಾ, ಬೀದರು ಮತ್ತು ರಾಯಚೂರು ಜಿಲ್ಲೆಯಲ್ಲಿವೆ. ಮತ್ತು ಸಬ್ ಜೈಲುಗಳು ಮಂಗಳೂರು, ಕಾರವಾರ ಮತ್ತು ಧಾರವಾಡದಲ್ಲಿವೆ, ಧಾರವಾಡದಲ್ಲಿ ಮೇಲ್ಸ್‌ಗಳಿಗಾಗಿ ಮತ್ತು ಫೀಮೇಲ್ಸ್‌ಗಳಿಗಾಗಿ ಬೇರೆ ಬೇರೆ ಜೈಲುಗಳಿವೆ, ಜುಡಿಷಿಯಲ್ ಜೈಲು ಒಂದು ಇದೆ ಮತ್ತು ಓಪನ್ ಏರ್ ಜೈಲು ಒಂದು ಇದೆ. ಈ ಮೇಜರು ಜೈಲುಗಳನ್ನು ಬಿಟ್ಟು ತಾಲ್ಲೂಕಾ ಲೆವೆಲ್‌ನಲ್ಲಿ 60 ಲಾಕಪ್ಸ್‌ಗಳಿವೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ದೇವೇಗೌಡರವರು ನಿನ್ನೆ ದಿವಸ ಒಂದು ಅಂಶವನ್ನು ಹೇಳಿದರು:

The Leader of the opposition and some others suggested that the Central Jail at Bangalore might be shifted to another place.

ಈ ಜೈಲನ್ನು ಈಗಿನ ಪರಿಸ್ಥಿತಿಯಲ್ಲಿ ಬೇರೆ ಕಡೆಗೆ ವರ್ಗಾಯಿಸಲು ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಕಳೆದ ಸಾರಿ ನಾನು ಹೇಳಿದಂತೆ ಇದಕ್ಕೆ ಸರಿಯಾದ ಹಾಗೂ ಸೂಟಬಲ್ ಲ್ಯಾಂಡನ್ನು ನೋಡುತ್ತಿದ್ದೇವೆ ಎಂದು. ನಮಗೆ ಇನ್ನೂ ಅಂತಹ ಸೂಟಬಲ್ ಲ್ಯಾಂಡು ಸಿಗಲಿಲ್ಲ, ಇದಕ್ಕೋಸ್ಕರವಾಗಿ ಈ ಜೈಲನ್ನು ನಾವು ಈಗ ಷಿಫ್ಟ್ (Shift) ಮಾಡಲು

Asterisks indicate that remarks or speeches have not been revised by the member concerned.

ಸಾಧ್ಯವಾಗುವುದಿಲ್ಲ. ಇನ್ನು ನಮ್ಮ ಬೆಳಗಾಂನಲ್ಲಿರುವ ಜೈಲು ಬಹಳ ಹಳೆಯ ಜೈಲು. ನಮ್ಮ ದೇಶದಲ್ಲಿರುವ ಜೈಲುಗಳಲ್ಲಿ ಇದು ಅತ್ಯಂತ ದೊಡ್ಡದು. 1923ರಲ್ಲಿ ಈ ಜೈಲು ಕಟ್ಟಡವನ್ನು ಕಟ್ಟಿದ್ದು. ನಮ್ಮ ದೇಶದಲ್ಲಿ ಜೈಲು this is the biggest Jail. ಇದಕ್ಕೆ 99 ಎಕರೆಗಳಷ್ಟು ವಿಶಾಲವಾದ ಭೂಮಿ ಇದೆ. ಇದರಲ್ಲಿ ಸಾಕಷ್ಟು ಪ್ರಮಾಣದಲ್ಲಿ ವೆಜಿಟಬಲ್ಸ್ ಹಾಗೂ ಫುಡ್‌ಗ್ರೇನ್ಸ್‌ಗಳನ್ನು ಹೆಚ್ಚಾಗಿ ತೆಗೆಯುತ್ತಿದ್ದಾರೆ. ನಮ್ಮ ಗುಲ್ಬರ್ಗಾದಲ್ಲಿರುವ ಜೈಲು ಸೆಂಟ್ರಲ್ ಜೈಲು, ಇದನ್ನು 1969ರಲ್ಲಿ ಕಟ್ಟಿದ್ದುದು, ಇದು ಗುಲ್ಬರ್ಗಾಕ್ಕೆ ಏಳು ಮೈಲಿ ದೂರದಲ್ಲಿದೆ. ಇನ್ನೊಂದು ಬಳ್ಳಾರಿಯಲ್ಲಿರುವ ಸೆಂಟ್ರಲ್ ಜೈಲು. The Bellary Central Jail is one of the best Jails with a Good Hospital equipped with an X—Ray Theatre. ಧಾರವಾಡದಲ್ಲಿ ಒಂದು ಬಾರ್‌ಸ್ಟಲ್ ಸ್ಕೂಲು ಇದೆ, ಇದರಲ್ಲಿ ಜುವಿನೈಲ್ ಲ್ಯಾಡ್ಸ್‌ಗಳನ್ನು ತರಬೇತಿ ಕೊಡಲು ಸಾಕಷ್ಟು ಪ್ರಮಾಣದಲ್ಲಿ ಡೆವೆಲಪ್ಪಾಗುತ್ತಿದೆ.

ಕೆಲವು ಮಾನ್ಯ ಸಭಾಸದರು ನಮ್ಮ ರಾಜ್ಯದಲ್ಲಿರುವ ಎಲ್ಲ ಜೈಲುಗಳಿಗೂ ಅನ್ವಯವಾಗುವಂತಹ ಒಂದು ಮ್ಯಾನ್ಯುಯಲ್‌ನ್ನು ಮಾಡಬೇಕು ಮತ್ತು ಈಗಿರುವ ಹಳೆಯ ಮ್ಯಾನುಯಲ್‌ನ್ನು ತಿದ್ದುಪಡಿ ಮಾಡುವುದು ಅಗತ್ಯವಿದೆ ಎಂದೂ ಹೇಳಿದರು. ಈಗಾಗಲೇ ಈ ಮ್ಯಾನ್ಯುಯಲ್‌ನ್ನು ತಿದ್ದುಪಡಿ ಮಾಡಲಾಗಿದೆ ಮತ್ತು ಅದು ಇನ್ನೂ ಸ್ಕ್ರೂಟಿನಿಯಲ್ಲಿದೆ. ಇದನ್ನು ಬೇಗನೆ ಮಾಡಿ ಪ್ರಿಂಟು ಮಾಡಿ ಜಾರಿಗೆ ತರುವುದರಲ್ಲಿದ್ದೇವೆ. ಇದೇ ತರಹ ನಿನ್ನೆ ಇಲ್ಲಿ ಕೆಲವು ಸದಸ್ಯರು ಜೈಲು ಇಂಡಸ್ಟ್ರೀಸ್‌ಗಳ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಈಗಾಗಲೇ ಕೆಲವು ಇಂಡಸ್ಟ್ರೀಸ್‌ಗಳು ಜೈಲುಗಳಲ್ಲಿ ನಡೆಯುತ್ತಿವೆ. ಆ ಜೈಲು ಇಂಡಸ್ಟ್ರೀಸ್‌ಗಳು ಯಾವುವು ಎಂದರೆ : Cane and Coir industry, Carpeting. Weaving, Carpentry, Tailoring, Smithy, Soap-making, Handloom and power loom industry, printing and binding, Laundrying, Tent-making, Leather Industry, Pottery, Dyeing and Bleaching, Agriculture and Horticulture and running of Canteens, etc., ಈ ತರಹ ಸಾಕಷ್ಟು ಇಂಡಸ್ಟ್ರೀಸ್‌ಗಳನ್ನು ಜೈಲುಗಳ ಮುಖಾಂತರ ನಡೆಸಲಾಗುತ್ತಿದೆ. ಇಂತಹ ಇಂಡಸ್ಟ್ರಿಗಳಲ್ಲಿ ಸರಿಯಾಗಿ ತರಬೇತಿ ನೀಡಲು ಯೋಗ್ಯವಾದ ಇನ್ಸ್‌ಪೆಕ್ಟರುಗಳೂ ಇದ್ದಾರೆ ಮತ್ತು ಒಳ್ಳೆಯ ಟ್ರೇನಿಂಗನ್ನೂ ಕೊಡುತ್ತಿದ್ದಾರೆ. ನಿನ್ನೆ ದಿವಸ ಕೆಲ ಮಾನ್ಯ ಸಭಾಸದರು ಹೇಳಿದ ಹಾಗೆ ಖೈದಿಗಳನ್ನು ಜೈಲುಗಳಿಂದ ರಿಲೀಸು ಮಾಡಿದ ಮೇಲೆ ಅವರು ಯೋಗ್ಯವಾದ ವೃತ್ತಿಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಇಲ್ಲಿ ತರಬೇತಿ ಕೊಡಬೇಕು ಎಂದು ಸಲಹೆ ಮಾಡಿದ್ದರು. ಈಗ ಜೈಲುಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಖೈದಿಗಳಿಗೆ ತರಬೇತಿಯನ್ನು ಕೊಡಲಾಗುತ್ತಿದೆ. ರಿಲೀಸಾದ ಕೂಡಲೇ ಖೈದಿಗಳು ಹೆಚ್ಚು ತೊಂದರೆ ಪಡಕೂಡದು ಎಂದು ಈ ರೀತಿಯ ಶಿಕ್ಷಣವನ್ನು ಇಲ್ಲಿ ಕೊಡಲಾಗುತ್ತಿದೆ. ಕಳೆದ ನವಂಬರು ಹಾಗೂ ಡಿಸೆಂಬರು ತಿಂಗಳಲ್ಲಿ ನಮ್ಮ ಬೆಳಗಾಂ ಜೈಲಿನಲ್ಲಿದ್ದ ಸುಮಾರು 104 ಖೈದಿಗಳಿಗೆ 30 ದಿವಸಗಳ ಕಾಲ ಕುಲವಳ್ಳಿ ಗ್ರಾಸ್ ಕಟ್ಟಿಂಗು ಕ್ಯಾಂಪಿನಲ್ಲಿ ಇಟ್ಟು ಹುಲ್ಲನ್ನು ಕುಯ್ಯುವ ಕೆಲಸಗಳನ್ನು ಇವರಿಗೆ ಕೊಡಲಾಗಿತ್ತು, ಇವರು ಇಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. They have done very good work; they cut grass in that forest.

134 truck loads have been sent to the drought affected areas. This is a very tremendous work done by our prisoners recently near Kittur Village at Kulavalli Camp.

ನಮ್ಮ ಬೆಂಗಳೂರು ಸೆಂಟ್ರಲ್ ಜೈಲಿನಿಂದ ಸಹ ಬರ್ನ್ಸ್ ಹಾಸ್ಪಿಟಲ್‌ಗೆ ಹಣವನ್ನು ಕಲೆಕ್ಟ್ ಮಾಡಿ ಕೊಟ್ಟಿದ್ದಾರೆ ಮತ್ತು ಗುಲ್ಬರ್ಗ, ಬೆಳಗಾಂ ಮತ್ತು ಬೆಂಗಳೂರು ಜೈಲಿನ ಖೈದಿಗಳು ಇಂಡಿಯಾ ಪಾಕಿಸ್ತಾನ್ ಯುದ್ಧದ ಸಮಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹಣವನ್ನು ಕಲೆಕ್ಟ್‌ಮಾಡಿ ಸೈನಿಕರ ಸಂಸಾರದವರಿಗೆ ಕೊಟ್ಟಿದ್ದಾರೆ. ಇಂತಹ ಒಂದು ಒಳ್ಳೆಯ ಉದ್ದೇಶದಿಂದ ನಮ್ಮ ಖೈದಿಗಳು ರಿಫಾರ್ಮೆಟಿವ್ ಆಕ್ಷನ್‌ಗೋಸ್ಕರ ಸಾಕಷ್ಟು ಪ್ರಮಾಣದಿಂದ ಸಹಾಯ ಮಾಡುತ್ತಿದ್ದಾರೆ. ನೆನ್ನೆ ದಿವಸ ಮಾನ್ಯ ಸದಸ್ಯರು ಮಾತನಾಡುವಾಗ ಖೈದಿಗಳಿಗೆ ಒಂದು ಒಳ್ಳೆಯ ಟ್ರೈನಿಂಗ್ ಇನ್ಸ್‌ಟಿಟ್ಯೂಟ್ ಇರಬೇಕೆಂದು ಹೇಳಿದರು. ಇಂತಹ ಒಂದು ಇನ್ಸ್‌ಟಿಟ್ಯೂಟನ್ನು ಕೇಂದ್ರ ಸರ್ಕಾರದವರು ಸೌತ್ ಜೋನ್‌ನಲ್ಲಿ ತೆಗೆಯಬೇಕೆಂದು ತೀರ್ಮಾನ ಮಾಡಿದ್ದಾರೆ. ಇದಕ್ಕಾಗಿ ಸರ್ಕಾರದವರು ನಾನ್-ರೆಕರಿಂಗ್‌ಗೋಸ್ಕರ 3 ಲಕ್ಷ ರೂಪಾಯಿಗಳನ್ನು ಮತ್ತು ರೆಕರಿಂಗ್‌ಗೋಸ್ಕರ 59 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಈ ಇನ್ಸ್‌ಟಿಟ್ಯೂಟನ್ನು ವೆಲ್ಲೂರಿನಲ್ಲಿ ಹಾಕಬೇಕೆಂದು ಅವರು ತೀರ್ಮಾನ ಮಾಡಿದ್ದಾರೆ. ಈ ಸೌತ್ ಜೋನ್‌ನಲ್ಲಿ ಬರುವ ರಾಜ್ಯಗಳೆಂದರೆ: ಮೈಸೂರು, ಕೇರಳ, ಆಂಧ್ರ ಮತ್ತು ತಮಿಳುನಾಡು. ನಮ್ಮ ರಾಜ್ಯದಲ್ಲಿಯೂ ಒಂದು ವಾರ್ಡರ್ಸ್ ಟ್ರೈನಿಂಗ್ ಇನ್ಸ್‌ಟಿಟ್ಯೂಟನ್ನು ತೆರೆಯಬೇಕೆಂದಿದ್ದೇವೆ. ಇದನ್ನು ಮೈಸೂರಿನಲ್ಲಿ ತೆರೆಯಬೇಕೆಂದಿದ್ದೇವೆ. We are examining this aspect and we will take steps to establish a suitable institute at Mysore for training such warders. ನೆನ್ನೆ ದಿವಸ ಮಾನ್ಯ ಗುಡ್ಡಕಾಯ ಅವರು ಮಾತನಾಡುವಾಗ ನಮ್ಮ ಖೈದಿಗಳಿಗೆ ಟ್ರೈನಿಂಗ್ ಕೊಡುವ ಸಲುವಾಗಿ ಒಳ್ಳೆಯ ಟ್ರೈನ್ಡ್ ಆದವರು ಇಲ್ಲ ಎಂದು ಹೇಳಿದರು. ನಮ್ಮ ಜೈಲಿನಲ್ಲಿ ಕ್ರಿಮಿನಾಲಜಿ ಬಗ್ಗೆ ಮತ್ತು ಅಡ್ಮಿನಿಸ್ಟ್ರೇಶನ್ ಲೈನಿನಲ್ಲಿ ಟ್ರೈನ್ಡ್ ಆದ ಅಧಿಕಾರಿಗಳು ಇರಬೇಕಾದುದು ಅವಶ್ಯಕ ಎಂದು ನನಗೂ ಕೂಡ ಅನಿಸುತ್ತದೆ. ಅದಕ್ಕೋಸ್ಕರ ಈ ವರ್ಷದಿಂದ ಮುಂಬೈನಲ್ಲಿರುವಂಥ ತಾತಾ ಇನ್ಸ್‌ಟಿಟ್ಯೂಟಿಗೆ ನಮ್ಮ ಅಧಿಕಾರಿಗಳನ್ನು ಕಳುಹಿಸಿ ಅವರಿಗೆ ಟ್ರೈನಿಂಗ್ ಕೊಡಿಸಬೇಕೆಂದಿದ್ದೇವೆ. ಇದು ಎರಡು ವರ್ಷದ ಕೋರ್ಸ್ ಇದೆ. ಈ ಕೆಲಸವನ್ನು ಈ ವರ್ಷದಿಂದಲೇ ಪ್ರಾರಂಭ ಮಾಡುತ್ತಿದ್ದೇವೆ.

ಶ್ರೀ ಬಾಪೂಗೌಡ ರಾಯಪ್ಪ :—ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕ್ರಿಮಿನಾಲಜಿ ಬಗ್ಗೆ ಟ್ರೈನಿಂಗ್ ಕೊಡುವ ಸಲುವಾಗಿ ಈಗ ಒಂದು ವಿಭಾಗ ಇಲ್ಲವೆ ?

Sri R. D. KITTUR :—The Tata Institute at Bombay is imparting specialised training in Criminology. It is one of the best institutes in the world. The Karnataka University is not imparting training to prison officers in Criminology.

ಇನ್ನು ನಮ್ಮ ವಿರೋಧಪಕ್ಷದ ನಾಯಕರಾದ ಶ್ರೀ ದೇವೇಗೌಡರು ಜೈಲಿನಲ್ಲಿ ಸಾಕಷ್ಟು ಪ್ರಮಾಣದಿಂದ ಖೈದಿಗಳಿಗೋಸ್ಕರ ರಿಫಾರ್ಮೆಟಿವ್ ಮೆಜರ್ ತೆಗೆದುಕೊಳ್ಳಬೇಕೆಂದು ಹೇಳಿದರು. ಈ ವಿಷಯದ ಬಗ್ಗೆ ನಾವು ಸಾಕಷ್ಟು ಪ್ರಮಾಣದಿಂದ ರಿಫಾರ್ಮೆಟಿವ್ ಮೆಜರ್ ತೆಗೆದುಕೊಂಡಿದ್ದೇವೆಂದು ಹೇಳಬಹುದು. ಅದರ ಬಗ್ಗೆ ವಿವರಗಳನ್ನು ಕೊಡಬೇಕೆಂದರೆ :

Newspapers and magazines are being allowed to prisoners at Government cost. Radio and loudspeaker arrangements have been introduced in all major jails. There is also arrangement to allot work suitable to prisoners. Interviews

and correspondence have been liberalised. The panchayat system has been introduced in jails to create self-reliance and responsibility among prisoners. Special diet is issued to them on festival occasions. Indoor and outdoor games have been allowed in jails and prisoners are allowed to participate in outside tournaments. The industrial section has been mechanised and improved with power looms and additional sewing machines and is equipped with modern tools. The prisoners are allowed to give broadcasting programme over the air. Wage-earning scheme has been introduced in major jails and canteens have been opened in jails for the use of the prisoners. A certain number of beds have been reserved at the T.B. Sanatorium at Bellary for acute T. B. cases among prisoners. The remission system has been liberalised. Prisoners giving blood donation are given ten-day special remission each time they donate blood. The prisoners are allowed to participate in dramas and to stage them in outside theatres. Library classes including adult education classes are conducted in jails. They are also allowed to prosecute their studies at the University level. The prisoners are deputed to the Horticulture Department at Bangalore and Belgaum to work in the gardens of the Department. Hindi classes are conducted in jails and they are allowed to take Hindi examinations. Sports among them are conducted on important festival occasions and prizes are distributed. Prisoners are permitted to compete in all-India and State spinning competitions. Parole facilities are available to them. Government consider the applications of released prisoners for allotment of lands. There are liaison officers in major jails who chalk out pre-release programmes and execute after-release programmes. Released prisoners are provided with equipment and allowed to start units in which they are trained while in prison.

Sri M. S. KRISHNAN.—May I know how many people have been benefited by these reformative measures ?

Sri R. D. KITTUR.—The question is that after their release if they approach Government, their case may be considered. That is the position.

ಶ್ರೀಮಾನ್ ಎಂ. ಎಸ್. ಕೃಷ್ಣನ್ ಅವರು ಖೈದಿಗಳನ್ನು ಜೈಲಿನಿಂದ ಬಿಡುಗಡೆ ಮಾಡುವ ಬಗ್ಗೆ ಪ್ರಸ್ತಾಪಮಾಡಿದ್ದಾರೆ. Life-prisoners are not only released on the occasion of 25th Anniversary of our independence but also we have already released about 475 prisoners of all categories through different jails in the whole State.

ಮಾನ್ಯ ಸದಸ್ಯರಾದ ಶ್ರೀ ಎಂ. ಬಿ. ರಾಮಸ್ವಾಮಿಯವರು ಜೈಲಿನಲ್ಲಿ ಖೈದಿಗಳನ್ನು ಭೇಟಿ ಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ ಎಂದು ಹೇಳಿದರು ಅದು ಸರಿಯಲ್ಲ, ಪ್ರತಿ ದಿವಸ ಬೆಳಗ್ಗೆ ಮತ್ತು ಸಾಯಂಕಾಲ ಖೈದಿಗಳ ಸ್ನೇಹಿತರು ಮತ್ತು ಅವರ ಬಂಧುಗಳು ಅವರನ್ನು ಭೇಟಿ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತಿದ್ದೇವೆ. ಕೆಲವು ಸಂದರ್ಭಗಳಲ್ಲಿ ಮಾತ್ರ ಎಂದರೆ ಫೆಸ್ಟಿವಲ್ ಟೈಮಿನಲ್ಲಿ ಪ್ರಿಜನರ್ಸ್‌ಅನ್ನು ಭೇಟಿ ಮಾಡುವುದಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಆಗಿರಬಹುದು. ಅಷ್ಟು ಹೊರತು ಅವರನ್ನು ಭೇಟಿ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತಿಲ್ಲ ಎಂದು ಹೇಳಿದ್ದು ಸರಿಯಲ್ಲ.

ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಇನ್‌ಫರ್ಮ್ ಮತ್ತು ಡಿಸೀಜ್ ಪ್ರಿಜನರ್ ಗಳನ್ನು ಬಿಡುಗಡೆ ಮಾಡುವುದಕ್ಕೆ ಅವಕಾಶವನ್ನು ಮಾಡಿಲ್ಲ ಎಂದು ಹೇಳಿದರು. ಈ ಪ್ರಿಜನರ್ ಗಳನ್ನು ಬಿಡುಗಡೆ ಮಾಡುವ ಬಗ್ಗೆ ಐ. ಜಿ. ಪಿ. ಶಿಫಾರಸ್ಸುಮಾಡಿ ಸರ್ಕಾರಕ್ಕೆ ಕಳುಹಿಸುತ್ತಾರೆ. ಆಮೇಲೆ ಸರ್ಕಾರದವರು ಅದನ್ನು ಎಗ್ಜಾಮಿನ್‌ಮಾಡಿ ಅಂಥಾ ಕೇಸುಗಳನ್ನು ಕನ್‌ಸಿಡರ್ ಮಾಡಬೇಕು. ಇಷ್ಟು ಹೇಳಿ ಕೊನೆಯದಾಗಿ I will say that criminals should be treated as patients in hospitals and jails should be hospitals admitting such patients for treatment and care. With these words, I conclude.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳ ಮೇಲೆ ಎರಡು ದಿವಸಗಳೂ ಈ ಸಭೆಯಲ್ಲಿ ನಡೆದಂತಹ ಚರ್ಚೆಯನ್ನು ನಾನು ಕೂಲಂಕಷವಾಗಿ ಕೇಳಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕ ರಾದಿಯಾಗಿ ಎಲ್ಲಾ ವಿರೋಧಪಕ್ಷದ ಸದಸ್ಯರ ಮತ್ತು ನಮ್ಮ ಪಕ್ಷದ ಎಲ್ಲ ಸದಸ್ಯರೂ ಮಾತನಾಡಿರುವುದನ್ನು ನಾನು ಮನಸ್ಸಿಟ್ಟು ಕೇಳಿದ್ದೇನೆ. ನಾನು ಮೊದಲನೆಯದಾಗಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಬಹಳ ಅಭಿನಂದನೆಗಳನ್ನು ಸಲ್ಲಿಸಬೇಕು ಎಂದು ನನ್ನ ಪೂರ್ಣ ಇಚ್ಛೆ ಇದೆ. ಅವರ ಪೂರ್ಣ ಭಾಷಣವನ್ನು ಕೇಳಿದ ಮೇಲೆ ನನಗೆ ಏನು ಅನಿಸಿತು ಎಂದರೆ ಅವರ ಮನಸ್ಸಿನಲ್ಲಿ ಯಾವ ವಿಧವಾದ ರಾಗ ದ್ವೇಷಗಳಿಗೂ ಅವಕಾಶ ಕೊಡದೆ ದೇಶದ ಕೆಲಸಕಾರ್ಯಗಳು ಜನತೆಯ ಹಿತದೃಷ್ಟಿಯಿಂದ ನಡೆಯಬೇಕು, ಪ್ರಾಮಾಣಿ ಕತೆ ಹೆಚ್ಚಬೇಕು, ಆಡಳಿತದಲ್ಲಿ ದಕ್ಷತೆ ಇರಬೇಕು. ಎನ್ನುವುದು ಅವರ ಅಭಿಪ್ರಾಯ. ಎಲ್ಲಾ ಮುಖ್ಯ ಗುಣಗಳನ್ನೂ ಆಡಳಿತ ಹೊಂದುವ ರೀತಿಯಲ್ಲಿ ಮಾಡುವುದಕ್ಕೆ ಎಲ್ಲರೂ ಸಹಕರಿಸಬೇಕು. ಇದು ಕೇವಲ ಸರ್ಕಾರದ ಜವಾಬ್ದಾರಿಯನ್ನು ಹೊತ್ತಿರತಕ್ಕ ಮಂತ್ರಿಗಳಿ ಗಾಗಲೀ, ಸದಸ್ಯರಿಗಾಗಲೀ, ಹಾಗೂ ಪಕ್ಷದ ಸದಸ್ಯರಿಗಾಗಲೀ ಅಷ್ಟೇ ಅಲ್ಲ, ಈ ವಿಚಾರದಲ್ಲಿ ಇಡೀ - ದೇಶದ ಎಲ್ಲಾ ಜನತೆಗೂ ಸೇರಿದ ಜವಾಬ್ದಾರಿ ಇದೆ ಎನ್ನುವ ವಿಚಾರವನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಕೇವಲ ಟೀಕೆಗಳನ್ನು ಮಾಡಿ ಸರ್ಕಾರದಲ್ಲಿ ತಪ್ಪುಗಳನ್ನು ಕಂಡುಹಿಡಿಯತಕ್ಕದ್ದು ನಮ್ಮ ಕೆಲಸ ಎನ್ನುವ ಒಂದು ಪದ್ಧತಿ ನಡೆದು ಬಂದಿದ್ದರೆ ಅದು ಅಲ್ಲ ಎನ್ನುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಭಾಷಣದಿಂದ ಸಿದ್ಧಪಡಿಸಿದ್ದಾರೆ. ಟೀಕೆಗಳನ್ನು ಮಾಡಬಾರದು ಎಂದಲ್ಲ, ಟೀಕೆಗಳನ್ನು

ಮಾಡಲೇಬೇಕಾಗುತ್ತದೆ. ಪ್ರಜಾತಂತ್ರದಲ್ಲಿ ಯಾರೇ ಅಧಿಕಾರವನ್ನು ನಡೆಸಿದರೂ ಕೂಡ ಅವರಿಗೆ ಎಲ್ಲಾ ವಿಷಯಗಳೂ ಗೊತ್ತಾಗುವುದು ಎಂದಿಗೂ ಸಾಧ್ಯವಿಲ್ಲ. ಅದರಲ್ಲೂ ಈಗಿನ ಯುಗದಲ್ಲಿ ಆಧುನಿಕ ಪ್ರಪಂಚದ ವ್ಯವಹಾರ, ರಾಜಕಾರಣ, ಸಾಮಾಜಿಕ ಮತ್ತು ಆರ್ಥಿಕ ರಂಗದಲ್ಲಿ ಬಹಳ ಕ್ಲಿಷ್ಟವಾಗಿದೆ. Things are getting more and more complicated. ರಾಜ್ಯದ ಆಡಳಿತ ಕೂಡ ಅಷ್ಟು ಸುಲಭವಾದದ್ದಲ್ಲ. 19ನೇ ಶತಮಾನದ ಪ್ರಾರಂಭದಲ್ಲಿ ರಾಜ್ಯದ ಆಡಳಿತವನ್ನು ನಡೆಸುವುದಕ್ಕೂ ನಾವು ಇಂದು ರಾಜ್ಯದ ಆಡಳಿತವನ್ನು ನಡೆಸುವುದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಈಗ ಸರ್ಕಾರದ ಜವಾಬ್ದಾರಿ ಮಾನವನ ಚಟುವಟಿಕೆಗಳ ಎಲ್ಲಾ ಹಂತದಲ್ಲೂ ಬಂದಿದೆ. ಆದಕ್ಕಿಂತಲೂ ಶ್ರೀಮಾನ್ ಗಾಡ್ಗಿಲ್ ಅವರು ಹೇಳಿರುವ ಹಾಗೆ from womb to tomb ಎಂದರೆ ಗರ್ಭಕೋಶದಲ್ಲಿ ಮನುಷ್ಯನ ಉತ್ಪತ್ತಿ ಪ್ರಾರಂಭವಾದಾಗಿನಿಂದಲೂ ಹಿಡಿದು ಆತ ಸತ್ತು ಹೆಣವಾಗಿ ಟೂಂಬ್ ಆದಮೇಲೂ ಆ ಟೂಂಬನ್ನು ಕಾಪಾಡುವುದೂ ಸರ್ಕಾರದ ಜವಾಬ್ದಾರಿ ಬರುತ್ತದೆ.

ಇದರಿಂದ ನಮಗೆ ಅರ್ಥವಾಗುವುದು ಏನೆಂದರೆ ಸರ್ಕಾರ ಈಗ ಆಡಳಿತ ನಡೆಸತಕ್ಕಂಥ ಕಾಲದಲ್ಲಿ ಇದು ಸರ್ವವ್ಯಾಪ್ತಿಯಾಗಿದೆ. ಒಂದೊಂದು ಸಂದರ್ಭದಲ್ಲಿ ಮಳೆ ಬೆಳೆ ಆಗದೇ ಇದ್ದರೂ ಕೂಡ ಅದೂ ಕೂಡ ಸರ್ಕಾರದ ಜವಾಬ್ದಾರಿ ಎನ್ನುವ ಮಾತನ್ನು ಆಡುತ್ತಾರೆ. ಇಂತಹ ಒಂದು ದೊಡ್ಡ ಜವಾಬ್ದಾರಿಯನ್ನು ನಿರ್ವಹಣೆ ಮಾಡುವುದು ಒಂದು ಕಡೆ, ಮತ್ತೊಂದು ಕಡೆ ನಮ್ಮ ದೇಶದ ಸಾಮಾಜಿಕ ಪರಿಸ್ಥಿತಿಯನ್ನು ತೆಗೆದುಕೊಳ್ಳೋಣ. ಈ ಸಾಮಾಜಿಕ ಪರಿಸ್ಥಿತಿಯ ವಸ್ತುಸ್ಥಿತಿ ಹೇಗೆ ಇದೆ ಎಂದರೆ ಬೇರೆ ದೇಶದಲ್ಲಿ ಜಾತಿಭೇದ ಇರಬಹುದು ಮತಭೇದಗಳು ಇರಬಹುದು, ಆದರೆ ನಮ್ಮ ಭಾರತ ದೇಶದಲ್ಲಿ ಇರತಕ್ಕಂಥ ಜಾತಿಜಾತಿಯಲ್ಲಿ ಒಳ ಜಾತಿಗಳು ಈ ರೀತಿ ಇವೆ. ಈ ಒಂದು ಸಮಾಜದಲ್ಲಿ ಒಬ್ಬರಿಗೊಬ್ಬರಿಗೆ ಎಷ್ಟು ದೂರ ಇರಬೇಕೋ ಅಷ್ಟು ಛಿದ್ರ ಛಿದ್ರ ಮಾಡಿ ಇಟ್ಟಿದ್ದಾರೆ. ಇದು ಸಾವಿರಾರು ವರ್ಷಗಳಿಂದ ಬಂದಿರತಕ್ಕಂಥ ಪದ್ಧತಿ. ಇದನ್ನು ಹೋಗಲಾಡಿಸಬೇಕಾದರೆ ನಮ್ಮ ದೇಶದಲ್ಲಿ ಸೆಕ್ಯೂಲರಿಸಮ್ ತರಬೇಕು. ಆದರೆ ಈ ಒಂದು ಸಂದರ್ಭದಲ್ಲಿ ಆ ಬಗ್ಗೆ ಎಷ್ಟೇ ಪ್ರಯತ್ನ ಪಟ್ಟರೂ ಅದು ಆಗುವಂತೆ ತೋಚುವ ಹಾಗಿಲ್ಲ. ಅದು ಪ್ರಾರಂಭದಿಂದಲೂ ಕೂಡ ಬೆಳೆದುಬಂದು ಈಗ ಅದು ಇನ್ನೂ ಹೆಚ್ಚಾಗಿ ಬೆಳೆದುಬಂದಿದೆ. ಆದುದರಿಂದ ಅದನ್ನು ಈ ಸಂವಿಧಾನದಲ್ಲಿ ತರುವುದಕ್ಕೆ ಒಳಗಡೆ ಏನೇ ಪಂಗಡಗಳು ಇದ್ದರೂ ಕೂಡ ಹೊರಗಡೆಯಾದರೂ ಕೂಡ ಸೆಕ್ಯುಲರಿಸಮ್ ತರಬೇಕು ಎಂದು ಒಪ್ಪುವ ರೀತಿ ಬಂದಿದ್ದೇವೆ. ಆದರೆ ಅದನ್ನು ಜಾರಿಗೆ ತರುವಂಥ ಕ್ರಮ ಬಹಳ ಕಷ್ಟತರವಾದುದು. ಯಾರು ಈ ಒಂದು ಜವಾಬ್ದಾರಿಯಲ್ಲಿರುತ್ತಾರೋ ಅವರು ಯಾವುದಾದರೂ ಒಂದು ಜಾತಿಗೆ ಆಗಲಿ, ಯಾವುದೇ ಪಂಗಡಕ್ಕಾಗಲಿ ಸೇರಿರುತ್ತಾರೆ. ಆದರೆ ರಾಜಕೀಯದಲ್ಲಿ ಇರತಕ್ಕಂಥ ಒಂದು ಸ್ಟ್ರಕ್ಚರ್ ಒಳಗೆ ತನ್ನ ಗುಂಪು ಆಗಲಿ ಅಥವಾ ಯಾವುದೇ ಒಂದು ಜಾತೀಯ ಒತ್ತಡವನ್ನಾಗಲಿ ಪೂರ್ಣವಾಗಿ ಎದುರಿಸುವುದು ಬಹಳ ಕಷ್ಟತರವಾದ ವಿಚಾರ. ಇನ್ನೊಂದು ಕಡೆ ಇದನ್ನು ಆರ್ಥಿಕವಾಗಿ ನೋಡುವುದಾದರೆ ಜಾತಿಜಾತಿಯಲ್ಲೆ ಒಳಜಾತಿಗಳು ಒಂದು ಕಡೆ ಇದೆ. ಇನ್ನೊಂದು ಕಡೆ ಒಂದು ರೀಜನ್‌ನಲ್ಲಿ ಆ ಪ್ರದೇಶ, ಈ ಪ್ರದೇಶ ಆ ಭಾಗ, ಈ ಭಾಗ ಅಂತ ಇದೆ, ಮತ್ತೊಂದು ಕಡೆ ಭಾಷಾ ಭೇದ ಇದೆ, ಈ ರೀತಿ ಒಳಗೊಂಡಂಥ ಸಮಾಜದಲ್ಲಿ ಇನ್ನೊಂದು ಕಡೆ ತೀರಾ ಕಡು ಬಡವರು, ಅಜ್ಞಾನ ಉಳ್ಳಂಥವರ ಸಂಖ್ಯೆ ಬಹಳ ದೊಡ್ಡ ಪ್ರಮಾಣದಲ್ಲಿ ಇರತಕ್ಕಂಥಾದ್ದು ಇದೆ. ಅದೂ ಅಲ್ಲದೆ ಇತ್ತೀಚೆಗೆ ಕಾಮರ್ಸ್ ಅಂಡ್ ಇಂಡಸ್ಟ್ರೀಸ್‌ನಲ್ಲಿ ಟ್ರೇಡ್ ಮತ್ತು ವ್ಯಾಪಾರದಲ್ಲಿ ಬಹಳ ಬೇಗ ಒಂದೇ ರೀತಿಯಾದ ಕೆಲವೇ ಜನರು ಬೆಳೆಯುತ್ತಿದ್ದಾರೆ. ಆ ಜನರು ವಿಪರೀತವಾಗಿ ಹಣ ಸಂಪಾದನೆ ಮಾಡಿಕೊಂಡು ಹಣಗಾರರಾಗಿ ಒಂದು ಕಡೆ ಇರತಕ್ಕಂಥಾದ್ದು ಇದೆ. ಇಂಥ ಒಂದು

ಪರಿಸ್ಥಿತಿ ಸಮಾಜದಲ್ಲಿ ಇರುವಾಗ ನಾವು ನಮ್ಮ ಕಾರ್ಯ ಚಟುವಟಿಕೆಗಳನ್ನು ಮಾಡುತ್ತಾ ಇದ್ದೇವೆ. ಬಹುಶಃ ನನಗೆ ತಿಳಿಯುವುದು ವಿರೋಧ ಪಕ್ಷದ ನಾಯಕರನ್ನೊಳಗೊಂಡಂತೆ ಈ ವಿಷಯವನ್ನು ಅವರೂ ತಿಳಿದಿದ್ದಾರೆ ಎನ್ನುವುದು ನನ್ನ ನಂಬಿಕೆ. ಅದನ್ನು ಅರಿತೇ ಅವರು ಈ ಒಂದು ಜವಾಬ್ದಾರಿಯಾದಂಥ, ಟೀಕೆಗಳನ್ನು ಮಾಡಿದ್ದಾರೆ ಅಂತ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಜವಾಬ್ದಾರಿಯನ್ನು ಅವರು ಅರಿತಿಲ್ಲದೇ ಇರುವ ಪಕ್ಷಕ್ಕೆ ಅವರು ಮಾತನಾಡಿದ ಭಾಷೆಯ ಶೈಲಿ ಹಾಗೆ ಇರುತ್ತಿರಲಿಲ್ಲ. ಅವರೂ ಕೂಡ ಈ ಒಂದು ವರ್ಷದಲ್ಲಿ ನಡೆದಂಥ ವಿಷಯಗಳ ಬಗ್ಗೆ ಮಾತನಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಏತಕ್ಕೆಂದರೆ 1941ನೇ ಇಸವಿಯಿಂದ ಒಂದೇ ಸಮನೆ ಈ ಶಾಸನ ಸಭಾ ಸದಸ್ಯನಾಗಿ ಇರತಕ್ಕಂಥ ಒಂದು ಆಶ್ರಯ ನನಗೆ ಇದೆ. ಯಾವ ಒಂದು ಪರಿಸ್ಥಿತಿಯಲ್ಲೇ ಆಗಲಿ ಸತತವಾಗಿ ಈ ಶಾಸನ ಸಭೆಯಲ್ಲಿ ಮಂತ್ರಿಯಾಗಿ, ಸದಸ್ಯನಾಗಿ ಕೆಲಸ ಮಾಡಿಕೊಂಡು ಬಂದಿರುವುದರಿಂದ ನನ್ನ ಅನುಭವದ ಮೇಲೆ ಹೇಳುತ್ತೇನೆ. ಇದನ್ನು ಅವರೂ ಒಪ್ಪಿಕೊಳ್ಳುತ್ತಾರೆ. ಅವರಿಗೆ ಈಗ ಹೇಳುತ್ತೇನೆ, ಅವರು ವಿರೋಧಪಕ್ಷದ ನಾಯಕರಾಗಿ ಕೆಲಸ ಪ್ರಾರಂಭಮಾಡಿ ಒಂದು ವರ್ಷವಾಗಿದೆ. ಈ ಒಂದು ವರ್ಷದಲ್ಲಿ ಅವರು ಹೆಚ್ಚು ಹೆಚ್ಚು ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾ ಇದ್ದಾರೆ. ನಾನು ಯಾವುದನ್ನೂ ಕೂಡ ಹೇಳುವುದಕ್ಕೆ ಹಿಂತೆಗೆಯುವುದಿಲ್ಲ: ಅವರು ಏನು ಒಂದು ಜವಾಬ್ದಾರಿಯಿಂದ ಮಾತನಾಡಿದ್ದಾರೋ ಅದರಲ್ಲಿ ಕೆಲವು ಟೀಕೆಗಳನ್ನು ಸ್ವಾಗತ ಮಾಡುತ್ತೇನೆ. ಇನ್ನೂ ಕೆಲವು ವಿಷಯಗಳನ್ನು ಅವರು ಹೇಳಿರತಕ್ಕಂಥಾದ್ದು ಅವರ ತಿಳುವಳಿಕೆಗೆ ಬಂದಂಥ ವಿಚಾರಗಳನ್ನು ಅವರು ತಿಳಿಸಿದ್ದಾರೆ. ಅದರಲ್ಲಿ ಯಾವುದು ಸರಿ, ಯಾವುದು ಸರಿಯಿಲ್ಲ ಎನ್ನುವುದನ್ನು ಸಾಧ್ಯವಾದಷ್ಟು ಹೇಳಬೇಕಾದುದು ನನ್ನ ಕರ್ತವ್ಯವಾಗಿದೆ. ಹಾಗೆಯೇ ಈ ಭಾಗದ ಮಾನ್ಯ ಸದಸ್ಯರನೇಕರು ಮಾತನಾಡಿದ್ದಾರೆ. ಅಲ್ಲೂ ಕೂಡ ಕೆಲವು ಅಧಿಕಾರಿಗಳ ಬಗ್ಗೆ ವ್ಯಕ್ತಿಶಃ ಹೇಳಿದ್ದಾರೆ. ಈ ವಿಚಾರದಲ್ಲಿ ಹೇಳುವ ಅಧಿಕಾರ ಇದೆ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ ನಮ್ಮಲ್ಲಿ ಒಂದು ಸಂಪ್ರದಾಯವನ್ನು ಇಟ್ಟುಕೊಂಡು ಬರುವುದು ಒಳ್ಳೆಯದು ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಏನೆಂದರೆ ಅಧಿಕಾರಿಗಳ ಹೆಸರು ಹಿಡಿದು ಹೇಳಬೇಕು ಅಂತ ಅವರು ಮನಸ್ಸು ಮಾಡಿದರೆ ಅದು ಅವರಿಗೆ ಸರಿ ಎನ್ನುವುದಾದರೆ ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ನಾನೂ ಕೂಡ ಅದಕ್ಕೆ ಅದರಲ್ಲಿ ಎಷ್ಟು ಸರಿ ಇದೆಯೋ, ಎಷ್ಟು ಸರಿ ಇಲ್ಲವೋ ಅನ್ನುವುದನ್ನು ಹೇಳಬೇಕಾಗುತ್ತದೆ. ಜೊತೆಗೆ ಅವರು ಏನೂ ತೋಚದೆ ತಪ್ಪು ಮಾಡಿದ್ದಾರೆ ಅದನ್ನು ಪೂರ್ವಭಾವಿಯಾಗಿ ತಿಳಿಸಿ. ಕೆಲವು ವಿಷಯಗಳು ಪೂರ್ಣವಾಗಿ ಗೊತ್ತಿಲ್ಲದೇ ಇರುತ್ತದೆ. ಪೂರ್ಣವಾಗಿ ಗೊತ್ತಿಲ್ಲದೇ ಇರುವಂಥ ವಿಚಾರದ ಮೇಲೆ ಅವರು ಟೀಕೆ ಮಾಡಿದರೆ ಅದು ಸರಿಹೋಗುವುದಿಲ್ಲ. ಅದನ್ನು ಅವರು ಒಪ್ಪುತ್ತಾರೆಂದು ನಾನು ನಂಬಿದ್ದೇನೆ. ಪೂರ್ಣವಾಗಿ ತಿಳಿಯುವುದಕ್ಕೆ ಪ್ರಯತ್ನಪಡುವಾಗ ಅದಕ್ಕೆ ನಾನೂ ಕೂಡ ತಮಗೆ ಒಂದು ಭರವಸೆಯನ್ನು ಕೊಡುತ್ತೇನೆ. ನಾವು ಯಾವುದನ್ನೂ ಮುಚ್ಚಬೇಕಾದ ಅಗತ್ಯವಿಲ್ಲ. ನಾವು ಯಾವುದೇ ಅಧಿಕಾರಿಗಳನ್ನಾಗಲಿ ಸರ್ಕಾರ ಅವರನ್ನು ಬೆಂಬಲಿಸಬೇಕು, ಅವರು ತಪ್ಪನ್ನು ಮಾಡಿದರೆ ಅದನ್ನು ಮರೆಮಾಚಬೇಕು ಅಂತ ಏನೂ ಇಲ್ಲ. ಹಿಂದೆ ಯಾರು ಯಾರು ಯಾವ ಯಾವ ಪದ್ಧತಿಯನ್ನು ಮಾಡಿಕೊಂಡು ಬಂದಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಸುವುದು ಈಗ ಅಗತ್ಯವಿಲ್ಲ. ಅವರು ಯಾರೇ ಆಗಲಿ ತಪ್ಪು ಮಾಡಿದ್ದರೆ ಅಂಥಾ ಅಧಿಕಾರಿಯನ್ನು ತಪ್ಪಿತಸ್ಥರು ಎಂದು ಹೇಳಬೇಕು, ಅವರಿಗೆ ನಾವು ಯಾವ ರೀತಿ ಕಾನೂನು ಪ್ರಕಾರ ಪ್ರಾಯಶ್ಚಿತ್ತ ಮಾಡಬೇಕೋ ಅದು ಮಾಡಲೇ ಬೇಕು. ಆದುದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಹೇಳುತ್ತೇನೆ. ವಿನಾಕಾರಣ ಕೆಲಸ ಮಾಡುತ್ತಾ ಇದ್ದಂಥಾವರನ್ನು ಅವರ ವಿಷಯದಲ್ಲಿ ಪೂರ್ಣವಾಗಿ ಅರಿಯದೆ ಸುಮ್ಮನೆ ಬರೇ ಟೀಕೆ ಮಾಡುವುದಾಗಲಿ, ಅಥವಾ ಅವರನ್ನು ತಾತ್ಸಾರ ಮನೋಭಾವದಿಂದ ಕಾಣುವುದಾಗಲಿ ಮಾಡಿದರೆ ಅವರ ಮನಸ್ಸಿಗೆ ಎಷ್ಟು ನೋವು ಉಂಟಾಗಬಹುದು, ಅವರ ಬಗ್ಗೆ ಹೀಯಾಳಿಕೆ ಮಾತನಾಡಿದರೆ ಏನು ಪರಿಣಾಮ ಆಗುತ್ತದೆ

ಎನ್ನುವುದನ್ನು ಯೋಚನೆ ಮಾಡಿ. ಅಂಥಾವರು ಮನಸ್ಸಿಗೆ ಏನು ಅಂದುಕೊಂಡಾರು. ಅವನು ನಿಷ್ಠಾವಂತನಾಗಿ ಚೆನ್ನಾಗಿ ಕೆಲಸ ಮಾಡುತ್ತಿದ್ದರೂ ಕೂಡ ಆ ಬಗ್ಗೆ ಒಳ್ಳೆಯ ಮಾತುಗಳನ್ನು ಆಡದೇ ಹೋದರೂ ಸಹ ನಿಂದನೆ ಮಾತನಾಡುವುದಾದರೆ ಆ ಮನುಷ್ಯನಲ್ಲಿ ಒಂದು ರೀತಿ ಮನೋಭಾವ ಬಂದು ಚೆನ್ನಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಒಬ್ಬ ಮನುಷ್ಯ ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಾ ಇದ್ದಾಗ ಅವನನ್ನು ನಿಂದನೆ ಮಾಡಿದರೆ ಅವನು ನಿಷ್ಪಕ್ಷಪಾತವಾಗಿ ಕೆಲಸ ಮಾಡುವುದಕ್ಕೆ ಹಿಂಜರಿಯಬಹುದು. ಈ ಒಂದು ಪರಿಸ್ಥಿತಿಯನ್ನು ಎಲ್ಲರೂ ಗಮನಿಸಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದು ಯಾವ ಪಕ್ಷಕ್ಕೇ ಆಗಲಿ ಅದು ನಮ್ಮೆಲ್ಲರ ಒಂದು ದೊಡ್ಡ ಜವಾಬ್ದಾರಿ. ಇನ್ನೊಂದು ಮುಖ್ಯವಾದ ವಿಚಾರ ಏನೆಂದರೆ ಅಧಿಕಾರಿಗಳ ಕಾರ್ಯವನ್ನು ನಾವು ನೋಡುತ್ತಾ ಇರುವಾಗ, ಅವರ ಬಗ್ಗೆ ನಾವು ಟೀಕೆ ಮಾಡುವಾಗ ನಾವು ಗಮನದಲ್ಲಿಟ್ಟುಕೊಳ್ಳಬೇಕಾದ ವಿಷಯ ಏನೆಂದರೆ ಇಲ್ಲಿ ಅಮೇರಿಕಾ ಡೆಮಾಕ್ರಸಿ ಸಿಸ್ಟಂ ಪ್ರಕಾರ ಇಲ್ಲಿ ಇಲ್ಲ. ಅಲ್ಲಿ ಪ್ರೆಸಿಡೆಂಟ್‌ರು ಚುನಾಯಿತರಾಗಿ ಬಂದ ಮೇಲೆ ಅವರು ತಮಗೆ ಬೇಕಾದವರನ್ನು ಕೀಪೋಸ್ಟ್‌ನಲ್ಲಿ ಇಟ್ಟುಕೊಳ್ಳುತ್ತಾರೆ, ನಂತರ ಅವರು ಹೋಗುವಾಗ ಅವರು ಹಾಗೆಯೇ ಹೊರಟು ಹೋಗುತ್ತಾರೆ. ಅವರ ಸಿಸ್ಟಂ ಬೇರೆ. ಅದು ಇಲ್ಲಿ ಸರಿ ಹೋಗುವುದಿಲ್ಲ. ಇಲ್ಲಿ ಸಿಸ್ಟಂ ಬೇರೆ. ಆದರೆ ನಮ್ಮ ದೇಶದಲ್ಲಿ ಮಾತ್ರ ಇದಕ್ಕೆ ನೀವು ಏನು ಬೇಕಾದರೂ ಕರೆಯಿರಿ, ಬ್ಯೂರೋಕ್ರಸಿ ಎಂದಾದರೂ ಕರೆಯಿರಿ, ಅಧಿಕಾರಿಗಳ ವರ್ಗ ಎಂದಾದರೂ ಕರೆಯಿರಿ ಅವರನ್ನು ನಾವು ಪೂರ್ತಾ ಬಿಟ್ಟುಕೊಡುವುದಕ್ಕಾಗುವುದಿಲ್ಲ. ಆ ಮೆಷಿನರಿಯನ್ನು ನಾವು ಕೆಲಸದಿಂದ ತೆಗೆಯುವುದಕ್ಕಾಗುವುದಿಲ್ಲ. ಅವರನ್ನು ಕಿತ್ತು ಬೇರೆ ಯವರನ್ನು ಹಾಕಬೇಕು ಎನ್ನುವುದು ಅದು ಕಾನೂನಿನ ಚೌಕಟ್ಟಿನಲ್ಲಿ ಸಾಧ್ಯವಿಲ್ಲ.

ಮನೆಯಲ್ಲಿ ಗಂಡ ಹೆಂಡತಿಯರಿದ್ದ ಹಾಗೆ ಇತ್ತೀಚೆಗೇನೋ ಈ ಹಿಂದೂ ಲಾ ಅಮೆಂಡಾಗಿದೆ; ಈ ದಂಪತಿಗಳು ಒಬ್ಬರನ್ನೊಬ್ಬರು ಡೈವೋರ್ಸ್ ಮಾಡಬಹುದೆಂದು ಹೇಳಿದೆ. ಆದರೆ ಹಿಂದೆ ಇಂಥ ಪದ್ಧತಿ ಇರಲಿಲ್ಲ. ಈ ದಿವಸ ಇಂಥ ಒಂದು ಕಾನೂನಿದ್ದರೂ ಜನರು ಬಹಳ ದಿವಸಗಳಿಂದಲೂ ನಡೆದು ಬಂದಿರುವಂಥ ಒಂದು ಪದ್ಧತಿಯನ್ನು ಏಕಾಏಕಿ ಬದಲಾಯಿಸಲು ಒಪ್ಪುವುದಿಲ್ಲ. ಇದು ಪ್ರಾಚೀನ ಕಾಲದಿಂದಲೂ ಸಮಾಜದಲ್ಲಿ ಹೀಗೇ ಬೆಳೆದುಬಂದಿದೆ. ಆದುದರಿಂದ ಇದು ಒಂದು ಡೈವೋರ್ಸ್ ಮಾಡುವುದಕ್ಕೆ ಸಾಧ್ಯವಿಲ್ಲದಂಥ ಸಂಬಂಧ.

Hindu Law has made a provision for divorce. Now you can divorce your wife. Once the Hindu Marriage was so sacro sanct that it can never be dissolved. Similarly the politicians and bureaucrats have to move together. Even if Sri Arumugham were to become a Chief Minister, he can never get out of this and get away from this real situation. Supposing he wants to remove a set of officers, he can never do so.

ಈ ದಿವಸ ಅಧಿಕಾರಿಗಳನ್ನು ಕೆಲಸದಿಂದ ತೆಗೆಯಬೇಕಾದರೆ ಅದಕ್ಕೆ ಕಾನೂನಿದೆ. ಅದನ್ನು ಉಲ್ಲಂಘನೆ ಮಾಡಿ ಕೆಲಸದಿಂದ ತೆಗೆದರೆ ಅವರು ಕೋರ್ಟಿಗೆ ಹೋಗುತ್ತಾರೆ. ಅಂತೂ ಸಮಾಜದಲ್ಲಿ ಹೀಗೆ ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಬೆರೆತುಕೊಂಡೇ ಬರುತ್ತಿವೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಮಾತನಾಡುತ್ತ ಈ ಸಾಮಾಜಿಕ ನ್ಯಾಯ ಮತ್ತು ಅಧಿಕಾರಿಗಳಲ್ಲಿ ಅಗತ್ಯವಾಗಿ ಇರಬೇಕಾದ ದಕ್ಷತೆ ಮತ್ತು ಪ್ರಾಮಾಣಿಕತೆಗಳನ್ನು ಈ ಎರಡನ್ನೂ ಹೇಗೆ ಆಡಳಿತದಲ್ಲಿ ಸರಿದೂಗಿಸಿಕೊಂಡು ಹೋಗುತ್ತಾರೆಂದು ಕೇಳಿದ್ದಾರೆ.

ಇದಕ್ಕೆ ಉತ್ತರವನ್ನು ಹೇಳುವುದು ಅಷ್ಟು ಸುಲಭದ ಮಾತಲ್ಲ. ಇದಕ್ಕೆ ಆಳವಾಗಿ ಆಲೋಚನೆ ಮಾಡಬೇಕಾಗಿದೆ. ಆದರೆ ಆ ಮಾನ್ಯ ಸದಸ್ಯರೂ ಕೂಡ ಇದರ ಬಗ್ಗೆ ಅವರಲ್ಲಿ ಒಂದು ಸಲ್ಯೂಷನ್ ಇದೆ ಎಂಬುದಾಗಿ ಅವರೂ ಕೂಡ ಹೇಳಲಿಲ್ಲ. ಅವರು ಇದನ್ನು ಒಂದು ದೊಡ್ಡ ಸಮಸ್ಯೆ ಎಂದು ಹೇಳಿದ್ದಾರೆ. ಅದನ್ನು ನಾನೂ ಕೂಡ ಒಪ್ಪುತ್ತೇನೆ. ಅದನ್ನು ಆ ಮಾನ್ಯ ಸದಸ್ಯರು ಅರಿತುಕೊಂಡಿರುವುದು ಬಹಳ ಸಂತೋಷದ ವಿಷಯ. ನಾವು ಹೇಗಾದರೂಮಾಡಿ ಈ ಎರಡನ್ನೂ ಬ್ಯಾಲೆನ್ಸ್ ಮಾಡಿಕೊಂಡು ಕಾರ್ಯಾಚರಣೆ ನಡೆಸಲೇಬೇಕಾಗಿದೆ. ಆದರೆ ಇದರ ಬಗ್ಗೆ ಕಡ್ಡಾಯವಾಗಿ ಒಂದು ರೂಲನ್ನು ಮಾಡಿ ಗೆರೆ ಎಳೆದಂತೆ ಕೆಲಸ ಮಾಡುವುದಕ್ಕಾಗವುದಿಲ್ಲ. ಅದು ಬಹಳ ಕಷ್ಟ. It is a kind of art. ಬಣ್ಣ ಎಲ್ಲರ ಕೈಲೂ ಇರುತ್ತೆ. ಆದರೆ ಅದನ್ನು ಬಳಸಿ ಒಂದು ಸುಂದರ ಚಿತ್ರ ತಯಾರು ಮಾಡುವುದಕ್ಕೂ ಸಾಧ್ಯ, ಇಲ್ಲವೇ ಅದರ ಲಕ್ಷಣವನ್ನು ಕೆಡಿಸುವುದಕ್ಕೂ ಸಾಧ್ಯ. ಆದರೆ ಇದಕ್ಕೆ ಒಂದು ಪ್ರಿಲಿಮಿನರಿ ಟ್ರೈನಿಂಗ್ ಬೇಕು. ಅದು ಏನೆಂದರೆ 'ಟ್ರಯಲ್ ಅಂಡ್ ಎರರ್ ಮೆಥಡ್' ಅದು. ಅದರಿಂದ ಇದರಲ್ಲಿ ಬರತಕ್ಕ ಲೋಪದೋಷಗಳನ್ನು ತಿದ್ದಿ ಸರಿಮಾಡಿಕೊಂಡು ಕಾರ್ಯಾಚರಣೆ ಮಾಡಬೇಕಾಗಿದೆ. ನಾವು ಈ ಸರ್ವೀಸ್ ಮ್ಯಾಟರುಗಳಲ್ಲಿ ಮೊದಲು ಕ್ಲಾಸ್ ಫೋರನ್ನು ಬಿಟ್ಟು ಉಳಿದೆಲ್ಲಾ ನೌಕರಿಗಳನ್ನೂ ಪಿ. ಎಸ್. ಸಿ. ಮೂಲಕವೇ ಮಾಡುವಂತೆ ಒಂದು ಪ್ರಯತ್ನ ಮಾಡಿದೆವು, ಆದರೆ ಸರ್ಕಾರದ ಯಂತ್ರ ನಡೆಸಲು ಸಹಸ್ರಾರು ಜನರು ಬೇಕಾಗುತ್ತಾರೆ. ಅಷ್ಟು ಜನರನ್ನು ಅವರು ಏಕ ಕಾಲಕ್ಕೆ ಒದಗಿಸುವುದಕ್ಕೆ ಸಾಧ್ಯವಾಗದೆ ಹೋದುದರಿಂದ ಮತ್ತು ಅವರ ಸಲೆಕ್ಷನ್‌ನಲ್ಲೂ ಕೆಲವು ಲೋಪ ದೋಷಗಳಿದ್ದುದರಿಂದ ಅದನ್ನು ಬದಲಾಯಿಸಬೇಕಾಯಿತು. ಆ ಅಧಿಕಾರವನ್ನು ಡಿಸ್ಟ್ರಿಕ್ಟ್ ಕಮಿಟಿಗಳೆಂದು ಮಾಡಿ ಅವರಿಗೆ ಅಧಿಕಾರ ಕೊಡಲಾಯಿತು. ಅದೂ ಕೂಡ ಸರಿಹೋಗಲಿಲ್ಲ ಎಂದು ಮತ್ತೆ ಡಿವಿಜನಲ್ ಲೆವೆಲ್ ಕಮಿಟಿಗಳನ್ನು ಮಾಡಲಾಯಿತು. ಅದನ್ನೂ ಬದಲಾಯಿಸಿ ಈಗ ಡಿಪಾರ್ಟ್‌ಮೆಂಟಲ್ ಕಮಿಟಿಗಳೆಂದು ಮಾಡಿದೆ. ಇದನ್ನು ನಾವು ಈ 'ಟ್ರಯಲ್ ಅಂಡ್ ಎರರ್' ಪದ್ಧತಿ ಮೇಲೆ ಮಾಡುತ್ತಾ ಬಂದಿದ್ದೇವೆ. ಆದಾಗ್ಯೂ ಇನ್ನೂ ಕೆಲವರ ಮನಸ್ಸಿನಲ್ಲಿ ಈ ಹಿಂದುಳಿದ ಪಂಗಡಕ್ಕೆ ನ್ಯಾಯ ದೊರೆಯುವುದನ್ನು ನಿರ್ಧಾರ ಮಾಡಲು 1,200 ರೂಪಾಯಿಗಳ ವರಮಾನವುಳ್ಳ ಸಂಸಾರವನ್ನು 'ಹಿಂದುಳಿದ ಪಂಗಡ' ಎಂದು ಪರಿಗಣಿಸಿ ಅವರಿಗೆ ಸರ್ಕಾರಿ ನೌಕರಿಯಲ್ಲಿ ಪ್ರೈಯಾರಿಟಿ ಕೊಡಬೇಕೆಂದೂ, ಅಂಥಾ ಹುದ್ದೆಗಳ ಸಂಖ್ಯೆ ಶೇಕಡ 48ಕ್ಕೆ ಮೀರಿರಬಾರದೆಂದೂ ನಾವು ಇಲ್ಲಿ ತೀರ್ಮಾನ ಮಾಡಿದ್ದೇವೆ. ಆದರೆ ಮದ್ರಾಸಿನಲ್ಲಿ ಶೇಕಡ 49ಕ್ಕೆ ಇದನ್ನು ಫಿಕ್ಸ್ ಮಾಡಿದ್ದಾರೆ. ಆದರೆ ಸುಪ್ರೀಂ ಕೋರ್ಟಿನ ತೀರ್ಮಾನದ ಪ್ರಕಾರ ಇದನ್ನು ಶೇಕಡ 50 ಕ್ಕೆ ನಿಗದಿ ಮಾಡುವುದಕ್ಕಾಗುವುದಿಲ್ಲ. ಇನ್ನು ಈ ಶೇಕಡ 51 ರಲ್ಲಿ ಅವರು ಯಾವ ಜಾತಿಯವರಾದರೂ ಇರಲಿ, ಅವರಲ್ಲಿ ಮೆರಿಟ್ ಮತ್ತು ಎಫಿಷಿಯೆನ್ಸಿ ಇದ್ದವರನ್ನೆಲ್ಲಾ ನೌಕರಿಗೆ ತೆಗೆದುಕೊಳ್ಳಬಹುದೆಂದು ಸುಪ್ರೀಂ ಕೋರ್ಟಿನ ತೀರ್ಮಾನ ಇದೆ. ಆದರೆ ಈ ಶೇಕಡ 48 ಹುದ್ದೆಗಳೇನಿವೆ ಇವುಗಳನ್ನು ಭರ್ತಿ ಮಾಡುವಾಗ ಅಭ್ಯರ್ಥಿಗಳಲ್ಲಿ ಮೆರಿಟ್ ಇರಲಿ, ಇಲ್ಲದಿರಲಿ ಅವರಿಗೆ ಸಾಮಾಜಿಕ ನ್ಯಾಯ ದೊರಕಿಸಿ ಕೊಡಲೇಬೇಕು, ಅವರಿಗೆ ಸ್ಥಾನಗಳು ಸಿಕ್ಕಲೇ ಬೇಕು ಆದರೆ ಇದರಲ್ಲೂ ಕೂಡ ಇದೇ ಆಬ್‌ಸಲ್ಯೂಟಿಸಂ ಎಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ಇಷ್ಟೇ ಸರಿ ಎಂದು ಹೇಳಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಕೆಲವರಿಗೆ ಒಳ್ಳೆಯ ಅಕ್ಯಾಡಮಿಕ್ ಕ್ವಾಲಿಫಿಕೇಷನ್ ಇರುತ್ತದೆ, ಆತನು ಒಳ್ಳೆಯ ಪೆನ್‌ಮ್ಯಾನ್ ಕೂಡ ಆಗಿರುತ್ತಾನೆ. ಆದರೆ ಆತನಿಗೆ ಜನರಲ್ಲಿ ಮಿಕ್ಸಾಗಿ ಕೆಲಸ ಮಾಡಿಕೊಂಡು ಹೋಗತಕ್ಕ ಒಂದು ನ್ಯಾಕ್ ಇರುವುದಿಲ್ಲ. ಇಂಥವರನ್ನು ನಾವು ಒಬ್ಬ ತಾಶೀಲ್ದಾರನನ್ನಾಗಿ ಅಥವಾ ಒಬ್ಬ ಅಸಿಸ್ಟೆಂಟ್ ಕಮೀಷನರಾಗಿ ಇಲ್ಲವೇ ಡೆಪ್ಯುಟಿ ಕಮೀಷನರಾಗಿ ನೇಮಕ ಮಾಡಿದಾಗ ಅವರಲ್ಲಿ ಈ ಒಂದು ಎಗ್ಜಿಕ್ಯೂಟೀವ್ ಎಫಿಷಿಯೆನ್ಸಿ ಇಲ್ಲದೆ ಅವರು ತಮ್ಮ ಕೆಲಸದಲ್ಲಿ ಫೈಲಾಗುತ್ತಾರೆ. ಆದರೆ ಇನ್ನು ಕೆಲವು ಹಳ್ಳಿಜನರು ಅವರಿಗೆ ಪಟ್ಟಣದ ವಾಸಿಗಳ ಹಾಗೆ 70 ಪರ್ಸೆಂಟ್ 80 ಪರ್ಸೆಂಟ್ ನಂಬರುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದಿದ್ದರೂ ಅವರಲ್ಲಿ ಈ

ಎಗ್ಜಿಕ್ಯುಟೀವ್ ರಂಗಕ್ಕೆ ಬೇಕಾದ ಕೆಲವು ಎಬಿಲಿಟೀಸ್ ಇರುತ್ತವೆ. ಇಂಥ ಅಂಶಗಳನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಂಡು ಸುಪ್ರೀಂ ಕೋರ್ಟಿನವರು ಕೊಟ್ಟಿರತಕ್ಕ ತೀರ್ಪನ್ನೂ ಸಹಾ ಗಮನ ದಲ್ಲಿಟ್ಟುಕೊಂಡು ನಾವು ಈ ಸಾಮಾಜಿಕ ನ್ಯಾಯವನ್ನು ಈ 48 ಪರ್ಸೆಂಟ್ ಮತ್ತು 52 ಪರ್ಸೆಂಟುಗಳಲ್ಲಿ ಸರಿದೂಗಿಸಿಕೊಂಡು ಹೋಗಬೇಕಾಗಿದೆ.

ಇನ್ನು ಈ ಐ. ಎ. ಎಸ್. ಕೇಡರಿಗೆ ಬಂದರೆ, ಅನೇಕರು ಈ ಕೇಡರೇ ಬೇಡ ಎಂದು ಹೇಳು ತ್ತಾರೆ. ಆದರೆ ನಾವು ಇದಕ್ಕೂ ಮೊದಲು ಈ ಸಾಮಾಜಿಕ ನ್ಯಾಯ ಎಂದರೇನು ಎಂಬುದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ಸಾಮಾಜಿಕ ನ್ಯಾಯ—ಎಂದರೆ ಜನರಿಗೆ ಸರ್ಕಾರಿ ನೌಕರಿಗಳನ್ನು ಕೊಡುವುದೆಂದು ಅರ್ಥವೇ ? ಇವರಿಗೆ ಸರ್ಕಾರಿ ನೌಕರಿಗಳಲ್ಲಿ ಸ್ಥಾನ ದೊರಕು ವಂತೆ ಮಾಡಿದರೆ ಅಲ್ಲಿಗೆ ಎಲ್ಲಾ ಸಾಮಾಜಿಕ ನ್ಯಾಯವನ್ನು ನಾವು ಜನರಿಗೆ ದೊರಕಿಸಿ ಕೊಟ್ಟಂತಾ ಯಿತೇ ? ಹಿಂದೆ ಒಂದಾನೊಂದು ಕಾಲದಲ್ಲಿ ಈ ನೌಕರಿಗಳನ್ನು ದೊರಕಿಸಿ ಕೊಡತಕ್ಕದ್ದೇ ಒಂದು ದೊಡ್ಡ ಸಾಮಾಜಿಕ ನ್ಯಾಯ ಎಂದು ಪರಿಗಣಿಸುತ್ತಿದ್ದ ದಿನ ಇದ್ದಿತು. ಆದರೆ ಈಗ ಅದು ಕ್ರಮೇಣ ಮರೆಯಾಗುತ್ತಿದೆ. ಆದರೆ ಅದಿನ್ನೂ ಸಂಪೂರ್ಣವಾಗಿ ಮಾಯವಾಗಿಲ್ಲ. ಈ ದಿವಸ ನಮ್ಮ ರಾಜ್ಯದ ಬಡ್ಜೆಟ್ಟಿನಲ್ಲಿ ಅಂದರೆ 400 ಕೋಟಿ ರೂಪಾಯಿಗಳಲ್ಲಿ ಸರ್ಕಾರ ನಾಲ್ಕನೇ ಒಂದು ಭಾಗದಷ್ಟು ಹಣವನ್ನು ಈ ನೌಕರ ವರ್ಗಕ್ಕೆ ಖರ್ಚಮಾಡುತ್ತಿದ್ದಾರೆ, ಅಂದರೆ ಈ ದಿವಸ ಸರ್ಕಾರವೇ ಇದ್ದುದರಲ್ಲಿ ಒಬ್ಬ ಬಿಗ್ಗೆಸ್ಟ್ ಎಂಪ್ಲಾಯರ್ ಹೌದು, ಆದ್ದರಿಂದ ಜನರು ಇತ್ತಕಡೆಗೆ ವಾಲತಕ್ಕದ್ದು ಸ್ವಾಭಾವಿಕ, ಅವರಿಗೆ ಇದರಲ್ಲಿ ಸಾಮಾಜಿಕ ನ್ಯಾಯ ದೊರೆತರೆ ಇನ್ನುಳಿದ ಎಲ್ಲಾ ಅಭಿವೃದ್ಧಿ ಕಾರ್ಯಗಳಲ್ಲೂ ಅವರಿಗೆ ಸಾಮಾಜಿಕ ನ್ಯಾಯ ದೊರೆಯಿತೆಂದು ಹೇಳುವುದಕ್ಕಾಗುವುದಿಲ್ಲ. ಹಾಗೆ ಸರ್ಕಾರಿ ನೌಕರಿಗಳನ್ನು ಹಂಚತಕ್ಕದ್ದೇ ಒಂದು ಸಾಮಾಜಿಕ ನ್ಯಾಯವೆಂದು ಭಾವಿಸುವುದಾದರೆ, ಈ ದಿವಸ ಈ ನೌಕರಿಗಳನ್ನು ಜನಸಂಖ್ಯೆಯ ಆದಾರದ ಮೇಲೆ ಇಂತಿಂಥ ಜಾತಿಗೆ ಇಷ್ಟಿಷ್ಟು ಎಂದು ಹಂಚಿಹಾಕಬಹುದು. ಅಲ್ಲಿಗೆ ಮುಗಿಯಿತು. ಆದರೆ ಈ ಸಾಮಾಜಿಕ ನ್ಯಾಯ ಇಷ್ಟಕ್ಕೇ ಸರಿ ಎಂದು ಹೇಳುವುದಕ್ಕಾಗುವುದಿಲ್ಲ. ಈ ಎಲ್ಲ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಇದನ್ನು ಸರಿದೂಗಿಸಿಕೊಂಡು ಹೋಗುವುದರಲ್ಲಿದೆ ನಮ್ಮ ಜಾಣತನ. ಈ ದಿವಸ ಜನರ ಅನುಮಾನಗಳನ್ನು ಪರಿತ್ಯಾಗ ಮಾಡಲು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಎಂದು ಒಂದು ಸಮಿತಿಯನ್ನು ನೇಮಕ ಮಾಡಿದೆ. ಅದು ಏನೇ ಒಂದು ಸಿದ್ಧಾಂತವನ್ನು ರೂಪಿಸಿದರೂ ಅದನ್ನು ನಾಳೆ ಕೆಲವು ಜನರು ತಮ್ಮ ಅನುಕೂಲಕ್ಕಾಗೇ ಬಳ ಸುತ್ತಾರೆ. ಅದಕ್ಕಾಗಿಯೇ ಬ್ಯಾಕ್ ವರ್ಡ್ ಕ್ಲಾಸ್ ಕಮಿಷನ್ ಮಾಡಿರುವುದು. ಈ ಸಂಬಂಧದಲ್ಲಿ ಸುಪ್ರೀಂ ಕೋರ್ಟಿನ ಆಜ್ಞೆ ಬೇರೆ ಇದೆ, ಪರ್ಸೆಂಟೇಜ್ ಫಿಕ್ಸ್ ಮಾಡುವುದಿದೆ. ಯಾವ ರೀತಿ ಅಳತೆ ಮಾಡುವುದು, ಹೇಗೆ ಮಾಡಿದರೆ ಎಲ್ಲರಿಗೂ ನ್ಯಾಯ ದೊರೆಯುವುದು ಎಂಬುದು ಒಂದು ಸಮಸ್ಯೆಯಾಗಿದೆ. ಏನು ಮಾಡಬೇಕೆಂಬುದು ಸರಿಯಾಗಿ ಗೊತ್ತಾಗುವುದಿಲ್ಲ. ಜಾತಿಯ ಆಧಾರದ ಮೇಲೆ ಅವಲಂಬಿಸುವುದಕ್ಕಾಗುವುದಿಲ್ಲ, ಎಲ್ಲ ಜಾತಿಗಳವರಲ್ಲೂ ಮುಂದುವರೆದವರೂ ಮತ್ತು ಹಿಂದುಳಿದಿರುವವರೂ ಇದ್ದಾರೆ. ಆ ರೀತಿ ಮಾಡುವುದರಿಂದ ಸಾಕಷ್ಟು ಪ್ರಯೋಜನವಾಗುವುದಿಲ್ಲ. ಲಿಂಗಾಯಿತರು, ವಕ್ಕಲಿಗರು, ಬ್ರಾಹ್ಮಣರು ಮುಂತಾದ ಎಲ್ಲ ಜಾತಿಯವರಲ್ಲೂ ಮುಂದು ವರೆದವರೂ, ಹಿಂದುಳಿದಿರುವವರೂ ಇದ್ದಾರೆ. ಆದುದರಿಂದ ಜಾತಿ ಆಧಾರ ಬೇಡ, ಆದಾಯದ ಆಧಾರ ಇಟ್ಟುಕೊಂಡು ಮಾಡೋಣ ಎಂದು ಆ ರೀತಿ ತೀರ್ಮಾನಕ್ಕೆ ಬರಲಾಯ್ತು. ಆದನ್ನು ಅಳತೆಗೋಲಾಗಿ ಇಟ್ಟುಕೊಂಡು ಅದರ ಪ್ರಕಾರ ವ್ಯವಸ್ಥೆ ಮಾಡಲಾಯ್ತು. ಹರಿಜನ-ಗಿರಿಜನರು ವಿಶೇಷವಾಗಿ ಹಿಂದುಳಿದಿರುವುದರಿಂದ ಅವರಿಗೆ ಸ್ಪೆಷಲ್ಲಾಗಿ ಕೆಲವು ಹೆಚ್ಚಿನ ರಿಯಾಯಿತಿಗಳನ್ನು ಕೊಡಲಾಯ್ತು. ಅವರಲ್ಲಿ ಬಡವರ ಸಂಖ್ಯೆ ಜಾಸ್ತಿ. ಅಲ್ಲದೆ ಅಸ್ಪೃಶ್ಯತೆ ಬೇರೆ ಇದೆ. ಎಲ್ಲ ವಿಧದಲ್ಲೂ ಅವರು ಬಹಳ ಹಿಂದುಳಿದಿದ್ದಾರೆ. ಆದುದರಿಂದ ಅವರಿಗೆ ಪರ್ಸೆಂಟೇಜ್ ನಿಗದಿ

ಮಾಡಲಾಯ್ತು. ಇನ್ನು ಕೆಲವರಿದ್ದಾರೆ, ಅವರಲ್ಲಿ ವಿದ್ಯಾವಂತರು ಕಡಿಮೆ, ಕುಂಬಾರರು ಮಡಕೆ ಮಾಡುವರು, ಅವರಿಗೆ ಮಣ್ಣು ಮತ್ತು ಮಡಕೆ ಮಾಡಲು ಉಪಯೋಗಿಸುವ ಚಕ್ರವೇ ಆಸ್ತಿ. ಗಾಣಿಗರಿದ್ದಾರೆ, ಅವರು ಎಣ್ಣೆ ಮಾಡುವರು, ಅವರೂ ಬಹಳ ಹಿಂದುಳಿದಿದ್ದಾರೆ. ಅವರಲ್ಲೂ ಒಬ್ಬಿಬ್ಬರು ಅನುಕೂಲಸ್ಥರಿರಬಹುದು, ಬಡವರ ಸಂಖ್ಯೆ ಜಾಸ್ತಿ. ಹೆಚ್ಚು ಆದಾಯವಿರುವವರಿಗೇನೂ ತೊಂದರೆಯಿಲ್ಲ. ಅನೇಕರಿಗೆ ಮನೆಯಿಲ್ಲ, ಆಸ್ತಿಯಿಲ್ಲ, ದುಡಿದು ಸಂಪಾದಿಸಿ ಜೀವನ ಸಾಗಿಸಬೇಕು. ಅವರು ಹಿಂದುಳಿದವರು, ಅವರಿಗೆ ನ್ಯಾಯ ದೊರೆಯಬೇಕು. ಅವರಿಗೆ ವಿದ್ಯೆಯಿಲ್ಲ, ಕೆಲಸ ಸಿಕ್ಕುವುದಿಲ್ಲ. ಇಂಥವರು ಕೆಲವರಿದ್ದಾರೆ. ಹೀಗಿರುವಾಗ ಇಂಡಿಯಾ ದೇಶದಲ್ಲಿ ಹಿಂದುಳಿದಿರುವವರು ಯಾರು ಮುಂದುವರೆದವರು ಯಾರು ಎಂದು ಹೇಳುವುದು ಕಷ್ಟ. ಹಿಂದುಳಿದವರಿಗೆ ಸಹಾಯ ಮಾಡಲು ಕಾಕಾ ಕಾಲೇಲ್ಕರ್ ವರದಿ ಮುಂತಾದ ವರದಿಗಳು ಬೇರೆ ಇವೆ. ಈಗ ಮತ್ತೆ ಹಿಂದುಳಿದವರಿಗೆ ಸಹಾಯಮಾಡಲು ಬೆಳಕು ಚೆಲ್ಲುವಂತೆ ಮತ್ತೆ ಬ್ಯಾಕ್ ವರ್ಡ್ ಕ್ಲಾಸ್ ಕಮಿಷನ್‌ಮಾಡಿದೆ. ಸಾಮಾಜಿಕ ನ್ಯಾಯ ನೌಕರಿ,ವಿದ್ಯಾಭ್ಯಾಸ ಮುಂತಾದುವುಗಳಲ್ಲಿ ದೊರೆಯಬೇಕು. ವಿದ್ಯಾವಂತರಾದರೆ ಸ್ವಲ್ಪ ಮುಂದುವರೆಯಲು ಸಾಧ್ಯ. ಅನೇಕ ಗುಂಪುಗಳಿಗೆ ವಿದ್ಯಾಭ್ಯಾಸಮಾಡಲು ಅವಕಾಶವಾಗಿಲ್ಲ. ಈಗ ಪ್ರೈಮರಿ ವಿದ್ಯಾಭ್ಯಾಸ ಕಡ್ಡಾಯಮಾಡಿದೆ, ಇದು ಪೂರ್ಣವಾಗಿ ಯಶಶ್ವಿಯಾಗಿಲ್ಲ, ಕೆಲಮಟ್ಟಿಗೆ ಯಶಸ್ವಿಯಾಗಿದೆ ಎಂದು ಹೇಳಬಹುದು. ಹತ್ತು ಸಾವಿರ ಜನರಿಗೆ ಒಬ್ಬ ಗ್ರಾಜುಯೇಟ್ ಇರುವುದಿಲ್ಲ, ಇಂಥ ಪರಿಸ್ಥಿತಿ ಇದೆ, ಹೈಯರ್ ಎಜುಕೇಷನ್ ನೋಡಿದಾಗ ಇದು ಕಂಡುಬರುವುದು. ಈ ದೃಷ್ಟಿಯಿಂದ ಹೆಚ್ಚು ರಿಯಾಯಿತಿ ತೋರಿಸಲು ಸಾಧ್ಯವೇ ಎಂದು ನೋಡಬೇಕಾಗಿದೆ. ಇದು ಸಾಮಾಜಿಕ ನ್ಯಾಯ. ಹೀಗೆ ಸರಕಾರ ನ್ಯಾಯ ದೊರಕಿಸುವುದಕ್ಕೆ ಮತ್ತು ದಕ್ಷತೆ, ಪ್ರಾಮಾಣಿಕತೆ ಬೆಳೆಸುವುದಕ್ಕೆ ಪ್ರಯತ್ನಮಾಡುತ್ತಿದೆ. ಶ್ರೀ ದೇವೇಗೌಡರು ಹೇಳಿದಹಾಗೆ ಇದು ಬಹಳ ಕಠಿಣವಾದ ಕೆಲಸ ಎಂಬುದನ್ನು ಒಪ್ಪುತ್ತೇನೆ. ಆದರೂ ಮಾಡಬೇಕಾಗಿದೆ, ಬೇರೆಮಾರ್ಗವಿಲ್ಲ. ಇಂಥ ಕಠಿಣ ಸಮಸ್ಯೆ ಇದ್ದರೂ ಎಲ್ಲರೂ ಸೇರಿ ಸಮಸ್ಯೆ ಬಗೆಹರಿಸಬೇಕಾಗಿದೆ. ಇಡೀ ಸ್ಟ್ರಕ್ಚರ್ ಛೇಂಜ್ ಮಾಡಿದರೆ ಸರಿಹೋಗಬಹುದು. ಈ ಸ್ಟ್ರಕ್ಚರ್ ಬಿಡಬೇಕೆಂದು ಕೃಷ್ಣನ್ ಹೇಳುವರು. ಇರುವ ಸ್ಟ್ರಕ್ಚರ್ ಬದಲಾಯಿಸಬೇಕು, ನಿಜ, ಇದಕ್ಕೆ ವಿರೋಧವಿಲ್ಲ. ಪೊಲಿಟಿಕಲ್ ಸ್ಟ್ರಕ್ಚರ್ ಬದಲಾಯಿಸಬೇಕೆಂದು ಅವರು ಹೇಳುವರು, ಒಂದು ಕಾಲ ಬಂದಾಗ ಅದೂ ಆಗಬಹುದು. ಎಲ್ಲಾ ಕಾಲದಲ್ಲೂ ಹೀಗೇ ಇರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ :—ಆಗುತ್ತದೆ.

ಶ್ರೀ ಡಿ. ದೇವರಾಜ ಅರಸ್ :—ಆಗಲಿ. ಮನುಷ್ಯ ತನ್ನ ಸ್ವಶಕ್ತಿಯಿಂದ ಪ್ರಕೃತಿ ನಿಯಮವನ್ನು ಬದಲಾಯಿಸುವುದಕ್ಕೆ ಪ್ರಯತ್ನಮಾಡುತ್ತಾನೆ. ತನ್ನಷ್ಟಕ್ಕೆತಾನೇ ಬದಲಾವಣೆಯಾಗುವುದು ನಿಧಾನ, ಮನುಷ್ಯ ಪ್ರಯತ್ನವೂ ಸೇರಿದರೆ ವೇಗವಾಗಿ ಆಗುವುದು.

ಶ್ರೀ ಎಂ. ಎಸ್. ಕೃಷ್ಣನ್ :—ಅದನ್ನು ಮಾಡಿ ಎಂದು ಕೇಳುವುದು.

ಶ್ರೀ ಡಿ. ದೇವರಾಜ ಅರಸ್ :—ಬೇಜಾರು ಮಾಡಿಕೊಳ್ಳಬಾರದು, ಈಗ ನಾವು ಅಧಿಕಾರಕ್ಕೆ ಬಂದು ಒಂದು ವರ್ಷವಾಗಿದೆ, ಇನ್ನೊಂದು ವರ್ಷದಲ್ಲಿ ಸ್ವಲ್ಪ ಬದಲಾವಣೆಯಾಗುವುದು.

ಶ್ರೀ ಎಚ್. ಡಿ. ದೇವೇಗೌಡ :—ಹಿಂದೆ ಕೆಲವರು ಮಂತ್ರಿಗಳು ತಮಗೆ 250 ರೂಪಾಯಿ ಸಂಬಳ ಸಾಕು, ಸೈಕಲ್‌ಮೇಲೆ ತಿರುಗಿ ಕೆಲಸ ಮಾಡುತ್ತೇವೆ ಎಂದು ಹೇಳಿರುವುದೂ ಇದೆ. ಏನು ಮಾಡುವರೆಂಬುದನ್ನು ನೋಡೋಣ.

ಶ್ರೀ ಡಿ. ದೇವರಾಜ ಅರಸ್ :—ಬದಲಾವಣೆಯಾಗುವುದೆಂಬ ನಂಬಿಕೆ ಇದೆ. ಮಾನಸಿಕವಾಗಿ ಕೆಲವು ಬದಲಾವಣೆಯಾಗುವುದು. ಯಾರನ್ನೂ ಪಕ್ಷ ಬಿಟ್ಟು ನಮ್ಮ ಕಡೆ ಬರುತ್ತಾರೆಂದು ಹೇಳುತ್ತಿಲ್ಲ. ಪುಟ್ಟಸ್ವಾಮಯ್ಯನವರು ಏನೋ ಒಂದು ರೀತಿ ನೋಡುತ್ತಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ನಿಮ್ಮಿಬ್ಬರ ನ ೦ ಟ ಸ್ತ ನ ನಡೆಯುತ್ತಿದೆ, ನಾನು ನೋಡುತ್ತಿದ್ದೇನೆ, ವಿಜಿಲೆಂಟಾಗಿ ವಾಚ್ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :—ಏನೋ ಸೂಚನೆ ಇರುವ ಹಾಗೆ ಕಾಣುತ್ತಿದೆ.

ಶ್ರೀ ಡಿ. ದೇವರಾಜ ಅರಸ್ :—ನೀವು ಸ್ವಲ್ಪ ಎಚ್ಚರಿಕೆಯಿಂದಿರಿ. ಐ. ಎ. ಎಸ್. ವಿಚಾರ ಹೇಳಿದರು. ಈಗ ಇಷ್ಟು ಹೇಳಬಲ್ಲೆ. I. A. S. has come to stay. ಇದನ್ನು ತೆಗೆಯಬೇಕೆಂಬ ಅಭಿಪ್ರಾಯವಿದೆ. ಏಕೆ? ಯಾವುದಾದರೂ ಒಂದು ವರ್ಗಕ್ಕೆ ಅಥವ ಜಾತಿಗೆ ಇದರಿಂದ ಹೆಚ್ಚು ಕೆಲಸ ಸಿಕ್ಕುತ್ತದೆ ಎಂಬ ಅಭಿಪ್ರಾಯವಿರಬಹುದು. ಆದುದರಿಂದ ಕೆಲವರು ಗ್ರೇಪ್ಸ್ ಆರ್ ಸವರ್ ಎಂಬ ರೀತಿಯಲ್ಲಿ ಹೇಳಬಹುದು. ನರಿ ಕಥೆ ಕೇಳಿರಬಹುದು. ಅದು ದ್ರಾಕ್ಷಿ ತೋಟಕ್ಕೆ ಹೋಗಿ ದ್ರಾಕ್ಷಿ ದೊರೆಯದೆ ಎತ್ತರದಲ್ಲಿದ್ದುದರಿಂದ ಎಗರಿ ಸಾಕಾಗಿ ಅದು ಹುಳಿ ಎಂದು ಸುಮ್ಮನಾಯ್ತಂತೆ. ಹಾಗೆ ಅವಕಾಶ ದೊರೆಯದಿರುವವರು ಹೇಳುವುದುಂಟು. ಈ ಒಂದು ಸೈಕಾಲಜಿ ಡೆವಲಪ್ ಆಗಿದೆ.

ಶ್ರೀ ಕಾಗೋಡು ತಿಮ್ಮಪ್ಪ :—ಐ. ಎ. ಎಸ್. ಬೋರ್ಡ್ ಇದೆ, ಅದು ಚುನಾವಣೆ ಮಾಡುವುದು. ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್‌ನ ವರ್ಚಸ್ಸೇನು ಎಂದು ಆಳತೆಮಾಡಿ.

ಶ್ರೀ ಡಿ. ದೇವರಾಜ ಅರಸ್ :—ವಿಪರೀತಕ್ಕೆ ಹೋಗಬಾರದು, ವರ್ಚಸ್ ಬದಲಾವಣೆ ಆಗುತ್ತದೆ. ಸುಪ್ರೀಂ ಕೋರ್ಟು ಬಗ್ಗೆ ಬೇಕಾದಷ್ಟು ಟೀಕೆ ಇತ್ತು, ಚೀಫ್ ಜಸ್ಟೀಸ್ ನೇಮಕದ ಬಗ್ಗೆ ಕೆಲವರು ಸರಿ ಎಂದು ಹೇಳುತ್ತಾರೆ, ಕೆಲವರು ತಪ್ಪು ಎಂದು ಹೇಳುತ್ತಾರೆ. ನೀವು ಯಾರೇ ಇರಲಿ, ನಿಮ್ಮ ಕಾಲಕ್ಕೆ ಒಬ್ಬರನ್ನು ನೇಮಕ ಮಾಡಿದಾಗ, ಇದು ಎಂಥ ವರ್ಚಸ್ ಎಂದು ಮಾತನಾಡುವವರು ಇರುತ್ತಾರೆ. There are certain matters which you cannot go on raising objections or probing into. You will have to leave it at that. ಏನು ಮಾಡಿದ್ದಾರೆ ಅದನ್ನು ಒಪ್ಪಿಕೊಳ್ಳೋಣ. ಈ ಸಂದರ್ಭದಲ್ಲಿ ನನಗೆ ಹಿಂದಿನ ಮಾತು ಜ್ಞಾಪಕಕ್ಕೆ ಬರುತ್ತದೆ, ನದಿ ಮೂಲ, ಋಷಿ ಮೂಲ ಮತ್ತು ದೈವ ಮೂಲ, ಇವುಗಳನ್ನು ನಾವು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್.ವೈ. ಪಾಟೀಲ್ :—ಸರ್ಕಾರದ ಮೂಲ.

ಶ್ರೀ ಡಿ. ದೇವರಾಜ ಅರಸ್ :—ನಿಮ್ಮ ಮೂಲ, ನನ್ನ ಮೂಲ ಎಲ್ಲವೂ ಇದೆ. ಆದ್ದರಿಂದ ವಿಷಯದ ವಿಪರೀತಕ್ಕೆ ಹೋಗಿ ಹಿಡಿಯುವುದಕ್ಕೆ ಹೋದರೆ ಒಂದೊಂದು ಸಾರಿ ವಿಪರೀತ ಕಷ್ಟ ವಾಗುತ್ತದೆ, ಮಹಾಭಾರತದ ಕಥೆ ಆದ ಹಾಗೆ ಆಗುತ್ತದೆ. ಇಲ್ಲಿ ಮೂಲಕ್ಕೆ ಹೋಗಿ ಹಿಡಿಯು ವುದು ಬೇಡ. ಯೂನಿಯನ್ ಪಬ್ಲಿಕ್ ಸರ್ವೀಸ್ ಕಮಿಷನ್ ಇದೆ, ನೀವು ಇದ್ದರೆ ಅದನ್ನು ತೆಗೆದುಹಾಕುತ್ತೀರಾ ? You may change the persons but the institution will not change. ನೀವು ಯಾರನ್ನು ಅಲ್ಲಿಗೆ ಹಾಕುತ್ತೀರೋ ಅವರನ್ನು ಇನ್ನೊಬ್ಬರು ಸರಿಯಲ್ಲ ಎಂದು ಹೇಳಬಹುದು. Suppose a man is very forward looking, the country say he is a leftist, communist and so on. But it is not a proper judgement. ಈಗ ಕುಮಾರಮಂಗಳಂ

ಅವರ ಸಲಹೆಯಿಂದ ಇದನ್ನು ಮಾಡಿದ್ದಾರೆ ಎಂದು ಹೀಗೆ ಹೇಳುತ್ತಾ ಇಲ್ಲವೇ ? ಯಾರೊಬ್ಬರ ಮಾತನ್ನೂ ಅಕ್ಸೆಪ್ಟ್ ಮಾಡುವುದಕ್ಕಾಗುವುದಿಲ್ಲ, ಆಯಾ ಕಾಲಕ್ಕೆ ಯಾರು ಅಧಿಕಾರದಲ್ಲಿ ರುತ್ತಾರೋ ಅವರು ನಡೆಸಿಕೊಂಡು ಹೋಗುತ್ತಾರೆ. It is a continuous effort, which you cannot avoid. I did appreciate and admit it in the beginning. Having admitted it, you cannot say 'I won't do it.' You have got to do it. ಐ.ಎ.ಎಸ್. ಸರ್ವೀಸಸ್, ಇದು ಇರುವುದು ಸರಿಯೋ, ತಪ್ಪೋ ಎಂದು ಅನ್ನುವಾಗ ನಾವು ಅದನ್ನು ಸ್ವಲ್ಪ ವಿಚಾರಮಾಡೋಣ. ಕೆಲವರ ಮನಸ್ಸಿನಲ್ಲಿ, ಬಹಳ ಚಿಕ್ಕವರು ಅಧಿಕಾರಿಗಳಾಗಿ ಬರುತ್ತಾರೆ, ಚಿಕ್ಕ ಚಿಕ್ಕ ವಯಸ್ಸಿನಲ್ಲಿ ಡೆಪ್ಯೂಟಿ ಕಮೀಷನರ್ ಆಗುತ್ತಾರೆ. ಅನುಭವ ಕಡಿಮೆ ಇರುತ್ತದೆ ಎಂದು ಇದೆ. That is one defect. I too admit it. As a matter of fact I too went on saying...ಮಿನಿಮಂ 10 ವರ್ಷವಾದರೂ ಟ್ರೈನಿಂಗ್ ತೆಗೆದುಕೊಳ್ಳುವುದು ಒಳ್ಳೆಯದು ಎಂದು. ಆದರೆ ಈಗಿನ ಕಾಲದಲ್ಲಿ ಇವತ್ತಿನ ಪೀಳಿಗೆಗಳನ್ನು ತೆಗೆದುಕೊಂಡರೆ ಅವರು ನಮಗಿಂತ ಸ್ವಲ್ಪ ಬುದ್ಧಿವಂತರಾಗಿರುತ್ತಾರೆ. ನಮ್ಮ ಮನೆಯ ಮಕ್ಕಳು ನಮಗಿಂತ ಸ್ವಲ್ಪ ಬುದ್ಧಿವಂತರಿರುತ್ತಾರೆ. ಚಿಕ್ಕವಯಸ್ಸಿನಲ್ಲಿ ನಾವು ಪಾಠ ಕಲಿಯುವಾಗ ನಮಗೆ ಇಷ್ಟು ಚುರುಕು ಬುದ್ಧಿ ಇರಲಿಲ್ಲ. ನಿಮಗೆ ಇದ್ದಿದ್ದರೆ ಬೇಜಾರು ಮಾಡಬೇಡಿ, ನನಗೆ ಇರಲಿಲ್ಲ. ಈಗ 22 ವರ್ಷಕ್ಕೆ ಎಂ.ಎ. ಪಾಸ್ ಮಾಡುತ್ತಾರೆ. ಐ.ಎ.ಎಸ್. ಪರೀಕ್ಷೆಗೆ ಕೂತುಬಿಡುತ್ತಾರೆ. ಐ.ಎ.ಎಸ್.ನಲ್ಲಿ ತೇರ್ಗಡೆ ಹೊಂದಿರುತ್ತಾರೆ. ಅಲ್ಲದೆ ಅವರು ಫಸ್ಟ್‌ಕ್ಲಾಸ್‌ನಲ್ಲಿ ಪಾಸ್ ಮಾಡಿರುತ್ತಾರೆ. ಅಂಥವರಿಗೆ ಮೂರು ವರ್ಷ ಟ್ರೈನಿಂಗ್ ಕೊಟ್ಟು ನಾಲ್ಕನೆಯ ವರ್ಷಕ್ಕೆ ಡೆಪ್ಯೂಟಿ ಕಮೀಷನರ್ ಮಾಡುತ್ತಾರೆ, ನನ್ನ ಅನುಭವದಲ್ಲಿ ಉತ್ತಮ ಪರೀಕ್ಷೆಯಲ್ಲಿ ಪಾಸ್ ಮಾಡಿದರೂ, ಕೆಲವಾರು ವರ್ಷ ವ್ಯವಹಾರಿಕ ಜ್ಞಾನ ಪಡೆಯುವ ದೃಷ್ಟಿಯಿಂದ ಅವರು ಇನ್ನೂ 8-10 ವರ್ಷ ಚೆನ್ನಾಗಿ ಆ ಫೀಲ್ಡ್‌ನಲ್ಲಿ ನುರಿಯಬೇಕು, ಆಗ ಅವನು ಡೆಪ್ಯೂಟಿ ಕಮೀಷನರ್ ಆದರೆ, ದಕ್ಷತೆಯ ಅಧಿಕಾರಿಯಾಗುತ್ತಾನೆ ಎಂದು ಹೇಳುವುದಕ್ಕೆ ನಾನೂ ಧ್ವನಿಗೂಡಿಸತಕ್ಕ ಮನುಷ್ಯ.

ಶ್ರೀ ಎಚ್.ಎಸ್. ಸಿದ್ದಪ್ಪ :—ಕಾರೆಗುಂಡಿಯಲ್ಲಿ ಚೆನ್ನಾಗಿ ಅರೆದರೆ ಸರಿಯಾಗುತ್ತಾರೆ.

ಶ್ರೀ ಡಿ. ದೇವರಾಜ ಅರಸ್ :—ಸಿದ್ದಪ್ಪನವರು ಅದನ್ನು ಹೇಳಬೇಕು, ಅವರಲ್ಲಿರತಕ್ಕ ಒಳ್ಳೆಯ ಗುಣಗಳನ್ನು ನಾವು ಯೋಚನೆ ಮಾಡೋಣ. ದೇಶದಲ್ಲಿ ಇನ್ನೂ ಇಂಟೆಗ್ರೇಷನ್ ಆಗಿಲ್ಲ ಎನ್ನುವುದು ನಾವು ನೀವು ದಿನಚರಿ ಅನುಭವದಲ್ಲಿ ನೋಡುತ್ತಾ ಇರತಕ್ಕ ವಿಚಾರ. ಒಂದು ಕಡೆ ಒಂದು ಲ್ಯಾಂಗ್‌ವೇಜ್ ಬಗ್ಗೆ ದೂರುತ್ತಾ ಇದ್ದೇವೆ, ತಮಿಳುನಾಡು ಎಂದರೆ ಕನ್ನಡಿಗರಿಗೆ ಆಗುವುದಿಲ್ಲ, ಕನ್ನಡಿಗರು ಎಂದರೆ ತಮಿಳುನಾಡಿಗೆ ಆಗುವುದಿಲ್ಲ, ಚಿತ್ರ ಪ್ರಪಂಚ, ಸಾಹಿತ್ಯ ಪ್ರಪಂಚ, ಯಾವುದನ್ನೂ ತೆಗೆದುಕೊಂಡರೂ ಇಂಥ ಘರ್ಷಣೆಗಳು ಇರುತ್ತವೆ. ಹಿಂದಿ ಭಾಷೆ ಮಾತನಾಡುವವರು ಹಿಂದಿ ಏರಿಯಾ ಎಂದು ಹೇಳುತ್ತಾರೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಂತರಗಳು ಇರುವಾಗಲೂ, ಸ್ವಾತಂತ್ರ್ಯ ಬಂದಮೇಲೆ ದೇಶ ಎಲ್ಲಾ ಒಂದೇ ಧ್ವಜದಡಿಯಲ್ಲಿ ನಿಂತು ಇದ್ದೇವೆ. ಒಂದು ಭಾಗ ಬಿಟ್ಟುಹೋಗಿದ್ದು ನನಗೆ ಗೊತ್ತಿಲ್ಲ; ದೇಶದ ಅಭಿವೃದ್ಧಿಯನ್ನು ಪ್ರಯತ್ನ ಮಾಡಿ ಸಾಧಿಸುವುದಕ್ಕೆ ಹೊರಟಿದ್ದೇವೆ, ಅದು ಪೂರ್ಣವಾಗಿಲ್ಲ, ಇನ್ನೂ ಕೂಡ ಡಿಸ್‌ರಪ್ಟೀವ್ ಫ್ಯಾಬ್ಲರ್ಸ್ ಇವೆ. ಆದ್ದರಿಂದ ಆಲ್ ಇಂಡಿಯಾ ಸರ್ವೀಸಸ್ ಮಾಡದೆ ಹೋಗಿದ್ದರೆ ಅವರು ಯಾರೂ ಇಲ್ಲಿಗೆ ಬರುವ ಪ್ರಶ್ನೆ ಇರಲಿಲ್ಲ. ಇನ್ನೂ ಒಂದು ಉತ್ತಮ ಗುಣ ಏನೆಂದರೆ, ಬರೀ ಭಾರತಕ್ಕೆ ಸೇರಿದವರು ಇರಬೇಕು ಎಂದು ಇದೆ. ಇದರಿಂದ ಒಂದುಕಡೆ ಇಂಟೆಗ್ರೇಷನ್ ಆಗತಕ್ಕದ್ದು ಇದೆ, ನಾವೆಲ್ಲರೂ ಭಾರತೀಯರು ಎನ್ನತಕ್ಕ ಭಾವನೆಯನ್ನು ಮೂಡಿಸುವುದಕ್ಕೆ ಇದು ಒಂದು ಹೆಜ್ಜೆ. ಎರಡನೆಯದು, ಇದಕ್ಕಿಂತ ಮುಖ್ಯವಾದದ್ದು, ಕಾರ್ಯ ಚಟುವಟಿಕೆಗಳು ನಡೆಯುವಾಗ ಯಾವುದಾದರೂ ಪ್ರಾಂತ್ಯದಿಂದ, ಉತ್ತರ ಪ್ರದೇಶದಿಂದ ಬಂದಿರತಕ್ಕ

ಅಧಿಕಾರಿ ಇದ್ದರೆ, ಅವರು ಲೋಕಲ್ ಪಾಲಿಟಿಕ್ಸ್‌ನಲ್ಲಿ ಮಿಕ್ಸ್ ಆಗುವ ಅಗತ್ಯ ಇರುವುದಿಲ್ಲ. ಇದನ್ನು ಒಂದು ಒಳ್ಳೆಯ ಗುಣ ಎಂದು ನಾವು ತಿಳಿಯಬೇಕಾಗುತ್ತದೆ. ಎಲ್ಲರನ್ನು ಒಂದು ದೃಷ್ಟಿಯಿಂದ ನೋಡತಕ್ಕ ಒಂದು ವಿಶೇಷವಾದಂಥ ಶಕ್ತಿ ಅವನಿಗೆ ಇರುವಂತೆ ನಮ್ಮ ಲೋಕಲ್ ಜನರಿಗೆ ಇರುವುದಿಲ್ಲ. 25 ವರ್ಷಗಳಲ್ಲಿ ಮುಂದೆ ಏನೇನು ಸಾಧ್ಯ ಎನ್ನುವುದನ್ನು ವಿಷ್ಯುಯಲೈಸ್ ಮಾಡಿ ನೋಡುವುದು ಕಷ್ಟವಾಗುತ್ತದೆ. ಅಡ್ಮಿನಿಸ್ಟ್ರೇಟಿವ್ ಸರ್ವೀಸಸ್ ಇರತಕ್ಕದ್ದು ಇಡೀ ಭಾರತದಲ್ಲಿ ಯಾವುದಾದರೂ ಒಂದು ಸಂದರ್ಭದಲ್ಲಿ ಡಿಸ್‌ರಪ್ಟೀವ್ ಫೋರ್ಸ್‌ಸ್, ಒಂದಕ್ಕೊಂದು ಇಂಟರ್ ರೀ ಆಕ್ಷನ್ಸ್ ಆಗುವುದಕ್ಕೆ ಶುರು ಆದಾಗ ಇವರು ಒಟ್ಟಾಗಿ ಹಿಡಿಯುವುದಕ್ಕೆ ಸೂತ್ರ ಇದ್ದ ಹಾಗೆ. ಇದನ್ನು ನಾವೆಲ್ಲರೂ ಗಮನಿಸಬೇಕು. ಎಲ್ಲವನೂ ಕೇಂದ್ರೀಕರಿಸಿಕೊಂಡು ಹಿಡಿಯುವ ಶಕ್ತಿ ಇವರ ಮುಖಾಂತರ ಕೇಂದ್ರ ಸರ್ಕಾರಕ್ಕೆ ಇರಬೇಕು ಎನ್ನುವುದು ಒಳ್ಳೆಯದು. ಭಾರತವನ್ನು ನಾವೆಲ್ಲರೂ ರಾಜಕೀಯ ಸ್ವಾತಂತ್ರ್ಯವಾಗಿ ಮಾಡ ಬೇಕು, ಇದನ್ನು ಅಭಿವೃದ್ಧಿಪಡಿಸಬೇಕು, ಒಂದುಗೂಡಿರಬೇಕು, ಇಷ್ಟೊಂದು ತ್ಯಾಗ ಮಾಡಿರತಕ್ಕ ದೇಶವನ್ನು ಯಾವುದೇ ಕಾರಣಕ್ಕೂ, ಯಾವುದಾದರೂ ಒಂದು ಸಂದರ್ಭದಲ್ಲಿ ಛಿದ್ರವಾಗುವುದಕ್ಕೆ ಅವಕಾಶಕೊಡಬಾರದು ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ ಎಂದು ನನ್ನ ಭಾವನೆ. ಆ ಒಂದು ಆಶೆಯನ್ನು ನಾನು ಇಟ್ಟುಕೊಂಡಿದ್ದೇನೆ. ಅದನ್ನು ಬೆಳೆಸಬೇಕಾದರೆ, ಇವೆಲ್ಲಾ ಒಂದೊಂದು ಹೆಜ್ಜೆ, ಒಂದೊಂದು ಸ್ಟೆಪ್, ಒಂದೊಂದು ಕಾರ್ಯಕ್ರಮ. ಈ ಕಾರ್ಯಕ್ರಮಗಳನ್ನು ಮಾಡಿ ನಾವು ದೇಶವನ್ನು ಬೆಳೆಸಬೇಕಾದದ್ದು ಇದೆ. ಈ ದೃಷ್ಟಿಯಿಂದ ಕೂಡ ಎಕ್ಸಾಮಿನೇಷನ್‌ನಲ್ಲಿ ಉತ್ತಮ ತರಗತಿಯಲ್ಲಿ ತೇರ್ಗಡೆ ಹೊಂದಿರತಕ್ಕವರಿಗೂ ಹೈಯರ್ ಸ್ಟಾಂಡರ್ಡ್ ಆಫ್ ಎಜುಕೇಷನ್ ಇರಬಹುದು, ತರಬೇತಿ ಇರಬೇಕು ಎನ್ನುವುದಕ್ಕೆ ಯಾರೂ ಒಪ್ಪುವುದಿಲ್ಲ ಎಂದು ಹೇಳುವುದಿಲ್ಲ. ಈ ಎಲ್ಲಾ ದೃಷ್ಟಿಯಿಂದ ಆಲ್ ಇಂಡಿಯಾ ಸರ್ವೀಸಸ್ ಏನು ಇದೆ, ಅದನ್ನು ನಾವು ಇಟ್ಟುಕೊಂಡು ಹೋಗತಕ್ಕದ್ದು ಸೂಕ್ತ. ಒಂದು ಸಾರಿ ಗವರ್ನ ಮೆಂಟ್ ಆಫ್ ಇಂಡಿಯಾದಲ್ಲಿ ನಾನು ಈ ಮಾತನ್ನು ಹೇಳಿದೆ. We should increase the period of what you call field training between the moment he is appointed till he becomes the Deputy Commissioner.

ಈಗ ಇರುವ ಪೀರಿಯಡ್ ಸಾಲದು ಎಂದು ನನ್ನ ಖಚಿತ ಅಭಿಪ್ರಾಯ ಹೇಳುತ್ತೇನೆ. ಸಂದರ್ಭ ಬಂದರೆ ಮತ್ತೆ ಹೇಳುವವನು ಇದ್ದೇನೆ. ಇದನ್ನು ಸಾಧ್ಯವಾದರೆ ಬದಲಾವಣೆ ಮಾಡಿ ಎಂದು ಹೇಳುವುದು ನನ್ನ ಆಶೆ.

ಈಗ ಅಡ್ಮಿನಿಸ್ಟ್ರೇಷನ್ ಬಗ್ಗೆ ನಮ್ಮ ರಾಜ್ಯದಲ್ಲಿ ಕೆಲವು ಲೋಪದೋಷಗಳು ಇವೆ. ಕೆಲಸ ನಿಧಾನವಾಗಿ ಆಗುತ್ತಿದೆ ಮತ್ತು ತಾಲ್ಲೋಕ್ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಕೆಲಸ ಕಾರ್ಯಗಳು ಸ್ಥಗಿತಗೊಳ್ಳುವ ಸಂದರ್ಭವಿದೆ ಎಂದೂ ಹೇಳಿದ್ದಾರೆ. ಇದನ್ನು ನಾವೆಲ್ಲರೂ ಮನಗೊಂಡಿರತಕ್ಕ ವಿಚಾರ. ಆದರೆ ಇದನ್ನು ಹೇಳುವಾಗ, ಇನ್ನೂ ಒಂದು ವಿಷಯವನ್ನು ನಾವೆಲ್ಲರೂ ಜ್ಞಾಪಿಸಿಕೊಳ್ಳಬೇಕು, ಅದರ ಕಡೆಗೆ ನಮ್ಮ ನೋಟ ಹರಿಸಬೇಕು. 10 ವರ್ಷಗಳ ಹಿಂದೆ ಕಾರ್ಯದ ಒತ್ತಡ ಎಷ್ಟು ಇತ್ತು ? 10 ವರ್ಷಗಳು ಕಳೆದ ಮೇಲೆ ಏನು ಆಯಿತು ಎನ್ನುವುದನ್ನು ಕೂಡ ನಾವು ಸ್ವಲ್ಪ ಗಮನದಲ್ಲಿಟ್ಟುಕೊಂಡು ನಾವು ಈ ಬಗ್ಗೆ ಟೀಕೆ ಮಾಡುವುದು ಉತ್ತಮ. ಹಾಗಿಲ್ಲದೆ ಹೋದರೆ ನಮ್ಮದು ಡಿಸ್ಟಾರ್ಟೆಡ್ ವರ್ಷನ್ ಆಗುತ್ತದೆ. ನಾವು ಸರಿಯಾದ ದೃಷ್ಟಿಯಿಂದ ನೋಡಿದ ಹಾಗೆ ಆಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಚೀಫ್ ಮಿನಿಸ್ಟರ್‌ರವರ ಆಫೀಸಿನ ಬಗ್ಗೆ ಹೇಳುವುದಾದರೆ ಒಂದು ವರ್ಷದಲ್ಲಿ 11 ರಿಂದ 12 ಸಹಸ್ರ ಕಾಗದಗಳು ನನ್ನ ಆಫೀಸಿನಿಂದ ಹೋಗಿದೆ. On a average of thousand per month apart from files, ಅಷ್ಟು ಪ್ರಮಾಣದಲ್ಲಿ, ಅಷ್ಟೊಂದು ಪ್ರಮಾಣದಲ್ಲಿ

ಹಿಂದೆಂದೂ ಆಗಿಲ್ಲ, ಈ ಕಾರ್ಯದ ಒತ್ತಡ ಅಷ್ಟು ಇದೆ. ನಮ್ಮ ಆಫೀಸಿನಲ್ಲಿರುವ ಕೆಲಸವನ್ನು ಹೋಲಿಸಿ ನೋಡಿ, ನಾವು ಈಗ ಜಾಸ್ತಿ ಕೆಲಸ ಮಾಡುತ್ತಿದ್ದೇವೆ, ಹಿಂದಿನವರು ಕಮ್ಮಿ ಕೆಲಸ ಮಾಡುತ್ತಿದ್ದರು ಎಂದು ಹೇಳುವುದಕ್ಕೆ ಹೋಗುತ್ತಾ ಇಲ್ಲ. ಕಾರ್ಯವ್ಯಾಪ್ತಿ ಎಷ್ಟು ಆಗುತ್ತಾ ಇದೆ ಎನ್ನುವುದನ್ನು ಉದಾಹರಣೆಯ ರೂಪವಾಗಿ ಹೇಳುತ್ತಿದ್ದೇನೆ. ಅದೇ ರೀತಿ ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ತೆಗೆದುಕೊಂಡರೆ ಅಲ್ಲಿ ಎರಡೆರಡು ಡಿ.ಸಿ. ಇಟ್ಟಿದ್ದೇವೆ. ಒಂದು ಕಡೆ ಅಡಿಷನಲ್ ಡಿ.ಸಿ., ಮತ್ತೊಂದು ಕಡೆ ರೆಗ್ಯೂಲರ್ ಡಿ.ಸಿ. ನಾನು ಒಂದು ಸಂದರ್ಭದಲ್ಲಿ ನೋಡಿದಾಗ ಒಬ್ಬ ಡಿ.ಸಿ. 150 ಕಮಿಟಿಗಳಲ್ಲಿ ಮುಖ್ಯರಾಗಿರುತ್ತಾರೆ. ಯಾವ ಒಂದು ಕಾನೂನು ಮಾಡಿದರೂ The Deputy Commissioner shall be responsible for this ಎಂದು ಮಾಡಿರುತ್ತೇವೆ. We never care to find out how much of time he can spare. Supposing a Deputy Commissioner really wants to attend to these things, he cannot do any other work except presiding over some meeting or other. For every thing, the D.C. will be the chairman. "He will look after this, look after that ....". How to change it ? I must confess I have not found a solution today. But it is the problem before us all. ಅದಕ್ಕೆ ಏನು ಮಾಡಿದರು ಒಂದು ಅಡಿಷನಲ್ ಡಿ.ಸಿ. ಅಂತ ಹಾಕಿದರು. ಮೊನ್ನೆ ದಿನ ಒಂದು ಡಿಸ್ಟ್ರಿಕ್ಟ್‌ನಲ್ಲಿ ತಹಶೀಲ್ದಾರರ ಹತ್ತಿರ ಈ ವಿಚಾರ ಚರ್ಚೆಮಾಡಿದೆ. ಹಿಂದೆ ತಹಶೀಲ್ದಾರರು ಅಂತ ಹೇಳಿದರೆ ಒಂದು ತಾಲ್ಲೂಕಿನ ಪೂರ್ಣ ಅಧಿಕಾರ ಅವರ ಕೈಯಲ್ಲಿತ್ತು. ಜಿಲ್ಲಾ ಇಲಾಖೆಗಳ ಮೇಲೆ ಪೂರ್ಣ ಅಧಿಕಾರ ಅವರ ಕೈಯಲ್ಲಿ ಇದೆ. "He was also Taluk Magistrate" ಏನು ಕೆಲಸಕಾರ್ಯಗಳು ಆಗಬೇಕಾದರೂ ಅವನ ಒಬ್ಬನ ಮೇಲ್ವಿಚಾರಣೆಯಿಂದ ನಡೆಯುತ್ತಿತ್ತು. ಕಮ್ಯುನಿಟಿ ಡೆವೆಲಪ್‌ಮೆಂಟ್ ಆಕ್ಟಿವಿಟೀಸ್ ಬಂದಾಗ ಒಂದು ತಾತ್ವಿಕಬದಲಾವಣೆಮಾಡದವು. ಒಂದು ತಾತ್ವಿಕವಾದ ಬದಲಾವಣೆ ಮಾಡಿದವು. ಡೆವಲಪ್ ಮೆಂಟ್ ಆಕ್ಟಿವಿಟೀಸ್ ಮಾಡತಕ್ಕಂಥವರಿಗೆ ಒಂದು ಅಧಿಕಾರದ ದರ್ಪ ಇರುವುದು ಬೇಡ ಅವರು ಜನರ ಹತ್ತಿರ ಓಡಾಡಿ ಉಪಾಯದಿಂದ ಕೆಲಸ ಮಾಡಬೇಕಾಗುತ್ತದೆ. ಅವರ ಸ್ನೇಹ ಬೆಳಸ ಬೇಕಾಗುತ್ತದೆ. ಅದಕ್ಕೋಸ್ಕರ ಒಂದು ಸಪರೇಟ್ ಡಿಪಾರ್ಟ್‌ಮೆಂಟ್ ಬ್ಲಾಕ್ ಡೆವಲಪ್‌ಮೆಂಟ್ ಆಫೀಸು ಮಾಡಿ ಬ್ಲಾಕ್ ಡೆವೆಲಪ್‌ಮೆಂಟ್ ಪ್ರಾಜೆಕ್ಟ್ ಮಾಡಿದವು. ಅವರನ್ನು ಬೇರೆ ಮಾಡಿ ತಹಶೀಲ್ದಾರರನ್ನು ಬೇರೆ ಮಾಡಿದೆವು. ಬರಬರುತ್ತಾ ಇಕ್ವಲ್ ಸ್ಟೇಟಸ್ ಮಾಡಿದೆವು. ಹಳ್ಳಿಯಲ್ಲಿ ವಾಸ ಮಾಡಿಕೊಂಡು ಬಂದಿರುವ ನಮ್ಮಂಥವರು, ನಿಮ್ಮಂಥವರಿಗೆ ಅನುಭವವಿದೆ. ಎಂದಿನಿಂದ ತಹಶೀಲ್ದಾರರ ಅಧಿಕಾರ ಕಾರ್ಯಕ್ಷೇತ್ರವನ್ನು ಅವರ ಅಧಿಕಾರ ವನ್ನು ಮೊಟಕು ಮಾಡಿದೆವೋ, ಅಂದಿನಿಂದ ಅಡ್ಮಿನಿಸ್ಟ್ರೇಷನ್ ಸಡಿಲವಾಗಿದೆ ಎಂಬುದು ನನ್ನ ಖಚಿತವಾದ ಅಭಿಪ್ರಾಯ. ಈಗ ನಾನು ಕೇಳುತ್ತಿದ್ದೇನೆ how to restore it back? ಬ್ಲಾಕ್ ಡೆವಲಪ್‌ಮೆಂಟ್ ಕೆಲಸ ಮಾಡುವವರು ಹಳ್ಳಿಹಳ್ಳಿಗೆ ಹೋಗಿ ಸ್ನಾನ ಮಾಡು, ತಲೆ ಬಾಚಿಕೋ, ಸ್ಕೂಲಿಗೆ ಮಕ್ಕಳನ್ನು ಕಳುಹಿಸು, ಹಲ್ಲು ಉಜ್ಜಿಕೋ, ವಾರಕ್ಕೊಂದು ಸಾರಿ, ಊರಿನ ಕೆಲಸ ಮಾಡು ಅಂತ ಹೇಳಿ ಎಂದು ಮಾಡಿದೆವು. ಅವರು ಹಲ್ಲು ಉಜ್ಜು ಅಂತ ಹೇಳುವುದಕ್ಕೆ ಹೋಗಲಿಲ್ಲ. ಅವನ ಪಾಡಿಗೆ ಅವನು ಮಾಡುತ್ತಿದ್ದ, ಪ್ರತಿಯೊಬ್ಬನೂ "efflux of time" ಕಲಿತುಕೊಳ್ಳುತ್ತಾನೆ. ನನ್ನ ಹಳ್ಳಿಯಲ್ಲಿ ಅನೇಕ ಜನ ಹೊಲ ಉಳುವುದಕ್ಕೆ ಹೋಗುತ್ತಿದ್ದಾರೆ. ಅವನು ಟೂತ್ ಬ್ರಷ್ ಇಟ್ಟುಕೊಂಡಿದ್ದಾನೆ. ನನ್ನ ಹಳ್ಳಿ ನೋಡುವುದಕ್ಕೆ ದೊಡ್ಡ ಊರು ಅಲ್ಲ. ಒಂದು ಸಣ್ಣ ಹಳ್ಳಿ. 100–120 ಮನೆಗಳು ಇವೆ. ನಾನು ಅಲ್ಲಿಯ ಒಂದು ಅಂಗಡಿಗೆ ಹೋಗಿ, ವಿಚಾರಿಸಿದಾಗ ಅಂಗಡಿಯವನು ಹೇಳಿದ, ಸ್ವಾಮಿ

ಪ್ರತಿಯೊಬ್ಬರೂ ಟೂತ್ ಬ್ರಷ್ ತೆಗೆದುಕೊಳ್ಳುವುದಕ್ಕೆ ಹತ್ತಿದ್ದಾರೆ ಎಂದು, ಅಲ್ಲಿ ಕೂಡ ಫ್ಯಾಂಟಾ ಇಟ್ಟುಕೊಂಡು ಮಾರುತ್ತಾರೆ. ಬದಲಾವಣೆಗಳು ಆಗುತ್ತಾ ಇದೆ. ಯಾವಾಗ ಎಕನಾಮಿಕ್ ಆಕ್ಟಿವಿಟೀಸ್ ಜಾಸ್ತಿಯಾಗುತ್ತದೆ, ಅದೂ ಕೂಡ ಮಾರ್ಪಾಡು ಆಗುತ್ತಿದೆ. ಯಾವಾಗ ಎರೋಷನ್ ಆಫ್ ಅಥಾರಿಟಿ ಆಯಿತೋ, ಯಾವಾಗ ಜಬರ್‌ದಸ್ತು ಕಡಿಮೆ ಆಯಿತೋ ತಹಶೀಲ್ದಾರರು ಬಂದರೆ ಯಾವನೂ ಕೇಳುವುದಿಲ್ಲ. ಸೋಮವಾರ ಕೆಲಸಕ್ಕೆ ಬರುವವನು ಬರುತ್ತಾ ಇಲ್ಲ. ಎರಡು ರೂಪಾಯಿ ದಂಡ ಹಾಕುತ್ತೇನೆಂದರೆ ಎಲ್ಲರೂ ಬರುತ್ತಿದ್ದರು. ತಪ್ಪು ದಂಡ ಹಾಕುತ್ತಿದ್ದರು. ಬಾಂದ್ ಹತ್ತಿರ ಕಲ್ಲು ಇಲ್ಲ ಎಂದರೆ ಕೇಸ್ ಹಾಕುತ್ತಿದ್ದರು. It is there in the Revenue rules and Manual. The person who is the owner of the land will be the person responsible to see that it is all right. Element of coercion was necessary. ಪ್ರೊಫೆಸರ್ ಹೇಳಿದ್ದ ತಡ ದೇಶದಲ್ಲಿ ಡಂಗೂರು ಸಾರಿದರು. ಎಲಿಮೆಂಟ್ ಆಫ್ ಕೊಯರ್‌ಷನ್ ಕೊಲಾಪ್ಸ್ ಆಯಿತು. ಅಡ್ಮಿನಿಸ್ಟ್ರೇಷನ್ ಕೆಳಗೆ ಬಿದ್ದಿತು. ಪ್ರಾಮಾಣಿಕತೆ ಎಲ್ಲಿಂದ ಬರಬೇಕು? ಪ್ರಾಮಾಣಿಕತೆಯನ್ನು ಹೆಚ್ಚಿಸಬೇಕಾದರೆ ನಾವು, ನೀವೆಲ್ಲರೂ ಪ್ರಯತ್ನಪಡಬೇಕಾಗಿದೆ. ಕಣ್ಮುಚ್ಚಿ ಕೂತುಬಿಟ್ಟರೆ ಪ್ರಾಮಾಣಿಕತೆಯನ್ನು ತರುವುದಕ್ಕೆ ಆಗುವುದಿಲ್ಲ. ಸ್ವಾಭಾವಿಕವಾಗಿ ಪ್ರಜಾ ತಂತ್ರ ಅಸೆಂಬ್ಲಿಯಲ್ಲಿ ಬರತಕ್ಕಂಥ ಕೌನ್ಸಿಲ್ ಮೆಂಬರ್ಸ್ ಎಂ. ಪಿ.ಗಳ ಅವರ ಮಾತಿಗೆ ಒಂದು ಬೆಲೆ ಇರಬೇಕು. ನೇರವಾಗಿ ಇಲ್ಲದೆ ಹೋದರೂ ಪರೋಕ್ಷವಾಗಿ ಅವರ ಮಾತಿಗೆ ಬೆಲೆ ಇರಬೇಕು. ಮರ್ಯಾದೆ ಕೊಡಲಿಲ್ಲ ಎಂದು ಕೂಗಾಡಿದರೆ ಪ್ರಯೋಜನವಿಲ್ಲ. ಯಾವನಿಗೂ ಒಂದು ಅಧಿಕಾರ ಬರಬೇಕಾದರೆ, ಅವನಿಗೆ ಇರತಕ್ಕ ಒಂದು ಅನುಭವದ ಆಧಾರದ ಮೇಲೆ, ನೀವು ನಡೆಯತಕ್ಕ ರೀತಿ ಮೇಲೆ ಬರುತ್ತದೆ. ನನಗೆ ಮರ್ಯಾದೆ ಕೊಡಿ ಎಂದು ಕೇಳಿದರೆ ಕೊಡುತ್ತಾರೆಯೋ? ನಮ್ಮ ವರ್ತನೆಯ ಮೇಲೆ ಮರ್ಯಾದೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ನನ್ನ 30 ವರ್ಷಗಳ ರಾಜಕೀಯ ಜೀವನದಲ್ಲಿ ಯಾವ ಅಧಿಕಾರಿ ನನ್ನ ಮಾತು ಕೇಳಲಿಲ್ಲ ಎಂದು ಒಬ್ಬನ ಹತ್ತಿರನೂ ನಾನು ಹೇಳಲಿಲ್ಲ. ಡಂಭಾಚಾರದಿಂದ ಹೇಳುತ್ತಾ ಇಲ್ಲ. ನನಗೆ ಏನು ಅಧಿಕಾರವಿದೆ ಎನ್ನುವುದನ್ನು ತಿಳಿದುಕೊಂಡಿದ್ದೇನೆ. ಅವನು ಕೇಳುವುದಿಲ್ಲ ಎಂದು ಹೇಳುವ ಪ್ರಶ್ನೆಯಲ್ಲ. ಯಾರದು ಕೇಳಬೇಕು, ಯಾರದು ಬಿಡಬೇಕು ಎಂದು ತಿಳಿದುಕೊಂಡಿದ್ದೇನೆ. ನನ್ನನ್ನು ಕೇಳದೆ ಮಾಡುವ ಕೆಲಸವಿದೆ. ಅದನ್ನು ಮಾಡಿಕೊಂಡು ಹೋಗಲಿ ಅದಕ್ಕೆ ಇಂಟರ್ ಫಿಯರ್ ಆಗುವುದಿಲ್ಲ. ಲ್ಯಾಂಡ್ ರಿಫಾರ್ಮ್ಸ್ ರೂಲ್ಸ್ ಇದೆ, ಜಮೀನು ಹಂಚತಕ್ಕದ್ದು ಇದೆ. ಜಮೀನು ಹಂಚುವಾಗ ಮಿನಿಸ್ಟರ್ ಹತ್ತಿರ ಬಂದು ಕೇಳ ಬೇಕಾಗಿಲ್ಲ. ನಾನೇ ತಾಲ್ಲೂಕ್ ಆಫೀಸಿಗೆ ಹೋಗಿ ಮುತ್ತಿಗೆ ಹಾಕುತ್ತೇನೆ.

ಎಂ. ಎಸ್. ಕೃಷ್ಣನ್ :— ನಾವು ಮಾಡುತ್ತೇವೆ.

ಶ್ರೀ ಡಿ. ದೇವರಾಜ್ ಅರಸ್ :—ನಾವು ಒಬ್ಬರು ಮಾಡುತ್ತೇವೆಂದು ತಿಳಿದುಕೊಳ್ಳಲಿ ನಮ್ಮ ಪಕ್ಷದವರು ಕೂಡ ಅದರ ಬಗ್ಗೆ ನಿಗಾ ವಹಿಸಿ ಎಂದು ಹೇಳಿದ್ದೇವೆ. ನೀವು ಏನು ಮಾಡುತ್ತೀರಿ ? ನಿಮ್ಮ ಜಾತಿಯವರೇ ಇದ್ದರೆ ಮಾಡುತ್ತೀರಿ ಇನ್ನೊಬ್ಬ ಜಾತಿಯವರು ಇದ್ದರೆ ಸುಮ್ಮನೇ ಇರುತ್ತೀರಿ, ಒಟ್ಟಿನಲ್ಲಿ ನಾವೆಲ್ಲರೂ ತಿಳಿದುಕೊಂಡು ಮಾಡಬೇಕಾದ ವಿಚಾರ. ಬೇಕಾದರೆ ಏನೇನು ನಡೆದಿದೆ ಎಂದು ದಿನಚರಿ ತೆಗೆದು ಕೊಡುತ್ತೇನೆ. ನಾವು ದಕ್ಷತೆಬೇಕು, ಪ್ರಾಮಾಣಿಕತೆ ಬೇಕು ಅಂತ ಹೇಳಿದರೆ, ಜಾತಿ, ಕುಲ ಕಟ್ಟಿಕೊಳ್ಳಬೇಕಾಗಿಲ್ಲ. ನನ್ನ ಚಿಕ್ಕಪ್ಪನ ಮಗನೇ ಇರಲಿ, ಅವನು ಲೆಕ್ಕಾಚಾರವಾಗಿ ಕೆಲಸಮಾಡಿಲ್ಲ ಅಂತ ಹೇಳಿದರೆ, ಅವನ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ :— ಜಮೀನು ಇಲ್ಲದ ರೈತರದೆಲ್ಲ ಜಾತಿ ಒಂದೆ.

ಶ್ರೀ ಡಿ. ದೇವರಾಜ್ ಅರಸ್ :— ಆ ರೀತಿ ಎಲ್ಲ ತಿಳಿದುಕೊಂಡು ಮಾಡಿದರೆ ಒಳ್ಳೆಯದು. They can restore order honesty and integrity. ನಾವು ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಕೆಲಸಮಾಡುವುದಕ್ಕೆ ಸಾಧ್ಯವಿದೆ. ಕೇವಲ ನಾನೊಬ್ಬನೇ ಮಾಡುತ್ತೇನೆ ಎಂದು ಹೇಳುತ್ತಾ ಇಲ್ಲ, ನಾನು ಆ ಮಾತನ್ನು ಒಪ್ಪುತ್ತೇನೆ. ಇದು ನಾನೊಬ್ಬ ಮಾಡುವ ಕೆಲಸವಲ್ಲ. ಒಂದು ವೇಳೆ ನನ್ನನ್ನು ಅದ್ಯಕ್ಷ ಎಂದು ತಿಳಿದುಬಿಟ್ಟರೂ ಚಿಂತೆ ಇಲ್ಲ. ಇರುವ ವಿಚಾರವನ್ನು ಸ್ಪಷ್ಟವಾಗಿ ಹೇಳೋಣ. ಬಾಕಿಯವರು ನನ್ನನ್ನು ಪ್ರಾಮಾಣಿಕವಾಗಿ ಆಗಿ ಎಂದು ಹೇಳಿದರೆ ಸಾಧ್ಯವಿಲ್ಲ. ಜಾತೀಯತನ ಯಾರ ಮನಸ್ಸಿನಲ್ಲಿಯಾದರೂ ಇದ್ದರೆ ಏನು ಮಾಡಿದರೂ ಅದನ್ನು ಸರಿ ಮಾಡುವುದಕ್ಕಾಗುವುದಿಲ್ಲ. ಮಂತ್ರಿಗಳ ಅಧಿಕಾರ ಜಾಸ್ತಿ, ಶಾಸಕರ ಅಧಿಕಾರ ಕಡಿಮೆ ಎಂದು ತಿಳಿದುಕೊಂಡಿಲ್ಲ.

I have never made a' distinction so far as power is concerned between an Assembly member and a Minister. On the other hand, the Minister has his privileges restricted. A Member's liberties are not restricted. A Member can always criticises a Minister and call him to order. I am not in a position to do that. Therefore my right to exercise certain authority is to a certain extent curtailed. ಆ ಒಂದು ತಿಳುವಳಿಕೆ ನನಗೆ ಇರತಕ್ಕಂಥಾದ್ದು. ಆದುದರಿಂದ ಆಡಳಿತದಲ್ಲಿ ದಕ್ಷತೆಬರಬೇಕು ಅಂದರೆ ಕೇವಲ ಅಧಿಕಾರಿಗಳು ಕೆಟ್ಟಿದ್ದಾರೆ ಏನ್ನುವುದಕ್ಕೆ ನಾನು ತಯಾರಿಲ್ಲ. ಅಧಿಕಾರಿಗಳ ಜೊತೆಯಲ್ಲಿ ಶಾಸಕರೂ ಇದ್ದಾರೆ. ಜನರ ವರ್ಚಸ್ಸು ಕೂಡ ನಮ್ಮ ಆಡಳಿತದ ಮೇಲೆ ಇರುತ್ತದೆ.

ಇನ್ನು ಕೋಆಪರೇಟೀವ್ ಸೊಸೈಟಿ ತೆಗೆದುಕೊಳ್ಳಿ. ಕಾಂಗ್ 'ಓ' ಇದೆ, ಕಾಂಗ್ 'ಆರ್' ಇದೆ ಅಂತ ಮಾತನಾಡುತ್ತಾ ಇಲ್ಲ. ನಾವು ನೀವು ಪ್ರಾಮಾಣಿಕವಾಗಿ ಯೋಚನೆ ಮಾಡುವುದೇ ಆದರೆ ಇದರಲ್ಲಿ ಯಾವ ಪಕ್ಷವೂ ಇಲ್ಲವೇ ಇಲ್ಲ. ಇದರಲ್ಲಿರುವುದು ಒಂದೇ ಪಕ್ಷ. ಅದು ಎಷ್ಟರಮಟ್ಟಿಗೆ ದುಡ್ಡು ಮಾಡಬೇಕು ಎಂಬುದು. ಆದನ್ನೇ ಹೆಚ್ಚಿಗೆ ನಾನು ನೋಡುತ್ತಿದ್ದೇನೆ. ಎಷ್ಟೋ ಕಡೆ ದೂರುಗಳು ಬಂದಿವೆ. ಸೊಸೈಟಿಗೆ ಹಂಚಲಿಕ್ಕೆ ಸಕ್ಕರೆ ಕೊಟ್ಟರೆ ಅದನ್ನು ಎಲ್ಲಿ ಮಾರಿಕೊಂಡು ಹೊರಟು ಹೋಗುತ್ತಾರೋ ಗೊತ್ತಿಲ್ಲ. ಯಾವುದೋ ಒಂದು ಪಕ್ಷದ ದರ್ಪ ತೋರಿಸುವುದು ಹಿಂದಿನಿಂದ ಅಭ್ಯಾಸವಾಗಿದೆ. ಇವತ್ತು ಸುಮ್ಮನೆ ಇರುತ್ತಾರೆಯೋ ? ಅಧಿಕಾರಿಗಳನ್ನು ಬೈದರೆ ಇರತಕ್ಕ ಸನ್ನಿವೇಶ ಏನಿದೆ ? What is the society we have ? How is it functioning ? ಇದನ್ನು ತಿಳಿದುಕೊಂಡು ಹೋಗೋಣ. ಹಿಂದಿನ ಕಾಲದಲ್ಲಿ ಮನು ಧರ್ಮಶಾಸ್ತ್ರವನ್ನು ಬರೆದು ಕೊಟ್ಟಹಾಗೆ ಇವತ್ತು ಇಡೀ ದೇಶಕ್ಕೆ ಕಾನೂನು ಕೊಡತಕ್ಕ ಜನ ಶಾಸಕರು. ನಮ್ಮ ಜವಾಬ್ದಾರಿ ಏನಿದೆ ಎಂದು ಸಂಪೂರ್ಣವಾಗಿ ತಿಳಿದುಕೊಂಡು ಕೆಲಸ ಮಾಡಿದರೆ ದೇಶದಲ್ಲಿ ಕೆಲಸ ಕಾರ್ಯಗಳನ್ನು ಸರಿಯಾಗಿ ಮಾಡುವುದಕ್ಕೆ ಸಾಧ್ಯವಿದೆ. ನನ್ನಲ್ಲಿ ತಪ್ಪು ಇದ್ದರೆ ಅದನ್ನು ಇತರರು ತೋರಿಸಿಕೊಡುವ ಅಧಿಕಾರ ಅವರಿಗೆ ಇದೆ. ಮಂತ್ರಿಯಾದವನು ಕೂಡ ತಪ್ಪನ್ನು ತಿದ್ದಿಕೊಳ್ಳಬೇಕಾಗಿದೆ. ಅನೇಕ ತಪ್ಪುಗಳನ್ನು ನಾನು ಮಾಡುತ್ತೇನೆ, ನಮ್ಮಲ್ಲಿ ದೋಷವಿದ್ದರೆ ತಿದ್ದಿಕೊಳ್ಳಬಹುದು. ನಾವು ಕೂಡ ಪಕ್ಷಪಾತ ಮಾಡುವುದನ್ನು ಕಂಡಾಗ ಎಚ್ಚರಿಕೆಯಿಂದ ದೂರವಿರಬೇಕು. ಆ ಒಂದು ದೃಷ್ಟಿಯಿಂದ ಕೆಲಸಮಾಡಿದರೆ ಮಾತ್ರ ದೇಶದ ಅವ್ಯವಹಾರಗಳು ಏನಿವೆ, ಆಡಳಿತದ ಸಡಿಲತೆ ಏನಿದೆ, ಅದನ್ನು ಸರಿಮಾಡಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೆ ಇದ್ದರೆ ಅದನ್ನು ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಎಲ್ಲಾ ಕೆಟ್ಟಿದೆ ಎಂದು ಹೇಳುವಂಥಾದ್ದು

ನಿಸ್ಸಹಾಯಕತೆಯಿಂದ ಹೇಳುವಂಥ ಮಾತು. ಆ ರೀತಿ ಹೇಳುವ ಮಾತನ್ನು ಹತೋಟಿಗೆ ತರಬೇಕು. ಆ ರೀತಿ ಹತೋಟಿಯಲ್ಲಿ ತರುವುದರ ಜೊತೆಗೆ ಹೆಚ್ಚು ಹೆಚ್ಚು ಖಾಸಗೀ ಜನರನ್ನು ಕೂಡ ಆಡಳಿತದ ಜೊತೆಗೆ ಸೇರಿಸಬೇಕು. ಟ್ರೈಯಲ್ ಅಂಡ್ ಎರರ್ ಮೆತೆಡ್‌ನಲ್ಲಿ ಅದನ್ನು ಮಾಡಿಕೊಂಡು ಹೋಗಬೇಕು. One set of people ಆಗಲಿಲ್ಲ ಅಂದರೆ ಇನ್ನೊಂದು set of peopleನ್ನು ಹಾಕಿ ಅದನ್ನು ಸರಿಪಡಿಸಬೇಕು. ಪ್ರಜಾತಂತ್ರದಲ್ಲಿ ನಾವು ಖಾಸಗೀ ಜನರು ಅಧಿಕಾರಿಗಳು ಹೆಚ್ಚು ಹೆಚ್ಚು ಸಂಪರ್ಕವನ್ನು ಪಡೆದು ನಮ್ಮ ಕೆಲಸ ಕಾರ್ಯಗಳನ್ನು ಮುಂದುವರಿಸಬೇಕು ಮತ್ತು ನಮ್ಮಲ್ಲಿ ದಕ್ಷತೆಯನ್ನು ಹೆಚ್ಚು ಮಾಡಬೇಕು.

ಶ್ರೀ ಬಿ. ಪುಟ್ಟಸ್ವಾಮಯ್ಯ :—ರಾಜ್ಯದಲ್ಲಿರತಕ್ಕ ಅಧಿಕಾರಿಗಳಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆ ಹೆಚ್ಚಬೇಕಾದರೆ ಸಚ್ಚಾರಿತ್ರ್ಯವುಳ್ಳಂಥ ಮಂತ್ರಿಗಳು ಇರಬೇಕಾದದ್ದು ಅವಶ್ಯಕ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು ? ತಮ್ಮ ಮಂತ್ರಿಮಂಡಲದಲ್ಲಿ ಅನೇಕ ಮಂತ್ರಿಗಳ ಮೇಲೆ ಲಂಚರುಷುವತ್ತಿನ ಆಪಾದನೆ ಇರುವಾಗ, ಅಧಿಕಾರಿಗಳು ನಾವು ತೆಗೆದುಕೊಳ್ಳುವುದಿಲ್ಲ ಎನ್ನುವ ಮನೋಭಾವನೆಗೆ ಹೋಗುವುದಿಲ್ಲ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಡಿ. ದೇವರಾಜ್ ಅರಸ್ :—ಮಂತ್ರಿಗಳು ಲಂಚ ತೆಗೆದುಕೊಳ್ಳುತ್ತಿದ್ದಾರೆ ಎಂದು ತಾವು ಅನೇಕ ಸಾರಿ ಆಪಾದನೆಯನ್ನು ಮಾಡಿದ್ದೀರಿ. ಪ್ರೈಮ ಫೇಷಿ ಕೇಸ್ ಇದ್ದರೆ ಹೇಳಿ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ತಮ್ಮ ಪಕ್ಷದವರು ಹೇಳಿರುವುದು ಪತ್ರಿಕೆಯಲ್ಲಿ ವರದಿಯಾಗಿದೆ. ಅದನ್ನೇ ನಾನು ಹೇಳುತ್ತಿರುವುದು.

ಶ್ರೀ ಡಿ. ದೇವರಾಜ್ ಅರಸ್:—ನಾನೂ ಪತ್ರಿಕೆಯಲ್ಲಿ ಹೇಳಿರುವ ಮಾತನ್ನೇ ಹೇಳುತ್ತಿದ್ದೇನೆ. ನಮ್ಮ ಪಕ್ಷದವರಾಗಲಿ, ನಿಮ್ಮ ಪಕ್ಷದವರಾಗಲಿ, ಯಾವ ಪಕ್ಷದವರಾಗಲಿ ಇದುವರೆಗೆ ಯಾರೂ ಇದರ ಬಗ್ಗೆ ಮಾಹಿತಿ ತಂದು ಕೊಟ್ಟಿಲ್ಲ, ಈಗ ಒಂದು ಕೆಲಸ ಆಗಿಬಿಟ್ಟಿದೆ ದೇಶದಲ್ಲಿ ಹುಲಿ ಹೋಯಿತು ಎಂದು ಹೇಳಿ ಹಾರಾಡಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಒಳಗೆ ಬೆಂಕಿ ಇಲ್ಲದೆ ಹೊರಗೆ ಹೊಗೆ ಆಡುವುದಿಲ್ಲ. ಅವರ ಪಾಪ ನಿಮ್ಮ ತಲೆಯ ಮೇಲೆ ಯಾತಕ್ಕೆ ಎಳೆದು ಕೊಳ್ಳುತ್ತೀರಿ ?

ಶ್ರೀ ಡಿ. ದೇವರಾಜ್ ಅರಸ್ :—There is no smoke without fire. ಸ್ಮೋಕ್ ಇರುವುದು ಸ್ವಲ್ಪ ತೋರಿಸಿಕೊಡಿ. ನಾನು ಒಂದು ವಿಷಯವನ್ನು ತಮ್ಮಲ್ಲಿ ಸ್ಪಷ್ಟಪಡಿಸುತ್ತೇನೆ. ಯಾರ ಮೇಲಾದರೂ ವಿನಾಕರಣವಾಗಿ, ದೋಷಗಳು ಕಂಡುಬಾರದೆ ಆತನನ್ನು ತೆಗೆಯುವುದೇ ಆಗಲಿ, ಮಾಡುವುದೇ ಆಗಲಿ, ಮಾಡತಕ್ಕದ್ದು ನನ್ನ ಮನಸ್ಸಿಗೆ ಹಿಡಿಸತಕ್ಕಂಥ ವಿಚಾರವಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ :—ನಮ್ಮ ಪಕ್ಷದ ನಾಯಕರಿಗೆ ಒಂದು ಗಂಟೆ ಟೈಂ ಕೊಡಿ.

ಶ್ರೀ ಡಿ. ದೇವರಾಜ್ ಅರಸ್ :—ಒಂದು ಗಂಟೆ ಏತಕ್ಕೆ ಒಂದು ದಿವಸ ತೆಗೆದುಕೊಳ್ಳಿ. ಕರಿ ಕಾಗೆ ವಾಂತಿ ಮಾಡಿದ ಕಥೆಯಂತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ :—ಕೆಲವು ಆಪಾದನೆಗಳನ್ನು ರುಜುವಾತು ಪಡಿಸುವುದಕ್ಕೆ ಕಷ್ಟವಾಗುತ್ತದೆ.

Sri D. Devarja:—Urs I am always one of those who believe that man is innocent till he is proved guilty. That principle

is a famous principle which is an accepted principle. Supposing there is something against a particular Minister, then is it not fair that we should go into that ? ನಾನು ಇದನ್ನು ಕಂಡು ಅದರಲ್ಲಿ ಅನುಮಾನವಿಲ್ಲ ಎಂದು ಸಾಬೀತು ಮಾಡಿಕೊಟ್ಟರೂ ಅದರಲ್ಲಿ ಪರ್‌ಸಿಸ್ಟ್ ಮಾಡಿದರೆ ಅಂತಹವರನ್ನು ಏನು ಮಾಡುವುದಕ್ಕಾಗುತ್ತದೆ ?

If you have made up your mind to say that so and so is a currupt man, then what are we to do ? I cannot demand belief in me. If you think you have belif in me, please give it. If there is truth in what you say certainly I can take action.

ಶ್ರೀ ಹೆಚ್.ಡಿ. ದೇವೇಗೌಡ :—ಲಂಚ ತೆಗೆದುಕೊಳ್ಳತಕ್ಕದ್ದನ್ನು ಪ್ರೂಫ್ ಮಾಡುವುದು ಕಷ್ಟ. ಅದು ಅವರವರ ಕಾಂಷನ್ಸ್ ಮೇಲೆ ಅವಲಂಬನೆಯಾಗುತ್ತದೆ. ನಾನು ಅದರ ಮೇಲೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಪತ್ರಿಕೆಯಲ್ಲಿ ಬಂದ ತಮ್ಮ ಒಂದು ಹೇಳಿಕೆ ನೋಡಿದೆ. ತಮ್ಮ ಸಹೋದ್ಯೋಗಿಗಳ ಮೇಲೆ ಆಪಾದನೆ ಪಟ್ಟಿ ಯಾರೇ ಕೊಟ್ಟಿರಲಿ, ಇದರ ಮೇಲೆ ಪತ್ರಿಕಾಕರ್ತರುಗಳು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ ಎಂದಾಗ "I do not take notice of it" ಎಂದು ಹೇಳಿದಿರಿ. ಅದು ಯಾರೇ ಕೊಟ್ಟಿರಲಿ, ಹುಡುಗರೇ ಕೊಟ್ಟಿರಲಿ, ಮುದುಕರೇ ಕೊಟ್ಟಿರಲಿ, ರಾಜಕಾರಿಣಿಗಳೇ ಕೊಟ್ಟಿರಲಿ, ಆ ಮಾತು ಬೇರೆ, ವಿಚಾರಣೆ ನಡೆಸಿ, ಅದರಲ್ಲಿ ತಿರುಳಿಲ್ಲ ಎಂದು ಹೇಳಬಹುದಾಗಿತ್ತು.

ಶ್ರೀ ಡಿ. ದೇವರಾಜ್ ಅರಸ್ :— ಬಹುಶಃ ನೀವಾದರೂ ಕೂಡ ಅದೇ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ನೋಟೀಸ್ ಹೊರಡಿಸಿರತಕ್ಕದ್ದು ಯಾವ ಪ್ರೆಸ್ಸೂ ಎಂದೂ ಇಲ್ಲ. ಯಾರ ರುಜೂ ಇಲ್ಲ. This is not fair.

Sri H. D. Deve Gowda :—I have also received a copy of the memorandum.

ಶ್ರೀ ಡಿ. ದೇವರಾಜ್ ಅರಸ್ :—ಬಹುಶಃ ನಾವು ಕೂಡ ಅದನ್ನೇ ಹೇಳಬೇಕು. ಆ ಒಂದು ನೋಟೀಸನ್ನು ಹೊರಡಿಸಿರತಕ್ಕಂಥಾದ್ದರಲ್ಲಿ ಪ್ರೆಸ್ ಹೆಸರು ಇಲ್ಲ, ಯಾರ ರುಜೂ ಸಹ ಇಲ್ಲ.

Sri H. D. Deve Gowda :—I have also received a memorandum signed by certain responsible people.

Sri D. Devaraj Urs :— Sri Deve Gowda might have received it but I have not received it. What I saw was a paper supposed to have been printed somewhere—God knows where— and nobody has signed it.

Sri Deve Gowda :—A signed memorandum has been sent to the Prime Minister and a copy of it has been sent to the Chief Minister.

Sri H. Siddaveerappa :—What the Chief Minister says is that it is not known where it is printed, *i. e.*, it is anonymous.

Sri D. Devaraj Urs :—I request the Leader of the opposition to send it to me ; I have not yet received it.

Sri H. D. Deve Gowda :—Recently the Chief Minister has also received it.

Sri D. Devaraj Urs :—I have not received it.

ಶ್ರೀ ಬಿ. ಪುಟ್ಟಸ್ವಾಮಯ್ಯ :—ನಾವು ತಮ್ಮ ಮಂತ್ರಿಮಂಡಲದ ಮೇಲೆ ಇದುವರೆಗೂ ಲಂಚದ ಆಪಾದನೆ ಮಾಡಿಲ್ಲಾ. ಮಾಡಿರತಕ್ಕಂಥಾವರು ನಿಮ್ಮವರೇ, ನಿಮ್ಮ ಪಕ್ಷದ ಸದಸ್ಯರೇ, ಎಂ. ಎಲ್. ಎ. ಗಳು ಮತ್ತು ಪಾರ್ಲಿಮೆಂಟ್ ಸದಸ್ಯರುಗಳು. ಅವರೇ ನಿಮ್ಮ ಮೇಲೆ ಆಪಾದನೆ ಮಾಡಿ ಗೂಬೆ ಕೂರಿಸಿದ್ದಾರೆ.

Sri D. Devaraj Urs :—Dr. Ambedkar became a big man not because he was a Central Minister but because he wrote the Constitution and worked for the downtrodden. I am one of those who stand for certain principles and ideologies. I have worked all my life for them. I am not interest to be here merely to protect some people. We have discussed this matter for four days and nights in the party meeting.

ನಾನು ಅದನ್ನೆ ತಮಗೆ ಹೇಳುತ್ತಿದ್ದೆ. ನಮ್ಮ ಪಕ್ಷದವರೇ ಮಾಡಿರಲಿ, ಅವರನ್ನೂ ಸಹ ಅದೆ ರೀತಿಯಾಗಿ ನಿಮ್ಮ ಪಕ್ಷದವರೂ ಕೂಡ ನೇರವಾಗಿ ನನಗೆ ಪಿಟಿಷನ್ನನ್ನು ಕಾನ್‌ಫಿಡೆನ್ಷಿಯಲ್ ಆಗಿ ಕೊಡಿ ಎಂಬುದಾಗಿ ಕೇಳಿದ್ದೇನೆ. ಇದುವರೆಗೂ ಕೊಟ್ಟಿಲ್ಲ. ಒಬ್ಬರೂ ಕೊಟ್ಟಿಲ್ಲ. ಇಲ್ಲಿ ನಮಗೆ ಕೊಡುವುದಿಲ್ಲವೆಂದು ಹೇಳುವುದಿಲ್ಲ. ಅಂದಮೇಲೆ ನಾವು ಹೇಗೆ ಕೊಡಬೇಕು ? ಆದ್ದರಿಂದ ಈ ವಿಚಾರಗಳು ಅವರಿಗೆಲ್ಲರಿಗೂ ಗೊತ್ತಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಅವರನ್ನು ಬೇರೆ ರೀತಿಯಲ್ಲಿ ರಿಪೇರಿ ಮಾಡುತ್ತಿದ್ದೀರಿ. ಏಕೆ ರಿಪೇರಿ ಮಾಡಬೇಕು ? ಇದರ ಬಗ್ಗೆ ವಿವರಣೆ ಕೊಡಿ.

ಶ್ರೀ ಡಿ. ದೇವರಾಜ್ ಅರಸ್ :—ಒಂದು ವಿಚಾರ ಹೇಳುತ್ತೇನೆ. ನಾನು ನನ್ನ ರಾಜಕೀಯ ಜೀವನದಲ್ಲಿ ಯಾವ ಅಧಿಕಾರ ಸ್ಥಾನಕ್ಕೂ ಪ್ರಯತ್ನಪಟ್ಟು ಬಂದವನಲ್ಲ. ಮನುಷ್ಯನ ಕೀರ್ತಿ ಒಬ್ಬ ಚೀಫ್ ಮಿನಿಸ್ಟರ್ ಆಗಿಬಿಟ್ಟರೆ ಆಗುತ್ತದೆಂದೇನೂ ಇಲ್ಲ. ಈ ಅಧಿಕಾರವನ್ನೇ ಮುಂದುವರಿಸಬೇಕು, ಜೀವನ ಮಾಡಬೇಕೆಂದೇನೂ ಇಲ್ಲ. ಬೇಕಾದಷ್ಟು ಆಸ್ತಿಯನ್ನು ಮಾಡ ಬೇಕೆಂದೂ ಇಲ್ಲ. ನಾನು ಹಿಂದೆಯೂ ಏನೂ ಕಳೆದಿಲ್ಲ, ಈಗಲೂ ಕಳೆದಿಲ್ಲ, ಮುಂದೆಯೂ ಕಳೆಯ ಬೇಕಾದ್ದಿಲ್ಲ. ಯಾವುದೇ ಒಂದು ಲೋಪದೋಷವನ್ನು ಕಂಡು ಹಿಡಿದರೆ, ಅವರು ಯಾವ ಪಕ್ಷದವರೇ ಆಗಿರಲಿ, ಅದನ್ನು ಮೊದಲು ತಿದ್ದಿಕೊಳ್ಳಬೇಕು. ಆ ಧೈರ್ಯ ಇಲ್ಲದಿದ್ದರೆ, ಆಪಾದನೆಗಳನ್ನು ಮಾಡಿ ಏನು ಪ್ರಯೋಜನ? ನಾನು ಬೇಕಾದಷ್ಟು ಆಪಾದನೆಗಳನ್ನು ಹಿಂದೆ ಅನೇಕ ಸಂದರ್ಭಗಳಲ್ಲಿ ಕೆಲವು ವಿಚಾರಗಳಲ್ಲಿ ಬಹಿರಂಗವಾಗಿಯೇ ಮಾಡಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್ :—ಪತ್ರಿಕೆಯಲ್ಲಿ ಬಂದಿರುವ ವರದಿ ಪ್ರಕಾರ ಒಂದು ಪಕ್ಷ ಆ ರೀತಿ ಹೇಳಿದರೆ ಹೇಗೆ ? ಇಲ್ಲದೇ ಹೋದರೆ, ಸಿ.ಐ.ಡಿ. ಬೆನ್ನು ಹತ್ತಿದ್ದಾರೆಂದು ಹೇಳಿದರೆ ಏನಾಗುತ್ತದೆ ? ಸ್ಪೆಸಿಫಿಕ್ಕಾಗಿ ನಿಮ್ಮ ಮೇಲೆ ಚಾರ್ಜ್‌ಮಾಡಿದರೆ, ಅದು ಪತ್ರಿಕೆಗಳಲ್ಲಿ ಬರುತ್ತದೆ.

Sri C. M. Arumugham:—If they are speaking facts, they must come out with truth.

Sri M. S. Krishnan:—It has appeared in the Press.

Sri D. Devaraj Urs :—The point is that either what you believe is not correct or you have some other motive behind it.

ಶ್ರೀ ಕೋಣಂದೂರು ಲಿಂಗಪ್ಪ :—ನಿಮ್ಮ ಪಕ್ಷದಲ್ಲಿ ಶಿಸ್ತು ಬಹಳ ಕಡಿಮೆಯಾಗಿದೆ. ಏಕೆಂದರೆ ಅವರು ನಾನಾ ಭಾಗಗಳಿಂದ ಬಂದು ನಿಮಲ್ಲಿ ಸೇರಿದ್ದಾರೆ. ಅದು ಪತ್ರಿಕೆಗಳಿಗೆ ಗೊತ್ತಿರುವ ವಿಚಾರವೇ.

Sri D. Devaraj Urs :—People from different places have come and joined together. I have said not now but in the beginning itself that this is the first phase and that there is bound to be another phase. I have toiled all my life in this organisation and as such I know what it is. It is not as if I have come into it yesterday. As a young man I have been in the organisation and I have worked all my life in it and as such I know its ins and outs.

ಶ್ರೀ ಎಚ್. ಡಿ. ದೇವೇಗೌಡ :—ನಿಮ್ಮ ಉತ್ಸುಕತೆಗೆ ನಮ್ಮ ಅಡ್ಡಿ ಇಲ್ಲ. ನೀವೇ ಬೆನ್ನು ತಟ್ಟಿಕೊಳ್ಳುತ್ತೀರಿ. ಮಾನ್ಯ ಶ್ರೀ ಸಿದ್ದವೀರಪ್ಪನವರು ಲಂಚ ತೆಗೆದುಕೊಳ್ಳುವ ಬಗ್ಗೆ ಆಪಾದನೆ ಬರುತ್ತದೆಂದರೆ ಏನು ? ಆ ರೀತಿ ತೆಗದುಕೊಂಡು ಬಂದು ಇಲ್ಲಿ ಕೆಲಸಮಾಡುವುದಕ್ಕೆ ಆಗುತ್ತದೆಯೋ ? ಅವರ ಸುತ್ತಮುತ್ತಲೂ ಸುತ್ತುವ ಜನರೇ ಆ ರೀತಿ ಅವರ ಬಗ್ಗೆ ಹೇಳಿದರೆ, ಅವರೂ ಹೇಳಿಕೊಳ್ಳಲಿ. ನೀವು ಒಂದು ವರ್ಷದಲ್ಲಿ ಮಂತ್ರಿಮಂಡಲದಲ್ಲಿ ನಡೆಸಿರುವ ಕಾರ್ಯ ದಕ್ಷತೆಯಿಂದ ಲಂಚ ಇಲ್ಲವೆಂದು ಸಮರ್ಥನೆ ಮಾಡಿಕೊಳ್ಳುತ್ತೀರಾ ?

Sri D. Devaraj Urs :—Unless it is proved *prima facie*... ಏನೇ ಚಾರ್ಜ್ ಮಾಡಿದರೂ ಅದು ಪ್ರೂವ್ ಆಗಿ ಬರಲಿ ಅದನ್ನು ಮಾಡುವುದಕ್ಕೆ ಮುಂಚಿತವಾಗಿಯೇ ಅದರ ಬಗ್ಗೆ ಹೇಳಬೇಕೆಂದರೆ ಬಹಳ ಕಷ್ಟವಾಗುತ್ತದೆ. ಯಾವುದಾದರೂ ಒಂದು ಚಾರ್ಜ್ ಅಂದರೆ ಅದರ ಬಗ್ಗೆ ಅಡ್ಮಿನಿಸ್ಟ್ರೇಷನ್ ಡಿಫಿಕಲ್ಟಿ ಏನೆಂದು ನೋಡಬೇಕು. I hav come to know that it is one of the charges or talkeed of charges. ಯಾವುದನ್ನು ಹೇಗೆ ಮಾಡಿದ್ದಾರೆಂಬುದು ಗೊತ್ತಿಲ್ಲದೆಯೇ ಅನೇಕ ಸಂದರ್ಭಗಳಲ್ಲಿ ನಾವು ಮಾತನಾಡುತ್ತೇವೆ. ಇಗ್ನೊರೆನ್ಸ್ ಅಥವಾ ಇನ್ನೊಸೆನ್ಸ್‌ನಿಂದ ಮಾತನಾಡಿರಬಹುದು. ಕೆಲವರಿಂದ ಕೆಲವು ಮಾತುಗಳು ಬರಬಹುದು, ಬೇರೆ ಕೆಲವು ಕಾರಣಗಳನ್ನಿಟ್ಟುಕೊಂಡು ಮಾತನಾಡಿರಬಹುದು. ಆದರೆ ಯಾವುದೂ ನನ್ನ ಎದುರಿಗೆ

ಬಾರದೆ ಇರುವುದರಿಂದ. ಕಾನ್‌ಫಿಡೆನ್‌ಷಿಯಲ್ ಆಗಿ ಇಟ್ಟುಕೊಂಡು ಏನೂ ಕೊಡದೆ ಇದ್ದರೆ ನಾನು ಏನು ಮಾಡಬೇಕು ?

ಶ್ರೀ ವಾಟಾಳ್ ನಾಗರಾಜ್ :—ಅವರು ಕೊಟ್ಟಿರುವ ಚಾರ್ಜಸ್ ಯಾವುವು ?

ಶ್ರೀ ಡಿ. ದೇವರಾಜ ಅರಸ್ :—ಒಂದೂ ಕೊಟ್ಟಿಲ್ಲವೆಂದು ಹೇಳುತ್ತಿದ್ದೇನೆ. ಕೊಡದೆ ಇರುವ ಚಾರ್ಜಸ್ ಏನು ಎಂದು ಹೇಳಲಿ?

Sri C. M. Arumugham :—When you are discussing this issue, may I ask for a categorical statement from you with regard to the present cabinet—whether there will be a change ? Is there any proposal to drop anybody or include anybody ? Will there be any reshuffle ?

ಶ್ರೀ ವಾಟಾಳ್ ನಾಗರಾಜ್ :—ನನಗೆ ತಿಳಿದ ಮಟ್ಟಿಗೆ ಈ ಅಧಿವೇಶನ ಮುಗಿದ ನಂತರ ಬದಲಾವಣೆಗಳಾಗುವುದು ಖಂಡಿತ ಎನ್ನತಕ್ಕದ್ದು ಜನಜನಿತವಾಗಿದೆ. ಆ ಬಗ್ಗೆ ತಾವು ಏಕೆ ಏನೂ ಹೇಳದೆ ಮುಚ್ಚಿಡುತ್ತಿದ್ದೀರಿ ?

ಶ್ರೀ ಬಿ. ಪುಟ್ಟಸ್ವಾಮಯ್ಯ :—ತಮ್ಮ ಸಹೋದ್ಯೋಗಿಗಳು ಕೆಲವರು ಸೇರಿ ರಾತ್ರಿ ಕೆಲವರನ್ನು ಕರೆದು ಏನೋ ವ್ಯವಹಾರ ಮಾಡುತ್ತಿದ್ದಾರೆ. ಅರ್ಧ ರಾತ್ರಿಯ ಕೆಲಸ ನಿಮಗೆ ಗೊತ್ತಾಗುವುದಿಲ್ಲ. ಕೆಲವರು ಮಾಡುತ್ತಿರುವ ಕೆಲಸವನ್ನು ಕಂಡುಹಿಡಿಯಲು ನಾವು ನಿದ್ದೆ ಮಾಡುತ್ತಿಲ್ಲ.

ಶ್ರೀ ಡಿ. ದೇವರಾಜ ಅರಸ್ :—ನಾನು ಮೊದಲೇ ಹೇಳಿದ್ದೇನೆ, ಯಾರಿಗೂ ಪ್ರೊಟೆಕ್ಷನ್ ಕೊಡಬೇಕಾದ ಅಗತ್ಯವಿಲ್ಲ. ಯಾರೋ ಒಬ್ಬರನ್ನು ದಾಕ್ಷಿಣ್ಯಕ್ಕೋಸ್ಕರ ಅಥವಾ ಜಾತಿಗೋಸ್ಕರ ಪ್ರೊಟೆಕ್ಟ್ ಮಾಡಬೇಕಾದ ಅಗತ್ಯವಿಲ್ಲ. ಏನಾದರೂ ಮಾಡಿ ಉಳಿದುಕೊಳ್ಳಬೇಕು ಎನ್ನುವುದು ಇರಬೇಕು. ಏನಾದರೂ ಮಾಡಿ ಏನಕೇನಪ್ರಕಾರೇಣ ನಡೆಯಬೇಕು ಎಂದಿಲ್ಲ. ಮುಖ್ಯ ಮಂತ್ರಿಯಾಗಿ ನಾಲ್ಕು ವರ್ಷವಿರಬಹುದು, ನಾಲ್ಕು ದಿವಸ ಇರಬಹುದು, What I am capable of doing, is more important. ನಾನು ಏನಾದರೂ ದೇಶದಲ್ಲಿ ಒಳ್ಳೆಯ ಕಾರ್ಯವಾಗತಕ್ಕದ್ದನ್ನು, ದೇಶಕ್ಕೆ ಒಳ್ಳೆಯದಾಗತಕ್ಕದ್ದನ್ನು ಮಾಡಬೇಕಾದರೆ ನನಗೆ ಕೆಲವು ಶಕ್ತಿಗಳಿರಬೇಕು ; ಆತ್ಮಶಕ್ತಿ ಇರಬೇಕು. ಬರೀ ಟೊಳ್ಳು ಮರದ ಹಾಗೆ ಅಧಿಕಾರದಲ್ಲಿರಬೇಕು ಎನ್ನುವುದು ನನಗಿಲ್ಲ. ಒಳಗೆಲ್ಲ ಟೊಳ್ಳಾಗಿ ಮೇಲೆ ಆಕಾರ ಮಾತ್ರ ಕಾಣುತ್ತಿರುತ್ತದೆ. ಅಂಥ ಸರ್ಕಾರದಿಂದ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದನ್ನು ನನಗಿಂತಲೂ ಹೆಚ್ಚಾಗಿ ಯಾರೂ ತಿಳಿದುಕೊಂಡಿಲ್ಲ.

At the moment there is no such thing. As it is we are carrying on. Supposing you bring a charge tomorrow and it is proved. Then how can I say ? As things stand today there is no change.

ಶ್ರೀ ಎಸ್. ಬಂಗಾರಪ್ಪ :—43 ಜನ ಶಾಸಕರು, ನಿಮ್ಮ ಪಕ್ಷದವರು, ರುಜು ಹಾಕಿ ಮಂತ್ರಿ ಮಂಡಲದ ಮೇಲೆ ಆಪಾದನೆ ಮಾಡಿದ್ದಾರೆ. ಅವರು ಏನೂ ಸ್ಪೆಸಿಫಿಕ್ ಚಾರ್ಜಸ್ ಮಾಡಿಲ್ಲ ಎಂದು ಈಗ ತಾವು ಹೇಳಿದಿರಿ. ಒಬ್ಬಿಬ್ಬರು ರುಜು ಮಾಡಿ ಕೊಟ್ಟಿದ್ದರೆ ಅದು ಬೇರೆ ವಿಷಯ. 43 ಜನ ರುಜು ಮಾಡಿ ಕೊಟ್ಟರೆ ಅನುಮಾನಕ್ಕೆ ಆಸ್ಪದ ಕೊಡತಕ್ಕ ವಿಷಯ. ಆದುದರಿಂದ ಆ ಸದಸ್ಯರನ್ನು ಕರೆದು ಸ್ಪೆಸಿಫಿಕ್ ಚಾರ್ಜಸ್ ಯಾರ ಮೇಲೆ ಇದೆ ಕೊಡಿ ಎಂದು ರಾಜ್ಯದ ಆಡಳಿತದ ದೃಷ್ಟಿಯಿಂದ ಕೇಳಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್ :—ಅದೆಲ್ಲ ಪತ್ರಿಕೆಗಳಲ್ಲಿ ಬಂದಿದೆ. ಇಂಟರ್ನಲ್ ಅಫೇರ್ ಆಗಿ ಉಳಿಯದೆ ಪತ್ರಿಕೆಗಳಲ್ಲಿ ಬಂದಿದೆ, ನಾನು ಹೇಳಿದ್ದೂ ಬಹಿರಂಗವಾಗಿ ಬಂದಿದೆ. ನಾನು ಚಾರ್ಜಸ್ ಏನು ಎಂದು ಕೇಳಿದ್ದೇನೆ, ಅವರು ಇನ್ನೂ ಹೇಳಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ :—ಅವರು ಹೇಳುವುದೂ ಇಲ್ಲ.

ಶ್ರೀ ಡಿ. ದೇವರಾಜ ಅರಸ್ :—ಅವರು ಕೊಟ್ಟರೆ ನಾನು ನೋಡಬೇಕಾದ್ದು ಕರ್ತವ್ಯ, ನೋಡೋಣ. ಸಂದರ್ಭಾನುಸಾರ ಸಾಕಷ್ಟು ನಮ್ಮ ತಿಳುವಳಿಕೆ ಸರಿ ಇಲ್ಲದೆ ಇರಬಹುದು, ಕೆಲವು ಫ್ಯಾಕ್ಟ್ಸ್ ಗೊತ್ತಿಲ್ಲದೆ ಇರಬಹುದು. ಆದುದರಿಂದ ಅನುಮಾನ ಇರಬಹುದು. ಒಬ್ಬ ಕ್ರಿಮಿನಲ್ ಆದರೂ, ಅವನನ್ನು ನೇಣು ಹಾಕುವುದಕ್ಕೆ ಮೊದಲು ಅವನಿಗೂ ಒಂದು ಚಾನ್ಸ್ ಕೊಡಬೇಕು ಎನ್ನುವುದು ಎಲ್ಲರಿಗೂ ಗೊತ್ತಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ನಮ್ಮಂಥ ಎದುರಿಗಿರುವ ವಿರೋಧಿಗಳಿಗಿಂತ ಒಳಗಿರುವ ವಿರೋಧಿಗಳ ಬಗ್ಗೆ ಎಚ್ಚರಿಕೆಯಿಂದ, ಹುಷಾರಾಗಿರಬೇಕಲ್ಲವೇ ?

ಶ್ರೀ ಡಿ. ದೇವರಾಜ ಅರಸ್ :—ಇರಲಿ, ರಾಜಕೀಯದಲ್ಲಿ ಇದೆಲ್ಲ ಇರುವುದೇ. ನಾವು ಇದಕ್ಕೆ ಹೊಸಬರೇನೂ ಅಲ್ಲ. ಅಷ್ಟು ಮಾತ್ರ ಹೇಳಬಲ್ಲೆ.

ಡಿವಿಜನಲ್ ರಿಕ್ರೂಟ್‌ಮೆಂಟ್ ಕಮಿಟಿಗಳಿವೆ. ರಿಕ್ರೂಟ್‌ಮೆಂಟ್ ಕಮಿಟಿಗಳ ಮೂಲಕ ನಮ್ಮ ಆಡಳಿತ ಯಂತ್ರ ಸುಗಮವಾಗಿ ನಡೆಯುವುದಕ್ಕೆ ಹೊಸ ರಕ್ತ ಕೂಡ ಬಂದು ಸೇರ ಬೇಕಾದ್ದು ಅಗತ್ಯ. ಆದರಿಂದಲೇ ನಿವೃತ್ತಿ ವಯಸ್ಸನ್ನು 58 ಕ್ಕೆ ಏರಿಸಿ ಒತ್ತಡಗಳಿದ್ದರೂ ವೈಯಕ್ತಿಕವಾಗಿ ಅದನ್ನು ಬೇಡ ಎಂದು ಹೇಳುತ್ತಿರುವುದು. ಒಂದು ಕಡೆ ನಿರುದ್ಯೋಗ ಸಮಸ್ಯೆ ಇದೆ. ಅದರ ಜೊತೆಗೆ ಸ್ವಲ್ಪ ಬೇಗ ಬೇಗ ಹೊಸಬರು ಬರುವುದೂ ಒಳ್ಳೆಯದು. ಅದರಿಂದ ನಮ್ಮ ಆಡಳಿತವು ಸ್ವಲ್ಪ ಉತ್ತಮವಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ :—ನಮ್ಮ ಐ. ಎ. ಎಸ್. ಅಧಿಕಾರಿಗಳು ಏನು ತಪ್ಪು ಮಾಡಿದ್ದಾರೆ ? ಕೇಂದ್ರ ಸರ್ಕಾರದ ಜೊತೆಯಲ್ಲಿ ಈ ವಿಚಾರವನ್ನು ಏಕೆ ಪ್ರಸ್ತಾಪ ಮಾಡಬಾರದು ?

Sri D. Devaraja Urs.—Regarding I.A.S. it is not in my hands. In respect of our services, I have been continuously resisting the idea.

ಒಂದು ಸಲ ಅನಿವಾರ್ಯವಾಗಿ ಟ್ರೇನ್ಡ್ ಟೀಚರ್ಸ್ ಇಲ್ಲ ಎನ್ನುವ ಕಾರಣಕ್ಕಾಗಿ ಸ್ಕೂಲ್ ಟೀಚರ್ಸ್‌ಗೆ ಕೆಲವು ವರ್ಷ 58 ವರ್ಷಕ್ಕೆ ಏರಿಸಬೇಕಾಗಿ ಬಂತು. ಅದರ ಬಗ್ಗೆ ನಾವು ಪುನಃ ಪರಿಶೀಲನೆ ಮಾಡುತ್ತಿದ್ದೇವೆ.

ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಮತ್ತು ನಿಮ್ನವರ್ಗಗಳವರ ವಿಚಾರದಲ್ಲಿ ಕೆಲವು ಅನ್ಯಾಯಗಳಾಗಿವೆ ಎನ್ನುವುದನ್ನು ಮಾನ್ಯ ಸದಸ್ಯರನೇಕರು ಹೇಳಿದ್ದಾರೆ. ಇತ್ತೀಚೆಗೆ ನಮ್ಮ ಕೈಯಲ್ಲಿ ಯಾವ ಯಾವ ರಿಕ್ರೂಟ್‌ಮೆಂಟ್ ಬರುತ್ತಿದೆ, ಉದಾಹರಣೆಗೆ ಪೊಲೀಸ್ ಇಲಾಖೆಯ ರಿಕ್ರೂಟ್‌ಮೆಂಟ್‌ನಲ್ಲಿ 1971–72 ನೇ ಇಸವಿಯಲ್ಲಿ ರಿಕ್ರೂಟ್ ಮಾಡುವಾಗ ಎಷ್ಟು ಸ್ಥಾನಗಳು ಅವರಿಗೆ ಸಿಕ್ಕಬೇಕಾಗುತ್ತೋ ಅಷ್ಟು ಕೊಟ್ಟಿದ್ದೇವೆ, ಅಷ್ಟೂ ಭರ್ತಿ ಮಾಡಿದ್ದೇವೆ. ಅದೇ ರೀತಿಯಲ್ಲಿ 1973 ನೇ ಇಸವಿಯಲ್ಲಿ ಕೂಡ 5 ಸ್ಥಾನಗಳನ್ನು ಕೊಡ ಬೇಕಾಗಿದ್ದು ಐದು ಸ್ಥಾನಗಳನ್ನೂ ಪೂರ್ತಿಯಾಗಿ ಅವರಿಗೇ ಕೊಟ್ಟಿದ್ದೇವೆ. ಇದಕ್ಕೆ ಹಿಂದೆ

ಏನಾಗಿತ್ತು ? ಸರಿಯಾಗಿ ಜನ ಬರಲಿಲ್ಲವೋ ಏನೋ. ಅವರಿಗೆ ಕೊಡಬೇಕಾದ ಪರ್ಸೆಂಟೇಜ್ ಪೂರ್ತಿಯಾಗಿ ಕೊಟ್ಟುಕೊಂಡು ಬಂದಿರಲಿಲ್ಲ. ಅದು ನಿಜ. ನಾನು ಇಲ್ಲ ಎಂದು ಹೇಳುತ್ತಿಲ್ಲ. ಇತ್ತೀಚೆಗೆ ಹಿಂದೆ ಇದ್ದ ಲ್ಯಾಕುನ ಸರಿ ಮಾಡುವುದಕ್ಕೆ ಸರ್ವಪ್ರಯತ್ನ ಮಾಡುತ್ತಿದ್ದೇವೆ. ಶ್ರೀಮಾನ್ ಕೆ. ಸಿದ್ದಯ್ಯನವರು ಬಹಳವಾಗಿ ಹೇಳಿದರು. ರೊಟೇಷನ್ ಸಿಸ್ಟಂ ಹೀಗೆ ಮಾಡ ಬೇಕಾಗಿತ್ತು, ಅದನ್ನು ತೆಗೆದದ್ದು ಸರಿಯಲ್ಲ ಎಂದು ಎಲ್ಲ ಹೇಳಿದರು. ಕೆಲವು ಲೋಪ ದೋಷಗಳಿದ್ದರೆ ಅದನ್ನೆಲ್ಲ ಸರಿ ಮಾಡಬೇಕಾಗುತ್ತದೆ. ಇದಕ್ಕೆ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿ, ಇವುಗಳನ್ನೆಲ್ಲ ಕೂಲಂಕಷವಾಗಿ ಪರಿಶೀಲನೆ ಮಾಡಿದ್ದು ಕೆಲವು ಸಿಫಾರಸು ಮಾಡಿದ್ದಾರೆ. ಇದು ಸರ್ಕಾರದ ಗಮನದಲ್ಲಿದ್ದು ಏನೇನು ಸರಿ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ನೋಡಿ ಮಾಡುತ್ತೇವೆ.

ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಇಷ್ಟು ಹೇಳಿದರೆ ಸಾಕು ಎಂದು ಕಾಣುತ್ತದೆ. ಟ್ರಾನ್ಸ್‌ಫರ್ಸ್ ಹಾಗೂ ಪ್ರಮೋಷನ್ಸ್ ಬಗ್ಗೆ ಒಂದು ಮಾತು ಹೇಳಿದ್ದಾರೆ. ಇದರ ಬಗ್ಗೆ ನನಗೆ ಸಂತೋಷವಾಗಿದೆ. ಏಕೆಂದರೆ ಇಲ್ಲಿ ಮಾತನಾಡಿದವರೆಲ್ಲರೂ ರಾಜಕೀಯದಲ್ಲಿರುವ ಶಾಸಕರುಗಳ ಇಂಟರ್‌ಫಿಯರೆನ್ಸ್ ಇರುವುದು ಸರಿಯಲ್ಲ ಎಂದು ಹೇಳಿರುವುದು ತುಂಬಾ ಸ್ವಾಗತಾರ್ಹವಾದ ಮಾತು. ಇದನ್ನು ನಾನೂ ಒಪ್ಪುತ್ತೇನೆ, ಆದರೆ ಎಲ್ಲಿ ತಮ್ಮ ದೃಷ್ಟಿಗೆ ಕೆಳಮಟ್ಟದಲ್ಲಿರುವ ಅಧಿಕಾರಿಗಳು ಹಾಗೂ ಇನ್ನಿತರ ಅಧಿಕಾರಿಗಳಿಂದ ತೊಂದರೆಗಳಾಗುತ್ತಿವೆ ಎಂದು ತಿಳಿದು ಬಂದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾದುದು ನ್ಯಾಯವಾದುದು ಮತ್ತು ಇಂತಹವುಗಳನ್ನು ತರಬೇಕು. ಆದರೆ ಇದನ್ನು ಗಮನಕ್ಕೆ ತರುವ ದೃಷ್ಟಿಯಲ್ಲಿ ತಾವು ವರ್ಗ ಮಾಡುವವರು ಅವನಲ್ಲ, ಇವನು ಎಂದು ಒಂದು ರೀತಿಯಾದ ಒತ್ತಡ ತರುವುದು ಸರಿಯಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಹಾಗು ಇನ್ನಿತರ ಸದಸ್ಯರು ಹೇಳಿದಂತೆ ಇದರಲ್ಲಿ ಹಸ್ತಕ್ಷೇಪ ವಿರುವುದು ಸರಿಯಲ್ಲ. ಇಂತಹ ವಿಚಾರಗಳನ್ನು ನಮಗೆ ತರದೇ ಇರುವುದು ಕ್ಷೇಮ. ಇದರ ತತ್ವವನ್ನು ನಾನು ಒಪ್ಪುತ್ತೇನೆ, ಇದರಲ್ಲಿ ಒಬ್ಬ ಅಧಿಕಾರಿಯನ್ನು ಇನ್ನೊಂದು ಕಡೆಗೆ ಟ್ರಾನ್ಸ್‌ಫರ್ ಮಾಡುವಾಗ ನಿಯಮದಂತೆ ಮಾಡಬೇಕಾಗುತ್ತದೆ ಮತ್ತು ಆಡಳಿತದ ದೃಷ್ಟಿಯಿಂದ ಎರಡು ವರ್ಷಕ್ಕೆ ಮೊದಲೇ ಮಾಡಬೇಕಾಗಿ ಬರುತ್ತದೆ. ಹೀಗೆ ಮಾಡುವಾಗ ಇವರನ್ನು ಮೂರು ವರ್ಷಗಳಿಗೆ ಮೊದಲೇ ಏಕೆ ವರ್ಗಮಾಡಬೇಕೆಂದು ಹೇಳಿದರು. ಮಾನ್ಯ ಸದಸ್ಯರಾದ ಶ್ರೀ ಸಯನಕ್‌ರವರು ಒಬ್ಬರು ಬಿ.ಡಿ.ಒ. ಬಗ್ಗೆ ಇಲ್ಲಿ ಹೇಳಿದರು. We did it because he was there in Belgaum District for over 10 years. He might have been there in a particular post for only three months. But he so managed to be in the same district for over 10 years.

Sri H. D. Deve Gowda.—I can give a number of instances wherein the officers have been transferred in two three places within a month.

Sri D. Devaraj Urs.—That should not happen. If it has happened it is not correct. It is for us to rectify. I will be very happy if such instances are brought to my notice. ಇದನ್ನು ಎಲ್ಲರೂ ಒಪ್ಪುತ್ತಾರೆ. ಸಾಧ್ಯವಾದಷ್ಟು ಮಟ್ಟಿಗೆ ಶಾಸಕರುಗಳು ಟ್ರಾನ್ಸ್‌ಫರುಗಳ ಬಗ್ಗೆ ಇಂಟರ್ ಫಿಯರ್ ಮಾಡುವುದನ್ನು ಕಡಮೆ ಮಾಡಬೇಕು, ಇದರಲ್ಲಿ ಒಂದು ಮಾತು ಹೇಳಬೇಕಾಗಿದೆ. ಕೆಲವು ಅಧಿಕಾರಿಗಳಿಗೆ ತೊಂದರೆಯಾಗಿರಬಹುದು ಎಂದು ಅವರು ಮನವಿಯನ್ನು

ಮೇಲಧಿಕಾರಿಗಳಿಗೆ ಮಾಡುವಾಗ ಇದರ ಒಂದು ಅಡ್ವಾನ್ಸ್ ಕಾಪಿಯನ್ನು ನೇರವಾಗಿ ನಮಗೇ ಕಳುಹಿಸಬಹುದು ಎಂದು ಮಾಡಲಾಗಿದೆ. ಸರಕಾರ ಇಂತಹ ನೇರವಾದ ಮನವಿಗಳು ಬಂದಾಗ ಇದರ ಬಗ್ಗೆ ವಿಚಾರ ಮಾಡಿ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಹಾಯ ವಾಗುತ್ತದೆ ಎಂದು ನಾವು ಈಚೆಗೆ ಹಾಗೆ ಮಾಡಿದ್ದೇವೆ.

Sri B. B. Sayanak.—When that B. D. O. was transferred from Bijapur to Belgaum why the officers concerned did not know that he was serving within that division for more than 10 years ?

Sri D. Devaraj Urs.—I told you already the reasons, as to why we had to do it.

ಅಡ್ವಾನ್ಸ್ ಕಾಪಿಗಳನ್ನು ನಾವು ನೇರವಾಗಿ ತರಿಸುವುದರಿಂದ ಎಷ್ಟೋ ವೇಳೆ ಇದರಲ್ಲಿ ನಮಗೆ ಎಲ್ಲ ವಿವರಗಳೂ ತಿಳಿಯುತ್ತವೆ, ಅನೇಕ ಸಂದರ್ಭಗಳಲ್ಲಿ ಕೆಲವು ಅಧಿಕಾರಿಗಳು ಇದನ್ನು ಬೇಕೆಂದೇ ಸಪ್ರೆಸ್ ಮಾಡಿರುತ್ತಾರೆಂದು ಗೊತ್ತಾಗಿದೆ. ಹಾಗೆ ಎಲ್ಲಾದರೂ ತಪ್ಪು ಆಗಿದ್ದರೆ ಅದನ್ನು ಕೂಡಲೇ ನೋಡಿ ಅದನ್ನು ಸರಿಪಡಿಸಲು ಅನುಕೂಲವಾಗುತ್ತದೆ. Even a lower official if he wants to seek redressal of his grievances we have never denied him a chance.

ಈಚೆಗೆ ಇದನ್ನು ಮಾಡಬೇಕೆಂದು ಮಾಡುತ್ತಿದ್ದೇವೆ. ನಾನೂ ಕೂಡ ಎಷ್ಟೋ ಜನರನ್ನು ನೋಡಿ ಅವರಿಂದ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. I have received applications ; heard their grievances ; I have likewise taken steps to see that those things are brought to my notice

ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಬಗ್ಗೆ ನಾನು ಆಗಲೇ ತಿಳಿಸಿದ್ದೆ. ಈಗ್ಗೆ ಒಂದು ವರ್ಷ ದಿಂದೀಚೆಗೆ ಅನೇಕ ಕ್ಷೇತ್ರಗಳಲ್ಲಿ ವಿಕೇಂದ್ರೀಕರಣ ಮಾಡಲು ಪ್ರಯತ್ನ ಮಾಡಿದ್ದೇವೆ, ಡೆಪ್ಯೂಟಿ ಕಮಿಷನರಂಗಳಿಗೂ ಡೀಸೆಂಟ್ರಲೈಸು ಮಾಡಿ ಕೆಲವು ಅಧಿಕಾರಗಳನ್ನು ಅವರಿಗೆ ವಹಿಸಲಾಗಿದೆ. ಇದನ್ನು ಮಾಡುವುದರ ಜೊತೆಗೆ ತಹಶೀಲು ಮಟ್ಟದಲ್ಲಿ ಕೂಡ ಅವರಿಗೆ ಕೆಲವು ಪವರುಗಳನ್ನು ಕೊಡಬೇಕೆಂದು ಮತ್ತು ಸೆಕ್ರೆಟೇರಿಯಟ್ ಲೆವೆಲ್‌ನಲ್ಲಿ ಕೆಲವು ಕಡೆ ಡೀಸೆಂಟ್ರಲೈಸ್ ಮಾಡುವ ಪ್ರಪೋಸಲ್‌ಗಳು ಬಂದಿವೆ. ಇವನ್ನೆಲ್ಲಾ ಮಾಡಲು ಸ್ವಲ್ಪ ನಿಧಾನವಾಗಿದೆ. ಇದಕ್ಕೆ ಕಾರಣ ನಮಗೆ ಮುಖ್ಯವಾದುದು ಎಂದರೆ ಇಂಟೆಗ್ರೇಷನ್ ಆಫ್ ಸರ್ವಿಸಸ್ ವಿಚಾರಗಳು. ಇದು 1957 ರಿಂದಲೂ ಬಂದಿವೆ. ಇದರಲ್ಲಿ ಕೆಲಸ ಮಾಡುವುದೇ ಒಂದು ದೊಡ್ಡ ತಲೆನೋವಾಗಿದೆ. ಸಾವಿರಾರು ರಿಟ್ ಅರ್ಜಿಗಳು ಹೈಕೋರ್ಟಿಗೆ ಹಾಗೂ ಸುಪ್ರೀಂ ಕೋರ್ಟಿಗೆ ಹೋಗಿವೆ, ಇಂತಹ ಎಲ್ಲ ಇಲಾಖೆಗಳ ಬಗ್ಗೆಯೂ ತೀರ್ಮಾನ ತೆಗೆದುಕೊಳ್ಳುವಾಗ ಸ್ವಲ್ಪ ನಿಧಾನವಾಗಿದೆ. ಈಗಾಗಲೇ ನಾವು ಎಲ್ಲ ಇಲಾಖೆಗಳ ಕೆಲಸಗಳನ್ನೂ ಮುಗಿಸಿ ಇನ್ನೂ ನಾಲ್ಕೈದು ಇಲಾಖೆಗಳ ಬಗ್ಗೆ ಸೀನಿ ಯಾರಿಟಿ ಇತ್ಯಾದಿ ವಿಚಾರಗಳನ್ನು ಮಾತ್ರ ಇನ್ನೂ ತೀರ್ಮಾನ ಮಾಡಬೇಕಾಗಿದೆ ಅಷ್ಟೆ. ಇವೆಲ್ಲಾ ಗೊಂದಲಮಯವಾಗಿರುವುದರಿಂದ ಇದರ ಬಗ್ಗೆ ಇನ್ನೂ ವಿಚಾರ ಮಾಡಬೇಕಾಗಿದೆ, ಇನ್ನು ಆರೇಳು ತಿಂಗಳುಗಳಲ್ಲಿ ಡೀಸೆಂಟ್ರಲೈಸೇಷನ್‌ಗಳನ್ನು ಮಾಡಬೇಕೆಂದು ಇದೆ ಮತ್ತು ಇನ್ನು ಕೆಲವು ಕಡೆ ಇವನ್ನು ಮಾಡುವುದರ ಪ್ರೋಸೆಸ್‌ಗಳಲ್ಲಿವೆ.

ಆಮೇಲೆ ಶ್ರೀ ಆರುಮುಗಂರವರು 7,900 ಪೋಸ್ಟುಗಳನ್ನು ಕ್ರಿಯೇಟು ಮಾಡಿದರು ಎನ್ನುವ ವಿಚಾರ ಇಲ್ಲಿ ಹೇಳಿದರು, ಇಷ್ಟು ದೊಡ್ಡದಾಗಿ ಪೋಸ್ಟುಗಳನ್ನು ಮಾಡಲಿಲ್ಲ. ಇವೆಲ್ಲ ಬಹಳ

ಹಿಂದಿನಿಂದ ಇದ್ದ ಪೋಸ್ಟುಗಳು. ಆದರೆ ಇವುಗಳಲ್ಲಿ ಕೆಲವನ್ನು ರೆಗ್ಯುಲರೈಸ್ ಮಾಡಲಾಯಿತು. ಅದರ ಅಂಕೆಗಳನ್ನು ಅವರು ಇಲ್ಲಿ ಹೇಳಿರಬಹುದು, ನಾನು ತಮ್ಮಲ್ಲಿ ಅರಿಕೆ ಮಾಡುವುದು ಇವೆಲ್ಲಾ ಒಬ್ಬರೇ ಅಧಿಕಾರಿಗಳಿಂದ ಮಾಡಿದುದಲ್ಲ, ಇದು ಹಿಂದೆ ಇದ್ದ ಮಂತ್ರಿಮಂಡಲದಲ್ಲೂ ಬಂದಿತ್ತು, ಆಗ ನಾವು ಇದ್ದೆವು. ಇದರ ಬಗ್ಗೆ ಅಲ್ಲಿ ಕೂಡ ಮೂರು ನಾಲ್ಕು ಸಲ ಚರ್ಚೆಯಾಗಿತ್ತು, ಈಗ ಮತ್ತೆ ಐದನೇ ಸಾರಿ ಪುನಃ ನಮ್ಮ ಮುಂದೆ ಕೂಡ ಬಂದಿದೆ; ಇದನ್ನೆಲ್ಲಾ ಒಬ್ಬರೇ ಅಧಿಕಾರಿಗಳು ಮಾಡಿದ್ದಾರೆ ಎಂದು ಹೇಗೆ ಹೇಳುವುದು ? It is not correct. I can only say that it has taken place over a period of eight to ten years. Only the temporary recruitments were regularised. The Hon. Member should also know that it is very difficult to say immediately as to how many of them belonged to a particular community. To start with I can give the percentage of S. C./S.T. representation.

Sri C. M. Arumugham .—Sir, you forget about Scheduled Caste and Scheduled Tribes. I know you are sympathetic to the S.C. and S.T. But the previous Governments have done great injustice to these people. But what I want to know is whether it is not a fact that out of the 7,900 posts regularised nearly 5,000 posts have gone to a single community ?

ಶ್ರೀ ಕೆ. ಪ್ರಭಾಕರ್ :—ರೆಕ್ರೂಟಿಂಗ್ ಆಫೀಸರ್ಸ್ ಅಂದರೆ ಇಲಾಖಾ ಮುಖ್ಯಾಧಿಕಾರಿಗಳು ಏನಿದ್ದಾರೆ ಅವರಿಗೆ ಹೊಸದಾಗಿ ಅಭ್ಯರ್ಥಿಗಳನ್ನು ಕೆಲಸಕ್ಕೆ ಟೆಂಪರರಿಯಾಗಿ ತೆಗೆದುಕೊಳ್ಳಬೇಡಿ ಎಂದು ಸರ್ಕಾರದವರು ಹೇಳಿದ್ದರೂ ಸಹ ಅವರು ಅಪಾಯಿಂಟ್ ಮಾಡಿಕೊಳ್ಳುತ್ತಿದ್ದಾರೆ, They are committing a breach of trust ಎಂದು ಆಗುತ್ತದೆ. ಇಂತಹ ಅಧಿಕಾರಿಗಳ ಬಗ್ಗೆ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಂಡಂತೆ ಕಾಣಿಸಲಿಲ್ಲ. ಈ ಅಪಾಯಿಂಟ್‌ಮೆಂಟ್‌ಗಳನ್ನು ತಾವು ಯಾವ ರೀತಿ ಜಸ್ಟಿಫೈ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್ :—ಅವರು ಅಪಾಯಿಂಟ್ ಮಾಡಿದ್ದನ್ನು ನೀವು ಹಿಂದೆ ಹೇಗೆ ರೆಗ್ಯುಲರೈಜ್ ಮಾಡಿದಿರಿ ? What are we to do for that? I am also a party to it. I do not try to blame Sri Veerendra Patil or Sri S. Nijalingappa. When I was the Minister, we did regularise about 3,000 appointments in the exigencies of service—we cannot help it. But to say that out of 7,900, 5,000 belong to one community is wrong. The appointing authority may know their castes. But, for the Government 't is very difficult to know. I will, however, try to gather he information as far as possible whether it is a fact that bout 5,000 posts have gone to one single community.

But, I think it is utterly unthinkable and thoroughly wrong because it cannot happen like that. Anyway, I will get it verified. However, I say that to apportion the blame on one single officer Sri G. V. K. Rao is thoroughly wrong.

Sri C. M. Arumugham :—Please do not try to protect the officer!

Sri D. Devaraj Urs :—Until I find an officer to be bad or has done a mistake, it is my fundamental duty to say what is a fact and what is not a fact. I must protect the officer if it becomes necessary. He is not the person who is responsible for all this. He was Divisional Commissioner, Belgaum and Dharwar for two years each. How can one Divisional Commissioner be held responsible for appointments to these 7,900 posts ? ಆದ್ದರಿಂದ ಅವರು ಅಧಿಕಾರದಲ್ಲಿದ್ದಾಗ ಆಗಿದೆ ಎಂದು ಹೇಳುವುದು ಸರಿಯಲ್ಲ. ಬೇರೆ ಬೇರೆ ಸಮಯದಲ್ಲಿ ಇದು ಆಗಿರಬಹುದು. ಇದರ ಬಗ್ಗೆ ನಾನು ವಿವರಗಳನ್ನು ಸಹ ತರಿಸಿ ನೋಡಿದ್ದೇನೆ. If I were to mention something about scheduled castes and scheduled tribes, my friend Sri Arumugham should not get angry. We have to protect their rights as per the Constitution. It is not out of obligation we are doing it; it is a duty cast on us and we have got to do it. It is not as if we are doing some kind of a favour to them. Whenever Government is discharging its duties, if it feels to protect it, we have to be held responsible—officers and ourselves. ಡಿವಿಜನಲ್ ಕಮೀಷನರ್ ಆಫೀಸ್‌ನಲ್ಲಿ ಕ್ಲಾಸ್-1, ಕ್ಲಾಸ್-2 ಮತ್ತು ಕ್ಲಾಸ್-3 ಪೋಸ್ಟ್‌ಗಳ ಬಗ್ಗೆ ರಾಜ್ಯಾಂಗದ ಪ್ರಕಾರ ರಕ್ಷಣೆ ಕೊಡಲಾಗಿದೆಯಲ್ಲದೆ ಅದಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಪ್ರೊಟೆಕ್ಷನ್ ಸಿಕ್ಕಿದೆ ಎಂಬುದು ಅಂಕಿಅಂಶಗಳ ಪ್ರಕಾರ ಗೊತ್ತಾಗುತ್ತಿದೆ. ಬಿ. ಡಿ. ಓ. ಗಳನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವ ಸಂದರ್ಭದಲ್ಲಿ ಇವರಿಗೆ 22 ಪರ್ಸೆಂಟ್‌ವರೆಗೆ ಕೊಟ್ಟಿದ್ದಾರೆ ಮತ್ತು ಗ್ರಾಮ ಸೇವಕರನ್ನು ನೇಮಕ ಮಾಡಿಕೊಳ್ಳುವಾಗ 18 ಪರ್ಸೆಂಟ್‌ವರೆಗೆ ಕೊಟ್ಟಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಅವರನ್ನು ಬ್ಲೇಮ್ ಮಾಡುವುದು ಅಷ್ಟು ಸೂಕ್ತವಲ್ಲ.

ಶ್ರೀ ಕೆ. ಸಿದ್ದಯ್ಯ :—ತಾವು ಲೋಕಲ್ ಕ್ಯಾಂಡಿಡೇಟ್ಸ್ ವಿಚಾರ ಮಾತನಾಡುತ್ತಾ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಮೀಸಲು ಸ್ಥಾನಗಳನ್ನು ಕೊಟ್ಟಿಲ್ಲ ಎಂದು ಹೇಳಿದಿರಿ. ಪಿ.ಎಸ್.ಸಿ. ಅವರು ಅಪಾಯಿಂಟ್ ಮಾಡುವಾಗ ಹಿಂದುಳಿದವರಿಗೆ ಯಾವ ರೀತಿ ಮೀಸಲು ಸ್ಥಾನ ಕೊಡಬೇಕೆಂದು ಇದೆಯೋ ಅದೇ ರೀತಿ ಸ್ಥಳೀಯ ಅಭ್ಯರ್ಥಿಗಳನ್ನು ರೆಗ್ಯುಲರೈಜ್ ಮಾಡುವಾಗಲೂ ಸಹ ಹಿಂದುಳಿದವರಿಗೆ ಮೀಸಲು ಸ್ಥಾನಗಳನ್ನು ಆರ್ಟಿಕಲ್ 309ರ ಪ್ರಕಾರ ಏತಕ್ಕೆ ಪ್ರೊವೈಡ್ ಮಾಡಲಿಲ್ಲ ? ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಏತಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲಿಲ್ಲ ?

ಶ್ರೀ ಡಿ. ದೇವರಾಜ ಅರಸ್ :—ಹಿಂದೆ ಆಗಿದ್ದನ್ನು ಕಟ್ಟಿಕೊಂಡು ನಾನು ಏನು ಮಾಡಲಿ ? ಮುಂದೆ ಏನು ಮಾಡಬೇಕೋ ಅದನ್ನು ಮಾಡೋಣ.

ಇನ್ನು ಪೋಲೀಸ್ ಇಲಾಖೆಗೆ ಬಂದರೆ, ಮಾನ್ಯ ಸದಸ್ಯರು ಕೆಲವರು ಈ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟರೆ, ಮತ್ತೆ ಕೆಲವು ಮಾನ್ಯ ಸದಸ್ಯರು ಕ್ರಿಟಿಸಿಸಮ್ ಮಾಡಿದ್ದಾರೆ. ಒಂದು ವಿಚಾರವನ್ನು ಎಲ್ಲರೂ ಒಪ್ಪಿದ್ದಾರೆ. ಈಗಿನ ಐ.ಜಿ.ಪಿ. ಅವರು ಆ ಸ್ಥಾನಕ್ಕೆ ಯೋಗ್ಯರಾಗಿದ್ದಾರೆ ಅನ್ನುವಂಥ ಶಹಭಾಶ್‌ಗಿರಿಯನ್ನು ಕೊಟ್ಟಿದ್ದಾರೆ. ಅವರನ್ನು ಗೋವಿಗೆ ಹೋಲಿಕೆ ಮಾಡಿದ್ದಾರೆ ಅಂದಮೇಲೆ ಎಲ್ಲರಿಗೂ ಅನುಕೂಲ ಆದಂತೆ ಆಯಿತು. ಈ ಇಲಾಖೆಯಲ್ಲಿ ಕೆಲವು ಆಡಳಿತ ದೋಷಗಳಿವೆ ಎಂದು ಹೇಳಿದರು. ಮತ್ತು ಕೇಸ್‌ಗಳು ಬೇಗ ಬೇಗ ಇತ್ಯರ್ಥವಾಗುವುದಿಲ್ಲ, ನಿಧಾನವಾಗುತ್ತಿದೆ ಎಂದು ಕೆಲವರು ಹೇಳಿದ್ದಾರೆ. ಮಾನ್ಯ ಶಾಮಣ್ಣನವರು ಮಾತನಾಡುವಾಗ ಕೇಸ್‌ಗಳು ಹೋದವರ್ಷಕ್ಕಿಂತ ಈ ವರ್ಷ ಜಾಸ್ತಿಯಾಗಿವೆ ಎಂದು ಕ್ರಿಟಿಸಿಸಮ್ ಮಾಡಿದರು. ಕೇಸ್‌ಗಳು ಜಾಸ್ತಿಯಾಗಿವೆ ಎಂಬುದನ್ನು ಎರಡು ದೃಷ್ಟಿಯಿಂದ ನೋಡಬಹುದು. ಜಾಸ್ತಿ ವಿಜಿಲೆಂಟ್ ಆಗಿದ್ದರೆ ಕೇಸ್‌ಗಳು ಜಾಸ್ತಿಯಾಗುತ್ತವೆ ; ಲೆಸ್ ವಿಜಿಲೆಂಟ್ ಆದರೆ ಕೇಸ್‌ಗಳು ಕಡಿಮೆಯಾಗುತ್ತವೆ. ಇನ್ನೂ ಒಂದು ಕಾರಣವನ್ನು ಈ ಬಗ್ಗೆ ಕೊಡಬಹುದು ; ಏನೆಂದರೆ ಪೋಲೀಸ್ ಸ್ಟೇಷನ್ನಿಗೆ ಬಂದಂಥ ದೂರುಗಳನ್ನು ದಾಖಲು ಮಾಡಿಕೊಳ್ಳದಿದ್ದರೆ ಕೇಸ್‌ಗಳು ಕಡಿಮೆಯಾಗಬಹುದು, ಅಥವಾ ಬಂದಿದ್ದನ್ನೆಲ್ಲಾ ದಾಖಲು ಮಾಡಿಕೊಂಡರೆ ಕೇಸ್‌ಗಳು ಜಾಸ್ತಿಯಾಗಬಹುದು; ಆದರೆ ಬಂದಂಥ ಕೇಸ್‌ಗಳನ್ನು ಯಾವ ರೀತಿ ವಿಲೇವಾರಿ ಮಾಡಿದ್ದಾರೆಂಬುದು ಇಲ್ಲಿ ಮುಖ್ಯವಾದ ಅಂಶ. ಈ ವಿಚಾರದಲ್ಲಿ ಎಲ್ಲ ಸರಿಯಾಗಿದೆ ಎಂದು ನಾನು ಹೇಳುವುದಿಲ್ಲ. ಆದರೆ ಹಂತಹಂತವಾಗಿ ನಮ್ಮ ದಕ್ಷತೆಯನ್ನು ಹೆಚ್ಚಿಸುವುದಕ್ಕಾಗಿ ಪ್ರಯತ್ನಗಳನ್ನು ಪ್ರಾಮಾಣಿಕವಾಗಿ ನಡೆಸುತ್ತಿದ್ದೇವೆ ಎಂಬ ಮಾತನ್ನು ನಿಮ್ಮ ಮುಂದೆ ಧೈರ್ಯವಾಗಿ ಹೇಳಬಲ್ಲೆ. ಇದರಲ್ಲಿ ಎಷ್ಟು ಕೇಸುಗಳು ದಾಖಲಾಗಿವೆ, ಎಷ್ಟು ಕೇಸುಗಳ ಇನ್‌ವೆಸ್ಟಿಗೇಷನ್ ನಡೆದಿದೆ ಎನ್ನುವುದನ್ನು ನಾನು ಹೇಳುತ್ತೇನೆ,

ಶ್ರೀಮಾನ್ ದೇವೇಗೌಡರು ನಂದಗುಡಿ ವಿಚಾರವನ್ನು ಹೇಳಿದ್ದಾರೆ. ಇದು ರಾಂಗ್‌ಫುಲ್ ಕನ್‌ಫೈನ್‌ಮೆಂಟ್ ಆಫ್ ಬಾಳಪ್ಪ ಎಂದು ಕಾಣುತ್ತದೆ. ಹಿಂದೆ ಇದು ಕಾಲ್ ಅಟೆನ್‌ಷನ್ ನೋಟೀಸ್‌ನಲ್ಲಿ ಕೂಡ ಬಂದಿತ್ತು. ಬಾಳಪ್ಪನವರನ್ನು ಅರೆಸ್ಟ್ ಮಾಡಿದ್ದು ಲೀಗಲ್ ಆಗಿ ಪ್ರೂವ್ ಆಗಿ ಒಂದು ತೆಫ್ಟ್ ಕೇಸಿನಲ್ಲಿ ಅವನನ್ನು ಸಸ್ಪೆಕ್ಟ್ ಮಾಡಿದ್ದರು. ಅದು ಸಾಬೀತು ಆಗಿರುವುದರಿಂದ ಆ ಕೇಸು ರಾಂಗ್‌ಫುಲ್ ಕನ್‌ಫೈನ್‌ಮೆಂಟ್ ಅಲ್ಲ.

ಅದೇ ರೀತಿ ಕುಣಿಗಲ್‌ನಲ್ಲಿ ಬಹಳ ವಂಟ್ಟಿಗೆ ಕರ್ಫ್ಯೂ ಆಜ್ಞೆಯನ್ನು 3–4 ಸಾರಿ ಜಾರಿ ಮಾಡಿದ್ದರು. ಟೆನ್‌ಷನ್‌ನಲ್ಲಿ ಜಾತಿ ಜಾತಿ ಜಗಳ ಬರುತ್ತದೆ. ಅದನ್ನು ತಕ್ಷಣ ಹತೋಟಿಯಲ್ಲಿ ತೆಗೆದುಕೊಳ್ಳಬೇಕಾದರೆ ಆ ರೀತಿ ಕರ್ಫ್ಯೂ ಹಾಕುವುದು ತಪ್ಪು ಎಂದು ಕಾಣುವುದಿಲ್ಲ. ಅಂಥಾ ಸಂದರ್ಭಗಳಲ್ಲಿ ಸಮಾಧಾನ ಮಾಡಬೇಕು ಎಂದರೆ ಅದು ಬರೀ ಪೋಲೀಸಿನವರಿಂದಲೇ ಸಾಧ್ಯವಾಗುವುದಿಲ್ಲ. ಜಾತಿಮಂತಗಳ ಘರ್ಷಣೆ ಆಗುವುದನ್ನು ತಪ್ಪಿಸುವುದಕ್ಕೆ ಎಷ್ಟೇ ಪ್ರಯತ್ನ ಮಾಡಿದರೂ ಸ್ವಲ್ಪ ಸೆಂಟಿಮೆಂಟಲ್ ಆಗಬಾರದು, ಜವಾಬ್ದಾರಿಯಿಂದ ವರ್ತಿಸಬೇಕು. ಒಂದು ತಿರುಪತಿ ವೆಂಕಟರಮಣ ಟೆಂಪಲ್‌ನಲ್ಲಿ ನಾಮಹಾಕುವುದು "ವಿ" ಷೇಪ್ ಇರಬೇಕೇ, 'ಯು' ಷೇಪ್ ಇರಬೇಕೇ ಎನ್ನುವ ಜಗಳ ಬಂದು ಅದು ಇನ್ನೂ ಪೂರೈಸಿಲ್ಲ. ಅದು ಸುಪ್ರೀಮ್ ಕೋರ್ಟಿನವರೆಗೂ ಹೋಗಿದೆ. ಇನ್ನೂ ತೀರ್ಮಾನವಾಗಿಲ್ಲ.

Some section of the people have gone to the Supreme Court in respect of putting 'Namas to Lord Venkateswara'. One section wants that 'U' shape 'nama' to be put and another section wants 'V' shape 'nama' to be put. When

we have gone to such an extent in such simple matters, what about other matters ? ಹೀಗಿರುವಾಗ ಇದನ್ನು ಎಷ್ಟು ಬೇಗ ತಪ್ಪಿಸುವುದಕ್ಕಾಗುತ್ತದೆ. ಈ ರೀತಿ ಜಾತಿಮತಗಳ ಜಗಳ ಆಗುವುದನ್ನು ತಪ್ಪಿಸುವುದಕ್ಕೆ ನಾವು ಪ್ರಯತ್ನ ಮಾಡೋಣ. ಇಂಥಾ ಕೇಸುಗಳಲ್ಲಿ ಪೊಲೀಸಿನವರು ಯಶಸ್ವಿಯಾಗುವುದಕ್ಕೆ ಆಗುತ್ತದೆಯೇ ? ಇಂಥಾ ಜಗಳವನ್ನು ತಪ್ಪಿಸುವುದಕ್ಕೆ ಸಾರ್ವಜನಿಕರ ಮುಖಂಡರು ಹೆಚ್ಚು ಪ್ರಮಾಣದಲ್ಲಿ ಮುಂದೆ ಬರಬೇಕು. ಮೈನಾರಿಟಿಗಳ ಬಗ್ಗೆ ಹೆಚ್ಚು ಗಮನ ಕೊಟ್ಟು ಅವರಿಗೆ ರಕ್ಷಣೆಯನ್ನು ಕೊಡಬೇಕಾಗುತ್ತದೆ. ಅಂಥವರಿಗೆ ರಕ್ಷಣೆ ಕೊಡುವ ದೃಷ್ಟಿಯಿಂದ ಬಹುಸಂಖ್ಯಾತರು ಹೆಚ್ಚು ಸಹನೆಯಿಂದ ನಡೆದುಕೊಳ್ಳಬೇಕಾಗುತ್ತದೆ. ಅನುಕಂಪವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಸಾರ್ವತ್ರಿಕವಾಗಿ ನಾನು ಜನರನ್ನು ಅದನ್ನು ಬೇಡುತ್ತೇನೆ. ಪೊಲೀಸಿನವರ ಪ್ರಯತ್ನಗಳು ಸಫಲವಾಗಬೇಕಾದರೆ ಎಲ್ಲರ ಸಹಕಾರವೂ ಪೂರ್ಣವಾಗಿ ಸರ್ಕಾರಕ್ಕೆ ಬೇಕಾಗಿದೆ. ಕಂಪ್ಲೇಂಟ್ಸ್ ಬಗ್ಗೆ ಹೇಳುವುದಾದರೆ

1972–73 Cases registered of Cognisable offences		45,160
End of 1972	do	5,955 cases
1973 Cognisable offences ...		9,518
Offences under investigation		2,887
Total cognisable offences under investigation over 4 months 4,528		
Less than 2 months	....	8,059

ಇದರಿಂದ ಪೊಲೀಸಿನವರು ಇನ್ನೂ ಹೆಚ್ಚು ಶ್ರದ್ಧೆವಹಿಸಿ ಇನ್‌ವೆಸ್ಟಿಗೇಷನ್ ನಡೆಸಬೇಕು ಎಂದು ಜರೂರಾಗಿ ನಡೆಯುತ್ತಿದೆ ಎಂದು ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆಮೇಲೆ ಶ್ರೀಮಾನ್ ದೇವೇಗೌಡರು ಎಂ.ಎಸ್.ಇ.ಬಿ. ಯ ಒಬ್ಬ ಅಫಿಷಿಯಲ್ ಅನ್ನು ಶ್ರೀಮಾನ್ ಬಸವಯ್ಯ ಎನ್ನುವ ಪಿ.ಎಸ್.ಐ ಅವರ ಹೊಡೆದಿದ್ದಾರೆ. ಅವರನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದಾರೆ. ಅವರು ಹೈಕೋರ್ಟಿಗೆ ಹೋದರು. ಅಲ್ಲಿ ಏನು ಮಾಡಿದ್ದಾರೆ. ಎಂದರೆ ಸರ್ಕಾರದ ಅನುಮತಿ ಇಲ್ಲದೆ ಆ ಕೇಸನ್ನು ಕೋರ್ಟಿಗೆ ತರುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಮತ್ತೆ ಅವರಿಗೆ ಅನುಮತಿ ಕೊಡಬೇಕೆಂದು ಅದು ಸರ್ಕಾರದ ಮುಂದೆ ಇದೆ.

We have not taken a final decision because I have got a report from the IGP. We are subjecting that report to the scrutiny of the Law Department. After scrutiny, we will take a final decision. ವಿಟ್‌ನೆಸ್ ಟ್ರಯಲ್ ಡಿಲೇ ಆಗಿ ಆ ಕೇಸು ಪೋಸ್ಟ್‌ಪೋನ್ ಆಗುತ್ತಿದೆ. ವಿಟ್‌ನೆಸಸ್ ಟೈಮಿಗೆ ಸರಿಯಾಗಿ ಬರುವುದಿಲ್ಲ. ಆದ್ದರಿಂದ ಟ್ರೆಯಲ್ ಡಿಲೇ ಆಗುತ್ತಿದೆ. ಆದ್ದರಿಂದ ಸರ್ಕಾರದ ಜವಾಬ್ದಾರಿ ಅದರಲ್ಲಿ ಇಲ್ಲ. ಇಂಥಾ ಒಂದು ವಿಟ್‌ನೆಸ್ ಅನ್ನು ಕರೆದುಕೊಂಡುಬರಬೇಕಾದರೆ 2 ರೂಪಾಯಿ ಭತ್ಯವನ್ನು ಗೊತ್ತು ಮಾಡಿದ್ದಾರೆ. ಅದರಲ್ಲಿಯೂ ಕ್ರಿಮಿನಲ್ ಕೇಸಿಗೆ ಭತ್ಯ ಇಲ್ಲವೇ ಇಲ್ಲ ಎಂದು ಹೇಳುತ್ತಾರೆ. ನನ್ನನ್ನು ಯಾವುದೋ ಒಂದು ಕೇಸಿಗೆ ವಿಟ್‌ನೆಸ್ ಆಗಿ ಕರೆದುಕೊಂಡು ಹೋಗಿದ್ದರು. ಆದರೆ ಆ ಕೇಸಿನಲ್ಲಿ ನನಗೆ ಅವರು ಭತ್ಯವನ್ನು ಕೊಡಲೇ ಇಲ್ಲ. ವಿಟ್‌ನೆಸ್‌ಗಳಿಗೆ ಭತ್ಯವನ್ನು ಕೊಡದ್ದಿದರೆ ಅವರಿಗೆ ಅತೃಪ್ತಿಯುಂಟಾಗುತ್ತದೆ. No DA is paid to the witnesses. They have to go spending their own money. I am asking the

concerned Department to go into this question. It is not fair that such witnesses should not be paid any 'batta'.

ಶ್ರೀ ಎಚ್. ಎಸ್. ಸಿದ್ದಪ್ಪ:—ಅಪೋಜಿಟ್ ಪಾರ್ಟಿಯವರು ಭತ್ಯ ಕೊಟ್ಟು ಕೇಸು ನಡೆಸುತ್ತಾರೆ.

Sri D. Devaraj Urs:—I do not know why this system developed like this. I had to go to a court as a witness in a criminal case. I came to know then that I was not paid any 'batta'. I was surprised to know. How can we ask a witness to go to a court without payment of 'batta'? I have asked the Department to examine this matter.

ಗುಲ್ಬರ್ಗಾದ ಮಾರ್ವಾಡಿ ಒಬ್ಬರ ಕೇಸು ಮತ್ತು ರಾಣಿ ಬೆನ್ನೂರು ಕೇಸಿನ ಬಗ್ಗೆ ಹೇಳಿದ್ದಾರೆ. ಯಾವುದೋ ಒಂದು ಮಾರ್ವಾಡಿ ಕೇಸು ಬಂದಿತ್ತು. ಆ ಬಗ್ಗೆ ಸಿ.ಐ.ಡಿ. ಡಿಪಾರ್ಟ್‌ಮೆಂಟಿನವರನ್ನು ಆ ಸ್ಥಳಕ್ಕೆ ಕಳುಹಿಸಿ ಇನ್‌ವೆಸ್ಟಿಗೇಷನ್ ನಡೆಸಿದೆ. ಈಗ ಅದು ಕಂಪ್ಲೀಟ್ ಆಗುವುದರಲ್ಲಿದೆ. ಇನ್‌ವೆಸ್ಟಿಗೇಷನ್ ರಿಪೋರ್ಟ್ ಬಂದಮೇಲೆ ಅದರಲ್ಲಿ ಯಾರೇ ತಪ್ಪಿತಸ್ಥರಾಗಿದ್ದರೂ ಕೂಡ ಅವರನ್ನು ಶಿಕ್ಷೆ ಮಾಡದೆ ಬಿಡುವುದಿಲ್ಲ.

ಆ ರಾಣಿ ಬೆನ್ನೂರು ಕೇಸಿನಲ್ಲಿ ಇಮ್ಮಿಡಿಯೆಟ್ ಆಗಿ ಮೆಜಿಸ್ಟೀರಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಆರ್ಡರ್ ಮಾಡಿದೆ. ಅದರಲ್ಲಿ ತಪ್ಪಿತಸ್ಥರು ಗೊತ್ತಾದ ಮೇಲೆ. We have kept three police officers under suspension. We have kept under suspension one Tahsildar and we have ordered for the suspension of one Doctor. ಆದ್ದರಿಂದ ಆ ಬಗ್ಗೆ ಯಾವ ಅನುಮಾನವನ್ನು ಮಾನ್ಯ ಸದಸ್ಯರು ಇಟ್ಟುಕೊಳ್ಳಬೇಕಾಗಿಲ್ಲ. ಅದರಲ್ಲಿ ತಪ್ಪಿತಸ್ಥರು ಯಾರು ಎಂದು ಗೊತ್ತಾಗಿ ನಮ್ಮ ಗಮನಕ್ಕೆ ಬಂದಮೇಲೆ ಅದನ್ನು ನಾವು ಮುಚ್ಚಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಅದರಲ್ಲಿ ಇಂಪಾರ್ಷಿಯಲ್ ಎನ್‌ಕ್ವೈರಿ ಆಗಬೇಕು ಎಂದು ಹೇಳಿದ್ದೇವೆ. ತಪ್ಪಿತಸ್ಥರು ಎಂದು ಕಂಡುಬಂದಾಗ ಅವರನ್ನು ಶಿಕ್ಷೆಗೆ ಒಳಪಡಿಸಿದ್ದೇನೆ. ಮುಂದೆಯೂ ಅದೇ ರೀತಿ ಮಾಡುತ್ತೇವೆ.

ಸಾಮಾನ್ಯವಾಗಿ ಪೊಲೀಸ್ ಸ್ಟೇಷನ್ನಿನಲ್ಲಿ ಕಂಪ್ಲೇಂಟ್‌ಗಳನ್ನು ಕೊಡುತ್ತಾರೆ. ಅವನ್ನು ಸರಿಯಾಗಿ ಕೆಲವು ಕಡೆಗಳಲ್ಲಿ ನೋಡುವುದಿಲ್ಲ. ಅವು ರಿಜಿಸ್ಟರ್ ಆಗುವುದಿಲ್ಲ. ಇನ್ನೊಂದು ಸಾರಿ ಕೇಳಿದರೆ ದೂರುಗಳು ಬಂದಿವೆಯೆಂದು ಹೇಳುತ್ತಾರೆ. ಅದಕ್ಕಾಗಿ ಇತ್ತೀಚೆಗೆ ನಾವು ಏನು ಮಾಡಿದ್ದೇವೆಂದರೆ ಕಂಪ್ಲೇಟ್ ಕೊಟ್ಟವರಿಗೆ ಬರೆದು ಕೊಡಬೇಕು. ಪೂರಾ ವಿಧವಾದ ಚಲನ್ ಹಾಗೂ ರೆಸೀಟ್‌ಗಳನ್ನು ಅದರ ದಾಖಲಾತಿಯನ್ನು ಇಟ್ಟು ಕೊಂಡಿರಬೇಕೆಂದು ಹೇಳಿದ್ದೇವೆ. ಯಾವ ಕಾಲದಲ್ಲಿ ಪೊಲೀಸ್ ಸ್ಟೇಷನ್ನಿಗೆ ಕಂಪ್ಲೇಂಟ್ ಕೊಟ್ಟಿದ್ದಾರೆಂಬುದನ್ನು ಮುಚ್ಚುಮರೆ ಇಟ್ಟುಕೊಳ್ಳದೆ ತಿಳಿಸುವುದಕ್ಕೆ ಅವಕಾಶವಾಗುತ್ತದೆ. ಈ ರೀತಿಯಾದ ಒಂದು ಹೊಸ ಪದ್ಧತಿಯನ್ನು ಈಗ ನಾವು ಇಂಟ್ರಡ್ಯೂಸ್ ಮಾಡಿದ್ದೇವೆ.

ಇನ್ನು ಮಾನ್ಯ ಶ್ರೀ ನಾಗಣ್ಣನವರು ಬೆಂಗಳೂರಿನಲ್ಲಿರತಕ್ಕ ಕೆಲವು ಹೋಟಲುಗಳಲ್ಲಿ ನಡೆಯತಕ್ಕ ದೋಷಗಳನ್ನು ಹೇಳಿದರು. ಕೆಲವು ಹೋಟಲುಗಳಲ್ಲಿ ಮಟಕಾ ಗ್ಯಾಂಬ್ಲಿಂಗ್ ಬಹಳವಾಗಿ ನಡೆಯುತ್ತಿದೆ. ಇನ್ನು ಕೆಲವು ಹೋಟಲುಗಳಲ್ಲಿ ದುರ್ವ್ಯವಹಾರವು ನಡೆಯುತ್ತದೆಯೆಂದು ಹೇಳಿದ್ದಾರೆ. ಅವರು ಆ ರೀತಿ ಹೇಳಿದ್ದು ಆಧಾರ ರಹಿತವಾದುದಲ್ಲ. ಶೇಕಡ 70

ಅಥವಾ 75ರಷ್ಟು ಅಧಿಕಾರಿಗಳು ಈ ಆಟವನ್ನು ಆಡುತ್ತಾರೆಂದು ಹೇಳಿದರು. ಅದರಲ್ಲಿ ನಾವೇನೂ ಅನುಮಾನಪಡಬೇಕಾಗಿಲ್ಲ. ಪೋಲೀಸರ ಲೆವೆಲ್ಲಿನಲ್ಲಿ ಇದರ ಬಗ್ಗೆ ಪೂರ್ಣವಾದ ಜಾಗೃತಿ ಇಲ್ಲವೆಂದು ನಾನು ಘಂಟಾಘೋಷವಾಗಿ ಅವರ ಜೊತೆಯಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಅವರಲ್ಲಿ ಜಾಗೃತಿ ಸಾಕಷ್ಟು ಇಲ್ಲದೇ ಇರಬಹುದು. ಆದರೆ ಅಧಿಕಾರಿಗಳಾದವರೂ ಸಹ ಅದನ್ನು ನಡೆಸುತ್ತಾ ಇರಬೇಕಾದರೆ, ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ನಿಜವಾಗಿಯೂ ಒಪ್ಪುತ್ತೇನೆ. ಮಾನ್ಯ ಸದಸ್ಯರು ಈಗ ಸರ್ಕಾರದ ಗಮನವನ್ನು ಇತ್ತಕಡೆಗೆ ಹರಿಸಿದ್ದಾರೆ. ಅದರ ಬಗ್ಗೆ ಸೂಕ್ತ ಇನ್‌ವೆಸ್ಟಿಗೇಷನ್ನನ್ನು ನಡೆಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :—ಕೆಲವಾರು ಜನರಲ್ ಕ್ಲಬ್‌ಗಳಲ್ಲಿ ಈ ಆಟ ನಡೆಯುತ್ತಿವೆ. ಪೋಲೀಸ್ ಸ್ಟೇಷನ್ ಪಕ್ಕದಲ್ಲಿಯೇ ಇಂತಹ ಕ್ಲಬ್‌ಗಳು ಇವೆ.

Sri D. Devaraja urs :—There is force in what you say. Recently we got it investigated and there must be some truth in it.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಮಾನ್ಯ ಶ್ರೀ ನಾಗಣ್ಣನವರು ಭಾಷಣ ಮಾಡಿದ ಮೇಲೆ ಸರ್ಕಾರದವರು ಈ ವಿಚಾರದಲ್ಲಿ ಗಮನ ಕೊಡುತ್ತೇನೆಂದು ಹೇಳಿದರು. ಆದರೆ ಈಗ ರಸ್ತೆಯಲ್ಲಿ ಒಬ್ಬ ಅಧಿಕೃತವಾಗಿ ತನ್ನ ಹೆಂಡತಿಯನ್ನು ಕರೆದುಕೊಂಡು ಹೋಗುತ್ತಿದ್ದರೆ, ಅನೇಕ ಸಂದರ್ಭಗಳಲ್ಲಿ ಪೋಲೀಸರು ಪ್ರಶ್ನೆ ಮಾಡುವುದೂ ಉಂಟು. ಮಫ್ತಿಯಲ್ಲಿರುವವರಿಗೆ ಬುದ್ಧಿ ಚಪಲವಾಗಿ ಆ ರೀತಿ ಕೇಳುವುದೂ ಉಂಟು. ಆದ್ದರಿಂದ ತಾನು ತನ್ನ ಸ್ವಂತ ಹೆಂಡತಿಯನ್ನು ಬೀದಿಗಳಲ್ಲಿ ಸರಾಗವಾಗಿ ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡಬೇಕು.

ಶ್ರೀ ಡಿ. ದೇವರಾಜ್ ಅರಸ್ :—ಅದು ಮಾನ್ಯ ಶ್ರೀ ಪುಟ್ಟಸ್ವಾಮಯ್ಯನವರ ಅನುಭವ, ಕುಮಾರಿ ಅಕ್ಕಮಹಾದೇವಿ ಉಪ್ಪಿನ್ ಅವರ ವಿಷಯವಾಗಿ ಈಗಾಗಲೇ ಕರ್ಣಾಟಕ ಯೂನಿವರ್ಸಿಟಿ ಅವರು ಇನ್‌ವೆಸ್ಟಿಗೇಷನ್ ನಡೆಸಿದ್ದಾರೆ. ಇದರಿಂದೇನು ಗೊತ್ತಾಗಿದೆಯೆಂದರೆ, ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅವರ ವರದಿಯ ಆಧಾರವಿಟ್ಟುಕೊಂಡು ಅಲ್ಲಿನ ಕೆಲವು ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿದ್ದಾರೆ. ಅದನ್ನು ಪೂರ್ತಾ ಹಷಪ್ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಅದರಲ್ಲಿ ಅಧಿಕಾರಿಗಳದು ಪೂರ್ತಿಯಾಗಿ ತಪ್ಪು ಇಲ್ಲದಿದ್ದರೆ ಬಿಡೋಣ.

ಇನ್ನು ನಾಗಮಂಗಲ ಕೇಸಿನಲ್ಲಿ ಕೂಲಂಕಷವಾದ ಎನ್‌ಕ್ವೈರಿ ಮಾಡುತ್ತಿದ್ದಾರೆ. We got it enquired and it was found that what I had stated previously is correct.

ಶ್ರೀ ಎಚ್. ಟಿ. ಕೃಷ್ಣಪ್ಪ :—ಈ ಸಭೆಯಲ್ಲಿ ಚರ್ಚೆ ನಡೆಯುತ್ತಿದೆ. ನಾಗಮಂಗಲದಲ್ಲಿ ಆ ಒಂದು ಕೇಸಿನ ಬಗ್ಗೆ ಮೊದಲೇ ವಿಚಾರಮಾಡದೆ, ಅತಿ ಶೀಘ್ರವಾಗಿ ಪೋಲೀಸಿನವರು ಗೋಲೀಬಾರ್ ಮಾಡಿದರು. ಅದಕ್ಕೆ ಇದುವರೆಗೂ ಮ್ಯಾಜಿಸ್ಟ್ರೇಟ್ ಎನ್‌ಕ್ವೈರಿ ಮಾಡಿದ್ದಾರೆಂಬುದು ಕಂಡುಬರಲಿಲ್ಲ. ಆಗ ಪೋಲೀಸಿನವರಿಗೂ ಯಾವ ಪ್ರಾಣಾಪಾಯ ಇರಲಿಲ್ಲ. ಅಲ್ಲಿ ಗೋಲೀಬಾರ್ ಆಗಿರುವುದು ಹುಡುಗಾಟಿಕೆಯಾಗಿದೆ, ಅವರು ಮ್ಯಾಜಿಸ್ಟ್ರೀರಿಯಲ್ ಎನ್‌ಕ್ವೈರಿ ಮಾಡಿದ್ದಾರೆ ಎಂಬುದಾಗಿ ಸುಳ್ಳು ವರದಿಗಳನ್ನು ಅಧಿಕಾರಿಗಳು ತಂದುಕೊಟ್ಟರೆ, ಅದನ್ನು ಇಲ್ಲಿ ಓದಬೇಕು. In the light of the report of the Magistrate, the previous report prepared by the Police is found to be absolutely false.

ಶ್ರೀ ಡಿ. ದೇವರಾಜ್ ಅರಸ್ ;—ಅವರು ತಂದೊಡನೆ ಇಲ್ಲಿ ಓದಬೇಕೆಂದಿಲ್ಲ. ಮಾನ್ಯ ಸದಸ್ಯರಿಗೆ ಏನಾದರೂ ಇದರ ಬಗ್ಗೆ ಅನುಮಾನ ಬಂದರೆ ಸಿ. ಐ. ಡಿ. ರಿಪೋರ್ಟ್ ತರಿಸಿಕೊಂಡು ಪುನಃ ಮ್ಯಾಜಿಸ್ಟೇರಿಯಲ್ ಎನ್‌ಕ್ವೈರಿ ಮಾಡಬಹುದು. ಈ ಮಾನ್ಯ ಸಭೆಯಲ್ಲಿ ಸರ್ಕಾರದವರು ಏನೇ ಹೇಳಿದರೂ ಕೂಡ ಅದರ ಬಗ್ಗೆ ಪುನರ್ವಿಮರ್ಶೆ ಮಾಡಬೇಕೆಂದು ಏನೊಂದು ಮನೋಭಾವ ಇದೆಯೋ ಅದನ್ನು ನಾನೂ ಇಟ್ಟುಕೊಂಡಿದ್ದೇನೆಂದು ನಾನು ತಮ್ಮಲ್ಲಿ ತಿಳಿಸುತ್ತಿದ್ದೇನೆ. ನಾವು ಹೇಳಿದ್ದನ್ನೇ ಪರ್‌ಸಿಸ್ಟ್ ಮಾಡಿ, ಅದಕ್ಕಿಂತ ಬೇರೆ ಮಾರ್ಗವಿಲ್ಲವೆಂದು ನಾನು ತಮಗೆ ತಿಳಿಸಿಲ್ಲ. ಮಾನ್ಯ ಸದಸ್ಯರಿಗೆ ಇನ್ನೂ ಹೊಸ ವಿಚಾರಗಳು ಗೊತ್ತಿರಬಹುದು, ಆದ್ದರಿಂದ ಮಾನ್ಯ ಸದಸ್ಯರು ಇದನ್ನು ಪರ್‌ಸಿಸ್ಟ್ ಮಾಡುವುದರಿಂದ, ಆ ತರಹ ಕ್ರಿಟಿಸಿಜಮ್ಸ್‌ನ್ನು ನಾನು ಕೇಳುವುದಕ್ಕೆ ಇಷ್ಟವಿಲ್ಲ. ನಾನು ಆ ರೀತಿಯಾಗಿ ನಡೆದುಕೊಳ್ಳುವುದಕ್ಕೂ ಇಷ್ಟವಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ :—ಸುಳ್ಳು ವರ್ತಮಾನವೆಂದು ಗೊತ್ತಾದ ಮೇಲೆ, ನೀವು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

Sri M. S. KRISHNAN.—You say that the matter was investigated and there is some truth in it. There is another report quite opposite to it. You collected information and sent it to the department and the department wrote it back saying that it is found correct. The real truth is somewhere else. How to get over this ?

Sri D. DEVARAJ URS.-If it is possible we shall get it re-investigated. Somewhere we must strike a balance. We will certainly get it examined again.

ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ತಪ್ಪು ಎಂಬುದಾಗಿ ಹೇಳುವುದಕ್ಕಾಗುವುದಿಲ್ಲ. ಅದು ಒಂದು ಪರ್ಟಿಕ್ಯುಲರ್ ಇನ್‌ಸ್ಟೆನ್ಸ್ ಬಿಡಿ. ಜನರಲ್ಲಾಗಿ ಟ್ರೂತ್ ಆಗಿ ಇರುವುದನ್ನು ಹಷಪ್ ಮಾಡುವುದು ಇರುತ್ತದೆ. ತಪ್ಪು ಹೇಳುವವರೂ ಸಹ ಇದ್ದಾರೆ. ಆದಕ್ಕಾಗಿ ಎಲ್ಲಾ ಸರಿಯಿಲ್ಲವೆಂದು ಹೇಳುವುದಕ್ಕೂ ಆಗುವುದಿಲ್ಲ, ಈ ಕೇಸ್ ಕೋರ್ಟಿನ ಮುಂದೆ ಇದೆ. ಆದ್ದರಿಂದ ಈಗಲೇ ಬ್ಯಾಲೆನ್ಸ್ ಮಾಡಿ ಅದರ ಬಗ್ಗೆ ಅಷ್ಟು ಇಷ್ಟು ಎಂದೇನೂ ಹೇಳುವುದಕ್ಕಾಗುವುದಿಲ್ಲ. ಈ ಕೇಸ್ ಜೆನ್ಯೂನ್ ಆಗಿದೆಯೆಂದು ಮಾನ್ಯ ಸದಸ್ಯರು ಹೇಳುವಾಗ ಅದರ ಬಗ್ಗೆ ಅವರ ಬಾಯಿ ಮುಚ್ಚಿಸಬೇಕೆಂದು ನಾವೇನೂ ಮಾಡುವುದಿಲ್ಲ, ಅದರ ಬಗ್ಗೆ ಸರಿಯಾಗಿ ಪರೀಕ್ಷೆ ಮಾಡಿಸಲಾಗುತ್ತದೆ. ಸಿ.ಐ.ಡಿ. ಬ್ರಾಂಚ್‌ನಿಂದ ಎನ್‌ಕ್ವೈರಿ ಮಾಡಿಸುತ್ತೇನೆ.

ಒಬ್ಬ ಸದಸ್ಯರು :—ಹಿಂದೆ ಸತ್ತುಹೋದ ಮಾನ್ಯ ಶ್ರೀ ಕರೀಗೌಡರ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ನಾನು ಆ ಒಂದು ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಅದರ ಬಗ್ಗೆ ಏನಾಯಿತೆಂಬುದನ್ನು ನನಗೆ ತಿಳಿಸುತ್ತೀರಾ ? ಅವರು ಓಡುತ್ತಿದ್ದ ಲಾರಿಯಿಂದ ಬಿದ್ದು ಸತ್ತರು. ತಲೆಯ ಮೇಲೆ ಒಂದು ಗಾಯವಾಗಿತ್ತು. ಅದು ಪ್ರೈಮಾಫೇಸಿ ಕೇಸ್. ಪೋಲೀಸರ ರಿಪೋರ್ಟ್ ಸುಳ್ಳು ಎಂಬುದಾಗಿ ತಮ್ಮ ಮನಸ್ಸಿಗೆ ಬರುವುದಿಲ್ಲವೇ ? ಅಂದಮೇಲೆ ಟ್ರೂತ್ ಯಾವುದು ? ಅವರು ಓಡುತ್ತಾ ಇರುವ ಲಾರಿಯಿಂದ ದಾರಿಯಲ್ಲಿ ಬಿದ್ದರೆ, ಅದರ ಬಗ್ಗೆ ಏನಾದರೂ ಕೇಸ್ ಆಗಿದ್ದರೆ, ಅದನ್ನು ಕಾನೂನು ಖಾತೆ ವಿಚಾರ ಮಾಡಬೇಕೆಂಬುದನ್ನು ತಾವು ತಿಳಿಸಬೇಕು.

ಶ್ರೀ ಡಿ. ದೇವರಾಜ್ ಅರಸ್ :—ಈ ಕೇಸ್ ಕೋರ್ಟಿನ ಮುಂದೆ ಇದೆ. ಪೋಲೀಸ್ ಇಲಾಖೆಯಲ್ಲಿ there is one portion of dead wood, and that is a well-known fact. ಪೋಲೀಸ್ ಕಾನ್‌ಸ್ಟೇಬಲರ ಇಂಪ್ರೂವ್ ಮಾಡಬೇಕು. ಹೊಸದಾಗಿ

ಸಬ್ ಇನ್‌ಸ್ಪೆಕ್ಟರ್ ಲೆವೆಲ್ಲಿನಲ್ಲಿ ರೆಕ್ರೂಟ್‌ಮೆಂಟ್‌ಗಳನ್ನು ಮಾಡುತ್ತಿದ್ದಾರೆ. ಒಂದು ಕಾಲಕ್ಕೆ ಹಿಂದೆ ಇದ್ದವರನ್ನು ಈಗ ಕಳುಹಿಸುವುದಕ್ಕಾಗುವುದಿಲ್ಲ ಯುವಕರು ಈಗ ಇದಕ್ಕೆ ಬರುತ್ತಾ ಇದ್ದಾರೆ. ಆದ್ದರಿಂದ ಇದನ್ನು ಇಂಪ್ರೂವ್ ಮಾಡುವುದಕ್ಕೆ ಅವಕಾಶವಿದೆ. ಪೋಲೀಸ್ ಕಾನ್‌ಸ್ಟೇಬಲ್‌ಗಳ ಕ್ವಾಲಿಫಿಕೇಷನ್ ಎಸ್.ಎಸ್.ಎಲ್.ಸಿ. ಸ್ಟಾಂಡರ್ಡ್ ಇರ ಬೇಕೆಂದು ಮಾಡುವುದು ಒಳ್ಳೆಯದು. ಅವರು ಲಾ ಅಂಡ್ ಆರ್ಡರ್ ಬಗ್ಗೆ ಕೆಲವಾರು ವಿಚಾರಗಳನ್ನು ತಿಳಿದುಕೊಂಡಿರಬೇಕು. ಅನೇಕ ವಿಚಾರಗಳನ್ನು ಅವರು ಕಲಿತುಕೊಂಡಿರಬೇಕು. ಸಾರ್ವಜನಿಕರಲ್ಲಿ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕೆಂಬ ವಿಧಾನವನ್ನು ಕಲಿತಿರಬೇಕು. ಒಟ್ಟಿನಲ್ಲಿ ಅವರಿಗೆ ವಿದ್ಯಾ ಅರ್ಹತೆ ಇರುವುದು ಒಳ್ಳೆಯದೆಂದು ನಾನು ಹೇಳುತ್ತೇನೆ. ಇದನ್ನು ತಾವು ಒಪ್ಪುತ್ತೀರೆಂದು ನನಗೆ ಕಾಣುತ್ತದೆ.

ಇನ್ನು ತಾವು ಈ ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ ಒಂದು ಮಿನಿಮಂ ಕ್ವಾಲಿಫಿಕೇಷನ್—ಎಸ್.ಎಸ್.ಎಲ್.ಸಿ. ಅನ್ನಾದರೂ ಇಡುವುದು ಅಗತ್ಯ ಎಂದು ಹೇಳಿದ್ದೀರಿ ಅದನ್ನು ಪರಿಶೀಲಿಸ ಲಾಗುತ್ತಿದೆ. I do not know whether we have already taken a decision. Anyway, we are going to take that decision, if it is not already taken. ನಮ್ಮ ಮೈಸೂರು ರಾಜ್ಯದಲ್ಲಿ ಈ ಪೋಲೀಸ್ ಖಾತೆಯ ವಿಚಾರದಲ್ಲಿ ಇನ್ನೂ ಒಂದು ವಿಶೇಷವಿದೆ, ಅದನ್ನೂ ತಾವು ತಿಳಿದುಕೊಳ್ಳುವುದು ಒಳ್ಳೆಯದು. ಅದು ಏನೆಂದರೆ—ನಮ್ಮ ರಾಜ್ಯದ 1973-74ರ ಬಡ್ಜೆಟ್ಟಿನಲ್ಲಿ ಈ ಇಲಾಖೆಗೆ ತೆಗೆದಿಟ್ಟಿರತಕ್ಕ ಹಣ 14 ಕೋಟಿ 35 ಲಕ್ಷ ರೂಪಾಯಿ. ಇದೇ ಬಾಬಿಗೆ ಕಳೆದ ಸಾಲಿನಲ್ಲಿ ಅಂದರೆ 1972—73 ರರಲ್ಲಿ 10 ಕೋಟಿ 70 ಲಕ್ಷ ರೂಪಾಯಿ ಮಾತ್ರ. ಇದನ್ನು ತಾವು ನೋಡಿದರೆ ಕಳೆದ ವರ್ಷಕ್ಕೂ ಮತ್ತು ಚಾಲ್ತಿ ಸಾಲಿಗೂ ಇದರಲ್ಲಿ ಏನು ಹೆಚ್ಚುವರಿಯಾಗಿದೆ ಎಂಬುದು ತಮಗೇ ವೇದ್ಯ ವಾಗುತ್ತದೆ. ಈ ಹೆಚ್ಚುವರಿ ಮೊಬಲಗನ್ನು ಇಲಾಖೆಯ ಬಡವಾಣಿಗೂ ಮತ್ತು ನೌಕರರ ಸಂಬಳ ಸಾರಿಗೆಗಳನ್ನು ಉತ್ತಮಗೊಳಿಸುವುದಕ್ಕೂ ಮತ್ತು ಅವರ ಡ್ರೆಸ್ಸಿನಲ್ಲಿ ಬದಲಾವಣೆ ಮಾಡುವುದಕ್ಕೂ ಉಪಯೋಗಿಸಲಾಗುತ್ತದೆ. All these matters are being looked into. ಮಾನ್ಯ ಕೃಷ್ಣನ್ ಅವರು ನೆನ್ನೆ ಹೇಳಿದ ಪಾಯಿಂಟನ್ನೂ ಕೂಡ ನಾನು ಪರಿಶೀಲನೆ ಮಾಡುತ್ತಿದ್ದೇನೆ. ನಾವು ಈ ದಿವಸ ಪೋಲೀಸ್ ಇಲಾಖೆಗೆ ನಮ್ಮ ರಾಜ್ಯದಲ್ಲಿ ಖರ್ಚುಮಾಡಲಾಗುತ್ತಿರುವ ಹಣ ರಾಜ್ಯದ ಒಟ್ಟು ಆದಾಯದಲ್ಲಿ ಶೇಕಡ 3 ರಷ್ಟು ಆಗುತ್ತದೆ. ಪರ್ ಕ್ಯಾಪಿಟಾ ಎಕ್ಸ್‌ಪೆಂಡಿಚರ್ ತೆಗೆದುಕೊಂಡರೆ ಅದು ಶೇಕಡ 4.70 ಆಗುತ್ತದೆ. The cost per policeman is 4523. Per capita expenditure on Police during 1972-73 was 370 and the cost per policeman was 3753, whereas now it is 4523. Now take Andhra Pradesh for instance. Their total budget is Rs. 412 crores. ಆಂಧ್ರದವರು ಪೋಲೀಸ್ ಬಾಬಿಗೆ ಖರ್ಚುಮಾಡುತ್ತಿರುವುದು 19 ಕೋಟಿ 12 ಲಕ್ಷ ರೂಪಾಯಿ ಅಂದರೆ ಅದು ರಾಜ್ಯದ ಒಟ್ಟು ವರಮಾನದಲ್ಲಿ ಶೇಕಡ 4 ರಷ್ಟು ಆಯಿತು. ಈ ವರ್ಷ ಆಂಧ್ರದಲ್ಲಿ ಪೋಲೀಸ್ ಇಲಾಖೆಯಲ್ಲಿ ಪರ್ ಕ್ಯಾಪಿಟಾ ಎಕ್ಸ್‌ಪೆಂಡಿಚರ್ 4.47 ಆಗುತ್ತೆ. ನಮ್ಮಲ್ಲಿ ಕಳೆದ ವರ್ಷ ಇದು 4.15 ಇತ್ತು. ಇನ್ನು ತಮಿಳು ನಾಡಿಗೆ ಬಂದರೆ ಅಲ್ಲಿ ಅವರು ಅಲ್ಲಿ ರಾಜ್ಯದ ಒಟ್ಟು ವರಮಾನದಲ್ಲಿ ಶೇಕಡ ನಾಲ್ಕರಷ್ಟನ್ನು ಖರ್ಚುಮಾಡುತ್ತಿದ್ದಾರೆ. ಕೇರಳದಲ್ಲಿ ರಾಜ್ಯದ ಒಟ್ಟು ವರಮಾನದಲ್ಲಿ ಶೇಕಡ 5ರಷ್ಟನ್ನು ಖರ್ಚು ಮಾಡುತ್ತಿದ್ದಾರೆ. As compared to Andhra, Tamil Nadu and Kerala, the percentage is less here. But that does not mean that we should not improve their lot, but so far as the

numerical strength is concerned, we have kept it at a minimum point. May be they have their own reasons. I am not trying to cast any criticism against them. But comparatively, we are in this position.

ಇಲ್ಲಿ ಒಂದು ಏನು ಹೇಳಬಹುದೆಂದರೆ-ಹೋಂ ಡಿಪಾರ್ಟ್‌ಮೆಂಟಿನಲ್ಲಿ ಟ್ರೈನಿಂಗ್ ಅನುಕೂಲತೆಗಳನ್ನು ಹೆಚ್ಚಿಸುವುದಕ್ಕೆ ಮತ್ತು ಟೆಕ್ನಿಕ್ಕುಗಳನ್ನು ಇಂಪ್ರೂವ್ ಮಾಡಲು ಒಂದು ಕಮಿಟಿಯನ್ನು ಮಾಡಿದ್ದೇವೆ. We have got two Training Centres. That also is one step forward. ಆಗಿಂದಾಗಾ ಸದರನ್ ಜೋನಲ್ ಕಾನ್‌ಫರೆನ್ಸನ್ನು ಮಾಡುತ್ತಿದ್ದೇವೆ. We are considering how to evolve a common method of controlling disturbances-communal and other disturbances. We are trying to evolve certain pattern of tackling this problem and we are also thinking of having a special battalion in the Armed Police. That is now being finalised.

ಶ್ರೀ ಎಂ. ಎಸ್. ಕೃಷ್ಣನ್ :—ಈಗ ಹೋಂ ಡಿಪಾರ್ಟ್‌ಮೆಂಟ್ ಮುಖ್ಯಮಂತ್ರಿಗಳ ಕೈಲಿದೆ. ಆದರಲ್ಲಿ ಅವರ ಸಹೋದ್ಯೋಗಿಗಳು ಕೈಹಾಕಬಹುದೆ? You have to see that Law and Order is maintained. But if some other Ministers begin to interfere, is it correct and would you condone it?

Sri D. DEVARAJ URS.—I agree with the hon. Member that so far as the Home Department is concerned, nobody shall interfere, except the Home Minister. Such things have not come to my notice. You are at liberty to bring it to my notice. Orders must go through me and the Secretary.

ಶ್ರೀ ಎಂ. ಎಸ್. ಕೃಷ್ಣನ್ :—ನೆನ್ನೆಯು ದಿವಸ ನಾನು ತಮಗೆ ಎಚ್. ಎಂ. ಟಿ. ಗೆ ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರೂ ಮತ್ತು ಮಾನ್ಯ ಅಜೀಜ್ ಸೇಠ್ ಅವರು ಫೋನ್ ಮಾಡಿದ ವಿಷಯು ತಿಳಿಸಿದ್ದೆ....

Sri D. DEVARAJ URS :—Supposing the Labour Minister or any other Minister has anything, he has to get things done through me and the Home Secretary. Nobody else can directly pass orders at any level.

A sum of Rs. 45 lakhs 25 thousand is given as grant-*cum*-loan. This is used in respect of modernising the Police Department, motor vehicles, wireless equipment, Forensic Science Laboratory and F.P.B.

The question of uniforms is also before us and we are presently doing it.

Sri M. S. KRISHNAN :—After the Tukol Commission's recommendations, they have stopped the allowances which were being given. Now, it is being given only to those above the level of Circle Inspectors.

Sri D. DEVARAJ URS :—We are insisting on Refresher Course for the Constabulary, because, otherwise, they will lose touch with whatever they have learnt. In addition, we have a proposal to adopt an Industrial Security Scheme also.

Sri M. S. KRISHNAN :—Do not do it, because in this connection there has already been a lot of discussion in the Parliament and many persons including your own partymen have spoken against it. They have said that this would result in too much power being given, which would be misused totally.

Sri D. DEVARAJ URS :—In case it has to be done, we will consult labour leaders, discuss the matter with them and then come to a decision. But I have to get a promise from the labour leaders that they will see that peace is maintained. Labour Unions are there and Trade Unionism is there. I am not coming in the way of labour exercising their legitimate rights, but they should not resort to violence. That is the one thing with which, I think, the whole House will agree.

Sri M. S. KRISHNAN :—This morning paper carries a news that the Chief Minister had called the leading industrialists of our country on 2nd May to discuss the industrial relation situation in the State, etc. I would request him to have a similar meeting of all the trade union leaders of the State and see that a discussion ensues on the question of labour relation with the management, etc.

ಶ್ರೀ ಡಿ. ದೇವರಾಜ ಅರಸ್ :—ಒಂದೇ ಸಲ ಎಲ್ಲರನ್ನೂ ಕರೆಸಿದರೆ ಜಗಳವಾಗುತ್ತದೆ ಎಂದು ಮೊದಲು ಅವರನ್ನು ಕರೆಸಿದೆ, ತಮ್ಮನ್ನೂ ಕರೆಸಲಾಗುವುದು. ಟ್ರೈಪಾರ್ಟೈಟ್ ಮೀಟಿಂಗ್ ಮಾಡುವುದು ಎಲ್ಲರೂ ಕಲೆತು ಮಾತನಾಡುವುದು ಒಳ್ಳೆಯದು ಎಂಬ ಅಭಿಪ್ರಾಯ ನಮಗೂ ಇದೆ. ಮಾನ್ಯ ಸದಸ್ಯರು ಬೇಜಾರು ಪಡಬಾರದು.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಒಟ್ಟು ಹೆಣ್ಣುಮಗಳನ್ನು ಐ. ಜಿ. ಪಿ. ಮಾಡುವಿರಾ ?

ಶ್ರೀ ಡಿ. ದೇವರಾಜ ಅರಸ್:—ಇನ್ನೊಂದು ವಿಚಾರ ಹೇಳಿದರು, ಹೆಂಗಸರನ್ನು ಪೋಲೀಸು ಇಲಾಖೆಯಲ್ಲಿ ನೇಮಕಮಾಡಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ಗಂಡಸರು ಐ. ಜಿ. ಪಿ. ಆದರೆ ಅವರು ದನವಿನಂಥ ಮನುಷ್ಯರು ಎಂದು ಹೇಳಿದ್ದಾರೆ. ಅದಕ್ಕೆ ಹೆಣ್ಣುಮಗಳನ್ನು ಮಾಡಿ ಎಂದು ಹೇಳಿದೆ.

ಶ್ರೀ ಡಿ. ದೇವರಾಜ ಅರಸ್ :—ಒಟ್ಟಿನಲ್ಲಿ ಪೋಲೀಸು ಇಲಾಖೆ ಲಾ ಅಂಡ್ ಆರ್ಡರ್ ಕಾಪಾಡುವುದಲ್ಲದೆ ಇನ್ನು ಮೇಲೆ ನಮ್ಮ ದೇಶದಲ್ಲಿ ಅನೇಕ ರೀತಿಯಾದ ಕಾನೂನುಗಳನ್ನು ಜಾರಿ ಮಾಡಬೇಕಾಗಿ ಬರುತ್ತದೆ, ಅವುಗಳ ಬಗ್ಗೆ ಅವರ ಸಹಾಯ ಬೇಕಾಗಿದೆ. ಹೊಸ ರೀತಿಯ ಕಾನೂನುಗಳು ಬರುತ್ತಿವೆ. ಅದರಲ್ಲೂ ಮುಖ್ಯವಾಗಿ ಲ್ಯಾಂಡ್ ರಿಫಾರಮ್ಸ್‌ಗೆ ಸಂಬಂಧಪಟ್ಟಿರುವ ಭೂ ಕಾನೂನು ಬರುವುದು, ಅದನ್ನು ಹಳ್ಳಿಗಳಲ್ಲಿ ಎನ್‌ಫೋರ್ಸ್ ಮಾಡುವುದು ಅಷ್ಟು ಸುಲಭವಲ್ಲ. ಅದರಲ್ಲೂ ಗೇಣಿದಾರರಿಗೆ ರಕ್ಷಣೆ ಕೊಡುವುದು ಅಷ್ಟು ಸುಲಭವಲ್ಲ. ಭೂಮಿಯನ್ನು ಬಡವರಿಗೆ, ಹರಿಜನರಿಗೆ ಹಂಚಿಕೆ ಮಾಡಬೇಕಾದರೆ ಕೆಲವರು ಭೂಮಿಯನ್ನು ಆಕ್ರಮಿಸಿಕೊಂಡಿರುವರು, ಅವರು ಬಿಟ್ಟುಕೊಡುವುದಿಲ್ಲ. ಸಾಗುವಳಿ ಚೀಟಿ ಕೊಟ್ಟಿದ್ದರೂ ಭೂಮಿಯ ಹತ್ತಿರ ಹೋದರೆ ಬಲಿಹಾಕುತ್ತೇವೆ ಎಂದು ಹೆದರಿಸುವುದುಂಟು. ಇದೆಲ್ಲಾ ತಪ್ಪಿಸಬೇಕಾದರೆ ಕೆಲವು ಪೋಲೀಸರ ಸಹಾಯ ಬೇಕು. ಕೆಲವರು ಭೂ ಮಾಲೀಕರಿದ್ದಾರೆ, ಅವರು ಬಡವರಿಗೆ ಭೂಮಿ ಬಿಟ್ಟುಕೊಡುವುದಿಲ್ಲ. ಗ್ರಾಮಠಾಣ ಹಂಚುವಾಗ ಆ ಜಾಗದಲ್ಲಿ ಬೇಲಿ ಹಾಕಿಕೊಂಡಿರುವವರು ಹಿತ್ತಲು ಮಾಡಿಕೊಂಡಿರುವವರು ಜನರು ಆ ಜಾಗವನ್ನು ಸುಫರ್ದಿಗೆ ತೆಗೆದುಕೊಳ್ಳಲು ಹೋದರೆ ಹೆದರಿಸುವರು. ಅಧಿಕಾರಿಗಳೂ ಸಹ ಇದನ್ನು ನೋಡಿ ಸುಮ್ಮನಿರುವರು. ರೆವೆನ್ಯೂ ಅಧಿಕಾರಿ ಮತ್ತು ಪೋಲೀಸು ಅಧಿಕಾರಿ ಇದನ್ನು ನೋಡಿಕೊಂಡು ಸುಮ್ಮನಿರುವ ಸಂದರ್ಭಗಳೂ ಇವೆ. ಇದಕ್ಕಾಗಿ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಬೋರ್ಡ್ ಆದರೂ ಇದನ್ನು ನೋಡಿಕೊಳ್ಳಬೇಕು. ತಾಲ್ಲೂಕು ಬೋರ್ಡು ಸದಸ್ಯರು ಇದಕ್ಕೆ ಗಮನ ಕೊಡಬೇಕು, ಇಲ್ಲದಿದ್ದರೆ ಎಂ. ಎಲ್. ಎ. ಗಳ ಲೆವಲ್‌ನಲ್ಲಿ ಒಂದು ಕಮಿಟಿಯಾದರೂ ಇದಕ್ಕೆ ಮಾಡಬೇಕು ಎಂದು ಯೋಚನೆಮಾಡುತ್ತಿದ್ದೇನೆ. 10 ಅಥವ 15 ಜನ ಸೇರಿಸಿ ಒಂದು ಸಮಿತಿ ಇದಕ್ಕಾಗಿ ಮಾಡಬೇಕು. ಹೋಬಳಿಯಿಂದ, ಮತ್ತಿತರ ಕಡೆಗಳಿಂದ ನಾನಾ ದೂರುಗಳು ಸಮಸ್ಯೆಗಳು ಬರುವುವು. ಸೀಮೆಎಣ್ಣೆ, ಸಿಮೆಂಟು, ಆಹಾರಧಾನ್ಯ, ಸಕ್ಕರೆ ಮುಂತಾದುವುಗಳನ್ನು ಹಂಚಬೇಕಾಗುವುದು, ಇದಕ್ಕೆ ಅವರ ಸಹಾಯ ಪಡೆಯಬಹುದು. ಇಂಥ ಕೆಲವು ಪದಾರ್ಥಗಳು ಜನಸಾಮಾನ್ಯರಿಗೆ ಸಿಕ್ಕುತ್ತಿಲ್ಲ ಎಂದು ಹೇಳುವಾಗ ಇದರಲ್ಲಿ ಅನೇಕ ಲೋಪದೋಷಗಳಿರುವಾಗ ಇದನ್ನು ಗಮನಿಸಲು ಒಂದು ಸಮಿತಿ ಇದ್ದರೆ ಉತ್ತಮ. ಜಮೀನು ಹಂಚಲು ಲ್ಯಾಂಡ್‌ಗ್ರ್ಯಾಂಟ್ ಕಮಿಟಿ ಮಾಡಿದೆ. ಈ ಎಲ್ಲಾ ಕಾರ್ಯಗಳನ್ನು ಮಾಡುವಾಗ ಅನೇಕ ದೂರುಗಳು ಬರುವುದರಿಂದ ಅವನ್ನು ಗಮನಿಸಲು ಒಂದು ಸಮಿತಿ ಇರುವುದು ಒಳ್ಳೆಯದು. ನಮಗೆ ಅನೇಕ ದೂರುಗಳು ಬರುವುವು, ಎಂ. ಎಲ್. ಎ. ಗಳ ಕಷ್ಟ ನನಗೆ ಗೊತ್ತಿದೆ, ಅವರಿಗೆ ಅನೇಕ ದೂರುಗಳು ಬರುವುವು. ಇದಕ್ಕೆ ನನ್ನ ಸಲಹೆ ಹೇಳುವುದಾದರೆ ತಾಲ್ಲೂಕು ಮಟ್ಟದಲ್ಲಿ ನಮ್ಮ ಮೇಲಧಿಕಾರಿಗಳ ಸಂಗಡ ಮಾತನಾಡಿ ಒಂದು ಸಮಿತಿಮಾಡಿ ಅದಕ್ಕೆ ಯೋಗ್ಯರಾದವರನ್ನು ನಾಮಿನೇಟ್ ಮಾಡಿದರೆ ಸ್ವಲ್ಪ ಅನುಕೂಲವಾಗಬಹುದು. ಹೀಗೆ ಹೋಬಳಿವಾರು ಸಮಿತಿಗಳನ್ನು ಮಾಡಿದರೆ ಆ ಸಮಿತಿಯವರು ಆಗಾಗ್ಗೆ ಬರುವ ಸಮಸ್ಯೆಗಳನ್ನು ಪರಿಶೀಲಿಸಿ ಸಲಹೆಮಾಡುವರು. ಹೀಗೆ ಸಲಹಾ ಸಮಿತಿಗಳನ್ನು ರಚಿಸಿದರೆ ತಾಲ್ಲೂಕು ಮಟ್ಟದಲ್ಲಿ ಎಷ್ಟೋ ವಿಷಯಗಳನ್ನು ನೋಡಲು ಸಾಧ್ಯವಾಗಬಹುದು ಎಂಬುದು ನನ್ನ ಅಭಿಪ್ರಾಯ. ಹೀಗೆ ಮಾಡುವಾಗ ನಾಳೆ ಯಾರು ಇದರ ಬಗ್ಗೆ ಒಂದು ಮೋಟಿವ್ ಅಟ್ಯಾಚ್ ಮಾಡಬಾರದು. ಹೀಗೆ ಮಾಡುವುದು ಸರಿಯಲ್ಲವೆಂದರೆ ಇದನ್ನು ಬಿಟ್ಟುಬಿಡೋಣ.

ಶ್ರೀ ಟಿ. ಟಿ. ಆರ್. ಶಾಮಣ್ಣ :—ಇದರಲ್ಲಿ ರಾಜಕೀಯವಿಲ್ಲದಿರುವ ಹಾಗೆ ಮಾಡಿದರೆ ಸಂತೋಷ.

ಶ್ರೀ ಡಿ. ದೇವರಾಜ ಅರಸ್ :—ರಾಜಕೀಯ ಇದರಲ್ಲಿ ಬೇಡ. ಸಕ್ಕರೆ ಹಂಚಿಕೆ ವಿಷಯದಲ್ಲಿ ಮೇಲ್ಮನೆಯಲ್ಲಿ ಕೆಲವು ದಿವಸಗಳ ಹಿಂದೆ ಲಿಂಗೇಗೌಡರು ಹಂಚಿಕೆ ಮುಂತಾದ್ದು ಸರಿಯಾಗಿಲ್ಲ ವೆಂದು ತಿಳಿಸಿದರು. ಇದಕ್ಕೆ ಕಾನೂನು ಇಲ್ಲ. ಜನಸಂಖ್ಯೆ ಕಡಿಮೆ ಇರುವ ಕಡೆಗೆ ಹೆಚ್ಚು ಸರಬರಾಜು ಮಾಡಿರುವರೆಂದೂ, ಕೊಟ್ಟಿರುವುದು ಸರಿಯಾಗಿ ಹಂಚಿಕೆಯಾಗುತ್ತಿಲ್ಲವೆಂದು ಹೇಳಿದರು ಹಂಚಿಕೆಗೆ ಕೊಡುವುದನ್ನು ಮಾರಿಕೊಳ್ಳುವರು ಎಂದೂ ಹೇಳಿದರು. ಎಲ್ಲಾದರೂ ತಪ್ಪಿದರೆ ತಿದ್ದೋಣ ಅನ್ಯಾಯ ಯಾರು ಮಾಡಿದರೂ ಒಂದೇ. ನಮ್ಮ ಪಕ್ಷವಾಗಲಿ ಇತರ ಪಕ್ಷಗಳವರಾಗಲಿ ಯಾರೇ ಅನ್ಯಾಯಮಾಡಿದರೂ ಅದು ಸರಿಯಲ್ಲ. ಯಾರು ಮಾಡಿದರೂ ಅದು ತಪ್ಪೇ.

ಶ್ರೀ ಕೋಣಂದೂರು ಲಿಂಗಪ್ಪ :—ತಮ್ಮ ಸಲಹೆಯೇನೋ ಒಳ್ಳೆಯದೇ, ಇದರಿಂದ ಅಧಿಕಾರ ವಿಕೇಂದ್ರೀಕರಣವಾಗುವುದು.

ಶ್ರೀ ಡಿ ದೇವರಾಜ ಅರಸ್ :—ಆಮೇಲೆ ಕ್ರೈಮ್ಸ್ ಜಾಸ್ತಿಯಾಗುತ್ತಿದೆಯೆಂದು ಶಾಮಣ್ಣ ನವರು ಹೇಳಿದರು. ಅದು ನಿಜ. This is a phenomena of the whole country. In our State also there is a rise of 15 to 16% from last year. This is not abnormal. Normal increase is there all over the country.

ಆಲ್ ಇಂಡಿಯ ಫಿಗರ್ಸ್ ಕೂಡ ಹೀಗೇ ಇವೆ. ಸಾಮಾನ್ಯವಾಗಿ ನಡೆಯುವುದಿದು. ಜನಸಂಖ್ಯೆ ಹೆಚ್ಚಿ ಕ್ಷಾಮ ಮುಂತಾದ್ದು ಬಂದಿರುವುದರಿಂದ ಹೀಗೆ ನಾನಾ ಕಾರಣಗಳಿಂದ ಹೆಚ್ಚಾಗಬಹುದು, ಸೈಕಲಾಜಿಕಲ್ ಫ್ಯಾಕ್ಟರ್ಸ್ ಇದಕ್ಕೆ ಕಾರಣ. ಆದರೆ ಒಂದು ವರ್ಷದಲ್ಲಿ ಕಮ್ಯೂನಲ್‌ರೈಟ್ಸ್ ಮುಂತಾದ್ದು ಆಗಿದ್ದರೂ ಒಂದು ಸಂತೋಷದ ವಿಚಾರವೇನೆಂದರೆ ವಿದ್ಯಾರ್ಥಿಗಳ ಗಲಭೆ ಬಹಳ ಮಟ್ಟಿಗೆ ಹೋದ ವರ್ಷ ಮತ್ತು ಈಗ ಇಲ್ಲ, ಇದನ್ನು ಸ್ವಾಗತ ಮಾಡುತ್ತಿದ್ದೇನೆ, ವಿದ್ಯಾರ್ಥಿವೃಂದ ನಮ್ಮ ರಾಜ್ಯದಲ್ಲಿ ಹೆಚ್ಚು ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಿದೆ ಎಂಬುದು ಇದರಿಂದ ಗೊತ್ತಾಗುವುದು.

ಶ್ರೀ ಎಚ್. ಟಿ. ಕೃಷ್ಣಪ್ಪ :—ವಿರೋಧಪಕ್ಷಗಳು ವಿಧ್ಯಾರ್ಥಿಗಳನ್ನು ಉಪಯೋಗಿಸಿಲ್ಲ ಎಂದು ಹೇಳಿ.

ಶ್ರೀ ಡಿ. ದೇವರಾಜ ಅರಸ್ :—ನಾವು ಉಪಯೋಗಿಸುತ್ತಾ ಇಲ್ಲ. ಹಾಗೆ ಆದರೆ ಅದು ಒಳ್ಳೆಯದಲ್ಲ. ಇದರ ಬಗ್ಗೆ ನಾವೆಲ್ಲರೂ ಸೇರಿ ಒಂದು ಅಂಡರ್‌ಸ್ಟಾಂಡಿಂಗ್‌ಗೆ ಬಂದು ನಮ್ಮ ಯುವಕರು ಅವರ ಪಾಠಪ್ರವಚನಗಳಲ್ಲಿ ಹೆಚ್ಚು ನಿರತರಾಗಿ ಒಳ್ಳೆಯ ಜನಾಂಗವಾಗಿ ಮುಂದೆ ಬರಲಿ ಇದರಿಂದ ದೇಶಕ್ಕೆ ಬೇಕಾದಷ್ಟು ಉಪಯೋಗವಾಗುವುದು ಇದೆ. ದೇಶಕ್ಕೆ, ಸಮಾಜಕ್ಕೆ ಅನುಕೂಲವಾಗುವಂಥ ವಾತಾವರಣವನ್ನು ವಿದ್ಯಾರ್ಥಿಗಳಿಗೆ ಕಲ್ಪಿಸೋಣ. ಅವರ ಭವಿಷ್ಯವನ್ನು ಅಡ್ಡ ದಾರಿಗೆ ಎಳೆಯುವುದು ಬೇಡ. ಇದರ ಬಗ್ಗೆ ಯಾವರೀತಿ ಕಾರ್ಯ ಮಾಡಬೇಕು ಎಂದು ಸಲಹೆ ಕೊಟ್ಟರೆ ಅದನ್ನು ಮಾಡು ವುದಕ್ಕೆ ಸಿದ್ಧ. ಇದು ಸ್ವಾಗತಾರ್ಹವಾದ ವಿಚಾರ. ನಮ್ಮ ಯುವಕರು ಹೆಚ್ಚು ಜವಾಬ್ದಾರಿಯಿಂದ ವರ್ತಿಸಿದ್ದಾರೆ, ಗಲಭೆ, ಗೊಂದಲಗಳು ಬಹುಮಟ್ಟಿಗೆ ಇಲ್ಲದೆ ಶಾಂತರೀತಿಯಿಂದ ಕೆಲಸಮಾಡಿ ಕೊಂಡು ಬಂದಿದ್ದಾರೆ, ಮುಂದೆಯೂ ಅದೇ ರೀತಿ ಆಗುತ್ತದೆ ಎಂದು ನನ್ನ ಆಶೆ. ಅವರು

ಅವರ ಜವಾಬ್ದಾರಿಯನ್ನು ಅರಿತು ನಡೆಯುತ್ತಾರೆ, ನಡೆದಿದ್ದಾರೆ ಎಂದು ಈ ಸಂದರ್ಭದಲ್ಲಿ ಸರ್ಕಾರದ ವತಿಯಿಂದ ನಾನು ಅವರಿಗೆ ಕಾಂಪ್ಲಿಮೆಂಟ್ಸ್ ಕೊಡಬೇಕಾಗುತ್ತದೆ. ಇನ್ನೂ ಕೆಲವು ಸಣ್ಣಪುಟ್ಟ ಸಲಹೆಗಳನ್ನು ಮಾನ್ಯಸದಸ್ಯರು ಕೊಟ್ಟಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ :—ಸಿಟಿ ಪೋಲೀಸ್ ಬಗ್ಗೆ, ಬ್ಯಾಂಕ್ ದರೋಡೆಗಳ ಬಗ್ಗೆ ಹೇಳಿ.

ಶ್ರೀ ಡಿ. ದೇವರಾಜ ಅರಸ್ :—ಅದರಲ್ಲಿ ಐದು ಕೇಸಸ್‌ನಲ್ಲಿ ಕನ್‌ವಿಕ್ಷನ್ ಆಗಿದೆ. In Vijaya Bank case the entire amount was recovered.

ಶ್ರೀ ಪಾಟಾಳ್ ನಾಗರಾಜ್ :—ಸಿಟಿ ಪೋಲೀಸ್ ಏನು ಇದೆ, ಅದರಲ್ಲಿ ಸಬ್‌ಇನ್ಸ್‌ಪೆಕ್ಟರ್‌ಗಳು 10-20 ವರ್ಷವಾದರೂ ಅಲ್ಲಿಯೇ ಇರುತ್ತಾರೆ. ಅವರನ್ನು ಅಲ್ಲಿಂದ ಕಿತ್ತು ಹಾಕಿ ಹೊರಗೆ ಹಾಕುವುದು ಒಳ್ಳೆಯದು.

Sri D. DEVARAJ URS:—That suggestion is a welcome suggestion. I will ask the I. G. P. go into to the question and take suitable steps to remedy the present situation.

ಶ್ರೀ ಕೋಣಂದೂರು ಲಿಂಗಪ್ಪ :—ಎಲ್ಲಾ ಇಲ್ಲಾಖೆಯಲ್ಲಿಯೂ ಹೀಗೆ ಇದ್ದಾರೆ. 25ವರ್ಷ ಗಳಿಂದಲೂ ಪುಣ್ಯಾತ್ಮರು ಒಂದೇ ಕಡೆ ಇದ್ದಾರೆ.

ಶ್ರೀ ಡಿ. ದೇವರಾಜ ಅರಸ್ :—ಪೋಲೀಸ್ ಇಲಾಖೆಯಲ್ಲಿ ಮೊದಲು ಮಾಡೋಣ, ಆಮೇಲೆ ಬೇರೆಯವರದನ್ನು ನೋಡೋಣ. ಪೋಲೀಸ್ ಇಲಾಖೆ ಹೆಚ್ಚು ಜವಾಬ್ದಾರಿಯಿಂದ ನಡೆಯಬೇಕು, ಹೆಚ್ಚು ದಕ್ಷತೆಯಿಂದ ಇರಬೇಕು, ಲಾ ಅಂಡ್ ಆರ್ಡರ್ ಮೇಂಟೇನ್ ಮಾಡುವುದರ ಜೊತೆಗೆ ಇದರ ಬಗ್ಗೆಯೂ ತೀವ್ರತರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ತಮ್ಮ ಸಲಹೆ ಇದೆ. ಅದನ್ನು ಮಾಡಿಸೋಣ.
ಆಮೇಲೆ ಅಬ್ಕಾರಿ, ವಿಚಾರದಲ್ಲಿ,

ಶ್ರೀ ಪಾಟಾಳ್ ನಾಗರಾಜ್ :—ಮರ್ಡರ್ ಕೇಸ್‌ಗಳ ಬಗ್ಗೆ ?

ಶ್ರೀ ಡಿ. ದೇವರಾಜ ಅರಸ್ :—ಮಹಾಲಕ್ಷ್ಮಿ ಲೇ ಔಟ್ ಕೇಸ್, ಇದರ ಬಗ್ಗೆ ಕೋರ್ಟ್‌ನಲ್ಲಿ ಒಂದು ಜಡ್ಜಮೆಂಟ್ ಆಗಿದೆ. The judge has made certain references and observations. When courts have made references to officer's behaviour or method of investigating the cases, or of omission or commission, I want that the appropriate authorities should look into it and take cognisance of what the court has said.

ನಮ್ಮಲ್ಲಿ ಏನಾಗಿದೆ ಎಂದರೆ ಕೋರ್ಟುಗಳಲ್ಲಿ ಜಡ್ಜಸ್ ಅಧಿಕಾರಿಗಳ ಮೇಲೆ ಯಾವುದಾದರೂ ಕೇಸುಗಳಲ್ಲಿ ಅವರ ವರ್ತನೆ ಸರಿಯಿಲ್ಲ ಎಂದು—ಅಬ್ಸರ್ವೇಷನ್ಸ್ ಎಂದು ಹೇಳುತ್ತಾರೆ—ಟೀಕೆ ಗಳನ್ನೂ ಮಾಡಿದ್ದರೆ. ಸರ್ಕಾರದವರು ಅದೆಲ್ಲವನ್ನು ತರಿಸಿನೋಡಿ ಅಧಿಕಾರಿ ಮೇಲೆ ಸರಿಯಾದ ಕ್ರಮ ಜರುಗಿಸುತ್ತಾರೆ. ಅದು ಈಮಧ್ಯೆ ಬಿಟ್ಟು ಹೋಗಿದೆ, ಅದನ್ನು ಜಾರಿಗೆ ತರಬೇಕು ಎಂದು ನನ್ನ ಆಸೆ. Suitable action should be taken against the officer concerned ಎಂದು I have introduced that system. It may be there. ಅದನ್ನು ಮಾಡಿಸಬೇಕು ಎಂದು ನನ್ನ ಆಸೆ ಇದೆ. ಹಾಗೆ ಆದರೆ

ಬಹುಮಟ್ಟಿಗೆ ಅಧಿಕಾರಿಗಳ ಇಷ್ಟದ ಪ್ರಕಾರ ನಡೆಸುವುದು ತಪ್ಪುತ್ತದೆ ಎಂದು ನನಗನ್ನಿಸುತ್ತದೆ. ಪೋಲೀಸ್ ಮೊರೇಲ್ ಅನ್ನು ಬಹುಮಟ್ಟಿಗೆ ಮೇಂಟೇನ್ ಮಾಡುವುದಕ್ಕೆ ಸಹಾಯಕ ವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :—ಕೆಲವು ಪೋಲೀಸ್ ಅಧಿಕಾರಿಗಳು, ಟ್ರಾನ್ಸ್‌ಫರ್ ಆದರೆ ರಾಜಕಾರಣಿಗಳ ಮೊರೆ ಹೋಗುತ್ತಾರೆ. ಅಂಥ ಕೆಲವು ಸಬ್‌ಇನ್ಸ್‌ಪೆಕ್ಟರ್‌ಗಳ ಮೇಲೆ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಬರೆದು ಹ್ಯರ್ಯಾಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ದಯಮಾಡಿ ತನಿಖೆ ಮಾಡಿ, ಸುಮ್ಮಸುಮ್ಮನೆ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್ ಬರೆದು ತೊಂದರೆ ಮಾಡತಕ್ಕದ್ದು ಸರಿಯಲ್ಲ. ಅಲ್ಲದೆ ಇಂಥ ಸಬ್ ಇನ್ಸ್‌ಪೆಕ್ಟರ್‌ಗಳ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಿ ಎಂದು 15 ಜನ ಸಬ್‌ಇನ್ಸ್‌ಪೆಕ್ಟರ್‌ಗಳಿಗೆ ನೋಟೀಸ್ ಇಷ್ಯೂ ಮಾಡಿದ್ದಾರೆ, ಎನ್ನತಕ್ಕ ವರದಿ ಬಂದಿದೆ.

ಶ್ರೀ ಡಿ. ದೇವರಾಜ ಅರಸ್ :—ಒಂದು ವಿಚಾರ, ಪೋಲೀಸ್ ಇಲಾಖೆಯಲ್ಲಿ ಇಂಟರ್ ಫಿಯರ್ ಆಗದೆ ಇರುವುದು ಒಳ್ಳೆಯದಲ್ಲವೇ ?

ಶ್ರೀ ವಾಟಾಳ್ ನಾಗರಾಜ್:—ಕೆಲವು ಅಧಿಕಾರಿಗಳು, ತಾವು ಉಳಿದುಕೊಳ್ಳುವುದಕ್ಕೆ ತಮಗೆ ಇಂಥಿಂಥ ಹುದ್ದೆ ಬೇಕು ಎಂದು ಎಂ. ಎಲ್. ಎ. ಗಳು, ರಾಜಕಾರಣಿಗಳ ಹತ್ತಿರ ಬರುತ್ತಾ ಇರತಕ್ಕದ್ದು ತಮಗೆ ಗೊತ್ತಿದೆ. ಅದೆ ಪ್ರಕಾರ ಕೆಲವು ಸಬ್ ಇನ್ಸ್‌ಪೆಕ್ಟರ್‌ಗಳು ರಾಜಕಾರಣಿಗಳ ಹತ್ತಿರ ಹೋಗಿದ್ದಾರೆ ಎಂದು ಅವರ ಮೇಲೆ ಕಾನ್‌ಫಿಡೆನ್‌ಷಿಯಲ್ ರಿಪೋರ್ಟು ಬರೆದು ತೊಂದರೆ ಕೊಡುವ ಹಾಗೆ ಮಾಡಿದ್ದಾರೆ.

ಶ್ರೀ ಡಿ. ದೇವರಾಜ ಅರಸ್ :—ಅದು ನನಗೆ ಗೊತ್ತಿಲ್ಲ. ಯಾರೋ ಒಬ್ಬರು ಹೇಳಿದರು ಎಂದು ಅದರಂತೆ ಮಾಡುವುದಕ್ಕಾಗುವುದಿಲ್ಲ. ಏನಾಗುತ್ತದೆ ಎಂದರೆ, ಇವರ ಹತ್ತಿರ ಒಬ್ಬರು ಬರುತ್ತಾರೆ, ಅವರು ಪುನಃ ಬೇರೆಯವರ ಹತ್ತಿರವೂ ಹೋಗುತ್ತಾರೆ, ಮತ್ತು ಮಂತ್ರಿಗಳಿಗೆ ಇನ್ನೂ ಹತ್ತಿರದವರ ಹತ್ತಿರ ಹೋಗಿ ತಮ್ಮದ್ದನ್ನು ಹೇಳುತ್ತಿರುತ್ತಾರೆ, ಹೀಗೆ ಅವರು ಪರ್ಸಿಸ್ಟ್ ಮಾಡುತ್ತಾ ಇರುತ್ತಾರೆ. ಇದೆಲ್ಲಾ ಬಿಟ್ಟು ಅಧಿಕಾರಿ ಖುದ್ದಾಗಿ ಈ ರೀತಿ ಇದೆ ಎಂದು ಹೇಳಿದರೆ, ಅದನ್ನು ಮಾಡಬೇಕೋ ಇಲ್ಲವೋ ಎಂದು ನೋಡಬಹುದು. ಮುಖ್ಯವಾಗಿ ಪೋಲೀಸ್ ಇಲಾಖೆಯಲ್ಲಿ ಒಂದು ರೀತಿಯ ಮಿಲಿಟರಿ ಡಿಸಿಪ್ಲಿನ್ ಇಡಬೇಕಾಗುತ್ತದೆ. ಇಲ್ಲದೆ ಹೋದರೆ ದೇಶದ ಆಡಳಿತ ಸರಿಯಾಗಿ ಆಗುವುದಿಲ್ಲ. ಕೆಲವು ಇನ್ಸ್‌ಪೆಕ್ಟರ್‌ಗಳು, ತಮ್ಮನ್ನು ಸ್ಪೆಷಲ್ ಬ್ರಾಂಚ್‌ಗೆ ಹಾಕುವುದು ಬೇಡ, ಇನ್‌ವೆಸ್ಟಿಗೇಷನ್ ಬ್ರಾಂಚ್‌ಗೆ ಹಾಕುವುದು ಬೇಡ ಎಂದು ಹೇಳುತ್ತಾ ಇರುತ್ತಾರೆ. Then, Why should we have Special Branch and Investigation Branch ?

ಒಂದೊಂದು ಸಂದರ್ಭದಲ್ಲಿ 30 40 ಜನ ಎಂ.ಎಲ್.ಎ.ಗಳು ನಮ್ಮಲ್ಲಿ ಬಂದು ಹೇಳುತ್ತಾ ಇರುತ್ತಾರೆ. ಅದು ತಪ್ಪು ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ದಯಮಾಡಿ ಎಲ್ಲರೂ ಸಹಕಾರ ಕೊಟ್ಟು ಅವರಲ್ಲಿ ಒಂದು ರೀತಿಯ ಶಿಸ್ತನ್ನು ಕಾಪಾಡಬೇಕು. ಅವರು ಎಲ್ಲಿಯೇ ಇರಲೀ, ಅವರ ರೆಪ್ರಸೆಂಟೇಷನ್ ಅನ್ನು ನೇರವಾಗಿ ನನಗೆ ಕಳುಹಿಸಲಿ, ಒಂದು ತಿಂಗಳಿಗೆ ಎರಡು ಸಾವಿರ ಕಾಗದ ಬಂದರೂ ಸಹ ನಾನು ನೋಡಲಿಕ್ಕೆ ತಯಾರು ಇದ್ದೇನೆ. ಪ್ರತಿಯೊಬ್ಬರೂ ನಮ್ಮ ಅಧಿಕಾರಿಗಳು ವಿನಾಕಾರಣ ಏನೇನು ಕಷ್ಟ ಕೊಡುತ್ತಾ ಇದ್ದಾರೆ ಎಂದು ಹೇಳುತ್ತಾರೋ ಅದನ್ನು ಸರಿ ಮಾಡೋಣ. ಅಧಿಕಾರಿಗಳ ಪಟ್ಟಭದ್ರ ಹಿತ ಮಾಡಿಕೊಂಡು ಒಂದೊಂದು ಸಲವೂ ಏನಾದರೂ ನೆಪ ಹೇಳುತ್ತಾ ಇರುತ್ತಾರೆ. ಮಕ್ಕಳನ್ನು ಓದಿಸಬೇಕು, ಕಾಯಿಲೆ ಎಂದುಹೇಳುತ್ತಾರೆ. ಎಲ್ಲರೂ ಅವರವರ ಮಕ್ಕಳನ್ನು ಓದಿಸಬೇಕು. Let us all mend this by

mutual understanding and co-operation. That is my plea before you.

ಬೆಂಗಳೂರಿನಲ್ಲಿ ಕಾಲೇಜು ಇದೆ, ಮೈಸೂರಿನಲ್ಲಿಯೂ ಕಾಲೇಜು ಇದೆ, ತುಮಕೂರಿನಲ್ಲಿಯೂ ಕಾಲೇಜು ಇದೆ. ಇನ್ನೂ ಎಲ್ಲೆಲ್ಲಿ ಇರಬೇಕೆಂದು ಹೇಳಿದರೆ ಅಲ್ಲಿಯೂ ಅವುಗಳು ಬರುವುದಕ್ಕೆ ಬೆಂಬಲ ಕೊಡಬೇಕಾಗಿದೆ. ಈಗ ಲಕ್ಷಾಂತರ ಜನರು ನಮಗೆ ಕೆಲಸವಿಲ್ಲ ಎಂಬುದಾಗಿ ಒಂದು ಕಡೆ. ನಮ್ಮ ಮಕ್ಕಳಿಗೆ, ಯಾವುದಾದರೂ ಸರ್ಕಾರದ ನೌಕರಿ ಸಿಕ್ಕಿದರೆ ಸಾಕು ಎಂದು ಸಂತೋಷಪಡುವಂತಹವರೂ ಇದ್ದಾರೆ. ಅಂತಹ ಸಮಾಜವೇ ಬೇರೆ ಈಗ ಇದೆ, ಕೆಲವರು ಅಧಿಕಾರಿಗಳ ವರ್ಗಾವಣೆಯ ಬಗ್ಗೆ ನಮ್ಮಲ್ಲಿ ಬಂದು ಹೇಳುವುದೂ ಉಂಟು. ಅದು ರೂಲ್ಸ್ ಪ್ರಕಾರ ನಡೆಯಬೇಕು. ಅಂಥಾದ್ದನ್ನೆಲ್ಲಾ ನಾವು ಕಟ್ಟಿಕೊಂಡು ಕೂತುಕೊಳ್ಳುವುದಕ್ಕಾಗುತ್ತದೆಯೇ ? ಎಷ್ಟೋ ಸಂದರ್ಭಗಳಲ್ಲಿ ಎಂ. ಎಲ್. ಎ. ಗಳೇ ಅವರ ಬಗ್ಗೆ ಕಳುಹಿಸುವುದೂ ಉಂಟು. ಅದನ್ನೂ ಕೂಡಾ ನಾವು ಖಂಡಿತವಾಗಿ ಖಂಡಿಸಬೇಕಾಗುತ್ತದೆ. ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರಿಗೆ ಬಡವರನ್ನು ಕಂಡರೆ ಎಷ್ಟು ಮಮತೆ ಇದೆಯೋ ಅದಕ್ಕಿಂತಲೂ ಜಾಸ್ತಿಯಾಗಿ ನಮಗೂ ಇದೆ. ಯಾರ ಬಗ್ಗೆ ಚಿಂತನೆ ಮಾಡಬೇಕೋ ಅದನ್ನು ಮಾಡಬೇಕು. ಯಾರ ಬಗ್ಗೆ ಚಿಂತನೆ ಮಾಡಬಾರದೋ ಅದನ್ನು ಬಿಟ್ಟುಬಿಡಬೇಕು. ಅದನ್ನು ಯಾರೇ ಆಗಲೀ ಮಿಸ್‌ಯೂಜ್ ಮಾಡಬೇಕೆಂದಲ್ಲ. ಎಮರ್ಜೆನ್ಸಿಯಾದರೆ ಊಟಮಾಡುವುದಕ್ಕೂ ಬಿಡುವುದಿಲ್ಲ. ನೀರು ಕುಡಿಯುವುದಕ್ಕೂ ಬಿಡುವುದಿಲ್ಲ. ಎಲ್ಲರೂ ಆರ್ಮಿ ತರಹ ಇರಬೇಕಾಗುತ್ತದೆ. ಅಂದಮೇಲೆ ಸರ್ಕಾರದ ನೌಕರರು ಏನಿದ್ದಾರೆ ಅವರಿಗೆ ಒಂದು ವೇಳೆ ತೊಂದರೆಯಾದರೆ ತಮ್ಮಲ್ಲಿದ್ದ ಜಮೀನುಗಳನ್ನು ಮಾರುತ್ತಾರೆ. ಟ್ರಾನ್ಸ್‌ಫರ್ ಮಾಡಬಾರದೆಂದು ಹೇಳುತ್ತಾರೆ. ಎಲ್ಲಿಯಾದರು ಟ್ರಾನ್ಸ್‌ಫರ್ ಮಾಡಿದರೆ ಅಲ್ಲಿಗೆ ಹೋಗುವುದಿಲ್ಲ. ಆದ್ದರಿಂದ ನಾನು ಪ್ರತಿಯೊಬ್ಬರಿಗೂ ಕೈ ಮುಗಿದು ಕೇಳಿಕೊಳ್ಳುತ್ತೇನೆ. ಆಡಳಿತದಲ್ಲಿ ನಿಮಗೆ ದಕ್ಷತೆ ಬೇಕು. ಪ್ರಾಮಾಣಿಕತೆ ಬೇಕು, ಇಂಪಾರ್ಷಿಯಾಲಿಟಿ ಬೇಕು ಎಂದು ಹೇಳಿದರೆ ಸರ್ಕಾರ ನಿಷ್ಪಕ್ಷಪಾತವಾಗಿ ಇವುಗಳ ಬಗ್ಗೆ ಒಂದು ಸೂಕ್ತವಾದ ವ್ಯವಸ್ಥೆಯನ್ನು ಜಾರಿ ಮಾಡಬೇಕಾಗಿದೆ. ಇದರ ಬಗ್ಗೆ ನನ್ನ ಒಬ್ಬನದೇ ಜವಾಬ್ದಾರಿ ಇಲ್ಲ. ತಾವೆಲ್ಲರೂ ಸಂಪೂರ್ಣವಾಗಿ ದಯಮಾಡಿ ಸಹಕಾರ ಕೊಡಬೇಕೆಂದು ನಾನು ತಮ್ಮಲ್ಲಿ ಕೈ ಮುಗಿದು ಕೇಳಿಕೊಳ್ಳುತ್ತೇನೆ. ತಮ್ಮ ಸಹಕಾರ ಇಲ್ಲದಿದ್ದರೆ ಬರೀ ಗಾಳಿಗೋಪುರವಾಗುತ್ತದೆ. ನಮ್ಮಲ್ಲಿ ಅನೇಕರಿಗೆ ಇದರ ಪರಿಣಾಮ ವೇನಾಗುತ್ತದೋ ಎಂಬುದೇ ಅರ್ಥವಾಗುತ್ತಾ ಇಲ್ಲ. ಟ್ರಾನ್ಸ್‌ಫರ್ ವಿಷಯ ಬಂದರೆ ಸಾಕು ಮಿನಿಸ್ಟರನ್ನು ಕೇಳಿ ಎಂಬುದಾಗಿ ಹೇಳುವುದು ಸರಿಯಲ್ಲ. ಇದರಿಂದಲೇ ಅನೇಕ ಕಾನೂನುಗಳು ಸಡಿಲವಾಗುತ್ತಿವೆ. ನೌಕರರ ಹಿಂದೆ ಕೆಲವು ಅಧಿಕಾರಿಗಳು ಹಾಗೂ ರಾಜಕಾರಣಿಗಳು ಇವತ್ತು ಹೋಗಿ ಅನೇಕ ಆರ್ಡರ್‌ಗಳನ್ನು ಮಾಡಿಸಿಕೊಂಡು ಬರುತ್ತಾರೆ. ಕೆಲವು ರಾಜಕಾರಣಿಗಳೇ ಮಿನಿಸ್ಟರ್ ಹತ್ತಿರ ಹೋಗಿ ಅನೇಕ ಆರ್ಡರ್‌ಗಳನ್ನು ಹಾಗೂ ವರ್ಗಾವಣೆಗಳನ್ನು ಸರಿಯಾಗಿ ಮಾಡಿಸಿಕೊಂಡು ಬರುತ್ತಾರೆ. ಇನ್ನೂ ಕೆಲವರು ಒಬ್ಬ ಎಂ. ಎಲ್. ಎ. ಗೆ ಎರಡು ಸಾವಿರ ಕೊಟ್ಟರೆ ಅವರೇ ಹೋಗಿ ನಮಗೆ ಬೇಕಾದ ಹಾಗೆ ಮಂತ್ರಿಗಳಿಂದ ಆರ್ಡರ್ ಮಾಡಿಸಿಕೊಂಡು ಬರುತ್ತಾರೆಂದು ಹೇಳುವುದೂ ಉಂಟು. ಅಂತಹ ಜನರು ಈಗ ಬಹಳವಾಗಿದ್ದಾರೆ. ಅಂಥಾದ್ದಕ್ಕೆ ಖಂಡಿತವಾಗಿ ಯಾರೂ ಈಗ ಅವಕಾಶ ಕೊಡುವುದು ಬೇಡ.

ಶ್ರೀ ಎಸ್. ವೈ. ಪಾಟೀಲ್:—ಸಾಮಾನ್ಯ ಜನಗಳು ಪೋಲೀಸ್ ಸ್ಟೇಷನ್ನಿಗೆ ಹೋಗುವುದಕ್ಕೆ ಬದಲು ನೇರವಾಗಿ ಗೃಹಮಂತ್ರಿಗಳನ್ನು ಕಂಡು ಅರ್ಜಿ ಕೊಡುವ ವ್ಯವಸ್ಥೆ ಸೆಂಟರ್‌ನಲ್ಲಿ ಮಾನ್ಯ ಶ್ರೀ ನಂದಾ ಅವರು ಇದ್ದಾಗ ಮಾಡಿದ್ದರು. ಅದೇ ರೀತಿಯಾಗಿ ತಾವೂ ಸಹ ದಿವಸಕ್ಕೆ ಎರಡು ಗಂಟೆಗಳಾದರೂ ತಾವು ಒಂದು ಕಡೆ ಕೂತು ಸಾಮಾನ್ಯ ಜನರೂ ಸಹ ತಮ್ಮನ್ನು ಬಂದು ಕಾಣುವ ರೀತಿಯಲ್ಲಿ ಸೂಕ್ತ ವ್ಯವಸ್ಥೆ ಮಾಡಬೇಕು.

ಶ್ರೀ ಡಿ. ದೇವರಾಜ ಅರಸ್ :—ಅದು ಒಳ್ಳೆಯ ಸಲಹೆ. ನಾನು ನನ್ನ ಮನೆಯಲ್ಲಿ ಅದನ್ನೇ ಮಾಡುತ್ತಿದ್ದೇನೆ. ಅದು ಫಾರ್ ಸ್ಯಾಟಿಸ್‌ಫ್ಯಾಕ್ಷನ್. ದಿವಸಕ್ಕೆ ಒಂದು ಘಂಟೆಯಲ್ಲಿ ಸುಮಾರು 15—20 ಜನರು ಅಲ್ಲಿಗೆ ಬರುವುದಕ್ಕೆ ಅವಕಾಶವಿದೆ. ಅರ್ಜಿಗಳು ಆಫೀಸರ್ಸ್ ಮೂಲಕ ನಮ್ಮ ಹತ್ತಿರ ಬಂದರೂ ತೆಗೆದುಕೊಳ್ಳೋಣವೆಂದು ಆಶ್ವಾಸನೆಯನ್ನು ಕೊಟ್ಟಿದ್ದೇನೆ. ನನಗೆ ಯಾವುದೇ ಅರ್ಜಿ ಬಂದರೂ ಅದು ಒಳ್ಳೆಯದೋ, ಕೆಟ್ಟದ್ದೋ ಏನೇ ಆಗಿರಲಿ, ಅದನ್ನು ಪರಿಶೀಲಿಸಬೇಕೆಂದು ನೋಡುವವರೆಗೆ ನನಗೆ ಸಮಾಧಾನವಾಗುವುದಿಲ್ಲ. ಆದರೆ ಅದನ್ನು ನೋಡದೆ ಬಿಸಾಡಬೇಕೆಂಬ ಮನೋಭಾವನೆ ನನಗೆ ಇಲ್ಲ. ಏನೋ ಕಷ್ಟದಿಂದ ಯಾವನೋ ಒಬ್ಬ ಏನಾದರೂ ಮುಖ್ಯಮಂತ್ರಿಗಳನ್ನು ನೋಡಿ ಅರ್ಜಿ ಕೊಟ್ಟರೆ ಏನಾದರೂ ಪರಿಹಾರ ವಾಗುತ್ತದೆಂಬ ಆಶೆಯಿಂದ ಬಂದರೆ, ಅದನ್ನು ಅಷ್ಟು ಸುಲಭವಾಗಿ ತಳ್ಳಿಹಾಕುವುದು ಖಂಡಿತವಾಗಿ ಸರಿಯಲ್ಲ. ಅದು ಬಹಳ ಪಾಪಕಾರ್ಯವಾದೀತು. ಆದರಿಂದೇನೂ ನನ್ನ ಮನಸ್ಸಿಗೆ ಸಮಾಧಾನವಾಗುವುದಿಲ್ಲ. I am prepared to see the difficulties at the lower levels.

Sri H. S. SIDDAPPA :—It has not been followed up by your officials.

ಶ್ರೀ ಡಿ. ದೇವರಾಜ ಅರಸ್ :—ಇನ್ನು ಅಬ್ಕಾರಿ ವಿಷಯವಾಗಿ ಕೆಲವು ಟೀಕೆಗಳು ಬಂದಿವೆ. ಮಾನ್ಯ ಶ್ರೀ ಬಂಗಾರಪ್ಪನವರು ಖೋಡೆ ಬ್ರುಯರೀಸ್ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದರು. ಅವರಿಗೆ ಪೂರ್ತಿ ಮಾಹಿತಿ ಇತ್ತೋ ಇಲ್ಲವೋ ಗೊತ್ತಿಲ್ಲ. ಯಾರು ಅವರಿಗೆ ಆ ಮಾಹಿತಿಯನ್ನು ಒದಗಿಸಿದರೋ ಗೊತ್ತಿಲ್ಲ. ಅವರು ಸರಿಯಾಗಿ ಅದರ ಬಗ್ಗೆ ಮಾಹಿತಿಯನ್ನು ಪಡೆದಿದ್ದರೆ ಅವರು ಆ ರೀತಿಯಾಗಿ ಮಾತನಾಡುತ್ತಿರಲಿಲ್ಲ. ಇನ್ನು ಅರ್‍ಯಾಕ್ ಮ್ಯಾನ್ಯುಫ್ಯಾಕ್ಚರ್ ಮಾಡುವುದನ್ನು ಖೋಡೆಯವರಿಗೆ ಕೊಟ್ಟಿದ್ದಾರೆಂದು ಹೇಳಿದರು. ಅದನ್ನು ಕೊಟ್ಟವರು ನಾವಲ್ಲ. ಹಿಂದೆಯೇ ಕೊಟ್ಟಿತ್ತು. ನಾನು ಬಂದಮೇಲೆ ಅದನ್ನು ತೆಗೆದುಹಾಕಿದ್ದಾರೆ. ಅದು ಅವರಿಗೆ ಗೊತ್ತಿಲ್ಲ. ಮಂಡ್ಯಾ ಫ್ಯಾಕ್ಟರಿಯಲ್ಲಿ ಏನು ಮೊದಲು ಮ್ಯಾನ್ಯುಫ್ಯಾಕ್ಚರ್ ಮಾಡುತ್ತಿದ್ದರು, ಅಲ್ಲಿ ಷುಗರ್ ಫ್ಯಾಕ್ಟರಿಯವರು ಮಾಡಲಿ ಎಂದು ಮಾಡಿದ್ದಾರೆ. ಅಲ್ಲಿ ಅವರಿಗೆ ನ್ಯಾಯಬದ್ಧವಾಗಿ ಕೊಡುವುದು ಇದ್ದರೆ ಕೊಡೋಣ. ನನ್ನ ದೃಷ್ಟಿಯಲ್ಲಿ ಮಂಡ್ಯಾ ಫ್ಯಾಕ್ಟರಿಗೆ ಕೊಟ್ಟಿರುವುದನ್ನು ತಪ್ಪಿಸ ಬೇಕೆಂದಿಲ್ಲ. ಈಗ ನಾವು ಕೊಟ್ಟಿಲ್ಲ. ಅವರಿಗೆ ಪೂರ್ತಿ ಮಾಹಿತಿ ಗೊತ್ತಿಲ್ಲ. ಅವರು ಹೇಳಿದ ಪ್ರಕಾರ ನಡೆದಿಲ್ಲ. ಮೊದಲು ಯಾರು ಅದನ್ನು ಮಾಡುತ್ತಿದ್ದರೋ ಅವರಿಗೇ ರೆಸ್ಟೋರ್ ಮಾಡುತ್ತಾರೆ. ನಂದಿ ಬ್ರುಯರೀಸ್‌ಗೆ ನಾವು ಲೈಸೆನ್ಸ್ ಕೊಟ್ಟಿಲ್ಲ. ಅವರಿಗೆ ಮೊದಲಿನಿಂದಲೂ ಕೊಟ್ಟಿದ್ದರು. ಮಂಡ್ಯಾ ಫ್ಯಾಕ್ಟರಿಗೆ ನಾವು ಕೊಡುತ್ತಾ ಇಲ್ಲ. ಬಹಳ ವರ್ಷಗಳಿಂದ ಅವರೇ ಇದ್ದಾರೆ. ಅಲ್ಲಿ ಯಾವುದೋ ಒಂದು ಪಾಲಿಸಿ ಪ್ರಕಾರ ಅಲ್ಲಿ ಹಿಂದೆ ಕಂಟ್ರೋಲ್ ಮಾಡು ತ್ತಿದ್ದರು. ನಾವು ಬಂದಮೇಲೆ ಅದನ್ನು ಕಡಿಮೆ ಮಾಡಿದ್ದೇವೆ. ಮೊದಲು 16 ಲಕ್ಷ ಲೀಟರ್ ಸ್ಪಿರಿಟ್ ಕೊಡುತ್ತಿದ್ದರು ಕೇವಲ ಒಂದು ವರ್ಷದಲ್ಲಿ ಅದನ್ನು ಒಂದು ಲಕ್ಷಕ್ಕೆ ಇಳಿಸಿದ್ದಾಗಿದೆ. ಆದರೆ ನಂದಿ ಬ್ರುಯರೀಸ್ ಅವರು ನ್ಯಾಚುರಲ್ ಕೋರ್ಸಿನಲ್ಲಿ ಹಿಂದೆಯೇ ಆ ರೀತಿಯಾಗಿ ತೆಗೆದುಕೊಂಡಿದ್ದಾರೆ. How do you say we have increased ? Facts are before us. What am I to do ? I am not able to go into this question immediately. I will take some other opportunity to tell the House. If it is so, I will tell you it is so. If it is wrong we have to take action. If it is legal, we cannot do anything. Now that the member has made

allegations. I shall certainly look into it and find out what the matter is. ನಮ್ಮ ಅಧಿಕಾರಿಗಳು ಅದರಲ್ಲಿ ಷೇರ್ಸ್ ತೆಗೆದುಕೊಂಡಿದ್ದಾರೆಂದು ಹೇಳಿದ್ದಾರೆ.

ಟಾಡಿ ಮತ್ತು ಅರಕ್‌ನಲ್ಲಿ ಮನಾಪಲಿ ಆಗುತ್ತಿದೆ, ಇದನ್ನು ತಪ್ಪಿಸುವುದಕ್ಕೆ ಏನು ಮಾಡಬೇಕು ಎಂದು ಅವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಹರಾಜು ಮಾಡಿ, ಅಂಗಡಿ ಪ್ರಕಾರ ಹರಾಜು ಮಾಡಿ ಎನ್ನುವ ವಿಚಾರ ಹೇಳಿದ್ದಾರೆ. ತಾಲ್ಲೂಕುವೈಸ್, ಷಾಪ್ ವೈಸ್ ಮಾಡುವುದರಿಂದಲೇ ಒಂದು ರೀತಿಯಾಗಿ ಡೀಸೆಂಟ್ರಲೈಸ್ ಆಗಬಹುದು, ಯಾರೋ ಕೆಲವರ ಕೈಗೆ ಹೋಗುವುದು ನೂರಾರು ಜನರಿಗೆ ಸಿಕ್ಕುತ್ತದೆ ಎಂದು ನಮಗೆ ಸಮಾಧಾನವಾಗ ಬಹುದು. ಇದು ಸೋಷಿಯಲಿಸಂ ತಿಂದುಕೊಳ್ಳಬೇಕು. ಆದರೆ ಸರ್ಕಾರ ಈ ಬಗ್ಗೆ ಸ್ವಲ್ಪ ತಡಮಾಡುತ್ತಿದೆ, ನಮಗೆ ಬರುವ ರೆವೆನ್ಯೂ ಬೀಳಬಾರದು ಎನ್ನುವುದು ನಮ್ಮ ಅಭಿಪ್ರಾಯ. ನಮ್ಮಲ್ಲಿ ಪ್ರಾಹಿಬಿಷನ್ ಇರಬೇಕು ಎನ್ನುವ ಬಗ್ಗೆ ನಮ್ಮಲ್ಲಿ ಅನೇಕರಲ್ಲಿ ರೀಕನ್‌ಸೈಲ್ ಆಗಿಲ್ಲ. ಪ್ರಾಹಿಬಿಷನ್ ತೆಗೆದದ್ದು ತಪ್ಪು ಎನ್ನುವ ಅಭಿಪ್ರಾಯ ಇದೆ. ತಾತ್ವಿಕವಾಗಿ ಇದನ್ನು ಹಾಗೆಯೇ ಇಡಬಹುದಾಗಿತ್ತು ಎಂದು ಹೇಳುತ್ತಾರೆ. ನಾವು ಆ ಕಾಲದಲ್ಲಿ ಏನು ಯೋಚನೆ ಮಾಡಿದೆವು ಎಂದರೆ ತಾತ್ವಿಕವಾಗಿ ಎಷ್ಟೇ ಸರಿ ಎಂದು ಕಂಡುಬಂದರೂ ಅದರಿಂದ ಆಗುತ್ತಿದ್ದ ತೊಂದರೆ, ಕಳ್ಳಭಟ್ಟಿ ದೇಶದಲ್ಲಿ ಹೆಚ್ಚಾಗಿ ಜನ ಕುಡಿಯುವುದನ್ನು ಮಾತ್ರ ಬಿಡಲಿಲ್ಲ. ಕಳ್ಳಭಟ್ಟಿ ಸೇವನೆಯಿಂದ ಜನರ ಆರೋಗ್ಯವೂ ಹಾಳಾಗಿ ಸರ್ಕಾರಕ್ಕೆ ಬರುತ್ತಿದ್ದ ರೆವೆನ್ಯೂ ಸಹ ಹೋಯಿತು. ತತ್ವಭ್ರಷ್ಟರಾಗಬೇಕಾಯಿತು. ತತ್ವಭ್ರಷ್ಟರಾದರೂ, ಅದರಿಂದ ಹಣವನ್ನಾದರೂ ಗಳಿಸೋಣ ಎಂದು ಪ್ರಾಹಿಬಿಷನ್ ತೆಗೆದೆವು. ಅದರಿಂದ ಈ ಹೊತ್ತು ಸುಮಾರು 30 ಕೋಟಿ ರೂಪಾಯಿಗೆ ಮೇಲ್ಪಟ್ಟು ಬರುತ್ತಿದೆ. ನಾವು ತಾಲ್ಲೂಕಾವೈಸ್, ಷಾಪ್‌ವೈಸ್ ಹರಾಜು ಮಾಡುವ ಪ್ರಯೋಗವನ್ನು ಮಾಡುವುದಕ್ಕೆ ಹೋಗಿ, ನಮಗೆ ಬರುವ ವರಮಾನ ಯಾವ ಕಾರಣದಿಂದಲೇ ಆಗಲೀ ಕಡಮೆಯಾಗಬಾರದು ; ಕೆಳಕ್ಕೆ ಇಳಿಯಬಾರದು. ನಮಗೆ ಹೆಚ್ಚು ಹೆಚ್ಚು ಹಣ ಬೇಕು. ನಮಗೆ ಇರತಕ್ಕ ಕೆಲಸ ಕಾರ್ಯಗಳು ಇಷ್ಟು ದೊಡ್ಡ ಪ್ರಮಾಣದಲ್ಲಿ ಇರಬೇಕಾದರೆ ಎಷ್ಟು ಹಣ ಬಂದರೂ ಸಾಲದು. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ರೆವೆನ್ಯೂ ಬರುತ್ತಿರ ಬೇಕಾದರೆ ತಾಲ್ಲೂಕುಮಟ್ಟದಲ್ಲಿ, ಅಂಗಡಿ ಮಟ್ಟದಲ್ಲಿ ಹರಾಜು ಮಾಡುವುದು ಎಂದು ಇಟ್ಟುಕೊಂಡರೆ ಇದರಲ್ಲಿ ಸಣ್ಣಪುಟ್ಟ ಜನ ಬರುತ್ತಾರೆ. ಇವರಿಂದ ತಿಂಗಳು ತಿಂಗಳೂ ದುಡ್ಡು ತೆಗೆದುಕೊಳ್ಳಬೇಕಾಗುತ್ತದೆ. ಎಷ್ಟೋ ಜನ ಒಂದು ಸಾರಿ ಮುಂದುರಿಕೊಂಡರೆ ಬಾಕಿ ಇರುವ ಹಣ ವಸೂಲು ಮಾಡುವುದು ದೊಡ್ಡ ಕಷ್ಟಕ್ಕೆ ಬರುತ್ತದೆ. ಇದಾಗಬಾರದು ಎಂದು ಹುಷಾರಿನಿಂದ ಹೆಜ್ಜೆ ಇಡುತ್ತಿದ್ದೇವೆ. ಇದರಲ್ಲಿ ಇನ್ನು ಯಾವ ಬದಲಾವಣೆಯೂ ಆಗುವುದಿಲ್ಲ. ಈ ದೃಷ್ಟಿಯಿಂದ ಮಾತ್ರ ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದೇವೆ. ಹೋದ ವರ್ಷಕ್ಕೂ ಅದರ ಹಿಂದಿನ ವರ್ಷಕ್ಕೂ ಏನು ವ್ಯತ್ಯಾಸವಾಯಿತು ಎನ್ನುವುದು ಗೊತ್ತಿದೆ. 1971-72 ರಲ್ಲಿ ನಮ್ಮ ರೆವೆನ್ಯೂ ಇಷ್ಟು ಬಂದಿತ್ತು ಎಂದರೆ 23 ಕೋಟಿ 55 ಲಕ್ಷ ರೂಪಾಯಿ. 1972-73ರಲ್ಲಿ ಸುಮಾರು 25 ಪರ್ಸೆಂಟ್‌ನಷ್ಟು ಜಾಸ್ತಿ ಬಂತು, ಎಂದರೆ 29 ಕೋಟಿ 57 ಲಕ್ಷ ರೂಪಾಯಿ ಆಯಿತು. ಒಂದೇ ವರ್ಷದಲ್ಲಿ ಸುಮಾರು ಆರು ಕೋಟಿ ರೂಪಾಯಿ ಹೆಚ್ಚಾಗಿ ಬಂದಿದೆ. ಹಿಂದೆ ಯಾವ ವರ್ಷಗಳಲ್ಲಿಯೂ ಈ ರೀತಿ ಆಗಿರಲಿಲ್ಲ. ಇದರಲ್ಲಿ ನಾವು ಯಾವ ಹಸ್ತಕ್ಷೇಪ ವನ್ನೂ ಮಾಡಿಲ್ಲ. ಪ್ರಾಮಾಣಿಕವಾಗಿ ಎಲ್ಲರನ್ನೂ ಒಂದೇ ರೀತಿಯಿಂದ ಕಂಡು ಹರಾಜು ನಡೆಸಿದ್ದೇ ಇಷ್ಟು ಹೆಚ್ಚು ಹಣ ಬರಲು ಕಾರಣ. ಹಿಂದೆ ಯಾವ ವರ್ಷವನ್ನೇ ತೆಗೆದುಕೊಳ್ಳಿ ಒಂದೆರಡು ಕೋಟಿ ರೂಪಾಯಿ ಜಾಸ್ತಿ ಬಂದಿದ್ದರೆ ಹೆಚ್ಚು. ಒಂದು ವರ್ಷ ಬಹಳ ರಗಳೆ ಯಾದದ್ದು ಎಲ್ಲರಿಗೂ ಗೊತ್ತಿದೆ. ನಾವೇನೂ ದೊಡ್ಡ ಜಾದು ಮಾಡಿಲ್ಲ. ನಮಗೆ ದುಡ್ಡು ಬೇಕು. ಅವನಿದ್ದರೆ ಏನು? ಇವನಿದ್ದರೆ ಏನು; ಯಾರಾದರೆ ಏನು ಎಂದು ನಿರ್ದಾಕ್ಷಿಣ್ಯವಾಗಿ ಹರಾಜು ನಡೆಸಿದ್ದರಿಂದ ಆರು ಕೋಟಿ ರೂಪಾಯಿ ಒಂದೇ ವರ್ಷದಲ್ಲಿ ನಾವು ಹೆಚ್ಚಾಗಿ ಸಂಪಾದನೆ ಮಾಡಿದ್ದೇವೆ. ಎಷ್ಟು ಹೆಚ್ಚು ಬರಬಹುದೋ ಅಷ್ಟು ಹೆಚ್ಚು ಬರಬೇಕು.

ಶ್ರೀ ಟಿ. ಆರ್. ಶಾಮಣ್ಣ :—ಕಳ್ಳಭಟ್ಟಿ ಮಾರಾಟವಾಗುವುದನ್ನು ತಪ್ಪಿಸಿದರೆ ಇನ್ನೂ ಹೆಚ್ಚು ಬರುತ್ತದೆ.

ಶ್ರೀ ಡಿ. ದೇವರಾಜ ಅರಸ್ :—ತಾವು ಹೇಳಿದ್ದೀರಿ. ಎಲ್ಲವನ್ನೂ ನೇರವಾಗಿ ತಪ್ಪಿಸುವುದಕ್ಕಾಗುವುದಿಲ್ಲ. ಸ್ವಲ್ಪ ಮಟ್ಟಿಗೆ ಇದರಲ್ಲಿ ನಮ್ಮ ವಿಫಲತೆಯನ್ನು ಒಪ್ಪಿಕೊಳ್ಳುತ್ತೇನೆ. ಕಳ್ಳಭಟ್ಟಿಯನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಅದನ್ನು ತಪ್ಪಿಸುತ್ತೇವೆ. ತಾವು ನಿನ್ನೆಯ ದಿವಸ ಹೇಳಿದ್ದು ಜ್ಞಾಪಕವಿದೆ, ಅದರ ಬಗ್ಗೆ ಹೆಚ್ಚು ಪ್ರಯತ್ನ ಮಾಡುತ್ತೇವೆ.

ರಾಜ್ಯದಲ್ಲಿ ಕ್ಷಾಮ ಪರಿಸ್ಥಿತಿ ಇರುವುದರಿಂದ ಬರುವ ರೆವೆನ್ಯೂ ಕಡಮೆಯಾಗುತ್ತ ಬಂದಿದೆ. ಹೆಚ್ಚು ಖರ್ಚು ಮಾಡಬೇಕಾಗಿ ಬಂದಿದೆ. ಇಂಥ ಪರಿಸ್ಥಿತಿಯಲ್ಲಿ ಈ ಬಾಬತ್ತಿನಲ್ಲಿ ದುಡ್ಡು ಕಳೆದುಕೊಳ್ಳುವುದಕ್ಕೆ ಸ್ವಲ್ಪವೂ ತಯಾರಾಗಿಲ್ಲ ಎಂದು ಹೇಳುತ್ತಿದ್ದೇನೆ.

